† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಸಭಾಧ್ಯಕ್ಷರೇ ಈ ದಿವಸದ ಚರ್ಚೆಯಲ್ಲಿ ಭಾಗವಹಿಸಿ ವಿದ್ಯಾ ಇಲಾಖೆಗೆ ಕೊಟ್ಟಿರತಕ್ಕ ಇಷ್ಟೊಂದು ಹಣ ಏನಿದೆ ಇದನ್ನು ವಿರೋಧ ಮಾಡತಕ್ಕ ಕಾಲದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಮಾನ್ಯ ವಿದ್ಯಾ ಮಂತ್ರಿಗಳ ಮನೋಧರ್ಮವನ್ನು ನೋಡಿದರೆ ನಿರಾಶೆಯುಂಟಾಗುತ್ತದೆ. ಕಾರಣ ವೇನಂದರೆ ಪ್ರಜಾ ಪ್ರಭುತ್ವದಲ್ಲಿ, ಪ್ರಜಾ ತಂತ್ರದಲ್ಲಿ ಈ ಸಭೆಯ ಮಾನ್ಯ ಸದಸ್ಯರು ಯಾವುದಾದರೂ ವಿಚಾರಗಳನ್ನು ತಿಳಿಸಿದರೆ ಮಾನ್ಯ ಮಂತ್ರಿಗಳು ಅದಕ್ಕೆ ಸೂಕ್ತ ಗಮನ ಕೊಟ್ಟು ತಮ್ಮ ಇಲಾಖೆಗೆ, ತಮಗೆ ಸಂಬಂಧಪಟ್ಟದ್ದನ್ನು ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಪಡತಕ್ಕಂಥಾದ್ದು ಉಚಿತ. ಆದರೆ ನಮ್ಮ ವಿದ್ಯಾ ಮಂತ್ರಿಗಳ ಮನೋಭಾವ ಹೇಗಿದೆ ಎಂದರೆ ಈ ಸಭೆಯ ಸದಸ್ಯರು ಏನಾದರೂ ಹೇಳಿದರೆ ಅದನ್ನು ಏನಾದರೂ ಮಾಡಿ, ಏನಾದರೂ ಹೇಳಿ ಅವರ ಬಾಯಿ ಮುಚ್ಚಿಸಿ ಕೂರಿಸಬೇಕು ಎನ್ನುವ ಮನೋಭಾವನೆ ಬೆಳೆಸಿದರೆ ನಾವು ರಚನಾತ್ಮಕವಾದ ಸಲಹೆಗಳನ್ನು ಕೊಡುವುದಕ್ಕೆ ಭಾರಿ ನಿರಾಶೆಯಾಗುತ್ತದೆ. ಆದರೂ ಸಹ ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹೋದಸಾರಿ ವಿಶ್ವವಿದ್ಯಾನಿಲಯದಲ್ಲಿ ಆದಂತಹ ಕೆಲವು ಅಪಾಯಿಂಟ್‌ಮೆಂಟ್‌ಗಳ ವಿಷಯದಲ್ಲಿ ಮಾತನಾಡಿದ್ದೆ. ಇದು ವಿಶ್ವವಿದ್ಯಾನಿಲಯ ಅಟಾನಮಸ್ ಬಾಡಿ ಇದರ ವಿಷಯ ವನ್ನು ಮಾತನಾಡುವ ಹಾಗೆ ಇಲ್ಲ ಎಂದು ಹೇಳುತ್ತಾರೆ. ಆದರೆ ಯಾವುದೇ ಒಂದು ವಿಶ್ವ ವಿದ್ಯಾನಿಲಯ ಆದರೂ ಕೂಡ ಈ ಸಭೆಯಲ್ಲಿ ಪಾಸಾಗಿರತಕ್ಕ ಒಂದು ಕಾನೂನು ಏನಿದೆ ಅದರ ಚೌಕಟ್ಟಿನಲ್ಲಿ ವ್ಯವಹರಿಸಬೇಕಾಗುತ್ತದೆ. ಕಾನೂನನ್ನು ಮೀರಿ ಕಾನೂನಿನ ಪರಿಮಿತಿಯೊಳಗೆ ನಡೆಸಿದ ಕಾರ್ಯಕಲಾಪಗಳ ಬಗ್ಗೆ ಅಧ್ವಾನ ಆದಾಗ ನಾವು ಈ ಸಭೆಗೆ ಬಾಧ್ಯರಾಗಿರುವವರು ಸಂಬಂಧಪಟ್ಟ ನಿಮ್ಮನ್ನು ಕೇಳುತ್ತೇವೆ. ವಿಶ್ವವಿದ್ಯಾನಿಲಯದಲ್ಲಿ ಏನೋ ತಪ್ಪು ಆಯಿತು ಎಂದರೆ ಶ್ರೀಮಾನ್ ಶಂಕರೇಗೌಡರು ದುಡ್ಡು ಹೊಡೆದಿದ್ದಾರೆ ಎಂದು ನನ್ನ ಆಪಾದನೆ ಯಲ್ಲ. ನಿಮಗೆ ಸೇರಿದಂತಹ ವಿಷಯಗಳ ಬಗ್ಗೆ ಮಾತನಾಡುವ ಕಾಲದಲ್ಲಿ ನಿಮ್ಮ ಒಂದು ಅನು ಕಂಪ ಇರಬೇಕು, ಅನುಕಂಪವನ್ನು ತೋರಿಸಬೇಕು. ವೈಯಕ್ತಿಕವಾಗಿ ಆಪಾದನೆ ಮಾಡಿದ್ದಾರೆ ಎಂಬುದನ್ನು ಮರೆತು ಆ ಬಗ್ಗೆ ನಿಜಾಂಶ ಏನಿದೆ, ಸತ್ಯಾಂಶ ಏನಿದೆ ಎಂಬುದನ್ನು ವಿಚಾರ ಮಾಡ ತಕ್ಕ ಪರಿಪಾಠವನ್ನು ಮಾನ್ಯ ಮಂತ್ರಿಗಳು ರೂಢಿಸಿಕೊಳ್ಳಬೇಕೆಂದು ನಾನು ಒತ್ತಾಯವಾಗಿ ಹೇಳುತ್ತೇನೆ. ನಾನು ಹೋದ ಸಾರಿ 4–5 ಆಪಾದನೆಗಳನ್ನು ಮಾಡಿದ್ದೇನೆ. ವಿಶ್ವವಿದ್ಯಾನಿಲಯ ದಲ್ಲಿ ಆದಂತಹ ಅಪಾಯಿಂಟ್‌ಮೆಂಟುಗಳ ಬಗ್ಗೆ ಡೀಟೈಲಾಗಿ ಅವರ ಹೆಸರುಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಹೆಸರಗಳನ್ನು ಹೇಳಬಾರದು ಎಂದು ಅಧ್ಯಕ್ಷರು ಅಪ್ಪಣೆ ಕೊಡಿಸಿದ್ದಾರೆ. ಆ ಬಗ್ಗೆ ಇಪ್ಪತ್ತು ಒಂದು ಕೇಸು ಕೋರ್ಟಿಗೆ ಹೋಗಿದೆ ಎಂದು ಹೇಳು ವುದಕ್ಕೆ ನಾನು ಇಷ್ಟಪಡುತ್ತೇನೆ. ಈ ಸಭೆಯಲ್ಲಿ ನಾನು ಆ ವಿಷಯ ಪ್ರಸ್ತಾಪ ಮಾಡಿದಾಗ ನಾನು ವಾರ್ನಿಂಗ್ ಕೊಟ್ಟಿದ್ದೆ. ಕಾನೂನು ಮೀರಿ ಕೆಲಸಗಳು ನಡೆಯುತ್ತಿವೆ. ಪೋಸ್ಟ್ ಗ್ರಾಜುಯೇಟ್ ಡಿಗ್ರಿ ಆಗಿ, ಹೈಯರ್ ಕ್ವಾಲಿಫಿಕೇಷನ್, ಹೈಯ್ಯರ್, ಸ್ಕ್ಯಾಲರಿ ಹೈಯರ್ ಸ್ಪೇಟಸ್ ಇದ್ದಂಥ ಪ್ರೊಫೆಸರರನ್ನು ಓವರ್‌ಲುಕ್ ಮಾಡಿ ಅವರ ಮೇಲೆ ಪ್ರೀ ಡಿಗ್ರಿ ಆದಂತಹ ಪ್ರೊಫೆಸರನ್ನು ಅಪಾಯಿಂಟ್ ಮಾಡಿದ್ದಾರೆ. ಈ ಪ್ರಯತ್ನ ಮಾಡುತ್ತಿದ್ದಾರೆ ಎಂದು ನಾನು ಹಿಂದೆಯೇ ವಾರ್ನಿಂಗ್ ಕೊಟ್ಟಿದ್ದೆ. ಅದನ್ನೆಲ್ಲಾ ಮರೆತು ನಮ್ಮ ಬಾಯಿ ಮುಚ್ಚಿಸತಕ್ಕ ಪ್ರಯತ್ನ ಮಾಡಿದ್ದಾರೆ. ಸತ್ಯ ಸಂಗತಿಯನ್ನು ಅರಿತುಕೊಂಡು ವಿಚಾರ ಮಾಡಿದರೆ ತಪ್ಪು ಗೊತ್ತಾಗುತ್ತದೆ.

ಇದರಲ್ಲಿ ಸರ್ಕಾರದವರಿಗೆ ಒಂದು ಮನೋಭಾವ ಇದ್ದ ಹಾಗೆ ಕಾಣುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಮಾಡಿದಂತಹ ಅಪಾಯಿಂಟ್‌ಮೆಂಟ್ ವಿಷಯದಲ್ಲಿ ಅಧ್ವಾನ ಆಗಿದ್ದರೆ, ಇರ್ರೆಗ್ಯುಲಾರಿಟೀಸ್ ನಡೆದಿದ್ದರೆ 100ಕ್ಕೆ 100 ಜನ ಕೋರ್ಟಿಗೆ ಹೋಗುವುದಿಲ್ಲ. 100 ಕ್ಕೆ 10 ಜನ ಕೋರ್ಟಿಗೆ ಹೋಗಬಹುದು. ಇನ್ನು 90 ಜನ ಕೋರ್ಟಿಗೆ ಹೋಗುವುದಕ್ಕೆ ಮನಸ್ಸು ಮಾಡುವುದಿಲ್ಲ. ಸರ್ಕಾರದವರನ್ನು ಎದುರು ಹಾಕಿಕೊಂಡು ಯಾರೋ 10 ಜನ ಕೋರ್ಟಿಗೆ ಹೋಗಬಹುದು. ಇನ್ನು 90 ಜನ ಬೇರೆ ಕಡೆ ಮನಸ್ಸು ಮಾಡುತ್ತಾರೆ. ಅಪಾಯಿಂಟ್‌ಮೆಂಟ್ ಮಾಡಿರತಕ್ಕದ್ದರಲ್ಲಿ ಶೇಕಡಾ 90 ಭಾಗ ಇರ್ರೆಗ್ಯುಲಾರಿಟೀಸ್ ಇದೆ ಎಂದು ಸಾಬೀತು ಆದಾಗ ಇವರ ಮನೋಭಾವ ಯಾವರೀತಿ ಇದೆಯೆಂಬುದು ಗೊತ್ತಾಗುತ್ತದೆ. ಈ ಒಂದು ಮನೋಭಾವವನ್ನು ಬಿಡಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವಿಶ್ವವಿದ್ಯಾನಿಲಯದ ಘಟಿಕೋತ್ಸವದ ಬಗ್ಗೆ ಹಿಂದೆ ನಾನು ಇಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದೇನೆ. ಅದಕ್ಕೆ ಮಾನ್ಯ ವಿದ್ಯಾ ಮಂತ್ರಿಗಳು ಏನೋ ಒಂದು ತಾತ್ಸಾರ ಮನೋಭಾವದಿಂದ ಅರ್ಥವಾಗದ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ದುಃಖಪಡುವಂಥಾದ್ದು ಏನೂ ನಡೆದಿಲ್ಲ, ದುಃಖಪಡಬೇಕಾಗಿಲ್ಲ. ಎಂದು ಏನೋ ಒಂದು ತರಹ ಭಾವನೆಯನ್ನು ಇಟ್ಟುಕೊಂಡು ಉತ್ತರವನ್ನು ಕೊಟ್ಟಿದ್ದಾರೆ. ತಪ್ಪು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಈ ಬಗ್ಗೆ ಒಂದು ಪ್ರಿವಿಲೇಜ್ ಮೋಷನ್ ಕೂಡ ನಾನು ತರಬಹುದಾಗಿತ್ತು. ಆದರೆ ನಾನು ಆ ಪ್ರಯತ್ನವನ್ನು ಮಾಡಲಿಲ್ಲ. ನಾನು ಹೇಳತಕ್ಕಂಥಾದ್ದು ಏನು ಎನ್ನುವುದನ್ನು ಯೋಚನೆ ಮಾಡದೆ ಮಾನ್ಯ ಮಂತ್ರಿಗಳು ಏನೋ ಒಂದು ಅರ್ಥವನ್ನು ಮಾಡಿಕೊಂಡು ಉತ್ತರವನ್ನು ಹೇಳಿದ್ದಾರೆ. ಘಟಿಕೋತ್ಸವದಲ್ಲಿ ಮಾಡಿದಂತಹ ಹೆಚ್ಚಿನ ಖರ್ಚಿನಿಂದ ರಾಜ್ಯದ ಬೊಕ್ಕಸಕ್ಕೆ ಪೆಟ್ಟು ತಟ್ಟುತ್ತದೆ ಎನ್ನುವ ಉದ್ದೇಶದಿಂದ ಇವರು ಹೇಳುತ್ತಾರೆ ಎನ್ನುವ ಭಾವನೆಯನ್ನು ಇಟ್ಟುಕೊಂಡು ಮಾನ್ಯ ಮಂತ್ರಿಗಳು ಉತ್ತರನನ್ನು ಕೊಟ್ಟಿದ್ದರೆ ಚೆನ್ನಾಗಿತು. ಇದರಲ್ಲಿ ರಿಜಿಸ್ಟ್ರಾರು ತಪ್ಪು ಮಾಡಿದ್ದಾರೆಯೇ, ಇಂಜಿನಿಯರು ತಪ್ಪು ಮಾಡಿದ್ದಾರೆಯೇ, ಅಥವಾ ಬೇರೆ ಅಧಿಕಾರಿಗಳು ತಪ್ಪು ಮಾಡಿದ್ದಾರೆಯೇ ಎಂಬುದನ್ನು ನಾವು ನೋಡಬೇಕಾಗುತ್ತದೆ. ಅದನ್ನು ನೋಡದೇ ಇದ್ದರೆ ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಉತ್ತರವನ್ನು ಹೇಳಿದಂತಹ ಭಾಷಣದ ಕಾಪಿಯನ್ನುನಾನು ತೆಗೆದುಕೊಂಡಿದ್ದೇನೆ. ಅದರಲ್ಲಿ ದುಃಖಪಡಬೇಕಾದ ಪ್ರಸಂಗ ಆ ವಿಶ್ವವಿದ್ಯಾನಿಲಯದಲ್ಲಿ ನಡೆದಿಲ್ಲ. ಅಲ್ಲಿ ನಡೆದಿರತಕ್ಕ ಕೆಲಸವನ್ನು ನೋಡಿದರೆ ಹೆಮ್ಮೆ ಪಡತಕ್ಕದ್ದಾಗಿದೆ. ಎಂದು ಹೇಳಿದ್ದಾರೆ. ಒಂದು ಘಟಿಕೋತ್ಸವದ ಸಮಾರಂಭದಲ್ಲಿ ಒಂದು ಕುರ್ಚಿಗೆ 12½ ರೂಪಾಯಿಗಳ ಬಾಡಿಗೆಯನ್ನು ಕೊಟ್ಟಿರುವುದು ಹೆಮ್ಮೆಪಡತಕ್ಕ ವಿಷಯವೇ? ಒಂದು ಸ್ಕ್ವೇರ್ ಫುಟ್ ಕಾರ್ಪೆಟ್ಟಿಗೆ 2 ರೂಪಾಯಿಗಳ ಬಾಡಿಗೆ ಕೊಡುವುದು ಹೆಮ್ಮೆಪಡತಕ್ಕ ವಿಷಯವೇ? ಸಾಮಾನುಗಳನ್ನು ಸಾಗಿಸುವುದಕ್ಕೆ ಒಂದು ಲಾರಿಗೆ ಒಂದು ದಿನಕ್ಕೆ 800 ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಂಥಾ ಕಾರ್ಯವನ್ನು ವಿಶ್ವವಿದ್ಯಾನಿಲಯ ಮಾಡಿದ್ದಾರೆ. ಒಂದು ದಿವಸಕ್ಕೆ 800 ರೂಪಾಯಿಗಳು ಬಾಡಿಗೆ ಸಿಕ್ಕುವುದಾದರೆ ಯಾರು ಯಾವ ಕೆಲಸವನ್ನು ಏತಕ್ಕೆ ಮಾಡುತ್ತಾರೆ. ಈ ರೀತಿ ಈ ಸರ್ಕಾರ ಯೂನಿವರ್ಸಿಟಿ ಕೆಲಸವನ್ನು ಮಾಡುವುದಾದರೆ ಇದನ್ನು ಪರಮಾತ್ಮನೇ ಕಾಪಾಡಬೇಕು ಎಂದು ಹೇಳದೆ ಗತ್ಯಂತರವಿಲ್ಲ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕಾಗುತ್ತದೆ. ಈ ಸಾರಿ ಕಾನ್ವೋಕೇಷನ್‌ನಲ್ಲಿ ಎಷ್ಟು ಜನ ಡಿಗ್ರಿಯನ್ನು ತೆಗೆದುಕೊಂಡಿದ್ದಾರೆಯೋ ಅದಕ್ಕಿಂತ 500 ಜನ ಜಾಸ್ತಿ ಹೋದ ಸಾರಿ ಡಿಗ್ರಿ ತೆಗೆದುಕೊಂಡಿದ್ದಾರೆ. ಹೋದ ಸಾರಿ 12,600 ಚಿಲ್ಲರೇ ರೂಪಾಯಿಗಳು ಖರ್ಚಾಗಿದೆ ಎಂದು ತಿಳಿದುಬಂದಿದೆ. ಈ ವರ್ಷ 500 ಜನ ಕಡಿಮೆ ಡಿಗ್ರಿ ತೆಗೆದುಕೊಂಡಿದ್ದಾರೆ. ಈ ವರ್ಷ 26,518 ರೂಪಾಯಿಗಳು ಖರ್ಚಾಗಿದೆ ಎಂದು ಗೊತ್ತಾಗಿದೆ. ಇದಕ್ಕೆಲ್ಲಾ ಟೆಂಡರ್ ಕರೆದಿದ್ದಾರೆ ಎಂದು ಗೊತ್ತಾಗಿದೆ. ಇವರಲ್ಲಿ ಇಂಜನಿಯರ್ ಕೈವಾಡ ಇರುತ್ತದೆ. ಇದನ್ನೆಲ್ಲಾ ನಾನು ಅನುಭವದಿಂದ ಹೇಳುತ್ತಿದ್ದೇನೆ. ಈ ರೀತಿ ಆಗಿರುವುದನ್ನು ನೋಡಿ ದುಃಖ ಪಡಬೇಕೋ ಹೆಮ್ಮೆ ಪಡಬೇಕೋ ಗೊತ್ತಿಲ್ಲ. ಒಂದು ದಿವಸಕ್ಕೆ ಒಂದು ಲಾರಿಗೆ 800 ರೂಪಾಯಿಗಳ ಬಾಡಿಗೆಯನ್ನು ಕೊಡುವಾಗ ಭ್ರಷ್ಟಾಚಾರ ಅದರಲ್ಲಿ ನಡೆದಿಲ್ಲ ಎಂದು ಹೇಳುವುದಾದರೆ ಇದಕ್ಕಿಂತ ಏನು ಹೇಳಬೇಕೋ ಗೊತ್ತಿಲ್ಲ. ಬಡ ಬೋರೇಗೌಡನ ಹಣವನ್ನು ಈ ರೀತಿ ಖರ್ಚು ಮಾಡುತ್ತಿದ್ದಾರೆ ಎಂದು ಬಡಬೋರೇಗೌಡನ ಮಧ್ಯದಲ್ಲಿ ಬೆಳೆದು ಬಂದಿರತಕ್ಕ ಶ್ರೀಮಾನ್ ಶಂಕರೇಗೌಡರಿಗೆ ಹೇಳಿದರೆ ಅವರು ಅದಕ್ಕೆ ಒಂದು ಅನುಕಂಪವನ್ನು ತೋರಿಸದೆ ಏನೋ ಒಂದು ರೀತಿಯ ಮನೋಭಾವನೆಯಿಂದ ಉತ್ತರವನ್ನು ಕೊಟ್ಟು ಅದರಿಂದ ನಮಗೆ ನಿರಾಶೆಯಾಗಬೇಕಾದರೆ ನಿಜವಾಗಿಯೂ ಇದು ದೇಶದ ಒಂದು ಗ್ರಹಚಾರ ಎಂದು ನಾನು ಹೇಳಬೇಕಾಗುತ್ತದೆ.

ಗ್ರಾಂಟ್ ಇನ್ ಏಯ್ಡ್ ರೂಲ್ಸ್ ಮಾಡಿದ್ದಾರೆ. ಆದರೆ ಅದನ್ನು ಇಡೀ ರಾಜ್ಯಕ್ಕೆಲ್ಲಾ ಅನ್ವಯವಾಗುವ ಒಂದು ಏಕರೂಪವಾದ ಕಾನೂನನ್ನು ತಂದಿಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ಇತ್ತೀಚೆಗೆ ಒಂದು ಕಾನೂನು ತಂದಿದ್ದಾರೆಂದು ಗೊತ್ತಾಗಿದೆ. ಈ ಬಗ್ಗೆ ಡೈರೆಕ್ಟರವರು ಒಂದು

(ಶ್ರೀ ಎಚ್ ಎನ್. ನಂಜೇಗೌಡ)

ಹುಕುಂ ಅನ್ನು ಹೊರಡಿಸಿ ಪ್ರತಿ ಕ್ಲಾಸಿಗೂ 25 ಹುಡುಗರು ಇಲ್ಲದಿದ್ದರೆ ಅಂಥಾ ಹೈಸ್ಕೂಲನ್ನು ಮುಚ್ಚಿ ಎಂದು ಆರ್ಡರ್ ಕೊಟ್ಟಿದ್ದಾರೆ. ಮೊದಲು 15 ಹುಡುಗರು ಇದ್ದರೆ ಸಾಕು ಎಂಬುದಾಗಿ ಆರ್ಡರ್ ಇತ್ತು. ಈಗ 25 ಜನ ಹುಡುಗರು ಇರಬೇಕೆಂದು ಆರ್ಡರ್ ಮಾಡಿದ್ದಾರೆ. ಡೈರೆಕ್ಟರ್ ಅವರು ಹುಕುಂ ಹೊರಡಿಸಿಬಿಟ್ಟರೆ ಮಾಯಮಂತ್ರ ಮಾಡಿ 25 ಜನ ಹುಡುಗರನ್ನು ತಂದು ಕೂರಿಸುವುದಕ್ಕಾಗುತ್ತದೆಯೇ ?

3-00 P.M.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಈಗ ಎರಡು ತರಹ ಹೈಸ್ಕೂಲ್‌ಗಳು ಇವೆ. ಆಡಳಿತ ಪಕ್ಷದವರ ಹೈಸ್ಕೂಲುಗಳು ಮತ್ತು ವಿರೋಧಪಕ್ಷದವರ ಹೈಸ್ಕೂಲ್‌ಗಳು ಎಂಬುದಾಗಿ.

ಶ್ರೀ ಎಚ್. ಎನ್. ನಂಜೇಗೌಡ.—ಈಗ ಒಂದು ಕ್ಲಾಸ್‌ನಲ್ಲಿ 25 ಜನ ಹುಡುಗರು ಇರಬೇಕೆಂದು ಆರ್ಡರ್‌ಮಾಡಿರುವುದರಿಂದ, ಬಹಳ ಕಷ್ಟದ ಪರಿಸ್ಥಿತಿ ಬಂದಿದೆ, ಏಕೆಂದರೆ ನಮ್ಮ ಏರಿಯಾದಲ್ಲಿರುವ ರುದ್ರಪಟ್ಟಣದ ಹೈಸ್ಕೂಲ್‌ನಲ್ಲಿ 16 ಹುಡುಗರು ಇದ್ದಾರೆ. ನಿಮ್ಮ ಹುಕುಂ ಪ್ರಕಾರ ಉಳಿದ 9 ಜನ ಹುಡುಗರನ್ನು ಕುರಿ ಕಾಯುವವರನ್ನು ತಂದು ಕೂರಿಸಬೇಕಾಗುತ್ತದೆ. ರೂರಲ್ ಏರಿಯಾಗಳಿಗೆ ಈ ರೀತಿ ಹುಕುಂ ಹೊರಡಿಸುವುದರಿಂದ ಕಷ್ಟವಾಗುತ್ತದೆ. ಅಡ್ಮಿಷನ್ ಮಾಡಿಕೊಳ್ಳುವ ಸಮಯದಲ್ಲಿ 25 ಜನ ಹುಡುಗರು ಬರದಿದ್ದರೆ ಆ ತರಗತಿಯನ್ನು ಮುಚ್ಚಿಬಿಡಿ ಎಂದು ಹುಕುಂ ಹೊರಡಿಸಿದರೆ ಪರವಾಗಿಲ್ಲ. ಈಗ ಪ್ರಾರಂಭವಾಗಿರುವ ತರಗತಿಗಳಲ್ಲಿ 16 ಜನ ಹುಡುಗರು ಇದ್ದರೆ ಏನು ಮಾಡುವುದು. ಸರ್ಕಾರದವರನ್ನೇ ನಂಬಿ ಸ್ಕೂಲನ್ನು ಪ್ರಾರಂಭ ಮಾಡಿರುವವರು ಏನಾಗಬೇಕು ಎಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಈ ತರಹದ ಹುಕುಂಗಳನ್ನು ಹೊರಡಿಸಬೇಕು. ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಏನು ಎಂಬುದನ್ನು ಸರ್ಕಾರದವರು ಅರ್ಥ ಮಾಡಿಕೊಳ್ಳಬೇಕು. ನಿಮ್ಮ ಈ ಒಂದು ಹುಕುಂ ಪ್ರಕಾರ 130 ಹೈಸ್ಕೂಲ್‌ಗಳನ್ನು ಮುಚ್ಚುವ ಸ್ಥಿತಿಗೆ ಬರುತ್ತವೆ. ಆದಕಾರಣ ಈ ಬಗ್ಗೆ ಉತ್ತರ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಟೆಕ್ನಿಕಲ್ ಸ್ಕೂಲ್‌ಗಳು ಮತ್ತು ಕಾಲೇಜುಗಳು ಜಾಸ್ತಿಯಾಗಿ, ಅಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಕೆಲಸ ಸಿಗುವುದು ಕಷ್ಟವಾಗಿರುವುದರಿಂದ, ಅಂತಹ ಸ್ಕೂಲ್‌ಗಳನ್ನು ಮತ್ತು ಕಾಲೇಜುಗಳನ್ನು ಮುಚ್ಚಿಬಿಡಿ ಎಂದು ಹೋದವರ್ಷ ಟೀಕೆ ಮಾಡಿದವರಲ್ಲಿ ನಾನೂ ಒಬ್ಬ. ಈ ಬಗ್ಗೆ ವಿದ್ಯಾಮಂತ್ರಿಗಳು ಈ ರೀತಿ ಉತ್ತರ ಕೊಟ್ಟಿದ್ದಾರೆ. ''ನಮ್ಮ ದೇಶದಲ್ಲಿ ತೀವ್ರಗತಿಯಲ್ಲಿ ಕೈಗಾರಿಕೆಗಳು ಪ್ರಗತಿ ಸಾಧಿಸುತ್ತಿವೆ. ಇಂತಹ ಸಂದರ್ಭದಲ್ಲಿ ತಾಂತ್ರಿಕ ಪರಿಣತರ ಅವಶ್ಯಕತೆ ಹೆಚ್ಚಾಗಿದೆ. ಈಗ ಬಂದಿರತಕ್ಕ ನಿರುದ್ಯೋಗ ತಾತ್ಕಾಲಿಕವಾದುದು'' ಎಂಬುದಾಗಿ. ಯಾವ ರೀತಿ ತಾತ್ಕಾಲಿಕವಾದ ವ್ಯವಸ್ಥೆ, ಅವರಿಗೆ ಯಾವ ಕೆಲಸವನ್ನು ಕೊಟ್ಟಿದ್ದೀರಿ ಎಂಬುದನ್ನು ಉತ್ತರ ಕೊಡುವಾಗ ಹೇಳಬೇಕು. ಈ ಬಗ್ಗೆ ಉತ್ತರವನ್ನು ತೇಲಿಸಿ ಹೇಳಿದರೆ ಆಗುವುದಿಲ್ಲ. ಮುಂದುವರಿದು ವಿದ್ಯಾಮಂತ್ರಿಗಳು ಈ ರೀತಿ ಹೇಳಿದ್ದಾರೆ. ''ಮುಂದೆ ಯಾವ ಯಾವ ಕೋರ್ಸ್‌ಗಳನ್ನು ಪ್ರಾರಂಭ ಮಾಡಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ. ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ಅವರ ನೇತೃತ್ವದಲ್ಲಿ ಒಂದು ಸಣ್ಣ ಕಮಿಟಿ ಮಾಡಿ ಸೂಕ್ತ ಸಲಹೆಗಳನ್ನು ಕೊಡಬೇಕೆಂದು ಕೇಳಿದ್ದೇವೆ'' ...ಎಂಬುದಾಗಿ. ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ಅವರ ಅಧ್ಯಕ್ಷತೆಯಲ್ಲಿ ಇದ್ದ ಕಮಿಟಿಯವರು ಈ ಟೆಕ್ನಿಕಲ್ ಸ್ಕೂಲ್‌ಗಳು ಮತ್ತು ಕಾಲೇಜುಗಳನ್ನು ಮುಚ್ಚುವ ಬಗ್ಗೆ ಏನು ಸಲಹೆ ಕೊಟ್ಟಿದ್ದಾರೆ, ಕೆಲಸವಿಲ್ಲದೆ ಸಂತೆಗಳಲ್ಲಿ ಅಲೆಯುತ್ತಿರುವ ವಿದ್ಯಾರ್ಥಿಗಳ ಬಗ್ಗೆ ಏನು ಸಲಹೆ ಮಾಡಿದ್ದಾರೆ ಮತ್ತು ಈಗ ಬಂದಿರುವ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಬಹುದು ಎಂಬ ಬಗ್ಗೆ ಏನು ಸಲಹೆ ಮಾಡಿದ್ದಾರೆ ಎಂಬ ವಿವರಗಳನ್ನು ಈ ಸಭೆಯ ಮುಂದೆ ಇಡಬೇಕು. ಸಭೆಯ ಮುಂದೆ ಇಡುವುದಕ್ಕೆ ಸಾಧ್ಯವಾಗದಿದ್ದರೆ ವಿವರವಾಗಿಯಾದರೂ ಸಹ ಈ ಸಭೆಗೆ ಹೇಳುವುದು ಅವಶ್ಯಕತೆ ಇದೆ. ಕಮಿಟಿ ಮಾಡಿದ್ದೇವೆ, ಅವರು ಜಾಗ್ರತೆ ವರದಿ ಕೊಡುತ್ತಾರೆ ಎಂಬುದನ್ನು ವಿದ್ಯಾಮಂತ್ರಿಗಳೇ ಹೇಳಿದ್ದಾರೆ. ಈ ಬಗ್ಗೆ ರಾಜ್ಯಸರ್ಕಾರರ ಹಾಗೂ ರಾಜ್ಯದ ಜನತೆಯ ತಲೆಯನ್ನು ತಿನ್ನುತ್ತಿದೆ. ಮತ್ತು ಈ ಟೆಕ್ನಿಕಲ್ ಕಾಲೇಜುಗಳು ಮತ್ತು ಹೈಸ್ಕೂಲ್‌ಗಳಲ್ಲಿ ಓದಿ ಪಾಸಾಗಿ ಕೆಲಸ ಹುಡುಕುತ್ತಿರುವ ವಿದ್ಯಾರ್ಥಿಗಳಿಗೂ ಸಹ ತಲೆತಿನ್ನುತ್ತಿದೆಯಾದ್ದರಿಂದ ನಿಮ್ಮ ಡೈರೆಕ್ಟರ್ ಅವರು ಏನು ಸಲಹೆ ಮಾಡಿದ್ದಾರೆಂಬುದನ್ನು ಈ ಸಭೆಗೆ ತಿಳಿಸಬೇಕು.

ಇನ್ನು ಭಾಷೆಯ ಬಗ್ಗೆ ಹೇಳುವುದಾದರೆ, ಸ್ಕೂಲ್‌ಗಳಲ್ಲಿ ಹುಡುಗರು ಇಂಗ್ಲೀಷ್, ಹಿಂದಿ ಮತ್ತು ಕನ್ನಡವನ್ನು ಓದಬೇಕಾಗಿದೆ. ಈ ಮೂರು ಭಾಷೆಗಳನ್ನು ಕಲಿಯುವುದು ಹುಡುಗರಿಗೆ ಕಷ್ಟವಾಗುತ್ತಿದೆ ಎಂಬುದನ್ನು ಹೇಳುತ್ತಿದ್ದೇನೆ. ಊಟ ಮಾಡಿದ್ದನ್ನು ಅರಗಿಸುವುದಕ್ಕೆ ಯಾವ ರೀತಿ ಚೈತನ್ಯ ಇರಬೇಕೋ ಅದೇ ರೀತಿ ಓದಿದ್ದು ಬುದ್ಧಿಗತವಾಗಬೇಕಾದರೆ ಒಂದು ಲಿಮಿಟೇಷನ್ ಇರುತ್ತದೆ. ಹಿಂದಿ, ಇಂಗ್ಲೀಷ್, ಕನ್ನಡ ಈ ಮೂರು ಭಾಷೆಗಳನ್ನು ಸಹ ಚಿಕ್ಕಮಕ್ಕಳು ಓದ ಬೇಕಾದರೆ ಕಷ್ಟವಾಗುತ್ತದೆ. ಹಿಂದಿ ಬೇಡ ಎಂದರೆ ರಾಷ್ಟ್ರ ದ್ರೋಹಿ, ಹಿಂದಿ ಬೇಕು ಎಂದರೆ ರಾಷ್ಟ್ರಪ್ರೇಮಿ ಎಂದು ಹೇಳುವ ವಿಷಯಕ್ಕೆ ನಾನು ಈಗ ಹೋಗುವುದಿಲ್ಲ. ಈ ಬಗ್ಗೆ ನಾನು ಮಾತ ನಾಡುವುದಕ್ಕೆ ಇಷ್ಟಪಡುವುದಿಲ್ಲ. ಹಿಂದಿ ಬೇಕು. ಆದರೆ ಹಿಂದಿ ಭಾಷೆ ಹೊರೆಯಾಗುವುದು ಬೇಡ. ಮೂರು ಭಾಷೆಗಳನ್ನು ಕಲಿಯುವುದರಿಂದ ಹೊರೆಯಾಗುತ್ತದೆ. ಆ ಕಾರಣ ಹಿಂದಿಯನ್ನು ಕಡ್ಡಾಯವಾಗಿ ಕಲಿಸುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ರಾಷ್ಟ್ರ ವಿರೋಧಿ ಚಳುವಳಿ ಮಾಡುತ್ತಿದ್ದಾರೆಂದು ಯಾರಾದರೂ ಹೇಳಿದರೆ ಅದಕ್ಕೆ ನಾನು ಕೇರ್ ಮಾಡುವುದಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಈ ಮೂರು ಭಾಷೆಗಳ ಜೊತೆಯಲ್ಲಿ ಉರ್ದುವನ್ನು ಸಹ ಕಲಿಸುತ್ತಿದ್ದಾರೆ. ನಮ್ಮ ಅರಕಲಗೂಡಿನಲ್ಲಿರುವ ಸ್ಕೂಲ್‌ನಲ್ಲಿ ಈ ನಾಲ್ಕು ಭಾಷೆಗಳನ್ನು ಸಹ ಹೇಳಿಕೊಡುತ್ತಿದ್ದಾರೆ. ಈ ನಾಲ್ಕಕ್ಕೂ ಪರೀಕ್ಷೆ ಇಟ್ಟಿದ್ದಾರೆ. ನಮ್ಮ ಊರಿನ ಹೈಸ್ಕೂಲಿನಲ್ಲಿ ಉರ್ದು ಹೇಳಿಕೊಡುವ ಉಪಾಧ್ಯಾಯರು ಕಳೆದ ಒಂದೂವರೆ ವರ್ಷದಿಂದ ಇಲ್ಲ. ಆದರೆ ಪರೀಕ್ಷೆ ನಡೆಸಬೇಕೆಂದಿದ್ದಾರೆ. ಆದಕಾರಣ ಈ ಬಗ್ಗೆ ಕೋರ್ಟಿಗೆ ಹಾಕಿಸಬೇಕೆಂದಿದ್ದೇನೆ. ಪಾಠಪ್ರವಚನಗಳನ್ನು ಹೇಳಿಕೊಟ್ಟು ಪರೀಕ್ಷೆ ಮಾಡುವುದನ್ನು ನಾನು ಕೇಳಿದ್ದೇನೆ. ಆದರೆ ಈ ಸ್ಕೂಲ್‌ನಲ್ಲಿ ಒಂದೂವರೆ ವರ್ಷದಿಂದ ಉಪಾಧ್ಯಾಯರೇ ಇಲ್ಲ. ಅಲ್ಲಿಯ ಹುಡುಗರು ಆ ಉಪಾಧ್ಯಾಯರ ಫೋಟೋ ನೋಡಿಕೊಂಡು ಪಾಠಗಳನ್ನು ಓದಬೇಕಾಗಿದೆ.

ಶ್ರೀ ಬಿ. ದೊಡ್ಡಬೋರೇಗೌಡ.—ಎಲ್ಲರನ್ನೂ ಪಾಸ್ ಮಾಡಿಬಿಡುತ್ತಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಅಂದಮೇಲೆ ಪರೀಕ್ಷೆಯನ್ನಾದರೂ ಸಹ ಏತಕ್ಕೆ ಮಾಡ ಬೇಕು ? ಪಾಠ ಹೇಳಿಕೊಡದ ಮೇಲೆ ಪರೀಕ್ಷೆಯನ್ನಾದರೂ ಏತಕ್ಕೆ ಮಾಡಬೇಕು. ಪರೀಕ್ಷೆಗಿಂತ ಮಕ್ಕಳಿಗೆ ಭಾಷೆಯನ್ನು ಕಲಿಸುವುದು ಮುಖ್ಯವಾಗಿದೆ. ಉರ್ದು ಪಂಡಿತರನ್ನು ನೇಮಕ ಮಾಡ ಬೇಕೆಂದು ಅಲ್ಲಿಯ ಮುನಿಸಿಪಲ್ ಅಧ್ಯಕ್ಷರು ಸರ್ಕಾರಕ್ಕೆ ಕಾಗದ ಬರೆದಿದ್ದಾರೆ, ಹೈಸ್ಕೂಲ್ ಕಮಿಟಿ ಯವರು ಸರ್ಕಾರಕ್ಕೆ ಕಾಗದ ಬರೆದಿದ್ದಾರೆ. ಆದರೆ ಸರ್ಕಾರದವರು ಯಾವ ಕ್ರಮವನ್ನೂ ಸಹ ಕೈಗೊಂಡಿಲ್ಲ. ಉಪಾಧ್ಯಾಯರೇ ಇಲ್ಲದಮೇಲೆ ಪರೀಕ್ಷೆಯನ್ನು ಯಾವ ರೀತಿ ನಡೆಸುತ್ತೀರಿ ! ಈ ಬಗ್ಗೆ ಖಚಿತವಾದ ಉತ್ತರವನ್ನು ನಿಮ್ಮ ಅಧಿಕಾರಿಗಳನ್ನು ಕೇಳಿಕೊಡಬೇಕು. ಈಗ ಪರೀಕ್ಷೆ ನಡೆಸುವುದನ್ನ ಮನ್ನಾ ಮಾಡಿ ಆ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಕಳಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ನಮ್ಮ ಬಾಯನ್ನು ಮುಚ್ಚಿಸುವುದನ್ನು ನಿಲ್ಲಿಸಬೇಕು. ಮಂತ್ರಿಗಳ ಕೈಯನ್ನು ಬಲಪಡಿಸುವುದಕ್ಕೆ ನಾವು ಇದ್ದೇವೆ. ಯಾವ ಮಂತ್ರಿಗಳೇ ಆಗಲಿ, ತಮ್ಮ ತಮ್ಮ ಇಲಾಖೆಯ ದಕ್ಷತೆಯನ್ನು ಕಾಪಾಡಿಕೊಳ್ಳಬೇಕಾದರೆ ನಾವು ಹೇಳುವ ವಿಷಯಗಳ ಬಗ್ಗೆ ಅನುಕಂಪ ಇಟ್ಟುಕೊಂಡು, ಅದನ್ನು ನೆರವೇರಿಸುವುದು ತಮ್ಮ ಕರ್ತವ್ಯವೆಂದು ತಿಳಿದುಕೊಂಡು ತಮ್ಮ ಅಧಿಕಾರಿಗಳ ಮೂಲಕ ಮಾಡಿಸಬೇಕು. ಇಷ್ಟು ಹೇಳಿ ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪ ಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ವಿದ್ಯಾ ಭ್ಯಾಸದ ಇಲಾಖೆಗೋಸ್ಕರ ಒಂದು ಬೇಡಿಕೆ ಇಲ್ಲಿ ಬಂದಿದೆ. ಈ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕು ಎಂದು ಯೋಚನೆ ಮಾಡಿದ್ದೇನೆ.

ವಿದ್ಯಾಭ್ಯಾಸದ ಇಲಾಖೆ ಸಾಕಷ್ಟು ಪ್ರಗತಿಯಾಗಿ ಬೆಳೆಯಬೇಕಾದುದು ಬಹಳ ಅಗತ್ಯ. ಈಗ ದೇಶದಲ್ಲಿ ಪ್ರಜಾ ಸಂಖ್ಯೆ ಹೆಚ್ಚಾಗುತ್ತಿರುವ ಈ ಸಮಯದಲ್ಲಿ ಹೆಚ್ಚಿನ ರೀತಿಯಲ್ಲಿ ಸ್ಕೂಲುಗಳ ಸಂಖ್ಯೆ ಯನ್ನು ಹೆಚ್ಚಾಗಿ ಸ್ಯಾಂಕ್ಷನ್ ಮಾಡುವುದು ಸ್ವಾಭಾವಿಕ. ಆದರೆ ಇದಕ್ಕೆ ಯಾವ ರೀತಿಯಾದ ಮಿತಿಯೂ ಇಲ್ಲ ಎಂದು ಹೇಳಬೇಕಾಗುತ್ತದೆ. ಅನೇಕ ಕಡೆಗಳಲ್ಲಿ ಎರಡು ಫರ್ಲಾಂಗುಗಳಿಗೆ ಒಂದೊಂದು ಸ್ಕೂಲುಗಳೂ ಇವೆ. ನಮ್ಮ ತಾಲ್ಲೂಕಿನಲ್ಲೇ ಇವೊತ್ತು ಒಂದು ಸ್ಕೂಲು ಆ ರೀತಿ ಯಾಗಿವೆ. ಯಾವ ರೀತಿಯಿಂದಲೋ ಪರ್ಮಿಷನ್ ತೆಗೆದುಕೊಂಡು ತಾಲ್ಲೂಕು ಬೋರ್ಡುಗಳ ಮೂಲಕ ಬೇಕಿಲ್ಲ ಎಂದರೂ ಇಲಾಖೆಯವರು ಕ್ರಮತೆಗೆದುಕೊಳ್ಳುವುದಿಲ್ಲ. ಆದರೆ ಒಂದೆರಡು ಫರ್ಲಾಂಗು ದೂರದಲ್ಲೇ ಸ್ಕೂಲುಗಳು ಇರುವಂತೆ ಮಾಡಿದರೆ ಅದು ಸರಿಯಾಗುವುದಿಲ್ಲ. ಆಡಳಿತ

(ಶ್ರೀ ಕೆ. ಎಚ್. ವೀರಪ್ಪ ಗೌಡ)

ನಡೆಸತಕ್ಕವರು ಕೊನೆಯ ಪಕ್ಷ ಗ್ರಾಮಾಂತರಗಳಲ್ಲಿ ಒಂದೆರಡು ಮೈಲಿಗಳ ದೂರದಲ್ಲಿ ಒಂದೊಂದು ಸ್ಕೂಲುಗಳು ಇರುವಂತೆ ಮಾಡಿದರೆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಅನುಕೂಲವಾಗುತ್ತದೆ. ಮತ್ತು ಇದರಲ್ಲಿರುವ ಅಧಿಕಾರಿಗಳು ಶಾಲೆಗಳ ಮೇಲೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೇ ಇದ್ದರೆ ಇಂತಹ ಶಾಲೆಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಈಗೇನೂ ಗ್ರಾಮಾಂತರಗಳಲ್ಲಿ ಬೇಕಾದ ಹಾಗೆ ಸ್ಕೂಲುಗಳಾಗುತ್ತಿವೆ. ಆದರೆ ಅವುಗಳ ಬಗ್ಗೆ ಸರಿಯಾದ ತನಿಖೆ ಮಾಡುತ್ತಿಲ್ಲ. ಮಲೆನಾಡಿನಲ್ಲಿ ನನ್ನ ಅನುಭವವನ್ನು ಹೇಳುವುದಾದರೆ ಇಲ್ಲಿ ಸ್ಕೂಲಿಗೆ 15 ದಿನಕ್ಕೆ ಒಂದು ಸಾರಿ ಉಪಾಧ್ಯಾಯರುಗಳು ಹೋಗಿ ಅಲ್ಲಿ ಅಟೆಂಡೆನ್ಸ್ ಹಾಕಿ ಸಂಬಳ ತೆಗೆದುಕೊಳ್ಳುತ್ತಾರೆ. ಇತರ ಕಡೆಗಳಲ್ಲಿಯೂ ಇದೇ ರೀತಿ ಇರಬಹುದು. ನಾನು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರಾಗಿರುವುದರಿಂದ ಆಯಾ ತಾಲ್ಲೂಕುಗಳಲ್ಲಿ ನಡೆಸುತ್ತಿರುವ ಪ್ರೈಮರಿ ಶಾಲೆಗಳಲ್ಲಿ ಹಾಗೂ ಇನ್ನಿತರ ಶಾಲೆಗಳಲ್ಲಿ ಯಾವ ತರಹದ ಪರಿಸ್ಥಿತಿ ಇದೆ ಎನ್ನುವುದನ್ನು ನೋಡಿದ್ದೇನೆ. ಮೀಟಿಂಗು ನಡೆಯುವಾಗ ಚರ್ಚೆ ಮಾಡುತ್ತಿರುತ್ತೇವೆ. ನಮ್ಮ ತಾಲ್ಲೂಕಿಗೆ ಹತ್ತಿರ ಇರುವ ಗುಬ್ಬಗೋಡು ಎಂಬಲ್ಲಿ ಸರ್ಕಾರದ ಒಂದು ಪ್ರೈಮರಿ ಶಾಲೆ ಇದೆ. ಇಲ್ಲಿ ಟೀಚರುಗಳು ಸಾಧಾರಣವಾಗಿ ಶಾಲೆಗೆ ಬರುವುದೇ ಇಲ್ಲ. ಯಾವತ್ತೋ ಒಂದು ದಿನ ಸ್ಕೂಲಿಗೆ ಹೋಗಿ ಅಟೆಂಡೆನ್ಸ್ ಹಾಕಿ ಬಂದು ಬಿಡುತ್ತಾರೆ. ಇದನ್ನು ನೋಡಲು, ತಿಳಿಸಲು, ಬೆಟರ್‌ಮೆಂಟ್ ಕಮಿಟಿಗೆ ಅಧಿಕಾರವಿದ್ದರೆ ಉಚಿತ. ಆದುದರಿಂದ ಹಳ್ಳಿಗಾಡಿನಲ್ಲಿರುವ ಟೀಚರುಗಳನ್ನು ಒಂದೇ ಊರಿನಲ್ಲಿಡಕೂಡದು ಎಂದು ಕೆಲವರು ಸಲಹೆಮಾಡಿದ್ದು ಸರಿ. ಇದೇನೋ ಒಂದು ರೀತಿಯಾಗಿ ಸರಿಯಾಗಿದ್ದರೂ ಕೆಲವು ಕಡೆಗಳಲ್ಲಿ ಬಹಳ ಕಷ್ಟಗಳಾಗುತ್ತವೆ. ಇದಕ್ಕಾಗಿ ನಾನು ಸಲಹೆ ಮಾಡುವುದು ಗ್ರಾಮಗಳಲ್ಲಿರುವ ಪ್ರೈಮರಿ ಶಾಲಾ ಉಪಾಧ್ಯಾಯರುಗಳನ್ನು ಅವರ ಊರಿನಲ್ಲಿಡಬಾರದು. ಹತ್ತಿರದಲ್ಲಿರುವ ಇನ್ನೊಂದು ತಾಲ್ಲೂಕಿಗಾದರೂ ನೇಮಕ ಮಾಡಿದರೆ ಸರಿಯಾಗಿರುತ್ತದೆ. ಮತ್ತು ನಮ್ಮ ಮಾನ್ಯ ಮಂತ್ರಿಗಳು ಈಚೆಗೆ ಜಿಲ್ಲಾ ಮಟ್ಟದಲ್ಲಿ ಒಬ್ಬೊಬ್ಬರು ಡಿ.ಡಿ.ಪಿ.ಐ. ಇಡಬೇಕೆಂದು ಪ್ರಯತ್ನ ಮಾಡುತ್ತಾರೆಂದು ಯೋಚನೆ ಮಾಡಿದ್ದಾರೆಂದು ಕೇಳುತ್ತೇವೆ. ಇದರ ಬದಲು ತನಿಖಾಧಿಕಾರಿಗಳನ್ನು ಜಾಸ್ತಿ ಮಾಡಿ ಡಿ.ಇ.ಓ. ಇದ್ದರೆ ಸಾಕು ಇಲ್ಲದಿದ್ದರೆ ಇದನ್ನು ಸರಿಪಡಿಸಲು ಸಾಧ್ಯವಿಲ್ಲ. ಇವೊತ್ತು ನೂರಾರು ಅಧಿಕಾರಿಗಳು ಎಂದು ಮಾಡಿದರೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಒಂದು ಕಡೆ ಒಬ್ಬರು ಇನ್ಸ್‌ಪೆಕ್ಟರು 90 ಶಾಲೆಗಳನ್ನು ಇನ್ಸ್‌ಪೆಕ್ಟ್ ಮಾಡಬೇಕು ಎಂದು ಮಾಡಿದ್ದಾರೆ. ಆದರೆ ಇಲ್ಲಿ ನಾನು ಸಲಹೆ ಮಾಡುವುದು ಮೂರು ಜನ ಇನ್ಸ್‌ಪೆಕ್ಟರುಗಳು ಇರಬೇಕು. ಒಬ್ಬರು ಪ್ರೈಮರಿ ಶಾಲೆಗಳಿಗೆ ಇನ್ನೊಬ್ಬರು ಸೆಕೆಂಡರಿ ಶಾಲೆಗಳಿಗೆ ಮತ್ತು ಹೈಸ್ಕೂಲಿಗೆ ಒಬ್ಬರು ಎಂದು ಮಾಡಿದರೆ ಆಡಳಿತ ನಡೆಸಲು ಅನುಕೂಲವಾಗುತ್ತದೆ ಮತ್ತು ಸಮರ್ಪಕವಾಗಿ ಕೆಲಸಗಳನ್ನು ಮಾಡಬಹುದು. ಅಡ್ಮಿನಿಸ್ಟ್ರೇಷನ್ ಚೆನ್ನಾಗಿ ಮಾಡಬೇಕು ಎಂದು ಹೇಳುವಾಗ ಅದಕ್ಕೆ ತಕ್ಕಂತೆ ಖರ್ಚು ಮಾಡಬೇಕು. ಹಾಗೆ ಇದಕ್ಕೆ ಸಾಕಷ್ಟು ಹಣ ಕೊಡದೇ ಇರುವುದು ಸರಿಯಲ್ಲ. ನಾವು ಕೂಡ ಬೆಟರುಮೆಂಟ್ ಕಮಿಟಿಯಲ್ಲಿ ಹಾಗೂ ಇನ್ನಿತರ ಕಾನ್‌ಫರೆನ್ಸ್‌ಗಳಲ್ಲಿ ಇಂತಹ ಶಾಲೆಗಳ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಮಾಡಬೇಕು ಎನ್ನುವುದಕ್ಕೆ ಸಲಹೆಗಳನ್ನು ಕೊಟ್ಟರೂ ಅದಕ್ಕೆ ಸರಿಯಾಗಿ ಅಧಿಕಾರವನ್ನು ಕೊಡುತ್ತಿಲ್ಲ. ಮತ್ತೆ ಸರ್ಕಾರ ಖಾಸಗಿ ಸಂಸ್ಥೆಗಳ ಆಡಳಿತದಲ್ಲಿರುವ ಶಾಲೆಗಳನ್ನೂ ವಹಿಸಿಕೊಳ್ಳಬೇಕು ಎನ್ನುವ ಮಾತನ್ನು ಇಲ್ಲಿ ಹೇಳಬೇಕಾಗಿದೆ. ಈಗೇನೋ ಕಾನೂನುಗಳನ್ನು ಮಾಡಿ ಅದರಲ್ಲಿ ಎಲ್ಲ ಅಧಿಕಾರಗಳನ್ನೂ ಪಂಚಾಯಿತಿಗಳವರಿಗೆ ಹಾಗೂ ತಾಲ್ಲೂಕ್ ಬೋರ್ಡುಗಳಿಗೆ ಕೊಡಬೇಕೆಂದು ಮಾಡಿ ಹೆಚ್ಚು ಅವಕಾಶಗಳನ್ನು ಕಲ್ಪಿಸಿ ಕೊಟ್ಟಿದ್ದಾರೆ. ಮತ್ತು ಇದರ ಬಗ್ಗೆ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ಒಂದು ಕಮಿಟಿ ಮಾಡಿದ್ದರು. ಆ ಕಮಿಟಿಯವರು ಸರ್ಕಾರಕ್ಕೆ ರಿಪೋರ್ಟು ಕೊಟ್ಟಿದ್ದಾರೆಂದು ಗೊತ್ತಾಗಿದೆ. ಸರ್ಕಾರ ಇದರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಂಡರೆ ಸ್ವಲ್ಪಮಟ್ಟಿಗಾದರೂ ಅನುಕೂಲವಾಗುತ್ತದೆ. ಇದರಲ್ಲಿ ಸೂಚಿಸಿರುವಂತೆ 20 ರಿಂದ 30 ಸ್ಕೂಲುಗಳಿಗೆ ಒಬ್ಬರು ಇನ್ಸ್‌ಪೆಕ್ಟರುಗಳು ಇರುವಂತೆ ಅಧಿಕಾರಿಗಳನ್ನು ನೇಮಿಸಬೇಕು ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ ಇದಕ್ಕಾಗಿ ಸರ್ಕಾರ ಅಲ್ಲಲ್ಲಿ ಬೆಟರುಮೆಂಟು ಕಮಿಟಿ ಮಾಡಿದ್ದಾರೆ. ಅವುಗಳಿಗೆ ಎಲ್ಲ ವಿಚಾರಗಳನ್ನೂ ಪರಿಶೀಲನೆ ಮಾಡಬೇಕು ಎಂದು ಸರ್ಕಾರದವರು ಅಧಿಕಾರ ಕೊಡಬೇಕು. ಇವೊತ್ತು ಡೆವಲಪ್‌ಮೆಂಟು ಮಾಡುವುದು ಬಹಳ ಮುಖ್ಯ.

ಇವೊತ್ತು ಡಿಪಾರ್ಟುಮೆಂಟಿನಲ್ಲಿರುವ ಪ್ರೈಮರಿ ಶಾಲೆಗಳಲ್ಲಿ ಎಲ್ಲ ಮೇಷ್ಟರುಗಳು ತಾಲ್ಲೂಕಾ ಮಟ್ಟದಲ್ಲಿರುವವರು ಅವರ ಶಾಲೆಗಳಲ್ಲಿ ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ಎನ್ನುವುದನ್ನು ನೋಡಬಹುದು. ಅಲ್ಲಿರುವ ಟೀಚರುಗಳು ಯಾರೂ ಸರಿಯಾದ ಕಾಲಕ್ಕೆ ಬರುವುದಿಲ್ಲ. ಅವರಿಗೆ ಒಂದು ಸೈಡ್ ಬಿಸಿನೆಸ್ ಆಗಿದೆ ಎಂದೂ ಕೆಲವರು ಇಲ್ಲಿ ಹೇಳಿದ ಹಾಗೆ ಆಗಿದೆ. ಅವರು ಸ್ವಲ್ಪ

ಲೇಟ್ ಆಗಿ ಹೋದರೆ ಆಯಿತು ಎಂದು ತಮ್ಮ ಮನಸ್ಸಿಗೆ ಬಂದಂತೆ ಹೋಗುತ್ತಾರೆ. ಉದಾಹರಣೆಯಾಗಿ ನನ್ನ ಕ್ಷೇತ್ರವಾದ ಶೃಂಗೇರಿಯನ್ನೇ ತೆಗೆದುಕೊಳ್ಳಿ. ಅಲ್ಲಿಗೆ ಹೋಗಿ ಬರಬೇಕು ಎಂದರೆ ಕಷ್ಟವಾಗುತ್ತದೆ. ಹಾಗೆ ದೂರದಲ್ಲಿರುವ ಟೀಚರುಗಳನ್ನು ಹಾಕಿದರೆ ಆಗಿಂದಾಗ್ಗೆ ಊರಿಗೆ ಹೋಗುವುದು ತಪ್ಪುತ್ತದೆ. ಕಾಲಕ್ಕೆ ಸರಿಯಾಗಿ ಹೋಗುತ್ತಾರೆ. ಇಲ್ಲದಿದ್ದರೆ, ಪ್ರೈಮರಿ ಶಾಲೆಗಳಲ್ಲಿರುವ ಟೀಚರುಗಳನ್ನು ಆಯಾ ಊರುಗಳ ಹತ್ತಿರವೇ ಇಟ್ಟರೆ, ಅವರು ತಮ್ಮ ಮನೆ ಕೆಲಸದಲ್ಲೇ ಆಸಕ್ತಿ ಜಾಸ್ತಿಯಾಗುತ್ತೆ. ಹಳ್ಳಿಗಾಡಿನಲ್ಲಿರುವ ಶಾಲೆಗಳು ಇರುವ ಕಡೆಗಳಲ್ಲಿ ಟೀಚರುಗಳಿಗೆ ಮನೆಗಳು ಸಿಗುವುದಿಲ್ಲ. ಇಂತಹ ಕಡೆಗಳಲ್ಲಿ ಪ್ರಾಮುಖ್ಯವಾಗಿ ಮೊದಲು ಮನೆಗಳನ್ನು ಕಟ್ಟಿಸಿ ಕೊಡಬೇಕು. ತಾಲ್ಲೂಕಾ ಲೆವಲ್‌ನಲ್ಲಿ ಕಡ್ಡಾಯ ಶಿಕ್ಷಣ ಜಾರಿಗೆ ಕೊಡಬೇಕು ಎಂದು ಮಾಡುವಾಗ ಸ್ಕೂಲುಗಳಲ್ಲಿ ಕೆಲಸ ಮಾಡುವ ಟೀಚರುಗಳಿಗೆ ವಾಸಕ್ಕೆ ಮನೆಗಳನ್ನು ಕಟ್ಟಿಸಿ ಕೊಡಬೇಕು. ಸರಕಾರ ಇದರ ಕಡೆಗೆ ನಿಗಾ ಕೊಡಬೇಕು. ಕೆಲವು ಕಡೆಗಳಲ್ಲಿ ಇದಕ್ಕಾಗಿ ದುಡ್ಡನ್ನೇನೋ ಒದಗಿಸಿದ್ದಾರೆ. ಆದರೆ ಇನ್ನೂ ಕಟ್ಟಡಗಳು ಆಗದೆ ಉಪಾಧ್ಯಾಯರು ಅಲ್ಲಿ ವಾಸಿಸುವುದಿಲ್ಲ. ಇನ್ನು ಬೆಂಗಳೂರಿನಲ್ಲಿ ಡಿ ಪಿ ಐ ಎಂದು ಎಲ್ಲ ಕೆಲಸಗಳನ್ನೂ ಒಂದೇ ಕಡೆ ನೋಡಿಕೊಳ್ಳಬೇಕು ಎಂದರೆ ಸರಿಯಾಗುವುದಿಲ್ಲ. ಇದನ್ನು ಎರಡು ಸರಕಲ್‌ಗಳಾಗಿ ಮಾಡಬಹುದು. ಹಳೆಯ ಮೈಸೂರು ಸರ್ಕಲ್ ಎಂದು ಮತ್ತು ಇನ್ನೊಂದು ಕರ್ಣಾಟಕ ಸರ್‌ಕಲ್ ಎಂದು ಎರಡು ಭಾಗವಾಗಿ ಮಾಡಿದರೆ ಅಡ್ಮಿನಿಸ್ಟ್ರೇಷನ್ ಚೆನ್ನಾಗಿ ಆಗುತ್ತದೆ. ತಾಲ್ಲೂಕು ಬೋರ್ಡುಗಳ ಮೂಲಕ ಮಾಡುವ ಕೆಲಸವು ಸ್ಕೂಲುಗಳಲ್ಲಿ ಮಹಿಳಾ ಟೀಚರುಗಳು ಇರುತ್ತಾರೆ. ಇವರಿಗೆ ಸರಿಯಾದ ಕ್ವಾರ್ಟರುಗಳೇ ಇರುವುದಿಲ್ಲ. ಎಲ್ಲೆಲ್ಲಿ ಮಹಿಳಾ ಟೀಚರುಗಳು ಇರುತ್ತಾರೋ ಅಲ್ಲಿ ಅವರಿಗೆ ವಸತಿ ಸೌಕರ್ಯಗಳನ್ನು ಮಾಡಿಕೊಡಬೇಕು. ಇದಕ್ಕಾಗಿ ವಾಸದ ಮನೆಗಳನ್ನು ಬೇಗನೆ ಮಾಡಿಸಿಕೊಡಬೇಕು. ಇವರಿಗೆ ಬಾಡಿಗೆ ಮನೆಗಳು ಹಳ್ಳಿಗಳಲ್ಲಿ ಸಿಗುತ್ತಿಲ್ಲ. ಇವರು ಸುಮಾರು ಐವತ್ತು ರೂಪಾಯಿಗಳಷ್ಟು ಬಾಡಿಗೆ ಕೊಡುತ್ತೇವೆ ಎಂದರೂ ಮನೆಗಳು ಸಿಗುವುದಿಲ್ಲ. ಇಲಾಖೆಯವರು ಇಂತಹ ಟೀಚರುಗಳ ಆವಶ್ಯಕತೆಗಳನ್ನು ತಿಳಿದುಕೊಂಡು ಇದರ ಕಡೆಗೆ ಪೂರ್ತಿ ಗಮನ ಕೊಡಬೇಕು. ಪ್ರೈಮರಿ ಶಾಲೆಗಳಲ್ಲಿರುವ ತೊಂದರೆಯನ್ನು ಒಂದೇ ಸಲ ಸರಿ ಮಾಡಬೇಕು ಎಂದರೆ ಆಗುವುದಿಲ್ಲ. ಇದನ್ನು ಹಂತ ಹಂತವಾಗಿ ಸರಿ ಮಾಡಬೇಕು. ಡಿವಿಷನಲ್ ಕಮಿಷನ್ ಆಫೀಸಿನಲ್ಲಿ ಮಾಡಿರುವಂತೆ ನಾಲ್ಕು ರೆವೆನ್ಯೂ ಸಬ್ ಡಿವಿಜನ್‌ಗಳನ್ನು ಇಲ್ಲೂ ಮಾಡಿಕೊಂಡು ಒಂದೊಂದು ಡಿವಿಜನ್ನಿನಲ್ಲೂ ಒಬ್ಬೊಬ್ಬರು ಡಿ ಡಿ ಪಿ ಐ ಎಂದು ಮಾಡಿದರೆ ಅಲ್ಲಿ ಕೆಲಸಗಳು ಸ್ವಲ್ಪ ಮಟ್ಟಿಗಾದರೂ ಚೆನ್ನಾಗಿ ಆಗಲು ಸಹಾಯವಾಗುತ್ತದೆ. ಎಲ್ಲ ಕೆಲಸಗಳನ್ನೂ ಒಂದೇ ಕಡೆ ಕೇಂದ್ರಿಕರಿಸಿ ಡೈರೆಕ್ಟರು ಎಂದು ಮಾಡಿದರೆ ಕೆಲಸ ಮಾಡಲು ಕಷ್ಟವಾಗುತ್ತದೆ. ಇದಕ್ಕಾಗಿ ಎರಡು ಸರ್ಕಲ್‌ಗಳನ್ನು ಮಾಡಬಹುದು. ಮೈಸೂರು ಸರ್ಕಲ್ ಎಂದು ಒಂದು ಕರ್ಣಾಟಕ ಸರ್‌ಕಲ್ ಎಂದು ಇನ್ನೊಂದು ಸರಕಲ್ ಮಾಡಿದರೆ ಎಲ್ಲ ಅಡ್ಮಿನಿಸ್ಟ್ರೇಷನ್ ಕಂಟ್ರೋಲು ಮಾಡಲು ಸಹಾಯವಾಗುತ್ತದೆ ಮತ್ತು ಹೆಚ್ಚು ಅನುಕೂಲ ಮಾಡಿಕೊಡಲು ಸಾಧ್ಯವಿದೆ. ಇವೊತ್ತು ಡೈರೆಕ್ಟರ ಆಫೀಸು ಒಂದು ಸೆಕ್ರಟೇರಿಯಟ್‌ನಂತಾಗಿದೆ. ಇಲ್ಲೇನೋ ಇವರ ಸಹಾಯಕ್ಕೆ 10-12 ಅಧಿಕಾರಿಗಳಿದ್ದರೂ ಇಲ್ಲಿಗೆ ಹೊರಗಿಂದ ಬರುವ ಪತ್ರಗಳಿಗೇ ಜವಾಬು ಕಳುಹಿಸಲು ಇಂದು ಆಗುತ್ತಿಲ್ಲ. ಇದು ಒಂದು ರೀತಿ ದೊಡ್ಡಿಯಂತೆ ಆಗಿದೆ. ಎಲ್ಲರನ್ನೂ ಒಂದೇ ಕಡೆ ಸೇರಿಸುವುದರಿಂದ ಕೆಲಸಗಳನ್ನು ಮಾಡುವುದು ಕಷ್ಟವಾಗುತ್ತದೆ.

ಹೊಸ ಆಫೀಸು ತೆಗೆಯಿರಿ ಎಂದರೆ ಎಲ್ಲವನ್ನೂ ಹೊಸದಾಗಿ ಪ್ರಾರಂಭ ಮಾಡುವುದಲ್ಲ ಇಲ್ಲಿ ಹೆಚ್ಚಾಗಿರುವ ಸಿಬ್ಬಂದಿಯನ್ನು ಕಳಿಸಿ ಹೊಸ ಆಫೀಸು ಪ್ರಾರಂಭ ಮಾಡಬೇಕು ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್ ಇವರನ್ನೆಲ್ಲಾ ಇಲ್ಲಿಯೇ ಇಟ್ಟು ಹೊಸಬರನ್ನು ಹೊಸ ಆಫೀಸುಗಳಿಗೆ ಹಾಕಬೇಕು ಎಂದು ನಾನು ಹೇಳುವುದಿಲ್ಲ. ಡೈರೆಕ್ಟಾಗಿ ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಇಟ್ಟುಕೊಂಡು ನೇರವಾಗಿ ಸರ್ಕಾರಕ್ಕೆ ಬರತಕ್ಕ ಅವಕಾಶ ಇರಬೇಕು. ಆ ರೀತಿ ಮಾಡದೆ ಇದ್ದರೆ ಆಡಳಿತದಲ್ಲಿ ಎಷ್ಟೇ ಉತ್ತಮವಾಗಿ ಮಾಡುತ್ತೇವೆ ಎಂದರೂ ಕಷ್ಟವಾಗುತ್ತದೆ.

ಪಠ್ಯ ಪುಸ್ತಕದ ವಿಷಯದಲ್ಲಿ ಸಾಕಷ್ಟು ಹೇಳಿದ್ದಾರೆ.

ಹೈಸ್ಕೂಲುಗಳಲ್ಲಿ 11ನೇ ಸ್ಟ್ಯಾಂಡರ್ಡ್ ಪ್ರಾರಂಭವಾಗಿದೆ. ಅಲ್ಲಿ ಆ ತರಗತಿಗೆ ಪಾಠ ಹೇಳಲು ಅರ್ಹತೆ ಇರುವವರು ಸಿಕ್ಕುವುದಿಲ್ಲ. ಲೆಕ್ಚರರ್ ಅನ್ನಿಸಿಕೊಳ್ಳಬೇಕು, ಅದರ ಮೇಲಿನ ಹೆಸರು ಅನ್ನಿಸಿಕೊಳ್ಳಬೇಕು. ಹೈಸ್ಕೂಲಿನಲ್ಲಿ ಟೀಚರ್ ಅನ್ನಿಸಿಕೊಳ್ಳುವುದಕ್ಕೆ ಎಂ. ಎಸ್. ಸಿ. ಮಾಡಿಕೊಂಡು ಅಲ್ಲಿಗೆ ಹೋಗುವುದಿಲ್ಲ. ಈ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಲ್ಲಿ ಎಷ್ಟು ಪರ್ಸೆಂಟೇಜ್ ಪಾಸಾಗುತ್ತಾರೆ ಎನ್ನುವುದನ್ನು ನೋಡಬೇಕು. ಎಸ್. ಎಸ್. ಎಲ್. ಸಿ. ಗೆ ಪಾಠ ಹೇಳುವುದಕ್ಕೂ 11ನೇ ಸ್ಟ್ಯಾಂಡರ್ಡ್‌ನಲ್ಲಿ ಪಾಠ ಹೇಳುವುದಕ್ಕೂ ಅರ್ಹತೆಯಲ್ಲಿ ಏನೂ ವ್ಯತ್ಯಾಸವಿಲ್ಲ. ಹೀಗೆ ಇರುವಾಗ 11ನೇ ಸ್ಟ್ಯಾಂಡರ್ಡ್ ತೆಗೆದುದರಿಂದ ಏನು ಅನುಕೂಲವಾಯಿತು

(ಶ್ರೀ ಕೆ. ಎನ್. ವೀರಪ್ಪ ಗೌಡ)

ಎಂದು ಗೊತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ 11ನೇ ಸ್ಟಾಂಡರ್ಡ್ ಕಾಲೇಜಿನಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು. ಈಗ ಇರುವ ಪರಿಸ್ಥಿತಿಯಲ್ಲಿ ಹೈಸ್ಕೂಲು ವಿದ್ಯಾಭ್ಯಾಸವು ಕೂಡ ಕೆಟ್ಟು ಹೋಗುತ್ತಿದೆ. 11ನೇ ಸ್ಟಾಂಡರ್ಡ್ ಹೈಸ್ಕೂಲುಗಳಲ್ಲಿರುವುದರಿಂದ ಅಲ್ಲಿನ ಉಪಾಧ್ಯಾಯರುಗಳಿಗೆ ಹೆಚ್ಚಿನ ಕಾಲವನ್ನು ಹೈಸ್ಕೂಲು ವಿದ್ಯಾಭ್ಯಾಸಕ್ಕೆ ವಿನಿಯೋಗ ಮಾಡುವುದಕ್ಕೆ ಕೂಡ ಅವಕಾಶವಾಗುವುದಿಲ್ಲ.

ಹೈಸ್ಕೂಲುಗಳ ವಿಷಯ ತೆಗೆದುಕೊಳ್ಳುವುದಾದರೆ ಹಿಂದಿನ ವಿದ್ಯಾ ಮಂತ್ರಿಯವರು 20 ಪರ್ಸೆಂಟ್‌ಗಿಂತ ಕಡಮೆ ಪಾಸಾಗುವ ಶಾಲೆಗಳಿಗೆ ಕೊಡುವ ಗ್ರಾಂಟನ್ನು ನಿಲ್ಲಿಸುತ್ತೇವೆ ಎಂದು ಹೇಳುತ್ತಿದ್ದರು. ವಿದ್ಯಾರ್ಥಿಗಳು ಪಾಸಾಗುವುದಕ್ಕೆ ಊರಿನ ಜನ ಪಾಠ ಹೇಳಬೇಕೇ ಅಥವಾ ಉಪಾಧ್ಯಾಯರು ಹೇಳಬೇಕೇ ? ಯಾರು ಪಾಠ ಹೇಳುತ್ತಾರೆ, ಯಾರು ಮುಖ್ಯೋಪಾಧ್ಯಾಯರಾಗಿರುತ್ತಾರೆ ಅವರ ಮೇಲೆ ಜವಾಬ್ದಾರಿ ಹಾಕಿ ಅಂಥವರ ಇನ್‌ಕ್ರಿಮೆಂಟ್ ನಿಲ್ಲಿಸುವುದಾಗಲೀ ಅಥವಾ ಬೇರೆ ಕ್ರಮ ತೆಗೆದುಕೊಳ್ಳುವುದಾಗಲೀ ಮಾಡದೆ ಶಾಲೆಗಳಿಗೆ ಕೊಡತಕ್ಕ ಗ್ರಾಂಟನ್ನು ನಿಲ್ಲಿಸುತ್ತೇವೆಂದು ಹೇಳುತ್ತಾರೆ. ಇದು ಸರಿಯಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ತಾಲ್ಲೂಕು ಬೋರ್ಡ್ ಹೈಸ್ಕೂಲಿದೆ. ಅಲ್ಲಿ ಸೇಕಡ 50ಕ್ಕಿಂತ ಜಾಸ್ತಿ ವಿದ್ಯಾರ್ಥಿಗಳು ಪಾಸಾಗುತ್ತಿದ್ದಾರೆ. ನಾವು ಸ್ಥಳದಲ್ಲಿದ್ದು ಸ್ವಲ್ಪ ಗಮನವನ್ನು ಕೊಡುವುದರಿಂದ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗುವುದಕ್ಕೆ ಅವಕಾಶವಾಗಿದೆ.

ಯಾವುದಾದರೂ ಸಂದರ್ಭದಲ್ಲಿ ಹೈಸ್ಕೂಲು ಉಪಾಧ್ಯಾಯರನ್ನು ಬೇರೆ ಕಡೆಗೆ ವರ್ಗ ಮಾಡುವುದಕ್ಕೆ ಅವಕಾಶವಿಲ್ಲ. ಅದಕ್ಕೆ ಏನಾದರೂ ಅವಕಾಶವನ್ನು ಕಲ್ಪಿಸಬೇಕು. ಬಹಳ ಕಾಲ ಒಂದೇ ಕಡೆಯಲ್ಲಿದ್ದರೆ ಅವರು ಶ್ಯಾನುಭೋಗ ಪಟೇಲರಂತಾಗುತ್ತಾರೆ ಯಾರಾದರೂ ಏನಾದರೂ ತಪ್ಪು ಮಾಡಿದರೆ ಎಲ್ಲಿಯಾದರೂ ಬೇರೆ ಕಡೆಗೆ ವರ್ಗ ಮಾಡುವುದಕ್ಕೆ ಅವಕಾಶವಿಲ್ಲ. ಇಂಥವನ್ನು ಸ್ವಲ್ಪ ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳದೆ ಇದ್ದರೆ, ಅದರ ಬಗ್ಗೆ ಏನಾದರೂ ತೀರ್ಮಾನ ಮಾಡದೆ ಇದ್ದರೆ ಏನು ಇಂಪ್ರೂವ್ ಮಾಡಬೇಕು ಎಂದು ಹೇಳುತ್ತೇವೆ ಅದಕ್ಕೆ ಸಾಕಷ್ಟು ಕಷ್ಟವಾಗುತ್ತದೆಯೇ ಹೊರತು ಅಷ್ಟು ಸುಲಭವಾಗುವುದಿಲ್ಲ.

ಹೈಸ್ಕೂಲುಗಳನ್ನು ಮಂಜೂರು ಮಾಡುವುದಕ್ಕೆ ಮುಂಚೆ ಒಂದು ಸರ್ವೆ ಮಾಡಿಸಿ ಎಷ್ಟು ಪ್ರಜಾ ಸಂಖ್ಯೆಗೆ ಒಂದು ಸ್ಕೂಲನ್ನು ಕೊಡಬೇಕು ಎಂದು ಮೊದಲೇ ನಿರ್ಧಾರ ಮಾಡದೆ ಹೋದರೆ ಕೇಳಿದಾಗಲೆಲ್ಲ ಶಾಲೆಗಳನ್ನು ಕೊಡುವುದಕ್ಕೆ ಬಹಳ ಕಷ್ಟವಾಗುತ್ತದೆ.

ಇಂಜಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಡೊನೇಷನ್ ಕೊಟ್ಟು ಓದತಕ್ಕ ಪರಿಸ್ಥಿತಿಯನ್ನು ತಪ್ಪಿಸಿ ನೇರವಾಗಿ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಏನಾದರೂ ಮಾಡಬೇಕು. ಇಲ್ಲದೆ ಇದ್ದರೆ ಆನೆಸ್ಟ್ ಆಗಿ ಕೆಲಸ ಮಾಡುವವರು ಸಿಕ್ಕುವುದು ಕಷ್ಟವಾಗುತ್ತದೆ. 25 ಸಾವಿರ ರೂಪಾಯಿ ಖರ್ಚು ಮಾಡಿ ಓದಿದ್ದೇನೆ, ಏತಕ್ಕಾಗಿ ಖರ್ಚು ಮಾಡಿದೆ ಎಂದು ಸಾರ್ವಜನಿಕವಾಗಿ ಕೇಳುವಂಥ ಪರಿಸ್ಥಿತಿ ಬಂದಿದೆ. ಈಗ ನಮ್ಮಲ್ಲಿ ಬೇಕಾದಷ್ಟು ಜನ ಓದಿದವರಿದ್ದಾರೆ ನಮಗೇನೂ ಹೆಚ್ಚು ತೊಂದರೆಯಾಗುವಂತೆ ಇಲ್ಲ. ಸರ್ಕಾರದವರು ದೀರ್ಘವಾಗಿ ಯೋಚನೆ ಮಾಡಿ ದೇಶದಲ್ಲಿ ಆನೆಸ್ಟ್ ಆಗಿ ಕೆಲಸ ಮಾಡುವವರು ಸಿಕ್ಕಬೇಕಾದರೆ ಡೊನೇಷನ್ ಕೊಟ್ಟು ಓದುವಂಥ ಪರಿಸ್ಥಿತಿಯನ್ನು ನಿಲ್ಲಿಸಬೇಕು ಎಂದು ಹೇಳುತ್ತೇನೆ.

ಮತೀಯ ಗಲಭೆಗಳು ಬಹಳ ಪ್ರಾಮುಖ್ಯವಾಗಿ ಇರುವ ವಿಷಯ. ಇದು ಜಾಸ್ತಿ ಆಗುವುದಕ್ಕೆ ಕಾರಣವೇನು ಎಂದು ನೋಡಿದರೆ ಆರ್. ಎಸ್. ಎಸ್. ನವರು ಪ್ರಾಥಮಿಕ ಶಾಲೆಯ ಬಾಲಕರಿಂದ ಹಿಡಿದು ದೊಡ್ಡವರವರೆಗೆ ಜಾತೀಯ ಭಾವನೆಯನ್ನು ಬೋಧನೆ ಮಾಡುತ್ತ ಇರುವುದೇ ಕಾರಣ ಎಂದು ಹೇಳಬಹುದು. ಗ್ರಾಮಗಳಲ್ಲಿ ಉಪಾಧ್ಯಾಯರು ರಾಜಕೀಯದಲ್ಲಿ ಕೈ ಹಾಕುವಂತೆ ಇದರಲ್ಲೂ ಹೆಚ್ಚಿಗೆ ಕೈ ಹಾಕುತ್ತಾರೆ. ಇದನ್ನು ತಡೆಗಟ್ಟದೆ ಹೋದರೆ ಪ್ರತಿ ನಿಮಿಷದಲ್ಲಿಯೂ ಕೋಮುವಾರು ಗಲಭೆಗಳು ಜಾಸ್ತಿಯಾಗುವುದಕ್ಕೆ, ಮುಂದೆ ಕೆಲವೇ ವರ್ಷಗಳಲ್ಲಿ ಅದು ವಿಪರೀತವಾಗಿ ಆಗತಕ್ಕ ಪರಿಸ್ಥಿತಿಗೆ ಬರುತ್ತದೆ. ಎಲ್ಲಿ ಏನೇನು ಕುಮ್ಮಕ್ಕು ನಡೆಯುತ್ತಿದೆ ಎನ್ನುವುದನ್ನು ದೀರ್ಘವಾಗಿ ಯೋಚನೆ ಮಾಡಬೇಕು. ಇಂಥ ಶಕ್ತಿಗಳು ಬೆಳೆಯದಂತೆ ಒಂದು ಕಾನೂನು ಬೇಕಾದರೂ ಮಾಡಿ 18 ವರ್ಷ ವಯಸ್ಸು ಆಗುವರೆಗೂ ಯಾರೂ ಇಂಥ ಚಟುವಟಿಕೆಗಳಲ್ಲಿ ಭಾಗ ವಹಿಸಬಾರದು, ವಯಸ್ಕರಾದ ಮೇಲೆ ಅವರು ಯಾವ ಪಕ್ಷಕ್ಕೆ ಸೇರಬೇಕು, ಯಾವರೀತಿ ಇರಬೇಕು ಎಂದು ತಿಳಿದುಕೊಳ್ಳುವ ಶಕ್ತಿ ಬಂದಮೇಲೆ ಏನು

ಬೇಕಾದರೂ ಮಾಡಲಿ, ಅದಕ್ಕೆ ನನ್ನ ಅಭ್ಯಂತರವಿಲ್ಲ. ಈಗ ಇರತಕ್ಕ ಪದ್ಧತಿಯನ್ನು ಬಿಡಬೇಕು. ವಿದ್ಯಾರ್ಥಿಗಳ ಅಸ್ತಿಭಾರವನ್ನು ಹಾಳು ಮಾಡಿ ದೇಶದಲ್ಲಿ ನಾಳೆ ದಿವಸ ಕೋಮುವಾರು ಗಲಭೆಗಳು ಆದರೆ ಯಾವ ಮಟ್ಟಕ್ಕೆ ಹೋಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಇದು ಬಹಳ ಪ್ರಾಮುಖ್ಯವಾದ ವಿಷಯ. ನಮ್ಮ ವಿದ್ಯಾ ಮಂತ್ರಿಗಳು ಈ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಮಾನ್ಯ ಮಂತ್ರಿಗಳು ತಂದಿರತಕ್ಕ ಬೇಡಿಕೆಯನ್ನು ಸಂಪೂರ್ಣವಾಗಿ ಸ್ವಾಗತಿಸಿ ಅಧ್ಯಕ್ಷರು ಸಮಯ ಕೊಟ್ಟುದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ನಾಗಪ್ಪ (ರಾಯಚೂರು).—ಅಧ್ಯಕ್ಷರೇ, ಡಿಮಾಂಡ್ 17 ಮತ್ತು 37 ಇವನ್ನು ನಾನು ವಿರೋಧಿಸುತ್ತ ಕೆಲವು ವಿಷಯಗಳನ್ನು ಸಭೆಯ ಮುಂದೆ ತರಬಯಸುತ್ತೇನೆ.

ವಿದ್ಯಾಭ್ಯಾಸದ ಮಹತ್ವದ ಬಗ್ಗೆ ಎರಡು ಅಭಿಪ್ರಾಯಗಳಿಲ್ಲ ಎನ್ನುವ ವಿಷಯವನ್ನು ನಾನು ತಿಳಿದುಕೊಂಡಿದ್ದೇನೆ. ಈವೊತ್ತು ರಾಜ್ಯದಲ್ಲಿ ರಾಜಕೀಯ ಸ್ವಾತಂತ್ರ್ಯತೆ, ಆರ್ಥಿಕ ಸ್ವಾತಂತ್ರ್ಯತೆ ಬಂದರೂ ನಮಗೆ ಮುಖ್ಯವಾಗಿ ವಿದ್ಯಾಭ್ಯಾಸ ಅತ್ಯವಶ್ಯವಾದುದು. ಅದಕ್ಕಾಗಿ ಈ ಮಟ್ಟದಲ್ಲಿ ಎಷ್ಟರಮಟ್ಟಿಗೆ ಪ್ರಗತಿ ಸಾಧಿಸಿದ್ದೇವೆ ಎನ್ನತಕ್ಕ ವಿಷಯವನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸದಲ್ಲಿ ಬಹಳಷ್ಟು ಹಿಂದೆ ಉಳಿದಿದ್ದೇವೆ ಎಂಬುದು ನಿರ್ವಿವಾದ.

> "The State shall endure to provide within a period of 10 years from the commencement of this constitution for free and compulsory education to all childern until they complete the age of 14 years."

ಎನ್ನತಕ್ಕ ಒಂದು ಡೈರೆಕ್ಟಿವ್ ಪ್ರಿನ್ಸಿಪಲ್ ರಾಜ್ಯಾಂಗದ ಆರ್ಟಿಕಲ್ 40 ರಲ್ಲಿದೆ. ಆದರೆ ಸರ್ಕಾರದವರು ಕೊಟ್ಟಿರತಕ್ಕ ರಿವ್ಯೂ ಆಫ್ ದಿ ವರ್ಕಿಂಗ್ ಆಫ್ ದಿ ಗವರ್ನ್‌ಮೆಂಟ್ ಡಿಪಾರ್ಟ್‌ಮೆಂಟ್ಸ್ ಎಂಬ ಪುಸ್ತಕದಲ್ಲಿ 53ನೇ ಪುಟದಲ್ಲಿ ಹೀಗೆ ಹೇಳಿದ್ದಾರೆ.

> "The percentage of enrolment of children in this age group is 93. Compulsion beyond the age of 10 is not being insisted upon at the moment as our efforts are being directed to consolidate the existing schools."

14 ವರ್ಷಕ್ಕೆ ಮೀರದಂಥ ಪ್ರತಿಯೊಬ್ಬ ಹುಡುಗನೂ ಶಾಲೆಯಲ್ಲಿ ಇರಬೇಕು ಎನ್ನತಕ್ಕ ವಿಷಯವನ್ನು ಕಡ್ಡಾಯ ವಿದ್ಯಾಭ್ಯಾಸವನ್ನು ಆ ಮಟ್ಟಕ್ಕೆ ಕೊಡಬೇಕು ಎನ್ನುವ ಡೈರೆಕ್ಟಿವ್ ಪ್ರಿನ್ಸಿಪಲ್ ಇದ್ದರೂ 10 ವರ್ಷದ ಒಳಗೆ ಇರುವವರಿಗೆ ಮಾತ್ರ ಆ ರೀತಿ ಕೊಟ್ಟಿದೆ ಎಂದು ಹೇಳಿದ್ದಾರೆ. 22 ವರ್ಷಗಳ ಸತತವಾದ ಕಾಂಗ್ರೆಸ್ ರಾಜಿಕೆ ಮಾಡಿ 10 ವರ್ಷದ ಮಟ್ಟಿಗೆ ಈವೊತ್ತು ಕೊಡತಕ್ಕ ಪ್ರಯತ್ನವನ್ನು ಇಟ್ಟುಕೊಂಡಿದ್ದೇವೆ ಎಂದು ತಿಳಿಸಿದ್ದಾರೆ. ಅದನ್ನೂ ಎಷ್ಟು ಮಟ್ಟಿಗೆ ಸಾಧಿಸಿದ್ದಾರೆನ್ನುವುದು ಕೇವಲ ಅಂಕಿ ಅಂಶಗಳನ್ನು ನೋಡಿದರೆ ಮಾತ್ರ ಅವರ ಸಾಧನೆ ಸ್ವಲ್ಪಮಟ್ಟಿಗೆ ಕಂಡು ಬರುತ್ತದೆ. ಪ್ರತಿ ವರ್ಷ ಸ್ಟೂಡೆಂಟ್ ಸೆನ್ಸಸ್ ಮಾಡುತ್ತಾರಲ್ಲ ಅದನ್ನು ತರಿಸಿ ಎಷ್ಟು ಪರ್ಸೆಂಟೇಜ್ ಶಾಲೆಗೆ ಬರುತ್ತಾರೆ ಎನ್ನುವ ವಿಷಯ ನೋಡಿದರೆ ಗೊತ್ತಾಗುತ್ತದೆ. ಸ್ಟಾಟಿಸ್ಟಿಕ್ಸ್ ತೋರಿಸುವ ದೃಷ್ಟಿಯಿಂದ ಸಾಕಷ್ಟು ಮುಂದೆ ಬಂದಿದ್ದಾರೆ.

3-30 P.M.

ವಾಸ್ತವಿಕ ದೃಷ್ಟಿಯಿಂದ ಈ ಸಾಧನೆಯಾಗಿದೆಯೋ ಎಂದರೆ ಇದರಲ್ಲಿ ಸೇಕಡ 90 ಭಾಗ ಕೂಡ ಆಗಿಲ್ಲ ಎಂದು ಖಚಿತವಾಗಿ ಹೇಳುತ್ತೇನೆ. ಇದನ್ನು ಹಳ್ಳಿಗಳ ಭಾಗಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಯಾವ ಪ್ರಗತಿಯನ್ನು ಸಾಧಿಸಿಲ್ಲ. ಆದರೆ ಪಟ್ಟಣಗಳಲ್ಲಿ ಕೆಲವುಮಟ್ಟಿಗೆ ಸಾಧಿಸಿರಬಹುದು. ಹಳ್ಳಿಗಳಲ್ಲಿ ಸೇಕಡ 77.7 ಜನರಿರುವಾಗ ಎಷ್ಟು ಸಾಧನೆಮಾಡಿದ್ದೀರಿ? ಒತ್ತಾಯ ಶಿಕ್ಷಣ ಹತ್ತು ವರ್ಷಗಳ ಕೆಳಗೆ ಜಾರಿಗೆ ಬಂದರೂ ಅದನ್ನು ಸಾಧಿಸುವುದರಲ್ಲಿ ವಿಫಲರಾಗಿದ್ದಾರೆ. ಇಂದು ಬಹಳ ಕಠೋರವಾದ ಒಂದು ವಿಷಯ ಹೇಳುತ್ತೇನೆ. ವಿದ್ಯಾಭ್ಯಾಸವು ಇಂದು ರಾಜಕೀಯ ಪಕ್ಷದ ಮನಾಪಲಿ ಆಗಿದೆ. ಮಿಡ್ಲ್ ಕ್ಲಾಸ್‌ಗೆ ಈಗ ಕೊಟ್ಟಿರುವ ಅನುಕೂಲ ಸಿಕ್ಕುವುದಿಲ್ಲ, ಇದಕ್ಕೆ ಹತ್ತಾರು ಉದಾಹರಣೆಗಳಿವೆ. ನಿಮ್ಮ ಅಂಕಿಅಂಶ ನೋಡಿ ಸರ್ವೆ

(ಶ್ರೀ ಎಂ. ನಾಗಪ್ಪ)

ಮಾಡಿಸಿ, ಇಂದು ಕಾಲೇಜು, ಮತ್ತು ಹೈಸ್ಕೂಲು ಮಟ್ಟಗಳಲ್ಲಿ ನೋಡಿ. ಹೈಸ್ಕೂಲು ಮಟ್ಟದಲ್ಲಿ ಕೆಲವು ಅಂಶ ಸಿಕ್ಕಬಹುದು. ಮಿಡ್ಲ್ ಕ್ಲಾಸ್ ಎಟ್ಟುಮಟ್ಟಿಗೆ ವಿದ್ಯಾಭ್ಯಾಸದಲ್ಲಿ ಮುಂದುವರೆದಿದ್ದಾರೆ ಎಂಬುದನ್ನು ನೋಡಬಹುದು. ಹೈಯರ್ ಕ್ಲಾಸ್ ಮತ್ತು ಲೋಯರ್ ಕ್ಲಾಸ್ ಎಷ್ಟು ಮಟ್ಟಿಗೆ ವಿದ್ಯಾಭ್ಯಾಸದಲ್ಲಿ ಮುಂದುವರೆದಿದ್ದಾರೆಂಬುವಕ್ಕೆ ಅಂಕಿಅಂಶ ಸಭೆಯು ಮುಂದಿಟ್ಟರೆ ಒಪ್ಪಬಹುದು. ಹೆಚ್ಚು ಅನುಕೂಲಸ್ಥರಾಗಿರುವವರಿಗೆ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಮುಂದುವರಿಯಲು ಅವಕಾಶವಾಗಿದೆ, ಅದನ್ನು ಒಪ್ಪಬಹುದು. ಹಣವಿರುವವರು ಬೇಕಾದರೆ 5 ಸಾವಿರ ರೂಪಾಯಿ ಕ್ಯಾಪಿಟೇಷನ್ ಫೀ ಕೊಟ್ಟು ಮೆಡಿಕಲ್ ಕಾಲೇಜು ಮುಂತಾದುವುಗಳಲ್ಲಿ ಸೀಟನ್ನು ಪಡೆಯಬಹುದು. ಮೆರಿಟ್ ಇರುವವರು ಸೇಕಡ ಒಂದು ಅಥವ ಅರ್ಧ ಇರಬಹುದು. ಮೆರಿಟ್ ಮೇಲೆ ಬಂದವರಿಗೆ ಒಂದೆರಡು ಸೀಟು ಸಿಕ್ಕಿದರೆ ಅದೇನೂ ಹೆಚ್ಚಲ್ಲ. ಮಿಡ್ಲ್ ಕ್ಲಾಸ್, ಲೋಯರ್ ಮಿಡ್ಲ್ ಕ್ಲಾಸ್ ಮತ್ತು ಲೋಯೆಸ್ಟ್ ಕ್ಲಾಸ್ ಜನರಲ್ಲಿ ಎಷ್ಟು ಮಂದಿ ವಿದ್ಯಾಭ್ಯಾಸಮಾಡುತ್ತಿದ್ದಾರೆ ಎಂಬುದನ್ನು ನೋಡುವುದಾದರೆ, ಅವರಿಗೆ ಹೆಚ್ಚು ವಿದ್ಯಾಭ್ಯಾಸಮಾಡಲು ಅವಕಾಶವಾಗುತ್ತಿಲ್ಲ, ಮನಾಪಲಿ ಎಲ್ಲಾ ಒಂದೇ ಕ್ಲಾಸಿಗೆ ಅದೂ ಹಣವಂತರಿಗೆ ಆಗಿದೆ. ನನಗೆ ತಿಳಿದಮಟ್ಟಿಗೆ ನನ್ನ ಜಿಲ್ಲೆಯ ಮಟ್ಟಿಗೆ ಹೇಳುತ್ತೇನೆ. ಫಸ್ಟ್ ಗ್ರೇಡ್ ಗೆಜಿಟೆಡ್ ಆಫೀಸರ್ಸ್ ಅಪಾಯಿಂಟ್‌ಮೆಂಟ್ ಆಯಿತು, ಸೆಕೆಂಡ್ ಗ್ರೇಡ್ ಗೆಜಿಟೆಡ್ ಅಪಾಯಿಂಟ್‌ಮೆಂಟಿಗೆ ಪಿ. ಎಸ್. ಸಿ. ಅವರು ಇಂಟರ್‌ವ್ಯೂಗೆ ಕರೆದು ಸೆಲೆಕ್ಷನ್ ಮಾಡಿದೆ. ಆದರೆ ಒಂದು ಸಾವಿರ ಎಕರೆಗಳಿಗೆ ಕಡಮೆ ಇಲ್ಲದಿರುವವರು ಮಾತ್ರ ಸೆಲೆಕ್ಟ್ ಆಗಿದ್ದಾರೆ, ಕಡಮೆ ಇರುವ ಕೆಲವು ಜನರಿಗೆ ಅನುಕೂಲವಾಗಿರಬಹುದು. ಕನಿಷ್ಠ ನೂರು ಎಕರೆ ಜಮೀನಿದ್ದು ಸಾಕಷ್ಟು ಸಂಪತ್ತು ಮನೆಯಲ್ಲಿದ್ದರೆ ಅಂಥವರಿಗೆ ಮಾತ್ರ ಅನುಕೂಲವಾಗುವುದು. ಉಳಿದವರು ಅರ್ಜಿ ಕೊಡುವಹಾಗಿಲ್ಲ. ಇಂದು ರಾಜ್ಯದಲ್ಲಿ ನೌಕರಿಗಳೆಲ್ಲಾ ದೊಡ್ಡವರ ಮನಾಪಲಿ ಆಗಿದೆ. ಮಿಡ್‌ಲ್‌ಕ್ಲಾಸ್‌ನವರಿಗೆ—4ನೇ ವರ್ಗ ಮತ್ತು 3ನೇ ವರ್ಗದ ನೌಕರಿಗಳು ದೊರಕಿರಬಹುದು, ಕೆಲವರು ಎರಡನೆಯ ದರ್ಜೆ ಗುಮಾಸ್ತರು ಆಗಿರಬಹುದು. ಅವರಿಗೆ ಮೊದಲನೆ ದರ್ಜೆ ಗುಮಾಸ್ತೆ ಕೆಲಸಕ್ಕೆ ಬಡ್ತಿ ಸಿಕ್ಕಿರಬಹುದು. ಅದಕ್ಕಿಂತ ಹೆಚ್ಚಿಲ್ಲ. ಅಂಕಿಅಂಶಗಳ ಮೂಲಕ ಹೇಳಬೇಕಾದರೆ ಯಾರಲ್ಲಿ 500 ಎಕರೆ ಜಮೀನಿದೆ ಅವರು ತಾಸಿಲ್ದಾರರಾಗುತ್ತಾರೆ, 250 ರೂಪಾಯಿ ಸಂಬಳ ಅವರಿಗೆ ದೊರೆಯುವುದು. ಅವರ ಮನೆಯಲ್ಲಿ ಸಾಕಾದಷ್ಟು ನೌಕರರಿರುತ್ತಾರೆ. ಅವರಿಗೆ ಆಫೀಸರ ಕೆಲಸಮಾಡಲು ಕಷ್ಟವಿಲ್ಲ, ಅವರ ಮಕ್ಕಳಿಗೆ ಬೇಕಾದ ಕಡೆ ಸೀಟು ಪಡೆಯುವರು, ದೊಡ್ಡ ಕೆಲಸ ಕೊಡಿಸುವರು. ವಾಸ್ತವವಾಗಿ ಬಡವರಿಗೆ ವಿದ್ಯಾ ಸೌಕರ್ಯ ಸಿಕ್ಕಬೇಕು ಎಂದು ಹೇಳುತ್ತಿದ್ದರೂ, ಆ ಉದ್ದೇಶವಿದ್ದರೂ ಮೇಲ್ಮಟ್ಟದವರಿಗೆ ಮಾತ್ರ ಅದು ಸಿಕ್ಕುತ್ತಿದೆ. ಬಡವರಿಗೆ ಹೆಚ್ಚು ಅವಕಾಶ ಸಿಕ್ಕಬೇಕಾದರೆ ಯೂನಿವರ್ಸಿಟಿ ವಿದ್ಯಾಭ್ಯಾಸ ಉಚಿತವಾಗಿರಬೇಕು. ಆಗ ಯೋಗ್ಯತೆ ಇರುವವರು ಯಾರು, ಇಲ್ಲದಿರುವವರು ಯಾರು ಎಂಬುದು ಗೊತ್ತಾಗುವುದು. ಇಂದು ಆರ್ಥಿಕ ಬೆಂಬಲವಿಲ್ಲದೆ ಬುದ್ಧಿವಂತರಾಗಿದ್ದರೂ ಹೆಚ್ಚು ವಿದ್ಯಾಭ್ಯಾಸಮಾಡಲು ಅವಕಾಶವಾಗುತ್ತಿಲ್ಲ. ಈಗ ಹೈಸ್ಕೂಲ್ ಮಟ್ಟಿಗೆ ಉಚಿತ ವಿದ್ಯಾಭ್ಯಾಸ ಕೊಡುವುದಾಗಿ ಹೇಳುತ್ತಾರೆ. ಮೇಲ್ಮಟ್ಟದವರಿಗೆ ಎಲ್ಲಾ ಅನುಕೂಲವೂ ದೊರೆಯುತ್ತಿದೆ.

ಎರಡನೆಯದಾಗಿ ನರ್ಸರಿ ಶಾಲೆಗೆ ಹೇಳಬೇಕಾದರೆ ಪಟ್ಟಣಗಳಲ್ಲಿ ಮಾತ್ರ ಅವುಗಳ ಸೌಕರ್ಯವಿದೆ. 1960 ರಲ್ಲಿ ಒಂದು ಕಮಿಷನ್ ಮಾಡಿದರು, ವರದಿ ಬಂತು. ಬಂದನಂತರ ಕೆಲಸಮಾಡಿರುವುದೆಷ್ಟು? ಪಟ್ಟಣಗಳಲ್ಲಾದರೆ ಖಾಸಗಿಯವರು ನರ್ಸರಿ ಶಾಲೆಗಳನ್ನು ನಡೆಸುತ್ತಿದ್ದಾರೆ, ಅವರು ಸಹಕಾರಮಾಡುತ್ತಿದ್ದಾರೆಂದು ಕಾಣುತ್ತದೆ. ಸೇಕಡ 77 ಭಾಗದ ಜನ ಇರುವ ಹಳ್ಳಿಗಾಡಿನಲ್ಲಿ ಎಷ್ಟು ನರ್ಸರಿ ಶಾಲೆಗಳಿಗೆ ಅವಕಾಶಮಾಡಿದ್ದೀರಿ! ಪಟ್ಟಣಗಳಲ್ಲಿ ಮೂಲೆ ಮೂಲೆಗಳಲ್ಲಿ ತಮಗೆ ಬೇಕಾಗಿರುವ ಕಡೆ ನರ್ಸರಿಗಳನ್ನು ತೆರೆಯಿರಿ, ಹಾಗೆಯೇ ಹಳ್ಳಿಗಳಲ್ಲೂ ನರ್ಸರಿ ಶಾಲೆಗಳನ್ನು ತೆರೆಯಬೇಕು. ಪಟ್ಟಣಗಳಲ್ಲಿ ಅವುಗಳ ಆವಶ್ಯಕತೆ ಇಲ್ಲದಿದ್ದರೆ ಹಳ್ಳಿಗಳಲ್ಲಿ ಅವು ಮುಖ್ಯವಾಗಿ ಬೇಕಾಗಿರುವುದರಿಂದ ಅಲ್ಲಿಗೆ ಅವನ್ನು ಸಾಗಿಸಬೇಕು ಎಂದು ಒತ್ತಿ ಹೇಳುತ್ತೇನೆ.

ಇನ್ನೊಂದು ವಿಷಯವನ್ನು ಸರಕಾರದ ಗಮನಕ್ಕೆ ತರುತ್ತೇನೆ. ಡಿಮ್ಯಾಂಡ್ 17 ಎಸ್ಟಿಮೇಟ್ಸ್ ಬುಕ್ಕಿನಲ್ಲಿದೆ, ಯೂನಿವರ್ಸಿಟಿಗೆ 49 ಲಕ್ಷದ 3600 ರೂಪಾಯಿ ಎಂದು ಅದರಲ್ಲಿದೆ, ಟೋಟಲ್ ಸರಿಯಾಗಿಲ್ಲ, ನೋಡಿ. 161—162 ನೆಯ ಪುಟಗಳಲ್ಲಿ ನೋಡಿ. ಒಟ್ಟು ವಿದ್ಯಾ ಇಲಾಖೆಗೆ ಕೊಟ್ಟಿರುವುದು 46746000 ರೂಪಾಯಿಗಳು. ಆದರೆ ಕೂಡಿದರೆ 46646000

ರೂಪಾಯಿ ಆಗುವುದು. ಒಂದು ಲಕ್ಷ ಯಾರು ಕೈಯಿಂದ ಹಾಕಬೇಕು ? 7 ಲಕ್ಷಕ್ಕೆ ಬದಲಾಗಿ 6 ಲಕ್ಷ ಕೊಡಿದರೆ ಬರುವುದು, ಇದಕ್ಕೆ ರಾಜ್ಯಪಾಲರು ಒಪ್ಪಿಗೆ ಕೊಟ್ಟಿದ್ದಾರೆ, ಸಭೆಯ ಮುಂದಿಟ್ಟಿರುವ ಡಿಮ್ಯಾಂಡಿನಲ್ಲಿ ಒಂದು ಲಕ್ಷ ಕಡಮೆ ಬರುವುದು.

ಶ್ರೀ ಎಂ. ಎಸ್. ಕೊಟ್ರಬಸಯ್ಯ ಸೋಗಿ.—(ವಿದ್ಯಾ ಶಾಖೆಯ ಉಪಮಂತ್ರಿಗಳು).—ಅದು ಕ್ಲೆರಿಕಲ್ ಮಿಸ್ಟೇಕ್ ಅಥವ ಪ್ರಿಂಟಿಂಗ್ ಎರರ್ ಇರಬೇಕು.

ಶ್ರೀ ಎಂ ನಾಗಪ್ಪ.—ಕೊಡಿದರೆ ಒಂದು ಲಕ್ಷ ಕಡಮೆ ಬರುವುದು. ಅವನ್ನು ಎಲ್ಲಿಂದ ತರುವುದು ? ಇದನ್ನು ನೋಡಿದರೆ ಎಷ್ಟುಮಟ್ಟಿಗೆ ಆಸಕ್ತಿಯಿದೆಯೆಂಬುದು ಗೊತ್ತಾಗುವುದು.

ರಾಯಚೂರು, ಗುಲ್ಬರ್ಗ ಮತ್ತು ಬಿದರ್ ಈ ಮೂರು ಜಿಲ್ಲೆಗಳು ಸಾಕಾದಷ್ಟು ಹಿಂದುಳಿದಿರತಕ್ಕ ಜಿಲ್ಲೆಗಳು. ಅದರಲ್ಲೂ ರಾಯಚೂರಿನ ಅಂಕಿಅಂಶಗಳನ್ನು ಕೊಡುವುದಾದರೆ ಪುರುಷರು 15 ಪರ್ಸೆಂಟ್ ಮತ್ತು ಮಹಿಳೆಯರು 5 ಪರ್ಸೆಂಟ್ ಲಿಟ್ರೇಟ್ಸ್ ಇದ್ದಾರೆ. ತಾವು ಅಲಾಟ್ ಮಾಡಿರತಕ್ಕ ಹಣ ನೋಡಿದರೆ ಎಷ್ಟು ರೀಜನಲ್ ಇಂಬ್ಯಾಲೆನ್ಸ್ ಇದೆ ಎಂಬುದು ಗೊತ್ತಾಗುತ್ತದೆ. ಈ ಜನರನ್ನು ಮುಂದೆ ತರಬೇಕೆಂಬ ಉದ್ದೇಶ ತಮಗೆ ಇಲ್ಲ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಮೈಸೂರು, ಬೆಂಗಳೂರು ಯುನಿವರ್ಸಿಟಿಗಳಿಗೆ 74 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀರಿ. ಆ ಭಾಗದಲ್ಲಿರತಕ್ಕ ಕರ್ನಾಟಕ ಯೂನಿವರ್ಸಿಟಿಗೆ 37 ಲಕ್ಷ ರೂಪಾಯಿ ಮಾತ್ರ ಕೊಡುತ್ತಾ ಇದ್ದೀರಿ. ಅಲ್ಲಿ ಗುಲ್ಬರ್ಗಾ ಗವರ್ನ್‌ಮೆಂಟ್ ಕಾಲೇಜು ಒಂದನ್ನು ಬಿಟ್ಟರೆ ಇನ್ನಾವುದೂ ಇಲ್ಲ, ಅದಕ್ಕೆ ಖರ್ಚು ಮಾಡುವುದು 5 ಲಕ್ಷದ 1½ ಸಾವಿರದ 500 ರೂಪಾಯಿ ಮಾತ್ರ, ಇದನ್ನು ನೋಡಿದರೆ ಒಂದೊಂದು ಭಾಗಕ್ಕೂ ಇರತಕ್ಕ ಡಿಸ್‌ಪ್ಯಾರಿಟಿಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮಾಡಿಲ್ಲ ಎಂಬುದು ತಮಗೇ ಗೊತ್ತಾಗುತ್ತದೆ. ಇನ್ನೊಂದು ವಿಷಯ ಅಲ್ಲಿರತಕ್ಕ 200 ಶಾಲೆಗಳ ಪೈಕಿ 10 ಶಾಲೆಗಳನ್ನು 10ನೇ ಏಪ್ರಿಲ್‌ನಿಂದ ಬಂದ್ ಮಾಡುತ್ತೇವೆ ಎಂದು ಹೇಳಿ ಒಂದು ಡೈರೆಕ್ಟೀವ್ ಕೂಡ ಹೊರಡಿಸಿದ್ದೀರಿ. ಇದು ತಾವು ಕೊಡತಕ್ಕ ವಿದ್ಯಾಭ್ಯಾಸದ ಸೌಕರ್ಯವೇ ಎಂದು ಕೇಳುತ್ತಾ ಇದ್ದೇನೆ ! ಇದು ಒಂದು ವಿದ್ಯಾಭ್ಯಾಸದ ಪ್ರಗತಿ ಮಾಡತಕ್ಕ ಕಾರ್ಯವಲ್ಲ ಎಂದು ಹೇಳುತ್ತೇನೆ.

ಇನ್ನೊಂದು ವಿಷಯ, ಬಡ್ಜೆಟ್ 53ನೇ ಪುಟದಲ್ಲಿ 5 ಸಾವಿರ ಜನರಿಗೆ ಟ್ರೈನಿಂಗ್ ಕೊಡುತ್ತಾ ಇದ್ದೇವೆ ಎಂದು ಹೇಳಿದ್ದೀರಿ, 94 ಸಾವಿರ ಜನ ಪ್ರೈಮರಿ ಶಾಲೆಯ ಉಪಾಧ್ಯಾಯರು ಇದ್ದಾರೆ ಅದರಲ್ಲಿ 50 ಪರ್ಸೆಂಟ್ ಟ್ರೈನಿಂಗ್ ಆಗಿದ್ದರೂಕೂಡ ಇನ್ನುಳಿದ 50 ಪರ್ಸೆಂಟ್‌ನಲ್ಲಿ 45 ಸಾವಿರ ಜನ ಅನ್‌ಟ್ರೈನ್ಡ್ ಟೀಚರ್ಸ್ ಇದ್ದಾರೆ. ವರ್ಷಕ್ಕೆ 5 ಸಾವಿರ ಜನರಂತೆ ಟ್ರೈನ್ ಮಾಡಿದರೂ ಎಷ್ಟು ವರ್ಷ ಬೇಕಾಗುತ್ತದೆ ಎಂದರೆ ಕನಿಷ್ಠ 9 ವರ್ಷಗಳಾದರೂ ಬೇಕು. ಅಲ್ಲಿಯವರಿಗೂ ಅವರಿಗೆ ಇನ್‌ಕ್ರಿಮೆಂಟ್ ಕೊಡುವುದಿಲ್ಲ, ಯಾರು ಹಿಂದಾಗಡಿ ಟ್ರೈನಿಂಗ್ ಆಗಿ ಬಂದಿರುತ್ತಾರೆ ಅವರಿಗೆ ಇನ್‌ಕ್ರಿಮೆಂಟ್ ಪ್ರಮೋಷನ್ ಎಲ್ಲಾ ಸಿಕ್ಕುತ್ತದೆ, ಅವರಿಗಿಂತ ಎರಡು ವರ್ಷ ಸರ್ವಿಸ್ ಆದವರಿಗೆ ಅದು ಯಾವುದೂ ಸಿಕ್ಕದಂತಹ ಪರಿಸ್ಥಿತಿ ಇದೆ. ಈಗ ಟ್ರೈನಿಂಗ್‌ಗೆ ಡೆಪ್ಯೂಟ್ ಮಾಡುವಾಗ ಅವರ ಸರ್ವಿಸ್ ಮೇಲೆ ಮಾಡುತ್ತಾ ಇಲ್ಲ, ಯಾವುದೋ ಲಿಸ್ಟ್ ಹಾಕಿಕೊಂಡು ಅದರ ಪ್ರಕಾರ ಮಾಡುತ್ತಿರುವುದು ಸರಿಯಾದ್ದಲ್ಲ ಇಲ್ಲಿ ಇದು ಅವರ ಹಕ್ಕಿನ ಪ್ರಶ್ನೆ ಬರುತ್ತದೆ. ಆದ್ದರಿಂದ ಹೆಚ್ಚು ಟ್ರೈನಿಂಗ್ ಕಾಲೇಜುಗಳನ್ನು ತೆಗೆದು ಹೆಚ್ಚು ಜನರು ಟ್ರೈನಿಂಗ್ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂಬ ಮಾತನ್ನು ಹೇಳಬಯಸುತ್ತೇನೆ.

ಹಿಂದೆ ಸಾಧಾರಣ 60 ಶಾಲೆಗಳಿಗೆ ಅಥವಾ 50 ಶಾಲೆಗಳಿಗೆ ಒಬ್ಬ ಡಿ. ಇ. ಓ. ಇರುತ್ತಾ ಇದ್ದರು. ಇವತ್ತು ಡಿ. ಇ. ಓ. ಆಗಲಿ, ಡಿ. ಡಿ. ಪಿ. ಐ. ಆಗಲಿ ಡೈರೆಕ್ಟರ್ ಸಾಹೇಬರಾಗಲಿ ಯಾವ ಒಂದು ಶಾಲೆ ಇನಸ್ಪೆಕ್ಟ್ ಮಾಡಿದ್ದಾರೆ ಯಾವ ಒಂದು ರಿಪೋರ್ಟ್ ಕೊಟ್ಟಿದ್ದಾರೆ ಎಂಬುದನ್ನು ತೋರಿಸಿಕೊಡಿ. ಇವತ್ತು ಅವರ ಡ್ಯೂಟೀಸ್ ಎಲ್ಲಾ ಬರೀ ಕ್ಲರಿಕಲ್. ಸರ್ಕಾರಿ ಶಾಲೆಗಳನ್ನು ಕಡಿಮೆ ಮಾಡಿದರೆ ಸ್ಟ್ಯಾಂಡರ್ಡ್ ಹೆಚ್ಚಾಗುತ್ತದೆ ಎಂಬ ವಿಷಯ ತಾವು ಏನು ತಿಳಿದುಕೊಂಡಿದ್ದೀರಿ ಅದು ಸರಿಯಾದ್ದಲ್ಲ. ವಾಸ್ತವಿಕವಾಗಿ ಸ್ಟ್ಯಾಂಡರ್ಡ್ ಹೆಚ್ಚಾಗಬೇಕೆಂಬ ಉದ್ದೇಶ ಇದ್ದರೆ ಅಲ್ಲಿ ಇದ್ದಂತಹ ಸಿಬ್ಬಂದಿಯವರು ಸರಿಯಾದ ವೇಳೆಗಳಲ್ಲಿ ಸರಿಯಾಗಿ ವಿದ್ಯಾಭ್ಯಾಸ ಕೊಡುತ್ತಾ ಇದ್ದಾರೆಯೇ ಎಂದು ಅವರ ಮೇಲಿನ ವ್ಯವಸ್ಥೆಯನ್ನು ಸರಿಯಾಗಿ ಇಟ್ಟುಕೊಂಡರೆ ಮಾತ್ರ ಸಾಧ್ಯ. ಇವತ್ತು ಎಷ್ಟು ಜನ ವಿದ್ಯಾರ್ಥಿಗಳು ಶಾಲೆಗೆ ಬರುತ್ತಾ ಇದ್ದಾರೆ, ಉಪಾಧ್ಯಾಯರು ಎಷ್ಟು ಜನ ಪಾಠ ಪ್ರವಚನಗಳನ್ನು ಮಾಡುತ್ತಾ ಇದ್ದಾರೆ, ಅವರು ಎಷ್ಟು ಗಂಟೆಗಳ ಕಾಲ ಕೆಲಸ ಮಾಡುತ್ತಾರೆ ಎಂಬ ವಿಷಯವನ್ನು ಗಮನಿಸಿದರೆ ತಮಗೆ ಗೊತ್ತಾಗುತ್ತದೆ. ಕೊನೇ ಒಂದು ತಿಂಗಳು ಇರುವಾಗ ಪಾಠಗಳನ್ನು ಪೂರ್ತಿ ಮಾಡತಕ್ಕ ಪರಿಸ್ಥಿತಿ ಇದೆ ಇದನ್ನು ಸರಿಪಡಿಸಬೇಕಾದರೆ ಡಿ. ಇ. ಓ. ರವರು

(ಶ್ರೀ ಎಂ. ನಾಗಪ್ಪ)

ಡೆಪ್ಯೂಟಿ ಡೈರೆಕ್ಟರು ಅವರು ಮತ್ತು ಡೈರೆಕ್ಟರೂ ಅವರು ಸಹ ಕನಿಷ್ಟ ಹೈಸ್ಕೂಲ್ ಮಟ್ಟದಲ್ಲಾದರೂ ಪ್ರತಿವರ್ಷ 40 ಶಾಲೆಗಳನ್ನು ಇನ್‌ಸ್ಪೆಕ್ಟ್ ಮಾಡಬೇಕೆಂಬ ನಿರ್ದಿಷ್ಟವಾದ ನಿಯಮ ಇರಬೇಕು. ಇಲ್ಲದೇ ಇದ್ದರೆ ಯಾರಿಗೂ ಭಯ ಇರುವುದಿಲ್ಲ. ಇವತ್ತು ಅವರಿಗೆ ಇನ್‌ಸ್ಪೆಕ್ಷನ್ ಮಾಡತಕ್ಕ ಕೆಲಸ ಇರುವುದಿಲ್ಲ, ಬರೀ ಲೆಕ್ಕಪತ್ರಗಳನ್ನು ನೋಡುತ್ತಾ ಇದ್ದಾರೆ. ಈ ಪದ್ಧತಿಯನ್ನು ತೆಗೆದು ಹಾಕಬೇಕು.

ಇನ್ನೊಂದು ಯೋಜನೆಯನ್ನು ಮಾಡಿದ್ದೀರಿ, ಅದನ್ನು ನಾನು ವಿರೋಧಿಸುತ್ತೇನೆ. ಪ್ರತಿಯೊಂದು ಜಿಲ್ಲೆಯಲ್ಲೂ ಒಬ್ಬ ಡೆಪ್ಯುಟಿ ಡೈರೆಕ್ಟರ್ ಇರಬೇಕೆಂದು ಹೇಳಿರುವುದನ್ನು ತೀವ್ರವಾಗಿ ವಿರೋಧಿಸುತ್ತೇನೆ. ಇದಕ್ಕೆ ಬದಲಾಗಿ ಸ್ಕಾಲರ್‌ಷಿಪ್‌ಗಳನ್ನು ಹೆಚ್ಚಾಗಿಕೊಡಿ, ಸಿಬ್ಬಂದಿಯನ್ನು ಹೆಚ್ಚು ಮಾಡಿ. ಇನ್ನೊಂದು ವಿಷಯ ಏನೆಂದರೆ ಆಂಧ್ರಪ್ರದೇಶ, ನಮ್ಮ ರಾಜ್ಯಕ್ಕಿಂತ ವಿಶಾಲವಾದ ದೇಶ, ನಮಗಿಂತ ಎರಡು ಪಟ್ಟು ಇರಬಹುದು, ಅಲ್ಲಿ ಒಬ್ಬರೇ ಡೈರೆಕ್ಟರು ಇದ್ದಾರೆ ನಮ್ಮಲ್ಲಿ ಡೈರೆಕ್ಟರು, 4 ಜನ ಜಾಯಿಂಟ್ ಡೈರೆಕ್ಟರ್ಸ್, ಇನ್ನೊಬ್ಬರು ಡೈರೆಕ್ಟರ್ ಆಫ್ ಎಕ್ಸಾಮಿನೇಷನ್ಸ್ ಅಂತ ಹೇಳಿ ಇಷ್ಟೊಂದು ಜನ ಇದ್ದಾರೆ ಎಂಬುದನ್ನು ತಾವು ಗಮನಿಸಬೇಕು. ತಮ್ಮಲ್ಲಿರತಕ್ಕ ಡೈರೆಕ್ಟೊರೇಟ್‌ನ್ನು ಆದಷ್ಟು ಕಡಿಮೆ ಮಾಡಬೇಕು, ಕಡಿಮೆಮಾಡಿ ಅಫಿಷಿಯಲ್ ಜಗ್ಲರಿ ಏನಿದೆ ಕಾಗದ ಪತ್ರಗಳನ್ನು ಬರೆಯುವುದು ಅದನ್ನು ಸೆಕ್ರೆಟೆರಿಯವರಿಗೆ ಒಪ್ಪಿಸಿ ಡೈರೆಕ್ಟರು, ಜಾಯಿಂಟ್ ಡೈರೆಕ್ಟರು, ಡೆಪ್ಯೂಟಿ ಡೈರೆಕ್ಟರುಗಳು ಪೂರ್ತಿಯಾಗಿ ಇನ್‌ಸ್ಪೆಕ್ಷನ್ ಮಾಡಿ ಶಾಲೆಗಳ ಮಟ್ಟವನ್ನು ಏರಿಸಬೇಕೆಂಬ ಡ್ಯೂಟೀಸ್‌ನ್ನು ಮಾತ್ರ ಅವರಿಗೆ ಕೊಡಬೇಕೆಂದು ಹೇಳಿ ಹೆಚ್ಚುಸಮಯ ಇಲ್ಲದ ಕಾರಣ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಸಂಗನಗೌಡ (ಲಿಂಗಸುಗೂರು).—ಮಾನ್ಯ ಸಭಾಪತಿಗಳೇ ಸಭೆಯ ಮುಂದಿರತಕ್ಕ ಈ ಶಿಕ್ಷಣದ ಬೇಡಿಕೆಗಳನ್ನು ಸ್ವಾಗತಿಸುತ್ತಾ ಹಾಗೂ ಸಮರ್ಥಿಸುತ್ತಾ ನಾನೀಗ ಕೆಲವೊಂದು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಈ ಮನೆಯ ಕೆಲವು ಮಾನ್ಯ ಸದಸ್ಯರು ಸರ್ಕಾರದ ಹಣವನ್ನು ಖರ್ಚುಮಾಡುವುದರಲ್ಲಿ ಮೊದಲನೆಯದು ಲೋಕೋಪಯೋಗಿ ಶಾಖೆ ಇನ್ನು ಎರಡನೆಯದು ಶಿಕ್ಷಣಶಾಖೆ ಎಂಬುದಾಗಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಅದನ್ನು ನಾವೆಲ್ಲರೂ ಬಹಳಮಟ್ಟಿಗೆ ಒಪ್ಪಲೇ ಬೇಕು. ನಮ್ಮ ರಾಷ್ಟ್ರದಲ್ಲಿ ಕಳೆದ 20-25 ವರ್ಷಗಳಿಂದ ಹಾಗೂ ನಮ್ಮ ರಾಜ್ಯದಲ್ಲಿ ಕಳೆದ 10-15 ವರ್ಷಗಳಿಂದ ಪ್ರಾಥಮಿಕ ಮಾಧ್ಯಮಿಕ, ಪ್ರೌಢಶಿಕ್ಷಣ ಹಾಗೂ ಕಾಲೇಜ್ ವಿದ್ಯಾಭ್ಯಾಸದ ಬಗ್ಗೆ ಎಷ್ಟರಮಟ್ಟಿಗೆ ಪ್ರಗತಿಯನ್ನು ಸಾಧಿಸಿದ್ದೇವೆ ಅನ್ನುವುದನ್ನ ನಾವು ಅಂಕೀಅಂಶಗಳಿಂದ ತಿಳಿಸಿದ್ದರೂ ಕೆಲವು ಮಾನ್ಯ ಸ್ನೇಹಿತರುಗಳು ಆ ಅಂಕಿಸಂಖ್ಯೆಗಳೆಲ್ಲಾ ಕೇವಲ ಕಾಗದದ ಮೇಲಿರತಕ್ಕವುಗಳು ಅಂತ ಹೇಳಿದ್ದು ಸರಿಯಾದ್ದಲ್ಲ. ನಮ್ಮ ಸರ್ಕಾರ ಈ ದಿವಸ ಶಿಕ್ಷಣ ಬಾಬಿಗೆ ಇಟ್ಟಿರತಕ್ಕ 46 ಕೋಟಿ ರೂಪಾಯಿಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ 22 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದೆ. ಇದೇನೂ ಸಾಮಾನ್ಯವಾದ ಮೊತ್ತವಲ್ಲ, ಬಹಳ ದೊಡ್ಡ ಮೊತ್ತ. ಆದ್ದರಿಂದ ರಾಜ್ಯದ ಹಣವನ್ನು ಖರ್ಚುಮಾಡುವ ಬಾಬಿನಲ್ಲಿ ಒಂದನೆಯದು ಲೋಕೋಪಯೋಗಿ ಶಾಖೆಯಾದರೆ ಎರಡನೆಯದು ಶಿಕ್ಷಣಶಾಖೆ ಎಂದು ಹೇಳಿದ್ದು ನ್ಯಾಯವಾಗೇ ಇದೆ. ನಮ್ಮ ರಾಜ್ಯದಲ್ಲಿ ಸುಮಾರು 32 ಸಾವಿರ ಪ್ರಾಥಮಿಕ ಶಾಲೆಗಳಿವೆ. ಸುಮಾರು 156 ಕಾಲೇಜುಗಳಿವೆ. ಮಾಧ್ಯಮಿಕ ಶಾಲೆಗಳು 18 ನೂರಕ್ಕೂ ಜಾಸ್ತಿ ಇವೆ. ಹೀಗಿದ್ದಾಗ್ಯೂ ಕೇವಲ ರಜಿಸ್ಟರುಗಳಲ್ಲಿ ಮಾತ್ರ ದಾಖಲೆ ಇದೆ ಎಂಬುದು ಸರಿಯಾದ್ದಲ್ಲ. ಇದೆಲ್ಲಾ ಸಾಕ್ಷಾತ್ತಾಗಿ ಕಣ್ಣಿಗೆ ಕಾಣಿಸತಕ್ಕವುಗಳು. ಪ್ರಾಥಮಿಕ ಶಿಕ್ಷಣ ಎನ್ನುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಮುಂದಿನ ಜೀವನದ ತಳಹದಿಗೆ ಮೂಲಾಧಾರವಾದದ್ದು ಎನ್ನಬಹುದು. ಆ ಮಟ್ಟದಲ್ಲಿ ಅವರ ಜೀವನ ವಿಕಾಸ ಆಗಬೇಕು, ಅವರಲ್ಲಿ ವಿಶಾಲ ಭಾವನೆ ಬೆಳೆಯಬೇಕು ಮತ್ತು ಅವರಲ್ಲಿ ಜಾತ್ಯಾತೀತ ಮನೋಭಾವನೆ ಬೆಳೆಯುವುದಕ್ಕೆ ಅಲ್ಲಿ ಬೀಜವನ್ನು ಅಂಕುರಾರೋಪಣ ಮಾಡಬೇಕು. ಆದ್ದರಿಂದ ಸರ್ಕಾರದವರು ಈ ಮಟ್ಟದ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಅಧ್ಯಾಪಕರ ಅಡಚಣೆ ಸಲಕರಣೆಗಳ ಅಡಚಣೆ ಹೀಗೆ ಅನೇಕ ಅಡಚಣೆಗಳಿರುತ್ತವೆ. ಅಲ್ಲಿ ಕೆಲಸಮಾಡತಕ್ಕ ಅಧ್ಯಾಪಕರು ಎರಡನೇ ಕಡೆ ವಾಸಮಾಡುತ್ತಿದ್ದಾರೆ. ಹೀಗಾಗಿ ಅವರು ವಿದ್ಯಾರ್ಥಿಗಳಿಗೆ ಪಾಠಪ್ರವಚನಗಳನ್ನು ನಡೆಸುವುದರಲ್ಲಿ ಸ್ವಲ್ಪ ತಪ್ಪುಗಳು ನಡೆಯುತ್ತಿವೆ. ಮೇಲಿಂದ ಮೇಲೆ ಅವರು ಅಲ್ಲಿ ಹಾಜರಿರುವುದಿಲ್ಲ ಅನ್ನುವುದು ನಮ್ಮ

ನಮ್ಮ ಕ್ಷೇತ್ರಗಳಲ್ಲಿನ ಅನುಭವದಿಂದ ನಮಗೆ ವೇದ್ಯವಾಗಿರುತ್ತದೆ, ಇದು ಎಲ್ಲರ ಅನುಭವದಲ್ಲೂ ಇರಬಹುದು. ಅಲ್ಲಿ ಕೆಲಸ ಮಾಡತಕ್ಕ ಅಧ್ಯಾಪಕರಲ್ಲಿ ಕೆಲವರು ರಾಜಕೀಯದಲ್ಲಿ ಕೈಹಾಕುತ್ತಿದ್ದಾರೆ ಇನ್ನು ಕೆಲವರು ತಮ್ಮ ಹೊಲಗಳ ಕೆಲಸದಲ್ಲಿ ನಿರತರಾಗಿರುತ್ತಾರೆ. ಇನ್ನು ಕೆಲವರು ವ್ಯಾಪಾರದಲ್ಲಿ ಹೀಗೆ ಅಲ್ಲಿರತಕ್ಕ ಆ ಬೆಟರ್‌ಮೆಂಟ್ ಕಮಿಟಿಯ ಸದಸ್ಯರನ್ನು ತಮ್ಮ ಕಡೆಗೆ ಒಲಿಸಿಕೊಂಡು ಅವರು ಶಿಕ್ಷಣ ಕಸಬು ಒಂದನ್ನು ಬಿಟ್ಟು ಬೇರೆ ನಾನಾ ಕಸಬುಗಳಲ್ಲಿ ತೊಡಗಿರುತ್ತಾರೆ. ಇಂಥದ್ದನ್ನೆಲ್ಲಾ ಸರ್‌ಪ್ರೈಜ್ ಚೆಕ್ ಮಾಡಿ ತಪ್ಪಿತಸ್ಥರನ್ನು ಕಂಡುಹಿಡಿದು ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಬೇಕು. ಇಲ್ಲವಾದರೆ ಸರ್ಕಾರದವರು ಅಷ್ಟು ಅಪಾರವಾಗಿ ಈ ಶಿಕ್ಷಣರಂಗದಲ್ಲಿ ಖರ್ಚುಮಾತಕ್ಕ ಹಣ ದುರುಪಯೋಗವಾದಂತಾಗುವುದು. ಇದಕ್ಕೆ ಅವಕಾಶ ಕೊಡಬಾರದು ಎಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಮೇಲೆ ಹೊಸದಾಗಿ ಪ್ರಾಥಮಿಕ ಶಾಲೆಗಳನ್ನು ಕೊಡತಕ್ಕ ಬಗ್ಗೆ ಆ ಗ್ರಾಮದಲ್ಲಿ 300 ಜನ ಸಂಖ್ಯೆ ಇರಬೇಕೆಂದು ಒಂದು ಕಡ್ಡಾಯ ಮಾಡ ನೇಮವನ್ನು ಮಾಡಿದ್ದಾರೆ. ರಾಜ್ಯದಲ್ಲಿ ಎಲ್ಲ ಕಡೆಗಳಲ್ಲೂ ಶಿಕ್ಷಣವು ಒಂದೇ ಮಟ್ಟದಲ್ಲಿ ಹರಡಿರುವುದಿಲ್ಲ. ಒಂದು ಭಾಗದಲ್ಲಿ ಸುಶಿಕ್ಷತರು ಹೆಚ್ಚಾಗಿದ್ದರೆ ಇನ್ನೊಂದು ಭಾಗದಲ್ಲಿ ಬಹಳ ಕಡಿಮೆ ಇರುತ್ತಾರೆ. ಆದ್ದರಿಂದ ಈ ಕಡ್ಡಾಯವನ್ನು ಏಕೆ ಹಾಕಬೇಕು? ಇಂಥ ಇತಿಮಿತಿಗಳನ್ನು ಹಾಕುವುದಕ್ಕೆ ಬದಲು ಪ್ರತಿಯೊಂದು ಹಳ್ಳಿಗೂ ಜನ ಸಂಖ್ಯೆಯನ್ನು ಗಣನೆಗೆ ತಂದುಕೊಳ್ಳದೆ ಶಾಲೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ಮಾಧ್ಯಮಿಕ ಶಾಲೆಗಳನ್ನು ತೆರೆಯತಕ್ಕ ಸಂಭವ ಇಲ್ಲ, ಅದಕ್ಕೆ ಅವಕಾಶ ಬಹಳ ಕಡಿಮೆ ಎಂಬ ಹೇಳಿಕೆಯ ಬಗ್ಗೆ ನಾನು ಒಂದು ಅಂಶವನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಸರ್ಕಾರದವರು ರಾಜ್ಯದಲ್ಲಿ ಅಲ್ಲಲ್ಲೇ ಉಂಟಾಗಿರತಕ್ಕ ಇಂಬ್ಯಾಲೆನ್ಸ್‌ನ್ನು ಗಮನದಲ್ಲಿಟ್ಟುಕೊಳ್ಳಬೇಕು. ರಾಜ್ಯದ ಯಾವ ಭಾಗದಲ್ಲಿ ವಿದ್ಯಾವಂತರ ಸಂಖ್ಯೆ ಕಡಮೆಯಾಗಿದೆಯೋ ಮತ್ತು ಎಲ್ಲಿ ಸುಶಿಕ್ಷಿತರ ಸಂಖ್ಯೆ ಬಹಳ ಕಡಮೆಯಾಗಿರುತ್ತದೆಯೋ ಅಂಥ ಸ್ಥಳಗಳನ್ನು ಗಮನದಲ್ಲಿಟ್ಟುಕೊಂಡು ಉದಾಹರಣೆಗೆ— ಆ ಗುಲ್ಬರ್ಗ ವಿಭಾಗ ಶಿಕ್ಷಣದಲ್ಲಿ ಬಹಳ ಹಿಂದುಳಿದ ಪ್ರದೇಶ. ಅಂಥ ಕಡೆಗಳಿಗೆ ಶಾಲೆಗಳನ್ನು ಸರ್ಕಾರದವರು ತೆರೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಆ ಭಾಗದಲ್ಲಿ ಒಂದೇ ಒಂದು ಸರ್ಕಾರಿ ಕಾಲೇಜಿರುವುದು ಬಹಳ ನಾಚಿಗೆ ಗೇಡಿನ ವಿಷಯವಾಗಿದೆ. ಆದ್ದರಿಂದ ಸರ್ಕಾರದವರು ಅಲ್ಲಿಯ ವಾಸ್ತವ ಪರಿಸ್ಥಿತಿಯನ್ನು ಗಣನೆಗೆ ತಂದುಕೊಂಡು ಅಲ್ಲಿಗೆ ಇನ್ನೂ ಒಂದೆರಡು ಕಾಲೇಜುಗಳನ್ನು ತೆರೆಯಬೇಕಾದ್ದು ಅಗತ್ಯ ಎಂದು ಒತ್ತಾಯ ಮಾಡುತ್ತೇನೆ. ಇನ್ನು ಅಲ್ಲಿ ಈ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡತಕ್ಕ 127 ಹೈಸ್ಕೂಲುಗಳನ್ನು ಮುಂದಿನ ಏಪ್ರಿಲ್ ತಿಂಗಳಿಂದ ಅಂದರೆ ಏಪ್ರಿಲ್ 10 ನೇ ತಾರೀಖಿನಿಂದ ಮುಚ್ಚಬೇಕೆಂದು ಆಜ್ಞೆಯಾಗಿರುವುದಾಗಿ ಕೇಳುತ್ತಿದ್ದೇನೆ. ಹಾಗೆ ಮಾಡಿದರೆ ಅಲ್ಲಿನ ಜನರಿಗೆ ಬಹಳ ತೊಂದರೆ ಆಗುತ್ತೆ. ಇಂಥ ಆಜ್ಞೆಗಳನ್ನು ಮಾಡಿದ್ದೇ ಆದರೆ ಗ್ರಾಮಾಂತರ ಪ್ರದೇಶದಲ್ಲಿ ವಿದ್ಯೆ ಬಹಳ ಮೊಟಕಾಗುತ್ತದೆ. ನಮ್ಮ ರಾಯಚೂರು ಜಿಲ್ಲೆಯಲ್ಲಿ ಈ ಆಜ್ಞೆಯ ಪ್ರಕಾರ ನಾಳೆ ಏಪ್ರಿಲ್ 10 ರಿಂದ 7 ಹೈಸ್ಕೂಲುಗಳು ರದ್ದಾಗಬೇಕಾಗುತ್ತದೆ. ಅಂಥ ಆರ್ಡರನ್ನು ಸರ್ಕಾರದವರು ಈಗಾಗಲೇ ಪಾಸ್ ಮಾಡಿದ್ದರೆ ಅದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ತಾಂತ್ರಿಕ ಶಿಕ್ಷಣಕ್ಕೆ ಬಂದರೆ ಅದು ಈ ದಿವಸ ಕೇವಲ ಶ್ರೀಮಂತರ ಸ್ವತ್ತಾಗಿದೆ. ಬಡವರಿಗೆ ಹಾಗೂ ಹಳ್ಳಿಯ ಜನರಿಗೆ ಇದರಿಂದೇನೂ ಪ್ರಯೋಜನವಿಲ್ಲ. ಕೆಲವು ಕಡೆ ಒಬ್ಬೊಬ್ಬರಿಂದ 10 ಸಾವಿರ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಬಡಬಗ್ಗರಾದ ತಂದೆತಾಯಿಗಳಿಗೆ ತಮ್ಮ ಮಕ್ಕಳನ್ನು ಮೆಡಿಕಲ್ ಮತ್ತು ಇಂಜಿನೀಯರಿಂಗ್ ಕಾಲೇಜುಗಳಿಗೆ ಸೇರಿಸುವುದಕ್ಕೆ ಸಾಧ್ಯವೇ ಆಗುತ್ತಿಲ್ಲ. ಆದ್ದರಿಂದ ಈ ಕ್ಯಾಪಿಟೇಷನ್ ಫೀ ತೆಗೆದುಕೊಂಡು ವಿದ್ಯಾಭ್ಯಾಸವನ್ನು ಮುಂದುವರಿಸತಕ್ಕ ಪದ್ಧತಿಯನ್ನು ಕೂಡಲೇ ರದ್ದುಮಾಡಬೇಕೆಂದು ಹೇಳುತ್ತೇನೆ.

ನಾನಿನ್ನು ಅಧ್ಯಾಪಕರ ಬಗ್ಗೆ ವಿದ್ಯಾರ್ಥಿಗಳ ಬಗ್ಗೆ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈ ದಿವಸ ಪರೀಕ್ಷೆಗಳಲ್ಲಿ ಅನೇಕ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿಲ್ಲ. ಅಂದರೆ ಫೇಲಾಗತಕ್ಕವರ ಸಂಖ್ಯೆಯೇ ಜಾಸ್ತಿ. ಅದಕ್ಕೇನು ಕಾರಣವೇನೆಂಬುದನ್ನು ವಿಚಾರ ಮಾಡಬೇಕಾಗಿದೆ. ಸರ್ಕಾರದವರೂ ಕೂಡ ಈಗ ಇದನ್ನು ವಿಚಾರಮಾಡಲಿಕ್ಕೆ ಹತ್ತಿದ್ದಾರೆ. ಆದರೆ ನಮ್ಮ ವಿದ್ಯೆ ಗಾತ್ರದಲ್ಲಿ ದೊಡ್ಡದಾಗಿದ್ದರೂ ಗುಣದಲ್ಲಿ ಇಳಿಮುಖವಾಗುತ್ತಿದೆ. ಆದ್ದರಿಂದ ಇದರ ಗುಣ ಮಟ್ಟವನ್ನು ಹೆಚ್ಚಿಸಲಿಕ್ಕೆ ಸರ್ಕಾರದವರು ಸರ್ವಪ್ರಯತ್ನಗಳನ್ನೂ ಮಾಡುವುದಕ್ಕೆ ಹತ್ತಿದ್ದಾರೆ. ಅದಕ್ಕಾಗಿ ಈಗ ಪ್ರಾಥಮಿಕ ಶಾಲೆಗಳಿಗೆ ಹೆಡ್ ಮಾಸ್ತರಾಗಿ ಪದವೀಧರರನ್ನು

(ಶ್ರೀ ಕೆ. ಸಂಗನಗೌಡ)

ನೇಮಕಮಾಡುವುದಕ್ಕೆ ಸರ್ಕಾರ ಆಜ್ಞೆಮಾಡಿದೆ. ಆದರೆ ಸರ್ಕಾರದವರು ಪಠ್ಯಪುಸ್ತಕಗಳನ್ನು ಸಕಾಲಕ್ಕೆ ಒದಗಿಸುತ್ತಿಲ್ಲ. ಶಾಲೆಗಳು ಪ್ರಾರಂಭವಾದ 3—4 ತಿಂಗಳಾದರೂ ಪಠ್ಯಪುಸ್ತಕಗಳು ಸರಬರಾಯಿ ಆಗುತ್ತಿಲ್ಲ. ಅದನ್ನು ಕಾಲಕ್ಕೆ ಸರಿಯಾಗಿ ಒದಗಿಸುವಂತೆ ಮಾಡಬೇಕು. ಇನ್ನು ಅನೇಕ ಶಾಲೆಗಳಲ್ಲಿ ಪಾಠಮಾಡುವುದಕ್ಕೆ ಸೈನ್ಸ್ ಮತ್ತು ಗಣಿತಶಾಸ್ತ್ರದ ಉಪಾಧ್ಯಾಯರುಗಳೇ ಇರುವುದಿಲ್ಲ. ಹೀಗಾಗಿ ಅವರಿಗೆ ನಿಗದಿ ಮಾಡಿರತಕ್ಕ ಸಿಲಬಸ್ಸನ್ನು ಪೂರ್ಣ ಮಾಡುವುದಕ್ಕೆ ಅವಕಾಶವೇ ಸಿಕ್ಕುವುದಿಲ್ಲ. ಈ ಎಲ್ಲಾ ಕಾರಣಗಳಿಂದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಫೈಲಾಗುತ್ತಿದ್ದಾರೆ. ಈ ತೊಂದರೆಯಾಗಿ ಅರ್ಧಂಬರ್ಧ ಕಲಿಸಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕುಳ್ಳಿರಿಸುವ ಪ್ರಸಂಗ ಬಂದಾಗ್ಗೆ ಹೆಚ್ಚು ಅಂಕೆಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಕೆಲವೊಂದು ಹೈಸ್ಕೂಲುಗಳಲ್ಲಿ ಒಂದು ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಪರೀಕ್ಷೆಗೆ ಕೂಡುವ ಕಾಲಕ್ಕೆ ತಮ್ಮ ಶಾಲೆಗಳಲ್ಲಿ ಪರ್ಸಂಟೇಜ್ ಜಾಸ್ತಿ ಬರಬೇಕೆಂದು ತಿಳಿದುಕೊಂಡು ನಕಲು ಮಾಡಿಸುವ ಅಥವಾ ಕಾಫಿ ಮಾಡಿಸುವ ಪದ್ಧತಿಯನ್ನು ಮಾಡುತ್ತಿದ್ದಾರೆ. ಇದರಿಂದ ಗುಣಮಟ್ಟ ಕೆಡುತ್ತಿದೆ. ಅದನ್ನು ತಪ್ಪಿಸಬೇಕು. ವಿದ್ಯಾರ್ಥಿಗಳು ಪಾಸ್ ಆಗುವ ಸಂಖ್ಯೆ ಕಡಿಮೆಯಾಗುತ್ತಿದೆ. ಅದರ ಬಗ್ಗೆಯೂ ವಿಶೇಷ ಲಕ್ಷ್ಯ ಕೊಡಬೇಕು. ಇಂದು ನಮ್ಮ ವಿದ್ಯಾರ್ಥಿಗಳು ಜಾತ್ಯಾತೀತ ರಾಷ್ಟ್ರದಲ್ಲಿ ಬಾಳಿ ಬದುಕುತ್ತಿದ್ದಾರೆ. ಇಂದು ವಿದ್ಯಾರ್ಥಿಗಳಲ್ಲಿ ದೇಶಪ್ರೇಮ, ರಾಷ್ಟ್ರಭಕ್ತಿ ಉಕ್ಕಿಬರುವ ಹಾಗೆ ಇರಬೇಕು. ಈಗ ಒಳ್ಳೆಯ ಪಠ್ಯ ಪುಸ್ತಕಗಳನ್ನು ಪ್ರಾರಂಭಿಸಬೇಕು. ಅವರಲ್ಲಿ ರಾಷ್ಟ್ರಪ್ರೇಮ, ದೇಶಭಕ್ತಿ, ದೇಶಪ್ರೇಮ ಬೆಳೆಯುವುದಕ್ಕೆ ಅಸ್ಪದ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ.

4–00 P.M.

ಇನ್ನು ಶಿಕ್ಷಕರ ದೃಷ್ಟಿಯಿಂದ ಹೇಳುವುದಾದರೆ, ಅವರಿಗೆ ಹೆಚ್ಚಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಬೇಕು. ಕೆಲವು ಭಾಗಗಳಲ್ಲಿ ಶಿಕ್ಷಕರಿಗೆ ಈ ರೀತಿಯಾಗಿ ಸೌಕರ್ಯಗಳನ್ನು ಒದಗಿಸುತ್ತಿದ್ದಾರೆ. ಹಳ್ಳಿಯಲ್ಲಿರತಕ್ಕ ಶಿಕ್ಷಕರಿಗೂ ತಾಲ್ಲೂಕುಗಳಲ್ಲಿ ಇರತಕ್ಕ ಶಿಕ್ಷಕರಿಗೂ ವಸತಿ ಸೌಕರ್ಯ ಅನುಕೂಲವಾಗುವಂತೆ ಮಾಡಿಕೊಡಬೇಕು. ಪಂಚಾಯಿತಿ ಮೂಲಕ ಅಥವಾ ತಾಲ್ಲೂಕುಬೋರ್ಡ್ ಮೂಲಕ ಒಂದೊಂದು ತಾಲ್ಲೂಕುಗಳಲ್ಲಿ ಪ್ರತಿವರ್ಷ 4–5 ಮನೆಗಳನ್ನು ಕಟ್ಟಿಸುವ ಒಂದು ಪರಿಪಾಠ ಇಟ್ಟುಕೊಳ್ಳಬೇಕು. ಸರ್ಕಾರದವರು ಶಾಲಾಕಟ್ಟಡ ಕಟ್ಟುವುದಕ್ಕೆ ಒಂದು ಸಾವಿರ ರೂಪಾಯಿಗಳನ್ನು ಕೊಡುವ ಹಾಗೆ, ಮನೆ ಕಟ್ಟುವುದಕ್ಕೆ ಸಹ ಒಂದು ಸಾವಿರ ಅಥವಾ ಎರಡು ಸಾವಿರ ರೂಪಾಯಿಗಳನ್ನು ಒದಗಿಸಿದರೆ, ನಂತರ ಸರ್ಕಾರದವರು ಪಂಚಾಯಿತಿ ಅಥವಾ ತಾಲ್ಲೂಕುಬೋರ್ಡ್‌ನಿಂದ ಕಂಟ್ರಿಬ್ಯೂಷನ್ ಕೊಡುವುದಕ್ಕೆ ಏರ್ಪಾಡುಮಾಡಬೇಕು.

ಇನ್ನು ಹೈದರಾಬಾದ್ ಕರ್ಣಾಟಕ ಭಾಗದಲ್ಲಿ ಕೆಲವು ಶಿಕ್ಷಕರಿಗೆ ತೊಂದರೆಗಳಿವೆ. ಅದನ್ನು ಸರ್ಕಾರದವರು ಗಮನಿಸಬೇಕು. ಅಲ್ಲಿನ ವೈಶಿಷ್ಟ್ಯ ಏನೆಂದರೆ, ಎಸ್. ಎಸ್. ಎಲ್. ಸಿ. ಪಾಸಾಗಿ, ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರಾಗಿದ್ದರೆ ರೂ. 80—150 ಗ್ರೇಡ್ ಕೊಟ್ಟಿದ್ದಾರೆ. ಅವರು ಅಲ್ಲಿ ಕೆಲಸಮಾಡಿದ ಅವಧಿಯಲ್ಲಿ ಪದವೀಧರರಾದರೆ 150 ರೂಪಾಯಿಗಳ ಮಾಗ್ಸಿಮಂಗೆ ಮುಟ್ಟಿದ್ದು. ಅಂತಹ ಶಿಕ್ಷಕರಿಗೆ 4 ಅಡ್ವಾನ್ಸ್ ಇಂಕ್ರಿಮೆಂಟ್ ಕೊಟ್ಟಿದ್ದು ತಪ್ಪು ಇದೆ. ಅದನ್ನು ರಿಕವರಿ ಮಾಡಬೇಕೆಂದು ಆದೇಶ ಕೊಟ್ಟಿದ್ದಾರೆ. ಇನ್ನು ಪೋಸ್ಟ್ ಗ್ರಾಜುಯೇಟ್ ಆದಂಥ ಶಿಕ್ಷಕರ ವಿಷಯ ತೆಗೆದುಕೊಂಡರೆ, ಅವರಿಗೆ ರೂ. 130—250ರ ಗ್ರೇಡ್ ಇದೆ. 20 ರೂಪಾಯಿಗಳ ಪರ್ಸನಲ್ ಪೇ ಅವರಿಗೆ ಕೊಡುವುದಕ್ಕೆ ಅವಕಾಶಮಾಡಿಕೊಟ್ಟಿದ್ದಾರೆ. ಇಂತಹ ಒಂದು ಆಜ್ಞೆಯನ್ನು ಹೊರಡಿಸಿದ್ದರಿಂದ ಗ್ರಾಜುಯೇಟ್ಸ್ ಮತ್ತು ಪೋಸ್ಟ್ ಗ್ರಾಜುಯೇಟ್ಸ್ ಶಿಕ್ಷಕರಲ್ಲಿ ಬೇಧಭಾವ ಮಾಡಲಾಗಿದೆ. ಪೋಸ್ಟ್ ಗ್ರಾಜುಯೇಟ್ಸ್ ಟೀಚರ್ಸ್‌ಗೆ ಸಿಕ್ಕುವ ಸೌಲಭ್ಯವನ್ನು ಗ್ರಾಜುಯೇಟ್ ಟೀಚರ್ಸ್‌ಗೂ ಸಿಗುವ ಹಾಗೆ ಮಾಡಿಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಮುಂದಿನ 4ನೇ ಯೋಜನೆಯಲ್ಲಿ ಸರ್ಕಾರ ಸೈನಿಕಶಾಲೆಯನ್ನು ಸ್ಥಾಪನೆಮಾಡಬೇಕೆಂದಿದೆ. ಅದಕ್ಕೆ ವಿಜಯನಗರ ಸಾಮ್ರಾಜ್ಯದ ಉಗಮ ಸ್ಥಾನವಾಗಿದೆ. ಮತ್ತು ಸಂಸ್ಕೃತಿಯ ಕೇಂದ್ರವಾಗಿದ್ದ ಹಂಪೆಯನ್ನು ಚುನಾಯಿಸಬೇಕು. ಈಗ ಅಲ್ಲಿ ಉಳಿದಿರುವ ಅವಶೇಷಗಳನ್ನು ನೆನಪಿನಲ್ಲಿಟ್ಟುಕೊಂಡು ವಿಜಯನಗರದ ಸವಿನೆನಪಿಗಾಗಿ ಅದನ್ನು ಅಲ್ಲಿ ಸ್ಥಾಪನೆಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI J. P. SARWESH (Serum).—Sir, in opposing this Education Demand, I would like to make a few suggestions.

It is said that the main object of education is to acquire learning and knowledge and develop an attitude so that one may lead a happy life. Some people say education is given for the sake of education and not with the object of providing any profession or employment. I think, this is giving a very narrow meaning to education. Almost all those who take to education, pursue it with the sole object of getting a job. The majority of the people are poor and cannot afford to give their children higher education. So, after the High School course if their children cannot get a job, the parents and the students ask, what is the use of this education if it cannot give a career. I am not speaking of the rich landlords. In this country, most of the people belong to the poorer sections and they give High School education to their children so that they may get a job in a factory or mill or office and they may become a source of income to their poor family. So, so far as the common and poor people are concerned, education has a different purpose. When such is the object with which the weaker sections of the population educate their children, Government is not in a position to provide employment to the thousands and thousands of students who come out of educational institutions. This is highly discouraging to the poor people and they are frustrated. They ask what is the use of putting their children to schools if even after the end of their High School and after passing the matriculation examination and even after graduation they do not get employment. I may make it clear here that I am not speaking at all of the upper classes of society who may have advancement of knowledge as the objective of education. The poor people mostly depend on their children for their sustenance and naturally and inevitably they expect immediate employment to them as there is no other source of income for them. Government must have some definite plan to provide employment to every educated person and if they do not have such a regular plan, I do not think it is in any way going to help the people who are educating their children with the sole object of making them earning members of their family. One defect of the present education system has to be pointed out here. The majority of the people are disappointed with it. At least prior to education, the children will be prepared to do manual labour and earn something. After education, they develop a false prestige and will not take up jobs which involve manual labour. And after education, the Government is not in a position to provide them with suitable employment. They are worse off after education. So Government must come to their help.

The policy of the Government is to encourage Kannada medium of instruction. No doubt, it is a very good thing. But the State Government must understand that in the Central industries, persons who have qualified through the medium of Kannada will not be preferred. In the Central Government industries, people who know English will be given preference and employed. So this is another handicap under which our boys are labouring.

(SRI J. P. SARWESH)

I wish to say something about the unhappy state of affairs about School buildings. The Education Department is very much interested in building High School buildings at places where the Ministers have been elected. I can give many instances. I have brought to the notice of the Ministers several times, for the last 12 years, that there is no independent building for the High School at Sedam. It is being run in the Middle School building. I have brought the necessity for a High School building to the notice of Sri Kanthi and his successive Education Ministers. Up till now that problem has not been solved.

The Primary Schools even in the Towns are run under wretched conditions. There are no proper buildings for the Primary Schools. I request the Hon'ble Education Minister to make a note of this grievance and see that proper buildings for the Primary Schools are constructed in Sedam Taluk, which is a very backward area and which has been neglected for several years.

I also wish to point out that there are very few Teacher Training Schools and the result is, there are so many untrained teachers. Now the course of training for these teachers is two years. I suggest that the training period for the Primary School Teachers may be reduced to one year so that a chance may be given to almost all the teachers to get themselves properly trained.

Regarding Hindi, I would like to say that I must praise Madras because they are bold enough to say that they are against Hindi. But our State says that they are for Hindi. In my area what I see is that Hindi teachers are unemployed and they are paid a total emolument of Rs. 50 only. Even an ordinary labourer gets more than that. Can a teacher lead a respectable life with Rs. 50? You appoint them as part-time teachers. I want that this system of appointing them as part-time teachers should be abolished and they should be appointed as full-time teachers and they should be given better pay which enables them to live like respectable citizens. It is a very good thing that the Government is spending Rs. 46 crores on Education, but when you are doing that, I would request that you should consider this matter sympathetically.

The Social Welfare Department is running only hostels and nurseries. I do not understand why you have entrusted these hostels to the Social Welfare Department. When you are spending Rs. 46 crores on Education, I request you to take over these hostels to the Education Department. The Social Welfare Department may be entrusted with economical schemes.

There is much favouritism and nepotism in the Education Department. I would like to bring to the notice of the Government one instance and it is regarding a Librarian. He is a Second Division Clerk and there are nearly 500 people above him who are Second

Division Clerks, First Division Clerks and even gazetted officers. They are all ignored and he is promoted as a Librarian. It is a very strange thing. In the Social Welfare Department there were 16 to 17 officers belonging to the Scheduled Castes and they were removed after the formation of the Nijalingappa Ministry because they were not selected by the Public Service Commission. I do not understand how a person who always failed in the Public Service Commission examination is continued in the Education Department as Mysore State Librarian. I want a proper reply from the Government and this kind of thing should be discouraged.

Regarding pre-primary schools, I would like to say that there are nursery schools in Bangalore with English as medium of instruction. In the rural areas it is entirely different. Why should you have English-medium primary schools as well as Kannada-medium primary schools? If you want to continue the English-medium schools, then make them all English-medium schools throughout the State, in all the taluks.

Regarding the examination system, monthly examination should be conducted and on the basis of it, the students should be promoted. I know of several instances where the students merely copy and pass. That should be discouraged and monthly examinations should be held. With these words, I conclude my speech.

ಶ್ರೀ ಕೆ. ಎಚ್. ಶ್ರೀನಿವಾಸ (ಸಾಗರ). —ಸನ್ಮಾನ್ಯ ಸಭಾಧ್ಯಕ್ಷರೇ, ಈ ಶಿಕ್ಷಣವು ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರ, ಇವೆರಡಕ್ಕೂ ಸಂಬಂಧಪಟ್ಟ ವಿಚಾರ. ಇಂಡಿಯಾ ದೇಶದಲ್ಲಿ ಈ ರೀತಿಯ ಪ್ರಗತಿಯನ್ನು ಸಾಧಿಸಿದೆ.

	1950–51 ರಲ್ಲಿ	1965–66ರಲ್ಲಿ
ಪ್ರಾಥಮಿಕ ಶಾಲೆಗಳು	2,09,681	4,00,000
ಮಿಡ್ಲ್ ಸ್ಕೂಲುಗಳು	13,596	78,000
ಹೈಯರ್ ಸೆಕೆಂಡರಿ ಶಾಲೆಗಳು	7,288	27,000
ತಾಂತ್ರಿಕ ಶಾಲೆಗಳು ಮತ್ತು ವೃತ್ತಿ ಶಾಲೆಗಳು	2,339	5,500
ಕಾಲೇಜುಗಳು	498	1,500
ವೃತ್ತಿ ಕಾಲೇಜುಗಳು	208	1,200
ವಿಶ್ವವಿದ್ಯಾನಿಲಯಗಳು	27	66
ಸಂಶೋಧನ ಸಂಸ್ಥೆಗಳು	18	50

ನಂತರ ದೇಶದಲ್ಲಿ ವಿದ್ಯಾಭ್ಯಾಸ ನಡೆಸುತ್ತಿರುವ ಶಾಲಾ ಬಾಲಕ ಬಾಲಕಿಯರ ಸಂಖ್ಯೆ 50–51 ರಲ್ಲಿ ಕೇವಲ 240 ಲಕ್ಷ ಮಾತ್ರ ಇದ್ದದ್ದು, 65-66 ರಲ್ಲಿ 680 ಲಕ್ಷವಾಗಿದೆ. ಕಾಲೇಜಿಗೆ ಹೋಗತಕ್ಕಂತಹ ವಿದ್ಯಾರ್ಥಿಗಳ ಸಂಖ್ಯೆ ಮೂರು ಲಕ್ಷದಿಂದ 11 ಲಕ್ಷಕ್ಕೆ ಏರಿದೆ. ಇಂಡಿಯಾ ದೇಶದಲ್ಲಿ ಇವತ್ತು ಶಾಲೆಗೆ ಹೋಗತಕ್ಕಂತಹ ಮಕ್ಕಳ ಸಂಖ್ಯೆ ಇಡೀ ಫ್ರಾನ್ಸ್ ದೇಶದ ಜನಸಂಖ್ಯೆಗೆ ಸರಿಹೋಗುತ್ತದೆ. ಇದರಿಂದ ನಮ್ಮ ವಿದ್ಯಾಭ್ಯಾಸದ ಕಷ್ಟ ಏನಿರಬಹುದು, ಇದರ ವ್ಯಾಪ್ತಿ, ಇದರ ಬಗ್ಗೆ ನಮಗಿರತಕ್ಕಂತಹ ದೊಡ್ಡ ಜವಾಬ್ದಾರಿ ಏನೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇನ್ನು ಮೈಸೂರು ರಾಜ್ಯದಲ್ಲಿ ಒದಗಿಸಿರತಕ್ಕಂತಹ ವಿಚಾರಗಳನ್ನು ನೋಡೋಣ. ಮೈಸೂರು ರಾಜ್ಯದಲ್ಲಿ 32,000 ಪ್ರೈಮರಿ ಸ್ಕೂಲುಗಳಿವೆ, ಅದರಲ್ಲಿ 41.9 ಲಕ್ಷ ವಿದ್ಯಾರ್ಥಿಗಳು ವಿದ್ಯಾಭ್ಯಾಸ

(ಶ್ರೀ ಕೆ. ಎಚ್. ಶ್ರೀನಿವಾಸ)

ಮಾಡುತ್ತಿದ್ದಾರೆ; ಮತ್ತು 94,000 ಉಪಾಧ್ಯಾಯರುಗಳು ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. 1831 ಸೆಂಕೆಡರಿ ಸ್ಕೂಲುಗಳಿವೆ. ಅದರಲ್ಲಿ 5.28 ಲಕ್ಷ ವಿದ್ಯಾರ್ಥಿಗಳಿದ್ದಾರೆ, ಮತ್ತು ಅದರಲ್ಲಿ 271 ಹೈಸ್ಕೂಲುಗಳಲ್ಲಿ 11ನೇ ಸ್ಟಾಂಡರ್ಡ್ ಇದೆ, 20,883 ಉಪಾಧ್ಯಾಯರುಗಳು ಕೆಲಸ ಮಾಡುತ್ತಿದ್ದಾರೆ. ಇನ್ನು ಒಟ್ಟು 136 ಕಾಲೇಜುಗಳಿವೆ, 15 ಸರ್ಕಾರಿ ಕಾಲೇಜುಗಳು ಮತ್ತು 121 ಪ್ರೈವೇಟ್ ಕಾಲೇಜುಗಳು. ಎಲ್ಲಾ ಕಾಲೇಜುಗಳಲ್ಲಿ ಒಟ್ಟು 68-69 ರಲ್ಲಿ 1,20,467 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. 15 ಇಂಜಿನಿಯರಿಂಗ್ ಕಾಲೇಜುಗಳಿವೆ. (ಒಂದು ಸರ್ಕಾರಿ, 14 ಪ್ರೈವೇಟ್), 31 ಡಿಪ್ಲೊಮಾ ಸಂಸ್ಥೆಗಳಿವೆ. ಎರಡು ಅಗ್ರಿಕಲ್ಚರಲ್ ಕಾಲೇಜುಗಳು, ಮತ್ತು 8 ಮೆಡಿಕಲ್ ಕಾಲೇಜುಗಳಿವೆ; ಮತ್ತು ಆಯುರ್ವೇದ, ಯುನಾನಿ ಸಂಸ್ಥೆಗಳಿವೆ. ನಾಲ್ಕು ಯೂನಿವರ್ಸಿಟಿಗಳಿವೆ. ಇನ್ನು ಎರಡು ವಿಶ್ವವಿದ್ಯಾನಿಲಯ, ಪ್ರಾಯಶಃ ಒಂದು ಗುಲ್ಬರ್ಗದಲ್ಲಿ ಮತ್ತೊಂದು ಮಂಗಳೂರಲ್ಲಿ ಬಹಳ ಶೀಘ್ರದಲ್ಲೇ ಬರುತ್ತದೆ ಎಂದು ನಿರೀಕ್ಷಣೆ ಮಾಡುತ್ತಿದ್ದೇವೆ. ಈ ಅಂಕೆ ಸಂಖ್ಯೆಗಳಿಂದ ವ್ಯಕ್ತವಾಗತಕ್ಕಂತಹ ಒಂದು ಅಂಶವೇನೆಂದರೆ, ನಮ್ಮ ದೇಶದಲ್ಲಿ ಸ್ವಾತಂತ್ರ್ಯದ ನಂತರ ವಿದ್ಯಾ ಸೌಕರ್ಯಗಳು ವಿಸ್ತೃತವಾಗಿ ಅಗಾಧವಾದ ರೀತಿಯಲ್ಲಿ ನಡೆದಿವೆ. ಆದ್ದರಿಂದ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಇವತ್ತಿನ ವಿದ್ಯಾ ಇಲಾಖೆಯ ಬೇಡಿಕೆ 24 ಕೋಟಿ 6 ಲಕ್ಷದಿಂದ 46 ಕೋಟಿ 17 ಲಕ್ಷ, 90 ಸಾವಿರಕ್ಕೆ ಹೆಚ್ಚಾಗಿ ಹೋಗಿದೆ. ಈ ಬೇಡಿಕೆಯನ್ನು ಸಮರ್ಥಿಸುತ್ತಾ, ಬೆಂಬಲಿಸುತ್ತಾ, ವಿದ್ಯಾಭ್ಯಾಸ ಇಲಾಖೆಗೆ ಎಲ್ಲಾ ಯಶಸ್ಸನ್ನು ಕೋರುತ್ತೇನೆ. ವಿಸ್ತೃತವಾದ ಈ ವಿದ್ಯಾ ಸೌಕರ್ಯಗಳ ಹೆಚ್ಚಳ ನಮ್ಮ ಮುಂದೆ ಇವತ್ತು ಮೂರು ಸವಾಲನ್ನು ಹಾಕಿದೆ. ಮೊಟ್ಟಮೊದಲನೆಯದಾಗಿ, ಬೃಹದಾಕಾರವಾಗಿ ಬೆಳೆದು ನಿಂತಿರುವ ಮತ್ತು ಇನ್ನೂ ವೇಗವಾಗಿ ಬೆಳೆಯುತ್ತಿರುವ ವಿದ್ಯಾವಂತರ ನಿರುದ್ಯೋಗ ಪರಿಸ್ಥಿತಿ. ಎರಡನೆಯದು ಅವಿರತವಾಗಿ ತಾಂಡವವಾಡುತ್ತಿರುವ ವಿದ್ಯಾರ್ಥಿಗಳ ಅಶಿಸ್ತು, ಇದರ ಮೂಲಕ ರಾಷ್ಟ್ರದ ಸೊತ್ತಿಗೆ ಆಗುತ್ತಿರುವ ಒಂದು ದೊಡ್ಡ ಹಾನಿ. ಮೂರನೆಯದು ಯಾವ ವಿದ್ಯಾವಂತರನ್ನು ನಾವು 20 ವರ್ಷಗಳಲ್ಲಿ ತಯಾರು ಮಾಡಿದ್ದೇವೆ, ಅವರು ಇವತ್ತು ಸರ್ಕಾರಿ ಮತ್ತು ಖಾಸಗೀ ವಲಯಗಳಲ್ಲಿ ಅಧಿಕಾರಿ ಸ್ಥಾನವನ್ನು ಪ್ರವೇಶ ಮಾಡಿ ದೇಶ ಯಾವ ಒಂದು ಒಳ್ಳೆಯ ಮಟ್ಟವನ್ನು ಅವರಿಂದ ನಿರೀಕ್ಷಿಸಿತ್ತೋ, ದೇಶಕ್ಕೆ ಎಷ್ಟು ಅದರಿಂದ ಪ್ರಯೋಜನ ಆಗಬೇಕಿತ್ತೋ, ಅದು ಆಗದೆ, ಇವತ್ತಿನ ದಿವಸ ಎಲ್ಲಾ ಸಂದರ್ಭಗಳಲ್ಲಿಯೂ ಈ ಭ್ರಷ್ಟಾಚಾರ ಎಂದು ನಾವು ಏನು ಹೇಳುತ್ತಿದ್ದೇವೆ, ಅದು ದೊಡ್ಡ ಪ್ರಮಾಣದಲ್ಲಿ ಬೆಳೆದಿರತಕ್ಕಂತದ್ದಾಗಿದೆ. ಹಿಂದೆ ಒಂದು ಕಾಲದಲ್ಲಿ ನಮಗೆ ಇಂಜನಿಯರ್ಸ್ ಬೇಕು, ಡಾಕ್ಟರ್ಸ್ ಬೇಕು ಎಂದು ಹೇಳುತ್ತಿದ್ದೆವು. ಆದರೆ ಇವತ್ತಿನ ದಿವಸ ಅರ್ಥವಾಗುತ್ತದೆ. ಕೇವಲ ಇಂಜಿನಿಯರ್ಸ್ ಡಾಕ್ಟರ್ಸ್ ಮತ್ತು ಡಿಗ್ರಿ ಹೋಲ್ಡರ್ಸ್ ಆಗಿಬಿಟ್ಟ ಮಾತ್ರಕ್ಕೆ ದೇಶಕ್ಕೆ ನಾವು ಏನು ವಿಶೇಷವಾಗಿ ನಿರೀಕ್ಷೆ ಮಾಡಿದ್ದೇವೋ ಅದು ಸಿಗುತ್ತಾ ಇಲ್ಲ ಎಂಬುದು. ಇವತ್ತಿನ ದಿವಸ ಒಬ್ಬ ರೋಗಿ ಬಂದರೆ, ಅವನಿಂದ ತನ್ನ ಬೊಕ್ಕಸವನ್ನು ದೊಡ್ಡದು ಮಾಡತಕ್ಕ ಒಂದು ಪ್ರವೃತ್ತಿಯನ್ನು ಇಟ್ಟುಕೊಂಡ ವೈದ್ಯನಾದ ಅವನಿಗೆ ಎಷ್ಟು ದೊಡ್ಡ ಡಿಗ್ರಿ ಇದ್ದರೂ, ಅವನಿಂದ, ಸಮಾಜಕ್ಕೆ, ಬಡ ಜನರಿಗೆ ಏನೂ ಪ್ರಯೋಜನವಾಗುವುದಿಲ್ಲವೆಂದು ನಮಗೆ ಗೊತ್ತಾಗಿದೆ. ಕನ್‌ಸ್ಟ್ರಕ್ಷನ್ ಕೆಲಸ ಮಾಡುವಾಗ ಯಾವ ಪ್ರಮಾಣದಲ್ಲಿ ಸಿಮೆಂಟ್ ಮರಳು ಮಿಕ್ಸ್ ಮಾಡಬೇಕು ಎಂಬುದು ಸ್ವಲ್ಪ ಹಣ ಸಿಗುತ್ತದೆ ಎಂದಾಕ್ಷಣ ಮರೆತು ಹೋದರೆ, ಮರಳು ಸಿಮೆಂಟ್‌ಗೆ ಇರುವ ವ್ಯತ್ಯಾಸವೇ ಮರೆತರೆ 5 ವರ್ಷಗಳಿಂದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಲಿತಂಥಾದ್ದು ಮರೆತುಹೋಗುವುದಾದರೆ ಇಂಥಾ ಇಂಜಿನಿಯರುಗಳಿಂದ ದೇಶಕ್ಕೆ ಪ್ರಯೋಜನವಾಗುವುದಿಲ್ಲ ಎಂಬುದನ್ನು ನಾವು ಕಂಡುಕೊಂಡಿದ್ದೇವೆ. ಮುಖ್ಯವಾಗಿ ನಾವು ಅರಿತುಕೊಳ್ಳಬೇಕಾದಂತಹ ವಿಚಾರ ಎಂದರೆ ವಿದ್ಯಾಭ್ಯಾಸದಲ್ಲಿ ಕೇವಲ ಡಾಕ್ಟರುಗಳು ಮತ್ತು ಇಂಜಿನಿಯರುಗಳು ಹಾಗೂ ಐ.ಎ.ಎಸ್. ಅಧಿಕಾರಿಗಳನ್ನು ತಯಾರು ಮಾಡಿದ ಮಾತ್ರಕ್ಕೆ ಅವರಿಂದ ದೇಶಕ್ಕೆ ಒಳ್ಳೆಯದು ಆಗತಕ್ಕದ್ದು ಸಾಧ್ಯವಿಲ್ಲ. ಪ್ರಾಮಾಣಿಕನಾದ ಮನುಷ್ಯನನ್ನು ಸೃಷ್ಟಿ ಮಾಡಬೇಕು. ಆದ್ದರಿಂದ ಪ್ರಾಮಾಣಿಕನಾದ ಮನುಷ್ಯನು ಡಾಕ್ಟರಾಗಲೀ ಇಂಜಿನಿಯರಾಗಲೀ, ಮಂತ್ರಿಯಾಗಲೀ ಅವರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ಯಾರಲ್ಲಿ ಮೊಟ್ಟಮೊದಲು ಮನುಷ್ಯತ್ವ ಇರುವುದಿಲ್ಲವೋ ಅಂಥವರ ಕೈಯಲ್ಲಿ ಅಧಿಕಾರವನ್ನು ಕೊಟ್ಟರೆ ಅವರು ಸ್ವಾರ್ಥಿಗಳು, ರಾಕ್ಷಸರು ಆಗುತ್ತಾರೆ. ಜನತೆ ಮತ್ತು ದೇಶ ಅವರಿಂದ ಏನು ನಿರೀಕ್ಷಿಸಿರುತ್ತದೆಯೋ ಅದು ಸಫಲವಾಗುವುದಿಲ್ಲ. ಇದರಿಂದಾಗಿ ಜನತೆ ನಿರಾಶೆಗೆ ಒಳಗಾಗಿದ್ದಾರೆ. ಇದು ಏನು ತೋರಿಸುತ್ತದೆ ಎಂದರೆ ವಿದ್ಯಾಭ್ಯಾಸ ರಂಗದಲ್ಲಿ ಬದಲಾವಣೆಗಳು ಆಗಬೇಕು ಎಂಬುದನ್ನು ತೋರಿಸುತ್ತದೆ. ಆದ್ದರಿಂದ ಇದನ್ನು ರ್ಯಾಡಿಕಲ್ ಆಗಿ ಬದಲಾವಣೆ ಮಾಡಬೇಕು ಎನ್ನತಕ್ಕ ಪ್ರಯತ್ನಗಳು, ಅಭಿಪ್ರಾಯಗಳು

ದೇಶದಲ್ಲಿ ಸತತವಾಗಿ ನಡೆಯುತ್ತಿವೆ. ಈ ಒಂದು ಬದಲಾವಣೆಯ ತಳಹದಿ ಆಗಿ ಕೊಠಾರಿ ಅಯೋಗದವರು ಮಾಡಿರತಕ್ಕ ಶಿಫಾರಸ್ಸುಗಳ ಕಡೆಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಕೊಠಾರಿ ಕಮಿಷನ್ನಿನವರು ಮಾಡಿರತಕ್ಕ ರಿಪೋರ್ಟಿನಲ್ಲಿ ಈ ರೀತಿ ಹೇಳಿದ್ದಾರೆ.

"As is well known, the existing system of education is largely unrelated to life and there is a wide gulf between its contents and purposes and the concerns of national development. The present system of education, designed to meet the needs of an Imperial administration within the limitations set by a feudal and traditional society, will need radical changes if it is to meet the purposes of a moderning democratic and secular society."

"The present system is too academic to be of material help in increasing national wealth. The schools and colleges are largely unconcerned with the great national effort at reconstruction and their teachers and students generally remain uncommitted to it."

"The most important and urgent reform needed in education is to transform it, to endeavour to relate it to the life, needs and aspirations of the people and thereby make it a powerfull instrument of social, economic and cultural transformation necessary for the realization of the national goals. For this purpose, education should be developed so as to increase productivity, achieve social and national integration, acclerate the process of modernization and cultivate social, moral and spiritual values."

"The essential principles of basic educution, namely, productive activity correlation of curriculm with productive activity and the environment, and contact with local community, are so important that they should guide and shape the educational system at all levels, and this is the essence of the proposals made in this report. No single stage of education need be designated as basic education."

ಹೀಗೆ ಕೊಠಾರಿ ಆಯೋಗದವರು ಬಹಳ ಒಳ್ಳೆಯದ ಅಮೂಲ್ಯವಾದ ಮತ್ತು ಮೂಲಭೂತವಾದ ಒಂದು ಸಮಗ್ರ ವ್ಯವಸ್ಥೆಯನ್ನು, ಕೆಲವೊಂದು ನಿರ್ದಿಷ್ಟವಾದ ಪರಿಣಾಮಗಳನ್ನೂ ನಿರೀಕ್ಷಿಸಿ ಅದನ್ನು ಶಿಫಾರಸ್ಸು ಮಾಡಿದ್ದಾರೆ. ಈ ಸಭೆಯಲ್ಲಿ ಕೊಠಾರಿ ಕಮಿಷನ್ನಿನ ಶಿಫಾರಸ್ಸುಗಳನ್ನು ಧೀರ್ಘವಾದ ಚರ್ಚೆಗೆ ಒಳಪಡಿಸಬೇಕಾಗಿತ್ತು. ಆ ರೀತಿ ಈ ಸಭೆಯಲ್ಲಿ ಅದನ್ನು ಚರ್ಚೆಗೆ ಒಳಪಡಿಸಿದ್ದರೆ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಕೂಡ ಮಾಡಿ ಒಂದು ಸಮಗ್ರವಾದ ಶಿಫಾರಸ್ಸನ್ನು ಈ ಸಭೆಯವರು ಕೂಡ ಮಾಡಬಹುದಾಗಿತ್ತು.

ನಿನ್ನೆಯ ದಿವಸ ಶ್ರೀಮಾನ್ ಕದಂ ಅವರು ಮಾತನಾಡುತ್ತಾ ಹೇಳಿದರು, ಐ.ಎ.ಎಸ್. ಎಗ್ಜಾಮಿನೇಷನ್ ರೀತಿಯಲ್ಲಿ ಕಾಂಪಿಟಿಷನ್ ಎಗ್ಜಾಮಿನೇಷನ್ ನಡೆಸಿ ಅಧ್ಯಾಪಕರನ್ನು ಸೆಲೆಕ್ಟ್ ಮಾಡುವುದು ಒಳ್ಳೆಯದು ಎಂದು. ಆದರೆ ಈಕಮಿಷನ್ ವರದಿಯಲ್ಲಿ ಆ ರೀತಿ ಮಾಡುವುದು ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಅದು ಈ ರೀತಿ ಇದೆ :

"As there are insuperable difficulties, the idea of creating a teaching wing in the I.E.S. should be abandoned."

(ಶ್ರೀ ಕೆ. ಎಚ್. ಶ್ರೀನಿವಾಸ)

ಶ್ರೀಮಾನ್ ಇದಿನಬ್ಬ ಅವರು ಹೇಳಿದರು, ಅಧ್ಯಾಪಕರು ರಾಜಕೀಯದಲ್ಲಿ ತೊಡಗುತ್ತಿದ್ದಾರೆ ಎಂದು. ಅದರ ಬಗ್ಗೆ ಕೊಠಾರಿ ವರದಿಯಲ್ಲಿ ಈ ರೀತಿ ಹೇಳಿದ್ದಾರೆ :

> "Conditions of work and service : Teachers should be free to exercise all civil rights and should be eligible for public office at the local, district, State or national level. No legal restriction should be placed on their participation in elections, but when they do so, they should be expected to proceed on leave."

ಇವತ್ತು ವಿದ್ಯಾಭ್ಯಾಸದಲ್ಲಿ ಬದಲಾವಣೆ ತರಬೇಕು ಎಂದರೆ ಅದಕ್ಕೆ ಒಂದು ಆಧಾರಬೇಕು. ಈಗ ಕೊಠಾರಿ ಕಮಿಷನ್ನಿನ ವರದಿಯ ಆಧಾರದ ಮೇಲೆ ಒಂದು ಬದಲಾವಣೆಯನ್ನು ಮಾಡುವುದಕ್ಕೆ ಅವಕಾಶ ಇದೆ. ಆದ್ದರಿಂದ ಇದನ್ನು ಸುದೀರ್ಘವಾಗಿ ಚರ್ಚೆ ಮಾಡಿ ಇದರಲ್ಲಿರತಕ್ಕ ಎಲ್ಲಾ ಶಿಫಾರಸ್ಸುಗಳನ್ನೂ ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಕೂಡ ಎಷ್ಟರಮಟ್ಟಿಗೆ ಈ ಶಿಫಾರಸ್ಸುಗಳನ್ನು ಜಾರಿಗೆ ತರಬಹುದು ಎಂಬುದನ್ನು ಯೋಚನೆ ಮಾಡಿ ಒಂದು ದೊಡ್ಡ ಬದಲಾವಣೆಯನ್ನು ತರಲಿಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎನ್ನತಕ್ಕಂಥ ವಿನಂತಿಯನ್ನು ನಾನು ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ಸಲ್ಲಿಸತಕ್ಕದ್ದು ನನ್ನ ಉದ್ದೇಶ.

ಇವೊತ್ತು ನಮ್ಮ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಿದೆ. ಇದಕ್ಕೆ ಸರ್ಕಾರದವರು ಪರಿಹಾರವನ್ನು ಕಂಡುಹಿಡಿಯಬೇಕು. ಇಲ್ಲದೇ ಹೋದರೆ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ಕೇವಲ ಆಳುಬಲದ ಅವಶ್ಯಕತೆಗೆ ಅನುಗುಣವಾಗಿ ವಿದ್ಯಾ ಅವಕಾಶಗಳನ್ನು ಸೀಮಿತಗೊಳಿದರೆ ಸಾಲದು. ವಿದ್ಯೆ ಸ್ವಾವಲಂಬನೆಗೆ ನೆರವಾಗಬೇಕು. ಆ ಕಡೆ ಸರ್ಕಾರದ ಗಮನ ಹರಿಯಬೇಕು. ಈ ಕಮಿಷನ್ನಿನ ವರದಿಯಲ್ಲಿ ವೃತ್ತಿ ಶಿಕ್ಷಣವನ್ನು ಸೆಕೆಂಡರಿ ಮಟ್ಟದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಕೊಡಬೇಕು ಎಂದು ಹೇಳಿದ್ದಾರೆ. ಆ ಕಡೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ನಿರುದ್ಯೋಗಿ ಇಂಜಿನಿಯರುಗಳಿಗೆ ಉದ್ಯೋಗವನ್ನು ಒದಗಿಸುವಂತಹ ಒಂದು ಕನ್‌ಸ್ಟ್ರಕ್ಷನ್ ಕಾರ್ಪೋರೇಶನ್ ಅಸ್ತಿತ್ವದಲ್ಲಿ ಬರುತ್ತದೆ ಎಂದು ಹೇಳಿದ್ದರು. ಅದು ಏನಾಯಿತೋ ಗೊತ್ತಿಲ್ಲ ಅದನ್ನು ಶೀಘ್ರವಾಗಿ ಜಾರಿಗೆ ತರಬೇಕು ಎಂದು ನಾನು ಹೇಳುತ್ತೇನೆ. ಖಾಸಗೀ ಪ್ರೌಢಶಾಲೆಗಳಿಗೆ ಸಂಬಂಧಪಟ್ಟ ಹಾಗೆ ಕೆಲವೊಂದು ನಿಯಮಗಳನ್ನು ವಿಧಿಸಿದ್ದಾರೆ. ಇವೊತ್ತು ಖಾಸಗೀ ಪ್ರೌಢಶಾಲೆಯನ್ನು ನಡೆಸುವವರು 30 ಸಾವಿರ ರೂಪಾಯಿಗಳನ್ನು ಹಾಕಿ ಬಿಲ್ಡಿಂಗ್ ಕಟ್ಟಿದ್ದರೆ, 10 ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಇಟ್ಟರೆ ಅವರಿಗೆ ರೆಕಗ್ನಿಷನ್ ಸಿಕ್ಕುತ್ತದೆ. ಆದರೆ ಅವರಿಗೆ ಬಿಲ್ಡಿಂಗ್ ಗ್ರ್ಯಾಂಟ್ ಸಿಕ್ಕುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಒಬ್ಬೊಬ್ಬರು ಬಿಲ್ಡಿಂಗ್ ಕಟ್ಟದೆ ಕೇವಲ 10 ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಿದರೆ ರೆಕಗ್ನಿಷನ್ ಸಿಕ್ಕುತ್ತದೆ, ಆ ಸ್ಕೂಲು ಬಾಡಿಗೆ ಬಿಲ್ಡಿಂಗ್‌ನಲ್ಲಿ ಇದ್ದುದ್ದಕ್ಕೋಸ್ಕರ ಅದಕ್ಕೆ ಸಂಬಂಧಪಟ್ಟ ಗ್ರ್ಯಾಂಟು ಸಿಕ್ಕುತ್ತದೆ. ಇಂಥಾ ಒಂದು ನಿಯಮವನ್ನು ಸರ್ಕಾರದವರು ಇವೊತ್ತು ಅನುಸರಿಸುತ್ತಿದ್ದಾರೆ. ಇದು ಸರಿಯಲ್ಲ, ಈ ನಿಯಮವನ್ನು ಸರ್ಕಾರದವರು ಪುನರ್‌ಪರಿಶೀಲನೆ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುಕೊಳ್ಳುತ್ತೇನೆ.

ಮಲೆನಾಡಿನಲ್ಲಿ ಭೂ ವಿಸ್ತಾರ ಜಾಸ್ತಿ, ಜನಬಾಹುಳ್ಯ ಕಡಿಮೆ. ಬೆಳೆಯತಕ್ಕ ನಾಡಿನಲ್ಲಿ ಆ ಭಾಗದ ಶಾಲೆಗಳಲ್ಲಿ ವಿದ್ಯಾರ್ಥಿಗಳ ಮಿನಿಮಮ್ ಸ್ಟ್ರೆಂತ್ ಇಷ್ಟು ಇರಬೇಕೆಂದು ಕಡ್ಡಾಯ ಮಾಡಿದ್ದಾರೆ. ಆ ರೀತಿ ಮಾಡಿದರೆ ಅನೇಕ ಶಾಲೆಗಳನ್ನು ಮುಚ್ಚಬೇಕಾಗುತ್ತದೆ. ಈ ಒಂದು ದೃಷ್ಟಿಯಿಂದ ಅದನ್ನು ಪರಿಶೀಲನೆ ಮಾಡಿ ಆಯಾ ಸಂದಂರ್ಭವನ್ನು ಗಮನಿಸಿ ಗ್ರ್ಯಾಂಟ್ ನೀಡುವಂತಹ ಒಂದು ಪಾಲಸಿಯನ್ನು ಅಡಾಪ್ಟ್ ಮಾಡಬೇಕೆಂದು ನಾನು ಒತ್ತಾಯಪಡಿಸುತ್ತೇನೆ.

ಇವತ್ತಿನ ದಿವಸ ಖಾಸಗೀ ಕಾಲೇಜುಗಳ ಬಗ್ಗೆ ಹೇಳಬೇಕೆಂದರೆ, ಈ ಸಂಸ್ಥೆಗಳ ಪಾತ್ರ ಏನು ಎಂಬುದನ್ನು ನೋಡುವುದಾದರೆ ಒಟ್ಟು 156 ಕಾಲೇಜುಗಳ ಪೈಕಿ 121 ಕಾಲೇಜುಗಳನ್ನು ಖಾಸಗಿಯವರು ನಡೆಸುತ್ತಿದ್ದಾರೆ. ಈ ಒಂದು ಅಂಕಿ ಅಂಶಗಳನ್ನು ನೋಡಿದರೆ, ಖಾಸಗಿಯವರು ಈ ಮೂಲಕ ತಮ್ಮ ಸೇವೆಯನ್ನು ಸಲ್ಲಿಸುವುದಕ್ಕೆ ಮುಂದೆ ಬಂದು ದೇಶದ ಹೆಚ್ಚಿನ ಭಾಗ ಜವಾಬ್ದಾರಿಯನ್ನು ಹೊತ್ತಿದ್ದಾರೆ ಎಂಬುದನ್ನು ಗಮನಿಸಬೇಕಾಗಿದೆ. ಆದಕಾರಣ ಈ ಖಾಸಗೀ

ಸಂಸ್ಥೆಗಳ ಬಗ್ಗೆ ಲಘುವಾಗಿ ಮಾತನಾಡುವುದು ಸರಿಯಲ್ಲ. ಎಲ್ಲಾ ಖಾಸಗೀ ಕಾಲೇಜುಗಳನ್ನು ಸರ್ಕಾರದವರೇ ನಡೆಸಬೇಕೆಂದರೆ ಈಗ ಒದಗಿಸಿರುವ 46 ಕೋಟಿ ರೂಪಾಯಿಗಳು ಸಾಲುವುದಿಲ್ಲ, 100 ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಬೇಕಾಗುತ್ತದೆ. ಆದಕಾರಣ ಅವಶ್ಯಕವಾದಂಥ ಸಂಪನ್ಮೂಲಗಳನ್ನು ತೋರಿಸಿ ನಂತರ ಖಾಸಗೀ ಸಂಸ್ಥೆಗಳನ್ನು ನಿರ್ಮೂಲ ಮಾಡುವ ಬಗ್ಗೆ ಸಲಹೆ ಕೊಡುವುದು ಒಳ್ಳೆಯದು.

4-30 P.M.

> "A discriminating policy should be adopted so that greater freedom and assistance to the really good private institutions could be given. The procedure for calculation and demand of grant-in-aids should be simplified on the lines recommended."

ಈ ಎರಡೂ ಸಹ ಈ ಆಯೋಗದ ವರದಿಯಲ್ಲಿ ಅಡಕವಾಗಿದೆ. ಈಗ ಯೂನಿಫಾರಮ್ ಗ್ರ್ಯಾಂಟ್-ಇನ್-ಎಯಿಡ್ ಕೋಡ್ ಇದೆ. ಈ ಗ್ರ್ಯಾಂಟ್-ಇನ್-ಎಯಿಡ್‌ನ ಪ್ರೊಸೀಜರ್ ತೊಡಕಾಗಿದೆ. ನ್ಯಾಯವಾಗಿ ಬರುವ ಗ್ರ್ಯಾಂಟನ್ನು ಪಡೆಯುವುದಕ್ಕೆ ಕಷ್ಟವಾಗುತ್ತದೆ. ಆದಕಾರಣ ಹಿಂದೆ ಇದ್ದಂತೆ ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಬೋಧನೆಯ ಮಟ್ಟವನ್ನು ಪರಿಶೀಲನೆ ಮಾಡಿ ಬ್ಲಾಕ್ ಗ್ರ್ಯಾಂಟನ್ನು ಕೊಡುವುದು ಒಳ್ಳೆಯದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಶಿವಮೊಗ್ಗದಲ್ಲಿ ಇದ್ದ ಮೆಡಿಕಲ್ ಸ್ಕೂಲ್ ಮಾಯವಾಯಿತು. ಶಿವಮೊಗ್ಗಕ್ಕೆ ಬರಬೇಕಾದ ಮೆಡಿಕಲ್ ಕಾಲೇಜು ಬಳ್ಳಾರಿಗೆ ಹೋಯಿತು, ಶಿವಮೊಗ್ಗಕ್ಕೆ ಬರಬೇಕಾದ ಇಂಜಿನಿಯರಿಂಗ್ ಕಾಲೇಜು ಹಾಸನಕ್ಕೆ ಹೋಯಿತು, ಶಿವಮೊಗ್ಗಕ್ಕೆ ಬರಬೇಕಾದ ಕೃಷಿ ಕಾಲೇಜು ರಾಯಚೂರಿಗೆ ಹೋಯಿತು. ಇನ್ನು ಫಾರೆಸ್ಟ್ ಕಾಲೇಜಿನ ವಿಷಯ ಅರಣ್ಯರೋದನವಾಗಿದೆ. ಸತತವಾಗಿ ಈ ಬಗ್ಗೆ ಕೇಳುತ್ತಿದ್ದರೂ ಕೂಡ ಯಾವ ಕಾಲೇಜುಗಳ ಬಗ್ಗೆಯೂ ಕೂಡ ಸರ್ಕಾರದವರು ಗಮನ ಕೊಟ್ಟಿಲ್ಲ. ಶಿವಮೊಗ್ಗ ಜಿಲ್ಲೆಯ ಬಗ್ಗೆ ಸರ್ಕಾರಕ್ಕೆ ತಾತ್ಸಾರ ಮನೋಭಾವನೆ ಇದೆ ಎಂದು ಹೇಳುವುದಕ್ಕೆ ಹೋಗದಿದ್ದರೂ ಕೂಡ ಆ ರೀತಿ ಹೇಳುವುದಕ್ಕೆ ಅವಕಾಶ ಮಾಡಿಕೊಡಬಾರದೆಂದು ಹೇಳಿ ಉತ್ತಮವಾದಂಥ ವಿದ್ಯಾಸಂಸ್ಥೆಗಳನ್ನು ನಮ್ಮ ಜಿಲ್ಲೆಯಲ್ಲಿ ಪ್ರಾರಂಭ ಮಾಡಬೇಕೆಂದು ಈ ಸಮಯದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಸಾಗರ ತಾಲ್ಲೂಕ್‌ನಲ್ಲಿ ಕರೂರು ಮತ್ತು ಬಾರಂಗಿ ಎಂಬ ಎರಡು ಹೋಬಳಿಗಳು ಇವೆ. ಶರಾವತಿ ಯೋಜನೆಯಾದಮೇಲೆ ಈ ಹೋಬಳಿಗಳು ದ್ವೀಪದಂತೆ ಇವೆ. ಆದಕಾರಣ ಈ ಸ್ಥಳಗಳಿಗೆ ಪ್ರೌಢಶಾಲೆಗಳ ಅಗತ್ಯವಿದೆ ಎಂಬ ಬಗ್ಗೆ ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ. ಹೊಸ ಹೈಸ್ಕೂಲ್‌ಗಳನ್ನು ಸ್ಥಾಪನೆ ಮಾಡಬಾರದು ಎಂಬುದಾಗಿ ಸರ್ಕಾರದವರು ನಿರ್ಧರಿಸಿದ್ದಾರೆ. ಆದರೆ ನಿಜವಾಗಿಯೂ ಅವಶ್ಯಕತೆ ಇರುವ ಕಡೆಗಳಲ್ಲಿ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಶರಾವತಿ ಯೋಜನೆಯ ಪ್ರದೇಶದಲ್ಲಿ ಅನೇಕ ಸರ್ಕಾರೀ ಖಾಲಿ ಕಟ್ಟಡಗಳು ಇವೆ. ಈ ಕಟ್ಟಡಗಳನ್ನು ವಿದ್ಯಾ ಇಲಾಖೆಯವರು ಉಪಯೋಗಿಸಿಕೊಳ್ಳುವ ಬಗ್ಗೆ ಯೋಚನೆ ಮಾಡಬಹುದೆಂದು ಲೋಕೋಪಯೋಗಿ ಇಲಾಖೆಯವರು ಕಾಗದ ಬರೆದಿದ್ದರೆಂದು ಕೇಳಿದ್ದೇನೆ. ಈ ಭಾಗದಲ್ಲಿ ರಮಣೀಯವಾದ ಸ್ಥಳಗಳಿವೆ. ಆದಕಾರಣ ಈ ಭಾಗದಲ್ಲಿ ವಿದ್ಯಾ ಸಂಸ್ಥೆಗಳನ್ನು ಪ್ರಾರಂಭ ಮಾಡುವ ಬಗ್ಗೆ ಸರ್ಕಾರದವರು ಯೋಚನೆ ಮಾಡುವುದು ಒಳ್ಳೆಯದು. ವಾತಾವರಣ ಬಹಳ ಚೆನ್ನಾಗಿರುವುದರಿಂದ ಮತ್ತು ಇತರೇ ಅನುಕೂಲಗಳು ಸಹ ಇರುವುದರಿಂದ ಇಲ್ಲಿ ವಿದ್ಯಾ ಸಂಸ್ಥೆಗಳನ್ನು ನಿರ್ಮಾಣ ಮಾಡುವ ಬಗ್ಗೆ ವಿದ್ಯಾ ಇಲಾಖೆಯವರು ಪ್ರಯತ್ನ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು, ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಹಣಕಾಸಿನ ಮಂತ್ರಿಗಳು ನಮ್ಮ ರಾಜ್ಯದ ಆದಾಯದಲ್ಲಿ ಸುಮಾರು ಕಾಲು ಭಾಗವನ್ನು ವಿದ್ಯಾಭ್ಯಾಸಕ್ಕಾಗಿ ವಿದ್ಯಾ ಇಲಾಖೆಗೆ ಒದಗಿಸಿರುವುದು ಸ್ವಾಗತಾರ್ಹವಾಗಿದೆ. ಸರ್ಕಾರದವರು ವಿದ್ಯೆಯನ್ನು ಅಭಿವೃದ್ಧಿಪಡಿಸಬೇಕು, ಗ್ರಾಮಾಂತರ ಜನರ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ವಿದ್ಯೆ ನೀಡಬೇಕು ಎಂಬ ಉದಾತ್ತವಾದ ಧ್ಯೇಯದಿಂದ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಈ ಹಣದಲ್ಲಿ ಹೆಚ್ಚಿನ ಭಾಗವನ್ನು ವಿನಿಯೋಗಿ

(ಶ್ರೀ ಕೆ. ಎಂ. ತಮ್ಮಯ್ಯ)

ಸುತ್ತಿದ್ದಾರೆ. ಆದರೆ ಈ ಹಣ ಸರಿಯಾದ ರೀತಿಯಲ್ಲಿ ವಿನಿಯೋಗವಾಗುತ್ತಿದೆಯೇ, ಹಳ್ಳಿಗಾಡಿನ ಮಕ್ಕಳಿಗೆ ಇದರಿಂದ ಹೆಚ್ಚಿನ ಅವಕಾಶ ದೊರಕುತ್ತಿದೆಯೇ ಎಂಬುದನ್ನು ಸರ್ಕಾರದವರು ಇನ್ನೂ ಕೂಲಂಕುಷವಾಗಿ ಪರಿಶೀಲಿಸಬೇಕಾಗಿದೆ. ಹಳ್ಳಿಗಾಡಿನಲ್ಲಿ ಅನೇಕ ಕಡೆಗಳಲ್ಲಿ ಏಕ ಉಪಾಧ್ಯಾಯರ ಶಾಲೆಗಳು ಇವೆ. ಈ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳ ಸ್ಥಿತಿ ಚತುರ್ಮುಖ ಬ್ರಹ್ಮನಂತಾಗಿದೆ. ನಾಲ್ಕು ಗೋಡೆಯೊಳಗಿರುವ ಒಂದು ರೂಮಿನಲ್ಲಿ ನಾಲ್ಕು ತರಗತಿಗಳ ಹುಡುಗರಿಗೆ ನಾಲ್ಕು ದಿಕ್ಕುಗಳಿಗೂ ತಿರುಗಿಕೊಂಡು ಪಾಠ ಮಾಡಬೇಕಾಗಿದೆ. ಈ ರೀತಿ ಪಾಠ ಹೇಳಿಕೊಟ್ಟರೆ ಆ ಮಕ್ಕಳಿಗೆ ಯಾವ ರೀತಿ ವಿದ್ಯಾಭ್ಯಾಸ ದೊರಕುತ್ತದೆ ಎಂಬುದನ್ನು ಸರ್ಕಾರದವರು ವಿಚಾರ ಮಾಡಬೇಕು. ಮನೆಯಲ್ಲಿ ಮಕ್ಕಳು ಗಲಾಟೆ ಮಾಡುತ್ತವೆ ಎಂದು ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಾರೋ ಎಂಬುದನ್ನು ಸಹ ಸರ್ಕಾರದವರು ಯೋಚನೆ ಮಾಡಬೇಕು. ಈಗ ನಾಲ್ಕು ತರಗತಿಗಳು ಸಹ ಒಂದೇ ಕೊಠಡಿಯಲ್ಲಿ ನಡೆಯುವುದನ್ನು ನಿಲ್ಲಿಸುವುದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ನಾಲ್ಕು ರೂಮುಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಾಗದಿದ್ದರೂ ಕೂಡ ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡೆರಡು ತರಗತಿಗಳನ್ನು ನಡೆಸುವುದು ಒಳ್ಳೆಯದೆಂದು ನನ್ನ ಸಲಹೆ. ಒಂದೇ ಕಾಲದಲ್ಲಿ ನಾಲ್ಕು ತರಗತಿಯ ಹುಡುಗರಿಗೂ ಪಾಠ ಹೇಳುವುದರಿಂದ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಸಿಗುವುದಿಲ್ಲವಾದ್ದರಿಂದ ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡೆರಡು ತರಗತಿಗಳನ್ನು ನಡೆಸಬೇಕೆಂದು ಸಲಹೆ ಮಾಡುತ್ತೇನೆ. ಪ್ರಾಥಮಿಕ ವಿದ್ಯಾಭ್ಯಾಸದ ಮೇಲೆ ನಮ್ಮ ದೇಶದ ಪ್ರಜಾಪ್ರಭುತ್ವದ ಅಳಿವು ಮತ್ತು ಉಳಿವು ಅವಲಂಭಿಸಿದೆ ಎಂಬುವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಈಗಿನ ವಿದ್ಯಾರ್ಥಿಗಳಲ್ಲಿ ವಿದ್ಯಾಮಟ್ಟ ಯಾವ ರೀತಿ ಕಡಿಮೆಯಾಗುತ್ತಿದೆ, ನೈತಿಕ ಮಟ್ಟ ಯಾವ ರೀತಿ ಕಡಿಮೆಯಾಗುತ್ತಿದೆ ಮತ್ತು ವಿನಯ ಯಾವ ರೀತಿ ಕಡಿಮೆಯಾಗುತ್ತಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಆದಕಾರಣ ಮುಂದಿನ ಪೀಳಿಗೆಯಾದರೂ ಕೂಡ ದೇಶಭಕ್ತಿ, ರಾಷ್ಟ್ರಭಕ್ತಿ ಪಡೆದುಕೊಳ್ಳುವಂಥ ವಿದ್ಯಾಭ್ಯಾಸವನ್ನು ಕೊಡುವುದು ಅವಶ್ಯಕವಿದೆ. ಅದಕ್ಕಾಗಿ ಹಿಂದೆ ಚಿಕ್ಕಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುತ್ತಿದ್ದಂತೆ ಈಗಲೂ ಪೌರಾಣಿಕ ಕಥೆಗಳನ್ನು, ವೀರಪುರುಷರ ಕಥೆಗಳನ್ನು, ವೀರಮಾತೆಯರ ಕಥೆಯನ್ನು ಹೇಳಿಕೊಡುವುದಕ್ಕೆ ಏರ್ಪಾಡು ಮಾಡಬೇಕು. ಇದರಿಂದ ಚಿಕ್ಕಮಕ್ಕಳಲ್ಲಿ ರಾಷ್ಟ್ರಭಕ್ತಿಯನ್ನು ಪ್ರಚೋದನೆ ಮಾಡಿದಂತಾಗುತ್ತದೆಂದು ಸಲಹೆ ಕೊಡಲು ಇಚ್ಛೆಪಡುತ್ತೇನೆ. ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುವುದರಲ್ಲಿ ಉಪಾಧ್ಯಾಯರ ಕರ್ತವ್ಯವಿರುವಂತೆ ಪೋಷಕರ ಕರ್ತವ್ಯವೂ ಅಷ್ಟೇ ಇದೆ. ಅದಕ್ಕಾಗಿ ಪೋಷಕರುಗಳು ಒಂದು ಸಂಘ ಮಾಡಿಕೊಂಡು ಸಹಾಯ ಮತ್ತು ಸಹಕಾರ ಕೊಡುತ್ತಿದ್ದಾರೆ. ಯಾವ ಹಳ್ಳಿಯ ಜನರಿಗೆ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ವಂತಿಕೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಂತಹ ಕಡೆಗಳಲ್ಲಿ ಕಾನೂನನ್ನು ಸಡಲಿಸಿ ಸರ್ಕಾರದವರೇ ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ಶಾಲಾ ಮಕ್ಕಳಿಗೆ ಅನಾನುಕೂಲವಾಗಬಹುದು. ಹಳ್ಳಿಗಾಡಿನ ವಿದ್ಯಾರ್ಥಿಗಳ ಸ್ಥಿತಿ, ಅಲ್ಲಿಯ ಒಂದು ವಾತಾವರಣ, ಅಲ್ಲಿ ಪಾಠ ಹೇಳಿಕೊಡುವ ಉಪಾಧ್ಯಾಯರುಗಳ ಒಂದು ಮಟ್ಟವನ್ನು ಅವಲಂಬಿಸಿದೆ. ಈಗ ಕಾಲೇಜುಗಳಿಗೆ ಸೇರಲು ಅವಕಾಶ ಕಲ್ಪಿಸಿಕೊಡುವ ಬಗ್ಗೆ ಮೆರಿಟ್ ಪೂರ್ ಎಂದು ಮಾಡಿದ್ದೀರಿ. ಹಳ್ಳಿಗಾಡಿನಲ್ಲಿ ವಿದ್ಯಾಭ್ಯಾಸ ಮಾಡಿದ ರೈತನ ಮಗ ಕಾಲೇಜುಗಳಲ್ಲಿ ಸೀಟನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಸರ್ಕಾರದವರು ತಕ್ಷಣ ಯೋಚನೆ ಮಾಡಬೇಕು. ಹಳ್ಳಿಗಾಡಿನಲ್ಲಿರುವ ಜನಕ್ಕೆ ಸರಿಯಾದ ವಿದ್ಯಾಭ್ಯಾಸ ಸಿಗುತ್ತಿಲ್ಲ. ಅವರಿಗೆ ಸಾಕಷ್ಟು ಅವಕಾಶಗಳು ಸಿಕ್ಕಿದರೆ ಅವರುಗಳೂ ಮುಂದೆ ಇಂಜನೀಯರುಗಳಾಗಬಹುದು, ಡಾಕ್ಟರುಗಳಾಗಬಹುದು ಮತ್ತು ಮುಂದೆ ಮಂತ್ರಿಗಳೂ ಆಗಬಹುದು. ಆದರೆ ಈಗ ಹಳ್ಳಿಗಾಡಿನ ಜನ ಪಟ್ಟಣಕ್ಕೆ ಬಂದು ವಿದ್ಯಾಭ್ಯಾಸ ಮಾಡೋಣ ಎಂದು ಬಂದರೆ ಅವರಿಗೆ ಇಂಜನೀಯರಿಂಗು ಕಾಲೇಜುಗಳಲ್ಲಿ ಅಥವಾ ಬೇರೆ ಕಾಲೇಜುಗಳಲ್ಲಿ ಸೀಟುಗಳೇ ಸಿಗುತ್ತಿಲ್ಲ. ಇದರ ಉದ್ದೇಶ ನೋಡಿದರೆ ಎಲ್ಲಾ ಸಿಟಿಗಳಲ್ಲಿರುವವರಿಗೇ ಅನುಕೂಲಗಳು ಸಿಗಬೇಕು ಹಳ್ಳಿಗಾಡಿನ ಜನರು ಸಿಟಿಗಳ ಮಟ್ಟಕ್ಕೆ ಬರಕೂಡದು ಎಂದು ಇವರ ಉದ್ದೇಶವೋ ಏನೋ ಒಂದೂ ತಿಳಿಯುತ್ತಿಲ್ಲ. ಶೇಕಡಾ 70 ರಷ್ಟು ಹಳ್ಳಿಗಾಡಿನ ಜನರಿಗೆ ವಿದ್ಯಾಭ್ಯಾಸ ಸಿಗುತ್ತಿಲ್ಲ. ಆದುದರಿಂದ ನಾನು ಸಲಹೆ ಮಾಡುವುದು ಸಿಟಿಗಳಲ್ಲಿರುವವರಿಗೂ ಹಳ್ಳಿಗಾಡಿನಲ್ಲಿರುವವರಿಗೂ ಸಮಾನವಾಗಿ ವಿದ್ಯಾ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಹಳ್ಳಿಗಾಡಿನಲ್ಲೂ ಕೂಡ ಸಾಕಷ್ಟು ಬುದ್ಧಿವಂತರಾದ ಹುಡುಗರು ಇದ್ದಾರೆ. ಈಗ ನಾವು ನೋಡುತ್ತಿರುವಂತೆ ಬರೀ ಹಣವಂತರಿಗೆ ಮಾತ್ರ ಎಲ್ಲ ರೀತಿಯ ವಿದ್ಯಾಭ್ಯಾಸದ ಸೌಕರ್ಯಗಳು ಸಿಗುತ್ತಿವೆ. ಹಳ್ಳಿಗಾಡಿನಿಂದ ಬರುವ ರೈತಾಪಿ ಜನಕ್ಕೆ ಅವರು ಹಣವಂತರಾಗಿಲ್ಲದಿರುವುದರಿಂದ ಸಾಕಷ್ಟು ವಿದ್ಯಾಭ್ಯಾಸದ ಸೌಕರ್ಯಗಳು ಸಿಗುತ್ತಿಲ್ಲ. ಆದುದ

ರಿಂದ ಸರಕಾರದವರು ಹಳ್ಳಿಗಾಡಿನ ಜನರಿಗಾಗಲೀ ಅಥವಾ ಬೇರೆ ಯಾವ ಜನರಿಗಾಗಲೀ ವಿದ್ಯಾಭ್ಯಾಸವನ್ನು ಒಂದೇ ರೀತಿಯಾಗಿ ಕೊಡುವುದು ಅಗತ್ಯ. ಹಿಂದೇನೋ ಪಟೇಲರು ಶ್ಯಾನು ಭೋಗರುಗಳು ಎಂದು ಇದ್ದರು. ಅವರು ಒಂದು ಗ್ರಾಮದಲ್ಲಿ ಎಲ್ಲರ ಗೌರವವನ್ನೂ ಸಂಪಾದಿಸಿ ಸರಿಯಾಗಿ ವ್ಯವಹಾರಗಳನ್ನು ಮಾಡುತ್ತಿದ್ದರು. ಇಂದು ಆ ಸ್ಥಿತಿ ಇಲ್ಲ. ಹಳ್ಳಿಗಾಡಿನವರಿಗೆ ಸರಕಾರದಲ್ಲಿ ಪ್ರಭಾವ ಬೀರಲು ಅವಕಾಶವಿಲ್ಲ. ಇದು ಬಹಳ ಶೋಚನೀಯವಾದ ಸಂಗತಿ. ಹಳ್ಳಿಗಾಡಿನ ಮಕ್ಕಳಿಗೇ ಒಂದು ತರಹ ಸಿಟಿಗಳಲ್ಲಿರುವ ಮಕ್ಕಳ ವಿದ್ಯಾಭ್ಯಾಸವೇ ಒಂದು ರೀತಿ ವ್ಯವಸ್ಥೆ ಮಾಡಕೂಡದು ಎಂದು ತಮಗೆ ಈ ಸಮಯದಲ್ಲಿ ಸೂಚಿಸುತ್ತೇನೆ. ಹಿಂದೆ ವಿದ್ಯೆಯನ್ನು ಮಾರಬಾರದು ಎಂದು ಇತ್ತು. ಈಗ ಎಲ್ಲ ಕಡೆಗಳಲ್ಲೂ ಹೆಚ್ಚು ದುಡ್ಡು ಕೊಟ್ಟು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸರಕಾರಿ ಶಾಲೆಗಳನ್ನು ಬಿಟ್ಟು ಖಾಸಗಿ ಶಾಲೆಗಳಿಗೆ ಹೋಗುವ ಜನರೇ ಹೆಚ್ಚಾಗಿದ್ದಾರೆ. ಅಲ್ಲದೆ ಇಂದು ಸರಕಾರದವರು ಅನೇಕ ಕಡೆಗಳಲ್ಲಿ ಶಾಲಾ ಕಾಲೇಜುಗಳನ್ನು ಮಾಡುತ್ತಿದ್ದಾರೆ. ಆದರೆ ಕಾಲೇಜುಗಳಲ್ಲಿ ನಮ್ಮವರಿಗೆ ಹೆಚ್ಚು ಅವಕಾಶ ಸಿಗುತ್ತಿಲ್ಲ. ಸಿಟಿಗಳಲ್ಲಿರುವ ಕಾಲೇಜುಗಳನ್ನು ನಾವು ನೋಡಿದರೆ ಅಲ್ಲಿ ಆಂಧ್ರದವರಿಗೆ, ಕೇರಳದವರಿಗೇ ಹೆಚ್ಚು ಸೀಟುಗಳನ್ನು ಕೊಡುತ್ತಿದ್ದಾರೆ. ಸುಮಾರು ನಾಲ್ಕು ಸಿಟಿ ಕಾಲೇಜುಗಳಲ್ಲಿಯೂ ಇದೇ ರೀತಿ ಇದೆ. ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣ ತೆಗೆದುಕೊಂಡು ಕಾಲೇಜುಗಳನ್ನು ಪ್ರಾರಂಭ ಮಾಡಿದರೂ ಈ ಕಾಲೇಜುಗಳಲ್ಲಿ ಅನುಸರಿಸುತ್ತಿರುವ ನೀತಿ ಬಹಳ ಅನ್ಯಾಯವಾಗುತ್ತಿದೆ. ಎಷ್ಟೋ ಕಾಲೇಜುಗಳಲ್ಲಿ ಶೇಕಡಾ 75ರಷ್ಟು ಆಂಧ್ರದವರೇ ಇದ್ದಾರೆ. ಇದಕ್ಕೆ ಕಾರಣ ಇವರಲ್ಲಿ ಹಣ ಇದೆ, ಬೇಕಾದಷ್ಟು ಕೊಡುತ್ತಿದ್ದಾರೆ ಎಂದರೆ, ಹಣವಂತರಾಗಿರುವವರಿಗೇ ವಿದ್ಯಾಭ್ಯಾಸ ಇತರರಿಗೆ ಇಲ್ಲ ಎನ್ನುವಂತಾಗಿದೆ. ಎಷ್ಟೋ ಜನರಿಗೆ ಯೋಗ್ಯತೆ ಇಲ್ಲದಿದ್ದರೂ ಅಂತಹವರಿಗೆ ಸ್ಕಾಲರುಷಿಪ್‌ಗಳು ಹಾಗೂ ಇನ್ನಿತರ ರಿಯಾಯಿತಿಗಳನ್ನು ಕೊಡುತ್ತಿದ್ದಾರೆ ಮತ್ತು ಅದನ್ನೇ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈಗೇನೋ ಸರಕಾರ 1200ರಿಂದ 2400ರವರೆಗೇನೋ ವರಮಾನ ಇರುವ ಅಧಿಕಾರಿಗಳ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಕೊಡಬೇಕೆಂದು ಮಾಡಿದ್ದಾರೆ. ಇದರಲ್ಲಿ ಬಡವರಿಗೇ ಸರಿಯಾದ ಸಹಾಯ ಸಿಗುತ್ತಿಲ್ಲ ! ಇದರಲ್ಲಿ ಸಣ್ಣ ಸಣ್ಣ ಶ್ರೀಮಂತರ ಮಕ್ಕಳೇ ಹೆಚ್ಚು ವಿದ್ಯಾಭ್ಯಾಸದ ಅನುಕೂಲಗಳನ್ನು ಪಡೆಯುತ್ತಿದ್ದಾರೆ. ಇದರಲ್ಲಿ ಪ್ರಭಾವ ಇರುವವರಿಗೇ ಎಲ್ಲ ಅನುಕೂಲಗಳೂ ಸಿಗುತ್ತಿವೆ. ತಹಶೀಲುದಾರರ ಕಡೆಯಿಂದ ಸುಳ್ಳು ಸರ್ಟಿಫಿಕೇಟುಗಳನ್ನು ಪಡೆದು ಎಲ್ಲ ಅನುಕೂಲಗಳನ್ನೂ ಪಡೆಯುತ್ತಿರುವುದರಿಂದ, ಬಡಜನರ ಮಕ್ಕಳಿಗೆ ವಿದ್ಯಾಭ್ಯಾಸದ ಸೌಕರ್ಯಗಳು ಸಿಗುತ್ತಿಲ್ಲ. ಇದರ ಬಗ್ಗೆ ಸರಕಾರ ಸೂಕ್ತವಾದ ಕಾರ್ಯಕ್ರಮಗಳನ್ನೂ ತೆಗೆದುಕೊಂಡಿಲ್ಲ. ಇಂದು ವಿದ್ಯಾಭ್ಯಾಸದ ಇಲಾಖೆಗಾಗಿ ಸುಮಾರು 46 ಕೋಟಿಯವರೆಗೆ ಖರ್ಚು ಮಾಡುತ್ತಿದ್ದಾರೆ. ವಿದ್ಯಾ ಇಲಾಖೆಗೆ ಇಷ್ಟು ಖರ್ಚು ಮಾಡುತ್ತಿದ್ದರೂ ಬಡವರ ಮಕ್ಕಳಿಗೆ ಸರಿಯಾದ ವಿದ್ಯಾ ಸೌಕರ್ಯಗಳು ಸಿಗುತ್ತಿಲ್ಲ. ಎಲ್ಲರಿಗೂ ಸಮಾನವಾದ ರೀತಿಯಲ್ಲಿ ವಿದ್ಯಾಭ್ಯಾಸ ಹಂಚಿಕೆಯಾಗುತ್ತಿಲ್ಲ. ಇದನ್ನು ಯೋಚನೆ ಮಾಡಬೇಕು.

ಇನ್ನು ಕಾಲೇಜಿನಲ್ಲಿ ಪಿ ಯು ಸಿ ಯನ್ನು ಎರಡು ವರ್ಷ ಮಾಡಬೇಕೆಂದು ಇದ್ದಾರೆ ಎಂದು ಕೇಳಿದೆವು. ಸಂತೋಷ. ಆದರೆ ಎಲ್ಲ ಕಡೆಗಳಲ್ಲೂ ಒಂದೇ ರೀತಿಯಾಗಿ ಮಾಡಬೇಕು. ಹನ್ನೊಂದನೆ ಸ್ಟ್ಯಾಂಡರ್ಡ್ ಎಂದು ಮಾಡಿದರು ಆದರೆ ಅಂತಹ ಸ್ಕೂಲುಗಳಲ್ಲಿ ಶೇಕಡಾ ಹತ್ತರಷ್ಟು ಜನ ಕೂಡ ಪಾಸಾಗಲಿಲ್ಲ. ಹೀಗೆ ಕೆಲವು ಪಾಠಶಾಲೆಗಳಲ್ಲಿ ಕೆಲಸಗಳು ಬಹಳ ನಿರಾಶಾದಾಯಕವಾಗಿ ನಡೆಯುತ್ತಿವೆ. ಪ್ರತಿಯೊಂದು ಹಂತದಲ್ಲೂ ವಿದ್ಯಾಭ್ಯಾಸ ಮಟ್ಟ ಸರಿಯಾಗಿರಲು ಹಿಂದೆ ಸೆಲೆಕ್ಷನ್ ಎಕ್ಸಾಮಿನೇಷನ್ ಎಂದು ಪರೀಕ್ಷೆಗಳನ್ನು ಮಾಡುತ್ತಿದ್ದರು. ಆದರಲ್ಲಿ ಯಾರು ಚೆನ್ನಾಗಿ ಓದುತ್ತಾರೆ ಇಲ್ಲ ಎನ್ನುವುದು ಗೊತ್ತಾಗುತ್ತಿತ್ತು ಮತ್ತು ಅಂತಹ ಹುಡುಗರು ಮುಂದೆ ಕೂಡ ಚೆನ್ನಾಗಿ ಓದುತ್ತಿದ್ದರು. ಹೀಗೆ ಮಾಡಿದರೆ ಓದುವ ಹುಡುಗರಿಗೂ ಒಂದು ರೀತಿಯಾದ ಉತ್ಸಾಹ ಬಂದು ವಿದ್ಯಾಭ್ಯಾಸ ಮಾಡುವವರಿಗೂ ಅನುಕೂಲವಾಗುತ್ತದೆ. ಈಗಿನ ವಿದ್ಯಾ ಮಟ್ಟ ಹೇಗಿದೆ ಎನ್ನುವುದಕ್ಕೆ ಒಂದು ಎಕ್ಸಾಂಪಲ್ ಕೊಡಬೇಕಾದರೆ ನಮ್ಮ ಹುಡುಗ ಒಬ್ಬ ಸೆವೆಂತ್ ಸ್ಟ್ಯಾಂಡರ್ಡ್ ವರೆಗೆ ಓದಿದ್ದಾನೆ. ಇವನನ್ನು ಒಂದು ರೂಪಾಯಿಯ ರೆವಿನ್ಯೂ ಸ್ಟಾಂಪು ತೆಗೆದುಕೊಂಡು ಬಾ ಎಂದು ಕಳುಹಿಸಿದರೆ ಅವನಿಗೆ ತಿಳಿಯದೇ ಒಂದೂವರೆ ರೂಪಾಯಿನ ಸ್ಟಾಂಪು ಪೇಪರು ತಂದ. ಹೀಗಿದೆ ವಿದ್ಯಾಭ್ಯಾಸ ಓದಿದವರ ಮಟ್ಟ ವಿದ್ಯಾಭ್ಯಾಸದ ಮಟ್ಟ ಏನೋ ಒಂದು ರೀತಿಯಾಗಿ ಅಡಜಸ್ಟ್ ಆಗುತ್ತದೆ, ಹೇಗೋ ನನ್ನ ಮಗ ನಾಳೆ ತಹಶೀಲುದಾರನಾಗುತ್ತಾನೆ ಎಂದು ಇರುವುದು ಸರಿಯಲ್ಲ. ತಾಂತ್ರಿಕ ಕಾಲೇಜುಗಳನ್ನು ಹಾಗೂ ಇನ್ನಿತರ ಕಾಲೇಜುಗಳನ್ನು ಸುಮ್ಮನೆ ತೆರೆಯುವುದರಿಂದೇನೂ ಪ್ರಯೋಜನವಾಗುವುದಿಲ್ಲ. ಹಳ್ಳಿಗಾಡಿನ ಮಕ್ಕಳಿಗೆ ಅನುಕೂಲವಾಗುವಂತೆ ತಾಲ್ಲೂಕಾ ಮಟ್ಟದಲ್ಲಿ ಪ್ರೌಢಶಾಲೆಗಳನ್ನು ತೆರೆದು ಅವನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡಲು ಪ್ರಯತ್ನ ಮಾಡಬೇಕು ಮತ್ತು ಹೆಚ್ಚಿನ ಆಸಕ್ತಿ ವಹಿಸಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟರೆ

(ಶ್ರೀ ಕೆ. ಎಂ. ತಮ್ಮಯ್ಯ)

ಆದರಿಂದ ಹಳ್ಳಿಗಾಡಿನ ಮಕ್ಕಳಿಗೆ ಅನುಕೂಲ ಪಡೆಯಲು ಒಂದು ಅವಕಾಶ ಸಿಗುತ್ತದೆ. ಇಂದಿನ ಪ್ರಜಾಪ್ರಭುತ್ವದಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚು ಖರ್ಚು ಮಾಡಬೇಕು ಎಂದು ಮಾಡುತ್ತಿದ್ದರೂ ಅದರ ಒಂದು ಕಾಸು ಕೂಡ ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿಲ್ಲ. ವಿದ್ಯಾಭ್ಯಾಸದ ಇಲಾಖೆಯಲ್ಲಿ ರಾಜಕೀಯ ತರಬಾರದು. ದಕ್ಷತೆಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಸರಕಾರದ ಅಧಿಕಾರಿಗಳು ದಕ್ಷತೆಯಿಂದ ನಡೆಯ ಬೇಕು. ಸರಕಾರದ ನೀತಿಯನ್ನು ಇವರೂ ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕು. ಹಿಂದೆ ಏನೋ ಆಯಿತು ಎಂದು ಇಂದು ಅದನ್ನೇ ಮುಂದುವರಿಸಿಕೊಂಡು ಹೋಗಬಾರದು. ಇದರ ಬಗ್ಗೆ ಸರಕಾರ ಗಮನ ಕೊಟ್ಟು ಸರಿಪಡಿಸಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†Sri S. R. BOMMAI (Kundgol).—Mr. Speaker Sir, at the outset, I congratulate the Government for introducing free compulsory primary education and free elementary education and also granting freeships to 50 per cent of the girls and 25 per cent of the boys in the Colleges. It has been already told by my other hon. friends here about the expansion of the education in this country since the independence. The schools, colleges, Universities and also the students population has increased enormously. But Sir, we must also note that the standard of education has gone very low and going very low day by day. We will have to analyse the reasons for this and find out ways and means to improve the standards of education, otherwise, it will be very difficult for us to achieve the cherished goal of democratic and socialistic pattern of society in this country. Sir, we have been thinking only of making the students or children to become Engineers, Doctors and technicians. But we have forgotten to make our students a fully cultured man, a man who could have an honourable place in the society. The Kothari Commission has rightly emphasised this point. I will quote the views of the Commission itself to make my point clear. The Commission has said :

> "Education about Religions. It is necessary for a multi-religious democratic State to promote a tolerant study of all religions so that its citizens can understand each other better and live amicably together. A syllabus giving well chosen information about each of the major religions should be included as a part of the course in citizenship or as part of general education to be introduced in schools and colleges up to the first degree. It should highlight the fundamental similarities in the great religions of the world and the emphasis they place on the cultivation of certain broadly comparable and moral and spiritual values. It would be a great advantage to have a common course on this subject in all parts of the country and common textbooks which should be prepared at the national level by the competent and suitable experts in each religion,"

They have suggested special hour to be reserved in the Primary, Secondary and College Education for teaching religious and moral subjects to our Students. Why I am emphasing this is, to-day we are

seeing indiscipline and disruptive tendencies among our students. To a certain extent we can minimise this indiscipline among our students, if we provide for teaching religious and moral subjects. Sir, I would suggest our Hon. Education Minister will kindly take note of this suggestion of the Commission and do something in this regard.

So far as Primary education is concerned, we see that a number of Schools have been increased and we also see that students strength has increased. But it is pitiable to note that the accommodation remains as it was before. There are no proper buildings and there are no equipment. In addition to that the teachers employed there are not giving adequate attention to all the pupils there. Most of the teachers are intersted in private tuitions because they get money. The richer class are getting the benefit of the teaching and the lower class who cannot afford to pay the tuition fees are denied the benefit of private tuition. Therefore private tuition must be stopped and on no account it should be allowed. The Teacher do give particular attention to those who go to them for tuition. They do not care to teach in the Class room. This should be put an end to. If we look into the results, every year, there are failures of 60 to 70 per cent. Where the mistake lies? Is it the mistake of the students or is it the mistake of the teachers? That must be investigated. Most of the students pass through the examinations after taking private tuitions. So far as secondary education is concerned, it must be fruitful and purposeful. After the S.S.L.C. Examination, a boy should be competent to take up any vocation in life. The education at the Secondary level should be in such a way as to enable the students to go to vocational courses or to the Colleges. Now-a-days the education that is imparted in the secondary stage will only enable the students to go to Colleges. This is not sufficient. Therefore, the secondary education should be fruitful and purposeful.

So far as Colleges are concerned, a very interesting administration is prevailing in them. There is no control over the University Education. So far as the Government Colleges are concerned it is a different matter. So far as private colleges are concerned permission is being granted to private colleges for being opened indiscriminately. This is all due to political pressure and influence. There is a political motive to have a College for each Taluk. Each College is having its own syllabus and teachers and lecturers. No University is having strict control over these private colleges. Even the Government is not having control over them. They are not having proper equipment and qualified teachers. Therefore, the Government must evolve a measure to have control over these colleges and see that proper equipment and qualified teachers are provided in them.

I would like to mention that the Government has not yet brought uniform primary education throughtout the State. So far as Bombay Karnataka is concerned there are School Boards and there is Government Officer as the Head of the School Boards. In these School Board

(SRI S. R. BOMMAI)

Schools, education is not being properly imparted in Primary stage. would quote for instance to show as to how the administration of the Boards is, and how the Schools are being conducted. There is a Town called Savanur in Siggaon Taluka where there is a population of 16,000. There is still a building built by the erstwhile Nawab. This building is having 12 rooms and the rooms are not occupied by the boys on the flimsy ground that there is a dispute between the Contractor and the School Board and the boys are taught in some small building of the Urdu School. Even to-day the building is vacant and the boys are made to sit in Urdu Shool. This is the state of affairs of the adminstration of the School Boards. Even the standard of education that is imparted in these Schools is very low. There is a proposal to have a separate department for Primary Education from 1st of April so as to have a uniform system of education throughout the State. I request the Government to implement the proposal as early as possible.

Then about the aid to the Colleges, I want to speak a few words. Whenever a new permission is granted to start new Colleges, it has been stated that those Colleges which have come into existance after 1967 will not get any financial help. After the permission is granted, if the financial help is not given, they may find it difficult to run the College. Therefore it is better to refuse permission instead of refusing grant. No College can function well unless the grant is given.

Thank you.

5-00 P.M.

†ಶ್ರೀ ಎಂ. ಎಂ. ಜಾಲಿಸಟಗಿ (ಭಟ್ಕಲ್).—ಮಾನ್ಯ ಅಧ್ಯಕ್ಷರೇ, ಶಿಕ್ಷಣ ಖಾತೆಯ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ಸೂಚನೆಗಳನ್ನು ಕೊಡುತ್ತೇನೆ. ಮಲೆನಾಡಿನಿಂದ ಬಂದ ಶೃಂಗೇರಿ ಮತ್ತು ಸಾಗರ ಕ್ಷೇತ್ರದ ಸದಸ್ಯರು ಕೆಲವು ವಿಷಯಗಳನ್ನು ಹೇಳಿ ನನ್ನ ಕೆಲಸ ಹಗುರ ಮಾಡಿದ್ದಾರೆ. ಪ್ರತಿಯೊಬ್ಬರು ಶಿಕ್ಷಣ ಮಟ್ಟ ಕಡಮೆಯಾಗಿದೆಯೆಂದು ಹೇಳಿದರು. ಅದಕ್ಕೆ ಬೇರೆ ಬೇರೆ ಕಾರಣಗಳುಂಟು, ಒಂದು ಕಾರಣ ಶಿಕ್ಷಕರಲ್ಲಿದ್ದ ಅಸಂತೋಷ. ಅದನ್ನು ನಿವಾರಣೆ ಮಾಡುವುದಕ್ಕೆ ಸರಕಾರ ಪ್ರಯತ್ನ ಮಾಡಬೇಕೆಂದು ವಿನಂತಿಮಾಡುತ್ತೇನೆ. ಉದಾಹರಣಾರ್ಥವಾಗಿ ತಾರೀಖು 23-6-1961 ರಿಂದ ನೇಮಕವಾದ ಶಿಕ್ಷಕರಿಗೆ ಟ್ರೈನಿಂಗ್ ಆದಹೊರತು ಇನ್‌ಕ್ರಿಮೆಂಟ್ ಎಲ್ಲ ಎಂದು ಸರಕಾರದವರು ನಿಯಮ ಮಾಡಿದ್ದಾರೆ. ಇದರಿಂದ ನಮ್ಮ ರಾಜ್ಯದಲ್ಲಿ ಶಿಕ್ಷಕರಿಗೆ ತೊಂದರೆಯಾಗಿದೆ, ನಮ್ಮ ರಾಜ್ಯದಲ್ಲಿ 84 ಸಾವಿರ ಶಿಕ್ಷಕರಿದ್ದಾರೆ, ಪ್ರತಿ ವರ್ಷ 4-5 ಸಾವಿರ ಮಂದಿಗೆ ಟ್ರೈನಿಂಗ್ ದೊರೆಯುವುದು. ಈ ರೀತಿಯಿಂದ ಎಲ್ಲಾ ಶಿಕ್ಷಕರಿಗೂ ಟ್ರೈನಿಂಗ್ ಆಗುವುದಕ್ಕೆ ಕನಿಷ್ಟ 10-2 ವರ್ಷವಾಗಬಹುದು. ಅವರಿಗೆ ಟ್ರೈನಿಂಗ್ ಆಗುವವರೆಗೆ ಬಡ್ತಿ ಕೊಡದಿದ್ದರೆ ಅವರು ಸಮಾಧಾನದಿಂದ ಹೇಗೆ ಕೆಲಸಮಾಡಲು ಸಾಧ್ಯ ! ಅವರು ಹೇಗೆ ಕರ್ತವ್ಯ ಪಾಲನೆ ಮಾಡಬೇಕು ! ಅದಕ್ಕೆ ಮನಸ್ಸು ಬರುವುದಿಲ್ಲ. ಆದುದರಿಂದ ಈ ಕಡೆ ಸರಕಾರ ಲಕ್ಷ ಕೊಡಬೇಕು. ಉಳಿದ ಸರಕಾರಿ ನೌಕರರಿಗೆ ಪ್ರತಿ ವರ್ಷ ಬಡ್ತಿ ಸಿಕ್ಕುತ್ತದೆ. ಅದೇ ಶಿಕ್ಷಕರಿಗೆ ಎಸ್ ಎಸ್ ಎಲ್ ಸಿ ಆಗಿದ್ದರೂ ಟ್ರೈನಿಂಗ್ ಆಗುವವರೆಗೆ ಬಡ್ತಿ ಕೊಡದಿದ್ದರೆ ಅನ್ಯಾಯವಾಗುತ್ತದೆ. ಸರಕಾರದವರು ಇದನ್ನು ವಿಚಾರಮಾಡಬೇಕು. ನಿಯಮವನ್ನು ಸಡಿಲ ಮಾಡಿ ಅವರಿಗೆ ಬಡ್ತಿ ಕೊಡಬೇಕು, ಇಲ್ಲದಿದ್ದರೆ ಟ್ರೈನಿಂಗ್ ಕಾಲೇಜುಗಳನ್ನು ಹೆಚ್ಚಿಸಿ ಆದಷ್ಟು ಬೇಗ ಎಲ್ಲಾ ಉಪಾಧ್ಯಾಯರಿಗೂ ಟ್ರೈನಿಂಗ್ ಕೊಡಬೇಕು. ಅಥವ ಶಿಕ್ಷಕರಿಗೆ ಬಡ್ತಿ ಕೊಡುವಂತೆ ಮಾಡಿ, ಟ್ರೈನಿಂಗ್ ಆದರೆ ಹೆಚ್ಚು ವೇತನ ಕೊಡುವುದಕ್ಕೆ ವ್ಯವಸ್ಥೆಮಾಡಬೇಕು. ಹಾಗೆ ಮಾಡದಿದ್ದರೆ ಸರಕಾರಿ ನೌಕರರಲ್ಲಿ ಒಂದೇ

ನಮೂನೆ ಅರ್ಹತೆ ಇರುವವರಿಗೆ ಮತ್ತು ಶಿಕ್ಷಕರಿಗೆ ಒಂದು ರೀತಿಯಲ್ಲಿ ಭೇದ, ಡಿಸ್‌ಕ್ರಿಮಿನೇಷನ್ ಮಾಡಿದಂತಾಗುವುದು ಆದುದರಿಂದ ಸರಕಾರದವರು ಈ ಕಡೆ ಲಕ್ಷ ಕೊಡಬೇಕೆಂದು ವಿನಂತಿಮಾಡುತ್ತೇನೆ.

ಎರಡನೆಯದಾಗಿ ನಮ್ಮ ಮುಂಬಯಿ ಕರ್ಣಾಟಕದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಟ್ರೈನಿಂಗ್ ಸರ್ಟಿಫಿಕೇಟ್ ಪಡೆದವರಿಗೆ ಹೆಚ್ಚು ಸಂಬಳ ಕೊಡುವ ವ್ಯವಸ್ಥೆ ಇತ್ತು. ಈಗ ಅವರು ಹೆಡ್‌ಮಾಸ್ತರಾಗಿರುತ್ತಾರೆ. ಅದರೆ ಅವರ ಕೈಕೆಳಗಿರುವವರಿಗೆ ಹೆಚ್ಚು ವೇತನವಿದೆ. ಈ ರೀತಿ ಅಗದಂತೆ ನೋಡಿಕೊಂಡು ವಿ.ಟಿ.ಸಿ. ಪಾಸಾದ ಶಿಕ್ಷಕರಿಗೆ ಅಂಸತೋಷವಾಗದಂತೆ ವ್ಯವಸ್ಥೆ ಮಾಡಬೇಕೆಂದು ವಿನಂತಿಮಾಡುತ್ತೇನೆ.

ಮೂರನೆಯದಾಗಿ ನಮ್ಮ ಕಡೆ ಶಿಕ್ಷಣ ಮಟ್ಟ ಕಡಮೆಯಾಗುತ್ತಿದೆ, ಪ್ರಾಥಮಿಕ ಶಿಕ್ಷಣಕ್ಕೆ 23 ಕೋಟಿ ಖರ್ಚಿದೆ. ನಮ್ಮಲ್ಲಿ ಶಾಲೆಗಳು ಹೆಚ್ಚಾಗಿವೆ, ಅವುಗಳ ಮೇಲೆ ನಿಯಂತ್ರಣ ಬಹಳ ಕಡಿಮೆಯಾಗಿದೆ. ಆದುದರಿಂದ ಈ ಶಾಲೆಗಳಲ್ಲಿ ಕೆಲವು ಕಡೆ ನೋಡಿರುವಹಾಗೆ ಶಾಲೆಗಳಲ್ಲಿ ಉಪಾಧ್ಯಾಯರೇ ಇರುವುದಿಲ್ಲ, ಪ್ರತಿ ತಿಂಗಳೂ ಪಗಾರಕ್ಕೆ ಮಾತ್ರ ಬರುತ್ತಾರೆ. ಕೆಲವು ಕಡೆ ಒಪ್ಪತ್ತು ಶಾಲೆಗೆ ಹೋದರೆ ಇನ್ನೊಪ್ಪತ್ತು ಹೋಗುವುದಿಲ್ಲ. ಕೆಲವು ಕಡೆ ತಿಂಗಳು ಪೂರ್ತಿ, ಮತ್ತೆ ಕೆಲವು ಕಡೆ ವರ್ಷ ಪೂರ್ತಿ ಉಪಾಧ್ಯಾಯರಿರುವುದಿಲ್ಲ, ಪಗಾರ ಮಾತ್ರ ತೆಗೆದುಕೊಳ್ಳುತ್ತಾರೆ. ಹೀಗಾದರೆ ಹುಡುಗರ ಗತಿಯೇನು ? ನಿಯಂತ್ರಣ ಕಡಮೆ ಪ್ರತಿಯೊಂದು ಕಡೆ ಇನ್‌ಸ್ಪೆಕ್ಟರ್ ಇದ್ದರೂ ಏನು ಇನ್‌ಸ್ಪೆಕ್‌ಷನ್ ಮಾಡುತ್ತಾರೋ ದೇವರಿಗೇ ಗೊತ್ತು. ಅವರು ಮಾಸ್ತರ್ ಕಡೆಯಿಂದ ಏನಾದರೂ ತೆಗೆದುಕೊಂಡು ಸರ್ಟಿಫಿಕೇಟ್ ಬರೆಯಬಹುದು. ಬಹಳಷ್ಟು ಇಂಥ ಶಾಲೆಗಳಿವೆ ಎಂದು ಸಭೆಯಲ್ಲಿ ಹೇಳಿದರೆ ಮಾಸ್ತರ್ ಉಗ್ರವಾಗಬಹುದು. ಇಲಾಖೆಗೆ ಬೇಕಾದರೆ ಎಲ್ಲಾ ಸಮಾಚಾರವನ್ನೂ ನಾನು ಕೊಡುವುದಕ್ಕೆ ತಯಾರಾಗಿದ್ದೇನೆ. ಈ ಕಡೆ ಇನ್‌ಸ್ಪೆಕ್ಷನ್, ನಿಯಂತ್ರಣ ಬಹಳ ಇರಬೇಕು ಎಂದು ವಿನಂತಿಮಾಡಿ ಕೊಳ್ಳುತ್ತೇನೆ. ಮಾಸ್ತರನ್ನು ಅವರ ಊರುಗಳಲ್ಲಿ ಇಡಬಾರದೆಂದು ಶೃಂಗೇರಿಯ ಸದಸ್ಯರು ಹೇಳಿದರು. ಅಲ್ಲಿದ್ದರೆ ಅವರು ಶಾಲೆಗಳಿಗೆ ಹೋಗದೆ ಬೇರೆ ಕೆಲಸಗಳಲ್ಲಿ ನಿರತರಾಗುತ್ತಾರೆ. ಶಾಲೆಗೆ ಅವರು ಹೋಗಬಹುದು ಅಥವ ಹೋಗದೇ ಇರಬಹುದು. ಇದರಿಂದ ಹುಡುಗರಿಗೆ ತೊಂದರೆಯಾಗುತ್ತದೆ. ಮಾಸ್ತರು ಸರಿಯಾಗಿ ಕೆಲಸಮಾಡುವುದಿಲ್ಲ, ಶಾಲೆಯ ಕಡೆ ಅವರ ಲಕ್ಷ ಇರುವುದಿಲ್ಲ. ಆದುದರಿಂದ ಈ ವಿಷಯದಲ್ಲಿ ಸೂಕ್ತ ಕ್ರಮ ಕೈಕೊಳ್ಳಬೇಕು.

ಮತ್ತೊಂದು ವಿಷಯವೆಂದರೆ ಬೇರೆಲ್ಲೂ ಕೆಲಸ ಸಿಕ್ಕದಿದ್ದರೆ ಶಿಕ್ಷಣ ಖಾತೆಗೆ ಬರುವುದುಂಟು. ಇದು ತಪ್ಪಬೇಕು. ಶಿಕ್ಷಣದಲ್ಲಿ ಅಭಿಲಾಷೆಯಿರುವವರನ್ನು ಮಾತ್ರ ಮಾಸ್ತರಾಗಿ ನೇಮಿಸಿದರೆ ಶಿಕ್ಷಣ ಮಟ್ಟ ಸುಧಾರಿಸುವುದಕ್ಕೆ ಅವಕಾಶವಾಗುವುದು.

ಇಂದು ವಿದ್ಯಾವಂತರಲ್ಲಿ ನಿರುದ್ಯೋಗಿಗಳ ಸಂಖ್ಯೆ ಬೆರೆಯುತ್ತಿದೆ, ಇದಕ್ಕೆ ಗಮನಕೊಡಬೇಕು. ಸಿವಿಲ್ ಎಂಜಿನಿಯರುಗಳು, ಡಿಪ್ಲೊಮಾ ಹೋಲ್ಡರುಗಳು ನಿರುದ್ಯೋಗಿಗಳಾಗಿದ್ದಾರೆ. ನಮ್ಮ ರಾಜ್ಯದಲ್ಲಿ ಸಾಧಾರಣವಾಗಿ ಡಿಪ್ಲೊಮಾ ಅದವರು 7 ಸಾವಿರ ಮಂದಿ, ಸಿವಿಲ್ ಎಂಜಿನಿಯರುಗಳು ಗ್ರಾಜುಯೇಟ್ಸ್ 1200 ಮಂದಿ ಇದ್ದಾರೆ. ಅವರಲ್ಲಿ ನಿರುದ್ಯೋಗ ಕಡಮೆಮಾಡಲು ಇನ್ನು ಮುಂದಾದರೂ ಕೆಲವು ವರ್ಷ ಸಿವಿಲ್ ಎಂಜಿನಿಯರಿಂಗ್ ಶಾಲೆ ಬಂದುಮಾಡಿ ಅವರಿಗೆ ಬೇರೆ ವೃತ್ತಿ ಶಿಕ್ಷಣ—ವ್ಯವಸಾಯ, ಮೆಕ್ಯಾನಿಕಲ್ ಮುಂತಾದ್ದನ್ನು ಕೊಡಲು ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಮುಂದೆ ತೊಂದರೆಯಾಗುವುದು. ಈ ಕಡೆ ಸರಕಾರ ದೃಷ್ಟಿ ಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಅಕೆಡಮಿಕ್ ಶಿಕ್ಷಣಕ್ಕೆ ಸಂಬಂಧಪಟ್ಟಂತೆ 2 ಶಾಲೆಗಳಿವೆ. ಉಳಿದಂತೆ ಎಲ್ಲಾ ಖಾಸಗಿ ಶಾಲೆಗಳು, ಮಾಧ್ಯಮಿಕ ಶಾಲೆಗಳು. ಅಕೆಡಮಿಕ್ ಖಾಸಗಿ ಶಿಕ್ಷಣ ಶಾಲೆಗಳು ಬಹಳ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡುತ್ತಿವೆ. ಎಸ್ ಎಸ್ ಎಲ್ ಸಿ ರಿಸಲ್ಟ್ ನೋಡಿದರೆ ಗೊತ್ತಾಗುವುದು, ಸೇಕಡ 80 ರಿಂದ 90 ರವರೆಗೆ ವಿದ್ಯಾರ್ಥಿಗಳು ಪಾಸಾಗುತ್ತಿದ್ದಾರೆ. ಖಾಸಗಿ ಶಾಲೆಗಳವರಿಗೆ ಸರಕಾರ ಹೊಸ ನಿಯಮಗಳಿಂದ ತೊಂದರೆಯಾಗಿದೆ. ಅದು ಮುಂದುವರಿದರೆ ಶಾಲೆಗಳನ್ನು ಬಂದುಮಾಡುವ ಪರಿಸ್ಥಿತಿ ಇದೆ. ಅವರು ತಕರಾರು ಮಾಡುತ್ತಿದ್ದಾರೆ. ಉದಾಹರಣೆಗೆ ನಾನು ಕಲಿತ ಶಾಲೆಯಾದ ಸೈಂಟ್‌ಥಾಮಸ್ ಹೈಸ್ಕೂಲು ಮೊದಲಿನಿಂದ ಹೆಸರಾದ ಶಾಲೆ, 60 ವರ್ಷಗಳಿಂದ ಅಲ್ಲಿ ಅಕೆಡಮಿಕ್ ಶಿಕ್ಷಣ ಕೊಡಲಾಗುತ್ತಿದೆ. ಕಳೆದ 2–3 ವರ್ಷದಿಂದ ಸರಕಾರದ ಹೊಸ ನಿಯಮದ ಪ್ರಕಾರ ರೆಂಟ್ ಕೊಡಬೇಕು, ಇದರಿಂದ ತೊಂದರೆಯಾಗಿದೆ, 4–5 ಸಾವಿರ ರೂಪಾಯಿ ಸಾಲ ಇದೆ. ಇದೇ ಪರಿಸ್ಥಿತಿ ಮುಂದುವರಿದರೆ ಶಾಲೆಯನ್ನು ಮುಂದು

(ಶ್ರೀ ಎಂ. ಎಂ. ಜಾಲಿಸಟಗಿ)

ವರೆಸಬೇಕೇ, ಬೇಡವೇ ಎಂಬುದನ್ನು ಯೋಚನೆಮಾಡುತ್ತಿದ್ದೇವೆ ಎಂದು ಅವರು ಹೇಳುತ್ತಿದ್ದಾರೆ. ಇದೇ ರೀತಿಯಲ್ಲಿ ಇತರ ಶಾಲೆಗಳವರೂ ಸಹ ಹೇಳುತ್ತಾ ಇದ್ದಾರೆ. ಆದುದರಿಂದ ಎಲ್ಲಾ ಖಾಸಗಿ ಶಾಲೆಗಳೂ ಬ್ಲಾಕ್ ಮಾರ್ಕೆಟ್ ಮಾಡುತ್ತಿವೆ ಎಂದು ಜನರಲೈಜ್ ಮಾಡವೆ ತೊಂದರೆಯಾಗಿರುವುದನ್ನು ತಪ್ಪಿಸಲು ಕ್ರಮ ತೆಗೆದುಕೊಳ್ಳಬೇಕು. ಸರಕಾರಿ ಶಾಲೆಗಳಿಗಿಂತ ಉತ್ತಮ ರೀತಿಯಲ್ಲಿ ಚೆನ್ನಾಗಿ ಕೆಲಸಮಾಡುತ್ತಿವೆ, ಒಳ್ಳೆಯ ಶಿಕ್ಷಣ ಕೊಡುತ್ತಿವೆ. ಆದುದರಿಂದ ಇವಕ್ಕೆ ಪುರಸ್ಕಾರ ಕೊಡಬೇಕೇ ಹೊರತು ತೊಂದರೆ ಕೊಡುವುದು ಸರಿಯಲ್ಲ; ಸಾಧುವಾದುದಲ್ಲ ಎಂದು ಹೇಳಬಯಸುತ್ತೇನೆ.

ಮೊದಲು 15 ವಿದ್ಯಾರ್ಥಿಗಳಿದ್ದರೆ ಸಾಕಾಗಿತ್ತು, ಈಗ 25 ವಿದ್ಯಾರ್ಥಿಗಳಿರಬೇಕು ಎಂದು ತಿಳಿಸಿದ್ದಾರೆ. ಮೊದಲಿನ ರೂಲ್ಸ್ ಚೆನ್ನಾಗಿತ್ತು, ಇಡೀ ರಾಜ್ಯದಲ್ಲಿ ಎಷ್ಟೋ ಕಡೆ 23 ವಿದ್ಯಾರ್ಥಿಗಳಿದ್ದಾಗ ನಮ್ಮ ಕಡೆ 67 ಮಂದಿ ಇದ್ದರು. ಈಗ 25 ಮಂದಿ ಇರಬೇಕೆಂದು ಮಾಡಿರುವುದರಿಂದ ಹಳ್ಳಿಗಳಲ್ಲಿರುವ ಶಾಲೆಗಳಿಗೆ ತೊಂದರೆಯಾಗಿದೆ. ಆದುದರಿಂದ 15 ಮಂದಿ ವಿದ್ಯಾರ್ಥಿಗಳಿದ್ದರೆ ಸಾಕು ಎಂದು ಹಿಂದಿನಂತೆ ಗೊತ್ತುಮಾಡಬೇಕು, ಈಗ ಮಾಡಿರುವ ನಿಯಮದಿಂದ ತೊಂದರೆಯಾಗಿದೆ ಎಂದು ಹೇಳುತ್ತೇನೆ.

ನಮ್ಮ ಜಿಲ್ಲೆಗೆ ಒಂದು ಸ್ಪೆಷಲ್ ಕನ್‌ಸೆಷನ್ ಕೊಡಬೇಕು. ಇಲ್ಲದೇ ಇದ್ದರೆ ಅನೇಕ ಶಾಲೆಗಳನ್ನು ಮುಚ್ಚುವ ಪ್ರಸಂಗ ಬರುತ್ತದೆ. ಉದಾಹರಣೆಗೆ ಶರಾವತಿ ಹೈಸ್ಕೂಲು ಅಂತ ಇದೆ. ಅದರಲ್ಲಿ 8ನೇ ಇಯತ್ತೆಯಲ್ಲಿ ಮೂರು ಜನರು ಕಡಿಮೆ ಇದ್ದಾರೆ ಅಂತ ಬರುವ ಏಪ್ರಿಲ್ ಹತ್ತರಿಂದ ಮುಚ್ಚಬೇಕೆಂದು ಹುಕುಂ ಹೊರಡಿಸಿದ್ದಾರೆ. ಇದರಿಂದ ಬಹಳ ತೊಂದರೆಯಾಗುತ್ತದೆ. ಮ್ಯಾನೇಜ್‌ಮೆಂಟಿಗೂ ತೊಂದರೆ, ಹುಡುಗರಿಗೂ ತೊಂದರೆ, ಈ ರೀತಿಯಾಗದಂತೆ ಈ ನಿಯಮವನ್ನು ಪುನರ್ವಿಮರ್ಶಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ನಮ್ಮಲ್ಲಿ ಒಂದು ಸರ್ಕಾರಿ ಟ್ರೈನಿಂಗ್ ಕಾಲೇಜು ಮಾಡಬೇಕು, ಕುಮಟದಲ್ಲಿ ಮಾಡಬೇಕೆಂದು ಅನೇಕ ಸಾರಿ ಬೇಡಿಕೊಂಡರೂ ಇನ್ನೂವರೆಗೂ ಆಗಿಲ್ಲ, ಆ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

[MR. DEPUTY SPEAKER in the Chair]

ಮುಂಬೈ ಕರ್ನಾಟಕದ ಭಾಗದಲ್ಲಿ ಸ್ಕೂಲ್‌ಬೋರ್ಡ್‌ಗಳು ಏನಿದ್ದವು ಅವನ್ನು ತೆಗೆದುಹಾಕುತ್ತೇವೆ ಎಂದು ಹೇಳುತ್ತಾರೆ, ಬಹಳ ಸಂತೋಷ. ಅದಷ್ಟು ಬೇಗ ಡ್ಯೂಯಲ್ ಕಂಟ್ರೋಲ್‌ನ್ನು ತೆಗೆದು ಹಾಕಿದರೆ ಒಳ್ಳೆಯದು ಎಂಬುದು ನನ್ನ ಅಭಿಪ್ರಾಯವಾಗಿದೆ. ಮೊದಲು ಅಲ್ಲಿ ಕೆಲಸ ಮಾಡುತ್ತಾ ಇದ್ದ ಶಿಕ್ಷಕರಿಗೆ ಪೆನ್‌ಷನ್ ಇಲ್ಲ, ಪ್ರಾವಿಡೆಂಟ್ ಫಂಡ್ ಕೊಡುತ್ತೇವೆ ಎಂದು ಹೇಳಿದ್ದರು. ಈ ತುಟ್ಟಿ ಕಾಲದಲ್ಲಿ ಪೆನ್‌ಷನ್ ಇಲ್ಲದೇ ಅವರು ಉಳಿಯುವುದೇ ಬಹಳ ಕಷ್ಟವಾಗಿದೆ. ಆದ್ದರಿಂದ ಅವರಿಗೂ ಪೆನ್‌ಷನ್ ಕೊಡಿಸುವ ವ್ಯವಸ್ಥೆ ಮಾಡಬೇಕು, ಹೆಚ್ಚು ಮಂದಿ ಮುಪ್ಪಿನ ಕಾಲಲ್ಲಿ ಇದ್ದಾರೆ ಅವರು ಜೀವ ಧಾರಣೆಯನ್ನಾದರೂ ಮಾಡಿಕೊಂಡಿರಲು ಅವರಿಗೆ ಪೆನ್‌ಷನ್ ಕೊಡಬೇಕೆಂದು ವಿನಂತಿಸಿಕೊಂಡು ವೇಳೆ ಇಲ್ಲದೇ ಇರುವುದರಿಂದ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾಮಂತ್ರಿಗಳು ಮಂಡಿಸಿರತಕ್ಕ ಡಿಮ್ಯಾಂಡ್ ನಂಬರ್ 17-37ಕ್ಕೆ ನನ್ನ ಹೃತ್ಪೂರ್ವಕ ಸ್ವಾಗತವನ್ನು ನೀಡಿ ಕೆಲವು ಅಂಶಗಳನ್ನು ಮಾತ್ರ ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈಗಾಗಲೇ ಅನೇಕ ಜನ ಸ್ನೇಹಿತರು ಮಾತನಾಡಿದ್ದಾರೆ. ತಮಗೆ ಗೊತ್ತಿರುವ ಹಾಗೆ ಪ್ರಾಥಮಿಕ ಶಾಲೆಯಲ್ಲಿ ಹಳ್ಳಿಗಾಡಿನ ಮಕ್ಕಳ ಹಾಜರಾತಿ ಬಹಳ ಕಮ್ಮಿಯಾಗಿದೆ. ಪಟ್ಟಣದಲ್ಲಿ ಸ್ವಲ್ಪ ಹೆಚ್ಚಾಗಿದೆ. ಇದಕ್ಕೆ ಕಾರಣವೇನೆಂಬುದನ್ನು ನಾವು ಸ್ವಲ್ಪ ವಿಮರ್ಶೆ ಮಾಡಿನೋಡಬೇಕು. ಹಳ್ಳಿ ಗಾಡಿನಲ್ಲಿಂತಕ್ಕ ಮಕ್ಕಳು ಬಹಳ ಬಡವರಾಗಿದ್ದಾರೆ ಎಂದರೆ ಅವರ ತಂದೆತಾಯಿಗಳು ಬಹಳ ಬಡವರು. ಆ ಮಕ್ಕಳಿಗೆ ಸರಿಯಾಗಿ ಸೌಕರ್ಯಗಳನ್ನು ಒದಗಿಸಲು ಸಾಧ್ಯವಿಲ್ಲದೆ ಹಾಜರಾತಿ ಕಮ್ಮಿಯಾಗಿದೆ ಎನ್ನುವುದು ಒಂದು ಕಾರಣ. ಇನ್ನೊಂದು ಕಾರಣ ಉಪಾಧ್ಯಾಯರಿಲ್ಲದೇ ಸರ್ಕಾರದ ವತಿಯಿಂದಲೇ ಹಾಜರಾತಿ ಕಮ್ಮಿಯಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ ಎಂದು ನನಗೆ ಅನಿಸು

ತ್ತದೆ. ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಕೊಟ್ಟರೆ ತಪ್ಪಾಗಲಾರದೆಂದು ಭಾವಿಸುತ್ತೇನೆ. ಹೋದ ವರ್ಷ ತುಮಕೂರು ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು 300 ಜನ ಉಪಾಧ್ಯಾಯರು ಇಲ್ಲದೆ 68ನೇ ಡಿಸೆಂಬರ್ 31ರ ತನಕ ಅನೇಕ ಪಾಠ ಶಾಲೆಗಳನ್ನು ಮುಚ್ಚಿದ್ದರು ತುರುವೇಕೆರೆ ತಾಲ್ಲೂಕಿನಲ್ಲಿ 82 ಜನ ಉಪಾಧ್ಯಾಯರುಗಳಿಲ್ಲವೆ ಅನೇಕ ಪಾಠಶಾಲೆಗಳನ್ನು ಮುಚ್ಚಿದ್ದರು. ಈ ವಿಷಯವನ್ನು ಅನೇಕ ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಅಧಿಕಾರಿಗಳು ಯಾವುದೇ ವಿಧವಾದ ಕಾರ್ಯಕ್ರಮವನ್ನು ಕೈಕೊಳ್ಳಲಿಲ್ಲ. ಇದಕ್ಕೆ ಯಾರು ಜವಾಬ್ದಾರರು? ಇದನ್ನು ವಿಮರ್ಶೆ ಮಾಡುವುದು ಅವಶ್ಯಕ ಎಂದು ನನಗಾದರೂ ಅನಿಸುತ್ತದೆ.

ಎರಡನೆಯದಾಗಿ ಈ ಪ್ರಾಥಮಿಕ ಶಾಲೆಗಳು ಚೆನ್ನಾಗಿ ನಡೆಯಬೇಕಾಗಿದ್ದರೆ ಅಲ್ಲಿರತಕ್ಕ ಇನ್‌ಸ್ಪೆಕ್ಟರುಗಳು ಚೆನ್ನಾಗಿ ಕೆಲಸ ಮಾಡಬೇಕು, ಅವರು ಹಳ್ಳಿಗಾಡಿನಲ್ಲಿ ತಿರುಗಿ ಪಾಠಪ್ರವಚನ ಶಾಲೆಗಳಲ್ಲಿ ಚೆನ್ನಾಗಿ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ವಿಮರ್ಶೆ ಮಾಡಿನೋಡಬೇಕು. ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿಗಳನ್ನು ವಿದ್ಯಾಖಾತೆಗಾಗಿ ಖರ್ಚು ಮಾಡುತ್ತಾ ಇದ್ದೀರಿ. ಇದರ ಜೊತೆಗೆ ರಾಷ್ಟ್ರೀಯ ವಿಸ್ತರಣಾ ಯೋಜನೆಗೂ ಕೂಡ ಬೇಕಾದಷ್ಟು ಹಣ ಖರ್ಚಾಗುತ್ತಾ ಇದೆ. ಅಲ್ಲಿ ಒಂದೊಂದು ಜೀಪುಗಳನ್ನು ಕೊಟ್ಟಿದ್ದೀರಿ ಅದರ ಉಪಯೋಗ ಏನು ಎಂಬುದು ಎಲ್ಲರಿಗೂ ಗೊತ್ತಿದೆ. ಆ ಬಗ್ಗೆ ಪ್ರಸ್ತಾಪ ಮಾಡುವುದು ಸರಿಯಲ್ಲ. ಪ್ರಾಥಮಿಕ ಶಾಲೆಗಳು ಚೆನ್ನಾಗಿ ನಡೆಯಬೇಕೆಂಬ ಅಭಿರುಚಿ ಸರ್ಕಾರದವರಿಗೆ ಇದ್ದರೆ ಎಲ್ಲಾ ಇನ್‌ಸ್ಪೆಕ್ಟರುಗಳಿಗೂ ಕೂಡ ಒಂದೊಂದು ವಾಹನವನ್ನು ಒದಗಿಸಿ ಅವರು ಇಷ್ಟು ಶಾಲೆಗಳಿಗೆ ಹೋಗಿ ಇನ್‌ಸ್ಪೆಕ್ಟ್ ಮಾಡಲೇಬೇಕೆಂಬ ಒಂದು ನಿಯಮವನ್ನು ಹಾಕಬೇಕು, ಅದರಿಂದ ಸರ್ಕಾರದವರಿಗೆ ಏನೂ ಹೆಚ್ಚು ದುಡ್ಡು ಖರ್ಚಾಗುವುದಿಲ್ಲ. ಇನ್ನೊಂದು ವಿಷಯ 40 ಹುಡುಗರಿಗೆ ಒಬ್ಬರು ಉಪಾಧ್ಯಾಯರು ಇರಬೇಕೆಂಬ ರೇಷ್ಯೋ ಏನಿದೆ ಆ ಒಂದು ನಿಯಮದ ಪ್ರಕಾರ ಉಪಾಧ್ಯಾಯರನ್ನು ನೇಮಕ ಮಾಡಿ ಹೆಚ್ಚಿಗೆ ಇರತಕ್ಕ ಉಪಾಧ್ಯಾಯರನ್ನು ಕಡಿಮೆ ಮಾಡಿ ಉಳಿತಾಯ ಮಾಡಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ದಯಪಿಟ್ಟು ಪರಿಶೀಲನೆ ಮಾಡುವುದು ಅಗತ್ಯ ಎಂದು ಹೇಳಲಿಚ್ಛಿಸುತ್ತೇನೆ.

ಹಳ್ಳಿಗಾಡಿನಲ್ಲಿ ಪ್ರೌಢ ಶಾಲೆಗಳು ಬಹಳ ಕಮ್ಮಿ ಇವೆ. 3 ವರ್ಷದಿಂದ 5 ವರ್ಷಗಳವರೆಗೆ ನಡೆಸಿದರ ಮಾತ್ರ ಪ್ರೌಢಶಾಲೆಗಳನ್ನು ನಡೆಸುವವರಿಗೆ ಗ್ರ್ಯಾಂಟ್ ಕೊಡುತ್ತೇವೆ ಎಂದು ಹೇಳುತ್ತೀರಿ, ಇದು ಸರಿಯಲ್ಲ ಎಂದು ನನಗೆ ಅನಿಸುತ್ತದೆ. ಏಕೆಂದರೆ ಇವತ್ತು ಹಳ್ಳಿಗಾಡಿನಲ್ಲಿ ಇರತಕ್ಕ ಜನರ ಕಷ್ಟ ತಾವು ಕಣ್ಣಿನಲ್ಲಿ ನೋಡಿದರೆ ಮಾತ್ರ ತಮಗೆ ಅರ್ಥವಾಗುತ್ತದೆ. ನನ್ನ ವೈಯಕ್ತಿಕ ಅಭಿಪ್ರಾಯ ಹೇಳುವುದಾದರೆ ವಿದ್ಯಾಭ್ಯಾಸಕ್ಕೆ ಇಷ್ಟು ದುಡ್ಡು ಖರ್ಚು ಮಾಡಿದರೂ ಕೂಡ ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಎಷ್ಟಿದೆ ಎಂಬುದನ್ನು ನಾವು ನೋಡುತ್ತಾ ಇದ್ದೇವೆ. ಆದ್ದರಿಂದ ಈ ಒಂದು 5 ವರ್ಷದ ನಿಯಮವನ್ನು ಸರ್ಕಾರದವರು ಹಿಂದಕ್ಕೆ ಪಡೆಯುವುದು ಉತ್ತಮ ಆ ರೀತಿ ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಪಾಠಶಾಲೆಗಳಿಗೆ ಎಕ್ವಿಪ್‌ಮೆಂಟುಗಳನ್ನು ಕೊಳ್ಳಲು ಕೊಡತಕ್ಕ ಗ್ರ್ಯಾಂಟನ್ನು ವರ್ಷಾಖೈರಿನಲ್ಲಿ—ಮಾರ್ಚಿ 27-28 ಕೊಟ್ಟರೆ ಆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಉಪಾಧ್ಯಾಯರು ಬರುವುದು ಯಾವಾಗ, ಆ ಹಣವನ್ನು ಡ್ರಾಮಾಡುವುದು ಯಾವಾಗ, ಸರ್ಕಾರಕ್ಕೆ ಮಾರ್ಚಿ ಅಖೈರಿನೊಳಗೆ ಈ ಸಾಮಾನುಗಳನ್ನೆಲ್ಲಾ ಕೊಂಡು ವೋಚರುಗಳನ್ನು ಹಾಜರ್ಮಾಡುವುದಕ್ಕೆ ಅವಕಾಶವೆಲ್ಲಿದೆ? ಹೀಗಾಗಿ ಈ ಬಾಬಿಗೆ ಒದಗಿಸತಕ್ಕ ಗ್ರ್ಯಾಂಟೆಲ್ಲಾ ವರ್ಷಾಖೈರಿನಲ್ಲಿ ಲ್ಯಾಪ್ಸಾಗುತ್ತದೆ. ಇಲ್ಲವೇ ಆ ಹಣವೆಲ್ಲಾ ಕಟ್ಟಣಗಳಿಗೆ ವಿನಿಯೋಗಿಸಲಾಗುತ್ತಿದೆ. ಹೀಗೆ ನಾನು ಈ ದಿವಸ ಹೇಳುತ್ತಿರುವುದರ ಸತ್ಯಾಂಶವನ್ನು ಕಂಡುಕೊಳ್ಳುವುದಕ್ಕೆ ಈ ಬೆಂಗಳೂರು ಡಿವಿಷನ್ನಿನಲ್ಲಿ ಮತ್ತು ಈ ಬೆಂಗಳೂರು ನಗರದಲ್ಲಿ ಈ ಬಾಬಿನಲ್ಲಿ ಎಷ್ಟು ಹಣ ಖರ್ಚಾಗಿದೆ, ಇನ್ನು ಉಳಿದ ಡಿವಿಜನ್‌ಗಳಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ಹೋಲಿಕೆ ಮಾಡಿ ನೋಡಿದರೆ ನಾನು ಹೇಳಿದ್ದು ತಾನಾಗೇ ಗೊತ್ತಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಪ್ರೌಢಶಾಲೆಗಳಿಗೆ ಕೊಡತಕ್ಕ ಗ್ರ್ಯಾಂಟ್ ಶೇ|| 99 ಭಾಗ ಲ್ಯಾಪ್ಸಾಗುತ್ತಿದೆ. ಆದುದರಿಂದ ಇನ್ನು ಮುಂದೆ ಬಜೆಟ್ ಮಂಜೂರಾದ ಮೂರು ತಿಂಗಳೊಳಗಾಗಿ ಈ ಹಣವು ಆಯಾಯ ಶಾಲೆಗಳಿಗೆ ಮುಟ್ಟುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪ್ರಾಥಮಿಕ ಶಾಲೆಗಳಲ್ಲಿ ಉಚಿತವಾಗಿ ಪುಸ್ತಕ ಮತ್ತು ಬಟ್ಟೆಗಳನ್ನು ಬಡ ಹುಡುಗರಿಗೆ ಹಂಚತಕ್ಕ ಬಗ್ಗೆ ಮತ್ತು ಸ್ಕಾಲರ್‌ಷಿಪ್ಪುಗಳನ್ನು ಕೊಡತಕ್ಕ ಬಗ್ಗೆ ಹೇಳುವುದಕ್ಕೆ ನನಗೆ ಬಹಳ ವ್ಯಸನವಾಗುತ್ತದೆ. ಈ ವರ್ಷ ಆ ಹುಡುಗರಿಗೆ ಹಂಚಬೇಕೆಂದು ತೀರ್ಮಾನವಾದ ಪುಸ್ತಕಗಳು ಮತ್ತು ಬಟ್ಟೆಗಳು ಅವರಿಗೆ ಮುಂದಿನ ವರ್ಷ ಕೈಸೇರುತ್ತವೆ. ಉದಾಹರಣೆಗೆ ನಾವು ಐದನೇ ತರಗತಿಯಲ್ಲಿ ಅಭ್ಯಾಸಮಾಡತಕ್ಕ ಒಬ್ಬ ಬಡಹುಡುಗನಿಗೆ ಉಚಿತವಾಗಿ ಪುಸ್ತಕ

(ಶ್ರೀ ಎಂ. ಎನ್. ರಾಮಣ್ಣ)

ಗಳನ್ನು ಕೊಡುವಂತೆ ಶಿಫಾರಸ್ ಮಾಡಿದರೆ ಆ ವಿದ್ಯಾರ್ಥಿಗೆ ಆ ಪುಸ್ತಕಗಳು 6ನೇ ತರಗತಿಗೆ ಆತನು ಸೇರಿದ ಮೇಲೆ ಸಿಕ್ಕುತ್ತದೆ—ಎಂದರೆ ಆ ಹುಡುಗನಿಗೆ ಆ ಪುಸ್ತಕಗಳನ್ನು ಕೊಟ್ಟದ್ದಕ್ಕಾದರೂ ಏನು ಸಾರ್ಥಕ ಇದೇ ರೀತಿ ಈ ವರ್ಷ ನಾವು ಆ ಲಂಗ—ಷರ್ಟುಗಳನ್ನು ಹೊಲಿಯುವುದಕ್ಕೆ ಕೊಟ್ಟರೆ ಗ್ರಾಂಟ್ ಇನ್ನೂ ರಿಲೀಜಾಗಿಲ್ಲ, ಹೊಲಿದು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾನೆ. ಇದನ್ನೆಲ್ಲಾ ನೋಡಿದರೆ ನಾವು ಉಚಿತವಾಗಿ ಈ ಸೌಲಭ್ಯವನ್ನು ಒದಗಿಸುವುದಕ್ಕಿಂತ ಇಲ್ಲ ಎಂದು ಹೇಳುವುದೇ ಲೇಸೆಂದು ಕಾಣುತ್ತದೆ. ಇನ್ನಾದರೂ ಸರ್ಕಾರದವರು ಕೂಡಲೆ ಈ ವಿಚಾರಕ್ಕೆ ತೀವ್ರಗಮನ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಉಪಾಧ್ಯಾಯರುಗಳನ್ನು ಬಿ. ಎಡ್ಡಿಗೆ ಆರಿಸುವುದರಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಆ ನೇಮಗಳಿದ್ದರೆ ಅವುಗಳನ್ನು ಎಲ್ಲರ ವಿಷಯದಲ್ಲೂ ಒಂದೇ ಸಮನಾಗಿ ಬಳಸಿದರಂತೂ ಸರಿ. ಇಲ್ಲದಿದ್ದರೆ ಅಂಥಾ ನಿಯಮಗಳನ್ನು ರದ್ದುಮಾಡುವುದು ಲೇಸು. ಕೆಲವರಿಗೆ ಇಲಾಖೆಯಲ್ಲಿ 5-6 ವರ್ಷ ಸರ್ವೀಸಾಗಿದ್ದರೂ ಅವರನ್ನು ಸಲೆಕ್ಟ್ ಮಾಡುವುದಿಲ್ಲ. ಇನ್ನು ಕೆಲವರು ಇಲಾಖೆಗೆ ಸೇರಿ ಇನ್ನೂ ಒಂದೆರಡು ವರ್ಷ ಆಗದಿದ್ದರೂ ಅಂಥವರನ್ನು ಸಲೆಕ್ಟ್ ಮಾಡಿರತಕ್ಕ ನಿದರ್ಶನಗಳಿವೆ. ಹೀಗೆಲ್ಲಾ ಮಾಡಬಾರದು. ಇನ್ನು ಆ ಎಂ.ಎ. ತರಗತಿಗೆ ವಿದ್ಯಾರ್ಥಿಗಳನ್ನು ಸೇರಿಸತಕ್ಕ ಕಾಲದಲ್ಲೂ ಕೂಡ ಹೀಗೆ ಈ ವರ್ಷ ಆ ಕೋರ್ಸನ್ನೇ ತೆರೆಯುವುದಿಲ್ಲ ಎಂದು ಹೇಳುತ್ತಿದ್ದು, ಆ ಕೊನೇ ಘಳಿಗೆಯಲ್ಲಿ ತಮಗೆ ಯಾರು ಬೇಕಾದವರಿದ್ದರೋ ಅಂಥವರನ್ನು ಮಾತ್ರ ಅದಕ್ಕೆ ಸೇರಿಸಿ ಆ ತರಗತಿಯನ್ನು ಪ್ರಾರಂಭ ಮಾಡಿದರು. ಇದೆಲ್ಲಾ ಚೆನ್ನಾಗಿರುವುದಿಲ್ಲ. ಇನ್ನು ಮುಂದಕ್ಕಾದರೂ ಇಂಥ ಪಕ್ಷಪಾತವನ್ನು ಮಾಡಬಾರದೆಂದು ಕೇಳಿಕೊಳ್ಳುತ್ತೇನೆ. ಇನ್ನು ಕಳೆದ ಮೂರು ವರ್ಷಗಳಿಂದ ಶಾಲಾ ಉಪಾಧ್ಯಾಯರುಗಳಾಗಿ ಅಂದರೆ ಲೋಕಲ್ ಕ್ಯಾಂಡಿಡೇಟುಗಳಾಗಿ ಕೆಲಸ ಮಾಡುತ್ತಿದ್ದವರನ್ನು ಕೆಲಸದಿಂದ ತೆಗೆದುಹಾಕಬೇಕೆಂದು ಇತ್ತೀಚೆಗೆ ಒಂದು ಆರ್ಡರನ್ನು ಸರ್ಕಾರದವರು ಹೊರಡಿಸಿದ್ದಾರೆ. ಹೀಗಾದರೆ ಇನ್ನು ಪಾಠ ಹೇಳುವುದಕ್ಕೆ ಉಪಾಧ್ಯಾಯರುಗಳಿಗೆ ಮನಸ್ಸಾದರೂ ಎಲ್ಲಿರುತ್ತೆ ? ಮೇಲಾಗಿ ಇದರಿಂದ ದೇಶದಲ್ಲಿ ವಿಧ್ಯಾವಂತ ನಿರುದ್ಯೋಗಿಗಳ ಸಂಖೆ ಹೆಚ್ಚಿದಂತಾಗುವುದಿಲ್ಲವೇ ? ಇದು ಧರ್ಮವಲ್ಲ ಸರ್ಕಾರ ಈಗಾಗಲೇ ಅಂಥ ಆಜ್ಞೆಯನ್ನೇನಾದರೂ ಮಾಡಿದರೆ ದಯಪಿಟ್ಟು ಸರ್ಕಾರದವರು ಅದನ್ನು ವಾಪಸ್ಸು ತಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಆ ಹಂಗಾಮಿಯಾಗಿ ಕೆಲಸದಲ್ಲಿರತಕ್ಕವರನ್ನೆಲ್ಲಾ ಮುಂದುವರಿಸಿ ಅವರನ್ನು ಖಾಯಂ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸರ್ಕಾರದವರು ತೆರೆದಿರತಕ್ಕ ವಿಜ್ಞಾನ ಮಂದಿರಗಳೇನಿವೆ ಅವುಗಳನ್ನು ನಾನು ಅಜ್ಞಾನ ಮಂದಿರಗಳು ಎಂದು ಕರೆದರೂ ಅದರಲ್ಲಿ ತಪ್ಪೇನೂ ಇರುವುದಿಲ್ಲ ಎಂದು ಭಾವಿಸಿದ್ದೇನೆ. ಸರ್ಕಾರದವರು ಅವುಗಳನ್ನು ಕೂಡಲೆ ಮುಚ್ಚಿ ಅಲ್ಲಿರತಕ್ಕ ಸಾಮಾನುಗಳನ್ನು ಯಾವುದಾದರೊಂದು ಪ್ರೌಢಶಾಲೆಗೆ ಕೊಟ್ಟುಬಿಡಿ ಎಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಹೀಗೆ ಮಾಡಿದರೆ ದೇಶಕ್ಕೆ ಕಲ್ಯಾಣವಾಗುತ್ತದೆ.

ಇನ್ನು ವಯಸ್ಕರ ಶಿಕ್ಷಣದ ವಿಷಯಕ್ಕೆ ಬಂದರೆ ಅನೇಕ ಖಾಗೀ ಮಹನೀಯರು ಇದಕ್ಕಾಗಿ ಬಹಳ ದುಡಿದಿದ್ದಾರೆ. ಶಿಕ್ಷಣ ರಂಗದಲ್ಲಿ ದುಡಿದಂಥ ಜನರಿಗೇನಾದರೂ ಒಂದು ಬಹುಮಾನ ವಿನಿಯೋಗ ಮಾಡಬೇಕೆಂಬ ಪ್ರಮೇಯ ಉಂಟಾದರೆ ಆ ಬಹುಮಾನವನ್ನು ಈ ವಯಸ್ಕರ ಶಿಕ್ಷಣ ಶಾಖೆಗೆ ಕೊಡಬೇಕಾಗುತ್ತದೆ. ಇದು ಅಷ್ಟು ಚೆನ್ನಾಗಿ ಕೆಲಸ ಮಾಡಿಕೊಂಡು ಬರುತ್ತಿದೆ. ಆದರೆ ಸರ್ಕಾರ ಇದರ ಬಗ್ಗೆ ಒಂದು ದೃಢವಾದ ನಿಲುವನ್ನು ತಾಳಿಲ್ಲ. ಸರ್ಕಾರದವರು ಕೂಡಲೆ ಈ ಬಗ್ಗೆ ಒಂದು ಮಸೂದೆಯನ್ನು ತಂದು ಈ ಸಂಸ್ಥೆಗೆ ಹೆಚ್ಚಿನ ಅಧಿಕಾರಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಹೊರ ರಾಷ್ಟ್ರಗಳಲ್ಲಿ ಇದು ತನ್ನದೇ ಆದ ಒಂದು ರೀತಿಯಲ್ಲಿ ಕೆಲಸ ಮಾಡಿಕೊಂಡು ಬರುತ್ತಿದೆ. ಆದರೆ ಸರ್ಕಾರದವರು ಇಲ್ಲಿ ಇದರ ಬಗ್ಗೆ ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ ಹಾವೂ ಸಾಯಬಾರದು—ಕೋಲೂ ಮುರಿಯಬಾರದು ಅನ್ನುವಂತಿದೆ. ಹೀಗಾಗಿ ಇಲ್ಲಿ ಕೆಲಸ ಮಾಡತಕ್ಕ ಜನರೆಲ್ಲಾ ಬಹಳ ಅನಿಶ್ಚಿತ ಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಇದರ ವಿಚಾರದಲ್ಲಿ ಸರ್ಕಾರದವರು ತಮ್ಮ ಸರಿಯಾದ ನಿಲುವೇನು ಎಂಬುದನ್ನು ಕೂಡಲೆ ತಿಳಿಸಿದರೆ ಉತ್ತಮವಾಗುತ್ತದೆ.

ಇನ್ನು ಅನೇಕ ಊರುಗಳಲ್ಲಿ ಉಪಾಧ್ಯಾಯರುಗಳಿಗೆ ವಾಸದ ಮನೆಗಳಿಲ್ಲ. ಸರ್ಕಾರದವರು ಈಗ ಆ ಪೋಲೀಸ್ ಇಲಾಖೆಗೆ ವಸತಿ ಗೃಹಗಳನ್ನು ಕಟ್ಟಿಸಿರುವಂತೆ ಇದಕ್ಕೂ ಏಕೆ ಕಟ್ಟಿಸಿ ಕೂಡ

ಕೊಡಬಾರದು ? ದೇಶಕ್ಕೆ ಆ ಪೋಲೀಸ್ ಬಾಬು ಎಷ್ಟು ಮುಖ್ಯವೋ ದೇಶದ ಏಳಿಗೆಗೆ ಈ ವಿದ್ಯಾ ಇಲಾಖೆ ಮತ್ತು ಉಪಾಧ್ಯಾಯರುಗಳೂ ಅಷ್ಟೇ ಮುಖ್ಯ. ಆದುದರಿಂದ ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರದಿಂದ ಹಣವನ್ನು ಪಡೆದು ಉಪಾಧ್ಯಾಯರುಗಳಿಗೆ ಕೂಡಲೆ ವಾಸದ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಂಡು ಅಧ್ಯಕ್ಷರು ನನಗೆ ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದುದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

5-30 P.M.

†ಶ್ರೀ ಎನ್. ಲೋಕಯ್ಯನಾಯಕ್ (ವಿರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೆ, ಈ ವಿದ್ಯಾ ಇಲಾಖೆಗೆ ಮಂಡಿಸಿರತಕ್ಕ ಹಣದ ಬೇಡಿಕೆಗಳನ್ನು ನಾನು ವಿರೋಧಮಾಡುತ್ತಾ ಇದರಲ್ಲಿತಕ್ಕ ಹಣಕ್ಕೆ ತಕ್ಕ ಪ್ರತಿಫಲ ಸಮಾಜದ ಮೇಲೆ ಉತ್ತಮ ಫಲಕಾರಿಯಾಗುತ್ತಾ ಇಲ್ಲವೆಂಬು ನಾನು ಹೇಳುತ್ತೇನೆ. ಇವತ್ತು ಶಾಲೆಗಳಲ್ಲಿ ಉಪಾಧ್ಯಾಯರು ಅಂದರೆ, ಮಕ್ಕಳನ್ನು ತಯಾರುಮಾಡುವ ಶಿಲ್ಪಿಗಾರರು ಎಂಬರ್ಥ. ಅಲ್ಲಿ ತಯಾರಾಗುವ ಮಕ್ಕಳು ಮುಂದಿನ ಪ್ರಜೆಗಳು. ಅವರು ಸಮಾಜದಲ್ಲಿ ಮುಂದೆ ಈ ದೇಶದ ಭವಿಷ್ಯವನ್ನು ನಿರ್ಧರಿಸುವ ಪ್ರಜೆಗಳು ಆಗುತ್ತಾರೆ. ದೇಶದಲ್ಲಿ ಇಂತಹ ಮನುಷ್ಯರನ್ನು ತಯಾರುಮಾಡುವಂಥ ಜವಾಬ್ದಾರಿ, ಒಂದು ಶಿಸ್ತಿನಿಂದ ಮಕ್ಕಳನ್ನು ತಯಾರುಮಾಡುವ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಈ ಸಂದರ್ಭದಲ್ಲಿ ಉಪಾಧ್ಯಾಯರುಗಳ ನೇಮಕ, ಮತ್ತೆ ಅವರನ್ನು ಯಾವರೀತಿಯಲ್ಲಿಟ್ಟುಕೊಳ್ಳಬೇಕು, ಅವರಲ್ಲಿ ಯಾವರೀತಿ ಸರ್ಕಾರದ ಹತೋಟಿ ಇರಬೇಕು ಎನ್ನುವುದು ಒಂದು ಭಾಗ. ಈ ಉಪಾಧ್ಯಾಯರುಗಳ ಮೇಲೆ ಹತೋಟಿ ಇಡುವ ಸಂದರ್ಭದಲ್ಲಿ ಸರ್ಕಾರದ ಯಾವ ಅಧಿಕಾರಿಗಳು ಇದ್ದಾರೆಯೋ ಅವರು ಶಾಲೆಗಳಿಗೆ ಭೇಟಿ ಕೊಡುವ ಸಂದರ್ಭದಲ್ಲಿ ಟೂರ್ ಪ್ರೋಗ್ರಾಂ ಹಾಕುವಾಗ ಯಾವಾಗಲೂ ಅದನ್ನು ಮುಂಚಿತವಾಗಿ ಕಳುಹಿಸಬಾರದು. ಈಗ ಏನು ಮಾಡುತ್ತಾರೆಂದರೆ, ಒಂದು ಟೆಂಟಟಿವ್ ಪ್ರೋಗ್ರಾಂ ಎಂಬುದಾಗಿ ಕಳುಹಿಸುತ್ತಾರೆ. ಇಂತಿಂಥ ಶಾಲೆಗಳಿಗೆ ಡಿ. ಇ. ಓ. ಆಗಿರುವವರು ಮತ್ತು ಸಬ್ ಡಿವಿಜನ್ ಇನ್‌ಸ್ಪೆಕ್ಟರ್ ಇಂತಿಂಥ ಕಡೆ ಇಷ್ಟು ಹೊತ್ತಿಗೆ ಬರುತ್ತಾರೆಂದು ಹೇಳುತ್ತಾರೆ. ಆಗ ಅಲ್ಲಲ್ಲಿನ ಉಪಾಧ್ಯಾಯರುಗಳು ಅವರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ, ಸಾಯಂಕಾಲ ಕೋಳಿ, ಕುರಿ ಸಾರು, ಇತ್ಯಾದಿ ಊಟದ ವ್ಯವಸ್ಥೆಯನ್ನು ಮಾಡುತ್ತಾರೆ. ಅವರಿಗೆ ಇಂತಹ ಅವಕಾಶ ಇರಬಾರದು. ಯಾರು ಯಾವ ಕಡೆ ಹೋಗುತ್ತಾರೆ, ಎಂಬುದನ್ನು ತಿಳಿಯುವುದಕ್ಕೆ ಅವಕಾಶವಿರಬಾರದು. ಸರ್‌ಪ್ರೈಜಾಗಿ ಪ್ರತಿಯೊಂದು ಶಾಲೆಗೆ ಭೇಟಿ ಮಾಡಬೇಕು. ಆಗ ಅಲ್ಲಿನ ಉಪಾಧ್ಯಾಯರಿಗೆ ಅಧಿಕಾರಿಗಳು ಬರುತ್ತಾರೆ, ಪಾಠ ಪ್ರವಚನಗಳನ್ನು ಸರಿಯಾಗಿ ಮಾಡಬೇಕೆನ್ನುವ ಹೆದರಿಕೆ ಇರುತ್ತದೆ. ಸರಿಯಾದ ಅಟೆಂಡೆನ್ಸ್ ಸಹ ಇರುತ್ತದೆ. ಮಾನ್ಯ ವಿದ್ಯಾ ಉಪಮಂತ್ರಿಗಳು ಎಲ್ಲೋ ಒಂದು ಕಡೆ ಹೋಗಿರುವಾಗ ಅಟೆಂಡೆನ್ಸ್‌ನಲ್ಲಿ ಶೇಕಡ 50ರಷ್ಟು ಹಾಜರು ಇರಲಿಲ್ಲವೆಂಬುದಾಗಿ ವರ್ತಮಾನ ಪತ್ರಿಕೆಗಳಲ್ಲಿ ಬಂತು. ಇಂತಹ ಸಂದರ್ಭಗಳು ಕೂಡಲೇ ಹೋಗುತ್ತವೆ. ಹೀಗೆ ಉಪಾಧ್ಯಾಯರ ಅನೇಕ ಸಮಸ್ಯೆಗಳನ್ನೂ ಕೂಡ ಜಾಗ್ರತೆಯಾಗಿ ಬಗೆಹರಿಸಬಹುದು. ಕಳೆದ ಕೆಲವು ದಿನಗಳ ಹಿಂದೆ ಕೊಡಗು, ಹಾಸನ, ಮೈಸೂರು ಪ್ರಾಂತಗಳಲ್ಲಿ ಉಪಾಧ್ಯಾಯರನ್ನು ಪ್ರಾಥಮಿಕ ಶಾಲೆಗಳಿಗೆ ನೇಮಕ ಮಾಡುವಾಗ ಅನ್ಯಾಯವಾಗಿದೆ ಎಂದು ಕೆಲವರು ಹೈಕೋರ್ಟಿಗೆ ರಿಟ್ ತೆಗೆದುಕೊಂಡು ಹೋಗಿದ್ದರು. ಇವರು ನೇಮಕ ಮಾಡಿದ ಬಗ್ಗೆ ಹೈಕೋರ್ಟಿನಿಂದ ತಡೆಯಾಜ್ಞೆ ಬಂತು. ಕೊಡಗಿನಲ್ಲಿ ಇದರಿಂದ ಸುಮಾರು 160 ಪ್ರಾಥಮಿಕ ಶಾಲೆಗಳಲ್ಲಿ ಅನೇಕ ತಿಂಗಳುಗಳಿಂದಲೂ ಉಪಾಧ್ಯಾಯರುಗಳಿಲ್ಲ. ಅಂದಮೇಲೆ ಅಲ್ಲಿ ಮಕ್ಕಳ ಗತಿಯೇನು ? ಆದ್ದರಿಂದ ಸರ್ಕಾರ ಜವಾಬ್ದಾರಿ ವಹಿಸಿ ಶಿಕ್ಷಕರ ರಿಟ್ಟನ್ನು ವೆಕೇಟ್ ಮಾಡಿಸಿ ತಾತ್ಕಾಲಿಕ ಉಪಾಧ್ಯಾಯರನ್ನು ನೇಮಕಮಾಡುವ ಹುಕುಮನ್ನು ಹೈಕೋರ್ಟಿನಿಂದ ಸರ್ಕಾರ ಪಡೆಯಬೇಕಾಗಿತ್ತು. ಅದನ್ನು ಸರ್ಕಾರದವರು ಇದುವರೆಗೆ ಮಾಡದೇ ಇದ್ದುದು ಬಹಳ ತಪ್ಪಾಗಿದೆ.

ಇನ್ನು ನಮ್ಮಲ್ಲಿ ಮಾಧ್ಯಮಿಕ ಶಾಲೆಯ ಹೆಡ್‌ಮಾಸ್ಟರ್ ಮತ್ತು ಅವರ ಸಹೋದ್ಯೋಗಿಗಳಿಗೆ ಒಂದೇ ರೀತಿಯ ಸಂಬಳವಿದೆ. ಮಾಧ್ಯಮಿಕ ಶಾಲೆಯಲ್ಲಿ ಹೆಡ್‌ಮಾಸ್ಟರ್ ಆಗಿ ಎಂದು ಹೇಳಿದರೆ, ಅವರ ಜವಾಬ್ದಾರಿ ಬಹಳ ಜಾಸ್ತಿಯಾಗಿರುತ್ತೆ. ಸಂಬಳದ ವಿಷಯದಲ್ಲಿ ವ್ಯತ್ಯಾಸವೇ ಇಲ್ಲ. ಎಲ್ಲ ಜವಾಬ್ದಾರಿ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಿಗೆ ಇದೆ. ಅವರಿಗೆ ಫೈನಾನ್ಷಿಯಲ್ ಬೆನಿಫಿಟ್ಸ್ ಯಾವುದೂ ಇಲ್ಲ ಮೇಲಿನ ಪ್ರೊಮೋಷನ್ ಸಿಕ್ಕಿದ ಕೂಡಲೇ ಹೆಡ್ ಮಾಸ್ಟರಿಗೆ ಪ್ರತ್ಯೇಕ ಸಂಬಳ ಇರಬೇಕು. ಇಲ್ಲವಿದ್ದರೆ ಹೆಡ್‌ಮಾಸ್ಟರಷ್ಟೇ ಸಂಬಳ ನನಗೂ

(ಶ್ರೀ ಎನ್. ಲೋಕಯ್ಯನಾಯಕ್)

ಸಿಗುತ್ತದೆಂದು ಸಹೋದ್ಯೋಗಿಗಳು ಅವರಿಗೆ ಗೌರವ ತೋರಿಸುವುದಿಲ್ಲ. ಆದ್ದರಿಂದ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರ ಸಂಬಳವನ್ನು ಸಹೋದ್ಯೋಗಿಗಳ ಸಂಬಳಕ್ಕಿಂತ ಹೆಚ್ಚಿಗೆ ಕೊಡಬೇಕೆಂದು ನಾನು ಸರ್ಕಾರದವರಿಗೆ ಸೂಚಿಸುತ್ತೇನೆ.

ಇನ್ನು ಕುಶಾಲನಗರದಲ್ಲಿ ಒಂದು ಪಾಲಿಟೆಕ್ನಿಕ್ ಶಾಲೆ ಇದೆ. ಅಲ್ಲಿ ಮಕ್ಕಳ ಸಂಖ್ಯೆ ಬಹಳ ಕಡಿಮೆಯಾಗುತ್ತಿದೆ. ಇದಕ್ಕೆ ಒಂದು ಕಾರಣ ಉಂಟು. ಅಲ್ಲಿರತಕ್ಕ ಮಕ್ಕಳಿಗೆ ವಿದ್ಯಾರ್ಥಿವೇತನ ಸಮಯಕ್ಕೆ ಸರಿಯಾಗಿ ಸಿಗದೇ ಇರುವುದರಿಂದ, ಕೆಲವರು ಹಾಸ್ಟಲುಗಳಲ್ಲಿರುವುದರಿಂದ ಮತ್ತು ವಿದ್ಯಾರ್ಥಿವೇತನ ಬಹಳ ತಡವಾಗಿ ಅವರಿಗೆ ಸಿಗುವುದರಿಂದ, ಈ ಶಾಲೆಗೆ ವಿದ್ಯೆ ಪಡೆಯುವುದಕ್ಕೆ ಬರುವವರು ಹಿಂದೆ ಹೋಗುತ್ತಿದ್ದಾರೆ. ಆದ್ದರಿಂದ ವಿದ್ಯಾರ್ಥಿವೇತನವನ್ನು ಸಕಾಲದಲ್ಲಿ ವಿದ್ಯಾರ್ಥಿಗಳಿಗೆ ಕೂಡಲೇ ಒದಗಿಸಬೇಕು. ಅದರಲ್ಲಿ ಏನಾದರೂ ಅಡ್ಮಿನಿಸ್ಟ್ರೇಟೀವ್ ಡಿಫಿಕಲ್ಟೀಸ್ ಇದ್ದರೆ ಒಂದು ವರ್ಷದೊಳಗೆ ಆ ರೀತಿ ತಡವಾಗುವುದನ್ನು ತಪ್ಪಿಸಬೇಕು. ಅದರ ಬಗ್ಗೆ ಆಗಾಗ್ಗೆ ಮುತುವರ್ಜಿ ವಹಿಸಬೇಕು.

ಕಳೆದ ಸಾರಿ ಜನರಲ್ ಎಲೆಕ್ಷನ್ನಿನಲ್ಲಿ ಕೆಲವರು ಉಪಾಧ್ಯಾಯರು ಚುನಾವಣೆ ಡ್ಯೂಟಿಗೆ ಹೋಗಿದ್ದರು. ಅವರನ್ನು ಪರ ಊರುಗಳಿಗೆ ಹಾಕಿದ್ದರು. ಅವರಿಗೆ ಕೊಡುವ ದಿನಭತ್ಯವನ್ನೇನೋ ಕೊಟ್ಟಿದ್ದಾರೆ. ಆದರೆ ಅವರಿಗೆ ಕೊಡುವ ಟಿ.ಎ.ಯನ್ನು ಇದುವರೆಗೂ ಕೊಟ್ಟಿಲ್ಲ. ಇಂತಹ ಪ್ರಸಂಗಗಳು ಉಂಟು. ಆ ಬಗ್ಗೆ ನಾನು ಪ್ರಶ್ನೆಯನ್ನೂ ಸಹ ಕಳುಹಿದ್ದೇನೆ. ಅದಕ್ಕೆ ಇನ್ನೂ ಕೂಡ ಜವಾಬು ಸಿಗಲಿಲ್ಲ. ಯಾರ್ಯಾರು ಉಪಾಧ್ಯಾಯರು ಜನರಲ್ ಎಲೆಕ್ಷನ್ ಸಮಯದಲ್ಲಿ ಕೆಲಸಕ್ಕೆ ಹೋಗಿದ್ದರೋ ಅಂತಹವರಿಗೆ ಟಿ.ಎ.ಯನ್ನು ಕೂಡಲೇ ಕೊಡಿಸುವ ಏರ್ಪಾಡನ್ನು ಮಾಡಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ವಿರಾಜಪೇಟೆಯಲ್ಲಿ ಒಂದು ಗೌರ್ನಮೆಂಟ್ ಹೈಸ್ಕೂಲ್ ಉಂಟು. ಅಲ್ಲಿ ಲೆಕ್ಕಕ್ಕಾಗಿ ಇರುವ ಉಪಾಧ್ಯಾಯರುಗಳು ಇಲ್ಲವೇ ಇಲ್ಲ. ಹಾಗೆ ಇದ್ದರೂ ಇದುವರೆಗೆ ಅಲ್ಲಿಗೆ ಯಾರನ್ನೂ ಲೆಕ್ಕದ ಉಪಾಧ್ಯಾಯರನ್ನಾಗಿ ನೇಮಕಮಾಡಲಿಲ್ಲ. ಹೀಗೆ ಒಂದು ಉದಾಹರಣೆಯನ್ನು ಹೇಳುತ್ತಿದ್ದೇನೆ. ಈ ರೀತಿಯಾಗಿ ಇನ್ನೂ ಅನೇಕ ಕಡೆಗಳಲ್ಲಿ ಈ ರಾಜ್ಯದಲ್ಲಿ ಅಂತಹ ಪರಿಸ್ಥಿತಿ ಇದೆ. ಉಪಾಧ್ಯಾಯರುಗಳು ಇಲ್ಲದೆ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಅಂಕೆಗಳನ್ನು ಕಡಿಮೆ ಪಡೆದು, ಇಡೀ ಮಕ್ಕಳ ಜೀವನೋಪಾಯವೇ ಹಾಳಾಗುವ ಪರಿಸ್ಥಿತಿ ಈಗ ಅಲ್ಲಿ ಇದೆ. ಆದ್ದರಿಂದ ಕೂಡಲೇ ಲೆಕ್ಕದ ಪಾಠಗಳಿಗೆ ಉಪಾಧ್ಯಾಯರುಗಳನ್ನು ನೇಮಿಸಬೇಕೆಂದು ನನ್ನ ಸಲಹೆ. ಇದರಲ್ಲಿ ಸರ್ಕಾರದ್ದು ಬಹಳ ದೊಡ್ಡ ಜವಾಬ್ದಾರಿ ಇದೆ. ಲೆಕ್ಕದಲ್ಲಿ ಯಾವಾಗಲೂ ಖಂಡಿತವಾಗಿ ಕಡಿಮೆ ಅಂಕೆಗಳನ್ನು ವಿದ್ಯಾರ್ಥಿಗಳು ಪಡೆಯುತ್ತಾರೆ. ಆದ್ದರಿಂದ ಈ ವಿಚಾರದಲ್ಲಿ ಲೆಕ್ಕದ ಉಪಾಧ್ಯಾಯರುಗಳನ್ನು ಕೂಡಲೇ ಅಲ್ಲಿಗೆ ಕಳುಹಿಸಬೇಕು. ಮುಖ್ಯವಾಗಿ ಈ ಬೇಡಿಕೆಯಲ್ಲಿ ಒದಗಿಸಿರತಕ್ಕ ಹಣಕ್ಕೆ ಸರಿಯಾದ ರೀತಿಯಲ್ಲಿ ಪ್ರತಿಫಲ ದೊರೆಯುವಂತಾಗಬೇಕು.

ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರೊಬ್ಬರು ಹೇಳಿದರು. ಇವತ್ತು ಜಾತ್ಯಾತೀತ ಭಾವನೆ ಬಹಳವಾಗಿ ಬೆಳೆಯುತ್ತಿದೆ ಎಂದು. ಇವತ್ತು ಸರ್ಕಾರದವರು ಹಾಸ್ಟಲುಗಳನ್ನು ಮಾಡುವಾಗ, ಅವರಲ್ಲಿ ಹರಿಜನರಿಗೆ, ಗಿರಿಜನರಿಗೆ ಮತ್ತು ಇತರ ಸಮಾಜದವರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಮಾಡಿರುವುದರಿಂದ ಅವರು ಈಗ ನಾವು ಪ್ರತ್ಯೇಕವಾಗಿಯೇ ಇರುತ್ತೇವೆ ಎಂದು ಹೇಳುತ್ತಾರೆ. ಅವರಿಗೆ ಒಂದೇ ಜನಾಂಗವಾಗಿ ಬಾಳಬೇಕೆಂಬ ಮನೋವೃತ್ತಿ ಇದರಿಂದ ಬೆಳೆಯುತ್ತಾ ಇಲ್ಲ. ಎಲ್ಲರೂ ಒಂದೇ ಸಮವೆಂಬ ಕಲ್ಪನೆ ಬರುವಂಥ ಪರಿಸ್ಥಿತಿ ಈಗ ಇಲ್ಲ. ಹರಿಜನ ಹಾಸ್ಟಲ್ ಅಥವಾ ಗಿರಿಜನ ಹಾಸ್ಟಲ್ ಎಂಬುದಾಗಿ ಇರದೆ ಯಾವ ಹಾಸ್ಟಲ್ ಇದ್ದರೂ ಅಲ್ಲಿ ಎಲ್ಲಾ ಜನಾಂಗಗಳನ್ನೂ ಸೇರಿಸಿದರೆ ಒಳ್ಳೆಯದು.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ–ಗ್ರಾಮಾಂತರ).—ಇದು ಜಾತ್ಯಾತೀತ ಪ್ರಶ್ನೆ. ಅವರು ಇತರ ಜನಾಂಗಗಳಲ್ಲಿಯೂ ಸೇರಬೇಕು. ಅವರು ಇತರ ಜನಾಂಗಗಳಲ್ಲಿ ಇರಕೂಡದೆಂದು ಹೇಳಿ ಪ್ರಗತಿಗೆ ಎಡೆಕೊಡಬೇಡಿ. ಅವರಿಗೆ ಎಲ್ಲ ವಿಧವಾದ ಅನುಕೂಲತೆ ಕೊಡಿ, ಹಣ ಸಹಾಯ ಮಾಡಿ ಅವೆಲ್ಲ ಸೌಕರ್ಯಗಳನ್ನೂ ಕೊಡಿ. ಆದರೆ ಅವರನ್ನು ಪ್ರತ್ಯೇಕವಾಗಿ ಇಡಬೇಡಿ.

ಶ್ರೀ ಎನ್. ಲೋಕಯ್ಯ ನಾಯಕ್.—ಇವತ್ತಿನ ದಿವಸ ಹರಿಜನ ಹಾಸ್ಟೆಲ್ ಗಿರಿಜನರ ಹಾಸ್ಟಲ್ ಎಂದು ಇರಬಾರದು.

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಎಲ್ಲಾ ಜಾತಿಯವರನ್ನು ಸೇರಿಸುವ ಜನರಲ್ ಹಾಸ್ಟೆಲ್ ಎಂದು ಮಾಡಿದ್ದಾರೆ.

ಶ್ರೀ ಎನ್. ಲೋಕಯ್ಯ ನಾಯಕ್.—ಇನ್ನು ಪಠ್ಯಪುಸ್ತಕಗಳ ವಿಚಾರ. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಕೂಡ ಒಂದು ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. 5ನೇ ಕ್ಲಾಸಿಗೆ ಇರತಕ್ಕಂತಹ ಇಂಗ್ಲೀಷ್ ಮೀಡಿಯಂನಲ್ಲಿ ನ್ಯಾಷನಲ್ ರೀಡರ್ ಎಂಬ ಪುಸ್ತಕದಲ್ಲಿ, ಪುಟ 48ರಲ್ಲಿ ಈ ರೀತಿ ಇದೆ.

National Readers : Reader II-Page 48. Fight against Malaria.

> ...“ We must also guard ourselves against mosquittos. We should always sleep under mosquitto net. Then Mosquittos cannot bite, or we should cover our hands and faces with kerosene oil.”

ಅದರಲ್ಲಿ ಕೆರೋಸಿನ್ ಎಣ್ಣೆ ಹಾಕಿಕೊಂಡು ಮಲಗಬೇಕು ಎಂದು ಹೇಳುತ್ತಾರೆ. ಇನ್ನೂ ಜಾಸ್ತಿ ಬಂದರೆ, ಪೆಟ್ರೋಲ್ ಹಾಕಿಕೊಂಡು, ಇನ್ನೂ ಜಾಸ್ತಿ ಬಂದರೆ ಬೆಂಕಿ ಹಚ್ಚಿಕೊಂಡಿರಬೇಕೆಂದೂ ಇವರು ಹೇಳಬಹುದು. ಆದ್ದರಿಂದ ಇಂಥ ತಪ್ಪುಗಳನ್ನು ಹೋಗಲಾಡಿಸಬೇಕು. ಸಮಿತಿಯವರು ಇದನ್ನು ಶಿಫಾರಸು ಮಾಡುವಾಗ ಬಹಳ ಜಾಗ್ರತೆ ವಹಿಸಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ. ಆರ್. ಹಾಲಸ್ವಾಮಿ (ಜಗಳೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ಮಂಡಿಸಿರತಕ್ಕಂತಹ ಡಿಮ್ಯಾಂಡುಗಳನ್ನು ಹೃತ್ಪೂರ್ವಕವಾಗಿ ಸಮರ್ಥಿಸುತ್ತಾ, ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇವತ್ತಿನ ದಿವಸ ನಮ್ಮ ಮೈಸೂರು ದೇಶದ ಎಲ್ಲಾ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಸದುದ್ದೇಶದಿಂದ 46 ಕೋಟಿ ಚಿಲ್ಲರೆ ಹಣವನ್ನು ಇಲ್ಲಿ ಒದಗಿಸಿರುವುದು ಶ್ಲಾಘನೀಯವಾದ ವಿಚಾರ. ಸ್ವಾತಂತ್ರ್ಯ ಬಂದೀಚೆಗೆ ವಿದ್ಯಾಭ್ಯಾಸ ಪ್ರಗತಿಯೂ ಭರದಿಂದ ಸಾಗುತ್ತಿದೆ. ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ಕೊಟ್ಟು ಹೆಚ್ಚಿನ ಪ್ರಗತಿಯನ್ನು ಸಾಧಿಸುತ್ತಾ ಇದೆ. ಆದರೆ ಇವತ್ತು, ವಿದ್ಯಾಕ್ಷೇತ್ರದಲ್ಲಿ ಸರ್ಕಾರ ಹೆಚ್ಚಿನ ವಿದ್ಯಾಭ್ಯಾಸವನ್ನು ಒದಗಿಸುತ್ತಾ, ಕ್ವಾಂಟಿಟಿಗೆ ಹೆಚ್ಚಿನ ಗಮನ ಕೊಟ್ಟಿದೆ ಹೊರತು, ಕ್ವಾಲಿಟಿಯನ್ನು ಉತ್ತಮಪಡಿಸುವುದಕ್ಕೆ ಹೆಚ್ಚಿಗೆ ಆಸಕ್ತಿ ವಹಿಸಿಲ್ಲ ಎಂದು ಹೇಳುತ್ತೇನೆ. ಮಾನ್ಯ ಆರ್ಥಿಕ ಮಂತ್ರಿಯವರು ತಮ್ಮ ಆಯವ್ಯಯ ಪತ್ರದಲ್ಲಿ ಈ ಒಂದು ಶಿಕ್ಷಣದ ಗುಣ ಪ್ರಮಾಣವನ್ನು ಉತ್ತಮಪಡಿಸಿಕೊಳ್ಳುವ ವಿಚಾರಕ್ಕೆ ಸಾಕಷ್ಟು ಗಮನ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಶಿಕ್ಷಣದ ಮಟ್ಟವನ್ನು ಉತ್ತಮಪಡಿಸುವ ಬಗ್ಗೆ ಅನೇಕ ತೊಂದರೆಗಳಿವೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಎಷ್ಟೇ ತೊಂದರೆಗಳಿದ್ದರೂ, ಸರ್ಕಾರ ಈ ಒಂದು ಗುಣ ಮಟ್ಟವನ್ನು ಹೆಚ್ಚಿಸುವುದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಸರ್ಕಾರದವರು ಎಲ್ಲಕ್ಕಿಂತಲೂ ಹೆಚ್ಚಾಗಿ ಪ್ರೈಮರಿ ಶಿಕ್ಷಣಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕು. ಪ್ರೈಮರಿ ಶಿಕ್ಷಣಕ್ಕಾಗಿ ಹೆಚ್ಚಿನ ಹಣವನ್ನು ಮೀಸಲಾಗಿಟ್ಟಿರುವುದು ಬಹಳ ಸಂತೋಷದ ವಿಚಾರ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೈಮರಿ ಶಾಲೆಗಳಲ್ಲ ಗಂಡಸರು ಉಪಾಧ್ಯಾಯರುಗಳು ಸಾಕಷ್ಟು ಉತ್ಸಾಹದಿಂದ ಪಾಠವನ್ನು ಹೇಳುತ್ತಾ ಇಲ್ಲ. ಆ ಒಂದು ದೃಷ್ಟಿಯಿಂದ ನನಗಾದರೂ ಅನಿಸುತ್ತದೆ, ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಮಹಿಳಾ ಉಪಾಧ್ಯಾಯರನ್ನು ನೇಮಿಸಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಏಕೆಂದರೆ, ಸಾಮಾನ್ಯವಾಗಿ ಮಕ್ಕಳ ಮೇಲೆ ಮಹಿಳೆಯರಿಗೆ ಪ್ರೀತಿ, ವಾತ್ಸಲ್ಯ ಮತ್ತು ಮಮತೆ ಹೆಚ್ಚಾಗಿರುತ್ತದೆ. ಅದಲ್ಲದೆ ಮಹಿಳೆಯರು ರಾಜಕೀಯದಲ್ಲಿ ಹೆಚ್ಚಾಗಿ ಭಾಗವಹಿಸುತ್ತಾ ಇಲ್ಲ. ಇದರಿಂದ ಮಕ್ಕಳ ವಿದ್ಯಾಭ್ಯಾಸ ಇನ್ನೂ ಒಳ್ಳೆಯದಾಗುತ್ತದೆ. ಇವೆಲ್ಲಾ ಕಾರಣಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೈಮರಿ ಶಾಲೆಗಳಿಗೆ ಮಹಿಳಾ ಉಪಾಧ್ಯಾಯರನ್ನು ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅವರಿಗೆ ಬೇಕಾದ ವಸತಿ ಸೌಕರ್ಯಗಳನ್ನೆಲ್ಲಾ ಸರ್ಕಾರದವರು ಇನ್ನೂ ಹೆಚ್ಚಾಗಿ, ಈಗ ಮಾಡಿರುವುದಕ್ಕಿಂತಲೂ ಉತ್ತಮ ರೀತಿಯಲ್ಲಿ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಹೆಚ್ಚು ಹೆಚ್ಚು ಮಹಿಳಾ ಉಪಾಧ್ಯಾಯರನ್ನು ಆಕರ್ಷಿಸುವುದಕ್ಕೆ ಅನುಕೂಲವಾಗುತ್ತದೆ; ಮತ್ತು ಹಳ್ಳಿಗಳಲ್ಲಿ ಸಾಮಾನ್ಯವಾಗಿ ಕಂಪಲ್ಸರಿ ವಿದ್ಯಾಭ್ಯಾಸ ಸಾಧಿಸಿದ್ದೇವೆಂದು ಫಿಗರ್ ನೋಡಿಕೊಂಡು ಹೆಮ್ಮೆ ಪಡುತ್ತಿದ್ದೇವೆ. ಆದರೆ ಎಷ್ಟು ಹುಡುಗರಸಂಖ್ಯೆ ಹಾಜರಿಪಟ್ಟಿಯಲ್ಲಿರುತ್ತದೋ, ಅಷ್ಟು ಹುಡುಗರು ನಿಜವಾಗಿಯೂ ಶಾಲೆಗೆ ಬರುತ್ತಾ ಇಲ್ಲವೆಂದು ನನಗನ್ನಿಸುತ್ತದೆ. ಇದಕ್ಕೆ ಏನು ಕಾರಣವೆಂದರೆ, ಹಳ್ಳಿಗಳ ಮಕ್ಕಳನ್ನು ಶಾಲೆಗೆ ಆಕರ್ಷಿಸುವಂತಹ

(ಶ್ರೀ ಜೆ. ಆರ್. ಹಾಲಸ್ವಾಮಿ)

ಏನೂ ಏರ್ಪಾಡು ಇಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ನರ್ಸರಿ ಶಾಲೆಗಳನ್ನು ತೆರೆಯಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ; ಮತ್ತು ಈಗಾಗಲೇ ಶ್ರೀಮಾನ್ ತಮ್ಮಯ್ಯನವರು ಹೇಳಿದರು, ಸಿಂಗಲ್ ಟೀಚರ್ಸ್ ಸ್ಕೂಲಿನಲ್ಲಿ ಎಷ್ಟು ಮಟ್ಟಿಗೆ ಮಕ್ಕಳಿಗೆ ವಿದ್ಯಾಭ್ಯಾಸ ಸರಿಯಾಗಿ ಸಿಗುತ್ತದೆ; ಮತ್ತು ಅಲ್ಲಿ ಸರಿಯಾದ ವಿದ್ಯಾಭ್ಯಾಸ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ಬಗ್ಗೆ. ನಾನು ಅದನ್ನು ಒಪ್ಪುತ್ತೇನೆ. ಹಳ್ಳಿಗಳಲ್ಲಿ ಏನು ಒಂದು ಸಿಂಗಲ್ ಟೀಚರ್ಸ್ ಶಾಲೆಗಳು ಇವೆ, ಅಲ್ಲಿ ನಾಲ್ಕು ತರಗತಿಗಳ ಎಲ್ಲಾ ವಿದ್ಯಾರ್ಥಿಗಳನ್ನು ಒಂದೇ ಕೊಠಡಿಯಲ್ಲಿ ಸೇರಿಸಿ ಎಷ್ಟರಮಟ್ಟಿಗೆ ಪಾಠ ಹೇಳಿಕೊಡಬಹುದು ಎಂಬುದನ್ನು ಯೋಚನೆ ಮಾಡಬೇಕು. ಯಾವುದಾದರೂ ಎರಡು ತರಗತಿಗಳನ್ನು ಬೆಳಿಗ್ಗೆ, ಎರಡು ತರಗತಿಗಳನ್ನು ಮಧ್ಯಾಹ್ನ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ನಗರಗಳಲ್ಲಿ ಸರಿಯಾದ, ಪ್ರತ್ಯೇಕವಾದ ಕೊಠಡಿಗಳೆಲ್ಲಾ ಇರುತ್ತವೆ. ಹಳ್ಳಿಗಳಲ್ಲಿ ಈ ಸಿಂಗಲ್ ಟೀಚರ್ಸ್ ಸ್ಕೂಲುಗಳನ್ನು ಕಡಿಮೆಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಇಡೀ ರಾಜ್ಯಾದ್ಯಂತ ಏಕರೂಪದ ಶಿಕ್ಷಣ ಪದ್ಧತಿಯನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಅದರಲ್ಲೂ ಇವತ್ತು ಈ ನೌಕರಿ ವರ್ಗದವರಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಟ್ರಾನ್ಸ್‌ಫರ್ ಆದಾಗ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗುತ್ತದೆಯೆಂಬುದನ್ನು ಕೇಳಿದ್ದೇನೆ. ಅದರಲ್ಲೂ ಈ ಯೂನಿವರ್ಸಿಟಿಯಲ್ಲಿ ಅನೇಕ ತೊಂದರೆಗಳಿವೆ. ಮೈಸೂರು ಯೂನಿವರ್ಸಿಟಿಯಲ್ಲಿ ಓದಿದ ಮಕ್ಕಳ ತಂದೆತಾಯಿಂದಿರಿಗೆ ಏನಾದರೂ ಬೆಂಗಳೂರು ಯೂನಿವರ್ಸಿಟಿಗೆ ವರ್ಗವಾದರೆ, ಆ ತಂದೆ ತಾಯಿಗಳು ಅವರ ಮಕ್ಕಳನ್ನು ಇಲ್ಲಿ ಓದಿಸಲು ಅವಕಾಶ ಇರುವುದಿಲ್ಲ. ಅಲ್ಲಿಯ ಸಿಲೆಬಸ್ ಮತ್ತು ಇಲ್ಲಿಯ ಸಿಲೆಬಸ್ ಬೇರೆಯಾಗಿರುವುದರಿಂದ ಬಹಳ ತೊಂದರೆಯಾಗುತ್ತದೆ ಎಂದು ಕೇಳಿದ್ದೇನೆ. ಆದ್ದರಿಂದ ದೇಶಾದ್ಯಂತ ಎಲ್ಲಾ ಮಟ್ಟದಲ್ಲೂ ಒಂದೇ ರೂಪವಾದ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶಾಲೆಗಳ ಬಿಲ್ಡಿಂಗ್ಸ್ ಬಗ್ಗೆ ಹೇಳುವುದಾದರೆ ಒಂದು ಶಾಲಾ ಬಿಲ್ಡಿಂಗ್ ಕಟ್ಟಬೇಕಾದರೆ ಒಂದು ನಿರ್ದಿಷ್ಟವಾದ ಪ್ಲಾನು ಮತ್ತು ಎಸ್ಟಿಮೇಟ್ ಕೊಡಬೇಕು ಮತ್ತು ಅದರ ಜೊತೆಗೆ ಬಿಲ್ಡಿಂಗ್ ಇಷ್ಟೇ ಸ್ಪೇಸ್ ಇರಬೇಕು. ಹೀಗೆಯೇ ಫೌಂಡೇಷನ್ ಹಾಕಬೇಕು, ಮೇಲ್ಛಾವಣಿಗೆ ಮಂಗಳೂರು ಹೆಂಚೇ ಹಾಕಬೇಕು ಎಂಬ ನಿಯಮಗಳು ಇವೆ. ಇದನ್ನು ಸರ್ಕಾರದವರು ಸಡಿಲಗೊಳಿಸಿ, ಗ್ರಾಮಾಂತರ ಪ್ರದೇಶಗಳಲ್ಲಿ ಸುಲಭವಾಗಿ ದೊರೆಯತಕ್ಕ ಕಾಡುಕಲ್ಲುಗಳು, ಮಣ್ಣು, ಸ್ವದೇಶಿ ಹೆಂಚುಗಳು, ಬಾದೆಹುಲ್ಲು ಇತ್ಯಾದಿಗಳನ್ನು ಉಪಯೋಗಿಸಿ ಕಡಿಮೆ ವೆಚ್ಚದಲ್ಲಿ ಶಾಲೆಗಳ ಕಟ್ಟಡಗಳನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು. ಮತ್ತು ಈಗ ಚಿತ್ರದುರ್ಗ ಜಿಲ್ಲೆಯಲ್ಲಿ, ಹುಬ್ಬಳ್ಳಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಉತ್ತಮವಾದ ಮತ್ತು ಭದ್ರವಾದ ಚಕ್ಕೆ ಕಲ್ಲು ಸಿಕ್ಕುತ್ತದೆ. ಈಗ ರಾಣಿಬೆನ್ನೂರಿನಲ್ಲಿ ಚಕ್ಕೆ ಕಲ್ಲಿನಿಂದ ಶಾಲೆಯ ಕಟ್ಟಡವನ್ನು ಕಟ್ಟಿದ್ದಾರೆ. ಆದ್ದರಿಂದ ಆಯಾ ಜಿಲ್ಲೆಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಿಕ್ಕತಕ್ಕಂಥ ಮೆಟೀರಿಯಲ್ಸ್‌ನಿಂದ ಶಾಲಾ ಕಟ್ಟಡಗಳನ್ನು ಕಟ್ಟತಕ್ಕಂಥ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಚಿತ್ರದುರ್ಗ ಜಿಲ್ಲೆಯಲ್ಲಿಯೂ ಸಹ ಆ ತರಹ ಉತ್ತಮವಾದ ಕಲ್ಲು ಸಿಕ್ಕುತ್ತದೆ. ಅದಕ್ಕೆ ಸ್ಪೆಸಿಫಿಕೇಷನ್, ರೇಟು ಯಾವುದೂ ಇಲ್ಲ. ಅದನ್ನು ಶಾಲೆಗಳನ್ನು ಕಟ್ಟುವುದಕ್ಕೆ ಉಪಯೋಗಮಾಡಿಕೊಳ್ಳಬಹುದು. ಚಿತ್ರದುರ್ಗ ಜಿಲ್ಲೆಯಲ್ಲಿರತಕ್ಕ ತುರನೂರ್ ವಿಲೇಜ್‌ನಲ್ಲಿ ಗೌರ್ನಮೆಂಟ್ ಹೈಸ್ಕೂಲನ್ನು ಚಕ್ಕೆ ಕಲ್ಲು ಮತ್ತು ಮೇಲ್ಛಾವಣಿಗೆ ಬಾದೆಹುಲ್ಲು (ಅಪ್ಪು) ಉಪಯೋಗಿಸಿಕೊಂಡು ಆ ಕಟ್ಟಡವನ್ನು ಕಟ್ಟಿದ್ದಾರೆ. ಆದ್ದರಿಂದ ಶಾಲೆಗಳನ್ನು ಕಟ್ಟುವುದಕ್ಕೆ ಇಂಥಾ ಸಾಮಾನುಗಳನ್ನೇ ಉಪಯೋಗಿಸಬೇಕು ಎನ್ನುವಂತಹ ಕಡ್ಡಾಯವನ್ನು ಮಾಡದೆ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಯಾವ ಯಾವ ಸಲಕರಣೆಗಳು ಸಿಕ್ಕುತ್ತವೆಯೋ ಅವುಗಳನ್ನೇ ಉಪಯೋಗಿಸಿಕೊಂಡು ಕಡಿಮೆ ಖರ್ಚಿನಲ್ಲಿ ಶಾಲೆಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ.

ಇವೊತ್ತಿನ ದಿವಸ ನಮ್ಮ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅನುತ್ತೀರ್ಣರಾಗುತ್ತಿದ್ದಾರೆ, ಅದಕ್ಕೆ ನನಗೆ ವ್ಯಸನವಿಲ್ಲ. ಆದರೆ ಅವರು ಅಶಿಸ್ತಿನಿಂದ ನಡೆದುಕೊಳ್ಳುತ್ತಾರೆ ಅದನ್ನು ತಪ್ಪಿಸುವುದಕ್ಕೆ ಎಲ್ಲರೂ ಪ್ರಯತ್ನ ಮಾಡಬೇಕು ಎಂದು ಮಾನ್ಯ ವಿದ್ಯಾ ಮಂತ್ರಿಗಳು ಒಂದು ಕಡೆ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದನ್ನು ನಾವೆಲ್ಲರೂ ದೀರ್ಘವಾಗಿ ಆಲೋಚನೆ ಮಾಡಿ ಈ ಒಂದು ದಿಶೆಯಲ್ಲಿ ಕ್ರಮವನ್ನು ಕೈಗೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಶಿಸ್ತು, ರಾಷ್ಟ್ರೀಯ ಭಾವನೆ, ಪ್ರೀತಿ ವಾತ್ಸಲ್ಯ, ಸ್ಫೂರ್ತಿ ಬರತಕ್ಕಂಥ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಈ ಬಗ್ಗೆ ಸರ್ಕಾರದವರು ಸೂಕ್ತ ವ್ಯವಸ್ಥೆ ಮಾಡಬೇಕೆಂದು

ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಈ ರಾಜ್ಯದಲ್ಲಿ ಎಲ್ಲೇ ಹೋಗಲಿ, ಲಂಚಾವತಾರ ಕಾಣುತ್ತದೆ. ಪೋಲೀಸು ಇಲಾಖೆಗೇ ಹೋಗಲಿ, ಅಲ್ಲಿ ಲಂಚ ಇದೆ. ಪಿ.ಡಬ್ಲ್ಯು. ಇಲಾಖೆಯನ್ನು ತೆಗೆದುಕೊಳ್ಳಿ ಅಲ್ಲಿ ಲಂಚ ಇದೆ. ಸೇಲ್ಸ್ ಟ್ಯಾಕ್ಸ್ ಇಲಾಖೆಯನ್ನು ತೆಗೆದುಕೊಳ್ಳಲಿ ಅಲ್ಲಿಯೂ ಲಂಚ ಇದೆ. ಹೀಗೆ ಎಲ್ಲ ಹೋದರೂ ಲಂಚ ಇದೆ. ಎಲ್ಲವೂ ಲಂಚಮಯ; ಮತ್ತು ಭ್ರಷ್ಟಾಚಾರವೂ ಇದೆ. ಜಾತೀಯ ಗಲಭೆಗಳು ಆ ಊರಿನಲ್ಲಾಯಿತು, ಈ ಊರಿನಲ್ಲಾಯಿತು ಎಂದು ದಿನವೂ ಪತ್ರಿಕೆಗಳಲ್ಲಿ ಬರುತ್ತಿದೆ. ಭ್ರಷ್ಟಾಚಾರ ಮತ್ತು ಜಾತೀಯ ಅಂಧಕಾರಕ್ಕೆ ಮುಖ್ಯ ಕಾರಣ ವಿದ್ಯಾಭ್ಯಾಸ ಕ್ರಮದಲ್ಲಿ ಗುಣಮೌಲ್ಯದ ಕಡೆಗೆ ಸರ್ಕಾರ ಹೆಚ್ಚು ಗಮನ ಕೊಡದೇ ಇರುವುದು. ನಮ್ಮ ಸರ್ಕಾರದವರೇನೋ ವಿದ್ಯಾಭ್ಯಾಸಕ್ಕಾಗಿ 46 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಹಿಂದೆ ವಿದ್ಯಾಭ್ಯಾಸಕ್ಕಾಗಿ ಕೇವಲ 3 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದುದು ಈಗ 46 ಕೋಟಿ ರೂಪಾಯಿಗಳಿಗೆ ಬಂದಿರುವುದು ಗಾತ್ರದಲ್ಲಿ ಮಾತ್ರ ಹೆಚ್ಚಿದೆಯೇ ವಿನಾ ಗುಣದಲ್ಲಿ ಯಾವ ವಿಧವಾದ ಬದಲಾವಣೆ ಹೊಂದಿಲ್ಲ. ಸಾಮಾನ್ಯವಾಗಿ ಭ್ರಷ್ಟಾಚಾರ ಮತ್ತು ಜಾತೀಯತೆ ಇರುವುದು ವಿದ್ಯಾವಂತರಲ್ಲೇ ಇದೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಅವಿದ್ಯಾವಂತರಲ್ಲಿ ಭ್ರಷ್ಟಾಚಾರ ಬರುವುದಿಲ್ಲ. ಇರುವುದಕ್ಕೆ ಅವಕಾಶವೂ ಇಲ್ಲ. ವಿದ್ಯಾವಂತರಾದ ಯುವಕರು ಕೆಲಸಕ್ಕೆ ಸೇರುವ ಮುನ್ನ ಲಂಚವನ್ನು ಕೊಟ್ಟು ಸೇರಿದ ಮೇಲೆ ಲಂಚವನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಈ ಲಂಚ ತೆಗೆದುಕೊಳ್ಳುವುದು ಪಾಪದ ಕೆಲಸ, ರಾಷ್ಟ್ರದ್ರೋಹದ ಕೆಲಸ, ಅದನ್ನು ತೆಗೆದುಕೊಳ್ಳಬಾರದು ಎನ್ನುವಂಥಾ ನೀತಿ ಮೌಲ್ಯವನ್ನು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡುವ ಪ್ರಾರಂಭ ಕಾಲದಿಂದಲೇ ಹೇಳಿಕೊಡುವಂತಹ ಒಂದು ವ್ಯವಸ್ಥೆ ಇರಬೇಕು. ಈ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳುವುದಾದರೆ ಈಗ ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಏನು 46 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆಯೋ ಅದಕ್ಕೆ ತಕ್ಕ ಪ್ರತಿಫಲ ಬರುತ್ತದೆ. ಈ ಗುರಿ ಬಿಟ್ಟು, ಸರ್ಕಾರಕ್ಕೆ 46 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅನುಮತಿ ಸಿಕ್ಕಿದರೆ ಸಾಕು ಎಂಬ ಭಾವನೆಯಿಂದ ಮಾಡುವುದಾದರೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ನಮ್ಮ ರಾಜ್ಯದಲ್ಲಿರತಕ್ಕ ಪ್ರತಿಯೊಂದು ಗ್ರಾಮದ ಶಾಲೆಯಿಂದ ವಿಶ್ವವಿದ್ಯಾನಿಲಯದವರೆಗೂ ಈ ಒಂದು ವ್ಯವಸ್ಥೆಯನ್ನು ಅಂದರೆ ಗುಣಮೌಲ್ಯವನ್ನು ಹೆಚ್ಚುಮಾಡುವುದಾದರೆ ಸರ್ಕಾರದವರು ಖರ್ಚು ಮಾಡತಕ್ಕ ಹಣಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಈಗಾಗಲೇ ನಮ್ಮ ರಾಜ್ಯದಲ್ಲಿ ಒಟ್ಟು ಮೂರು ವಿಶ್ವವಿದ್ಯಾನಿಲಯಗಳು ಇವೆ ಈ ಮೂರು ವಿಶ್ವವಿದ್ಯಾನಿಲಯಗಳ ಬಗ್ಗೆಯೂ ಸರ್ಕಾರದವರು ಸುಮಾರು 3 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಆದರೆ ಈ ವಿಶ್ವವಿದ್ಯಾನಿಲಯಗಳಲ್ಲಿ ಏಕಪ್ರಕಾರವಾದ ವಿದ್ಯಾಭ್ಯಾಸಕ್ರಮವನ್ನು ಮತ್ತು ವಿದ್ಯೆಯನ್ನು ವಿದ್ಯಾರ್ಥಿಗಳಿಗೆ ಒದಗಿಸಿಕೊಡುತ್ತಿಲ್ಲ. ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿಯೂ ಅದರದರ ಆಕ್ಟ್ ಪ್ರಕಾರ ಸಿಂಡಿಕೇಟ್, ಸೆನೆಟ್ ಮತ್ತು ಅಕೆಡಮಿಕ್ ಕೌನ್ಸಿಲ್ ರಚನೆಯೇ ಬೇರೆ ಬೇರೆಯಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಆಕ್ಟ್ ಇದೆ. ಅಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಕೂಡ ಇದೆ. ಆದರೆ ವೈಸ್ ಚಾನ್ಸಲರಿಗೆ ಒಂದು ವಿಶೇಷವಾದ ಅಧಿಕಾರವನ್ನು ಕೊಟ್ಟಿದ್ದಾರೆ. ಯೂನಿವರ್ಸಿಟಿ ಆಕ್ಟಿನ ಸೆಕ್ಷನ್ 9-5-2 ರ ಪ್ರಕಾರ ವೈಸ್ ಚಾನ್ಸಲರ್ ಒಬ್ಬ ಅಭ್ಯರ್ಥಿಯನ್ನು 6 ತಿಂಗಳು ಕಾಲ ನೇಮಕ ಮಾಡಿಕೊಳ್ಳಬಹುದು ಎನ್ನುವ ಅಧಿಕಾರವನ್ನು ಅವರು ದುರುಪಯೋಗಪಡಿಸಿಕೊಳ್ಳದೆ ತಮಗೆ ಬೇಕಾದಂತಹ ವ್ಯಕ್ತಿಯನ್ನು 4 ಸಾರಿ 5 ಸಾರಿ ಪದೇ ಪದೇ ನೇಮಕ ಮಾಡಿಕೊಳ್ಳುವಂತಹ ಅಧಿಕಾರ ಅವರಿಗೆ ಇದೆ. ಇನ್ನೊಂದು ವಿಶ್ವವಿದ್ಯಾನಿಲಯದಲ್ಲಿ ಕೇವಲ 6 ತಿಂಗಳೂ ಕೂಡ ಒಬ್ಬ ಅಭ್ಯರ್ಥಿಯನ್ನು ನೇಮಕಮಾಡಿಕೊಳ್ಳುವಂತಹ ಅಧಿಕಾರ ವೈಸ್ ಚಾನ್ಸಲರ್ ಅವರಿಗೆ ಇಲ್ಲ. ಇದೇ ರೀತಿ ವೈಸ್ ಚಾನ್ಸಲರ್ ಅವರ ನೇಮಕದಲ್ಲಿ ಕೂಡ ಬೇಕಾದಷ್ಟು ತಾರತಮ್ಯ ಇದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸರ್ಕಾರದವರೇ ನೇರವಾಗಿ ವೈಸ್ ಚಾನ್ಸಲರ್ ಅನ್ನು ನೇಮಕ ಮಾಡುವುದರಲ್ಲಿ ಪ್ರವೇಶ ಮಾಡುತ್ತಾರೆ. ಆದರೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಮೊದಲು ಪ್ಯಾನಲ್ ಆಫ್ ನೇಮ್ಸ್ ಸಬ್‌ಮಿಟ್ ಮಾಡುತ್ತಾರೆ. ಆಮೇಲೆ ಅದರಲ್ಲಿ ಸೆಲೆಕ್ಟ್ ಮಾಡಿಕೊಂಡು ವೈಸ್ ಚಾನ್ಸಲರ್ ನೇಮಕ ಮಾಡುತ್ತಾರೆ. ಈ ರೀತಿ ಉನ್ನತಾಧಿಕಾರಿ ನೇಮಕದ ಬಗ್ಗೆ, ಇತರ ರಚನೆ ಬಗ್ಗೆ ಒಂದು ವಿಶ್ವವಿದ್ಯಾನಿಲಯಕ್ಕೂ ಇನ್ನೊಂದು ವಿಶ್ವವಿದ್ಯಾನಿಲಯಕ್ಕೂ ತಾರತಮ್ಯ ಇರಬಾರದು. ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಅನ್ವಯವಾಗುವಂತಹ ಏಕರೂಪದ ಶಾಸನವನ್ನು ಕಟ್ಟುನಿಟ್ಟಾಗಿ ತರದಿದ್ದರೂ ಕೂಡ ಬಹಳ ಮುಖ್ಯವಾದ ಅಂಶಗಳನ್ನು ಅಂದರೆ ಸೆನೆಟ್, ಸಿಂಡಿಕೇಟ್,

(ಶ್ರೀ ಎಚ್. ಎ. ಚನ್ನೇಗೌಡ)

ಅಕೆಡೆಮಿಕ್ ಕೌನ್ಸಿಲ್, ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್, ಪಠ್ಯಕ್ರಮ ಮತ್ತು ಪರೀಕ್ಷಾ ಕ್ರಮಗಳ ಬಗ್ಗೆ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಅನ್ವಯವಾಗುವಂತಹ ಏಕರೂಪದ ಶಾಸನವನ್ನು ತಂದಲ್ಲಿ ವಿದ್ಯಾಭ್ಯಾಸದ ಪ್ರಗತಿ ಸಾಧ್ಯವಾದೀತು ಎನ್ನುವ ದೃಢ ನಂಬಿಕೆಯಿಂದ ನಾನು ಇದನ್ನು ಹೇಳುತ್ತಿದ್ದೇನೆ. ಈಗಲಾದರೋ ಒಂದು ವಿಶ್ವವಿದ್ಯಾನಿಲಯದಲ್ಲಿ ಎರಡು ಪೇಪರ್‌ನಲ್ಲಿ ವಿದ್ಯಾರ್ಥಿಗಳು ಫೇಲ್ ಆದರೂ ಕೂಡ ವಿನಾಯಿತಿ ಕೊಡುವುದು, ಇನ್ನೊಂದು ವಿಶ್ವವಿದ್ಯಾನಿಲಯದಲ್ಲಿ ಪ್ರೈಪೋಟಿ ಮಾಡಿ ವಿದ್ಯಾರ್ಥಿಗಳು 3 ಪೇಪರ್‌ನಲ್ಲಿ ಫೇಲ್ ಆದರೂ ವಿನಾಯಿತಿ ಕೊಡುವುದು ಜಾರಿಯಲ್ಲಿದೆ. ಈ ರೀತಿ ಮಾಡಿ ವಿದ್ಯಾರ್ಥಿಗಳಿಗೆ ಪ್ರೈಪೋಟಿಯಿಂದ ವಿನಾಯಿತಿ ಕೊಡುವುದರಿಂದ ವಿದ್ಯಾ ಮಟ್ಟ ಅಧಃಪಾತಾಳಕ್ಕೆ ಇಳಿಯುತ್ತಿದೆ. ಇಂಥಾ ಲೋಪದೋಷಗಳನ್ನು ತಕ್ಷಣ ತಿದ್ದಬೇಕು. ವಿಶ್ವವಿದ್ಯಾನಿಲಯಗಳು ಅಟಾನಮಸ್ ಬಾಡಿ ಆದ್ದರಿಂದ ಅದರಲ್ಲಿ ನಾವು ಪ್ರವೇಶ ಮಾಡುವುದಕ್ಕಾಗುವುದಿಲ್ಲ, ಅಲ್ಲಿ ಸಿಂಡಿಕೇಟ್ ಇದೆ, ಸೆನೆಟ್ ಇವೆ, ಅವರೇ ಮಾಡುತ್ತಾರೆ ಎಂದು ಸರ್ಕಾರದವರು ಹೇಳಬಹುದು. ಆದರೂ ಅಲ್ಲಿ ಸರ್ಕಾರದ ಪ್ರತ್ಯಕ್ಷ ಮತ್ತು ಪರೋಕ್ಷ ಕೈವಾಡವಿದೆ ಎಂಬುದು ಎಲ್ಲರಿಗೂ ಗೊತ್ತು.

ಇನ್ನೊಂದು ವಿಚಾರ. ಅಗ್ರಿಕಲ್‌ಚರಲ್ ಯೂನಿವರ್ಸಿಟಿಯಲ್ಲಿಯೂ ಇತ್ತೀಚೆಗೆ ಪಕ್ಷಪಾತ ಬಹಳವಾಗಿ ಬೆಳೆಯುತ್ತಾ ಬಂದಿದೆ. ಅಲ್ಲಿಯ ಕೆಲವು ಅಧಿಕಾರಿಗಳಲ್ಲಿ ರಾಜಕೀಯ ಭಾವನೆ ಮತ್ತು ಸ್ವಜನ ಪಕ್ಷಪಾತ ಬೆಳೆದಿದೆ. ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್‌ಗಳನ್ನು ಸಂಶೋಧನೆ ಮಾಡುವ ಉದ್ದೇಶದಿಂದ ಅಗ್ರಿಕಲ್‌ಚರಲ್ ಯೂನಿವರ್ಸಿಟಿಯಲ್ಲಿ ಪ್ರಾರಂಭ ಮಾಡಿದರು. ಸಂಶೋಧನೆಗೆ ಹೆಚ್ಚು ಗಮನ ಕೊಡಬೇಕು ಎನ್ನುವ ಘನ ಉದ್ದೇಶದಿಂದ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿದರು. ಆದರೆ ಈ ದಿವಸ ಅಲ್ಲಿ ಯಾವ ರಿಸರ್ಚ್ ಕೂಡ ಅಷ್ಟು ಮುಖ್ಯವಾದ ಉದ್ದೇಶದಿಂದ ನಡೆಯುತ್ತಿಲ್ಲ. ಕಾರಣ ಲಾಯಕ್ಕಲ್ಲದ ಸಂಶೋಧನಾ ಮುಖ್ಯಾಧಿಕಾರಿ ಆ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧನೆಗೆ ಎಷ್ಟು ಹೆಸರಾಗಿತ್ತೋ ಅದಕ್ಕೆ ಈಗ ಅಷ್ಟೇ ಒಂದು ದೊಡ್ಡ ಧಕ್ಕೆ ಬಂದಿದೆ ಎಂಬುದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಆ ವಿಶ್ವವಿದ್ಯಾನಿಲಯದ ಆನ್ಯುಯಲ್ ರಿಪೋರ್ಟನ್ನು ತರಿಸಿ ನೋಡಿದರೆ ಅವರಿಗೆ ಗೊತ್ತಾಗುತ್ತದೆ. ಕಳೆದ 6 ವರ್ಷಗಳಿಂದ ಏಕಪ್ರಕಾರವಾಗಿ ಒಬ್ಬ ಪ್ರೊಫೆಸರು ಒಂದೇ ಒಂದು ಪುಸ್ತಕವನ್ನು ಬರೆದು ಹಿಂದಿನ ಪುಸ್ತಕಕ್ಕೆ ಪ್ರತಿವರ್ಷ ಹೊಸ ಟೈಟಲ್ ಕೊಟ್ಟು, ರಿಸರ್ಚ್ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ರೀತಿ ನಿಜವಲ್ಲದ ವಿಚಾರಗಳನ್ನು, ಅಕ್ರಮವಾದ ವಿಚಾರಗಳನ್ನು ಕೊಡತಕ್ಕಂತವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಇದನ್ನು ಹೀಗೆಯೇ ಬಿಟ್ಟರೆ ಸಂಶೋಧನೆ ಹೇಗೆ ಮುಂದುವರಿಯುತ್ತದೆ ಎಂಬುದನ್ನು ಸರ್ಕಾರದವರು ವಿಚಾರಿಸಬೇಕು.

6-00 P.M.

ಇತ್ತೀಚೆಗೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ಹೊಸ ರೀತಿಯ ಪಾಳೆಗಾರಿಕೆ ನಡೆಯುತ್ತಿದೆ. 3-4 ಜನ ಪ್ರೊಫೆಸರ್‌ಗಳು ಸೇರಿಕೊಂಡು ಗುಂಪುಗೊಳಿತನ ಮಾಡುತ್ತಿದ್ದಾರೆ. ವಿಶ್ವವಿದ್ಯಾನಿಲಯಗಳಲ್ಲಿ ಈ ರೀತಿ ನಡೆಯುವುದಾದರೆ ಇದರಿಂದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳಿಗೆ ಮತ್ತು ಜನತೆಗೆ ಯಾವ ರೀತಿಯಲ್ಲೂ ಒಳ್ಳೆಯದಾಗುವುದಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿ ಸಾಮಾನ್ಯವಾಗಿ ಸಂಶೋಧನೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು. ಅದಕ್ಕೆ ಅನುಗುಣವಾಗಿ ನಮ್ಮ ವಿದ್ಯಾರ್ಥಿಗಳು ಗ್ರಂಥಾಲಯವನ್ನು ಉಪಯೋಗಿಸಿಕೊಳ್ಳಬೇಕು. ಈ ಬಗ್ಗೆ ಸರ್ಕಾರದವರೇ ಆಗಲೀ, ವಿಶ್ವವಿದ್ಯಾನಿಲಯದವರಾಗಲೀ ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಗ್ರಂಥಾಲಯಗಳು ಇವೆ. ವಿಶ್ವವಿದ್ಯಾನಿಲಯ ಗ್ರಂಥಾಲಯಗಳಿವೆ. ಪೋಸ್ಟ್ ಗ್ರಾಜ್ಯುಯೆಟ್‌ಗಳೇ ಆಗಲೀ ಅಂಡರ್ ಗ್ರಾಜುಯೇಟ್ಸ್ ಆಗಲಿ ಇದರ ಫಲವನ್ನು ಪಡೆಯುತ್ತಿಲ್ಲ. ಆದಕಾರಣ ಗ್ರಂಥಾಲಯದ ಉಪಯೋಗದ ಬಗ್ಗೆ ರಿಸರ್ಚ್ ಮೆಥಡಾಲಜಿ ಮತ್ತು ಡ್ಯಾಟಾ ಕಲೆಕ್ಷನ್ ಬಗ್ಗೆ ಪ್ರತಿವಾರ ಒಂದು ಗಂಟೆಯ ಪಾಠವನ್ನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಹೇಳಿಕೊಡಬೇಕು. ಇದರಿಂದ ಅವರು ಹೆಚ್ಚಿನ ಸಂಶೋಧನೆ ಮನೋವೃತ್ತಿ ಬೆಳೆಸುವುದಕ್ಕೆ ಅವಕಾಶವಾಗುತ್ತದೆಂದು ಹೇಳಬಯಸುತ್ತೇನೆ. ಇನ್ನು ಕೊಲಿಜಿಯೆಟ್ ಎಜುಕೇಷನ್ ಬಗ್ಗೆ ಎರಡು ಮಾತನ್ನು ಹೇಳುತ್ತೇನೆ. ಅಂಕಿಅಂಶಗಳ ಪ್ರಕಾರ 586 ಜನ ಲೆಕ್ಚರರ್‌ಗಳು, 89 ಜನ ರೀಡರ್‌ಗಳು ಇದ್ದಾರೆ. ವರ್ಕ್‌ಲೋಡ್ ಪ್ರಕಾರ ಪ್ರತಿ 12 ಸ್ಥಾನಕ್ಕೆ ಒಬ್ಬರು ಪ್ರೊಫೆಸರ್ ಇರಬೇಕೆಂದು 3 ರೀಡರ್ಸ್ 8 ಜನ ಲೆಕ್ಚರರ್‌ಗಳು ಇರಬೇಕೆಂದು ಒಂದು ತತ್ವ ಇದೆ. ಆದರೆ ಸರ್ಕಾರದ ವತಿಯಿಂದ

ಪ್ರತಿ 24 ಜನ ಲೆಕ್ಚರರ್‌ಗೆ ಒಬ್ಬ ರೀಡರ್, 3 ಜನ ರೀಡರ್‌ಗೆ ಒಬ್ಬ ಪ್ರೊಫೆಸರ್ ಇರುವಂತೆ ಏರ್ಪಾಡು ಮಾಡಬೇಕೆಂದು ಯಾರೋ ಸರ್ಕಾರಕ್ಕೆ ಒತ್ತಾಯವಾಗಿ ಹೇಳುತ್ತಿದ್ದಾರೆಂದು ತಿಳಿದುಬಂದಿದೆ. ಈ ರೀತಿ ಏರ್ಪಾಟು ಮಾಡಿದರೆ ಕೊಲಿಜಿಯೆಟ್ ಎಜುಕೇಷನ್‌ನಲ್ಲಿರುವ ಉಪಾಧ್ಯಾಯರುಗಳಿಗೆ ಪ್ರಮೋಷನ್‌ನ ಅವಕಾಶ ಜಾಗ್ರತೆ ಸಿಕ್ಕುವುದಿಲ್ಲ. ಅವರಲ್ಲಿ ಬೇಸರಿಕೆ ಹುಟ್ಟುತ್ತದೆ ಬಹಳ ದಿವಸಗಳಿಂದಲೂ ಖಾಲಿಯಿರುವ ಜಾಗಗಳಿಗೆ ನೇಮಕ ಮಾಡುತ್ತಿಲ್ಲ. D.R.M.E. ಕಾಲೇಜ್‌ನಲ್ಲಿ ಫಿಜಿಕ್ಸ್, ಕೆಮಿಸ್ಟ್ರಿ, ಮ್ಯಾಥಮೆಟಿಕ್ಸ್ ಪೋಸ್ಟ್‌ಗಳು ಬಹಳ ಕಾಲದಿಂದ ಖಾಲಿ ಇವೆ. ಇತ್ತೀಚೆಗೆ ಫಿಜಿಕ್ಸ್ ವಿಭಾಗಕ್ಕೆ ನೇಮಕಮಾಡಿದ್ದೀರಿ. ಆದರೆ ಬೇರೆ ವಿಭಾಗಗಳಿಗೆ ನೇಮಕಮಾಡುವ ವಿಚಾರದಲ್ಲಿ ರಿಟ್ ಅರ್ಜಿಗಳು ಇರುವುದರಿಂದ ನೇಮಕ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ. ಅದೇ ಬೆಂಗಳೂರು ಸರ್ಕಾರಿ ಕಾಲೇಜಿನಲ್ಲಿ ರಿಟ್ ಅರ್ಜಿ ಇದ್ದರೂ ಕೂಡ ಕೆಮಿಸ್ಟ್ರಿ ಪ್ರೊಫೆಸರನ್ನು ನೇಮಕಮಾಡಿದ ನಿದರ್ಶನವಿಲ್ಲವೆ? ಈ ರೀತಿ ಪಕ್ಷಪಾತ ಏತಕ್ಕೆ ಮಾಡುತ್ತೀರೋ ಗೊತ್ತಿಲ್ಲ.

ಇನ್ನು ಫ್ರೀ ಎಜುಕೇಷನ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈ ಬಗ್ಗೆ 46 ಕೋಟಿ ರೂಪಾಯಿಗಳು ಖರ್ಚಾಗಲಿ, 100 ಕೋಟಿ ರೂಪಾಯಿಗಳು ಬೇಕಾದರೆ ಖರ್ಚಾಗಲಿ, ಅದಕ್ಕೆ ನನ್ನ ವಿರೋಧ ಇಲ್ಲ. ಆದರೆ ಈ ಫ್ರೀ ಎಜುಕೇಷನನ್ನು ಮಾತ್ರ ಖಾಸಗಿಯವರು ನಡೆಸುವುದಕ್ಕೆ ಮಾತ್ರ ಬಿಡಬೇಡಿ. ಖಾಸಗಿಯ ಸಂಸ್ಥೆಗಳಿಗೆ ವಿದ್ಯಾಭ್ಯಾಸ ವ್ಯಾಪಾರ ವಸ್ತುವಾಗಿದೆ. ಈ ರಾಜ್ಯದಲ್ಲಿ ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆ. ಈ ರೀತಿ ಇದ್ದರೂ ಕೂಡ ಖಾಸಗೀಯವರು ಕೊಡುಗೆ ರೂಪದಲ್ಲಿ ಅಗಾಧವಾದ ಹೆಚ್ಚಿನ ಮೊತ್ತದ ಫೀಯನ್ನು ವಸೂಲು ಮಾಡುತ್ತಿದ್ದಾರೆ. ಕೊಡುಗೆ ಹೆಸರಿನಲ್ಲಿ ಸುಲಿಗೆ ಮಾಡುತ್ತಿರುವುದನ್ನು ಸರ್ಕಾರದವರು ತಪ್ಪಿಸಬೇಕು. ಇದರಿಂದ ಬಡಮಕ್ಕಳು ವಿದ್ಯಾಭ್ಯಾಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕೇವಲ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದ್ದೇವೆ ಎಂದು ಹೇಳಿದರೆ ಆಗುವುದಿಲ್ಲ. ವಿದ್ಯೆ ಎಲ್ಲರಿಗೂ ಸಿಗುವಂತೆ ಏರ್ಪಾಡು ಮಾಡಬೇಕು.

ಪಠ್ಯಪುಸ್ತಕಗಳ ರಾಷ್ಟ್ರೀಕರಣದ ಬಗ್ಗೆ ಹೇಳುವುದಾದರೆ, ಈ ಕಾರ್ಯ ಒಳ್ಳೆಯದಾದರೂ ಕೂಡ ಪರಿಷ್ಕೃತವಾದ ಪುಸ್ತಕಗಳನ್ನು ಪ್ರಕಟಣೆ ಮಾಡಬೇಕು. ಈ ಪುಸ್ತಕಗಳನ್ನು ಮಾರಾಟ ಮಾಡಲು ಆಯಾ ಜಿಲ್ಲೆಯ ವ್ಯಾಪಾರಿಗಳಿಗೆ ಅನುಮತಿ ಕೊಟ್ಟಿದ್ದೀರಿ. ಅದನ್ನು ತಪ್ಪಿಸಿ ಸರ್ಕಾರದವರೇ ನೇರವಾಗಿ ಸ್ಕೂಲ್‌ಗಳ ಮೂಲಕ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಕಟ್ಟಡಗಳ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನನ್ನ ಚುಕ್ಕೆ ಗುರುತಿನ ಒಂದು ಪ್ರಶ್ನೆಗೆ ಸರ್ಕಾರದವರು ಉತ್ತರ ಕೊಡುತ್ತಾ, ಮುನಿಸಿಪಾಲಿಟಿಯವರು ತಮ್ಮ ಭಾಗದ ಹಣವನ್ನು ಕೊಟ್ಟರೆ ತಮ್ಮ ಭಾಗದ ಹಣವನ್ನು ಸೇರಿಸಿ ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಬಹುಪಾಲು ಮುನಿಸಿಪಾಲಿಟಿಯವರ ಹತ್ತಿರ ಹಣ ಇರುವುದಿಲ್ಲ. ಸರ್ಕಾರದವರು ತಮ್ಮ ಭಾಗದ ಹಣವನ್ನು ಮುನಿಸಿಪಾಲಿಟಿಯವರು ಕೊಡುವವರೆಗೂ ಸಹ ತಮ್ಮ ಹಣ ಕೊಡುವುದಿಲ್ಲ ಇದು ಮದುವೆಯಾಗುವವರೆಗೂ ಹುಚ್ಚು ಬಿಡುವುದಿಲ್ಲ ಹುಚ್ಚು ಬಿಡುವವರೆಗೂ ಮದುವೆಯಾಗುವುದಿಲ್ಲ ಎಂಬಂತೆ ಇದೆ. ಈ ಕಾರಣದಿಂದ ಒಟ್ಟಿನಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿದೆ. ಈ ಬಗ್ಗೆ ನಾನು ಒಂದು ಸಲಹೆ ಮಾಡುತ್ತೇನೆ. ಏನೆಂದರೆ ರಾಜ್ಯದ ಗೃಹನಿರ್ಮಾಣ ಮಂಡಲಿಯವರು ಈ ಕಟ್ಟಡಗಳನ್ನು ಕಟ್ಟಿಸಿ ಆ ಬಗ್ಗೆ ಬರುವ ಖರ್ಚನ್ನು ಕಂತಿನ ರೂಪದಲ್ಲಿ ಮುನಿಸಿಪಾಲಿಟಿಯವರಿಂದ ವಸೂಲಿ ಮಾಡಬೇಕು. ಈ ವ್ಯವಸ್ಥೆಗೆ ಅನುಗುಣವಾದ ಕಾನೂನನ್ನು ಸರ್ಕಾರ ರಚಿಸಿ. ಸಹಾಯಮಾಡಲಿ.

ಶಾಲೆಗಳಿಗೆ ಮತ್ತು ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳುವ ಬಗ್ಗೆ ಒಂದು ಮಾತು ಹೇಳುತ್ತೇನೆ. ಕಾನ್ಸ್‌ಟಿಟ್ಯೂಷನ್‌ನಲ್ಲಿ ಎಜ್ಯುಕೇಷನಲಿ, ಸೋಷಿಯಲಿ ಅಂಡ್ ಇಕನಾಮಿಕಲಿ ಬ್ಯಾಕ್‌ವರ್ಡ್ ಆದವರಿಗೆ ಅಡ್ಮಿಷನ್ ಬಗ್ಗೆ ಮೊದಲು ಆದ್ಯತೆ ಕೊಡಬೇಕೆಂದು ನಿಯಮ ಇದೆ. ಈ ಕಾನೂನನ್ನು ಯಾವ ಸಂಸ್ಥೆಗಳೂ ಸಹಾ ಅನುಸರಿಸುತ್ತಿಲ್ಲ. ಹಣವಿರುವವರಿಗೆ ಮಾತ್ರ ಸೀಟ್‌ಗಳು ಸಿಗುತ್ತಿದೆ. ಈ ಕಾನೂನು ಸರ್ಕಾರೀ ಕಾಲೇಜುಗಳಲ್ಲಿ ಮಾತ್ರವಲ್ಲ, ಖಾಸಗೀ ಕಾಲೇಜುಗಳಲ್ಲಿಯೂ ಸಹ ಜಾರಿಗೆ ಬರುವಂತೆ ಸರ್ಕಾರದವರು ನೋಡಿಕೊಳ್ಳಬೇಕು.

ಪಿ.ಯು.ಸಿ. ತರಗತಿಗೆ ಪಾಠಹೇಳಿಕೊಡುವವರಿಗೆ 230 ರೂಪಾಯಿಗಳ ಸಂಬಳವನ್ನು ಪ್ರಾರಂಭದಲ್ಲಿ ಕೊಡುತ್ತಾರೆ. ಅದೇ 11ನೇ ಸ್ಟ್ಯಾಂಡರ್ಡ್‌ನವರಿಗೆ ಪಾಠ ಹೇಳಿಕೊಡುವವರಿಗೆ ಕಡಿಮೆ ಸಂಬಳವನ್ನು ಪ್ರಾರಂಭದಲ್ಲಿ ಕೊಡುತ್ತಾರೆ. ಎರಡು ಕಡೆಗಳಲ್ಲಿ ಪಾಠಹೇಳಿಕೊಡುವವರು ಪೋಸ್ಟ್‌ಗ್ರಾಜ್ಯುಯೆಟ್‌ಗಳೇ ಆಗಿದ್ದಾರೆ. ಪಿ.ಯು.ಸಿ. ಯಲ್ಲಿ ಪಾಠಹೇಳಿಕೊಡುವವರಿಗೆ ಲೆಕ್ಚರರ್ ಎಂದು ಕರೆಯುತ್ತಾರೆ. 11ನೇ ಸ್ಟ್ಯಾಂಡರ್ಡ್‌ನಲ್ಲಿ ಪಾಠ ಹೇಳಿಕೊಡುವವರಿಗೆ ಟೀಚರ್ ಎಂದು ಕರೆಯುತ್ತಾರೆ. ಕೇವಲ ಹೆಸರಿನ ಬದಲಾವಣೆಯಾದ ಮಾತ್ರಕ್ಕೆ ಕಡಿಮೆ ಸಂಬಳವನ್ನು ಕೊಡು

(ಶ್ರೀ ಎಚ್. ಎ. ಚನ್ನೇಗೌಡ)

ವುದು ಸರಿಯಲ್ಲ. ಈ "ಟೀಚರ್" ಗಳಿಗೂ ಸಹ ಸಮಾನವಾದ ವೇತನ ಕೊಟ್ಟು ಹುಮ್ಮಸಿನಿಂದ ಕೆಲಸಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊಠಾರಿ ಆಯೋಗದಲ್ಲಿ ಉಪಾಧ್ಯಾಯರುಗಳು ರಾಜಕೀಯದಲ್ಲಿ ಪ್ರವೇಶ ಮಾಡಬಹುದು ಎಂದು ಹೇಳಿವೆಯೆಂದು ಶ್ರೀಮಾನ್ ಶ್ರೀನಿವಾಸ್ ಅವರು ಹೇಳಿದರು. ಪಾಠಪ್ರವಚನಗಳಿಗೆ ಲೋಪ ಬರದಂತೆ ಉಪಾಧ್ಯಾಯರುಗಳು ಅವರ ಕರ್ತವ್ಯವನ್ನು ಮಾಡಿ ಬೇಕಾದರೆ ರಾಜಕೀಯ ದಲ್ಲಿ ಭಾಗವಹಿಸಲಿ. ಹಿಂದಿನ ಶಾನುಭೋಗರು ರಾಜಕೀಯದಲ್ಲಿ ಪ್ರವೇಶ ಮಾಡಿದ್ದಂತೆ ಉಪಾಧ್ಯಾಯರೂ ಸಹ ರಾಜಕೀಯವನ್ನೆ ಕಸಬನ್ನಾಗಿ ಇಟ್ಟುಕೊಂಡರೆ ನಮ್ಮ ಸಮಾಜ ಅಧಃಪತನಕ್ಕೆ ಹೋಗಬೇಕಾಗುತ್ತದೆ. ಅದಕಾರಣ ಸರ್ಕಾರದವರು ಈ ವಿಚಾರದಲ್ಲ ಕಾನೂನುಬದ್ಧವಾಗಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಪ್ರತಿಯೊಬ್ಬ ಉಪಾಧ್ಯಾಯರು ಕೂಡ ತನ್ನ ಜಿಲ್ಲೆಯಿಂದ 100 ಮೈಲಿಗಳ ದೂರದಲ್ಲಿ ಇರುವಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ಈ ಸಭೆಯ ಬಹುತೇಕ ಸದಸ್ಯರುಗಳು ಅಭಿಪ್ರಾಯಪಟ್ಟಿದ್ದಾರೆ. ಅದನ್ನ ನಾನೂ ಸಹ ಒಪ್ಪುತ್ತೇನೆ. ಏಕೆಂದರೆ ಉಪಾಧ್ಯಾಯರುಗಳನ್ನು ಅವರ ಹುಟ್ಟುಸ್ಥಳದ ಜಿಲ್ಲೆಯಲ್ಲೇ ಇಟ್ಟರೆ ವಿದ್ಯಾಮಟ್ಟ ಮುಂದು ವರೆಯುವುದಿಲ್ಲ. ರಾಜಕೀಯ ಹೆಚ್ಚುತ್ತದೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಟಿ. ಗೋವಿಂದರೆಡ್ಡಿ (ಮಧುಗಿರಿ).—ಸನ್ಮಾನ್ಯ ಸಭಾಪತಿಗಳೇ. ಮಾನ್ಯ ವಿದ್ಯಾ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ ಸರ್ಕಾರಕ್ಕೆ ಒಂದೆರಡು ಸಲಹೆ ಗಳನ್ನು ಕೊಡಬಯಸುತ್ತೇನೆ. ಕಡ್ಡಾಯ ಶಿಕ್ಷಣ ಕ್ರಮವು ಕಾನೂನಿನ ಕಡತದಲ್ಲಿ ಸೇರಿದೆಯೇ ವಿನಃ ಕಾರ್ಯರೂಪಕ್ಕೆ ಬಂದಿಲ್ಲ. ಶಾಲಾ ಉಪಾಧ್ಯಾಯರುಗಳು ಸೆನ್‌ಸಸ್ ಮಾಡಿದ ಹುಡುಗರ ಹೆಸರುಗಳು ಅಟೆಂಡೆನ್ಸ್ ರಿಜಿಸ್ಟರ್‌ನಲ್ಲಿ ದಾಖಲಾಗುತ್ತದೆ. ಆದರೆ ಹುಡುಗರು ಶಾಲೆಗೆ ಹಾಜ ರಾಗುವುದಿಲ್ಲ. ಈ ವಿಚಾರದಲ್ಲಿ ಸಂಬಂಧಪಟ್ಟ ಪೋಷಕರಿಗೆ ಯಾವ ವಿಧವಾದ ದಂಡವನ್ನು ವಿಧಿಸುವ ಕ್ರಮವನ್ನಾಗಲೀ ದಂಡಿಸುವುದನ್ನಾಗಲೀ ಸರ್ಕಾರದವರು ಇಟ್ಟುಕೊಂಡಿಲ್ಲ. ಈ ಕಾರಣದಿಂದ ಈ ಕಡ್ಡಾಯ ಶಿಕ್ಷಣ ವಿಫಲತೆ ಹೊಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ಪ್ರೈಮರಿ ಶಾಲೆ ಗಳಿಗೆ ಈ ಡಿಮ್ಯಾಂಡ್‌ನಲ್ಲಿ ಬಹುತೇಕ ಭಾಗದ ಹಣವನ್ನು ಇಟ್ಟಿದ್ದೀರಿ. ವಿದ್ಯಾಭ್ಯಾಸಕ್ಕೆ ಬಹಳ ಮುಖ್ಯವಾದ ಸ್ಥಳ ಎಂದರೆ ಪ್ರೈಮರಿ ಶಾಲೆಗಳು. ಆದರೆ ಈಗ ಈ ಪ್ರೈಮರಿ ಶಾಲೆಗಳು ಅಧೋ ಗತಿಗೆ ಹೋಗಿವೆ. ಉಪಾಧ್ಯಾಯರ ವೃತ್ತಿ ಎನ್ನುವುದು ಕೆಲವು ಕಡೆ ಇರುವ ಟೀಚರುಗಳಿಗೆ ಇದು ಒಂದು ಉಪ ಕಸಬಾಗಿದೆ. ಅವರು ತಮ್ಮ ವ್ಯಾಪಾರವೋ, ವ್ಯವಸಾಯವೋ ಮಾಡಿಕೊಂಡು ಶಾಲೆಯ ಕೆಲಸಗಳನ್ನು ಒಂದು ರೀತಿಯಾಗಿ ಉಪಕಸಬಿನಂತೆ ಮಾಡಿಕೊಂಡು ಸರಿಯಾಗಿ ಶಾಲೆ ಗಳಿಗೇ ಬರುತ್ತಿಲ್ಲ. ಆಯಾ ತಾಲ್ಲೂಕಿನ ಉಪಾಧ್ಯಾಯರುಗಳನ್ನು ಅಲ್ಲೇ ಇರುವಂತೆ ಮಾಡುವುದು ಒಳ್ಳೆಯದಲ್ಲ. ಹಳ್ಳಿಗಾಡಿನಲ್ಲಿ ಮನೆಗಳೇ ವಾಸಕ್ಕೆ ಸಿಗುವುದಿಲ್ಲವೆಂದು ಹೇಳುವ ಸಬೂಬು ನ್ಯಾಯ ವಲ್ಲ, ಇದು ಅಲ್ಲದೆ ಶಾಲೆಗಳಿಗೇ ಕಟ್ಟಡಗಳು ಇರುವುದಿಲ್ಲ. ತುಮಕೂರು ಜಿಲ್ಲೆಯಲ್ಲಿ ಹಳ್ಳಿಗಾಡಿ ನಲ್ಲಿ ಸರಕಾರದವರು ಶಾಲಾ ಕಟ್ಟಡಗಳನ್ನು ಕಟ್ಟಕೂಡದು ಎಂದು ಇದ್ದಾರೇನೋ ಎಂದು ಕಾಣು ತ್ತದೆ. ಇಲ್ಲಿ ತಾಲ್ಲೂಕಾ ಮಟ್ಟದಲ್ಲ ಇನ್ಸ್‌ಪೆಕ್ಟರುಗಳು ಹಾಗೂ ಅವರ ಕೈಕೆಳಗೆ ಇನ್ನಿತರ ಅಧಿಕಾರಿಗಳು ಎಂದು ಇದ್ದಾರೆ. ಆದರೆ ಎಲ್ಲ ಹಳ್ಳಿಗಳಲ್ಲೂ ಇರುವ ಶಾಲೆಗಳನ್ನು ಇವರು ಸರಿಯಾಗಿ ತನಿಖೆ ಮಾಡುತ್ತಾ ಇಲ್ಲ. ಇದರಿಂದ ಇಲ್ಲಿನ ಉಪಾಧ್ಯಾಯರುಗಳೂ ಕೂಡ ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲ. ಇದಕ್ಕಾಗಿ ತಾಲ್ಲೂಕಾ ಮಟ್ಟದಲ್ಲಿ ಒಂದು ಪ್ರತ್ಯೇಕ ತನಿಖಾ ವಿಭಾಗ ಎಂದು ಮಾಡಿ ಅದರ ಮೂಲಕ ಹಳ್ಳಿಗಾಡಿನಲ್ಲಿರುವ ಶಾಲೆಗಳನ್ನು ತನಿಖೆ ಮಾಡುವಂತೆ ಮಾಡಿದರೆ ಅದರಿಂದ ಸ್ವಲ್ಪ ಮಟ್ಟಿಗೆ ಅನುಕೂಲವಾಗುತ್ತದೆ.

ಇನ್ನು ಸರ್ಕಾರದವರು ಶಾಲೆಗಳಿಗೆ ಕೇರ್ ಸಹಾಯದಿಂದ ಹಾಲು ಮತ್ತು ಇನ್ನಿತರ ಪದಾರ್ಥಗಳನ್ನು ಹುಡುಗರಿಗೆ ಹಂಚುವ ವ್ಯವಸ್ಥೆ ಮಾಡಿದ್ದಾರೆ. ಆದರೆ ಇದನ್ನು ಉಪಾಧ್ಯಾ ಯರೇ ಮಾಡಬೇಕೆಂದು ಮಾಡುತ್ತಿದ್ದಾರೆ. ಇದು ಉಪಾಧ್ಯಾಯರುಗಳಿಗೆ ಒಂದು ಮುಖ್ಯ ಕಸಬಾಗಿದೆ. ಇದರಿಂದ ಯಾವ ಶಾಲೆಯಲ್ಲೂ ಉಪಾಧ್ಯಾಯರುಗಳು ಸರಿಯಾಗಿ ಪಾಠ ಹೇಳಿ ಕೊಡುತ್ತಿಲ್ಲ. ಮಕ್ಕಳಿಗೆ ಪಾಠಗಳನ್ನು ಪೂರ್ತಿಯಾಗಿ ಉಪಾಧ್ಯಾಯರು ಹೇಳಿಕೊಡದೇ ಇದ್ದರೆ ಮಕ್ಕಳಿಗೆ ಓದಲು ತುಂಬಾ ಕಷ್ಟವಾಗುತ್ತದೆ.

ಇನ್ನು ಪ್ರೈವೇಟು ಹೈಸ್ಕೂಲುಗಳು ಎಂದು ತೆರೆಯಲು ಸರಕಾರ ಅವಕಾಶ ಕೊಟ್ಟು ಇದರಲ್ಲಿ 25 ಜನ ಮಕ್ಕಳು ಇರಲೇಬೇಕು ಎಂದು ಮಾಡಿದ್ದಾರೆ. ಸರಕಾರದವರ ಮನೋಭಾವನೆ ಯೇನೋ ಒಳ್ಳೆಯದು. ಆದರೆ ಇಂದು ಹೈಸ್ಕೂಲು ಎಲ್ಲ ಕಡೆಯೂ ಜಾಸ್ತಿಯಾಗುತ್ತಿರುವಾಗ ಎಲ್ಲ ಕಡೆಯಲ್ಲೂ ಹೆಚ್ಚು ಮಂದಿ ಹುಡುಗರು ಬರಲು ಆಗುವುದಿಲ್ಲ. ಮಧುಗಿರಿಯಲ್ಲಿ ಮಹಿಳೆಯರಿಗಾಗಿ ಒಂದು ಖಾಸಗಿ ಹೈಸ್ಕೂಲು ತೆರೆದಿದ್ದೇವೆ. ಈಗ ಮಾನ್ಯ ಮಂತ್ರಿಗಳು ಇಲ್ಲಿ ಹೆಣ್ಣುಮಕ್ಕಳ ಅನುಕೂಲಕ್ಕಾಗಿ ಒಂದು ಹೈಸ್ಕೂಲು ಕಟ್ಟಡವನ್ನು ಒದಗಿಸಿಕೊಡಬೇಕು ಎಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ನಮ್ಮ ಕಡೆ ಇರುವ ಡಿ.ಇ.ಓ. ಆಫೀಸಿನಲ್ಲಿ ಬೇಕಾದಷ್ಟು ಅಧಿಕಾರಿಗಳಿದ್ದಾರೆ. ಇವರಿಗೆ ಒಬ್ಬರು ಅಸಿಸ್ಟೆಂಟ್ ಡಿ.ಇ.ಓ. ಎಂದಿದ್ದಾರೆ ಇವರ ಕೈಕೆಳಗೆ ಇನ್‌ಸ್ಪೆಕ್ಟರುಗಳು ಹೀಗೆ ಎಲ್ಲ ಅಧಿಕಾರಿಗಳನ್ನೂ ಒಂದೇ ಕಡೆ ಕೇಂದ್ರೀಕರಿಸಿ ಇಟ್ಟರೆ ಸರಿಯಾಗುವುದಿಲ್ಲ. ಒಂದೊಂದು ಸಬ್ ಡಿವಿಜನ್‌ನಲ್ಲಿ ಒಬ್ಬೊಬ್ಬರು ಅಧಿಕಾರಿಗಳನ್ನು ಇರುವಂತೆ ನೇಮಕ ಮಾಡಿದರೆ ಕೆಲಸಗಳು ಚೆನ್ನಾಗಿ ಮಾಡಲು ಅನುಕೂಲವಾಗುತ್ತದೆ.

ಇನ್ನು ಪಠ್ಯ ಪುಸ್ತಕಗಳ ರಾಷ್ಟ್ರೀಕರಣ ಎಂದು ಮಾಡುತ್ತಿದ್ದಾರೆ. ನಾನು ಹೇಳುವುದು ರಾಷ್ಟ್ರೀಕರಣ ಮಾಡುವುದಾದರೆ ಸರಿಯಾಗಿ ಮಾಡಿ ಇಲ್ಲದಿದ್ದರೆ ಇದನ್ನು ಕೈ ಬಿಡಿ. ರಾಷ್ಟ್ರೀಕರಣ ಮಾಡಿದರೆ ಉತ್ತಮವಾಗಿ ಕೆಲಸಗಳಾಗುತ್ತವೆ ಎಂದು ಇಲ್ಲಿ ಬಸ್ಸುಗಳ ರಾಷ್ಟ್ರೀಕರಣವನ್ನು ಮಾಡಿರುವುದು ನಮ್ಮ ಕಣ್ಣುಮುಂದೆ ಇದೆ. ಇದರಿಂದ ಯಾರಿಗೂ ಅನುಕೂಲವಾಗುತ್ತಿಲ್ಲ ಎನ್ನುವುದೂ ತಿಳಿದುಬರುತ್ತಿದೆ. ಹಾಗೆ ಇಂದು ಪಠ್ಯ ಪುಸ್ತಕಗಳನ್ನು ರಾಷ್ಟ್ರೀಕರಣ ಮಾಡುವಾಗ ಸರಿಯಾಗಿ ಮಾಡಬೇಕು. ಅನೇಕ ಲೋಪದೋಷಗಳು ಪುಸ್ತಕಗಳಲ್ಲಿ ಆಗಿವೆ ಎಂದು ಕೇಳುತ್ತೇವೆ. ಇವನ್ನೆಲ್ಲಾ ಸರಿಯಾಗಿ ಪರಿಶೀಲಿಸಿ ಸರಿಯಾದ ಪುಸ್ತಕಗಳನ್ನು ಮಾಡಲು ಪ್ರಯತ್ನ ಮಾಡಬೇಕು.

ಇನ್ನು ಹಾಸ್ಟಲ್‌ಗಳ ವಿಚಾರ. ಸಮಾಜ ಕಲ್ಯಾಣ ಇಲಾಖೆಯವರು ಹಾಗೂ ವಿದ್ಯಾ ಇಲಾಖೆಯವರು ಇಬ್ಬರೂ ಸೇರಿಕೊಂಡು ಅನೇಕ ಕಡೆ ಹಾಸ್ಟಲುಗಳನ್ನು ತೆರೆದಿರುತ್ತಾರೆ. ಇದರಲ್ಲಿ ಮಕ್ಕಳಿಗೆ ಜಾತೀಯತೆಯನ್ನು ಕಲಿಸುತ್ತಿದ್ದಾರೆ. ನಾನು ಇದರ ಬಗ್ಗೆ ಮಾನ್ಯ ಉಪಮಂತ್ರಿ ಗಳಿಗೂ ತಿಳಿಸುತ್ತಾ ಬರುತ್ತಿದ್ದೇನೆ. ನಿಮ್ನವರ್ಗದವರಿಗಾಗಿ ಅನೇಕ ಕಡೆ ಹಾಸ್ಟಲುಗಳನ್ನು ತೆರೆಯುತ್ತಿದ್ದಾರೆ. ಇದರಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯ ಹೆಸರಿನಲ್ಲಿ ಹಾಸ್ಟಲುಗಳು ಎಂದು ತೆರೆದು ಸರಕಾರದಿಂದ ಗ್ರಾಂಟುಗಳನ್ನು ಪಡೆಯಲು ಏರ್ಪಾಡು ಮಾಡಿದ್ದಾರೆ. ಕರ್ಣಾಟಕ ಆದಿದ್ರಾವಿಡ ಹಾಸ್ಟಲ್, ಬಣಜಾರಾ ಹಾಸ್ಟಲ್ ಎಂದು ಬೇರೆ, ವಾಲ್ಮೀಕಿ ಸಾರ್ವಜನಿಕ ವಿದ್ಯಾರ್ಥಿ ನಿಲಯ ಎಂದು ಬೇರೆ, ಕಾಳಿದಾಸ ಸಾರ್ವಜನಿಕ ಹಾಸ್ಟಲ್ ಎಂದು ಬೇರೆ, ಕನಕದಾಸ ಹಾಸ್ಟಲ್ ಎಂದು ಅನೇಕ ರೀತಿಯಾಗಿ ಹಾಸ್ಟಲುಗಳನ್ನು ಮಾಡಿಕೊಂಡು ಸರಕಾರದ ಗ್ರಾಂಟುಗಳನ್ನು ಪಡೆಯುತ್ತಿದ್ದಾರೆ. ಇದರ ಬಗ್ಗೆ ಸರಕಾರ ಸರಿಯಾದ ತನಿಖೆ ಮಾಡುತ್ತಿಲ್ಲ ಮತ್ತು ಕಟ್ಟು ನಿಟ್ಟಾದ ನಿಯಮಗಳನ್ನು ಅನುಸರಿಸಬೇಕೆಂದು ಸರಕಾರ ಅಪ್ಪಣೆ ಮಾಡಿ ಇದರಲ್ಲಿ ಆಗುತ್ತಿರುವ ಜಾತೀಯತೆಯನ್ನು ತಪ್ಪಿಸದೇ ಹೋದರೆ ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಶಾಲಾ ಮಕ್ಕಳಿಗೆ ಜಾತೀಯತೆಯನ್ನು ಕಲಿಸುವುದು ಸರಿಯಲ್ಲ. ಏಕರೂಪತೆಯಲ್ಲಿ ಎಲ್ಲ ಹಾಸ್ಟಲ್‌ಗಳು ಸರಿಯಾಗಿ ಕೆಲಸ ಮಾಡುವಂತೆ ಏರ್ಪಾಡು ಮಾಡಬೇಕು.

ಇನ್ನು ಸ್ಕಾಲರ್‌ಷಿಪ್‌ಗಳ ವಿಚಾರ. ನಾನೂ ಕೂಡ ಸ್ಕಾಲರ್‌ಷಿಪ್ ಕಮಿಟಿ ಮೆಂಬರಾಗಿ ರುವುದರಿಂದ ಇದರಲ್ಲಿರುವ ಕಷ್ಟಸುಖಗಳು ಗೊತ್ತಿದೆ. ನ್ಯಾಯವಾಗಿ ಯಾರಿಗೆ ಸ್ಕಾಲರ್‌ಷಿಪ್ ದೊರಕಬೇಕೋ ಅಂತಹವರಿಗೆ ಸಿಗುತ್ತಿಲ್ಲ. ಸಾಮಾನ್ಯವಾಗಿರುವ ಒಬ್ಬ ಎನ್. ಜಿ. ಓ. ರವರ ಮಕ್ಕಳಿಗೆ ಒಂದು ಸ್ಕಾಲರ್‌ಷಿಪ್ ಬೇಕು ಎಂದರೂ ಕೊಡುತ್ತಿಲ್ಲ. ಆರ್ಥಿಕವಾಗಿ ಹಿಂದುಳಿದಿರು ವವರು ಸರಕಾರದ ಕಡೆಗೆ ಅರ್ಜಿ ಹಾಕುವಾಗ ಅದನ್ನು ತಹಶೀಲುದಾರರ ಕಡೆಯಿಂದ ಸರ್ಟಿಫಿಕೇಟು ಮಾಡಿಸಿಕೊಂಡು ಬರಬೇಕು ಎಂದು ಇದೆ. ಆದರೆ ಎಲ್ಲ ಕಡೆಯಲ್ಲಿರುವ ತಹಶೀಲು ದಾರರುಗಳು ಸರ್ಟಿಫಿಕೇಟನ್ನು ಕೊಡುವುದೇ ಇಲ್ಲ. ಹೀಗೆ ಸರ್ಟಿಫಿಕೇಟು ಕೊಡದೇ ಇದ್ದರೆ ಸ್ಕಾಲರ್‌ಷಿಪ್‌ಗಳನ್ನು ಹೇಗೆ ತಾನೇ ಕೊಡಲು ಸಾಧ್ಯ? ಇದರ ಬಗ್ಗೆ ಸರಕಾರ ಗಮನ ಕೊಟ್ಟು ಬಡವರಾದ ಸಾಮಾನ್ಯಜನರಿಗೆ ಹಾಗೂ ಎನ್. ಜಿ. ಓ. ಗಳಿಗೂ ಸ್ಕಾಲರ್‌ಷಿಪ್‌ಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಇಲ್ಲಿ ಅನೇಕ ಜನರು ಆಗಲೇ ಹೇಳಿದಂತೆ ಸ್ಟೇಟ್ ಲೆವಲ್ ನಲ್ಲಿ ಒಬ್ಬರು ಡೈರೆಕ್ಟರು (ಡಿ. ಪಿ. ಐ.) ಎಂದು ಮಾಡಿರುವುದರಿಂದ ಇದು ಒಂದು ದೊಡ್ಡ ಸೆಕ್ರೆಟೇರಿಯಟ್ ಆಗಿದೆ. ಇಲ್ಲಿಗೆ ಬಂದ ಕಾಗದ ಪತ್ರಗಳ ವಿಲೇವಾರಿಯೂ ಕಷ್ಟವಾಗುತ್ತಿದೆ. ಆದುದರಿಂದ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಆಯಾ ಡಿಸ್ಟ್ರಿಕ್ಟ್‌ನಲ್ಲಿ ಒಬ್ಬೊಬ್ಬರು ಅಧಿಕಾರಿಗಳು ಇರುವಂತೆ ಮಾಡಿದರೆ ಸರಿಯಾಗುತ್ತದೆ. ಜಿಲ್ಲೆಗಳಲ್ಲಿ ಡಿ. ಇ. ಓ. ಎಂದು ಇರುವ ಒಬ್ಬ ಅಧಿಕಾರಿಗಳಿಂದಲೇ ಎಲ್ಲ

(ಶ್ರೀ ಜಿ. ಟಿ. ಗೋವಿಂದರೆಡ್ಡಿ)

ಕೆಲಸಗಳನ್ನು ಮಾಡಲು ಆಗುವುದಿಲ್ಲ. ಇದರ ಕಡೆಗೆ ಗಮನ ಕೊಟ್ಟು ಸರಕಾರ ಸರಿಯಾದ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಅಗ್ರಿಕಲ್ಚರು ಕಾಲೇಜು ಎಂದು ಮಾಡಿದ್ದಾರೆ. ಇದರೊಳಗೆ ರೈತರ ಮಕ್ಕಳಿಗೂ ಹೆಚ್ಚು ಅವಕಾಶವಿರುವಂತೆ ಮಾಡಬೇಕು.

ಇಷ್ಟು ಮಾತಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಇಲ್ಲಿರುವ ಡಿಮ್ಯಾಂಡುಗಳನ್ನು ವಿರೋಧ ಮಾಡುತ್ತಾ ಕೆಲವು ವಿಷಯಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಇವೊತ್ತು ಸರಕಾರದಿಂದ ಸಹಾಯಧನ ಪಡೆಯುತಕ್ಕಂತಹ ಖಾಸಗೀ ಶಾಲೆಗಳ ಬಗ್ಗೆ ಅನೇಕ ಮಿತ್ರರುಗಳು ಹೇಳಿದ್ದಾರೆ. ನಾನೂ ಕೂಡ ಕೆಲವು ಖಾಸಗೀ ಶಾಲೆಗಳನ್ನು ನೋಡಿದ್ದೇನೆ. ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಲಂಚ ಕೊಡುತ್ತಾರೆ ಎಂದು ನಾನು ತಿಳಿದಿದ್ದೆ. ಆದರೆ ಇಂದು ವಿದ್ಯಾ ಇಲಾಖೆಯಲ್ಲೂ ಲಂಚವನ್ನು ಹೇಗೆ ಕೊಡೆಯುತ್ತಾರೆ ಎನ್ನುವುದನ್ನು ಹೋಗಿ ನೋಡಿ ತಿಳಿದುಕೊಂಡು ಬಂದಿದ್ದೇನೆ. ಇವರಿಗೆ ಬಿಲ್ಡಿಂಗು ಗ್ರಾಂಟು ಎಂದು ಕೊಡುತ್ತಾರೆ, ಹಾಗೂ ಇನ್ನಿತರ ಸಹಾಯಗಳನ್ನು ಕೊಡುತ್ತಿದ್ದಾರೆ, ಇವರು ಯಾವ ರೀತಿ ಗ್ರಾಂಟುಗಳನ್ನು ಪಡೆದು ಟೀಚರುಗಳಿಗೆ ಸಂಬಳ ಕೊಡುತ್ತಿದ್ದಾರೆ ಇವರಿಗೆ ಪೂರ್ತಿ ಸಂಬಳ ಕೊಡುತ್ತಿದ್ದಾರೆಯೋ ಇಲ್ಲವೋ ಎನ್ನುವುದನ್ನು ಒಬ್ಬರು ನನಗೆ ಒಂದು ಕಥೆ ಹೇಳಿದಂತೆ ಹೇಳಿದಾಗ ಇದರ ವಿಚಾರ ಅರ್ಥವಾಯಿತು. ಇದರಲ್ಲಿ ಏನೇನು ನಡೆಯುತ್ತಿದೆ ಎನ್ನುವುದನ್ನು ಹೇಳುವುದಕ್ಕೆ ನಾನು ಸರಕಾರಕ್ಕೆ ಒಂದು ಸಲಹೆ ಕೊಡುತ್ತೇನೆ. ಮಾನ್ಯ ಶಂಕರಗೌಡರು ನನ್ನ ಜೊತೆಯಲ್ಲಿ ಬರಲಿ, ನಾನೇ ಅವರನ್ನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಈಗ ಇರುವ ಖಾಸಗೀ ಶಾಲೆಗಳನ್ನೆಲ್ಲಾ ರದ್ದುಮಾಡಿ ರಾಷ್ಟ್ರೀಕರಣಮಾಡಿ ಸರಕಾರದವರೇ ಎಲ್ಲವನ್ನೂ ನಡೆಸಿದರೆ ಇಂತಹ ತೊಂದರೆಗಳು ಸ್ವಲ್ಪವಾದರೂ ತಪ್ಪುತ್ತವೆ. ಖಾಸಗೀ ಶಾಲೆಗಳವರು ಯಾವ ರೀತಿ ಹಣ ಮಾಡಿದ್ದಾರೆ ಎನ್ನುವುದಕ್ಕೆ ಮತ್ತು ಇಲ್ಲಿ ಹಣ ಹೇಗೆ ದುರ್ವಿನಿಯೋಗವಾಗುತ್ತಾ ಇದೆ ಎನ್ನುವುದಕ್ಕೆ ಕೆಲವು ಕಡೆ ಇರುವ ಖಾಸಗೀ ಶಾಲೆಗಳವರ ಉಪಕರಣಗಳು ಹೇಗಿವೆ, ಅವರ ಮನೆಗಳು ಹೇಗಿವೆ ಎನ್ನುವುದನ್ನು ನೋಡಿದರೆ ಚೆನ್ನಾಗಿ ಗೊತ್ತಾಗುತ್ತದೆ. ಇದನ್ನು ಇತರ ಕಡೆಗಳಲ್ಲಿರುವ ಶಾಲೆಗಳಿಗೆ ಕಂಪೇರು ಮಾಡಿದರೆ ಆಗ ಇದು ಚೆನ್ನಾಗಿ ತಿಳಿಯುತ್ತದೆ. ಕೆಲವು ಕಡೆ ಇರುವ ಶಾಲೆಗಳು ಹೇಗಿವೆ ಎಂದರೆ ಕೋಳಿ ಗೂಡಿನಂತಹ ಕಟ್ಟಡಗಳಲ್ಲಿವೆ. ಇವಕ್ಕೆ ಯಾವ ಆಟದ ಮೈದಾನವಾದರೂ ಇಲ್ಲ. ಹಾಗೂ ಹುಡುಗರು ಕುಳಿತುಕೊಳ್ಳಲು ಸ್ಥಳವೇ ಇಲ್ಲ. ಇಷ್ಟು ಹೊಲಸಾಗಿರುವ ಶಾಲೆಗಳಿಗೂ ಸರಕಾರ ಸಹಾಯ ಮಾಡುತ್ತಿದ್ದಾರೆ. ಇಂತಹ ಕೋಳಿಗೂಡಿನ ವಿದ್ಯಾ ಶಾಲೆಗಳು ಎಲ್ಲಿವೆ ಎನ್ನುವುದನ್ನು ನೋಡಬೇಕಾದರೆ ನನ್ನೊಡನೆ ಬನ್ನಿ, ಕರೆದುಕೊಂಡು ಹೋಗಿ ತೋರಿಸುತ್ತೇನೆ. ವ್ಯವಸ್ಥಾಪಕರುಗಳ ಮನೆ ಸುಸಜ್ಜಿತವಾಗಿದ್ದು, ಟೆಲಿಫೋನಿನ ಸೌಕರ್ಯವಿರುತ್ತದೆ. ಅವರು ಫಿಯಟ್ ಕಾರು ಇಟ್ಟುಕೊಂಡು ವೈಭವದ ಜೀವನ ನಡೆಸುತ್ತಾರೆ. ಅವರ ಹೆಂಗಸರ ಮೈಮೇಲೆ ವಜ್ರ ವೈಢೂರ್ಯಗಳ ಆಭರಣಗಳಿವೆ. ಖಾಸಗಿ ಶಾಲೆಗಳನ್ನು ನಡೆಸುವವರು ವೈಭವದ ಜೀವನವನ್ನು ಮತ್ತು ಮೋಜಿನ ಜೀವನವನ್ನು ನಡೆಸುತ್ತಿದ್ದಾರೆ. ಅವರ ಅಧೀನದಲ್ಲಿ ನಡೆಯುತಕ್ಕ ಖಾಸಗಿ ಶಾಲೆಗಳಲ್ಲಿ ನೂರಕ್ಕೆ 80 ಭಾಗ ವ್ಯಾಪಾರ ಮಾಡುವುದಕ್ಕೆ ಹೊರಟಿವೆ. ನಾನು ಮಾನ್ಯ ಮಂತ್ರಿಗಳನ್ನು ಕೈ ಮುಗಿದು ಕೇಳಿಕೊಳ್ಳುತ್ತೇನೆ. ಸರ್ಕಾರದವರಿಗೆ ಸ್ವಲ್ಪಮಟ್ಟಿಗೆ ತೊಂದರೆಯಾಗಬಹುದು, ಖಾಸಗಿ ಶಾಲೆಗಳನ್ನೆಲ್ಲ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು. ಖಾಸಗಿ ಶಾಲೆಗಳ ವ್ಯವಸ್ಥಾಪಕರು ಲಕ್ಷಾಂತರ ರೂಪಾಯಿ ಲೂಟಿ ಮಾಡಿ ತಿಂದಿದ್ದಾರೆ, ತಿನ್ನುತ್ತಿದ್ದಾರೆ. ಅನೇಕ ಶಾಲೆಗಳಿಗೆ ಕೊಡುವಂಥ ಗ್ರಾಂಟ್ ಆ ಶಾಲೆಯ ಉದ್ಧಾರಕ್ಕಾಗಿ ಖರ್ಚಾಗದೆ, ಆ ಶಾಲೆಯ ಭವಿಷ್ಯದ ಕಡೆಗೆ ಗಮನ ಕೊಡದೆ ತಮ್ಮ ತಮ್ಮ ಭವಿಷ್ಯಕ್ಕೆ ಖರ್ಚು ಮಾಡಿಕೊಳ್ಳುತ್ತಿದ್ದಾರೆ.

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ.—ಎಷ್ಟೋ ಶಾಲೆಗಳು ಚೆನ್ನಾಗಿ ನಡೆಯುತ್ತಿವೆ. ಎಲ್ಲ ಶಾಲೆಗಳೂ ಚೆನ್ನಾಗಿ ನಡೆಯುತ್ತಿಲ್ಲ ಎಂದು ಹೇಳಬಾರದು.

ಶ್ರೀ ವಾಟಾಳ್ ನಾಗರಾಜ್.—ನಾನು ಹೇಳುತ್ತಿರುವುದು ನೂರಕ್ಕೆ 80 ಭಾಗ ಈ ರೀತಿ ಅವ್ಯವಹಾರ ನಡೆಯುತ್ತಿದೆ ಎಂದು. ನಾನು ಅನೇಕ ಸಾರಿ ವಿದ್ಯಾ ಇಲಾಖೆಯ ಡೈರೆಕ್ಟರಿಗೆ

ಹೇಳಿದೆ. ಯಾರಾದರೂ ವ್ಯವಸ್ಥಾಪಕರುಗಳ ಮನೆಗೆ ಹೋಗಿ ನೋಡಿದರೆ ಮನೆಯಲ್ಲಿ ಕಾಲಿಂಗ್ ಬೆಲ್, ಸೋಫ ಸೆಟ್‌ಗಳು, ಇವುಗಳನ್ನು ಪಡೆದು ವೈಭವವಾದ ಜೀವನವನ್ನು ಅವರು ನಡೆಸ ತಕ್ಕದ್ದನ್ನೂ, ಮತ್ತು ಶಾಲೆಗಳಿರುವ ಪರಿಸ್ಥಿತಿಯನ್ನೂ ಹೋಲಿಸಿ ನೋಡಿದರೆ ಅವೆರಡರಲ್ಲಿರುವ ತಾರತಮ್ಯ ಅಜಗಜಾಂತರವಾಗಿದೆ. ವ್ಯವಸ್ಥಾಪಕರು ಶಾಲೆಗಳನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಯಾವ ಪವಿತ್ರವಾದ ಉದ್ದೇಶವನ್ನಿಟ್ಟುಕೊಂಡು ಈ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾಯಿವೋ ಆ ರೀತಿ ನಡೆಯುತ್ತಿಲ್ಲ. ಸಾರಾಯಿ ಅಂಗಡಿಗಳು ಯಾವ ರೀತಿಯಲ್ಲಿ ಕಾಣುತ್ತವೆಯೋ ಆ ಮಟ್ಟಕ್ಕೆ ಈ ಶಾಲಾ ಕಟ್ಟಡಗಳು ಬಂದಿವೆ. ಸರ್ಕಾರದವರು ಎಲ್ಲ ಶಾಲೆಗಳನ್ನೂ ನಡೆಸಬೇಕಾದರೆ ಕಷ್ಟವಾಗುತ್ತದೆ, ಅವರಿಗೆ ತೊಂದರೆ ಇದೆ. ಆದರೂ ಚಿಂತೆ ಇಲ್ಲ. ಸರ್ಕಾರದವರೇ ರಾಷ್ಟ್ರೀಕರಣ ಮಾಡಿ ಎಲ್ಲ ಶಾಲೆಗಳನ್ನೂ ತಮ್ಮ ಆಡಳಿತಕ್ಕೆ ತೆಗೆದುಕೊಂಡು ತಾವೇ ನಡೆಸಬೇಕು ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡಿ ಒತ್ತಾಯ ಮಾಡುತ್ತೇನೆ.

ನಮ್ಮ ಸರ್ಕಾರ ಮೂರು ಕೋಟಿ ರೂಪಾಯಿಗಳವರೆಗೂ ವಿಶ್ವವಿದ್ಯಾಲಯಗಳಿಗೆ ಕೊಡುತ್ತಿದೆ. ಇದರ ಬಗ್ಗೆ ಕೆಲವು ವಿಷಯಗಳನ್ನು ತಿಳಿಸಬೇಕಾಗಿದೆ. ವಿಸಿಟಿಂಗ್ ಪ್ರೊಫೆಸರ್ಸ್ ಎಂದು ಅಮೆರಿಕಾದಿಂದ ಮತ್ತು ವಿದೇಶಗಳಿಂದ ಬರುತ್ತಾರೆ. ಶಾಲೆಗಳಲ್ಲಿ ಹುಡುಗರು, ಹುಡುಗಿಯರು ಇರುವಾಗ, ಇವರು ಪಾಠ ಹೇಳುವುದಕ್ಕೆ ಹೋದಾಗ, ಸಮಾಜ ವಿಜ್ಞಾನದ ಬದಲು ಸಮಾಜ ಸಂಪರ್ಕದ ಬಗ್ಗೆ ಬೋಧನೆ ಮಾಡುತ್ತಾರೆ. ನಮ್ಮ ದೇಶದಲ್ಲಿ ಈ ರೀತಿ ಬೇರೆ ಬೇರೆ ಕುಳಿತು ಕೊಳ್ಳುವುದಿಲ್ಲ, ಗಂಡಸರು ಹೆಂಗಸರು ಪಕ್ಕ ಪಕ್ಕದಲ್ಲಿಯೇ ಕುಳಿತುಕೊಳ್ಳುತ್ತಾರೆ, ನಿಮ್ಮಲ್ಲಿನ ರೀತಿ ಸರಿಯಿಲ್ಲ, ಎಲ್ಲಾ ಒಟ್ಟಿಗೆ ಇರಬೇಕು, ಭೇದ ಭಾವನೆಯನ್ನು ಬಿಡಬೇಕು, ಈ ರೀತಿಯಾಗಿ ನಮ್ಮ ಭಾರತ ಸಂಸ್ಕೃತಿಗೆ ಧಕ್ಕೆ ತರತಕ್ಕ ರೀತಿಯಲ್ಲಿ, ಮತ್ತು ಸಣ್ಣ ವಯಸ್ಸಿನ ಹುಡುಗರ ಮನಸ್ಸಿನ ಮೇಲೆ ಪರಿಣಾಮವಾಗುವ ಹಾಗೆ ವಿಷಯಗಳನ್ನು ಹೇಳುತ್ತಿದ್ದಾರೆ ಇದು ಬಹಳ ಅನ್ಯಾಯ. ಇತರ ದೇಶಗಳ ಸಂಸ್ಕೃತಿಯನ್ನು ನಮ್ಮ ದೇಶದ ಮುಂದಿನ ಪೀಳಿಗೆಗೆ ಬೋಧನೆ ಮಾಡುತ್ತಿದ್ದಾರೆ. ಇದನ್ನು ಮಾನ್ಯ ಸೆನೆಟ್ ಸದಸ್ಯರೊಬ್ಬರು ಹೇಳಿದರು. ಹೊರ ದೇಶಗಳಿಂದ ಬಂದವರು ಪಾಠ ಹೇಳುವುದಕ್ಕೆ ಬಂದಿದ್ದಾರೆಯೇ ಅಥವಾ ಏಕೆ ಬಂದಿದ್ದಾರೆ ಎನ್ನುವುದು ಗೊತ್ತಿಲ್ಲ. ಅಮೆರಿಕಾದಿಂದ ಬರುವವರ ಬಗ್ಗೆ ನಾವು ನಿಮಿಷ ನಿಮಿಷಕ್ಕೂ ಅನುಮಾನವನ್ನು ಕಾಣತಕ್ಕ ಸಂದಿಗ್ಧ ಪರಿಸ್ಥಿತಿ ಬಂದಿವೆ. ಅಧ್ಯಾಪಕರಾಗಿ ಬರುವವರು ಗುಪ್ತ ಚಾರಿಗಳಿರಬಹುದು, ಅಮೇರಿಕದ ಏಜೆಂಟರಿರಬಹುದು. ನೂರೆಂಟು ತರಹ ಜನ ಅಲ್ಲಿಂದ ಬರುತ್ತಾರೆ. ಇವರ ಬಗ್ಗೆ ಸರ್ಕಾರ ಬಹಳ ಎಚ್ಚರಿಕೆಯನ್ನು ವಹಿಸಿ, ಇಂಥವರು ಯಾರಿಂದಾದರೂ ಯಾವುದೇ ರೀತಿಯಲ್ಲಿ ನಮ್ಮ ಸಮಾಜಕ್ಕೆ, ಈ ದೇಶಕ್ಕೆ ಅನ್ಯಾಯವಾಗತಕ್ಕ ಸಂಭವವಿದ್ದರೆ ಮತ್ತು ನಮಗೂ ತೊಂದರೆ ಬರುವುದಿದ್ದರೆ ಅಂಥವರ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಒಂದು ಖಾಸಗಿ ಹೈಸ್ಕೂಲಿನಲ್ಲಿ 30 ಜನ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿದ್ದು ಅವರೆಲ್ಲರೂ ಫೇಲ್ ಆಗಿದ್ದಾರೆ. ಇದಕ್ಕಾಗಿ ಅವರಿಗೆ ಗ್ರಾಂಟ್ ನಿಲ್ಲಿಸಲಿಲ್ಲ. ಗ್ರಾಂಟ್ ಸಲೀಸಾಗಿ ಬರುತ್ತಿದೆ. ಈ ಶಾಲೆ ಸೆಂಟ್‌ಪರ್ಸೆಂಟ್ ರಿಸಲ್ಟ್ ಕೊಟ್ಟಿದೆ. ಈ ರೀತಿಯಲ್ಲಿ ನಡೆಯುತ್ತಿದೆ. ಬೆಂಗಳೂರು ನಗರದಲ್ಲಿ ಯಾವ ಗಲ್ಲಿಯಲ್ಲಿ ನೋಡಿದರೂ ಒಂದು ಖಾಸಗಿ ಶಾಲೆಯನ್ನು ಪ್ರಾರಂಭ ಮಾಡಿದ್ದಾರೆ.

ಇದೇ ರೀತಿಯಲ್ಲಿ ಲೈಬ್ರರಿಗಳೂ ನಡೆಯುತ್ತಿವೆ. ಖಾಸಗಿಯವರು ಲೈಬ್ರರಿಗಳನ್ನು ನಡೆಸುವುದಕ್ಕೆ ಗ್ರಾಂಟ್ ಕೊಡುತ್ತಾರೆ. ಇದು ಏನಾಗಿದೆ ಎಂದರೆ ಅವರು ಸ್ವಲ್ಪ ಪುಸ್ತಕಗಳನ್ನು ಇಟ್ಟುಕೊಂಡಿದ್ದಾರೆ. ಒಂದು ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡು ಅದರಲ್ಲಿ ತಮ್ಮಲ್ಲಿರುವ ಪುಸ್ತಕಗಳು ಮತ್ತು ಕೆಲವು ಪತ್ರಿಕೆಗಳನ್ನು ಜೋಡಿಸಿಟ್ಟು, ಸಂಬಂಧಪಟ್ಟವರನ್ನು ಕರೆದುಕೊಂಡು ಬಂದು ಅವರನ್ನು ಒಪ್ಪಿಸಿ ಅದಕ್ಕೆ ಗ್ರಾಂಟ್ ಪಡೆಯುತ್ತಾರೆ. ಪುನಃ ಅದೇ ಪುಸ್ತಕಗಳನ್ನು ತೆಗೆದುಕೊಂಡು ಬೇರೊಂದು ಪ್ರದೇಶಕ್ಕೆ ಹೋಗಿ ಅಲ್ಲಿ ಒಂದು ಕೊಠಡಿಯನ್ನು ಬಾಡಿಗೆಗೆ ಹಿಡಿದು ಅಲ್ಲಿಯೂ ಗ್ರಾಂಟ್ ಪಡೆಯಲು ಪ್ರಯತ್ನ ಮಾಡಿ ಗ್ರಾಂಟ್ ತೆಗೆದುಕೊಳ್ಳುತ್ತಾರೆ. ಹೀಗೆ ಒಬ್ಬರೇ ಹತ್ತಾರು ಕಡೆ ತಮ್ಮಲ್ಲಿ ಇರುವ ಕೆಲವೇ ಪುಸ್ತಕಗಳ ಪ್ರದರ್ಶನ ಮಾಡಿ ಅಷ್ಟೂ ಕಡೆಯೂ ಗ್ರಾಂಟ್ ಪಡೆಯುತ್ತಾರೆ. ಕೊನೆಗೆ ಪುಸ್ತಕಗಳು ಯಾವುದೋ ಒಂದು ಕಡೆ ಇರುತ್ತವೆ. ಉಳಿದ ಕಡೆ ಅವರು ಗ್ರಾಂಟ್ ಮಾತ್ರ ಪಡೆಯುತ್ತಿರುತ್ತಾರೆ. ಕೆಲವು ಅಧಿಕಾರಿಗಳು ತಮ್ಮ ಹೆಂಡತಿ ಹೆಸರಿನಲ್ಲಿ ಖಾಸಗಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಡಿಸ್ಮಿಸ್ ಆದ ವಿದ್ಯಾ ಇಲಾಖೆಯ ಅಧಿಕಾರಿಗಳು ಈವೊತ್ತಿನ ದಿವಸ ನಮ್ಮ ಸರ್ಕಾರದಿಂದ ಲಕ್ಷಾಂತರ ರೂಪಾಯಿ ಗ್ರಾಂಟ್ ಪಡೆಯುತ್ತಿದ್ದಾರೆ. ಎಷ್ಟೋ ಕಡೆ ಕೆಲಸದಿಂದ ತೆಗೆದುಹಾಕಲ್ಪಟ್ಟ ಗುಮಾಸ್ತರು ಕೂಡ ಖಾಸಗಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಮಾನ್ಯ ವಿದ್ಯಾ ಮಂತ್ರಿಗಳಾದ ಶಂಕರಗೌಡರು ಬಹಳ ದಕ್ಷತೆಯಿಂದ ಈ

(ಶ್ರೀ ವಾಟಾಳ್ ನಾಗರಾಜ್)

ಇಲಾಖೆಯ ವ್ಯವಹಾರಗಳನ್ನು ನಡೆಸುತ್ತಾರೆ ಎಂದು ತಿಳಿದುಕೊಂಡಿದ್ದೆವು. ಅವರು ಈ ಇಲಾಖೆಯಲ್ಲಿ ನಡೆಯುವ ವ್ಯವಹಾರಗಳ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕಾಗಿದೆ.

ಖಾಸಗಿ ಶಾಲೆಯ ಉಪಾಧ್ಯಾಯರುಗಳಿಗೆ ಸರ್ಕಾರದವರು ಚೆಕ್ ಮೂಲಕ ಸಂಬಳವನ್ನು ಕೊಡುತ್ತಿದ್ದಾರೆ. ಒಂದು ಘನವಾದ ಉದ್ದೇಶದಿಂದ ಈ ರೀತಿ ಚೆಕ್ ಮೂಲಕ ಸಂಬಳದ ಪಾವತಿ ಮಾಡುತ್ತ ಇದ್ದಾರೆ. ಸಂಬಳದ ಚೆಕ್ಕನ್ನು ಬ್ಯಾಂಕಿನಿಂದ ಕ್ಯಾಷ್ ಮಾಡಿಸಿಕೊಂಡ ಮೇಲೆ ತಾನು ಕೆಲಸ ಮಾಡುವ ಸಂಸ್ಥೆಗೆ ಇಷ್ಟು ಹಣ ಕೊಡಬೇಕು. ಆ ರೀತಿ ಕೊಡಲಿಲ್ಲವೆಂದರೆ ಶಾಲೆಯಲ್ಲಿ ಒಂದಲ್ಲ ಒಂದು ರೀತಿಯಿಂದ ತೊಂದರೆ ಕೊಡುತ್ತಾರೆ. ಆ ತೊಂದರೆಯನ್ನು ತಡೆಯಲಾರದೆ ಅವರು ಕೆಲಸ ಬಿಟ್ಟು ಹೋಗಬೇಕಾಗುತ್ತದೆ. ಇಷ್ಟೇ ಅಲ್ಲದೆ ಖಾಸಗಿ ಶಾಲೆಗಳಲ್ಲಿ ಅನೇಕ ವಿಧವಾದ ದುರಂತಗಳು ನಡೆಯುತ್ತವೆ. ಖಾಸಗಿ ಶಾಲೆಗಳಲ್ಲಿ ಉಪಾಧ್ಯಾಯಿನಿಯರಾಗಿ ಕೆಲಸ ಮಾಡುವವರು ತಮ್ಮ ಶೀಲವನ್ನು ಕಳೆದುಕೊಳ್ಳತಕ್ಕ ಪರಿಸ್ಥಿತಿ ಅನೇಕ ಕಡೆ ಇದೆ. ಈ ದುರಂತವನ್ನು ಸಂಪೂರ್ಣವಾಗಿ ತಪ್ಪಿಸತಕ್ಕ ಒಂದೇ ಒಂದು ಮಾರ್ಗ ಎಂದರೆ ಖಾಸಗಿ ಶಾಲೆಗಳನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಿ ದಕ್ಷತೆಯಿಂದ ನಡೆಸುವುದು ಒಳ್ಳೆಯದು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿ, ನನ್ನ ಮಾತನ್ನು ಮುಗಿಸುತ್ತೇನೆ.

6-30 P.M.

† ಶ್ರೀ ಆರ್. ದಯಾನಂದಸಾಗರ್ (ಚಾಮರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ನೆಚ್ಚಿನ ಮಿತ್ರರಾದ ವಿದ್ಯಾ ಮಂತ್ರಿಗಳು ವಿದ್ಯಾ ಬೇಡಿಕೆಯನ್ನು ಸಭೆಯ ಮುಂದಿಟ್ಟು 46 ಕೋಟಿ 17 ಲಕ್ಷ 90 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಈ ಮಾನ್ಯ ಸಭೆಯನ್ನು ಕೇಳುತ್ತಿದ್ದಾರೆ. ಇದು ಬಹಳ ಸಂತೋಷದ ಸಂಗತಿ. ಬಹಳ ಸಂತೋಷದಿಂದ ನಾನಾದರೂ ಕೂಡ ಈ ಬೇಡಿಕೆಯನ್ನು ಸ್ವಾಗತಿಸುತ್ತೇನೆ. ವಿದ್ಯಾಭ್ಯಾಸ ದೇಶದ ಪ್ರಗತಿಯ ಅಡಿಪಾಯ. ಯಾವ ದೇಶದಲ್ಲಿ ಬುದ್ಧಿವಂತರು, ವಿದ್ಯಾವಂತರು, ಇರುತ್ತಾರೋ ಆ ದೇಶದಲ್ಲಿ ಪ್ರಗತಿ ಯಾವತ್ತೂ ಇರಲು ಸಾಧ್ಯ. ಜರ್ಮನಿ, ಅಮೇರಿಕ, ಜಪಾನ್ ಮುಂತಾದ ದೇಶಗಳಲ್ಲಿ ಪ್ರಾಜ್ಞರಿದ್ದಾರೆ, ಬುದ್ಧಿವಂತರಿದ್ದಾರೆ, ತಿಳಿದವರಿದ್ದಾರೆ, ಸೈನ್ಸ್, ಮೆಟಲರ್ಜಿ ಮುಂತಾದ ವಿಷಯಗಳಲ್ಲಿ ಹೆಚ್ಚಿನ ಪರಿಶ್ರಮ ಪಡೆದು ದೇಶಕ್ಕೆ ಕೀರ್ತಿ ತಂದಿದ್ದಾರೆ. ದೇಶದ ಸಂಪತ್ತನ್ನು ಹೆಚ್ಚಿಸಿದ್ದಾರೆ. ಅವರಿಂದ ದೇಶೋದ್ಧಾರವಾಗಿದೆ, ಉಜ್ವಲವಾದ ಇತಿಹಾಸ ಅಲ್ಲಿ ಬೆಳೆಯುತ್ತಿದೆ. ಈ ರೀತಿಯಲ್ಲಿ ಅದ್ಭುತವಾಗಿರುವ ಪ್ರಗತಿಯನ್ನು ಆ ರಾಷ್ಟ್ರಗಳಲ್ಲಿ ಸಾಧಿಸಿದ್ದಾರೆ. ನಾವೂ ಕೂಡ ಈ ದೇಶದಲ್ಲಿ ಹಾಗೆ ಮಾಡಲು 46 ಕೋಟಿ ಕೇಳಿದರೆ ಬೇಡವೆಂದು ಹೇಳುವುದಿಲ್ಲ; ಇನ್ನೂ 10 ಕೋಟಿ ಕೇಳಿದರೂ ಕೂಡ ಕೊಡಬಹುದು. ಈ ಸಂಸ್ಥಾನದಲ್ಲಿ ವಿದ್ಯಾಭ್ಯಾಸದಲ್ಲಿ ಸಾಕಾದಷ್ಟು ಪ್ರಗತಿಯಾಗಿದೆ. ಇದನ್ನು ಅತಿಶಯೋಕ್ತಿಯೆಂದು ಹೇಳುವುದಿಲ್ಲ. ನಾನು ವಿದ್ಯಾರ್ಥಿಯಾಗಿದ್ದಾಗ ನಮ್ಮ ಹಳೇ ಮೈಸೂರಿನಲ್ಲಿ ಒಂದೇ ಒಂದು ವಿಶ್ವವಿದ್ಯಾನಿಲಯ ಎರಡು ಕಾಲೇಜುಗಳು, ಒಂದು ಸೆಂಟ್ರಲ್ ಕಾಲೇಜು, ಇನ್ನೊಂದು ಮಹಾರಾಜಾ ಕಾಲೇಜು ಮಾತ್ರ ಇತ್ತು. ಆರ್ಟ್ಸ್ ಸಬ್ಜೆಕ್ಟ್ ಓದಬೇಕಾದರೆ ಮೈಸೂರಿನ ಮಹಾರಾಜ ಕಾಲೇಜಿಗೆ ಹೋಗಬೇಕಾಗಿತ್ತು, ಸೈನ್ಸ್ ಅಭ್ಯಾಸಮಾಡಬೇಕಾದರೆ ಬೆಂಗಳೂರು ಸೆಂಟ್ರಲ್ ಕಾಲೇಜಿಗೇ ಬರಬೇಕಾಗಿತ್ತು. ಈ ದಿವಸ ಸ್ವಾತಂತ್ರ್ಯ ಬಂದ 20 ವರ್ಷಗಳಲ್ಲಿ ಅದ್ಭುತವಾಗಿರುವ ಪ್ರಗತಿಯನ್ನು ವಿದ್ಯಾ ಮಾರ್ಗದಲ್ಲಿ ಸಾಧನೆ ಮಾಡಿದ್ದೇವೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗುವುದಿಲ್ಲ. ಸಾಕಷ್ಟು ಹಣವನ್ನು ಖರ್ಚುಮಾಡಿದ್ದೇವೆ, ದೇಶದಾದ್ಯಂತ ಅನೇಕ ಶಾಲೆಗಳನ್ನು ತೆರೆದಿದ್ದೇವೆ, ಎಲ್ಲೆಲ್ಲೂ ಪ್ರೈಮರಿ ಸ್ಕೂಲುಗಳು, ಹೈಸ್ಕೂಲುಗಳು ಮತ್ತು ಕಾಲೇಜುಗಳಾಗಿವೆ, ಇದರಿಂದ ಎಷ್ಟೋ ಆನಂದವಾಗಿದೆ. ಇದು ಸಂತೋಷದ ವಿಚಾರ. ಭಾರತದಲ್ಲಿ ವಿದ್ಯಾ ಪ್ರಸಾರ ಚೆನ್ನಾಗಿ ಆಗಿದೆ, ಸುಮಾರು 20 ವರ್ಷಗಳಲ್ಲಿ ಇಷ್ಟೊಂದು ಪ್ರಗತಿಯಾಗಿರುವುದು ಸಂತೋಷದ ವಿಷಯ. ವಿದ್ಯಾಭ್ಯಾಸದ ಇಲಾಖೆ ಸರಕಾರದ ಇಲಾಖೆ. ಎಲ್ಲಾ ಪ್ರಗತಿಯೂ ಕೂಡ ವಿದ್ಯಾಭ್ಯಾಸದ ಮಟ್ಟದಮೇಲೆ ಹೆಚ್ಚುಕಡಮೆಯಾಗುವುದು. ವಿದ್ಯಾಭ್ಯಾಸ ಸರಿಯಾಗಿ ನಡೆದು ಜನ ಸುಸಂಸ್ಕೃತರಾಗಿ, ಬುದ್ಧಿವಂತರಾಗಿ, ತಜ್ಞರಾಗಿ ಬೆಳೆದರೆ ರಾಷ್ಟ್ರದಲ್ಲಿ ಪ್ರಗತಿಯಾಗುವುದು ನಿಜ. ಇತಿಹಾಸದಲ್ಲಿ ಹೀಗೆ ಬೆಳೆದಿರುವುದನ್ನು ಕಂಡಿದ್ದೀರಿ ಕೇಳಿದ್ದೀರಿ, ನೋಡಿದ್ದೀರಿ. ನಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಮಟ್ಟ ಹೇಗಿದೆ ಎಂಬುದನ್ನು ತಾವು ವಿದ್ಯಾರ್ಥಿಯಾಗಿದ್ದಾಗ ಮತ್ತು ಈಗ ನೋಡುತ್ತಿದ್ದೀರಿ. ಇದನ್ನು ತಾಳೆಹಾಕಿದರೆ ಗೊತ್ತಾಗುವುದು. ಇವತ್ತು ವಿದ್ಯಾಭ್ಯಾಸದ ಮಟ್ಟ ಬಿದ್ದುಹೋಗಿದೆ. ಇಡೀ ರಾಷ್ಟ್ರದಲ್ಲಿ ವಿದ್ಯಾಭ್ಯಾಸ

ಕ್ಕಾಗಿ ಕೋಟಿಗಟ್ಟಲೆ ಖರ್ಚುಮಾಡುವ ನಾವು ಒಳ್ಳೆಯ ವಿದ್ಯಾಭ್ಯಾಸ ಕೊಡುತ್ತಿದ್ದೇವೆಯೇ ಎಂದು ಆತ್ಮವನ್ನು ಮುಟ್ಟಿಕೊಂಡು ಎದೆಯನ್ನು ಮುಟ್ಟಿಕೊಂಡು ತಿಳಿದುಕೊಳ್ಳಬೇಕು. ಈಗ ಎಂಥ ವಿದ್ಯಾಭ್ಯಾಸ ಸಿಕ್ಕಿದೆಯೆಂದರೆ ಹೈಸ್ಕೂಲನ್ನು ದಾಟಿ ಎಸ್.ಎಸ್.ಎಲ್.ಸಿ. ಪಾಸುಮಾಡಿರುವ ವ್ಯಕ್ತಿಗೆ ನಾಲ್ಕು ವಾಕ್ಯ ಕನ್ನಡದಲ್ಲಾಗಲೀ, ಇಂಗ್ಲೀಷಿನಲ್ಲಾಗಲೀ ಬರೆಯಲು ಬರುವುದಿಲ್ಲ. ಪಾಪ ಎಸ್.ಎಸ್.ಎಲ್‌ಸಿ. ಆದವರು ಹಾಗಿರಲಿ, ವಿಶ್ವವಿದ್ಯಾನಿಲಯದಿಂದ ಡಿಗ್ರಿ ತೆಗೆದುಕೊಂಡು ಬರುವವರಿಗೆ ಡಿಕ್ಟೇಷನ್ ಕೊಡಿ, ಹೇಗೆ ಬರೆಯುತ್ತಾರೆ, ನೋಡಿ. ನಮ್ಮ ವಿದ್ಯಾಭ್ಯಾಸದ ಮಟ್ಟ ಅಷ್ಟೊಂದು ಅಧೋಗತಿಗೆ ಇಳಿದಿದೆ. ಇದಕ್ಕೆ ಯಾರು ಜವಾಬ್ದಾರರು? ಏಕೆ ಹೀಗಾಯಿತು? 46 ಕೋಟಿ ಕೇಳಿ ಕೊಡುತ್ತೇವೆ, ಇನ್ನೂ 10 ಕೋಟಿ ಬೇಕಾದರೂ ಉದಾರವಾಗಿ ಕೊಡುತ್ತೇವೆ, ರಾಷ್ಟ್ರ ನಿರ್ಮಾಣ ಕಾರ್ಯ, ರಾಷ್ಟ್ರೋದ್ಧಾರ ಮಾಡುವಾಗ 46 ಕೋಟಿ ದೊಡ್ಡದಲ್ಲ, 100 ಕೋಟಿ ಬೇಕಾದರೂ ಖರ್ಚುಮಾಡಿ, 213 ಕೋಟಿ ಆದಾಯವಿದೆ. ಆದರೆ ಖರ್ಚುಮಾಡುವ ರೀತಿ ನೀತಿ, ಅನುಸರಿಸುವ ಮಾರ್ಗ ಹೇಗಿದೆ? ಯಾವರೀತಿಯದೆ? ಹಿಂದೆಯೇ ಇದು ಹುಚ್ಚರ ಆಟ ಎಂದು ಹೇಳಿದೆ. ಇತಿಹಾಸದಲ್ಲಿ ಮಹಮದ್ ಬಿನ್ ತೊಗಲಕ್ ಎಂಬ ನವಾಬನಿದ್ದ. ಅವನ ಕಾಲ ಹೇಗಿತ್ತು! ಒಂದೊಂದು ಮಾತಿಗೆ ಒಂದೊಂದು ಆರ್ಡರ್. ಆತ ಒಂದು ಆರ್ಡರ್ ಮಾಡಿ ದೆಹಲಿಯಲ್ಲಿರುವವರು ದೇವಗಿರಿಗೆ ಹೋಗಬೇಕು ಎಂದು ಹೇಳಿದ. ಅದು ಮಧ್ಯ ಇದೆ, ಆಡಳಿತಕ್ಕೆ ಚೆನ್ನಾಗಿದೆ ಎಂದು ಹಾಗೆ ಮಾಡಿದ. ಯೋಚನೆಮಾಡದೇ ಹೀಗೆ ಆರ್ಡರುಮಾಡಿದ. ದೆಹಲಿಯಲ್ಲಿದ್ದವರೆಲ್ಲಾ ದೇವಗಿರಿಗೆ ನಡೆದುಕೊಂಡುಹೋದರು. ಹಾಗೆ ಹೋದಮೇಲೆ ಒಂದು ಸಾರಿ ಆತ ದೆಹಲಿಗೆ ಹೋಗಿ ನೋಡಿದಾಗ ಜನರು ಯಾರೂ ಅಲ್ಲಿ ಇಲ್ಲದಿದ್ದುದರಿಂದ ಬಹಳ ಬೇಸರವಾಯಿತು. ನಂತರ ಮತ್ತೆ ದೇವಗಿರಿಯಿಂದ ಎಲ್ಲರೂ ದೆಹಲಿಗೇ ಹೋಗಬೇಕೆಂದು ಆರ್ಡರುಮಾಡಿದ, ಯಾರು ಹೋಗುವುದಿಲ್ಲವೆಂದು ಹೇಳುವರೋ ಅವರನ್ನು ಆನೆ ಕಾಲಿಗೆ ಹಗ್ಗದಿಂದ ಕಟ್ಟಿ ಎಳೆಸಬೇಕೆಂದು ಹೇಳಿದ. ಇದು ಮಹಮದ್ ಬಿನ್ ತೊಗಲಕನ ದರ್ಬಾರು. ಇಂಥ ದರ್ಬಾರು ಈ ಸಂಸ್ಥಾನದಲ್ಲಿ ನಡೆಯುತ್ತಿದೆಯೆಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲ. ವಿದ್ಯಾ ಇಲಾಖೆಯಲ್ಲಿ ಈ ರೀತಿ ನಡೆಯುತ್ತಿದೆ. ಇಲ್ಲಿ ಖಾಸಗಿ ವಿದ್ಯಾ ಶಾಲೆಗಳೂ ಇವೆ. ಖಾಸಗಿ ವಿದ್ಯಾಶಾಲೆಗಳನ್ನು ಕೆಲವರು ಯೋಗ್ಯರು ನಡೆಸಿರಬಹುದು. ಅವು ಸರಿಯಾಗಿ ನಡೆಯದಿದ್ದರೆ ಕಿತ್ತುಹಾಕಿ. ಆದರೆ ಈ ಇಲಾಖೆಯಲ್ಲಿ ಅವರಿಗೆ ಕೊಡುವ ಚಿತ್ರಹಿಂಸೆ ಹೇಳುವುದಕ್ಕೇ ಸಾಧ್ಯವಿಲ್ಲ. ದೇಶಕ್ಕೆ ಸೇವೆ ಸಲ್ಲಿಸಬೇಕೆಂದು ಮುಂದೆ ಬರುವವರಿಗೆ ಚಿತ್ರಹಿಂಸೆ. ಈ ಇಲಾಖೆಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಕೂಡ, ಪ್ರತಿಯೊಬ್ಬ ಅಧಿಕಾರಿಯೂ ಕೂಡ ಖಾಸಗಿ ವಿದ್ಯಾಶಾಲೆಗಳನ್ನು ನಡೆಸಲು ಬರುವವರಿಂದ ಲಂಚ ತೆಗೆದುಕೊಳ್ಳುತ್ತಾ ಇದ್ದಾರೆ. ಯೋಗ್ಯ ರಾಗಿರುವವರು ಲಂಚ ಕೊಡುವುದಿಲ್ಲ. ಕೊಡದಿದ್ದರೆ ಹಿಂಸೆ. ಪ್ರತಿಸಾರಿಯೂ ಕೂಡ ಒಂದೊಂದು ಫೈಲಿಗೂ 20 ರಿಂದ ನೂರು ಸಾರಿ ಅರ್ಡಿನರಿ ಕ್ವೆರಿ ಹಾಕಿ ಹಿಂದಕ್ಕೆ ಕಳಿಸುತ್ತಾರೆ. ನಾನೂ ಕೂಡ ನೋಡಿದ್ದೇನೆ. ಒಂದು ಸಣ್ಣ ವಿಷಯಕ್ಕೂ ಕೂಡ, ಸರ್ಕ್ಯುಲರ್ ಲಗತ್ತಿಸಿಲ್ಲ ಎಂದು ಕ್ವೆರಿ ಹಾಕಿ ಹಿಂದಕ್ಕೆ ಕಳಿಸುತ್ತಾರೆ. ಆಫೀಸಿನಲ್ಲಿ ಹುಡುಕಿದ್ದರೆ ಅಲ್ಲೇ ಸರ್ಕ್ಯುಲರ್ ಸಿಗುತ್ತಿತ್ತು. ಆದರೂ ಕೂಡ ಹಾಗೆ ಮಾಡದೆ ಹಿಂದಕ್ಕೆ ಕಳಿಸಿರುವುದುಂಟು. ಇದೊಂದು ಉದಾಹರಣೆಯನ್ನು ಯಾರು ವಿದ್ಯಾ ಸೇವೆ ಮಾಡುವರೋ, ಯಾರು ವಿದ್ಯಾ ಇಲಾಖೆಗೆ ಸಹಕಾರ ಕೊಡುವರೋ ಅವರಿಗೆ ಇಲಾಖೆಯಿಂದ ಆಗುವ ತೊಂದರೆಯನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೇನೆ.

ಆಮೇಲೆ ಹೈಸ್ಕೂಲುಗಳನ್ನು ಖಾಸಗಿಯವರು ಹತ್ತಾರು ವರ್ಷಗಳಿಂದ ನಡೆಸುತ್ತಿದ್ದಾರೆ. ಇದ್ದಕ್ಕಿದ್ದ ಹಾಗೆ ಬ್ರೈನ್‌ವೇವ್—10 ಸಾವಿರ ರೂಪಾಯಿ ಡೈರೆಕ್ಟರ ಹೆಸರಿನಲ್ಲಿ ಡಿಪಾಜಿಟ್ ಮಾಡಬೇಕು ಎಂದು ಮಹಮದ್ ಬಿನ್ ತೊಗಲಕನಂತೆ ಆಜ್ಞೆ ಮಾಡಿದ್ದಾರೆ. ಇದರಿಂದ ಖಾಸಗಿ ಶಾಲೆಯವರು ವಿದ್ಯಾ ಇಲಾಖೆಯ ಅಧಿಕಾರಿಯ ಹೆಸರಿನಲ್ಲಿ 10 ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಬೇಕು.

ಯಾರ ಉಪಕಾರಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ವಿದ್ಯಾ ಅಧಿಕಾರಿಗಳ ಹೆಸರಿನಲ್ಲಿ ಇಡಬೇಕು! ಈ ವಿದ್ಯಾಶಾಲೆಗಳನ್ನು ನಿಮ್ಮ ಕೈಯಲ್ಲಿ ಮಾಡುವುದಕ್ಕಾಗುವುದಿಲ್ಲ, ನಾವು ನಡೆಸುತ್ತೇವೆ ಎಂದು ಹೇಳಿದ ಒಬ್ಬ ವ್ಯಕ್ತಿಗೆ ನಿಮ್ಮ ಸಹಾಯ ನೀಡುವುದಕ್ಕೆ, ಸಹಕಾರ ಮಾಡುವು ದಕ್ಕೆ ಬದಲಾಗಿ ಈ ಚಿತ್ರಹಿಂಸೆ, ಹತ್ತು ಸಾವಿರ ರೂಪಾಯಿಗಳನ್ನು ಕಟ್ಟಿ ಇಲ್ಲದೇ ಇದ್ದರೆ ಶಾಲೆ ಮುಚ್ಚಿ. ನೀವು ನಡೆಸುವುದಕ್ಕಾಗುವುದಿಲ್ಲ, ಒಂದುವೇಳೆ ಯಾರಾದರೂ ಇತರರು ನಡೆಸಬೇಕೆಂದು ಇಚ್ಛೆಪಟ್ಟರೆ, ಖಾಸಗಿಯವರು ಮುಂದೆ ಬಂದರೆ ಇದೇ ತಾನೆ ತಾವು ಅವರಿಗೆ ಕೊಡುವ ಉತ್ತೇಜನ! ಆ ಜನರಿಗೆ ಭುಜಕ್ಕೆ ಭುಜ ಕೊಟ್ಟು ಇಲಾಖೆಯವರು ಮತ್ತು ನಾವು ಎಲ್ಲಾ ಸೇರಿ ವಿದ್ಯಾಭ್ಯಾಸ ವನ್ನು ಮುಂದುವರಿಸೋಣ ಅಂತ ಹೇಳುವುದನ್ನು ಬಿಟ್ಟು ಅವರಿಗೆ ಚಿತ್ರ ಹಿಂಸೆಯನ್ನು ಕೊಡುವುದಕ್ಕೆ ಪ್ರಯತ್ನ ಪಡುವುದು, ಹೊಸತಾಗಿ ಶಾಲೆ ಏನಾದರೂ ಮಾಡಬೇಕಾದರೆ 5 ಸಾವಿರ ಹತ್ತು ಸಾವಿರ

(ಶ್ರೀ ಆರ್. ದಯಾನಂದಸಾಗರ್)

ರೂಪಾಯಿ ಡಿಪಾಜಿಟ್ ಕಟ್ಟಬೇಕೆಂಬುದು ಒಂದೇ ಅಲ್ಲ, 5 ವರ್ಷಗಳ ಕಾಲ ಅವನಿಗೆ ಗ್ರಾಂಟ್ ಇಲ್ಲ. ನೀವು ಗ್ರಾಂಟ್ ಕೊಡದೇ ಹೋದರೂ ಹತ್ತು ಸಾವಿರ ರೂಪಾಯಿ ಡಿಪಾಸಿಟ್ ಕೊಡಬೇಕು, ಶಾಲೆಯನ್ನು ಅವನು ನಡೆಸಬೇಕು, ಅವನು ಶಾಲೆಯನ್ನು ಯಾವ ಮಟ್ಟದಲ್ಲಿ ನಡೆಸುತ್ತಾನೆ ಎಂಬುದನ್ನು ಯೋಚನೆ ಮಾಡಬೇಕು. ಒಂದು ಶಾಲೆಯನ್ನು ನಡೆಸಬೇಕಾದರೆ ಬಿಲ್ಡಿಂಗ್ ಬೇಕು. ಆಟದ ಆವರಣ ಬೇಕು, ಪುಸ್ತಕ ಭಂಡಾರ ಬೇಕು, ಲ್ಯಾಬೊರೇಟರಿ ಬೇಕು, ಇವುಗಳೆಲ್ಲಕ್ಕೂ ಹಣ ಎಲ್ಲಿಂದ ತರುವುದು ! ಇದನ್ನು ಇಲಾಖೆಯವರು ಯೋಚನೆ ಮಾಡುತ್ತಿಲ್ಲ. ಮನಸ್ಸಿಗೆ ಬಂದ ಹಾಗೆ, ತಮಗೆ ತೋರಿದ ರೀತಿಯಲ್ಲಿ ಆರ್ಡರ್‌ಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಎಸ್.ಎಸ್. ಎಲ್.ಸಿ. ಪಾಸ್ ಮಾಡಿ ಪ್ರೈಮರಿ ಶಾಲೆಗಳಲ್ಲಿ ಪಾಠ ಹೇಳಿಕೊಡತಕ್ಕ ಉಪಾಧ್ಯಾಯರುಗಳಿಗೆ ಒಂದು ಟ್ರೈನಿಂಗ್ ಕೋರ್ಸ್ ಇಟ್ಟಿದ್ದೀರಿ. ಇವತ್ತು ಟ್ರೈನ್ಡ್ ಟೀಚರ್ಸ್ ನಮ್ಮ ದೇಶದಲ್ಲಿ ಇಲ್ಲ, ಬಹಳ ಕಡಿಮೆ ಜನ ಇದ್ದಾರೆ. ಟ್ರೈನಿಂಗ್ ಆದಮೇಲೆ ಸಾಕಾದಷ್ಟು ಸಂಬಳ ಕೊಟ್ಟು ಒಳ್ಳೆಯ ರೀತಿಯಲ್ಲಿ ಪ್ರೋತ್ಸಾಹ ನೀಡಿದರೆ ಅನೇಕ ಮಂದಿ ಮುಂದೆ ಬಂದಾರು. ಮೊದಲು ಒಂದು ವರ್ಷದ ಟೀಚರ್ ಟ್ರೈನಿಂಗ್ ಕೋರ್ಸ್ ಇತ್ತು. ಎಸ್.ಎಸ್.ಎಲ್.ಸಿ. ಪಾಸ್ ಆದವರು ಆ ಟ್ರೈನಿಂಗ್ ಪಡೆದು ಪ್ರೈಮರಿ ಶಾಲೆಗಳಿಗೆ ಪಾಠ ಹೇಳಿಕೊಡಬಹುದು ಎಂದು ಭಾವಿಸಿದ್ದರು. ಅದನ್ನು ಬಿಟ್ಟರು, ಮತ್ತೊಂದು ಟ್ರೈನ್‌ವೇವ್ ಬಂತು ಎರಡು ವರ್ಷ ಮಾಡುತ್ತೇವೆ ಅಂತ ಹೇಳಿ ಮಾಡಿದರು. ಅದೇ ಡಿಗ್ರಿ ಪಾಸ್ ಮಾಡಿಕೊಂಡು ಹೈಸ್ಕೂಲ್ ಟೀಚ್ ಮಾಡಬೇಕಾದರೆ ಅವನಿಗೆ ಒಂದು ವರ್ಷ ಬಿ.ಎಡ್. ಡಿಗ್ರಿ ಆದರೆ ಸಾಕು, ಎಸ್.ಎಸ್.ಎಲ್.ಸಿ. ಪಾಸ್ ಮಾಡಿಕೊಂಡು ಪ್ರೈಮರಿ ಸ್ಕೂಲ್‌ಗೆ ಟೀಚ್ ಮಾಡಬೇಕಾದರೆ ಅವನಿಗೆ ಎರಡು ವರ್ಷ ಬೇಕು ಅಂತ ಆಯಿತು.

ವಿದ್ಯಾ ಇಲಾಖೆಯಲ್ಲಿ ಟೆಕ್ಸ್ಟ್ ಬುಕ್ಸ್ ನ್ಯಾಷನಲೈಸ್ ಮಾಡಿದ್ದಾರೆ, ಇದು ಹೇಗಪ್ಪಾ ಇದೆ ಎಂದರೆ ಷೆಕ್ಸ್‌ಪಿಯರನನ್ನು, ಕಾಳಿದಾಸನನ್ನು ಮತ್ತು ಕುವೆಂಪುರವರನ್ನು ಒಂದು ಕಡೆ ಕೂಡಿಸಿ ಮರ್ಚೆಂಟ್ ಆಫ್ ವೆನ್ನಿಸ್‌ನ್ನು ಬರೆಯಯ್ಯ ಎಂದು ಕುವೆಂಪುಗೂ. ಶಾಕುಂತಲಾ ಅನ್ನು ಬರೆಯಯ್ಯ ಎಂದು ಷೇಕ್ಸ್‌ಪಿಯರಿಗೂ, ರಾಮಾಯಣ ದರ್ಶನವನ್ನು ಬರೆಯಯ್ಯ ಎಂದು ಕಾಳಿದಾಸನಿಗೂ ಹೇಳಿದ್ದರೆ ಹೇಗೆ ಹುಚ್ಚಾಚಾರವಾಗುತ್ತಿತ್ತೋ ಅಷ್ಟೇ ಹುಚ್ಚಾಚಾರ ಇದು. ಪ್ರತಿಭೆ ಯಾರ ಸ್ವತ್ತೂ ಆಗುವುದಿಲ್ಲ, ಸರ್ಕಾರದ ಸ್ವತ್ತು ಆಗುವುದಿಲ್ಲ ಮೂಲೆಯಲ್ಲಿ ಕುಳಿತು ಕೊಂಡು ಶಾಕುಂತಲ ಬರೆಯಿರಿ, ಮರ್ಚೆಂಟ್ ಆಫ್ ವೆನ್ನಿಸ್ ಬರೆಯಿರಿ, ರಾಮಾಯಣ ದರ್ಶನ ಬರೆಯಿರಿ ಎಂದು ಮಾನ್ಯ ಶಂಕರೇಗೌಡರು ಹೇಳಿದರೆ ಅದು ಆಗುವ ಮಾತಲ್ಲ. ಮರ್ಚೆಂಟ್ ಆಫ್ ವೆನ್ನಿಸ್ ಬರೆಯಬೇಕಾದರೆ ಷೆಕ್ಸ್‌ಪಿಯರೇ ಆಗಬೇಕು, ಶಾಕುಂತಲ ಬರೆಯಬೇಕಾದರೆ ಕಾಳಿದಾಸನೇ ಆಗಬೇಕು, ರಾಮಾಯಣ ದರ್ಶನವನ್ನು ಬರೆಯಬೇಕಾದರೆ ಕುವೆಂಪುರವರೇ ಆಗಬೇಕು. ರಾಷ್ಟ್ರದಲ್ಲಿ ಯಾವ ಮಹಾನ್ ವ್ಯಕ್ತಿಗಳು ಇದ್ದಾರೆ ಅವರಿಂದ ಟೆಕ್ಸ್ಟ್‌ಬುಕ್ಸ್ ಬರೆಸಿ ಅದನೆಲ್ಲಾ ನೋಡಲು ಒಂದು ಕಮಿಟಿ ಆಫ್ ಜಡ್ಜ್‌ಮೆಂಟ್ ಅವರು ಕುಳಿತು ಕೊಂಡು ಚೆನ್ನಾಗಿರತಕ್ಕ ಪುಸ್ತಕಗಳನ್ನು ಆರಿಸಿ ವಿದ್ಯಾರ್ಥಿಗಳಿಗೆ ಅದನ್ನು ಓದಲು ಕೊಡಬೇಕೇ ಹೊರತು ಅನೇಕಾನೇಕ ತಪ್ಪುಗಳು ಇರತಕ್ಕ ಸರ್ಕಾರದವರೇ ತಯಾರು ಮಾಡಿದಂತಹ ಟೆಕ್ಸ್ಟ್ ಬುಕ್‌ನ್ನು ನೀವು ಓದಿ ಅಂತ ಹೇಳುವುದನ್ನು ನೋಡಿದರೆ, ಈ ತರಹ ಮ್ಯೂನಿಸ್ಟ್ ಸರ್ಕಾರವಲ್ಲ, ಅದರಲ್ಲೂ ರಷ್ಯಾದಲ್ಲಿ ನೋಡಬಹುದು, ರಷ್ಯಾದಲ್ಲಿ ಸರ್ಕಾರ ಹೇಳಿದ್ದನ್ನು ಕಲಿಯಬೇಕು. ಅದರೆ ನೀವು ಆ ರೀತಿ ಮಾಡುವುದಕ್ಕಾಗುವುದಿಲ್ಲ. ಡೆಮಾಕ್ರಸಿಯಲ್ಲಿ ಸರ್ಕಾರ ತನಗೆ ಸೂಕ್ತ ವಾಗಿರತಕ್ಕ ಒಂದು ಟೆಕ್ಸ್ಟ್ ಬುಕ್ಕನ್ನು ತಯಾರು ಮಾಡಿ ಎಲ್ಲಾ ಮಕ್ಕಳೂ ಅದನ್ನು ಓದಬೇಕೆಂದು ಹೇಳಿದರೆ ಅದು ಮಹಮದ್‌ಬಿನ್ ತೊಗಲಖ್ ಹೇಳಿದಂತೆ ಆಗಬಹುದು, ಯಾವುದೋ ಬರೆದು ಅದನ್ನೇ ಎಲ್ಲರೂ ಓದಿ ಎಂದರೆ ಅದು ಅವನ ಕಾಲನಲ್ಲಿ ನಡೆಯುತ್ತಾ ಇತ್ತು. ಆದ್ದರಿಂದ ನ್ಯಾಷನಲೈಸೇಷನ್ ಆಫ್ ಟೆಕ್ಸ್ಟ್‌ಬುಕ್ಸ್ ಏನಿದೆ ಇದು ಸರಿಯಲ್ಲ ಎಂದು ಮಾನ್ಯ ಶ್ರೀಕಂಠಯ್ಯ ನವರಿಗೆ ಹೇಳುತ್ತಾ ಇದ್ದೇನೆ.

ಸ್ವಾಮಿ, ಶಿಕ್ಷಣ ಮಾಧ್ಯಮ ಯಾವುದು ಆಗಬೇಕೆಂಬ ವಿಷಯ. ಇದು ಬಹಳ ಗಂಭೀರವಾದ ಗಭೀರವಾದ ವಿಷಯ. ಇದರ ಮೇಲೆ ನಾನಾ ರೀತಿಯಲ್ಲಿ ವ್ಯಾಖ್ಯಾನಗಳು, ಭಾಷಣಗಳು ದೇಶದಾದ್ಯಂತ ಎಲ್ಲ ಕಡೆಯೂ ನಡೆಯುತ್ತಿವೆ. ನಾವು ಕನ್ನಡದ ಜನ ಕನ್ನಡಿಗರು. ಕನ್ನಡ ಎಂದರೆ ನಮಗೆ ಹೆಮ್ಮೆ. ಕನ್ನಡ ನುಡಿಯಲ್ಲಿ ಒಂದು ಹುರುಳು ಇದೆ, ಒಂದು ತಿರುಳು ಇದೆ. ರನ್ನ, ಪಂಪ, ಜನ್ನ ಕುವೆಂಪು ಮುಂತಾದ ಮಹಾಕವಿಗಳು ಇಲ್ಲಿ ಜನ್ಮವೆತ್ತಿದ್ದಾರೆ. ಅವರ ಬಗ್ಗೆ ನಮಗೆ ಹೆಮ್ಮೆ, ಕನ್ನಡ ನಾಡಿನ ಬಗ್ಗೆ ನಮಗೆ ಹಿರಿಮೆ ಮತ್ತು ಹೆಮ್ಮೆ. ಆದರೆ ನಾಗಾ ಲೋಟದಲ್ಲಿ ನಡೆಯುತ್ತಾ ಇರತಕ್ಕ ಈ ಜಗತ್ತಿನಲ್ಲಿ, ಚಂದ್ರಮಂಡಲವನ್ನೇ ಭೇದಿಸಿ ಅಲ್ಲಿ

ಕಾಲೋನಿಯನ್ನು ಮಾಡಬೇಕೆಂಬ ಸಾಹಸಿಗರ ಈ ಯುಗದಲ್ಲಿ, ಸ್ಪುಟ್ನಿಕ್ ಯುಗದಲ್ಲಿ ಅಟಾಮಿಕ್ ಯುಗದಲ್ಲಿ ಯಾವ ಒಂದು ಮಾರ್ಗವನ್ನು ಅನುಸರಿಸಬೇಕು, ಹೇಗೆ ಕನ್ನಡದ ಜನ ಐನ್‌ಸ್ಟೀನ್, ನ್ಯೂಟನ್, ಮೈಕೇಲ್ ಫೆರಡೇ, ಸರ್ ಸಿ. ವಿ. ರಾಮನ್ ಅವರ ಮಟ್ಟಕ್ಕೆ ಬರಬೇಕು ಎಂಬುದಕ್ಕೆ ನಾವು ಒಂದು ಹತ್ತಿರದ ಮಾರ್ಗವನ್ನು ಹುಡುಕಬೇಕು. ಮಾನ್ಯ ಅಧ್ಯಕ್ಷರೇ ಪ್ರೈಮರಿ ವಿದ್ಯಾಭ್ಯಾಸದಿಂದ ಹಿಡಿದು ಪಿ.ಯು.ಸಿ. ವಿದ್ಯಾಭ್ಯಾಸ ಅಷ್ಟೂ ಕನ್ನಡದಲ್ಲಿ ಆಗಬೇಕು ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ, ರಿಸರ್ಚ್ ಮಾಡತಕ್ಕ ಮಟ್ಟದಲ್ಲಿ ನಾವು ನಮ್ಮದೇ ಭಾಷೆಯಾಗಿದ್ದರೂ ಕೂಡ, ಆ ಭಾಷೆ ಹೆಚ್ಚು ಮುಂದುವರಿಯದೇ ಹೋದರೆ, ಅದನ್ನೇ ಮಾಧ್ಯಮವನ್ನಾಗಿ ಮಾಡಿಕೊಂಡು ಈ ದೇಶವನ್ನು ಮುಂದೆ ಉದ್ಧಾರ ಮಾಡಿಕೊಳ್ಳುತ್ತೇವೆ ಎಂದರೆ, ಅದು ಬುದ್ಧಿವಂತಿಕೆಯಲ್ಲ ಎಂಧು ನಾನು ಕಳಕಳಿಯಿಂದ ತಿಳಿಸಬೇಕಾಗುತ್ತದೆ. ಅದಕ್ಕೆ ಒಂದು ಉದಾಹರಣೆ ಹೇಳುವುದಾದರೆ ನನ್ನ ತಾಯಿ ನನಗೆ ಅತ್ಯಂತ ಪ್ರಿಯ. ಏಕೆಂದರೆ ಆಕೆ ನನ್ನ ತಾಯಿ, ಆಕೆಗೂ ಒಂದು ಲಿಮಿಟೇಷನ್ ಇದೆ. ಆಕೆಯನ್ನು ಈ ರಾಷ್ಟ್ರದ ಪ್ರೈಮ್ ಮಿನಿಸ್ಟರ್ ಆಗಿ ಮಾಡುತ್ತೇನೆ ಎಂದರೆ ಒಪ್ಪಿಕೊಳ್ಳುವುದಕ್ಕೆ ಹೇಗೆ ಸಾಧ್ಯವಿಲ್ಲವೋ ಇದು ಕೂಡ ಹಾಗೆ. ಇವತ್ತು ಸೈನ್ಸ್, ಟೆಕ್ನಾಲಜಿ, ಮೆಟಲರ್ಜಿ ಮುಂತಾದ ವಿಷಯಗಳಲ್ಲಿ ಹೆಚ್ಚಿನ ವಿಷಯಗಳನ್ನು ಗ್ರಹಿಸಿ ಆಹಾರದ ಅಭಾವದಿಂದ ಹೊರ ದೇಶಗಳಿಂದ ಆಹಾರವನ್ನು ತರಿಸುತ್ತಾ ಇರತಕ್ಕದ್ದನ್ನು ತಪ್ಪಿಸಿ ನಮ್ಮ ದೇಶದಲ್ಲೇ ಹೆಚ್ಚು ಆಹಾರ ಉತ್ಪನ್ನ ಮಾಡಬೇಕಾಗಿದೆ. ನಮ್ಮ ರಾಷ್ಟ್ರದಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಬೆಳೆಸಬೇಕಾಗಿದೆ. ಹಾಗೆ ಮಾಡಬೇಕಾದರೆ ಬುದ್ಧಿವಂತರು, ಅತಿ ಬುದ್ಧಿವಂತರು ಮತ್ತು ಮಹಾಬುದ್ಧಿವಂತರನ್ನು ನಾವು ತಯಾರುಮಾಡುವಾಗ ಯಾವುದು ನಿಜವಾಗಿಯೂ ಕೂಡ ಷಾರ್ಟ್ ಕಟ್ ಆಗಿ ಜ್ಞಾನವನ್ನು ನಮಗೆ ಕೊಡುತ್ತದೆಯೋ ಅಂತಹ ಜ್ಞಾನವನ್ನು ಸಂಪಾದನೆ ಮಾಡಿಕೊಂಡು ಮುಂದುವರಿಯಬೇಕು. ಈ ಸಂದರ್ಭದಲ್ಲಿ ಒಂದೇ ಒಂದು ಮಾತನ್ನು ಆಡುವುದಾದರೆ ಯಾರು ವೇದಿಕೆಗಳ ಮೇಲೆ ನಿಂತು ಕನ್ನಡವೇ ಮಾಧ್ಯಮವಾಗಬೇಕು. ನಮ್ಮ ರಾಷ್ಟ್ರದ ಜನ ಕನ್ನಡದಿಂದಲೇ ಉದ್ಧಾರವಾಗಬೇಕೆಂದು ಹೇಳುತ್ತಾರೋ ಅಂತಹ ಅನೇಕ ಮಂದಿ ಅವರ ಮಕ್ಕಳನ್ನು ಕಾನ್‌ವೆಂಟ್ ಸ್ಕೂಲುಗಳಿಗೆ ಸೇರಿಸುವುದನ್ನು ನೋಡಿದ್ದೇನೆ. ಅಂತಹ ಅಭಾಸವಾಗಬಾರದು. ದೊಡ್ಡ ಮನುಷ್ಯರು ವೇದಿಕೆಗಳ ಮೇಲೆ ಭಾಷಣ ಮಾಡಿ ಅವರ ಮಕ್ಕಳನ್ನು ಇಂಗ್ಲೀಷ್ ಸ್ಕೂಲುಗಳಿಗೆ ಕಳುಹಿಸುತ್ತಿರುವುದು, ಬಡಬಗ್ಗರ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ, ಕನ್ನಡ ಶಾಲೆಗಳಿಗೆ ಕಳುಹಿಸುತ್ತಿರುವುದು ಏನಿದೆ ಇದು ಧರ್ಮದ ಮಾತಲ್ಲ. ಇವತ್ತಿನ ದಿವಸ ನಮ್ಮ ದೇಶ ಉಳಿಯಬೇಕಾದರೆ, ಮುಂದುವರಿಯಬೇಕಾದರೆ, ನಮ್ಮ ಜನಗಳ ಅಭ್ಯುದಯವಾಗಬೇಕಾದರೆ ಒಂದೇ ವಿದ್ಯಾಭ್ಯಾಸ ನಮ್ಮ ಜನಗಳಿಗೆ ಸಾಧಾರಣ ರೀತಿಯಲ್ಲಿ ದೊರಕುತ್ತಾ ಇದೆಯೇನು ? ನಮ್ಮಲ್ಲಿ ಹೊಟ್ಟೆಗೆ ಅನ್ನ ಇಲ್ಲದೆ, ತಲೆಯಲ್ಲಿ ಬುದ್ಧಿ ಇಲ್ಲದೆ ಇರುವಂತಹ ಕನ್ನಡಿಗರ ಮಕ್ಕಳಿಗೆ ಇವತ್ತಿನ ದಿವಸ ಹೆಚ್ಚು ಹೆಚ್ಚಾಗಿ ತಿಳುವಳಿಕೆಯನ್ನು ಉಂಟು ಮಾಡತಕ್ಕ ವಿದ್ಯಾಭ್ಯಾಸ ದೊರಕಬೇಕು. ಅವರು ವಿಜ್ಞಾನವನ್ನು ಅಭ್ಯಾಸ ಮಾಡಲು ಕನ್ನಡ ಭಾಷೆಯೇ ಇರಬೇಕೆಂದು ನಾನು ಹೇಳುವುದಿಲ್ಲ, ಕನ್ನಡ ಭಾಷೆಯ ವಿದ್ಯಾಭ್ಯಾಸವನ್ನು ಎಲ್ಲಿ ಎಷ್ಟು ಕೊಡಬೇಕೋ ಅಷ್ಟು ಕೊಡೋಣ, ಸರ್ಕಾರದ ಆಡಳಿತದಲ್ಲಿ ಕನ್ನಡದಲ್ಲಿ ವ್ಯವಹಾರವಾಗಬೇಕು, ಮಾಡಿ. ಲೈಬ್ರರಿಗಳನ್ನು ಡೆವಲಪ್ ಮಾಡಿ, ಕಲಾವಿದರಿಗೆ ಪ್ರೋತ್ಸಾಹ ಕೊಡಿ, ಸಿನಿಮಾದವರಿಗೆ 50 ಸಾವಿರ ರೂಪಾಯಿ ಕೊಡುತ್ತಾ ಇದ್ದೇವೆ, ಕೊಡಿ, ಕನ್ನಡಕ್ಕೆ ಹೆಚ್ಚಿನ ಮಾನ್ಯತೆ ಕೊಡಿ, ಆದರೆ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ, ರಿಸರ್ಚ್‌ಮಟ್ಟದಲ್ಲಿ ಯಾವ ಭಾಷೆಯಲ್ಲಿ ವಿದ್ಯಾಭ್ಯಾಸವನ್ನು ನಾವು ಮಾಡಬೇಕು ? ಇವತ್ತಿನ ಸ್ಪುಟ್ನಿಕ್ ಯುಗದಲ್ಲಿ ದೇಶ ಮುಂದುವರಿಯಬೇಕಾಗಿದೆ. ಇವತ್ತಿನ ದಿವಸ ಹೆಚ್ಚು ಹೆಚ್ಚು ಶಕ್ತಿಯನ್ನು ಉತ್ಪಾದನೆ ಮಾಡಿಕೊಳ್ಳಬೇಕಾಗಿದೆ. ಕನ್ನಡ ಜನ ಅನ್ನ ಇಲ್ಲದೆ ಸಾಯುತ್ತಾ ಇದ್ದಾರೆ. ಕನ್ನಡ ಜನರು ನಿರುದ್ಯೋಗಿಗಳಾಗುತ್ತಿದ್ದಾರೆ. ಅವರೆಲ್ಲರಿಗೂ ಉದ್ಯೋಗಗಳನ್ನು ಒದಗಿಸಿಕೊಡಬೇಕಾದರೆ ಬಹಳ ಕಷ್ಟವಾಗುತ್ತದೆ. ಅದನ್ನು ಆಲೋಚನೆ ಮಾಡದೆ ನಾವು ಸುಮ್ಮನೆ ''ಹಕ್ಕಿ ಹಾರುತಿದೆ ಮೇಲೆ ನೋಡಿ'' ಎಂದು ಹಾಡಿದರೆ ಸಾಲದು. ದೇಶಕ್ಕೆ ಯಾರು ಈ ದಿವಸ ಅನ್ನ ಬಟ್ಟೆಗಳನ್ನು ನೀಡಬಲ್ಲವರಿಗೆ ಆ ಶ್ರೀಮಾನ್ಯರ ಭಾಷೆ ಇದ್ದರೆ ಸಾಕು. ಇನ್ನು ಯಾರು ದೊಡ್ಡ ದೊಡ್ಡ ಸಂಶೋಧನೆಗಳನ್ನು ಕೈಗೊಳ್ಳಲಿದ್ದಾರೋ ಅಂಥವರಿಗೆ ಇಂಗ್ಲಿಷ್ ಭಾಷೆಯ ಜ್ಞಾನ ಅಗತ್ಯ. ನಾನು ಈ ದಿವಸ ಕಾಲುನಡಿಗೆಯಲ್ಲಿ ಲಂಡನ್ ಪಟ್ಟಣವನ್ನು ತಲುಪಬೇಕಾಗಿದ್ದರೆ ಎಷ್ಟು ವರ್ಷಗಳು ಬೇಕು ? ಆದರೆ ಅದೇ ವರ್ಷಗಟ್ಟಲೆ ಮಾಡತಕ್ಕ ಪ್ರಯಾಣವನ್ನು ಕೆಲವು ಗಂಟೆಗಳಲ್ಲೇ ಮುಗಿಸಬಹುದು ವಿಮಾನದಲ್ಲಿ ಪ್ರಯಾಣ ಮಾಡಿದರೆ. ಆದ್ದರಿಂದ ದೇಶ ಉದ್ಧಾರವಾಗಬೇಕಾಗಿದ್ದರೆ ನಾವು ಅನೇಕ ಹೊಸ ಹೊಸ ವಿಷಯಗಳನ್ನು ಕಂಡುಹಿಡಿಯಬೇಕು. ಯಾರೋ ಒಬ್ಬರು ಏನೋ ಒಂದು ವ್ಯಾಮೋಹದಿಂದ ಎಲ್ಲಾ ಮಟ್ಟದಲ್ಲೂ ಕನ್ನಡವೇ ಇರಬೇಕೆಂದು ಹೇಳಿದ್ದರೆ ಅದನ್ನು ಜನತೆ ವಿಚಾರಮಾಡಿ ಪರಿಶೀಲನೆ ಮಾಡಿ ನೋಡಬೇಕು. ಅದರಲ್ಲಿ ಯಾವುದು

(ಶ್ರೀ ಆರ್. ದಯಾನಂದಸಾಗರ್)

ಸರಿ ಯಾವುದು ತಪ್ಪು ಎಂಬುದನ್ನು ಕಂಡುಕೊಳ್ಳಬೇಕು, ಎಂದು ಇಷ್ಟು ವಿಷಯಗಳನ್ನು ತಿಳಿಸಿ, ಈಗ ಸಭೆಯ ಮುಂದೆ ಇರತಕ್ಕ ಶಿಕ್ಷಣದ ಬೇಡಿಕೆಗಳಿಗೆ ನಾನು ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ನೀಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಪತಿಗಳೇ, ಈಗ 46 ಕೋಟಿ ರೂಪಾಯಿಗಳ ವಿದ್ಯಾಬೇಡಿಕೆಯನ್ನು ಮಾನ್ಯ ವಿದ್ಯಾಸಚಿವರು ನಮ್ಮ ಮುಂದಿಟ್ಟಿದ್ದಾರೆ. ಈ ಖಾತೆಗೆ ನಾವು 46 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದಾಗ್ಯೂ ಇದು ಅತ್ಯಗತ್ಯವಾಗಿ ಆಗಲೇಬೇಕಾದ ಕೆಲಸಗಳಲ್ಲಿ ಒಂದು, ಆದರೆ ನಾವು ಹೀಗೆ ಖರ್ಚುಮಾಡಲಿರತಕ್ಕ 46 ಕೋಟಿ ರೂಪಾಯಿಗಳಿಗೆ ತಕ್ಕ ಪ್ರತಿಫಲ ಬರುತ್ತಿದೆಯೋ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ. ನಮ್ಮಲ್ಲಿ ಸಂಖ್ಯಾ ಬಲ ಬಹಳವಾಗಿ ಬೆಳೆಯುತ್ತಿದೆ. ಶಾಲೆಗಳಲ್ಲಿ ಓದತಕ್ಕವರ ಸಂಖ್ಯೆ ಮತ್ತು ಶಾಲೆಗಳ ಸಂಖ್ಯೆ ನಮ್ಮಲ್ಲಿ ಬಹಳವಾಗಿ ಬೆಳೆಯುತ್ತಿವೆ. ಆದರೆ ಅವುಗಳಿಂದ ಬರತಕ್ಕ ಫಲವನ್ನು ಲೆಕ್ಕಹಾಕಿದರೆ ಅದು ಬಹಳ ಹಿಂದು ಹಿಂದಕ್ಕೇ ಹೋಗುತ್ತಿದೆ. ಇದಕ್ಕೆಲ್ಲಾ ಮುಖ್ಯ ಕಾರಣ ನಾವು ನಮ್ಮ ವಿದ್ಯಾರ್ಥಿಗಳನ್ನು ಪ್ರಯೋಗಶಾಲೆಗಳಲ್ಲಿ ಸಾಮಾನುಗಳನ್ನು ಬಳಸಿದಂತೆ ಬಳಸುತ್ತಿದ್ದೇವೆ. ಅದರಿಂದ ಪರೀಕ್ಷೆಗಳಲ್ಲಿ ಬಹಳ ಮಂದಿ ವಿದ್ಯಾರ್ಥಿಗಳು ಫೈಲಾಗುತ್ತಿದ್ದಾರೆ. ಅನೇಕ ಪ್ರಯೋಗಗಳ ಹೊಡೆತಕ್ಕೆ ಸಿಕ್ಕಿದ ವಿದ್ಯಾರ್ಥಿಗಳು ಅವರಿಗೆ ದೊರೆಯಬೇಕಾದ ಪ್ರತಿಫಲಕ್ಕೆ ಪ್ರತಿಯಾಗಿ ಅವರು ಅನೇಕ ತೊಂದರೆಗಳಿಗೆ ಗುರಿಯಾಗುತ್ತಿದ್ದಾರೆ. ಒಂದು ಕಡೆ ದೇಶದಲ್ಲಿ ಫ್ರೀ ಎಜುಕೇಷನ್ ಕೊಡಲಾಗುತ್ತಿದೆಯೆಂದು ಹೇಳುತ್ತಿದ್ದರೆ ಇನ್ನೊಂದು ಕಡೆ ಜನರನ್ನು ಶೋಷಣೆ ಮಾಡಲಾಗುತ್ತಿದೆ. ಎನ್ನುವ ಬಗ್ಗೆ ಈಗಾಗಲೇ ಬಹಳ ಮಂದಿ ಇಲ್ಲಿ ಟೀಕೆಟಿಪ್ಪಣಿಗಳನ್ನು ಮಾಡಿದ್ದಾರೆ. ಖಾಸಗೀ ಶಾಲೆಗಳನ್ನು ನಡೆಸುತ್ತಿರುವವರಲ್ಲಿ ನಾನೂ ಒಬ್ಬ ಇದನ್ನು ರಾಷ್ಟ್ರೀಕರಣ ಮಾಡಬೇಕೆಂದು ಕೆಲವರು ಸೂಚಿಸಿದ್ದಾರೆ. ಇದನ್ನು ಏನಾದರೂ ಹಾಗೆ ರಾಷ್ಟ್ರೀಕರಣ ಮಾಡಿದ್ದೇ ಆದರೆ ಅಲ್ಲಿಗೆ ನಮ್ಮ ವಿದ್ಯಾಭ್ಯಾಸ ಮುಗಿದಂತೆಯೇ. ಅನೇಕ ಖಾಸಗೀ ಶಾಲೆಗಳಲ್ಲಿ ಕೆಲಸ ಬಹಳ ಚೆನ್ನಾಗಿ ನಡೆಯುತ್ತಿದೆ. ಅವರು ಸ್ವಲ್ಪ ಫೀಜನ್ನೂ ಜಾಸ್ತಿಯಾಗೇ ತೆಗೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಇದಕ್ಕೆಲ್ಲಾ ಕಾರಣ ಏನೆಂದರೆ ಸರ್ಕಾರಿ ಶಾಲೆಗಳಲ್ಲಿ ಚೆನ್ನಾಗಿ ಪಾಠಪ್ರವಚನಗಳು ನಡೆಯುತ್ತಿಲ್ಲ. ಅಲ್ಲಿ ಹುಡುಗರನ್ನು ಓದಲು ಕಳುಹಿಸಿದ್ದರೂ ಒಂದೇ ಕಳುಹಿಸದಿದ್ದರೂ ಒಂದೇ ಎಂಬುದನ್ನು ಅರಿತ ತಂದೆತಾಯಿಗಳು ತಮ್ಮ ಮಕ್ಕಳನ್ನು ಸ್ವಲ್ಪ ಫೀಜು ಜಾಸ್ತಿಯಾದರೂ ಚಿಂತೆಯಿಲ್ಲ ಎಂದು ಖಾಸಗೀ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುತ್ತಿದ್ದಾರೆ. ಸರ್ಕಾರಿ ಶಾಲೆಗಳು ಎಂದು ಚೆನ್ನಾಗಿ ನಡೆಯುತ್ತವೋ ಅಂದು ಖಾಸಗೀ ಶಾಲೆಗಳಿಗೆ ಜನರು ನುಗ್ಗುವುದು ಕಡಮೆಯಾಗುತ್ತದೆ. ಆದ್ದರಿಂದ ಮೊದಲು ಸರ್ಕಾರಿ ಶಾಲೆಗಳನ್ನು ಉತ್ತೇಜಿಸಿದರೆ ಬಡಬಗ್ಗರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಈ ದಿವಸ ನ್ಯಾಷನಲ್ ಕಾಲೇಜ್ ವಿಜಯಾ ಕಾಲೇಜ್, ರೇಣುಕಾಚಾರ್ಯ ಕಾಲೇಜ್ ಇತ್ಯಾದಿ ಖಾಸಗೀ ವಿದ್ಯಾ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸಮಾಡುತ್ತಿವೆ. ಅದನ್ನು ನಾವು ಶೋಷಣೆ ಎಂದು ಕರೆಯುವುದಕ್ಕಾಗುವುದಿಲ್ಲ. ಅವು ತಮ್ಮದೇ ಆದ ಒಂದು ವೇಷಭೂಷಣಗಳಿಂದ ಕೆಲಸವನ್ನು ನಡೆಸಿಕೊಂಡು ಬರುತ್ತಿವೆ. ಆ ಸಂಸ್ಥೆಗಳು ಈ ದಿವಸ ಹೆಚ್ಚಿಗೆ ಫೀಜನ್ನು ಏನಾದರೂ ವಸೂಲ್ಮಾಡುತ್ತಿದ್ದರೆ ಅದಕ್ಕೆ ಕಾರಣ ಅವುಗಳಿಗೆ ಸಾಕಷ್ಟು ಗ್ರ್ಯಾಂಟ್ ಸಿಕ್ಕುತ್ತಿಲ್ಲ ಎಂದು ಅರ್ಥವಾಗುತ್ತದೆ. ಹಿಂದೆ ಅನೇಕ ದಾನಿಗಳು ಧರ್ಮಿಷ್ಟರು ಇರುತ್ತಿದ್ದರು. ಅವರಿಂದ ಈ ಸಂಸ್ಥೆಗಳಿಗೆ ಬಹಳ ಅನುಕೂಲವಾಗುತ್ತಿತ್ತು. ಆದರೆ ಇತ್ತೀಚೆಗೆ ಈ ಶಾಲೆಗಳು ಹೆಚ್ಚಾದ್ದರಿಂದ ಆ ದಾನಿಗಳ ಸಂಖ್ಯೆ ಬಹಳ ಕಡಮೆಯಾಗಿದೆ. ದಾನ ಧರ್ಮಗಳು ಈಗ ಅಷ್ಟಾಗಿ ಸಿಕ್ಕುತ್ತಿಲ್ಲ. ಆದರೆ ಕೆಲವು ಶಾಲೆಗಳಲ್ಲಿ ಬಹಳ ಅನ್ಯಾಯ ಆಗುತ್ತಿದೆ. ಅಂಥವುಗಳನ್ನು ಮಟ್ಟಹಾಕಬೇಕೆಂದು ಹೇಳುತ್ತೇನೆ. ಹಾಗೆ ಅನ್ಯಾಯ ಮಾಡತಕ್ಕ ಸಂಸ್ಥೆಗಳಲ್ಲಿ ಏನು ನಡೆಯುತ್ತಿದೆ ಎಂದರೆ ಒಂದು ಸ್ಟ್ರೆಂಗ್ತ್‌ನ್ನು ಇನ್‌ಫ್ಲೇಟ್ ಮಾಡುವುದು ಕಳ್ಳ ಅಟೆಂಡೆನ್ಸ್ ಹಾಕುವುದು ಉಪಾಧ್ಯಾಯರುಗಳಿಂದ ಚೆಕ್ ಕೊಡತಕ್ಕ ಬಗ್ಗೆ ಡಿಸ್ಕೌಂಟನ್ನು ಪಡೆಯುತ್ತಿರುವುದು , ಅವರು ಅದನ್ನು ಕೊಡದಿದ್ದರೆ ನೀವು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದೀರಿ, ನಿಮ್ಮನ್ನು ಕೆಲಸದಿಂದ ತೆಗೆದು ಹಾಕಲಾಗುವುದೆಂದು ಅವರನ್ನು ಹೆದರಿಸುವುದು, ಅವರಿಂದ ಹಣವನ್ನು ಸುಲಿಗೆ ಮಾಡಿಕೊಳ್ಳುವುದು ಮತ್ತು ಕೆಲವು ಕೃತಕ ಅಕೌಂಟ್‌ಗಳನ್ನು ಇಟ್ಟು ಸಂಸ್ಥೆಗಳನ್ನು ನಡೆಸುತ್ತಿರುವುದು—ಹೀಗೆ ಅನೇಕ ಅನ್ಯಾಯಗಳು ನಡೆಯುತ್ತಿವೆ. ಆದ್ದರಿಂದ ಈ ಸಂದರ್ಭದಲ್ಲಿ ಒಳ್ಳೆಯ ಕೆಲಸ ಮಾಡತಕ್ಕ ಶಾಲೆಗಳಾವುವು, ಅಕ್ರಮ ಅನ್ಯಾಯಗಳನ್ನು ಮಾಡತಕ್ಕ ಶಾಲೆಗಳು ಯಾವು ಎಂಬುದನ್ನು ಪರಿಶೀಲಿಸಿ ಅನ್ಯಾಯಮಾಡುತ್ತಿರುವ ಶಾಲೆಗಳನ್ನು ಸರ್ಕಾರದ ಹತೋಟಿಯೊಳಗೆ ತರಬೇಕೆಂದು ಹೇಳುತ್ತೇನೆ. ಆದರೆ ಖಾಸಗೀ ಶಾಲೆಗಳಿಗೆ ಅನೇಕ ತೊಂದರೆಗಳಿವೆ. ಅವುಗಳಿಗೆ ಸರಿಯಾದ ಕಟ್ಟಡಗಳಿಲ್ಲ ಕಟ್ಟಡ ಕಟ್ಟಿಸುವುದಕ್ಕೆ ಕೆಲವಕ್ಕೆ ಜಾಗ ಇಲ್ಲ;

ಅವರಿಗೆ ಸಾಕಷ್ಟು ವರಮಾನ ಬಾರದೆ ಅವರು 'ಉಪಾಧ್ಯಾಯರಿಗೆ ಸರಿಯಾಗಿ ಸಂಬಳ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ.

ಇನ್ನು ನಾನು ಕೊನೆಯದಾಗಿ ನನಗೆ ಹೆಚ್ಚು ಸಂಬಂಧವಿರತಕ್ಕ ಕಾಮರ್ಸ್ ವಿದ್ಯಾಭ್ಯಾಸ ನಡೆಸತಕ್ಕ ಶಾಲೆಗಳು ಅಂದರೆ ಷಾರ್ಟ್‌ಹ್ಯಾಂಡ್ ಮತ್ತು ಟೈಪ್‌ರೈಟಿಂಗ್ ಇನ್‌ಸ್ಟಿಟ್ಯೂಷನ್‌ಗಳು ಏನಿವೆ, ಅವುಗಳ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ 250 ಶಾಲೆಗಳಿವೆ; 40 ಸಾವಿರ ವಿದ್ಯಾರ್ಥಿಗಳು ಓದುತ್ತಿದ್ದಾರೆ; ರಾಜ್ಯದಲ್ಲಿ ಶಿಕ್ಷಣಬಾಬಿಗೆ 46 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದರೂ ಕೂಡ ಈ ವಾಣಿಜ್ಯವಿದ್ಯಾಭ್ಯಾಸಕ್ಕೆ 46 ಪೈಸೆಗಳನ್ನೂ ಕೂಡ ಖರ್ಚು ಮಾಡುತ್ತಿಲ್ಲ; ಇದು ಬಹಳ ಶೋಚನೀಯ. ಇವುಗಳಿಗೆ ಹೆಚ್ಚಿನ ಗ್ರ್ಯಾಂಟನ್ನು ಕೊಡುವುದಕ್ಕೂ ಅವಕಾಶವಿಲ್ಲ—ಅವರು ವಿಧಿಸತಕ್ಕ ಫೀಜು ಇನ್ನು ಸ್ವಲ್ಪ ಜಾಸ್ತಿಮಾಡುವುದಕ್ಕೂ ಸರ್ಕಾರಕ್ಕೆ ಇಷ್ಟವಿಲ್ಲ ಅಂದರೆ ಅವು ಹೇಗೆ ಉಳಿದು ಕೆಲಸ ಮಾಡಬೇಕು ? ಇನ್ನು ಕನ್ನಡ ಷಾರ್ಟ್‌ಹ್ಯಾಂಡ್ ಮತ್ತು ಟೈಪ್‌ರೈಟಿಂಗುಗಳಿಗೆ ಯಾವ ಪ್ರೋತ್ಸಾಹವನ್ನೂ ನೀಡಿಲ್ಲ. ಮೊದಲು ವರ್ಷಕ್ಕೆರಡಾವರ್ತಿ ಇದರ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. ಅದನ್ನೀಗ ವರ್ಷಕ್ಕೆ ಒಂದು ಸಾರಿ ಎಂದು ನಿಗದಿ ಮಾಡಿದ್ದಾರೆ. ಇದು ಸರಿಯಲ್ಲ. ಶಾಲೆಗಳಿಗೆ ಹೊಸದಾಗಿ ಕಟ್ಟಡ ಕಟ್ಟಿದರೆ ಅದಕ್ಕೆ ಯಾವ ವಿಧವಾದಂಥ ಗ್ರ್ಯಾಂಟು ಸಿಗುತ್ತಿಲ್ಲ. ಬಾಡಿಗೆಗೆ ತೆಗೆದುಕೊಂಡರೆ, ಬಾಡಿಗೆಯನ್ನು ಕೊಡುತ್ತಾರೆ. ಅದರ ಬಗ್ಗೆ ಸರ್ಕಾರದವರು ನೋಡಬೇಕು.

7-00 P.M.

ಇನ್ನೊಂದು ವಿಷಯ. ಮಾನ್ಯ ಶ್ರೀ ಪರಮೇಶ್ವರಪ್ಪನವರು ಮಾತನಾಡುತ್ತಿರುವಾಗ ಮಾನ್ಯ ವಿದ್ಯಾಮಂತ್ರಿಗಳು ಹೊಸದಾಗಿ ಶಾಲೆಗಳು ಆರಂಭವಾದಾಗ No grants for 3 years to boys and co-education high schools which was in force upto now it is extended by 5 years from the financial year 1970 ಎಂದು ಹೇಳಿದರು. ಮೊನ್ನೆ ಕೊಟ್ಟಿರತಕ್ಕ ಜಿ. ಓ.ನಲ್ಲಿ. This applies to girls' high schools also ಎಂಬುದಾಗಿ ಹೇಳಿದ್ದಾರೆ. ಅದು ಗರ್ಲ್ಸ್ ಹೈಸ್ಕೂಲಿಗೆ ಅಪ್ಲೈಯಾಗುವುದಿಲ್ಲವೆಂದು ಮಂತ್ರಿಗಳು ಈಗ ಹೇಳಿದರು. ಅದರ ಬಗ್ಗೆ ಒಂದು ವಿವರಣೆ ಕೊಟ್ಟರೆ ಅನುಕೂಲ.

ಕೊನೆಯದಾಗಿ, ಈ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಆಗಾಗ್ಗೆ ಉಂಟಾಗುತ್ತಿರುವ ತೊಂದರೆ ಹಾಗೂ ಗಲಭೆಗಳನ್ನು ನಿಲ್ಲಿಸಬೇಕು. ಹುಡುಗರಲ್ಲಿ ಸಾಕಷ್ಟು ಶಿಸ್ತು ಬರುವ ಹಾಗೆ ಮಾಡಬೇಕು. ಇನ್ನು ವಿದ್ಯಾಭ್ಯಾಸದಲ್ಲಿ ಒಂದು ದೊಡ್ಡ ನ್ಯೂನತೆ ಏನೆಂದರೆ, ಹಳೆಯ ಮೈಸೂರಿನಲ್ಲಿ ಕೆಲಸದಲ್ಲಿರತಕ್ಕ ಉಪಾಧ್ಯಾಯರುಗಳಿಗೂ ಮತ್ತು ಆಫೀಸರುಗಳಿಗೂ ಮನಸ್ಸಿನಲ್ಲಿ ನೆಮ್ಮದಿಯಾಗಿರುವಂತೆ ಮಾಡಬೇಕು. ಈಗಿರತಕ್ಕ ತಾರತಮ್ಯಗಳನ್ನು ಸರಿಪಡಿಸಿ ನ್ಯಾಯವಾಗಿ ಅವರಿಗೆ ಬರುವ ಸೌಕರ್ಯಗಳನ್ನು ಕೊಡಬೇಕು. ಇಲ್ಲದೇ ಹೋದರೆ ಅವರು ಕೋರ್ಟು ಕಚೇರಿಗಳಿಗೆ ಹೋಗಬೇಕಾಗುತ್ತದೆ. ಇದರಿಂದ ಎಷ್ಟು ದುಡ್ಡು ಖರ್ಚಾಗುತ್ತದೆ ? ಇದು ಅನ್ಯಾಯ. ಆದ್ದರಿಂದ ಹಳೆಯ ಮೈಸೂರಿನ ವಿದ್ಯಾಧಿಕಾರಿಗಳಿಗೂ, ಪಾಠಪ್ರವಚನ ಹೇಳತಕ್ಕ ಉಪಾಧ್ಯಾಯರುಗಳಿಗೂ ಇರತಕ್ಕ ಅನ್ಯಾಯಗಳನ್ನು ಸರಿಪಡಿಸಬೇಕು. ಈ ವಿದ್ಯಾಭ್ಯಾಸ ಇಲಾಖೆಯ ಬೇಡಿಕೆಗೆ ಈ ವರ್ಷ 46 ಕೋಟಿ ರೂಪಾಯಿಗಳಾಯಿತು. ಹೋದವರ್ಷ 36 ಕೋಟಿ ರೂಪಾಯಿಗಳಿತ್ತು. ಮುಂದಿನ ವರ್ಷ 56 ಕೋಟಿ ರೂಪಾಯಿಗಳು ಆಗಬಹುದು. ಇದರಲ್ಲಿ ಸರಿಯಾದ ವ್ಯವಹಾರ ನಡೆದು ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಬರುವ ಹಾಗೆ ತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಬೇಗ ಮಾಡಲಿ ಎಂಬುದಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಳವಳ್ಳಿ).—ಮಾನ್ಯ ಉಪಾಧ್ಯಕ್ಷರೆ, ಈ ವಿದ್ಯಾ ಬೇಡಿಕೆಗಳ ಮೇಲೆ ನಾನು ಮಾತನಾಡುವುದಕ್ಕೆ ಮೊದಲು ಈ ಬೇಡಿಕೆಗಳನ್ನು ನಾನು ಸ್ವಾಗತ ಮಾಡುತ್ತೇನೆ. ನನ್ನ ಸನ್ಮಿತ್ರರಾದಂಥ ಮಾನ್ಯ ಶ್ರೀ ಶ್ರೀನಿವಾಸ್ ಅವರು ಸಾಕಷ್ಟು ಅನುಭವದಿಂದ ಈ ದೇಶದಲ್ಲಿನ ಬಹಳ ಪ್ರಾಮುಖ್ಯವಾದಂಥ ಮೂರು ಸಮಸ್ಯೆಗಳನ್ನು ಬಹಳ ಚೆನ್ನಾಗಿ ಹೇಳಿದರು. ಬಹುಶಃ ಅವರು ಯುವಕರಾಗಿ, ಸಮಾಜವಾದಿಗಳಾಗಿ ಹೇಳಿದಂಥ ಮಾತು ನನಗೆ ಬಹಳಮಟ್ಟಿಗೆ ಹಿಡಿಸಿತು. ನಾನು ಬಹಳ ವರ್ಷಗಳಿಂದಲೂ ಅಂದರೆ ವಿದ್ಯಾರ್ಥಿ ದೆಸೆಯಿಂದಲೂ ಒಂದು ವಿಚಾರದಲ್ಲಿ ಚಿಂತೆಮಾಡುವವನಾಗಿದ್ದೇನೆ. ಕೊಠಾರಿ ಕಮಿಷನ್ನಿನ ಎಕ್ಸ್‌ಟ್ರಾಕ್ಟ್‌ಗಳನ್ನು ಸರ್ಕಾರದವರು ಈ ಸಭೆಯ ಮುಂದೆ ಇಟ್ಟರು. ನಾನೂ ಕೂಡ ವಿಶ್ವವಿದ್ಯಾನಿಲಯ ಅಕಾಡಮಿಕ್ ಕೌನ್ಸಿಲ್‌ನಲ್ಲಿ ನನ್ನ ಅಭಿಪ್ರಾಯಗಳನ್ನು ಕೊಟ್ಟಿದ್ದೇನೆ. ಕಳೆದ ವರ್ಷ ನಾನು ಇಲ್ಲಿ ವಿದ್ಯಾಬೇಡಿ

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ಕೆಯ ಮೇಲೆ ಮಾತನಾಡಿದಾಗ, ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ ಯಾವರೀತಿ ಇರಬೇಕೆಂಬ ಬಗ್ಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದೇನೆ. ಈಗ ಕಾಲಾವಕಾಶ ಸಾಕಷ್ಟು ಇಲ್ಲದೆ ಇರುವುದರಿಂದ ನಾನು ಶಿಕ್ಷಣಕ್ಕೆ ಸಂಬಂಧಪಟ್ಟಹಾಗೆ ಕೇವಲ 2—3 ವಿಷಯಗಳಿಗೆ ಕನ್‌ಫೈನ್ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಸ್ವಾತಂತ್ರ್ಯ ಬಂದಮೇಲೆ ರಾಜ್ಯಾಂಗಬದ್ಧವಾದ ಯೋಜನೆಗಳು ಪ್ರಾರಂಭವಾದುವು. ಯೋಜನಾಮಂಡಲಿಯವರು ದೀರ್ಘವಾಗಿ ಯೋಚನೆಮಾಡಿ ಒಂದನೇ ಪಂಚವಾರ್ಷಿಕ ಯೋಜನೆಯಿಂದ ಹಿಡಿದು ಕೊನೆಯವರೆಗೂ ಈ ರೀತಿಯಾಗಿ ಪ್ರತಿಪಾದಿಸುತ್ತಾ ಇದ್ದಾರೆ. Education is the most important single factor in achieving rapid economic development and technological progress and in creating a social order founded on the values of freedom, social justice and equal opportunity.

Programme of education lie at the base of the effort to forge the bonds of common citizenship, to harness the energies of the people and to develop the natural ard human resources of every part of the country. In all branches of national life education become the focal point of planned development. ಹೀಗೆ ಒಂದು ಮಾತಿನಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ರಾಜ್ಯಾಂಗದಲ್ಲಿ ಸೋಷಿಯಲ್, ಇಕನಾಮಿಕ್ ಅಂಡ್ ಪೊಲಿಟಿಕಲ್ ಜಸ್ಟೀಸ್ ಏನೆಂಬುದನ್ನು ಹೇಳಿದ್ದಾರೆ. ಮೂಲಭೂತವಾಗಿ ಆ ಅಭಿಪ್ರಾಯಗಳ ಆಧಾರದ ಮೇಲೆ ಏನು ವಿದ್ಯಾಭ್ಯಾಸ ನಿಯಮ ನೀತಿ ಇರಬೇಕೆಂಬುದನ್ನು ಪ್ರತಿಪಾದಿಸಿದ್ದಾರೆ.

ಇನ್ನು 3 ನೇ ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಹೆಚ್ಚಿಗೆ ಹಣ ಖರ್ಚು ಮಾಡಿ, ಸರ್ವಾಂಗ ಸುಂದರವಾದ ಜಾತ್ಯಾತೀತ ರಾಷ್ಟ್ರವನ್ನು ಕಟ್ಟಬೇಕಾದರೆ ಯಾವರೀತಿಯಲ್ಲಿ ನಾವು ಹೋಗಬೇಕೆಂಬುದನ್ನು ನ್ಯಾಷನಲ್ ಇಂಟಿಗ್ರೇಷನ್ ಎಂಬ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಅದು ಈ ರೀತಿ ಇದೆ. The success of economic planning in India will largely depend upon our capacity to hold together as a nation in the midst of diversity of language, region, caste, and religion.

Unity in a democracy must be based on the consciousness of a common cultural heritage and commonly accepted future and on a constant effort to realise them.

India has a rich and composite culture to which every section of the community has contributed and of which it has every reason to be proud.

The essentials of this culture are broadmindness and mutual tolerance balance by the material and the spiritual and the co-operative way of life in which various individuals in a group are bound together by commonly accepted rights and obligations.

India's future goals are embodied in the Constitutions and her development plans are among the principal means for realising them.

Educational institutions have a vital role to play in bringing about *national integration* and social cohesion among the younger generations. ಇದನ್ನು ನಾವಾದರೂ ಕೂಡ ಎಷ್ಟರಮಟ್ಟಿಗೆ ಮಾಡಿದ್ದೇವೆಂದರೆ, ನಿಧಾನವಾಗಿ ಅಸದೃಡವಾದ ನೀತಿಯನ್ನು ಇದರ ಬಗ್ಗೆ ಅನುಸರಿಸುತ್ತಿದ್ದಾರೆ. ಸ್ವಾತಂತ್ರ್ಯ ಬಂದಮೇಲೆ ಜನಸಾಮಾನ್ಯರು ಸಮತಾವಾದ ಸಮಾಜವನ್ನು ಹೇಗೆ ಸೃಷ್ಟಿಮಾಡಬೇಕೆಂದು ಹೇಳಿದ್ದಾರೋ ಅಷ್ಟರಮಟ್ಟಿಗೆ ಅದು ವಿದ್ಯಾಕ್ಷೇತ್ರದಲ್ಲಿ ನಡೆಯುತ್ತಿದೆಯೇ? ಮೂಲಭೂತವಾಗಿ ಅದು ಆಗುತ್ತಾ ಇಲ್ಲ. ಇನ್ನೊಂದು ಬಹಳ ಪ್ರಾಮುಖ್ಯವಾದ ವಿಷಯ. ಸರ್ಕಾರದಿಂದ ಲಕ್ಷಾಂತರ ರೂಪಾಯಿಗಳನ್ನು ಅನೇಕ ವಿದ್ಯಾ ಸಂಸ್ಥೆಗಳು ತೆಗೆದುಕೊಳ್ಳುತ್ತಾ ಇವೆ ಎಂಬುದಾಗಿ ಮಾನ್ಯ ಶ್ರೀ ಶ್ರೀನಿವಾಸ್

ಅವರು ಹೇಳಿದರು. ಆದರೆ ನಾನು ಹೇಳುವುದೇನೆಂದರೆ, ಈ ವಿದ್ಯಾಭ್ಯಾಸಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ, ಇನ್‌ವೆಸ್ಟ್ ಮಾಡಿದರೂ ಎಜುಕೇಟೆಡ್ ಅನ್ ಎಂಪ್ಲಾಯ್‌ಮೆಂಟ್ ಬಹಳ ಹೆಚ್ಚು ಆದರೆ ಏನು ಪ್ರಯೋಜನ? ಎಷ್ಟರಮಟ್ಟಿಗೆ ಸಮಾಜದ ಹಿತವನ್ನು ಸಾಧಿಸುವ ರೀತಿಯಲ್ಲಿ ಇವರು ಖರ್ಚು ಮಾಡುತ್ತಾರೆ? ಹಣವನ್ನು ಖರ್ಚು ಮಾಡಿ ಒಳ್ಳೆಯ ರೀತಿಯಲ್ಲಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ನಿಜವಾಗಿ ಈ ಸರ್ಕಾರದವರು ಫೇಲ್ ಆಗಿದ್ದಾರೆ, ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಖಾಸಗೀ ಸಂಸ್ಥೆಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಆ ಸಂಸ್ಥೆಗಳಲ್ಲಿರುವವರು ದಕ್ಷ ರೀತಿಯಲ್ಲಿ ನಡೆಸುತ್ತಾರೆ. Equal wages for equal work ಎಂಬುದಾಗಿ ಏನು ಹೇಳುತ್ತಾರೋ ಅದು ಖಾಸಗೀ ಸಂಸ್ಥೆಗಳಲ್ಲಿದೆ. ಇದರ ಜೊತೆಗೆ ಹಾಸ್ಟಲ್‌ಗಳು ಸಹ ಅಷ್ಟೇ. ಪ್ರೈವೇಟ್ ಮ್ಯಾನೇಜ್ಡ್ ಹಾಸ್ಟಲುಗಳ ಬಗ್ಗೆ ನಾನೇ ಒಂದು ಸರ್ವೆ ಮಾಡಿದ್ದೇನೆ. ಅದರ ಶಿರೋನಾಮೆ ಈ ರೀತಿ ಇದೆ. ಖಾಸಗೀ ಸಂಸ್ಥೆಗಳಲ್ಲಿ ಹಾಸ್ಟಲುಗಳನ್ನು ನಡೆಸುವವರು ಯಾವಾಗಲೂ ಜಾತ್ಯಾತೀತ ರಾಷ್ಟ್ರ ಮಾಡಬೇಕೆಂಬ ನೀತಿಯನ್ನು ಇಟ್ಟುಕೊಂಡು ಈಗಾಗಲೇ ಕೆಲವು ಖಾಸಗೀ ವಿದ್ಯಾಸಂಸ್ಥೆಗಳಲ್ಲಿ ಮಾಡುತ್ತಿದ್ದಾರೆ. ಅವರೂ ಸಹ ಈ ಸರ್ಕಾರದಿಂದ ಲಕ್ಷಾಂತರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಕೆಲವು ಮಠಗಳಲ್ಲಿ ನಡೆದಿರುವ ವಿಷಯವನ್ನು ನಾನು ಹೇಳಬೇಕೆಂದರೆ, ಶೃಂಗೇರಿ ಸ್ವಾಮಿಗಳ ಮಠದಲ್ಲಿ ಹಾಸ್ಟಲನ್ನು ಬಹಳ ಒಳ್ಳೆಯ ರೀತಿಯಲ್ಲಿ ನಡೆಸುತ್ತಿದ್ದಾರೆ. ಅಲ್ಲಿ ಹೆಚ್ಚು ಮಕ್ಕಳು ಎಲ್ಲಾ ಮತೀಯರು ಓದುತ್ತಿದ್ದಾರೆ. ಅಡಿಗೆ ಎಲ್ಲರೂ ಸೇರಿಕೊಂಡು ಮಾಡುತ್ತಾರೆ. ಎಲ್ಲರೂ ಊಟ ಬಡಿಸುತ್ತಾರೆ. ಅದನ್ನು ನೋಡಬೇಕು. ಎಲ್ಲರೂ ಒಂದೇ ಕಡೆ ಕೂತು ಸಂತೋಷದಿಂದ ಊಟ ಮಾಡುತ್ತಾರೆ. ಅಲ್ಲಿಗೆ ಸುಮಾರು ಒಂದು ಲಕ್ಷ 68 ಸಾವಿರ ರೂಪಾಯಿಗಳನ್ನು ಆ ಮಠಕ್ಕಾಗಿ ಖರ್ಚುಮಾಡುತ್ತಾರೆ. ಸಿದ್ಧಗಂಗಾ ಮಠದ ಸ್ವಾಮಿಗಳು ನಡೆಸತಕ್ಕ ಹಾಸ್ಟಲ್ ಇನ್ನೊಂದು. ಅಲ್ಲಿ ಲಿಂಗಾಯಿತರು ಬೇರೆ ಕಡೆ, ಬೇರೆ ಜಾತಿಯವರು ಬೇರೆ ಕಡೆ, ಇನ್ನೊಂದು ಕಡೆ ಹರಿಜನರು, ಹೀಗೆ ಊಟ ಮಾಡುವುದಕ್ಕೆ ಕೂಡಿಸುತ್ತಾರೆ. ಸರ್ಕಾರದಿಂದ ಲಕ್ಷಾಂತರ ರೂಪಾಯಿಗಳ ಗ್ರಾಂಟ್ ತೆಗೆದುಕೊಂಡು ಈ ರೀತಿ ಮಾಡುವುದಾದರೆ, how can spiritual enlightenment and communal discrimination go together? ಸರ್ಕಾರ ಈ ವಿಚಾರದಲ್ಲಿ ಎಚ್ಚರಿಕೆಯನ್ನು ವಹಿಸಬೇಕು. ಮಠಗಳಿಗೆ ನಾನು ಗೌರವ ಕೊಡುತ್ತೇನೆ. ಸ್ವಾಮೀಜಿಯವರಿಗೆ ಗೌರವ ಕೊಡುತ್ತೇನೆ. But we cannot tolerate this communal nonsense in the Educational Institutions. ಇವತ್ತು ದೇಶದ ಭವಿಷ್ಯ ಮುಖ್ಯ. ನಾನು ಪೊಲಿಟೀಶಿಯನ್ ಆಗಿ ಸ್ಟೇಟ್‌ಮೆಂಟ್ ಮಾಡುತ್ತಾ ಇಲ್ಲ. ನಾನು ಸ್ಟೇಟ್ಸ್‌ಮೆನ್ ಆಗಿ ಮಾತನಾಡುತ್ತಿದ್ದೇನೆ. The politician always thinks of next general election, but the Statesman always thinks of next generation. ಇವತ್ತು ರಾಜ್ಯಾಂಗದಲ್ಲಿರತಕ್ಕದ್ದಕ್ಕೆ ತಿಲಾಂಜಲಿಯನ್ನು ಕೊಟ್ಟು ನಾವು ಮಾಡತಕ್ಕದ್ದು ನ್ಯಾಯವಾದುದಲ್ಲ. ಈ ಜಾತೀಯತೆ ಎನ್ನತಕ್ಕಂಥದ್ದು ಈ ವಿದ್ಯಾಸಂಸ್ಥೆಗಳಲ್ಲಿರುವುದಾದರೆ ಖಂಡಿತವಾಗಿಯೂ ನಾವು ಒಂದು ಉತ್ತಮವಾದಂತಹ ರಾಷ್ಟ್ರವನ್ನು ಕಟ್ಟುವುದಕ್ಕಾಗುವುದಿಲ್ಲ ಎಂದು ನಾನು ಹೇಳುತ್ತೇನೆ. ಇವತ್ತು ನಾವು ಜಾತೀಯತೆ ಹೋಗಬೇಕೆಂದು ಹೇಳುತ್ತಿದ್ದೇವೆ. ನಾವು ಇವತ್ತು ಬರೀ ಬಾಯಲ್ಲಿ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಮತ್ತು ಇತರ ತತ್ವಗಳನ್ನು ಹೇಳುತ್ತಾ ಹೋದರೆ, ನತದೃಷ್ಟರಾದಂತಹ, ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಾಗುವಂತ ಜನ ಏನು ಇದ್ದಾರೆ, ಅವರಿಗೆ ನಿಜವಾದ ವಿದ್ಯಾಭ್ಯಾಸದ ಪ್ರಯೋಜನವನ್ನು ಪಡೆಯುವುದಕ್ಕಾಗುವುದಿಲ್ಲ. ಇವತ್ತು ಸ್ವತಂತ್ರ ಪಕ್ಷದೊಡನೆ, ಜನಸಂಘದೊಡನೆ ಮತ್ತು ಇತರ ಪಕ್ಷಗಳೊಡನೆ ಸೇರಿ ಸಮ್ಮಿಶ್ರ ಸರ್ಕಾರ ರಚನೆ ಮಾಡತಕ್ಕ ನೀತಿ ಏನಿದೆ, ಇದು ರಾಷ್ಟ್ರವನ್ನು ಅಧಃಪತನಕ್ಕೆ ತೆಗೆದುಕೊಂಡುಹೋಗಿ ಪ್ರಜಾಪ್ರಭುತ್ವವನ್ನು ಮಣ್ಣುಗೂಡಿಸುತ್ತದೆ. ಈ ರೀತಿ ಮಾಡಿದರೆ ನಾವು ದೊಡ್ಡ ರಾಷ್ಟ್ರವನ್ನಾಗಿ ಮಾಡುವುದಕ್ಕಾಗುವುದಿಲ್ಲ. ಇಷ್ಟು ಮಾತನಾಡಿ, ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಮಾನ್ಯ ಸಭಾಧ್ಯಕ್ಷರೇ, ವಿದ್ಯಾಮಂತ್ರಿಗಳು ಮಂಡಿಸಿರುವ ಈ ಬೇಡಿಕೆಯನ್ನು ವಿರೋಧಿಸುತ್ತಾ, ಮಾತನಾಡುವುದರಿಂದ ಪ್ರಯೋಜನವಿಲ್ಲವೆನ್ನುವ ಮಾತನ್ನು ಈ ಮೊದಲೇ ಹೇಳಿದ್ದೇನೆ. ಆದರೂ ವಿದ್ಯಾ ಇಲಾಖೆಯಲ್ಲಿ ಕಂಡುಬರುವ ಕೆಲವು ಲೋಪದೋಷಗಳನ್ನು ಮತ್ತು ಅವರಿಂದ ದೇಶದ ಮೇಲಾಗುತ್ತಿರುವ ಅನಾಹುತಗಳನ್ನು ಕೆಲವು ಉದಾಹರಣೆಗಳಿಂದ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವ ಇಚ್ಛೆಯಿಂದ ನಾಲ್ಕು ಮಾತುಗಳನ್ನು ಹೇಳುತ್ತಿದ್ದೇನೆ. ವಿದ್ಯಾಖಾತೆಯು ಎಲ್ಲಾ ಖಾತೆಗಿಂತ ಅತ್ಯಂತ ಮಹತ್ವದ್ದು ಎಂಬುದು ನಿರ್ವಿವಾದ ವಿಚಾರ. ನಿಜವಾಗಿಯೂ ವಿದ್ಯಾಖಾತೆಯನ್ನು ನಡೆಸಿಕೊಂಡು ಹೋಗತಕ್ಕ ಸರ್ಕಾರದ ಅಧಿಕಾರಿಗಳು ವಿದ್ಯಾವಂತರಾಗಿದ್ದಾರೆಯೇ ಎಂದು ನೋಡಬೇಕು. ಕೇವಲ ಬಿ.ಎ., ಎಂ.ಎ., ಬಿ.ಎಲ್., ಎಂ.ಎಲ್.,

(ಶ್ರೀ ಕೆ. ಪಿ. ನಾಡಗೌಡ)

ಎಂಎಸ್.ಸಿ. ಮಾಡಿಕೊಂಡರೆ ವಿದ್ಯಾವಂತರಾಗುತ್ತಾರೆ, ವಿದ್ಯೆ ಪ್ರತಿಯೊಬ್ಬರಲ್ಲೂ ಬರುತ್ತದೆ ಅಂದರೆ ಅದನ್ನು ನಾನು ಒಪ್ಪಲಾರೆ. ಸರ್ವಜ್ಞನು ತನ್ನ ವಚನದಲ್ಲಿ ಹೇಳಿದ್ದಾನೆ. ಏನೆಂದರೆ : ಯಾರು ಲಕ್ಷ್ಯ ಕೊಡಬೇಕಾದದ್ದಕ್ಕೆ ತದ್ವಿರುದ್ಧವಾಗಿ ಅಭಿಪ್ರಾಯವನ್ನು ಕೊಡುತ್ತಾರೋ, ಅವರನ್ನು ನಿಜವಾಗಿಯೂ ವಿದ್ಯಾವಂತರೆಂದು ಕರೆಯಬಾರದು ಎಂಬುದಾಗಿ. ಹೋದ ಸಲ ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ: ಏನೆಂದರೆ ಮುಧೋಳ್‌ನಲ್ಲಿ ಹಿಂದಿ ಪ್ರಚಾರ ಸಮಿತಿಗೆ ಗ್ರ್ಯಾಂಟ್ ಎಷ್ಟು ಸರ್ಕಾರದವರು ಕೊಡುತ್ತಿದ್ದಾರೆ, ಎಂದು ಕೇಳಿದ್ದಕ್ಕೆ ಆರುಸಾವಿರ ರೂಪಾಯಿ ಎಂದು ಹೇಳಿದ್ದರು. ಅದೇ ಪ್ರಶ್ನೆ ಈಗ ಬಂದಾಗ ಉಪಮಂತ್ರಿಯವರು ನಾವು ಗ್ರ್ಯಾಂಟನ್ನು ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಎಷ್ಟು ಕ್ಲಾಸುಗಳನ್ನು ನಡೆಸುತ್ತಿದ್ದಾರೆ ಎಂದು ಕೇಳಿದ್ದಕ್ಕೆ 31 ಹಳ್ಳಿಗಳಲ್ಲಿ ಕ್ಲಾಸುಗಳನ್ನು ನಡೆಸುತ್ತಿದ್ದಾರೆ ಎಂದು ಲಿಖಿತ ಮೂಲಕ ಉತ್ತರವನ್ನು ಕೊಟ್ಟಿದ್ದಾರೆ. ಆರುಸಾವಿರ ರೂಪಾಯಿಗಳನ್ನು ಗ್ರ್ಯಾಂಟಿನ ರೂಪದಲ್ಲಿ ಸರ್ಕಾರದವರು ಏನು ಕೊಡುತ್ತಿದ್ದಾರೆ, ಅದು ಸದುಪಯೋಗವಾಗಿಲ್ಲ ಎನ್ನುವ ಬಗ್ಗೆ ನಿದರ್ಶನಗಳನ್ನು ಕೊಟ್ಟಿದ್ದೇನೆ. ಆ ಗ್ರ್ಯಾಂಟನ್ನು ನಿಲ್ಲಿಸಿ ಆ ಹಣವನ್ನು ಬೇರೆ ಕಡೆ ಉಪಯೋಗ ಮಾಡುವುದು ಒಳ್ಳೆಯದು ಎಂದು ಸೂಚನೆ ಮಾಡುತ್ತೇನೆ. ಇಂದು ಪ್ರಾಥಮಿಕ ಶಾಲೆಗಳೆಲ್ಲಾ ಆದರ್ಶ ಶಾಲೆಗಳನ್ನಾಗಿ ಮಾಡಬೇಕೆಂದು, ಪ್ರತೀ ಜಿಲ್ಲೆಗೂ ಪ್ರತಿ ತಾಲ್ಲೂಕಿಗೂ ಟ್ರೈನ್ಡ್ ಟೀಚರುಗಳನ್ನು ಸರ್ಕಾರದವರು ನೇಮಕ ಮಾಡುತ್ತಿದ್ದಾರೆ. ಮುಧೋಳ್ ತಾಲ್ಲೂಕಿನ ಸಣ್ಣ ಪಟ್ಟಣದಲ್ಲಿ ತರಬೇತಿ ಪಡೆದ ಉಪಾಧ್ಯಾಯರ ನೇಮಕವಾಗಿದೆ. ಅಲ್ಲಿ ಸ್ಕೂಲಿನ ಹೆಡ್‌ಮಾಸ್ಟರ್ ಕೇವಲ ಪಶುಪಾಲಕ, ಎಂದು ಹೇಳಬಹುದು. ಅವರನ್ನು ಎಷ್ಟು ವರ್ಷವಾದರೂ ಅಲ್ಲಿಯೇ ಇಟ್ಟುಕೊಂಡಿದ್ದಾರೆ. ಏಕೆಂದರೆ, ಅವರು ಸಹಕಾರ ಮಂತ್ರಿಯವರಿಗೆ ಓಟಿನಲ್ಲಿ ಕ್ಯಾನ್‌ವಾಸ್ ಮಾಡಿದ್ದಾರೆ. ಜೈಹಿಂದ್ ಸ್ಕೂಲಿಗೆ ಅವರನ್ನು ಒಬ್ಬ ಮುಖ್ಯ ಗುರುಗಳನ್ನಾಗಿ ನೇಮಕ ಮಾಡಿದರು. ಮುಂದೆ 6—7 ತಿಂಗಳಲ್ಲಿ ಅಲ್ಲಿಗೆ ಒಬ್ಬ ನಿಮ್ನವರ್ಗದ ಎ.ಇ.ಒ. ಸಾಹೇಬರು ಬಂದರು. ಆಗ ಜೈಹಿಂದ್ ಸ್ಕೂಲಿನ ಮುಖ್ಯ ಉಪಾಧ್ಯಾಯರಾದ ಬಿ.ಕೆ. ಪಟ್ವಾರನ್ನು ಮುಲ್ಲಾಪುರಕ್ಕೆ ಟ್ರಾನ್ಸ್‌ಫರ್ ಮಾಡಿದರು. ನಂತರ ಅವರು ತಮಗೆ ದೊರೆತ ಸರ್ಟಿಫಿಕೇಟುಗಳನ್ನೆಲ್ಲಾ ಮುಂದೆ ಇಟ್ಟುಕೊಂಡು ಬೆಳಿಗ್ಗೆಯಿಂದ ನಾಲ್ಕು ಗಂಟೆಯ ತನಕ ಕಣ್ಣೀರು ಹಾಕಿಕೊಂಡು, ಕೊನೆಗೆ ತೀರಿಕೊಂಡರು. ಅದು ಪೇಪರಿನಲ್ಲೂ ಬಂದಿವೆ. ಪೋಲೀಸ್ ರಿಪೋರ್ಟು ನೋಡಿದರೆ, ಆತ್ಮ ಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಇನ್ನೊಂದು ಅತಿ ಮಹತ್ವದ ವಿಷಯ, ಎಂದರೆ ಟ್ರೇನ್ಡ್ ಗ್ರ್ಯಾಜುಯೇಟ್ಸ್ ಟೀಚರ್ಸ್ ವಿಚಾರ. ಉತ್ತರ ಕರ್ನಾಟಕದ 3 ಜಿಲ್ಲೆಗಳ 57 ಜನ ಟ್ರೇನ್ಡ್ ಗ್ರ್ಯಾಜುಯೇಟ್ಸ್ ಟೀಚರುಗಳನ್ನು ಕಾರವಾರಕ್ಕೆ ಮಾಧ್ಯಮಿಕ ಶಾಲೆಗಳಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಆದರೆ ಅವರು ಪ್ರಾಥಮಿಕ ಶಾಲೆಗಳಲ್ಲಿ ಇದ್ದಾಗ ಅವರಿಗೆ ಎಷ್ಟು ಸಂಬಳ ಮತ್ತು ತುಟ್ಟಿಭತ್ಯವನ್ನು ಕೊಡುತ್ತಿದ್ದರೋ ಅಷ್ಟೆ ಸಂಬಳ ಮತ್ತು ತುಟ್ಟಿಭತ್ಯವನ್ನು ಈ ಮಾಧ್ಯಮಿಕ ಶಾಲೆಗಳಲ್ಲಿಯೂ ಕೊಡುತ್ತಿದ್ದಾರೆ. ಯಾವುದೂ ಹೆಚ್ಚು ಕಡಿಮೆ ಆಗಿಲ್ಲ. ಈಗ 4–5 ವರ್ಷಗಳಿಂದ ಅವರು ಹಾಗೆಯೇ ಕೆಲಸ ಮಾಡುತ್ತಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳು ಮತ್ತು ಡಿ. ಪಿ. ಐ. ಅವರು ಕೂಡಲೇ ವಿಚಾರ ಮಾಡಿ ಆ ಶಿಕ್ಷಕರಿಗೆ ಹೆಚ್ಚಿನ ತುಟ್ಟಿಭತ್ಯ ಮತ್ತು ಹೆಚ್ಚಿನ ವೇತನವನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಂಡು, ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಸ್ವಾಮಿ, ಅಧ್ಯಕ್ಷರೇ ಮಾನ್ಯ ವಿದ್ಯಾಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ವಿದ್ಯಾ ಖಾತೆಗೆ ಸಂಬಂಧಿಸಿದ ಬೇಡಿಕೆಗಳನ್ನು ಸ್ವಾಗತಿಸುತ್ತಾ ಈ ಬಗ್ಗೆ ಕೆಲವು ಮಾತುಗಳನ್ನು ಆಡುವುದಕ್ಕೆ ನಾನು ಇಚ್ಛಿಸುತ್ತೇನೆ. 1951ನೇ ಇಸವಿಯಿಂದ ವಿದ್ಯಾ ಇಲಾಖೆಯ ಪ್ರಗತಿಯ ಅಂಕಿಅಂಶಗಳನ್ನು ಪರಿಶೀಲನೆ ಮಾಡಿದರೆ, ವಿದ್ಯಾರ್ಥಿಗಳ ಸಂಖ್ಯೆ ಸರಾಸರಿ ಪಟ್ಟಣದಲ್ಲಿ 50, ಗ್ರಾಮಾಂತರ ಪ್ರದೇಶಗಳಲ್ಲಿ ಸರಾಸರಿ 2೦ ಇತ್ತು, ಎಂದು ಅರ್ಥವಾಗುತ್ತದೆ. ಈ ಒಂದು ಅಂಶವನ್ನು ಪರಿಶೀಲನೆ ಮಾಡಿದರೆ ಪ್ರಾರಂಭದಿಂದಲೂ ಸರ್ಕಾರದವರು ವಿದ್ಯಾವಂತರು ಇರತಕ್ಕ ಪಟ್ಟಣಗಳಲ್ಲಿಯೇ ವಿದ್ಯಾಭ್ಯಾಸದ ಪ್ರಗತಿಗೆ ಹೆಚ್ಚು ಹೆಚ್ಚು ಉತ್ತೇಜನ ಕೊಟ್ಟುಕೊಂಡು ಬರುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳ ಸಂಖ್ಯೆ ಅವಿದ್ಯಾವಂತರ ಸಂಖ್ಯೆ ಹೆಚ್ಚು ಇದೆ. ಆ ಕಡೆ ಸರ್ಕಾರದ ನಿಗಾ ಹರಿಯುತ್ತಿಲ್ಲ. ಇದು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ನಮ್ಮ ದುರ್ದೈವ ಎಂದು ಹೇಳಬೇಕಾಗುತ್ತದೆ. ಈ ಬಗ್ಗೆ ಇದುವರೆಗೆ ಅನೇಕ ಜನ ಸ್ನೇಹಿತರು ಪ್ರಸ್ತಾಪ ಮಾಡಿದಂತೆ ನಾನೂ ಕೂಡ ವಿದ್ಯಾಭ್ಯಾಸ ಇಲಾಖೆಯಲ್ಲಿ ಹೆಚ್ಚು ಹಣವನ್ನು ಖಾಸಗೀ ಸಂಸ್ಥೆಗಳಿಗೆ ವಿನಿಯೋಗವಾಗುತ್ತಿದೆ ಎಂದು ಅಂಕಿ ಅಂಶಗಳ ಮೂಲಕ ನಾನು

ಕಂಡುಕೊಂಡಿದ್ದೇನೆ. 46 ಕೋಟಿ ರೂಪಾಯಿಗಳಲ್ಲಿ ಶೇಕಡಾ 35 ಭಾಗ ಹಣ ಸರ್ಕಾರಿ ಪಾಠಶಾಲೆಗಳು, ಮತ್ತು ಕಾಲೇಜುಗಳಿಗೆ ಖರ್ಚಾಗುತ್ತದೆ. ಇನ್ನು ಶೇಕಡ 50 ಕ್ಕಿಂತ ಹೆಚ್ಚು ಹಣ ಖಾಸಗೀ ವಿದ್ಯಾಸಂಸ್ಥೆಗಳಿಗೆ ವಿನಿಯೋಗವಾಗುತ್ತಿದೆ. ಇದು ಪರಿಶೀಲನೆ ಮಾಡತಕ್ಕ ಪ್ರಶ್ನೆ ಎಂದು ನಾನು ಭಾವಿಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಸರ್ಕಾರ ತನ್ನ ಒಂದು ಅಧಿಕಾರವನ್ನು ವಿಕೇಂದ್ರೀಕರಣಮಾಡಿ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳ ಮೂಲಕ ನಡೆಸಬೇಕು ಎನ್ನತಕ್ಕ ತೀರ್ಮಾನವನ್ನು ಸರ್ಕಾರ ಕೈಗೊಂಡಿರುವಾಗ ಅದರಂತೆ ಸರ್ಕಾರ ಸ್ಥಳೀಯ ಸಂಸ್ಥೆಗಳ ಮುಖಾಂತರ ಅಧಿಕಾರವನ್ನು ನಡೆಸುವುದಕ್ಕೆ ಪ್ರಯತ್ನ ಮಾಡಬೇಕು. ಆದರೆ ಈಗ ಸರ್ಕಾರದವರು ಅವುಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡತಕ್ಕಂಥ ಅವಕಾಶವನ್ನು ನಾವು ನೋಡುತ್ತಾ ಇಲ್ಲ. ಅವು ಶಕ್ತಿಯುತವಾಗಿ ಬೆಳೆಯುವುದಕ್ಕೆ ಅವಕಾಶ ಕೊಡುತ್ತಾ ಇಲ್ಲ. ಅನೇಕ ಖಾಸಗೀ ಪಾಠಶಾಲೆಗಳಿಗೆ ಸರ್ಕಾರದವರು ಕೊಡತಕ್ಕಂಥ ಹಣ ದುರ್ವಿನಿಯೋಗವಾಗುತ್ತಿದೆ; ಮತ್ತು ಖಾಸಗೀ ಪಾಠಶಾಲೆಗಳಿಗೆ ಮಕ್ಕಳಿಗೆ ದೊರೆಯುತಕ್ಕ ವಿದ್ಯಾಭ್ಯಾಸದಲ್ಲಿ ಗುಣಮಟ್ಟ ಇಳಿದುಹೋಗಿದೆ; ಮತ್ತು ಆ ಶಾಲೆಗಳಲ್ಲಿ ಅನೇಕ ಲೋಪದೋಷಗಳು ಇವೆ. ಅವುಗಳನ್ನು ಉತ್ತಮಪಡಿಸತಕ್ಕ ಪ್ರಯತ್ನವನ್ನು ಯಾರೂ ಮಾಡಿಲ್ಲ. ಈಗ ಹೊಸದಾಗಿ ಪ್ರಾರಂಭ ಮಾಡತಕ್ಕ ಖಾಸಗೀ ಶಾಲೆಗಳಿಗೆ 5 ವರ್ಷಗಳತನಕ ಗ್ರಾಂಟು ಕೊಡುವುದಿಲ್ಲ ಎಂದು ಸರ್ಕಾರ ಮಾಡಿರತಕ್ಕ ತೀರ್ಮಾನ ಮಾಡಿರತಕ್ಕದ್ದು ಸರಿಯಾಗಿದೆ. ಇದರಿಂದ ಖಂಡಿತವಾಗಿಯೂ ವಿದ್ಯಾಭ್ಯಾಸದ ಗುಣಮಟ್ಟ ಹೆಚ್ಚಾಗುವುದಕ್ಕೆ ಸಹಾಯಕವಾಗಿದೆ. ಪ್ರಾಥಮಿಕ ಶಾಲಾಮಟ್ಟದಿಂದ ಹಿಡಿದು ಸೆಕೆಂಡರಿ ಮತ್ತು ವಿಶ್ವವಿದ್ಯಾನಿಲಯದ ಶಿಕ್ಷಣದ ಮಟ್ಟದವರೆಗೂ ಖಾಸಗಿ ವಿದ್ಯಾ ಸಂಸ್ಥೆಗಳು ವಿದ್ಯಾಭ್ಯಾಸವನ್ನು ನಡೆಸಿಕೊಂಡು ಬರುವುದನ್ನು ತಪ್ಪಿಸಿ ಸ್ಥಳೀಯ ಸಂಸ್ಥೆಗಳು ಎಂದರೆ ತಾಲ್ಲೂಕು ಬೋರ್ಡು ಮತ್ತು ಪಂಚಾಯ್ತಿಗಳು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಕಾಲೇಜು ಶಿಕ್ಷಣದವರೆಗೂ ಅವರು ವಹಿಸಿಕೊಳ್ಳುವುದಾದರೆ ಅದು ಉತ್ತಮವಾದ ವ್ಯವಸ್ಥೆಯಾಗುತ್ತದೆ. ಅವುಗಳ ಮೂಲಕ ಉತ್ತಮವಾದ ವಿದ್ಯಾಭ್ಯಾಸ ನಮ್ಮ ಜನತೆಗೆ ದೊರೆಯುತ್ತದೆ ಎನ್ನುವಂತಹ ಸಲಹೆಯನ್ನು ನಾನು ಸರ್ಕಾರದ ಮುಂದೆ ಇಡುವುದಕ್ಕೆ ಅಪೇಕ್ಷೆ ಮಾಡುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ನರ್ಸರಿ ಪಾಠಶಾಲೆಗಳನ್ನು ಪ್ರಾರಂಭ ಮಾಡಿಲ್ಲ. ನರ್ಸರಿ ಪಾಠಶಾಲೆಗಳು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ತಳಹದಿಯಾಗಿ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ವಿದ್ಯಾಭ್ಯಾಸದ ಮಮತೆ ಬರುವಂತೆ ಮಾಡಿ ವಿದ್ಯಾಭ್ಯಾಸವನ್ನು ಬೆಳೆಸುವುದಕ್ಕೆ ಅವಕಾಶ ಇದೆ. ಈ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಕೊನೆಯಪಕ್ಷ 50 ಮಕ್ಕಳಿಗೆ ಒಂದು ನರ್ಸರಿ ಪಾಠಶಾಲೆಯಂತೆ ಕಡ್ಡಾಯವಾಗಿ ತೆರೆಯುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಇದರಿಂದ ದೇಶದ ಭದ್ರತೆಯನ್ನು ಕಾಪಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣದಲ್ಲಿ ಆಗಿರುವಂತಹ ಪ್ರಗತಿಯನ್ನು ನಾವು ಪರಿಶೀಲನೆ ಮಾಡಿದರೆ ಇವುಗಳಲ್ಲಿ ಪ್ರತಿ ವರ್ಷ ಉತ್ತೀರ್ಣರಾಗತಕ್ಕಂಥ ಮಕ್ಕಳ ಸಂಖ್ಯೆ 30 ಪರ್ಸೆಂಟ್ ಇದೆ. ಕಾಲೇಜು ವಿದ್ಯಾಭ್ಯಾಸದಲ್ಲಿ ಪಿ.ಯು.ಸಿ. ಯಲ್ಲಿ 30 ಪರ್ಸೆಂಟ್ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿದ್ದಾರೆ. ಇಷ್ಟೊಂದು ಹಣವನ್ನು ಸರ್ಕಾರದವರು ಈ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿ ಈತರಹ ಕಡಿಮೆ ಪ್ರಮಾಣದಲ್ಲಿ ಫಲಿತಾಂಶ ಬರುವುದನ್ನು ನೋಡಿದರೆ ಶಿಕ್ಷಕರು ಎಷ್ಟರಮಟ್ಟಿಗೆ ಮಕ್ಕಳನ್ನು ತಯಾರು ಮಾಡುತ್ತಿದ್ದಾರೆ ಎಂಬುದನ್ನು ಈ ಫಲಿತಾಂಶದಿಂದ ನಾವು ಮನಗಾಣಬಹುದು. ಕೆಳಮಟ್ಟದ ಶಿಕ್ಷಣವನ್ನು ಉತ್ತಮ ಪಡಿಸತಕ್ಕಂಥವರು ಶಿಕ್ಷಕರಾಗಬೇಕು. ಈ ದೃಷ್ಟಿಯಿಂದ ಶಿಕ್ಷಕರ ಜೀವನವನ್ನು ಉತ್ತಮಪಡಿಸಬೇಕೆಂದು ಬಹಳ ವರ್ಷಗಳಿಂದ ಕಷ್ಟಪಟ್ಟು ಅವರ ಸಂಬಳ ಸಾರಿಗೆಯನ್ನು ಉತ್ತಮಪಡಿಸಿದ್ದಾರೆ. ಅವರಿಗೆ ಕೈತುಂಬಾ ಹಣ ಕೊಟ್ಟು ನಮ್ಮ ದೇಶದ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ಒದಗಿಸಿ ಎಂದು ಅವರನ್ನು ಇಟ್ಟುಕೊಂಡರೆ, ಈಗಾಗಲೇ ನಾವು ಮನಗಂಡಿರುವಂತೆ ಆ ಉಪಾಧ್ಯಾಯರು ಕೈತುಂಬ ಹಣವನ್ನು ಪಡೆದು ಹೆಚ್ಚಿನ ಬಂಡವಾಳವನ್ನು ಮಾಡಿಕೊಂಡು ಖಾಸಗೀ ಉದ್ಯಮಗಳಲ್ಲಿ ಪ್ರವೇಶಿಸಿ ಹಣವನ್ನು ಸಂಪಾದನೆ ಮಾಡುವುದಕ್ಕೆ ತೊಡಗಿದ್ದಾರೆ. ಆದ್ದರಿಂದ ಈ ರೀತಿಯಾಗಿ ಶಾಲೆಗಳಲ್ಲಿ ಪಾಠವನ್ನು ಹೇಳಿಕೊಡತಕ್ಕ ಉಪಾಧ್ಯಾಯರು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸುವುದಾದರೆ ಅವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ನಿಯಮಗಳನ್ನು ರಚನೆಮಾಡಿ, ಒಂದು ಕಾನೂನು ಮಾಡಿ, ಎಲ್ಲಿ ಯಾವಾಗ ಉಪಾಧ್ಯಾಯರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೆ ಮಕ್ಕಳಿಗೆ ಸರಿಯಾಗಿ ಪಾಠವನ್ನು ಹೇಳಿಕೊಡುವುದಿಲ್ಲವೋ ಅಂಥಾ ಸಂದರ್ಭದಲ್ಲಿ ಆ ಉಪಾಧ್ಯಾಯರ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಆದರೆ ಅದು ತಕ್ಷಣ ಬಂದೋಬಸ್ತು ಆಗಬಹುದು. ಸರಿಹೋಗಬಹುದು ಎಂದು ನಾನು ಆಸೆ ಪಡುತ್ತೇನೆ.

ಕಟ್ಟಡಗಳ ಬಗ್ಗೆ ಹೇಳುವುದಾದರೆ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಕೇಂದ್ರ ಸರ್ಕಾರದವರು 1969-70ನೇ ಇಸವಿಯಿಂದ ಸಂಪೂರ್ಣವಾಗಿ ವಹಿಸಿಕೊಳ್ಳುತ್ತಾರೆ ಎಂದು ಪಾರ್ಲಿಮೆಂಟ

(ಶ್ರೀ ಬಿ. ಗಂಗಣ್ಣ)

ನಲ್ಲಿ ಮೈಸೂರಿನ ಸದಸ್ಯರಿಗೆ ಕೇಂದ್ರ ಸರ್ಕಾರದ ವಿದ್ಯಾಸಚಿವರು ಹೇಳಿದ್ದಾರೆ. ಆದ್ದರಿಂದ ಈಗ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಕಟ್ಟಡಕ್ಕಾಗಿ ಈ ಸಾರಿ ಒದಗಿಸಿರುವ ಹಣ ಉಳಿತಾಯವಾಗುತ್ತದೆ. ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಆ ಹಣವನ್ನು ಗ್ರಾಮಾಂತರ ಪ್ರದೇಶದ ಪಾಠಶಾಲೆಗಳನ್ನು ಕಟ್ಟುವುದಕ್ಕೆ ಉಪಯೋಗಿಸುವುದಾದರೆ ಒಳ್ಳೆಯ ಉಪಯುಕ್ತವಾದ ಕೆಲಸವನ್ನು ಮಾಡಿದಂತಾಗುತ್ತದೆ.

ನಮ್ಮ ದೇಶದಲ್ಲಿ ಆಯಾ ರಾಜ್ಯಗಳಲ್ಲಿ ಆಯಾ ಪ್ರದೇಶಿಕ ಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಿಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರದವರು ನಾಲ್ಕನೇ ಪಂಚವಾರ್ಷಿಕ ಯೋಜನೆಯ ಪ್ರಾರಂಭ ವರ್ಷದಿಂದ ಒಂದೊಂದು ಕೋಟಿ ರೂಪಾಯಿಗಳನ್ನು ಪ್ರತಿ ರಾಜ್ಯಕ್ಕೂ ಕೊಡುತ್ತಾರೆಂದು ಆಶ್ವಾಸನೆಯನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ ಎಂದು ಈ ಸದನದಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಸರ್ಕಾರದವರು ತಿಳಿಸಿದ್ದಾರೆ. ಆದ್ದರಿಂದ ಯಾವ ಆತಂಕವನ್ನೂ ಇಟ್ಟುಕೊಳ್ಳದೆ ನಮ್ಮ ರಾಜ್ಯದಲ್ಲಿ 1969-70ನೇ ಸಾಲಿನಿಂದ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಇಟ್ಟುಕೊಳ್ಳಬೇಕೆಂದು ಕಡ್ಡಾಯವಾಗಿ ಒಂದು ಆರ್ಡರನ್ನು ಸರ್ಕಾರದವರು ಮಾಡಿ, ಕನ್ನಡಕ್ಕೆ ಪ್ರೋತ್ಸಾಹ ಕೊಡಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದಕ್ಕಾಗಿ ಅವರಿಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

7-30 P.M.

ಶ್ರೀ ಕೆ. ವಿ. ಶಂಕರಗೌಡ (ವಿದ್ಯಾಶಾಖೆಯ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಈ ಬೇಡಿಕೆಯ ಮೇಲೆ ಇದುವರೆಗೆ 28 ಜನ ಭಾಷಣ ಮಾಡಿದ್ದಾರೆ. ಅನೇಕ ಜನ ಮಾನ್ಯ ಸದಸ್ಯರುಗಳು ಶಿಕ್ಷಣದ ಬಗ್ಗೆ ಉಪಯುಕ್ತವಾದಂಥ ಸಲಹೆಗಳನ್ನು ನೀಡಿದ್ದಾರೆ. ಅನೇಕ ಜನ ಮಾನ್ಯ ಸದಸ್ಯರುಗಳು ರಚನಾತ್ಮಕವಾದಂಥ ಟೀಕೆಗಳನ್ನೂ ಸಹ ಮಾಡಿದ್ದಾರೆ. ಮತ್ತೆ ಕೆಲವು ಮಾನ್ಯ ಸದಸ್ಯರುಗಳು ಉದ್ರೇಕಪೂರಿತವಾದಂಥ ಭಾಷಣ ಮಾಡಿದ್ದಾರೆ. ಅವರುಗಳು ಹೇಳಿದ ಎಲ್ಲಾ ಅಂಶಗಳನ್ನು ಬಹಳ ಎಚ್ಚರಿಕೆಯಿಂದ ಕೇಳಿದ್ದೇನೆ; ಮತ್ತು ಎಲ್ಲರಲ್ಲಿಯೂ ಒಂದೇ ರೀತಿಯ ಕಾತುರತೆ ಇರುವುದನ್ನು ಗುರುತಿಸಿದ್ದೇನೆ. ಎಲ್ಲರಿಗೂ ಇರುವ ಆಸೆ ಒಂದೆ. ನಮ್ಮ ಮಕ್ಕಳಿಗೆ ಕೊಡುವ ಶಿಕ್ಷಣ ಧ್ಯೇಯಾತ್ಮಕವಾದ ಮತ್ತು ಸತ್ವಪೂರ್ಣವಾದ ಶಿಕ್ಷಣವಾಗಿರಬೇಕು, ನಮ್ಮ ರಾಷ್ಟ್ರವನ್ನು ಪುನರ್ ನಿರ್ಮಾಣ ಮಾಡುವ ಬಗ್ಗೆ, ನಮ್ಮ ಭವಿಷ್ಯವನ್ನು ಉಜ್ವಲಗೊಳಿಸುವುದಕ್ಕೆ ಸಹಕಾರಿಯಾದ ಶಿಕ್ಷಣ ಬೇಕು ಎಂದು ಎಲ್ಲರಲ್ಲಿಯೂ ಇರುವ ಕಾತುರತೆಯಾಗಿದೆ. ಇದರಲ್ಲಿ ಅಭಿಪ್ರಾಯ ಬೇಧವಿಲ್ಲ. ಅವರು ಮಾತನಾಡುವ ವಿಷಯ, ವಿನ್ಯಾಸ, ಧಾಟಿ ಬೇರೆ ಬೇರೆಯಾದರೂ ಕೂಡ ಗುರಿ ಎಲ್ಲಾ ಒಂದೇ ಎಂದು ತಿಳಿದುಕೊಂಡಿದ್ದೇನೆ. ಉಪಯುಕ್ತವಾದಂಥ ಸಲಹೆಗಳನ್ನು ಕೊಟ್ಟವರಿಗೆ ಘಟನಾತ್ಮಕವಾದ ಟೀಕೆಗಳನ್ನು ಮಾಡಿದವರಿಗೆ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ.

ಸ್ವಾತಂತ್ರ್ಯ ಬಂದಮೇಲೆ ಶಿಕ್ಷಣಕ್ಕಾಗಿ ಜನತೆಯಿಂದ ಬೇಡಿಕೆಗಳು ಹೆಚ್ಚುತ್ತಾ ಬಂದಿವೆ. ನಾವು ದಾಸ್ಯದಲ್ಲಿ ಇದ್ದಾಗ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾಗಿರಲಿಲ್ಲ. ಸ್ವಾತಂತ್ರ್ಯ ಬಂದಮೇಲೆ ಜನಜಾಗೃತಿ ಹೆಚ್ಚಿದೆ. ಒಂದು ನವ ಚೈತನ್ಯ ಜನರಲ್ಲಿ ಮಿಡಿಯುತ್ತಿದೆ. ತನ್ನ ಮಗು ವಿದ್ಯಾವಂತನಾಗಬೇಕೆಂಬ ಆಶೆಯನ್ನು ಇಟ್ಟುಕೊಂಡಿದ್ದಾನೆ. ಎಲ್ಲರೂ ಶಿಕ್ಷಣ ಸೌಲಭ್ಯದ ವಿಸ್ತರಣೆಗಾಗಿ ಸರ್ಕಾರದ ಮುಂದೆ ಬೇಡಿಕೆಗಳನ್ನು ಇಡುತ್ತಾ ಬಂದಿದ್ದಾರೆ. ಈ ಬೇಡಿಕೆಗಳನ್ನು ಮಾನ್ಯ ಮಾಡುವುದಕ್ಕಾಗಿ ಪಟ್ಟಣಗಳಲ್ಲಿ ಮತ್ತು ಗ್ರಾಮಾಂತರಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡಿದ್ದೇವೆ. ಈ 20 ವರ್ಷಗಳಲ್ಲಿ ಆಗಿರತಕ್ಕಂಥ ವಿಸ್ತರಣಾ ಕಾರ್ಯ ಅದ್ಭುತವಾದುದು. ಈಗ ಕೊಡತಕ್ಕಂಥ ಅಂಕಿಅಂಶಗಳಿಂದ ಅದನ್ನು ಮಾನ್ಯಸದಸ್ಯರುಗಳು ತಿಳಿದುಕೊಳ್ಳಬಹುದು.

		1956ನೇ ಇಸವಿಯಲ್ಲಿ	1968ನೇ ಇಸವಿಯಲ್ಲಿ
ಪ್ರೀಪ್ರೈಮರಿ ಸ್ಕೂಲ್‌ಗಳು	...	95	741
ಜೂನಿಯರ್ ಪ್ರೈಮರಿ ಸ್ಕೂಲ್‌ಗಳು	...	20,692	21,611
ಸೀನಿಯರ್ ಪ್ರೈಮರಿ ಸ್ಕೂಲ್‌ಗಳು	...	1,558	11,000

		1956ನೇ ಇಸವಿಯಲ್ಲಿ	1968ನೇ ಇಸವಿಯಲ್ಲಿ
ಸೆಕೆಂಡರಿ ಸ್ಕೂಲ್‌ಗಳು	...	486	1,840
ಹುಡುಗಿಯರ ಪ್ರೌಢಶಾಲೆಗಳು	...	83	250
ಆರ್ಟ್ಸ್, ಸೈನ್ಸ್ ಅಂಡ್ ಕಾಮರ್ಸ್ ಕಾಲೇಜುಗಳು	...	42	120
ಬ್ಯಾಚುಲರ್ ಆಫ್ ಎಜುಕೇಷನ್ ಕಾಲೇಜುಗಳು	...	9	19
ಇಂಜನಿಯರಿಂಗ್ ಕಾಲೇಜುಗಳು	...	6	16
ಪಾಲಿಟೆಕ್ನಿಕ್‌ಗಳು	...	9	27
ಟೀಚರ್ ಟ್ರೈನಿಂಗ್ ಇನ್‌ಸ್ಟಿಟ್ಯೂಷನ್‌ಗಳು	...	47	85
ಪ್ರೈಮರಿ ಸ್ಕೂಲ್‌ಗಳ ವಿದ್ಯಾರ್ಥಿಗಳ ಸಂಖ್ಯೆ ಒಂದನೇ ಸ್ಟಾಂಡರ್ಡ್‌ನಿಂದ 7ನೇ ಸ್ಟಾಂಡರ್ಡ್‌ವರೆಗೆ	...	18.8 ಲಕ್ಷ	37 ಲಕ್ಷ
ಉಪಾಧ್ಯಾಯರುಗಳು	...	58,204	95,000
ಸೆಕೆಂಡರಿ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ	...	1 ಲಕ್ಷ 17 ಸಾವಿರ	4 ಲಕ್ಷದ 52 ಸಾವಿರ
ಉಪಾಧ್ಯಾಯರುಗಳು	...	7,572	20,000
ವಿದ್ಯಾಭ್ಯಾಸದ ಮೇಲಿನ ಖರ್ಚು	...	9.7 ಕೋಟಿ ರೂಪಾಯಿಗಳು	36.2 ಕೋಟಿ ರೂಪಾಯಿಗಳು

ಈ ಪ್ರಕಾರವಾಗಿ ಜಾಸ್ತಿಯಾಗಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಹೋದ ವರ್ಷ ಕೂಡ ಇದೇ ಅಂಕಿಅಂಶಗಳನ್ನು ಕೊಟ್ಟಿದ್ದಿರಿ.

ಶ್ರೀ ಕೆ. ವಿ. ಶಂಕರಗೌಡ.—ಹೋದ ವರ್ಷಕ್ಕಿಂತ ಹೆಚ್ಚಾಗಿದೆ.

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರುಗಳ ದಾಮಾಷ ಯಾವ ರೀತಿಯಲ್ಲಿದೆ.

ಶ್ರೀ ಕೆ. ವಿ. ಶಂಕರ ಗೌಡ.—ಅದನ್ನೂ ಸಹ ಹೇಳುತ್ತೇನೆ. ಈ ಪ್ರಕಾರವಾಗಿ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ವಿಸ್ತರಣಾ ಕಾರ್ಯವು ಅದ್ಭುತ ಪ್ರಮಾಣದಲ್ಲಿ ನಡೆದಿದೆ. ಈ ರೀತಿ ನಡೆಯುವಾಗ ಒಂದು ದೋಷ ಉಂಟಾಗಿರುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲ. ವಿಸ್ತರಣಾ ಕಾರ್ಯ ಹೆಚ್ಚು ವೇಗದಿಂದ ನಡೆಯುವಾಗ ಗುಣವನ್ನು ಅಷ್ಟೊಂದು ಕಾಪಾಡುವುದಕ್ಕೆ ಸಾಧ್ಯವಾಗಲಿಲ್ಲ. ಇದಕ್ಕೆ ಅನೇಕ ಕಾರಣಗಳು ಇವೆ. ಸರಿಯಾದಂಥ ಕಟ್ಟಡಗಳು ಇಲ್ಲದಿರುವುದು, ತರಪೇತಿಯಾದಂಥ ಉಪಾಧ್ಯಾಯರುಗಳು ಇಲ್ಲದಿರುವುದು, ಪೀಠೋಪಕರಣಗಳು ಇಲ್ಲದಿರುವುದು, ಇವೆಲ್ಲ ಕಾರಣಕ್ಕಾಗಿ ಗುಣವನ್ನು ಕಾಪಾಡಿಕೊಳ್ಳುವುದಕ್ಕಾಗಲಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಇದುವರೆಗೆ ನಮ್ಮ ಮುಂದಿರುವ ಗುರಿ ಅನಕ್ಷರತೆಯಿಂದ ಸಾಕ್ಷರತೆ ಸಾಧಿಸಬೇಕೆನ್ನುವ ಕಡೆಗೆ ಇತ್ತು. ಇನ್ನು ಮುಂದೆ ಈಗ ಆಗಿರುವ ವಿಸ್ತರಣಾ ಕಾರ್ಯವನ್ನು ಕ್ರೋಢೀಕರಿಸಿ ಗುಣವನ್ನು ಹೆಚ್ಚಿಸುವುದರಲ್ಲಿ ನಮ್ಮ ಗಮನ ಕೇಂದ್ರೀಕೃತವಾಗಿದೆ. ಗುಣವನ್ನು ಹೆಚ್ಚಿಸುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. 1961ರಿಂದೀಚೆಗೆ ಪ್ರಾಥಮಿಕ ಶಾಲೆಗಳಿಗೆ ನೇಮಕ ಮಾಡುವ ಉಪಾಧ್ಯಾಯರುಗಳಿಗೆ ಕೊನೆಯಪಕ್ಷ ಎಸ್. ಎಸ್. ಎಲ್. ಸಿ. ಪಾಸಾಗಿರಬೇಕೆಂಬ ನಿಯಮವನ್ನು ಜಾರಿಗೆ ತಂದಿದ್ದೇವೆ. ಒಂದು ವರ್ಷ ಇದ್ದಂಥ ತರಬೇತಿಯನ್ನು ಎರಡು ವರ್ಷಕ್ಕೆ ಮಾರ್ಪಾಟು ಮಾಡಿದ್ದೇವೆ. ಸುಮಾರು ಶೇಕಡ 63ರಷ್ಟು ಜನ ಈಗಾಗಲೇ ತರಬೇತಿ ಪಡೆದಿದ್ದಾರೆ. ನಾಲ್ಕನೆ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಪ್ರಾಥಮಿಕ ಶಾಲೆಗಳ ಎಲ್ಲಾ ಉಪಾಧ್ಯಾಯರುಗಳಿಗೂ ತರಬೇತಿ ಕೊಡಬಹುದೆಂದು ಹೇಳಿ ಅಂದಾಜು ಮಾಡಲಾಗಿದೆ. ಇದರ ಜೊತೆಗೆ ಉಪಾಧ್ಯಾಯರುಗಳಿಗೆ ಇನ್-ಸರ್ವಿಸ್ ಟ್ರೈನಿಂಗನ್ನು ಕೊಡುವ ಏರ್ಪಾಡು ಮಾಡಿದ್ದೇವೆ. ಇದಕ್ಕಾಗಿ ಎರಡು ಸಂಸ್ಥೆಗಳನ್ನು ಪ್ರಾರಂಭ ಮಾಡಲಾಗಿದೆ. ಒಂದು ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲೀಷ್. ಇದರಲ್ಲಿ ಇಂಗ್ಲೀಷ್ ಭಾಷೆ ಕಲಿಸುವ ವಿಷಯವಾಗಿ ಉಪಾಧ್ಯಾಯರಿಗೆ ಶಿಕ್ಷಣ ಕೊಡಲಾಗುತ್ತದೆ. ಇನ್ನೊಂದು ಸ್ಟೇಟ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಷನ್ ಎಂಬುದನ್ನು ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ವಿಜ್ಞಾನ ಕಲಿಸುವ

(ಶ್ರೀ ಕೆ. ವಿ. ಶಂಕರಗೌಡ)

ಬಗ್ಗೆ ಉಪಾಧ್ಯಾಯರಿಗೆ ತರಬೇತಿ ಕೊಡಲಾಗುತ್ತದೆ. ಇವುಗಳ ಜೊತೆಗೆ ಸ್ಟೇಟ್ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಎಂಬುದನ್ನು ಪ್ರಾರಂಭ ಮಾಡಿದ್ದೇವೆ. ಇದು ತರಬೇತಿ ಕೊಡುವ ಸಂಸ್ಥೆಗಳ ಮೇಲ್ವಿಚಾರಣೆ ನೋಡಿಕೊಳ್ಳುವ ಸಂಸ್ಥೆಯಾಗಿದೆ. ಕೊಠಾರಿ ಆಯೋಗದವರು ಶಿಕ್ಷಣ ಸುಧಾರಣೆ ಮಾಡಬೇಕಾದರೆ ಏನೇನು ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ಹೇಳಿ ದ್ದಾರೋ ಆ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಶ್ರೀಕಂಠಯ್ಯನವರು ಉಪಾಧ್ಯಾಯರುಗಳ ಮತ್ತು ವಿದ್ಯಾರ್ಥಿ ಗಳ ದಾಮಾಷ ಎಷ್ಟಿದೆ ಎಂದು ಕೇಳಿದರು. 37 ಲಕ್ಷ ವಿದ್ಯಾರ್ಥಿಗಳು ಇದ್ದರೆ 94 ಸಾವಿರ ಜನ ಉಪಾಧ್ಯಾಯರುಗಳು ಇದ್ದಾರೆ. ಅಂದರೆ ದಾಮಾಷ 40 ಆಯಿತು. 40 ಜನ ಹುಡುಗರಿಗೆ ಒಬ್ಬ ಉಪಾಧ್ಯಾಯರು ಇದ್ದಾರೆ. ಹಾಗೆ ಪಾಠಶಾಲೆಗಳಲ್ಲಿ 37 ಲಕ್ಷ ಎನ್‌ರೋಲು ಆಗಿರತಕ್ಕ ವಿದ್ಯಾರ್ಥಿಗಳು ಇದ್ದರೂ ಹಾಜರಾತಿಯಲ್ಲಿ ಇದಕ್ಕಿಂತ ಕಡಿಮೆಯಾಗಿರು ತ್ತಾರೆ. ಇವರಂತೆ ಸ್ಟೂಡೆಂಟ್ ಪ್ಯೂಪಿಲ್ ರೇಷ್ಯೋ ಬಹುಶಃ 30 ಇರುತ್ತದೆ ಮತ್ತು ಉಪಾಧ್ಯಾಯರೂ ಸಾಕಾದಷ್ಟು ಪ್ರಮಾಣದಲ್ಲಿ ಇದ್ದಾರೆ ಎಂದು ಧಾರಾಳವಾಗಿ ಹೇಳಬಹುದು. ಉಪಾಧ್ಯಾಯರುಗಳ ವಿಷಯವಾಗಿ ಕೆಲವು ಮಾನ್ಯ ಸದಸ್ಯರುಗಳು ತೀವ್ರ ಭಿನ್ನಾಭಿಪ್ರಾಯ ಗಳನ್ನು ವ್ಯಕ್ತ ಮಾಡಿದ್ದಾರೆ. ಕೆಲವು ಕಡೆ ಉಪಾಧ್ಯಾಯರುಗಳು ಇದನ್ನು ಒಂದು ಉಪ ವೃತ್ತಿಯನ್ನಾಗಿ ಒಂದು ಉಪಕಸುಬಾಗಿ ಮಾಡಿಕೊಂಡು ತಮ್ಮ ಖಾಸಗಿ ಆಸ್ತಿಪಾಸ್ತಿಗಳನ್ನು ರೂಢಿಸಿಕೊಳ್ಳುತ್ತಾ ಹಾಗೂ ಇತರ ಉದ್ಯಮಗಳಲ್ಲಿ ನಿರತರಾಗಿದ್ದಾರೆ ಎಂದು ಹೇಳಿದರು. ಎಲ್ಲೋ ಕೆಲವರು ಅಂತಹವರು ಇದ್ದರೂ ಇರಬಹುದು. ಆದರೆ ನಾನು ಪೂರ್ಣವಾಗಿ ಇದನ್ನು ಒಪ್ಪಿಕೊಳ್ಳಲಾರೆ ಬಹಳ ಮಂದಿ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಹಾಗೂ ಶ್ರದ್ಧೆಯಿಂದ ನಿರ್ವಹಿಸುತ್ತಿದ್ದಾರೆ. ಎಲ್ಲೋ ಕೆಲವರು ಅಂತಹವರು ಇದ್ದರೂ ಇರಬಹುದು. ಆದರೆ ಇದರ ಸಂಖ್ಯೆಯನ್ನು ಉತ್ಪ್ರೇಕ್ಷೆ ಮಾಡಿ ಹೇಳುವುದು ಸರಿಯಲ್ಲ. ಅಂತಹವರು ಕೆಲವರು ಇದ್ದರೂ ಇದು ಬಹಳ ಕಡಿಮೆ ಸಂಖ್ಯೆಯಲ್ಲಿರಬಹುದು. ನೂರಕ್ಕೆ 8-10 ಜನರು ಇರಬಹುದು.

ಶ್ರೀ ಪಿ. ಆಂಜನಪ್ಪ (ಪಾವಗಡ).—ಶೇಕಡಾ 75 ರಷ್ಟು ಇವರೇ ಇದ್ದಾರೆ.

ಶ್ರೀ ಕೆ. ವಿ. ಶಂಕರಗೌಡ.—ಮಾನ್ಯ ಸದಸ್ಯರಾದ ಶ್ರೀಮಾನ್ ಆಂಜನಪ್ಪನವರು ಸ್ಟ್ಯಾಟಿಸ್ ಟೀಷಿಯನ್‌ರ ಹಾಗೆ ಇದ್ದಾರೆ ಎನ್ನುವುದು ಗೊತ್ತಿದೆ. ಆದರೆ ನಮ್ಮಲ್ಲಿರುವ ಅಂಕೆಸಂಖ್ಯೆಗಳ ಪ್ರಕಾರ ಇದು ಸತ್ಯಕ್ಕೆ ದೂರವಾದುದು. ಇವರು ಬಹು ಕಡಿಮೆ ಸಂಖ್ಯೆಯಲ್ಲಿರಬಹುದು ಎಂದು ಸಾರಿ ಸಾರಿ ಹೇಳಿದ್ದೇನೆ. ನೂರರಲ್ಲಿ ತೊಂಭತ್ತರಷ್ಟು ಜನ ಉಪಾಧ್ಯಾಯರುಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಎಲ್ಲಿ ಸರಿಯಾಗಿ ಕೆಲಸ ಮಾಡದೆ ಇರುವವರು ಇದ್ದಾರೆ ಎನ್ನುವುದನ್ನು ಪತ್ತೆಹಚ್ಚಿ ಅವರಿಗೆ ಶಿಕ್ಷೆ ವಿಧಿಸುವುದು ನಮ್ಮ ಕರ್ತವ್ಯ. ಇದನ್ನು ನಾವು ಮಾಡು ತ್ತಿದ್ದೇವೆ.

ವಿದ್ಯಾರ್ಥಿಗಳ ಅಶಿಸ್ತಿನ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಇದರ ವಿಷಯದಲ್ಲಿ ಹೇಳತಕ್ಕದ್ದು ಬಹಳ ಇದೆ. ಇದು ಬಹು ಗಹನವಾದ ವಿಷಯ. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ದೇಶದಲ್ಲಿ ಇರತಕ್ಕ ಅಶಿಸ್ತಿಗಿಂತಲೂ ನಮ್ಮ ರಾಜ್ಯದಲ್ಲಿರತಕ್ಕ ವಿದ್ಯಾರ್ಥಿಗಳ ಶಿಸ್ತು ಖಂಡಿತವಾಗಿಯೂ ಉತ್ತಮ ಮಟ್ಟದ್ದು ಎಂದು ಧಾರಾಳವಾಗಿ ಹೇಳಬಹುದು. ಇತರ ರಾಷ್ಟ್ರಗಳೊಡನೆ ನಮ್ಮ ರಾಜ್ಯವನ್ನೂ ಹೋಲಿಸಿ ನೋಡಿದರೆ ನಮ್ಮ ವಿದ್ಯಾರ್ಥಿಗಳು ಒಳ್ಳೆಯ ಶಿಸ್ತಿನಿಂದ ಕೂಡಿದವರು ಎಂದು ಧಾರಾಳವಾಗಿ ಹೇಳಬಹುದು. ಅಶಿಸ್ತಿನ ಪ್ರಸಂಗ ಬಂದಾಗ ಕೆಲವು ಮಂದಿ ಮಾತ್ರ ಶಿಸ್ತುಗೇಡಿಗಳಾಗಬಹುದು. ಅಂತಹ ಕೆಲವರಿಂದ ಅಶಿಸ್ತುಗಳಾಗಲು ಕಾರಣ ಪೋಷಕರುಗಳು, ಅವರವರ ಮನೆಯಲ್ಲಿರತಕ್ಕ ವಾತಾವರಣ ಮತ್ತು ಸಮಾಜದಲ್ಲಿರತಕ್ಕ ವಾತಾವರಣ ಕೆಲವು ಜನ ಪೋಷಕರು ಹಾಗೂ ತಂದೆ ತಾಯಿಗಳ ಮನೆಗಳಲ್ಲಿರುವ ವಾತಾವರಣ ಅಷ್ಟು ಚೆನ್ನಾಗಿಲ್ಲ. ಅವರ ಜೀವನದಲ್ಲಿ ಶಿಸ್ತಿಗೆ ಸ್ಥಾನ ಇಲ್ಲ, ಶೀಲಕ್ಕೆ ಪೂಜ್ಯತೆ ಇಲ್ಲ. ಇಂತಹ ಮನೆಯಿಂದ ಬಂದ ಮಕ್ಕಳು ಶಿಸ್ತಿಗೇಡಿನಿಂದ ವರ್ತಿಸುತ್ತಾರೆ ಎನ್ನುವ ಒಂದು ಮಾತು ನಿಜ. ಹೀಗೆ ಕೆಲವರು ಅಶಿಸ್ತಿನಿಂದ ವರ್ತಿಸಿದಾಗ ಉಳಿದವರು ಮೂಕವಿಸ್ಮಯದಿಂದ ನೋಡುತ್ತಾರೆ. ಅಂತಹ ಕೆಲವು ಜನರಲ್ಲಿ ಪ್ರತಿಭಟನಾ ಮನೋಭಾವ ಮೂಡಿಸುವುದು ನಮ್ಮ ಕರ್ತವ್ಯ. ನಮ್ಮ ವಿದ್ಯಾರ್ಥಿ ಗಳಲ್ಲಿ ಇಷ್ಟು ಹೆಚ್ಚು ಮಟ್ಟದ ಅಶಿಸ್ತು ಇದೆ ಎಂದು ಹೇಳುವುದಕ್ಕೆ ನನಗೆ ಮನಸ್ಸಿಲ್ಲ. ನಮ್ಮ ವಿದ್ಯಾರ್ಥಿಗಳು ಶಿಸ್ತಿನಿಂದ ಇದ್ದಾರೆಂದು ನನಗೆ ತುಂಬಾ ಸಂತೋಷವಾಗುತ್ತದೆ.

ಶ್ರೀ ಹೆಚ್. ಎನ್. ನಂಜೇಗೌಡ.—ಶೋಷಕ ವರ್ಗ ಎಂದು ಹೇಳುವುದು ಇಲ್ಲಿ ಅನ್‌ವಾರಂಟೆಡ್ ಆಗುತ್ತದೆ.

ಶ್ರೀ ಕೆ. ವಿ. ಶಂಕರ ಗೌಡ.—ನಾನು ಹೇಳಿದೆ ಸಮಾಜದಲ್ಲಿ ಇರತಕ್ಕ ವಾತಾವರಣ ಎಂದು. ಇದರಲ್ಲಿ ಉಪಾಧ್ಯಾಯರು, ಉಪಾಧ್ಯಾಯರಲ್ಲದವರು ಎಂದರೆ ಇದರಲ್ಲಿ ರಾಜಕಾರಣಿಗಳು ಇತರ ಎಲ್ಲರೂ ಬರುತ್ತಾರೆ, ಎಂದರೆ ನಾವು ನೀವು ಎಲ್ಲರೂ ಬರುತ್ತೇವೆ.

ಇನ್ನು ಶಿಕ್ಷಣ ಬೋಧನಾ ಮಾಧ್ಯಮದ ಬಗ್ಗೆ ಕೆಲವು ಮಾರ್ಮಿಕವಾದ ಮಾತುಗಳನ್ನು ವ್ಯಕ್ತ ಪಡಿಸಿದ್ದಾರೆ. ತೀವ್ರವಾದ ಭಿನ್ನಾಭಿಪ್ರಾಯ ಕೂಡ ಇದೆ ಎಂದು ಈ ದಿವಸ ನಮಗೆ ಕಂಡು ಬಂತು. ಕೊಠಾರಿ ಕಮಿಷನ್ ಹಾಗೂ ಇನ್ನೂ ಅನೇಕ ತಜ್ಞರು ಚೆನ್ನಾಗಿ ಅಭ್ಯಾಸ ಮಾಡಿ ಮಕ್ಕಳಿಗೆ ಅವರ ಮಾತೃ ಭಾಷೆಯಲ್ಲಿಯೇ ಶಿಕ್ಷಣ ದೊರೆಯಬೇಕಾದುದು ಅವಶ್ಯಕ. ಮಕ್ಕಳ ವ್ಯಕ್ತಿತ್ವ ಮತ್ತು ಅವರ ಪೂರ್ಣ ವಿಕಾಸಕ್ಕೆ ಅವರ ಮಾತೃಭಾಷೆಯಲ್ಲಿಯೇ ಇರುವುದು ಸೂಕ್ತ ಎಂದು ಎಲ್ಲರೂ ತಿಳಿಸಿದ್ದಾರೆ. ಕೊಠಾರಿ ಕಮಿಷನ್ ಪ್ರಯೋಗ ಮಾಡಿ ಶಿಕ್ಷಣ ಮಾಧ್ಯಮ ಆಯಾ ಪ್ರಾದೇಶಿಕ ಭಾಷೆಯಲ್ಲೇ ಇರಬೇಕು ಮತ್ತು ಇದನ್ನು ಎಲ್ಲರೂ ಒಪ್ಪಿಕೊಳ್ಳುವುದು ಅತ್ಯಾವಶ್ಯಕ, ಇದನ್ನು ಜಾರಿಗೆ ತರಬೇಕು ಎಂದು ಶಿಫಾರಸು ಮಾಡಿದ್ದಾರೆ. ಆದರೆ ಇದರಿಂದ ಇಲ್ಲಿಯವರೆಗೆ ಆಗಿರತಕ್ಕ ಫಲ ಬಹಳ ಕಡಿಮೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಬೆಂಗಳೂರಿನಲ್ಲಿ ಹಾಗೂ ಇತರ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ಕೊಡಲು ಪ್ರಾರಂಭ ಮಾಡಿದಾಗ್ಯೂ ಹೆಚ್ಚಿನ ಮಂದಿ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆಯುತ್ತಿಲ್ಲ. ಇದರ ಹಿಂದೆ ಇರತಕ್ಕ ಕಾರಣವನ್ನು ಕಂಡುಹಿಡಿಯತಕ್ಕದ್ದು ಅವಶ್ಯಕ. ಎಲ್ಲಿಯವರೆಗೆ ನಮ್ಮ ಆಡಳಿತ ಭಾಷೆ ಪ್ರಾದೇಶಿಕ ಭಾಷೆಯಲ್ಲಾಗುವುದಿಲ್ಲವೋ ಎಲ್ಲಿಯವರೆಗೆ ನಮ್ಮ ಪಬ್ಲಿಕ್ ಸರ್ವೀಸ್ಸು ಕಮಿಷನ್ನಿನ ಪರೀಕ್ಷೆಗಳು ಪ್ರಾದೇಶಿಕ ಭಾಷೆಯಲ್ಲಿ ನಡೆಯುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ತೆಗೆದುಕೊಳ್ಳುವಂತೆ ಪ್ರೇರೇಪಿಸಿ ಮನ ಒಲಿಸುವುದು ಕಷ್ಟ ಎನ್ನುವುದು ಖಂಡಿತ ಎಂದು ನನ್ನ ಅಭಿಪ್ರಾಯ. ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡುವುದರಲ್ಲಿ ನಾವು ಇದುವರೆಗೆ ಸಾಕಾದಷ್ಟು ಮಾಡಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ ಕನ್ನಡ ನಮ್ಮ ಆಡಳಿತ ಭಾಷೆಯಾಗಿದ್ದರೂ, ಇದು ಇನ್ನು ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಆಡಳಿತ ಭಾಷೆಯನ್ನಾಗಿ ಮಾಡಲಾಗಿದೆ. ಇದನ್ನು ಆದಷ್ಟು ಜಾಗ್ರತೆ ಎಲ್ಲಾ ಕಡೆಯೂ ಆಡಳಿತ ಭಾಷೆಯಾಗಿ ಮಾಡಿದರೆ ಆಗ ಕನ್ನಡ ಮಾಧ್ಯಮವನ್ನು ಮುಂದುವರಿಸುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರೊಳಗೆ ಸ್ನಾತಕೋತ್ತರ ಶಿಕ್ಷಣವನ್ನು ಇಂಗ್ಲಿಷು ಭಾಷೆಯಲ್ಲೇ ಮುಂದುವರಿಸಬೇಕು ಎಂದು ಕೆಲವು ಮಾನ್ಯ ಸದಸ್ಯರು ಅಭಿಪ್ರಾಯಪಟ್ಟರು. ಇದನ್ನು ನಾನು ಒಪ್ಪುವುದಕ್ಕೆ ಸಿದ್ಧವಾಗಿಲ್ಲ. ಈಗಿರತಕ್ಕ ಪರಿಸ್ಥಿತಿಯಲ್ಲಿ ಸ್ವಲ್ಪ ಕಾಲದವರೆಗೆ ಇಂಗ್ಲಿಷ್‌ನಲ್ಲಿ ನಡೆಸಬೇಕಾದರೂ ಬಹು ದೀರ್ಘ ಕಾಲ ಇದನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಅಕೆಡಮಿಕ್ ಕೌನ್ಸಿಲ್‌ನವರು ಒಂದು ಠರಾವು ಮಾಡಿ ಅದರಲ್ಲಿ ಸಮಾಜ ಶಾಸ್ತ್ರವನ್ನು ಮಾತ್ರ ಕನ್ನಡದಲ್ಲಿ ಬೋಧಿಸಬಹುದು ಆದರೆ ಇತರ ಸೈನ್ಸ್ ಸಬ್‌ಜೆಕ್ಟ್‌ಗಳನ್ನು ಕಡ್ಡಾಯವಾಗಿ ಇಂಗ್ಲಿಷಿನಲ್ಲೇ ಮುಂದುವರಿಸಬೇಕು ಎನ್ನುವ ಠರಾವು ಮಾಡಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ವಿ. ಶಂಕರ ಗೌಡ.—ಇದು ನನ್ನ ಗಮನಕ್ಕೂ ಬಂದಿದೆ.

ಇವರಲ್ಲಿ ಕೆಲವರು ಸಕಾದಷ್ಟು ಪಠ್ಯ ಪುಸ್ತಕಗಳಿಲ್ಲ ಎನ್ನುವ ವಾದವನ್ನು ಮುಂದೊಡುತ್ತಾರೆ. ಈಗ ಪಠ್ಯ ಪುಸ್ತಕಗಳು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿವೆ. ಮೈಸೂರು ವಿಶ್ವವಿದ್ಯಾಲಯದವರು ಅನೇಕ ಪುಸ್ತಕಗಳನ್ನು ಈಗಾಗಲೇ ತಯಾರು ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದವರು ಕೂಡ ಅದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಿ ಕನ್ನಡ ಪಠ್ಯ ಪುಸ್ತಕಗಳನ್ನು ಪ್ರಕಟಿಸುವ ಏರ್ಪಾಡು ಮಾಡುತ್ತಿದ್ದಾರೆ. ಅನೇಕ ಪುಸ್ತಕಗಳು ಈಗಾಗಲೇ ತಯಾರಾಗಿವೆ. ಅನತಿಕಾಲದಲ್ಲಿಯೇ ಇನ್ನೂ ಹೆಚ್ಚಿನ ಸಂಖ್ಯೆಯ ಪುಸ್ತಕಗಳು ತಯಾರಾಗುವುದರಲ್ಲಿ ಸಂದೇಹವಿಲ್ಲ. ನಾವು ಧೈರ್ಯ ಮಾಡಬೇಕು ಅಷ್ಟೇ. "ಹುಚ್ಚು ಬಿಡುವವರೆಗೂ ಮದುವೆಯಾಗುವುದಿಲ್ಲ, ಮದುವೆಯಾಗುವವರೆಗೂ ಹುಚ್ಚು ಬಿಡುವುದಿಲ್ಲ" ಎನ್ನುವ ಹಾಗೆ ಆಗಿದೆ ಪರಿಸ್ಥಿತಿ. ನಾವು ಧೈರ್ಯದಿಂದ ಹೆಜ್ಜೆ ಇಟ್ಟರೆ ಅದನ್ನು ಸಾಧಿಸಬಹುದು ಎನ್ನುವುದು ನನ್ನ ನಂಬಿಕೆಯಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಕಾಂಗ್ರೆಸ್ ಸರ್ಕಾರ ಇರುವವರೆಗೂ ವಿದ್ಯಾಭ್ಯಾಸ ಸುಧಾರಿಸುವುದಿಲ್ಲ.

ಶ್ರೀ ಕೆ. ವಿ. ಶಂಕರ ಗೌಡ.—ಕಾಂಗ್ರೆಸ್ ಸರ್ಕಾರ ಇದ್ದುದರಿಂದ ಇಷ್ಟಾಗಿದೆ. ನಿಮ್ಮ ಸರ್ಕಾರ ಬಂದರೆ ಏನಾಗುತ್ತದೆಯೋ ಗೊತ್ತಾಗಿಲ್ಲ.

ಖಾಸಗಿ ಶಾಲೆಗಳ ಬಗ್ಗೆ ತೀವ್ರವಾದ ಅಭಿಪ್ರಾಯ ಈ ಸಭೆಯಲ್ಲಿ ವ್ಯಕ್ತಪಟ್ಟಿದೆ. ಶಿಕ್ಷಣದ ಕ್ಷೇತ್ರದಲ್ಲಿ ಖಾಸಗಿ ವಿದ್ಯಾ ಸಂಸ್ಥೆಗಳು ಸಲ್ಲಿಸಿರತಕ್ಕ ಸೇವೆ ಅಪಾರವಾದುದು ಎಂದು ಧಾರಾಳ ವಾಗಿ ಹೇಳಬಹುದು. ಉತ್ತರ ಕರ್ಣಾಟಕದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಸಗಿ ವಿದ್ಯಾ ಸಂಸ್ಥೆಗಳು ಇಲ್ಲದಿದ್ದರೆ ಜನರಿಗೆ ಶಿಕ್ಷಣ ದೊರಕುವುದು ಬಹಳ ಕಷ್ಟವಾಗುತ್ತಿತ್ತು. ಆ ಪ್ರದೇಶ ಗಳಲ್ಲಿ ಖಾಸಗಿ ಸಂಸ್ಥೆಗಳು ಇಲ್ಲದೆ ಇದ್ದಿದ್ದರೆ ಶಿಕ್ಷಣ ಸೌಲಭ್ಯವನ್ನು ಒದಗಿಸುವುದು ಕಷ್ಟ ವಾಗುತ್ತಿತ್ತು. ಅನೇಕ ಖಾಸಗಿ ಸಂಸ್ಥೆಗಳು ಉಪಯುಕ್ತವಾದ, ಬಹುಮುಖವಾದ ಸೇವೆಯನ್ನು ಸಲ್ಲಿಸಿವೆ. ಆದರೆ ಇವುಗಳಲ್ಲಿ ಕೆಲವು ದುರ್ಮಾರ್ಗವನ್ನು ಹಿಡಿದಿವೆ ಎಂದು ಹೇಳುವುದರಲ್ಲಿ ಸತ್ಯಾಂಶ ವಿಲ್ಲ ಎಂದು ನಾನು ಹೇಳುವುದಿಲ್ಲ. ಕೆಲವು ಸಂಸ್ಥೆಗಳಲ್ಲಿ ಅವ್ಯವಹಾರ ನಡೆದಿರಬಹುದು. ಅಕ್ರಮ ಗಳು ನಡೆದಿರಬಹುದು. ಆದರೆ ಬಹು ಸಂಖ್ಯೆಯ ಸಂಸ್ಥೆಗಳಲ್ಲಿ ಚೆನ್ನಾಗಿ ಕೆಲಸ ನಡೆದಿದೆ. ಅಲ್ಲಿ ಪರೀಕ್ಷೆಯಲ್ಲಿ ಬರತಕ್ಕ ಪರಿಣಾಮಗಳೂ ಚೆನ್ನಾಗಿವೆ, ಸಮರ್ಪಣ ಭಾವದಿಂದ ದುಡಿಯುತಕ್ಕ ಉಪಾಧ್ಯಾಯರುಗಳು ಇದ್ದಾರೆ, ಹೆಚ್ಚಿನ ಸೇವೆಯನ್ನು ಅವರು ಸಲ್ಲಿಸಿದ್ದಾರೆ. ಮಾನ್ಯ ಸದಸ್ಯ ರೊಬ್ಬರು ಹೇಳಿದ ಹಾಗೆ ಅವುಗಳನ್ನು ರಾಷ್ಟ್ರೀಕರಣ ಮಾಡಬೇಕೆನ್ನುವ ವಾದ ಇದು ಮನೋ ವಿಕಾರ ಎಂದು ಹೇಳದೆ ಗತ್ಯಂತರವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ತಾವು ಹೆಗ್ಗಣಗಳಿಗೆ ಮೇವು ಹಾಕುತ್ತಿದ್ದೀರಿ. ನೀವು ಅವುಗಳ ಯಾಜಮಾನರು. ನೀವು ಒಪ್ಪಿಕೊಳ್ಳಲೇಬೇಕು.

ಶ್ರೀ ಕೆ. ವಿ. ಶಂಕರ ಗೌಡ.—ಹೆಗ್ಗಣಗಳನ್ನು ಬೋನಿಗೆ ಓಡಿಸಿದ್ದೇವೆ. ಶ್ರೀ ವಾಟಾಳ್ ನಾಗರಾಜ್ ಅವರು ಭಾವನಾಪರವಶರಾಗದೆ ಸ್ವಲ್ಪ ಶಾಂತ ರೀತಿಯಿಂದ ಇದ್ದರೆ ಮೇಲು. ಮಾತು ಹೇಗೆ ಬೇಕಾದರೂ ಮಾತನಾಡುವುದಕ್ಕೆ ಅವಕಾಶವಿದೆ. ಶಾಂತ ರೀತಿಯಿಂದ ಇದ್ದರೆ ಒಳ್ಳೆಯದು.

ಕೆಲವು ಸಂಸ್ಥೆಗಳಲ್ಲಿ ಅಕ್ರಮಗಳಿದ್ದು ಅದನ್ನು ಕಂಡುಹಿಡಿದು ಎಷ್ಟೋ ಸಂಸ್ಥೆಗಳಿಗೆ ಧನ ಸಹಾಯವನ್ನು ನಿಲ್ಲಿಸಿದ್ದೇವೆ. ಅಕ್ರಮಗಳು ನಡೆಯುತ್ತಿವೆ ಎಂದು ಅವುಗಳನ್ನು ಪೂರ್ಣವಾಗಿ ಮುಚ್ಚಿ ಸರ್ಕಾರಿ ಶಾಲೆಗಳನ್ನು ಸ್ಥಾಪಿಸಬೇಕು ಎನ್ನುವುದರಲ್ಲಿ ಅರ್ಥವಿಲ್ಲ. ಹಾಗೆ ಮಾಡುವು ದಕ್ಕಾಗುವುದಿಲ್ಲ. ಖಾಸಗಿ ಶಾಲೆಗಳು ಹೆಚ್ಚಾಗಿ ಸರ್ಕಾರಕ್ಕೆ ಸಹಾಯವನ್ನು ಮಾಡಿವೆ. ಅದಕ್ಕಾಗಿ ಧನ್ಯವಾದಗಳನ್ನು ಅಂಥವರಿಗೆ ನಾನು ಅರ್ಪಿಸುತ್ತೇನೆ.

ಟೆಕ್ನಿಕಲ್ ಎಜುಕೇಷನ್ ವಿಷಯದಲ್ಲಿ ಕೆಲವು ಆಪಾದನೆ ಮಾತುಗಳನ್ನು ಮಾನ್ಯ ಸದಸ್ಯರು ಕೆಲವರು ವ್ಯಕ್ತಪಡಿಸಿದ್ದಾರೆ. ಅದರಲ್ಲಿ ನಿರುದ್ಯೋಗ ಹೆಚ್ಚಾಗಿದೆ, ತಾಂತ್ರಿಕ ಶಿಕ್ಷಣ ಡಿಪ್ಲೊಮಾ ಮಟ್ಟದಲ್ಲಿ ಡೈವರ್ಸಿಫೈ ಮಾಡುವುದಕ್ಕೆ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ನೇತೃತ್ವದಲ್ಲಿ ಒಂದು ಸಮಿತಿಯನ್ನು ಸ್ಥಾಪಿಸಲಾಗಿದೆ ಎಂದು ಹೇಳಿದಿರಿ, ಅದರ ವರದಿ ಏನಾಯಿತು ಎಂದು ಮಾನ್ಯ ಸದಸ್ಯರಾದ ಶ್ರೀ ಎಚ್. ಎನ್. ನಂಜೇಗೌಡರು ಪ್ರಶ್ನೆ ಮಾಡಿದ್ದಾರೆ. ಸಮಿತಿಯವರು ಒಂದು ವರದಿಯನ್ನು ಸಲ್ಲಿಸಿದ್ದಾರೆ. ಯಾವ ರೀತಿಯಾಗಿ ಕೋರ್ಸಸ್ ಡೈವರ್ಸಿಫೈ ಮಾಡಬಹುದು, ಬೇರೆ ಬೇರೆ ಯಾವ ಯಾವ ಕೋರ್ಸಸ್ ಪ್ರಾರಂಭ ಮಾಡಬಹುದು ಎನ್ನುವ ವರದಿಯನ್ನು ಕೊಟ್ಟಿದ್ದಾರೆ. ಅದು ಸ್ಟೇಟ್ ಅಡ್ವೈಸರಿ ಬೋರ್ಡ್ ಮುಂದೆ ಬಂದು ಆ ವರದಿಯ ಕೆಲವು ಸಿಫಾರಸುಗಳನ್ನು ಅಂಗೀಕರಿಸಲಾಗಿದೆ. ಅವುಗಳನ್ನು ಬರತಕ್ಕ ವರ್ಷಗಳಲ್ಲಿ ಜಾರಿಗೆ ಕೊಡು ವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಅನ್ ಟ್ರೇನ್ಡ್ ಟೀಚರ್ಸ್ ವಿಷಯವಾಗಿ ಕೆಲವು ಅಭಿಪ್ರಾಯಗಳನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಯಾರು 1961ನೇ ಇಸವಿಯಿಂದೀಚೆಗೆ ನೇಮಕವಾಗಿ, ತರಪೇತಿಯನ್ನು ಪಡೆಯದೆ ಇದ್ದಾರೆ ಅಂಥ ಉಪಾಧ್ಯಾಯರಿಗೆ ಇನ್‌ಕ್ರಿಮೆಂಟುಗಳನ್ನು ಕೊಡಲಾಗುತ್ತಿಲ್ಲ. ಇದು ಉಪಾಧ್ಯಾಯರಿಗೆ ಬಹಳ ತೊಂದರೆಯನ್ನುಂಟು ಮಾಡುತ್ತದೆ. ಈ ನ್ಯೂನತೆಯನ್ನು ಪರಿಹಾರ ಮಾಡಬೇಕೆಂದು ಬೇಡಿಕೆಗಳು ಸರ್ಕಾರದ ಮುಂದೆ ಇವೆ. ಇದರ ಬಗ್ಗೆ ಕೆಲವರು ಹೈಕೋರ್ಟಿಗೆ ರಿಟ್ ಹಾಕಿರುವುದರಿಂದ ಆ ವಿಷಯದಲ್ಲಿ ನಾವು ಯಾವ ಕಾರ್ಯಕ್ರಮವನ್ನೂ ತೆಗೆದು ಕೊಳ್ಳುವುದಕ್ಕೆ ಅವಕಾಶವಿಲ್ಲದಂತಾಗಿದೆ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಅವರಿಗೆ ಇನ್‌ಕ್ರಿ ಮೆಂಟ್ ಕೊಡತಕ್ಕದ್ದು ಅತ್ಯಂತ ಅವಶ್ಯಕ. ಆದರೆ ಯಾರನ್ನು ನಾವು ಟ್ರೇನಿಂಗಿಗೆ ಡೆಪ್ಯೂಟ್ ಮಾಡುತ್ತೇವೆ, ಹಾಗೆ ಡೆಪ್ಯೂಟ್ ಮಾಡಿದಾಗ ಅವರು ಹೋಗದೆ ಹೋದರೆ ಮಾತ್ರ ಇನ್‌ಕ್ರಿಮೆಂಟ್ ತಡೆಹಿಡಿಯಲಾಗುತ್ತದೆಯೇ ಹೊರತು ಡೆಪ್ಯೂಟ್ ಮಾಡಿದಾಗ ಹೋದವರಿಗೆ ಇನ್‌ಕ್ರಿಮೆಂಟ್ ತಡೆಹಿಡಿಯುವುದರಲ್ಲಿ ಯಾವ ಅರ್ಥವೂ ಇಲ್ಲ. ಅವರಿಗೆ ಇನ್‌ಕ್ರಿಮೆಂಟ್ ಕೊಡಿಸಬೇಕೆಂದು ಸಕಲ

ಪ್ರಯತ್ನವನ್ನೂ ಮಾಡುತ್ತಿದ್ದೇನೆ. ಹೈಕೋರ್ಟಿನಲ್ಲಿ ರಿಟ್ ಇರುವುದರಿಂದ ಅದರ ವಿಚಾರವಾಗಿ ತೀವ್ರವಾಗಿ ಕ್ರಮತೆಗೆದುಕೊಳ್ಳುವುದಕ್ಕೆ ಅವಕಾಶವಾಗಿಲ್ಲ.

ಶ್ರೀ ಎಂ. ನಾಗಪ್ಪ.—ಸರ್ಕಾರದವರು ನಿರ್ಣಯ ತೆಗೆದುಕೊಂಡರೆ ರಿಟ್ ಹಾಕಿರುವವರು ಅದನ್ನು ವಾಪಸು ತೆಗೆದುಕೊಳ್ಳಬಹುದು.

ಶ್ರೀ ಕೆ. ವಿ. ಶಂಕರ ಗೌಡ.—ಹೈಕೋರ್ಟಿನಲ್ಲಿ ರಿಟ್ ಇರುವುದರಿಂದ ಅದಕ್ಕೆ ಸಂಬಂಧಪಟ್ಟ ವಿಷಯವಾಗಿ ನಿರ್ಣಯ ತೆಗೆದುಕೊಳ್ಳುವುದು ಸ್ವಲ್ಪ ಕಷ್ಟ ; ಸಬ್ ಜುಡಿಸ್ ಆಗಬಹುದೋ ಏನೋ ಅದರ ಬಗ್ಗೆ ಲಾ ಡಿಪಾರ್ಟ್‌ಮೆಂಟಿನಲ್ಲಿ ಪರೀಕ್ಷೆ ಮಾಡಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಕೆಲವು ಸದಸ್ಯರು ಪ್ರೀ ಪ್ರೈಮರಿ ವಿದ್ಯಾಭ್ಯಾಸಕ್ಕೆ ಸಾಕಾದಷ್ಟು ಪ್ರೋತ್ಸಾಹ ಕೊಟ್ಟಿಲ್ಲ ಎಂದು ವಾದ ಮಾಡಿದ್ದಾರೆ. ಇದರಲ್ಲಿ ಸತ್ಯಾಂಶವಿಲ್ಲದಿಲ್ಲ. ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಮಾತ್ರ ಜಾರಿಗೆ ತಂದಿದ್ದೇವೆ. ಪ್ರೀ ಪ್ರೈಮರಿ ಶಿಕ್ಷಣಕ್ಕೆ ಹೆಚ್ಚು ಸೌಲಭ್ಯ ಕೊಡುವುದಕ್ಕಾಗಿಲ್ಲ. ಯಾರಾದರೂ ಅಂಥ ಸಂಸ್ಥೆಗಳನ್ನು ಪ್ರಾರಂಭ ಮಾಡಿದರೆ ಅವರಿಗೆ ಧನ ಸಹಾಯ ಕೊಡುವುದಕ್ಕೆ ಸರ್ಕಾರ ಎಲ್ಲ ಏರ್ಪಾಡುಗಳನ್ನೂ ಮಾಡಿದೆ. ಈಚಿನ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರೀ ಪ್ರೈಮರಿ ಎಜುಕೇಷನ್ ಸಂಸ್ಥೆಗಳು ಪ್ರಾರಂಭವಾಗುತ್ತಿವೆ. ಇದನ್ನು ಖಾಸಗಿಯವರು ಮಾಡಬೇಕಾದ ಕೆಲಸ. ಅದನ್ನು ಖಾಸಗಿಯವರಿಗೆ ಬಿಟ್ಟಿದ್ದೇವೆ. ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಈ ಶಾಲೆಗಳು ಪ್ರಾರಂಭವಾಗಬೇಕಾದುದು ಅತ್ಯಂತ ಅವಶ್ಯಕ. ಪ್ರಾಥಮಿಕ ಶಿಕ್ಷಣಕ್ಕಿಂತಲೂ ಒಂದು ರೀತಿ ಈ ಪ್ರೀ ಪ್ರೈಮರಿ ವಿದ್ಯಾಭ್ಯಾಸ ಹೆಚ್ಚು ಮುಖ್ಯವಾದುದು ಎಂದು ನನ್ನ ಭಾವನೆ. ಮೂರು ವರ್ಷದಿಂದ ಆರು ವರ್ಷದವರೆಗಿನ ಮಕ್ಕಳನ್ನು ಸರಿಯಾದ ರೀತಿಯಲ್ಲಿ ತಯಾರು ಮಾಡಬೇಕಾದುದು ಬಹಳ ಮುಖ್ಯವಾದ ಕೆಲಸ. ಆ ವಯಸ್ಸಿನ ಮಕ್ಕಳ ಮನಸ್ಸು ಬಹಳ ಕೋಮಲವಾಗಿರುವುದರಿಂದ ಅವನ್ನು ಯಾವ ರೂಪಕ್ಕಾದರೂ ತಿದ್ದಬಹುದು. ಅಂಥ ಮಕ್ಕಳಿಗೆ ಸರಿಯಾದ ಶಿಕ್ಷಣ ಸಿಕ್ಕದೆ ಹೋದರೆ ಕೆಲವು ಅನಾಹುತಗಳಿಗೆ ಅವರು ಗುರಿಯಾಗಬಹುದು. ಇದಕ್ಕೆ ಖಾಸಗಿಯವರು ಮುಂದೆ ಬಂದು ಹೆಚ್ಚಿನ ಸಂಸ್ಥೆಗಳನ್ನು ಪ್ರಾರಂಭ ಮಾಡಿ ಧನಸಹಾಯವನ್ನು ಪಡೆಯಬಹುದು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ರಾಮಣ್ಣ.—ಪ್ರೀ ಪ್ರೈಮರಿ ವಿದ್ಯಾಭ್ಯಾಸಕ್ಕೆ ಅಂಗೀಕಾರ ಕೊಡಬೇಕೆಂದು ತುಮಕೂರು ಜಿಲ್ಲಾ ವಿದ್ಯಾಧಿಕಾರಿಗಳನ್ನು ಕೇಳಿದರೆ ಸರ್ಕಾರದ ಮೇಲೆ ಯಾವುದೇ ವಿಧವಾದ ಹಣಕಾಸಿನ ಜವಾಬ್ದಾರಿ ಇಲ್ಲದೆ ಇದ್ದರೆ ಮಾತ್ರ ಅಂಗೀಕರಿಸುತ್ತೇನೆ ಎಂದು ಹೇಳುತ್ತಾರೆ. ಇದಕ್ಕೆ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಕೆ. ವಿ. ಶಂಕರ ಗೌಡ.—ಅದು ಸಾಧಾರಣವಾಗಿ ಹೇಳತಕ್ಕ ಮಾತು. ಮುಂದೆ ಇದಕ್ಕೆ ಹೆಚ್ಚಾಗಿ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಸಾಧಾರಣವಾಗಿ ಧನಸಹಾಯ ಸಿಕ್ಕುವುದಿಲ್ಲ ಎಂದು ಹೇಳಿದರೆ ಕೊಡುವುದಿಲ್ಲ ಎಂದು ಯಾರೂ ಭಾವಿಸಬಾರದು. ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಸರ್ಕಾರದಲ್ಲಿ ಇದಕ್ಕಾಗಿ ಎಷ್ಟು ಹಣವಿದೆ, ಅದರಲ್ಲ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮುಂದಿನ ವರ್ಷ ಹೆಚ್ಚು ಹಣವನ್ನು ಒದಗಿಸಿ ಸಹಾಯ ಮಾಡುವುದಕ್ಕೆ ಸಿದ್ಧರಾಗಿದ್ದೇವೆ ಎನ್ನುವ ವಿಷಯವನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ವಿಶ್ವವಿದ್ಯಾನಿಲಯದಲ್ಲಿ ಏಕರೂಪತೆ ತರಬೇಕು ಎಂದು ಕೆಲವರು ವಾದಿಸಿದ್ದಾರೆ. ಅದು ಅವಶ್ಯಕವಲ್ಲ ಎಂಬುದು ಸರಕಾರದ ಭಾವನೆ. ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ರೀತಿಯ ವಿದ್ಯಮಾನವಿರುತ್ತದೆ, ಒಂದೊಂದು ರೀತಿಯ ಚರಿತ್ರೆ, ಒಂದೊಂದು ರೀತಿಯ ಸಂಪ್ರದಾಯ ಇರುತ್ತದೆ. ಆದುದರಿಂದ ಇದರಲ್ಲಿ ವಿವಿಧತೆಯಿದ್ದರೆ ಅಷ್ಟು ತೊಂದರೆಯಾಗಲಾರದು. ಆದರೆ ಪಠ್ಯ ಕ್ರಮದಲ್ಲಿ ಏಕರೂಪತೆಯಿರಬೇಕು ಎಂಬ ಅಭಿಪ್ರಾಯವಿದೆ. ಇದನ್ನು ಸಾಧಿಸುವುದಕ್ಕೆ ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಗೆ ಮನವಿ ಮಾಡಿದ್ದೇನೆ, ಪಠ್ಯ ಕ್ರಮದಲ್ಲಿ ಏಕರೂಪತೆಯನ್ನು ಸಾಧಿಸಬೇಕೆಂದು ಅವರಿಗೆ ತಿಳಿಸಿದ್ದೇವೆ. ಅವರು ಎರಡುಮೂರು ಸಾರಿ ಸಭೆ ಸೇರಿ ಈ ವಿಷಯದಲ್ಲಿ ಚರ್ಚೆ ಮಾಡಿದ್ದಾರೆ. ಬಹುಶಃ ಶೀಘ್ರವಾಗಿ ತೀರ್ಮಾನವಾಗಬಹುದು, ಬಹುಶಃ ಪಠ್ಯ ಕ್ರಮದಲ್ಲಿ ಏಕರೂಪತೆ ಬರಬಹುದು ಎಂದು ಆಶಿಸಬಹುದಾಗಿದೆ.

8–00 P.M.

ನಾಗಪ್ಪನವರು ಬಜೆಟ್ಟಿನಲ್ಲಿರುವ ಕೆಲವು ಅಂಕಿಅಂಶಗಳ ವಿಷಯದಲ್ಲಿ ಪ್ರಸ್ತಾಪಿಸಿದ್ದಾರೆ. ಅಂಕಿಗಳಲ್ಲಿ ತಪ್ಪಿಲ್ಲ, ಚುಕ್ಕೆಯ ಗುರುತು ತೋರಿಸಿ ಒಂದು ವಾಕ್ಯ ಅಲ್ಲಿ ಹೇಳಿರುವುದು ಈ ರೀತಿ ಇದೆ :

This is exclusively charged.

(ಶ್ರೀ ಕೆ. ವಿ. ಶಂಕರ ಗೌಡ)

ಅದನ್ನು ನೋಡಿ ಸೇರಿಸಿಕೊಂಡರೆ ಕೊಟ್ಟಿರುವ ಅಂಕಿ ಸರಿಯಾಗಿದೆ ಎಂದು ತಿಳಿಸುತ್ತೇನೆ. ಡಿ ಪಿ ಐ ಮತ್ತು ಇತರ ಅಧಿಕಾರಿಗಳು ಯಾವ ಸಂಸ್ಥೆಗೂ ಕೂಡ ಹೋಗಿ ಇನ್‌ಸ್ಪೆಕ್ಟ್ ಮಾಡುತ್ತಿಲ್ಲ ಎಂದು ಅವರು ಹೇಳಿದರು. ಅದು ಅಷ್ಟು ಸರಿಯಲ್ಲ. ಡಿ ಪಿ ಐ ಈ ವರ್ಷ 35 ಸಂಸ್ಥೆಗಳಿಗೆ ಸಪ್ರೈರ್ಸ್ ವಿಜಿಟ್ ಕೊಟ್ಟಿದ್ದಾರೆ, ಬೆಂಗಳೂರಿನ ಡೆಪ್ಯುಟಿ ಡೈರೆಕ್ಟರು 45 ಸಂಸ್ಥೆಗಳನ್ನು ಇನ್‌ಸ್ಪೆಕ್ಟ್ ಮಾಡಿದ್ದಾರೆ, ಮೈಸೂರಿನ ಡೆಪ್ಯುಟಿ ಡೈರೆಕ್ಟರು 56 ಸಂಸ್ಥೆಗಳನ್ನು ಇನ್‌ಸ್ಪೆಕ್ಟ್ ಮಾಡಿದ್ದಾರೆ, ಚಿತ್ರದುರ್ಗದ ಡೆಪ್ಯುಟಿ ಡೈರೆಕ್ಟರು 21 ಸಂಸ್ಥೆಗಳನ್ನು ಇನ್‌ಸ್ಪೆಕ್ಟ್ ಮಾಡಿದ್ದಾರೆ, ಧಾರವಾಡದ ಡೆಪ್ಯುಟಿ ಡೈರೆಕ್ಟರು 27 ಸಂಸ್ಥೆಗಳನ್ನು ಇನ್‌ಸ್ಪೆಕ್ಟ್ ಮಾಡಿದ್ದಾರೆ. ಡಿ ಇ ಓ ಅವರುಗಳು ಶಾಲೆಗಳಿಗೆ ಹೋಗಿ ಕುಳಿತು ಪಾಠ ಹೇಳುವ ರೀತಿಯನ್ನು ಪರೀಕ್ಷೆ ಮಾಡಿದ್ದಾರೆ. ಬೆಂಗಳೂರಲ್ಲಿರುವ ಡಿ ಇ ಓ ಅವರು 32 ಸಂಸ್ಥೆಗಳನ್ನು ಇನ್‌ಸ್ಪೆಕ್ಟ್ ಮಾಡಿದ್ದಾರೆ.

Sri B. P. KADAM (Karwar).—Are these visits followed by pompous parties ?

Sri K. V. SHANKARA GOWDA.—The Hon'ble Member cannot be uncharitable like that.

ಈಗ ಶಾಲೆಗಳಿಗೆ ಸಂಬಂಧಪಟ್ಟ ನಮ್ಮ ಇನ್‌ಸ್ಪೆಕ್ಟೊರೇಟ್ ದಳ ಕೆಲಸಮಾಡುತ್ತಿದೆ, ಅದನ್ನು ಹೆಚ್ಚಿಸಬೇಕು ಎಂಬ ಉದ್ದೇಶವಿದೆ. ತುಕೋಳ್‌ರವರ ವರದಿಯಲ್ಲಿ ಅದನ್ನು ಹೇಳಿದ್ದಾರೆ. ಮುಂದೆ ಒಬ್ಬ ಡಿ ಇ ಓ ಗೆ 40 ಶಾಲೆಗಳಿಗಿಂತ ಹೆಚ್ಚಿರಬಾರದು, ಹಾಗೆ ಮಾಡಬೇಕೆಂದಿದೆ. ಒಬ್ಬ ಇನ್‌ಸ್ಪೆಕ್ಟರಿಗೆ 40—50 ಶಾಲೆಗಳಿಗಿಂತ ಹೆಚ್ಚಿರಬಾರದು ಮತ್ತು ಡಿವಿಜನ್ ಲೆವೆಲ್‌ನಲ್ಲಿ ಒಬ್ಬ ಜಾಯಿಂಟ್ ಡೈರೆಕ್ಟರ್ ಇರಬೇಕು, ಜಿಲ್ಲಾ ಮಟ್ಟದಲ್ಲಿ ಡಿ ಡಿ ಪಿ ಐ ಇರಬೇಕು ಎಂದು ತೀರ್ಮಾನ ಮಾಡಿರುವುದನ್ನು ಪೇ ಕಮಿಷನ್ ಒಪ್ಪಿದೆ. ಇನ್‌ಸ್ಪೆಕ್ಟೊರೇಟ್ ದಳ ಮುಂದೆ ಶಾಲೆಗಳನ್ನು ಇನ್‌ಸ್ಪೆಕ್ಟ್ ಮಾಡಿದರೆ ಕರ್ತವ್ಯ ಲೋಪವಾಗಿದ್ದರೆ ಸರಿಪಡಿಸುವುದಕ್ಕೆ ಹೆಚ್ಚು ಅನುಕೂಲವಾಗಬಹುದು ಎಂಬ ಆಸೆಯಿದೆ.

ಪಠ್ಯ ಪುಸ್ತಕಗಳ ವಿಚಾರದಲ್ಲಿ ಒಂದು ಭಾವನೆ ವ್ಯಕ್ತಪಟ್ಟಿದೆ, ಆ ಅಭಿಪ್ರಾಯ ಅನೇಕ ಸಂದರ್ಭಗಳಲ್ಲಿ ಉತ್ಪ್ರೇಕ್ಷೆಯಿಂದ ಕೂಡಿದೆ ಎಂದು ಹೇಳಿದರೆ ತಪ್ಪಲ್ಲ. ಮಾನ್ಯ ಕೃಷ್ಣನ್‌ರವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅದು ಮಾನ್ಯ ಮಾಸ್ತಿ ವೆಂಕಟೇಶ-ಐಯ್ಯಂಗರ್‌ರವರ ಪುಸ್ತಕದಿಂದ ತೆಗೆದುಕೊಂಡಿರುವ ವಿಷಯ. ಇಂದು ಇದರ ವಿಷಯ ಎಲ್ಲರಿಗೂ ಗೊತ್ತಿದೆ, ಉತ್ತಮ ಸಾಹಿತಿಗಳೂ ಮತ್ತು ಮೇಧಾವಿಗಳೂ ಆದ ಮಾಸ್ತಿಯವರ ಪುಸ್ತಕದಿಂದ ಶ್ರೀ ಎ. ಎನ್ ಮೂರ್ತಿ ರಾಯರು ತರ್ಜುಮೆ ಮಾಡಿದ್ದಾರೆ. ಮೂರ್ತಿರಾಯರ ವಿಷಯ ಗೊತ್ತಿರಬಹುದು, ಅವರಿಗೆ ಇಂಗ್ಲಿಷ್ ಮತ್ತು ಕನ್ನಡ—ಈ ಎರಡು ಭಾಷೆಗಳಲ್ಲೂ ಪ್ರಭುತ್ವವಿದೆ, ಮಾಸ್ತಿಯವರು ಬರೆದಿರುವುದನ್ನು ಅವರು ತರ್ಜುಮೆ ಮಾಡಿದ್ದಾರೆ ಕಂಟೆಂಟ್ಸ್ ವಿಚಾರದಲ್ಲಿ ಅಭಿಪ್ರಾಯ ಭೇದವಿರಬಹುದು. ಶಿಕ್ಷಣ ತಜ್ಞರು ಇದನ್ನು ತೀರ್ಮಾನ ಮಾಡುವರು. ಆದುದರಿಂದ ಈ ಪುಸ್ತಕದಲ್ಲಿ ತಪ್ಪಿದೆ ಎಂದು ಹೇಳುವುದು ಸರಿಯಲ್ಲ ಎಂಬುದು ನನ್ನ ಭಾವನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಶೀಲದ ಬಗ್ಗೆ ಒಂದು ಪ್ರಶ್ನೆ ಕೌನ್ಸಿಲ್‌ನಲ್ಲಿ ಬಂತು, ಜನಪದ ಸಾಹಿತ್ಯ ಮತ್ತು ಆರ್. ಎಸ್. ನಾಯ್ಡುರವರು ಬರೆದಿರುವ ಕೆಲವು ಚಿತ್ರಗಳು ಇದರ ವಿಚಾರ ಪ್ರಸ್ತಾಪಿಸಲ್ಪಟ್ಟಿದೆ ಈ ಜನಪದ ಸಾಹಿತ್ಯದ ಪುಸ್ತಕವನ್ನು ಯಾರೂ ಕೊಳ್ಳಬಾರದು, ಈಗಾಗಲೇ ಬೇರೆಯವರಿಗೆ ಕಳಿಸುವುದನ್ನು ವಾಪಸುಮಾಡಬೇಕು ಇತ್ಯಾದಿ ಇತ್ಯಾದಿ ಹೇಳಿದರು. ಈ ಶೀಲ ಪ್ರಶ್ನೆ ಯಾರು ತೀರ್ಮಾನಮಾಡುವುದು ? ಮನೆಯಲ್ಲಿ ನಗ್ನ ಚಿತ್ರ ಹಾಕಿಕೊಂಡಿರುವುದಿಲ್ಲವೇ ? ನಗ್ನತೆಯ ಪ್ರಶ್ನೆ ಮತ್ತು ಪ್ರೀತಿಮಾಡುವ ಚಿತ್ರಗಳ ಪ್ರಶ್ನೆ ಯಾರು ತೀರ್ಮಾನಮಾಡುವುದು ? ಇದರಲ್ಲಿ ರಾಜಕೀಯ ಕೈವಾಡವಿದೆಯೋ ? ಸ್ವಾಮಿಗಳು ಒಂದು ಪುಸ್ತಕ ಬರೆದಿದ್ದಾರೆ, ಅದಕ್ಕೆ ಗ್ರಾಂಟು ಕೊಡಲಾಗಿದೆ. ಅದು ಸರಿಯೋ, ಇಲ್ಲವೇ ಎಂಬುದನ್ನು ತೀರ್ಮಾನ ಮಾಡುವವರು ಯಾರು ?

ಶ್ರೀ ಕೆ. ವಿ. ಶಂಕರ ಗೌಡ.—ಸಾಹಿತ್ಯದಲ್ಲಿ ಶೀಲ-ಅಶ್ಲೀಲ ಎಂದು ತೀರ್ಮಾನ ಮಾಡುವುದು ಬಹಳ ಕಠಿಣ. ಇದು ಅವರವರ ಅಭಿಪ್ರಾಯಕ್ಕೆ ಒಳಪಟ್ಟ ಮಾತು. ಇದರ ವಿಚಾರವಾಗಿ ವ್ಯಾಖ್ಯಾನಮಾಡುವುದಿಲ್ಲ. ಅವರು ಹೇಳಿರುವ ವಿಚಾರ ತಾತ್ಕಾಲಿಕವಾಗಿ ನಿಲ್ಲಿಸಿರುವುದಕ್ಕೆ ಸಂಬಂಧಪಟ್ಟಿದೆ, ಅದು ನಿಜ, ಪರಿಶೀಲನೆ ನಡೆಸಿದ್ದಾರೆ, ಪುನಃ ಸಹಾಯ ಸೌಲಭ್ಯ ಕೊಡುವ ವಿಚಾರ ಪರಿಶೀಲನೆಯಲ್ಲಿದೆ. ಆದುದರಿಂದ ಈ ವಿಚಾರದಲ್ಲಿ ಹೆಚ್ಚು ಚರ್ಚೆ ಬೇಡ.

ಪಠ್ಯಪುಸ್ತಕಗಳನ್ನು ರಾಷ್ಟ್ರೀಕರಣ ಮಾಡುವ ವಿಚಾರದಲ್ಲಿ ಮಾಡಬಾರದು ಮಾಡಬೇಕು ಎಂಬ ಅಭಿಪ್ರಾಯಗಳಿವೆ. ಆದರೆ ನಮ್ಮ ನೀತಿ ರಾಷ್ಟ್ರೀಕರಣ ಮಾಡಬೇಕು ಎಂಬುದು. ಈಗಾಗಲೇ ಒಂದರಿಂದ ಏಳನೆಯ ತರಗತಿಯವರೆಗೆ ಪಠ್ಯ ಪುಸ್ತಕಗಳ ರಾಷ್ಟ್ರೀಕರಣವಾಗಿವೆ, 7 ರಿಂದ 10ನೆಯ ತರಗತಿಯವರೆಗೆ ರಾಷ್ಟ್ರೀಕರಣ ಮಾಡಲು ಕೆಲಸ ನಡೆದಿದೆ. ಈಗ ರಾಜ್ಯದಾದ್ಯಂತ ಎಲ್ಲಾ ಭಾಗಗಳಲ್ಲೂ ಒಂದೇ ವಿಧವಾದ ಪುಸ್ತಕ ಇರುವಂತೆ ಮಾಡಬೇಕು ಎಂಬ ವಿಚಾರ ಹೋದ ವರ್ಷದಿಂದ ಇದೆ, ಎಲ್ಲಾ ಕಡೆ ಒಂದೇ ವಿಧವಾದ ಪುಸ್ತಕ ಈಗ ಇದೆ. ಎರಡು ಮೂರು ವರ್ಷಗಳಲ್ಲಿ 7 ರಿಂದ 10 ನೆಯ ತರಗತಿಯ ವರೆಗೆ ಎಲ್ಲಾ ರಾಷ್ಟ್ರೀಕರಣವಾಗಬಹುದು ಎಂಬ ಆಸೆಯಿದೆ. ಇದರಿಂದ ಒಳ್ಳೆಯ ಪುಸ್ತಕಗಳು ದೊರೆಯುತ್ತವೆ. ಇದನ್ನು ತೊಂದರೆಯೆಂದು ಭಾವಿಸಬಾರದು.

ರಾಷ್ಟ್ರಕವಿ ಪುಟ್ಟಪ್ಪನವರು, ಷೇಕ್ಸ್‌ಪಿಯರ್, ರನ್ನ ಮುಂತಾದವರು ಬರೆಯುವಂತೆ ರಾಷ್ಟ್ರೀಕರಣವಾದ ಪುಸ್ತಕಗಳು ಇರುವುದಿಲ್ಲ ಎಂದು ಹೇಳಿದರು. ಇದು ಅರ್ಥವಾಗಿಲ್ಲ. ರಾಷ್ಟ್ರೀಕರಣ ಮಾಡಿದರೆ ಪುಟ್ಟಪ್ಪನವರು ಮುಂತಾದವರ ಸಹಾಯ ಪಡೆಯಬಾರದೆಂದಿಲ್ಲ, ಸಹಾಯ ಪಡೆಯಬಹುದು ಮತ್ತು ಪುಸ್ತಕವನ್ನು ತಯಾರುಮಾಡುವಾಗ ಅವರ ಸೇವೆ ಪಡೆಯಬಹುದು.

ಪಿ. ಯು. ಸಿ. ಎರಡು ವರ್ಷ ಮಾಡುವುದನ್ನು ನಾವು ಈಗ ಒಪ್ಪಿಕೊಂಡಿದ್ದೇವೆ. ಇದು ಹೈಸ್ಕೂಲಿನಲ್ಲಿ ಇರಬೇಕೇ ಅಥವಾ ಜೂನಿಯರ್ ಕಾಲೇಜು ಅಂತ ಮಾಡಿ ಬೇರೆ ಪ್ರತ್ಯೇಕವಾಗಿ ಇದಕ್ಕೆ ಕಾಲೇಜುಗಳನ್ನು ಪ್ರಾರಂಭ ಮಾಡಬೇಕೇ ಎನ್ನುವ ವಿಷಯವನ್ನು ಇಲ್ಲಿ ಚರ್ಚಿಸಿದ್ದಾರೆ. ಕೊಠಾರಿ ಕಮೀಷನ್ ಅಭಿಪ್ರಾಯ ಈ ಶಿಕ್ಷಣ ಪ್ರೌಢಶಾಲೆಗೆ ಸೇರಿದ್ದಾಗಿರಬೇಕು ಎಂದು ಇದೆ. ಕಾಲೇಜುಗಳಿಗೆ ಈ ಶಿಕ್ಷಣವನ್ನು ಸೇರಿಸಬಾರದು ಅಥವಾ ವಿಶ್ವವಿದ್ಯಾನಿಲಯಗಳಿಗೆ ಇದನ್ನು ಸೇರಿಸಬಾರದು, ಇದು ಏನಿದ್ದರೂ ಹೈಸ್ಕೂಲಿನಲ್ಲೇ ಇರಬೇಕೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ನಾವಾದರೂ ಅಂದುಕೊಂಡಿದ್ದೇವೆ ಎಲ್ಲೆಲ್ಲಿ ಹೈಸ್ಕೂಲುಗಳು ಇವೆಯೋ ಆ ಶಾಲೆಗಳಲ್ಲಿ ಇದನ್ನು ಪ್ರಾರಂಭ ಮಾಡಬಹುದು, ಇಲ್ಲದೇ ಇರತಕ್ಕ ಕಡೆ ಬೇರೆ ಬೇರೆ ಸಂಸ್ಥೆಗಳನ್ನು ಮಾಡಿ ಅಲ್ಲೂ ಮಾಡಬಹುದು. ಅದರ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ವಿದ್ಯಾಭ್ಯಾಸ ಇಲಾಖೆಯ ಅಧಿಕಾರಿಗಳು ಮತ್ತು ಯೂನಿವರ್ಸಿಟಿಗೆ ಸೇರಿದಂತಹ ಅಧಿಕಾರಿಗಳ ಒಂದು ಬೋರ್ಡ್ ರಚಿಸಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ. ಇದಕ್ಕೆ ಅಡ್ವೈಸರಿ ಬೋರ್ಡನ್ನೂ ಕೂಡ ಶಿಫಾರಸು ಮಾಡಿದ್ದೇವೆ. ಈ ರೀತಿ ಒಂದು ಬೋರ್ಡ್ ಮಾಡಿ ಎರಡು ವರ್ಷದ ಪಿ. ಯು. ಸಿ. ಪದ್ಧತಿಯನ್ನು 1971 ನೇ ಇಸವಿಯಿಂದ ಜಾರಿಗೆ ತರುವುದಕ್ಕೆ ಏರ್ಪಾಡು ಮಾಡಿಕೊಂಡಿದ್ದೇವೆ.

ಶ್ರೀ ಎರ್. ಶ್ರೀಕಂಠಯ್ಯ.—11ನೇ ಕ್ಲಾಸ್ ಜೊತೆಗೆ 12ನೇ ಕ್ಲಾಸನ್ನೂ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಹೌದು. ಸಾಮಾನ್ಯವಾಗಿ ಅನೇಕ ಜನರು ವ್ಯಕ್ತಪಡಿಸಿರುವ ಅಭಿಪ್ರಾಯ ಅನೇಕ ಶಾಲೆಗಳಿಗೆ ಕಟ್ಟಡ ಇಲ್ಲ, ಪೀಠೋಪಕರಣಗಳು ಇಲ್ಲ, ಪಾಠೋಪಕರಣಗಳಿಲ್ಲ ಎಂಬ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ನಾನು ಈಗಾಗಲೇ ಈ ಮುಂಚೆಯೇ ತಿಳಿಸಿದ್ದೇನೆ. ಸುಮಾರು 9 ಕೋಟಿಯಿಂದ 46 ಕೋಟಿಯವರೆಗೂ ಈಗ ವಿದ್ಯಾಭ್ಯಾಸ ಇಲಾಖೆಯ ಖರ್ಚು ಏರಿದೆ. ಒಳ್ಳೆಯ ಕಟ್ಟಡ ಇರಬೇಕೆಂಬುದು ನಿಜ. ಒಳ್ಳೆಯ ಪೀಠೋಪಕರಣಗಳು ಇರಬೇಕು, ಪಾಠೋಪಕರಣಗಳು ಇರಬೇಕು, ಬೇಡ ಎಂದು ಹೇಳುವುದಿಲ್ಲ. ಆದರೆ ಅವೆಲ್ಲವನ್ನೂ ಏಕ ಕಾಲದಲ್ಲಿ ಒದಗಿಸುವುದಕ್ಕೆ ಸಾಧ್ಯವೇ ಎಂಬ ವಿಚಾರವನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. 46 ಕೋಟಿ ಅಲ್ಲ 460 ಕೋಟಿ ರೂಪಾಯಿಗಳಾದರೂ ಈ ಕೆಲಸ ಆಗತಕ್ಕದ್ದಲ್ಲ, ಹಂತ ಹಂತವಾಗಿ ಇದನ್ನು ಮಾಡಬೇಕಾಗುತ್ತದೆ. ಇದರಲ್ಲಿ ಸಾರ್ವಜನಿಕರ ಸಹಾಯ ನಮಗೆ ಹೆಚ್ಚಿನ ಪ್ರಮಾಣದಲ್ಲಿ ದೊರಕಬೇಕು. ನಾನು ಚಿಕ್ಕವನಾಗಿದ್ದಾಗ ನೋಡಿದ್ದೇನೆ—ಅನೇಕ ಹಳ್ಳಿಗಳಲ್ಲಿ ಸರ್ಕಾರಿ ಶಾಲೆಗಳು ಇರಲಿಲ್ಲ ಆ ಗ್ರಾಮದವರೇ ಶಾಲೆಗಳನ್ನು ಪ್ರಾರಂಭ ಮಾಡುತ್ತಾ ಇದ್ದರು, ಅವರೇ ಉಪಾಧ್ಯಾಯರನ್ನು ನೇಮಿಸುತ್ತಾ ಇದ್ದರು, ಆ ಶಾಲೆಗೆ ಆಗತಕ್ಕ ಖರ್ಚು, ಉಪಾಧ್ಯಾಯರ ಜೀವನಕ್ಕೆ ಮಾರ್ಗ ಏನೆಂಬುದನ್ನು ಅವರೇ ನೋಡಿಕೊಳ್ಳುತ್ತಾ ಇದ್ದರು, ಅಂತಹ ಸ್ವಾವಲಂಬನ ಶಕ್ತಿ ಅವರಲ್ಲಿ ಇತ್ತು. ಈಗ ಪ್ರತಿಯೊಂದು ಬಾಬಿನಲ್ಲೂ ಸರ್ಕಾರದ ಕಡೆಗೆ ನೋಡತಕ್ಕ ಭಾವನೆ ಹೆಚ್ಚಾಗುತ್ತಾ ಇದೆ. ಸರ್ಕಾರ ಮಾಡಬೇಕು, ಮಾಡೋಣ, ಕೈಲಾದಮಟ್ಟಿಗೂ ಮಾಡೋಣ, ಆದರೆ ಖಾಸಗಿಯವರೂ ಕೂಡ ಇದರಲ್ಲಿ ಹೆಚ್ಚಾಗಿ ಸಹಕರಿಸಬೇಕು, ಭಾಗವಹಿಸಬೇಕು.

ಶ್ರೀ ಎಂ. ನಾಗಪ್ಪ.—ಆಗ ಲ್ಯಾಂಡ್ ರೆವಿನ್ಯೂ ಒಂದೇ ಇತ್ತು. ಈಗ ಹತ್ತಾರು ತೆರಿಗೆಗಳನ್ನು ಹಾಕಿ ಜನರಿಂದ ದುಡ್ಡು ತೆಗೆದುಕೊಳ್ಳುತ್ತಾ ಇದ್ದೀರಿ. ಮತ್ತೆ ಅವರಿಗೆ ಕೊಡುವ ಸಂಬಳ ಎಷ್ಟು ಎಂಬುದನ್ನು ಯೋಚನೆ ಮಾಡಿ ನೋಡಿ.

ಶ್ರೀ ಕೆ. ವಿ. ಶಂಕರಗೌಡ.—ಅಷ್ಟೇ ಮಟ್ಟಿಗೆ ಆರ್ಥಿಕ ಮಟ್ಟ ಕೂಡ ಹೆಚ್ಚಾಗಿದೆ ಎಂಬುದನ್ನು ಮರೆಯಬಾರದು. ಎಷ್ಟೋ ಹಳ್ಳಿಗಳಲ್ಲಿ ಶಾಲೆಗೆ ಬೇಕಾದಂತಹ ಕಟ್ಟಡವನ್ನು ಕಟ್ಟಿಸುವುದಕ್ಕೆ ಜನರು ಮುಂದೆ ಬಂದು ಹಣ ಸಹಾಯ ಮಾಡಿದ್ದಾರೆ. ಎಲ್ಲೆಲ್ಲಿ ಖಾಸಗಿ ಜನರು ಹೆಚ್ಚಿನ ಶ್ರದ್ಧೆಯನ್ನು, ಆಸಕ್ತಿಯನ್ನು ವಹಿಸಿದ್ದಾರೆಯೋ, ಮುಂದೆ ಬಂದು ಸಹಾಯ ಮಾಡಿದ್ದಾರೆಯೋ ಅಲ್ಲೆಲ್ಲಾ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಅವಕಾಶವಾಗಿದೆ. ಈ ಸದನದಲ್ಲಿರತಕ್ಕ ಪ್ರತಿಯೊಬ್ಬರೂ ಮನಸ್ಸು ಮಾಡಿದರೆ ಎಷ್ಟೋ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಅವಕಾಶವಿದೆ.

ಶ್ರೀ ಕೆ. ಎಚ್. ಪಾಟೀಲ್.—ಎಲ್ಲಿ ಜನರು ಹಣ ಕೂಡಿಸಿ ಬಿಲ್ಡಿಂಗ್ ನಿರ್ಮಾಣ ಮಾಡಿದ್ದಾರೆ ಅಂತಹವರಿಗೆ ನಿರಾಶೆಯನ್ನುಂಟು ಮಾಡುವ ರೀತಿಯಿಂದ ಬಾಡಿಗೆ ಕೊಡದೇ ಇರುವ ವ್ಯವಸ್ಥೆ ಮಾಡಿದ್ದೀರಿ, ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಕೆ. ವಿ. ಶಂಕರಗೌಡ.—ನಮ್ಮ ಸ್ವಂತ ಮನೆಗೆ ನಾವೇ ಬಾಡಿಗೆ ಕೊಟ್ಟಹಾಗೆ ಆಗುತ್ತದೆ. ಸ್ವಂತ ಕಟ್ಟಡಕ್ಕೆ ಬಾಡಿಗೆ ಕೊಡಬೇಕು ಅಂತ ಅನ್ನುವುದು ನನಗೆ ಇನ್ನೂ ಆ ಪ್ರಶ್ನೆ ಜಟಿಲವಾಗಿದೆ, ಅರ್ಥವಾಗಿಲ್ಲ. ಶ್ರೀಮಾನ್ ಪಾಟೀಲ್‌ರವರು ಆ ವಿಷಯದಲ್ಲಿ ತಿಳಿವಳಿಕೆ ಕೊಡುವುದಾದರೆ ಖಂಡಿತವಾಗಿಯೂ ಸ್ವೀಕರಿಸುತ್ತೇನೆ, ಅದರಂತೆ ನಡೆದುಕೊಳ್ಳುವುದಕ್ಕೆ ತಯಾರಾಗಿದ್ದೇನೆ.

ರಾಜ್ಯವಿಂಗಡಣೆಯಾಗಿ 10–12 ವರ್ಷವಾದರೂ ಕೂಡ ಈ ಶಿಕ್ಷಣದಲ್ಲಿ ಹೊಸ ಸ್ವರೂಪವನ್ನು ತರುವುದಕ್ಕೆ ಸಾಧ್ಯವಾಗಿಲ್ಲ, ಬೊಂಬಾಯಿ ಕರ್ನಾಟಕ ಏರಿಯಾದಲ್ಲಿರತಕ್ಕ ಸ್ಕೂಲ್ ಬೋರ್ಡ್‌ಗಳು ಒಂದು ರೀತಿಯಲ್ಲಿ ಇವೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೊಂದು ತರಹ, ಹಳೇ ಮೈಸೂರಿನಲ್ಲಿ ಇನ್ನೊಂದು ತರಹ ಈ ರೀತಿ ವ್ಯತ್ಯಾಸ ಇದೆ, ಇವನ್ನು ಹೋಗಲಾಡಿಸಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ, ಆದ್ದರಿಂದ ಆನ ಕಾಲದಲ್ಲಿಯೇ ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿರತಕ್ಕ ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್‌ಗಳನ್ನು ರದ್ದು ಮಾಡಿ ಆ ಎಲ್ಲಾ ಜಿಲ್ಲೆಗಳಲ್ಲೂ ಇರತಕ್ಕ ಶಾಲೆಗಳನ್ನು ಸರ್ಕಾರಿ ಶಾಲೆಗಳೆಂದು ಪರಿಗಣಿಸಬೇಕೆಂದು ಒಂದು ತೀರ್ಮಾನವನ್ನು ಕೈಕೊಂಡಿದೆ. ಆದಷ್ಟು ಜಾಗ್ರತೆ ಅದು ಜಾರಿಗೆ ಬರುತ್ತದೆ ಎಂದು ಹೇಳುತ್ತೇನೆ. ಪ್ರತಿಯೊಂದು ಜಿಲ್ಲೆಗೂ ಕೂಡ ಜಿಲ್ಲಾಮಟ್ಟದ ಸಲಹಾ ಸಮಿತಿಗಳನ್ನು ರಚಿಸಬೇಕೆಂಬ ಆಶೆ ಇದೆ, ಅದರಲ್ಲಿ ಶ್ರೀಮಾನ್ ಕೆ. ಎಚ್. ಪಾಟೀಲ್‌ರವರಿಗೂ ಸ್ಥಳ ಇರುತ್ತದೆ ಹೆದರಿಕೊಳ್ಳಬೇಕಾಗಿಲ್ಲ. ಯಾವುದಾದರೂ ಒಂದು ರೀತಿಯಲ್ಲಿ ಸಲಹಾ ಸಮಿತಿ ಇರಬೇಕಾದ್ದು ಆವಶ್ಯಕ, ಖಾಸಗಿ ಜನರು ಹೆಚ್ಚು ಹೆಚ್ಚಾಗಿ ಶಿಕ್ಷಣದ ಕ್ಷೇತ್ರದಲ್ಲಿ ಪಾತ್ರ ವಹಿಸಬೇಕಾದ್ದು ಅವಶ್ಯಕವಾಗಿದೆ. ಆ ದೃಷ್ಟಿಯಿಂದ ಪ್ರತಿಜಿಲ್ಲೆಯಲ್ಲೂ ಸಲಹಾ ಸಮಿತಿಗಳನ್ನು ನೇಮಕ ಮಾಡಬೇಕೆಂದು ಇದ್ದೇವೆ.

ಶ್ರೀಮಾನ್ ನಂಜೇಗೌಡರು ನನ್ನಮೇಲೆ ಸ್ವಲ್ಪ ಖಾರವಾಗಿ ಮಾತನಾಡಿರು, ನಾನು ಅದಕ್ಕೆ ಅರ್ಹನಲ್ಲ ಎಂದು ಭಾವಿಸಿಕೊಂಡಿದ್ದೇನೆ. ಅವರ ವಿಷಯದಲ್ಲಿ ನನಗೆ ಸಂಪೂರ್ಣ ಗೌರವ ಇದೆ, ಅವರು ಹೇಳಿದ್ದನ್ನು ಮನ ಇಟ್ಟು ಗಮನ ಕೊಟ್ಟು ಕೇಳಿದ್ದೇನೆ. ಅವರು ಹೇಳಿದ್ದು ಸರಿಯಿಲ್ಲ ಎಂದು ನಾನು ಹೇಳಿದರೆ ಅದನ್ನು ಅವರು ತಪ್ಪಾಗಿ ಭಾವಿಸಿಕೊಂಡು ನಮ್ಮ ಬಾಯನ್ನು ಮುಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ಹೇಳಿದ್ದೇ ಆದರೆ ಅದು ಸರಿಯಲ್ಲ ಎಂದು ವಿನಯದಿಂದ ಸೂಚಿಸುವುದಕ್ಕೆ ಬಯಸುತ್ತೇನೆ.

ವಿಶ್ವವಿದ್ಯಾನಿಲಯದ ಕಾನ್‌ವೊಕೇಷನ್ ನಡೆಯುವಾಗ ಖರ್ಚು ವಗೈರೆ ಆಗಿರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವಿಶ್ವವಿದ್ಯಾಲಯ ಸ್ವಾಯತ್ತ ಅಧಿಕಾರವನ್ನುಳ್ಳ ಸಂಸ್ಥೆ, ಅದರ ಕಾರ್ಯಕ್ರಮದ ವಿವರದ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲ ಅದು ಇರಲಿ. ಆ ಮಾತನ್ನು ಎತ್ತಿರುವುದರಿಂದ ಈ ಮಾತನ್ನು ಹೇಳಬೇಕಾಗಿದೆ. ಅಲ್ಲಿ ಪೀಠಗಳನ್ನು ಒದಗಿಸುವುದಕ್ಕೆ ಟೆಂಡರ್ ಕರೆದಿದ್ದರು. ಯಾವುದೋ ಬಹಳ ಕಡಿಮೆ ಮಟ್ಟದ ಫರ್ನೀಚರನ್ನು ಅಥವಾ ಸಲಕರಣೆಗಳನ್ನು ತರಿಸಿಕೊಂಡು ಅದರಲ್ಲೇನೋ 'ಕೈವಾಡ ಮಾಡಿದ್ದಾರೆ ಎಂಬ ಶಂಕೆ ಅವರಲ್ಲಿ ಇದೆ. ಅವರು ಏನು ಕೈವಾಡ ಮಾಡಿದ್ದಾರೆ ಎಂಬುದನ್ನು ಕಂಡುಹಿಡಿಯುವುದಕ್ಕೆ ನನಗೆ ಯೋಗ್ಯತೆ ಇಲ್ಲ. ಮತ್ತು ಅಲ್ಲಿ ಹುದ್ದೆಗಳನ್ನು ಭರ್ತಿಮಾಡುವಾಗ ಅನ್ಯಾಯ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಹಾಗೆ ಅಲ್ಲಿ ಯಾವ ಅನ್ಯಾಯಗಳೂ ನಡೆದಿಲ್ಲ. ನಾನು ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ ನೋಡಿದ್ದೇನೆ. ಆಯಾಯ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಭರ್ತಿಮಾಡತಕ್ಕ ಬಗ್ಗೆ ಪ್ರತ್ಯೇಕ ಹುದ್ದೆಗಳಿಗೆ ಪ್ರತ್ಯೇಕ ರೆಕ್ರೂಟ್‌ಮೆಂಟ್ ಸಮಿತಿಗಳನ್ನು ನೇಮಕ ಮಾಡಲಾಗಿದೆ. ಆ ಸಮಿತಿಗಳು ನೇಮಗಳ ಪ್ರಕಾರ ಅಭ್ಯರ್ಥಿಗಳನ್ನು ಆರಿಸಿದ್ದಾರೆ. ಹಾಗೂ ಒಂದುವೇಳೆ ಅಲ್ಲಿ ಅಂಥ ಅಕ್ರಮಗಳು ನಡೆದಿದ್ದರೆ ಅವುಗಳನ್ನು ನನ್ನ ಗಮನಕ್ಕೆ ತಂದರೆ ಅವನ್ನು ನಾನು ಖಂಡಿತವಾಗಿಯೂ ವಿಚಾರ ಮಾಡುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ಅಲ್ಲಿ ಸೆಲೆಕ್ಷನ್ ಕಮಿಟಿಗಳಿದ್ದರೂ ಕೂಡ ಬಹಳ ಕುಂಬಕೋಣ ನಡೆಯುತ್ತಿದೆ ಅನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರ ಗೌಡ.—ಹಾಗೆ ಅಲ್ಲಿ ಕ್ರಮಪರಿತು ಕೆಲಸಗಳು ನಡೆಯುತ್ತಿಲ್ಲ ಎಂದು ಭಾವಿಸುವುದು ಸರಿಯಾದ್ದಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—If concrete instances are brought to the notice of the hon. Minister will the Government take steps ?

ಶ್ರೀ ಕೆ. ವಿ. ಶಂಕರೇ ಗೌಡ.—ನಾವು ಅಲ್ಲಿಗೆ ವಿಸಿಟರ್ಸ್ ಆಗಿ ಹೋಗಿ ಅಂಥ ಅಕ್ರಮಗಳೇ ನಾದರೂ ನಡೆದಿದ್ದರೆ ಅಂಥ ವಿಚಾರಗಳಲ್ಲಿ ಪ್ರವೇಶಮಾಡುವುದಕ್ಕೆ ನಮಗೆ ಅವಕಾಶವಿದೆ.

ಇನ್ನು ಈಗ ಬೆಂಗಳೂರು ಯೂನಿವರ್ಸಿಟಿಯಲ್ಲಿ ಕೆಲಸಮಾಡುತ್ತಿರುವ ರಿಜಿಸ್ಟ್ರಾರ್ ಅವರು ಬಹಳ ದಕ್ಷರು, ಪ್ರಾಮಾಣಿಕರು, ಅವರು ಬಹಳ ಚೆನ್ನಾಗಿ ಕೆಲಸಮಾಡಿಕೊಂಡು ಹೋಗು ತ್ತಿದ್ದಾರೆ.

ಮತ್ತೊಂದು ವಿಷಯ ಎಲ್ಲರ ಮನಸ್ಸನ್ನೂ ಕೆರಳಿಸುವಂಥಾದ್ದು ಇದೆ. ಅದು ಯಾವುದೆಂದರೆ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರು ಇದ್ದಲ್ಲೇ ಇರುತ್ತಾರೆ, ಅಂದರೆ ಅವರು ಹುಟ್ಟಿದೂರು ಗಳಲ್ಲೇ ಕೆಲಸಮಾಡಿಕೊಂಡಿದ್ದಾರೆ. ಅಂಥವರನ್ನು ಬೇರೆ ಊರುಗಳಿಗೆ ಕೂಡಲೇ ವರ್ಗಾಯಿಸ ಬೇಕೆಂದು ಕೇಳುತ್ತಿರುವುದು ಒಂದು ವಿಷಯ. ಇದರ ಬಗ್ಗೆ ಹೇಳುವುದಾದರೆ ನಮ್ಮಲ್ಲಿ 94 ಸಾವಿರ ಉಪಾಧ್ಯಾಯರುಗಳಿದ್ದಾರೆ. ಅವರನ್ನೆಲ್ಲಾ ಬೇರೆ ಊರುಗಳಿಗೆ ವರ್ಗಮಾಡಬೇಕೆಂದರೆ ಸರ್ಕಾರಕ್ಕೆ ತಗಲತಕ್ಕ ಟಿ. ಎ. ಮತ್ತು ಡಿ. ಎ. ಎಷ್ಟಾಗುತ್ತದೆಂಬುದನ್ನು ತಾವೆಲ್ಲರೂ ಆಲೋಚನೆ ಮಾಡ ಬೇಕು. ಅವರಿಗೆಲ್ಲಾ ವರ್ಗಮಾಡಿದ ಸ್ಥಳದಲ್ಲಿ ವಾಸದ ಮನೆಗಳಿಗೆ ಏನು ವ್ಯವಸ್ಥೆಮಾಡಬೇಕು ? ಈ ಸಮಸ್ಯೆಗಳಿಗೆಲ್ಲಾ ಪರಿಹಾರ ಹುಡುಕುವುದಾದರೆ, ನಾನೇನು ಬೇಕಾದರೆ ನಾಳೆಯೇ ಅವರೆಲ್ಲ ರನ್ನೂ ವರ್ಗಮಾಡುವುದಕ್ಕೆ ಆರ್ಡರ್ ಮಾಡುತ್ತೇನೆ. ನಾವು ಗುಮಾಸ್ತರನ್ನೇನೋ ಒಂದು ದೊಡ್ಡ ಊರಿನಿಂದ ಇನ್ನೊಂದು ದೊಡ್ಡ ಊರಿಗೆ ವರ್ಗ ಮಾಡುವುದರಿಂದ ಅವರ ವಾಸದ ಮನೆಗಳಿಗೆ ಅಷ್ಟು ತೊಂದರೆ ಬರುವುದಿಲ್ಲ. ಆದರೆ ಹಳ್ಳಿಗಳ ವಿಚಾರ ಹಾಗಲ್ಲ. ಹಳ್ಳಿಗಳಲ್ಲಿ ಬಾಡಿಗೆ ಮನೆಗಳು ಸಿಕ್ಕುವುದಿಲ್ಲ......

ಶ್ರೀ ಕೆ. ಎಚ್. ಪಾಟೀಲ್.—ಅಲ್ಲಿ ಕೆಲವರು ಬಾಬುವಾರುಗಳನ್ನಿಟ್ಟು ಇರುತ್ತಾರೆ. ಆದ್ದರಿಂದ ಅವರು ಅಲ್ಲಿ 20-25 ವರ್ಷ ಉಳಿಯಲಿಕ್ಕೆ ಸಾಧ್ಯವಾಗಿದೆ. ಇಲ್ಲದಿದ್ದರೆ ಹಾಗೆ ಉಳಿ ಯುವುದಕ್ಕಾಗುತ್ತಿರಲಿಲ್ಲ. ಅದನ್ನು ದಯವಿಟ್ಟು ವಿಚಾರ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರ ಗೌಡ.—ಶ್ರೀಮಾನ್ ಕೆ. ಎಚ್. ಪಾಟೀಲರು ಅಂಥ ಸ್ಪೆಸಿಫಿಕ್ ವಿಷಯ ಗಳನ್ನು ನನ್ನ ಗಮನಕ್ಕೆ ತಂದರೆ ನಾನು ಖಂಡಿತ ವಿಚಾರ ಮಾಡುತ್ತೇನೆ. ಮತ್ತು ಅಂಥವರಿಗೆ ತಕ್ಕ ಬಂದೋಬಸ್ತನ್ನೂ ಮಾಡುತ್ತೇನೆ. ಈಗ ಸರ್ಕಾರದವರು ಸಾಧ್ಯವಾದಮಟ್ಟಿಗೂ ಇವರನ್ನು ಅವರ ಜನ್ಮ ಸ್ಥಳಕ್ಕೆ ದೂರದಲ್ಲೇ ಇಡಲಾಗಿದೆ. ಮತ್ತು ಪ್ರಸಕ್ತ ಸಾಲಿನಲ್ಲಿ ಸರ್ಕಾರ 100 ಕ್ಕೆ 10 ರಂತೆ ಈ ಉಪಾಧ್ಯಾಯರನ್ನು ವರ್ಗಮಾಡಬೇಕೆಂದು ತೀರ್ಮಾನ ಮಾಡಿದೆ.

ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ಸ್ವಾಮಿ, ಹಾಗೆ ಮಾಡಿದರೆ ಅದರ ಪಾಪವೆಲ್ಲಾ ತಮಗೇ.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ಮೊನ್ನೆ ಸರ್ಕಾರದವರು ಭೂಸುಧಾರಣೆಯನ್ನು ತಂದಾಗ್ಗೆ ಒಂದು—ಎರಡು ಎಕರೆ ಭೂಮಿಯನ್ನು ಸ್ವಂತಕ್ಕೆ ಇಟ್ಟುಕೊಂಡಿರತಕ್ಕ ಈ ಜನರು ಸರ್ಕಾರಿ ನೌಕರಿಯಲ್ಲಿದ್ದರೂ ಅವರು ಆ ಭೂಮಿಯನ್ನು ಇಟ್ಟುಕೊಳ್ಳಲು ಅವಕಾಶಮಾಡಿದ್ದಾರೆ. ಆ ಭೂಮಿಯನ್ನು ಉಳುಮೆಮಾಡುವುದಕ್ಕೆ ಅವರು ಸಾಧ್ಯವಾದ ಮಟ್ಟಿಗೂ ಗ್ರಾಮದಲ್ಲೇ ಇರ ಬೇಕೆಂದು ಇಚ್ಛೆಪಡುತ್ತಾರೆ. ಅಂಥವರನ್ನು ಈಗ ಸರ್ಕಾರದವರು ದೂರದ ಗ್ರಾಮಕ್ಕೆ ವರ್ಗ ಮಾಡಿದರೆ ಅವರು ಜಮೀನನ್ನು ಗುತ್ತಿಗೆ ಬೇರೆ ಜನಕ್ಕೆ ಕೊಡಬೇಕು, ಅದರಿಂದ ಮುಂದೆ ಅವರಿಗೆ ತೊಂದರೆ ಬರುತ್ತದೆ. ಅದನ್ನು ಹೇಗೆ ನಿವಾರಣೆ ಮಾಡುತ್ತೀರಿ ?

ಶ್ರೀ ಕೆ. ವಿ. ಶಂಕರ ಗೌಡ.—ನಾನು ಎಲ್ಲಾ ಉಪಾಧ್ಯಾಯರೂ ಕೆಟ್ಟವರೆಂದು ಹೇಳುವುದಿಲ್ಲ. ಯಾರು ಶಾಲೆಗಳನ್ನು ಸರಿಯಾಗಿ ಶ್ರದ್ಧೆವಹಿಸಿ ನಡೆಸುತ್ತಿಲ್ಲವೋ ಅಂಥವರನ್ನು ಮೊದಲು ಹೊರಗೆ

(ಶ್ರೀ ಕೆ. ವಿ. ಶಂಕರ ಗೌಡ)

ಹಾಕುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿದ್ದೇವೆ. ಇನ್ನು ಈ ಶಾಲೆಗಳಲ್ಲಿ ಕೆಲಸಮಾಡತಕ್ಕವರು ಯಾರು ಯಾರು ಇತರೇ ದುರ್ವ್ಯವಹಾರಗಳಲ್ಲಿ ತೊಡಗಿದ್ದಾರೋ ಅಂಥವರನ್ನು ಆ ವ್ಯವಹಾರ ಗಳಿಂದ ದೂರವಿಡುವುದಕ್ಕೆ ಪ್ರಯತ್ನ ಮಾಡಲಾಗುವುದು. ನಾನು ಇಲ್ಲಿಯವರೆಗೂ ಮಾನ್ಯ ಸದಸ್ಯರೆಲ್ಲರೂ ಕೇಳಿರತಕ್ಕ ಪ್ರಶ್ನೆಗಳಿಗೆ ಸಾಕಷ್ಟು ಉತ್ತರಗಳನ್ನು ಕೊಟ್ಟಿದ್ದೇನೆ. ಇನ್ನೂ ಏನಾದರೂ ಕೆಲವು ವಿಷಯಗಳು ನನ್ನ ಗಮನಕ್ಕೆ ಬಾರದೆ ಇದ್ದು ಅವುಗಳ ಬಗ್ಗೆ ನಾನು ಉತ್ತರ ಹೇಳದೆ ಇದ್ದರೂ ಅವುಗಳ ಬಗ್ಗೆ ನನಗೆ ಉದಾಶೀನ ಅಥವಾ ಅಲಕ್ಷ್ಯ ಮನೋಭಾವ ಇದೆಯೆಂದು ಯಾರೂ ಭಾವಿಸಬಾರದು......

ಶ್ರೀ ಎಂ. ನಾಗಪ್ಪ.—ಆ ಪ್ರೌಢಶಾಲೆಗಳಲ್ಲಿ ಒಂದು ತರಗತಿಯಲ್ಲಿ 28 ಮಂದಿ ವಿದ್ಯಾರ್ಥಿ ಗಳು ಇದ್ದೇ ತೀರಬೇಕೆಂಬ ಕಡ್ಡಾಯವನ್ನು ತೆಗೆದು ಹಾಕತಕ್ಕ ಬಗ್ಗೆ ತಾವೇನೂ ಹೇಳಲಿಲ್ಲ ?

ಶ್ರೀ ಕೆ. ವಿ. ಶಂಕರ ಗೌಡ.—ಆ ವಿಷಯಗಳನ್ನೆಲ್ಲಾ ನಾನು ಒಂದು ಪಟ್ಟಿ ಮಾಡಿಕೊಂಡಿ ದ್ದೇನೆ ಅದರಲ್ಲಿ ಇನ್ನೂ ಅನೇಕ ವಿಷಯಗಳಿವೆ ಈಗ ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ನಾನು ಪುನರ್‌ಪರಿಶೀಲನೆ ಮಾಡುತ್ತೇನೆ. ಇನ್ನು ಶ್ರೀಮಾನ್ ನಂಜೇಗೌಡರು ಹೇಳಿರತಕ್ಕ ವಿಷಯ ಅಂದರೆ ಆ 130 ಮುಚ್ಚತಕ್ಕ ಸ್ಕೂಲುಗಳ ಬಗ್ಗೆಯೂ ಮತ್ತೆ ಪರಿಶೀಲನೆ ನಡೆಸುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ಕೇಂದ್ರ ಸರ್ಕಾರದವರಿಂದ ರಾಜ್ಯಕ್ಕೆ ಬರತಕ್ಕ ಆ ಹಿಂದೀ ಪ್ರಚಾರದ ಬಾಬಿನಲ್ಲಿ ಕೋಟ್ಯಾಂತರ ರೂಪಾಯಿಗಳು ಲ್ಯಾಪ್ಸಾಗುತ್ತಿದೆ, ನಮ್ಮಲ್ಲಿ ಆ ಹಿಂದಿ ಡಿಗ್ರಿ ಪಡೆದ ಜನರಿದ್ದರೂ ಉತ್ತೇಜನ ಕೊಡುವುದಿಲ್ಲ ಹಿಂದೀ ಪಾಠಪ್ರವಚನಗಳನ್ನು ಸರಿಯಾಗಿ ಮಾಡುತ್ತಿಲ್ಲ ಇದರಿಂದ ದೇಶಕ್ಕೆ ದ್ರೋಹವಾಗುತ್ತಿದೆ, ಹಣ ಲ್ಯಾಪ್ಸಾಗುತ್ತಿದೆ ಎನ್ನುತ್ತಾರೆ ಅದಕ್ಕೇನು ಕಾರ್ಯಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಕೆ. ವಿ. ಶಂಕರ ಗೌಡ.—ಹಾಗೆ ಯಾವ ಹಣವೂ ಲ್ಯಾಪ್ಸಾಗಿಲ್ಲ. ಅಂಥದೇನಾದರೂ ಇದ್ದರೆ ನನ್ನ ಗಮನಕ್ಕೆ ಮಾನ್ಯ ಸದಸ್ಯರು ತಂದರೆ ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ನಮ್ಮ ಲ್ಯಾಬೊರೇಟರಿಗಳಿಗೆ ಬೇಕಾದ ಸಾಮಾನುಗಳನ್ನು ಇಲ್ಲಿ ತಯಾರುಮಾಡುವುದಕ್ಕೆ ಏಕೆ ಸಾಧ್ಯವಾಗುವುದಿಲ್ಲ ?

ಶ್ರೀ ಕೆ. ವಿ. ಶಂಕರ ಗೌಡ.—ಹೀಗೆ ವಿಚಾರ ಮಾಡತಕ್ಕ ವಿಷಯಗಳು ಇನ್ನೂ ಅನೇಕ ಇವೆ. ಅವುಗಳನ್ನೆಲ್ಲಾ ಸರ್ಕಾರದವರು ಸೂಕ್ತ ರೀತಿಯಲ್ಲಿ ಪರಿಶೀಲನೆಮಾಡಿ ತಕ್ಕ ಕಾರ್ಯಕ್ರಮ ಕೈಗೊಳ್ಳು ತ್ತಾರೆ. ಕೊನೆಯದಾಗಿ ಮಾನ್ಯ ಸದಸ್ಯರೆಲ್ಲರೂ ಇಷ್ಟು ಶಾಂತರೀತಿಯಲ್ಲಿ ಕುಳಿತು ನನ್ನ ಭಾಷಣ ವನ್ನು ಕೇಳಿದ್ದಕ್ಕೂ ಮತ್ತು ನನಗೆ ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶವನ್ನು ಒದಗಿಸಿ ಕೊಟ್ಟ ಅಧ್ಯಕ್ಷರಿಗೂ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

8–30 P.M.

ಶ್ರೀ ಎಂ. ನಾಗಪ್ಪ.—ಒಂದು ವಿಷಯವನ್ನು ಹೇಳಬೇಕು. ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ ನಿಜಲಿಂಗಪ್ಪನವರು ಇದ್ದಾಗ, ಪ್ರೈವೇಟ್ ಮೆಡಿಕಲ್ ಕಾಲೇಜುಗಳ ಬಗ್ಗೆ ಅದನ್ನು ಸರ್ಕಾರದ ವರು ತೆಗೆದುಕೊಳ್ಳುತ್ತಾರೆಂಬ ಹೇಳಿಕೆಯನ್ನು ಕೊಟ್ಟಿದ್ದರು. ಆ ಯೋಜನೆಯನ್ನು ಸರ್ಕಾರದವರು ಈಗ ಕೈಬಿಟ್ಟಿದ್ದಾರೆಯೇ ಅಥವಾ ಆ ಯೋಜನೆಯನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಕೆ. ವಿ. ಶಂಕರ ಗೌಡ.—ಮೆಡಿಕಲ್ ಕಾಲೇಜು ನನಗೆ ಸೇರಿದ್ದಲ್ಲ. ಅದು ಹೆಲ್ತ್ ಮಿನಿಸ್ಟರ್‌ಗೆ ಸೇರಿದ್ದು.

ಶ್ರೀ ಎಂ. ಎನ್. ರಾಮಣ್ಣ.—ನಾನು ಒಂದು ವಿಷಯ ಹೇಳಬೇಕಾಗಿದೆ. ಈಗ 3 ವರ್ಷ ಗಳಿಂದ ಇರತಕ್ಕ ನೂರಾರು ಜನ ಉಪಾಧ್ಯಾಯರನ್ನು ತೆಗೆಯುವ ಪ್ರಶ್ನೆ ಇದೆ. ಬೇಸಿಗೆಕಾಲ ಬರುವುದಕ್ಕೆ ಮುಂಚೆ ಸುಮಾರು 400—500 ಜನ ಉಪಾಧ್ಯಾಯರುಗಳು ರಿಲೀವ್ ಆಗುತ್ತಾರೆ. ಅವರು ಜೀವನ ಮಾಡುವುದು ಹೇಗೆ ? ಅವರಿಗೆ ಏನಾದರೂ ಸರ್ಕಾರದವರು ಸೂಕ್ತ ಪರಿಹಾರ ಕೊಡ ಬೇಕು. ಎರಡನೆಯದಾಗಿ ವಿಜ್ಞಾನಮಂದಿರಗಳು ಅಜ್ಞಾನ ಮಂದಿರಗಳಾಗಿವೆ. ಅವಕ್ಕೆ ಅನ್ಯಾಯವಾಗಿ ಸರ್ಕಾರದವರು ದುಡ್ಡು ಖರ್ಚುಮಾಡುತ್ತಿದ್ದಾರೆ. ಅದನ್ನು ನಿಲ್ಲಿಸಬೇಕು.

ಶ್ರೀ ಕೆ. ವಿ. ಶಂಕರ ಗೌಡ.—3 ವರ್ಷಗಳಿಂದ ಇದ್ದಂತಹವರನ್ನು ತೆಗೆದುಹಾಕುವ ಪ್ರಶ್ನೆಯು ವಿಚಾರ ಈಗ ಹೇಳುವುದಕ್ಕಾಗುವುದಿಲ್ಲ. ಅದನ್ನು ಪರಿಶೀಲನೆಮಾಡಿ ಸಾಧ್ಯವಾದಷ್ಟು ಸಹಾಯ ಮಾಡುತ್ತೇವೆ. ಎರಡನೆಯದಾಗಿ ವಿಜ್ಞಾನಮಂದಿರಗಳನ್ನು ಮುಚ್ಚಬೇಕು ಎಂಬುದು ಮಾನ್ಯ ಸದಸ್ಯರ ವೈಯಕ್ತಿಕ ಅಭಿಪ್ರಾಯ. ಅದನ್ನು ಮುಂದೆ ವಿಚಾರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಉಪಾಧ್ಯಾಯರನ್ನು ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ವರ್ಗಮಾಡುವುದನ್ನು ಪರಿಶೀಲನೆಮಾಡುತ್ತೇವೆಂದು ಹೇಳಿದಿರಿ. ಡಿ.ಪಿ.ಐ., ಡಿ.ಡಿ.ಪಿ.ಐ. ಮತ್ತು ಡಿ.ಇ.ಓ. ಆಫೀಸಿನಲ್ಲಿರತಕ್ಕ ಅಧಿಕಾರಿಗಳನ್ನು ಏನಾದರೂ ಬದಲಾವಣೆಮಾಡುವುದಕ್ಕೆ ಆಲೋಚನೆಮಾಡುತ್ತಿದ್ದೀರಾ ?

ಶ್ರೀ ಕೆ. ವಿ. ಶಂಕರಗೌಡ.—ಈಗಾಗಲೇ ಬದಲಾವಣೆಯಾಗುತ್ತಿದ್ದಾರೆ.

Mr. DEPUTY SPEKER.—I shall put the Demands to the vote of the House. The question is :

> " That the respective sums not exceeding the amounts mentioned be granted to the Government to defray the charges which will come in course of payment during the financial year for the period ending 31st day of March 1970 in respect of Demand Nos. 17 and 37."

The motion was adopted.

As directed by the chair the motion for Demands for Grants adopted by the House are reproduced below :—

DEMAND NO. 17.—EDUCATION.

28. Education.

Minister for Education.—Sir, on the recommendation of the Govenor, I beg to move :

> " That a sum not exceeding Rs. 46,17,90,000 be granted to the Government to defray the charges which will come in course of payment during the financial year for the period ending 31st day of March 1970, in respect of ' Education ' . "

DEMAND NO. 37.—STATIONERY AND PRINTING.

68. Stationery and Printing.

Minister for Education.—Sir, on the recommendation of the Governor, I beg to move :

> " That a sum not exceeding Rs. 1,17,60,000 be granted to the Government to defray the charges which will come in

course of payment during the financial year for the period ending 31st day of March 1970, in respect of 'Stationery and Printing'."

Mr. DEPUTY SPEAKER.— The House now stands adjourned to meet tomorrow at 1 P.M.

The House adjourned at Thirty-Five Minutes past Eight of the Clock to meet again at One of the Clock on Wednesday the 12th March 1969.

WD 12645—GPB—600—9-7-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 12th March 1969

The House met in the Assembly Chamber, Vidhana Soudha, Bangalore, at One of the Clock.

MR. SPEAKER [SRI S. D. KOTHAVALE] in the Chair.

STARRED QUESTIONS

(to which oral answers were given)

MR. SPEAKER.—There are as many as Twenty-two questions put down for to-day. With the co-operation of hon. members I want to see all these questions are answered. I shall permit one or two supplementries to the member who has tabled the question and one or two supplementaries to others. I request hon. members kindly to co-operate with the Chair.

Regularisation of Services of Employees in Government Spun Silk Mills, Channapatna

215. SRI T. V. KRISHNAPPA (Channapatna).—

Will the Minister for Agriculture be pleased to state :—

(*a*) the total number of employees working in different cadre in the Government Spun Silk Factory at Channapatna (cadrewar details may be furnished) ;

(*b*) of them how many have put in a service of more then eight years (cadrewar details may be furnished) ;

(*c*) of them the services of how many are regularised (cadrewise details may be furnished) ?

Sri B. RACHAIAH (Minister for Agriculture).—

(*a*) 701. Cadrewise details are noted below :—

	Trial and Temp.	*Casual*	*Total*
Daily rated operatives	556	75	631
Monthly rated employees.	70	...	70
		Total ...	701

(*b*)—

	Trial and Temp.	*Casual*	*Total*
Daily rated operatives	8	...	8
Monthly rated	25	...	25

(*c*) None.

ಶ್ರೀ ಟಿ. ವಿ. ಕೃಷ್ಣಪ್ಪ.—701 ಜನ ಕೆಲಸಗಾರರು ಇದ್ದೂ ಒಬ್ಬರನ್ನೂ ಪರ್ಮನೆಂಟ್ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ.—ಅಲ್ಲಿ ಒಂದು ಸ್ಕ್ರೀನಿಂಗ್ ಕಮಿಟಿ ನೇಮಕ ಮಾಡಿದೆ. ಅಲ್ಲಿ ಹಳೆಯ ಕೆಲಸಗಾರರೂ ಕೆಲಸ ಮಾಡುತ್ತಿದ್ದಾರೆ, ಹೊಸಬರೂ ಕೆಲಸ ಮಾಡುತ್ತಿದ್ದಾರೆ. ಅವೆರಡಕ್ಕೂ ಒಂದು ಸ್ಕ್ರೀನಿಂಗ್ ಕಮಿಟಿ ಮಾಡಿ ಅವರನ್ನು ಸ್ಕ್ರೀನ್ ಮಾಡಬೇಕೆಂದು ಮಾಡಿದ್ದಾರೆ.

ಶ್ರೀ ಟಿ. ವಿ. ಕೃಷ್ಣಪ್ಪ.—ಅವರನ್ನು ಪರ್ಮನೆಂಟ್ ಮಾಡದಿರುವುದರಿಂದ, ಅಧಿಕಾರಿಗಳು ತಮಗೆ ಬೇಕಾದವರನ್ನು ನೇಮಕಮಾಡಿಕೊಳ್ಳುವುದು, ಬೇಡದವರನ್ನು ತೆಗೆದುಹಾಕುವುದು ಎಲ್ಲಾ ನಡೆಯುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಇಲ್ಲ, ಹಾಗೆ ಮಾಡುತ್ತಾ ಇಲ್ಲ. ಟೆಂಪರರಿಯಾದರೂ ಕೂಡ, ಅವರಿಗೆ ಏನೇನು ಲೇಬರ್ ಆಕ್ಟ್ ಪ್ರಕಾರ ಸೌಲಭ್ಯಗಳನ್ನು ಒದಗಿಸಬೇಕೋ, ಅದನ್ನು ಕೊಡುತ್ತಿದ್ದೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಡೈಲಿ ವೇಜಸ್ ಮೇಲೆ 556 ಜನ ಕೆಲಸ ಮಾಡುತ್ತಾ ಇದ್ದಾರೆ. ಅದರಲ್ಲಿ 8 ವರ್ಷದಿಂದ ಕೆಲಸ ಮಾಡುವವರೂ ಇದ್ದಾರೆ. ಇವರಿಗೆ ಏನೂ ರಿಕ್ರೂಟ್‌ಮೆಂಟ್ ರೂಲ್ಸ್ ಇಲ್ಲವೇ ? ಇಲ್ಲದಿದ್ದರೆ 8 ವರ್ಷದವರೆಗೂ ಪರ್ಮನೆಂಟ್ ಮಾಡದಿರುವುದಕ್ಕೆ ಕಾರಣವೇನು ? ಕೇವಲ ಮೂರು ವರ್ಷ ಕೆಲಸ ಮಾಡಿದರೆ, ಕನ್‌ಫರ್ಮ್ ಮಾಡಬೇಕೆಂದು ಇದೆ. ಇದಕ್ಕೆ ವಿಶೇಷ ಕಾರಣವೇನು ?

ಶ್ರೀ ಬಿ. ರಾಚಯ್ಯ.—ಇದಕ್ಕೆ ವಿಶೇಷ ಕಾರಣವೇನೂ ಇಲ್ಲ. ಹಿಂದೆ ಕೆಲಸಮಾಡಿದಂತಹ ವರ್ಕರ್ಸ್ ಇದ್ದರು. ಅವರ ನಿಜವಾದ ನಡತೆ ಎಲ್ಲಾ ನೋಡದೆ ಒಂದೇ ಸಮನೆ ಪರ್ಮನೆಂಟ್ ಮಾಡಿದರೆ ಫ್ಯಾಕ್ಟರಿಯನ್ನು ಕ್ಲೋಸ್ ಮಾಡಬೇಕಾಗಬಹುದು. ಅದಕ್ಕಾಗಿ ಕೆಲವಾರು ವರ್ಷ ಅವರನ್ನು ಟ್ರಯಲಿನಲ್ಲಿ ಇಟ್ಟಿದ್ದಾರೆ.

Sri C. K. RAJAIAH SHETTY.—Is it not a fact that satisfactory work is not going on because of the reason that you have not confirmed people even after 8 years of service and as a result of this there is dissatisfaction in the minds of the workers ?

ಶ್ರೀ ಬಿ. ರಾಚಯ್ಯ.—ಇಲ್ಲ, ಹಾಗೇನೂ ಇಲ್ಲ. ಬಹುಶಃ ಅಲ್ಲಿ ಕೆಲಸ ಮಾಡತಕ್ಕ ಜನರು ತೃಪ್ತಿಕರವಾಗಿ ಕೆಲಸ ಮಾಡುತ್ತಾರೆ ಸರ್ಕಾರದವರು ಲೇಬರ್ ಆಕ್ಟ್ ಪ್ರಕಾರ ಏನು ಅನುಕೂಲಗಳನ್ನು ಕೊಡಬೇಕೋ, ಅದೆಲ್ಲವನ್ನೂ ಕೊಟ್ಟಿದ್ದಾರೆ. ಮತ್ತು ಸದ್ಯದಲ್ಲೇ ಹೊಸ 1,500 ಸ್ಪಿಂಡಲ್ಸ್ ಪ್ರಾರಂಭಮಾಡುತ್ತೇವೆ. ಅದಕ್ಕೂ ಹೊಸತು ಕೆಲಸಗಾರರನ್ನು ನೇಮಕ ಮಾಡಬೇಕಾಗುತ್ತದೆ. ಅದಕ್ಕೆಲ್ಲಾ ಆ ಒಂದು ಸ್ಕ್ರೀನಿಂಗ್ ಕಮಿಟಿ ಮಾಡಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಯವರು 701 ಕೆಲಸಗಾರರನ್ನು ಕ್ರಮಗೊಳಿಸುವುದಕ್ಕೆ ಒಂದು ಸ್ಕ್ರೀನಿಂಗ್ ಕಮಿಟಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಈ ಸ್ಕ್ರೀನಿಂಗ್ ಕಮಿಟಿಯ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಇಂತಿಷ್ಟೇ ಕೋಟಾ ಕೊಡಬೇಕು, ಇಂಥವರಿಗೆ ರಕ್ಷಣೆ ಕೊಡಬೇಕೆಂದು ಏನಾದರೂ ಡೈರೆಕ್ಷನ್ಸ್ ಕೊಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.—ಟರ್ಮ್ಸ್ ಆಫ್ ರೆಫರೆನ್ಸ್ ಇಲ್ಲ.

Mr. SPEAKER.—Next question No. 297 but the hon'ble member is not here. Next question.

Payment of Compensation to the Persons affected due to Construction of Jaladigere Tank

334. **Sri N. HUTCHMASTY GOWDA** (Huliyurdurga).—

Will the Minister for Public Works be pleased to state :—

(*a*) when the estimate of Jaladigere tank in Kunigal taluk was prepared and sanctioned;

(*b*) the estimated cost of the same ;

(*c*) the amount of expenditure incurred so far ;

(*d*) the amount required for the completion of the said work ;

(*e*) the amount of compensation to be given to the ryots whose lands will be submerged by the said tank ;

(*f*) the arrangement made to give lands in lieu of the submerged lands ;

(*g*) the stage at which the question of giving compensation and lands stands at present ?

Sri D. PARAMESWARAPPA (Deputy Minister for Major Irrigation and Electricity) [on behalf of Sri A. J. DODDAMETI (Minister of State for Minor Irrigation)].—

(*a*) Sanctioned in October 1959.

(*b*) Rs. 41,000

(*c*) Up to November 1968 an amount of Rs 55,915 has been spent.

(*d*) An amount of Rs. 43,000 is required to complete the remaining work.

(*e*) About Rs. 27,307.

(*f*) There are no lands near that village for being given to the ryots whose lands have been submerged.

(*g*) Acquisition proceeding are in progress.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ 1959 ನೇ ಇಸವಿಯಲ್ಲಿ ಈ ಕೆಲಸ ಮಂಜೂರಾಗಿ ಪ್ರಾರಂಭವಾಯಿತು. ಎಷ್ಟು ವರ್ಷಗಳಲ್ಲಿ ಇದನ್ನು ಅಚ್ಕೈರು ಮಾಡಬೇಕೆಂದು ಯೋಚನೆಯಲ್ಲಿ ಇಟ್ಟುಕೊಂಡಿದೆ ಎಂಬುದನ್ನು ತಿಳಿಸಬೇಕು, ಮತ್ತು ಈಗ ಅಲ್ಲಿನ ರೈತರ ಜಮೀನು ಏನು ಮುಳುಗಡೆಯಾಗಿದೆಯೋ ಅದರ ಪಕ್ಕದಲ್ಲಿಯೋ ಬೇರೆ ಸರ್ಕಾರಿ ಜಮೀನು ಇದೆ. ಆದರೆ ಈಗ ಸರ್ಕಾರದವರು ಸತ್ಯಕ್ಕೆ ದೂರವಾದ ಸಮಾಚಾರವನ್ನು ಕೊಡುತ್ತಿದ್ದಾರೆ. ಅಲ್ಲಿ ಜಮೀನು ಮುಳುಗಡೆಯಾದ ರೈತರಿಗೆ ಬೇರೆ ಜಮೀನು ಕೊಡಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದೀರಾ ? ಮತ್ತು ಅದಷ್ಟು ಬೇಗ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

† Sri D. PARAMESWARAPPA.—The work is nearing completion. So far as grant of land to those whose lands come under submersion, is concerned it is reported that there is no land either in the village or nereby. If, according to my friend any land is available, it will be verified and action will be taken to grant the land.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ವರ್ಷಗಳಲ್ಲಿ ಆ ಕೆಲಸವನ್ನು ಅಚ್ಕೈರು ಮಾಡುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ, ಮತ್ತು 1969 ನೇ ಇಸವಿಯ ಅಚ್ಕೈರಿನೊಳಗಾಗಿ ಅದನ್ನು ಮಾಡುವ ಭರವಸೆಯನ್ನು ಕೊಡುತ್ತೀರಾ ?

Sri D. PARAMESWARAPPA.—I have said that the work is nearing completion.

Implementation of Agricultural Debtors Relief Act

427. Sri V. L. SHIVAPPA (Tiptur).—

Will the Minister for Development be pleased to state :—

the reasons for the delay in implementing the Agricultural Debtors Relief Act ?

Sri B. L. GOWDA (Deputy Minister for Co-operation).—

As the rules are yet to be finalised, the Act could not be brought into force so far. The rules are being published shortly.

ಶ್ರೀ ವಿ. ಎಲ್. ಶಿವಪ್ಪ.—ಸ್ವಾಮಿ, ವ್ಯವಸಾಯ ಸಾಲಗಾರರುಗಳಿಗೆ ಪರಿಹಾರ ನೀಡುವುದಕ್ಕೆ ಸಂಬಂಧಿಸಿದ ಶಾಸನವನ್ನು ಜಾರಿಗೊಳಿಸುವುದಕ್ಕೆ ನಿಯಮಗಳು ಇನ್ನೂ ಅಂತಿಮಗೊಳಿಸಬೇಕಾಗಿರುವುದರಿಂದ ಈ ಶಾಸನವನ್ನು ಈವರೆಗೆ ಜಾರಿಗೊಳಿಸಲಾಗಲಿಲ್ಲ ಎಂದು ಹೇಳಿದ್ದೀರಿ, ಸ್ವಾಭಾವಿಕವಾಗಿ ಸುಮಾರು 1½ ಕೋಟಿ ಜನಗಳಿಗೆ ಇದರಿಂದ ಅನುಕೂಲವಾಗುತ್ತದೆ. ಈ ಕಾನೂನು ಈ ಸಭೆಯಲ್ಲಿ 1966ನೇ ಇಸವಿಯಲ್ಲಿ ಪಾಸಾಯಿತು, ಇದನ್ನು ಇನ್ನೂ ಜಾರಿಗೆ ತಂದಿಲ್ಲ. ಇದನ್ನು ಜಾರಿಗೆ ತಂದರೆ ಇದರಿಂದ ಶ್ರೀಮಂತರಿಗೆ ಅನಾನುಕೂಲವಾಗುತ್ತದೆ ಎನ್ನುವ ಉದ್ದೇಶದಿಂದ ಇದನ್ನು ವಿಳಂಬ ಮಾಡಿದ್ದಾರೆ ಎನ್ನುವ ಕಾರಣ ಗೊತ್ತಾಗುತ್ತದೆ. ಆದ್ದರಿಂದ ಈಗಲಾದರೂ ಇದರ ನಿಯಮಗಳನ್ನು ಜಾಗ್ರತೆ ತಯಾರು ಮಾಡಿ ಜಾರಿಗೆ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಬಿ. ಎಲ್. ಗೌಡ.—ಅದನ್ನು ಪ್ರಿಂಟಿಂಗ್ ಪ್ರೆಸ್ಸಿಗೆ ಕಳುಹಿಸಿಕೊಟ್ಟಿದ್ದೇವೆ. ಅದು ಪ್ರಿಂಟ್ ಆಗಿ ಪಬ್ಲಿಷ್ ಆದಕೂಡಲೇ ಅದನ್ನು ಜಾರಿಗೆ ಕೊಡುತ್ತೇವೆ.

† Indicates that the speeches or remarks have not b en revised by the member concerned.

Loan to T.D.B., Gadag

509. Sri K. H. PATIL (Gadag).—

Will the Minister for Development be pleased to state :—

whether at Shygoti Village Panchayat Committee some hundreds of rupees debited in its books of account showing as loan to Taluk Development Board, Gadag, have not been credited to Taluk Development Board Accounts ?

Sri B. L. GOWDA (Deputy Minister for Co-operation).—

Out of a sum of Rs. 453 being the revenue grant for 1960-61, a sum of Rs. 100 was wrongly shown as loan to Taluk Development Board, It is adjusted to Personal Deposit Account of the Deputy Commissioner. No other item appears in the Panchayat records as "Loan to Taluk Development Board".

ಶ್ರೀ ಕೆ. ಎಚ್. ಪಾಟೀಲ್.—ಸ್ವಾಮಿ, ತಮ್ಮ ಉತ್ತರದಲ್ಲಿ 453 ರೂಪಾಯಿಗಳ ಮೊಬಲಗಿನ ಕಂದಾಯ ಅನುದಾನದ ಪೈಕಿ 100 ರೂಪಾಯಿಗಳ ಮೊಬಲಗನ್ನು ತಾಲ್ಲೂಕು ಅಭಿವೃದ್ಧಿ ಮಂಡಲಗೆ ಸಾಲವಾಗಿ ಕೊಡುವುದಾಗಿ ತಪ್ಪಾಗಿ ಸೂಚಿಸಲಾಗಿದ್ದಿತು ಎಂದು ಹೇಳಿದ್ದೀರಿ. ಈ ರೀತಿ ಬೇರೆ ಅನೇಕ ಸಂದರ್ಭಗಳಲ್ಲಿ ತಾಲ್ಲೂಕು ಬೋರ್ಡಿಗೆ ಪಂಚಾಯಿತಿಗಳು ಸಾಲದ ರೂಪದಲ್ಲಿ ಕೊಟ್ಟಿದ್ದೇವೆಂದು ಖರ್ಚು ಹಾಕಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಲ್ಲಿ ಈ ಬಗ್ಗೆ ಸರ್ಕಾರದವರು ಯೋಗ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಮತ್ತು ಪಂಚಾಯಿತಿಯಲ್ಲಿ ತಾಲ್ಲೂಕು ಬೋರ್ಡಿನ ರಸೀತಿ ಇಲ್ಲದೆ ಖರ್ಚು ಹಾಕಿರುವ ಬಗ್ಗೆ ತಮ್ಮ ಅಭಿಪ್ರಾಯವೇನು ?

† ಶ್ರೀ ಬಿ. ಎಲ್. ಗೌಡ.—ಇದೇ ರೀತಿ ಬೇರೆ ಕಡೆಗಳಲ್ಲೂ ಆಗಿದ್ದು ಅಂಥವುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಅಂಥವುಗಳ ಬಗ್ಗೆ ಖಂಡಿತವಾಗಿಯೂ ತಕ್ಷಣ ಸೂಕ್ತಕ್ರಮ ತೆಗೆದುಕೊಳುತ್ತೇವೆ.

Construction of Primary School Buildings in Chickmagalur District

523. Sri M. MALLAPPA (Birur).—

Will the Minister for Education be pleased to state :—

(a) the total strenght of children going to Primary Schools in Chickmagalur District ;

(b) the number of Primary Schools that have the buildings of their own ;

(c) the number of Primary Schools that have no buildings ;

(d) the number of teachers employed at primary schools in Chickmagalur District ;

(e) the ratio of the teacher and the pupil in the Primary Schools of Chickmagalur District ;

(f) the action the Government intends to take to construct school buildings in all the places ;

(g) whether it is not the responsibility of the State Government to provide Free and Compulsory Education to the children up to the year specified ?

Sri N. M. KOTRABASAIAH SOGI (Deputy Minister for Education).—

(*a*) 1,14,198.

(*b*) 1,019.

(*c*) 123.

(*d*) 2,243.

(*e*) 1 : 50.

(*f*) The responsibility for the construction of school buildings, vests with the Taluk Board concerned.

(*g*) Yes.

Sri M. MALLAPPA.—Since how long these schools are functioning without buildings ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಬಿಲ್ಡಿಂಗ್ ಇಲ್ಲ ಎಂದರೆ ಯಾವುದಾದರೂ ದೇವಸ್ಥಾನಗಳಲ್ಲಿ ಅಥವಾ ಬೇರೆ ಕಟ್ಟಡಗಳಲ್ಲಿ ಸ್ಕೂಲುಗಳು ನಡೆಯುತ್ತವೆ. ಸರಿಯಾದ ಕಟ್ಟಡಗಳು ಇಲ್ಲ ಎಂದು ಅರ್ಥ.

ಶ್ರೀ ಎಂ. ಮಲ್ಲಪ್ಪ.—123 ಶಾಲೆಗಳ ಪೈಕಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಎಷ್ಟು ಶಾಲೆಗಳಿಗೆ ಕಟ್ಟಡಗಳಿಲ್ಲ, ಮತ್ತು ಮುನಿಸಿಪಾಲಿಟಿಯ ಹತೋಟಿಯಲ್ಲಿರತಕ್ಕ ಎಷ್ಟು ಸ್ಕೂಲುಗಳಿಗೆ ಕಟ್ಟಡಗಳಿಲ್ಲ ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮುನಿಸಿಪಾಲಿಟಿಯ ಸ್ಕೂಲುಗಳಿಗೂ ಈ ಪ್ರಶ್ನೆಗೂ ಸಂಬಂಧವಿಲ್ಲ.

ಶ್ರೀ ಎಂ. ಮಲ್ಲಪ್ಪ.—ಮುನಿಸಿಪಾಲಿಟಿ ಹತೋಟಿಯಲ್ಲಿರತಕ್ಕ ಸ್ಕೂಲುಗಳಿಗೆ ಕಟ್ಟಡಗಳು ಇಲ್ಲದಿದ್ದರೆ ಅವುಗಳಿಗೆ ಕಟ್ಟಡವನ್ನು ಒದಗಿಸಿಕೊಡತಕ್ಕದ್ದು ಸರ್ಕಾರದ ಜವಾಬ್ದಾರಿ ಅಲ್ಲವೇ ?

ಶ್ರೀ ಎನ್. ಎಂ. ಕೋಟ್ರಬಸಯ್ಯ ಸೋಗಿ.—ಅದಕ್ಕೆ ಮುನಿಸಿಪಾಲಿಟಿಯವರು ಅರ್ಧ ಕೊಡುತ್ತಾರೆ. ಉಳಿದ ಅರ್ಧವನ್ನು ಸರ್ಕಾರದವರು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ.

ಶ್ರೀ ಕೆ. ಎಂ. ತಮ್ಮಯ್ಯ.—(ಇ)ಗೆ ಉತ್ತರವಾಗಿ 123 ಎಂದು ಹೇಳಿದ್ದೀರಿ. ಮತ್ತು ಈ ಶಾಲೆಗಳನ್ನು ದೇವಸ್ಥಾನಗಳಲ್ಲಿ ನಡೆಸಲಾಗುತ್ತಿದೆ ಎಂದು ಹೇಳಿದಿರಿ. ದೇವಸ್ಥಾನಗಳಲ್ಲಿ ನಡೆಸಬಾರದು ಎಂದು ಕಾನೂನು ಇಲ್ಲವೇ ? ಈ ಕಾರಣದಿಂದ ಆದಷ್ಟು ಬೇಗ ಈ ಶಾಲೆಗಳಿಗೆ ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ಹಣವನ್ನು ಒದಗಿಸುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಸ್ವಂತ ಕಟ್ಟಡಗಳು ಇಲ್ಲದಿರುವ ಶಾಲೆಗಳು ದೇವಸ್ಥಾನಗಳಲ್ಲಿ, ಬಾಡಿಗೆ ಕಟ್ಟಡಗಳಲ್ಲಿ ಮತ್ತು ಸಾರ್ವಜನಿಕ ಕಟ್ಟಡಗಳಲ್ಲಿ ನಡೆಯುತ್ತಿವೆ. ಈ ಬಗ್ಗೆ ತಾಲ್ಲೂಕ್ ಬೋರ್ಡ್‌ಗಳು ಸಹ ಉತ್ತೇಜನಕಾರಿಯಾದ ಕೆಲಸ ಮಾಡುತ್ತಿದ್ದಾರೆ. ನಾಲ್ಕನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಎಲ್ಲಾ ಶಾಲೆಗಳಿಗೂ ಕಟ್ಟಡವನ್ನು ಒದಗಿಸಬೇಕೆಂದು ಸರ್ಕಾರದ ಧೋರಣೆ ಇದೆ ; ಮತ್ತು ತೀವ್ರವಾಗಿ ಎಲ್ಲಾ ಶಾಲೆಗಳಿಗೂ ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ಏರ್ಪಾಡು ಮಾಡಲಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಉಪಧ್ಯಾಯರ ಮತ್ತು ಹುಡುಗರ ರೇಷಿಯೋ 1:50 ಇದೆ ಎಂದು ಹೇಳಿದ್ದೀರಿ. 1:40 ಇರಬೇಕೆಂದು ಸರ್ಕಾರದ ಅಭಿಪ್ರಾಯವಾಗಿದೆ. ಶಿಫಾರಸ್ ಇರುವ ಕಡೆಗಳಲ್ಲಿ 1:30 ಇದೆ. ಈ ಭಾಗದಲ್ಲಿ 1:50 ಇರುವುದರಿಂದ ಹೆಚ್ಚಿನ ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ದಾವಾಷಾ 1:40 ಇರಬೇಕೆಂದೇ ಸರ್ಕಾರದ ನೀತಿಯಿರುವುದು. ಇತ್ತೀಚೆಗೆ ಈ ಬಗ್ಗೆ ಹೊಸ ನೀತಿಯನ್ನು ಸರ್ಕಾರದವರು ಹೊರಡಿಸಿದ್ದಾರೆ, ಅಟೆಂಡೆನ್ಸ್ ಎನ್‌ರೋಲ್ ಪ್ರಕಾರ ಟೀಚರ್‌ಗಳನ್ನು ನೇಮಕಮಾಡುವುದು ಸಾಧುವಲ್ಲ ಎಂದು ಅಟೆಂಡೆನ್ಸ್ ಎನ್‌ರೋಲ್ ಪ್ರಕಾರ ನಮ್ಮ ರಾಜ್ಯದಲ್ಲಿ 32 ಲಕ್ಷ ವಿದ್ಯಾರ್ಥಿಗಳು ಇದ್ದಾರೆ. ಆದರೆ

60 ರಿಂದ 70 ಪರ್‌ಸೆಂಟ್‌ವರೆಗೆ ಮಾತ್ರ ಶಾಲೆಗೆ ಹಾಜರಾಗುತ್ತಾರೆ. ಆದಕಾರಣ ಹಾಜರಾತಿ ಯ ಮೇಲೆ ಉಪಾಧ್ಯಾಯರನ್ನು ನೇಮಕ ಮಾಡಲಾಗುತ್ತದೆ. ಈ ಲೆಕ್ಕವನ್ನು ತೆಗೆದುಕೊಂಡರೆ ಚಿಕ್ಕಮಗಳೂರು ಮತ್ತು ಇತರ ಜಿಲ್ಲೆಗಳಲ್ಲಿ 1 : 30 ದಾಮಾಷಾ ಬರುತ್ತಿದೆ.

ಶ್ರೀ ಐ. ಸೋಮಶೇಖರಪ್ಪ.—ಮುನಿಸಿಪಾಲಿಟಿಯವರು 50 ಭಾಗ ಕೊಟ್ಟರೆ ಉಳಿದ 50 ಭಾಗವನ್ನು ಸರ್ಕಾರದವರು ಕೊಡುತ್ತಾರೆ ಎಂದು ಹೇಳಿದಿರಿ. ಮೊದಲು ಒಂದು ರೂಪಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಿರಲಿಲ್ಲವೇ, ಇದು ಯಾವಾಗ ಬದಲಾವಣೆಯಾಯಿತು ? ಒಂದು ಪಕ್ಷ ಮುನಿಸಿಪಾಲಿಟಿಯವರು 50 ಭಾಗ ಕೊಟ್ಟರೆ ಸರ್ಕಾರದವರು 50 ಭಾಗ ಕೊಡುತ್ತಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಲ್ಲಿಯ ಮುನಿಸಿಪಾಲಿಟಿಯವರು 50 ಭಾಗ ಕೊಡಲು ಮುಂದೆ ಬಂದರೆ ಇನ್ನುಳಿದ 50 ಭಾಗವನ್ನು ಕೊಡುವುದಕ್ಕೆ ಸರ್ಕಾರ ವಿಚಾರ ಮಾಡ ಬಹುದು.

ಶ್ರೀ ಎಂ. ನಾಗಪ್ಪ.—ನೆನ್ನೆ ದಿವಸ ವಿದ್ಯಾಮಂತ್ರಿಗಳು ಉಪಾಧ್ಯಾಯರ ಮತ್ತು ವಿದ್ಯಾ ರ್ಥಿಗಳ ದಾಮಾಷ 1 : 30 ಇದೆ ಎಂದು ಹೇಳಿದರು. ಈಗ ತಾವೇ ಚಿಕ್ಕಮಗಳೂರು ಜಿಲ್ಲೆಯಲ್ಲಿ 1 : 50 ಇದೆ ಎಂದು ಹೇಳುತ್ತಿದ್ದೀರಿ. ಉಪಾಧ್ಯಾಯರುಗಳನ್ನು ಬೇರೆ ಬೇರೆ ದೃಷ್ಟಿಯಿಂದ ನೇಮಕ ಮಾಡುತ್ತಿದ್ದೀರಾ ಎಂದು ತಿಳಿದುಕೊಳ್ಳಬೇಕೇ ಅಥವಾ ಎಲ್ಲಾ ಸ್ಕೂಲುಗಳನ್ನು ಒಂದೇ ರೀತಿಯಿಂದ ನೋಡಿಕೊಂಡು ನೇಮಕ ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳಬೇಕೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಎನ್‌ರೋಲ್‌ಮೆಂಟ್ ಲೆಕ್ಕ ತೆಗೆದುಕೊಂಡರೆ 1 : 50 ಬರುತ್ತದೆ. ಅಟೆಂಡೆನ್ಸ್ ಲೆಕ್ಕ ತೆಗೆದುಕೊಂಡರೆ 1:30 ಬರುತ್ತದೆ. ಅಟೆಂಡೆನ್ಸ್ ಲೆಕ್ಕದ ಪ್ರಕಾರ ಹೆಚ್ಚಿನ ಉಪಾಧ್ಯಾಯರುಗಳು ಏನಾದರು ಇದ್ದರೆ ಬೇರೆ ಭಾಗಕ್ಕೆ ವರ್ಗ ಮಾಡಬೇಕೆಂದು ಡಿ.ಇ.ಓ. ಅವರಿಗೆ ತಿಳಿಸಲಾಗಿದೆ. ಅದರಂತೆ ಅವರು ಮಾಡುತ್ತಿದ್ದಾರೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—50 ಭಾಗವನ್ನು ಕೊಡುವ ಶಕ್ತಿ ಇಲ್ಲದಿರುವ ಮುನಿಸಿಪಾಲಿಟಿಗಳ ಗತಿ ಏನು ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಹಣವನ್ನು ಒದಗಿಸಬೇಕಾಗುತ್ತದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ದಾಮಾಷ 1 : 50 ಇದೆ ಎಂದು ತೋರಿಸಿದ್ದೀರಿ. 1957ರಲ್ಲಿ ಹಂಗಾಮಿಯಾಗಿ ಕೆಲಸಮಾಡುತ್ತಿದ್ದ ಕೆಲವು ಉಪಾಧ್ಯಾಯರುಗಳನ್ನು ಸಂಪೂರ್ಣವಾಗಿ ರಿಲೀವ್ ಮಾಡಿದಮೇಲೆ ಹೊಸಬರನ್ನು ನೇಮಕ ಮಾಡುವ ವಿಚಾರದಲ್ಲಿ ಕೆಲವರು ಹೈಕೋರ್ಟಿನಲ್ಲಿ ರಿಟ್ ಹಾಕಿದ್ದರಿಂದ ಹೆಚ್ಚಿನ ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕೆ ತೊಂದರೆಯಾಯಿತು ಅಲ್ಲವೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಇರುವುದರಿಂದ ಹೆಚ್ಚಿನ ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕಾಗಲಿಲ್ಲ.

ಶ್ರೀ ಕೆ. ಎಚ್. ರಂಗನಾಥ.—(ಉ)ಗೆ ಉತ್ತರವಾಗಿ ಶಾಲಾಕಟ್ಟಡಗಳ ನಿರ್ಮಾಣದ ಜವಾಬ್ದಾರಿಯು ಸಂಬಂಧಪಟ್ಟ ತಾಲ್ಲೂಕ್ ಮಂಡಲಿಗಳಿಗೆ ಸೇರಿರುತ್ತದೆ ಎಂದು ಹೇಳಿದ್ದೀರಿ. ಅಂದರೆ ಸರ್ಕಾರದವರು ಏನಾದರೂ ಎಲ್ಲಾ ಸ್ಕೂಲುಗಳನ್ನು ತಾಲ್ಲೂಕ್ ಮಂಡಲಿಗಳಿಗೆ ವಹಿಸಿ ಕೊಟ್ಟು ಅವರೇ ನಡೆಸುವಂತೆ ಏನಾದರು ಏರ್ಪಾಡು ಮಾಡಿದ್ದೀರಾ ? ಇದು ಸರ್ಕಾರದ ಧೋರಣೆ ಎಂದು ತಿಳಿದುಕೊಳ್ಳಬೇಕೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಶಾಲೆಗಳನ್ನು ನಡೆಸುವುದನ್ನು ತಾಲ್ಲೂಕ್ ಬೋರ್ಡ್‌ಗಳಿಗೆ ವಹಿಸಿಕೊಡುವುದಕ್ಕಾಗುವುದಿಲ್ಲ. ಅದು ಸರ್ಕಾರದ ಧೋರಣೆಯೂ ಅಲ್ಲ.

> "According to the Village Panchayats and Taluk Boards Act, provision of buildings and maintenance of School buildings is the obligatory function of the Taluk Boards."

ಈ ಒಂದು ಕಾಯಿದೆ ಪ್ರಕಾರ ಪ್ರತಿಯೊಂದು ಹಳ್ಳಿಗೂ ಶಾಲಾ ಕಟ್ಟಡಗಳನ್ನು ಒದಗಿಸುವುದು ಅಲ್ಲಿಯ ತಾಲ್ಲೂಕ್ ಮಂಡಲಿಗಳ ಕರ್ತವ್ಯವಾಗಿದೆ. ಒಂದೊಂದು ಕಟ್ಟಡಕ್ಕೆ ಒಂದು ಸಾವಿರ ರೂಪಾಯಿಗಳನ್ನು ಸಹಾಯವನ್ನಾಗಿ ಕೊಡುತ್ತೇವೆ.

SRI D. B. KALMANKAR.—Are there different set of rules regarding contribution in respect of Primary Schools in Municipal areas and the Schools situated in rural areas ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ರೂಲ್ಸ್‌ನಲ್ಲಿ ಏನೂ ಇಲ್ಲ. ಮುನಿಸಿಪಲ್ ಆಕ್ಟ್ ಪ್ರಕಾರ ತಾಲ್ಲೂಕುಗಳಲ್ಲಿರುವ ಎಲ್ಲಾ ಮುನಿಸಿಪಾಲಿಟಿಗಳವರು ಅವರ ಪಾಲಿನ ವಂತಿಗೆ ಕೊಡುವಾಗ ಅರ್ಧ ಭಾಗ ಅವರು ಕೊಡಬೇಕು ಉಳಿದ ಅರ್ಧ ಭಾಗವನ್ನು ಸರಕಾರ ಕೊಟ್ಟು ಕಟ್ಟಡಗಳನ್ನು ಮಾಡಬೇಕೆಂದು ಇದೆ.

Remission of land Revenue in Coorg

670. SRI N. LOKAIAH NAIK (Virajpet).—

Will the Minister for Revenue be pleased to state :—

(a) the villages in Coorg coming under the benefit of land revenue remission during 1967 ;

(b) whether land revenue has been collected in these villages before the receipt of the remission order or whether the properties have been attached in connection with the said collection ;

(c) if collected, the manner in which the same will be repaid ?

SRI H. V. KOUJALGI (Minister for Revenue).—

(a) the following villages come under the benefit of land revenue remission :

Virajpet Taluk :

1	Yaduru	15	Belluru
2	Hagginadu	16	Aravattahlu
3	Halugunda	17	Hebbalebhadragola
4	Bairambada	18	Kanoru
5	Maldare	19	Nokayasiddapur
6	Kannangal	20	Imangala
7	Chennakote	21	Maggula
8	Balele	22	Devanager
9	Nitturu	23	Arji
10	Kottageri	24	Heggala
11	Danugala	25	Bettamgala
12	Nalluru	26	Balagodu
13	Kootooru	27	Nangala
14	Parakatagere		

Mercara Taluka :

1	Kokeri	6	Ayyamger
2	Jelavara	7	Ningatturu
3	Seruru	8	Sannamalikote
4	Khalasi Mavate	9	Kalandacheri
5	Naladi		

Somavarpet Taluk :

1	Oorugutti	6	Marooru
2	Harehalli	7	Savanahalli
3	Ganagoork	8	Kanabadlu
4	Nerugalalu	9	Herooru
5	Srirangala		

(*b*) Collection of land revenue has already been done to some extent. But, no attachment of property has been done in connection with collection.

(*c*) The amount already collected will be adjusted towards the land revenue for 1968-69 after the receipt of the remission order.

ಶ್ರೀ ಎನ್. ಲೋಕಯ್ಯ ನಾಯಕ್.—ಉತ್ತರದಲ್ಲಿ ಹೇಳಿರುವಂತೆ ಇಷ್ಟು ತಡವಾಗಿ ರಿಯಾಯತಿಗಳನ್ನು ಕೊಡಲು ಇದ್ದ ಕಾರಣಗಳೇನು ?

ಶ್ರೀ ಹೆಚ್. ವಿ. ಕೌಜಲಗಿ.—ಯಾವ ಯಾವ ಹಳ್ಳಿಗಳಿಗೆ ರಿಯಾಯತಿಗಳನ್ನು ಕೊಡಬೇಕಾಗುತ್ತದೆ ಇದರ ಮಾಹಿತಿ ತಯಾರು ಮಾಡಲು ಇಲ್ಲಿನ ರೆವಿನ್ಯೂ ಆಫೀಸರೇ ತಡವಾಗಿ ಕಳುಹಿಸಿದುದರಿಂದ ಇದರ ಬಗ್ಗೆ ಸ್ವಲ್ಪ ನಿಧಾನವಾಗಿದೆ.

ಶ್ರೀ ಲೋಕಯ್ಯ ನಾಯಕ್.—ವಸೂಲಿ ಜಾಸ್ತಿಯಾಗಿಲ್ಲ ಎಂದು ಇದೆ. ಆದರೆ 23-12-1968 ರಲ್ಲಿ ಒಂದು ಪತ್ರಿಕೆಯಲ್ಲಿ 10–15 ಜಮೀನುಗಳನ್ನು ಹರಾಜು ಮಾಡಿರುವುದು ಬಂದಿದೆ. ಇದರ ಬಗ್ಗೆ ಏನು ಹೇಳುತ್ತೀರಿ ?

SRI H. V. KOUJALGI.—I have not seen that paper. If those instances are brought to my notice, I shall see that they are examined and proper steps are taken.

ಶ್ರೀ ಎನ್. ಲೋಕಯ್ಯ ನಾಯಕ್.—ಅಭಾವ ಪರಿಹಾರ ಕ್ರಮಗಳ ಬಗ್ಗೆ ಸರಕಾರ ಕೊಟ್ಟಿರುವ ಪಟ್ಟಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನೂ ಅಭಾವ ಪ್ರದೇಶವೆಂದು ಸಾರಿದ್ದೀರಿ. ಆದರೆ ಇದರಲ್ಲಿ ಕೆಲವು ಗ್ರಾಮಗಳ ಹೆಸರುಗಳು ಬಿಟ್ಟಿವೆ. ಇದರ ಬಗ್ಗೆ ಕಂದಾಯದ ರಿಯಾಯತಿ ಕೊಡಲು ಮನವಿಗಳು ಬಂದಿವೆಯೇ? ಹಾಗಿಲ್ಲದೇ ಇದ್ದರೆ ನನ್ನ ಕಡೆಗೆ ಕೆಲವು ಮನವಿಗಳು ಬಂದಿವೆ. ಅವನ್ನು ತಮ್ಮ ಕಡೆಗೆ ಕಳುಹಿಸಿದರೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಯಾವ ಯಾವ ಹಳ್ಳಿಗಳಿಗೆ ರಿಯಾಯತಿಗಳನ್ನು ಕೊಡಬೇಕು ಎನ್ನುವುದರ ಪಟ್ಟಿ ತಯಾರು ಮಾಡುವವರು ತಹಶೀಲುದಾರರುಗಳು. ಅವರು ಒಪ್ಪಿಗೆ ಕೊಟ್ಟರೆ ಮುಂದೆ ಅದನ್ನು ಸರಕಾರ ಪರಿಶೀಲಿಸುತ್ತದೆ.

Utilisation of Gandhi Nidhi Funds

684. Sri D. M. SIDDAIAH (Biligere).—

Will the Minister for Education be pleased to state :—

(*a*) the persons entrusted with the work of collection of Gandhi Nidhi Funds in our State ;

(*b*) the work so far done in this behalf in our State ;

(*c*) whether the amount that was given was well spent, the total amount of the Nidhi and how much has been spent ;

(*d*) whether Government propose to revise the method of commemorating the memory of the Father of the Nation by starting "Gandhi Peets" in the Universities to study the Gandhian principles and ideas so that the younger generation may be benefited by it ;

(*e*) whether a portion of the amount earmarked for this work is proposed to be spent for rural upliftment, like giving drinking water wells, upkeeping the villages on a good sanitary condition, etc. ;

(*f*) whether it is not befitting the memory of Gandhiji the money is utilised for the benefit of the masses as welfare was the main purpose of Gandhian ideology ?

Sri N. M. KOTRABASAIAH SOGI (Deputy Minister for Education).—

(*a*) If the reference is to Gandhi Smarak Nidhi, the funds are administered by the Mysore State Gandhi Smarak Nidhi.

(*b*) Details are not known.

(*c*) Details not available.

(*d*) Gandhi Bhavans have been established in some Universities with the assistance of University Grants Commission and Gandhi Smark Nidhi. Government have no proposal to start Gandhi Peetas.

(*e*) Does not arise.

(*f*) The Gandhi Smarak Nidhi Funds have been utilised for publication of Gandhian literature as well as for encouraging constructive work, such as, organising Adivasi Hostels, Gramdan work, Balawadis, Mahila Mandals and Khadi Grama Udyoga Work.

Sri D. M. SIDDAIAH.—I want to know the names of the persons connected with this Gandhi Smaraka Nidhi. What is the amount allotted and what is the work done so far by the Committee ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಗಾಂಧಿ ಸ್ಮಾರಕ ನಿಧಿಗೂ ಸರಕಾರಕ್ಕೂ ಯಾವ ರೀತಿಯಾದ ಸಂಬಂಧವೂ ಇಲ್ಲ. ಗಾಂಧಿ ಸ್ಮಾರಕ ನಿಧಿ ಎಂದು ಬಹು ಕಾಲದಿಂದಲೂ

ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಗಾಂಧಿ ಸ್ಮಾರಕ ನಿಧಿಯ ಅಂಗವಾಗಿ ಕೆಲವು ಕಾರ್ಯಕ್ರಮಗಳನ್ನು ನಡೆಸಬೇಕೆಂದು ಅದಕ್ಕೆ ಒಂದು ಸಮಿತಿ ನೇಮಕ ಮಾಡಿದ್ದಾರೆ. ಆ ಸಮಿತಿಯವರು ಯಾವ ಯಾವ ಕೆಲಸಗಳನ್ನು ಮಾಡುತ್ತಿದ್ದಾರೆ ಎನ್ನುವ ವಿವರಗಳು ನನ್ನ ಹತ್ತಿರ ಇಲ್ಲ. ಆದರೆ ಇದರ ಅಧ್ಯಕ್ಷರು ಹಾಗೂ ಸದಸ್ಯರ ಪಟ್ಟಿಗಳು ಇವೆ, ನಮ್ಮ ರಾಜ್ಯದ ಗಾಂಧಿ ಸ್ಮಾರಕ ನಿಧಿಗೆ ಮಾಡಿರುವ ಕಮಿಟಿಯಲ್ಲಿ ಶ್ರೀ ಚೇಕೂರು ಸುಬ್ರಮಣ್ಯಂ ಅಧ್ಯಕ್ಷರಾಗಿದ್ದಾರೆ ಮತ್ತು ಶ್ರೀ ಆರ್. ವಿ. ಒಡವಿ ಎನ್ನುವವರು ಕಾರ್ಯದರ್ಶಿಗಳಾಗಿದ್ದಾರೆ ಮತ್ತು ಶ್ರೀ ಬಿ. ರಾಚಯ್ಯ, ಶ್ರೀಮತಿ ಯಶೋಧರಾ ದಾಸಪ್ಪ, ಶ್ರೀ ಎಂ. ವೈ. ಘೋರ್ಪಡೆ, ಶ್ರೀ ಎಸ್. ವಿ. ಕೃಷ್ಣಮೂರ್ತಿರಾವ್ ಶ್ರೀ ಸಿದ್ದವ್ವನಹಳ್ಳಿ ಕೃಷ್ಣ ಶರ್ಮ ಇತ್ಯಾದಿ ಒಂದು ದೊಡ್ಡ ಪಟ್ಟಿ ಇದೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ಎಲ್ಲಿದ್ದಾರೆ ಸ್ವಾಮಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮೊದಲಿನಿಂದಲೂ ಲಿಸ್ಟ್‌ನಲ್ಲಿ ಇದ್ದ ಹೆಸರನ್ನು ಕೊಟ್ಟಿದ್ದೇನೆ. ಗತಿಸಿದವರ ಸ್ಥಾನದಲ್ಲಿ ಬೇರೆಯವರನ್ನು ಈಗ ನೇಮಕ ಮಾಡಿರಬಹುದು.

ಶ್ರೀ ಡಿ. ಎಂ. ಸಿದ್ದಯ್ಯ.—ಗಾಂಧಿ ಭಾವನಗಳೆಂದು ಗಾಂಧಿ ಸ್ಮಾರಕ ನಿಧಿಯವರು ಕಟ್ಟಿಸುತ್ತಿದ್ದಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಭವನಗಳನ್ನು ಮಾಡಬೇಕೆಂದು ಅಲ್ಲಲ್ಲಿ ಮಾಡುತ್ತಿದ್ದಾರೆ. ಈಗಾಗಲೇ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ನವರು ಗ್ರಾಂಟುಗಳನ್ನು ಕೊಟ್ಟು ಕರ್ನಾಟಕ ಯುನಿವರ್ಸಿಟಿಯಲ್ಲಿ ಮಾಡಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಮಾಡಿದ್ದಾರೆ. ಮೈಸೂರು ಯೂನಿವರ್ಸಿಟಿಯಲ್ಲಿ ಮಾಡತಕ್ಕದ್ದು ಇದೆ. ಈ ತರಹ ಅನೇಕ ಕಡೆಗಳಲ್ಲಿ ಗಾಂಧಿ ಭವನಗಳನ್ನು ಮಾಡಬೇಕೆಂದು ಅಲ್ಲಿ ಗಾಂಧಿಜೀಯವರು ತತ್ವಗಳನ್ನು ಪ್ರಚಾರ ಮಾಡುವ ಉದ್ದೇಶದಿಂದ ಇದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಮಾಡುತ್ತಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸ್ವಾಮಿ, ಗಾಂಧಿ ಸ್ಮಾರಕ ನಿಧಿಗೆ ಅನೇಕ ಕಡೆ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಲಕ್ಷಾಂತರ ರೂಪಾಯಿ ವಸೂಲ್ಮಾಡಿ ಹಣ ದುರುಪಯೋಗ ಮಾಡಿದ್ದಾರೆ. ಗುಲ್ಬರ್ಗದಲ್ಲಿ ಫೌಂಡೇಷನ್ ಸ್ಟೋನ್ ಕೂಡ ಹಾಕಿದ್ದಾರೆ. ಅದು ಇವೊತ್ತಿನ ದಿವಸ ಏನೂ ಕೆಲಸ ಮಾಡುವುದಿಲ್ಲ. ಆದುದರಿಂದ ಸರ್ಕಾರದವರು ಇದನ್ನು ಪಬ್ಲಿಕ್ ಚೀಟಿಂಗ್ ಎಂದು ಟ್ರೀಟ್ ಮಾಡಿ ಯಾರು ಯಾರು ಹೊಣೆಯಾಗಿದ್ದಾರೆ ಅವರಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಎನ್. ಕೊಟ್ರಬಸಯ್ಯ ಸೋಗಿ.—ಗಾಂಧಿ ಸ್ಮಾರಕ ನಿಧಿಗೂ ಸರ್ಕಾರಕ್ಕೂ ಯಾವ ತರಹ ಸಂಬಂಧವೂ ಇಲ್ಲ. ಅದು ಒಂದು ಪ್ರತ್ಯೇಕವಾದ ಸಂಸ್ಥೆ. ಅದು ಅಟಾನಮಸ್ ಬಾಡಿ, ಆದಕಾರಣ, ಅವರ ಕಾರ್ಯಕಲಾಪಗಳ ಬಗ್ಗೆ ಸರ್ಕಾರ ಹೆಚ್ಚಿಗೆ ವಿವರಣೆ ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗಾಂಧಿ ಸ್ಮಾರಕ ನಿಧಿಗೆ ಹಣವನ್ನು ರಾಜ್ಯಸರ್ಕಾರದ ಮೂಲಕವೇ ಖರ್ಚುಮಾಡಬೇಕಾಗಿರುವುದರಿಂದ ಅವರು ಏನೇನು ಕಾರ್ಯಕ್ರಮಗಳನು ತೆಗೆದುಕೊಳ್ಳುತ್ತಾರೆಂದು ಸರ್ಕಾರಕ್ಕೆ ತಿಳಿಸುವುದಿಲ್ಲವೇ ? ಇದುವರೆಗೆ ಆ ಸಂಸ್ಥೆ ಏನೇನ ಕೆಲಸಗಳನ್ನುಮಾಡಿಕೊಂಡು ಬಂದಿದೆ ಎಂದು ತಿಳಿಸುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಾನು ಈಗಾಗಲೇ ಹೇಳಿದ್ದೇನೆ. ಆ ಸಂಸ್ಥೆಯ ಕಾರ್ಯಕಲಾಪಗಳಿಗೂ ಸರ್ಕಾರಕ್ಕೂ ಯಾವ ತರಹ ಸಂಬಂಧ ಇಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲೂ ಮತ್ತು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಗಾಂಧಿ ಸ್ಮಾರಕ ನಿಧಿ ಕಟ್ಟಡ ಕಟ್ಟಬೇಕೆಂದು ಆದೇಶ ಕೊಟ್ಟಿದ್ದೀರಾ ? ಕೊಡದೇ ಹೋದರೆ ಯಾರು ಇದಕ್ಕೆ ಹಣ ಕೊಡುತ್ತಾರೆ ?

ಶ್ರೀ ಎಂ. ಎನ್. ಕೊಟ್ರಬಸಯ್ಯ ಸೋಗಿ.—ಈಗಾಗಲೇ ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಗಾಂಧಿ ಸ್ಮಾರಕ ಕಟ್ಟಡ ಕಟ್ಟಲು ಯೂನಿವರ್ಸಿಟಿ ಗ್ರಾಂಟ್ ಕಮಿಷನ್ನಿನವರು ಧನಸಹಾಯ ಮಾಡಿದ್ದಾರೆ.

Compensation for the lands Acquired under Upper Krishna Project

706. **Sri K. SANGAN GOWDA** (Lingsugur).—

Will the Minister for Revenue be pleased to state :—

(*a*) whether the Government has appointed a Special Land Acquisition Officer for acquiring lands for Upper Krishna Project ;

(*b*) the legal impediments in applying the emergency clause under Land Acquisition Act for acquiring lands ;

(*c*) whether the Government will pay 75 per cent of the compensation amount in advance in order to facilitate the losers of the land to enable them to purchase the lands wherever they choose ; if not the reasons therefor ?

Sri H. V. KOUJALGI (Minister for Revenue).—

(*a*) No.

(*b*) The provision of Section 17 of L.A. Act cannot be applied to such cases when emergent need to occupy the land is not established.

(*c*) The question of paying advance compensation will arise after publication of final notification under section 6 of L.A. Act.

ಶ್ರೀ ಕೆ. ಸಂಗನಗೌಡ.—ಸ್ವಾಮಿ, ತಾವು 140 ಕೋಟಿ ರೂಪಾಯಿ ಪ್ರಾಜೆಕ್ಟನ್ನು ಕಟ್ಟಲಿಕ್ಕೆ ಹತ್ತಿದ್ದೀರಿ. ಅದು 1963ನೇ ಇಸವಿಯಿಂದಲೂ ಪ್ರಾರಂಭವಾಗಿದೆ. 6 ವರ್ಷವಾದರೂ ಕೂಡ ಇದುವರೆಗೆ ಅಲ್ಲಿಗೆ ಲ್ಯಾಂಡ್ ಅಕ್ವಿಸಿಷನ್ ಆಫೀಸರನ್ನು ನೇಮಕ ಮಾಡಲಿಲ್ಲ. ಇನ್ನು ಎಷ್ಟು ದಿವಸ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ವಿ. ಕೌಜಲಗಿ.—ಅಲ್ಲಿ ಇನ್ನೊಬ್ಬ ಅಸಿಸ್ಟೆಂಟ್ ಕಮೀಷನರು ಕೆಲಸ ಮಾಡುತ್ತಿದ್ದಾರೆ.

ಶ್ರೀ ಕೆ. ಸಂಗನಗೌಡ.—ಈ ಪ್ರಾಜೆಕ್ಟಿಗೆ ಯಾವ ಅಧಿಕಾರಿಗಳು ಬೇಕೋ ಅವರನ್ನು ಸರ್ಕಾರಕ್ಕೆ ಭಾರ ಬೀಳದಂತೆ ತಮ್ಮ ಸಿಬ್ಬಂದಿಯಲ್ಲಿ ಜೋತಾ ಮಾಡಿ ಅದೇ ಖರ್ಚಿನಲ್ಲಿ ಅಕ್ವಿಸಿಷನ್ ಆಫೀಸರಾಗಿ ನೇಮಕ ಮಾಡುವುದಕ್ಕಾಗುವುದಿಲ್ಲವೇ? ಹಾಗೆ ನೇಮಕ ಮಾಡಿದರೆ ಈ ಪ್ರಾಜೆಕ್ಟ್ ಕೆಲಸ ಸುಗಮವಾಗಿ ಸಾಗುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ವಿ. ಕೌಜಲಗಿ.—ಈ ಸೂಚನೆ ಮೊದಲಿನಿಂದಲೂ ಬಂದಿರಲಿಲ್ಲ. ತಾವು ಏನು ಹೇಳುತ್ತೀರೋ ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಸದಾಶಿವಪ್ಪ ಪಾಟೀಲ್.—ಈ ಪ್ರಾಜೆಕ್ಟಿಗಾಗಿ ಭೂಮಿಯನ್ನು ವಶಪಡಿಸಿಕೊಂಡವರ ಬಗ್ಗೆ ಎಷ್ಟೋ ಮನವಿಗಳು ಬಂದಿದ್ದರೂ ಇದುವರೆಗೆ ಕಾಂಪನ್ಸೇಷನ್ ಸಿಕ್ಕಲಿಲ್ಲ. ಈಗ ಅದು ಪ್ರಾರಂಭವಾಗಿ 10 ವರ್ಷವಾದರೂ ಅಲ್ಲಿ ಲ್ಯಾಂಡ್ ಅಕ್ವಿಸಿಷನ್ ಆಫೀಸರನ್ನು ನೇಮಕ ಮಾಡಲಿಲ್ಲ. ಆದುದರಿಂದ ಆದಷ್ಟು ತೀವ್ರವಾಗಿ ಆಫೀಸರನ್ನು ನೇಮಕ ಮಾಡಿ ಜನರಿಗೆ ತೊಂದರೆಯಾಗಿರುವುದನ್ನು ನಿವಾರಣೆ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅದರ ಬಗ್ಗೆ ವಿಚಾರಣೆ ಮಾಡಿ ಜನರಿಗೆ ತೊಂದರೆಯಾಗದಂತೆ ಆಫೀಸರನ್ನು ನೇಮಕ ಮಾಡಬೇಕು ಎಂದು ಯೋಚನೆ ಮಾಡುತ್ತಿದ್ದೇವೆ.

Sri RAJA PID NAIK.—Are the Government aware that since five years lands have been acquired and buildings have been constructed in Narayanpura dam site and yet so far no compensation has been paid and may I know the reason for the delay ?

Sri H. V. KOUJALGI.—It is a fact that in some cases there is delay in payment of compensation. But the procedure is so elaborate that sometimes delay is caused without our intending it.

Sri V. N. PATIL.—May I know whether compensation will be paid first to those people whose lands are going to be acquired before the construction work starts and whether arrangement will be made to allot additional land available to the Government to those who lose their lands?

Sri H. V. KOUJALGI.—It is the policy of the Government to help the affected persons by giving lands elsewhere if they are available.

ಶ್ರೀ ಎಸ್. ಎಂ. ಗುರೆಡ್ಡಿ.—ಇಲ್ಲಿಯ ಪರಿಸ್ಥಿತಿ ಏನಾಗಿದೆ ಎಂದರೆ ಭೂಮಿ ತೆಗೆದುಕೊಂಡಿದ್ದಾರೆ, ಅರ್ದನ್ ಡ್ಯಾಂ ಕೆಲಸ ಪ್ರಾರಂಭವಾಗಿದೆ. ಭೂಮಿಯನ್ನು ಕಳೆದುಕೊಂಡಿದ್ದರೂ ಹಫ್ತೆ ಕೊಡುವುದು ತಪ್ಪಲಿಲ್ಲ. ಬಡ ಕುಟುಂಬಗಳು ಊರು ಬಿಡಲಿಕ್ಕೆ ಹತ್ತಿವೆ. ಈಗಾಗಲೇ 75 ಪರ್ಸೆಂಟ್ ಕಾಂಪೆನ್‌ಸೇಷನ್ ಕೊಡಬೇಕು ಎಂದು ತೀರ್ಮಾನ ಮಾಡಿರುವುದನ್ನು ತೀವ್ರ ಕೊಟ್ಟರೆ ಎಲ್ಲಿಯಾದರೂ ಭೂಮಿ ಕೊಳ್ಳಲು ಸಾಧ್ಯವಾಗುತ್ತದೆ. ಅದರ ವ್ಯವಸ್ಥೆ ಏನಾದರೂ ಮಾಡುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ಕಾಯಿದೆ ಪ್ರಕಾರ ನೋಟೀಸ್ ಆದಮೇಲೆ 75 ಪರ್ಸೆಂಟ್ ಕಾಂಪೆನ್‌ಸೇಷನ್ ಕೊಡಲಿಕ್ಕೆ ಬರುತ್ತದೆ. ಹಫ್ತೆ ಕೊಡುವ ಸಂಬಂಧದಲ್ಲಿ ಯಾರು ಪೂರ್ತಿ ಭೂಮಿಯನ್ನು ಕಳೆದುಕೊಂಡಿದ್ದಾರೆ ಅವರಿಂದ ವಸೂಲು ಮಾಡುತ್ತಿಲ್ಲ. ಯಾರು ಸ್ವಲ್ಪಮಟ್ಟಿಗೆ ಕಳೆದುಕೊಂಡಿದ್ದಾರೆ, ಅಂಥವರಿಗೆ ಕಡಮೆ ಮಾಡಲಿಕ್ಕೆ ಬರುವುದಿಲ್ಲ. ಸರ್ವೆ ಆದ ನಂತರ ಅದನ್ನು ವಿಚಾರ ಮಾಡಬೇಕು. ಅಲ್ಲಿಯವರೆಗೂ ಸ್ವಲ್ಪ ತಡವಾಗುತ್ತದೆ. ಹೆಚ್ಚು ಕೊಟ್ಟಿರುವ ಹಣವನ್ನು ಮುಂದೆ ಅಡ್‌ಜಸ್ಟ್ ಮಾಡಿಕೊಳ್ಳಲಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಶರಾವತಿ ವ್ಯಾಲಿ ಪ್ರಾಜೆಕ್ಟ್ ಕಟ್ಟಬೇಕಾದರೆ ಮುಳುಗಡೆಯಾಗತಕ್ಕ ಜನರಿಗೆ ಕೆರೆ ಕಟ್ಟಿಕೊಡುತ್ತೇವೆ, ನೀರಾವರಿ ಸೌಕರ್ಯ ಕೊಡುತ್ತೇವೆ, ಭೂಮಿ ಕೊಡುತ್ತೇವೆ, ಕಾಂಪೆನ್‌ಸೇಷನ್ ಕೊಡುತ್ತೇವೆ ಎನ್ನುವ ವಚನ ಕೊಟ್ಟು ಮುಳುಗಡೆಯಾಗಿರತಕ್ಕ ಜನರಿಗೆ ಎರೋ್ಲೀ ಕೆರೆ ಕಟ್ಟೆ ಒಂದೂ ಇಲ್ಲದೆ ನೀರಾವರಿಗೆ ಅನುಕೂಲವಿಲ್ಲದ ಪ್ರದೇಶದಲ್ಲಿ ಜಮೀನು ಕೊಟ್ಟಿದ್ದಾರೆ. ಅಪ್ಪರ್ ಕೃಷ್ಣ ಯೋಜನೆ ಸಂಬಂಧದಲ್ಲಿ ಆ ಪ್ರದೇಶದಲ್ಲಿ ಮುಳುಗಡೆಯಾಗತಕ್ಕ ಜನರಿಗೆ ಶರಾವತಿ ಪ್ರದೇಶದ ಜನರಿಗೆ ಉಂಟಾದ ಪರಿಸ್ಥಿತಿ ಉಂಟಾಗದೆ ಇರಲು ಅವರಿಗೆ ಪ್ರಾಜೆಕ್ಟ್‌ನಿಂದ ನೀರಾವರಿ ಅನುಕೂಲವಿರುವ ಪ್ರದೇಶದಲ್ಲಿ ಜಮೀನು ಕೊಡುವುದಕ್ಕೆ ಆದ್ಯತೆಯನ್ನು ಕೊಡುತ್ತೀರಾ ಹೇಗೆ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಕೇಳುವ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ಬೇರೆ ಪ್ರಶ್ನೆ ಹಾಕಿದರೆ ಮಾಹಿತಿಯನ್ನು ಒದಗಿಸುತ್ತೇನೆ.

1–30 P.M.

ಶ್ರೀ ಬಾಪೂಗೌಡ.—ಕೃಷ್ಣ ಮೇಲ್ದಂಡೆ ಯೋಜನೆಗೆ ಭೂಮಿ ಸಾಕಷ್ಟು ವಶಪಡಿಸಿಕೊಳ್ಳಲಾಗಿದೆ. ಅದಕ್ಕೆ ಕ್ರಾಪ್ ಕಾಂಪನ್ಸೇಷನ್ ಕೊಡುತ್ತಿದ್ದೀರಾ? ಕೊಟ್ಟಿದ್ದರೆ ಸರಕಾರ ಎಷ್ಟು ಕೊಟ್ಟಿದೆ?

ಶ್ರೀ ಎಚ್. ವಿ. ಕೌಜಲಗಿ.—ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

ಶ್ರೀ ಕೆ. ಸಂಗನಗೌಡ.—ನಾರಾಯಣಪುರದಲ್ಲಿ ಅರ್ದನ್ ಡ್ಯಾಂ ಕೆಲಸ ಪ್ರಾರಂಭವಾಗಿದೆ, ರೈಟ್ ಬ್ಯಾಂಕಿನಲ್ಲಿ ಕೆಲಸಮಾಡಲು ಅವಕಾಶ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ ನೆಗೋಷಿಯೇಷನ್ ಮೂಲಕವಾದರೂ ಜಮೀನು ಪಡೆದುಕೊಳ್ಳಲು ಅವಕಾಶ ಮಾಡುತ್ತೀರಾ? ಅಥವ 1965ರ ಇರಿಗೇಷನ್ ಆಕ್ಟ್ ಪ್ರಕಾರ ಸೆಕ್ಷನ್ 5ರ ಪ್ರಕಾರ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ನೆಗೋಷಿಯೇಷನ್ ಮಾಡುವುದಕ್ಕೆ ಬರುತ್ತದೆ, ಸೆಕ್ಷನ್ 4ರ ಪ್ರಕಾರ ನೋಟಿಫಿಕೇಷನ್ ಮಾಡಿ ನೆಗೋಷಿಯೇಷನ್ ಮಾಡಬಹುದು. ಜನರು ಸಹಕರಿಸಿದರೆ ನೆಗೋಷಿಯೇಷನ್ನಿಗೆ ಪ್ರಯತ್ನಮಾಡಬಹುದು.

Opening of a Training School for Teachers at K. G. F.

723. Sri S. R. SHANMUGAM (K.G.F.).—

Will the Minister for Education be pleased to state :—

(*a*) the reasons for not opening a Training School for Teachers at K.G.F. ;

(*b*) whether there is a proposal before the Government to open one Teachers' Training School at K.G.F.?

Sri N. M. KOTRABASAIAH SOGI (Deputy Minister for Education).—

(*a*) There are sufficient number of Teacher Training Institutions in the State.

(*b*) No.

ಶ್ರೀ ಎಸ್. ಆರ್. ಷಣ್ಮುಗಂ.—ಕೋಲಾರ ಜಿಲ್ಲೆಯಲ್ಲಿ ಎಷ್ಟು ಉಪಾಧ್ಯಾಯರಿಗೆ ಟ್ರೈನಿಂಗ್ ಕೊಡುವ ಶಾಲೆಗಳಿವೆ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಒಂದಿದೆ.

ಶ್ರೀ ಎಸ್. ಆರ್. ಷಣ್ಮುಗಂ.—ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಾದರೂ ಒಂದು ಟ್ರೈನಿಂಗ್ ಶಾಲೆಯನ್ನು ತೆರೆಯುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಾಗಲೆ ರಾಜ್ಯದಲ್ಲಿ ಸಾಕಾದಷ್ಟು ಟ್ರೈನಿಂಗ್ ಸಂಸ್ಥೆಗಳಿರುವುದರಿಂದ ಹೆಚ್ಚು ಇಂಥ ಸಂಸ್ಥೆಗಳನ್ನು ತೆರೆಯುವ ವಿಚಾರ ಸರಕಾರದಲ್ಲಿಲ್ಲ.

Sri M. H. JAYAPRAKASH NARAYAN.—Nearly 90 per cent of the Scheduled castes and Scheduled tribes are residing in K.G.F. area and a large number of untrained teachers are there. So will Government be pleased to re-examine the case and start one Teacher Training School in K.G.F. area as a special case, to encourage the weaker section.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಾಗಲೇ ಹೇಳಿದೆ, ರಾಜ್ಯದಲ್ಲಿ ಸಾಕಷ್ಟು ತರಪೇತಿ ಶಾಲೆಗಳಿವೆ, ಕೋಲಾರ ಜಿಲ್ಲೆಯಲ್ಲೂ ಒಂದು ಇದೆ. ಅದರಲ್ಲಿ ಸುಮಾರು ನೂರು ಜನರಿಗೆ ಟ್ರೈನಿಂಗ್ ಕೊಡಲು ಅವಕಾಶವಿದೆ. ಆದುದರಿಂದ ಪ್ರತ್ಯೇಕವಾಗಿ ಒಂದನ್ನು ತೆರೆಯುವ ಅವಶ್ಯಕತೆಯಿಲ್ಲ.

ಶ್ರೀ ಇ. ನಾರಾಯಣಗೌಡ.—ಈಗ ಎಷ್ಟು ಜನರಿಗೆ ಟ್ರೈನಿಂಗ್ ಕೊಡಲಾಗಿದೆ? ಉಳಿದವರಿಗೆ ಕೊಡಲು ಎಷ್ಟು ಕಾಲ ಬೇಕು?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಾಗಲೇ ಸುಮಾರು ಸೇಕಡ 63 ಜನರಿಗೆ ಟ್ರೈನಿಂಗ್ ಆಗಿದೆ. ಉಳಿದವರಿಗೆ ಕೊಡಬೇಕೆಂಬ ವಿಚಾರವಿದೆ, ಈಗ ಕೊಡುತ್ತೇವೆ. ನಾಲ್ಕನೆ ಯೋಜನೆಯಲ್ಲಿ ಎಲ್ಲರಿಗೂ ಟ್ರೈನಿಂಗ್ ಕೊಡುವ ಆಲೋಚನೆ ಇದೆ.

Taking Over of Veterinary Dispensary in K.G.F.

726. Sri S. R. SHANMUGAM (K.G.F.).—

Will the Minister of State for Veterinary Services, Animal Husbandry and Dairy Development be pleased to state :—

whether there is any proposal to take over the Veterinary Dispensary in K.G.F. by the Government?

Sri G. B. SHANKAR RAO (Minister of State for Veterinary Services, Animal Husbandry and Dairy Development).—

Yes.

Sri S. R. SHANMUGAM.—May I now whether there is any proposal to take over the Veterinary Dispensary in K. G. F. by the Government ?

Mr. SPEAKER.—The reply given is 'Yes'.

Sri K. H. PATIL.—What are the reasons that influenced the Government to take over the management of Veterinary Dispensaries in the State?

Sri G. B. SHANKAR RAO.—We have not so far decided to take it over. The matter is under correspondence. There are certain questions to be decided before it is taken over for Government management.

ಶ್ರೀ ಐ. ಸೋಮಶೇಖರಪ್ಪ.—ವೆಟರ್‌ನರಿ ಡಿಸ್‌ಪೆನ್ಸರಿಯನ್ನು ತೆಗೆದುಕೊಳ್ಳುವಾಗ ಯಾವ ಯಾವ ಕಂಡೀಷನ್ಸ್ ಫುರ್‌ಫಿರ್ ಆಗಬೇಕು ?

ಶ್ರೀ ಜಿ. ಬಿ. ಶಂಕರರಾವ್.—ಈ ಡಿಸ್‌ಪೆನ್ಸರಿ ತೆಗೆದುಕೊಳ್ಳಬೇಕೇ ಬೇಡವೇ ಎಂಬ ವಿಚಾರ ಪರಿಶೀಲನೆಯಲ್ಲಿದೆ ಎಂದು ಹೇಳಿದೆ. ಯಾವ ಕಂಡೀಷನ್ ಪ್ರಕಾರ ಈ ಡಿಸ್‌ಪೆನ್ಸಸರಿ ತಾಬಾಕ್ಕೆ ತೆಗೆದುಕೊಳ್ಳಲಾಗುವುದು ಎಂಬುದನ್ನು ಈಗ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

Construction of Bus Stand at K.R. Nagar Town

749. **Sri M. BASAVARAJU** (K.R. Nagar).—

Will the Minister for Transport be pleased to state :—

(*a*) whether the Government is aware that the construction of a Bus Stand (M.S.R.T.C.) at K. R. Nagar Town is pending since long ;

(*b*) when it was sanctioned ;

(*c*) the stage at which it stands now and the reasons for the delay;

(*d*) what is the estimated cost ;

(*e*) when the work would be completed ?

Sri MOHAMED ALI (Minister for Transport).—

(*a*) Yes ; the proposal is pending.

(*b*) Not sanctioned.

(*c*) Action is on hand to take over the existing Municipal bus stand site at K. R. Nagar for the purpose. The question of transfer of the said site was under negotiation with the Municipality resulting in some delay in finalisation of the proposal.

(*d*) Estimate is not yet ready.

(*e*) As early as possible after the estimate is sanctiond by the competent authority.

ಶ್ರೀ ಎಂ. ಬಸವರಾಜು.—(ಅ) ಪ್ರಶ್ನೆಗೆ ಉತ್ತರ ಹೇಳುತ್ತಾ, ಬಹಳ ಕಾಲದಿಂದ ಇತ್ಯರ್ಥ ವಾಗದೇ ಉಳಿದಿದೆ ಎಂದು ಹೇಳಿದ್ದೀರಿ, ಇದಕ್ಕೆ ಕಾರಣವೇನು ?

† Sri MOHAMED ALI.—There was some amount of negotiation with the Municipality regarding the rate to be paid for the land that is going to be acquired for the construction of the bus station.

ಶ್ರೀ ಎಂ. ಬಸವರಾಜು.—ಅವರು ಹಾಕಿದ ಕಂಡೀಷನ್ ಯಾವುಯಾವುದು ಸ್ವಾಮಿ ?

Sri MOHAMED ALI.—Earlier they had demanded a huge compensation amount. Now they have agreed for a reasonable price and arrangement has been made for payment of the price of the land. Possibly within a month the M.S.R.T.C. will be able to take over the land.

ಶ್ರೀ ಎಲ್. ಶ್ರೀಕಂಠಯ್ಯ.—ತಮ್ಮ ಉತ್ತರದಲ್ಲಿ ಕೆ. ಆರ್.ನಗರದಲ್ಲಿ ಎಂ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡ್ ಕಟ್ಟಿಸುವುದು ಆಲೋಚನೆಯಲ್ಲಿದೆ ಎಂದು ಹೇಳಿದ್ದೀರಿ. ಕೆ. ಆರ್. ನಗರ ತಾಲ್ಲೂಕು ಹೆಡ್‌ಕ್ವಾರ್ಟರು. ಕಾಂಗ್ರೆಸ್‌ನಲ್ಲಿರುವವರು ಯಾವ ಕಾನ್‌ಸ್ಟಿಟ್ಯೂಯನ್ಸಿಯಲ್ಲಿರು ತ್ತಾರೋ ಅಲ್ಲಿ ಮಾತ್ರ ಈ ಎಂ. ಎಸ್. ಆರ್. ಟಿ. ಸಿ. ಬಸ್ ಸ್ಟ್ಯಾಂಡ್ ಕಟ್ಟಿಸುತ್ತೀರೋ ಅಥವಾ ಇತರ ಕಡೆಗಳಲ್ಲೂ ಕಟ್ಟಿಸುತ್ತೀರೋ ?

ಅಧ್ಯಕ್ಷರು.— ಈ ಪ್ರಶ್ನೆ ಕೆ. ಆರ್. ನಗರಕ್ಕೆ ಮಾತ್ರ ಸಂಬಂಧಪಟ್ಟದು ಉಳಿದುದಕ್ಕೆ ಬರುವುದಿಲ್ಲ.

Sri L. SRIKANTAIAH.—I want to know how it does not arise !

Mr. SPEAKER.—I have ruled that it does not arise.

Sri L. SRIKANTAIAH.—I protest against this discrimination.

Mr. SPEAKER.—There is no discrimination.

Sri L. SRIKANTAIAH.—I have put the question and I want a reply.

Mr. SPEAKER.—The supplementary must be within the scope of the principal question.

Sri L. SRIKANTAIAH.—You are not the judge.

Mr. SPEAKER.—The Chair is the Judge on such matters.

Sri L. SRIKANTAIAH.—I have every right to put this question. I want to know what is the policy. The Speaker cannot restrict my right to put question.

Mr. SPEAKER.—I have given the ruling that the supplementary must be within the scope of the main question. The question refers to a particular place and so general questions cannot be put. That is my ruling.

Sri H. N. NANJE GOWDA.—When a question is put in the House, the House is seized of it and so the Speaker cannot restrict the supplementaries to the particular constituency.

Mr. SPEAKER.—I am pointing out that the supplementaries must be within the scope of the principal question. That is the ruling.

Sri D. B. KALMANKAR.—Sir, I rise to a Point of Order.

Mr. SPEAKER.—No Point of Order can be raised during Question Hour.

Sri B. P. GANGADHAR.—Sir, the question is.........

Mr. SPEAKER.—I have given the Ruling that a supplementary should be within the scope of the main question. No policy question can be discussed during Question Hour.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ತಾವು ಹೀಗೆ ತಾರತಮ್ಯವನ್ನು ತೋರಿಸಬಾರದು. ಶ್ರೀಮಾನ್ ಶ್ರೀಕಂಠಯ್ಯನವರು ಏನು ಪ್ರಶ್ನೆ ಕೇಳುತ್ತಿದ್ದರೆಂದರೆ........

ಅಧ್ಯಕ್ಷರು.—ಅವರಿಗೆ ಅವರನ್ನು ಡಿಫೆಂಡ್ ಮಾಡಿಕೊಳ್ಳುವ ಶಕ್ತಿ ಇದೆ. ನೀವು ಕುಳಿತುಕೊಳ್ಳಿ.

ಶ್ರೀ ಎಲ್. ಶ್ರೀಕಂಠಯ್ಯ.—ನಮಗೆ ತಾವು ಹೇಳಿದ್ದನ್ನು ಉಲ್ಲಂಘನ ಮಾಡಬೇಕೆಂದಿಲ್ಲ, ತಮ್ಮ ಅಜ್ಞೆಯನ್ನು ಪಾಲಿಸಬೇಕೆಂದೇ ಇದ್ದೇವೆ.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ಶ್ರೀಮಾನ್ ಶ್ರೀಕಂಠಯ್ಯನವರು ಆ ಬಸ್ ನಿರ್ಮಾಣಗಳ ಬಗ್ಗೆ ಇನ್ನೊಂದು ಉಪ ಪ್ರಶ್ನೆಯನ್ನು ಕೇಳಬೇಕೆಂಬ ಕುತೂಹಲ ಅವರಿಗೆ ಇದೆ. ತಾವು ಅದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ.

Mr. SPEAKER.—I have no objection, provided he asks a pertinent question within the scope of the question.

ಶ್ರೀ ಎಲ್. ಶ್ರೀಕಂಠಯ್ಯ.—ಆ ಸ್ಕೋಪ್ ಎಂದರೆ ಅರ್ಥವೇನು ? ಅದನ್ನು ತಿಳಿಸಿ, ನೀವು ಮೊದಲು ಕಾನ್‌ಸ್ಟಿಟ್ಯೂಷನಲ್ಲಾಗಿ ನಡೆದರೆ ಈ ರಗಳೆಗಳು ಒಂದೂ ಇರುವುದಿಲ್ಲ. I want the policy to be settled first.

Mr. SPEAKER.—I have already stated that it is not for me to lay down any policy. I am only stating the position under the Rules. When supplementaries are allowed, they must be within the scope of the particular question. Policy questions cannot be decided or discussed during the Question hour. If Sri L. Srikantaiah wants to put any supplementary within the scope of the question, I shall give him an opportunity.

Sri M. NAGAPPA.—Sir, the Chair seems to take arbitrary decisions. Please see whether Sri Srikantaiah's supplementary is within the scope of the question. I think, you have not heard him properly.

Sri D. B. KALMANKAR.—Policy question can also be asked during Question Hour, provided it is not too long.****

Sri B. P. GANGADHAR.—****

Sri S. SIVAPPA.—I know that the Government cannot be committed to the extent of changing or enunciating the policy through a supplementary. ಸರ್ಕಾರದ ಪಾಲಿಸಿ ಏನೆಂಬುದನ್ನು ಎಲಾಬರೇಟಾಗಿ ಹೇಳಿ ಎಂದು ಕೇಳುತ್ತಾ ಇಲ್ಲ. ಆ ವಿಷಯಕ್ಕೆ ಸಂಬಂಧಪಟ್ಟಹಾಗೆ ಸರ್ಕಾರದ ಪಾಲಿಸಿ ಏನೆಂದು ಸ್ಟೇಟ್‌ಮೆಂಟ್ ಮಾಡಿ ಎಂದು ಕೇಳುತ್ತಾ ಇಲ್ಲ. ಯಾವುದೋ ಒಂದು ಊರಿನಲ್ಲಿ ಬಸ್‌ಸ್ಟಾಂಡ್ ಕಟ್ಟತಕ್ಕ ಬಗ್ಗೆ ನಿಮ್ಮ ಸರ್ಕಾರದ ನಿಲುವು ಏನೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದನ್ನು ಹೇಳುವುದಕ್ಕೆ ಏನು ತೊಂದರೆ ಇದೆ ? ಸರ್ಕಾರದ ಪಾಲಿಸಿಯನ್ನು ನಾವು ರಾಜ್ಯಪಾಲರ ಭಾಷಣದ ಚರ್ಚೆಯ ಅಥವಾ ಬಜೆಟ್ ಭಾಷಣದ ಚರ್ಚೆಯ ಸಮಯದಲ್ಲಿ ಕೇಳುತ್ತೇವೆ. ಶ್ರೀಕಂಠಯ್ಯನವರು ಕೇವಲ ಕೃಷ್ಣರಾಜನಗರ ಟೌನಿನಲ್ಲಿ ಬಸ್ ನಿರ್ಮಾಣವನ್ನು ಕಟ್ಟುವಂತೆ ಇತರ ಬೇರೆ ಕಡೆ ಕಟ್ಟುವುದರಲ್ಲಿ ಸರ್ಕಾರದ ನಿಲುವು ಏನೆಂದು ಕೇಳಿದ್ದಾರೆ ಅಷ್ಟೆ.

**** Matter not recorded as directed by the Chair.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ ನಾನು ಏನೂ ಭಿಕ್ಷೆ ಬೇಡಬೇಕಾಗಿಲ್ಲ In protest I walk out.

(*Sri L. Srikantaiah withdrew*).

Sri D. M. SIDDAIAH.—Sir, I rise to a point of order.

Mr. SPEAKER.—No point of order can be raised during question hour.

Sri D. M. SIDDAIAH.—May I know when I would be permitted to raise a point of order Sir ?

Mr. SPEAKER.—It is after the Question Hour.

Sri M. S. KRISHNAN.—On a point of order, Sir.

Mr. SPEAKER.—That may be raised after question hour.

Sri M. S. KRISHNAN.—Sir, I may be heard on my point of order Sir. Rule 44 (4) states :

> " 44. (4) The Speaker shall disallow any supplementary question if, in his opinion, it infringes the rules as to the subject matter of questions."

Rule 44 is guided by Rule 36 (2). The ruling you have given is not proper.

Mr. SPEAKER.—The hon'ble member cannot comment on the ruling.

Sri M. S. KRISHNAN.—Sir, you are denying the right of members to ask policy questions......

Mr. SPEAKER.—There is no point of order.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೃಷ್ಣರಾಜನಗರದ ಮುನಿಸಿಪಾಲಿಟಿ ಏರಿಯಾದಲ್ಲಿ ಬಸ್ ಸ್ಟಾಂಡನ್ನು ಕಟ್ಟಲು, ಆ ಪ್ರದೇಶವನ್ನು ಎಂ. ಎಸ್. ಆರ್. ಟಿ. ಸಿ. ಯವರು ಕೊಂಡುಕೊಂಡರೆ, ಮುನಿಸಿಪಾಲಿಟಿಯವರಿಗೆ ಬರತಕ್ಕ ಉತ್ಪತ್ತಿ ಕಡಿಮೆ. ಆದ್ದರಿಂದ ಮುನಿಸಿಪಾಲಿಟಿಯವರು, ಅವರ ಸ್ವಾಧೀನವೇ ಉಳಿಸಿಕೊಂಡು, ಪ್ರಯಾಣಿಕರಿಗೆ ಬೇಕಾದ ಸೌಕರ್ಯ ಕಲ್ಪಿಸಿ, ಪ್ರತಿ ದಿನ ಬರತಕ್ಕ ವರಮಾನವನ್ನು ಅವರೇ ಉಳಿಸಿಕೊಳ್ಳುವಂತೆ ಪ್ರಯತ್ನ ಮಾಡುವುದು ಸೂಕ್ತವಲ್ಲವೇ ?

Sri MOHAMED ALI.—Sir, it is difficult for the Road Transport Corporation to accept the proposal made by the hon'ble Member, because Road Transport Corporation will build its own bus stands and manage them.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇತರ ಮುನಿಸಿಪಾಲಿಟಿ ಏರಿಯಾದಲ್ಲಿ ಈ ರೀತಿ ಮುನಿಸಿಪಾಲಿಟಿಯವರೇ ಸ್ವಾಧೀನದಲ್ಲಿ ಇಟ್ಟುಕೊಂಡು, ಪ್ರತಿದಿನ ವರಮಾನ ಬರುವ ಹಾಗೆ ಏರ್ಪಾಡು ಮಾಡಿದ್ದಾರೆ. ಎಲ್ಲಾ ಮುನಿಸಿಪಾಲಿಟಿ ಟೌನ್‌ನಲ್ಲಿ ಇದೇ ರೀತಿ ಮಾಡಿದರೆ, ಮುನಿಸಿಪಾಲಿಟಿಯವರಿಗೆ ಬರತಕ್ಕ ವರಮಾನ ಬರುತ್ತದೆ. ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲವೇ ?

Sri MOHAMED ALI.—Sir, that was a temporary arrangement made after the nationalisation of the routes. Road Transport Corporation wants to put up its own bus stands as they have done in Hassan and other places.

Misappropriation of Funds by V. P. Chairmen in Kudligi Taluk

751. SRI M. M. J. SADYOJATHA (Kudligi).—

Will the Minister for Development be pleased to state :—

(*a*) the number of Village Panchayat Chairmen in Kudligi taluk who have misappropriated Panchayat funds ;

(*b*) action taken by the Government to recover the amount ?

SRI B. L. GOWDA (Deputy Minister for Co-oparation).—

(*a*) Three Chairmen are reported to have misappropriated Panchayat funds.

(*b*) In one case, police have taken up investigation ; in another case surcharge proceedings have been instituted ; the third case is under enquiry by the Assistant Commissioner.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಸ್ವಾಮಿ, ಯಾವ ಯಾವ ಪಂಚಾಯಿತಿ ಅಧ್ಯಕ್ಷರು ಎಷ್ಟೆಷ್ಟು ಹಣವನ್ನು ದುರುಪಯೋಗ ಮಾಡಿದ್ದಾರೆ?

†ಶ್ರೀ ಬಿ. ಎಲ್. ಗೌಡ.—ಚಿರುಬಿ ಪಂಚಾಯಿತಿಯ ಅಧ್ಯಕ್ಷರು 4,388-56 ರೂಪಾಯಿಗಳನ್ನು ದುರುಪಯೋಗ ಮಾಡಿದ್ದಾರೆ. ಅವರ ಮೇಲೆ ಪೋಲೀಸ್ ಕೇಸ್ ದಾಖಲು ಮಾಡಿದ್ದಾರೆ. ಪೋಲೀಸಿನವರು ತನಿಖೆ ನಡೆಸುತ್ತಿದ್ದಾರೆ. ರಾಮದುರ್ಗ ಪಂಚಾಯಿತಿಯ ಅಧ್ಯಕ್ಷರು 16,519-64 ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಅಲ್ಲಿ ಅಸಿಸ್ಟೆಂಟ್ ಕಮೀಷನರು ಸರ್‌ಚಾರ್ಜ್ ಪ್ರೊಸೀಡಿಂಗ್ಸ್ ನಡೆಸುತ್ತಿದ್ದಾರೆ. ವರಳ ಹಳ್ಳಿ ಪಂಚಾಯಿತಿಯ ಚೇರ್ಮನರು 2,538-00 ರೂಪಾಯಿಗಳನ್ನು ದುರುಪಯೋಗ ಮಾಡಿದ್ದಾರೆ. ಇದರ ಬಗ್ಗೆ ಅಸಿಸ್ಟೆಂಟ್ ಕಮೀಷನರು ಎನ್‌ಕ್ವೈರಿ ನಡೆಸುತ್ತಿದ್ದಾರೆ.

ಶ್ರೀ ಎಂ. ದೊಡ್ಡನಗೌಡ.—ಈ ಪಂಚಾಯಿತಿಗಳಲ್ಲಿ ಇಷ್ಟೊಂದು ಹಣ ದುರುಪಯೋಗವಾಗಿದ್ದರೂ ಕೂಡ, ಆ ಪಂಚಾಯಿತಿಯ ಅಧ್ಯಕ್ಷರುಗಳ ಮೇಲೆ ಕೇಸು ಹಾಕುತ್ತೇವೆ, ಸರ್‌ಚಾರ್ಜ್ ಪ್ರೊಸೀಡಿಂಗ್ಸ್ ನಡೆಯುತ್ತಿದೆ ಎಂದು ಹೇಳುತ್ತಿದ್ದೀರಿ, ಆ ಹಣ ದುರುಪಯೋಗವಾಗಿ 3-4 ವರ್ಷಗಳಾಗಿವೆ. ಇಲ್ಲಿಯವರೆಗೂ ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ?

ಶ್ರೀ ಬಿ. ಎಲ್. ಗೌಡ.—ಎನ್‌ಕ್ವೈರಿ, ಸರ್‌ಚಾರ್ಜ್ ಪ್ರೊಸೀಡಿಂಗ್ಸ್ ನಡೆಯುತ್ತಿದೆ, ದುರುಪಯೋಗವಾಗಿರುವುದನ್ನು ವಸೂಲು ಮಾಡುವುದಕ್ಕೆ ಕ್ರಮ ಜರುಗಿಸುತ್ತಿದ್ದಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸರ್‌ಚಾರ್ಜ್ ಮಾಡುವುದು ಸರಿಯಾದ ಕ್ರಮವೇ?

ಶ್ರೀ ಬಿ. ಎಲ್. ಗೌಡ.—ಅದಕ್ಕೋಸ್ಕರ ಎನ್‌ಕ್ವೈರಿ ನಡೆಯುತ್ತಿದೆ.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ ನಮ್ಮ ರಾಜ್ಯದಲ್ಲಿ ಸರ್ವೆ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿಯೂ ಮಿಸ್ ಅಪ್ರೋಪ್ರಿಯೇಷನ್ ನಡೆಯುತ್ತಿದೆ. ಆದ್ದರಿಂದ ಅಂಥಾ ಸಂದರ್ಭದಲ್ಲಿ ಪೋಲೀಸಿನವರಿಗೆ ಅರ್ಜಿ ಕೊಟ್ಟರೆ ಸಂಬಂಧಪಟ್ಟವರ ಮೇಲೆ ಆಕ್ಷನ್ ತೆಗೆದುಕೊಳ್ಳುವಂತೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಬಿ. ಎಲ್. ಗೌಡ.—ಅರ್ಜಿಯನ್ನು ಕಳುಹಿಸಿದರೆ ಪೋಲೀಸಿನವರನ್ನು ಕಳುಹಿಸಿ ಆಕ್ಷನ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.

Allotment of Powerlooms Through Societies

880. **Sri C. K. RAJAIAH SHETTY** (Chicknayakanahalli).—

Will the Minister for Development be pleased to state :—

(*a*) the number of Powerlooms allotted through Societies in the State (Districtwise) ;

(*b*) the number of them working and not working ;

(*c*) the action taken by Government to set in motion the idling unites ?

Sri B. L. GOWDA (Deputy Minister for Co-operation).—

(*a*) 2,000 Powerlooms. (Districtwise allotment statement is appended).

(*b*) 983 are working and 1,017 are not working.

(*c*) Action has been taken to set in motion the idling looms by making available adequate working capital from Reserve Bank of India at concessional rate of interest, and also by reallotment of powerlooms to such of the societies which are able to run them.

STATEMENT

Sl. No.	District	No. of power-looms allotted
1	Mysore	28
2	Mandya	71
3	Hassan and Coorg	41
4	Chickmagalur	5
5	Shimoga	13
6	Mangalore (S.K.)	20
7	Chitradurga	76
8	Tumkur	106
9	Kolar	56
10	Bangalore	107
11	Bellary	43
12	Bidar	25
13	Raichur	95
14	Bijapur	499
15	Gulbarga	125
16	Belgaum	521
17	Dharwar	151
18	Karwar (N.K.)	18
	Total ...	2,000

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸ್ವಾಮಿ ರಿಯಾಯಿತಿ ಬಡ್ಡಿದರದಲ್ಲಿ ಭಾರತದ ರಿಜರ್ವ್ ಬ್ಯಾಂಕಿನವರಿಂದ ಸಾಕಷ್ಟು ವರ್ಕಿಂಗ್ ಕ್ಯಾಪಿಟಲ್ ಅನ್ನು ದೊರಕಿಸುವ ಮೂಲಕ ಕೆಲಸ ಮಾಡದೆ ನಿಂತಿರುವ ಮಗ್ಗಗಳನ್ನು ಚಾಲನೆಗೊಳಿಸಲು ಮತ್ತು ಮಗ್ಗಗಳನ್ನು ನಡೆಸಲು ಶಕ್ತವಾಗಿರುವಂಥ ಸಂಘಗಳಿಗೆ ವಿದ್ಯುತ್ ಮಗ್ಗಗಳನ್ನು ಪುನಃ ಹಂಚಿಕೊಡಲು ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಹೇಳಿದ್ದೀರಿ, ಅವರಿಗೆ ಎಷ್ಟು ಹಣವನ್ನು ಕೊಡಬೇಕೆಂದು ಬರೆದಿದ್ದೀರಿ, ಅಲ್ಲಿಂದ ಎಷ್ಟು ಹಣ ಬರುತ್ತದೆ ಎಂದು ನಿರೀಕ್ಷಣೆ ಮಾಡಿದ್ದೀರಿ ?

† ಶ್ರೀ ಬಿ. ಎಲ್. ಗೌಡ.—ಪ್ರತಿಯೊಂದು ಪವರ್ ಲೂಮಿಗೂ ದುಡಿಯುವ ಬಂಡವಾಳ ಎಂದು ಸೊಸೈಟಿಯಿಂದ ಒಂದು ಸಾವಿರ ರೂಪಾಯಿಗಳನ್ನೂ ರಿಜರ್ವ್ ಬ್ಯಾಂಕಿನಿಂದ 2,700 ರೂಪಾಯಿಗಳನ್ನು ಕೊಡುತ್ತಾರೆ.

ಶ್ರೀ ಸಿದ್ದಯ್ಯಕಾಶಿಮಠ.—ಸೊಸೈಟಿಗಳ ಮುಖಾಂತರ ಹಂಚಿಕೊಟ್ಟ ಪವರ್ ಲೂಮುಗಳನ್ನು ಬಹು ಭಾಗ ಮಾರಿದ್ದಾರೆಂದು ಗೊತ್ತಾಗಿದೆ. ಅಂಥವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಎಲ್. ಗೌಡ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಇನ್ನುಮುಂದೆ ಎಲ್ಲೆಲ್ಲಿ ಚೆನ್ನಾಗಿ ಕೆಲಸ ಮಾಡುತ್ತವೆಯೋ ಅಂಥ ಕಡೆಗಳಿಗೆ ಮಾತ್ರ ಕೊಡುತ್ತೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ರಾಜ್ಯದಲ್ಲಿ ಸಂಘಗಳ ಮೂಲಕ 2000 ಪವರ್ ಲೂಮ್‌ಗಳನ್ನು ಹಂಚಿಕೊಡಲಾಗಿದೆ ಎಂದು ಹೇಳಿದ್ದೀರಿ, ಅವುಗಳಲ್ಲಿ ಅನೇಕ ಪವರ್ ಲೂಮ್‌ಗಳು ಅನ್‌ಸ್ಟ್ಯಾಂಡರ್ಡ್ ಪವರ್‌ಲೂಮ್‌ಗಳಾಗಿವೆ. ಆದ್ದರಿಂದ ಅವುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿವೆಯೇ ?

ಶ್ರೀ ಬಿ. ಎಲ್. ಗೌಡ.—ಅನ್‌ಸ್ಟ್ಯಾಂಡರ್ಡ್ ಪವರ್‌ಲೂಮ್‌ಗಳನ್ನು ಸಪ್ಲೈ ಮಾಡಿದ್ದಾರೆ ಎನ್ನುವುದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಐ. ಸೋಮಶೇಖರಪ್ಪ.—ಈಗ ಕೊಟ್ಟಿರತಕ್ಕ ಪವರ್‌ಲೂಮ್‌ಗಳು ಏನಿವೆ ಅವುಗಳಲ್ಲಿ 50 ಪರ್ಸೆಂಟ್ ಕೆಲಸಮಾಡುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಲ್. ಗೌಡ.—ಈ ಪವರ್ ಹ್ಯಾಂಡ್ಲೂಮ್‌ಗಳನ್ನು ನಡೆಸತಕ್ಕವರಿಗೆ ಸಾಕಷ್ಟು ದುಡಿಯುವ ಬಂಡವಾಳ ಇಲ್ಲ. ಸರಿಯಾದಂತಹ ಮಾರ್ಕೆಟ್ ಫೆಸಿಲಿಟೀಸ್ ಇಲ್ಲ ಮತ್ತು ವಿದ್ಯುಚ್ಛಕ್ತಿ ಸರಬರಾಜು ಇಲ್ಲ. ಸರಿಯಾದಂತಹ ಟೆಕ್ನಿಕಲ್ ನೋಹೌ ಇಲ್ಲ. ಈ ಕಾರಣಗಳಿಂದ ಅವುಗಳು ಕೆಲಸ ಮಾಡುತ್ತಿಲ್ಲ.

ಶ್ರೀ ಎಂ. ನಾಗಪ್ಪ.—ರಾಯಚೂರಿಗೆ 95 ಪವರ್‌ಲೂಮ್‌ಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ, ಅವುಗಳನ್ನೆಲ್ಲಾ ತೆಗೆದುಕೊಂಡವರು ಮಾರಾಟ ಮಾಡಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಅದು ಸರ್ಕಾರದ ಗಮನಕ್ಕೆ ಬಂದಿದ್ದರೆ, ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಎಲ್. ಗೌಡ.—ಮಾರಾಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಅದು ಸರ್ಕಾರದ ಗಮನಕ್ಕೆ ಬಂದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

2.00 P.M.

Selection to the Posts of Probationary Sub-Inspectors

SRI SIDDAIAH KASHIMATH (Shirahatti).—

Will the Chief Minister be pleased to state :—

(a) the number of applications received for the post of probationary Sub-Inspectors ;

(b) of them, the number of persons selected ;

(c) the number of persons who have passed in the examination ?

Sri VEERENDRA PATIL (Chief Minister).—

(*a*) 588.

(*b*) 60.

(*c*) 96.

ಶ್ರೀ ಸಿದ್ದಯ್ಯ ಕಾಶೀಮಠ.—ರಾಜ್ಯದ ಎಲ್ಲಾ ಹುದ್ದೆಗಳನ್ನು ಲೋಕ ಸೇವ ಆಯೋಗದವರು ನೇಮಕ ಮಾಡುತ್ತಿರುವಾಗ ಇವರನ್ನು ಮಾತ್ರ ಕಮಿಟಿ ಮುಖಾಂತರ ಆಯ್ಕೆ ಮಾಡುವುದಕ್ಕೆ ಕಾರಣವೇನು ಮತ್ತು ಆ ಕಮಿಟಿಯಲ್ಲಿ ಯಾವ ಯಾವ ಜನರಿದ್ದಾರೆ ?

† ಶ್ರೀ ವೀರೇಂದ್ರ ಪಾಟೀಲ್.—ಸಬ್ಇನ್ಸ್‌ಪೆಕ್ಟರುಗಳ ಆಯ್ಕೆ ಯಾವಾಗಲೂ ಇಲಾಖೆಯ ಮುಂಖಾತರವೇ ಆಗುತ್ತಿದೆ. ಇದಕ್ಕೆ ಒಂದು ಕಮಿಟಿ ಇದೆ. ಆ ಕಮಿಟಿಯಲ್ಲಿ ಹೋಂ ಸೆಕ್ರೆಟರಿಯವರು ಚೇರ್‌ಮನ್ನರಾಗಿದ್ದಾರೆ. ಐ. ಜಿ. ಪಿ. ಅವರು ಇದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಉಪ ಕಾರ್ಯದರ್ಶಿ ಇದ್ದಾರೆ. ಪೋಲೀಸ್ ಕಮಿಷನರ್ ಇದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಪಾಸಾದ 96 ಮಂದಿಯಲ್ಲಿ 60 ಮಂದಿಯನ್ನು ಆಯ್ಕೆ ಮಾಡಿದ್ದೀರಿ. ಉಳಿದ 36 ಜನರನ್ನು ವೇಟಿಂಗ್ ಲಿಸ್ಟಿನಲ್ಲಿ ಇಟ್ಟು ಮುಂದೆ ಹುದ್ದೆಗಳು ಖಾಲಿಯಾದಾಗ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಆಗುವುದಿಲ್ಲ. 60 ಜನ ಮಾತ್ರ ಬೇಕೆಂದು ಕಾಲ್‌ಫಾರ್ ಮಾಡಲಾಗಿತ್ತು. ಅದರಂತೆ ಸೀರಿಯಲ್ ಆರ್ಡರ್ ಪ್ರಕಾರ 60 ಜನರನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಎಸ್. ಎಸ್. ಅರಕೇರಿ.—ಈ 60 ಜನರಲ್ಲಿ ಷೆಡ್ಯೂಲ್ ಕ್ಯಾಸ್ಟಿನವರು ಎಷ್ಟು ಮಂದಿ ಇದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಪಾಸ್ ಮಾಡಿದ ಎಲ್ಲರನ್ನು ನೇಮಕ ಮಾಡಲಾಗಿದೆ. ಅಂದರೆ ಷೆಡ್ಯೂಲ್ ಕ್ಯಾಸ್ಟಿನವರು 5 ಮಂದಿ ಇದ್ದಾರೆ.

Mr. SPEAKER.—Question hour is over. As regards held-over questions on the agenda, *viz*., Question No. 368, 527, 599, 617 and 847 will be taken up tomorrow. Now Short notice questions.

SHORT NOTICE QUESTION AND ANSWER

Disturbance in the Board High School, Coondapur

38. **Sri SUBBA RAO HALSNAD** (Baindur).—

Will the Chief Minister be pleased to state :—

(*a*) whether there was any disturbance in the Board High School, Coondapur on the night of Monday, the 10th February, 1969 ;

(*b*) the number of persons injured in this disturbance ;

(*c*) the number of persons admitted in the Coondapur Hospital and if any person has been taken to the Hospital at Mangalore Head-quarters ;

(*d*) the reasons for this disturbance, to what place (village) the persons belong and the kind of weapons they have used ;

(*e*) whether police were present in the Coondapur Police Station when this disturbance was going on, and if so, the number of them who took action to prevent it ;

(*f*) whether any persons have been arrested in this connection and if so, the number of persons arrested ?

Sri VEERENDRA PATIL (Chief Minister).—

(*a*) Yes.

(*b*) Nine.

(*c*) 8 persons were got treated at Coondapur Hospital, and one person at Mangalore Headquarters Hospital.

(*d*) The disturbance on 10th February 1969 is reported to be in retaliation of an alleged quarrel on 5th February 1969.

The names of the villages to which the 22 persons concerned in the incident of 10th February 1969 belong, are shown below :—

Two from Shankaranarayan.

Two from Basrur.

Two from Haladi and one each from Siriyur, Belur, Shenapur, Guddebetta, Wamanbetta, Harakur, Balkur, Rattady, Thedimane, Udipi, Karkal, Yermal, Pilar, Madamakki, Koteshwar and Kidiyur.

The weapons used are alleged to be hammers, sticks and chains.

(*e*) The Policemen were present in Coondapur Police Station at that time. At the time the incident took place, Police could not interfere, as the disturbance, could not be anticipated.

(*f*) 22 persons concerned in this incident have been arrested.

ಶ್ರೀ ಸುಬ್ಬರಾವ್ ಹಲಸನಾಡ್.—ತಮ್ಮ ಉತ್ತರದಲ್ಲಿ ಪೋಲೀಸರು ಕುಂದಾಪುರ ಪೋಲೀಸ್ ಸ್ಟೇಷನ್‌ನಲ್ಲಿ ಇದ್ದರು ಎಂದು ಹೇಳಿದ್ದೀರಿ. ಈ ಗಲಾಟೆ ನಡೆದಾಗ ಕೆಲವು ದೊಡ್ಡ ಮಹನೀಯರು ಪೋಲೀಸರು ಬರದಂತೆ ಮಾಡಿದರೆಂಬ ವದಂತಿ ಇತ್ತು. 1966 ರಿಂದಲೂ ನಡೆಯುತ್ತಾ ಬಂದಿರುವ ಗಲಾಟೆಯಾಗಿದೆ. 1968ರ ಸೆಪ್ಟೆಂಬರ್‌ನಲ್ಲಿ ನಡೆದ ಗಲಾಟೆ ಬಗ್ಗೆ ಕೋರ್ಟಿನಲ್ಲಿ ಕೇಸ್ ಇದೆ. ಆದಕಾರಣ ತಮ್ಮ ಸಿ.ಐ.ಡಿ. ಇಲಾಖೆಯವರನ್ನು ಅಲ್ಲಿಗೆ ಕಳಿಸಿ ಹಿಂದಿನಿಂದಲೂ ಸಹ ಈ ಗಲಾಟೆ ನಡೆಯುವುದಕ್ಕೆ ಯಾವ ಯಾವ ದೊಡ್ಡ ದೊಡ್ಡ ಮಹನೀಯರುಗಳು ಕಾರಣರು ಎಂಬುದನ್ನು ಹುಡುಕಿಸಿ, ಇನ್ನು ಮುಂದೆ ಇಂತಹ ಗಲಾಟೆಯಾಗದಂತೆ ಕ್ರಮವನ್ನು ಕೈಗೊಳ್ಳುತ್ತೀರಾ ?

†**ಶ್ರೀ ವೀರೇಂದ್ರ ಪಾಟೀಲ್.**—ಈಗ ಪೋಲೀಸರು ಎಷ್ಟು ಸಾಧ್ಯವೋ ಅದನ್ನೆಲ್ಲಾ ಮಾಡಿದ್ದಾರೆ. 22 ಜನರನ್ನು ಅರೆಸ್ಟ್ ಮಾಡಿದ್ದಾರೆ ; ಮತ್ತು ರಿಪೋರ್ಟ್ ಬಂದಮೇಲೆ ಪೋಲೀಸರು ಎಲ್ಲಾ ಕಾರ್ಯಕ್ರಮಗಳನ್ನು ಸಹ ಕೈಗೊಂಡಿದ್ದಾರೆ. ಮತ್ತು ಇನ್ನು ಮುಂದೆ ಈ ರೀತಿಯ ಗಲಾಟೆಯಾಗದಂತೆ ಮುಂಜಾಗ್ರತೆ ಕ್ರಮವಾಗಿ ಎಷ್ಟು ಸಾಧ್ಯವೋ ಅಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ.

Smt. WINNIFRED F. FERNANDES.—May I know how many are students and how many are public among the arrested people ?

Sri VEERENDRA PATIL. -Sir, I do not have those details with me.

ಶ್ರೀ ಎಸ್. ಎಸ್. ಅರಕೇರಿ.—22 ಜನರನ್ನು ಅರೆಸ್ಟ್ ಮಾಡಲಾಗಿದೆ ಎಂದು ಹೇಳಿದಿರಿ. ಇವರಲ್ಲಿ ಬೇರೆ ಬೇರೆ ಕೋಮಿನವರು ಎಷ್ಟೆಷ್ಟು ಜನರು ಇದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಯಾರ ಮೇಲೆ ಸಂಶಯ ಬಂದಿದೆಯೋ ಅವರನ್ನೆಲ್ಲಾ ಅರೆಸ್ಟ್ ಮಾಡಿದ್ದಾರೆ. ಅರೆಸ್ಟ್ ಮಾಡುವಾಗ ಯಾವ ಕೋಮಿನವರು ಎಂದು ತಿಳಿದುಕೊಂಡು ಅರೆಸ್ಟ್ ಮಾಡುವುದಿಲ್ಲ.

Sri K. H. PATIL.—During the course of the investigation, may I know whether the Police have found only those 22 persons are involved in this or whether there are any other persons involved against whom the cases are pending to be investigated and if so, when will it be completed ?

Sri VEERENDRA PATIL.—They have registered cases so far against 22 persons who have been arrested. I do not have any other information. I think there was a complaint against these 22 persons who were involved and they have been arrested. I do not know whether any other persons are yet to be arrested.

Suicide committed by a Mechanic, H.A.L., Bangalore and his Family

51. **Sri M. NAGAPPA** (Raichur).—

Will the Chief Minister be pleased to state :—

(*a*) whether Krishnappa, Mechanic in H.A.L., Bangalore and four members of his family were found dead in their house at Bangalore ;

(*b*) if so, the reason for such unnatural death ;

(*c*) whether any foul play is suspected ?

Sri VEERENDRA PATIL (Chief Minister).—

(*a*) Yes.

(*b*) The investigation has revealed that it was a suicide pact. However, the viscera has been sent to the Chemical Examiner whose opinion is awaited.

(*c*) No.

ಶ್ರೀ ಎಂ. ನಾಗಪ್ಪ.—ಆತ್ಮಹತ್ಯಕ್ಕೆ ಒಪ್ಪಂದವಾಗಿತ್ತು ಎಂದು ಇದರಲ್ಲಿ ಗೊತ್ತಾಗುತ್ತದೆ. ಇದಕ್ಕೆ ಕಾರಣ ಫ್ಯಾಮಿಲಿ ವರೀಸ್ ಆಗಿತ್ತೇ ಅಥವಾ ಇನ್ನಾವ ಕಾರಣಗಳಿದ್ದವು ಎನ್ನುವುದನ್ನು ತಿಳಿಸಲಾಗುತ್ತದೆಯೇ ? ಇನ್‌ವೆಸ್ಟಿಗೇಷನ್‌ನಲ್ಲಿ ಇವೆಲ್ಲಾ ತಿಳಿಸಿದ್ದಾರೆಯೇ ?

† ಶ್ರೀ ವೀರೇಂದ್ರ ಪಾಟೀಲ್.—ಇವರಿಗೆ ಫ್ಯಾಮಿಲಿ ವರೀಸ್ ಇತ್ತು, ಮತ್ತು ಇವರಿಗೆ ಒಬ್ಬರು ಸ್ಟೆಪ್ ಮದರ್ ಇದ್ದರು ಎಂದೂ ಮತ್ತು ಇವರನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ ಮತ್ತು ಕೆಲವು ಕಡೆ ಸಾಲಗಳನ್ನು ಮಾಡಿದ್ದರು ಮತ್ತು ಲೈಫ್‌ನಲ್ಲಿ ಡಿಜಕ್ಟ್ ಆಗಿದ್ದರು ಎಂದೂ ಅವರೇ ಸೂಯಿಸೈಡು ಮಾಡಿಕೊಳ್ಳಲು ಕಾರಣ ಎನ್ನುವುದಕ್ಕೆ ಅವರೇ ಒಂದು ಕಾಗದವನ್ನು ಅವರ ಹ್ಯಾಂಡ್ ರೈಟಿಂಗ್‌ನಲ್ಲಿರುವುದೂ ಸಿಕ್ಕಿದೆ. ಇದರಿಂದ ಇಷ್ಟು ಗೊತ್ತಾಗುತ್ತದೆ.

ಶ್ರೀ ಎಂ. ನಾಗಪ್ಪ.—ಐ.ಪಿ.ಸಿ. ಸೆಕ್ಷನ್ 606ರ ಪ್ರಕಾರ ಯಾವುದೇ ತರಹದ ಒತ್ತಾಯ ಆತ್ಮಹತ್ಯಕ್ಕೆ ತಂದರೆ ಮತ್ತು ಆತ್ಮಹತ್ಯ ಮಾಡಿಕೊಂಡರೆ ಅದಕ್ಕೆ ಸಂಬಂಧಪಟ್ಟವರಿಗೆ ಶಿಕ್ಷೆಯಾಗ ತಕ್ಕದ್ದು ಎಂದು ಇದೆ. ಇದರ ಬಗ್ಗೆ ಇಲ್ಲಿ ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಸೂಯಿಸೈಡ್ ಮಾಡಿಕೊಂಡಿದ್ದೇನೆ ಎಂದು ಅವರೇ ಬರೆದಿರುವ ಪತ್ರ ಸಿಕ್ಕಿದೆ. ಇದರಲ್ಲಿ ಅವರೇ ಸ್ವತಃ ನನಗೆ ಲೈಫ್‌ನಲ್ಲಿ ಡಿಜೆಕ್ಟ್ ಆಗಿ ಸೂಯಿಸೈಡ್ ಮಾಡಿಕೊಂಡಿದ್ದೇನೆ ಎಂತಲೂ ಬರೆದಿದ್ದಾರೆ.

SRI B. B. SAYANAK.—May I know when the Chemical Examiner's report will be made available ?

ಶ್ರೀ ವೀರೇಂದ್ರ ಪಾಟೀಲ್.—ಮೆಡಿಕಲ್ ಎಕ್ಸಾಮಿನೇಷನ್ಸ್‌ಗೆ ಕಳುಹಿಸಿದ್ದರೂ ಅದರ ರಿಪೋರ್ಟ್ ಇನ್ನೂ ಬಂದಿಲ್ಲ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆಯಾಯಿತು.

QUESTIONS FOR ANSWERS ON THE DAY
(but not taken up)

Misappropriation of Loan taken from District Industrial Co-operative Bank, South Kanara

297. SRI B. BHASKAR SHETTY (Kaup).—

Will the Minister for Development be pleased to state :—

(a) the persons who have taken loans from the District Industrial Co-operative Bank, South Kanara for the manufacture of furniture ;

(b) the amount of loan given to each one of them together with the date on which the loan was given ;

(c) out of them the number of persons who have misappropriated the loans taken ?

SRI P. M. NADGOUDA (Minister for Development).—

(a) (1) Sri Hiriyanna
(2) Sri Y. Lakshmana
(3) Sri Venkanna Bhandari
(4) Sri N. S. Devadas Rao

(b) Sriyuths :

	Amount	Date
(1) Hiriyanna	Rs. 10,000	10-7-1968
(2) Y. Lakshmana	Rs. 6,000	2-5-1968
(3) Venkanna Bhandari	Rs. 7,500	6-3-1968
(4) N. S. Devadas Rao	Rs. 2,500	25-2-1966
Total ...	Rs. 26,000	

(c) One.

Procedure for asking Supple enteries

Mr. SPEAKER.—I had promised to hear three hon. Members, during question Hour.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಪ್ರಶ್ನೆ ಕಾಲದಲ್ಲಿ ಪ್ರಶ್ನೆ ಮತ್ತು ಉತ್ತರ ಕೇಳತಕ್ಕಂಥ ಸಂದರ್ಭದಲ್ಲಿ 'ನಾಟ್ ಟು ಬಿ ರಿಕಾರ್ಡೆಡ್' ಎಂದು ಹೇಳುತ್ತೀರಿ. ಇದು ದೇಶದ ಪ್ರಜೆಗಳಿಗೆ ತಿಳಿಸಬೇಕಾದ ಸಂದರ್ಭ ಬಂದಾಗ ಅವರು ಈ ವಿಷಯವನ್ನು ತಿಳಿಯಬೇಕಾಗುತ್ತದೆ. ಆ ಸಂದರ್ಭದಲ್ಲಿ ತಾವು 'ನಾಟ್ ಟು ಬಿ ರಿಕಾರ್ಡೆಡ್' ಎಂದು ತಾವು ಅಪ್ಪಣೆ ಕೊಡುತ್ತೀರಿ. I am raising this point of order under Rule 311 read with 314 and 315: ಒಂದುವೇಳೆ ಇನ್‌ಡೀಸೆಂಟ್ ಆಗಿದ್ದು ಅನ್‌ಪಾರ್ಲಿಮೆಂಟರಿ ಪ್ರಯೋಗ ಒಬ್ಬ ಸದಸ್ಯ ಉಪಯೋಗಿಸಿದ್ದೇ ಆದರೆ ಅದನ್ನು ಎಕ್ಸ್‌ಪೆಂಜ್ ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ಆದರೆ 'ನಾಟ್ ಟು ಬಿ ರಿಕಾರ್ಡೆಡ್' ಎಂದು ಹೇಳುವುದಕ್ಕೆ ಅಧಿಕಾರ ಇದೆಯೇ !

> "Rule 314: The Secretary shall cause to be prepared a full report of the proceedings of the Assembly at each of its sitting and shall, as soon as practicable, publish it in such form and manner as the Speaker may, from time to time, direct.

ಈ ಅಸೆಂಬ್ಲಿಯಲ್ಲಿ ನಡೆಯತಕ್ಕಂಥ ಎಲ್ಲಾ ವಿಷಯಗಳನ್ನೂ ಅಫಿಷಿಯಲ್ ರಿಪೋರ್ಟರ್ಸ್ ಸೆಕ್ರೆಟರಿಯವರ ಹುಕುಂ ಪ್ರಕಾರ ರಿಕಾರ್ಡ್ ಮಾಡಿಕೊಳ್ಳುತ್ತಾ ಇರಬೇಕು.

> "Rule 315: If the Speaker is of opinion that a word or words has or have been used in debate which is or are defamatory or indecent or unparliamentary or undignified, he may at his discretion, order that such word or words be expunged from the proceedings of the Assembly.

Mr. SPEAKER.—The Chair has a right to direct reporters not to take down proceedings which are not according to rules. I have already given that ruling.

ಶ್ರೀ ಎಸ್. ಬಂಗಾರಪ್ಪ.—ತಾವು ಈ ದಿನ ರೂಲಿಂಗ್ ಕೊಟ್ಟಿದ್ದು ಬೇರೆ. ಈವೊತ್ತು ನಾನು ಹೇಳಿದ್ದು 'ನಾಟ್ ಟು ಬಿ ರಿಕಾರ್ಡೆಡ್' ಅಂದಮೇಲೆ ಅವರು ಯಾವಾಗ ರಿಕಾರ್ಡ್ ಮಾಡಬೇಕು? ಈ ಸದನದ ಸದಸ್ಯರು ಬೇಕಾದಷ್ಟು ಪ್ರಶ್ನೆ ಹಾಕಿದ್ದಾರೆ. ಮುಖ್ಯ ಮಂತ್ರಿಗಳೂ ಉತ್ತರ ಕೊಟ್ಟಿದ್ದಾರೆ. ಅವೆಲ್ಲಾ ಹೈಲಿ ಇಲ್ಲೀಗಲ್ ಆಗುತ್ತದೆ. ನನ್ನ ಮಾತು ಮುಗಿದಮೇಲೆ ಶಿವಪ್ಪನವರು ಮಾತನಾಡಿದ್ದಾರೆ. ನಾಗಪ್ಪನವರೂ ಮಾತನಾಡಿದ್ದಾರೆ. ಇವೆಲ್ಲಾ 'ಎಗೆನ್‌ಸ್ಟ್ ದಿ ರೂಲ್ಸ್' ಆದುದರಿಂದ ಇದಕ್ಕೆ ಇವೊತ್ತೇ ರೂಲಿಂಗ್ ಕೊಡಬೇಕು.

Mr. SPEAKER.—I reserve my ruling. I shall give my ruling later.

† Sri D. B. KALMANKAR (Aland).—My point is that, when Sri L. Srikantiah wanted to put a question and wanted to know the policy, he was not permitted. Even as per rule 36 (m):

> 'It shall not raise questions of policy too large to be dealt with within the limits of an answer to a question.'

Here it was not such a big question of policy which required some time for announcement. It was a short question which could be answered

very shortly. Even under rule 44, after a question has been answered, any member may put a supplementary question for the purpose of further eliciting any matter which is relevant to the subject matter.

MR. SPEAKER.—I have already given my ruling. There is no point of order.

† SRI D. M. SIDDIAH (Beligere).—My point of order is regarding the procedure to be followed in this August House for putting supplementaries. As you are aware Sir, my question related to Gandhi Smarak Nidhi; it was a very important question. I put one supplementary question but my main supplementary remained to be put. Whereas Sri Srikantiah when he wanted to put a supplementary, you were pleased to ask him not to put. Immediately, half-a-dozen friends got up on the other side including the Leader of the Opposition and pleaded that the question may be permitted, Sri Srikantiah was allowed by the Chair. Because half-a-dozen members got up, you yielded and allowed Mr. Srikantiah to put the supplementary. But he refused to put the question and he walked out. Whenever supplementaries are put, it is understood that the supplementaries should be within the purview of the main question. My question regarding Gandhi Smaraka Nidhi because no less a person than Sri K. V. Puttappa made a statement that the spending of funds of Gandhi Smarak Nidhi have been a colossal waste. He wanted that all the funds to be diverted to provide drinking water wells in rural areas. Therefore I wanted to ask a supplementary in this connection and I was not allowed by the Speaker, whereas Mr. Srikantiah was allowed because the Hon. Leader of the Opposition and half-a-dozen members on the other side got up and pleaded their case. I want to know whether the Speaker wants that the Leader of the House, the Chief Minister, should also similarly get up and plead for me in the same way as the Leader of the Opposition, Sri Sivappa did for Mr. Srikantiah? I wanted to know the procedure for putting the supplementary.

MR. SPEAKER.—There is no point of order. The point raised by the hon. Member Sri D. M. Siddiah has no force in it. I have already said here that in order to see that questions are answered orally on the floor of the House, I would be allowing one or two supplementaries to the Member putting the question and one or two to others, and if it is a question of a local nature, only the member putting the question will be allowed to put supplementaries. That is the position. Accordingly, I conceded two supplementaries to the hon. Member Sri D. M. Siddiah. Further when a question is sufficiently discussed, it is not necessary that every Member should be permitted to put supplementaries. It is not possible for every member to put supplementaries for want of time. Therefore, it is within the discretion of the Chair and the Chair is guided by the exigencies of the time in regulating the supplementar es. The matter is left to the discretion of the Chair. I do not think there is any force in what the hon. Member said.

Inadequate transport facilities to the Members of Legislature

† Sri AZEEZ SAIT (Narasimharaja).—I would like to bring to the notice of the Chair that Sri Y. S. Patil, hon. Member of the Council took ill yesterday night and when a car was needed to take him to the hospital, no car was available for 2½ hours. He had to be admitted to hospital in Mr. Bangarappa's car and probably he is undergoing some operation. Similarly, when Mr. Chandrakant's wife had to be taken to hospital, from the General Hostel, we phoned to the Legislators' Home, no action was taken. The doctor was not prepared to come without the car.

Ultimately he came and gave injection. If this is the way the members of the legislature are to be treated, I do not know what to say. Why not you say that the members should make their own arrangements ? At least that would be better. Why should the members be treated as orphans ? Is it not a disgrace ? Everything is spent and everything is looked after in the case of Ministers, Chairman and Speaker. Do you mean to say that the Government is meant only for Ministers ? Each member of the legislature must be taken care of. None of the officers care to look after the members. Even the charges for the taxis in the Legislators' Home are more than what are paid for ordinary taxis. I want you to take proper care and look to the convenience of the members especially sick members.

Mr. SPEAKER.—I shall look into it.

ಶ್ರೀ ಎಸ್. ಬಂಗಾರಪ್ಪ—ನಿನ್ನೆ ಶ್ರೀ ವೈ. ಎಸ್. ಪಾಟೀಲರು ಸುಮಾರು 3 ಗಂಟೆ ಕಾಲ ಅತೀವ ಹೊಟ್ಟೆ ನೋವಿನಿಂದ ತೊಂದರೆಪಟ್ಟರು. ನಾನು ಅವರನ್ನು ಕರೆದುಕೊಂಡು ಹೋಗಿ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದೆ. ರಾತ್ರಿ ಸುಮಾರು 10 ಗಂಟೆಗೆ ಆಸ್ಪತ್ರೆಗೆ ಅವರನ್ನು ಸೇರಿಸಿದೆ. ಕಾರಿಗಾಗಿ ಫೋನು ಮಾಡಿದರೆ ಅದನ್ನು ಯಾರೂ ರಿಸೀವ್ ಮಾಡಲಿಲ್ಲ. ಒಂದು ಕಾರೂ ಕೂಡ ಇರಲಿಲ್ಲ. ಅಧ್ಯಕ್ಷರು ಸದಸ್ಯರು ಇಳಿದುಕೊಳ್ಳುವ ವಸತಿಗೃಹಗಳ ಬಳಿ ಕಾರಿಗೆ ಅರೇಂಜ್‌ಮೆಂಟ್ ಸರಿಯಾಗಿ ಮಾಡದಿದ್ದರೆ ಕಾಯಿಲೆ ಯಾರಿಗಾದರೂ ಬಂದರೆ ಏನು ಮಾಡಬೇಕು ? ಆರೋಗ್ಯವಾಗಿದ್ದರೆ ಪರವಾಗಿಲ್ಲ. ಅಸೆಂಬ್ಲಿ ಇನ್ನೂ ನಡೆಯುತ್ತಿತ್ತು. ಆದರೂ ಕೂಡ ಯಾರೂ ಫೋನ್ ರಿಸೀವ್ ಮಾಡಲಿಲ್ಲ. ನನ್ನ ಕಾರು ಸರಿಯಾಗಿರಲಿಲ್ಲ. ಅಲ್ಲಿ ಒಂದು ಟ್ಯಾಕ್ಸಿ ಕೂಡ ಸಿಕ್ಕುವುದಿಲ್ಲ. ಆಮೇಲೆ ನನ್ನ ಕಾರು ರಿಪೇರಿಯಾದಮೇಲೆ ಅದರಲ್ಲಿ ಅವರನ್ನು ಕರೆದುಕೊಂಡುಹೋಗಿ ವಿಕ್ಟೋರಿಯ ಆಸ್ಪತ್ರೆಗೆ ಸೇರಿಸಿದೆ. ಅಧ್ಯಕ್ಷರು ಇದುವರೆಗೆ ನೋಡಿಲ್ಲ, ತಮಗೆ ನೋಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ಈಗಲಾದರೂ ನೋಡಬೇಕೆಂದು ಹೇಳುತ್ತೇನೆ.

Sri AZEEZ SAIT.—Did you go and see the patient ? You have got 7 or 8 cars at your disposal ?

Mr. SPEAKER.—I wish to bring to the notice of the House that I take special care of all the hon. Members. I pay a visit to hospitals and request the medical officers to pay personal attention, whenever I receive information. In this case also, of course, I will follow the same practice.

Sri D. B. KALMANKAR.—There are six or eight cars in the Ligislators' Home but not a single car in the General Hostel.

Mr. SPEAKER.—I shall find out.

Statement of the Chief Minister *Re*: Communal Disturbance in Hubli City.

† Sri VEERENDRA PATIL.—I may be permitted to make a further statement on the communal disturbances in Hubli City.

On 10th March 1969 I have already made a statement relating to the regrettable clash that occurred in Hubli City on the afternoon of Saturday, the 8th March 1969 between the two communities. I had also indicated that a preliminary investigation disclosed that properties worth about Rs. 80,000 have been destroyed. Government have given anxious thought in regard to the relief that should be afforded to the victims. Government have now sanctioned a grant of Rs. 40,000 as relief to the victims of the communal disturbances. In addition, a sum of Rs. 40,000 is being placed at the disposal of the Deputy Commissioner, Dharwar, for granting interest-free loans to the sufferers. Instructions are being issued to the Deputy Commissioner that the quantum of relief and loan should be determined keeping in view the financial condition of each person or family and the actual damage suffered, after making a complete assessment in consultation with the concerned authorities.

Calling Attention to a matter of Urgent Public Importance *Re*: low water levy at Bhutanal tank in Bijapur.

Sri S. S. ARAKERE (Belloli).—I beg to call the attention of the Minister of State for Municipal Administration to the situation that has arisen due to low water level at Bhutanal Tank in Bijapur.

† Sri B. M. PATIL (Minister of State for Municipal Administration).—The present water level in the tank is at R. L. 1840 (as on 1st March 1969). The present bed level in the tank is at R. L. 1830. So the depth of water in the tank is 10' and the available storage of water is 86 M. Cft. Taking into consideration the evaporation losses and the daily consumption of water from Bhutnal tank to Bijapur City at the rate of 6.25 lakh gallons per day; the present storage will last for a period of 6 months, *i.e.*, up to the end of August 1969, by which time showers are expected and the tank will get replenished.

Besides, emergency measures that were taken up during the last summer, mainly pumping water from the local wells for non-domestic use are still being continued. As such there is no anxiety in respect of water supply to Bijapur City, as apprehended.

However, to solve the problem of recurring scarcity of water supply to Bijapur City, permanently, comprehensive water supply scheme from Krishna River as source at an estimated cost of Rs. 123.00 lakhs is being taken up expeditiously for execution.

ಶ್ರೀ ಎಸ್. ಎಸ್. ಅರಕೇರಿ.—ನೀರು 6 ತಿಂಗಳವರೆಗೂ ಆಗುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ವಸ್ತುತಃ ಬಿಜಾಪುರ ಸಿಟಿಯಲ್ಲಿ ಅರ್ಧ ತಾಸು ಮಾತ್ರ ನೀರು ಕೊಡುತ್ತಾ ಇದ್ದಾರೆ, ಬಾವಿಗಳು ಬೇಸಿಗೆಯಲ್ಲಿ ಒಣಗಿಹೋಗುತ್ತಾ ಇವೆ, ಆದ್ದರಿಂದ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಕೃಷ್ಣಾ ಯೋಜನೆ ಬರುವುದು ಇನ್ನೂ 6 ವರ್ಷ ಆಗುತ್ತದೆ. ಬಿಜಾಪುರ ಸಿಟಿ ಹತ್ತಿರ ಒಂದು ನೀರಿನ ವ್ಯವಸ್ಥೆ ಮಾಡಬೇಕೆಂದು ಇದ್ದಿರಿ, ಅದರ ವ್ಯವಸ್ಥೆ ಏನಾಯಿತು ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ನನ್ನ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದೇನೆ. ಮಾನ್ಯ ಸದಸ್ಯರು ಏನು ತಿಳಿದುಕೊಂಡಿದ್ದಾರೆ ಆ ರೀತಿ ತೀವ್ರತೆ ಅಲ್ಲಿ ಇಲ್ಲ, ಅಂತಹ ತೀವ್ರತೆ ಕಂಡುಬಂದಲ್ಲಿ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

Collection of Arrears of Land Revenue

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗುಳ).—ಮುಖ್ಯಮಂತ್ರಿಗಳು ಈ ಬೇಡಿಕೆಗಳನ್ನು ಮಂಡನೆ ಮಾಡುವುದಕ್ಕೆ ಮುಂಚೆ ತಮ್ಮ ಮುಖೇನ ಸರ್ಕಾರದವರಲ್ಲಿ ನಿವೇದನೆ ಮಾಡಿಕೊಳ್ಳುವುದೇನೆಂದರೆ, ರೆವೆನ್ಯೂ ಡಿಮ್ಯಾಂಡ್ ಬಂದ ದಿನ ಮೈಸೂರು ಸಂಸ್ಥಾನದಲ್ಲಿ ಅನೇಕ ರೈತ ಸಂಸಾರಗಳು 4 ವರ್ಷಗಳ ಕಂದಾಯವನ್ನು ಒಂದೇ ಸಾರಿ ಕೊಡಬೇಕೆಂದು ಮುಖ್ಯ ಮುಂತ್ರಿಗಳ ಅಜ್ಞೆ ಮೇರೆಗೆ ಇವತ್ತು ಕಂದಾಯ ವಸೂಲು ಮಾಡತಕ್ಕ ಬಲಾತ್ಕಾರದ ಪದ್ಧತಿಯಿಂದಾಗಿ ಸಹಿಸಲಾರದಷ್ಟು ಕಷ್ಟವನ್ನು ಅನುಭವಿಸುತ್ತಾ ಇದ್ದಾರೆ ಆದ್ದರಿಂದ ಏನು ರಿಯಾಯಿತಿ ಕೊಟ್ಟಿದೆ ಎಂಬ ಬಗ್ಗೆ ಸಭೆಯ ಮುಖಾಂತರ ದೇಶದ ರೈತರಿಗೆ ತಿಳುವಳಿಕೆ ಕೊಡಬೇಕೆಂದು ಅವತ್ತು ಒತ್ತಾಯ ಮಾಡಿದೆವು.

ಅವತ್ತು ರೆವಿನ್ಯೂ ಸಚಿವರೂ ಇರಲಿಲ್ಲ ಮತ್ತು ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿದ್ದರು. ಇವತ್ತಾದರೂ ಕೂಡ ಈ ಕಂದಾಯದ ನೀತಿಯ ಬಗ್ಗೆ ಸರ್ಕಾರ ತನ್ನ ನಿಲುವು ಏನು ಎಂಬುದನ್ನು ಹೇಳಬೇಕಾಗಿದೆ. ಈ ಶಾಸನ ಸಭೆಯ ಕಳೆದ ಅಧಿವೇಶನದಲ್ಲಿ ಮಾನ್ಯ ರೆವಿನ್ಯೂ ಸಚಿವರು ಹಳೇ ಕಂದಾಯ ವಸೂಲು ಮಾಡುತ್ತೇವೆ ಎಂದು ಹೇಳಿದ್ದರು. ಸರ್ಕಾರ ಅದನ್ನು ಬದಿಗೆ ಇಟ್ಟು ಹೊಸ ದರದಲ್ಲೇ ಕಂದಾಯವನ್ನು ಕೊಡಬೇಕೆಂದು ಬಲಾತ್ಕಾರ ಮಾಡಿ 4 ವರ್ಷಗಳ ಕಂದಾಯವನ್ನು ಒಂದೇ ಸಾರಿ ಕೊಡಬೇಕೆಂದು ಒತ್ತಾಯ ಮಾಡುತ್ತಾ ಇದ್ದಾರೆ. ಮಳೆ ಬೆಳೆಗಳು ಹೋಗಿವೆ, ಇಂತಹ ಸಮಯದಲ್ಲಿ ದೇಶದ ಮೂಲೆ ಮೂಲೆಗಳಿಂದ ಸಹಸ್ರಾರು ಜನ ರೈತರು ಪತ್ರ ಬರೆದಿದ್ದಾರೆ ಕಳವಳಗೊಂಡಿದ್ದಾರೆ. ಇಂತಹ ಪರಿಸ್ಥಿತಿ ಇರುವಾಗ ಈ ಒಂದು ರಿಯಾಯಿತಿ ಏನಿದೆ, ರೈತರು ಯಾವ ಕಂದಾಯ ಕೊಡಬೇಕೆಂಬ ಬಗ್ಗೆ ಮತ್ತು ಸರ್ಕಾರದ ನಿಲುವು ಏನು ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸಬೇಕು ಇಲ್ಲದೇ ಹೋದರೆ ನಮ್ಮನ್ನು ಕೇಳತಕ್ಕ ರೈತರಿಗೆ ನಾವು ಏನೂ ಉತ್ತರ ಹೇಳಬೇಕೆಂಬುದು ನಮಗೆ ಗೊತ್ತಾಗುತ್ತಾ ಇಲ್ಲ. ಅವರ ಕಷ್ಟ ಏನಿದೆ ಎಂಬುದನ್ನು ತಿಳಿಸಿದ್ದಾರೆ. ಅದು ದೇಶಾದ್ಯಂತವೂ ವ್ಯಾಪಕವಾಗಿದೆ. ಆದ್ದರಿಂದ ಅವರು ಈ ಸಭೆಗೆ ಒಂದು ಹೇಳಿಕೆ ಕೊಡುವುದರ ಮೂಲಕ ಜನತೆಗೆ ಒಂದು ಭರವಸೆ ಕೊಡಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

2-30 P.M.

ಅಧ್ಯಕ್ಷರು.—ಆ ಡಿಮ್ಯಾಂಡ್ ಶನಿವಾರ ಇದೆ. ಆ ದಿವಸ ಇದನ್ನು ಚರ್ಚೆಗೆ ಇಟ್ಟುಕೊಳ್ಳಬಹುದು. ಆದರೆ ಮಂತ್ರಿಗಳು ಉತ್ತರ ಕೊಡುವುದಾದರೆ ಅದರ ಬಗ್ಗೆ ನನ್ನ ಆಕ್ಷೇಪಣೆಯಿಲ್ಲ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಮುಖ್ಯ ಮಂತ್ರಿಗಳು ಇದಕ್ಕೆ ಉತ್ತರ ಕೊಡುವುದಕ್ಕೆ ಮುನ್ನ ನಾನು ಒಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ಸರ್ಕಾರದವರು ಇಲ್ಲಿ ಏನೊಂದು ಭರವಸೆಯನ್ನು ಕೊಡುತ್ತಾರೋ ಅದನ್ನು ಅವರು ಉಳಿಸಿಕೊಳ್ಳಬೇಕು. ಹಾಗೆ ಮಾಡದೆ ಇಲ್ಲಿ ಒಂದು ಹೇಳಿಕೆ ಕೊಟ್ಟಮೇಲೂ ಅನೇಕ ಸುತ್ತೋಲೆಗಳನ್ನು ಕಳುಹಿಸಿ ಕಂದಾಯವನ್ನು ವಸೂಲ್ಮಾಡುವುದಕ್ಕೆ ಒತ್ತಾಯ ಮಾಡುತ್ತಾರೆ. ಆದ್ದರಿಂದ ಇದರ ಬಗ್ಗೆ ಒಂದು ನಿರ್ದಿಷ್ಟವಾದ ಕಾರ್ಯವನ್ನು ಕೈಗೊಳ್ಳತಕ್ಕ ನಿಲುವನ್ನು ಅವರು ವ್ಯಕ್ತಪಡಿಸಬೇಕು.

ಅಧ್ಯಕ್ಷರು.—ತಮಗೆ ನಾನೊಂದು ವಿಚಾರ ತಿಳಿಸಬೇಕಾಗಿದೆ. ಇಲ್ಲಿ ಒಂದು ಪಾರ್ಲಿಯಮೆಂಟರಿ ಕನ್‌ವೆನ್‌ಷನ್ ಏನಿದೆಯೆಂದರೆ ತಮ್ಮ ಪಕ್ಷದ ಲೀಡರ್ ಯಾರಿದ್ದಾರೆ ಅವರು ಮಾತನಾಡಿದ ಮೇಲೆ ಬೇರೆ ಆ ಪಕ್ಷದ ಸದಸ್ಯರು ಮಾತನಾಡಬಾರದು. ಹಾಗೆ ಮಾತನಾಡಿದರೆ ಆ ಸದಸ್ಯರಿಗೆ ಅವರ ಲೀಡರ್‌ಮೇಲೆ ವಿಶ್ವಾಸವಿಲ್ಲ ಅಂತ ಕಾಣುತ್ತದೆ ಎಂಬುದನ್ನು ವ್ಯಕ್ತಪಡಿಸಿದಂತಾಗುತ್ತದೆ...

Sri M. NAGAPPA (Raichur).—I request the Hon'ble Chair not to pass such remarks. We are not differing with the statement made by our Hon'ble Leader. I am sorry that such remarks are passed.

† ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸ್ವಾಮಿ, ನನ್ನದು ಒಂದು ಪಾಯಿಂಟ್ ಆಫ್ ಆರ್ಡರಿದೆ. ಅದು ಏನೆಂದರೆ: ಈಗತಾನೆ ಮಾನ್ಯ ಅಧ್ಯಕ್ಷರು ನಮ್ಮ ವಿರೋಧ ಪಕ್ಷದ ಧುರೀಣರ ಬಗ್ಗೆ ವಿರೋಧಪಕ್ಷದ ಸದಸ್ಯರಿಗೆ ವಿಶ್ವಾಸವಿಲ್ಲ ಎಂದು ಹೇಳಿದ ಮಾತು ಯಾವ ನೇಮ ನಿಬಂಧನೆಗಳಿಗೂ ಸಂಬಂಧಪಡದೆ ಇರುವಂಥ ಮಾತು. ಹಾಗೆ ನಮ್ಮ ವಿರೋಧ ಪಕ್ಷದ ನಾಯಕರ ಬಗ್ಗೆ ನಮಗೆ ವಿಶ್ವಾಸವಿಲ್ಲದೆ ಹೋಗಿದ್ದ ಪಕ್ಷಕ್ಕೆ ಅವರು ವಿರೋಧ ಪಕ್ಷದ ನಾಯಕರಾಗಿ ಉಳಿಯುವುದಕ್ಕೆ ಅವಕಾಶವಿರಲಿಲ್ಲ. ವಿರೋಧಪಕ್ಷದವರಾದ ನಾವು ಈ ದಿವಸ ನಮ್ಮ ನಾಯಕರ ಬಗ್ಗೆ ಯಾವರೀತಿ ವಿಶ್ವಾಸದಿಂದ ನಡೆದುಕೊಳ್ಳಬೇಕು ಏಂಬುವುದನ್ನು ಈ ಸಭೆಯ ಅಧ್ಯಕ್ಷರಿಂದಲಾಗಲಿ ಅಥವಾ ಕಾಂಗ್ರೆಸ್ ಪಕ್ಷದ ಸದಸ್ಯರಿಂದಲಾಗಲೀ ನಾವು ಒಂದು ಪಾಠವನ್ನು ಕಲಿಯಬೇಕಾಗಿಲ್ಲ. ನಮ್ಮ ನಾಯಕರ ಬಗ್ಗೆ ನಮಗೆ ಅಖಂಡ ವಿಶ್ವಾಸವಿದೆ. ಇಲ್ಲಿ ನಡೆಯುತ್ತಿರುವ ಅನೇಕ ಕಾರ್ಯಕಲಾಪಗಳಲ್ಲಿ ಸಾಮಾನ್ಯವಾಗಿ ನಮ್ಮ ಧುರೀಣರೇ ಮಾತನಾಡುತ್ತಿದ್ದಾಗ್ಯೂ ಒಮ್ಮೊಮ್ಮೆ ಇಲ್ಲಿ ಅನೇಕ ಪಕ್ಷಗಳು ಕೆಲಸ ಮಾಡುತ್ತಿರುವುದರಿಂದ ಪ್ರತಿಯೊಂದು ಸಂದರ್ಭದಲ್ಲಿ ಇತ್ತ ವಿರೋಧಪಕ್ಷದ ಸದಸ್ಯರು ಮಾತನಾಡತಕ್ಕ ಎಲ್ಲಾ ಸಂದರ್ಭಗಳಲ್ಲೂ ಅವರು ವಿರೋಧಪಕ್ಷದ ನಾಯಕರೇನು ಮಾತನಾಡಿದ್ದಾರೆ ಎಂಬುದನ್ನೇ ಅವಲಂಬಿಸಿ ಅದನ್ನೇ ಅನುಸರಿಸಿ ಮಾತನಾಡಬೇಕೆಂದರೆ ಅದು ಸಾಧ್ಯವಿಲ್ಲ. ಇಲ್ಲಿ ಚರ್ಚೆಯಾಗತಕ್ಕ ಪ್ರತಿಯೊಂದು ವಿಷಯದ ಮೇಲೂ ಮಾತನಾಡಲು ಎಲ್ಲಾ ಸದಸ್ಯರಿಗೂ ಹಕ್ಕಿದೆ. ಆದರೆ ಇಂಥ ಒಂದೊಂದು ಸಂದರ್ಭವನ್ನು ಕಾದುಕೊಂಡಿದ್ದು ನಾವು ಇಲ್ಲಿ ವೈಯಕ್ತಿಕವಾಗಿ ಮಾತನಾಡಿದಾಗ ಅದನ್ನು ಪಕ್ಷಕ್ಕೆ ತಾಳೆಹಾಕಿ ನಮ್ಮನಮ್ಮಲ್ಲಿರುವ ಐಕ್ಯಮತ್ಯಕ್ಕೆ ಧಕ್ಕೆಯುಂಟುಮಾಡತಕ್ಕ ರೀತಿಯಲ್ಲಿ ಮಾತನಾಡಿದ್ದಾರೆ. ಹಾಗೆ ಅಧ್ಯಕ್ಷರು ಮಾತನಾಡಿರತಕ್ಕದ್ದು ಸರಿಯಾದ್ದಲ್ಲ. ಅದನ್ನು ಅಧಿಕೃತ ವರದಿಯಿಂದ ಎಕ್ಸ್‌ಪಂಜ್ ಮಾಡಬೇಕು ಎಂದು ಹೇಳುತ್ತೇನೆ. ಇದೇ ನನ್ನ ಪಾಯಿಂಟಾಫ್ ಆರ್ಡರ್.

ಅಧ್ಯಕ್ಷರು.—The point is ಪಾರ್ಟಿ ಲೀಡರ್ ಮಾತನಾಡಿದನಂತರ ಪಾರ್ಲಿಮೆಂಟರಿ ಕನ್‌ವೆನ್‌ಷನ್ ಏನು ಹೇಳುತ್ತದೆ ಎಂದರೆ ಉಳಿಕೆಯವರು ಅದೇ ವಿಷಯದಲ್ಲಿ ಮಾತನಾಡಿದರೆ ಅದು ಅವರಲ್ಲಿ ವಿಶ್ವಾಸವಿಲ್ಲವೆಂದು ತೋರಿಸಿದಂತಾಗುತ್ತದೆ ಎಂದು ಹೇಳಿದೆ ....

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗತಾನೆ ಅಧ್ಯಕ್ಷರು ಹೇಳಿದ ಮಾತು ವಿರೋಧ ಪಕ್ಷದವರಿಗೆ ಅದು ವಿರುದ್ಧವಾಗಿದೆ. ವಿರೋಧಪಕ್ಷದ ಸದಸ್ಯರಿಗೆ ಅವರ ನಾಯಕರಲ್ಲಿ ಗೌರವವಿಲ್ಲ ವಿಶ್ವಾಸವಿಲ್ಲ ಅನ್ನುವುದನ್ನು ತೋರಿಸಿದಂತಾಗುತ್ತದೆಂದು ಹೇಳಿದ್ದಾರೆ. ಈ ದಿವಸ ಎದುರು ಪಕ್ಷದಲ್ಲಿ ಅನೇಕ ಉಪಪಕ್ಷಗಳು ಇರುತ್ತವೆಂಬುದು ಎಲ್ಲರಿಗೂ ಗೊತ್ತಿದೆ. ಆ ನಾನಾ ಪಕ್ಷಗಳವರು ಇಲ್ಲಿ ನಡೆಯತಕ್ಕ ಚರ್ಚೆಯ ಬಗ್ಗೆ ಅವರವರಿಗೆ ತಿಳಿದಿದ್ದನ್ನು ಅವರು ಹೇಳುವ ಹಕ್ಕು ಎಲ್ಲಾ ಸದಸ್ಯರಿಗೂ ಇದೆ. ಇಲ್ಲಿ ನಡೆಯತಕ್ಕ ಪ್ರತಿಯೊಂದು ವಿಷಯವನ್ನೂ ಎದುರು ಪಕ್ಷದ ನಾಯಕರೇ ತಿಳಿಸಬೇಕು ಅಂದರೆ ಅದೂ ಸಾಧ್ಯವಾಗುವುದಿಲ್ಲ. ಒಂದುವೇಳೆ ನಾಯಕರು ಹೇಳಿರತಕ್ಕ ವಿಷಯವನ್ನೇ ಮತ್ತಷ್ಟು ಸ್ಪಷ್ಟಪಡಿಸಿ ಮಾತನಾಡತಕ್ಕ ಸಂದರ್ಭ ಬಂದಾಗ ಬೇರೆ ಸದಸ್ಯರೂ ಮಾತನಾಡಲೇಬೇಕಾಗುತ್ತದೆ. ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ಹೇಳುವುದಕ್ಕೆ ಸ್ವಾತಂತ್ರ್ಯವಿದ್ದರೂ ಅವರನ್ನು ಕೂತುಕೊಳ್ಳಿ ಎಂದು ಪ್ರತ್ಯಕ್ಷವಾಗಿ ಹೇಳುವುದು ಸರಿಯಲ್ಲ. ಸದಸ್ಯರಲ್ಲಿಯೇ ಭಿನ್ನಾಭಿಪ್ರಾಯ ಮೂಡಿಸುವುದಕ್ಕೆ ತಾವೇ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಇಂತಹ ಮಾತನ್ನು ತಾವು ಹೇಳುವುದು ಅಪರಾಧ, ಅಪ್ರಕೃತವೆಂದು ನಾನು ಹೇಳುತ್ತೇನೆ. ಆದ್ದರಿಂದ ತಾವು ಹೇಳಿದುದನ್ನು ಎಕ್ಸ್‌ಪಂಜ್ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ವಿರೋಧಪಕ್ಷದ ಸದಸ್ಯರಲ್ಲಿ ತಾವು ಭಿನ್ನಾಭಿಪ್ರಾಯ ಹೆಚ್ಚಿಸಿ ಕೊಡುತ್ತಿದ್ದೀರಿ.

ಶ್ರೀ ಎಂ. ನಾಗಪ್ಪ.—ಇದರಿಂದ ತಾವೇ ಕ್ರಾಂತಿಪ್ರಚಾರ ಮಾಡಿದಂತಾಗುತ್ತದೆ.

ಶ್ರೀ ಎನ್. ಎ. ಚನ್ನೇಗೌಡ.—ನಾನಾದರೂ ಮಾನ್ಯ ಶ್ರೀ ಶಿವಪ್ಪನವರು ಹೇಳಿದ ಅಭಿಪ್ರಾಯಕ್ಕೆ ವಿರೋಧವಾಗಿ ಹೇಳಲಿಲ್ಲ. ಮಾನ್ಯ ಶ್ರೀ ಶಿವಪ್ಪನವರು ಮುಖ್ಯಮಂತ್ರಿಗಳು ಒಂದು ನಿರ್ದಿಷ್ಟ ನಿಲುವನ್ನು ಹೇಳಲಿ. ಆ ನಿಲುವನ್ನು ಕಾರ್ಯಗತವಮಾಡಲಿ, ಏಕೆಂದರೆ, ಹಿಂದೆ ಕೊಟ್ಟಂಥ ಭರವಸೆ ಕಾರ್ಯಗತಮಾಡಲಿಲ್ಲ, ಆದ್ದರಿಂದ ಅದನ್ನು ಕಾರ್ಯಗತಮಾಡಲಿ ಎಂದು ಹೇಳಿದೆ. ತಾವು ನನಗೆ ಪಾರ್ಲಿಮೆಂಟರಿ ಪ್ರ್ಯಾಕ್ಟೀಸನ್ನು ಕಲಿಸುವುದಕ್ಕೆ ಬಂದಿರಿ. ಸಂತೋಷ. ಸದಸ್ಯರಲ್ಲಿ ಭಿನ್ನಾಭಿಪ್ರಾಯಗಳನ್ನು ಮೂಡಿಸುವುದಕ್ಕೆ ತಾವು ಪ್ರಯತ್ನಪಟ್ಟಿರುವುದು ಉಚಿತವಲ್ಲವೆಂದು ವ್ಯಕ್ತಪಡಿಸುತ್ತೇನೆ. ಆದ್ದರಿಂದ ತಾವು ಹೇಳಿದ್ದನ್ನು ಪ್ರೊಸೀಡಿಂಗ್ಸ್‌ನಿಂದ ತೆಗೆದುಹಾಕಬೇಕು.

† ಶ್ರೀ ಅಜೀಜ್ ಸೇಟ್.—ಇದು ತುಂಬ ಕಾಂಟ್ರೊವರ್ಷಿಯಲ್ ಮತ್ತು ತುಂಬ ಮುಖ್ಯವಾದ ವಿಷಯ. ಇದು ವಿರೋಧಪಕ್ಷದ ನಾಯಕರಿಗೆ ಮತ್ತು ಒಂದು ಪಾರ್ಟಿಗೆ ಸಂಬಂಧಪಟ್ಟದ್ದು. ಈ ಸಭೆಯಲ್ಲಿ ಈಗ ಮಾಡಿರುವ ವ್ಯವಹಾರದ ಬಗ್ಗೆ ಈಗ ವರದಿಯಲ್ಲಿ ತಮ್ಮಿಂದ ಬಂದಿರುವ ಶಬ್ದಗಳನ್ನು ತೆಗೆಯುವವರೆಗೂ ನಾವು ಈ ಅಸೆಂಬ್ಲಿಯನ್ನು ನಡೆಸುವುದಕ್ಕೆ ಅವಕಾಶಕೊಡುವುದಿಲ್ಲ. ಈ ಮನೆಯಲ್ಲಿ ನಮ್ಮ ಪಕ್ಷ, ಪಿ. ಎಸ್. ಪಿ., ಎಸ್.ಎಸ್.ಪಿ. ಜನತಾಪಕ್ಷ ಎಲ್ಲರೂ ಕೂಡಿ ಒಬ್ಬ ಲೀಡರ್ ಎಂದು ಮಾಡಿದ್ದೇವೆ. ನಮಗೆಲ್ಲರಿಗೂ ಆ ಲೀಡರ್ ಮೇಲೆ ಸಂಪೂರ್ಣ ನಂಬಿಕೆ ಇದೆ. ಆದರೆ ತಾವು ಈಗ ನಮಗೂ ಅವರಿಗೂ ಒಂದು ಭಿನ್ನಾಭಿಪ್ರಾಯ ಹುಟ್ಟಿಸುವ ಹಾಗೆ ಡಿವೈಡ್ ಅಂಡ್ ರೂಲ್ ಅನುಸರಿಸಿ ತಮ್ಮ ಅಧ್ಯಕ್ಷಸ್ಥಾನದಲ್ಲಿ ಶಾಶ್ವತವಾಗಿ ಕೂತುಕೊಳ್ಳಬೇಕೆಂದು ಇದ್ದೀರಿ. ನೀವು ಹೇಳುವ ಪದಗಳನ್ನು ನಾವು ಯಾರೂ ಕೇಳುವುದಕ್ಕೆ ತಯಾರು ಇಲ್ಲ. ಆದ್ದರಿಂದ ಆ ಪದಗಳನ್ನು ಅಫಿಷಿಯಲ್ ರಿಕಾರ್ಡ್ಸ್‌ನಿಂದ ತೆಗೆದುಹಾಕಬೇಕು. ಇವತ್ತು ನನ್ನನ್ನು ಹೊರಗೆ ಹಾಕಿದರೂ ಅಷ್ಟೇ ನನಗೆ ಸಸ್ಪೆಂಡ್ ಆರ್ಡರ್ ಕೊಟ್ಟರೂ ಅಷ್ಟೇ. ನನ್ನ ಸದಸ್ಯತ್ವವನ್ನು ಕಿತ್ತುಹಾಕಿದರೂ ಅಷ್ಟೇ. ಇಲ್ಲಿ ಗಿವ್ ರೆಸ್‌ಪೆಕ್ಟ್ ಅಂಡ್ ಟೇಕ್ ರೆಸ್‌ಪೆಕ್ಟ್ ಬೇಕು. ಎಲ್ಲಿಯವರೆಗೆ ನಮಗೆ ಮರ್ಯಾದೆ ಕೊಡುವುದಿಲ್ಲ ಅಲ್ಲಿಯವರೆಗೂ ಒಳ್ಳೆಯದು ಆಗುವುದಿಲ್ಲ. ಬರೀ ಆ ಕುರ್ಚಿನಲ್ಲಿ ಕೂತಿದ್ದೇನೆಂದು, ಅವರ ರಕ್ಷಣೆ ಇದೆಯೆಂದು ನೀವು ನಿಮ್ಮ ಮನಬಂದ ರೀತಿಯಲ್ಲಿ ಈ ಕಡೆಯ ಸದಸ್ಯರನ್ನು ನೋಡಿಕೊಳ್ಳುವುದಾದರೆ, ನಾನು ನನ್ನ ಪ್ರಾಣಹೋದರೂ ಸರಿಯೇ, ಇಲ್ಲಿಯೇ ನಮ್ಮ ವಿರೋಧ ಪಕ್ಷದ ಸದಸ್ಯರು ಹಾಗೂ ನಾಯಕರು ಕೂತಿರುವವರೆಗೆ ಒಂದು ಪ್ರದರ್ಶನಮಾಡಿ ತೋರಿಸುತ್ತೇನೆ. ತಾವು ಒಂದು ರೀತಿಯಾಗಿ ವಿರೋಧಪಕ್ಷದವರನ್ನು ನೋಡುತ್ತಿದ್ದೀರಿ. ನೀವು ಹೇಳಿದ್ದನ್ನು ಅಫಿಷಿಯಲ್ ರಿಕಾರ್ಡ್ಸ್‌ನಿಂದ ತೆಗೆಸಿಹಾಕಬೇಕು. ಅವು ಪೂರ್ತಿಯಾಗಿ ಎಕ್ಸ್‌ಪಂಜ್ ಆಗಲೇಬೇಕು. ನೀವು ಹೇಳಿದುದಕ್ಕೆ ವಿಷಾದವನ್ನು ಸೂಚಿಸಲೇಬೇಕು ಆಗ ನಮಗೆ ಸಮಾಧಾನವಾಗುತ್ತದೆ. ನನ್ನ ಸಲಹೆ ಏನೆಂದರೆ, ಇನ್ನೊಂದು ಸಾರಿ ವಿರೋಧಪಕ್ಷದವರ ವಿಚಾರದಲ್ಲಿ ತಾವು ಕೈಹಾಕುವುದಕ್ಕೆ ಪ್ರಯತ್ನಪಡಬೇಡಿ. ಇದರಿಂದೇನೂ ಒಳ್ಳೆಯದಾಗುವುದಿಲ್ಲ. ನೀವು ವಿಷಾದ ಸೂಚಿಸದಿದ್ದರೆ ಮಾನ್ಯ ಶ್ರೀ ಶಿವಪ್ಪನವರಿಂದ ಹಿಡಿದು ಮಾನ್ಯ ಶ್ರೀ ಚನ್ನಬಸಪ್ಪನವರು ಶ್ರೀ ಕದಂ ಅವರು, ಮೊದಲ್ಗೊಂಡು ಎಲ್ಲರೂ ಆಚೆ ಹೋಗುತ್ತೇವೆ. The literal meaning of Speaker is that he who speaks much but the definition of Speaker here is one who speaks less. ನಿಮ್ಮ ಮೇಲೆ ಅಲ್ಲಿ ಒಂದು ತಕ್ಕಡಿ ಇದೆ ನೋಡಿ ; ಅದರಂತೆ ಇರಬೇಕು. ಅದರಿಂದ ನಿಮಗೂ ಗೌರವ ಬರುತ್ತದೆ, ನಮಗೂ ಗೌರವ ಬರುತ್ತದೆ.

†ಶ್ರೀ ಎಚ್. ಎನ್. ನಂಜೇಗೌಡ.—ತಾವು, ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡಿದನಂತರ ಬೇರೆ ಸದಸ್ಯರು ಮಾತನಾಡಿದ ಬಗ್ಗೆ, ವಿರೋಧಪಕ್ಷದ ನಾಯಕರಲ್ಲಿ ನಿಮಗೆ ನಂಬಿಕೆ ಇಲ್ಲ ಎಂಬ ಅಭಿಪ್ರಾಯವನ್ನು ನಿಜವಾಗಿಯೂ ನೀವು ತಮ್ಮ ಆತ್ಮ ಸಾಕ್ಷಿಗೆ ವಿರುದ್ಧವಾಗಿ ಹೇಳಿದ್ದೀರಿ ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ.

Mr. SPEAKER.—I never meant anything like that.

ಶ್ರೀ ಎಚ್. ಎನ್. ನಂಜೇಗೌಡ.—ಈ ಸಭೆಯಲ್ಲಿ ನನಗೆ ಅನುಭವ ಕಡಿಮೆ. ಇವತ್ತು ಟ್ರೆಜರಿ ಬೆಂಚಿನಲ್ಲಿರತಕ್ಕವರು ಏನು ಬೇಕಾದರೂ, ಯಾವಾಗಬೇಕಾದರೂ, ಹೇಳಿ, ಪುನಃ ಅದಕ್ಕೆ ತದ್ವಿರುದ್ಧವಾಗಿ ಹೇಳಿಕೆ ಕೊಡಬಹುದೆಂಬುದು ಮಾಮೂಲಿಯಾಗಿ ಹೋಯಿತು. ಈ ಸಭೆಯಲ್ಲಿ ಮಂತ್ರಿಯವರು ಏನಾದರೂ ಹೇಳಿಕೆ ಕೊಟ್ಟರೆ, ಅದೆಲ್ಲಾ ಪತ್ರಿಕೆಯಲ್ಲಿ ಬರುತ್ತದೆ. ಅದನ್ನು ನೋಡಿಕೊಂಡು ಜನರು ನಮ್ಮನ್ನು ಕೇಳುತ್ತಿದ್ದಾರೆ. ಕೆಲವು ಸಲ ನಮಗೆ ಅರ್ಥವಾಗದಷ್ಟು ಹದಗೆಟ್ಟು ಇಲ್ಲ ನಡೆಯುತ್ತಿದೆ. ಇವತ್ತು ಶಿವಪ್ಪನವರು ನಾಯಕರಾಗಿ ಇರುವುದರಿಂದ ತಾವು ಶಾಂತವಾಗಿ ಇರುತ್ತೀರಿ, ಈ ಸಭೆಯೂ ಶಾಂತವಾಗಿ ನಡೆಯುತ್ತಿದೆ. ಇನ್ನು ಶಿವಪ್ಪನವರಿಗಿಂತ ಕಠೋರವಾಗಿ ಇರುವ ವ್ಯಕ್ತಿ ಯಾರಾದರೂ ಆ ಸ್ಥಾನದಲ್ಲಿ ಇರುತ್ತಿದ್ದರೆ, ಇವತ್ತು ಏನೊ

ಜನರು ಮನೆಗೆ ಹೋಗಬೇಕಾಗಿತ್ತು ಮತ್ತು ಟ್ರೆಜರಿ ಬೆಂಚಿನಲ್ಲಿರುವವರಂತೂ ಮೈಕ್ರೋ ಕ್ಯಾಮರಾ ನೋಡಬೇಕಾಗಿತ್ತು. ಇದನ್ನು ದೇಶದ ಜನರು ಅರ್ಥ ಮಾಡಿಕೊಂಡಿದ್ದಾರೆ, ತಾವೂ ಅರ್ಥ ಮಾಡಿಕೊಂಡಿದ್ದೀರಿ, ಎಲ್ಲರೂ ಅರ್ಥ ಮಾಡಿಕೊಂಡಿದ್ದಾರೆ. ಅಂಥವರಲ್ಲಿ ಅವಿಶ್ವಾಸ ಪಡತಕ್ಕ ಸಂದರ್ಭ ಬರುವುದಿಲ್ಲ. ನಿಮಗೆ ಏನೋ ಆತುರ, ಸಭೆಯ ಕಾರ್ಯಕಲಾಪಗಳು ಬೇಗನೇ ನಡೆಯಲಿ ಎಂದು ಇನ್ನೊಂದು ಆತುರ, ಮಂತ್ರಿಗಳನ್ನು ಏನಾದರೂ ಇಕ್ಕಟ್ಟಿಗೆ ಸಿಕ್ಕದೆ ಹಾಗೆ ನೋಡಿಕೊಳ್ಳುವುದು. ನೀವು ಮಂತ್ರಿಗಳನ್ನು ತರಾಟೆಗೆ ತೆಗೆದುಕೊಳ್ಳಬಹುದಿತ್ತು. ತಮಗೆ ಅದಕ್ಕೆ ಅವಕಾಶ ಇದೆ. ರಾಜ್ಯಾಂಗದಲ್ಲಿ, ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ, ಎಲ್ಲದರಲ್ಲೂ ನಿಮಗೆ ಆ ರೀತಿಯ ಅವಕಾಶ ಇದೆ. ಮಂತ್ರಿಯವರು ಈ ಸಭೆಗೆ ಜವಾಬ್ದಾರರಾದವರು. ಅವರು ಏನೇನು ಬೊಗಳಿ ಹೋಗುತ್ತಾರೆ, ಅದನ್ನು ನೋಡುತ್ತಾ ಹೋಗಬೇಕಾಗುತ್ತದೆ......

†ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಅಧ್ಯಕ್ಷರೇ, ನಾನು ಕೂತುಕೊಂಡು ಮಾನ್ಯ ನಂಜೇಗೌಡರು ಏನೇನು ಹೇಳುತ್ತಿದ್ದರು, ಅದನ್ನು ಕೇಳುತ್ತಿದ್ದೆ. ಅವರು ಆವೇಶದಲ್ಲಿ ಮಂತ್ರಿಗಳು ಏನೇನು ಬೊಗಳಿ ಹೊಗುತ್ತಾರೆಂದು ಹೇಳಿದ್ದಾರೆ, ಅದನ್ನು ತಾವು ರಿಕಾರ್ಡಿನಲ್ಲಿ ನೋಡಬಹುದು.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮುಖ್ಯಮಂತ್ರಿಯವರು ಹೇಳಿದಂತೆ ನಾನು ಆ ಪದ ಹೇಳಿದ್ದು ನಿಜ.

ಶ್ರೀ ವೀರೇಂದ್ರ ಪಾಟೀಲ್.—ಅದರಿಂದ ಬೊಗಳುವ ಕೆಲಸ ನಾಯಿಗಳದ್ದು. ಮನುಷ್ಯ ಬೊಗಳುವ ಹಾಗೆ ಇಲ್ಲ. ಮಂತ್ರಿಯವರು ಇಲ್ಲಿ ಬಂದಾಗ ಸ್ಟೇಟ್‌ಮೆಂಟ್ ಮಾಡುತ್ತಾರೆ. ಸ್ಟೇಟ್‌ಮೆಂಟ್ ಮಾಡಿದಾಗ ಏನಾದರೂ ತಪ್ಪು ಇದ್ದರೆ, ವಿರೋಧ ಪಕ್ಷದ ಸದಸ್ಯರು ಅದನ್ನು ಸ್ಪಷ್ಟೀಕರಣ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ಅದಕ್ಕಾಗಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಭೆಯಲ್ಲಿ ಪ್ರಯೋಗವಾಗುತ್ತಿರುವ ಕೆಲವು ಪದಗಳನ್ನು ಕೇಳುವಾಗ ಆ ಪದಗಳ ಅರ್ಥವನ್ನು ತಿಳಿದುಕೊಳ್ಳಲು ಬಹುಶಃ ಹೊಸದಾಗಿ ಒಂದು ಡಿಕ್ಷನರಿ ಇಟ್ಟುಕೊಳ್ಳುವ ಕಾಲ ಬಂದಿದೆ ಎಂದು ಅನಿಸುತ್ತದೆ. ಈಗ ಅಸೆಂಬ್ಲಿಯಲ್ಲಿ ಕೆಲವರು ಉಪಯೋಗ ಮಾಡತಕ್ಕ ಪದಗಳನ್ನು ನೋಡಿದರೆ, ಇದು ಯಾರಪ್ಪನ ಗಂಟು, ಮುತ್ತಾತ, ತಾತನ ಗಂಟು ಈ ರೀತಿಯಾದ ಪದಗಳನ್ನು ಉಪಯೋಗ ಮಾಡುತ್ತಾರೆ. ಇವು ಪಾರ್ಲಿಮೆಂಟರಿಯೇ ಹೇಗೆ ಎಂಬುದನ್ನು, ನಿರ್ಧರಿಸತಕ್ಕದ್ದು ಮತ್ತು ಯಾವರೀತಿ ಈ ಸಭೆಯಲ್ಲಿ ಮಾತನಾಡಬೇಕೆಂಬುದು ಮಾನ್ಯ ಅಧ್ಯಕ್ಷರಿಗೆ ಗೊತ್ತಿದೆ. ಅದಕ್ಕೋಸ್ಕರ ನಾನು ಹೇಳುವಂಥಾದ್ದು ಒಂದು ಡಿಕ್ಷನರಿಯನ್ನು ಇಟ್ಟುಕೊಂಡರೆ ಬಹಳ ಒಳ್ಳೆಯ ಪದಗಳು ಸಿಕ್ಕುತ್ತವೆ. ಅದಕ್ಕಾಗಿ ಏನು ಮಾತನಾಡಬೇಕಾದರೂ ಬಹಳ ತೂಕದಿಂದ, ತಮ್ಮ ಮನಸ್ಸಿನಲ್ಲಿ ಇರುವಂಥಾದ್ದನ್ನು ವ್ಯಕ್ತ ಮಾಡಬೇಡಿ ಎಂದು ಹೇಳುವುದಿಲ್ಲ. ವ್ಯಕ್ತ ಮಾಡುವುದಕ್ಕೆ ಬೇಕಾದಷ್ಟು ಒಳ್ಳೆಯ ಪದಗಳು ಇವೆ. ಆ ಕಡೆ ಕುಳಿತುಕೊಂಡಿರತಕ್ಕ ಸದಸ್ಯರಾಗಲೀ ಈ ಕಡೆ ಕುಳಿತುಕೊಂಡಿರತಕ್ಕ ಸದಸ್ಯರಾಗಲೀ ಅಂಥಾ ಪದಗಳನ್ನು ಉಪಯೋಗ ಮಾಡತಕ್ಕದ್ದಲ್ಲ. ಆದ್ದರಿಂದ 'ಬೊಗಳು' ಎನ್ನತಕ್ಕಂಥ ಪದವನ್ನು ಉಪಯೋಗ ಮಾಡತಕ್ಕದ್ದು ಈ ಸಭೆಗಾಗಲಿ ಹೊರಗಡೆಯವರಿಗಾಗಲಿ ಶೋಭೆಯನ್ನು ತರತಕ್ಕಂಥಾದ್ದಲ್ಲ. ಅಧ್ಯಕ್ಷರಿಗೂ ಶೋಭೆ ತರುವುದಿಲ್ಲ. ಆದ್ದರಿಂದ 'ಬೊಗಳು' ಎನ್ನುವುದು ಪಾರ್ಲಿಮೆಂಟರಿಯೇ ಹೇಗೆ ಎನ್ನುವುದನ್ನು ತಾವು ನಿರ್ಣಯ ಮಾಡಬೇಕು.

Mr. SPEAKER.—Does the hon. Member agree that the word is not dignified and decent ?

Sri H. N. NANJE GOWDA.—I have decided to withdraw that word.

Sri K. PUTTASWAMY (Minister for Law, Labour and Parliamentary Affairs) ; I rise on a point of order, Sir.

Several Opposition members rose

Mr. SPEAKER.—I will first hear the point of order of Sri Puttaswamy and thereafter the points of order of others.

Sri K. PUTTASWAMY.—The term the hon. member Sri Nanje Gowda has used is unparliamentary in the context in which it has been used. My request to the Chair is that the Chair should kindly rule that it is an unparliamentary expression and direct the hon. member not only to withdraw it but also express regret for having used it.

† ಶ್ರೀ ಕೆ. ಎಚ್. ಪಾಟೀಲ್.—ಸ್ವಾಮಿ, ಮಾನ್ಯ ಪಾರ್ಲಿಮೆಂಟರಿ ಶಾಖೆಯ ಸಚಿವರು ಕ್ರಿಯಾಲೋಪವನ್ನು ಎತ್ತಿ ಶ್ರೀಮಾನ್ ನಂಜೇಗೌಡರು ಉಪಯೋಗಿಸಿದ 'ಬೊಗಳು' ಎನ್ನುವ ಪದವನ್ನು ಉಪಯೋಗ ಮಾಡಿದ್ದು ಸರಿಯಲ್ಲ ಎಂದು ಹೇಳಿದರು. ಶ್ರೀಮಾನ್ ನಂಜೇಗೌಡರು ಮಾತನಾಡುವ ಧಾಟಿಯಲ್ಲಿ ಆ ಪದವನ್ನು ಉಪಯೋಗ ಮಾಡಿದ್ದಾರೆ. ಕೆಲವು ಪ್ರದೇಶಗಳಲ್ಲಿ ಕೆಲವು ಶಬ್ದಗಳನ್ನು ಉಪಯೋಗಿಸುತ್ತಾರೆ. ಈಗ ಉದಾಹರಣೆಗೆ ಹೇಳುವುದಾದರೆ ಬಿಜಾಪುರ ಜಿಲ್ಲೆಯಲ್ಲಿ ಒದರು ಎಂದು ಹೇಳುತ್ತಾರೆ. ಒದರು ಎಂದರೆ ಹೇಳು ಎಂದರ್ಥ. ಆ ಧಾಟಿಯಲ್ಲಿ ಶ್ರೀಮಾನ್ ನಂಜೇಗೌಡರು ಬೊಗಳು ಎನ್ನುವ ಪದವನ್ನು ಉಪಯೋಗ ಮಾಡಿದ್ದಾರೆ. ಆದ್ದರಿಂದ ಆ ಪದ ಅನ್‌ಪಾರ್ಲಿಮೆಂಟರಿ ಎಂದು ಹೇಳುವುದಕ್ಕಾಗುವುದಿಲ್ಲ. ಈ ಸಭೆಯ ನಾಯಕರಾದ ಶ್ರೀಮಾನ್ ವೀರೇಂದ್ರ ಪಾಟೀಲರು ಈ ಸಭೆಯ ಘನತೆ ಮತ್ತು ಗೌರವವನ್ನು ಹೆಚ್ಚಿಸುವ ದೃಷ್ಟಿಯಿಂದ ಆ ಪದ ಅನ್ ಪಾರ್ಲಿಮೆಂಟರಿ ಅಲ್ಲದಿದ್ದರೂ ಅವನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದಾಗ ಶ್ರೀಮಾನ್ ನಂಜೇಗೌಡರು ವಿನಯದಿಂದ ಆ ಪದವನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಆದ್ದರಿಂದ ಈಗ ಅದಕ್ಕೆ ತಪ್ಪು ಅರ್ಥವನ್ನು ಕಲ್ಪನೆ ಮಾಡುವುದು ಸರಿಯಲ್ಲ. ಇದರಲ್ಲಿ ಯಾವ ಕ್ರಿಯಾಲೋಪವೂ ಇಲ್ಲ. ಅಧ್ಯಕ್ಷರು ಈ ಬಗ್ಗೆ ಒಂದು ರೂಲಿಂಗ್ ಕೊಟ್ಟು ಮುಂದಕ್ಕೆ ಹೋಗಬಹುದು.

ಅಧ್ಯಕ್ಷರು.—ಶ್ರೀ ಚನ್ನಯ್ಯನವರು ಏನು ಹೇಳುತ್ತಾರೆ ?

ಶ್ರೀ ಎಸ್. ಚೆನ್ನಯ್ಯ (ಕೃಷ್ಣರಾಜ).—ಈ ವಿಷಯವನ್ನು ಇನ್ನು ಚರ್ಚೆ ಮಾಡುವುದು ಬೇಡ. ತಾವು ದಯವಿಟ್ಟು ಅವರು ಹೇಳಿರುವ ಪದವನ್ನು ರೆಕಾರ್ಡ್‌ನಿಂದ ತೆಗೆಸಿಹಾಕಿಬಿಡಿ. ಇದೇ ರೀತಿ ಚರ್ಚೆಯಾದರೆ ಇನ್ನೂ ಒಂದು ಗಂಟೆ ಮುಂದುವರೆಯುತ್ತದೆ. ನಾನು ಎಲ್ಲರಿಗೂ ಕೈಮುಗಿದು ಬೇಡಿಕೊಳ್ಳುತ್ತೇನೆ, ಇನ್ನು ಈ ವಿಷಯದ ಬಗ್ಗೆ ಮಾತನಾಡುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ನಾನು ಅದೇ ಕೇಳಿಕೊಳ್ಳುತ್ತಿದ್ದೇನೆ. ಆ ಪದಗಳನ್ನು ಅಫಿಷಿಯಲ್ ರೆಕಾರ್ಡ್‌ನಿಂದ ತೆಗೆಸಿ ಮುಂದಿನ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಎಲ್ಲರ ಪಾಯಿಂಟ್ ಆಫ್ ಆರ್ಡರ್‌ಗಳು ಸಹ ಮುಗಿಯಲಿ.

ಶ್ರೀ ಎಂ. ಎನ್. ರಾಮಣ್ಣ.—ಈಗ ಶ್ರೀಮಾನ್ ಚೆನ್ನಯ್ಯನವರು ಇದನ್ನು ಇಷ್ಟಕ್ಕೇ ಬಿಟ್ಟುಬಿಡೋಣ, ಮುಂದಿನ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡೋಣ ಎಂದು ಹೇಳಿರುವುದರಿಂದ ಅದರಂತೆ ಮಾಡುವುದು ಒಳ್ಳೆಯದು.

Mr. SPEAKER.—Sri Nange Gowda agreed that the expression was unparliamentary and has withdrawn it. I think impliedly that amounts to expression of regret. I think the matter should end there.

Sri K. PUTTASWAMY.—You may close the matter. I have no objection, but I want to point out that the hon. member only said that he has decided to withdraw, but he has not withdrawn.

Mr. SPEAKER.—I hold that Sri Nanje Gowda has withdrawn the whole thing.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್ (ಸಿರಿ).—ಪಾಯಿಂಟ್ ಆಫ್ ಆರ್ಡರ್ ಸರ್.

ಅಧ್ಯಕ್ಷರು.—ನಂಜೇಗೌಡರ ಪಾಯಿಂಟ್ ಆಫ್ ಆರ್ಡರ್ ಮುಗಿಯಲಿ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ನನ್ನದು ಮುಗಿಸಿಬಿಡುತ್ತೇನೆ. ನನ್ನ ಕ್ರಿಯಾಲೋಪ ಇಷ್ಟು, ಮಾನ್ಯ ಮುಖ್ಯಮಂತ್ರಿಗಳು ಸ್ವಚ್ಛವಾಗಿ ಈ ಮನೆಯ ಘನತೆ ಗಾಂಭೀರ್ಯಗಳನ್ನು ಉಳಿಸಿಕೊಳ್ಳುವ ಬಗ್ಗೆ ನಾಯಿ ಬೊಗಳುತ್ತದೆ, ಮನುಷ್ಯರು ಮಾತನಾಡುತ್ತಾರೆ ಎಂಬ ಉದಾಹರಣೆ ಕೊಟ್ಟು ಹೇಳಿದರು. ಮತ್ತು ಸಾಕಷ್ಟು ವಿವರಗಳನ್ನು ಸಹ ಕೊಟ್ಟರು. ನಂತರ

ಆ ವಿಚಾರದಲ್ಲಿ ಶ್ರೀಮಾನ್ ನಂಜೇಗೌಡರು ಏನು ಹೇಳುತ್ತಾರೆಂದು ಕೇಳುವುದಕ್ಕೆ ಮೊದಲೇ ನಮ್ಮ ಪಾರ್ಲಿಮೆಂಟರಿ ಮಿನಿಸ್ಟರ್ ಅವರು ಎದ್ದು It is not sufficient ಎಂದು direction ಕೊಡುವುದಕ್ಕೆ ಹೊರಟರು. ಅವರಿಗೆ ಪಾರ್ಲಿಮೆಂಟರಿ ವ್ಯವಹಾರಗಳ ಬಗ್ಗೆ 10-15 ವರ್ಷಗಳ ಅನುಭವ ಇದೆ. ಆದರೂ ಸಹ ಇಂತಹ ಪ್ರಸಂಗಗಳು ಬಂದಾಗ ತೊಂದರೆ ಕೊಡುತ್ತಿರುತ್ತಾರೆ. ಇದಕ್ಕೆ ನೀವು ರಕ್ಷಣೆ ಕೊಡಬಾರದು. ನ್ಯಾಯ ದೊರಕಿಸಿಕೊಡಬೇಕು. ಇದೇ ನನ್ನ ಕ್ರಿಯಾಲೋಪ.

ಶ್ರೀ ಎಸ್. ಚೆನ್ನಯ್ಯ.—ಇದೇ ವಿಷಯವನ್ನು ಮುಂದುವರೆಸುವುದು ಬೇಡ. ಅವರು ಉಪಯೋಗ ಮಾಡಿದ ಪದವನ್ನು ರೆಕಾರ್ಡ್‌ನಿಂದ ತೆಗಿಸಿಬಿಡಿ. ಈಗ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳೋಣ.

Mr. SPEAKER.—If the members want me to state the position I have no objection. I am ready to state it just now or at any time later. If hon. Members want to proceed with the buisiness, I have no objection for that also.

ಶ್ರೀ ವಾಟಾಳ್ ನಾಗರಾಜ್.—ಮಂತ್ರಿಗಳು ಬೊಗಳೆ ಹೊಡೆಯುತ್ತಾರೆ ಎಂದು ಇಲ್ಲಿ ಹೇಳಿದರೆ ಅದು ತಪ್ಪಾಗುತ್ತದೆಯೇ ?

Mr. SPEAKER.—Now a point was raised. I think there is much misunderstanding about my observation. All that I said is this. When parties are formed in the Assembly it is for the Chair to recognise the party, whether it is the ruling party or opposition parties or groups. I have stated this position in detail on a previous occasion. For the benefit of hon. Members I shall just give a resume of it. The position is that parties are recognised for several purposes according to the principles arrived at in the Conference of Presiding Officers held at Trivandrum. I have already referred to that on a previous occasion. I think I have to state the position again. Parties are recognised by the Chair in the House. The parties or groups may have particular ideologies in the House and outside. Before giving recognition I have to consider that. That is the finding arrived at in the Trivandrum Conference. The Trivandrum Conference further laid down that when various groups combine, they should combine on the basis of certain principles and policies. When they combine that way, they should be recognised as Opposition Party or Opposition Group. In the present context we are told that a Samyukta Vidhayak Dal has been formed by various Parties, Groups and individual members coming together. It is better to combine and to organise that way. But when you do so, I think all the parties and groups here merge their identity in the Samyukta Vidhayak Dal for the purpose of recognition of the Samyukta Vidhayak Dal and they do not exist so far as the working of the Assembly is concerned. Therefore, when that is the position, they elect a Leader.

Sri H. SIDDAVEERAPPA.—In this connection, I want to say something with your permission. I wish to submit that what you are now saying, is not germane to the issue before us. Beside, a Committee has been constituted in this Assembly and we have been examining as to what the position should be, what its composition should be and all those things. Perhaps, you do not remember that your predecessor so far, had not recognized, but by convention we have been recognized and you are bound to recognize. Therefore, my respectful submission is that you

(SRI H. SIDDAVEERAPPA)

are trying to raise a hornest's nest by these methods. So my request to you is to adjourn now and meet at 3-30 because now we are fed up with this problem.

Mr. SPEAKER.—I shall explain the position.

Sri H. SIDDAVEERAPPA.—Perhaps in no assembly where there are so many parties and groups in the Opposition, they behave in such an orderly manner as we do here. As our Whip has put it, we are not one party, we are different parties. For working arrangement in the Assembly we have come together as a sort of combination or group, but we have not merged our identity completely. Our parties have their own individuality, but for working arrangement we have combined and elected our friend Sri Sivappa about whom we are very proud. That is a different matter. But, now to raise issues again here when the working arrangement is itself so smooth, so good and so harmonious, I feel-naturally we on this Side are very sensitive, because we try to read in between the lines when a reference is made by the Speaker. Much of our trouble is due to the fact, though by convention the Speaker does not speak, in Mysore Assembly the Speaker speaks most of the time. If you do not speak most of our difficulties will not be there. I may say so with all humility, you are my esteemed friend, the less you speak it is better for you, for this House and also for the State.

3-00 P.M.

Mr. SPEAKER.—I don't think I am speaking unnecessarily. A point was raised and I wanted to explain it. I do not want anything to be said against the opposition. I wanted, as Sri Huchamasthy Gawda put it, that when a matter is put forward by a leading Member, the same should not be repeated, and the time should be more usefully spent. I have not said anything of which I should be ashamed. Let us close the matter and proceed to the next item.

Sri M. NAGAPPA.—Whatever position you may be having, the record itself will speak !

ಶ್ರೀ ವಾಟಾಳ್ ನಾಗರಾಜ್.—ಇದು ಎಕ್ಸ್‌ಪೆಂಜ್ ಆಗಬೇಕು.

Mr. SPEAKER.—ಇದು ಎಕ್ಸ್‌ಪೆಂಜ್ ಆಗುವುದಕ್ಕೆ ಸಾಧ್ಯವಿಲ್ಲ. I shall examine the record and find out if there is anything which should be expunged under Rule 315 and consider it.

† ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ನಂಜೇಗೌಡರು ತಪ್ಪು ಆಗಿದೆ ಎಂದು ಸ್ಥಳದಲ್ಲೇ ತೀರ್ಮಾನ ತೆಗೆದುಕೊಂಡಿದ್ದಾರೆ. ಅದಕ್ಕೋಸ್ಕರ ತಮ್ಮಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ. ಇವೊತ್ತೇ ಅಫಿಷಿಯಲ್ ರಿಕಾರ್ಡ್ ತರಿಸಿ ತೀರ್ಮಾನ ತೆಗೆದುಕೊಳ್ಳಬೇಕು. ಅವರು ಯಾವ ಉದ್ದೇಶದಿಂದಲೂ ಮಾತನಾಡುತ್ತಾ ಇಲ್ಲ. ಆದುದರಿಂದ ಅದನ್ನು ಎಕ್ಸ್‌ಪೆಂಜ್ ಮಾಡಬೇಕು ಎಂದು ಹೇಳುತ್ತೇನೆ. ಈಗಲೇ ತೀರ್ಮಾನ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಬೇರೆ ಬಿಸಿನೆಸ್‌ಗೆ ಅವಕಾಶ ಕೊಡುವುದಿಲ್ಲ. ತಾವು ಹೇಳಿರತಕ್ಕಂಥಾದ್ದು ಏನು ಇದೆ ಅದು ನಮ್ಮ ನಮ್ಮಲ್ಲಿ ಭಿನ್ನಾಭಿಪ್ರಾಯ ತರಬೇಕು ಎಂದು ಮಾಡಿದ್ದೀರಿ. ಅದು ಒಳ್ಳೆಯದಲ್ಲ. ತಾವು ಇಂಪಾರ್ಷಿಯಲ್ ಆಗಿರಬೇಕು.

† ಶ್ರೀ ಎಚ್. ಎನ್. ನಂಜೇಗೌಡ.—ಶ್ರೀಮಾನ್ ಶಿವಪ್ಪನವರು ಮಾತನಾಡಿದಮೇಲೆ ನಾನೂ ಒಂದು ಮಾತನಾಡಿದೆ. ಆಮೇಲೆ ಮುಖ್ಯಮಂತ್ರಿಗಳು ವಾಪಸ್ಸು ತೆಗೆದುಕೊಳ್ಳ ಬೇಕೆಂದು ಕೇಳಿದರಲ್ಲಾ ಅದು ಪಾರ್ಲಿಮೆಂಟರಿಯೋ ಇರಲಿ ಅನ್‌ಪಾರ್ಲಿಮೆಂಟರಿಯೋ ಇರಲಿ ಅವರ ಒಂದು ಸೌಜನ್ಯದಿಂದ ನಾನು ವಾಪಸ್ಸು ಪಡೆದೆ. ಈಗ ತಮ್ಮಲ್ಲಿ ಅರಿಕೆ ಏನೆಂದರೆ ನೀವು ಹೇಳಿರ ತಕ್ಕಂಥಾದ್ದೆಲ್ಲಾ ಒಳ್ಳೆಯ ಭಾವನೆಯಿಂದ ಹೇಳಿದ್ದೀರಿ ಎಂದು ಇಟ್ಟುಕೊಳ್ಳೋಣ.

'ಇಂಗ್ಲೀಷ್ ಈಸ್ ಸೊ ಸಿಂಪಲ್' ಎಂದು ತಾವೇ ಹೇಳುತ್ತೀರಿ. ಈ ಸಭೆಯ ಫೀಲಿಂಗ್ಸ್ ಏನು ಎನ್ನುವುದನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ. ಆ ಒಂದು ಮಾತನ್ನು ತಾವು ವಾಪಸು ತೆಗೆದುಕೊಂಡು ಪುನರ್ಪರಿಶೀಲನೆ ಮಾಡುವುದಕ್ಕೆ ಅಧಿಕಾರವಿದೆ. ಆ ಅಧಿಕಾರವನ್ನು ಮೊಟಕು ಮಾಡಿಕೊಳ್ಳಬೇಡಿ. ಒಂದು ಮಾತು ತುಟಿಮೀರಿ ಹೇಳಿದ್ದೀರಿ. ಅದನ್ನು ವಾಪಸು ತೆಗೆದುಕೊಂಡಿದ್ದೇನೆ ಎಂದು ತಾವು ಹೇಳಿದರೆ ನಾವು ನಿಮಗೆ ಚಿರಋಣಿಗಳಾಗಿರುತ್ತೇವೆ. ಇಲ್ಲದೆ ಇದ್ದರೆ ಗಲಾಟೆ ಮಾಡಬೇಕಾಗುತ್ತದೆ. ನಮಗೆ ಕೆಟ್ಟ ಹೆಸರು ಬರುತ್ತದೆ, ನಮ್ಮನ್ನು ತಂಟೆ ಕೋರರು ಎಂದು ಹೇಳುತ್ತಾರೆ.

Mr. SPEAKER.—I shall get the record and examine it as to whether what is stated is objectionable or not.

ಶ್ರೀ ಎಸ್. ಶಿವಪ್ಪ.—ತಾವು ಏನು ಹೇಳಿದ್ದೀರಿ ಎನ್ನುವ ಮಾತು ರಿಕಾರ್ಡ್‌ನಲ್ಲಿದೆ. ವಾಪಸು ತೆಗೆದುಕೊಂಡರೆ ಅದು ನಿಮ್ಮ ದಿಟ್ಟತನ. ಈಪೊತ್ತು ಏನೇ ಆಗಲೀ ಇತ್ತಕಡೆ ಸದಸ್ಯರು ನಾನು ಮಾತನಾಡಿದಮೇಲೆ ನಾನು ಏನನ್ನು ಹೇಳುತ್ತೇನೆ ಅದನ್ನು ಪುಷ್ಟಿಕರಿಸಲು ಕೆಲವು ಸಲ ಮಾತ ನಾಡುತ್ತಾರೆ. ಹಾಗೆ ಮಾತನಾಡುವುದು ತಪ್ಪು, ಅದು ನಿಮ್ಮ ನಾಯಕರಲ್ಲಿ ನಂಬಿಕೆ ಇಲ್ಲ ಎನ್ನು ವುದನ್ನು ತೋರಿಸುತ್ತದೆ ಎನ್ನುವ ಅರ್ಥದಲ್ಲಿ ಹೇಳಬಾರದು. ತಾವು ಏನು ಹೇಳಿದ್ದೀರಿ ಎನ್ನುವುದನ್ನು ನೋಡಲು ಬೇಕಾದರೆ ಸಭೆಯನ್ನು ಸ್ವಲ್ಪ ಕಾಲ ಮುಂದಕ್ಕೆ ಹಾಕಿ. ಅತ್ತ ಕಡೆ ಕಾಂಗ್ರೆಸ್ ಪಕ್ಷದವರು ಎಷ್ಟೋ ಅಧ್ವಾನವಾಗಿ ಮಾತನಾಡುತ್ತಾರೆ. ಸಭೆಯ ಮುಂದೆ ಇರುವ ವಿಷಯವನ್ನು ಸ್ವಾಗತಿಸು ತ್ತೇನೆ ಎಂದು ಹೇಳಿ ಅವರ ಭಾಷಣದಲ್ಲಿ ಪೂರಾ ವಿರೋಧ ಮಾಡುತ್ತಾರೆ. ಆ ಪಕ್ಷದಲ್ಲಿ ಆ ರೀತಿ ಮಾತನಾಡಿದರೆ ಅವರಿಗೆ ಹೇಳುವ ಶಕ್ತಿ ನಿಮಗೆ ಇಲ್ಲವೋ ಏನೋ? ಈಗ ತಾವು ಸಭೆಯನ್ನು ಮುಂದಕ್ಕೆ ಹಾಕಿ ರಿಕಾರ್ಡ್ ತರಿಸಿ ನೋಡಿಕೊಳ್ಳಿ. ನೀವು ಒಳ್ಳೆಯ ವಕೀಲರು, ಏನು ಮಾಡಬೇಕು ಎಂದು ಯೋಚನೆ ಮಾಡಿ.

ಶ್ರೀ ಎಸ್. ಚನ್ನಯ್ಯ. ರಿಕಾರ್ಡ್ ತರಿಸಿ ತಾವು ಇಲ್ಲಿ ಓದಿ ನೋಡಿದರೆ ಸಮಾಧಾನ ವಾಗುತ್ತದೆ.

Mr. SPEAKER.—I want to know what the Leader of the House suggests with regard to the adjournment of the House.

ಶ್ರೀ ಎಸ್. ಚನ್ನಯ್ಯ.—ಸಭೆಯನ್ನು ಮುಂದಕ್ಕೆ ಹಾಕುವುದು, ಬಿಡುವುದು ತಮಗೆ ಬಿಟ್ಟದ್ದು. ತಾವು ಹೇಳಿರುವ ಪದಗಳನ್ನು ತೆಗೆದು ಹಾಕಬೇಕು ಎಂದು ಮಾತ್ರ ಹೇಳುತ್ತಿದ್ದೇವೆ.

ಅಧ್ಯಕ್ಷರು.—ಸಭೆಯನ್ನು ಮುಂದಕ್ಕೆ ಹಾಕುವ ವಿಷಯದಲ್ಲಿ ಮುಖ್ಯ ಮಂತ್ರಿಯವರು ಏನು ಹೇಳುತ್ತಾರೆ ಎಂದು ಕೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ರಿಕಾರ್ಡ್ ತರಿಸಿ ನೋಡಿದರೆ ಗೊತ್ತಾಗುತ್ತದೆ. ಸಭೆಯ ನಾಯಕರಿಂದ ಏನೂ ತಿಳಿದುಕೊಳ್ಳಬೇಕಾಗಿಲ್ಲ. ಸಭೆಯನ್ನು ಮುಂದಕ್ಕೆ ಹಾಕುವ ವಿಚಾರದಲ್ಲಿ ತಮಗೇ ಅಧಿಕಾರವಿದೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸಲಹೆ ಮಾಡಿದ್ದಾರೆ. ಅದರ ಬಗ್ಗೆ ನನ್ನ ಪ್ರತಿಕ್ರಿಯೆ ಕೇಳುತ್ತಿದ್ದೀರಿ. ಅವರು ಬಹಳ ಯೋಗ್ಯವಾದ ಸಲಹೆ ಮಾಡಿದ್ದಾರೆ. ನೀವೇನು ಪದವನ್ನು ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಗೆ ಉಪಯೋಗ ಮಾಡಿದ್ದೀರಿ ಎಂಬುದನ್ನು ನೋಡಿ, ಅನಂತರ ಒಂದು ನಿರ್ಣಯ ಮಾಡಿ ಎಂದು ಅವರು ಹೇಳಿದ್ದಾರೆ. ಅದನ್ನು ನಾನು ಪೂರ್ಣವಾಗಿ ಪುಷ್ಟೀಕರಿಸುತ್ತೇನೆ. ತಾವೇನು ಪದ ಉಪಯೋಗಿಸಿದ್ದೀರಿ, ಯಾವ ಸಂದರ್ಭದಲ್ಲಿ ಉಪಯೋಗಿಸಿದ್ದೀರಿ ಎಂಬುದನ್ನು ನೋಡಿ, ಒಂದು ನಿರ್ಣಯ ಮಾಡಿ ಮುಂದೆ ಹೋಗುವುದು ಉಚಿತ. ಇದಕ್ಕಾಗಿ ಅರ್ಧ ಗಂಟೆ ಸಭೆಯನ್ನು ಅಡ್ಜರ್ನ್ ಮಾಡಬೇಕು ಎಂದು ನನಗನ್ನಿಸುವುದಿಲ್ಲ. ಡಿಮ್ಯಾಂಡನ್ನು ಮೂವ್ ಮಾಡಿದೆ, ಅದರಮೇಲೆ ಚರ್ಚೆ ನಡೆಯ ಬೇಕಾಗಿದೆ. ಆದುದರಿಂದ ತಾವು ಬೇಕಾದರೆ ವಿರೋಧ ಪಕ್ಷದ ಮುಖಂಡರನ್ನು ಕರೆಸಿಕೊಂಡು

(ಶ್ರೀ ವೀರೇಂದ್ರ ಪಾಟೀಲ್)

ರಿಕಾರ್ಡ್ ನೋಡಿ ಒಂದು ತೀರ್ಮಾನಕ್ಕೆ ಬರಬಹುದು. ಸಭೆಯನ್ನು ಅಡ್ಜರ್ನ್ ಮಾಡಬೇಕಾಗಿಲ್ಲ. ತಮಗೆ ಬಿಟ್ಟಿದೆ, ತಮಗೆ ಸೂಕ್ತ ಕಂಡಂತೆ ಮಾಡಬಹುದು, ಅಡ್ಜರ್ನ್ ಮಾಡುವುದಕ್ಕೆ ನನ್ನ ಅಡ್ಡಿ ಏನೂ ಇಲ್ಲ.

Mr. SPEAKER.—The House will now rise and meet again at 4 P.M.

The House rose at Twelve Minutes past Three of the Clock and re-assembled at Ten Minutes past Four of the Clock.

[MR. SPAKER in the Chair]

Mr. SPEAKER.—As promised, I just got an extract from the proceedings and went through it. I do not think I had stated anything which should have really offended the Hon. Members. I tell them that I never intended to offend or insult anybody. I did not mean to offend any party or any section. I think, in the interests of better understanding, I stated something and probably it is not properly understood. All the Hon. Members should proceed on the basis that the Chair never intends to offend anybody. So, I never intended to offend anybody or any section or any party in the House.

Sri S. BANGARAPPA.—Will it remain on the records ? I want to know from the Hon. Speaker whether those observations will remain in the records ?

ಅಧ್ಯಕ್ಷರು.—ಇದರಲ್ಲಿ ಅಪಮಾನದ ಪಾಯಿಂಟ್ ಏನೂ ಇಲ್ಲ. ಮಾನ್ಯ ಸದಸ್ಯರಿಗೆ ಅಪಮಾನ ಆಗಬೇಕೆಂದಾಗಲಿ, ಯಾವ ಪಕ್ಷಕ್ಕೆ ಅಪಮಾನ ಆಗಬೇಕೆಂದಾಗಲೀ ಏನೂ ಇಲ್ಲ. ಅವರು ಆರೀತಿ ತಿಳಿದುಕೊಳ್ಳಬೇಕಾದಂಥ ಅರ್ಥದಲ್ಲಿ ಏನೂ ಅಂದಿಲ್ಲ. ಅದು ಆ ಅರ್ಥ ಬರುವುದಿಲ್ಲ. ಮಾನ್ಯ ಸದಸ್ಯರು ಆ ರೀತಿ ತಿಳಿದುಕೊಳ್ಳಬಾರದು ಎಂದು ಹೇಳುತ್ತೇನೆ. I think the matter should end there.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹಿಂದೆಯೂ ಸಹ 2–3 ಸಲ ಈ ಪ್ರಶ್ನೆ ಬಂದಾಗ ನಾನು ಕೇಳಿದ್ದೇನೆ. ತಾವು ಈ ರೀತಿ ನಮ್ಮ ಲೀಡರ್ ಬಗ್ಗೆ ಅನುಮಾನ ಬರುವ ರೀತಿಯಲ್ಲಿ ಹೇಳುತ್ತಿದ್ದೀರಿ. ತಾವು ಸ್ಪೀಕರ್ ಆಗಿ ಈ ಸಭೆಯ ಘನತೆ ಗೌರವಗಳನ್ನು ಕಾಪಾಡಬೇಕು.

ಅಧ್ಯಕ್ಷರು.—ನಾನು ಪ್ರೊಸೀಡಿಂಗ್ಸ್ ನೋಡಿದ್ದೇನೆ. ನೀವು ಏನು ಮಾತನಾಡಿದ್ದೀರಿ ಅನ್ನೂ ನೋಡಿದ್ದೇನೆ. ಯಾರಿಗೇ ಆಗಲಿ, ಯಾವ ಪಕ್ಷಕ್ಕೇ ಆಗಲಿ ಯಾವರೀತಿಯಿಂದಲೂ ಅಪಮಾನ ಉಂಟಾಗುವ ರೀತಿಯಲ್ಲಿ ಅಂದಿಲ್ಲ. ನಾನು ಹೇಳಿದುದನ್ನು ತಾವು ತಪ್ಪು ತಿಳಿದುಕೊಂಡಿದ್ದೀರಿ. ಯಾರಮೇಲೂ ಆಪಾದನೆ ಮಾಡಿಲ್ಲ. ನಾನು ಹೇಳಿದುದನ್ನು ನಂಬಬೇಕು ಎಂದು ತಮಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಅಜೀಜ್ ಸೇಟ್.—ಈಗ ತಾವು ಅರ್ಧ ಗಂಟೆನೋ ಒಂದು ಗಂಟೆನೋ ಅಡ್ಜರ್ನ್ ಮಾಡಿದ್ದಿರಿ. ಒಳೊಳಗೆ ತಾವು ಮತ್ತು ನಮ್ಮ ಲೀಡರ್ಸ್ ಏನೇನೋ ಮಾತನಾಡಿಕೊಂಡಿರಿ. ಯಾವ ತೀರ್ಮಾನಕ್ಕೆ ಬಂದಿರಿ ಎನ್ನುವುದನ್ನು ಹೇಳಿ. ನಮ್ಮನ್ನೂ ಕಾನ್ಫಿಡೆನ್ಸ್‌ಗೆ ತೆಗೆದುಕೊಂಡು ಹೇಳಬೇಕು. ಮುಚ್ಚುಮರೆ ಮಾಡಬಾರದು. ಏನು ನಡೆಯಿತು ಎನ್ನುವುದನ್ನು ಈ ಮನೆಗೆ ರಿಪೋರ್ಟ್ ಮಾಡಬೇಕು. ನೀವು ಹೇಳಿದುದನ್ನು ಒಪ್ಪಿಕೊಂಡು ನಮ್ಮ ಲೀಡರ್‌ಗಳು ಅದರಂತೆ ನಡೆಯುತ್ತೇವೆ ಎಂದು ಹೇಳಿದರೇ ಇದನ್ನು ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಹೇಳಲಿ, ಶ್ರೀಮಾನ್ ಸಿದ್ಧವೀರಪ್ಪನವರೋ ಅಥವಾ ಶ್ರೀಮಾನ್ ಚೆನ್ನಯ್ಯನವರೋ ಯಾರಾದರೂ ಹೇಳಲಿ. ಇಲ್ಲಿ ಏನು ನಡೆಯಿತು, ಅಲ್ಲಿ ಏನು ತೀರ್ಮಾನವಾಯಿತು ಎನ್ನುವುದನ್ನು ನೀವು ಹೇಳಿ ಅಥವಾ ಅವರು ಹೇಳಲಿ. ನಾವೆಲ್ಲಾ ಅದನ್ನು ಕೇಳುವುದಕ್ಕೆ ಕಾತುರರಾಗಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಇದು ಮೊದಲನೇ ಬಾರಿ ಬಂದ ಪ್ರಶ್ನೆ ಅಲ್ಲ. ಈ ಮನೆಯಲ್ಲಿ ಇದುವರೆಗೆ 3-4 ಸಾರಿ ಬಂದಿದೆ. ನನಗೆ ಜ್ಞಾಪಕ ಇದೆ. ಹಿಂದೆ ನಮ್ಮ ನಾಯಕರಿಗೆ ಅಗೌರವ ತೋರಿಸಿದ್ದೀರಾ ! ಯಾರು ಈ ಮನೆಯ ಗೌರವ ಘನತೆಗಳನ್ನು ಕಾಪಾಡಬೇಕೋ ಅಂತಹವರೇ ಈ ರೀತಿ ಪದೇಪದೇ ನಡೆದುಕೊಂಡರೆ ತೊಂದರೆ ಬರುತ್ತದೆ. ನಿಮ್ಮ ಬಗ್ಗೆ ಅಗೌರವ ತೋರಿಸುತ್ತಾ ಇಲ್ಲ.

ಅಧ್ಯಕ್ಷರು.—ಅದೆಲ್ಲಾ ತಾವು ಹೇಳುವುದು ಅನಾವಶ್ಯಕ.

ಶ್ರೀ ಎಸ್. ಚನ್ನಯ್ಯ.—ಅಧ್ಯಕ್ಷರಲ್ಲಿ ವಿನಂತಿ. ಈ ವಿಷಯವನ್ನು ಹೌಸ್‌ಗೆ ಹೇಳಬೇಕೋ ಅಧ್ಯಕ್ಷರಿಗೆ ಹೇಳಬೇಕೋ ಅವರೆ ಮಾಮೂಲು ಪ್ರಕಾರ ಅಧ್ಯಕ್ಷರಿಗೆ ಹೇಳಬಹುದು. ನಾವು ಏನು ವಿಷಯ ಚರ್ಚೆ ಮಾಡಿದೆವು ಎಂದರೆ ಮೀಟಿಂಗ್‌ನಲ್ಲಿ ಬೇರೆ ಬೇರೆ ವಿಷಯಗಳು ಬಂದವು. ಅದರಲ್ಲಿ ಶನಿವಾರದ ಕಾರ್ಯಕಲಾಪಗಳ ಬಗ್ಗೆಯೂ ಚರ್ಚೆ ಬಂತು. ಶನಿವಾರ ಆಗುವುದಿಲ್ಲ, ಚರ್ಚೆ ಮಾಡುವುದಿಲ್ಲ ಎಂದು ಹೇಳಿಬಿಟ್ಟು ಇತ್ಯರ್ಥ ಮಾಡಿದೆವು. ಅವರು ಈ ವಿಷಯ ನೋಡಿಕೊಂಡು ಯಾರ ಮನಸ್ಸನ್ನೂ ನೋಯಿಸದಂತೆ ಹೇಳುತ್ತೇನೆಂದು ಹೇಳಿದರು. ಅಧ್ಯಕ್ಷರು ಏನು ತಿಳಿಸಿದರೋ ಅದು ಇಲ್ಲಿ ಹೇಳಿದೆವು. ಈ ವಿಷಯದಲ್ಲಿ ಮುಂದೆ ಚರ್ಚೆ ಮಾಡಬಾರದು. ಅಷ್ಟೇ ಸಾಕು. ಇದನ್ನು ಮುಂದುವರಿಸಬಾರದು ಎಂದು ಒತ್ತೊತ್ತಿ ಹೇಳಿದರು. ಅದನ್ನು ವೇಳೆಯೊಳಗೆ ಮಾಡಬೇಕೆಂದು ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

Budget Estimates for 1969-70—Demands for Grants

Demand Nos 10, 12 and 13

(19)—GENERAL ADMINISTRATION

Sri VEERENDRA PATIL (Chief Minister).—Sir, on the recommendation of the Governor, I beg to move :

> "That a sum not exceeding Rs. 4,48,45,000 be granted to the Government to defray the charges which will come in course of payment during the financial year for the period ending 31st day of March 1970, in respect of 'General Administration'."

Mr. SPEAKER.—Motion moved :

> "That a sum not exceeding Rs. 4,48,45,000 be granted to the Government to defray the charges which will come in course of payment during the financial year for the period ending 31st day of March 1970, in respect of 'General Administration'."

Along with this demand, the other Demands Nos. 12 and 13 are deemed to have been moved and are open for discussion.

ಶ್ರೀ ಎಂ. ನಾಗಪ್ಪ.—ನಮಗೆ ಕೊಟ್ಟಂಥ ನೋಟೀಸ್‌ನಲ್ಲಿ 41A, 78A Expenditure connected with National emergency ಈ ಡಿಮ್ಯಾಂಡ್ ಇದೆ. ಈವೊತ್ತಿನ ಬಡ್ಜೆಟ್ಟಿನಲ್ಲಿ ಹಿಂದೆ ಇದ್ದುದನ್ನು ಕೊಟ್ಟಿಲ್ಲ. ಅದನ್ನು ಒಮಿಟ್ ಮಾಡಿದ್ದಾರೆ. ಅದು ಯಾವುದರ ಜೊತೆಯಲ್ಲಿ ಬರುತ್ತದೆ ಎನ್ನುವುದನ್ನು ತಿಳಿಸಬೇಕು.

ಅಧ್ಯಕ್ಷರು.—ಆ ಡಾಕ್ಯುಮೆಂಟ್ ನನ್ನ ಹತ್ತಿರ ಈಗ ಇಲ್ಲ. ಅದನ್ನು ತರಿಸಿ ನೋಡುತ್ತೇನೆ. ಈವೊತ್ತು ಡಿಮ್ಯಾಂಡುಗಳು 10, 12, 13, ಇವೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೋ ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಂ. ನಾಗಪ್ಪ.—ಇನ್ನೊಂದು ವಿಷಯ ಏನೆಂದರೆ ಪಬ್ಲಿಕ್ ಸರ್ವಿಸ್ ಕಮೀಷನ್ ಬಗ್ಗೆ ಡಿಮ್ಯಾಂಡ್ ಬರುತ್ತದೆ. ಅದರ ಬಗ್ಗೆ ಗವರ್ನ್‌ಮೆಂಟ್‌ನವರು 62-63, 64 ಈ ರೀತಿ ಈ ಹಿಂದಿನ ಅಡ್ಮಿನಿಸ್ಟ್ರೇಟಿವ್ ವರದಿಯನ್ನು ಕೊಡುತ್ತಿದ್ದಾರೆ, ಅದು ಸರಿಯಲ್ಲ. ಈ ರೀತಿ ಮಾಡಿದರೆ ಆ ಡಿಮ್ಯಾಂಡ್‌ಮೇಲೆ ಡಿಸ್ಕಸ್ ಮಾಡುವುದಕ್ಕೆ ಸಹಾಯವಾಗುವುದಿಲ್ಲ. ಯಾವಾಗಲೂ 1969ನೇ ವರ್ಷದ್ದು ಅಂದರೆ ಯಾವುದು ಲೇಟೆಸ್ಟ್ ವರದಿ ಇದೆಯೋ ಅದನ್ನು ಕೊಡಬೇಕು. ಇದರ ಬಗ್ಗೆ ಆಂಧ್ರಪ್ರದೇಶದ ವಿಧಾನಸಭೆಯಲ್ಲಿ ಒಂದು ಕ್ರಿಯಾಲೋಪವನ್ನು ಎತ್ತಿ ಅದರಮೇಲೆ ಅಲ್ಲಿಯ ಅಧ್ಯಕ್ಷರು ಒಂದು ರೂಲಿಂಗ್ ಕೊಟ್ಟಿದ್ದಾರೆ. ಅವರಲ್ಲಿ ಏನು ಹೇಳುತ್ತದೆ ಎಂದರೆ ಯಾವುದು ಲೇಟೆಸ್ಟ್ ಇದೆಯೋ ಅದನ್ನು ಕೊಡಬೇಕು, ಹಳೆಯದನ್ನು ಮೂವ್ ಮಾಡಕೂಡದು ಎಂದು ಇದೆ. ಇದು ನನ್ನ ಕ್ರಿಯಾಲೋಪ.

Mr. SPEAKER.—I will look into the matter.

ಶ್ರೀ ವೀರೇಂದ್ರ ಪಾಟೀಲ್.—15ನೇ ತಾರೀಖು ಲ್ಯಾಂಡ್ ರೆವಿನ್ಯೂ ಡಿಮಾಂಡ್ ತೆಗೆದು ಕೊಳ್ಳಬೇಕು ಎಂದು ಇತ್ತು. ಈಗ ಮತ್ತೆ ಕಾರ್ಯಕ್ರಮ ಬದಲಾಯಿಸಿವೆ. ಕಂದಾಯದ ಬಗ್ಗೆ ಸರ್ಕಾರದ ನೀತಿ ಸ್ಪಷ್ಟವಾಗಿಲ್ಲ, ಅಸ್ಪಷ್ಟವಾಗಿದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಒಂದೊಂದು ಸಲ ಒಂದೊಂದು ರೀತಿಯ ಹೇಳಿಕೆಗಳು ಬಂದಿವೆ ಎಂದೂ ಹೇಳಿದರು. ಮಾನ್ಯ ರೆವಿನ್ಯೂ ಮಂತ್ರಿಗಳು ಎಲ್ಲವನ್ನೂ ನೋಡುತ್ತಿದ್ದಾರೆ, ರೆವಿನ್ಯೂ ಡಿಮಾಂಡ್ ಬಂದಾಗ ಸರ್ಕಾರದ ನೀತಿ ಏನು ಎಂದು ಈ ಸಭೆಯಲ್ಲಿ ಒಂದು ಹೇಳಿಕೆ ನೀಡುತ್ತಾರೆ.

ಶ್ರೀ ಎಸ್. ಚನ್ನಯ್ಯ.—ಮಾನ್ಯ ಮುಖ್ಯ ಮಂತ್ರಿಯವರು ಹೇಳಿದುದನ್ನು ಒಪ್ಪಿಕೊಳ್ಳಬಹುದು ಎಂದು ಮನಸ್ಸು ಮಾಡಿದರೂ, ಅಧಿಕಾರಿಗಳು ಗ್ರಾಮಗಳಲ್ಲಿ ಏನು ಕಿರುಕುಳ ಕೊಡುತ್ತಿದ್ದಾರೆ, ಎಷ್ಟು ಗಲಾಟೆಗಳಾಗುತ್ತಿವೆ ಎನ್ನುದನ್ನೂ ಸ್ವಲ್ಪ ಯೋಚನೆ ಮಾಡಬೇಕು. ಚುನಾವಣೆ ಕಾಲದಲ್ಲಿ ಚುನಾವಣೆಗಳಿಗೋಸ್ಕರ ಕಂದಾಯದ ವಸೂಲಿಯನ್ನು ಮುಂದುವರಿಸಿದರು, ಪುನಃ ತಾಲ್ಲೂಕು ಬೋರ್ಡ್ ಚುನಾವಣೆಗಾಗಿ ಮುಂದುವರಿಸಿದರು. ಈಗ ಹಳೆಯ ಬಾಕಿಯನ್ನೆಲ್ಲ ಒಟ್ಟಾಗಿ ಕೊಡಬೇಕೆಂದು ತಗಾದೆ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿರುವ ಇವರಿಗೆ ಜನರ ಕಷ್ಟ ಗೊತ್ತಾಗುವುದಿಲ್ಲ. ಹಳ್ಳಿ ರೈತರ ಕಷ್ಟ ನಮಗೆ ಗೊತ್ತಾಗುತ್ತದೆ. ಈ ದೃಷ್ಟಿಯಿಂದ ಖಚಿತವಾದ ಒಂದು ಹೇಳಿಕೆಯನ್ನು ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ಸರ್ಕಾರದವರು ಏನು ಮಾಡುತ್ತೇವೆಂದು ಹೇಳುವುದರೊಳಗೆ, ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ, ಆ ಸಂದರ್ಭದಲ್ಲಿ ದಬ್ಬಾಳಿಕೆಯನ್ನು ಕೂಡ ನಡೆಸುತ್ತಿದ್ದಾರೆ. ಇದನ್ನು ಮೊದಲು ತಡೆಗಟ್ಟಬೇಕು. ಈ ಬಗ್ಗೆ ಏನು ಹೇಳುತ್ತೀರಿ ಎಂದು ನಿರೀಕ್ಷೆ ಮಾಡುತ್ತಿದ್ದೇವೆ. ಮನೆಯ ಬಾಗಿಲನ್ನು ಕಿತ್ತುಕೊಂಡುಹೋಗಿ ಜಪ್ತಿ ಮಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕಾನೂನು ಇಲ್ಲವಂತಾಗಿ ರೆವಿನ್ಯೂ ಅಧಿಕಾರಿಗಳನ್ನು ಕೇಳುವವರು ಯಾರೂ ಇಲ್ಲದಂತಾಗಿದೆ. ಕಂದಾಯದ ವಸೂಲಿಯನ್ನು ಮುಂದಕ್ಕೆ ಹಾಕಿ ರೈತರಿಗೆ ಕಿರುಕುಳ ಮಾಡದಂತೆ ವ್ಯವಸ್ಥೆ ಮಾಡಬೇಕು.

† ಶ್ರೀ ಎಲ್. ಶ್ರೀಕಂಠಯ್ಯ.—ಶ್ರೀಮಾನ್ ಚನ್ನೇಗೌಡರು ಗಮನ ಸೆಳೆಯುವ ಸೂಚನೆ ಮೂಲಕ ಮಾನ್ಯ ರೆವಿನ್ಯೂ ಸಚಿವರ ಗಮನಕ್ಕೆ ತಂದಾಗ, ನಾನು ಮಧ್ಯೆ ಪ್ರವೇಶ ಮಾಡಿ 28ನೇ ಜನವರಿ 1969ರಲ್ಲಿ ಅಲ್ಪಕಾಲಾವಧಿ ಪ್ರಶ್ನೆಯನ್ನು ಕಳಿಸಿದ್ದೆ; ಅದಕ್ಕೆ ಉತ್ತರ ಕೊಡುತ್ತ ಮೂರು ಸರ್ಕ್ಯುಲರ್‌ಗಳನ್ನು ಸಭೆಯ ಮುಂದೆ ಇಟ್ಟಿರುವುದಾಗಿ ಹೇಳಿ, ಕಂದಾಯವನ್ನು ಹಳೇ ಬಾಕಿ ಎಲ್ಲ ವಸೂಲು ಮಾಡುತ್ತೇವೆಂದು ಹೇಳಿದರು. ಹಾಗೆ ಹೇಳುವಾಗ ಅವರು ಅಸ್ಪಷ್ಟವಾದ ಉತ್ತರವನ್ನು ಕೊಟ್ಟರು. ಅವರು ಆ ದಿನ ಏನು ಹೇಳಿದ್ದಾರೆಂಬುದನ್ನು ನಾನು ಇಲ್ಲಿ ಮಾನ್ಯ ಸಭೆಯ ಅವಗಾಹನೆಗಾಗಿ ಓದುತ್ತೇನೆ :

"ಶ್ರೀ ಎಚ್. ವಿ. ಕೌಜಲಗಿ.—ಆ ರೀತಿಯಾಗಿ ಎಲ್ಲಿಯೂ ಹೆಚ್ಚು ಕಂದಾಯವನ್ನು ವಸೂಲ್ಮಾಡಿಲ್ಲ. ಈ ದಿವಸ ಕಂದಾಯವನ್ನು ಹೇಗೆ ವಸೂಲ್ಮಾಡಲಾಗುತ್ತಿದೆ ಎಂಬುದನ್ನು ತಿಳಿಸತಕ್ಕ ಸರ್ಕ್ಯುಲರ್‌ಗಳನ್ನು ಸಭೆಯ ಮುಂದಿಡಲಾಗಿದೆ.

Sri D. B. Kalmankar.—Has not the Hon'ble Minister assured during the last session that a new Bill will be brought before this House in the current session regarding the settlements of land revenue ?

Sri H. V. Koujalgi.—Yes, Sir. That has also been mentioned in the Governor's Address.

ಶ್ರೀ ಎಸ್. ಶಿವಪ್ಪ.—ಹಿಂದೆ ಇದೇ ಸಭೆಯಲ್ಲಿ ಮಾನ್ಯ ರೆವೆನ್ಯೂ ಸಚಿವರು ರೀಕ್ಲಾಸಿಫಿಕೇಷನ್ ಸರಿಯಾಗಿಲ್ಲ. ಅದನ್ನು ರದ್ದುಮಾಡಿ ಪುನರ್ವಿಮರ್ಶೆ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡುವುದಾಗಿ ಭರವಸೆಯನ್ನು ಕೊಟ್ಟು ಅದರ ತೀರ್ಮಾನ ಬರುವತನಕ ಹಿಂದೆ ಇದ್ದ ಹಳೇ ಕಂದಾಯವನ್ನೇ ವಸೂಲ್ಮಾಡುವುದಾಗಿ ತಿಳಿಸಿರಲಿಲ್ಲವೆ?

ಶ್ರೀ ಎಚ್. ವಿ. ಕೌಜಲಗಿ.—ಆ ಪ್ರಕಾರವೇ ಈಗ ಕಂದಾಯವನ್ನು ವಸೂಲ್ಮಾಡುತ್ತಾರೆ.

ಶ್ರೀ ಎಂ. ಶ್ರೀಕಂಠಯ್ಯ.—ಮಂಡ್ಯಾ ಜಿಲ್ಲೆಯಲ್ಲಿ ಬಲಾತ್ಕಾರವಾಗಿ ಹೆಚ್ಚು ದರದಲ್ಲಿ ಕಂದಾಯವನ್ನು ವಸೂಲ್ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಚ್. ವಿ. ಕೌಜಲಗಿ.—ಅದು ನನ್ನ ಗಮನಕ್ಕೆ ಬಂದಿಲ್ಲ. ಅಂಥ ಯಾವುದಾದರೂ ನಿದರ್ಶನ ಇದ್ದರೆ ನನ್ನ ಗಮನಕ್ಕೆ ತರಲಿ, ವಿಚಾರ ಮಾಡುತ್ತೇನೆ.

ಶ್ರೀ ಎಂ. ಶ್ರೀಕಂಠಯ್ಯ.—ತಾವು ಇಲ್ಲಿ ಉತ್ತರದಲ್ಲಿ ಸೂಚಿಸಿರತಕ್ಕ ಮೂರು ಸುತ್ತೋಲೆಗಳನ್ನು ಕಳುಹಿಸಿದ್ದರೂ ಅಲ್ಲಿ ರೈತರಿಂದ ಬಲಾತ್ಕಾರವಾಗಿ ಹೆಚ್ಚಿನ ದರದಲ್ಲಿ ಕಂದಾಯ ವಸೂಲ್ಮಾಡುತ್ತಿದ್ದಾರೆನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಚ್. ವಿ. ಕೌಜಲಗಿ.—ಅಂಥಾದ್ದನ್ನು ನನ್ನ ಗಮನಕ್ಕೆ ತನ್ನಿ, ವಿಮರ್ಶೆ ಮಾಡುತ್ತೇನೆ. ''

ಈ ರೀತಿಯಾಗಿ ಅವರು ಸ್ಪಷ್ಟವಾಗಿ ಉತ್ತರ ಕೊಟ್ಟರು. ಅದು ಪತ್ರಿಕೆಗಳಲ್ಲಿ ಕೂಡ ಪ್ರಕಟಣೆಯಾಯಿತು. ಅವರು ಹೇಳಿದ ಪ್ರಕಾರ ಹೊಸ ಡಿಮ್ಯಾಂಡ್ ಹಾಕಿ, ಹಳೇ ಕಂದಾಯ ವಸೂಲ್ಮಾಡುತ್ತೇವೆಂದು ಹೇಳಿದರು. ಅನೇಕ ರೈತರು ಪತ್ರಿಕೆಗಳಲ್ಲಿ ಈ ರೀತಿಯಾಗಿ ಬಂದಿದೆ, ಹಳೇ ದರದಲ್ಲಿ ವಸೂಲ್ಮಾಡುವುದಾಗಿ ರೆವೆನ್ಯೂ ಸಚಿವರು ಹೇಳಿಕೆ ಕೊಟ್ಟಿದ್ದಾರೆ ಎಂದರೆ, ಅಧಿಕಾರಿಗಳು ನಮಗೆ ಸರ್ಕಾರದಿಂದ ಯಾವ ಆದೇಶವೂ ಬಂದಿಲ್ಲ, ಹೊಸ ದರದಲ್ಲಿ ವಸೂಲ್ಮಾಡುತ್ತೇವೆಂದು ಹೇಳುತ್ತಾರೆ. ಮಾನ್ಯ ಸದಸ್ಯರಾದ ಚನ್ನಯ್ಯನವರು ಹೇಳಿದಹಾಗೆ ಪ್ರತಿ ಗ್ರಾಮದಲ್ಲಿಯೂ ಮನೆಗಳಿಗೆ ನುಗ್ಗಿ, ಪೋಲಿಸರ ಸಹಾಯದಿಂದ ದನಕರುಗಳನ್ನು ಹಿಡಿದುಕೊಂಡು ಹೋಗಿ ರೈತರಿಗೆ ಬಹಳ ಕಿರುಕುಳ ಕೊಡುತ್ತಿದ್ದಾರೆ. ಈ ದೃಷ್ಟಿಯಿಂದ ಅಲ್ಪಕಾಲಾವಧಿ ಪ್ರಶ್ನೆಯಲ್ಲಿ ಸ್ಪಷ್ಟವಾಗಿ ಕೇಳಿದಾಗ, ಕಾಲ್ ಅಟೆನ್‌ಷನ್ ನೋಟಿಸ್ ಕೊಟ್ಟಾಗ, ರಿಟ್ ಪಿಟಿಷನ್‌ಗಳು ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಿಂದ ಬಂದಿವೆ, ಆ ಜಿಲ್ಲೆಗಳಲ್ಲಿರುವ ವೆಟ್ ಲ್ಯಾಂಡ್ಸ್‌ಗೆ ಅದು ಅನ್ವಯವಾಗುತ್ತದೆ ಎಂದು ಹೇಳಿದರು. ಮಾರನೇ ದಿವಸ ಮಾನ್ಯ ಚನ್ನಬಸಪ್ಪನವರು ಖುಷ್ಕಿ ಜಮೀನುಗಳಿಗೆ ಅನ್ವಯವಾಗುವುದಿಲ್ಲ ಎಂದು ಕೇಳಿದಾಗ, ನೋಡಿ ಹೇಳುತ್ತೇನೆಂದು ಹೇಳಿದರು. ಈಗ ಪರಿಸ್ಥಿತಿ ಏನಾಗಿದೆ ಎಂದರೆ ಮಾನ್ಯ ಸಚಿವರು 28ನೇ ತಾರೀಖು ಹಳೇ ದರದಲ್ಲಿ ಕಂದಾಯ ವಸೂಲ್ಮಾಡುತ್ತೇವೆಂದು ಹೇಳಿದರು. ಕಾಲ್ ಅಟೆನ್‌ಷನ್ ನೋಟೀಸ್ ಮೂಲಕ ಕೇಳಿದಾಗ ಆ ರೀತಿ ಹೇಳಿಯೇ ಇರಲಿಲ್ಲ, ವೆಟ್ ಲ್ಯಾಂಡ್ಸ್‌ಗೆ ಮಾತ್ರ ಸಂಬಂಧಪಟ್ಟಂತೆ ಕೆಲವರು ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಯವರು ರಿಟ್ ಪಿಟಿಷನ್ ಹಾಕಿರುವುದರಿಂದ ಅನ್ವಯವಾಗುತ್ತದೆ ಎಂದು ಹೇಳಿದರು. ಕಾಲ್ ಅಟೆನ್‌ಷನ್ ನೋಟೀಸ್ ಸಂಬಂಧದಲ್ಲಿ ಹೊಸ ದರಗಳಲ್ಲಿ ವಸೂಲ್ಮಾಡುತ್ತೇವೆನ್ನುವ ರೀತಿಯಲ್ಲಿ ಅರ್ಥ ಬರುವ ಹಾಗೆ ಅಸ್ಪಷ್ಟವಾಗಿ ಉತ್ತರ ಕೊಟ್ಟು ಕುಳಿತುಕೊಂಡರು. ಸ್ಪಷ್ಟವಾಗಿ ಯಾವ ರೀತಿ ಕಂದಾಯ ವಸೂಲ್ಮಾಡುತ್ತೀರಿ ಎಂಬುದನ್ನು ಹೇಳಿ, ಆ ರೀತಿ ಹೇಳುವವರೆಗೂ ಸ್ಟೇ ಆರ್ಡರ್ ಕೊಟ್ಟು, ರೀಕ್ಲಾಸಿಫಿಕೇಷನ್ ಆಗುವವರೆಗೂ ಹಳೇ ದರದಲ್ಲಿ ಕಂದಾಯ ವಸೂಲ್ಮಾಡುತ್ತೇವೆ, ರೀಕ್ಲಾಸಿಫಿಕೇಷನ್ ಆದನಂತರ ಹೊಸ ಕಂದಾಯ ವಸೂಲ್ಮಾಡುತ್ತೇವೆ ಎಂದು ಹೇಳಿ ಅಥವಾ ಹೊಸ ದರದಲ್ಲೇ ವಸೂಲ್ಮಾಡುತ್ತೇವೆಂದು ಹೇಳಿ ಎಂದು ಕೇಳಿದಾಗ ಗುಮ್ಮೆಂದು ಯಾರಿಗೂ ಸರಿಯಾದ ಉತ್ತರವನ್ನು ಕೊಡಲಿಲ್ಲ. ನಮ್ಮ ಪ್ರದೇಶದಲ್ಲಿ ರೈತರು ಕೇಳಿದಾಗ, ಸರ್ಕಾರದ ಸ್ಪಷ್ಟವಾದ ನೀತಿ ಏನು ಎಂಬುದನ್ನು ಹೇಳುವುದಕ್ಕೆ ನಾವು ಅಸಮರ್ಥರಾಗಿದ್ದೇವೆ.

ಶ್ರೀ ಎಸ್. ಚನ್ನಯ್ಯ.—15ನೇ ತಾರೀಖು ಚರ್ಚೆಗೆ ಬರಬೇಕಾಗಿದ್ದ ರೆವೆನ್ಯೂ ಬೇಡಿಕೆ 26ನೇ ತಾರೀಖಿಗೆ ಹೋಯಿತು. 10-12 ದಿವಸ ಏನೂ ಹೇಳದೆ ಇದ್ದರೆ ಅಧಿಕಾರಿಗಳು ಹಳ್ಳಿಗಳಲ್ಲಿ ಏನೇನು ತೊಂದರೆ ಕೊಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ರೈತರಿಗೆ ಬಹಳ ತೊಂದರೆ ಕೊಟ್ಟಿದ್ದಾರೆ.

(ಶ್ರೀ ಎಸ್. ಚನ್ನಯ್ಯ)

ನಮ್ಮ ಸ್ನೇಹಿತರು ಹೇಳಿದ ಹಾಗೆ ಬಾಗಿಲು, ಕಿಟಕಿ ಎಲ್ಲ ಕಿತ್ತುಕೊಂಡುಹೋಗುತ್ತಿದ್ದಾರೆ. ಸರ್ಕಾರದಿಂದ ಮುಂದೆ ಆದೇಶ ಬರುವವರೆಗೂ ಮೊದಲಿನಂತೆ ಕಂದಾಯವನ್ನು ವಸೂಲ್ಮಾಡಬೇಕು, ಹೆಚ್ಚು ಕಂದಾಯವನ್ನು ವಸೂಲ್ಮಾಡಬಾರದು ಎಂದು ಅಧಿಕಾರಿಗಳಿಗೆ ಕೂಡಲೇ ತಿಳಿಸಬೇಕೆಂದು ಒತ್ತಿ ಒತ್ತಿ ಹೇಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್) ಡ್ರಾಟ್ ಕಂಡಿಷನ್ಸ್ ಇದ್ದ ಕಡೆ ಭೂಕಂದಾಯವನ್ನು ಸಸ್‌ಪೆಂಡ್ ಮಾಡಿ ರಿಮಿಷನ್ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಈಗ ಹಿಂದಿನಿಂದ ಏನೇನು ಭೂ ಕಂದಾಯ ಉಳಿದಿದೆ, ತಕಾವಿ ಸಾಲ ಉಳಿದಿದೆ, ಅದನ್ನು ಕೊಡಲು ತಗಾದೆ ಮಾಡಿ, ಆಯಿಲ್ ಇಂಜಿನ್, ಪಂಪ್‌ಸೆಟ್‌ಗಳನ್ನೂ ಕೂಡ ಬಿಡದೆ ತೆಗೆದುಕೊಂಡು ಜಮೀನು ಹರಾಜು ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಅಧಿಕಾರಿಗಳು ಅಮಾನುಷ ರೀತಿಯಿಂದ ವರ್ತಿಸುತ್ತಿದ್ದಾರೆ. ಈ ರೀತಿಯಿಂದ ವಸೂಲ್ಮಾಡಬೇಕೆಂದು ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್ ಇರುತ್ತದೆಯೇ? ಎರಡು ವರ್ಷದ ಬಾಕಿಯನ್ನೇ ಕೊಡುವುದಕ್ಕೆ ಸಾಧ್ಯವಿಲ್ಲದೆ ಇರುವಾಗ 10 ವರ್ಷದ ಬಾಕಿಯನ್ನು ಒಮ್ಮೆಲೇ ವಸೂಲ್ಮಾಡುತ್ತಿದ್ದಾರೆ. ಇದಕ್ಕೆ ಸ್ಟೇ ಆಗಬೇಕು.

† **Sri H. M. CHANNABASAPPA** (Periyapatna).—Sir, it is within the knowledge of your goodself and the Chief Minister and the Minister for Revenue that on the floor of this House a categorical statement was made, if my memory is correct, by the Minister for Revenue that since there are a number of discrepancies and a number of differences the Government would like to take power in order to go into those things and rectify and till then they would order collection of revenue on the old basis. If I could rely on my memory and it is also supported by the official statement read out by Sri Srikantaiah, the assurance was this :

> "ಶ್ರೀ ಶಿವಪ್ಪ.—ಇದೇ ಸಭೆಯಲ್ಲಿ ಮಾನ್ಯ ರೆವಿನ್ಯೂ ಸಚಿವರು ರೀಕ್ಲಾಸಿಫಿಕೇಷನ್ ಸರಿಯಾಗಿಲ್ಲ, ಇದನ್ನು ಪುನರ್ವಿಮರ್ಶೆ ಮಾಡುವುದಕ್ಕೆ ಒಂದು ಸಮಿತಿ ನೇಮಕ ಮಾಡುವುದಾಗಿ ಭರವಸೆ ಕೊಟ್ಟು ಅದರ ಪ್ರಕಾರ ಹಿಂದೆ ಇರುವ ಕಂದಾಯವನ್ನೇ ವಸೂಲುಮಾಡುವುದಾಗಿ ತಿಳಿಸಿರಲಿಲ್ಲವೇ ?
>
> ಶ್ರೀ ಎಚ್. ವಿ. ಕೌಜಲಗಿ.—ಆ ಪ್ರಕಾರವೇ ಈಗ ಕಂದಾಯವನ್ನು ವಸೂಲ್ಮಾಡುತ್ತಾರೆ."

The mistake does not lie with the officers. If officers are called upon to collect tax in pursuance of the rules in force well, they will have to go ahead. So the mistake lies with the Government. The Government must have a clear understanding in this regard. I do not say that they should not collect, but they should collect according to the assurance held out in this House. If an assurance held out in the House has no value, I do not think any other thing can have any value with this Government. So I would appeal to the Chief Minister through you and to the Minister for Revenue, "Please see for heaven's sake that you do not go back on what assurance you have given." The Chief Minister and the Minister for Revenue should stick to their assurances. If they go back on it, I cannot prevent it, but it would not be fair and it would not be dignified on the part of the Government. The Government also has a prestige and Government has a duty to perform, and should strike to its commitments here. So I look forward for a statement on the part of the Government that they would not

go back on the assurance given and that they would issue orders immediately to collect on the old basis subject to rivision at a later date, provided it is necessary in pursuance of the powers that the Government may take through legislation to be brought before the House.

† ಶ್ರೀ ಜಿ. ದುರ್ಗಪ್ಪ (ಭರಮಸಾಗರ).—ನಾನು ಹಿರಿಯೂರಿನಿಂದ ಇದೇ ತಾನೆ ಬಂದೆ. ಜಮೀನು ಕಂದಾಯದ ಪ್ರಶ್ನೆ ಇಂದು ಚರ್ಚೆಗೆ ಬರುತ್ತದೆ ಎಂದು ಗೊತ್ತಿತ್ತು. ಆದುದರಿಂದ ನಾನು 3 ಗಂಟೆಗೆ ಬಂದೆ. ಬೇಕಾದರೆ ಟ್ರಂಕ್‌ಕಾಲ್ ಮಾಡಿ ಜಿಲ್ಲಾಧಿಕಾರಿಗಳಿಂದ ಸಮಾಚಾರ ತರಿಸಿ ಕೊಳ್ಳಲಿ. ಇಂದು 5 ರೂಪಾಯಿ ಕಂದಾಯ ಕೊಡುವವರು 120 ರೂಪಾಯಿ ಕೊಡಬೇಕಾಗಿದೆ. 3–4 ವರ್ಷದ ಬಾಕಿ ಒಂದೇ ಸಲ ಕೇಳುತ್ತಿದ್ದೀರಿ. ಇಂದು ಅಷ್ಟನ್ನೂ ಒಂದೇ ಸಲ ಕೊಡುವುದು ಹೇಗೆ ? ಕಾಂಗ್ರೆಸ್ಸಿನವರು ಓಟು ತೆಗೆದುಕೊಂಡು ಹೋದರು, ಅವರು ಬರುವ ಹಾಗಿಲ್ಲ, ನೀವಾದರೂ ಕೇಳಿ ಎಂದು ನನ್ನ ಬಳಿಗೆ ಬಂದು ಜನರು ಹೇಳುತ್ತಿದ್ದಾರೆ. ರೆವೆನ್ಯೂ ಮಂತ್ರಿಗಳು ಪ್ರವಾಸ ಬಂದಾಗ ನಾನು ವಿಚಾರವನ್ನು ಹೇಳಿದೆ. ತೊಂದರೆಯಾಗಿದೆ, 5 ರೂಪಾಯಿ 14 ಆಣೆ ಕಂದಾಯ ಕೊಡಬೇಕಾದವರು 180 ರೂ. ಕೊಡಬೇಕು ಎಂದು ಹೇಳುತ್ತಿದ್ದಾರೆ, ಇದು ಅನ್ಯಾಯ ಎಂದು ಹೇಳಿದಾಗ ವಿಚಾರ ಮಾಡುವುದಾಗಿ ಮಂತ್ರಿಗಳು ಹೇಳಿದರು. ಇವತ್ತಿನವರೆಗೂ ಏನೂ ಮಾಡಿಲ್ಲ. ಕೆರೆಯಲ್ಲಿ ನೀರಿದೆಯೋ, ಅದನ್ನು ಉಪಯೋಗಿಸಿದ್ದಾರೆಯೋ ಎಂಬುದನ್ನೂ ಸಹ ನೋಡಿಲ್ಲ. ಕೆರೆಯೆಲ್ಲಾ ಒಣಗಿ ಹೋಗಿದೆ. ರೈತರು ಊರುಬಿಟ್ಟು ಹೋಗುತ್ತಿದ್ದಾರೆ. ಹಿರಿಯೂರು ನಾಡಿನ ಪರಿಸ್ಥಿತಿಯನ್ನು ನೋಡಬೇಕು. ಎತ್ತಿಗೆ ಜ್ವರ ಬಂತು ಎಂದು ಎಮ್ಮೆಗೆ ಬರೆ ಹಾಕಿದರೆ ಹೇಗೆ ? ಪುಟ್ಟಸ್ವಾಮಿಯವರು ವಾದಿಸಬಹುದು, ಆದರೆ ಪ್ರತಿವಾದದ ಪ್ರಶ್ನೆ ಇದಲ್ಲ. ಹೋಗಿ ಪರಿಸ್ಥಿತಿ ನೋಡಲಿ, ನಂತರ ಉತ್ತರ ಕೊಡಲಿ, ನಾವು ಹೇಳಿದ ಹಾಗೆ ಕೇಳಬೇಕಾಗಿಲ್ಲ. ನಿಮಗೆ ಸಿಬ್ಬಂದಿ ಇದೆ, ವಿಚಾರ ತಿಳಿದುಕೊಳ್ಳಬಹುದು, ಮನಸ್ಸಿದ್ದರೆ ಮಾರ್ಗವಿದೆ. ಜನರು ಕಣ್ಣೀರಿಡುತ್ತಿದ್ದಾರೆ. ಮಂತ್ರಿಗಳು ಹಿರಿಯರು, ಅವರಲ್ಲಿ ನನಗೆ ಪೂಜ್ಯತೆಯ ಭಾವನೆ ಇದೆ. ಖಂಡಿತ ಅವರು ಮನಸ್ಸು ಮಾಡಿ ಪರಿಹಾರ ದೊರಕಿಸಬೇಕು. ಈಗ ತೊಂದರೆಯಾಗಿದೆ, ನಾನು ಹೇಳುವುದು ಉತ್ಪ್ರೇಕ್ಷೆಯಲ್ಲ. ನಿಜವಾಗಿ ಹೇಳುವುದಾದರೆ ನಾನು ಇರುವ ಪರಿಸ್ಥಿತಿಯನ್ನು ಸರಿಯಾಗಿ ಹೇಳುತ್ತಿಲ್ಲ ಅನ್ನಿಸುತ್ತದೆ. ಪಕ್ಷದ ಪ್ರಶ್ನೆ ಇದರಲ್ಲಿಲ್ಲ. ನಿಜವಾದ ಪರಿಸ್ಥಿತಿ ಅರಿತು ಚನ್ನಬಸಪ್ಪನವರು ಹೇಳಿದಂತೆ ಕೂಡಲೆ ಹಿಂದಿನ ದರದ ಪ್ರಕಾರ ವಸೂಲು ಮಾಡಿ ಆಮೇಲೆ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಪಂಚಾಯಿತಿ ಏಕೆ ಮಾಡಿದ್ದೀರಿ ? ಅದಕ್ಕೆ ರೆವೆನ್ಯೂ ಪರ್ಸೆಂಟೇಜ್ ಬಂದಿಲ್ಲ. ಅದರ ವಿಚಾರವನ್ನೂ ರೆವೆನ್ಯೂ ಮಂತ್ರಿಗಳು ಹೇಳಿದರೆ ಒಳ್ಳೆಯದು. ಹೀಗಾದರೆ ಚುನಾವಣೆ ಮಾಡುವುದೇಕೆ ? ಹಣ ಬಾರದೆ ಸುಮ್ಮನೆ ಇರಬೇಕಾಗಿದೆ. ನಮ್ಮಲ್ಲಿ ಕೆಲವರು ಹಳೆಯ ಕಂದಾಯ ಕೊಟ್ಟಿದ್ದಾರೆ. ಹಣ ಕೊಡದಿದ್ದರೆ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳ ಗತಿಯೇನು ಎಂಬುದನ್ನು ಹೇಳಬೇಕು.

ಶ್ರೀ ಎನ್. ಎ. ಚನ್ನೇಗೌಡ.—ಕೋಯರ್ಸಿವ್ ಮೆಷರ್ಸ್ ತೆಗೆದುಕೊಳ್ಳುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದರು. ಅದಕ್ಕೆ ನಿದರ್ಶನ ಕೊಡುತ್ತೇನೆ. ಶ್ರೀರಂಗಪಟ್ಟಣ ತಾಲ್ಲೂಕ್ ಆಫೀಸಿಗೆ 6-2-62ರಲ್ಲಿ ಒಂದು ಸರ್ಕ್ಯುಲರ್ ಬಂದಿದೆ. ಸರಕಾರದವರು ತಾಲ್ಲೂಕು ಆಫೀಸಿಗೆ ಅದನ್ನು ಕಳಿಸಿದ್ದಾರೆ. ಹಿಂದಿದ್ದ ರಿಯಾಯಿತಿಯನ್ನು ರದ್ದುಮಾಡಿ, ವಸೂಲಿಯನ್ನು ತೀವ್ರ ಮಾಡಬೇಕು, ಕಂದಾಯ ಮತ್ತು ನೀರು ಸರದಿ ವಸೂಲು ಮಾಡಲು ನಿರ್ಧಾರವಾಡಿ ವಸೂಲು ಮಾಡಲು ತೀವ್ರ ಕ್ರಮ ಕೈಕೊಳ್ಳಬೇಕು ಎಂದು ತಾಲ್ಲೂಕು ಆಫೀಸಿಗೆ ಮತ್ತು ಸಬ್ ಡಿವಿಜನ್ ಆಫೀಸಿಗೆ ತಿಳಿಸಿದ್ದಾರೆ. ಹೀಗೆ ತಿಳಿಸಿದಮೇಲೆ ಅಕ್ಕಿ ಮಾಡಿಸಲು ಮಿಲ್ಲುಗಳಿಗೆ ಬತ್ತ ತೆಗೆದುಕೊಂಡು ಹೋಗಿದ್ದರೆ ಅದನ್ನು ಕಿತ್ತುಕೊಂಡು ಕಂದಾಯದ ಬಾಕಿಗೆ ಜಮ ಮಾಡಿಕೊಂಡಿದ್ದಾರೆ. ಕಬ್ಬನ್ನು ಫ್ಯಾಕ್ಟರಿಗೆ ತೆಗೆದುಕೊಂಡು ಹೋಗಿದ್ದರೆ ಕಬ್ಬು ಮಾರಿ ಕಂದಾಯಕ್ಕೆ ಹಾಕಿ ಕೊಂಡಿದ್ದಾರೆ. ಆದುದರಿಂದ ಸರಕಾರ ಒಂದು ಸ್ಪಷ್ಟವಾದ ನಿಲುವನ್ನು ತಾಳಬೇಕು. ಅಧಿಕಾರಿಗಳು ರೈತರಿಗೆ ಎಷ್ಟು ಕಷ್ಟ ಕಿರುಕುಳ ಕೊಡುತ್ತಿದ್ದಾರೆಂಬುದು ಮಂತ್ರಿಗಳಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಗೊತ್ತಿದ್ದರೆ ಅವರು ಈ ರೀತಿ ಉದಾಸೀನದಿಂದ ಇರುತ್ತಿರಲಿಲ್ಲ. ಆದುದರಿಂದ ಈ ತಕ್ಷಣವೇ ಒಂದು ನಿರ್ದಿಷ್ಟ ಸುತ್ತೋಲೆಯನ್ನು ಹೊರಡಿಸಿ, ಜನತೆಗೆ ಆಗುತ್ತಿರುವ ಕಷ್ಟ ನಷ್ಟವನ್ನು ತಪ್ಪಿಸಬೇಕೆಂದು ಒತ್ತಾಯ ಮಾಡುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ಕಂದಾಯದ ವಿಷಯದಲ್ಲಿ ಮಂತ್ರಿಗಳು ಹೇಳಿಕೆ ಕೊಡುವುದಕ್ಕೆ ಮುಂಚೆ ಕೆಲವು ವಿಷಯ ತಿಳಿಸಬೇಕಾಗಿದೆ. 15ನೆಯ ತಾರೀಖು ರೆವೆನ್ಯೂ ಡಿಮ್ಯಾಂಡ್ ಇದೆ, ಅಂದು ಸ್ಟೇಟ್‌ಮೆಂಟ್ ಮಾಡಬಹುದು. ಸರಕಾರ ಸರಿಯಾದ ನಿಲುವನ್ನು ತಾಳಿ ವಸೂಲುಮಾಡುವು

(ಶ್ರೀ ಎಸ್. ಬಂಗಾರಪ್ಪ)

ದನ್ನು ನಿಲ್ಲಿಸಲು ನಿರ್ದೇಶ ಕೊಡಬೇಕು. ಷಿಕಾರಿಪುರ ತಾಲ್ಲೂಕು ರೈತರ ಸಂಘದಿಂದ ನನಗೆ ಟೆಲಿಗ್ರಾಂ ಬಂದಿದೆ. ಹಳೆಯ ಕಂದಾಯ ವಸೂಲು ಮಾಡುವುದಾಗಿ ಹೋದಸಾರಿ ಹೇಳಿ, ಅನಂತರ ಹೊಸ ಕಂದಾಯ ವಸೂಲು ಮಾಡುತ್ತಿದ್ದಾರೆ. ಮನೆಯಲ್ಲಿರುವುನ್ನೆಲ್ಲಾ ಹರಾಜು ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ, ಟೆಲಿಗ್ರಾಮನ್ನು ಮಂತ್ರಿಗಳಿಗೆ ಮತ್ತು ಮುಖ್ಯಮಂತ್ರಿಗಳಿಗೆ ಕಳಿಸುತ್ತೇನೆ ದಯೆಯಿಟ್ಟು ಪರಿಶೀಲಿಸಬೇಕು. ಮೈಸೂರು ಜಿಲ್ಲೆಯಲ್ಲೂ ಇದೇ ರೀತಿ ಮಾಡುತ್ತಿದ್ದಾರೆ. ಇದಕ್ಕೆ ಪತ್ರ ಬಂದಿದೆ, ಅದನ್ನೂ ಸಹ ಕಳಿಸುತ್ತೇನೆ. ಇದಕ್ಕೆ ಕೂಡಲೆ ಆರ್ಡರು ಮಾಡಬೇಕು. ಈ ವಿಷಯ ದಲ್ಲಿ ಟೆಲಿಗ್ರಾಂ ಬಂದಿದೆಯೆಂದು ಅಜೀಜ್‌ಸೇಟ್‌ರವರು ಫೋನ್ ಮಾಡಿ ತಿಳಿಸಿದ್ದಾರೆ. ರೆವಿನ್ಯೂ ಡಿಮ್ಯಾಂಡಿನ ಮೇಲೆ ಸ್ಟೇಟ್‌ಮೆಂಟ್ ಮಾಡಿದರೆ ನಿಧಾನವಾಗುವುದರಿಂದ ಈ ದಿವಸವೇ ಟೆಲಿಗ್ರಾಂ ಮಾಡಿ ಎಲ್ಲಾ ತಾಲ್ಲೂಕು ತಾಸೀಲ್ದಾರರಿಗೂ ವಿಷಯ ತಿಳಿಸಿ ಮುಂದಿನ ಸೂಚನೆ ಕೊಡುವವರೆಗೆ ಕಂದಾಯವನ್ನು ವಸೂಲು ಮಾಡಬಾರದು ಎಂದು ಹೇಳಬೇಕು.

ಬಹಳ ದಿವಸ ಆಗುವುದಿಲ್ಲ 17-18ಕ್ಕೆ ಆರ್ಡರ್ ಹೊರಡಿಸಬಹುದು, ತಿಳಿಸಬಹುದು, ಅಲ್ಲಿಯ ವರೆಗೂ ರೆವಿನ್ಯೂ ಕಲೆಕ್ಷನ್ ನಿಲ್ಲಿಸಿ ಅಂತ ಹೇಳಿ ಟೆಲಿಗ್ರಾಂ ಕೊಡಬೇಕೆಂದು ಹೇಳುತ್ತಾ ಇದ್ದೇನೆ. ಓಂದಲ್ಲ, ಮೇಲಿಂದ ಮೇಲೆ ನಮಗೆ ರೆಪ್ರಸೆಂಟೇಷನ್‌ಗಳು ಬರುತ್ತಾ ಇವೆ, ಟೆಲಿಗ್ರಾಂಗಳು ಬರುತ್ತಾ ಇವೆ. ಆದ್ದರಿಂದ ಮುಖ್ಯಮಂತ್ರಿಗಳು ಟೆಲಿಗ್ರಾಂ ಮೂಲಕ ಹೇಳತಕ್ಕ ವಿಷಯದ ಬಗ್ಗೆ ಹೇಳಿಕೆ ಕೊಡಬೇಕೆಂದು ತಮ್ಮ ಮೂಲಕ ಹೇಳುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ಪಾಯಿಂಟ್ ಆಫ್ ಆರ್ಡರ್, ಸ್ವಾಮಿ. 'ನಾನು ಯಾರನ್ನೂ ಮಾತನಾಡುವುದಕ್ಕೆ ಪರ್ಮಿಟ್ ಮಾಡಿಲ್ಲ' ಎಂದು ತಾವು ಹೇಳಿದಿರಿ. ಹಾಗಾದರೆ ಈ ಮನೆಯ ಸದಸ್ಯರು ಈಗ ಯಾರ್ಯಾರು ಮಾತನಾಡಿದ್ದಾರೆಯೋ ಅದು ರೆಕಾರ್ಡ್‌ನಲ್ಲಿ ಹೋಗುವು ದಿಲ್ಲ, ಪ್ರೆಸ್‌ನಲ್ಲಿ ಬರುವುದಿಲ್ಲ ಎಂಬ ಭಾವನೆ ನನಗೆ ಇದೆ. ಆದ್ದರಿಂದ ಈ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ಕಾರ್ಯಕ್ರಮದ ಪಟ್ಟಿ ಪ್ರಕಾರ ಹೋಗುವುದು ಅವಶ್ಯಕ, ಅದೇ ರೀತಿಯಿಂದ ಎಲ್ಲಾ ಸದಸ್ಯರೂ ಮಾತನಾಡಿದ್ದಾರೆ.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಸಭಾಪತಿಗಳೇ, ಗ್ರಾಮಾಂತರಗಳಲ್ಲಿರತಕ್ಕ ರೈತರ ಮೇಲೆ ಅನೇಕ ತೆರಿಗೆಗಳು ಮತ್ತು ಕಂದಾಯ ಬೀಳುತ್ತಾ ಇದೆ ಎಂದು ಸ್ನೇಹಿತರು ಹೇಳಿದ್ದಾರೆ. ಸುಮಾರು 21 ವರ್ಷದಿಂದ ಶೇಕಡ 33 ಭಾಗ ಟ್ಯಾಕ್ಸ್ ಅವರು ಕೊಟ್ಟುಕೊಂಡು ಬಂದಿದ್ದಾರೆ, ಕಾಂಗ್ರೆಸ್‌ಗೆ ಓಟು ಕೊಟ್ಟಿದ್ದಾರೆ ಮತ್ತು ತಾಲ್ಲೂಕು ಬೋರ್ಡಿನಲ್ಲಿ ಶೇಕಡ 5 ಭಾಗ ಕೂಡ ಕಾಂಗ್ರೆಸ್‌ನವರನ್ನು ಸೋಲಿಸುವುದಕ್ಕೆ ಅವರಿಂದ ಆಗಲಿಲ್ಲ ಆದ್ದರಿಂದ ಅವರು ಆ ರೀತಿ ಹೇಳುವುದು ಸರಿಯಲ್ಲ. ಜನರು ಒಪ್ಪಿಕೊಂಡಿದ್ದಾರೆ, ತಮ್ಮ ಸ್ಥಾನಮಾನಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವುದಕ್ಕೆ ಕೊಡುತ್ತಾ ಇದ್ದಾರೆ, ಆದ್ದರಿಂದ ಟ್ಯಾಕ್ಸನ್ನು ವಸೂಲು ಮಾಡಿ ಎಂದು ಹೇಳುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಕೆಲವು ದಿವಸಗಳಿಂದ ಕಂದಾಯ ವಸೂಲಿ ಬಗ್ಗೆ ಸರ್ಕಾರದ ನೀತಿ ಸ್ಪಷ್ಟವಾಗಿಲ್ಲ, ಸ್ಪಷ್ಟಪಡಿಸಬೇಕೆನ್ನುವಂತಹ ಬೇಡಿಕೆ ಕೆಲವು ಮಾನ್ಯ ಸದಸ್ಯರಿಂದ ಈ ಸಭೆಯಲ್ಲಿ ಬರುತ್ತಾ ಇದೆ. ಕಂದಾಯಕ್ಕೆ ಸಂಬಂಧಪಟ್ಟ ಬೇಡಿಕೆಗಳನ್ನು ಮಾನ್ಯ ಮಂತ್ರಿಗಳು ಮಂಡಿಸಬೇಕೆಂದು ನಿಗದಿ ಮಾಡಿದ ದಿವಸ ಅವರು ಮಂಡಿಸುವುದಕ್ಕೆ ಆಗಲಿಲ್ಲ, ಆ ದಿವಸ ಇದು ವಿಪುಲವಾಗಿ ಚರ್ಚೆಯಾಗಿ ಮೊದಲು ನಮ್ಮ ನೀತಿ ಏನು, ನಿಲುವು ಏನೆಂಬುದನ್ನು ಸ್ಪಷ್ಟಪಡಿಸಿದ ಏನಃ ಇದರ ಬಗ್ಗೆ ಚರ್ಚೆಯಾಗಬಾರದು ಎಂದು ಒಂದು ನಿಲುಮೆಯನ್ನು ವಿರೋಧ ಪಕ್ಷದ ಸದ ಸ್ಯರು ತೆಗೆದುಕೊಂಡರು. ಆ ದಿವಸ ಚರ್ಚೆಯಾಗಲಿಲ್ಲ. 15ನೇ ತಾರೀಖು ಬಹುಶಃ ಚರ್ಚೆಗೆ ಬರುತ್ತದೆ ಎಂದು ನಿರ್ಣಯವಾಗಿತ್ತು, 15ನೇ ತಾರೀಖಿನ ದಿವಸಕ್ಕೆ ಮುಂದೆ ನಮ್ಮ ನಿಲುವು ಏನು ಹಿಂದೆ ನಾವು ಏನೇನು ಆಶ್ವಾಸನೆಗಳನ್ನು ಈ ಮನೆಯಲ್ಲಿ ಕೊಟ್ಟಿದ್ದೆವು ಮತ್ತು ಹೈಕೋರ್ಟಿನಲ್ಲಿ ಕೆಲವು ರಿಟ್ ಪಿಟಿಷನ್‌ಗಳು ಇವೆ ಅಲ್ಲೂ ಕೂಡ ಕೆಲವು ಆಶ್ವಾಸನೆಗಳನ್ನು ಕೊಟ್ಟಿದ್ದೆವು ಅವುಗಳ ನ್ನೆಲ್ಲಾ ಪೂರ್ಣವಾಗಿ ಪರಿಶೀಲನೆ ಮಾಡಿ ಒಂದು ಸ್ಟೇಟ್‌ಮೆಂಟ್ ಮಾಡಬೇಕೆಂಬ ವಿಚಾರ ನಮ್ಮ ಸಹೋದ್ಯೋಗಿಗಳಾದ ರೆವಿನ್ಯೂ ಖಾತೆಯ ಮಂತ್ರಿಗಳು ಮಾಡಿಕೊಂಡಿದ್ದರು. 15ನೇ ತಾರೀಖು ಇದು ಮಾಡಬೇಕಾಗುತ್ತದೆ ಎಂಬ ವಿಚಾರ ಇತ್ತು. ಅದಕ್ಕೆ ಬೇಕಾದ ಎಲ್ಲ ವಿಷಯಗಳನ್ನು ಸಂಗ್ರಹ ಮಾಡುತ್ತಾ ಇದ್ದರು. ಇದೀಗ ಅವರ ಜೊತೆಯಲ್ಲಿ ಚರ್ಚೆ ಮಾಡಿದೆ. ಅವರು ಹೇಳಿದರು

15ನೇ ತಾರೀಖು ನನ್ನ ಬೇಡಿಕೆ ಬರುತ್ತದೆ ಎಂದು ತಿಳಿಸಿದ್ದರಿಂದ ಆ ದಿವಸ ಸ್ಟೇಟ್‌ಮೆಂಟ್ ಮಾಡ ಬೇಕೆಂದು ಉದ್ದೇಶದಿಂದ ಇದ್ದೆ, ಅದಕ್ಕೆ ತಯಾರು ಮಾಡುತ್ತಾ ಇದ್ದೆ ಎಂದು. ಆದ್ದರಿಂದ ಅವರು 15ನೇ ತಾರೀಖಿನ ದಿವಸ ಸ್ಟೇಟ್‌ಮೆಂಟ್ ಮಾಡಲಿ ಎಂದು ವಿನಂತಿಸಿಕೊಳ್ಳುತ್ತೇನೆ. ಹಿಂದೆ ಏನೇನು ಆಶ್ವಾಸನೆಗಳನ್ನು ಕೊಟ್ಟಿದ್ದೇವೆಯೋ ಆ ಎಲ್ಲಾ ವಿಚಾರಗಳನ್ನೂ ಗಮನಿಸಿ 15ನೇ ತಾರೀಖಿನ ದಿನಸ ರೆವಿನ್ಯೂ ಮಿನಿಸ್ಟರು ಸ್ಟೇಟ್‌ಮೆಂಟ್ ಮಾಡುತ್ತಾರೆ ಎಂದು ಭರವಸೆ ಕೊಡುತ್ತೇನೆ.

† Sri K. PUTTASWAMY.—Sir, Sri Nagappa raised a Point of Order and wanted to know fro n the Government side as to what is going to happen to the item 41 (a), expenditure connected with national emergency. Under this item 41 (a) there is no proposal for incurring any expenditure during 1969-70. Therefore, it is not included in today's Agenda.

Sri M. NAGAPPA.—Before the Hon'ble Minister commits to that, let him reconsider that the amount has been allotted to some other Department. It has been added in item No. 39 Miscellaneous, and item 71 is the minor head. Why does the Hon'ble Minister commit such mistakes on the Floor of the House ?

ಶ್ರೀ ಕೆ. ಪುಟ್ಟಸ್ವಾಮಿ.—41 (ಎ) ರಾಷ್ಟ್ರೀಯ ತುರ್ತು ಪರಿಸ್ಥಿತಿ, ಪೌರ ರಕ್ಷಣೆ ಇದರಲ್ಲಿ 68-69ಕ್ಕೆ ಇದೆ 69-70ಕ್ಕೆ ಇಲ್ಲ.

ಶ್ರೀ ಎಂ. ನಾಗಪ್ಪ.—ಇಲ್ಲ ಸ್ವಾಮಿ, ದಯವಿಟ್ಟು ಎಸ್ಟಿಮೇಟ್ಸ್ ಕಮಿಟಿ ಪುಸ್ತಕ ನೋಡಿ, ಕೆಳಗಡೆ ನೋಟ್ ಬರೆದಿದ್ದಾರೆ. ಇದರ ಬದಲಾಗಿ ಈ ಅಮೌಂಟ್ 39-71ರಲ್ಲಿ ಆಡ್ ಮಾಡಿದ್ದೇವೆ ಎಂದು ನೋಟ್ ಕೊಟ್ಟಿದ್ದಾರೆ. ಇದರಲ್ಲಿ ಪ್ರೊವೈಡ್ ಮಾಡಿಲ್ಲ ಎಂಬ ಮಾತು ಸತ್ಯ ಎಂದು ಹೇಳುತ್ತೇನೆ.

Sri K. PUTTASWAMY.—Even if it is so, it will co ne under some other Demand ; there will be no Demand under 41 (a).

Mr. SPEAKER.—The position is very clear. I also enquired and I am told that no amount is included under 41 (a). It has been included under some other head and it will come in course of time.

Sri M. NAGAPPA.—For this particular purpose no amount has been provided under this Demand for the year 1969-70.

Mr. SPEAKER.—That has been included in some other head of account.

Sri H. SIDDAVEERAPPA (Harihar).—Mr. Speaker Sir, I rise to oppose the demands just now moved by the hon. Chief Minister. These two demands in respect of General Administration Department and the Police Department are very important demands. So far as the General Administration is concerned, I want to speak first. In a general discussion on this budget of nearly 200 crores, I wanted to show how the General Administration has suffered and suffered irretrievably during the present administration. We all know that out of our revenues of 200 crores we spend annually about 75 crores for administration and about 75 crores of rupees for debt charges, leaving only barely 40 to 50 crores of rupees for the total development of the State, including education and various other things. We all know that to-day the adminstration in this State is paralysed beyond measure. The establishment charges have swelled-up, the returns to the community are nil, with the

(SRI H. SIDDAVEERAPPA)

result, wherever you go—especially in the rural areas—you find a lot of despondency. Go to any place—taluk office or any other office—we find that not a single file moves unless somebody is greased. What is called speed money, what is called lubricating money, what is called money to get work done has to be freely given; otherwise, no work is possible to be got done by any villager. That is the common talk and that is the experience of everybody. In spite of our having a top-heavy administration, the Government in this country is moving in a manner as though they are interested in writing tons and tons of papers and sending away all sorts of reports, holding only conferences, holding only exhibitions and spending most of the time in moving about from place to place. Sir, it is the experience of every one of us who have common knowledge of our rural areas that it is impossible to get any work done either at the taluk office or at any other level. I have brought about 400 to 500 replies, I have received during the course of these two years from the Ministers and Officers downwards, whenever I write anything about public matters. I want to place all these things in your hands. One thing is certain that whenever we write a letter, prompt comes a sterio-type reply stating that the matter is engaging the attention of the Government, the matter is being looked into. But in the ultimate analysis what has happened is not even a single work would have been done. I have been going through all these things with so much meticulous care to find out whether any good could come to the people at all. Sir, I stayed in the constituency, as early as in 1967, or a period of 15 days ; I heard the villagers ; I heard their grievances and I sent a memo prepared to all the Ministers which everyone acknowledged. Whenever I write a letter, pat comes a sterio-type reply stating that the matter is engaging the attention of the Government. Therefore Sir, I want you to examine all these replies that I have received and I have especially brought only what was readily available here and not those that were available in Davanagere, so that you may get it examined and find out whether they have given relief atleast even in one case ; whether they have looked to the grievances of the people. When such is the position, what is the good of having this top-heavy administration ? Have they been doing any good to the people at all ? People have been cursing. Here is an administration which does no good to them. Formerly Sir, when the Britishers were there, it was thought, it was the duty of the white man to do economic and social justice to the State. Now after the Congress people have taken that garb and began to say that it is their responsibility, what has happened is they have demoralised the administration. Administration is demoralised because officers are not allowed to function in an efficient manner, officers are not allowed to function in an impartial manner as every order they want is subjective but not objective. At every stage, we find there is excessive interference from the partymen, with the result that all officers including

ಈ ರೀತಿ ಹೇಳುವಾಗ ಯಾವರೀತಿ ತಡೆಗಟ್ಟುವುದಕ್ಕೆ ಸಾಧ್ಯವಿದೆ? ಈಗ ಹೆಚ್ಚುತ್ತಿದೆಯೋ ಅಥವಾ ಕಡಿಮೆಯಾಗುತ್ತಿದೆಯೋ ಎಂಬುದನ್ನು ಸ್ವಲ್ಪ ವಿಮರ್ಶೆಮಾಡಬೇಕು. ಬಹಳ ಕಾಲದಿಂದ ಇರಬಹುದು. ಆದರೆ ಇದಿತ್ತು ಎಂದು ಹೇಳುವಾಗ ಇದರ ಹಾವಳಿ ಯಾವ ಪ್ರಮಾಣದಲ್ಲಿತ್ತು, ಈಗ ಯಾವ ರೀತಿಯಿದೆ ಎಂಬುದನ್ನು ಯೋಚನೆ ಮಾಡಬೇಕು. ಶ್ರೀ ಎಸ್. ಕೆ. ಡೇ ಅವರು ಒಂದು ಸಾರಿ ಕೇಂದ್ರ ಮಂತ್ರಿಮಂಡಲದಲ್ಲಿ ಇದ್ದಾಗ, ಇಲ್ಲಿಗೆ ಬಂದಾಗ ಸರಕಾರಿ ಕೇಸಿಗಾಗಿ ಬಂದಾಗ ಕುಮಾರ ಕೃಪಾದಲ್ಲಿ ಇಳಿದುಕೊಂಡಿದ್ದರು. ನನಗೆ ಅವರ ಜೊತೆಯಲ್ಲಿ ಮಾತನಾಡುವ ಸಂದರ್ಭ ಸಿಕ್ಕಿತ್ತು. ಮಾತನಾಡುವಾಗ ಅವರು ಹಿಂದೆ ತಮ್ಮ ಪೂರ್ವಾಶ್ರಮದಲ್ಲಿ ಮೈಸೂರಿಗೆ ಒಂದು ಸಲ ಬಂದು ಮೈಸೂರಿನ ಆಡಳಿತದ ವಿಚಾರವಾಗಿ ಏನು ಮನಗಂಡಿದ್ದರೆಂಬುದನ್ನು ಪ್ರಸ್ತಾಪ ಮಾಡಿದರು. ಸ್ವರಾಜ್ಯ ನಮಗೆ ಬರುವುದಕ್ಕೆ ಮುಂಚಿನ ವಿಚಾರ ಹೇಳಿದರು. ಅವರು ಯಾವುದೋ ಒಂದು ಎಲೆಕ್ಟ್ರಿಕ್ ಗುಡ್ಸ್ ಫರ್ಮಿಗೆ ಸಂಬಂಧಪಟ್ಟಹಾಗೆ ಏಜೆಂಟಾಗಿ ಬಂದಹಾಗೂ, ಯಾವುದೋ ಮಾರಾಟ ಮಾಡುವುದಕ್ಕೆ ಸಂಬಂಧಪಟ್ಟಹಾಗೆ ಬಂದಹಾಗೂ, ನಮ್ಮ ಆಗಿನ ಕಾಲದ ಇಲಾಖೆಗೆ ಸಂಬಂಧಪಟ್ಟ ಚೀಫ್ ಎಂಜಿನಿಯರ್ ಹತ್ತಿರ ಒಂದು ಸಾಮಾನು ಕೊಳ್ಳಬೇಕೆಂದೂ, ಕೊಳ್ಳುವಾಗ ಒಂದು ಸರ್ಟನ್ ಪರ್ಸೆಂಟೇಜ್ ಅವರಮೇಲೆ ಎಂಜಿನಿಯರು ತೆಗೆದುಕೊಳ್ಳಬೇಕೆಂದು ಪ್ರಸ್ತಾಪ ಮಾಡಿದ ಹಾಗೂ, ಆಗ ಆ ಎಂಜಿನಿಯರು ನಾವು ಈ ರೀತಿಯಲ್ಲಿ ಯಾವುದೇ ಕಮಿಷನ್ ತೆಗೆದುಕೊಳ್ಳುವುದಿಲ್ಲ, ನಾವು ಮಾಡುವುದು ಸರಕಾರದ ಕೆಲಸಕಾರ್ಯ ನಾವು ತೆಗೆದುಕೊಳ್ಳುವುದು ಕಾನೂನಿಗೆ ವಿರೋಧವಾದುದು, ತೆಗೆದುಕೊಂಡರೆ ಅಪರಾಧವಾಗುತ್ತದೆ ಎಂದು ಹೇಳಿದರು ಎಂಬುದಾಗಿ ತಿಳಿಸಿದರು. ಅಂದರೆ ಆಗಿನ ಕಾಲದಲ್ಲೂ ಕೂಡ ಲಂಚದ ಹಾವಳಿ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಸಂಬಂಧಪಟ್ಟಹಾಗೆ ಇರಲಿಲ್ಲ ಎಂಬ ವಿಷಯವನ್ನು ಅವರು ಹೇಳುತ್ತಾ ಹಿಂದೆ ದಕ್ಷತೆಯಿಂದ ನಡೆದಿದ್ದಾರೆ, ಈಗ ಆಡಳಿತ ಸಡಿಲವಾಗುತ್ತಿದೆ ಎಂದು ಹೇಳಿದರು. ಹೀಗೆ ಒಂದು ಉದಾಹರಣೆ ಹೇಳಿದರು. ಇದರ ಅರ್ಥ ಲಂಚ ಎಲ್ಲಾ ಕಾಲದಲ್ಲೂ ಇತ್ತು, ಈಗಲೂ ಇದೆ, ಮುಂದೆಯೂ ಇರುತ್ತದೆ ಎಂದರೆ, ಈ ದೃಷ್ಟಿಯಿಂದ ನೋಡುವುದಾದರೆ ತಪ್ಪಿಸುವುದು ಕಷ್ಟವಾಗುತ್ತದೆ ಎಂದು ಸಮಾಧಾನಪಟ್ಟುಕೊಂಡಿರುವುದಕ್ಕಾಗುವುದಿಲ್ಲ. ಈ ದಿವಸ ಶ್ರೀ ಸಿದ್ದವೀರಪ್ಪನವರು ಹೇಳಿದಹಾಗೆ ಲಂಚದ ಹಾವಳಿ ನಿಜವಾಗಿಯೂ ಜಾಸ್ತಿಯಾಗಿದೆ ಎಂಬುದನ್ನು ನಾನು ಈ ಸಭೆಯಲ್ಲಿ ಹೇಳದೆ ವಿಧಿಯಿಲ್ಲ. ಮೊನ್ನೆ ನಾನು ಊರಿಗೆ ಹೋಗಿದ್ದೆ, ನಮ್ಮ ಊರಿನಲ್ಲಿ ಒಬ್ಬ ಹರಿಜನ ರೈತನಿಗೆ ಸಾಗುವಳಿ ಚೀಟಿ ಬೇಕಾಗಿತ್ತು, ನಾಲ್ಕಾರು ವರ್ಷಗಳಾಗಿದ್ದರೂ ಸಾಗುವಳಿ ಚೀಟಿ ಕೊಟ್ಟಿಲ್ಲ, ಸಂಬಂಧಪಟ್ಟ ಸರ್ವೇಯರು ಜಮೀನು ಅಳತೆ ಮಾಡಬೇಕಾದರೆ 25 ರೂಪಾಯಿ ಕೊಟ್ಟರೆ ಶಿಫಾರಸು ಮಾಡುತ್ತೇನೆ ಎಂದು ಹೇಳಿದ್ದಾರೆ, ನನ್ನಲ್ಲಿ ಹಣವಿಲ್ಲ, ಕೊಡಬೇಕು ಎಂದು ನನ್ನನ್ನು ಕೇಳಿದ. ಹೀಗೆಯೇ ಕೋರ್ಟಿನಲ್ಲಿ ಒಂದು ವ್ಯವಹಾರ ನಡೆಯಿತು, ವ್ಯವಹಾರ ನನಗೆ ತಿಳಿದ ಪ್ರಕಾರ ನಡೆದಿರುವುದು ಕೆಲವು ದಿವಸಗಳ ಹಿಂದೆ. ಒಂದು ಕಡೆ ಜಾತ್ರೆಯಾಯಿತು, ಅದರಲ್ಲಿ ಒಬ್ಬ ಜೂಜಾಟದಲ್ಲಿ ನಿರತನಾಗಿದ್ದ, ಸಂಬಂಧಪಟ್ಟ ಸಬ್-ಇನ್‌ಸ್ಪೆಕ್ಟರು ಅದು ತಪ್ಪು ಎಂದು ಹಿಡಿದ, ಅವನಲ್ಲಿ 850 ರೂಪಾಯೋ ಏನೋ ಇತ್ತು, ಅದನ್ನು ವಶಪಡಿಸಿಕೊಂಡು ಆತನಮೇಲೆ ಕೇಸು ಹಾಕಿದ. ಹಣ ತೆಗೆದುಕೊಂಡಮೇಲೆ 500 ರೂಪಾಯಿಗಳನ್ನು ತಾನಿಟ್ಟುಕೊಂಡು 350 ರೂಪಾಯಿಗಳನ್ನು ಮಾತ್ರ ಕೋರ್ಟಿನಲ್ಲಿ ಹಾಜರುಮಾಡಿದ. ಖೈದಿ ಪೋಲೀಸು ಅಧಿಕಾರಿ ಮಾಡಿರುವುದನ್ನು ಮುನ್ಸಿಫರ ಮುಂದೆ ಹೇಳಿದ. ಆದರೆ ರುಜುವಾತಿರಲಿಲ್ಲ. ಆದ್ದರಿಂದ ಅವನನ್ನು ಯಾರು ಕೋರ್ಟಿನ ಮುಂದೆ ಹಾಜರು ಪಡಿಸಿದರೋ ಅವರನ್ನು ಬಹಳ ಧೈರ್ಯದಿಂದ ಹೆದರಿಸಿ ಖೈದಿ ಹೇಳುವುದು ನಿಜವೇ ಎಂದು ಕೇಳಿದರು. ಅವನು ಹೆದರಿ ಇದ್ದದ್ದು ಇದ್ದಹಾಗೆ ಹೇಳಿದ. ಇದರಿಂದ ಮುಂದೆ ಯಾವರೀತಿಯ ಪರಿಣಾಮವಾಗುತ್ತದೆ? ಅದಿರಲಿ ಇಂಥ ನಿದರ್ಶನಗಳನ್ನು ನಾವು ಮೇಲಿಂದಮೇಲೆ ಹಳ್ಳಿಗಳಲ್ಲಿ ನೋಡಬಹುದು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಎಲ್ಲೆಲ್ಲೂ ಈ ವಿಚಾರವನ್ನು ಕೇಳುತ್ತಿದ್ದೇವೆ. ಇಷ್ಟೆಲ್ಲಾ ಕಿವಿಗೆ ಬೀಳುತ್ತಿದ್ದರೂ ಏಕೆ ಜನರು ಹೇಳುವುದಿಲ್ಲ, ಇಂಥ ಕಡೆ ತಪ್ಪು ಮಾಡುತ್ತಿದ್ದಾರೆಂದು ಏಕೆ ತಿಳಿಸುವುದಿಲ್ಲ! ಇದನ್ನು ಸ್ವಲ್ಪ ಯೋಚನೆ ಮಾಡಬೇಕು. ಮೊದಲು ಯಾರೇ ಒಬ್ಬ ಅಧಿಕಾರಿಯ ಮೇಲೆ ಆರೋಪ ಮಾಡಿದರೂ ಲಂಚ ಕೇಳಿದನೆಂದು ಹೇಳಿದರೂ ಹೇಳಿದವರಿಗೆ ಶಿಕ್ಷೆ ಇರಲಿಲ್ಲ. ಇತ್ತೀಚೆಗೆ ಒಂದು ಸರಕಾರಿ ಆರ್ಡರು ಮಾಡಿ ಲಂಚ ಯಾರು ತೆಗೆದುಕೊಂಡಿರುವರೋ ಅವರಿಗೂ ಅವರಿಗೆ ಕೊಟ್ಟವರಿಗೂ ಹೀಗೆ ಇಬ್ಬರಿಗೂ ಶಿಕ್ಷೆ ಮಾಡಲಾಗುವುದು ಎಂದು ಸರಕಾರ ತಿಳಿಸಿದೆ. ಈ ಕಾರಣದಿಂದಲೋ ಏನೋ ಇತ್ತೀಚೆಗೆ ಜನರು ತಾವು ಲಂಚ ಕೊಟ್ಟಿದ್ದೇವೆ ಎಂದು ಹೇಳಿದರೆ ತಮಗೆ ಶಿಕ್ಷೆಯಾಗುವುದೆಂಬ ಹೆದರಿಕೆಯಿಂದಲೋ ಏನೋ ಯಾರೂ ಹೇಳುವುದಕ್ಕೆ ಮುಂದೆ ಬರುವುದಿಲ್ಲ ಎಂಬ ಭಾವನೆ ಇದೆ. ಇದರಲ್ಲಿ ನಿಜಾಂಶ ಎಷ್ಟಿದೆಯೋ ಏನೋ. ಜನರು ಮುಂದೆ ಬರದಿರುವುದಕ್ಕೆ ನನ್ನ ಅಭಿಪ್ರಾಯದಲ್ಲಿ ಇದೊಂದೇ ಕಾರಣವಲ್ಲ. ಇನ್ನೊಂದು ಪ್ರಬಲವಾದ ಕಾರಣ ಏನೆಂದರೆ ಲಂಚ ಕೊಡದಿದ್ದರೆ ಕೆಲಸ

(ಶ್ರೀ ಡಿ. ದೇವರಾಜ ಅರಸ್)

ವಾಗುವುದಿಲ್ಲ ಎಂಬ ಭಾವನೆ ಜನರಲ್ಲಿ ಬಂದಿದೆ, ದೂರು ಹೇಳುವುದಕ್ಕೆ ಬದಲಾಗಿ ಕೇಳಿದಷ್ಟು ಲಂಚ ಕೊಟ್ಟು ಕೆಲಸವನ್ನು ಬೇಗ ಮಾಡಿಕೊಂಡು ಹೋಗುವುದು ಉತ್ತಮವೆಂಬ ಮನೋಭಾವನೆ ಜನರಲ್ಲಿ ಮೂಡಿದೆ.

ಯಾವ ಒಂದು ದೊಡ್ಡ ಪ್ರಮಾಣದಲ್ಲಿ ದುರ್ವ್ಯವಹಾರ ನಡೆಯುತ್ತಾ ಇದೆಯೋ ಅದು ಸರ್ಕಾರದ ಗಮನಕ್ಕೆ ಬರುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಈ ಬಗ್ಗೆ ಹೇಳುತ್ತಿಲ್ಲ ಎಂದರೆ, ನಿಮ್ಮ ಗಮನಕ್ಕೆ ಬಾರದೇ ಹೋದದ್ದರಿಂದ ನಡೆಯುತ್ತಿಲ್ಲ ಎಂದು ಭಾವಿಸುವುದಾದರೆ ಅದು ನಿಜವಾದ ವಿಚಾರವಾಗುವುದಿಲ್ಲ. ನಿಜವಾದ ವಿಚಾರ ನಿಮ್ಮ ತಿಳುವಳಿಕೆಗೆ ಬಂದ ಹಾಗಾಗುವುದಿಲ್ಲ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇತ್ತೀಚೆಗೆ ಲಂಚದ ಮಾತು ಬಹಳ ಜಾಸ್ತಿಯಾಗುತ್ತಾ ಇದೆ. ಇದನ್ನು ತಡೆಗಟ್ಟುವುದಕ್ಕೆ ನಾವು ತಮ್ಮ ಮುಂದೆ ಈ ಸಂದರ್ಭದಲ್ಲಿ ಈ ರೀತಿ ಮಾಡಿದರೆ ನಿಂತು ಹೋಗುತ್ತದೆ ಎಂದು ಹೇಳುವುದಕ್ಕಾಗಲಿ, ಮದ್ದನ್ನು ಕಂಡುಹಿಡಿದಿದ್ದೇವೆ ಕೂಡಲೇ ನಿಂತು ಹೋಗುತ್ತದೆ, ಇದನ್ನು ಸರ್ಕಾರ ಮಾಡುವುದಕ್ಕೆ ಸಾಧ್ಯ ಎಂದಾಗಲಿ ನಾನು ನಂಬುವುದಿಲ್ಲ. ಇವತ್ತು ವೀರೇಂದ್ರ ಪಾಟೀಲರ ಸರ್ಕಾರ ಬಂದಿದೆ ಇದು ಅವರ ಕಾಲದಲ್ಲಿ ಜಾಸ್ತಿಯಾಗಿದೆ ಅಂತಲೂ ಅಲ್ಲ. ಇದು ದಿನೇ ದಿನೇ 20 ವರ್ಷಗಳಿಂದ ಆಡಳಿತ ಸಡಿಲವಾದ ಹಾಗೆ, ವಿಪರೀತ ವಿಪ ರೀತವಾಗಿ ಕಾನೂನು ಮಾಡಿದ ಹಾಗೆ, ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡುವುದು, ನಾನಾ ರೀತಿಯಲ್ಲಿ ಕಂಟ್ರೋಲ್, ಲೈಸೆನ್ಸ್ ಇಂಥಾದ್ದೆಲ್ಲ ಯಾವಾಗ ದೇಶದಲ್ಲಿ ಹೆಚ್ಚಾಗುತ್ತಾ ಇದೆ. ಸರ್ಕಾರದ ಹಿಡಿತ ಒಂದಲ್ಲ ಒಂದು ರೀತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಜಾಸ್ತಿಯಾಗುತ್ತಾ ಇರುವುದೂ ಲಂಚದ ಹಾವಳಿ ಜಾಸ್ತಿಯಾಗುವುದಕ್ಕೆ ಕಾರಣ. ಇದರ ಜೊತೆಯಲ್ಲಿ ಜನರಲ್ಲಿರತಕ್ಕ ಮನೋಭಾವ, ಅವರಲ್ಲಿರತಕ್ಕ ಅಜ್ಞಾನ, ಕಾನೂನು ಕಟ್ಟಲೆಗಳ ತಿಳುವಳಿಕೆ ಇಲ್ಲದೇ ಇರುವುದೂ ಕೂಡ ಇದಕ್ಕೆ ಬಹುಮಟ್ಟಿಗೆ ಕಾರಣವಾಗಿದೆ. ಕಾಗದ ಪತ್ರಗಳ ಓಡಾಟ ನಿಧಾನವಾಗುತ್ತಾ ಇದೆ, ಎಲ್ಲಾ ಹಂತದಲ್ಲಿ ಇದೂ ಕೂಡ ಲಂಚ ಹೆಚ್ಚಾಗುವುದಕ್ಕೆ ಒಂದು ಕಾರಣವಾಗಿದೆ. ಯಾವುದಾದರೂ ಒಂದು ರೀತಿಯ ಕಾರ್ಯಕ್ರಮ ತೆಗೆದುಕೊಂಡರೆ ಇದು ಸರಿಹೋಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ನಾನಾ ಮುಖವಾಗಿ ಇದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಆಡಳಿತದಲ್ಲಿ ಬೇಗ ಬೇಗ ವಿಷಯಗಳು ತೀರ್ಮಾನವಾಗುವ ಹಾಗೆ ಮಾಡುವುದಕ್ಕೆ ಸಾಧ್ಯವಿದೆ. ಆ ರೀತಿ ಮಾಡಿದರೆ ಇದರ ಶಖೆ ಕಡಿಮೆಯಾದೀತು. ಲಂಚಗುಳಿತನ ಕಡಿಮೆಯಾದೀತು ಎಂದು ನನ್ನ ನಂಬಿಕೆ. ಸ್ವಾಮಿ, ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟ ಮತ್ತು ರಾಜ್ಯ ಮಟ್ಟದಲ್ಲಿ ಈ ಮೂರು ಹಂತದಲೂ ಆಡಳಿತ ಕ್ರಮ ಹೇಗಿದೆ ಎಂದರೆ ಇತ್ತೀಚೆಗೆ ವೀರೇಂದ್ರ ಪಾಟೀಲ್‌ರವರು ಅನೇಕ ಸಂದರ್ಭಗಳಲ್ಲಿ ಪ್ರೆಸ್ ಸ್ಟೇಟ್‌ಮೆಂಟ್‌ನಲ್ಲೂ ಕೂಡ ಹೇಳಿದ್ದಾರೆ. ಏನೆಂದರೆ ಸೆಕ್ರೆಟೇರಿಯಟ್ ಲೆವಲ್‌ನಲ್ಲಿ ಕಾಗದಗಳು ತ್ವರಿತವಾಗಿ ತೀರ್ಮಾನವಾಗಬೇಕು, ಹಾಗೆ ಮಾಡುತ್ತಾ ಇದ್ದೇವೆ ಎಂದು. ಕೆಲವು ಇಲಾಖೆಗಳಲ್ಲಿ ತೀರ್ಮಾನ ಮಾಡುವುದಕ್ಕೆ ಪ್ರಯತ್ನ ನಡೆದಿದೆ, ಕೆಲಮಟ್ಟಿಗೆ ಯಶಸ್ವಿಯಾಗಿದ್ದಾರೆ ಎಂದು ಇಲ್ಲಿನ ಅಂಕಿಅಂಶಗಳಿಂದ ನೋಡಿದ್ದೇನೆ. ಕೇವಲ ಸೆಕ್ರೆಟೇರಿಯಟ್ ಹಂತ ಅಷ್ಟರಿಂದ ಸಾಲುವುದಿಲ್ಲ. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್, ಜಿಲ್ಲಾ ಮಟ್ಟ, ಮತ್ತು ತಾಲ್ಲೂಕು ಮಟ್ಟದಲ್ಲಿ ಕಾಗದಗಳ ಓಡಾಟ, ತೀರ್ಮಾನ ಬೇಗ ಬೇಗ ಆಗುತ್ತಾ ಇದೆಯೇ ಪ್ರತಿಯೊಬ್ಬ ಅಧಿಕಾರಿಯೂ ತನ್ನ ಜವಾಬ್ದಾರಿಯನ್ನು ನಿರ್ವಹಣೆ ಮಾಡುತ್ತಾ ಇದ್ದಾನೆಯೇ ಇಲ್ಲವೇ ಎಂಬ ವಿಚಾರದಲ್ಲಿ ನಾವು ಯಶಸ್ವಿಯಾಗಿಲ್ಲ ಎಂಬ ವಿಷಯವನ್ನು ನಾನು ಮುಖ್ಯ ಮಂತ್ರಿಗಳ ಮತ್ತು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಇದಕ್ಕೆ ಕಾರಣ ತಾಲ್ಲೂಕು ಮಟ್ಟದಲ್ಲಿರತಕ್ಕ ಅಧಿಕಾರಿಗಳಿಗೆ ಬಹುಮಟ್ಟಿಗೆ ತಮಗೆ ಹೊರಿಸಿರತಕ್ಕ ಜವಾಬ್ದಾರಿಯ ಅರಿವೇ ಇರುವುದಿಲ್ಲ. ಆದ್ದರಿಂದ ಜವಾಬ್ದಾರಿಯನ್ನು ಅವರು ಹೊರುವುದಕ್ಕೆ ಇಷ್ಟಪಡುವುದಿಲ್ಲ—ಷೆಲ್ವಿಂಗ್ ದಿ ರೆಸ್‌ಪಾನ್ಸಿಬಲಿಟಿ—ಹೀಗೆ ತನ್ನ ಜವಾಬ್ದಾರಿಯನ್ನು ಮೇಲ್ಪಟ್ಟ ಅಧಿಕಾರಿಯ ಮೇಲೆ ಹಾಕುತ್ತಾನೆ. ಅಲ್ಲಿಂದ ಜಿಲ್ಲೆಗೆ ಹೋಗುತ್ತದೆ, ಜಿಲ್ಲಾ ಮಟ್ಟದಲ್ಲಿ ಅವರು ತಮ್ಮ ಜವಾಬ್ದಾರಿ ಯನ್ನು ಮತ್ತೆ ರಾಜ್ಯ ಮಟ್ಟಕ್ಕೆ ಹೊತ್ತು ಹಾಕುತ್ತಾರೆ, ಹೀಗೆ ಕಾಗದಗಳ ಓಡಾಟ ನಡೆದು ಬಹುಮಟ್ಟಿಗೆ ಸಂಬಂಧಪಟ್ಟ ಅಧಿಕಾರಿ ತನ್ನ ಮಟ್ಟದಲ್ಲಿ ತಾನು ಸಂಪೂರ್ಣ ಜವಾಬ್ದಾರಿ ನಿರ್ವಹಣೆ ಏನು ಮಾಡಬೇಕಾಗಿದೆಯೋ ಅದನ್ನು ಮಾಡುತ್ತಿಲ್ಲ. ಇದಕ್ಕೆ ನನ್ನ ಅಭಿಪ್ರಾಯದಲ್ಲಿ ಎರಡು ಕಾರಣ ಇವೆ. ಒಂದು ಕಾರಣ ಸಂಬಂಧಪಟ್ಟ ಅಧಿಕಾರಿಗೆ ತನ್ನ ಜವಾಬ್ದಾರಿ ಏನು ಎಂಬುದರ ಪೂರ್ಣ ಜ್ಞಾನ ಅವನಿಗೆ ಇಲ್ಲ. ಅದು ಅವನ ತಿಳಿವಳಿಕೆಗೇ ಬಂದಿರುವುದಿಲ್ಲ, ಅವನು ಆತನಿಗೆ ಸಂಬಂಧಪಟ್ಟ ಕಾನೂನುಗಳನ್ನು, ಮ್ಯಾನ್ಯುಯಲ್‌ಗಳನ್ನು ಓದಿರುವುದಿಲ್ಲ, ಇದನ್ನು ಅನೇಕ

ನಿದರ್ಶನಗಳನ್ನು ಕೊಟ್ಟು ಹೇಳಬಲ್ಲೆ. ಕಾನೂನಿನ ಚೌಕಟ್ಟು ಗೊತ್ತಿಲ್ಲದೆ ಹೋದ ಮೇಲೆ ತನಗೆ ಸರ್ಕಾರ ಏನು ಅಧಿಕಾರವನ್ನು ಕೊಟ್ಟಿದೆ ಎಂಬುದು ಆತನಿಗೆ ಗೊತ್ತಿರುವುದಿಲ್ಲ. ಆದ್ದರಿಂದ ಅದನ್ನು ನಿರ್ವಹಣೆ ಮಾಡುವುದಕ್ಕೆ ಅವನು ಹಿಂಜರಿಯುತ್ತಾನೆ. ಇನ್ನೊಂದು ಕಾರಣ ಎಂದರೆ ತನ್ನ ಜವಾಬ್ದಾರಿ ಏನು ಕಾನೂನು ರೀತ್ಯ ಇದೆ ಎಂಬುದನ್ನು ತಿಳಿದು ಆ ಜವಾಬ್ದಾರಿಯನ್ನು ತಾನು ಹೊರುವುದರಿಂದ ತನಗೆ ತೊಂದರೆಯಾಗುವುದು ಏಕೆ ಅಂತ ಅದನ್ನು ಮೇಲ್ಪಟ್ಟದವರಿಗೆ ಕಳುಹಿಸೋಣ ಅಂತ ಹೇಳಿ ಮೇಲಕ್ಕೆ ಹೊತ್ತು ಹಾಕತಕ್ಕ ಒಂದು ಮನೋಭಾವ ಎಲ್ಲಾ ಹಂತದಲ್ಲಿ ಇರುವುದೂ ಕೂಡ ಈ ಕಾಗದಗಳ ವಿಲೇ ವಿಧಾನವಾಗುವುದಕ್ಕೆ ಬಹುಮಟ್ಟಿಗೆ ಕಾರಣವಾಗಿದೆ. ಇನ್ನೊಂದು ಕಾರಣ ಎಂದರೆ ಮಂತ್ರಿಗಳು ಪ್ರವಾಸ ಹೋಗುವಾಗ ಎಲ್ಲರಿಗೂ ಅವರ ಅನುಭವಕ್ಕೆ ಬರುತ್ತ ಇದೆ. ತಾಲ್ಲೂಕು ಮಟ್ಟದಲ್ಲಿ ಎರಡು ಎಕರೆ ಕೊಡುವುದಕ್ಕೆ ಅಮಲ್ದಾರರಿಗೆ ಅಧಿಕಾರ ಇದ್ದರೆ ಅದೂ ಕೂಡ ಮಂತ್ರಿಗಳಿಗೇ ಅರ್ಜಿ ಬರುತ್ತದೆ ಅಲ್ಲಿಗೆ ಕಳುಹಿಸುತ್ತಾರೆ, ಏಕೆಂದರೆ ಕಾನೂನು ಇರಲಿ, ಬಿಡಲಿ ಮಂತ್ರಿಗಳಿಗೆ ಅರ್ಜಿ ಕಳುಹಿಸಿದರೆ ತನಗೆ 4-2-5 ಎಕರೆ ಭೂಮಿ ಬರುತ್ತದೆ ಎಂಬ ನಂಬಿಕೆ ಇದೆ. ಅಮಲ್ದಾರರಿಗೆ ಅಥವಾ ಡೆಪ್ಯೂಟಿ ಕಮಿಷನರಿಗೆ ಅರ್ಜಿ ಕೊಟ್ಟರೆ ಅವರಿಗೆ ಇರುವ ಒಂದು ಕಾನೂನಿನ ಪರಿಮಿತಿಗೆ ಅದು ಒಳಪಡದಿದ್ದರೆ, ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ ಎಂಬ ಗಾಬರಿಯಿಂದ ಮೇಲಿನವರಿಗೆ ಅರ್ಜಿ ಕಳುಹಿಸಿ ಏನಾದರೂ ಮಾಡಿ ಅಸೆಂಬ್ಲಿ ಸದಸ್ಯರ ಮುಖೇನ ಅಥವಾ ತಾವು ಓಟು ಮಾಡಿರತಕ್ಕ ಜನ ಇರುತ್ತಾರೆಯಲ್ಲಾ— ಸ್ಥಳೀಯ ಮುಖಂಡರು ಅವರನ್ನು ಕರೆದುಕೊಂಡು ಬಂದಾದರೂ ಈ ಮಟ್ಟದಲ್ಲಿ ಒತ್ತಡ ಹೇರಿ ತನ್ನ ಕಾರ್ಯವನ್ನು ಮಾಡಿಸಿಕೊಳ್ಳಬಹುದು ಎಂಬ ಭಾವನೆ ಎಲ್ಲಾ ಕಡೆಯೂ ತಾಂಡವಾಡುತ್ತಾ ಇದೆ. ಟ್ರಾನ್ಸ್‌ಫರ್ ವಿಚಾರ ತೆಗೆದುಕೊಳ್ಳಿ, ಪ್ರಮೋಷನ್ ವಿಚಾರ ತೆಗೆದುಕೊಳ್ಳಿ, ತನ್ನ ಮನೆಯಲ್ಲಿ ಹೆಂಗಸರು ಮಕ್ಕಳು ಖಾಯಿಲೆ ಇದ್ದಾರೆ ಅದಕ್ಕೆ ಏನಾದರೂ ಮಾಡಿ ಇಲ್ಲೇ ಇರಬೇಕು, ಬೇರೆ ಕಡೆಗೆ ಹೋಗಬಾರದು ಎಂಬ ವಿಚಾರದಲ್ಲಿ ಮಂತ್ರಿಗಳ ಮೇಲೆ ಪ್ರಭಾವ ಬೀರಲು ಸದಸ್ಯರ ಮೇಲೆ ಪ್ರಭಾವ ಬೀರಲು ಸ್ಥಳೀಯ ಮುಖಂಡರನ್ನು ಕರೆದುಕೊಂಡು ಬರತಕ್ಕ ವಿಪರೀತವಾದ ಸನ್ನಿವೇಶ ಇರುವುದರಿಂದ ಇದೂ ಒಂದು ಬಹುಮಟ್ಟಿಗೆ ಕಾರಣವಾಗಿದೆ. ಸರ್ಕಾರದವರು ಒಂದು ಕೆಲಸ ಮಾಡಬಹುದು. ತಾಲ್ಲೂಕು ಹಂತದಲ್ಲಿ, ಜಿಲ್ಲೆಯ ಹಂತದಲ್ಲಿ ಅಧಿಕಾರಿಗಳು ತಮ್ಮ ಜವಾಬ್ದಾರಿಯ ನಿರ್ವಹಣೆ ಮಾಡುತ್ತಾ ಇದ್ದಾರೆಯೇ ಇಲ್ಲವೇ ಎಂಬುದನ್ನು ಇವತ್ತು ನೋಡುತ್ತಾ ಇಲ್ಲ. ಡೆಪ್ಯೂಟಿ ಕಮಿಷನರ ತಲೆಯ ಮೇಲೆ ಅನೇಕ ಕೆಲಸಕಾರ್ಯಗಳನ್ನು ಹೊರಿಸುತ್ತಾ ಇದ್ದೇವೆ, ಯಾವ ಒಂದು ಕಾನೂನು ತೆಗೆದುಕೊಂಡರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಅದರ ಜವಾಬ್ದಾರಿಯನ್ನು ಡೆಪ್ಯೂಟಿ ಕಮಿಷನರೇ ನಿರ್ವಹಿಸಬೇಕಾಗಿದೆ. ಆದ್ದರಿಂದ ಬೇರೆ ಕಡೆಗಳಿಗೆ ಹೋಗಿ ತಾಲ್ಲೂಕು ಹಂತದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಹೀಗಾದರೆ ಯಾರೂ ಆಗಿಂದಾಗ್ಯೆ ವಿಮರ್ಶೆ ಮಾಡದೇ, ಸರಿಯಾಗಿ ಕೆಲಸ ಮಾಡುತ್ತಿಲ್ಲ ಅಂತ ತೋರಿಸಿಕೊಡದೇ ಹೋದ ಪಕ್ಷದಲ್ಲಿ ಅವರು ಇಷ್ಟ ಬಂದಹಾಗೆ ಕೆಲಸ ಮಾಡುತ್ತಾರೆ. ಇದನ್ನು ಸುಧಾರಣೆ ಮಾಡಬೇಕಾದರೆ ಆಯಾ ಹಂತದಲ್ಲಿರತಕ್ಕ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಕೆಳಮಟ್ಟದ ಅಧಿಕಾರಿಗಳ ಕೆಲಸವನ್ನು ಆಗಿಂದಾಗ್ಗೆ ನೋಡುತ್ತಾ ಇರತಕ್ಕ ಜವಾಬ್ದಾರಿಯನ್ನು ಹೊತ್ತು ಕೆಲಸ ಮಾಡಿದರೆ ಬಹುಮಟ್ಟಿಗೆ ಇದು ಸುಧಾರಣೆಯಾಗಬಹುದು.

6–30 P.M.

ಮತ್ತೆ ಶ್ರೀಮಾನ್ ಸಿದ್ಧವೀರಪ್ಪನವರು ಒಂದು ಮಾತನ್ನು ಹೇಳಿದರು. ಅವರು ವಾಸ ಮಾಡತಕ್ಕ ಹರಿಹರ ನ್ಯಾಷನಲ್ ಹೈವೇನಲ್ಲಿದೆ. ಹರಿಹರವನ್ನು ದಾಟಿ ಹೋಗಬೇಕಾಗಿದ್ದರೆ ಎಲ್ಲರೂ ತುಂಗಭದ್ರಾ ನದಿಗೆ ಕಟ್ಟಿರತಕ್ಕ ಹರಿಹರದ ಬಳಿ ಇರತಕ್ಕ ಸೇತುವೆಯಮೇಲೆ ಹಾದು ಹೋಗಬೇಕು. ಅಲ್ಲಿರತಕ್ಕದ್ದು ಅದು ಒಂದೇದಾರಿ. ಎಷ್ಟೋ ಕೆಲವುವೇಳೆ ಶ್ರೀಮಾನ್ ಸಿದ್ಧವೀರಪ್ಪನವರು ಅಲ್ಲಿ ನಾಲ್ಕಾರು ಜನ ಮಂತ್ರಿಗಳು ಕಾರಿನಲ್ಲಿ ಹಾದುಹೋಗುವುದನ್ನು ನೋಡಿದ್ದಾರೆ. ಆದರಿಂದ ಅವರ ದೃಷ್ಟಿ ಮಂತ್ರಿಗಳ ಪ್ರವಾಸದ ಮೇಲೆ ಬೀಳುವುದಕ್ಕೆ ದಾರಿ ಆಗಿದೆ. ಮಂತ್ರಿಗಳು ಹಾಗೆ ಪ್ರವಾಸ ಹೋದರೆ ಇವರೇಕೆ ಹೀಗೆ ತಕರಾರು ಮಾಡಬೇಕು ? ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳ ಸಂಖ್ಯೆ ಜಾಸ್ತಿಯಾದಾಗ ಹೀಗೆ ಸಂಚಾರ ಮಾಡತಕ್ಕ ಮಂತ್ರಿಗಳ ಸಂಖ್ಯೆಯೂ ಜಾಸ್ತಿಯಾಗಿ ಕಾಣಲೇ ಬೇಕು. ಮಾನ್ಯ ಸಿದ್ಧವೀರಪ್ಪನವರು ಈ ಮಂತ್ರಿಗಳು ಆದಷ್ಟು ತಮ್ಮ ಪ್ರವಾಸ ಕಾರ್ಯವನ್ನು ಕಡಮೆ ಮಾಡಿಕೊಳ್ಳಬೇಕು ಎಂದು ಹೇಳಿದರು. ಹಾಗೆ ಅವರು ಪ್ರವಾಸವನ್ನು ಕೈಗೊಳ್ಳಬಾರದು ಅಂದರೆ ಅವರು ಇಲ್ಲಿ ಕುಳಿತು ಮಾಡುವುದಾದರೂ ಏನು ? ಅದಕ್ಕಾಗಿ ಅವರು

(ಶ್ರೀ ಡಿ. ದೇವರಾಜ ಅರಸ್)

ಹೆಚ್ಚಿಗೆ ಪ್ರವಾಸವನ್ನು ಮಾಡಲೇಬೇಕು. ಆದರೆ ಇವರ ಪ್ರವಾಸದಿಂದ ಸರ್ಕಾರಕ್ಕೆ ಟಿ.ಎ. ಮತ್ತು ಡಿ.ಎ. ಗಳ ರೂಪದಲ್ಲಿ ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತಿದೆ ಎಂಬುದನ್ನು ನಾನು ಒಪ್ಪಲಾರೆ. ನಾವು ಈಗ ಇರತಕ್ಕದ್ದು ಪ್ರಜಾಪ್ರಭುತ್ವ ಯುಗ, ಈ ಯುಗದಲ್ಲಿ ನಾವು ಹೀಗೆ ಪ್ರವಾಸ ಕಾರ್ಯಗಳಿಗೆ ಹಣವನ್ನು ಖರ್ಚುಮಾಡಬಾರದೆಂದರೆ ಹಣವೇನಾದರೂ ಉಳಿಯುತ್ತದೆಯೇ ಅಂದರೆ ಇಲ್ಲ ಎನ್ನಬೇಕು. ಇಲ್ಲಿ ನಾವು ಈ ದಿವಸ ಐದು ವರ್ಷಗಳಿಗೊಮ್ಮೆ ಶಾಸನ ಸಭೆಗಳಿಗೆ ಚುನಾವಣೆಗಳನ್ನು ನಡೆಸಲೇಬೇಕಾಗಿದೆ. ಅದಕ್ಕೆ ಕೋಟಿಗಟ್ಟಲೆ ಹಣ ಖರ್ಚಾಗುತ್ತದೆ. ಅದರಂತೆ ಒಂದು ಅಥವಾ ಎರಡು ವರ್ಷಗಳಿಗೊಮ್ಮೆ ತಾಲ್ಲೂಕ್ ಬೋರ್ಡುಗಳಿಗೂ—ಗ್ರಾಮ ಪಂಚಾಯಿತಿಗಳಿಗೂ ಚುನಾವಣೆಗಳನ್ನು ನಡೆಸಲೇಬೇಕು. ಅದರಿಂದಲೂ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತದೆ. ಕೋ-ಆಪರೇಟೀವ್ ಇನ್‌ಸ್ಟಿಟ್ಯೂಷನ್‌ಗಳಿಗೂ ನಾವು ಚುನಾವಣೆಗಳನ್ನು ನಡೆಸಲೇಬೇಕು, ಅದಕ್ಕೂ ಹಣ ಖರ್ಚಾಗುತ್ತದೆ. ಹಣ ಖರ್ಚಾಗುತ್ತದೆ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಸರ್ಕಾರದವರು ಈ ಚುನಾವಣೆಗಳೊಂದನ್ನೂ ನಡೆಸಬಾರದೆಂದು ಮಾನ್ಯ ಸದಸ್ಯರು ಹೇಳುತ್ತಾರೋ ? ಆದ್ದರಿಂದ ಮಂತ್ರಿಗಳು ಪ್ರವಾಸ ಹೋದರೆ ಸರ್ಕಾರಕ್ಕೆ ದುಡ್ಡು ಖರ್ಚಾಗುತ್ತದೆ ಎನ್ನುವ ವಾದ ಸರಿಯಾದುದಲ್ಲ. ದೇಶದಲ್ಲಿ ಪ್ರಜಾಪ್ರಭುತ್ವ ಆಡಳಿತವು ಬರುವುದಕ್ಕೆ ಮುನ್ನ ಈ ರಾಜ್ಯದ ಆಡಳಿತವನ್ನು ಕೇವಲ ನಾಲ್ಕೈದು ಜನ ಕೌನ್ಸಿಲರುಗಳು ನಡೆಸುತ್ತಿದ್ದರು. ಆದರೆ ಈ ದಿವಸ ಆ ಪದ್ಧತಿಯ ಆಡಳಿತವಿಲ್ಲ. ಈಗ ಜಾರಿಯಲ್ಲಿರತಕ್ಕ ಡೆಮಾಕ್ರಸಿ. ಈ ಡೆಮಾಕ್ರಸೀಲಿ ಹಿಂದಿನಂತೆ ಐದು ಜನಕ್ಕಿಂತ ಹೆಚ್ಚು ಮಂತ್ರಿಗಳಿರುವುದು ಬೇಡ ಎಂದರೆ ಅದು ಹೇಗೆ ಸಾಧ್ಯ ! ಮಂತ್ರಿಗಳ ಸಂಖ್ಯೆಯನ್ನು ಹೆಚ್ಚು ಮಾಡುತ್ತಿರುವುದು ಕೇವಲ ಎಲ್ಲೆಲ್ಲಿ ಕಾಂಗ್ರೆಸ್ ಸರ್ಕಾರಗಳು ಕೆಲಸ ಮಾಡುತ್ತಿವೆಯೋ ಅಲ್ಲಿ ಮಾತ್ರವೇ ಅಲ್ಲ. ಕಾಂಗ್ರೆಸ್ಸೇತರ ಸರ್ಕಾರಗಳು ಕೆಲಸ ಮಾಡುತ್ತಿರುವ ಕಡೆಗಳಲ್ಲೂ ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳ ಸಂಖ್ಯೆಯನ್ನು ಜಾಸ್ತಿಮಾಡಿರತಕ್ಕ ನಿದರ್ಶನಗಳಿವೆ. ಈ ದಿವಸ ಯಾವ ಒಂದು ಮಂತ್ರಿಮಂಡಲದಲ್ಲೂ 5—6 ಜನ ಮಂತ್ರಿಗಳು ಮಾತ್ರ ಇರುವುದಿಲ್ಲ.........

ಶ್ರೀ ಎಸ್. ಎಸ್. ಅರಕೇರಿ.—ಮದ್ರಾಸಿನಲ್ಲಿ ಡಿ.ಎಂ.ಕೆ. ಆಡಳಿತದಲ್ಲೋ ?

ಶ್ರೀ ಡಿ. ದೇವರಾಜ ಅರಸ್.—ಅದೇನೋ ಅದೃಷ್ಟವಶಾತ್ ಅಲ್ಲಿ ಒಂದು ಕಡೆ ಇರಬಹುದು. ಆದರೆ ಅದರ ಕೀರ್ತಿ ಕಾಂಗ್ರೆಸ್ಸಿಗೂ ದೊರೆಯಬೇಕು. ಏಕೆಂದರೆ ಅಲ್ಲಿ ಹಿಂದೆ ಕೆಲಸ ಮಾಡುತ್ತಿದ್ದ ಸರ್ಕಾರಗಳು ಅಷ್ಟೇ ಜನರನ್ನು ಮಂತ್ರಿಮಂಡಲದಲ್ಲಿ ಇಟ್ಟುಕೊಂಡಿದ್ದವು. ಚಕ್ರವರ್ತಿ ರಾಜಗೋಪಾಲಾಚಾರಿಯವರಿದ್ದಾಗ, ಕಾಮರಾಜರು ಇದ್ದಾಗ ಮತ್ತು ಭಕ್ತವತ್ಸಲಂರವರಿದ್ದಾಗ ಅಲ್ಲಿ ಇದ್ದ ಮಂತ್ರಿ ಮಂಡಲದಲ್ಲಿ ಆಗಲೂ ಇಷ್ಟೇ ಜನ ಮಂತ್ರಿಗಳಿದ್ದರು. ಆ ಕಾಲದಿಂದ ಅಂಥ ಒಂದು ನೀತಿಯನ್ನು ಅಲ್ಲಿ ಬಹಳ ದಿನಗಳಿಂದಲೂ ಬೆಳೆಸಿಕೊಂಡು ಬಂದಿದ್ದಾರೆ. ಅಲ್ಲಿ ಮುಖ್ಯ ಮಂತ್ರಿಗಳು ಬದಲಾದಾಗ ಅಲ್ಲಿ ಕ್ಯಾಬಿನೆಟ್ ಸಂಖ್ಯೆಯನ್ನು ಇತರ ಕಡೆಗಳಲ್ಲಿ ವಿಸ್ತಾರ ಮಾಡಿದ ಹಾಗೆ ಮಾಡಲಿಲ್ಲ. ನಮ್ಮ ಮೈಸೂರು ರಾಜ್ಯದಲ್ಲಿ ನಾನಾ ಜಾತಿಗಳಿವೆ, ನಾನಾ ಪಂಗಡಗಳಿವೆ, ನಾನಾ ಪಕ್ಷಗಳಿವೆ. ನಾನಾ ಭಾಷೆಯ ಜನರಿದ್ದಾರೆ. ಈಗ ಸಭೆಯಲ್ಲಿ ಶ್ರೀಮಾನ್ ದೊಡ್ಡಮೇಟಿಯವರು ಇದ್ದಾರೋ ಇಲ್ಲವೋ ಕಾಣೆ, ಅವರು ಒಂದಾವರ್ತಿ ನನ್ನಲ್ಲಿ ಹೇಳಿದ್ದರು ಲಿಂಗಾಯತ ಕೋಮಿನಲ್ಲಿ 2,000 ಒಳಪಂಗಡಗಳಿವೆ ಎಂದು. ಅದೇ ರೀತಿ ಒಕ್ಕಲಿಗರ ಕೋಮಿನಲ್ಲೂ ಅನೇಕ ಪಂಗಡಗಳಿವೆ. ಮತ್ತೆ ಎಲ್ಲ ಪಂಗಡಗಳಲ್ಲಿ ಅನೇಕ ಒಳಪಂಗಡಗಳಿರುತ್ತವೆ. ಆ ಒಳಪಂಗಡದಲ್ಲೂ ಒಳಪಂಗಡಗಳಿವೆಯಂತೆ. ಈ ಎಲ್ಲಾ ಗೊಂದಲಗಳ ಜೊತೆಗೆ ಭಾಷೆಯ ಗೊಂದಲ ಬೇರೆ. ಅದರ ಜೊತೆಗೆ ಜಿಲ್ಲೆ ಜಿಲ್ಲೆಗೂ ಪ್ರಾತಿನಿಧ್ಯ ಬೇರೆ. ಈ ದಿವಸ ಈ ಕಾಂಗ್ರೆಸ್ ಪಕ್ಷದ ಕೈಲಿರತಕ್ಕ ಆಡಳಿತ ತಪ್ಪಿ ಏನಾದರೂ ಬೇರೆ ಪಕ್ಷಗಳ ಕೈಗೆ ಹೋದರೆ ಆಗ ತಾಲ್ಲೂಕಿಗೂ ಪ್ರಾತಿನಿಧ್ಯ ಕೊಡಬೇಕಾದ ಪ್ರಮೇಯ ಉಂಟಾಗಬಹುದು. ಈ ಹಿಂದೆ ಇದೇ ಪಕ್ಷದಲ್ಲಿದ್ದರು ಶ್ರೀಮಾನ್ ಸಿದ್ಧವೀರಪ್ಪನವರೂ ಮತ್ತು ಶ್ರೀಮಾನ್ ಚನ್ನಬಸಪ್ಪನವರು. ನಮ್ಮ ದೇಶದಲ್ಲಿ ಹೀಗೆ ಅನೂಚಾನವಾಗಿ ಒಂದು ವಿಚಿತ್ರವಾದ ಹಾಗೂ ಛಿನ್ನವಿಛಿನ್ನವಾದ ಸಮಾಜ ಪದ್ಧತಿ ಬೆಳೆದು ಬಂದಿರುವಾಗ ಇವುಗಳ ಪ್ರಭಾವ ರಾಜಕೀಯ ರಂಗದಲ್ಲಿ ಇರಬಾರದು ಎಂದರೆ ಅದು ಸಾಧ್ಯವೇ ! ಡಿ.ಎಂ.ಕೆ. ಪಕ್ಷದಲ್ಲಿ ಈ ದಿವಸ 8-10 ಜನ ಮಂತ್ರಿಗಳಿದ್ದ ಹಾಗೆ ಇಲ್ಲಿಯೂ ಇರುವುದಕ್ಕೆ ಸಾಧ್ಯವೆ ? ನಾನು ಇದನ್ನೆಲ್ಲಾ ಬಾಯಿಬಿಟ್ಟು ಹೇಳುತ್ತಿದ್ದೇನೆ. ಆ ಮಾನ್ಯ ಸದಸ್ಯರು ಹೇಳುವುದಿಲ್ಲ.

Sri H. M. CHANNABASAPPA.—Sri Devaraj Urs has unnecessarily brought in my name. Let him state one instance where Channabasappa has been afraid of calling a cat a cat.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಮಾನ್ಯ ಚನ್ನಬಸಪ್ಪನವರು ಯಾವಾಗ್ಲೂ ನಾಯಿನ್ನು ನಾಯಿ ಅಂತಲೇ ಕರೆಯುತ್ತಾರೆ; ಬೆಕ್ಕನ್ನು ಬೆಕ್ಕೆಂದೇ ಕರೆಯುತ್ತಾರೆ; ಗುದ್ದಲಿಯನ್ನು ಗುದ್ದಲಿಯೆಂದೇ ಅವರು ಕರೆಯುತ್ತಾರೆ. ಆದ್ದರಿಂದಲೇ ಅವರೂ ಹಿಂದೆ ಇಲ್ಲ ಮಂತ್ರಿಗಳಾಗಿದ್ದರು ಎಂದು ಹೇಳಿದೆ ಅದನ್ನು ಅವರೂ ಒಪ್ಪಿಕೊಂಡಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಎಂದೂ ಅಂಜತಕ್ಕವನಲ್ಲ.

ಶ್ರೀ ಡಿ. ದೇವರಾಜ ಅರಸ್.—ಅವರು ಎಂಥಾ ರಾಜಕಾರಣಿಯೇ ಆಗಲಿ ಅವರು ರಾಜಕೀಯ ಒತ್ತಡಕ್ಕೆ ಬಗ್ಗಲೇಬೇಕು. ಇಂಥ ಒಂದು ಒತ್ತಡಕ್ಕೆ ಸಿಕ್ಕದಹಾಗೆ ದೂರ ಇರುವುದಕ್ಕೆ ಶ್ರೀಮಾನ್ ನಿಜಲಿಂಗಪ್ಪನವರಿಗೂ ಸಾಧ್ಯವಾಗಲಿಲ್ಲ—ಶ್ರೀಮಾನ್ ವೀರೇಂದ್ರ ಪಾಟೀಲರಿಗೂ ಸಾಧ್ಯವಾಗಲಿಲ್ಲ. ನಾಳೆ ಶ್ರೀಮಾನ್ ಸಿದ್ದವೀರಪ್ಪನವರು ಮುಖ್ಯ ಮಂತ್ರಿಗಳಾಗಿ ಬಂದರೂ ಅಷ್ಟೇ. ಹಾಗೊಂದು ವೇಳೆ ಅವರೇನಾದರೂ ಇಲ್ಲ 8—10 ಜನರ ಮಂತ್ರಿ ಮಂಡಲವನ್ನು ರಚಿಸಿದ್ದೇ ಆದರೆ ಅವರ ಆಯಸ್ಸು ಖಂಡಿತ ಕ್ಷೀಣವಾಗುತ್ತದೆ. ಆದರೆ ಅವರು ರಚಿಸತಕ್ಕ ಮಂತ್ರಿ ಮಂಡಲ ಕೊಂಚ ಕಾಲ ಬದುಕಿ ಬಾಳಬೇಕಾಗಿದ್ದರೆ ಅದು ಸಾಕಷ್ಟು ದೊಡ್ಡದಾಗಲೇಬೇಕು. ಹೆಚ್ಚುಜನ ಮಂತ್ರಿಗಳು ಇರಲೇ ಬೇಕು. ಆದರೆ ನಾನು ಮಂತ್ರಿಮಂಡಲದಲ್ಲಿ ಸೇರುವ ಒಂದು ಇಚ್ಛೆ ಇಟ್ಟುಕೊಂಡು ಹೀಗೆ ವಾದಮಾಡುತ್ತಿದ್ದೇನೆಂದು ಯಾರೂ ದಯವಿಟ್ಟು ಭಾವಿಸಬಾರದು. ಆದರೆ ಅದೇಕೋ ಈಗಿರತಕ್ಕ ಮಂತ್ರಿಮಂಡಲದಲ್ಲಿ ಏನಕೇನ ಪ್ರಕಾರೇಣ ಎನ್ನುವಂತೆ 29 ಜನ ಮಂತ್ರಿಗಳಿದ್ದಾರೆ. ಇಷ್ಟು ಅಧಿಕ ಸಂಖ್ಯೆಯಲ್ಲಿ ಇರತಕ್ಕ ಮಂತ್ರಿಗಳು ಇವರಾದರೂ ಏನು ಕೆಲಸ ಮಾಡಬೇಕು? ಆದುದರಿಂದ ನನ್ನ ದಿಷ್ಟಿಯಲ್ಲಿ ಮಂತ್ರಿಗಳು ಪ್ರವಾಸ ಮಾಡುವುದರಿಂದ ಹಣ ದುರ್ವಿನಿಯೋಗ ಆಗುತ್ತದೆ ಎನ್ನುವುದು ಸರಿಯಲ್ಲ. ಮತ್ತೆ ಇದರ ಬಗ್ಗೆ ಮಂತ್ರಿಗಳನ್ನು ದೂಷಣೆ ಮಾಡಿದರೆ ಪ್ರಯೋಜನವಿಲ್ಲ. ನಾನು ಮಾನ್ಯ ಸದಸ್ಯರಲ್ಲಿ ಅರಿಕೆಮಾಡುವುದೇನೆಂದರೆ, ನಮ್ಮ ಈ ಮಾನ್ಯ ಸದನದ ಸದಸ್ಯರು ಅವರು ಯಾವ ಪಾರ್ಟಿಯವರೇ ಆಗಿರಲಿ ಮಂತ್ರಿಗಳನ್ನು ಒತ್ತಾಯ ಮಾಡಿ ಏನಾದರೂ ಒಂದು ಕಡೆಯಲ್ಲಿ ಒಂದು ಜಾತ್ರೆಗೋಸ್ಕರವೋ ಅಥವಾ ಒಂದು ಶಾಲಾ ಪ್ರಾರಂಭೋತ್ಸವಕ್ಕೋ ಕರೆದರೆ.........

ಶ್ರೀ ಎಚ್. ಎನ್. ನಂಜೇಗೌಡ.—ನನ್ನ ಕ್ಷೇತ್ರಕ್ಕೆ ಯಾರನ್ನೂ ಕನಸಿನಲ್ಲಿಯೂ ಬನ್ನಿ ಎಂದು ಕರೆಸಿಲ್ಲ. ಅವರನ್ನು ಕರೆಸಿ ಬಾಜಾಭಜಂತ್ರಿ ಮಾಡುವುದಕ್ಕೆ ಯಾರೂ ಅಪೇಕ್ಷೆ ಪಡಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಶ್ರೀ ನಂಜೇಗೌಡರಿಗೆ ಇನ್ನೂ ಆ ಅದೃಷ್ಟ ದೊರೆತಿಲ್ಲ. ಅವರಿಗೆ ಇನ್ನೂ ಕಾಲಾವಕಾಶಬೇಕಾಗುತ್ತದೆಂದು ಕಾಣುತ್ತದೆ. ಎಲ್ಲಾ ಮಂತ್ರಿಗಳ ಮೇಲೆ ಇವರು ಜಗಳ ಮಾಡಿದರೆ ಹೇಗೆ ಬರುತ್ತಾರೆ?

ಶ್ರೀ ಎಚ್. ಎನ್. ನಂಜೇಗೌಡ.—ನಾನು ಕರೆಯದೇನೇ ಅಲ್ಲಿಗೆ ಬರುತ್ತಾರೆ. ನಾನು ಅಸೆಂಬ್ಲಿಯಲ್ಲಿ ಇಲ್ಲದ್ದರೂ ಅಲ್ಲಿ ಹೋಗಿ ಬಂದಿರುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—ಇವರು ಕರೆಯದೇ ಇದ್ದರೆ, ಬೇರೆ ಜನ ಕರೆಯುತ್ತಾರೆ. ಅವರಿಗೆ ಮಂತ್ರಿಗಳನ್ನು ಕರೆಯತಕ್ಕ ರೂಢಿ, ಅಭ್ಯಾಸ, ಆಕಾಂಕ್ಷೆ ಎಷ್ಟೋ ಇದೆ. ಈ ಸಭೆ ಮುಗಿಯುವುದರೊಳಗೆ, ರಜಾ ಕಾಲ ಕಳೆಯುವುದರೊಳಗೆ ಎಷ್ಟೋ ಜನರು ಹೋಗಬೇಕಾಗಿದೆ. ನಾನೇ ಒಬ್ಬ ಮಂತ್ರಿಯ ಜೊತೆಯಲ್ಲಿ ಹೋಗಬೇಕಾಗುತ್ತದೆ. ಸದಸ್ಯರೂ ಕೂಡ ಮಂತ್ರಿಗಳು ಹೆಚ್ಚುಹೆಚ್ಚಾಗಿ ಪ್ರವಾಸಮಾಡುವುದಕ್ಕೆ ಕಾರಣರಾಗಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಮಂತ್ರಿಗಳು ಪ್ರವಾಸಮಾಡುವುದರಿಂದ ಏನೂ ಪ್ರಯೋಜನವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಪ್ರವಾಸ ಹೋದಾಗ ಒಂದು ಅಸ್ತಿಭಾರಶಿಲೆಯನ್ನು ಹಾಕುವುದು, ಅಥವಾ ಒಂದು ಪ್ರಾರಂಭೋತ್ಸವ ಅಥವಾ ಇನ್ನಾವುದಾದರೂ ಒಂದು ಸಮಾರಂಭದಲ್ಲಿ ಭಾಗವಹಿಸುತ್ತಾರೆ.

ಶ್ರೀ ಕೆ. ಎಚ್. ಪಾಟೀಲ್.—ಮಂತ್ರಿಗಳು ರಾಜ್ಯದ ಹಿತದೃಷ್ಟಿಯಿಂದ ನಡೆಯತಕ್ಕ ಕೆಲಸಗಳಿಗೋಸ್ಕರ ಟೂರ್ ಮಾಡಿದರೆ ಏನೂ ಅಭ್ಯಂತರವಿಲ್ಲ. ಮಂತ್ರಿಗಳು ಕೇವಲ ತಮ್ಮ ಪಕ್ಷದ ಅಧ್ಯಕ್ಷರನ್ನು ಹಿಂದೆ ಇಟ್ಟುಕೊಂಡು ಅವರೊಡನೆ ಅಡ್ಡಾಡಿ ಅವರಿಗೆ ಮಾನ ಮರ್ಯಾದೆಗಳನ್ನು ತುಂಬಿ ಕೊಟ್ಟಿದ್ದಾರೆ. ಒಂದೊಂದು ಸಮಾರಂಭದಲ್ಲಿಯೂ 3—3 ಮಂತ್ರಿಗಳು ಹೋಗಿ ಈ ರಾಜ್ಯದ ಬೊಕ್ಕಸದಿಂದ ಹೆಚ್ಚು ಹಣವನ್ನು ಖರ್ಚುಮಾಡುವುದು ಸರಿಯೇ?

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಒಂದೇ ಫಂಕ್ಷನ್ನಿಗೆ 4 ಜನ ಮಂತ್ರಿಗಳು ಹೋಗಿದ್ದಾರೆ. ಗುಬ್ಬಿಯಲ್ಲಿ ಆ ರೀತಿ ಒಂದು ಫಂಕ್ಷನ್ನಿಗೆ ಅಟೆಂಡ್ ಮಾಡಿದ್ದಾರೆ. ಚೀಫ್ ಮಿನಿಸ್ಟರ್, ಕೋಆಪರೇಷನ್ ಮಿನಿಸ್ಟರ್, ಸಿರ್ಕ್ಯುವರ್ಕ್ಸ್ ಮಿನಿಸ್ಟರ್, ಇನ್ನೂ ಒಬ್ಬಿಬ್ಬರು—ಹೀಗೆ ನಾಲ್ಕೈದು ಜನರು ಒಂದೊಂದು ಫಂಕ್ಷನ್ನಿಗೆ ಹೋದರೆ, ನಿಜವಾಗಿ ಈ ದೇಶ ಉಳಿಯುತ್ತದೆಯೇ ಎಷ್ಟು ದುಡ್ಡು ನಷ್ಟ, ಎಷ್ಟು ಕಾಲಹರಣ? ಜಿಲ್ಲಾಧಿಕಾರಿಗಳು ಅಲ್ಲಿಯೇ ಇರುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—4—4 ಜನ ಮಂತ್ರಿಗಳು ಒಂದೇ ಕಡೆಗೆ ಹೋಗಬಾರದೆಂಬ ಕನ್‌ವೆನ್‌ಷನ್ ಇಟ್ಟುಕೊಂಡಿದ್ದಾರೆ ಆದರೆ ಒಬ್ಬರಿಗೆ ಗೊತ್ತಿಲ್ಲದೆ ಇನ್ನೊಬ್ಬರನ್ನು ಕರೆಸುತ್ತಾರೆ. ಆಗ ಏನು ಮಾಡುವುದಕ್ಕೂ ಆಗುವುದಿಲ್ಲ. ಬಹಳ ಬುದ್ಧಿವಂತಿಕೆಯಿರಾಗಿರುವುದರಿಂದ ಮಾನ್ಯ ಶ್ರೀ ಪುಟ್ಟಸ್ವಾಮಿಯವರನ್ನು ಕರೆಯುತ್ತಾರೆ. ಅಮೇಲೆ ಮಾನ್ಯ ಶ್ರೀ ರಾಚಯ್ಯನವರನ್ನು ಗೊತ್ತಿಲ್ಲದೆ ಕರೆದಿರುತ್ತಾರೆ. ಇನ್ನೊಬ್ಬರನ್ನೂ ಸಹ ಹಾಗೆಯೇ ಕರೆದಿರುತ್ತಾರೆ. ಹೀಗೆ ಮೂರು—ನಾಲ್ಕು ಜನರು ಹೋಗುತ್ತಾರೆ. ನಾವೂ, ನೀವೂ ಸಹ ಬರಬೇಕೆಂದು ಹೇಳುತ್ತಾರೆ. ಅದನ್ನು ತಪ್ಪಿಸಬೇಕು, ಮತ್ತು ಒಂದೇ ಕಡೆ ಹಾಗೆ ಹೋಗುವುದು ಸರಿಯಲ್ಲವೆಂದು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಪ್ರವಾಸಮಾಡುವುದನ್ನು ಕಡಿಮೆ ಮಾಡಬೇಕು, ನಮ್ಮ ಆತ್ಮತೃಪ್ತಿಗಾದರೂ ಕಡಿಮೆ ಮಾಡುವುದಕ್ಕೆ ಆಗುತ್ತದೆಂದು ಹೇಳುವ ಮಾತನ್ನು ನಾನು ನಂಬುವುದಿಲ್ಲ. ಪ್ರವಾಸ ಹೋದಮೇಲೆ 300—400 ಮೈಲಿಗಳ ದೂರ ಹೋಗಿ ಕೇವಲ ಒಂದು ಸಣ್ಣ ಫಂಕ್ಷನ್‌ಗೆ ಹೋಗಿದ್ದೆವೆಂದು ಅಲ್ಲಿಂದ ಬರುವುದಕ್ಕಾಗುವುದಿಲ್ಲ. ಮಂತ್ರಿಗಳಾಗಿರಲಿ, ಕ್ಯಾಬಿನೆಟ್ ಅಥವಾ ಸ್ಟೇಟ್ ಮಂತ್ರಿಯಾಗಿರಲಿ ಅಥವಾ ಡೆಪ್ಯುಟಿ ಮಿನಿಸ್ಟರ್ ಆಗಿರಲಿ, ಅವರು ಪ್ರವಾಸ ಹೋದಾಗ ತಮಗೆ ಸಂಬಂಧಪಟ್ಟಂಥ ಇಲಾಖೆಯ ವಿಚಾರವಾಗಿ ತಾಲ್ಲೂಕಿನಲ್ಲಾಗಲೀ, ಅಥವಾ ಜಿಲ್ಲೆಯಲ್ಲಾಗಲೀ ಕುರಿತು ಪೂರ್ವಭಾವಿಯಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಅಲ್ಲಿಯ ಆಡಳಿತ ವಿಚಾರವನ್ನು ವಿಮರ್ಶೆಮಾಡಿ ಒಂದುವೇಳೆ ಅಲ್ಲಿಯ ಅಧಿಕಾರಿಗಳು ಸಾಕಷ್ಟು ಸರಿಯಾಗಿ ಕೆಲಸಮಾಡದಿದ್ದರೆ, ಅವರಿಗೆ ಏನೇನು ಕಾರ್ಯಕ್ರಮಗಳನ್ನು ಮಾಡಬೇಕೋ ಅವನ್ನೆಲ್ಲಾ ಹೇಳಿ ಅವರನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಅದಕ್ಕಾಗಿ ಏನು ಮಾಡಬೇಕೆಂದರೆ, ಅವರು ಟೂರ್ ನೋಟ್ಸ್‌ನಲ್ಲಿ ಪ್ರವಾಸ ಕಾಲದಲ್ಲಿ ಏನೇನು ಕೆಲಸಕಾರ್ಯಗಳನ್ನು ಮಾಡಿದ್ದಾರೆಂಬುದನ್ನು ಸಂಬಂಧಪಟ್ಟ ಮೇಲ್ಮಟ್ಟ ಮಂತ್ರಿಗಳಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುವ ಪದ್ಧತಿಯನ್ನು ಬೆಳಸಬೇಕು, ಹಾಗಾದರೆ ನಾವು ಪ್ರವಾಸಮಾಡುವುದು ಸಾರ್ಥಕವಾಗುತ್ತದೆ. ಕೇವಲ ಪ್ರವಾಸಕ್ಕಾಗಿ ಹೋಗುವುದು ಸರಿಯಲ್ಲ, ಪ್ರವಾಸಮಾಡುವುದನ್ನು ಬಿಡಿ ಎಂದು ಹೇಳುವವರು ಪ್ರವಾಸ ಫಲಕಾರಿಯಾಗಬೇಕು, ಆಡಳಿತ ದಕ್ಷತೆ ಹೆಚ್ಚಬೇಕೆಂದು ಹೇಳಬೇಕು. ಇವತ್ತು ತಾಲ್ಲೂಕುಮಟ್ಟದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಲಂಚಗುಳಿತನ ಆಗುತ್ತಿದೆ, ಅಲ್ಲಿ ಅನೇಕರಿಗೆ ತೊಂದರೆಯಾಗುತ್ತದೆಂದು ಹೇಳುವಾಗ, ಮಂತ್ರಿಗಳು ಅಲ್ಲಿಗೆ ಹೋಗಿ ವಿಚಾರಮಾಡಬೇಕು.

ಮತ್ತೊಂದು ವಿಚಾರ. ಅಧಿಕಾರಿಗಳಿಗೆ ಶಿಕ್ಷೆಮಾಡುವ ವಿಚಾರವಾಗಿ ಒಂದು ಮಾತನ್ನು ಹೇಳುತ್ತೇನೆ. ಇವತ್ತು ವಿಜಿಲೆನ್ಸ್ ಕಮಿಷನ್ ಇದೆ. ಅಲ್ಲಿ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ನಡೆಯುತ್ತದೆ. ಸರ್ಕಾರ ಈ ಅಧಿಕಾರಿಗಳಮೇಲೆ ಕ್ರಮತೆಗೆದುಕೊಂಡು ಡಿಗ್ರೇಡ್, ವಜಾ ಮತ್ತು ಶಿಕ್ಷೆಮಾಡಿದ್ದಾರೆ ಎಂದು ಆಗಿಂದಾಗ್ಗೆ ವರ್ತಮಾನ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಇದರಲ್ಲಿ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಆಡಳಿತದ ಬಿಗಿ ನಮಗೆ ಸಿಗಬೇಕಾದರೆ ಯಾವರೀತಿ ಅಧಿಕಾರಿಗಳನ್ನು ಹತೋಟಿಗೆ ಇಟ್ಟುಕೊಳ್ಳಬೇಕೆಂಬ ವಿಷಯವನ್ನು ಸರ್ಕಾರದವರು ಗಮನಿಸಬೇಕು. ಒಬ್ಬ ತಹಸೀಲ್ದಾರ್‌ರ ಆಡಳಿತದಲ್ಲಿ ಏನಾದರೂ ಲೋಪದೋಷಗಳಿದ್ದರೆ ಅವರ ಆಫೀಸಿನಲ್ಲಿ ಕೆಲಸ ಸರಿಯಾಗಿ ನಡೆಯದೆ ಹೋದರೆ, ಅಲ್ಲಿ ಏಕೆ ಸರಿಯಾಗಿ ಕೆಲಸ ನಡೆಯಲಿಲ್ಲವೆಂದು ತನಿಖೆಯನ್ನು ಸಂಬಂಧಪಟ್ಟ ರೆವಿನ್ಯೂ ಇನ್‌ಸ್ಪೆಕ್ಟರ್‌ಮೇಲೆ ಗುಮಾಸ್ತರಮೇಲೆ ಮಾಡುತ್ತಾರೆ. ಯಾವುದಾದರೂ ಒಂದು ತಾಲ್ಲೂಕಿನಲ್ಲಿ ಒಂದು ಒಳ್ಳೆಯ ಕೆಲಸ ನಡೆದರೂ, ಕಂದಾಯ ಚೆನ್ನಾಗಿ ವಸೂಲಾಗಿದ್ದರೂ ಅಮಲ್ದಾರರಿಗೆ ಶಾಬಾಸ್‌ಗಿರಿ ಕೊಡುತ್ತಾರೆ. ಪೋಲೀಸ್ ಇಲಾಖೆಗಳಲ್ಲಿ ಮತ್ತು ಬೇರೆ ಬೇರೆ ಇಲಾಖೆಗಳಲ್ಲಿ ಒಳ್ಳೆಯ ಕೆಲಸಮಾಡಿದರೆ, ಸಂಬಂಧಪಟ್ಟ ಕೆಳಗಿನ ಅಧಿಕಾರಿಗಳು ಎಷ್ಟೇ ಕೆಲಸಮಾಡಿರಲಿ, ಮೇಲಿನ ಅಧಿಕಾರಿಗಳಿಗೇ ಬಹುಮಾನ, ಸಂಭಾವನೆ ಕೊಟ್ಟು ಗೌರವಿಸುತ್ತಾರೆ. ಅವರಿಂದ ಒಂದುವೇಳೆ ಕೆಲಸ ಸರಿಯಾಗಿ ನಡೆಯದಿದ್ದರೆ ಸಂಬಂಧಪಟ್ಟ ಗುಮಾಸ್ತರನ್ನು ಮತ್ತು ಕೆಳಗಿನ ಅಧಿಕಾರಿಗಳನ್ನು ಶಿಕ್ಷೆಗೆ ಗುರಿಮಾಡಿ, ಮೇಲಿನ ಅಧಿಕಾರಿಯನ್ನು ಹಾಗೆಯೇಬಿಟ್ಟರೆ ಇದರಿಂದ ಆಡಳಿತದಲ್ಲಿ ದಕ್ಷತೆ ಸಿಗುತ್ತದೆಯೇ ? ಹಿಂದಿನಿಂದಲೂ ಹೀಗೆಯೇ ನಡೆದು ಬಂದಿರುವ ದೃಶ್ಯಗಳು ಬೇಕಾದಷ್ಟು ಇವೆ. 29 ಜನ ಮಂತ್ರಿಗಳಿದ್ದರೂ ಪ್ರತಿಯೊಬ್ಬ ಅಧಿಕಾರಿ ಮಾಡುವ ಕೆಲಸವನ್ನು ನೋಡುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಅವರನ್ನು ನಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚುಮಾಡಬೇಕು. ಈಗ ಅದಕ್ಷತೆ ಜಾಸ್ತಿಯಾಗುತ್ತಿದೆ. ಹಿಂದೆ ಕೆಲವು ಸಂದರ್ಭಗಳಲ್ಲಿ ಸಂಬಂಧಪಟ್ಟ ಡೆಪ್ಯುಟಿ ಕಮಿಷನರನ್ನು, ಎಜುಕೇಷನ್ನಿಗೆ ಸಂಬಂಧಪಟ್ಟ ಡಿ. ಇ. ಓ. ಅವರನ್ನು ಹಿಡಿದು ವಿಚಾರಣೆ ಮಾಡಲಾಗಿದೆ. ಉದಾಹರಣೆಯಾಗಿ ಹೇಳುವುದಾದರೆ, ನನ್ನ ಜಿಲ್ಲೆಯಲ್ಲಿಯೇ ನಾನಾ ಇಲಾಖೆಗಳಿಗೆ ಸಂಬಂಧಪಟ್ಟಹಾಗೆ ಅನೇಕ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಾ ಇಲ್ಲ. ಶಾಲೆಗಳಿಗೆ

ಉಪಾಧ್ಯಾಯರುಗಳು ಸಕಾಲದಲ್ಲಿ ಹೋಗುತ್ತಾ ಇಲ್ಲ ಅಂದರೆ ಉಪಾಧ್ಯಾಯರನ್ನು ಹಿಡಿದು ಶಿಕ್ಷೆಮಾಡುವುದಲ್ಲ. ಅಲ್ಲಿಯ ಜಿಲ್ಲಾಧಿಕಾರಿಯನ್ನು ಹಿಡಿದು ಕೇಳಬೇಕಾಗಿದೆ. ನೀವು ಏಕೆ ನಿಮ್ಮ ಕೈಕೆಳಗಿರತಕ್ಕಂತಹ ಅಧಿಕಾರಿಗಳಿಂದ ಸಾಕಷ್ಟು ಕೆಲಸ ತೆಗೆದುಕೊಳ್ಳುವುದಿಲ್ಲವೆಂದು ಆತನನ್ನು ಕೇಳಬೇಕು. ಜಿಲ್ಲಾಧಿಕಾರಿ ಕೆಲಸ ಮಾಡದಿದ್ದರೆ, ಮೇಲಧಿಕಾರಿಯನ್ನು ಕೇಳಬೇಕು. ಸುಮ್ಮನೆ ಗುಮಾಸ್ತನನ್ನು ಕೇಳುವುದು ಸರಿಯಲ್ಲ. ಇಲ್ಲದಿದ್ದರೆ, ಆಡಳಿತದಲ್ಲಿ ಒಂದು ಹತೋಟಿ ಸಿಗುವುದಿಲ್ಲ. ಈ ವಿಚಾರವನ್ನು ಗಮನಿಸಿ, ಮುಖ್ಯ ಅಧಿಕಾರಿಯ ಮುಖಾಂತರ ಕೆಲಸವಾಗುವ ಹಾಗೆ ನೋಡಬೇಕು. ಆತನಲ್ಲಿ ದಕ್ಷತೆ ಇಲ್ಲದಿದ್ದರೆ, ಅವನಿಗೆ ಬಡ್ತಿ ಕೊಡುವುದನ್ನು ನಿಲ್ಲಿಸಬೇಕು. ಇತ್ತೀಚೆಗೆ ರಾಜ್ಯಮಟ್ಟದಲ್ಲಿ ಪ್ಲಾನಿಂಗ್ ಬೋರ್ಡ್ ಎಂದು ಮಾಡಿದ್ದಾರೆ. ಅದೇ ರೀತಿ ಜಿಲ್ಲಾ ಮಟ್ಟದಲ್ಲಿ ಕೂಡ ಜಿಲ್ಲಾ ಪ್ಲಾನಿಂಗ್ ಬೋರ್ಡ್ ಎಂದು ಮಾಡಿ ಅದಕ್ಕೆ ಜಿಲ್ಲಾ ಪ್ಲಾನಿಂಗ್ ಆಫೀಸರ್ ಎಲ್ಲಾ ಮಾಡಿ, ಬಜೆಟ್ಟಿನಲ್ಲಿ ಎರಡು ಲಕ್ಷ ರೂಪಾಯಿ ಕೂಡ ತೋರಿಸಿದ್ದಾರೆ. ಜಿಲ್ಲಾ ಮಟ್ಟದ ಬೋರ್ಡ್ ಯಾವ ರೀತಿ ನಡೆಯುತ್ತಿದೆ ಎಂದರೆ, ಜಿಲ್ಲಾ ಮಟ್ಟದಲ್ಲಿ ಆಗಬೇಕಾದ ಕೆಲಸ ಕಾರ್ಯಗಳನ್ನು, ಪ್ರತಿ ಇಲಾಖೆಯವರೂ ಕ್ರೋಢೀಕರಿಸಿ ಒಂದು ಜಿಲ್ಲಾ ಮಟ್ಟದ ಪ್ಲಾನಿಂಗ್ ಪುಸ್ತಕ ತಯಾರುಮಾಡಿದ್ದಾರೆ. ಈ ಒಂದು ಪ್ಲಾನ್ ಪ್ರಕಾರ ಒಂದೊಂದು ಜಿಲ್ಲೆಯ ಪ್ಲಾನನ್ನು ತೆಗೆದುಕೊಂಡರೆ, ನಮಗೆ ಸುಮಾರು ಒಂದೊಂದು ಜಿಲ್ಲೆಗೆ 50 ಕೋಟಿ ರೂಪಾಯಿ ಪ್ರಕಾರ ಬೇಕಾಗುತ್ತದೆ. ಈ ರೀತಿ 20 ಜಿಲ್ಲೆಗೂ 1000 ಕೋಟಿ ರೂಪಾಯಿಯಾಗುತ್ತದೆ. ಈ ರೀತಿ ಪ್ಲಾನ್ ಮಾಡಬೇಕೆಂದು ಹೇಳುತ್ತಿದ್ದಾರೆ. ಅದಕ್ಕೆ ನನ್ನ ಸಲಹೆ ಏನೆಂದರೆ, ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸೇರಿಸಿ, ದುಡ್ಡು ಕೊಡಿ, ಪ್ಲಾನ್ ಮಾಡಿ ಎಂದು ಹೇಳುವ ಬದಲು, ಸರ್ಕಾರದ ಮಟ್ಟದಲ್ಲಿ ಅಥವಾ ಪ್ಲಾನಿಂಗ್ ಬೋರ್ಡ್ ಮಟ್ಟದಲ್ಲಿ ಇಂಥಿಂಥಹ ಜಿಲ್ಲೆಗೆ ಇಷ್ಟು ದುಡ್ಡು ಕೊಡುವುದಕ್ಕೆ ಸಾಧ್ಯವಿದೆ, ಅದಕ್ಕೆ ತಕ್ಕಂತೆ ಪ್ಲಾನನ್ನು ಜಿಲ್ಲಾ ಮಟ್ಟದಲ್ಲಿ ತಯಾರಿಸಿ ಕಳಿಸತಕ್ಕದ್ದು ಒಳ್ಳೆಯದು. ಅಲ್ಲದೆ, ಜಿಲ್ಲೆಯಲ್ಲಿರತಕ್ಕಂತಹ ಸದಸ್ಯರು ಮತ್ತು ಪಾರ್ಲಿಮೆಂಟ್ ಸದಸ್ಯರು ಎಲ್ಲಾ ಸೇರಿ 50-60 ಕೋಟಿ ರೂಪಾಯಿಯ ಒಂದು ಪ್ಲಾನ್ ಬರೆದು ಕೊಟ್ಟರೆ, ಅದಕ್ಕೆ ತಕ್ಕಂತೆ ನಮ್ಮಲ್ಲಿ ದುಡ್ಡು ಇದೆಯೋ ? ಬೇಕಾದ ದುಡ್ಡನ್ನು ಒದಗಿಸುತ್ತೀರಾ ? ಇದನ್ನು ಒಂದನ್ನೂ ಗಮನಿಸದೆ ನೀವು ಪ್ಲಾನಿಂಗ್ ಮಾಡಿ ಎಂದರೆ, ಅದು ನಿರರ್ಥಕವಾಗುತ್ತದೆ. ಮೇಲಿಂದ ಇದಕ್ಕೆ ಎಷ್ಟು ಕೊಡುತ್ತಾರೆ ಎಂಬುದನ್ನು ನೋಡಿ ಕಳಿಸಬೇಕು. ಕೆಲವು ಇಲಾಖೆಯ ಮಂತ್ರಿಗಳು ಪ್ರವಾಸ ಹೋದಾಗ ತಮಗೆ ಎಷ್ಟು ಬಂದಿದೆ, ಅಷ್ಟು ಸ್ಯಾಂಕ್ಷನ್ ಮಾಡುವ ದೃಷ್ಟಿಯಿಂದ ಇದನ್ನು ಹಾಗೆ ಇಟ್ಟುಕೊಳ್ಳುತ್ತಾರೋ ಏನೋ; ಮಂತ್ರಿಗಳು ಹೋದ ಕಡೆ, ನಿಮಗೆ ಅದು ಕೊಡುತ್ತೇವೆ, ಇದು ಕೊಡುತ್ತೇವೆ, ಒಂದು ಕೆರೆ ಕೊಡುತ್ತೇವೆ, ರಸ್ತೆ ಕೊಡುತ್ತೇವೆಂದು ಹೇಳತಕ್ಕದ್ದು ನವಾಬರ ಕಾಲದಿಂದಲೂ ನಡೆಯತಕ್ಕ ವಿದ್ಯಮಾನ. ಪ್ರಜಾಪ್ರಭುತ್ವದಲ್ಲಿ ಮಂತ್ರಿಯಾದವರು ತನಗೆ ಇಷ್ಟ ಬಂದಹಾಗೆ ಸ್ಯಾಂಕ್ಷನ್ ಮಾಡುತ್ತೇನೆ ಎಂದು ಹೇಳುವುದು ಸರಿಯಲ್ಲ. ನಾವು ಹಣವನ್ನು ವಿನಿಯೋಗ ಮಾಡುವಾಗ ಅದನ್ನು ತಾರತಮ್ಯದ ದೃಷ್ಟಿಯಿಂದ ಮಾಡಬಾರದು. ಮಂತ್ರಿಗಳಿಗೆ ಅರ್ಜಿ ಕೊಟ್ಟು, ಅದು ಕೊಡಿ, ಇದು ಕೊಡಿ, ರಸ್ತೆ ಕೊಡಿ ಎಂದು ಕೇಳುವುದು ಸರಿಯಲ್ಲ.

[MR. DEPUTY SPEAKER in the Chair]

ತಾಲ್ಲೂಕು ಬೋರ್ಡ್ ಇದೆ, ಜಿಲ್ಲಾ ಬೋರ್ಡ್ ಇವೆ, ಮತ್ತು ಸ್ಥಳೀಯ ಸಂಸ್ಥೆಗಳು ಇವೆ. ಇದನ್ನು ಪ್ಲಾನಿಂಗ್ ಬೋರ್ಡ್ ಗಮನಿಸಬೇಕು. ಇನ್ನೊಂದು ವಿಚಾರವೇನೆಂದರೆ, ಅನೇಕ ಅಧಿಕಾರಿಗಳು, ತಮ್ಮ ಕೈಕೆಳಗಿನ ಅಧಿಕಾರಿಗಳ ಮೇಲೆ ಹತೋಟಿ ಇಲ್ಲ, ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದನ್ನು ನಾನು ಕೇಳಿದ್ದೇನೆ. ನಾನು ಒಂದು ಸಂದರ್ಭದಲ್ಲಿ ಒಬ್ಬ ಸೆಕ್ರೆಟರಿಯನ್ನು ವಿಚಾರ ಮಾಡಿದ್ದೇನೆ; ನೀವು ನಿಮ್ಮ ಸೆಕ್ರೆಟೇರಿಯಟ್‌ನಲ್ಲಿ ಕಾಗದಗಳನ್ನು ಬೇಗ ಬೇಗ ಏಕೆ ವಿಲೇವಾರಿ ಮಾಡುತ್ತಾ ಇಲ್ಲ, ಇದಕ್ಕೆ ಕಾರಣರು ಯಾರು ? ಎಂದು ಕೇಳಿದಾಗ, ಅವರು ಹೇಳಿದರು—''ನಮ್ಮ ಕೈಕೆಳಗೆ ಕೆಲಸ ಮಾಡತಕ್ಕ ನೌಕರರು ಯಾರಿದ್ದಾರೆ, ಈ ನಾನ್ ಗೆಜೆಟೆಡ್ ಸ್ಟಾಫ್, ಸೆಕ್ಷನ್ ಸೂಪರಿಂಟೆಂಡ್ಸ್ ಕೆಲವರು ಸರಿಯಾಗಿ ಕೆಲಸ ಮಾಡುತ್ತಾರೆ, ಕೆಲವರು ಮಾಡುತ್ತಾ ಇಲ್ಲ. ಅವರನ್ನು ಕೆಲಸ ಮಾಡುವ ಹಾಗೆ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಏಕೆ ಸಾಧ್ಯವಾಗುತ್ತಾ ಇಲ್ಲ ಎಂಬುದಕ್ಕೆ ಇವತ್ತು ಯಾವ ಕೆಳಗಿನ ಅಧಿಕಾರಿಗಳ ಮೇಲೆಯೂ ಯಾವುದೇ ರೀತಿಯ ಡಿಸಿಪ್ಲಿನರಿ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇಲ್ಲದ ಹಾಗೆ ಆಗಿದೆ. ಈಗ ಇರತಕ್ಕಂತಹ ಕಾನೂನುಗಳು, ಸಿ. ಸಿ. ಎ. ರೂಲ್ಸ್‌ಗಳು, ಸ್ಟಾಂಡಿಂಗ್ ಆರ್ಡರ್ಸ್ ಮತ್ತು ಕಾನ್‌ಸ್ಟಿಟ್ಯೂಶನ್ ಎಲ್ಲಾ ನಮ್ಮ ಕೈಯನ್ನು ಕಟ್ಟಿ ಹಾಕಿಬಿಟ್ಟಿದೆ. ಯಾವುದೇ ರೀತಿಯಿಂದ ಒಬ್ಬ ಅಧಿಕಾರಿಯ ಮೇಲೆ ಡಿಸಿಪ್ಲಿನರಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಅವರು

(ಶ್ರೀ ಡಿ. ದೇವರಾಜ ಅರಸ್)

ಹೇಳಿದರು. ಯಾರನ್ನು ಕೇಳಿದರೂ, ಕೂಡ ಕೆಲಸ ಕಾರ್ಯಗಳು ನಡೆಯದಿರುವುದಕ್ಕೆ ಸಂಬಂಧ ಪಟ್ಟ ನೌಕರರನ್ನು ಜವಾಬ್ದಾರಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಬಹಳ ಫ್ರಿಕ್ವೆಂಟ್ ಆಗಿ ಕೋಟ್ ಮಾಡತಕ್ಕದ್ದು ಆರ್ಟಿಕಲ್ 311-310. ಇದರ ಪ್ರಕಾರ ಸರ್ಕಾರಕ್ಕೆ ತನ್ನ ನೌಕರರ ಮೇಲೆ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬಹುದು ಎಂದು ಅಧಿಕಾರ ಕೊಟ್ಟಿದ್ದಾರೆ. 311ರಲ್ಲಿ ಕಾನೂನನ್ನು ಎಷ್ಟು ಮಟ್ಟಿಗೆ ಉಪಯೋಗಿಸಬೇಕು, ಯಾವ ಮಟ್ಟದಲ್ಲಿ ಉಪಯೋಗಿಸಬೇಕೆಂಬುದನ್ನು ಹೇಳಿದ್ದಾರೆ. 311ರ ಪ್ರಕಾರ ಏನೂ ಡಿಸಿಪ್ಲಿನರಿ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆ ಕಾರಣದಿಂದ ನಾವು ಇವತ್ತಿನ ದಿವಸ ಸಂಪೂರ್ಣವಾಗಿ ನಮ್ಮ ಕೆಲಸ ಕಾರ್ಯಗಳನ್ನು ನಡೆಸುವುದರಲ್ಲಿ ಏನು ಸರ್ಕಾರ ಹತೋಟಿ ಇಟ್ಟುಕೊಳ್ಳಬೇಕೋ, ಅದನ್ನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಆ ಕಾರಣದಿಂದ ಇವತ್ತು 10 ಜನ ಮಾಡತಕ್ಕ ಕೆಲಸವನ್ನು 25 ಜನರು ಮಾಡುತ್ತಿದ್ದಾರೆ. ಆದರೂ ಅದು ಮುಗಿಯುತ್ತಾ ಇಲ್ಲ. ಒಂದೊಂದು ಕಡೆ ಒಬ್ಬ ಗುಮಾಸ್ತ ಎಷ್ಟು ಕೆಲಸ ಮಾಡಬೇಕೆಂಬ ನಿಯಮ ಇದೆ. ಕನಿಷ್ಟ 8 ಕಾಗದಗಳನ್ನು ವಿಲೇವಾರಿ ಮಾಡಬೇಕೆಂದಿದ್ದರೆ, 8 ಕಾಗದಗಳನ್ನು ವಿಲೇವಾರಿ ಮಾಡಿ ಸ್ವಸ್ಥ ಕೂತುಬಿಡುತ್ತಾನೆ. ಕನಿಷ್ಟ ಅಂದರೆ, ಹೆಚ್ಚು ಮಾಡಬಾರದು ಎಂದು ಏನೂ ಹೇಳಲಿಲ್ಲ. 311ನೇ ಆರ್ಟಿಕಲ್ಲನ್ನು ನಾನು ಓದಿದ್ದೇನೆ. ಒಬ್ಬನ ಮೇಲೆ ಡಿಸಿಪ್ಲಿನರಿ ಕ್ರಮ ತೆಗೆದುಕೊಳ್ಳಬೇಕಾದರೆ, ಒಬ್ಬ ಅಧಿಕಾರಿಯನ್ನು ಡಿಸ್‌ಮಿಸ್ ಮಾಡಬೇಕಾದರೆ, ರಿಟೈರ್ ಮಾಡಬೇಕಾದರೆ, ಅಥವಾ ಮೇಲಿಂದ ಕೆಳಕ್ಕೆ ಕಳುಹಿಸಬೇಕಾದರೆ, 311ರಲ್ಲಿ ಡಿಸಿಪ್ಲಿನರಿ ಕ್ರಮ ತೆಗೆದುಕೊಳ್ಳಬಾರದು ಎಂದು ಏನೂ ಇಲ್ಲ. ಸರ್ಕಾರದವರು ಇದನ್ನು ಗಮನಿಸಬೇಕು. ಇದಕ್ಕೆ ಕಾನೂನಿನಲ್ಲಿ ಅಡಚಣೆ ಇದ್ದ ಪಕ್ಷದಲ್ಲಿ ನಾವು ಮಾಡಿರತಕ್ಕ ಕಾನೂನನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಒಟ್ಟಿನಲ್ಲಿ ಅಧಿಕಾರಿಗಳ ಮೇಲೆ ಸರಿಯಾದ ಹಿಡಿತವನ್ನು ಇಟ್ಟುಕೊಳ್ಳುವುದಕ್ಕೆ ಸರ್ಕಾರದವರು ಗಮನ ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ತಿಳಿಸುತ್ತೇನೆ.

7-00 P.M.

ಅಧಿಕಾರಿಗಳ ವರ್ಗಾವರ್ಗಿ ವಿಚಾರ ಪ್ರಸ್ತಾಪ ಬಂದಿದೆ. ಶ್ರೀಮಾನ್ ಸಿದ್ಧವೀರಪ್ಪನವರು ಟ್ರಾನ್ಸ್‌ಫರ್ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಬೇಕಾದ ಅಧಿಕಾರಿಯನ್ನು ಅಲ್ಲಿಯೇ ಇಡತಕ್ಕದ್ದು, ಆತನ ಮೇಲೆ ಎಷ್ಟೇ ದೂರುಗಳು ಇದ್ದರೂ ವರ್ಗ ಮಾಡದೆ ರಕ್ಷಣೆ ಮಾಡುತ್ತಾರೆ. ಮೇಲ್ಪಟ್ಟವರಿಂದ ಒತ್ತಡವನ್ನು ತರುತ್ತಾರೆ. ಆದ್ದರಿಂದ ಅಂಥಾ ಸಂದರ್ಭದಲ್ಲಿ ಅಧಿಕಾರ ವರ್ಗದವರನ್ನು ವರ್ಗ ಮಾಡಬೇಕೇ ಅಥವಾ ಬೇಡವೇ ಎಂಬುದರ ಬಗ್ಗೆ ಸರ್ಕಾರ ಗಮನ ಕೊಡತಕ್ಕ ವಿಚಾರವನ್ನು ಅವರು ಹೇಳಿದ್ದಾರೆ. ಸ್ವಾಮಿ, ಇತ್ತೀಚೆಗೆ ಅಧಿಕಾರಿಗಳ ಬಗ್ಗೆ ಅವರ ವರ್ಗದ ಬಗ್ಗೆ, ಅವರ ಪ್ರಮೋಷನ್ ಅವರ ಕಷ್ಟ ಸುಖಗಳನ್ನು ನೋಡುವ ವಿಚಾರದಲ್ಲಿ ನಾವೆಲ್ಲರೂ ಬಹಳ ಗಮನ ಕೊಡುವುದಕ್ಕೆ ಹೊರಟಿದ್ದೇವೆ. ಇದಕ್ಕೆ ಬೇರೆ ಮಾರ್ಗವಿಲ್ಲ ಎಂದು ಕಾಣುತ್ತದೆ. ರಾಜಕಾರಣಿಗಳು ಎಲ್ಲರೂ ಒಂದಲ್ಲ ಒಂದು ವಿಧದಲ್ಲಿ ಅಧಿಕಾರಿಗಳ ಜೊತೆ ಅನುಸರಿಸಿ ಹೋಗಬೇಕಾದಂಥ ಸಂದರ್ಭ ನಮ್ಮ ದೇಶದಲ್ಲಿ ಬಂದಿದೆ. ಇದಕ್ಕೆ ಕಾರಣ ಮೊದಲಿನಿಂದ ಅವರು ಏನೊಂದು ದರ್ಪವನ್ನು ಇಟ್ಟುಕೊಂಡಿದ್ದಾರೆಯೋ ಅದೇ ದರ್ಪ ಪ್ರಜಾಪ್ರಭುತ್ವದಲ್ಲೂ ಇದ್ದೇ ಇದೆ. ನಮಗೆ ಸ್ವರಾಜ್ಯ ಬಂದಮೇಲೆ ರಾಜಕಾರಣಿಗಳು ಬಿಜಿನೆಸ್‌ಮನ್ ಮತ್ತು Beaurocrets ಈ ಮೂರು ವರ್ಗಗಳು ದ್ವಂದ್ವವಾಗಿ ನಡೆದುಕೊಂಡು ಬಂದಿವೆ. The beaurocrat has ultimately succeeded in establishing himself ರಾಜಕಾರಣಿಗೆ ಅಧಿಕಾರಿಯಿಂದ ಸಹಾಯ ಆಗಲೇಬೇಕು. ಒಂದಲ್ಲ ಒಂದು ಸಹಾಯ ರಾಜಕಾರಣಿಗೆ ಅವರಿಂದ ಆಗಬೇಕು. ಅನೇಕ ಸಂದರ್ಭಗಳಲ್ಲಿ ಚುನಾವಣೆಗಳಲ್ಲಿ ಅವರ ಸಹಾಯ ಬೇಕಾಗುತ್ತದೆ. ನಮ್ಮ ದೇಶದಲ್ಲಿ ಎಲ್ಲಾ ವರ್ಗಕ್ಕಿಂತ ಬಹಳ ಬುದ್ಧಿವಂತ ವರ್ಗ ಅಧಿಕಾರ ವರ್ಗ ಎನ್ನುವುದು ನಿರ್ವಿವಾದವಾದ ವಿಷಯ. ರಾಜಕಾರಣಿಗಳು ಅಷ್ಟು ಬುದ್ಧಿವಂತರಾಗುವುದಕ್ಕೆ ಬಹಳ ವರ್ಷಗಳು ಬೇಕು. ಚುನಾವಣೆಯ ಭಯ ಎಲ್ಲಿಯವರೆಗೆ ನಮ್ಮ ಬೆನ್ನು ಬಿಡುವುದಿಲ್ಲ ಅಲ್ಲಿಯವರೆಗೆ ಅಧಿಕಾರ ವರ್ಗದವರ ಆಶ್ರಯ ಬೇಕಾಗುತ್ತದೆ. ಈ ದೃಷ್ಟಿಯಿಂದ ರಾಜಕಾರಣಿಗಳು ಅಧಿಕಾರಿಗಳ ಟ್ರಾನ್ಸ್‌ಫರ್ ಮತ್ತು ಪ್ರಮೋಷನ್ ವಿಚಾರದಲ್ಲಿ ಕೈಹಾಕುತ್ತಾರೆ. ನಮಗೆ ಬೇಕಾಗದೇ ಇರುವ ಅಧಿಕಾರಿಯನ್ನು ನಮ್ಮ ತಾಲ್ಲೂಕಿಗೆ ಹಾಕುವುದು ಬೇಡ ಎಂದು ಹೇಳುತ್ತಾರೆ ಈಗ ಹುಣಸೂರಿನಲ್ಲಿ ಅಥವಾ ಇನ್ನೊಂದು ಕಡೆಯಲ್ಲಿ ಒಬ್ಬ ಅಧಿಕಾರಿ ದುರ್ವ್ಯವಹಾರದ ನಡವಳಿಕೆಯನ್ನು ಮಾಡುತ್ತಾನೆ, ತಪ್ಪು ಕೆಲಸ ಮಾಡು

ತ್ತಾನೆ. ಅಂಥಾ ಸಂದರ್ಭದಲ್ಲಿ ಅಧಿಕಾರಿ ತಪ್ಪು ಮಾಡಿದ್ದನ್ನು ಜನತಾ ಪ್ರತಿನಿಧಿಗಳ ಸರ್ಕಾರದ ಮುಂದೆ ಇಡಬೇಕು. ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಆ ಅಧಿಕಾರಿಗೆ ಶಿಕ್ಷೆ ಮಾಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಆದರೆ ತಮಗೆ ಯಾರೋ ಏನೋ ಕೆಟ್ಟದ್ದು ಮಾಡಿದರು ಎಂದು ಅವರನ್ನು ಇನ್ನೊಂದು ಕಡೆಗೆ ಟ್ರಾನ್ಸ್‌ಫರ್ ಮಾಡಬೇಕು ಎಂದು ಹೇಳತಕ್ಕಂಥ ಮನೋಭಾವ ಬೆಳೆದು ಬರುತ್ತಿದೆ. ಆ ರೀತಿಯಿಂದ ಅಧಿಕಾರಿಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಟ್ರಾನ್ಸ್‌ಫರ್ ಮಾಡುವುದರಲ್ಲಿ ಹೆಚ್ಚು ಗಮನ ಕೊಡತಕ್ಕದ್ದು ಸೂಕ್ತ ಅಲ್ಲ.

ಕೊನೆಯದಾಗಿ ಕರಪ್ಷನ್ ವಿಚಾರ. ಶ್ರೀಮಾನ್ ಸಿದ್ದವೀರಪ್ಪನವರು ಮಂತ್ರಿಗಳಮೇಲೆ ಕರಪ್ಷನ್ ಚಾರ್ಜಸ್ ಮಾಡಿದಾಗ ಒಂದು ಉದಾಹರಣೆಯನ್ನು ಕೊಡುತ್ತಾ ಶ್ರೀಮಾನ್ ಜಿ. ಬಿ. ಶಂಕರರಾಯರು ಒಂದು ಕಡೆ ಪೋಲೀಸ್ ಅಧಿಕಾರಿಯ ವ್ಯವಹಾರದಲ್ಲಿ ಕೈಹಾಕಿದರು ಎಂದು ಹೇಳಿದರು. ಮಂತ್ರಿಗಳು ಅವರ ಕ್ಷೇತ್ರಕ್ಕೆ ಹೋದಾಗ ಪೋಲೀಸ್ ಅಧಿಕಾರಿಗಳಿಗೆ ಕೆಲಸ ಹೇಗೆ ಮಾಡಬೇಕು, ಡೈರಿಯಲ್ಲಿ ಹೇಗೆ ನೋಟ್ ಮಾಡಬೇಕು ಎಂಬುದನ್ನು ಹೇಳಿದರು. ಅದು ಕರಪ್ಷನ್ ಆಗುತ್ತದೆಯೇ ಎಂದರೆ, ಕರಪ್ಷನ್ ಎಂದರೆ ಅಧಿಕಾರಿಗಳಾಗಲೀ ಮಂತ್ರಿಗಳಾಗಲೀ ಬರೀ ಹಣ ತೆಗೆದುಕೊಂಡರೆ ಮಾತ್ರ ಕರಪ್ಷನ್ ಆಗುತ್ತದೆ ಎಂದಲ್ಲ. ಕರಪ್ಷನ್ ಎನ್ನುವುದಕ್ಕೆ ಅರ್ಥ ಡಿಕ್ಷನರಿಯ ಪ್ರಕಾರ Decomposition, moral deterioration, use of corrupt Practices, bribery etc. ಅರ್ಥ ಬರುತ್ತದೆ. ಕೈರಾನ್ ರಿಪೋರ್ಟ್ ಪ್ರಕಾರ ಕರಪ್ಷನ್ ಎಂದು ಹೇಳತಕ್ಕದ್ದು ಕೇವಲ ಇನ್ನೊಬ್ಬರಿಂದ ದುಡ್ಡು ತೆಗೆದುಕೊಳ್ಳುವುದೇ ಕರಪ್ಷನ್ ಅಲ್ಲ. ಉಳಿದ ಕೆಲವು ನಡವಳಿಕೆಗಳೂ ಕರಪ್ಷನ್ ಆಗುತ್ತವೆ. Moral turpitude, ಎಂದರೆ, ಈಗ ನಾವು ಯಾವುದು ಧರ್ಮ, ನೀತಿ ಎಂದು ಹೇಳುತ್ತೇವೆಯೋ ಆ ನೀತಿಗೆ ಧರ್ಮಕ್ಕೆ ವಿರುದ್ಧವಾದ ನಡವಳಿಕೆಗಳೂ ಕರಪ್ಷನ್ ಆಗುತ್ತವೆ.

ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಪ್ರಾರಂಭಿಸಿದ್ದ ಸಚಿವರು ಮತ್ತು ಇತರರ ಆಸ್ತಿ ವಿವರ ಪಡೆಯಲು ಮಾಡಿದಂತಹ ಪ್ರಯತ್ನ ಏನಾಯಿತು ಎಂದು ಶ್ರೀಮಾನ್ ಸಿದ್ದವೀರಪ್ಪನವರು ಕೇಳಿದರು. ಈ ವಿಚಾರದಲ್ಲಿ ಯಾವುದು ಸರಿ ಎಂದು ಹೇಳಬೇಕೋ ನನಗೆ ಗೊತ್ತಿಲ್ಲ. ಮಂತ್ರಿಗಳು ತಮ್ಮ ಆಸ್ತಿ ಪಾಸ್ತಿಗಳ ವಿವರಗಳನ್ನು ಕೊಡಬೇಕು ಎನ್ನುವ ಬಗ್ಗೆ, ಮಂತ್ರಿಗಳ ಮೇಲೆ ಚಾರ್ಜಸ್ ಬಂದರೆ ಅವುಗಳನ್ನು ವಿಚಾರಣೆ ಮಾಡತಕ್ಕ ಏಜೆನ್ಸಿ ಬೇಕು. ಈ ವಾದ ನಮ್ಮ ರಾಜ್ಯದಲ್ಲೇ ಅಲ್ಲ ಎಲ್ಲಾ ರಾಜ್ಯಗಳಲ್ಲೂ ಹಾಗೂ ಕೇಂದ್ರ ಸರ್ಕಾರದಲ್ಲೂ ನಡೆಯುತ್ತಿದೆ. ಕೇಂದ್ರ ಸರ್ಕಾರದವರು ಒಂದು ಹಂತದಲ್ಲಿ ಇದಕ್ಕೆ ಏನಾದರೂ ಒಂದು ಮಾರ್ಗವನ್ನು ಕಂಡು ಹಿಡಿಯಬೇಕು ಎಂದು ಇದಕ್ಕಾಗಿ 'ಲೋಕಪಾಲ' 'ಲೋಕ ಆಯುಕ್ತ'ರನ್ನು ನೇಮಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ಕೇಂದ್ರ ಸರ್ಕಾರದವರು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ರಾಜ್ಯ ಸರ್ಕಾರದವರು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಈಗಾಗಲೇ ತಿಳಿಸಿದ್ದಾರೆ. ಮೈಸೂರು ಸರ್ಕಾರದಲ್ಲಿ ನಾನು ಮಂತ್ರಿಯಾಗಿದ್ದಂತಹ ಕ್ಯಾಬಿನೆಟ್‌ನಲ್ಲಿ ಇದನ್ನು ಒಪ್ಪಲಿಲ್ಲ. ಕ್ಯಾಬಿನೆಟ್ ಆಂದಮೇಲೆ ಜಂಟಿ ಜವಾಬ್ದಾರಿಯಾದ್ದರಿಂದ ಆಗ ನಮ್ಮಗಳಿಗೆ ಅದು ಬೇಡ ಎಂದು ಕಂಡುಬಂದದ್ದರಿಂದ ಬೇಡ ಎಂದು ಹೇಳಿದ್ದು ಆಯಿತು. ಈಗ ನಾನು ಹೇಳುವುದೇನೆಂದರೆ ಯಾರು ಒಬ್ಬ ದೊಡ್ಡ ವ್ಯಕ್ತಿಯ ಬಗ್ಗೆ ಆಗಲೀ, ಮಂತ್ರಿಗಳ ಬಗ್ಗೆ ಆಗಲೀ ಏನಾದರೂ ಅವರ ನಡೆವಳಿಕೆಯಲ್ಲಿ ಚಾರ್ಜಸ್ ಇದ್ದರೆ, ಅಥವಾ ಕರಪ್ಷನ್ ಇದ್ದರೆ ಅದನ್ನು ವಿಚಾರಣೆ ಮಾಡಲು ಒಂದು ಇನ್ಸ್‌ಟಿಟ್ಯೂಷನ್ ಇರತಕ್ಕದ್ದು ಲೇಸು. ಮಂತ್ರಿಗಳ ಬಗ್ಗೆ ಏನಾದರೂ ಕರಪ್ಷನ್ ಇದ್ದರೆ ಮುಖ್ಯ ಮಂತ್ರಿಗಳು ನನಗೆ ತಿಳಿಸಿಬಿಡಿ, ನಾನು ವಿಚಾರ ಮಾಡುತ್ತೇನೆ ಎಂದು ಹೇಳುತ್ತಾರೆ, ಅದು ಸರಿಯಾದ ಮಾರ್ಗ ಅಲ್ಲ. ಅನೇಕ ಸಂದರ್ಭಗಳಲ್ಲಿ ಇಂತಹ ಸಂದರ್ಭಗಳು ಬಂದಾಗ ಮುಖ್ಯಮಂತ್ರಿಗಳು ಏನೂ ಅಂತಹದ್ದು ನಡೆದಿಲ್ಲ ಎಂದು ಹೇಳಿದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಇವತ್ತಿನ ದಿವಸ ರಾಜಕೀಯದಲ್ಲಿ ನಾನಾ ರೀತಿಯ ಬದಲಾವಣೆಗಳು ಆಗುತ್ತಿರುತ್ತವೆ. ಮುಖ್ಯ ಮಂತ್ರಿಗಳ ವಕ್ರದೃಷ್ಟಿ ಯಾರ ಮೇಲಾದರೂ ಹರಿದರೆ ಕರಪ್ಷನ್ ನಡೆದಿದೆ ಎಂದು ಬೇಕಾದರೆ ಹೇಳಬಹುದು. ಈ ಕ್ರಮ ಸರಿಯಾದುದು ಅಲ್ಲ. ಈ ಬಗ್ಗೆ ಮುಖ್ಯ ಮಂತ್ರಿಗಳು ಯೋಚನೆ ಮಾಡಬೇಕು. ರಾಜಕಾರಣಿಗಳ ಬಗ್ಗೆ ಕರಪ್ಷನ್ ಇದ್ದರೆ ತನಿಖೆ ಮಾಡುವ ಅಧಿಕಾರ ವಿಜಿಲೆನ್ಸ್ ಕಮಿಷನ್‌ಗೆ ಆಗುವುದಿಲ್ಲ. ಆದಕಾರಣ 'ಲೋಕಪಾಲ' ಅಥವಾ 'ಲೋಕಆಯುಕ್ತ' ಗಳಂತಹ ಒಂದು ಇನ್ಸ್‌ಟಿಟ್ಯೂಷನನ್ನು ರಚನೆ ಮಾಡುವುದು ಒಳ್ಳೆಯದು. ಮಂತ್ರಿಗಳ ಮೇಲೆ ಅಥವಾ ರಾಜಕಾರಣಿಗಳ ಮೇಲೆ ಕೇವಲ ಸಿದ್ದವೀರಪ್ಪನವರಾಗಲೀ, ಅಸೆಂಬಿಯ ಸದಸ್ಯರಾಗಲೀ ಚಾರ್ಜಸ್ ಮಾಡಿದರೆ ಬೆಲೆ ಬರುತ್ತದೆ, ಸಾಮಾನ್ಯ ಮನುಷ್ಯ ಚಾರ್ಜಸ್ ಮಾಡಿದರೆ ಬೆಲೆ ಬರುವುದಿಲ್ಲವೆಂದು ಹೇಳಿದರೆ ತಪ್ಪಾಗುತ್ತದೆ. ಅದನ್ನು ನಾನು ಒಪ್ಪುವುದಿಲ್ಲ

(ಶ್ರೀ ಡಿ. ದೇವರಾಜ ಅರಸ್)

ಯಾರಾದರೂ ಒಬ್ಬರ ಬಗ್ಗೆ ಚಾರ್ಜಸ್ ಇದ್ದಾಗ ಸಾಮಾನ್ಯ ಜನರೂ ಕೂಡ ಆ ಬಗ್ಗೆ ಹೇಳುವುದಕ್ಕೆ ಅವಕಾಶವಿರಬೇಕು. ಅದನ್ನು ಕೇಳಿ ವಿಚಾರ ಮಾಡುವ ವ್ಯವಸ್ಥೆಯಾಗಬೇಕು. ಅದು ಪ್ರಜಾಪ್ರಭುತ್ವದ ಲಕ್ಷಣ. ಆದಕಾರಣ ಯಾವುದಾದರೂ ಒಂದು ಇನ್ಸ್ಟಿಟ್ಯೂಷನನ್ನು ರಚನೆ ಮಾಡುವುದು ಅವಶ್ಯಕ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The discussion on the demands will continue tomorrow.

Now we shall take up the Half-an-hour discussion raised by Sri K. H. Patil on matters arising out of answers given on 27th February 1969, to the Starred Question No. 495 regarding redeemable shares and loan of co-operative institutions.

Half-an-Hour Discussion arising out of Replies to Question No. 495 *re* : Redeemable Shares and Loan of Co-operative Societies.

† ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಭಾಪತಿಗಳೇ, ರೂಲ್ 49ರ ಪ್ರಕಾರ 495ನೇ ಚುಕ್ಕೆ ಗುರುತಿನ ಪ್ರಶ್ನೆಯ ಬಗ್ಗೆ ಚರ್ಚೆ ಪ್ರಾರಂಭ ಮಾಡುವುದಕ್ಕೆ ಒಂದು ರೀತಿಯಿಂದ ಸಂತೋಷವಾದರೆ ಇನ್ನೊಂದು ರೀತಿಯಿಂದ ವ್ಯಸನವಾಗುತ್ತದೆ. ನಾನು ಆ ದಿವಸ ಪ್ರಶ್ನೆಗಳನ್ನು ಕೇಳುವಾಗ ಇನ್ನೊಂದು ಎರಡು ನಿಮಿಷದವರೆಗೆ ಮಾನ್ಯ ಸಹಕಾರ ಸಚಿವರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದರೆ ನಾನು ಈ ದಿವಸ ಅರ್ಧ ಗಂಟೆಕಾಲ ಚರ್ಚೆ ಮಾಡುವ ಸಂದರ್ಭ ಬರುತ್ತಿರಲಿಲ್ಲ. ಅದು ಏನೇ ಇರಲಿ, ರಾಜ್ಯದ ಹಿತದೃಷ್ಟಿಯಿಂದ, ಸಹಕಾರ ಚಳುವಳಿಯ ಹಿತದೃಷ್ಟಿಯಿಂದ ಸರ್ಕಾರದ ಪರವಾಗಿ ಷೇರು ಹಣವನ್ನು ತೊಡಗಿಸಿರುವ ಸಂಸ್ಥೆಗಳ ಬಗ್ಗೆ ವಿವೇಚನೆ ಮಾಡುವುದು ಉಚಿತ ಎಂದು ಈ ಚರ್ಚೆಗೆ ಅವಕಾಶವನ್ನು ಕೇಳಿದ್ದೆ. ಆವತ್ತಿನ ದಿವಸ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಮಾನ್ಯ ಸದಸ್ಯರಿಗೆ ಉತ್ತರ ಓದುವುದಕ್ಕೆ ಬರುತ್ತದೋ ಇಲ್ಲವೋ ಎಂದು ಕೇಳಿದರು. ನಾನು ಇಂಗ್ಲೀಷ್‌ನಲ್ಲಿ ಅಷ್ಟೊಂದು ಪಾರಂಗತನಾಗಿಲ್ಲ. ಕನ್ನಡದಲ್ಲಿ ಪ್ರಿಂಟ್ ಆಗಿರುವ ಉತ್ತರವನ್ನು ಓದಿದ್ದೇನೆ. ನನ್ನ ಮೊದಲನೆಯ ಪ್ರಶ್ನೆ ಎಂದರೆ :

"ಸಹಕಾರ ಸಂಸ್ಥೆಗಳು ತೆಗೆದುಕೊಂಡಿರುವ ಹಿಂದಿರುಗಿಸುವ ಷೇರು ಹಣ ಹಾಗೂ ಸಾಲಗಳನ್ನು ವಾಪಸು ಮಾಡುವುದನ್ನು ಸರ್ಕಾರದವರು ಪ್ರೋತ್ಸಾಹಿಸುವರೇ ...

ಎಂಬುದಾಗಿ, ಎರಡನೆಯ ಪ್ರಶ್ನೆ ಎಂದರೆ :

"ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಕೊಂಡಿರುವ ಕ್ರಮವೇನು"

ಎಂಬುದಾಗಿ ; ಈ ರೀತಿ ಕೇಳಿದ್ದಕ್ಕೆ ಮಾನ್ಯ ಸಚಿವರು (ಅ) ಮತ್ತು (ಆ) ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಈ ರೀತಿ ಹೇಳಿದ್ದಾರೆ : "ಹೌದು ; ಸಾಮಾನ್ಯವಾಗಿ ಷೇರು ಹಣವನ್ನು ಹಿಂದಿರುಗಿಸಬೇಕಾಗಿ ಬಂದಾಗಲೆಲ್ಲಾ ವಾಪಸು ಮಾಡಲಾಗುವುದು" ಎಂದು ಹೇಳಿದ್ದಾರೆ. ಹಣವನ್ನು ಹಿಂದಿರುಗಿಸುವವರು ಯಾರು ? ವಾಪಸ್ ಮಾಡುವವರು ಯಾರು ? ಸರ್ಕಾರದವರು ಅಲ್ಲ, ವಾಪಸ್ ಮಾಡುವವರು ಸೊಸೈಟಿಯವರು. ಇವತ್ತಿನ ದಿವಸ ಮಾನ್ಯ ಸಹಕಾರ ಸಚಿವರು ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಯೂನಿವರ್ಸಿಟಿಯಲ್ಲಿ ಬಹಳ ದಿವಸ ಇದ್ದವರು ; ಒಳ್ಳೆಯ ಧುರೀಣರು ಮತ್ತು ಒಳ್ಳೆಯ ಅನುಭವ ಉಳ್ಳವರಾಗಿದ್ದಾರೆ. ಆದರೆ ನಾನು ಮೂರ್ಖನಾಗಿದ್ದೇನೆ, ನನ್ನ ದಾರ್ಢ್ಯವನ್ನು ತೋರಿಸುವುದಕ್ಕೆ ಹೋಗುವುದಿಲ್ಲ. ನನ್ನ ಪ್ರಶ್ನೆಗಳಿಗೆ ಉತ್ತರ ಕೊಟ್ಟಿರುವುದನ್ನು ನೋಡಿದಾಗ ಅದರ ಹಿನ್ನೆಲೆಯಲ್ಲಿ ಏನು ಇರಬಹುದು ಎಂಬುದು ತೋರುತ್ತದೆ ; ಯಾವ ರೀತಿ ಉತ್ತರವನ್ನು ಮುಚ್ಚಿಟ್ಟಿದ್ದಾರೆ ಎಂಬುದರ ಅರಿವಾಗುತ್ತದೆ. ಸಹಕಾರ ಸಂಸ್ಥೆಗಳು ತೆಗೆದುಕೊಂಡಿರುವ ಹಿಂದಿರುಗಿಸುವ ಷೇರು ಹಣ ಹಾಗೂ ಸಾಲಗಳನ್ನು ವಾಪಸು ಮಾಡುವ ಬಗ್ಗೆ ಸರ್ಕಾರದವರು ಯಾವ ರೀತಿ ಪ್ರೋತ್ಸಾಹ ಕೊಟ್ಟಿದ್ದಾರೆ ಎಂದು ಕೇಳಿದ್ದಕ್ಕೆ ಈ ರೀತಿಯ ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ. ಸದಸ್ಯರು ತಮ್ಮ ಹಕ್ಕಿನ

ಪ್ರಕಾರ ಕೆಲವು ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ ಮಂತ್ರಿಗಳು ಈ ರೀತಿ ಹಾರಿಕೆಯ ಉತ್ತರ ಕೊಟ್ಟು ತಮ್ಮ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುತ್ತಿರುವುದನ್ನು ನೋಡಿದರೆ ಮುಂದೆ ಅವರೇ ತಮ್ಮ ಹೊಣೆಗೇಡಿತನಕ್ಕೆ ತರೆಬಾಗಬೇಕಾಗುತ್ತದೆ. ಅವರ ಹೃದಯದಲ್ಲಿ ಕಲ್ಮಶ ಎಂಬುದು ತುಂಬಿವೆ. ಉತ್ತರವನ್ನು ಬಚ್ಚಿಡುವುದು ಅಧಿಕಾರವನ್ನು ದುರುಪಯೋಗ ಮಾಡಿಕೊಂಡಂತಾಗುತ್ತದೆ. ಯಾರು ನಿಮಗೆ ಬೇಡದವರು ಸಹಕಾರ ಸಂಘಗಳನ್ನು ನಡೆಸುತ್ತಿದ್ದಾರೋ, ಅವರು ಎಷ್ಟೇ ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದರೂ ಕೂಡ ನಿಮ್ಮ ಅಧಿಕಾರಿಗಳ ಮುಖಾಂತರ ಆ ಸಹಕಾರ ಸಂಘಗಳನ್ನು ನಾಶಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಅದೇ ನಿಮಗೆ ಬೇಕಾದವರನ್ನು ಕೆಲವು ಸಹಕಾರ ಸಂಘಗಳಲ್ಲಿ ಇಟ್ಟು ಅವರಿಗೆ ಅನುಕೂಲಪಡಿಸಬೇಕೆಂದು ಸರ್ಕಾರದಿಂದ ಅಂತಹ ಸಹಕಾರಸಂಘಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಡಿಸಿ, ಅವರು ದುರ್ವಿನಿಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತಿರುವುದು ಸರಿಯೇ ಎಂದು ನಾನು ಇವತ್ತಿನದಿವಸ ಕೇಳಬೇಕಾಗಿದೆ. ಸಹಕಾರ ಸಂಸ್ಥೆಗಳು ತೆಗೆದುಕೊಂಡಿರುವ ಹಿಂದಿರುಗಿಸುವ ಷೇರು ಹಣ ಹಾಗೂ ಸಾಲಗಳ ಬಗ್ಗೆ ಒಟ್ಟು ಎಷ್ಟು ಹಣ ವಾಪಸ್ ಬಂದಿದೆ ಎಂದು ಆ ದಿನ ಪ್ರಶ್ನೆ ಕೇಳಿದಾಗ ಒಂದು ಲಕ್ಷ ರೂಪಾಯಿಗಳು ವಾಪಸ್ ಬಂದಿವೆ ಎಂದು ಉತ್ತರ ಕೊಟ್ಟರು. ನಾನು ಸಹ ಒಂದು ಸಹಕಾರಸಂಘಕ್ಕೆ ಮೇನೇಜಿಂಗ್ ಡೈರಕ್ಟರ್ ಆಗಿರುವುದರಿಂದ ಸವಿನಯಪೂರ್ವಕವಾಗಿ ಸರ್ಕಾರದ ಗಮನಕ್ಕೆ ಒಂದು ವಿಚಾರವನ್ನು ತರಬೇಕೆಂದರೆ, ನಾನು ಡೈರಕ್ಟರ್ ಆಗಿರುವ ಒಂದೇ ಒಂದು ಸಂಘದಿಂದ 2 ಲಕ್ಷ 80 ಸಾವಿರ ರೂಪಾಯಿಗಳನ್ನು ವಾಪಸ್ ಮಾಡಲಾಗಿದೆ. ಈ ಹಣವನ್ನು ವಾಪಸ್ ಮಾಡುವಾಗ ಅಧಿಕಾರಿಗಳು ಕೆಲವು ಆತಂಕಗಳನ್ನು ಒಡ್ಡಿದರು. ಹಣ ತುಂಬಲಿಕ್ಕೆ ಹೋದಾಗ ಯಾವ ಹೆಡ್‌ಗೆ ತುಂಬಬೇಕೆಂದು ಅಧಿಕಾರಿಗಳನ್ನು ಕೇಳಿದಾಗ ಅವರು ಸರಿಯಾದ ಉತ್ತರವನ್ನು ಕೊಡಲಿಲ್ಲ. ಸರಿಯಾದ ಉತ್ತರವನ್ನು ಕೊಡಬಾರದೆಂದು ಮಾನ್ಯ ಸಹಕಾರ ಮಂತ್ರಿಯವರೇ ಫೋನ್ ಮೂಲಕ ಇಲ್ಲಿಯ ಅಧಿಕಾರಿಗಳಿಗೆ ತಿಳಿಸಿದ್ದರೆಂದು ತಿಳಿದುಬಂತು. ಆ ಕಾರಣದಿಂದ ಅಲ್ಲಿಯ ಅಧಿಕಾರಿಗಳು ನನ್ನಲ್ಲಿ ಸರಿಯಾಗಿ ಮಾತನಾಡದೆ ಯಾವ ಹೆಡ್‌ಗೆ ತುಂಬಬೇಕೆಂಬ ಬಗ್ಗೆ ಸರಿಯಾದ ಉತ್ತರ ಕೊಡಲಿಲ್ಲ. ಇದೇ ರೀತಿ ಅನೇಕ ಅಕ್ರಮ ಕಾರ್ಯಗಳು ಈ ಸೊಸೈಟಿಯ ಬಗ್ಗೆ ನಡೆದಿವೆ. ಈ ಸಹಕಾರ ಮಂತ್ರಿಗಳು ನಾನು ಆ ಸೊಸೈಟಿಯಲ್ಲಿರುವುದರಿಂದಲೇ ಈ ರೀತಿ ಮಾಡುತ್ತಿದ್ದಾರೆಂದು ಗೊತ್ತಾಗುತ್ತಿದೆ. ಮಂತ್ರಿಗಳೇ ಈ ರೀತಿ ವರ್ತನೆ ಮಾಡಿದರೆ ಹೇಗೆ ಎಂದು ಕೇಳುತ್ತೇನೆ. ಡೆಪ್ಯುಟಿ ರಿಜಿಸ್ಟ್ರಾರ್ ಅವರನ್ನು ಯಾವ ಹೆಡ್‌ಗೆ ತುಂಬಬೇಕೆಂದು ಕೇಳಿದಾಗ ಅವರೂ ಸಹ ಹೇಳಲಿಲ್ಲ. ನಾನು ಎಂ. ಎಲ್. ಎ. ಆಗಿದ್ದರೂ ಕೂಡ ನನ್ನ ಬಗ್ಗೆ ಅಲ್ಲಿಯ ಅಧಿಕಾರಿಗಳು ಈ ರೀತಿ ವರ್ತನೆ ಮಾಡಿದ್ದಾರೆ. ನನ್ನ ಹಣೆಯಬರಹವೇ ಇಷ್ಟಾದ ಮೇಲೆ ಸಾಮಾನ್ಯರ ಗತಿ ಏನು ! ಸಾಮಾನ್ಯ ಜನರು ಮರ್ಯಾದೆಯಿಂದ ಸಹಕಾರಸಂಘಗಳನ್ನು ನಡೆಸುವುದಕ್ಕೆ ಸಾಧ್ಯವೇ ಎಂದು ಮಾನ್ಯ ಸಹಕಾರ ಸಚಿವರಾದ ನಾಡಗೌಡರನ್ನು ಕೇಳಬೇಕಾಗಿದೆ. ಅಲ್ಲಿಯ ಅಧಿಕಾರಿಗಳು ಯಾವ ಹೆಡ್‌ಗೆ ತುಂಬಬೇಕೆಂದು ಕೇಳಿದಾಗ ಅವರು ಹೇಳಲಿಲ್ಲ. ನಂತರ 2 ಲಕ್ಷ 80 ಸಾವಿರ ರೂಪಾಯಿಗಳ ನಗದು ಕ್ಯಾಷನ್ನು ಕೈಯಲ್ಲಿ ಹಿಡಿದುಕೊಂಡು ಬೆಂಗಳೂರಿಗೆ ಬಂದು ಇಲ್ಲಿಯ ಸಬ್‌ಟ್ರೆಜರಿಯಲ್ಲಿ ತುಂಬಿದೆ. ನಾನು ಆ ಸೊಸೈಟಿಯ ಮೇನೇಜಿಂಗ್ ಡೈರಕ್ಟರ್ ಆಗಿದ್ದಕ್ಕೆ ಈ ರೀತಿ ತೊಂದರೆಯಾಯಿತು, ಇಲ್ಲದಿದ್ದರೆ ಆಗುತ್ತಿರಲಿಲ್ಲ. ಇದರಲ್ಲಿ ಶ್ರೀಮಾನ್ ನಾಡಗೌಡರ ಕೈವಾಡ ಇದೆ ಎಂದು ಭಾಸವಾಗುತ್ತದೆ. ಇಲ್ಲಿ ಕೆ. ಹೆಚ್. ಪಾಟೀಲ್‌ರವರು ಮ್ಯಾನೇಜಿಂಗ್ ಡೈರೆಕ್ಟರು ಆಗಿದ್ದಾರೆ. ಇದರಿಂದ ಮಾನ್ಯ ಶ್ರೀ ನಾಡಗೌಡರು ಸಹಕಾರಿ ಇಲಾಖೆಯ ಅಧಿಕಾರಿಗಳಿಗೆ ಒಂದು ರೀತಿಯ ಆದೇಶ ಕೊಟ್ಟು 2 ಲಕ್ಷ 80 ಸಾವಿರ ರೂಪಯಿಗಳಷ್ಟು ಹಣವನ್ನು ಟ್ರೆಜರಿಗೆ ತಂಬಲು ಬಂದಾಗ ಅದಕ್ಕೆ ಅವಕಾಶ ಕೊಡಬಾರದು ಎಂದು ಹೇಳಿದರು. ಇದರ ಬಗ್ಗೆ ನಾನು ಪ್ರಶ್ನೆ ಕೇಳಿದರೆ ಇಲ್ಲಿ ಸರಿಯಾದ ಉತ್ತರವನ್ನೂ ಕೊಡಲಿಲ್ಲ. ಅಂದು ಇಲ್ಲಿ ನನ್ನ ಪ್ರಶ್ನೆಯ ಸಮಯ ಮುಗಿದಿದ್ದರಿಂದ ನಾನ್ನು ಇಂತಹ ಚರ್ಚೆ ಮಾಡಬೇಕಾದ ಪ್ರಸಂಗ ಬಂತು. ನಾನು ಅಂದು ಕೂಡ ಗದಗ್ ಕೋಆಪರೇಟೀವ್ ಸೊಸೈಟಿ ಬಗ್ಗೆ ಇಲ್ಲಿಂದ ವಾಪಸು ಕೊಡುವ ಹಣ ಸುಮಾರು ಎರಡು ಲಕ್ಷ ಎಂಬತ್ತು ಸಾವಿರವನ್ನು ಖಜಾನೆಯಲ್ಲಿ ತುಂಬಲು ಪರ್ಮಿಷನ್ ಕೇಳಿದರೆ ಸಹಕಾರ ಇಲಾಖೆಯ ಅಧಿಕಾರಿಗಳು ಅಲ್ಲಿ ಇದ್ದರು, ಜಾಯಿಂಟ್ ರಿಜಿಸ್ಟ್ರಾರ್ ಕೂಡ ಇದಕ್ಕೆ ಅವಕಾಶ ಕೊಡಲಿಲ್ಲ. ನಾನು ಇಷ್ಟು ರೊಕ್ಕವನ್ನೂ ಬೆಂಗಳೂರಿಗೆ ತಂದು ರಿಜಿಸ್ಟ್ರಾರ್‌ವರ ಪರ್ಮಿಷನ್ ತೆಗೆದುಕೊಂಡು ತುಂಬಬೇಕಾಯಿತು. ರಿಜಿಸ್ಟ್ರಾರ್ ಅವರಿಗೆ ಶ್ರೀಮಾನ್ ನಾಡಗೌಡರು ಹೇಳಿದರೂ ಅವರು ಕಾಯದೆ ಪ್ರಕಾರ ನಮಗೆ ಅವಕಾಶ ಕೊಟ್ಟು ಇಷ್ಟು ರೊಕ್ಕವನ್ನು ತುಂಬಲು ಆದೇಶ ಕೊಟ್ಟು ಸಹಾಯ ಮಾಡಿದರು. ಮೈಸೂರು ರಾಜ್ಯದಲ್ಲಿ ಸಹಕಾರ ಖಾತೆ ಇದೆಯೋ ಇಲ್ಲವೇ ಎನ್ನುವ ಅನುಮಾನವೂ ನಮಗೆ ಬರುತ್ತಿದೆ. ಸರಕಾರ

(ಶ್ರೀ ಕೆ. ಹೆಚ್. ಪಾಟೀಲ್)

ಕ್ರಮಬದ್ಧವಾಗಿ ಯಾವ ಸಹಕಾರ ಸಂಘಗಳಲ್ಲೂ ಮೆಂಬರ್‌ಷಿಪ್ ಪಡೆದಿಲ್ಲ. ನಾನು ಷೇರು ಹಣವನ್ನು ವಾಪಸು ಮಾಡಲು ಸಹಕಾರ ಖಾತೆಯ ಇಲಾಖೆಯ ಅಧಿಕಾರಿಗಳನ್ನು ಅಪ್ಪಣೆ ಕೇಳಿದಾಗ ಅದನ್ನು ನಿರಾಕರಿಸುವಂತೆ ಮಾನ್ಯ ಶ್ರೀ ನಾಡಗೌಡರು ಸೂಚನೆ ಕೊಟ್ಟಿದ್ದಾರೆ ಎನ್ನುವುದು ತಿಳಿಯಿತು. ಇದಕ್ಕೆ ಕಾರಣ ವಿರೋಧ ಪಕ್ಷದ ಸದಸ್ಯರು ಒಂದು ಸೊಸೈಟಿಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಇದ್ದಾರೆ. ಇವರಿರುವ ಕಡೆ ಕೆಲಸಗಳು ಚೆನ್ನಾಗಿ ನಡೆಯುತ್ತಿದ್ದರೂ ಏನಾದರೂ ಅಡ್ಡಿ ತಡೆಗಳನ್ನು ತಂದು ಕಷ್ಟಕ್ಕೆ ಸಿಕ್ಕಿಸಬೇಕು ಎನ್ನುವ ಉದ್ದೇಶದಿಂದ ಇವರು ಇಷ್ಟೆಲ್ಲಾ ತೊಂದರೆಗಳನ್ನು ನಮಗೆ ಕೊಡುತ್ತಿದ್ದಾರೆ ಎನ್ನುವುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸರಕಾರ ಯಾವ ಸಂಘಕ್ಕೂ ಮೆಂಬರಾಗಿಲ್ಲ ಗದಗ್ ಸಹಕಾರ ಸಂಘದವರು ಸರಕಾರ ಕೊಟ್ಟಿದ್ದ ಷೇರು ಹಣವನ್ನು ವಾಪಸು ಮಾಡುತ್ತಿದ್ದಾರೆ, ಇವನ್ನು ಕಟ್ಟಲು ಅನುಮತಿ ಬೇಡಿದರೆ ಇಲ್ಲಿನ ಸಹಕಾರಿ ಅಧಿಕಾರಿಗಳು ಅವಕಾಶ ಕೊಡಲಿಲ್ಲ, ನನಗೆ ರಿಜಿಸ್ಟ್ರಾರ್‌ರವರು ಕೆ. ಹೆಚ್. ಪಾಟೀಲ್‌ರವರಿಗೆ ಬರೆದ ಪತ್ರ ಈರೀತಿ ಇದೆ:

> "I am glad to note that you are making efforts to raise additional Share Capital of Rs. one lakh to redeem the Government Share Capital contribution. You may collect the additional Share capital immediately and see that Government share capital is refunded."

26—12—1967 ರಲ್ಲಿ ಬಂದ ಪತ್ರ ಇದು. ಆಗ ನಿಜಲಿಂಗಪ್ಪ ಮಂತ್ರಿಮಂಡಲದ ಸರಕಾರ ಇತ್ತು. ಹೀಗಿರುವಾಗ ನಮ್ಮ ಜನ ನಾಯಕರ ಮೇಲೆ ಹೈಕೋರ್ಟಿನಲ್ಲಿ ಒಂದು ಕೇಸು ಬಂತು. ಅದರಲ್ಲೂ ಕೂಡ ನಮಗೆ ಅನುಕೂಲವಾಗುತ್ತದೆ ಎಂದು ಡೆಪ್ಯೂಟಿ ಕಮಿಷನರವರ ಕಡೆಗೆ ಸೂಚನೆ ಕೊಟ್ಟು ಏನಾದರೂ ಮಾಡಿ ನಮ್ಮನ್ನು ಹೊಡೆಯಬೇಕೆಂದು ಅವರ ಮೂಲಕ ಒಂದು ರೀತಿಯಾದ ಧಮಕಿ ಕೊಡುವಂತೆ ಒಂದು ನೋಟಿಫಿಕೇಷನ್ ಹೊರಡಿಸಿದರು.

The Notification is as follows :—

> "Whereas the sum amounting to not less than Rs. 2 lakhs is given to the Gadag Cotton Co-operative Sales Society, Dharwar District, in the form of subscription to the share capital of the said society and loans to the said society;
>
> "whereas the State Government is satisfied, it is necessary in the public interest to exercise control over that society."

ನಾನು ಹೈಕೋರ್ಟಿನಲ್ಲಿ ಕೇಸು ದಾಖಲು ಮಾಡಿ ಇದರಲ್ಲಿ ಈ ವಿಚಾರವಾಗಿ ಒಂದು ಅಫಿಡವಿಟ್ ಕೂಡ ಕೊಟ್ಟು ಇಷ್ಟು ಹಣವನ್ನು ಕಾಯಿದೆ ಪ್ರಕಾರ ವಾಪಸು ಮಾಡುತ್ತಿದ್ದರೂ ಇದಕ್ಕೆ ಅವಕಾಶ ಕೊಡುತ್ತಿಲ್ಲ ಎನ್ನುವುದನ್ನೂ ಅದರಲ್ಲಿ ತಿಳಿಸಿದ್ದೇನೆ. ಇಂತಹ ಒಂದು ಸೊಸೈಟಿಯಲ್ಲಿ ಮಾತ್ರ ಹೀಗೆ ಅವರೇ ಮುಂದೆ ಬಂದು ಹಿಂತಿರುಗಿಸಿ ಕೊಡುತ್ತಿರುವಾಗ ಇಲ್ಲಿನ ಅಧಿಕಾರಿಗಳು ಒಂದು ರೀತಿಯಾಗಿ ಜಬರ್ದಸ್ತಿನ ಧೋರಣೆಯಿಂದ ವರ್ತನೆ ಮಾಡುತ್ತಿದ್ದಾರೆ. ಈ ರೀತಿ ನಾವು ವಿರೋಧ ಪಕ್ಷದಲ್ಲಿದ್ದೇವೆ ಎಂದು ನೀವು ಕಾಡಲಿಕ್ಕೆ ಇರಬಹುದು. ಆದರೆ ನಮಗೆ ಪರಮಾತ್ಮನ ಅನುಗ್ರಹ ಇದೆ. ನಮ್ಮ ಮುಂದೆ ಶ್ರೀಮಾನ್ ನಾಡಗೌಡರ ಪ್ರಭಾವ ಬೆಳೆಯುವುದಿಲ್ಲ.

ಶ್ರೀ ಐ. ಸೋಮಶೇಖರಪ್ಪ (ಹೊಸನಗರ).— ಪಾಯಿಂಟ್ ಆಫ್ ಆರ್ಡರ್, ಸರ್ ಇದು 296ನೇ ಪ್ರಶ್ನೆಗೆ ಸಂಬಂಧಪಟ್ಟದ್ದು ಎಂದು ಇದೆ. ಇದರಲ್ಲಿ ಗದಗ್ ಸೊಸೈಟಿ ಬಗ್ಗೆ ಎಂದರೆ ಇಲ್ಲಿ ಇದು ಉದ್ಭವಿಸುವುದಿಲ್ಲ. ಸ್ಪೆಸಿಫಿಕ್ ಆಗಿ ಗದಗ್ ಪ್ರಶ್ನೆ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನನ್ನ ಮಾನ್ಯ ಸ್ನೇಹಿತರು ಬಹಳ ಚೆನ್ನಾಗಿ ಹೇಳಿದರು. ಮೈಸೂರು ಸಹಕಾರ ಇಲಾಖೆಯ ಆಡಳಿತಕ್ಕೆ ಒಳಪಟ್ಟಿರುವುದು ಗದಗ್ ಸೊಸೈಟಿ ಎನ್ನುವುದನ್ನು ನಿಜವಾಗಿಯೂ ತಿಳಿದುಕೊಂಡಿದ್ದರೆ ಇಂತಹ ಪ್ರಶ್ನೆ ಅಪ್ರಸ್ತುತ ಎಂದು ಅವರೇ ತಿಳಿಯುತ್ತಿದ್ದರು. ಇಂತಹ ಒಂದು ಸೊಸೈಟಿಯಲ್ಲಿ ವಿರೋಧಪಕ್ಷದವರು ಇದ್ದಾರೆ ಇಲ್ಲಿ ಕೆಲಸಗಳು ಚೆನ್ನಾಗಿ

ನಡೆಯುತ್ತಿವೆ ಎಂದು ಇದ್ದರೂ ಇದರ ಬಗ್ಗೆ ಯಾವ ರೀತಿಯ ನ್ಯಾಯವನ್ನು ಮಾಡುತ್ತಿಲ್ಲ ಎನ್ನುವುದನ್ನು ತೋರಿಸಲಿಕ್ಕಾಗಿ ಇಲ್ಲಿ ಹೇಳುತ್ತಿದ್ದೇನೆ. ಇಂತಹ ಒಂದು ಸಂದರ್ಭವನ್ನು ಒದಗಿಸಿಕೊಟ್ಟದ್ದಕ್ಕಾಗಿ ಅವರಿಗೂ ನನ್ನ ಧನ್ಯವಾದಗಳು.

Sri C. K. RAJAIAH SHETTY.—Sir, in answer to (*d*) whether there are any shares redeemed up-till now, the reply is 'Yes'. It comes under that.

Sri K. H. PATIL.—My letter addressed to the Registrar is as follows.—

> "I am extremely happy to note that you have, after convincing your goodself about the soundness of our Society's financial position, permitted us to refund the Government share, after collecting additional shares of Rs. 1 lakh from the members. Our Society, by this time would have collected the shares.........You have expressed your regret about my remarks in respect of the Joint Registrar, Co-operative Societies, Belgaum and the Assistant Registrar, Co-operative Societis, Gadag...... Immediately I will take an opportunity to refund the share capital."

ಲೋಕಲ್ ಅಧಿಕಾರಿಗಳಿಗೆ ಕಾಯಿದೆ ಪ್ರಕಾರ ಷೇರು ಹಣವನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಅವಕಾಶ ಇದ್ದರೂ ಇಲ್ಲ ಎಂದು ಹೇಳುವುದು ಸರಿಯಿಲ್ಲ ಎನ್ನುವುದನ್ನು ತೋರಿಸುವುದಕ್ಕಾಗಿ ಈ ಇಲಾಖೆಯ ಅಡ್ಮಿನಿಸ್ಟ್ರೇಷನ್ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದನ್ನು ಸರಕಾರಕ್ಕೆ ವಿವರವಾಗಿ ಹೇಳಲು ಇಂತಹ ಒಂದು ಅವಕಾಶವನ್ನು ಬೇಡಿ ಇಲ್ಲಿ ಹೇಳುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ನಾಡಗೌಡರು ಉತ್ತರವನ್ನು ಕೊಡುವಾಗ ಎಷ್ಟೆಷ್ಟು ಹಣ ಯಾವ ಯಾವ ಸಂಘಗಳಿಂದ ಕೊಟ್ಟಿದ್ದಾರೆ, ಸಂಘಗಳು ಅದನ್ನು ವಾಪಸ್ ಕೊಡುವುದಕ್ಕೆ ಯಾವ ರೀತಿಯಾದ ಉತ್ತೇಜನ ಕೊಡುತ್ತಿದ್ದೀರಿ ಎನ್ನುವುದನ್ನು ಕೇಳಿದಾಗ ಇದರ ಬಗ್ಗೆ ಒಂದು ರೀತಿಯಾದ ಸೌಜನ್ಯವನ್ನು ತೋರಿಸಿ ನ್ಯಾಯವಾದ ಉತ್ತರ ಕೊಟ್ಟಿದ್ದರೆ ನಿಮ್ಮನ್ನು ಪ್ರಶಂಸೆ ಮಾಡಬಹುದಿತ್ತು. ಆರೀತಿ ಉತ್ತರವನ್ನೂ ಕೊಡಲಿಲ್ಲ ಮತ್ತು ಇವರಲ್ಲಿ ಅಂತಹ ಸೌಜನ್ಯತೆಯೂ ಇದೆ ಎನ್ನುವ ಆಸೆ ಕೂಡ ನಮಗೆ ಇಲ್ಲ. ಎರಡು ಲಕ್ಷ ಹೆಚ್ಚಾಗಿದೆ ಎಂದು ಇಲ್ಲಿನ ಕಮಿಟಿಯವರು ನಿರ್ಣಯ ಮಾಡಿ ಇದನ್ನು ಇಲ್ಲಿನ ಅಧ್ಯಕ್ಷರು ಸರಕಾರಕ್ಕೆ ಈ ರೊಕ್ಕವನ್ನು ತುಂಬಬೇಕು ಎಂದು ಬಂದರೆ ಅವಕ್ಕೆ ಅವಕಾಶ ಕೊಡದೇ ಇರುವುದು ಇದು ಯಾವ ಭಾಷೆಯಿಂದ ಕರೆಯಬೇಕೋ ನನಗೆ ಗೊತ್ತಾಗುತ್ತಿಲ್ಲ. ನಿಮ್ಮ ಹಣ ನಮಗೆ ಬೇಡ ಅದನ್ನು ಇತರ ಯೋಜನೆಗಳಿಗೆ ನೀವು ಉಪಯೋಗಿಸಿಕೊಳ್ಳಬಹುದು ಎಂದು ಹೇಳುವಾಗ ನಿಮ್ಮ ಬುದ್ಧಿವಂತಿಕೆಯನ್ನು ಉಪಯೋಗಿಸಿ ಸ್ವಲ್ಪವಾದರೂ ಜನತೆಗೆ ಅನುಕೂಲ ಮಾಡಿಕೊಡಬೇಡವೇ? ನಿಮ್ಮ ಮೈಯ್ಯಲ್ಲಿ ಬೇಕಾದ ಹಾಗೆ ಶಕ್ತಿ ಇದೆ, ನೀವು ಗಂಡನ್ನು ಹೆಣ್ಣು ಮಾಡಬಹುದು, ಹೆಣ್ಣನ್ನು ಗಂಡು ಮಾಡಬಹುದು, ಮತ್ತು ಹೆಚ್ಚು ಮೇಧಾವಿಗಳು ಏನೂ ಬೇಕಾದರೂ ಮಾಡಬಹುದು ಎಂದು ಇಲ್ಲಿ ನಮ್ಮನ್ನು ಹೊಡೆಯುವುದಕ್ಕೆ ಏಕೆ ಹೋಗುತ್ತೀರಿ!

7-30 P.M.

ಏನಾದರೂ ನೀವು ಮಾಡಬಲ್ಲಿರಿ, ಮಾತಿನಂಥ ಶಕ್ತಿ ಪಡೆದಿದ್ದೀರಿ, ಅಂತಹ ಹಕ್ಕನ್ನು ಪಡೆದಿದ್ದೀರಿ. ನಾನು ಒಂದು ಮಾತನ್ನು ಹೇಳುತ್ತೇನೆ. ಈವೊತ್ತು ರಾಜ್ಯದ ಹಣಕ್ಕೆ ರಕ್ಷಣೆ ಇರಬೇಕು. ಇವೊತ್ತು ಸಹಕಾರ ಚಳುವಳಿ ಅಗ್ರಸ್ಥಾನಕ್ಕೆ ಬಂದಿದೆ. ಈ ಸಹಕಾರಿ ಚಳುವಳಿ ಮೈಸೂರು ಸರ್ಕಾರದ 2 ಕೋಟಿ ಜನರಿಂದ ರಕ್ಷಣೆ ಪಡೆದಿದೆ. ಇದಕ್ಕಾಗಿ ಖರ್ಚು ಮಾಡತಕ್ಕಂಥ ಹಣ ನ್ಯಾಷನಲ್ ಡೆವಲಪ್‌ಮೆಂಟ್‌ನಿಂದ ಬಂದಂಥ ಹಣ. ಆ ದುಡ್ಡನ್ನು ದುರುಪಯೋಗ ಮಾಡುವುದಕ್ಕೆ ನೀವು ಬಿಟ್ಟರೂ ಪರಮಾತ್ಮನು ನಿಮ್ಮನ್ನು ಬಿಡಲಾರ. ನಿಮಗೆ ವಿವೇಚನೆ ಇಲ್ಲ. ಸಹಕಾರ ಸಂಘದ ಸಚಿವರು ಕೊಟ್ಟ 2 ಲಕ್ಷ ರೂಪಾಯಿಯಿಂದ ಈ ಸೊಸೈಟಿಯನ್ನು, ನಡೆಸುವುದಕ್ಕೆ ಸಾಧ್ಯ ಇದೆಯೇ? ಅದನ್ನು ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಎಲ್ಲಾ ಸೊಸೈಟಿಗಳು

(ಶ್ರೀ ಕೆ. ಹೆಚ್. ಪಾಟೀಲ್)

ಈ ರೀತಿ ತೆಗೆದುಕೊಂಡಿವೆಯೋ ! ಒಬ್ಬೊಬ್ಬರಿಗೆ ಒಂದೊಂದು ತರಹ ಮಾಡುವುದು ಸರಿಯಲ್ಲ. ನಿಮ್ಮ ಹಿರಿಯರಾದ ಶ್ರೀಮಾನ್ ನಿಜಲಿಂಗಪ್ಪನವರು ಈ ರೀತಿ ಮಾಡಿದರೆ ಮುಂದಿನ ಮುಖ್ಯ ಮಂತ್ರಿ ಪದವಿ ಸಿಕ್ಕುತ್ತದೆ ಇಲ್ಲದಿದ್ದರೆ ಇಲ್ಲ ಎಂದು ನಿಮಗೆ ಆಶ್ವಾಸನೆ ಕೊಟ್ಟರೇ ? ಅದು ಬಿಟ್ಟರೆ ನಿಮಗೆ ಇನ್ನು ಯಾವರೀತಿ ಅನುಭವ ಇದೆಯೋ ನನಗೆ ಗೊತ್ತಿಲ್ಲ. ಮತ್ತು ನಿಮ್ಮ ಮನಸ್ಸಿನಲ್ಲಿ ಏನು ಇವೆಯೋ ಗೊತ್ತಿಲ್ಲ. ಕೆ. ಹೆಚ್. ಪಾಟೀಲರ ಯೋಚನೆ ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಬೇಡ. ಎಲ್ಲರಿಗೂ ಒಂದೇ ರೀತಿ ನ್ಯಾಯ ಇರಬೇಕು ಎಂದು ಹೇಳುತ್ತೇನೆ. ಎಲ್ಲರಿಗೂ ಒಂದು ಸಮರ್ಪಕವಾದ ಉತ್ತರ ಹೇಳಬೇಕು. ಈವೊತ್ತು ನನಗೆ ಕೆಲವು ಮಾಹಿತಿಗಳು ಬೇಕಾಗಿತ್ತು. ರಿಜಿಸ್ಟ್ರಾರ್ ಆಫೀಸಿಗೆ ಫೋನ್ ಮಾಡಿದೆ. ಜಾಯಿಂಟ್ ರಿಜಿಸ್ಟ್ರಾರ್ ಆಸ್ಟ್ರೇಲಿಯಾಕ್ಕೆ ಹೋಗಿದ್ದಾರೆ ಎಂದರು. ಅಲ್ಲಿಂದ ಇನ್ನೊಬ್ಬ ಡೈರೆಕ್ಟರನ್ನು ಕೇಳಿದೆ, ಅವರು ಅಮೇರಿಕ್ಕಾಕ್ಕೆ ಹೋಗಿದ್ದಾರೆ ಎಂದರು. ಒಟ್ಟಿನಲ್ಲಿ ಮಾಹಿತಿ ಸಿಕ್ಕಲಿಲ್ಲ. ಸಹಕಾರ ಸಂಘಗಳ ರಿಜಿಸ್ಟ್ರಾರ್ ನಮಗೆ ಯಾವ ಸಮಾಚಾರವೂ ಕೊಡಲಿಲ್ಲ. ಈ ದೃಷ್ಟಿಯಿಂದ ನಾನು ಹೇಳುತ್ತೇನೆ. ಈ ಸಹಕಾರ ಸಂಘಗಳ ರಿಜಿಸ್ಟ್ರಾರ್ ಆಫೀಸು ನಿಜವಾಗಿಯೂ ಯಾವ ಕೆಲಸವನ್ನೂ ಮಾಡುತ್ತಿಲ್ಲ ಎಂದು. ಯಾವ ಮಾಹಿತಿ ಕೇಳಿದರೂ ಸಿಕ್ಕದಂತೆ ಇದೆ. ಇದನ್ನು ಹಿಂದಿನ ಶ್ರೀಮಾನ್ ನಿಜಲಿಂಗಪ್ಪನವರು ಬಿಟ್ಟು ಹೋಗಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರು ಇಲ್ಲ ಇಲ್ಲದಿದ್ದರೂ ಅಧಿಕಾರಿಗಳೆಲ್ಲಾ ಅವರ ಮಾತು ಕೇಳುತ್ತಾರೆ, ಅವರ ಕೈಯಲ್ಲಿದ್ದಾರೆ. ಮೈಸೂರು ರಾಜ್ಯದ ಸಹಕಾರ ಇಲಾಖೆಯವರ ಹೇಳಿದ್ದಕ್ಕೆಲ್ಲಾ ಶ್ರೀಮಾನ್ ನಿಜಲಿಂಗಪ್ಪನವರು ಅವಕಾಶ ಕೊಟ್ಟಿದ್ದರಿಂದ, ಆ ಇಲಾಖೆ ಈ ರೀತಿ ಬೆಳೆದುಬಂತು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಲ್. ಗೌಡ (ಸಹಕಾರಿ ಶಾಖೆಯ ಉಪಮಂತ್ರಿಗಳು).—ಸಭಾಪತಿಯವರೇ, ಶ್ರೀಮಾನ್ ಕೆ.ಹೆಚ್. ಪಾಟೀಲರು 296ನೇ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕೊಟ್ಟ ಉತ್ತರ ಸಮರ್ಪಕವಾಗಲಿಲ್ಲವೆಂದು ಇದರ ಬಗ್ಗೆ ಅರ್ಧ ಗಂಟೆ ಚರ್ಚೆ ಮಾಡಿದ್ದಾರೆ. ಅವರ ಮನಸ್ಸಿನಲ್ಲಿರುವ ಅನೇಕ ವಿಚಾರಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಅವರೆ ಅವನ್ನು ಬೇರೆ ಸಂದರ್ಭದಲ್ಲಿ ಡಿಮ್ಯಾಂಡುಗಳು ಬಂದಾಗ ಹೇಳಬಹುದಾಗಿತ್ತು. ಇದರ ಬಗ್ಗೆ ನಾವು ಏನೊಂದೂ ತಪ್ಪು ಮಾಡಿಲ್ಲ ಎಂದು ಈ ಸಂದರ್ಭದಲ್ಲಿ ಈ ಸಭೆಗೆ ತಿಳಿಸಬಯಸುತ್ತೇನೆ.

ಮೊದಲನೆಯದಾಗಿ ಸರ್ಕಾರದವರು ಯಾವುದಾದರೂ ಒಂದು ಸಹಕಾರ ಸಂಘದಲ್ಲಿ ಷೇರು ಬಂಡವಾಳವನ್ನು ಹೂಡತಕ್ಕಂಥ ನೀತಿ ಹೇಗೆಂದರೆ ಯಾವುದಾದರೂ ಸಹಕಾರ ಸಂಘ ಪ್ರಾರಂಭ ಮಾಡಿದ ವೇಳೆಯಲ್ಲಿ ಅವರು ಕಷ್ಟದಲ್ಲಿರತಕ್ಕಂಥ ಸಂದರ್ಭದಲ್ಲಿ ತನ್ನ ಕಾಲಮೇಲೆ ನಿಂತುಕೊಳ್ಳಲು ಕಷ್ಟದಲ್ಲಿರುವಾಗ ಅಂತಹ ಸಂದರ್ಭದಲ್ಲಿ ಷೇರು ಬಂಡವಾಳ ಕೊಡುತ್ತಾರೆ. ಆ ರೀತಿ ಕೊಡಬೇಕಾದರೆ ಕೆಲವು ರೀತಿ ನಿಯಮಗಳು ಇವೆ. ಆ ನಿಯಮದಂತೆ ಶ್ರೀ ಕೆ. ಹೆಚ್. ಪಾಟೀಲ್, ಮ್ಯಾನೇಜಿಂಗ್ ಡೈರೆಕ್ಟರ್‌ರಾಗಿರತಕ್ಕ ಹತ್ತಿ ಸಹಕಾರ ಸಂಘ, ಗದಗ. ಇವರಿಗೆ 2 ಲಕ್ಷ 81 ಸಾವಿರ ಷೇರು ಬಂಡವಾಳ ಕೊಟ್ಟಿದ್ದೇವೆ. ಆ ರೀತಿ ಕೊಡಬೇಕಾದರೆ ಕೆಲವು ರೀತಿನಿಯಮಗಳು ಇವೆ. ಈ ಒಂದು ಸಹಕಾರ ಸಂಘ ತನ್ನ ದುಡಿಗ್ಗೆ ಬಂದ ಲಾಭದಲ್ಲಿ 1/12 ಭಾಗ ಷೇರ್ ಕ್ಯಾಪಿಟಲ್, ರಿಡಮ್ಷನ್ ರಿಸರ್ವ್ ಫಂಡ್ ಮಾಡಿ ಇಟ್ಟಿದ್ದರಲ್ಲಿ ಅದನ್ನು ಕೊಡಬೇಕು. ಇದರ ಉದ್ದೇಶ ಇಷ್ಟೆ. ಸಹಕಾರಿ ಸಂಘಗಳು ಬೆಳೆದು ಖಾಸಗಿಯವರು ಹಾಕಿರತಕ್ಕ ಬಂಡವಾಳ ಹಣಕ್ಕೆ ಪ್ರತಿಫಲ ಬರಬೇಕಾದರೆ ಷೇರು ಕ್ಯಾಪಿಟಲ್ ಹೆಚ್ಚಾಗಬೇಕು. ಹಾಗಿಲ್ಲದೇ ಹೋದರೆ ಅದನ್ನು ವಾಪಸ್ಸು ಕೊಡಿ ಎಂದು ಹೇಳಿದೆವು. ಆದರೆ ಶ್ರೀಮಾನ್ ಕೆ. ಹೆಚ್. ಪಾಟೀಲರು ನಾವು 2 ಲಕ್ಷ 81 ಸಾವಿರ ರೂಪಾಯಿಯನ್ನು ವಾಪಸ್ಸು ಕೊಟ್ಟಿದ್ದೇವೆ ಎಂದು ಹೇಳಿದರು. ಆದರೆ ಹಣ ವಾಪಸ್ ಕೊಡಬೇಕಾದರೆ ಕೆಲವು ನಿಯಮಗಳು ಇವೆ. ಅವರ ಷೇರ್ ಕ್ಯಾಪಿಟಲ್ ರಿಡಮ್ಷನ್ ರಿಸರ್ವ್ ಫಂಡ್‌ನಿಂದ ತೀರಿಸಬೇಕು. ಆ ಒಂದು ನಿಯಮವನ್ನು ಸಂಘದವರು ಪಾಲನೆ ಮಾಡಿಲ್ಲ. ಅವರು 65 ಸಾವಿರ ಚಿಲ್ಲರೆ ರೂಪಾಯಿಯನ್ನು ಷೇರ್ ಕ್ಯಾಪಿಟಲ್ ರಿಡಮ್ಷನ್ ರಿಸರ್ವ್ ಫಂಡ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಮತ್ತು ಈ ಸಂಘದವರು ಇತರ ಸಂಘಗಳಿಗೆ ಸಾಲ ಕೊಡಬೇಕಾಗಿರುವುದರಿಂದ ಇವರು 2 ಲಕ್ಷ 81 ಸಾವಿರ ರೂಪಾಯಿಯನ್ನು ಹೇಗೆ ಕಟ್ಟಿದ್ದಾರೆ ಎನ್ನುವುದು ಅವರ ವರದಿಯಿಂದ ಗೊತ್ತಾಗುತ್ತದೆ. ಆದುದರಿಂದ ಮೊದಲನೆಯದಾಗಿ ನಾವು ಏನು ಒಂದು ನಿಯಮವನ್ನು ಹಾಕಿದ್ದೆವೋ ಅದರ ವಿರೋಧ ಕೆಲಸ ಮಾಡಿದ್ದಾರೆ, ಆ ನಿಯಮವನ್ನು ಪಾಲನೆ ಮಾಡಲಿಲ್ಲ ಎನ್ನುವುದು ಗೊತ್ತಾಗುತ್ತದೆ.

ಎರಡನೆಯದಾಗಿ ನಾನು ಹೇಳುವುದು ಶ್ರೀಮಾನ್ ಕೆ. ಹೆಚ್. ಪಾಟೀಲರು ಸೊಸೈಟಿಗೆ ಕೊಟ್ಟಿರುವ ಹಣ ವಾಪಸ್ಸು ಕೊಡುವುದು ಬೇಡ ಎಂದು ಹೇಳುವುದಿಲ್ಲ. ಆದರೆ ಯಾವಾಗಲೂ ಕೊಟ್ಟಿರತಕ್ಕ ಹಣವನ್ನು ವಾಪಸ್ಸು ಕೊಡುವುದಕ್ಕೆ ಒಂದು ನೀತಿ, ಒಂದು ನಿಯಮ ಒಂದು ಧರ್ಮ ಇದೆ. ಅದನ್ನು ಕೊಡಬೇಕಾದರೆ ತಾವು ದುಡಿದು ಲಾಭ ಮಾಡಿ ಷೇರ್ ಕ್ಯಾಪಿಟಲ್ ರಿಡಮ್ಷನ್ ರಿಸರ್ವ್ ಫಂಡ್‌ಗೆ ಸೇರಿಸಿ ಅಮೇಲೆ ವಾಪಸ್ಸು ಕೊಡಬಹುದು. ಅದನ್ನು ಯಾವ ರೂಪದಲ್ಲಿ ವಾಪಸ್ಸು ಕೊಟ್ಟರು ಎನ್ನುವುದನ್ನು ಪರಿಗಣಿಸಬೇಕು. ಒಂದು ಲಕ್ಷ ವಾಪಸ್ಸು ಕೊಟ್ಟೆವು ಎಂದು ಹೇಳ ಬೇಕಾದರೆ ಅವರು ಯಾವ ರೀತಿ ಸೇರಿಸಿಕೊಡಬೇಕಾಗಿತ್ತು, ಆ ರೀತಿ ಸೇರಿಸಿ ಕೊಟ್ಟಿಲ್ಲ ಎನ್ನುವುದು ಅರ್ಥವಾಗುತ್ತದೆ. ಆದುದರಿಂದ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೋ, ಬೇಡವೋ ಎನ್ನು ವುದನ್ನು ಏನೂ ತೀರ್ಮಾನ ಮಾಡಿಲ್ಲ. ಈ ವಿಚಾರ ಕೋರ್ಟಿನಲ್ಲಿರುವುದರಿಂದ ಇದರ ಬಗ್ಗೆ ಹೆಚ್ಚು ವಿವರಣೆ ಕೊಡಬೇಕೇ ಎಂದು ಸಭಾಧ್ಯಕ್ಷರನ್ನು ಕೇಳುತ್ತೇನೆ.

ಇನ್ನು ಅವರ ಭಾಷಣದಲ್ಲಿ ಇದನ್ನು ಏತಕ್ಕಾಗಿ ತೆಗೆದುಕೊಂಡರು ಎನ್ನುವುದಕ್ಕೆ ಕಾರಣ ಕೊಡಲಿಲ್ಲ. ಅದು ಹೇಗೆ ನಡೆಯಿತು ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡದೆ ಇದರಲ್ಲಿ ನ್ಯಾಯ ಇಲ್ಲ ಎಂದು ಹೇಳುತ್ತಾರೆ.

ಹಣ ವಾಪಸ್ಸು ಕೊಟ್ಟಿರುವುದು ಯಾವ ತರಹ ಕೊಟ್ಟಿದ್ದಾರೆ, ಕೇವಲ ಷೇರು ಬಂಡವಾಳ ವನ್ನು ಹೆಚ್ಚು ಮಾಡಿ ಕೊಟ್ಟಿದ್ದಾರೆಯೋ ಎಂದು ರಿಜಿಸ್ಟ್ರಾರ್ ಕಾಗದ ಬರೆದಿದ್ದಾರೆ. ಷೇರು ಬಂಡವಾಳವನ್ನು ಕೂಡಿಸಿ ಕೊಟ್ಟಿದ್ದರೆ ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆ; ಸಂತೋಷದಿಂದ ತೆಗೆದುಕೊಳ್ಳುತ್ತೇವೆ. ಆದರೆ ಸೊಸೈಟಿಯ ಷೇರು ಬಂಡವಾಳ ಹೆಚ್ಚುಮಾಡದೆ ಇದ್ದರೆ ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ. ಅಲ್ಲದೆ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗಳು ನಾಲ್ಕು ಲಕ್ಷಕ್ಕಿಂತ ಹೆಚ್ಚಿಗೆ ಸುಸ್ತಿಯಲ್ಲವೆ, ಆಹಾರ ಇಲಾಖೆಯಿಂದ ತೆಗೆದುಕೊಂಡಂಥ ಸಾಲವನ್ನು ವಾಪಸು ಕೊಟ್ಟಿಲ್ಲ.........

ಶ್ರೀ ಕೆ. ಎಚ್. ಪಾಟೀಲ್.—ಆಹಾರ ಇಲಾಖೆಯ ಸಾಲ ಉಳಿದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಈ ಹಣವನ್ನು ವಾಪಸು ಕೊಟ್ಟಿರುವ ತಾರೀಖಿನಲ್ಲಿ, ವಾಪಸು ಕೊಟ್ಟಿಲ್ಲ ಎಂದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಅವರು ಎಲ್ಲಿಂದ ಕೊಟ್ಟರೇನು ? ಸರ್ಕಾರಕ್ಕೆ ಬರುವ ಹಣವನ್ನು ಏಕೆ ತೆಗೆದುಕೊಳ್ಳಬಾರದು ?

ಶ್ರೀ ಬಿ. ಎಲ್. ಗೌಡ.—ಯಾವ ಮೂಲದಿಂದ ಕೊಟ್ಟರೆ ಏನು ಎಂದು ಮಾನ್ಯ ಸದಸ್ಯರು ಕೇಳು ತ್ತಾರೆ. ಒಬ್ಬ ಮನುಷ್ಯ ಸೊಸೈಟಿಯ ಮೇಲೆ ನಂಬಿಕೆಯನ್ನು ಇಟ್ಟುಕೊಂಡು ಹಣವನ್ನು ಡಿಪಾಜಿಟ್ ಇಟ್ಟಿರುತ್ತಾನೆ. ಸೊಸೈಟಿಯವರು ಷೇರು ಬಂಡವಾಳವನ್ನು ಕಡಮೆ ಮಾಡಿ ಹಣವನ್ನು ವಾಪಸ್ಸು ಕೊಟ್ಟರೆ ಡಿಪಾಜಿಟರುಗಳಿಗೆ ಆ ಸೊಸೈಟಿಯಲ್ಲಿ ನಂಬಿಕೆ ಬರುವುದಿಲ್ಲ. ಆ ದೃಷ್ಟಿಯಿಂದ ಇರತಕ್ಕ ಷೇರು ಬಂಡವಾಳದಿಂದ ವಾಪಸ್ಸು ಕೊಟ್ಟರೆ ಅಂಥದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಪಿ. ಎಂ. ನಾಡಗೌಡ.—ಈ ಸಾಲಗಳನ್ನು ನಾವು ಕೊಡುವಾಗ ಪಾರ್ಟಿಸಿಪೇಷನ್ ಇನ್ ದಿ ಷೇರ್ ಎಂದು ಕೊಡುತ್ತೇವೆ. ಅದನ್ನು ಮಾಡುವಾಗ ಡೆಟ್ ರಿಡಂಪ್ಷನ್ ಫಂಡ್ ಕ್ರಿಯೇಟ ಮಾಡಬೇಕು ಎನ್ನುವ ಕೆಲವು ನಿಯಮಗಳಿವೆ. ಆ ನಿಯಮಗಳ ಪ್ರಕಾರ ಸಹಕಾರ ಸಂಘಗಳಿಗೆ ಸಾಲ ಕೊಡುತ್ತೇವೆ. ಯಾವುದಾದರೂ ರೊಕ್ಕ ಕೊಡುತ್ತಾರೆ, ಅದನ್ನು ಏಕೆ ತಗೆದುಕೊಳ್ಳಬಾರದು ಎಂದು ಮಾನ್ಯ ಸದಸ್ಯರು ಕೇಳಿದರು. ಸರ್ಕಾರವೂ ಒಂದು ರೀತಿಯಿಂದ ಸಹಕಾರ ಸಂಘದ ಸದಸ್ಯರಂತೆ ಇರುತ್ತದೆ. ಸಹಕಾರ ಸಂಘಗಳಲ್ಲಿ ಷೇರ್ ಪಾರ್ಟಿಸಿಪೇಷನ್ ಇದೆ. ಒಬ್ಬ ಒಂದು ಸಂಸ್ಥೆಗೆ ಸದಸ್ಯನಾದಮೇಲೆ ಆ ಸೊಸೈಟಿಯಲ್ಲಿ ಆತನಿಗೆ ಇರುವ ಷೇರು ಹಣವನ್ನು ತೆಗೆದುಕೊಂಡು ಹೋಗಿ ಎಂದು ಹೇಳುವುದಕ್ಕೆ ಬರುತ್ತದೆಯೇ ? ಒಬ್ಬ ವೈಯಕ್ತಿಕ ಸದಸ್ಯನಿಗೇ ಈ ರೀತಿ ಇರುವಾಗ ಸರ್ಕಾರ ಷೇರ್ ಪಾರ್ಟಿಸಿಪೇಷನ್‌ಗಾಗಿ ಸಾಲದ ರೂಪದಲ್ಲಿ ಹಣವನ್ನು ಕೊಟ್ಟಿರುವಾಗ, ಜನರಲ್ ಲಾ ಪ್ರಕಾರ ಸರ್ಕಾರವೂ ಒಬ್ಬ ಸದಸ್ಯನಾಗುವುದರಿಂದ ಸೊಸೈಟಿಯವರು ಯಾವ ಹಣದಿಂದ ಸಾಲ ವನ್ನು ತೀರಿಸುತ್ತಾರೆ ಎಂದು ತಿಳಿದುಕೊಳ್ಳದೆ, ಸಹಕಾರ ಸಂಘದ ಹಿತದೃಷ್ಟಿಯಿಂದ ಹಣವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.........

ಶ್ರೀ ಕೆ. ಎಚ್. ಪಾಟೀಲ್.—ಪಾಯಿಂಟ್ ಆಫ್ ಆರ್ಡರ್ ಸ್ವಾಮಿ. ಸಚಿವರು ತಮ್ಮ ಮೈಯೊಳಗೆ ಅನಾರೋಗ್ಯವಿದೆಯೆಂದು ತಮಗೆ ಸಂಬಂಧಪಟ್ಟ ವಿಷಯಕ್ಕೆ ಉತ್ತರ ಕೊಡಲು ತಮಗೆ ಸಾಧ್ಯವಿಲ್ಲದ, ಉಪಸಚಿವರಿಗೆ ಉತ್ತರ ಕೊಡಲು ತಿಳಿಸಿದರು. ಮಾನ್ಯ ನಾಡಗೌಡರು ಸಹಕಾರ ಸಚಿವರಿದ್ದಾರೆ. ಅವರು ಹೇಳುವಂತೆ ಡೆಟ್ ರಿಡೆಂಪ್ಷನ್ ಫಂಡಿಗೂ, ಷೇರ ಬಂಡವಾಳ ವಾಪಸ್ಸು ಕೊಡುವುದಕ್ಕೂ ಏನು ಸಂಬಂಧವಿದೆ ? ಅವರು ಯಾವ ಮಾತು ಮಾತನಾಡುತ್ತಾರೆ ? ರಿಡೀಮಬಲ್ ಷೇರ್ಸ್ ವಾಪಸ್ಸು ಕೊಡುವ ಅಧಿಕಾರ ಸೊಸೈಟಿಗೆ ಇದೆ ಎಂದು ಅಖಿಲ ಭಾರತ ಸಮ್ಮೇಳನದಲ್ಲಿ ತೀರ್ಮಾನವಾಗಿದೆ. ರೀಡಿಮಬಲ್ ಷೇರುಗಳನ್ನು ಸೊಸೈಟಿಯವರು ವಾಪಸ್ಸು ಕೊಡುವಂಥ ಸ್ಥಿತಿಯಲ್ಲಿರುವಾಗ ಕೊಡಬಹುದು ಎಂದು ಇದೆ. ಇದನ್ನು ಕೊಡುವಾಗ ಇಂಥದರಿಂದಲೇ ಕೊಡಬೇಕು ಎನ್ನುವ ಕಾಯಿದೆ ಇಲ್ಲ. ನಿಮ್ಮ ಸಂಗ ಬೇಡ ಎಂದು ತಾಳಿ ಹರಿದುಕೊಟ್ಟು ಹೋಗುವಾಗ ಹೆಂಡತಿಗೆ ಗಂಡನ ಹಮ್ಮು ಏನು ? ....

ಉಪಾಧ್ಯಕ್ಷರು.—ಮಾನ್ಯ ಸದಸ್ಯರ ಪಾಯಿಂಟ್ ಆಫ್ ಆರ್ಡರ್ ಸರಿ ಇಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಪಾಯಿಂಟ್ ಆಫ್ ಆರ್ಡರ್ ಬಗ್ಗೆ ನಾನು ಏನೂ ಹೇಳುವುದಿಲ್ಲ. ನಮಗೆ ಇರುವ ತೊಂದರೆ ಏನು ಎಂದರೆ, ಅರ್ಧ ಗಂಟೆಕಾಲದ ಚರ್ಚೆ ಎಂದರೆ ಅರ್ಧ ಗಂಟೆ ಎಂದು ಅರ್ಥವೇ ಅಥವಾ 45 ನಿಮಿಷ ಎಂದು ಏನಾದರೂ ಆಗುತ್ತದೆಯೇ ಎಂಬುದು.

ಉಪಾಧ್ಯಕ್ಷರು.—ಅರ್ಧ ಗಂಟೆ ಆಯಿತು, ಈಗ ಮುಗಿಸುತ್ತಾರೆ.

Sri B. L. GOWDA.—Whenever the Society is in a position to repay, we are ready to take. In this particular case, the Society has not cleared all its commitments and it has not yet cleared its debt. If it is really in a position of repaying the share capital, we are ready to take it. The only point is, the position of the Society has to be examined.

Mr. DEPUTY SPEAKER.—The House stands adjourned to meet tomorrow at 1 P.M.

The House adjourned at FiftyM inutes past Seven of the Clock to meet again at One of the Clock on Thursday, the 13th March 1969.

WD 12652—GPB—600—11-7-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 13th March 1969.

The House met in the Assembly Chamber, Vidhana Soudha, Bangalore at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Aerial Spraying of Insecticides in Mandya Taluk

97. SRI N. A. CHANNE GOWDA (Pandavapur).—

Will the Minister for Agriculture be pleased to state :—

(*a*) the number of times aerial spraying of insecticides was done in Mandya taluk ;

(*b*) the total expenditure incurred for this work (separate figures *re.* : aeroplane charges, cost of insecticides and other expenditures may kindly be furnished) ;

(*c*) the extent of land to which the insecticides were sprayed;

(*d*) Out of this total expenditure

(i) the share of the centre
(ii) the share of the State Government
(iii) the share of the Taluk Development Board and
(iv) the amount received from the ryots ;

(*e*) the person who supplied these insecticides; whether tender was called for in this behalf ; if so, when the persons who had given tenders whether the tenderor whose tender was accepted had quoted the lowest rate ;

(*f*) whether a technical report was obtained for aerial spraying of insecticide ; if so, whether the report would be made available to the members;

(SRI N. A. CHANNE GOWDA)

(*g*) whether timely spraying of insecticides was done from a fixed altitude as per the report ;

(*h*) the benefit derived due to aerial spraying of insecticides ; whether agricultural diseases have not been reported now from that place ;

(*i*) whether they have chalked out a programme for aerial spraying of insecticides in other taluks of this district ?

SRI B. RACHAIAH (Minister for Agriculture).—

(*a*) Four times.

(*b*) Total expenditure	...	Rs. 3,43,500
Towards insecticide	...	2,43,500
Towards aeroplane	...	60,000
Other expenditure	...	40,000

(*c*) 5,000 acres ; four times.

(*d*) (i) Central share	...	1,15,350
(ii) States' share	...	1,63,350
(iii) Taluk Development Board and other expenditure.	...	50,000
(iv) From Ciba Company	...	12,800
Total	...	Rs. 3,43,500

(*e*) Medicines which were stocked by the Government were used and hence there was no necessity for calling tender.

(*f*) Has been done as per the suggestions made by the departmental experts.

(*g*) Except the trouble due to rain and mechanical trouble of the aeroplane, the medicine was prayed as per the scheduled programme.

(*h*) There is an expectation of getting an excess yield of three quintals of paddy per acre and no report regarding attack of insects, pests and diseases in that area is received.

(*i*) Arrangement could be made for aerial spraying of insecticide in other taluks also in case the ryots or other societies or organisations were to share half the expenditure of aeroplane and medicines.

ಶ್ರೀ ಎನ್. ಎ. ಚನ್ನೇಗೌಡ.—ಸ್ವಾಮಿ, ಮಂಡ್ಯ ತಾಲ್ಲೂಕಿನಲ್ಲಿ ವಿಮಾನದಿಂದ ಸರ್ಕಾರದ ದಾಸ್ತಾನಿನಲ್ಲಿದ್ದ ಕ್ರಿಮಿನಾಶಕ ಔಷಧಿಗಳನ್ನು ಉಪಯೋಗಿಸಲಾಯಿತು ಎಂದು ಹೇಳಿದ್ದೀರಿ, ಅದು ಯಾವ ದಾಸ್ತಾನಿನಲ್ಲಿದ್ದ ಔಷಧಿ, ಯಾರು ಅದನ್ನು ಸಪ್ಲೈ ಮಾಡಿದರು, ಆ ಔಷಧಿಯ ಬೆಲೆಯೇನು ?

ಶ್ರೀ ಬಿ. ರಾಚಯ್ಯ.– ಕಳೆದ ಫೆಬ್ರುವರಿ ತಿಂಗಳಿನಲ್ಲಿ ಹೋದಸಾರಿ ಕೊಂಡುಕೊಂಡಿದ್ದ ಔಷಧಿ ಸ್ಟಾಕ್ ಇತ್ತು, ಅದನ್ನು ಉಪಯೋಗಿಸಿದ್ದಾರೆಂದು ವರದಿ ಬಂದಿದೆ. ಅದರಲ್ಲಿ ಎರಡು ಔಷಧಿಗಳು ಇವೆ ಒಂದು ಡೆಮಾಕ್ರಾಪ್, ಇನ್ನೊಂದು ಕುಮಾ ಪ್ರಾಡಕ್ಟ್ಸ್. ಈ ಔಷಧಿಯನ್ನು ಸೀಬಾ ಕಂಪೆನಿಯವರಿಂದ ರೇಟ್ ಕಾಂಟ್ರಾಕ್ಟ್ ಮೇಲೆ ಹೋದ ವರ್ಷ ಕೊಂಡುಕೊಂಡಿದ್ದಾರೆ. ಆ ಔಷಧಿಯನ್ನು ಉಪಯೋಗಿಸಿದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ಹೋದ ವರ್ಷ ಕೊಂಡುಕೊಂಡಿದ್ದಂತಹ ಔಷಧಿಯನ್ನು ಸಿಂಪಡಿಸಿದ್ದಾರೆಂದು ಹೇಳಿದ್ದೀರಿ. ಆ ಔಷಧಿಯನ್ನೇನಾದರೂ ಖರ್ಚು ಮಾಡುವುದಕ್ಕೋಸ್ಕರ ವಿಮಾನದಿಂದ ಸಿಂಪಡಿಸಲಾಯಿತೇ ಅಥವಾ ಆ ಕಂಪೆನಿಯವರಿಗೆ ಹೆಚ್ಚಿನ ವ್ಯಾಪಾರವನ್ನು ಕಲ್ಪಿಸುವುದಕ್ಕೋಸ್ಕರ ಆ ಔಷಧಿಯನ್ನು ಸಿಂಪಡಿಸಲಾಯಿತೇ, ರೈತರಿಗೆ ಅನುಕೂಲವಾಗುವ ಹಾಗೆ ಸಕಾಲದಲ್ಲಿ ನೋಡಿ ವಿಮಾನದ ಮೂಲಕ ಔಷಧಿಯನ್ನು ಸಿಂಪಡಿಸಬೇಕೆಂದು ಆದೇಶವನ್ನು ಕೊಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.—ಅಲ್ಲಿನ ರೈತರು ಆ ಒಂದು ರೀತಿಯಲ್ಲಿ ವಿಮಾನದಿಂದ ಔಷಧಿಯನ್ನು ಸಿಂಪಡಿಸಬೇಕೆಂದು ಮನವಿಮಾಡಿಕೊಂಡಮೇಲೆ ನಾವು ಆ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ, ಅದರಂತೆ ಕೆ. ಆರ್. ನಗರದವರು ನಮಗೂ ಬೆಳೆಗಳ ಮೇಲೆ ವಿಮಾನದಿಂದ ಔಷಧಿಯನ್ನು ಸಿಂಪಡಿಸಬೇಕು ಎಂದು ಕೊನೆಯಲ್ಲಿ ಕೇಳಿದರು. ಆಗ ನಾವು ಅವರಿಗೆ ಹೇಳಿದೆವು ಈಗ ಆಗುವುದಿಲ್ಲ ಕಾಲ ಮೀರಿದೆ, ಎಂದು. ಈ ದೃಷ್ಟಿಯಿಂದ ಮಂಡ್ಯಾ ತಾಲ್ಲೂಕು ಬೋರ್ಡಿನವರು ಮುಂಚಿತವಾಗಿಯೇ ದುಡ್ಡು ಕೊಟ್ಟಿದ್ದಾರೆ. ಅದಕ್ಕೆ ರೈತರು ಒಪ್ಪಿಗೆ ಕೊಟ್ಟಿದ್ದಾರೆ. ಇಷ್ಟೆಲ್ಲಾ ಆಗಿ ಅವರು ನಮಗೆ ಮನವಿ ಮಾಡಿಕೊಂಡಮೇಲೆ ವಿಮಾನದಿಂದ ಔಷಧಿಯನ್ನು ಸಿಂಪಡಿಸಿದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ಆ ರೀತಿ ವಿಮಾನದಲ್ಲಿ ಔಷಧಿಯನ್ನು ಬೆಳೆಗಳಮೇಲೆ ಸಿಂಪಡಿಸಬೇಕಾದರೆ 12 ಅಡಿ ಎತ್ತರದಿಂದ ಸಿಂಪಡಿಸಿದರೆ ಅದು ಪರಿಣಾಮಕಾರಿಯಾಗಿ ಆಗುತ್ತದೆ ಎಂದು ತಜ್ಞರ ಅಭಿಪ್ರಾಯ ಇದೆ. ಆದರೆ ಇವರು 60 ಅಡಿ ಎತ್ತರದಿಂದ ಔಷಧಿಯನ್ನು ಸಿಂಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಆ ರೀತಿ ವಿಮಾನದಿಂದ ಔಷಧಿಯನ್ನು ಸಿಂಪಡಿಸುವಾಗ ಬೇಕಾದಷ್ಟು ದನಕರುಗಳು ಸತ್ತಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ದನಕರುಗಳು ಸತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ತಜ್ಞರು ಯಾವ ಪ್ರಮಾಣದಲ್ಲಿ ಯಾವ ಮಟ್ಟದಲ್ಲಿ ವಿಮಾನವನ್ನು ಏರಿಸಿ ಅದರ ಮುಖಾಂತರ ಔಷಧಿಯನ್ನು ಸಿಂಪಡಿಸಬೇಕೆಂದು ಹೇಳಿದ್ದರೋ ಆ ಪ್ರಕಾರ ಮಾಡಿದ್ದಾರೆಂದು ವರದಿ ಬಂದಿದೆ.

ಶ್ರೀ ಎಂ. ನಾಗಪ್ಪ.—ನಿಯಮದ ಪ್ರಕಾರ ಬೆಳೆ 15—20 ದಿವಸಗಳ ಬೆಳೆ ಇದ್ದಾಗ ಮಾತ್ರ ಆ ರೀತಿ ಔಷಧಿಯನ್ನು ಸಿಂಪಡಿಸಿದರೆ ಅದರಿಂದ ಉಪಯೋಗವಾಗುತ್ತದೆ ಎಂದು ತಜ್ಞರ ಅಭಿಪ್ರಾಯವಾಗಿದೆ. ಈಗ ಯಾವ ರೀತಿಯಲ್ಲಿ ಯಾವ ಔಷಧಿಯನ್ನು ಸಿಂಪಡಿಸಿದ್ದಾರೆಯೋ ಆ ರೀತಿ ಔಷಧಿಯನ್ನು ಸಿಂಪಡಿಸುವುದಾದರೆ ಅದರಿಂದ ಹೆಚ್ಚಿನ ಹಾನಿಯಾಗುತ್ತದೆ ಎಂದು ದೆಹಲಿಯಲ್ಲಿ ನಡೆದ ಕಾನ್‌ಫರೆನ್ಸಿನವರ ಅಭಿಪ್ರಾಯವಾಗಿದೆ. ಆದ್ದರಿಂದ ಈಗ ಅನುಸರಿಸುತ್ತಿರುವ ನೀತಿಯನ್ನು ಕೈಬಿಡುತ್ತೀರಾ ಹೇಗೆ, ಈ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಬಿ. ರಾಚಯ್ಯ.—ಮಂಡ್ಯಾಜಿಲ್ಲೆಯ ರೈತರಿಂದ ಸರ್ಕಾರಕ್ಕೆ ಆ ರೀತಿಯ ವರದಿ ಸರ್ಕಾರಕ್ಕೆ ಬಂದಿಲ್ಲ. ಅದನ್ನು ಉಪಯೋಗಿಸುವುದರಿಂದ ನಷ್ಟವಾಗುತ್ತದೆ ಅದು ಬೇಡ ಎಂದು ಹೇಳಲಿಲ್ಲ. ಆ ರೀತಿ ಆ ಔಷಧಿಯನ್ನು ಉಪಯೋಗಿಸುವುದರಿಂದ ಒಂದು ಎಕರೆಗೆ ಸುಮಾರು 3 ಕ್ವಿಂಟಾಲ್ ಇಳುವರಿ ಜಾಸ್ತಿ ಬಂದಿದೆ ಎಂದು ತಿಳಿಸಿದ್ದಾರೆ.

ಶ್ರೀ ಇ. ನಾರಾಯಣಗೌಡ.—ಮಂಡ್ಯಾದಲ್ಲಿ ಆ ಪ್ರದೇಶದಲ್ಲಿ ವಿಮಾನ ಮುಖಾಂತರ ಔಷಧಿಯನ್ನು ಸ್ಪ್ರೇ ಮಾಡುತ್ತೇವೆ ಅದಕ್ಕೋಸ್ಕರ ಆ ಕಾಲದಲ್ಲಿ ದನಕರುಗಳಾಗಲೀ ಜನರಾಗಲೀ ಮಕ್ಕಳಾಗಲೀ ಆ ಪ್ರದೇಶದಲ್ಲಿ ಯಾರೂ ಇರಕೂಡದು ಎಂದು ಜನಗಳಿಗೆ ತಿಳುವಳಿಕೆಯನ್ನು ಕೊಟ್ಟಿದ್ದಿರಾ ?

ಶ್ರೀ ಬಿ. ರಾಚಯ್ಯ.—ಹೌದು ಕೊಟ್ಟಿದೆ. ವಿಮಾನದ ಮುಖಾಂತರ ಆ ಪ್ರದೇಶದಲ್ಲಿ ಔಷಧಿಯನ್ನು ಸಿಂಪಡಿಸುವ ಕಾಲದಲ್ಲಿ ಯಾರೂ ಇರಬಾರದು ಎಂದು ಜನಗಳಿಗೆ ತಿಳುವಳಿಕೆಯನ್ನು ಕೊಟ್ಟಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಅಲ್ಲಿ ಉಪಯೋಗಿಸಿದಂತಹ ಔಷಧಿಯ ಸತ್ವ ಅರ್ಧ ಆಗಲೇ ಕಡಿಮೆಯಾಗಿತ್ತು, ಅದರಿಂದ ಪೈರಿಗೆ ಅನುಕೂಲವಾಗಿಲ್ಲ ಎಂದು ವರದಿ ಬಂದಿರುವುದು ನಿಜವೇ ? ಹಾಗಿದ್ದರೆ ಅಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ರಾಚಯ್ಯ.—ಮಂಡ್ಯಾದಲ್ಲಿ ಆ ರೀತಿ ಔಷಧಿಯನ್ನು ಸಿಂಪಡಿಸಿದ್ದರಿಂದ ರೈತರಿಗೆ ಉಪಯೋಗವಾಗಿದೆ ಎಂದು ವರದಿ ಬಂದಿದೆ. ಅದನ್ನು ಉಪಯೋಗ ಮಾಡಬೇಡಿ ಅದರಿಂದ ನಮಗೆ ನಷ್ಟವಾಗುತ್ತದೆ ಎಂದು ಅವರು ಹೇಳಿಲ್ಲ.

ಶ್ರೀ ಎಂ. ಬಸವರಾಜು.—ಹೋದವರ್ಷ ಈ ರೀತಿ ಕ್ರಿಮಿನಾಶಕಗಳನ್ನು ಸಿಂಪಡಿಸಿದ್ದರಿಂದ ಉತ್ತಮ ಪ್ರತಿಫಲ ಬಂದಿದೆ ಎಂದು ಅಲ್ಲಿಯ ರೈತರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆಂದು ಈಗ ಹೇಳಿದಿರಿ. 1969ನೇ ಇಸವಿಯಲ್ಲಿ ಇದೇ ರೀತಿ ಬೇರೆ ಭಾಗಗಳಲ್ಲಿಯೂ ಸಹ ಮಾಡುವುದಕ್ಕೆ ಏರ್ಪಾಡನ್ನು ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಕೃಷ್ಣ ರಾಜನಗರ ತಾಲ್ಲೋಕ್‌ನಿಂದ ಈ ರೀತಿ ಮಾಡಬೇಕೆಂದು ಒಂದು ಮನವಿ ಬಂದಿತ್ತು. ಆದರೆ ಕಾಲ ಮೀರಿ ಹೋಗಿದ್ದರಿಂದ ಇದರ ಒಂದು ಉಪಯೋಗವನ್ನು ಒದಗಿಸುವುದಕ್ಕೆ ಆಗಲಿಲ್ಲ. ಈ ವರ್ಷ ಆ ಭಾಗದವರು ಬೇಕು ಎಂದು ಕೇಳಿದರೆ 5-10 ಎಕರೆಗಳನ್ನು ಒಟ್ಟಾಗಿ ತೆಗೆದುಕೊಂಡು ಔಷಧವನ್ನು ಸಿಂಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ರೀತಿ ಔಷಧವನ್ನು ಸಿಂಪಡಿಸುವುದರಿಂದ ಎಕರೆಗೆ 85 ರೂಪಾಯಿಗಳವರೆಗೂ ಖರ್ಚಾಗುತ್ತದೆ ಎಂದು ಹೇಳಿದ್ದೀರಿ. ರೈತರು ಏನು ಅಭಿಪ್ರಾಯ ಪಡುತ್ತಾರೆಂದರೆ, ಇದೇ ಹಣವನ್ನು ನಮಗೇ ಸಬ್ಸಿಡಿ ರೂಪದಲ್ಲಿ ಕೊಟ್ಟರೆ ನಾವೇ ಔಷಧವನ್ನು ಸಿಂಪಡಿಸಿಕೊಳ್ಳುತ್ತೇವೆ, ವಿಮಾನದಿಂದ ಸಿಂಪಡಿಸಿದರೆ ಕೆಲವು ಭಾಗಗಳಿಗೆ ಬೀಳುವುದಿಲ್ಲವೆಂದು ಹೇಳುತ್ತಾರೆ. ಈಗ ನಾನಾ ಭಾಗಗಳಿಂದ ಸುಮಾರು 3,43,500 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇನ್ನು ಮುಂದೆ ಇದೇ ಹಣವನ್ನು ಸಬ್ಸಿಡಿ ರೂಪದಲ್ಲಿ ರೈತರಿಗೆ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಬಿ. ರಾಚಯ್ಯ.—ಸೆಂಟ್ರಲ್ ಸ್ಪಾನ್ಸಾರ್ಡ್ ಸ್ಕೀಮ್ ಪ್ರಕಾರ ಕೇಂದ್ರದಿಂದ ಈ ರೀತಿಯ ಕೆಲಸಗಳಿಗೆ ಸಹಾಯ ಸಿಗುತ್ತದೆ. ಹತ್ತಾರು ಎಕರೆಗಳಲ್ಲಿ ಬೆಳೆಗೆ ರೋಗ ಬಂದಾಗ ಕೆಲವರು ಔಷಧವನ್ನು ಉಪಯೋಗ ಮಾಡಿ ಮತ್ತೆ ಕೆಲವರು ಮಾಡದಿದ್ದರೆ ಅದರಿಂದ ಹೆಚ್ಚಿನ ಉಪಯೋಗವಾಗುವುದಿಲ್ಲ. ಆದಕಾರಣ ಕಾಂಪ್ಯಾಕ್ಟ್ ಏರಿಯಾವನ್ನು ಸೇರಿಸಿಕೊಂಡು ಒಂದೇ ಸಾರಿ ಔಷಧವನ್ನು ಸಿಂಪಡಿಸುವುದರಿಂದ ಹೆಚ್ಚಿನ ಪರಿಣಾಮ ಉಂಟಾಗುತ್ತದೆಂದು ತಿಳಿದುಬಂದಿದೆ. ಮತ್ತು ಆ ರೀತಿ ಮಾಡಬೇಕೆಂದು ಕೇಂದ್ರಸರ್ಕಾರದ ಆದೇಶವೂ ಇದೆ.

Sanction of Loans To Private Industrialists

233. SRI H. SIDDAVEERAPPA (Harihar).—

Will the Minister for Industries, Information and Publicity be pleased to state :—

(*a*) the number of industries in the private sector that are given loans by the Government of Mysore, since January 1957, upto end of December 1967 (Yearwise figures may kindly be furnished with the details of the industrialist that are given loans and the amount sanctioned to each together with the rate of interest and purpose for which the loan is sanctioned) ;

(*b*) the amount if any outstading from each of the above ;

(*c*) for how many industrialists in the private sector the Government have stood sureties for the loans borrowed by these industrialists from the Banks and other Companies if any ; (Details of each case and the amount involved may be furnished) ;

(*d*) in how many cases, if any, have the Government repaid to the creditors the loans for which they have stood as sureties and the amount thus paid ; (details may be furnished in each case) ;

(e) of these industries how many are closed and how many are in a languishing conditions ;

(f) the total loan commitment on this account ?

Sri M. RAJASEKHARA MURTHY (Minister for Industries, Information and Publicity).—

(a) One hundred and fifty-eight (Datails are furnished in Statement I placed on the table of the House).

(b) Details are given in column 7 in Statement I placed on the table of the House *

(c) Twenty-four. (Details are given in statement II placed on the table of the House) *

(d) One. The amount paid is Rs. 12,69,625.47 paise.

(e) Nil.

(f) Does not arise in view of the reply to clause (e) above.

Sri H. SIDDAVEERAPPA.—In answer to (a), the Government have furnished a statement containing a list of 158 industries, to which loans are given. May I know whether those loans were given directly by the Government or through the Finance Corporation ?

Sri M. RAJASEKHARA MURTHY.—Directly by the Government.

Sri H. SIDDAVEERAPPA.—Looking into this list, it will be seen that the Government is prudent right up to the year 1960 and until then the loan liability is not more than Rs. 25 lakhs. In 1967-68, suddenly Government become so liberal that this sanctioned loan amount runs into some crores. Loans have been sanctioned to industries which are closed or about to be closed like the M. S. K. Mills, Acetate Company, REMCO and others. May I know what prompted the Hon. Minister to throw good money over bad industries ?

Sri M. RAJASEKHARA MURTHY.—We are not throwing good money over bad industries. It is only during the year 1967 and on wards that these industries required loan. When the industries require the loan, we have to give loan.

Sri H. SIDDAVEERAPPA.—Is the Government giving loans to all the industrialists who have asked for loans or is it given to the industries which have a chance of survival ? For instance, for the MSK Mills the Government have sanctioned a loan of Rs. 112 lakhs; even if a sum of Rs. 200 lakhs is given to it, will it survive ? So also to the Acetate Co. and the Sugar Factory. Is this prudent management of the finances of the State ?

*Copies placed in the Mysore Legislature library *vide* No. 18, dated 13-3-1969.

Sri M. RAJASEKHARA MURTHY.—The loans were sanctioned only to make these industries survive. Some of these industries were in difficulties. Some of the mills had been closed and the labourers had been thrown out of employment. It is with a view to rehabilitate the industries, Government had to give the loan.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮಾನ್ಯ ಸಿದ್ಧವೀರಪ್ಪನವರು ಹೇಳಿದಂತೆ ಕೆಲವು ಕೈಗಾರಿಕೆಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆ ಕೈಗಾರಿಕೆಗಳು ಪುನರ್ಜೀವನಗೊಳ್ಳುತ್ತವೆಂಬ ಸಂಪೂರ್ಣವಾದ ಭರವಸೆ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ. ರಾಜಶೇಖರ ಮೂರ್ತಿ.—100 ಪರ್ಸೆಂಟ್ ಇದೆ.

Sri S. SIVAPPA.—Will the Government be pleased to state in how many cases these loans have been prompted by political considerations rather than consideration of industrial development?

Sri M. RAJASEKHARA MURTHY.—These loans are not given on political consideration.

Sri S. SIVAPPA.—What prompted the Government to advance Rs. 150 laks to the M. S. K. Mills though it is languishing?

Sri M. RAJASEKHARA MURTHY.—I have already replied that it has been closed. We wanted to rehabilitate the Mills and so we gave loan. In the month of January it has made profit.

Sri H. SIDDAVEERAPPA.—You have given me a statement showing the cases in which Government have stood guarantee for huge sums such as 40 and 50 lakhs. You have not given the total figure; this may run into some crores. What made you to throw away this good money and what made you feel that these people are going to be rehabilitated by these amounts?

Sri M. RAJASEKHARA MURTHY.—Government have stood as guarantee and the amount is given by the banks. We have secured ample securities from these Mills. So far as Government guarantee is concerned, they are well secured.

Cancellation of Licenses of Cinema Theatres in the State

408. **Sri VATAL NAGARAJ** (Chickpet).—

Will the Chief Minister be pleased to state:—

(*a*) whether it is a fact that licenses of some cinema theatres in the State have been cancelled recently; if so, the names of the cinema theatres whose licences have been cancelled;

(*b*) the theatres that approached High Court against the orders;

(*c*) the reason for cancelling the licenses of the cinema theatres?

SrI MANIK RAO PATIL (Deputy Minister for Home) [On behalf of SRI VEERENDRA PATIL (Chief Minister)].—

(*a*) No. No licence of any theatre has been cancelled.
(*b*) and (*c*) Does not arise.

ಶ್ರೀ ವಾಟಾಳ್ ನಾಗರಾಜ್.—ಸಿನಿಮಾ ಮಂದಿರಗಳಿಗೆ ಲೈಸನ್ಸ್ ಕೊಡುವಾಗ ಯಾವ ಯಾವ ನಿಯಮಗಳನ್ನು ತಾವು ಅನುಸರಿಸುತ್ತೀರಿ ?

SrI MANIK RAO PATIL.—All the provisions have been made in the rules and so far as this question is concerned, I think it does not relate to the question that is before the House.

ಶ್ರೀ ಕೆ. ಎಂ. ತಮ್ಮಯ್ಯ.—ಹೊಸ ಕಾನೂನು ಪ್ರಕಾರ ಸಿನಿಮಾ ಕಟ್ಟಲು ಲೈಸನ್‌ಸನ್ನು ತಾವು ಕೊಡುತ್ತಿಲ್ಲ; ಆದರೆ ಮೂರು ನಾಲ್ಕು ಲಕ್ಷ ರೂಪಾಯಿಗಳಷ್ಟು ಬಂಡವಾಳ ಇರುವ ಫಿರ್ಸ್ಟ್ ಚೇಂಬರ್ ಆಫ್ ಕಾಮರ್ಸ್‌ನವರಿಗೆ ಅನೇಕ ರೀತಿಯ ಸೌಕರ್ಯಗಳನ್ನು ಕೊಡುತ್ತೇವೆ ಎಂದು ಹೇಳಿ ಅವರಿಗೆ ಟೂರಿಂಗ್ ಟಾಕೀಸ್ ಸ್ಥಾಪಿಸಲು ಕಾನೂನಿನಲ್ಲಿ ಅವಕಾಶ ಮಾಡಿದ್ದೀರಿ. ಸಿನಿಮಾ ಥಿಯೇಟರುಗಳೇ ಲುಕ್ಸಾನಿನಲ್ಲಿರುವಾಗ ಅಂಥ ಕಡೆ ಟೂರಿಂಗು ಟಾಕೀಸ್‌ಗಳು ನಡೆಯದಂತೆ ತಕ್ಕ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ?

Sri MANIK RAO PATIL.—We are already taking all these points into a consideration so that here should not be any unhealthy competition between the theatre people. Unless the Government is satisfied that there is really a need for an additional theatre or touring talkies or a permanent theatre, Government is not going to sanction any additional theatre in that particular locality.

Sri S. BANGARAPPA.—It was reported in the Press about one and a half months ago that the licences of two or three cinema theatres were suspended by the Government and that one of the theatre owners had approached the High Court and obtained a stay order. Is it a fact?

SrI MANIK RAO PATIL.—It is a fact that a few licences have been suspended in Bangalore, Tumkur and Chitaldrug.

ಶ್ರೀ ಹಂಪಿ. ಶಿವಣ್ಣ.—ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಕೆಲವು ಸಿನಿಮಾಗಳವರ ಮೇಲೆ ತಕ್ಕ ಕ್ರಮ ಜರುಗಿಸುತ್ತೇವೆ ಎಂದು ಹೇಳಿದ್ದರೂ ಅವರ ಮೇಲೆ ವರ್ಷಗಟ್ಟಲೆ ಯಾವ ಕ್ರಮವನ್ನೂ ತೆಗೆದುಕೊಳ್ಳದೇ ಹಾಗೇ ಇನ್ನೂ ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

SrI MANIK RAO PATIL.—No, in each case we have given certain time to rectify the defects and if they fail to do so, Government will certainly take action to cancel the licences.

Prevention of New Devices for Preventing Breaches in Dams

423. SrI A. R. BADARINARAYAN (Shimoga).—

Will the Chief Minister be pleased to state :—

(*a*) whether the Government have investigated into the new device for prevention of breaches in dams, that was demonstrated on 15-6-1968 at the Gandhi Memorial Hall, Channapatna, before the Chief Minister ;

(SRI A. R. BADARINARAYAN)

(b) if so, whether it is found feasible;
(c) whether the Central Government has accorded recognition to the person who invented the device by the award of a patent ?

Sri D. PARAMESHWARAPPA (Deputy Minister for Major Irrigation and Electricity) [On behalf of SRI VEERENDRA PATIL (Chief Minister)].—

(a) Government are not aware of any such demonstration.
(b) Does not arise.
(c) Does not arise.

Sri A. R. BADRINARAYAN.—I have information that an Assistant Engineer has made a device for the prevention of breaches in dams. Will the Hon. Minister kindly investigate into this matter ?

† Sri P. PARAMESWARAPPA.—So for, we have no information whether there is any device for preventing breaches in dams. But we will ascertain things and take necessary steps.

Sri A. R. BADRINARAYAN.—I am aware that a particular engineer has divised it and I am putting this fact before the House so that he may be sent for and the matter considered.

Sri D. PARAMESWARAPPA.—I said in the beginning that the Government is not aware of any such device. If my Hon. friend wants the Government to look into this matter, Government will do so.

ಶ್ರೀ ಎಂ. ನಾಗಪ್ಪ.—ಈಗ ಯಾವುದಾದರೂ ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದುಕೊಟ್ಟರೆ ತಾವು ಅದನ್ನು ಪರಿಶೀಲಿಸದೆ ನಮ್ಮ ಗಮನಕ್ಕೆ ಬಂದಿಲ್ಲ ಎಂದು ಉತ್ತರ ಕೊಡುತ್ತೀರಲ್ಲಾ. ಅದಕ್ಕಾಗಿ ಅದನ್ನು ತರಿಸಿ ನೋಡಿ ಒಂದು ಸಲಹೆಯನ್ನಾದರೂ ಕೊಡಬೇಕಲ್ಲವೇ !

Sri D. PARAMESWARAPPA.—I categorically stated that there is no information so far before the Government about this device.

Sri I. SOMASHEKARAPPA.—Will the Hon. Minister call upon the Hon. Member to pass on the information he is having ?

Sri D. PARAMESWARAPPA.—He may do if he likes.

Financial position of Kolar Town Municipality

441. P. VENKATAGIRIYAPPA (Kolar).—

Will the Minister of State for Municipal Administration be pleased to state :—

(a) whether it has come to the notice of the Government that serious financial crisis has developed in Kolar Town Municipality ;

† Indicates that the remarks or speeches have not been revised by the member conerned.

(b) the steps taken to improve the financial position of the Municipality ;

(c) whether there is any proposal before Government to supersede the Town Municipal Council, Kolar, and to appoint an Administrator at least for a period of one year to set right the affairs of the Town Municipality ?

SRI B. M. PATIL (Minister of State for Municipal Administration).—

(a) No.

(b) By Application of Taxation Rules as per Mysore Municipalities Act 1964.

(c) No.

SRI P. VENKATAGIRIYAPPA.—Has it come to the notice of the Government that water, sanitation and other civic amenities are denied to the citizens of Kolar Town ?

† SRI B. M. PATIL.—So far, it has not come to the notice of the Government but the Municipal Council is trying to extend amenities to the citizens in accordance with the funds available to it.

SRI P. VENKATAGIRIYAPPA.—Will the Hon. Minister be kind enough to visit this town early and see things for himself ?

SRI B. M. PATIL.—When I get an opportunity, I will visit.

Marketing facilities for S.S I. Products

536. SRI H. B. JWALANAIAH (Hassan).—

Will the Minister for Industries, Information and Publicity be pleased to state :—

the facilities created for marketing the Products of Small Scale Industries in the State ?

SRI A. P. APPANNA (Deputy Minisier for Industries).—

The Department does not have any marketing organisation for marketing Smal Scale Industries Products. But marketing assistance is extended through Mysore Small Scale Industries Corporation.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಸ್ವಾಮಿ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಉತ್ಪಾದನೆಗಳನ್ನು ಮಾರಾಟ ಮಾಡುವುದಕ್ಕೋಸ್ಕರ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದಿರಿ. ಸಣ್ಣ ಪ್ರಮಾಣದ ಕೈಗಾರಿಕೆಗಳ ಉತ್ಪನ್ನವನ್ನು ಕೊಂಡುಕೊಂಡು ಮಾರಾಟ ಮಾಡುವುದಕ್ಕೆ ಎಷ್ಟು ದುಡ್ಡು ಕೊಟ್ಟಿದ್ದೀರಾ ?

Sri A. P. APPANNA.—It is not as if the Government has given money exclusively for making marketing arrangements by the M.S.I.C. The Government has provided ample share capital to the Mysore Small-scale Industries Corporation to help marketing societies and also take up other work regarding small scale industries. The Government of Mysore has reserved 52 items to be purchased by the various departments of the Government of Mysore from the small scale industris alone. The departments cannot purchase these 52 items from any other large industries. A G.O. to that effect has been issued. Over and above that, the Small scale Industries Corporation is participating in the tenders of the Stores Purchase Department and also the tenders of the State Transport Corporation, M.S.E.B. Mysore Iron and Steel Works, etc. on behalf of the small scale industries and distribute these requirements to the various small scale industries and supply the same to these organisations.

ಶ್ರೀ ಎಚ್. ಬಿ. ಜ್ವಾಲನಯ್ಯ.—ಎಂ. ಎಸ್. ಇ. ಬಿ., ಎಮ್. ಎಸ್. ಆರ್.ಟಿ .ಸಿ. ಅಂಥ ಕಾರ್ಪೋರೇಷನ್‌ಗಳು ಹೊರ ರಾಜ್ಯಗಳಿಂದ ಖರೀದಿ ಮಾಡುವಾಗ ಆಯಾ ರಾಜ್ಯದಲ್ಲಿ ಪ್ರೈಸ್ ಪ್ರಿಫರೆನ್ಸ್ ಸಣ್ಣ ಕೈಗಾರಿಕೆಗಳು ಕೊಡದೆ ಇರುವ ಸಂದರ್ಭದಲ್ಲಿ ಹೊರ ರಾಜ್ಯಗಳಿಗೆ ಪ್ರೈಸ್ ಪ್ರಿಫರೆನ್ಸ್ ಕೊಡುತ್ತಿರುವುದು ನಮ್ಮ ಗಮನಕ್ಕೆ ಬಂದಿವೆಯೇ ?

Sri A. P. APPANNA.—The price preference which in enumerated in the G.O. that has been issued does not apply to Corporations like M.S.R.T.C. and M.S.E.B. and Companies. These price preferences are there only for departmental purchases. These price preferences are being operated through the S.P.C. which makes purchases for the Departments.

ಶ್ರೀ ಎಚ್ .ಬಿ. ಜ್ವಾಲನಯ್ಯ.—ಈ ಸಣ್ಣ ಕೈಗಾರಿಕಾ ಉದ್ಯಮಗಳಿಂದ ಕಾರ್ಪೋರೇಷನ್‌ಗಳವರು ತೆಗೆದುಕೊಳ್ಳಲೇಬೇಕೆಂದು ಕಡ್ಡಾಯ ಏಕೆ ಮಾಡುವುದಕ್ಕೆ ಆಗುವುದಿಲ್ಲ?

Sri A. P. APPANNA.—Government could not force them, but we have taken up the matter with them. They are statutory bodies and they have to work on profit and loss basis. In one breath we cannot tell them: "You pay a higher price" and at the same time we cannot tell them: "You must work on a profit basis". Now we are persuading them and they are considering this matter and in various cases they are purchasing through small scale industries.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸ್ಟೋರ್ಸ್ ಪರ್ಚೇಸ್ ಕಮಿಟಿಯಲ್ಲಿ ನಡೆಯುತಕ್ಕ ವಿಧಾನದಿಂದ ಸಣ್ಣ ಕೈಗಾರಿಕೆಗಳಲ್ಲಿ ಉತ್ಪತ್ತಿಯಾಗುವಂಥ ಸಾಮಾನುಗಳು ಖರ್ಚಾಗದೆ ಮಾರುಕಟ್ಟೆಯಲ್ಲಿರುವ ಪೈಪೋಟಿಯನ್ನು ಅವರು ಎದುರಿಸುವುದಕ್ಕೆ ಸಾಧ್ಯವಿಲ್ಲದೆ ಇರುವುದರಿಂದ ಇಂಥ ದುರವಸ್ಥೆ ಬಂದಿದೆ. ಇದನ್ನು ಸರ್ಕಾರ ಪರಿಶೀಲನೆ ಮಾಡಿದೆಯೇ ?

ಶ್ರೀ ಎ. ಪಿ. ಅಪ್ಪಣ್ಣ.—ದೊಡ್ಡ ಕೈಗಾರಿಕೆಗಳ ಸಂಗಡ ಸಣ್ಣ ಕೈಗಾರಿಕೆಗಳು ಪೈಪೋಟಿ ಮಾಡುವುದಕ್ಕಾಗುವುದಿಲ್ಲವೆಂದೇ 52 ಐಟಂಗಳನ್ನು ಎಸ್. ಪಿ. ಸಿ. ಅವರು ಬರೀ ಸಣ್ಣ ಕೈಗಾರಿಕೆಗಳಿಂದಲೇ ಖರೀದಿ ಮಾಡಬೇಕು ಎಂದು ಆದೇಶ ಕೊಡಲಾಗಿದೆ. ಅವರು ಅದರಂತೆ ಮಾಡುತ್ತಿದ್ದಾರೆ.

The percentage of S.C. and S.T. Officials in G.A.D.

563. Sri M. H. JAYAPRAKASH NARAYAN (Sirsi).—

Will the Chief Minister be pleased to state :—

(*a*) the number of officials both gazetted and non-gazetted in all categories of posts in General Administration Department, Government of Mysore at present ;

(*b*) the number of officials belonging to Scheduled Castes and Scheduled Tribes in all categories of posts now in General Administration Department, Government of Mysore at present and their percentage in each categories as against officials in clause (*a*) ;

(*c*) the steps taken by the Government to keep up the percentage of 15 and 3 to Scheduled Caste and Scheduled Tribes respectively in the General Administration Department ?

Sri VEERENDRA PATIL (Chief Minister).—

(*a*)	*Class I*	*Class II*	*Class III*	*Class IV*
	15	24	190	240
(*b*)	S. C. nil	nil	8–4.4%	53–22%
	S. T. nil	nil	nil	7—3%

(*c*) For purposes of recruitment, Mysore Government Secretariat as a whole comprising the various administrative Departments is one unit and as such, the question of securing the percentage of reservation in a particular Department like General Administration Department does not arise.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ರಾಜ್ಯಾಂಗವನ್ನು ಜಾರಿಗೆ ತಂದು ಸುಮಾರು 18 ವರ್ಷಗಳಾದುವು. ಅದರ ಪ್ರಕಾರ ಹರಿಜನ ಗಿರಿಜನರಿಗೆ ಕೆಲವು ರಿಯಾಯಿತಿಗಳಿಗೆ ಅವಕಾಶವಿದ್ದು ಅವರಿಗೆ ಉದ್ಯೋಗಗಳಲ್ಲಿ ರಿಸರ್ವೇಷನ್ ಕೊಡಬೇಕೆಂದಿದೆ. ನಾನು ಅದಕ್ಕೆ ಸಂಬಂಧಪಟ್ಟ ಹಾಗೆ ಉತ್ತರ ಕೇಳಿದರೆ ಕ್ಲಾಸ್ 1 ಮತ್ತು 2 ರಲ್ಲಿ, ಇಲ್ಲ, ಇಲ್ಲ ಎಂದು ಹೇಳಿದ್ದಾರೆ. ಇದೆ, ಇದೆ, ಎಂದು ಯಾವಾಗ ಉತ್ತರ ಹೇಳುತ್ತಾರೆ ?

† ಶ್ರೀ ವೀರೇಂದ್ರ ಪಾಟೀಲ್.—ಗವರ್ನ್‌ಮೆಂಟ್ ಸೆಕ್ರೆಟೇರಿಯಟ್ ಅಂದಮೇಲೆ ಅದರಲ್ಲಿ ಅನೇಕ ಡಿಪಾರ್ಟ್‌ಮೆಂಟ್ಸ್ ಇರುತ್ತವೆ. ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲಿಯೂ ರಿಸರ್ವೇಷನ್ ಎಂದು ಮಾಡಲಿಕ್ಕೆ ಆಗುವುದಿಲ್ಲ. ಯಾವಾಗ ರಿಕ್ರೂಟ್‌ಮೆಂಟ್ ಮಾಡುತ್ತೇವೆ ಆವಾಗ ರಿಸರ್ವೇಷನ್ ಪ್ರಶ್ನೆ ಬರುತ್ತದೆ. ರಿಕ್ರೂಟ್‌ಮೆಂಟ್ ಆದಮೇಲೆ ಅವರಿಗೆ ಅನೇಕ ಡಿಪಾರ್ಟ್‌ಮೆಂಟ್‌ಗಳಿಗೆ ಕಳಿಸುತ್ತೇವೆ. ಜಿ.ಎ.ಡಿ. ಯಲ್ಲಿ ಕೆಲವರು, ಇಂಡಸ್ಟ್ರೀಸ್, ಕಾಮರ್ಸ್‌ನಲ್ಲಿ ಕೆಲವರು ಹೀಗೆ ಎಷ್ಟು ಡಿಪಾರ್ಟ್‌ಮೆಂಟ್‌ಗಳಿವೆಯೋ ಅಷ್ಟು ಸೆಕ್ರೆಟೇರಿಯಟ್‌ಗಳಿವೆ. ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲಿಯೂ ಕೋಟಾ ಪ್ರಕಾರ ಕಳಿಸುವುದಕ್ಕಾಗುವುದಿಲ್ಲ, ಹಾಗೆ ಮಾಡುವುದಕ್ಕೂ ಆಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮುಖ್ಯ ಮಂತ್ರಿಗಳು ನಿಯಮಾವಳಿಯನ್ನು ಮುಂದೊಡ್ಡಿ ಹೇಳುತ್ತಿದ್ದಾರೆ. ಆದರೆ ಈ 20 ವರ್ಷಗಳಲ್ಲಿ ಶಾಸನಬದ್ಧವಾಗಿ, ಕ್ರಮಬದ್ಧವಾಗಿ ಆ ಸ್ಥಾನದಲ್ಲಿ ಕೆಲಸ ಮಾಡುವುದಕ್ಕೆ ಯೋಗ್ಯರಾಗಿರತಕ್ಕವರನ್ನು, ಅರ್ಹರಾಗಿರತಕ್ಕವರನ್ನು ತಯಾರು ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ವೀರೇಂದ್ರ ಪಾಟೀಲ್.—ಅದು ಮತ್ತೊಂದು ಪ್ರಶ್ನೆಯಾಯಿತು. ಈಗ ಇರುವ ಪ್ರಶ್ನೆ ಜಿ.ಎ.ಡಿ. ಯಲ್ಲಿ ಎಷ್ಟು ಜನ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ ಜನರಿದ್ದಾರೆ ಎನ್ನುವುದು. ಅವರಿಗೆ ಅರ್ಹತೆ ಬರುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದು ಪ್ರತ್ಯೇಕ ಪ್ರಶ್ನೆಯಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ನಿರ್ಗತಿಕ ಜನಾಂಗ ಎಲ್ಲ ವಿಧದಲ್ಲಿಯೂ ಪ್ರಗತಿಗೆ ಬರಬೇಕಾದರೆ ಅವರಿಗೆ ಸ್ಥಾನಮಾನಗಳೇ ಅಲ್ಲದೆ ಬೇರೆ ರೀತಿಯಲ್ಲಿಯೂ ಅವಕಾಶ ಕೊಡಬೇಕು. ಜಿ.ಎ.ಡಿ. ಮಾತ್ರವಲ್ಲದೆ ಎಲ್ಲ ಕಡೆಯೂ ಒದಗಿಸಿಕೊಡಬೇಕು. ಜಿ.ಎ.ಡಿ. ಮತ್ತು ಇತರ ಕಡೆ ಅರ್ಹರಾಗಿರತಕ್ಕ ಅಧಿಕಾರಿಗಳನ್ನು ಪೋಸ್ಟ್ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಎಷ್ಟೋ ಜನರು ಹುದ್ದೆಗಳಲ್ಲಿದ್ದಾರೆ, ಎಲ್ಲಾ ಕಡೆಯೂ ಪೋಸ್ಟ್ ಮಾಡಲು ಪ್ರಯತ್ನಮಾಡಲಾಗುತ್ತಿದೆ. ಆದರೆ ಇಲಾಖಾವಾರು ಮಾಡಿ, ಪ್ರತಿಯೊಂದು ಇಲಾಖೆಯಲ್ಲೂ ಅವಕಾಶ ಕೊಡಿ ಎಂದರೆ ಹಾಗೆ ಪೋಸ್ಟ್ ಮಾಡುವುದು ಕಷ್ಟವಾಗುತ್ತದೆ. ಆದುದರಿಂದ ಸೆಕ್ರೆಟೇರಿಯಟ್ ಒಂದು ಯೂನಿಟ್ ಎಂದು ಮಾಡಿ ಅದರ ಪ್ರಕಾರ ಕೆಲಸಕಾರ್ಯ ನಡೆಯುತ್ತಿದೆ. ಇನ್ನೂ ಹೆಚ್ಚು ಜನ ಸರಕಾರದ ಹುದ್ದೆಗಳಲ್ಲಿ ಸ್ಥಾನ ಪಡೆಯಬೇಕು ಅಂದರೆ ರೆಕ್ರೂಟ್‌ಮೆಂಟಿನಲ್ಲಿ ರಿಸರ್ವೇಷನ್ ಪೂರ್ಣವಾಗಿ ಸಿಕ್ಕುವ ಹಾಗೆ ನೋಡಿಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಕ್ಲಾಸ್ ಒಂದು ಮತ್ತು ಕ್ಲಾಸ್ ಎರಡರಲ್ಲಿ ಯಾರೂ ಇಲ್ಲ ಎಂದು ಉತ್ತರ ಕೊಡಲಾಗಿದೆ. ಮುಂದಾದರೂ ಅಲ್ಲಿಗೆ ಬೇರೆ ಕ್ಯಾಸ್ಟಿನವರನ್ನು ಪೋಸ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿಗೆ ಪೋಸ್ಟ್ ಮಾಡಿದರೆ ಇನ್ನೊಂದು ಕಡೆ ಇಲ್ಲ ಎಂದು ಪ್ರಶ್ನೆ ಹಾಕಬಹುದು. ಆದುದರಿಂದ ಸೆಕ್ರೆಟೇರಿಯಟ್ ಒಂದು ಯೂನಿಟ್ ಎಂದು ಪರಿಗಣಿಸಬೇಕಾಗುತ್ತದೆ. ಹಾಗೆ ಹೇಳಿದಮೇಲೆ ಸೆಕ್ರೆಟೇರಿಯೆಟ್‌ನಲ್ಲಿ ಯಾರಿದ್ದಾರೆ ಎಂಬ ಪ್ರಶ್ನೆಗೆ ಅವಕಾಶವಿರುವುದಿಲ್ಲ. ಎಲ್ಲಿ ಬೇಕಾದರೂ ಇರಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸೆಕ್ರೆಟೇರಿಯಟ್ ಪೂರ್ಣವಾಗಿ ತೆಗೆದುಕೊಂಡರೆ ಒಂದನೆಯ ದರ್ಜೆಯಿಂದ ನಾಲ್ಕನೆಯ ದರ್ಜೆಯವರೆಗೆ ಇರುವ ಹುದ್ದೆಗಳಿಗೆ ಪರ್ಸೆಂಟೇಜ್ ಎಷ್ಟಿರಬೇಕೋ ಅದರ ಪ್ರಕಾರ ರಿಸರ್ವ್ ಮಾಡಲಾಗುವುದೇ ?

ಶ್ರೀ ವೀರೇಂದ್ರ ಪಾಟೀಲ್.—ಪ್ರತ್ಯೇಕ ಪ್ರಶ್ನೆ ಅದಕ್ಕೆ ಹಾಕಬೇಕು, ಇದು ಜಿ.ಎ.ಡಿ. ಗೆ ಮಾತ್ರ ಸಂಬಂಧಪಟ್ಟಿದೆ. ಅದಕ್ಕೆ ಸಂಬಂಧಪಟ್ಟಂತೆ ಮಾತ್ರ ಉತ್ತರ ಹೇಳಿದೆ.

Sri D. B. KALMANKAR.—May I know whether the employees in the Secretariat are there from the beginning or new recruitment has taken place ?

Sri VEERENDRA PATIL.—So far as my knowledge goes, in the Secretariat, Section Officers Class II and Class I posts are promotion posts and there is no direct recruitment. The direct recruitment is only for II Division Clerks and I Division Clerks in the Secretariat and later on by promotion they become Section Officers ; Section Officers become Under Secretaries and Under Secretaries become Deputy Secretaries.

Election to the Labour Association of Mysore Iron and Steel Ltd., Bhadravathi.

618. Sri ABDUL KHUDDUS ANWAR (Bhadravathi).—

Will the Minister for Law, Labour and Parliamentary Affairs be pleased to state :—

(*a*) whether the elections of the Labour Association of Mysore Iron and Steel Ltd, Bhadravathi has been conducted by the Deputy Labour Commissioner as promised on the floor of the House ;

(*b*) the stage at which the matter stands at present ?

Sri K. PUTTASWAMY (Minister for Law, Labour and Parliamentary Affairs).—

(*a*) No. The election proceedings were stopped when the District Judge, Shimoga dismissed the appeal petition of the Union and upheld the order of the Registrar of Trade Unions cancelling the registration of this Union.

(*b*) The Mysore Iron and Steel Limited, Labour Association filed a Second Appeal against the order of the District Judge, Shimoga in the High Court of Mysore and obtained a Stay Order. In view of this Stay Order, after obtaining the legal opinion, instructions have been issued to the Deputy Labour Commissioner to proceed with the Election Proceedings.

Sri ABDUL KHUDUS ANWAR.—Last time you were kind enough to announce in this House that the Deputy Labour Commissioner will be asked to conduct the elections. Now once again may I request the Hon'ble Minister to conduct the elections early ?

Sri K. PUTTASWAMY.—The hon'ble Member perhaps is fully aware of what is going on there. Because the Association failed to conduct elections the registration was cancelled on 21st December 1965 and because the Association preferred an appeal before the District Judge a stay order was issued on 3rd January 1966. The District Judge dismissed the appeal on 31st August 1968. Then there has been a second appeal. Because there have been litigations it was not possible to conduct elections. Subsequently Government have taken legal advice and we have been advised to go ahead with the elections. We have instructed the Deputy Labour Commissioner on 24th February 1969 to proceed with the elections. I do not know what further stay orders will come.

Sri ABDUL KHUDUS ANWAR.—The writ petition was against the illegal order of the Deputy Commissioner about conducting the election. What warranted the Deputy Commissioner to pass the illegal order and at the same time what made the Government not to implement the promise made to this House ?

1-30 P.M.

Sri K. PUTTASWAMY.—The hon'ble Member feels that it is an illegal order. The District Judge has held that it is legal. The matter is pending before the High Court. At this stage, I cannot agree with the hon'ble Member that it is an illegal order. Now that Government have issued instructions, the Deputy Labour Commissioner will go on with the elections, provided the office bearers of the Association give him all facilities and assistance.

Upgrading of Hospital at Chamarajanagar

662. Sri S. PUTTASWAMY (Chamarajanagar).—

Will the Minister for Health be pleased to state :—

(*a*) whether there is any proposal before the Government to upgrade taluk level hospitals into General hospital in Mysore District ;

(*b*) whether they have received any representation from Chamarajanagar taluk to upgrade the existing hospital into a general hospital ;

(*c*) whether both Taluk Development Board, Chamarajanagar and Municipal Council, Chamarajanagar, have agreed by passing resolutions to contribute the required percentage of the cost of the envisaged General Hospital Scheme of the Government ;

(*d*) if so, the reasons for not according sanction to upgrade the existing hospital at Chamarajanagar into a general hospital ?

Sri Y. RAMAKRISHNA (Minister for Health).—

(*a*) No.

(*b*) Yes.

(*c*) Only Taluk Development Board, Chamarajanagar, has passed the necessary resolution agreeing to pay the contribution as required. Similar resolution ageeing to pay the required contibution is yet to be received from the Town Municipal Council, Chamarajanagar.

(*d*) For want of the necessary resolution from the Town Municipal Council, Chamarajanagar agreeing to pay its share.

ಶ್ರೀ ಎಂ. ಬಸವರಾಜು.—(ಈ) ಪ್ರಶ್ನೆಗೆ ಉತ್ತರವಾಗಿ ತಮ್ಮ ಪಾಲಿನ ವಂತಿಗೆಯನ್ನು ಕೊಡಲು ಒಪ್ಪಿಕೊಳ್ಳುವ ಅವಶ್ಯಕ ನಿರ್ಣಯವು ಚಾಮರಾಜನಗರ ಪುರಸಭೆಯುವರಿಂದ ಬರದೇ ಇರುವುದು ಎಂದು ಇದೆ. ಇದು ಒಂದೇ ಕಾರಣವಾಗಿದ್ದರೆ—ನಾನು ತಿಳಿದಮಟ್ಟಿಗೆ ಆಗಲೇ ಒಂದು ರೆಸಲ್ಯೂಷನ್ ಮಾಡಿ ಕಳುಹಿಸಿಕೊಟ್ಟಿದ್ದಾರೆ ಎಂದು ಕೇಳಿದೆ. ಆಕಸ್ಮಾತ್ತಾಗಿ ಬರದಿದ್ದರೆ ಮುನಿಸಿಪಾಲಿಟಿಯುವರು ಒಪ್ಪಿಗೆ ಕೊಟ್ಟಿದ್ದಾರೆ ಎಂದು ತಿಳಿದುಕೊಂಡು 69ನೇ ಸಾಲಿನಲ್ಲಿ ಮಾಡುತ್ತೀರಾ ?

† ಶ್ರೀ ವೈ. ರಾಮಕೃಷ್ಣ.—ರೆಸಲ್ಯೂಷನ್ ಮಾಡುವುದಾದರೆ ಒಪ್ಪಿಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ನಾನೇ ಪ್ಲಾನ್‌ನಲ್ಲಿ ತಾಲ್ಲೂಕು ಮಟ್ಟದಲ್ಲಿ ಇರುವಂತಹ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡುವಂತ ಒಂದು ಪಾಲಿಸಿಯನ್ನು ಸರ್ಕಾರದವರು ವಹಿಸಿಕೊಂಡದ್ದು ನಿಜವೇ ?

ಶ್ರೀ ವೈ. ರಾಮಕೃಷ್ಣ.—ಹೌದು.

Improvement of Agricultural Families in the State

792. Sri B. GANGANNA (Kallambella).—

Will the Minister for Agriculture be pleased to state :—

(*a*) whether the Government has any proposal to appoint a Commission to study and report ways and means for the improvement of agricultural families in the State ;

(*b*) if so, whether the Government has advised the Commission to prepare a phased programme required for the improvement of agricultural families in the State ?

Sri B. RACHAIAH (Minister for Agriculture).—

(*a*) No.

(*b*) Does not arise.

ಶ್ರೀ ಬಿ. ಗಂಗಣ್ಣ.—ತಮ್ಮ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೀರಿ, ಅಂತಹ ಒಂದು ಕಮಿಷನ್ ರೈತರ ಕುಟುಂಬದ ಎಲ್ಲಾ ವಿಧವಾದ ಏಳಿಗೆಗೆ ಅವಶ್ಯಕ ಎಂದು ಎಂದೋ ಮನಗಾಣಬೇಕಾಗಿತ್ತು. ಇದುವರೆಗೂ ಬಿಟ್ಟಂಥದ್ದೇ ಒಂದು ದೊಡ್ಡ ಅಪರಾಧ ಅಂತ ಪರಿಗಣಿಸಿ ಈಗಲಾದರೂ ಒಂದು ಕಮಿಷನ್ ಏರ್ಪಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಕೇಂದ್ರ ಸರ್ಕಾರದವರು ಇಂಥಾ ಒಂದು ಕಮಿಷನ್ ಮಾಡತಕ್ಕ ಉದ್ದೇಶ ಇಟ್ಟುಕೊಂಡಿದ್ದಾರೆ, ಅವರು ನಮ್ಮ ಅಭಿಪ್ರಾಯವನ್ನು ಕೇಳಿದ್ದರು—ಅದರಲ್ಲಿ ಟರ್ಮ್ಸ್ ಆಫ್ ರೆಫರೆನ್ಸ್ ಏನು ಹಾಕಬೇಕೆಂದು ಕೇಳಿದ್ದರು, ಅದನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಗಂಗಣ್ಣ.—ತಾವು ಕೊಟ್ಟ ಅಭಿಪ್ರಾಯದಲ್ಲಿ ಇಷ್ಟು ವರ್ಷಗಳಲ್ಲಿ ರೈತ ಕುಟುಂಬದವರ ಅಭಿವೃದ್ಧಿಯಾಗಬೇಕು ಎಂಬ ನಿರ್ದಿಷ್ಟವಾದ ಒಂದು ಯೋಜನೆಯನ್ನೇನಾದರೂ ಕೊಟ್ಟಿದ್ದೀರಾ?

ಶ್ರೀ ಬಿ. ರಾಚಯ್ಯ.—ಆ ರೀತಿ ಅಲ್ಲ. ರೈತರಿಗೆ ಏನು ತೊಂದರೆ ಇದೆ, ಇವತ್ತು ಅವರಿಗೆ ಸಾಲ ಕೊಡುವುದರಲ್ಲಿ, ಅವರಿಗೆ ಬೇಕಾಗಿರತಕ್ಕ ವಿದ್ಯುಚ್ಛಕ್ತಿ ಸಹಾಯವನ್ನು ಒದಗಿಸುವುದರಲ್ಲಿ ಮತ್ತು ವ್ಯವಸಾಯದ ಉಪಕರಣಗಳನ್ನು ಅವರು ಪಡೆಯುವುದರಲ್ಲಿ ಮತ್ತು ಇದನ್ನೆಲ್ಲಾ ಪಡೆದ ಮೇಲೆ ಅವರು ಏನು ಬೆಳೆಯುತ್ತಾರೆ ಆ ಬೆಳೆಗೆ ಏನು ಒಂದು ನಿಗದಿಯಾದ ಬೆಲೆಯನ್ನು ಗೊತ್ತು ಮಾಡಬೇಕೆಂಬ ವಿಷಯವನ್ನು ಕುರಿತು ಅವರು ನಮ್ಮ ಅಭಿಪ್ರಾಯವನ್ನು ಕೇಳಿದ್ದರು, ಅದನ್ನು ಅವರಿಗೆ ಕೊಟ್ಟಿದೆ.

ಶ್ರೀ ಎನ್. ಎ. ಚನ್ನೇಗೌಡ.—ರೈತರ ಸ್ಥಿತಿಗತಿಗಳನ್ನು ಉತ್ತಮಗೊಳಿಸಬೇಕೆಂಬುದು ಸರ್ಕಾರದ ಗಮನಕ್ಕೆ ಬರುವುದು ಬರೀ ಎಲೆಕ್ಷನ್ ಸಮಯದಲ್ಲಿ ಮಾತ್ರವೇ ?

ಶ್ರೀ ಬಿ. ರಾಚಯ್ಯ.—ಈಗ ಏನೂ ಎಲೆಕ್ಷನ್ ನಡೆಯುತ್ತಿಲ್ಲ. ಈಗಲೂ ರೈತರ ಸ್ಥಿತಿಗತಿಗಳನ್ನು ನೋಡುತ್ತಾ ಇದ್ದೇವೆ ಮತ್ತು ಅವರಿಗೆ ಏನು ಕೆಲಸ ಕಾರ್ಯ ಮಾಡಬೇಕೋ ಅದನ್ನು ಮಾಡುತ್ತಾ ಇದ್ದೇವೆ.

ಶ್ರೀ ಸಿ. ಆರ್. ರಂಗೇಗೌಡ.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಜಮೀನು ಇದ್ದ ರೈತರಿಗೆ ಅವರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಏನು ಕಾರ್ಯಕ್ರಮ ಕೈಕೊಳ್ಳಬೇಕೆಂಬುದರ ಬಗ್ಗೆ ಹೇಳಿದರು. ಲ್ಯಾಂಡ್ ರಿಫಾರಂಸ್ ಆಕ್ಟ್ ಜಾರಿಗೆ ಬಂದಮೇಲೆ ಎಷ್ಟೋ ಜನ ರೈತರು ಜಮೀನು ಕಳೆದುಕೊಂಡಿದ್ದಾರೆ, ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ನಿರುದ್ಯೋಗಿ ರೈತರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಒಂದು ಸಮಿತಿಯನ್ನು ಏರ್ಪಡಿಸಿ ಅವರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಯೋಚನೆ ಮಾಡುವುದು ಸೂಕ್ತವಲ್ಲವೇ ?

ಶ್ರೀ ಬಿ. ರಾಚಯ್ಯ.—ಈ ಉದ್ದೇಶ ಕೇಂದ್ರ ಸರ್ಕಾರದವರು ನೇಮಕ ಮಾಡತಕ್ಕ ಕಮಿಷನ್ನಿನ ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ಸೇರಿದೆ ಮತ್ತು

"the special problems of agricultural labour in the context of the new development in agriculture and the solutions thereon." ಎಂಬುದು ಕೂಡ ಇದೆ.

ಶ್ರೀ ಎಂ. ಎನ್. ರಾಮಣ್ಣ.—ಸರ್ಕಾರದವರು ಈಗ ಅನೇಕ ಅಡ್ವೈಸರಿ ಬೋರ್ಡುಗಳನ್ನು ಅಂದರೆ ರಸ್ತೆ, ಸೇತುವೆ, ಮೇಜರ್ ಇರಿಗೇಷನ್ ಮತ್ತು ಪವರ್ ಇತ್ಯಾದಿಗಳಿಗೆ ಮಾಡಿದ್ದಾರೆ. ಅದೇ ರೀತಿ ರಾಜ್ಯ ಸರ್ಕಾರದವರು ಇದಕ್ಕೂ ಒಂದು ಸಮಿತಿಯನ್ನು ನೇಮಕ ಮಾಡುವುದರಲ್ಲಿ ತೊಂದರೆಯೇನಿದೆ ?

ಶ್ರೀ ಬಿ. ರಾಚಯ್ಯ.—ಕೇಂದ್ರ ಸರ್ಕಾರದವರು ಇಡೀ ರಾಷ್ಟ್ರದಲ್ಲಿರತಕ್ಕ ಬೇಸಾಯಗಾರರ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ ಅದನ್ನು ಉತ್ತಮಪಡಿಸುವುದಕ್ಕೆ ಏನೇನು ಪ್ರಯತ್ನಗಳನ್ನು ನಡೆಸಬೇಕೋ ಅವೆಲ್ಲವನ್ನೂ ನಡೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಹಾಗೆ ಅವರು ಕಾರ್ಯಕ್ರಮ ಕೈಗೊಂಡಿದ್ದಾಗ ನಾವು ಅಂದರೆ ಉಳಿದ ರಾಜ್ಯಗಳವರೂ ಪ್ರಯತ್ನ ಮಾಡಿದರೆ ಒಬ್ಬೊಬ್ಬರು ಒಂದು ರೀತಿಯಲ್ಲಿ ರೈತರ ಧಾನ್ಯಗಳಿಗೆ ಬೆಲೆಯನ್ನು ನಿಗದಿ ಮಾಡಿದರೆ ಅದು ಸರಿಯಾಗುವುದಿಲ್ಲ. ಅದೂ ಮತ್ತೆ ಕಷ್ಟಕ್ಕೇ ಬರುತ್ತದೆ.

ಶ್ರೀ ವಿ. ಎನ್. ಪಾಟೀಲ್.—ಸರ್ಕಾರದವರು ಇಲ್ಲಿ ರೈತರ ಕಷ್ಟಸುಖಗಳೇನು ಎಂಬುದನ್ನು ತಿಳಿಯುವುದಕ್ಕೆ ಯಾವ ಏಜನ್ಸಿಯನ್ನೂ ಮಾಡಿಲ್ಲ ಎಂದಾಗ ಅವರು ಆ ಕೇಂದ್ರಕ್ಕೆ ಮಾಡಿದ ಸಲಹೆಗಳನ್ನು ಯಾವ ಆಧಾರದ ಮೇಲೆ ಮಾಡಿದರು ?

ಶ್ರೀ ಬಿ. ರಾಚಯ್ಯ.—ಅವರ ಕಷ್ಟಗಳೇನೆಂಬುದನ್ನು ಅವರ ಪ್ರತಿನಿಧಿಗಳಿಂದಲೂ ಮತ್ತು ನಮ್ಮ ಇಲಾಖೆಯ ಮೊಖ್ತೇಸರರುಗಳಿಂದಲೂ ಶೇಖರಣೆ ಮಾಡಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ನಾವು ರೈತರಿಗೆ ಒದಗಿಸತಕ್ಕ ಅನುಕೂಲಗಳೇನಿವೆ ಅವು ಏನಿದ್ದರೂ ಅನುಕೂಲಸ್ಥರಿಗೇ ಸಿಕ್ಕುತ್ತಿವೆ ಬಡವನಿಗೆ ಸಿಕ್ಕುತ್ತಿಲ್ಲ ಎಂಬ ದೂರಿದೆ. ಅದನ್ನು ಪರಿಶೀಲಿಸಿ ಸರ್ಕಾರದವರು ಕೊಡತಕ್ಕ ಸೌಲಭ್ಯಗಳು ನೇರವಾಗಿ ರೈತನಿಗೆ ಮುಟ್ಟುತ್ತಿವೆ ಎಂಬುದನ್ನು ಪರಿಶೀಲಿಸುವುದಕ್ಕಾಗಿ ರಾಜ್ಯ ಮಟ್ಟದಲ್ಲಿ ಒಂದು ಸಮಿತಿಯನ್ನು ಏಕೆ ಮಾಡಬಾರದು ?

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಹೇಳತಕ್ಕ ಈ ವಿಷಯಗಳೆಲ್ಲಾ ಅದರಲ್ಲೇ ಸೇರಿವೆ.

Sri L. SRIKANTAIAH.—In answer to (*a*), the reply is 'no'. May I ask, is it the opinion of the Government that the living conditions of the agriculturists in villages are quite good or would you take the assistance of the Economics Department of the Universities and hold a survey as to the living conditions in villages and prepare a report ?

Sri B. RACHAIAH.—We have already created a Statistical Cell in the Agriculture Department and necessary staff has been appointed to collect the required data.

ಶ್ರೀ ಬಿ. ಪಿ. ಗಂಗಾಧರ್.—ಈ ದಿವಸ ನಮ್ಮ ರಾಜ್ಯದ ರೈತರ ಸ್ಥಿತಿಗತಿಗಳನ್ನು ನಮ್ಮ ಅಕ್ಕಪಕ್ಕದ ರಾಜ್ಯದಲ್ಲಿರತಕ್ಕ ಆಂಧ್ರಪ್ರದೇಶದ ರೈತರಿಗೆ ಹೋಲಿಕೆ ಮಾಡಿ ನೋಡಿದರೆ ಬಹಳ ಕೆಳಮಟ್ಟದಲ್ಲಿದ್ದಾರೆ ನಮ್ಮ ರೈತರು. ಈ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ ಮತ್ತು, ರಾಜ್ಯದಲ್ಲ ಆಗಿಂದಾಗ್ಗೆ ಒಂದಲ್ಲ ಒಂದು ಭಾಗದಲ್ಲಿ ಬರತಕ್ಕ ಆ ಕ್ಷಾಮಗಳನ್ನು ತಡೆಗಟ್ಟಿ ಅದರಿಂದ ರೈತರಿಗಾಗತಕ್ಕ ತೊಂದರೆಯನ್ನು ತಪ್ಪಿಸುವುದಕ್ಕೆ ಕ್ರಾಪ್ ಇನ್‌ಷೂರೆನ್ಸ್ ಮಾಡಿಸುವುದಕ್ಕೆ ಇನ್ನಾದರೂ ಸರ್ಕಾರದವರು ಪ್ರಯತ್ನ ಮಾಡುತ್ತಾರೋ ?

ಶ್ರೀ ಬಿ. ರಾಚಯ್ಯ.—ನಮ್ಮ ರಾಜ್ಯದ ರೈತರ ಆದಾಯ ನ್ಯಾಷನಲ್ ಅವರೇಜಿಗಿಂತ ಕಡಿಮೆಯೇನೂ ಇಲ್ಲ. ಎಲ್ಲ ರಾಜ್ಯಗಳ ರೈತರ ಆದಾಯವು ಸ್ವಲ್ಪ ಹೆಚ್ಚುಕಡಿಮೆ ಒಂದೇ ಆಗಿರುತ್ತದೆ. ಇನ್ನು ಮಳೆ ಅಭಾವದಿಂದ ರಾಜ್ಯದಲ್ಲಿ ಬರತಕ್ಕ ಕ್ಷಾಮದಿಂದ ತೊಂದರೆ ತಪ್ಪಿಸಲು ಕೆಲವು ಹೈ ಈಲ್ಡಿಂಗ್ ಬೆಳೆಗಳನ್ನು ಇನ್‌ಷೂರೆನ್ಸ್ ಮಾಡತಕ್ಕ ಯೋಜನೆಯನ್ನು ಜಾರಿಗೆ ತರತಕ್ಕ ಬಗ್ಗೆ ಸರ್ಕಾರದವರು ಈಗಾಗಲೇ ಎಲ್.ಐ.ಸಿ. ಅವರೊಂದಿಗೆ ಕರೆಸ್‌ಪಾಂಡೆನ್ಸ್ ಮಾಡುತ್ತಿದ್ದಾರೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಪಂಚಾಯತಿ ಮತ್ತು ತಾಲ್ಲೂಕು ಬೋರ್ಡ್‌ಗಳಲ್ಲಿ ಅಗ್ರಿಕಲ್ಚರಲ್ ಕಮಿಟೀಸ್ ಮಾಡಿಕೊಂಡಿದ್ದಾರೆಂದು ತಮಗೆಲ್ಲರಿಗೂ ಗೊತ್ತಿದೆ. ಅಲ್ಲಿ ಅವರು ಏನು ಸಲಹೆಗಳನ್ನು ಕೊಟ್ಟಿದ್ದಾರೋ ಅವನ್ನು ಕ್ರೋಢೀಕರಿಸಿ ಪರಿಶೀಲನೆ ಮಾಡಲು ದೇಶಾದ್ಯಂತ ರಾಜ್ಯ ಮಟ್ಟದಲ್ಲಿ ಒಂದು ಸಮಿತಿಯನ್ನು ರಚನೆಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಬಿ. ರಾಚಯ್ಯ.—ಅದಕ್ಕೆ ಒಂದು ಅಡ್ವೈಸರಿ ಕಮಿಟಿ ಮಾಡಿಕೊಂಡರೆ ಏನೂ ಪ್ರಯೋಜನವಾಗುವುದಿಲ್ಲ. ಈಗ ಒಂದು ಕಮಿಷನ್ ಮಾಡುತ್ತಾರೆಂದು ಹೇಳಿದೆ. ಅದಕ್ಕೆ ಬೇಕಾದಂಥ ಅಂಕಿ ಅಂಶಗಳನ್ನು ಸಂಗ್ರಹಿಸಲು ಆ ಕಮಿಷನ್ನು ದೇಶಾದ್ಯಂತ ಓಡಾಡಿ ಒಂದು ವರದಿಯನ್ನು ಕೊಡುತ್ತಾರೆ. ಮತ್ತೆ ರೈತರ ಬಗ್ಗೆ ಪ್ರೈಸ್ ಗೊತ್ತುಮಾಡುವುದರಲ್ಲಿ ಯಾವ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆಂಬುದನ್ನು ನೋಡಬೇಕಾಗುತ್ತದೆ. ಲ್ಯಾಂಡ್‌ಲೆಸ್ ಪೀಪಲ್ ಯಾರು ಇದ್ದಾರೆಯೋ ಅವರಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಲ್ಯಾಂಡ್‌ಲಾರ್ಡ್ಸ್‌ನಿಂದ ಬರತಕ್ಕ ಮನವಿಗಳನ್ನೂ ಪರಿಶೀಲಿಸಬೇಕು. ಈ ಎಲ್ಲಾ ಸಮಸ್ಯೆಗಳೂ ಕ್ಷಾಮ ರಿಲೀಫ್ ಕಾಮಗಾರಿಗಳಲ್ಲಿರುವುದರಿಂದ ಮತ್ತೆ ಪ್ರತ್ಯೇಕವಾಗಿ ಒಂದು ಕಮಿಟಿಯನ್ನು ಮಾಡಿದರೆ ಹೆಚ್ಚು ಉಪಯೋಗಕ್ಕೆ ಬರಲಾರದೆಂದು ಸರ್ಕಾರದ ಅಭಿಪ್ರಾಯ.

ಶ್ರೀ ಕೆ. ಎಚ್. ರಂಗನಾಥ್.—ಬೇರೆ ರಾಜ್ಯಗಳಲ್ಲಿರುವಂತೆ ನಮ್ಮಲ್ಲಿ ಲ್ಯಾಂಡ್ ಟೆನ್ಯೂರ್ ಬಗ್ಗೆ ಏಕರೂಪವಾದ ಶಾಸನ ಇಲ್ಲದೇ ಇರುವುದರಿಂದ, ರೈತಾಪಿವರ್ಗ ಹಳ್ಳಿಗಾಡುಗಳಲ್ಲಿ ಬಹಳ ಸಂಖ್ಯೆಯಲ್ಲಿರುವುದರಿಂದ ಈ ಕಮಿಷನ್ನಿನಿಂದ ರೈತರಿಗೆ ಹಾಗೂ ಕೂಲಿಗಾರರಿಗೆ ಅಷ್ಟು ಪ್ರಯೋಜನವಾಗಿಲ್ಲ. ಆದುದರಿಂದ ರಿಹ್ಯಾಬಿಲಿಟೇಷನ್ ಆಫ್ ವೀಕರ್ ಸೆಕ್ಷನ್ ಮಾಡುವುದಕ್ಕೋಸ್ಕರ ಕೇಂದ್ರ ಸರ್ಕಾರದಿಂದ ನೇಮಕವಾಗಿರತಕ್ಕ ಕಮಿಷನ್ನನ್ನು ಕಾಯುವುದಕ್ಕೆ ಬದಲು ರಾಜ್ಯ ಸರ್ಕಾರದವರು ಇದರ ಬಗ್ಗೆ ಅಭ್ಯಾಸ ಮಾಡಿ ಒಂದು ವರದಿಯನ್ನು ಕೊಡುವ ಉದ್ದೇಶದಿಂದ ಸರ್ಕಾರದವರು ಈಗೇನಾದರೂ ತಮ್ಮ ನಿರ್ಧಾರವನ್ನು ಪುನರ್ವಿಮರ್ಶೆಮಾಡುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ಇನ್ನೂ ನ್ಯಾಷನಲ್ ಕಮಿಷನ್ನಿನವರು ಬಂದಿಲ್ಲ. ಅವರು ಆಯಾ ಸ್ಟೇಟ್ ವಿಷಯ ಏನಿದೆ ಎಂಬುದನ್ನು ತಿಳಿಯಲು ಅವರು ಪ್ರತ್ಯೇಕವಾದಂಥ ಒಂದು ಕಮಿಷನ್ನನ್ನು ಮಾಡಿದ್ದು. ಈ ಸಮಯದಲ್ಲಿ ನಾವು ಆ ರೀತಿ ಪ್ರತ್ಯೇಕವಾದಂಥ ಒಂದು ಕಮಿಷನ್ನನ್ನು ಮಾಡುವುದು ಸೂಕ್ತವಲ್ಲ. ನಾವು ಆ ರೀತಿ ಮಾಡಿದರೂ ಕೂಡ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವವರು ಕೇಂದ್ರದವರು. ಹೊರಗಡೆಯಿಂದ ಬರತಕ್ಕ ಆಹಾರಪದಾರ್ಥಗಳಿಗೆ ಯಾವ ದರ ಕೊಡಬೇಕೆಂಬ ಬಗ್ಗೆ ನ್ಯಾಷನಲ್ ಕಮಿಷನ್ನಿನವರಿಂದ ನಿರ್ಣಯವಾದರೆ, ಅದರಿಂದ ಹೆಚ್ಚು ಪ್ರಯೋಜನವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎ. ಮುನಿಯಪ್ಪ.—ಈ ರಾಜ್ಯದಲ್ಲಿ ಒಂದು ಕಮಿಟಿಯನ್ನು ಮಾಡುವುದಕ್ಕೆ ಹಿಂಜರಿಯುತ್ತಾರೆ. ಅದಕ್ಕಾಗಿ ಚಳುವಳಿ ಹೂಡಬೇಕೋ ಅಥವಾ ಘೇರಾವು ಮಾಡಬೇಕೋ ?

ಶ್ರೀ ಬಿ. ರಾಚಯ್ಯ.—ಮೊದಲನೆಯ ಸಾರಿ ಇಂಡಿಯಾ ಸರ್ಕಾರದವರು ಇಂತಹ ಒಂದು ನ್ಯಾಷನಲ್ ಕಮಿಷನ್ನನ್ನು ನೇಮಕ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿರುವುದರಿಂದ ನಮ್ಮ ಅಭಿಪ್ರಾಯವನ್ನು ಕೇಳುತ್ತಿದ್ದಾರೆ. ಅವರು ಅದನ್ನು ಮಾಡದಿದ್ದರೆ ನಾವು ಮಾಡಬೇಕಾಗಿತ್ತು. ಈಗ ಅವರೇ ಮಾಡುವುದರಿಂದ ಅವರಿಂದ ಆ ವರದಿ ಬರಲಿ. ಮುಂದೆ ನಮ್ಮ ಸಂಸ್ಥಾನಕ್ಕೆ ಅಂತಹ ಕಮಿಷನ್ನಿನ ಅವಶ್ಯಕತೆ ಇದೆಯೆಂದು ಹೇಳಿದರೆ, ಅದನ್ನು ಇಲ್ಲಿಯೂ ಮಾಡೋಣ.

SRI S. SIVAPPA.—The Hon. Minister was pleased to State that a commission has been constituted at the National level and terms of reference have also been formulated. May I know, whether the Government has received those terms of references which has been referred to

(SRI S. SIVAPPA)

that National Commission and if so, what arrangements the Government has made to collect various information required in that behalf ? as also may I know what are the terms of reference ?

SRI B. RACHAIAH.—Sir, I have already read out the terms of reference for the information of this House. If you permit me, I will read out them again.

Sir, the Government of India are considering the setting up a National Commission on Agriculture to make a reappraisal of the Indian Agricultural situation. They have suggested among other things the following term of reference also to the proposed Commission *viz.*,—

The special problems of agricultural labour in the contest of the new developments in agriculture and the solutions thereof.

The other terms of references are :—

(1) provision of Credit short term, medium term and long term. The roles of Co-operatives and Commercial Banks in supplying these credit requirements of the Farmer ;

(2) A massive programme of Rural Electrification which will have a multiplier effect and help in the introduction of Science and Technology into the Rural Areas ;

(3) A policy to be followed for implementing the land reforms and ensuring that the actual tiller of the soil gets due recognition and full support ;

(4) Evolving of a policy regarding price for Agricultural products.

SRI S. BANGARAPPA.—Will the Hon'ble Minister place a copy of the terms of references on the Table of this House ?

SRI B. RACHAIAH.—If the Hon'ble Members are interested, I will place the detailed copy of the terms of references on the Table of the House.

Appointment and Transfer of Teachers of Government Higher Primary School, Munirabad

806. SRI B. N. RAME GOWDA (Sira) [On behalf of SRI R. NAGAN GOUDA (Hospet)].—

Will the Minister for Education be pleased to state :—

whether a petition from the Public of Munirabad (Koppal Taluk) Dam Colony has been received from Government requesting appointment of a graduate trained Head Master to the Government Higher Primary School, Munirabad as also for transfer of some teachers who have been in the school for over seven or eight years ?

Sri N. M. KOTRABASAIAH SOGI (Deputy Minister for Education).—

No.

ಶ್ರೀ ಬಿ. ಎನ್. ರಾಮೇಗೌಡ.—ಈ ಸ್ಥಳದಲ್ಲಿ ಮೂರು ವರ್ಷ ಮೇಲ್ಪಟ್ಟು ಇರತಕ್ಕಂತಹ ಉಪಾಧ್ಯಾಯರು ಎಷ್ಟು ಜನ ಇದ್ದಾರೆ ಸ್ವಾಮಿ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದಕ್ಕೆ ನೋಟೀಸ್ ಬೇಕು. ಸಂಬಂಧಪಟ್ಟ ಮಾಹಿತಿ ಇಲ್ಲ. ಆದರೂ ಬಹುಕಾಲ ಇರತಕ್ಕಂತಹ ಶಿಕ್ಷಕರನ್ನು ಬೇರೆ ಕಡೆ ವರ್ಗಾಯಿಸಲು ಇಲಾಖೆಯುವರು ಕ್ರಮವನ್ನು ತೆಗೆದು ಕೊಳ್ಳುತ್ತಿದ್ದಾರೆ.

ಶ್ರೀ ಬಿ. ಎನ್. ರಾಮೇಗೌಡ.—ಇಲ್ಲಿಗೆ ಪದವೀಧರ ಮುಖ್ಯೋಪಾಧ್ಯಾಯರನ್ನು ಯಾವಾಗ ನೇಮಕ ಮಾಡುವುದಕ್ಕಾಗುತ್ತದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಎಲ್ಲಾ ಕಡೆಯೂ ಪದವೀಧರ ಹೆಡ್ ಮಾಸ್ಟರುಗಳನ್ನು ನೇಮಕ ಮಾಡಬೇಕೆಂದು ಆಯಾ ಜಿಲ್ಲೆಯ ಡಿ. ಇ. ಓ. ಗಳಿಗೆ ತಿಳಿಸಲಾಗಿದೆ. ಡಿ. ಇ. ಓ. ರವರು ಒಬ್ಬ ಗ್ರ್ಯಾಜ್ಯುಯೇಟ್ ಹೆಡ್ ಮಾಸ್ಟರನ್ನು ಪೋಸ್ಟು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಬಿ. ಎನ್. ರಾಮೇಗೌಡ.—ಅದಷ್ಟು ಬೇಗ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆಗಬಹುದು ಆದಷ್ಟು ಬೇಗ ಮಾಡಬಹುದು.

ಶ್ರೀ ಎಂ. ದೊಡ್ಡಣಗೌಡ.—ಏಡೆಡ್ ಶಾಲೆಗಳನ್ನು ಸರ್ಕಾರದವರು ವಹಿಸಿಕೊಳ್ಳುವ ಅಭಿಪ್ರಾಯ ಇದೆ. ಇದನ್ನು ಯಾವಾಗ ವಹಿಸಿಕೊಳ್ಳುವುದು ?

(ಉತ್ತರವಿಲ್ಲ)

ಶ್ರೀ ಎಂ. ನಾಗಪ್ಪ.—ಇವರು ಈಗ ಸ್ಪೆಸಿಫಿಕ್ ಆಗಿ ಕೇಳಿದ್ದಾರೆ. ತರಬೇತು ಹೊಂದಿದ ಪದವೀಧರ ಮುಖ್ಯೋಪಾಧ್ಯಾಯರೊಬ್ಬರನ್ನು ನೇಮಕ ಮಾಡಬೇಕೆಂದು ಹಾಗೂ ಸದರಿ ಶಾಲೆಯಲ್ಲಿ 7 ಅಥವಾ 8 ವರ್ಷಗಳಿಂದ ಇರುವ ಕೆಲವು ಉಪಾಧ್ಯಾಯರುಗಳನ್ನು ವರ್ಗಾವಣೆ ಮಾಡಬೇಕೆಂದು ಕೋರಿ ಸಾರ್ವಜನಿಕರಿಂದ ಸರ್ಕಾರದವರಿಗೆ ಅರ್ಜಿ ಏನಾದರೂ ಬಂದಿದೆಯೇ, ಎಂದು. ಮತ್ತು ತಾವು ಉತ್ತರ ಕೊಡುವಾಗ, ಮೂರು ವರ್ಷಕ್ಕೆ ಮೇಲ್ಪಟ್ಟು ಎಷ್ಟು ಜನ ಇದ್ದಾರೆಂದು ಕೇಳಿದ್ದಕ್ಕೆ, ತಾವು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ, ಮಾಹಿತಿ ಇಲ್ಲವೆಂದು ಹೇಳುತ್ತಿದ್ದೀರಿ. ಇದು ಇದೇ ಪ್ರಶ್ನೆಯಲ್ಲಿ ಬರುವುದಿಲ್ಲವೇ, ಸ್ವಾಮಿ !

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಾನು ಹಾಗೆ ಕೇಳಿಲ್ಲ.

[*Interruptions*]

Sri M. NAGAPPA.—Please bear with me. The question is specific. The question is how many teachers are there who have put in more than eight years of service. When the question is specific why should Deputy Minister say I do not know it ?

Sri N. M. KOTRABASAIAH SOGI.—I want notice.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಈ ಪ್ರಶ್ನೆ ಕ್ಲಿಯರ್ ಆಗಿದೆ. 7–8 ವರ್ಷಗಳಿಂದ ಆ ಸ್ಕೂಲಿನಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರು ಎಷ್ಟು ಜನ ಇದ್ದಾರೆ ಎಂದು ಕೇಳಿದರೆ ಅದಕ್ಕೆ ಮಾನ್ಯ ಮಂತ್ರಿಗಳು ನನ್ನ ಹತ್ತಿರ ಆ ಇನ್‌ಫರ್‌ಮೇಷನ್ ಇಲ್ಲ ಎಂದು ಹೇಳಿದರು. ಹಾಗಾದರೆ ಈ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರವನ್ನು ತರಿಸಲಿಲ್ಲ ಎಂದು ಅರ್ಥವೇ ?

Mr. SPEAKER.—Will it be possible for the Deputy Minister to place the information on the table of the House ?

Sri N. M. KOTRABASAIAH SOGI.—Yes Sir.

Sri M. NAGAPPA.—Please direct him to answer.

Mr. SPEAKER.—The Hon. Deputy Minister has agreed to place the information on the table of the House.

Sri M. NAGAPPA.—This question may be held over Sir.

Mr. SPEAKER.—All right. This question is held over. Please get the information.

Amendment to the Madras Aliyasanthana (Mysore Amendment) Act

864. Sri RATNAKUMAR KATTEMAR (Mudabidre).—

Will the Minister for Law, Labour and Parliamentary Affairs be pleased to state :—

(*a*) whether there is a proposal before the Government to bring an amendment Bill to the "Aliyasanthana Act" which is in force in South Kanara ;

(*b*) if so, the object of such amendment ;

(*c*) whether they are aware that as per the Hindu Succession Act and as per 1962 Aliyasanthana Amendment Bill, the Aliyasanthana Act has been sufficiently liberalised ;

(*d*) whether they had called for objections to this proposed amendment ;

(*e*) if so, the number of objections received and discussed on the matter ;

(*f*) whether this proposed amendment bill provides the retrospective rights and if so, from how many years ;

(*g*) whether this proposed bill will be able to reopen the settled family litigations or the compromise aggreements or settlements ;

(*h*) whether this proposed amendment Bill provides the rights of reclaiming the shares, or to re-open the settled matters, by the successors of the died perons such as children of the family ?

Sri K. PUTTASWAMY (Minister for Law, Labour and Parliamentary Affairs).—

(*a*) Yes. The Bill *viz.*, the Madras Aliyasanthana (Mysore Amendment) Bill, 1968 for the purpose has been published under rule 64 of the Rules of Procedure and Conduct of Business in the Mysore Legislative Assembly.

(*b*) In the Statement of objects and reasons to the Madras Aliyasanthana (Mysore Amendment) Bill, 1968, it is stated as follows :—

"Representations have been received that just as nis-santhathi kavarus have been conferred with the right to have their shares partitioned and to take such shares absolutely under Section

37A of the Madras Aliyasanthana Act, 1949 as amended by the Madras Aliyasanthana (Mysore Amendment) Act, 1961, provision may be made to enable Nis-santhathi kavarus who are parties to partitions claimed or effected before the commencement of the Mysore Amendment Act to get absolute rights in the shares allotted to them. It is, therefore, considered necessary to undertake legislation for the purpose.

Representations have also been received that the provisions of the Hindu Marriage Act, 1955 may be made applicable to persons governed by the Aliyasanthana Law to the same extent as they are applicable to Hindus governed by Mtihakshara Law.

In view of the provisions made in the Hindu Succession Act, 1956, the Hindu Minority and Guardianship Act, 1956, the Hindu adoptions and Maintenance Act, 1956, the provisions governing maintenance, guardianship and intestate succession in the Madras Aliyasanthana Act, 1949, are no longer necessary.

It is therefore, proposed to amend the Act, Hence the Bill''

(*c*) According to the provisions of Hindu Succession Act, in the case of a person governed by the Aliyasanthana law his or her heirs would be entitled to his or her share of the property of the kutumba or kavaru only on his or her death ; but the person concerned could not himself or herself enjoy the property by taking it at a partition. In order to enable such Hindus to take their share in the Kutumba or kavaru properties by partition during their life time also, provision was made in Section 37 A inserted by the Madras Aliyasanthana (Mysore Amendment) Act, 1961.

(*d*) Yes.

(*e*) Twenty-four.

(*f*) to (*h*) *Vide* replies to clause (*b*).

ಶ್ರೀ ರತ್ನಕುಮಾರ್ ಕಟ್ಟೀಮಾರ್.—ಸ್ವಾಮಿ ಅಳಿಯ ಸಂತಾನದ ಕಾನೂನು 1949ನೇ ಇಸವಿಯಲ್ಲಿ ತಿದ್ದುಪಡಿಯಾಗಿದೆ. ಆಮೇಲೆ 1956ನೇ ಇಸವಿಯಲ್ಲಿ ತಿದ್ದುಪಡಿಯಾಗಿದೆ. ಆ ನಂತರ 1961ನೇ ಇಸವಿಯಲ್ಲಿ ಹಿಂದೆ ಇದ್ದ ಆಕ್ಟಿಗೆ ಮೈಸೂರು ರಾಜ್ಯದ ತಿದ್ದುಪಡಿಯ ಮಸೂದೆ ಪ್ರಕಾರ ಮತ್ತೆ ತಿದ್ದುಪಡಿಯಾಗಿದೆ. ಈ ಮೂರು ತಿದ್ದುಪಡಿಗಳ ಸಹಾಯದಿಂದ ಎಷ್ಟೋ ಅಳಿಯ ಸಂತಾನ ಕುಟುಂಬಗಳು ತಮ್ಮ ಕೇಸುಗಳನ್ನು ಮುಗಿಸಿಕೊಂಡಿದ್ದಾರೆ. ಈಗ ಸರ್ಕಾರದವರು ಇನ್ನೊಂದು ತಿದ್ದುಪಡಿಯನ್ನು ತರುವುದರಿಂದ ಕ್ಲೋಸ್ ಆದಂತಹ ಕೇಸುಗಳು ಪುನಃ ರೀ ಓಪನ್ ಆಗುವ ಸಂದರ್ಭ ಬರುತ್ತದೆ. ಕೋರ್ಟು ವ್ಯವಹಾರಕ್ಕೆ ಲಾಭ ಆಗುವ ದೃಷ್ಟಿಯಿಂದ ಮತ್ತು ಕೆಲಸ ಇಲ್ಲದೆ ಇರತಕ್ಕ ವಕೀಲರಿಗೆ ಒಂದು ವೃತ್ತಿ ಸಿಕ್ಕಬೇಕು ಎನ್ನುವ ದೃಷ್ಟಿಯಿಂದ ಈಗ ತಾವು ಉದ್ದೇಶಿಸಿರುವ ತಿದ್ದುಪಡಿಯನ್ನು ತರುತ್ತೀರಾ ?

Sri K. PUTTASWAMY.—In the object and reasons attached to the Bill, all these are made clear.

ಶ್ರೀ ಎಚ್. ಎನ್. ನಂಜೇಗೌಡ.—ಈಗ ತಿದ್ದುಪಡಿ ತರುವುದರಿಂದ ಹಿಂದೆ ತೀರ್ಮಾನವಾಗಿರುವ ಕೇಸುಗಳು ಪುನರ್ವಿಮರ್ಶೆಗೆ ಬರುವ ಅವಕಾಶವಿಲ್ಲವೆ ? ಮತ್ತು, ಲಾಕ್ಯೂನವನ್ನು ಯಾವ ರೀತಿ ಸರಿಮಾಡುತ್ತೀರಾ ?

Sri K. PUTTASWAMY.—According to the Bill that is now published, it seeks to reopen the partitions, agreements and settlements. But that has not yet been passed by this House. The objections if any may be taken into consideration by the House and the Bill may be passed in a suitable manner.

ಶ್ರೀಮತಿ ಕೆ. ಲೀಲಾವತಿ ರೈ.—ಈ ಬಗ್ಗೆ 1946ರಲ್ಲಿ ಒಂದು ಮಸೂದೆ ಪಾಸಾಯಿತು, 1956ರಲ್ಲಿ ಒಂದು ಮಸೂದೆ ವಾಪಸಾಯಿತು. 1961ರಲ್ಲಿ ಇದೇ ಮಸೂದೆಗೆ ಒಂದು ತಿದ್ದುಪಡಿಯೂ ಸಹ ಆಯಿತು. ಈ ತಿದ್ದುಪಡಿಯ ಕಾರಣದಿಂದ ಕೆಲವು ಹೆಣ್ಣುಮಕ್ಕಳಿಗೆ ಆಸ್ತಿ ಸಿಗದೆ ಹಾದಿಯಲ್ಲಿ ಬೀಳುವ ಪರಿಸ್ಥಿತಿ ಬಂದಿದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಏನಾದರೂ ಏರ್ಪಾಡು ಮಾಡುತ್ತಿದ್ದಾರೆಯೇ ? ಹಿಂದಿನ ಮುಖ್ಯ ಮಂತ್ರಿಗಳು ಏನಾದರು ಒಂದು ವ್ಯವಸ್ಥೆ ಮಾಡಲಾಗುತ್ತದೆಂದು ಆಶ್ವಾಸನೆ ಕೊಟ್ಟಿದ್ದರು. ಈ ಬಗ್ಗೆ ಒಂದು ನಿರ್ಣಯ ಕೂಡ ಪಾಸಾಗಿತ್ತು. ಈಗ ಈ ವಿಚಾರದಲ್ಲಿ ಸರ್ಕಾರದವರು ತಿದ್ದುಪಡಿ ತರುವುದಾದರೆ ಸರ್ವರಿಗೂ ಅನುಕೂಲವಾಗುವಂತ ತಿದ್ದುಪಡಿಯನ್ನು ತರಬೇಕು ಮತ್ತು ಹೆಣ್ಣುಮಕ್ಕಳನ್ನು ಹಾದಿಯಲ್ಲಿ ಹಾಕುವಂತಹ ತಿದ್ದುಪಡಿ ತರಬಾರದೆಂದು ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ನಾನೇನೂ ಮಾಡುವುದಕ್ಕಾಗುವುದಿಲ್ಲ. ಏನು ಮಾಡಬೇಕಾದರೂ ಈ ಸಭೆ ಮಾಡಬೇಕಾಗುತ್ತದೆ. 1961ರಲ್ಲಿ ಆಗಿರತಕ್ಕಂಥ ತಿದ್ದುಪಡಿಯ ಪ್ರಕಾರ ಇತ್ತೀಚೆಗೆ ಆಗಿರತಕ್ಕಂಥ ವಿಭಾಗಗಳಲ್ಲಿ ಹೆಣ್ಣುಮಕ್ಕಳಿಗೆ ಮತ್ತು ಗಂಡುಮಕ್ಕಳಿಗೆ ಯಾವ ವಿಧವಾದಂಥ ವ್ಯತ್ಯಾಸವೂ ಆಗುತ್ತಿಲ್ಲ. ಈಗ ತರಬೇಕೆಂದು ಉದ್ದೇಶಪಟ್ಟಿರುವ ತಿದ್ದುಪಡಿಯ ಪ್ರಕಾರ 1961ಕ್ಕೆ ಹಿಂದೆ ಆದಂಥ ವಿಭಾಗಗಳಲ್ಲಿ ನಿಸ್ಸಂತತಿ ತವರುಗಳಿಗೆ ದೊರಕಿಸಿಕೊಟ್ಟಿದ್ದ ಆಸ್ತಿಯ ಪಾಲುಗಳ ಬಗ್ಗೆ ಪೂರ್ಣ ಅಧಿಕಾರ ಕೊಡುವ ಉದ್ದೇಶದಿಂದ ತಿದ್ದುಪಡಿ ತರುವ ಪ್ರಯತ್ನ ಮಾಡಿದೆ. ಅದು ಬಂದಂಥ ಸಮಯದಲ್ಲಿ ಮಾನ್ಯ ಸದಸ್ಯರುಗಳ ಅಭಿಪ್ರಾಯಗಳಿಗನುಸಾರವಾಗಿ ತಿದ್ದುಪಡಿಯನ್ನು ಪಾಸ್ ಮಾಡಬೇಕಾಗುತ್ತದೆ.

Sri BOLA RAGHURAMA SETTY.—This Bill affects lakhs of people in South Kanara District and therefore questions may be allowed.

Mr. SPEAKER.—It is quite open to the hon. Members to oppose or support it when it comes up for discussion. There are still 6 questions to be taken up now.

Now held over Question No. 144.

2-00 P.M.

Starred Question No. 144 *re* : New Railway lines in the State

ಶ್ರೀ ಎನ್. ಎ. ಚನ್ನೇಗೌಡ.—ಪಾಂಡವಪುರದಿಂದ ತುಮಕೂರು ಲೈನು ಸುಮಾರು 123 ಕಿಲೋ ಮೀಟರುಗಳಷ್ಟು ಇದೆ ಮತ್ತು ಇದಕ್ಕೆ ಸುಮಾರು ನಾಲ್ಕುವರೆ ಲಕ್ಷ ಖರ್ಚು ಬರುತ್ತೆ ಎಂದು ಇತ್ತು. ಇದನ್ನು ಕೇಂದ್ರ ಸರ್ಕಾರದವರು ಇದುವರೆಗೂ ಮಾಡಿಲ್ಲ. ಈಗಲಾದರೂ, ನಾಲ್ಕನೇ ಯೋಜನೆಯಲ್ಲಿ ಸೇರಿಸಲು ಪ್ರಯತ್ನ ಮಾಡುತ್ತೀರಾ ?

†ಶ್ರೀ ಬಸವರಾಜ ಮಾಗಾವಿ (ಲೋಕೋಪಯೋಗಿ ಶಾಖೆಯ ಉಪಮಂತ್ರಿಗಳು).—ನಾಲ್ಕನೇ ಯೋಜನೆಯಲ್ಲಿ ಸೇರಿಸಬೇಕು ಎಂದು ಹಿಂದಿನ ಮುಖ್ಯಮಂತ್ರಿಗಳೂ ಹೇಳಿದ್ದರು ಮತ್ತು ಈಗ ಇರುವ ಮುಖ್ಯ ಮಂತ್ರಿಗಳೂ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಅನೇಕ ಸಾರಿ ಪತ್ರಗಳನ್ನೂ ಬರೆದಿದ್ದಾರೆ. ಕೇಂದ್ರ ಸರಕಾರದವರು ನಾಲ್ಕನೇ ಯೋಜನೆಯಲ್ಲಿ ಸೇರಿಸಬೇಕು ಎನ್ನುವ ತೀರ್ಮಾನ ತೆಗೆದುಕೊಂಡಿಲ್ಲ. ಆ ತೀರ್ಮಾನ ತೆಗೆದುಕೊಂಡ ಮೇಲೆ ಅದನ್ನು ಈ ಸಭೆಗೆ ತಿಳಿಸಲು ಸಾಧ್ಯವಾಗುತ್ತದೆ.

ಶ್ರೀ ಹೆಚ್. ಎನ್. ನಂಜೇಗೌಡ.—ಹಿಂದೆ ನಾನು ಇಲ್ಲಿ ಯಾವ ರೈಲು ಮಾರ್ಗಗಳನ್ನು ಮಾಡಬೇಕೆಂದು ಕೇಂದ್ರಕ್ಕೆ ಬರಿದಿದ್ದೀರಿ ಎಂದು ಕೇಳಿದಾಗ ಹುಬ್ಬಳ್ಳಿಯಿಂದ ಶಿರಸಿ ಮಾರ್ಗವಾಗಿ ಕಾರವಾರ ಲೈನು ಇರಲಿಲ್ಲ. ಇದರಲ್ಲಿ ಯಾವುದು ನಿಜ ?

ಶ್ರೀ ಬಸವರಾಜ ಮಾಗಾವಿ.—ಹಿಂದೆಯೇ ಕಾರವಾರಕ್ಕೆ ಲೈನು ರೆಕಮೆಂಡು ಮಾಡುವಾಗ ಸಿರ್ಸಿ ಮಾರ್ಗವಾಗಿಯೂ ಇನ್ನೊಂದು ತಾಳಗುಪ್ಪಾ ವಯಾ ಸಿರ್ಸಿಯಿಂದ ಕಾರವಾರಕ್ಕೆ ಎಂದು ಎರಡು ಲೈನುಗಳನ್ನೂ ರೆಕಮೆಂಡು ಮಾಡಲಾಗಿತ್ತು. ಕಾರವಾರ ಜಿಲ್ಲೆಯಲ್ಲಿ ಸಿರ್ಸಿ ಒಂದು ಪ್ರಾಮುಖ್ಯ ಕೇಂದ್ರ ಎಂದು ಇಲ್ಲಿಗೆ ರೈಲ್ವೆ ಲೈನು ಹಾಕಬೇಕು ಎಂದು ಸರಕಾರ ಶಿಫಾರಸನ್ನು ಮಾಡಿದೆ.

ಶ್ರೀ ಎಂ. ನಾಗಪ್ಪ.—ಇಲ್ಲಿನ ಪಟ್ಟಿ ನೋಡಿದರೆ ರಾಯಚೂರು ಜಿಲ್ಲೆ ಕೈಬಿಟ್ಟ ಹಾಗೆ ಕಾಣುತ್ತದೆ. ಹಿಂದೆ ನಿಜಾಂ ಸರಕಾರವಿದ್ದಾಗಲೇ 1939ರಲ್ಲಿ ಒಂದು ಲೈನಿಗೆ ಎಸ್ಟಿಮೇಟು ಆಗಿ ಸರ್ವೆ ಆಗಿತ್ತು. ಅದು ಗದ್ವಾಲ್ ಟು ರಾಯಚೂರು ಮತ್ತು ರಾಯಚೂರು ಟು ಬಾಗಲ್‌ಕೋಟ್ ಎಂದು ಇತ್ತು, ಈಗಲಾದರೂ ಇದನ್ನು ನಾಲ್ಕನೇ ಯೋಜನೆಯಲ್ಲಿ ಸೇರಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಉತ್ತರದಲ್ಲಿ ಇಲ್ಲದೇ ಇದ್ದರೂ ಇನ್ನೂ ಕೆಲವಾರು ರೈಲ್ವೆ ಲೈನುಗಳ ಬಗ್ಗೆ ಕೇಂದ್ರ ಸರಕಾರಕ್ಕೆ ರೆಕಮೆಂಡು ಮಾಡಲಾಗಿದೆ. ಅವರು ಬಹುಶಃ ಎಲ್ಲವನ್ನೂ ವಿಚಾರಮಾಡಿ ಹಂತ ಹಂತವಾಗಿ ಮಾಡಿ ಒಂದೊಂದಾಗಿ ತೆಗೆದುಕೊಳ್ಳುತ್ತಾರೆ.

ಶ್ರೀ ಶರಣಗೌಡ ಇನಾಂದಾರ್.—ನಾಲ್ಕನೇ ಯೋಜನೆಯಲ್ಲಿ ಇಂತಿಂತಹ ರೈಲ್ವೆ ಲೈನುಗಳನ್ನು ಮಾಡುವಾಗ ಇದರಲ್ಲಿ ಪ್ರಯಾರಿಟಿ ಲಿಸ್ಟು ಎಂದು ಏನಾದರೂ ಮಾಡಿದ್ದೀರಾ ?

ಶ್ರೀ ಬಸವರಾಜ ಮಾಗಾವಿ.—ಪ್ರಯಾರಿಟಿ ಲಿಸ್ಟ್ ಅಲ್ಲದೆ ವರ್ಕಿಂಗ್ ಗ್ರೂಪ್ ಎಂದು ಮಾಡಿಕೊಂಡು ಸರಕಾರ ವರದಿಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸುತ್ತಾರೆ. ಅದರಂತೆ ಎಲ್ಲೆಲ್ಲಿ ಲೈನುಗಳನ್ನು ಹಾಕಬೇಕು ಎನ್ನುವುದನ್ನು ನೋಡಿಕೊಂಡು ಮಾಡುತ್ತಾರೆ.

ಶ್ರೀ ಎಂ. ಎನ್. ರಾಮಣ್ಣ.—ಪಾಂಡವಪುರದಿಂದ ತುಮಕೂರಿಗೆ ರೈಲ್ವೆ ಲೈನು ಹಾಕಬೇಕು ಎಂದು ಎಷ್ಟು ವರ್ಷಗಳಿಂದ ಕೇಳುತ್ತಿದ್ದಾರೆ ಎನ್ನುವುದು ಗೊತ್ತಿದೆಯೇ ?

ಶ್ರೀ ಬಸವರಾಜ ಮಾಗಾವಿ.—ಸಂಪೂರ್ಣವಾಗಿ ಗೊತ್ತಿದೆ. ಇದರ ಬಗ್ಗೆ ಸವಿಸ್ತಾರವಾಗಿ ಕೇಂದ್ರಕ್ಕೆ ಕಾಗದಗಳನ್ನೂ ಬರೆದಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—1953ನೇ ಇಸವಿಯಲ್ಲಿ ಮದ್ರಾಸ್ ಮಂಗಳೂರು ರೈಲ್ವೆ ಮಾರ್ಗವಾಗಬೇಕು ಮತ್ತು ಕೋಸ್ಟ್ ಟು ಕೋಸ್ಟ್ ರೂಟನ್ನು ಮಾಡಬೇಕು ಎಂದು ಬೆಂಗಳೂರಿಂದ ಹಾಸನ ಮಂಗಳೂರು ರೈಲ್ವೆ ಲೈನು ಮಾಡುವಾಗ ಶಿಪಾರಸು ಮಾಡಲಾಗಿತ್ತು. ಮತ್ತು ಬೆಂಗಳೂರು ಟು ಹಾಸನ್ ಬ್ರಾಡ್‌ಗೇಜು ಮಾಡಬೇಕೆಂದೂ ಇರಲಿಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ಬ್ರಾಡ್‌ಗೇಜ್ ಲೈನು ಮಾಡಬೇಕು ಎಂದು ಶಿಫಾರಸನ್ನು ಕಳುಹಿಸಲಾಗಿತ್ತು. ಆದರೆ ಹಾಸನ ಮಂಗಳೂರು ರೈಲ್ವೆ ಲೈನು ಈಗ ಮೀಟರು ಗೇಜಿನಲ್ಲಿ ಮಾಡುತ್ತಿದ್ದರೂ ಇದನ್ನು ಬೇಕಾದಾಗ ಬ್ರಾಡ್‌ಗೇಜಿಗೆ ಪರಿವರ್ತಿಸಿಕೊಳ್ಳಬಹುದು. ಇದರಂತೆ ಇಲ್ಲಿ ರೈಲ್ವೆ ಲೈನು ನಿರ್ಮಾಣವಾಗುತ್ತಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಹೇಳಿದುದು ಇದಲ್ಲ. ಬೆಂಗಳೂರಿನಿಂದ ಹಾಸನಕ್ಕೆ ಬ್ರಾಡ್‌ಗೇಜು ಮಾಡುವಾಗ ನೆಲಮಂಗಲ, ಕುಣಿಗಲ್ ಚನ್ನರಾಯಪಟ್ಟಣದ ಮಾರ್ಗವಾಗಿ 1953ರಲ್ಲಿ ಬ್ರಾಡ್ ಗೇಜು ಲೈನು ಮಾಡಬೇಕೆಂದು ಆಗಿನ ಸರಕಾರ ಶಿಫಾರಸು ಮಾಡಿರಲಿಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ಇದೂ ಇದೆ. ಇದಲ್ಲದೆ ಗುಂತಕಲ್ ನಿಂದ ಭಟ್ಕಳ್‌ವರೆಗೆ ಪ್ರಾಶಸ್ತ್ಯ ಕೊಟ್ಟಿಲ್ಲ.

ಶ್ರೀ ಎಂ. ಎಂ. ಜಾಲಿಸಟಗಿ.—ಭಟ್ಕಳ್ ನಿಂದ ಕಾರವಾರಕ್ಕೆ ಒಂದು ಲೈನು ಹಾಕಬೇಕು ಎಂದು ಸರ್ವೆ ಆಗಿ ಅಂದಾಜುಗಳು ಕೂಡ ಮಾಡಿ ಶಿಫಾರಸು ಮಾಡಿರಲಿಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ಮಂಗಳೂರು ಬಂದರು ಈಗ ನಿರ್ಮಾಣವಾಗುತ್ತಿರುವುದರಿಂದ ಭಟ್ಕಳ್‌ನಿಂದ ಹೊನ್ನಾವರದ ಮಾರ್ಗವಾಗಿ ಕಾರವಾರಕ್ಕೆ ಒಂದು ಲೈನು ಹಾಕಬೇಕು ಎಂದು ಶಿಫಾರಸು ಮಾಡಲಾಗಿದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಹರಿಹರದಿಂದ ಶಿವಮೊಗ್ಗ-ಭದ್ರಾವತಿ, ಚಿಕ್ಕಮಗಳೂರು ಮಾರ್ಗವಾಗಿ ಮೂಡಬಿದ್ರಿಗೆ ಎಂದು ಇದೆ. ಈಗಾಗಲೇ ಕಡೂರುವರೆಗೆ ಲೈನು ಇದೆ. ಇದನ್ನು ಮುಂದೆ ಭದ್ರಾವತಿವರೆಗೆ ತೆಗೆದುಕೊಂಡು ಹೋಗಿ ಮೂಡಬಿದ್ರಿವರೆಗೆ ಸೇರಿಸುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಕೊಟ್ಟೂರು-ಹರಿಹರ ಲೈನ್ ಹಾಕಿ ಅದನ್ನು ಹಾಸನ-ಮಂಗಳೂರು ಲೈನ್‌ಗೆ ಸೇರಿಸಿದರೆ ಐರನ್ ಓರ್ ತೆಗೆದುಕೊಂಡು ಹೋಗಲು ಅನುಕೂಲವಾಗುತ್ತದೆ ಎಂದು ಅದನ್ನು ಮಾಡಿದ್ದೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈಗಾಗಲೇ ಹಾಸನ-ಮಂಗಳೂರು ಲೈನ್ ಕನ್‌ಸ್ಟ್ರಕ್ಷನ ನಡೆಯುತ್ತಾ ಇದೆ. ಕೊಟ್ಟೂರು-ಮಂಗಳೂರು ಲೈನ್ ನಿರ್ಮಾಣ ಆಗಬೇಕಾಗಿತ್ತು. ಈಗ ಆಗಿರತಕ್ಕಂಥಾದ್ದದರಲ್ಲಿ ಕೊಟ್ಟೂರು-ಮಂಗಳೂರು ಲೈನನ್ನು ಸಕಲೇಶಪುರ ಮಾರ್ಗವಾಗಿ ಮಾಡಬಹುದಾಗಿತ್ತು. ಅದಕ್ಕೇನಾದರೂ ರೆಕಮೆಂಡ್ ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಪರಿಶೀಲನೆ ಮಾಡಿ ಅದರ ಸಾಧ್ಯಾಸಾಧ್ಯತೆಯನ್ನು ನೋಡಿ ಮಾಡುತ್ತೇವೆ.

ಶ್ರೀ ಕೆ. ಸಂಗನಗೌಡ.—ಸ್ವಾಮಿ, 50 ವರ್ಷದಿಂದಲೂ ಪ್ರಯತ್ನ ಮಾಡುತ್ತಾ ಇದ್ದೀರಿ. ಸೋಲಾಪುರ-ವಾಡಿ ಲೈನ್ ಇದೆ. ಆದುದರಿಂದ ಗದಗ್-ವಾಡಿ ಲೈನ್‌ನ್ನು 4ನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಗದಗ್-ವಾಡಿ ಲೈನನ್ನು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಕಾದು ನೋಡಬೇಕಾಗಿದೆ.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಹಾಸನ-ಮಂಗಳೂರು ರೈಲ್ವೆ ಲೈನು ಮೀಟರ್‌ಗೇಜ್ ಇರುವುದನ್ನು ಬ್ರಾಡ್‌ಗೇಜ್ ಆಗಿ ಪರಿವರ್ತನೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಈಗ ಇರುವುದರಲ್ಲೇ ಬ್ರಾಡ್‌ಗೇಜ್ ಆಗಿ ಪರಿವರ್ತನೆ ಮಾಡುವುದಕ್ಕೆ ಎಲ್ಲಾ ಅನುಕೂಲತೆಗಳು ಇರುವ ಹಾಗೆ ವ್ಯವಸ್ಥೆ ಮಾಡಿದ್ದೇವೆ. ಈಗ ಹಾಸನ-ಮಂಗಳೂರು ಲೈನ್‌ನ್ನು ಬ್ರಾಡ್‌ಗೇಜ್ ಮಾಡಿದರೆ ಸೆಂಟರಿಂಗ್ ಡಿಫಿಕಲ್ಟೀಸ್ ಬರುತ್ತದೆ. ಆದುದರಿಂದ ಮೀಟರ್‌ಗೇಜ್ ಆಗಿ ಮುಂದುವರಿಸಿಕೊಂಡು ಹೋಗಿದ್ದೇವೆ. ಯಾವಾಗಲಾದರೂ ಬ್ರಾಡ್‌ಗೇಜ್ ಆಗಿ ಪರಿವರ್ತನೆ ಮಾಡಲು ಎಲ್ಲಾ ವ್ಯವಸ್ಥೆಗಳನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಸ್ವಾಮಿ, ಎಲ್ಲಾ ಸದಸ್ಯರ ಪ್ರಶ್ನೆಗಳಿಗೂ ಶಿಫಾರಸ್ಸು ಮಾಡುತ್ತೇವೆ ಎಂದು ಹೇಳಿದಿರಿ. ಬಹಳ ವರ್ಷದಿಂದಲೂ ಶಿಫಾರಸ್ಸು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ನೀವು ಏನು ಏನು ಶಿಫಾರಸ್ಸುಗಳನ್ನು ಮಾಡುತ್ತೀರೋ ಅದಕ್ಕೆ ಅಲ್ಲಿ ಹೆಚ್ಚು ಗಮನ ಕೊಡುವುದಿಲ್ಲ ಎಂದು ಪಾರ್ಲಿಮೆಂಟ್ ಮೆಂಬರ್ ಕೂಡ ಹೇಳುತ್ತಿದ್ದಾರೆ. ಅದುದರಿಂದ ಅದರಲ್ಲಿ ಒಂದೆರಡು ಶಿಫಾರಸ್ಸನ್ನಾದರೂ ಕಾರ್ಯಗತ ಮಾಡುವುದಕ್ಕೆ ಕೇಂದ್ರದವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುತ್ತೀರಾ ? ಅದು ಎಷ್ಟು ವರ್ಷದಲ್ಲಿ ಆಗಬಹುದು ?

ಶ್ರೀ ಬಸವರಾಜ ಮಾಗಾವಿ.—ನಾವು 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಯತ್ನ ಮಾಡಿದ್ದರಿಂದಲೇ ಕೊಟ್ಟೂರು—ಹರಿಹರ, ಯಶವಂತಪುರ—ಚಿತ್ರದುರ್ಗ ಇದನ್ನು 1969-70ರಲ್ಲಿ ಸರ್ವೆ ಪ್ರೋಗ್ರಾಂ ಇಟ್ಟುಕೊಂಡು ಸರ್ವೆ ನಡೆಸುವುದಕ್ಕೆ ಒಪ್ಪಿದ್ದಾರೆ. ಮತ್ತು ಗುಂತಕಲ್—ಧರ್ಮಾವರ ಲೈನ್ ಕೂಡ ಬ್ರಾಡ್‌ಗೇಜ್ ಹಾಕುವುದಕ್ಕೆ ಒಪ್ಪಿಗೆ ಸಿಕ್ಕಿದೆ. ಅಲ್ಲದೆ ಗುಂತಕಲ್—ಬೆಂಗಳೂರು ಲೈನೂ ಶೀಘ್ರದಲ್ಲೇ ಪೂರೈಸಲಾಗುತ್ತದೆ.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ, ತಾವು (ಅ) ಗೆ ಉತ್ತರವಾಗಿ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ ಎಂದು ಹೇಳಿದಿರಿ. ಪಾವಗಡ—ತುಮಕೂರು ಲೈನನ್ನು ಮುಂದುವರಿಸಿದರೆ, ಅಂದರೆ ಪಾವಗಡ—ತುಮಕೂರು—ಕೊರಟಗೆರೆ—ಮಧುಗಿರಿ ಅಲ್ಲಿಂದ ಅನಂತಪುರದವರೆಗೂ ಮುಂದುವರಿಸಿದರೆ ಅಲ್ಲಿರತಕ್ಕಂಥ ಜನಗಳಿಗೆ ವ್ಯಾಪಾರಕ್ಕೆ ಅನುಕೂಲವಾಗುತ್ತದೆ. ಅದನ್ನು ಸರ್ಕಾರದವರು ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಹೇಳಿದಂಥ ಸೂಚನೆ ತೆಗೆದುಕೊಂಡು ಮಾಡಬಹುದು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸ್ವಾಮಿ, ಈಗ ಸತ್ಯಮಂಗಲ—ಚಾಮರಾಜನಗರ ರೈಲ್ವೆ ಲೈನ್ ಯಾವ ಸ್ಥಿತಿಯಲ್ಲಿದೆ ? ಅದನ್ನು ಬಹಳ ವರ್ಷದಿಂದಲೂ ಕೇಳುತ್ತಿದ್ದಾರೆ. ಅದು ಯಾವ ಹಂತದಲ್ಲಿ ನಡೆಯುತ್ತಾ ಇದೆ ?

ಶ್ರೀ ಬಸವರಾಜ ಮಾಗಾವಿ.—ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಎನ್. ಎ. ಚನ್ನೇಗೌಡ.—ಅತಿ ಶೀಘ್ರದಲ್ಲಿಯೇ ಟ್ರಾಫಿಕ್ ಸರ್ವೆ ಮತ್ತು ಇಂಜನಿಯರಿಂಗ್ ಸರ್ವೆ ಮಾಡಿಸುವುದಕ್ಕೆ ತೀವ್ರ ಪ್ರಯತ್ನವನ್ನು ಮಾಡಿ ಯಶಸ್ವಿಯಾಗುತ್ತೀರಾ ಸ್ವಾಮಿ ?

ಶ್ರೀ ಬಸವರಾಜ ಮಾಗಾವಿ.—ಅದನ್ನು ಮಾಡಬಹುದು.

Mr. SPEAKER.—Question Hour is over the held over question Nos. 368, 527, 599, 617 and 847 will be taken up tomorrow.

Question for Answer on the Day (but not taken up)

Implementation of Sri Mukharji's Report on Family Planning

447. Sri MAHADEVA BANAKAR (Byadgi),—

Will the Minister for Health be pleased to state :—

(a) the reason for not yet implementing the report on family planning submitted by Sri Mukharji;

(b) whether it is a fact that the Pay Commission and Finance Department have also accepted the said report ;

(c) whether it is a fact that the promotions of many officials have been delayed for want of implementations of the said report;

(d) if so, when the same will be implemented ?

Sri Y. RAMAKRISHNA (Minister for Health). —

(a) Out of the eleven recommendations made by Sri Mukharji in his report on family planning, the State Government have implemented eight recommendations. Two recommendations are under the active consideration of the Government. The Central Government has implemented the remaining one.

(b) The Pay Commission and the Finance Department have agreed for the implementation of the recommendations made in Mukharji Committee's report, whenever necessary ;

(c) No.

(d) Does not arise in view of the reply to clause (c).

Relief to Ryots affected by Floods in S. K. District.

474. Sri P. V. AITHALA (Surathkal).—

Will the Minister for Revenue be pleased to state :—

(a) the number of acres of fields in South Kanara district in which crops were destroyed due to the unprecedented floods in July August 1968 ;

(SRI P. V. AITHALA)

(*b*) whether any cash relief has been given to the ryots or the tenants whose crops were so destroyed by floods ;

(*c*) whether there is any proposal before Government to amend the financial code so as to enable the Government to provide cash relief to the thousands of ryots or tenants whose crops were destroyed by floods during July-August 1968 ;

(*d*) whether they have given any cash relief to the flood victims in South Kanara District whose immovable properties like wells, tanks and Building other than residential houses were destroyed or damaged by floods ;

(*e*) if there is no provision in the Financial Code for granting cash relief in such cases, whether the Government would amend the financial code and extend the relief ;

(*f*) number of such cases in South Kanara District may be mentioned ?

Sri H. V. KOUJALGI (Minister for Revenue).—

(*a*) About 2,000 acres were affected.

(*b*) No.

(*c*) No.

(*d*) No.

(*e*) The matter could be examined.

(*f*) One case of damage to drinking water well and damages to 12 buildings other than residential houses are reported so far.

Budget Allotment to Karanja Irrigation Project

605. Sri S. BHIMANNA (Bhalki).—

Will the Chief Minister be pleased to state :—

(*a*) the amount allotted for Karanja Irrigation Project in the budget for the year 1967-68 ;

(*b*) the extent of amount spent so far on it ;

(*c*) the type of works that is going on the spot ?

Sri VEERENDRA PATIL (Chief Minister).—

(*a*) Nil.

(*b*) Does not arise in view of reply to (*a*) above.

(*c*) Investigation has been completed.

Arrest and Release of Members Announcement

MR. SPEAKER.—Before we proceed to the next item I have to announce that I have received a communication dated 13th March 1969 from the Commissioner of Police, Bangalore, stating that Sriyuts: Vatal Nagaraj, T. R. Shamanna and M. S. Krishnan, Members of the Legislative Assembly were arrested at 7.25 P.M. on 12th March 1969 under sections 143, 341 and 332 of the I.P.C. and they were released on bail at 10-30 P.M.

SRI S. SIVAPPA.—According to the information supplied to the Hon. Speaker may I know why the members were arrested and why they were released ?

MR. SPEAKER.—I have not got that information. The intimation given is that they were arrested under sections 143, 341 and 332 of the I.P.C. and that they were released. I have not got the details.

Notice of Question of Privilege with Regard to Coment of Sri T. R. Shamanna

† ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ನಿನ್ನೆಯ ದಿವಸ ವಸ್ತು ಪ್ರದರ್ಶನದ ಉದ್ಘಾಟನೆ ಸಂದರ್ಭದಲ್ಲಿ ಸಾಂಕೇತಿಕವಾಗಿ, ಪ್ರಜಾಪ್ರಭುತ್ವಕ್ಕೆ ವಿರೋಧವಾಗಿ ಹೋಗದೆ, ನಾನು, ಶ್ರೀ ಟಿ. ಆರ್. ಶಾಮಣ್ಣ ಮತ್ತು ಶ್ರೀ ಎಂ. ಎಸ್. ಕೃಷ್ಣನ್ ಅವರು, ಒಂದು ಪ್ರದರ್ಶನವನ್ನು ಶಾಂತ ರೀತಿಯಿಂದ ನಡೆಸಿದೆವು. ನಮ್ಮಿಂದ ಶಾಂತಿಗೆ ಯಾವ ರೀತಿಯಲ್ಲಿಯೂ ಭಂಗ ಬಂದಿಲ್ಲ. ಅಲ್ಲಿ ನಮ್ಮ ರಾಜ್ಯದ ಮಂತ್ರಿಗಳು ಅನೇಕರಿದ್ದರು. ನಾವು ಎಂ. ಎಸ್. ಆರ್.ಟಿ.ಸಿ.ಗೆ ಸೇರಿದ ಜಾಗದಲ್ಲಿ ನಿಂತುಕೊಂಡು ನಮ್ಮ ಪ್ರತಿಭಟನೆಯನ್ನು ತೋರಿಸುತ್ತಿರುವಾಗ ಪೋಲೀಸ್ ಕಮಿಷನರು ಬಂದು ನಮ್ಮನ್ನು ವಿನಾಕರಣ ದಸ್ತಗಿರಿ ಮಾಡಿ ನಮ್ಮ ಮೇಲೆ ಕೇಸು ಹಾಕಿ ರಾತ್ರಿ 9-30ಕ್ಕೆ ಬಿಟ್ಟರು. ಈ ದೇಶದಲ್ಲಿ, ಈ ರಾಜ್ಯದಲ್ಲಿ ಯಾವುದಾದರೂ ಜನತೆಗೆ ಅನ್ಯಾಯವಾಗತಕ್ಕ ಕೆಲಸ ನಡೆಯುತ್ತಿದ್ದರೆ ಅದಕ್ಕೆ ಪ್ರತಿಭಟನೆಯನ್ನು ತೋರಿಸಬಾರದೇ? ನಾವು ಈ ರೀತಿ ಮಾಡುತ್ತಿದ್ದಾಗ ನಮ್ಮನ್ನು ದಸ್ತಗಿರಿ ಮಾಡಿರುವುದು ನಮ್ಮ ಕರ್ತವ್ಯಕ್ಕೆ ಚ್ಯುತಿ ಮಾಡಿದಂತಾಗಿದೆ ನಾನು ಇದರ ಬಗ್ಗೆ ಒಂದು ಹಕ್ಕುಬಾಧ್ಯತಾ ಸೂಚನೆಯನ್ನು ಕಳಿಸಿಕೊಟ್ಟಿದ್ದೇನೆ. ಅದಕ್ಕೆ ತಾವು ಅನುಮತಿ ಕೊಟ್ಟು ಅದರ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಸ್ವಾಮಿ, ನಾನು ಹೇಳುವುದು ಇಷ್ಟೆ. ಅನ್ಯಾಯ, ಅಕ್ರಮಗಳು ನಡೆದಾಗ ಅಂಥವನ್ನು ಪ್ರತಿಭಟನೆ ಮಾಡಬೇಕಾಗುತ್ತದೆ. ನಿನ್ನೆಯ ದಿನ ಅಂಥ ಒಂದು ಸಂದರ್ಭದಲ್ಲಿ ನಾವು ಪ್ರತಿಭಟನೆಯನ್ನು ತೋರಿಸುವುದಕ್ಕೆ, ಬೆಂಗಳೂರು ನಾಗರಿಕರ ಪ್ರತಿನಿಧಿಗಳಾದ ಶಾಸನ ಸಭಾ ಸದಸ್ಯರಾದ ನಾವುಗಳು ಹೋಗಿದ್ದೆವು. ಜನತೆಯ ಪ್ರತಿನಿಧಿಗಳಾಗಿ ನಾವು ಆ ರೀತಿ ಮಾಡುವುದಕ್ಕೆ ಅಧಿಕಾರವಿಲ್ಲವೆಂದರೆ ಎಂಥ ಪ್ರಜಾಪ್ರಭುತ್ವ ಎಂಥ ನ್ಯಾಯ! ಯಾವ ವಿಧವಾದ ತೊಂದರೆಯನ್ನೂ ಕೊಡದೆ ನಾವು ಶಾಂತವಾಗಿ ಪ್ರತಿಭಟನೆಯನ್ನು ಸೂಚಿಸುವಾಗ ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವುದಾದರೆ ಇದು ಎಂಥ ರಾಜ್ಯ! ನಮ್ಮನ್ನು ಪೋಲೀಸಿನವರು ವ್ಯಾನ್‌ನಲ್ಲಿ ಕರೆದುಕೊಂಡು ಹೋಗಿ ಅನಂತರ ಬಿಟ್ಟರು. ಹೀಗೆ ಮಾಡಲು ಇದೇನು ಪೋಲೀಸು ರಾಜ್ಯವೇ? ಇದಕ್ಕೆ ರಕ್ಷಣೆ ಕೊಡದೆ ಹೋದರೆ ಖಂಡಿತವಾಗಿ ನಾವು ಸಹಿಸುವುದಕ್ಕಾಗುವುದಿಲ್ಲ.

† SRI V. N. PATIL (Humnabad).—Sir, these people were protesting against the undemocratic attitude of the Government by virtue of their inherent right as Members of the legislature. The protest was against

(SRI V. N. PATIL)

the undemocratic method pursued by the Government. When undemocratic methods were pursued, they were rightly pursuing a policy of expressing mass protest and the undemocratic method adopted by the Government in suppressing such protest for the benefit of one party, the Congress party is not correct. This House is seized of this matter and this subject has come up for discussion several times. When these things were going on here, and when no decision was taken and when Congress exhibition was organised there, as a token protest of the masses, these hon. Members were there. The arbitrary method adopted by the party in power is most undemocratic. This is not a welfare State but actually a police State. These hon. Members were here yesterday till 7 P.M. and they were arrested at 7-30 P.M. and released at 9-30 P.M. During this period the legislators have not been supplied even with a cup of coffee and were treated like ordinary prisoners. This should not happen. There must be sense in everything. We strongly protest against the method adopted by the Government.

† Sri B. P. GANGADHAR.—In support of that I am trying to convince the Chair that it is a question of privilege. Such things are allowed in this House.

ಸುಭಾಸ್ ನಗರವನ್ನು ಕಾಂಗ್ರೆಸ್ ಪಕ್ಷಕ್ಕೆ ಕೊಡುವುದಿಲ್ಲ ಎಂದು ಡಿಕ್ಲರೇಷನ್ ಕೊಡಿ, ಹಾಗೆ ಮಾಡಿದರೆ ಕಾಂಪ್ಲಿಕೇಷನ್ ಆಗುವುದಿಲ್ಲ ಎಂದು ಹೇಳಿದರೆ ಕೇಳಬೇಡವೇ? ಸರಕಾರದ ಮನಸ್ಸಿನಲ್ಲೇನಿದೆಯೋ ಏನೋ? ಬಹುಶಃ ಈ ಸಭೆ ಮುಗಿದಮೇಲೆ ಸರಕಾರ ತನ್ನ ಮನಸ್ಸಿಗೆ ಬಂದ ಹಾಗೆ ಮಾಡಬಹುದು, ಆಮೇಲೆ ಏನು ಬೇಕಾದರೂ ಮಾಡಿಕೊಳ್ಳಲಿ, ನೋಡೋಣ ಎಂಬುದು ಸರಕಾರದ ಮನಸ್ಸಿನಲ್ಲಿರಬಹುದು. ಸರಕಾರ ಇಂದು ಒಂದು ಡಿಕ್ಲರೇಷನ್ ಕೊಟ್ಟಿಲ್ಲದಿರುವುದರಿಂದ ನಮಗೆ ಅನುಮಾನವಿದೆ. ಯಾವಾಗ ಬೇಕಾದರೂ ಸರಕಾರ ತನ್ನ ಮನಸ್ಸಿಗೆ ಬಂದಹಾಗೆ ಸುಭಾಸ್ ನಗರವನ್ನು ಡಿಸ್‌ಪೋಸ್ ಮಾಡಬಹುದು. ನನ್ನ ಮಿತ್ರರು ಕೆಲವರು ಈ ಆಸ್ತಿಯನ್ನುಳಿಸಬೇಕು ಎಂದು ಪ್ರೊಟೆಸ್ಟ್ ಮಾಡಿದರು. ಪ್ರಜಾಪ್ರಭುತ್ವದಲ್ಲಿ ಹಾಗೆ ಮಾಡಲು ಹಕ್ಕಿದೆ. ಅವರು ಮಾಡಿರುವುದು ತಪ್ಪಲ್ಲ. ಅವರು ಬರೀ ಕಪ್ಪು ಬಾವುಟದ ಪ್ರದರ್ಶನ ನಡೆಸಿದರು. 99 ವರ್ಷಗಳ ಗುತ್ತಿಗೆಗೆ ಕೊಡಬಾರದು-ಎಂದು ಪ್ರತಿಭಟಿಸಿದರೆ ಅದು ಸರಿಯಾಗಿರುವಾಗ ಪ್ರೊಟೆಸ್ಟ್ ಮಾಡಿದರೆ ಪ್ರತಿಭಟಿಸಿದವರನ್ನು ಅರೆಸ್ಟ್ ಮಾಡುವುದು, ಅವರಿಗೆ ತೊಂದರೆ ಮಾಡುವುದು, ಪೋಲೀಸಿನವರಿಂದ ಹಿಂಸೆ ಮಾಡಿಸುವುದು ಸರಿಯಲ್ಲ. ಅದಕ್ಕಾಗಿ ಪ್ರಿವಿಲೇಜ್ ಮೋಷನ್ನನ್ನು ಕಳಿಸಿದ್ದಾರೆ. ಸರಕಾರ ತಪ್ಪು ಮಾಡಿದಾಗ ಅದಕ್ಕಾಗಿ ಪ್ರೊಟೆಸ್ಟ್ ಮಾಡಿದರೆ, ಮಾಡಿದ್ದು ಸರಿಯೇ, ಅಲ್ಲವೇ ಎಂದು ನೋಡದೆ ಪೋಲೀಸಿನವರಿಗೆ ಹೇಳಿ ಅರೆಸ್ಟ್‌ಮಾಡಿಸುವುದು ಸರಿಯೇ? ಈ ರೀತಿ ಮಾಡುವುದು ಪ್ರಜಾಪ್ರಭುತ್ವದ ತತ್ವಕ್ಕೆ ವಿರುದ್ಧವಾಗಿದೆ. ಪೋಲೀಸಿನವರನ್ನು ಬಿಟ್ಟು ಅರೆಸ್ಟ್ ಮಾಡಿಸಿರುವುದು ಅನ್ಯಾಯ. ಇದರಿಂದ ಬ್ರೀಚ್ ಆಫ್ ಪ್ರಿವಿಲೇಜ್ ಆಗಿದೆ ಎಂದು ಸೂಚನೆ ಕಳಿಸಿರುವುದರಿಂದ ಅದನ್ನು ಒಪ್ಪಿ ಅವರ ಚರ್ಚೆಗೆ ಅವಕಾಶ ಕೊಡಬೇಕು ಎಂದು ಕೇಳುತ್ತೇನೆ.

Mr. SPEAKER.—Sri Vatal Nagaraj has given notice of question of privilege under rule 177 of the Rules of Procedure. The member has stated along with Sri Shamanna and Sri M. S. Krishnan.......

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಪಾಯಿಂಟ್ ಆಫ್ ಆರ್ಡರ್ ಸರ್. ಈಗ ನಾವೆಲ್ಲಾ ಏನು ಹೇಳುತ್ತೇವೆ ಎಂಬುದನ್ನು ಕೇಳಿ ಅಧ್ಯಕ್ಷರು ಉತ್ತರ ಕೊಡಬೇಕು. ಈಗಲೇ ಉತ್ತರ ಕೊಡುವುದಾದರೆ ಅದು ಹೇಗೆ ಸರಿಹೋಗುವುದು? ನಾವಿನ್ನೂ ಮಾತನಾಡಿಲ್ಲ. ಆದುದರಿಂದ ಈಗ ತಾವು ಹೇಳುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಾವು ಮಾತನಾಡುವುದಕ್ಕೆ ಮುಂಚೆ ಅಧ್ಯಕ್ಷರು ಹೇಳುವುದು ಸರಿಯಲ್ಲ.

Mr. SPEAKER.—All-right. I shall reserve my ruling.

†**Sri S. SIVAPPA** (Sravanabelgola).—Sir, The privilege issue raised by my non. friend Sri Vatal Nagaraj is very, very important because yesterday evening when the Congress Exhibition was to be inaugurated by the Governor of the State and the Chief Minister was to preside over the function, our M.L.As. wanted to stage a protest demonstration to bring to the notice of the Government and the public of Bangalore and the State, the unjust policy of the Government in entertaining an Exhibition sponsored by a political party, the Government participating in it and spending from the State Exchequer public funds to encourage party interests. Since the Exhibition is being run by the Congress Party, the party in power, a discussion took place in the House about a week back over the question of the Government's participation in the Congress Exhibition in the City. In continuation of that, our friend M.L.As. wanted to stage a peaceful demonstration against the holding of the Congress Exhibition. Staging a peaceful demonstration is the Fundamental Right of any citizen. Now that right has been taken away by arresting the three M.L.As. and some other important leaders who were with them. When did this happen? When the Head of the State, the Governor, and the Chief Minister were there and were participating in the funcation. When this happened under the very eyes of the Governor and the Chief Minister, you can imagine how things are happening elsewhere.

So, this is a very important issue. This is curtailing the liberty and fundamental right of citizens, and much more of M.L.As. So I request the Hon. Speaker to ponder over this deeply before giving a ruling. I request you to accept this Privilege Motion. Let there be a full discussion on it. If necessary, I think it is better you refer it to the Committee of Privileges because safeguarding of Fundamental Right is more important than anything else. Therefore, in that light, before you give a ruling, please permit a full discussion on this vital matter.

ಅಧ್ಯಕ್ಷರು.—ನನ್ನ ರೂಲಿಂಗ್‌ನ್ನು ರಿಸರ್ವ್ ಮಾಡಿದ್ದೇನೆ, ಎಲ್ಲವನ್ನೂ ವಿಚಾರ ಮಾಡಿ ನಾಳೆ ಹೇಳುತ್ತೇನೆ.

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಈ ರೂಲಿಂಗ್ ರಿಸರ್ವ್ ಮಾಡಿದ್ದೇನೆ ಎಂದು ಹೇಳುತ್ತಾ ಇದ್ದೀರಿ. ಆಗಲೇ ತಾವು ಬರೆದು ರೆಡಿಯಾಗಿಟ್ಟುಕೊಂಡಿದ್ದ ರೂಲಿಂಗನ್ನು ಓದುವುದಕ್ಕೆ ಪ್ರಾರಂಭ ಮಾಡಿದ್ದಿರಿ, ಈ ರೀತಿ ಹೇಳುತ್ತಾ ಇರುವುದರಿಂದ ತಾವು ಈಗಾಗಲೇ ಬರದಿಟ್ಟುಕೊಂಡಿರುವ ರೂಲಿಂಗ್‌ನಲ್ಲಿ ಏನಾದರೂ ಬದಲಾವಣೆಮಾಡಿ ಹೇಳಬಹುದು; ಆದ್ದರಿಂದ ನಮ್ಮ ಪಾಯಿಂಟ್ ಆಫ್ ಆರ್ಡರ್ ಅಪ್ ಹೋಲ್ಡ್ ಮಾಡುವ ರೂಲಿಂಗ್‌ನ್ನು ಕೊಡಬೇಕೆಂದು ನಾನು ತಮ್ಮನ್ನು ಕೈಜೋಡಿಸಿ ವಿನಂತಿ ಮಾಡಿಕೊಳ್ಳುತ್ತೇನೆ.

†ಶ್ರೀ ಕೆ. ಎಚ್. ಪಾಟೀಲ್.—ಸ್ವಾಮಿ, ಸ್ಪೀಕರ್‌ರವರೇ, ಇವತ್ತಿನದಿವಸ ವಾಟಾಳ್ ನಾಗರಾಜ್ ರವರು ಎತ್ತಿದ ಪ್ರಿವಿಲೇಜ್ ವಿಷಯವಾಗಿಯಾಗಲಿ ಅಥವಾ ತಮ್ಮ ರೂಲಿಂಗ್ ವಿಷಯವಾಗಿಯಾಗಲಿ ನಾನು ಮಾತನಾಡುವುದಿಲ್ಲ. ಅದು ತಮಗೆ ಬಿಟ್ಟ ವಿಷಯ. ಒಂದು ಗಮನಾರ್ಹವಾದ ವಿಷಯವೇನೆಂದರೆ ಈ ಅಸೆಂಬ್ಲಿ ನಡೆದಾಗ 3 ಜನ ಸದಸ್ಯರನ್ನು ಆ ಸದಸ್ಯರು ಕಾನ್‌ಸ್ಟಿಟ್ಯೂಷನಲ್ ಮೆಥೆಡ್ಸ್‌ನಿಂದ ತಮ್ಮ ಪ್ರತಿಭಟನೆಯನ್ನು ತೋರಿಸಲಿಕ್ಕೆ ಹೋದಾಗ ಅರೆಸ್ಟ್ ಮಾಡಿದರು ಎಂಬ ವರ್ತಮಾನ ಕೇಳಿದೆವು. ಅಂತಹ ಪರಿಸ್ಥಿತಿಯಲ್ಲಿ ಈ ಸಭೆಯ ಸದಸ್ಯರಾದ ನಾವು ಕಿವಿ, ಬಾಯಿ ಮುಚ್ಚಿಕೊಂಡು ಕುಳಿತಿರುವುದು ಸಾರ್ಥಕವಾಗಲಿಕ್ಕಿಲ್ಲ. ಅಲ್ಲಿ ಅಕ್ರಮವಾಗಿ ಗಲಾಟೆ ಮಾಡಿದರೆ

(ಶ್ರೀ ಕೆ. ಎಚ್. ಪಾಟೀಲ್)

ಅವರನ್ನು ಅರೆಸ್ಟ್ ಮಾಡದೇ ಬಿಟ್ಟಿದ್ದರೆ ಅನರ್ಥವುಂಟಾಗುತ್ತಾ ಇತ್ತು, ಯಾರಿಗಾದರೂ ಜೀವ ಹೋಗುತ್ತಾ ಇತ್ತು, ಆಸ್ತಿಗೆ ನಷ್ಟವುಂಟಾಗುತ್ತಾ ಇತ್ತು ಎಂಬ ಮಾತನ್ನು ಈ ಸಭೆಯ ಗಮನಕ್ಕೆ ತರಬೇಕಾಗುತ್ತಿತ್ತು ಮತ್ತು ನಾವು ಅದನ್ನು ವಿಚಾರಮಾಡಲಿಕ್ಕೆ ಬರುತ್ತಾ ಇತ್ತು. ಇಲ್ಲಿ ನಡೆಯುತ್ತಾ ಇರುವ ಕೇವಲ ಕಾಂಗ್ರೆಸ್ ಎಕ್ಸಿಬಿಷನ್ನು ಯಾವ ರೀತಿಯಾಗಿ ನಡೆಯುತ್ತಾ ಇದೆ ಎಂಬ ಹಿನ್ನೆಲೆ ತಮಗೆ ಗೊತ್ತು, ಈ ಸಭೆಗೂ ತಮ್ಮ ಮುಖಾಂತರ ಗೊತ್ತಾಗಿದೆ. ಒಂದು ರಾಜ್ಯದ ಸ್ವತ್ತನ್ನು ತಪ್ಪಾಗಿ ವಿನಿಯೋಗಿಸಿ ಎಲ್ಲ ಸದಸ್ಯರೂ ಒಪ್ಪಿದಂತಹ ಒಂದು ನಿರ್ಣಯವನ್ನು ಮಾಡೋಣ ಎಂಬ ಮಾತನ್ನು ಈ ಸಭೆಯ ನಾಯಕರಾದ ವೀರೇಂದ್ರ ಪಾಟೀಲ್ ರವರು ಒಪ್ಪಿ ವಿಚಾರ ಮಾಡುತ್ತೇನೆ ಅಂದಾಗಲೂ ಸಹ ಈ ಒಂದು ವರ್ಷಕ್ಕೆ ಮಾತ್ರ ಕೊಡುತ್ತೇವೆ ಎಂದು ಹೇಳಿದಾಗಲೂ ಅದನ್ನು ಪ್ರತಿಭಟಿಸಲು ಹೋದಾಗ, ಪ್ರತಿಭಟನೆ ಮಾಡುವ ವ್ಯಾಳ್ಯಕ್ಕೆ ಗವರ್ನರ ಎದುರಿಗೇ ಅವರನ್ನು ಅರೆಸ್ಟ್ ಮಾಡಿದ ಮಾತು ಕೇಳಿ ಬಂತು. ಮಾನ್ಯ ಮಂತ್ರಿಗಳು ಎಲ್ಲಕ್ಕಿಂತಲೂ ಹಿರಿದಾದ ಸ್ಥಾನವನ್ನು ಪಡೆದಿದ್ದಾರೆ. ಮಾನ್ಯ ಸದಸ್ಯರಿಂದ ಅಪರಾಧ ಎಸಗಲ್ಪಟ್ಟಿದ್ದರೆ ಅಥವಾ ಅವರು ಯಾವುದಾದರೂ ಒಂದು ಪ್ರತಿಭಟನೆಯನ್ನು ಮಾಡಿದ್ದರೆ ಅವರನ್ನು ಅರೆಸ್ಟ್ ಮಾಡಿ ಬಿಟ್ಟಿದ್ದೂ ಸಹ—ಅವರನ್ನು ಬೇಲ್ ಮೇಲೆ ಬಿಟ್ಟಂತೆ ಕಾಣಲಿಲ್ಲ—ಆದ್ದರಿಂದ ಪೋಲೀಸ್‌ನವರು ಅವರನ್ನು ಹಿಡಿದದ್ದೇ ತಪ್ಪಾಗುತ್ತದೆ. ಆದ್ದರಿಂದ ಇದನ್ನು ವಿಚಾರಣೆ ಮಾಡಲಿಕ್ಕೆ ಈ ಸಭೆಗೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಸ್ವಾಮಿ, ಶ್ರೀ ವಾಟಾಳ್ ನಾಗರಾಜು ಅವರು ಸಭೆಯ ಮುಂದೆ ಮಂಡಿಸಿರತಕ್ಕ ವಿಷಯದ ಬಗ್ಗೆ ನಾನು ಆರ್ಟಿಕಲ್ 19(1) (ಬಿ) ಪ್ರಕಾರ ಸರ್ಕಾರದವರ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ಯಾವ ಪೌರರಾದರೂ ಒಂದು ಕಡೆ ಗುಂಪು ಸೇರಿ ಅವರು ಅರ್ನೈಷ್ಟಾಗಿ ಯಾವುದಾದರೊಂದು ವಿಚಾರದಲ್ಲಿ ಅವರು ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಾ, ತಮ್ಮ ಪ್ರತಿಭಟನೆಯನ್ನು ಸಲ್ಲಿಸಬಹುದು.

ಇನ್ನು ಆರ್ಟಿಕಲ್ 194(3) ಪ್ರಕಾರ ನಮ್ಮಲ್ಲಿ ಇದು ಇನ್ನೂ ಬೆಳೆಯುತ್ತಿರುವ ಪ್ರಜಾತಂತ್ರ. ಇಂಥ ಸನ್ನಿವೇಶದಲ್ಲಿ ಪ್ರತಿಯೊಂದು ಸಭೆಗಳಲ್ಲೂ ಸದಸ್ಯರುಗಳ ಹಕ್ಕುಬಾಧ್ಯತೆಗಳೇನು ಎಂಬುದನ್ನು ಈಗೀಗ ರೂಢಿಸಿಕೊಳ್ಳತಕ್ಕ ಕಾಲ ಇದು. ಇಂಥ ಸಂದರ್ಭದಲ್ಲಿ ಆರ್ಟಿಕಲ್ 194(3) ಪ್ರಕಾರ ಇಂಥ ಯಾವುದಾದರೊಂದು ಶಾಸನ ಸಭೆಯಲ್ಲಿ ಯಾರಾದರೂ ಒಬ್ಬ ಸದಸ್ಯರು ತಮ್ಮ ಒಂದು ಹಕ್ಕುಬಾಧ್ಯತೆಗೆ ಲೋಪವುಂಟಾಗಿದೆ ಇಲ್ಲವೆ ಚ್ಯುತಿಯುಂಟಾಗಿದೆ ಎಂದು ಒಂದು ಸೂಚನೆಯನ್ನು ಕೊಟ್ಟರೆ ಅಧ್ಯಕ್ಷರು ಅದಕ್ಕೆ ಮನ್ನಣೆ ಕೊಡಬೇಕು. ಆದರೆ ನಾವು ನಮ್ಮ ಮಾತುಗಳ ವೇಗದಲ್ಲಿ ಆ ಸ್ಲಿಪ್ ಆಫ್ ದಿ ಟಂಗ್ ಎಂದು ಹೇಳುತ್ತಾರಲ್ಲಾ ಹಾಗೆ ವಿಷಯಕ್ಕೆ ಸಂಬಂಧಪಟ್ಟ ವಿಚಾರಗಳನ್ನು ತಿಳಿಸತಕ್ಕ ಕಾಲದಲ್ಲಿ ಅದು ಒಂದು ಪ್ರಿವಿಲೇಜ್ ಮೋಷನ್ ಆಗುವುದಕ್ಕೆ ಏನೇನು ಕಂಡೀಷನ್‌ಗಳಿರಬೇಕು ಎಂಬುದನ್ನು ತಿಳಿಸುವುದರ ಬಗ್ಗೆ ಸ್ವಲ್ಪ ಹೆಚ್ಚುಕಡಮೆ ಆಗಬಹುದು. ಆದರೆ ತಾವು ಇಲ್ಲಿರತಕ್ಕ ಮಂತ್ರಿಗಳ ಮಾತುಗಳಿಗೇ ಮನ್ನಣೆ ಕೊಟ್ಟು ಸದಸ್ಯರು ತರತಕ್ಕ ಪ್ರಿವಿಲೇಜ್ ಮೋಷನ್ ವಗೈರೆಗಳನ್ನು ಸೈಡ್ ಟ್ರ್ಯಾಕ್ ಮಾಡುವುದಕ್ಕೆ ಯಾರೂ ಕೈಹಾಕಬಾರದು. ಈ ದಿವಸ ಸಭೆಯ ಮುಂದೆ ಬಂದಿರತಕ್ಕದ್ದು ಬಹಳ ಗಹನವಾದ ವಿಚಾರ. ಸರ್ಕಾರದವರ ಗಮನವನ್ನು ಸೆಳೆಯುವುದಕ್ಕೆ ಇದು ಬಹಳ ಅತ್ಯುತ್ತಮವಾದ ವಿಷಯ. ಇದು ಕಾನೂನುಬದ್ಧವಾಗಿಯೂ ಇದೆ. ಇದನ್ನು ಎಲ್ಲ ಸದಸ್ಯರೂ ಒಪ್ಪುತ್ತಾರೆ. ಅನೇಕ ಸಂದರ್ಭಗಳಲ್ಲಿ ಮಾನ್ಯ ಪುಟ್ಟಸ್ವಾಮಿಯವರೇ ಇಲ್ಲಿರತಕ್ಕ ಮಾನ್ಯ ಸದಸ್ಯರುಗಳೆಲ್ಲಾ ದೇಶದಲ್ಲಿರತಕ್ಕ ಜನರ ಪ್ರತಿಬಿಂಬಗಳು ಎಂದು ಹೇಳಿದ್ದಾರೆ. ಅಂಥ ಸದಸ್ಯರುಗಳ ಹಕ್ಕುಬಾಧ್ಯತೆಗಳಿಗೆ ಲೋಪ ಉಂಟಾಗಿದೆ. ಆದರೆ ಸರ್ಕಾರದವರು ಒಂದು ಹೇಳಿಕೆ ಕೊಟ್ಟರೆ ಅಂದರೆ ಈ ಸಭೆಯಲ್ಲಿ ಒಂದಾವರ್ತಿ ಒಂದು ರೀತಿಯ ಹೇಳಿಕೆಯನ್ನು ಕೊಟ್ಟು ಅದನ್ನು ಮತ್ತೆ ಬದಲಾಯಿಸಿದರೆ ಅವರು ದೇಶಕ್ಕೇನು ಮನ್ನಣೆ ಕೊಟ್ಟಹಾಗೆ ಆಯಿತು ? ಇದೇ ಸಭೆಯಲ್ಲಿ ಸರ್ಕಾರದವರು ಒಂದು ಭರವಸೆಯನ್ನು ಕೊಟ್ಟು ಅದನ್ನು ಕಾರ್ಯಗತ ಮಾಡದೆ ಅದನ್ನವರು ಉಲ್ಲಂಘನೆ ಮಾಡಿದ್ದರೆ ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವ ಹಕ್ಕು ಸದಸ್ಯರಿಗಿರುತ್ತದೆ. ಆ ವಸ್ತುಪ್ರದರ್ಶನದ ಆರಂಭೋತ್ಸವಕ್ಕೆ ಮುನ್ನ ಆ ವಿಚಾರದಲ್ಲಿ ಒಂದು ತೀರ್ಮಾನವನ್ನು ಕೈಗೊಳ್ಳುವುದಾಗಿ ಸರ್ಕಾರದವರು ಈ ಸಭೆಗೆ ಒಂದು ಭರವಸೆಯನ್ನು ಕೊಟ್ಟಿದ್ದರು. ಆ ತೀರ್ಮಾನದ ವಿಚಾರದಲ್ಲಿ ದೇಶದಲ್ಲಿರತಕ್ಕ ಸಾರ್ವಜನಿಕರೂ ಮತ್ತು ಈ ಸಭೆಯ

ಮಾನ್ಯ ಸದಸ್ಯರೂ ಬಹಳ ಕಾತುರರಾಗಿದ್ದರು. ಆದರೆ ಆ ತೀರ್ಮಾನವನ್ನು ಈ ಸಭೆಗೆ ಸರ್ಕಾರದವರು ತಿಳಿಸದೆ ಆ ವಸ್ತುಪ್ರದರ್ಶನದ ಆರಂಭೋತ್ಸವ ನಡೆಸುವುದಕ್ಕೆ ಹೋದುದರಿಂದ ! ಅಲ್ಲಿ ಈ ಸಭೆಯ ಮಾನ್ಯ ಸದಸ್ಯರು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸುವುದಕ್ಕೆ ಹೋಗಿದ್ದಾಗ ಅಲ್ಲಿ ಅವರ ಪ್ರಯತ್ನಕ್ಕೆ ಅವರಿಗೆ ಭಂಗವನ್ನು ಉಂಟುಮಾಡಿ ತೊಂದರೆಯನ್ನು ಕೊಟ್ಟಿರತಕ್ಕದ್ದು ಖಂಡಿತವಾಗಿಯೂ ಅವರ ಹಕ್ಕಿಗೆ ಚ್ಯುತಿಯನ್ನು ತಂದ ಹಾಗಾಗಿದೆ. ಆದ್ದರಿಂದ ಅದೊಂದು ಹಕ್ಕು ಲೋಪದ ಪ್ರಶ್ನೆಯಾಗಿದೆ. ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಸಭಾಧ್ಯಕ್ಷರು ಅವಕಾಶ ಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

†ಶ್ರೀ ಎಂ. ನಾಗಪ್ಪ (ರಾಯಚೂರು).—ಸ್ವಾಮಿ, ನಾನು ಕೂಡ ಇದೇ ವಿಚಾರದಲ್ಲಿ ಒಂದು ಆಡ್ಜರ್ನ್‌ಮೆಂಟ್ ನೋಟೀಸನ್ನು ಕಳುಹಿಸಿದ್ದೆ. ತಾವು ಅದನ್ನು ಡಿಸಲೋ ಮಾಡಿದ್ದೀರಿ. ಈ ದಿವಸ ದೇಶದಲ್ಲಿ ಯಾವುದಾದರೊಂದು ಕಾರ್ಯ ನಡೆಯುತ್ತಿದ್ದರೆ ಅದು ಪ್ರಜೆಗಳಿಗೆ ಅಹಿತವನ್ನುಂಟುಮಾಡುತ್ತದೆ ಎಂಬ ಅನುಮಾನ ಬಂದಾಗ ಕಾನೂನು ಪ್ರಕಾರ ಅದನ್ನು ವಿರೋಧಿಸುವುದಕ್ಕೆ ಅಗತ್ಯವಾದ ಒಂದು ಹಕ್ಕು ಈ ಸಭೆಯ ಸದಸ್ಯರಿಗಷ್ಟೇ ಅಲ್ಲ ಆ ಹಕ್ಕು ರಾಜ್ಯದಲ್ಲಿರತಕ್ಕ ಎಲ್ಲಾ ಸಾರ್ವಜನಿಕರಿಗೂ ಇರುತ್ತದೆ. ಹೀಗೆ ತಮ್ಮ ಪ್ರತಿಭಟನೆಗಳನ್ನು ಯಾವ ರೀತಿ ಸೂಚಿಸಬಹುದು ಅನ್ನುವುದಕ್ಕೆ ರಾಜ್ಯಾಂಗದಲ್ಲಿ ಒಂದು ದೊಡ್ಡ ಛಾಪ್ಟರೇ ಇದೆ. ಹಾಗೆ ತಮ್ಮ ಪ್ರತಿಭಟನೆಯನ್ನು ಸೂಚಿಸತಕ್ಕ ವೇಳೆಯಲ್ಲಿ ಈ ಸಭೆಯ ಮಾನ್ಯ ಸದಸ್ಯರನ್ನು ಅರೆಸ್ಟ್ ಮಾಡಿಸಿ ಅವರನ್ನು 3–4 ಗಂಟೆಗಳ ಕಾಲ ಪೋಲೀಸ್ ಕಸ್ಟಡಿಯಲ್ಲಿಡಿಸಿ ಅವರಿಗೆ ತೊಂದರೆ ಕೊಟ್ಟಿದ್ದಾರೆ. ಇಲ್ಲಿ ಈ ದಿವಸ ಈ ಸಭೆ ನಡೆಯದೆ ಇದ್ದಿದ್ದರೆ ಅವರನ್ನು ಬಹುಶಃ ಇಷ್ಟು ಬೇಗ ಹೊರಗೆ ಬಿಡುತ್ತಿರಲಿಲ್ಲ ಎಂದು ಕಾಣುತ್ತದೆ.

2–30 P.M.

ಅವರನ್ನು ಮೂರು ಗಂಟೆಯವರೆಗೆ ಏಕೆ ಇಟ್ಟುಕೊಂಡಿರಿ ? ಒಂದೇ ಒಂದು ಮಿನಿಟ್ ಅವರನ್ನು ಇಟ್ಟುಕೊಂಡು ಆಮೇಲೆ ಅವರನ್ನು ಬಿಡಬಹುದಾಗಿತ್ತು. ಕಾಯಿದೆ ಪ್ರಕಾರ ಬೇಲಬಲ್ ಅಫೆನ್ಸ್ ಅಂದರೇನು ? ಅವರು ಈ ಸದನದ ಮುಖ್ಯ ಸದಸ್ಯರು. ಸಾಧಾರಣವಾಗಿ ಈ ರಾಜ್ಯದಲ್ಲಿರತಕ್ಕ ಸದಸ್ಯ ಕಾಯಿದೆಯನ್ನು ಮುರಿದವರು ಈ ಸಭೆಯ ಸದಸ್ಯರಾಗೇ ಇರುವವರಲ್ಲ. ಅವರು ಸರ್ಕಾರದ ಪ್ರತಿನಿಧಿಗಳು. ಆ ರೀತಿ ಸರ್ಕಾರದ ಪ್ರತಿನಿಧಿಗಳಾಗಿರತಕ್ಕವರ ಮೇಲೆ ಅಧಿಕಾರಿಗಳಾಗಿರುವವರು ಅವರ ಅಧಿಕಾರವನ್ನು ದುರುಪಯೋಗಮಾಡಿಕೊಂಡು ಈ ಮಾನ್ಯ ಸದಸ್ಯರನ್ನು ಬಂಧನದಲ್ಲಿಡುವಂಥ ಪರಿಸ್ಥಿತಿ ಉದ್ಭವಿಸಿತು. ಇದನ್ನು ಒಂದು ರೀತಿ ಅಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿ ತೆಗೆದುಕೊಳ್ಳುವಷ್ಟು ಪ್ರಾಮುಖ್ಯತೆ ಉಂಟು. ಈ ದಿನ ಪೋಲೀಸ್ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಜನರಲ್ಲಾಗಿ ಮಾತನಾಡಬಹುದು. ಆದರೆ ವಿಶೇಷವಾದಂಥ ಪರಿಸ್ಥಿತಿ ಇರುವಾಗ, ಮಾನ್ಯ ಸದಸ್ಯರ ಒಂದು ಹಕ್ಕುಬಾಧ್ಯತೆಯನ್ನು ಕಾಯ್ದುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಆ ದೃಷ್ಟಿಯಿಂದ ಅಡ್ಜರ್ನ್‌ಮೆಂಟ್ ಮೋಷನ್ನನ್ನು ಅಲೋ ಮಾಡಬೇಕಾಗಿತ್ತು. ಈಗಲೂ ಇದನ್ನು ಪುನರ್ವಿಮರ್ಶೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ಮತ್ತು ಇನ್ನೂ ಇತರರು ಪ್ರಿವಿಲೇಜ್ ಮೋಷನ್ ತಂದುದು ಉಚಿತವೆಂದು ಹೇಳಿದ್ದಾರೆ. ಈ ಪ್ರಿವಿಲೇಜ್ ಮೋಷನ್ ಯಾವಾಗ ತರಬಹುದೆಂಬುದನ್ನು ನಾವು ರೂಲ್ಸ್‌ನೊಳಗೆ ಪ್ರೊವೈಡ್ ಮಾಡಿದ್ದೇವೆ. ಈಗ ಮಾನ್ಯ ಸದಸ್ಯರ ಹಕ್ಕುಬಾಧ್ಯತೆಗೆ ಚ್ಯುತಿ ತಂದಿದ್ದಾರೆಂದು ಹೇಳಿದರು. ಈ ಮಾನ್ಯ ಸಭೆಯ ಗೌರವವನ್ನು ಮತ್ತು ಆ ಸದಸ್ಯರ ಗೌರವವನ್ನು ಕಾಯುವುದು ತಮಗೆ ಬಿಟ್ಟದ್ದು. ಹೊರಗೆ ಇರುವಾಗ ಈ ಸಭೆಯ ಸದಸ್ಯ ಪ್ರಜೆಗಳ ಹಾಗೆ ಇರುತ್ತಾನೆ. ಅಲ್ಲದ್ದು ಕಾಯಿದೆ ಉಲ್ಲಂಘನೆ ಮಾಡಿದರೆ ಸಾಧಾರಣ ಪ್ರಜೆ ಯಾವ ರೀತಿ ಶಿಕ್ಷೆಗೊಳಪಡುತ್ತಾನೋ ಅದೇರೀತಿ ಶಿಕ್ಷೆಗೊಳಗಾಗಬೇಕು. ಅದು ಎಲ್ಲರಿಗೂ ಅನ್ವಯವಾಗುತ್ತದೆ. ನಿನ್ನೆ ಘಟನೆಗಳು ಏನಾದರೂ ಸಂಭವಿಸಿದ್ದರೆ, ಪೋಲೀಸರು ಮೊದಲೇ ಏಕೆ ತಕ್ಕ ಬಂದೋಬಸ್ತು ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಇವರೇ ಕೇಳುತ್ತಾರೆ. ಹೊರಗಡೆ ಎಲ್ಲಾ ಪ್ರಜೆಗಳಿಗೆ ಯಾವ ಕಾಯಿದೆಯನ್ನು ಅನ್ವಯಿಸುತ್ತಾರೋ ಅದನ್ನೇ ಈ ಮಾನ್ಯ ಸದಸ್ಯರಿಗೂ ಅನ್ವಯಿಸುತ್ತಾರೆ. ಆದರೆ ಈ ಮನೆಯಲ್ಲಿರುವಾಗ ಸದಸ್ಯರ ಗೌರವವನ್ನು ಕಾಪಾಡುವುದು ತಮಗೆ ಸೇರಿದ್ದು. ಆದ್ದರಿಂದ ಇದು ಪ್ರಿವಿಲೇಜ್ ಮೋಷನ್ ಆಗುವುದಿಲ್ಲ. ಇದರಲ್ಲಿ ಏನೂ ಅರ್ಥವಿಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಬಿ. ಪಿ. ಗಂಗಾಧರ್.—ಮಾನ್ಯ ಶ್ರೀ ಗುರಡ್ಡಿಯವರು ಹೇಳಿದ ಸಂದರ್ಭ ಬೇರೆ. ಬ್ರಿಟಿಷರ ಕಾಲದಿಂದ ನಡೆದಿರತಕ್ಕ ಪದ್ಧತಿ ಈಗಲೂ ಇದೆ. ಎಲ್ಲೆಲ್ಲಿ ಮಾಸ್ಕ್ ಇದೆ, ಎಲ್ಲೆಲ್ಲಿ ಟೆಂಪಲ್ ಇದೆ, ಎಲ್ಲೆಲ್ಲಿ ಟ್ರಬಲ್ ಏರಿಯಾ ಇದೆ ಅಂತಹ ಕಡೆಗಳಲ್ಲಿ 1934 ರಿಂದಲೂ ಬ್ರಿಟಿಷರ ಆಡಳಿತ ವಿದ್ದಾಗಲೂ ಇಂತಹ ಕ್ರಾಂತಿಕಾರಕ ಕ್ರಮವನ್ನು ತೆಗೆದುಕೊಳ್ಳುತ್ತಿದ್ದರು. ಇದು ಆ ರೀತಿ ಅಲ್ಲ. ಸಾರ್ವಜನಿಕ ಮುಖಂಡರು ಯಾರು ಇದ್ದಾರೆಯೋ ಅವರಿಗೆ ಸಾರ್ವಜನಿಕರ ಅಭಿಪ್ರಾಯ ಪ್ರತಿ ಬಿಂಬಿಸಬೇಕಾದರೆ ಹಕ್ಕು ಇದೆ. ಅವರು ಗಲಾಟೆ ಮಾಡುವುದಕ್ಕೆ ಹೋದವರು ಅಲ್ಲ. ಯಾರನ್ನೂ ಹೊಡೆಯುವುದಕ್ಕೆ ಹೋಗಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಮೊದಲೇ ಹೇಳಿದ ಹಾಗೆ ಜನತೆಗೆ ಅನ್ಯಾಯ ಮಾಡುವ ಚಟುವಟಿಕೆ ಯಾವುದೂ ಮಾಡಿಲ್ಲ. ಸರ್ಕಾರದವರು ಮಾಡುವುದು ನ್ಯಾಯವಾಗಿದೆಯೋ ಎಂದು ಕೇಳುವುದು ಎಲ್ಲರ ಹಕ್ಕು ಇದೆ. ಕಪ್ಪು ಬಾವುಟ ಹಿಡಿದುಕೊಂಡು ಹೋಗಿದ್ದೆವು. ಯಾವ ವಿಧವಾದ ಗಲಾಟೆಯನ್ನೂ ಮಾಡಿಲ್ಲ. ಬಾಂಬು, ಬೆಂಕಿ ಬೀಳುತ್ತದೆಂದು ಪೋಲೀಸ್ ಕಮೀಷನರ್ ಅಲ್ಲಿ ಇದ್ದಾರೇ ? ಪೋಲೀಸ್ ಕಮಿಶನರೂ ಅಲ್ಲಿದ್ದರು, ಪೋಲೀಸ್ ಸೂಪರಿಂಟೆಂಡೆಂಟರೂ ಅಲ್ಲಿ ಇದ್ದರು. ಒಂದು ಪಾರ್ಟಿಯು ವಸ್ತು ಪ್ರದರ್ಶನಕ್ಕೆ ರಕ್ಷಣೆ ನೀಡುವುದಕ್ಕೆ ಒಬ್ಬ ಕಾವಲಿಗಾರ ಇದ್ದರೆ, ಅದಕ್ಕೆ 10 ಜನ ಪೋಲೀಸರು ಇರುತ್ತಾರೆ. ಮಂತ್ರಿಗಳೆಲ್ಲಾ ಸರ್ಕಾರಿ ಕಾರಿನಲ್ಲಿ ವಸ್ತು ಪ್ರದರ್ಶನಕ್ಕೆ ಬರುತ್ತಿದ್ದರು. ನಾವು ಇಲ್ಲಿ ಶಾಂತ ರೀತಿಯಿಂದ ನಮ್ಮ ಬೇಡಿಕೆಗಾಗಿ ಕೂಗುತ್ತಿದ್ದೆವು. ನಾನು, ಶಾಮಣ್ಣನವರು ಮತ್ತು ಮಿಕ್ಕಿದ ನಮ್ಮ ಸ್ನೇಹಿತರು ಅಲ್ಲಿ ಹೋಗಿದ್ದೆವು ; ಮತ್ತು ನಾವು ಅಲ್ಲಿ ನಿಂತಾಗ ಸುಮಾರು 20 ಜನ ಪೋಲೀಸರು ನಮ್ಮ ಸುತ್ತು ನಿಂತು ಘೇರಾವೊ ಮಾಡಿದರು. ಮುಂದಕ್ಕೆ ಒಂದು ಅಂಗುಲ ಕೂಡ ಹೋಗಬಾರದು ಎಂದು ಹೇಳಿದರು. ಇದರಿಂದ ಯಾವ ರೀತಿಯ ಶಾಂತಿಗೂ ಭಂಗವಾಗುತ್ತಾ ಇರಲಿಲ್ಲ. ಯಾರೋ, ಮಂತ್ರಿಯವರ ಮಾತನ್ನು ಕೇಳಿ ಪೋಲೀಸ್ ಕಮಿಶನರ್, ಬಂದು ನಾವು ಪ್ರತಿಭಟನೆ ಮಾಡುತ್ತಿರುವುದು ಸರಿಯಾದುದಲ್ಲವೆಂದು ನಮ್ಮನ್ನು ಪೋಲೀಸ್ ವ್ಯಾನಿನಲ್ಲಿ ಹಾಕಿ, ಊರಿನ ಹೊರಗಡೆ ಇರತಕ್ಕಂತಹ ಮಾಗಡಿ ರೋಡಿನ...

ಶ್ರೀ ಎಸ್. ಎಂ. ಗುರಡ್ಡಿ.—ಸ್ವಾಮಿ, ಪಾಯಿಂಟ್ ಆಫ್ ಆರ್ಡರ್ ಅವರು ತಮಗೆ ಈಗಾಗಲೇ ಪ್ರಿವಿಲೆಜ್ ಮೋಶನ್ ಕೊಟ್ಟಿದ್ದಾರೆ. ಆದರ ಸಲುವಾಗಿ ಭಾಷಣ ಮಾಡುವಂತಹ ಅವಶ್ಯಕತೆ ಇಲ್ಲ. ಆದಕಾರಣ ಅದು ತಮಗೆ ಬಿಟ್ಟಿದೆ. ಅದರಲ್ಲಿ ಹಕ್ಕುಭಾದ್ಯತೆ ಬರುತ್ತದೆಯೇ, ಇಲ್ಲವೇ, ಎಂಬುದನ್ನು ತಾವು ಹೇಳಬೇಕು. ಅದರ ಬಗ್ಗೆ ಈಗ ಮಾನ್ಯ ಸದಸ್ಯರು ಮಾತನಾಡುವುದು ಸರಿಯಾಗುವುದಿಲ್ಲ. ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

Mr. SPEAKER.—The point of order is that when a notice of breach of privilege is given, it should be admitted by the Speaker and when it is admitted, it comes before the House and not otherwise. Therefore, there is no scope for making speeches at this stage. I have already heard the various views expressed by hon. Members here. I shall go through them carefully and give my considered ruling in the course of two or three days.

ಶ್ರೀ ವಾಟಾಳ್ ನಾಗರಾಜ್.—ತಾವು ರೂಲಿಂಗ್ ಕೊಡಬೇಕಾದರೆ, ನಮ್ಮ ವಾದ ಏನು ಎಂಬುದು ಅರ್ಥವಾಗಬೇಕಲ್ಲವೇ ? ನಾನು ಭಾಷಣ ಮಾಡುವುದಿಲ್ಲ.

ಅಧ್ಯಕ್ಷರು.—ಅದಕ್ಕೆ ಸ್ಕೋಪ್ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಅದು ಪ್ರಿವಿಲೆಜ್ ಹೇಗೆ ಆಗುತ್ತದೆ ಎಂಬುದನ್ನು ಹೇಳಬೇಕೇ, ಬೇಡವೇ ? ನಾನು ಇನ್ನೂ ಪೂರ್ತಿಯಾಗಿ ಹೇಳಿಲ್ಲ.

ಅಧ್ಯಕ್ಷರು.—ಅದಕ್ಕೆಲ್ಲಾ ರೂಲ್ಸ್ ಇದೆ. ನೀವು ಈಗ ಎಲ್ಲಾ ಹೇಳಿದ್ದೀರಿ. ಎರಡನೆ ಬಾರಿ ಹೇಳುವುದು ಬೇಡ. ನಾಳೆ ರೂಲಿಂಗ್ ಕೊಡುತ್ತೇನೆ ಆ ಕಾಲಕ್ಕೆ ನೋಡೋಣ. ಎಲ್ಲರೂ ಬಹಳ ವಿಚಾರಗಳನ್ನು ಹೇಳಿದ್ದಾರೆ. ಅದನ್ನೆಲ್ಲಾ ತಿಳಿದುಕೊಂಡು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ಈಗ ತಾವು ರೂಲಿಂಗ್ ಕೊಡುವುದಕ್ಕೆ ಮುಂಚೆ ಆ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

Mr. SPEAKER.—No, I do not permit.

ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ಸ್ವಾಮಿ ಈ ಸಭೆಯಲ್ಲಿ ಒಂದು ಕಾನೂನು, ಕಟ್ಟಳೆ ಇದೆ. ಅಧ್ಯಕ್ಷರು ಎದ್ದು ನಿಂತಾಗ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು ಎನ್ನತಕ್ಕಂಥ ಒಂದು ನೀತಿ ನಿಯಮ ಇದೆ. ಈಗ ಅಧ್ಯಕ್ಷರು ಎದ್ದು ನಿಂತು ಮಾತನಾಡುತ್ತಿರುವಾಗ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಎದ್ದು ನಿಂತು ಮಾತನಾಡುತ್ತಿದ್ದಾರೆ. ಅವರು ಕುಳಿತುಕೊಳ್ಳುವುದಕ್ಕೆ ಇಷ್ಟ ಪಡುವುದಿಲ್ಲ. ಈ ರೀತಿ ಮಾಡಿದರೆ ಕಾನೂನು ಭಂಗವಾಗುತ್ತದೆ. ಆದ್ದರಿಂದ ಇದರ ಮೇಲೆ ಅಧ್ಯಕ್ಷರು ಒಂದು ರೂಲಿಂಗ್ ಕೊಡಬೇಕು.

Mr. SPEAKER.—I uphold the point of order.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಅಧ್ಯಕ್ಷರು ಎಚ್ಚರಿಕೆಯನ್ನು ಕೊಡದೇ ಹೋದರೆ ಸದಸ್ಯರು ಎಲ್ಲರೂ ಹಾಗೆಯೇ ಎದ್ದು ನಿಂತುಕೊಳ್ಳುತ್ತಾರೆ. ಆದ್ದರಿಂದ ಆ ಬಗ್ಗೆ ಅಧ್ಯಕ್ಷರು ಮಾನ್ಯ ಸದಸ್ಯರಿಗೆ ಎಚ್ಚರಿಕೆಯನ್ನು ಕೊಡಬೇಕು.

Mr. SPEAKER.—I uphold the point of order. When the Chair is standing and when the Chair is giving a ruling all hon. Members should resume their seats and nobody should stand.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ಈ ಸಭೆಯಲ್ಲಿ ರೂಲ್ಸ್ ಪ್ರಕಾರವೇ ಮಾತನಾಡುವುದಕ್ಕಾಗುವುದಿಲ್ಲ. * * * *

ಶ್ರೀ ಎಂ. ಎನ್. ರಾಮಣ್ಣ.—ಅಧ್ಯಕ್ಷರು ಸೂಚನೆ ಕೊಟ್ಟರೂ ಕೂಡ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ನಿಂತುಕೊಂಡೇ ಇದ್ದಾರೆ. ಆದ್ದರಿಂದ ಕಾನೂನು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

(Sri Vatal Nagaraj was standing)

Mr. SPEAKER.—I do not permit any hon. Member to speak. I request the hon. Member to resume his seat.

Sri S. SIVAPPA.—I appreciate your feeling. Because you are requesting Mr. Vatal Nagaraj to sit down, I shall request him to resums his seat, but please advise the hon. Members there not to show their fists against this side. We have also got our fists.

Procedure of permitting Supplementaries to Questions.

†ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ) ಸ್ವಾಮಿ ಮೊನ್ನೆ ಶ್ರೀಮಾನ್ ಶ್ರೀಕಂಠಯ್ಯನವರು ಒಂದು ಪ್ರಶ್ನೆಯನ್ನು ಹಾಕಿದ್ದಾಗ, ಅದರ ಮೇಲೆ ಉಪ ಪ್ರಶ್ನೆಯನ್ನು ಕೇಳಿದಾಗ ಅದು ಸರ್ಕಾರದ ನೀತಿಗೆ ಸಂಬಂಧಪಟ್ಟದ್ದು ಅದನ್ನು ಅಲೋ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದಿರಿ, ಇವೊತ್ತು 662ನೇ ಪ್ರಶ್ನೆಗೆ ಶ್ರೀಮಾನ್ ಗುರೆಡ್ಡಿಯವರು ಉಪ ಪ್ರಶ್ನೆಯನ್ನು ಹಾಕಿದ ಕಾಲದಲ್ಲಿ ಅವರು ಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿಯೂ ಜನರಲ್ ಆಸ್ಪತ್ರೆಯನ್ನು ಪ್ರಾರಂಭ ಮಾಡತಕ್ಕ ಸರ್ಕಾರದ ನೀತಿ ಇದೆಯೇ ಎಂದು ಕೇಳಿದ್ದಕ್ಕೆ ಅದನ್ನು ಅಲೋ ಮಾಡಿದ್ದೀರಿ, ಆ ಪ್ರಶ್ನೆಗೆ ಮಂತ್ರಿಗಳು ಉತ್ತರವನ್ನು ಕೂಡ ಕೊಟ್ಟಿದ್ದಾರೆ. ಇದರಲ್ಲಿ ಒಂದು ಕ್ರಮವಿಲ್ಲ. ಒಂದೊಂದು ಸಂದರ್ಭದಲ್ಲಿ ಒಂದೊಂದು ಕ್ರಮವನ್ನು ಅನುಸರಿಸುತ್ತಾರೆ ಎಂದು ನನಗೆ ಶಂಕೆಯುಂಟಾಗಿದೆ. ಅಧ್ಯಕ್ಷರು ನಮ್ಮ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಒಬ್ಬರಿಗೊಬ್ಬರಿಗೆ ತಾರತಮ್ಯವನ್ನು ತೋರಿಸುತ್ತಾರೋ ಏನೋ ಎಂದು ನನಗೆ ಒಂದು ಶಂಕೆಯುಂಟಾಗಿದೆ. ಈ ವಿಷಯವನ್ನೆಲ್ಲಾ ಯೋಚನೆ ಮಾಡಿ ತಮ್ಮ ನಿಲುವು ಏನು ಎಂಬುದನ್ನು ತಿಳಿಸಬೇಕು. ಇದು ನನ್ನ ಅಭಿಪ್ರಾಯ. ಒಂದು ಕ್ರಮದಲ್ಲಿ ನಡೆಯುತ್ತಾ ಇಲ್ಲ. ಪರಸ್ಪರ ತಾರತಮ್ಯ ನಡೆಯುತ್ತಿದೆ. ಇದು ಹೇಗೆ ಎಂಬುದನ್ನು ವಿಚಾರ ಮಾಡಬೇಕು.

* * * * Matter not recorded as ordered by the Chair.

ಶ್ರೀ ಎಲ್. ಶ್ರೀಕಂಠಯ್ಯ.—ಈಗ ಇದರಲ್ಲಿ ಒಂದು ಪಕ್ಷಪಾತವಾದ ಧೋರಣೆ ಕಂಡು ಬರುತ್ತಿದೆ. ನಿನ್ನೆಯ ದಿವಸ ತಾವು ನನ್ನ ಪ್ರಶ್ನೆಗೆ ಅವಕಾಶವನ್ನು ಕೊಡಲಿಲ್ಲ. ಇವೊತ್ತು ಆಡಳಿತ ಪಕ್ಷದ ಗುಂಪಿಗೆ ಸಂಬಂಧಪಟ್ಟಂಥ ಶ್ರೀಮಾನ್ ಗುರೆಡ್ಡಿಯವರ ಪ್ರಶ್ನೆಗೆ ಅವಕಾಶವನ್ನು ಕೊಟ್ಟಿದ್ದೀರಿ. ಇದರಲ್ಲಿ ಕಾಂಗ್ರೆಸ್ ಪಕ್ಷದವರಿಗೆ ಒಂದು ರೀತಿ, ವಿರೋಧ ಪಕ್ಷದವರಿಗೆ ಒಂದು ರೀತಿ ಹೀಗೆ ಒಬ್ಬೊಬ್ಬರಿಗೊಬ್ಬರಿಗೆ ಪಕ್ಷಪಾತ ಧೋರಣೆಯನ್ನು ಅನುಸರಿಸುವ ಹಾಗೆ ಕಾಣುತ್ತದೆ. ನಿನ್ನೆ ನನ್ನ ಪ್ರಶ್ನೆ ಸೂಕ್ಷ್ಮವಾಗಿ, ನೇರವಾಗಿದ್ದರೂ ಸಹ ಅದಕ್ಕೆ ಅವಕಾಶವನ್ನು ಕೊಡಲಿಲ್ಲ. ಇವೊತ್ತು ಶ್ರೀಮಾನ್ ಗುರೆಡ್ಡಿಯವರು ಹಾಕಿದಂತಹ ಪ್ರಶ್ನೆ ಸರ್ಕಾರದ ನೀತಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದ್ದರೂ ಅದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ, ಇದು ಪಕ್ಷಪಾತದಿಂದ ಕೂಡಿದೆ ಎಂದು ನನಗೆ ಈ ವಿಚಾರದಲ್ಲಿ ಅನುಮಾನ ಬರುತ್ತದೆ. ಒಬ್ಬೊಬ್ಬರ ವಿಚಾರದಲ್ಲಿ ಒಂದೊಂದು ರೀತಿಯ ಅಳತೆ ಕೋಲನ್ನು ಉಪಯೋಗಿಸಿದರೆ ಮಾತನಾಡುವುದಕ್ಕೆ ಕೂಡ ಬೇಜಾರು ಆಗುತ್ತದೆ. ಆದ್ದರಿಂದ ಈ ಪ್ರಶ್ನೆಗಳ ವಿಚಾರದಲ್ಲಿ ಪ್ರತಿಯೊಬ್ಬರಿಗೂ ಒಂದೇ ರೀತಿಯ ಧೋರಣೆಯನ್ನು ಅನುಸರಿಸಬೇಕು. ಅವರು ಹೆಚ್ಚು ಇವರು ಕಡಿಮೆ ಎನ್ನುವ ಮನೋಭಾವನೆಯನ್ನು ತಾಳಬಾರದು. ಈ ಪ್ರಶ್ನೆಗಳ ವಿಚಾರದಲ್ಲಿ ಪ್ರತಿಯೊಬ್ಬರಿಗೂ ಒಂದೇ ಅಳತೆ ಕೋಲನಲ್ಲಿ ಅಳೆದು ನಮ್ಮ ಆಶೆಯನ್ನು ತಾವು ನೆರವೇರಿಸುತ್ತೀರೆಂದು ನಾನು ನಂಬಿಕೊಂಡಿದ್ದೇನೆ.

Mr. SPEAKER.—I have heard the hon. members Sri Hutchmasthy Gowda and Sri Srikantaiah. I can catagorically state that I never make a distinction between member and member. That is never my intention. I shall always follow that principle. That is a sort of my creed, so to say. I shall be always impartial in this House and I shall give equal opportunities to all.

Now a case is made out that I allowed one supplementary question which was outside the scope of the main question to the hon. Member Sri Gurreddi. I do not remember that. I shall find out from the record and see what has happened.

Sri M. NAGAPPA.—Will it be expunged ?

Mr. SPEAKER.—I shall find out from the record.

† **Sri K. H. PATIL** (Hubli).—Before concluding your ruling, I would like to state one thing. If Sri Gurreddi has been permitted by the Speaker today to ask some question on policy matter in the interest of the State the Speaker has not acted wrongly in my opinion. If Sri Srikantaiah also had been allowed to ask a similar question yesterday, it would have been better. I do not know what made the Speaker not to permit it yesterday. But if the Speaker has corrected himself today looking to the atmosphere that prevailed in the House yesterday, it is something good and I do hope that Sri Hutchmasthy Gowda and Sri Srikantaiah will agree with me that in the interest of the State sometimes we will have to ask questions pertaining to policy matters because there is no hide and seek in such matters as the policy is well known to all the officers. When the officials and officers can know the policy matters, why this House should not know the policy of the Government ? I feel, the Chair should not expunge it. If Sri Gureddi has been permitted a supplementary on a policy matter, It is a healthy precedent and that precedent will change yesterday's Ruling.

Mr. SPEAKER.—I shall send for the record and consider it.

Sri D. B. KALMANKAR (Aland).—Sir, I want that yesterday's Ruling may be revised.

Mr. SPEAKER.—I shall examine and state the correct position.

ಶ್ರೀ ಎಸ್. ಬಂಗಾರಪ್ಪ (ಸೊರಬ).—ತಾವು ಪರಿಶೀಲನೆ ಮಾಡಬಹುದು. ಆದರೆ ಶ್ರೀ ಗುರೆಡ್ಡಿಯವರು ನೀತಿಗೆ ಸಂಬಂಧಪಟ್ಟ ವಿಚಾರದ ಮೇಲೆ ಪ್ರಶ್ನೆ ಕೇಳಿದ್ದಾರೆ. ಅದನ್ನು ಎಕ್ಸ್‌ಪಂಜ್ ಮಾಡಬೇಡಿ.

Mr. SPEAKER.—I do not remember. I will look into the record and then give my considered opinion. I shall see the rules and interpret it correctly.

Calling Attention to Matters of Urgent Public Importance

(i) *Robbery near Raichur.*

ಶ್ರೀ ಎಂ. ನಾಗಪ್ಪ.—ಜರೂರಾದ ಸಾರ್ವಜನಿಕ ಪ್ರಾಮುಖ್ಯತೆಯ ವಿಚಾರವೊಂದನ್ನು ಎಂದರೆ, 1969ನೇ ಇಸವಿಯ ಫೆಬ್ರುವರಿ 24 ಅಥವಾ 25ರ ಮಧ್ಯದಲ್ಲಿ ರಾಯಚೂರಿನ ಬಳಿ ದರೋಡೆ ನಡೆದಿರುವ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

† **Sri VEERENDRA PATIL** (Chief Minister).—It is reported that no complaint has been lodged with the jurisdictional police about the alleged incident. It is further reported that Sri Gulappa, who was contacted by the Police, has stated that no such incident has taken place.

ಶ್ರೀ ಎಂ ನಾಗಪ್ಪ.—ಯಾವ ಸ್ಥಳದಲ್ಲಿ ದರೋಡೆ ನಡೆದಿದೆ ಎಂದು ಹೇಳಿದ್ದೇನೋ ಆ ಸ್ಥಳಕ್ಕೆ ನಾಲ್ಕೈದು ಮೈಲಿ ಹತ್ತಿರ ಶಿರವಾರ ಪೋಲೀಸ್ ಸ್ಟೇಷನ್ ಇದೆ. ಮತ್ತು ಆ ಸ್ಥಳದ ಹತ್ತಿರವೇ ಹಿಂದೆ 22 ಜನರು ಒಂದು ಕಣವನ್ನು ಲೂಟಿ ಮಾಡಿದ್ದಕ್ಕೆ ಈ ಕೇಸ್ ಸಂಬಂಧಪಟ್ಟಿದೆ. ಈ ಕೇಸ್ ರಿಜಿಸ್ಟರ್ ಆಗದಿರುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಅದು ಇನ್ನೊಂದು ಕೇಸ್ ಇರಬಹುದು. ಈ ಕೇಸ್‌ನಲ್ಲಿ Gulappa of Hukrani, Taluk Manvi—ಎನ್ನುವವರು ಆ ರೀತಿಯಿಂದ ಆಗಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಂದಮೇಲೆ ನಾವು ಇನ್ನು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಗೊತ್ತಿಲ್ಲ.

(ii) *Scarcity of Water in some Villages in Jamkhandi Taluk*

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಜರೂರಾದ ಸಾರ್ವಜನಿಕ ಪ್ರಾಮುಖ್ಯತೆಯ ವಿಚಾರವೊಂದನ್ನು ಎಂದರೆ, ಜಮಖಂಡಿ ತಾಲ್ಲೂಕಿನ ಕೃಷ್ಣಾ ನದೀ ದಂಡೆಗಳ ಮೇಲಿನ ರಬಕವಿ-ಬನಹಟ್ಟಿ ಮತ್ತು ಇತರ ಗ್ರಾಮಗಳಲ್ಲಿ ನೀರಿನ ಅಭಾವವಿರುವ ವಿಚಾರವನ್ನು ಅಭಿವೃದ್ಧಿ ಮಂತ್ರಿಗಳ ಗಮನಕ್ಕೆ ತರುತ್ತೇನೆ.

† **Sri B. L. GOWDA** (Deputy Minister for Co-operation).—There is no anxiety for drinking water in the nearby villages of Krishna River due to water scarcity in the Krishna River. Though the piped water supply to the twin towns of Rabakavi–Banahatti has been stopped from 10-2-1969 due to paucity of water in the river Krishna, the water requirement of these twin towns is being met from local private drinking water wells and Irrigation wells. However, to meet any possible emergency that may arise from May, 1969 to the end of June, 1969 action is being taken by the Executive Engineer, Public Health Engineering Division, Belgaum to prepare a scheme of pumping water from "Gulli Madavu" in the Krishna river at an estimated cost of

(SRI B. L. GOWDA).

Rs. 1,06,000 which will supply 5 gallons of water per head per day to the 30,000 strong population residing in Rabakavi-Banahatti. The Rabakavi-Banahatti Town Municipal Council has already accepted this scheme and is making preparations for raising loans. The scheme is likely to be completed in about four weeks or even earlier.

There are no complaints so far regarding scarcity of water in any of the other villages on the bank of Krishna river in Jamkhandi Taluka. Alternative steps will be taken by Government soon after hearing from the Deputy Commissioner, Bijapur, if nead be.

ಶ್ರೀ ಸದಾಶಿವಪ್ಪ ಪಾಟೀಲ್:—ಕುಡಿಯುವ ನೀರಿನ ಬಾವಿಗಳಿಂದ ನೀರನ್ನು ಪೈಪ್‌ಗಳ ಮೂಲಕ ಒದಗಿಸಲಾಗುತ್ತದೆ ಎಂದು ಹೇಳಿದ್ದೀರಿ. ಇದಕ್ಕಾಗಿ ಎಸ್ಟಿಮೇಟ್ ತಯಾರಾಗಿದೆ ಎಂದು ಕೂಡ ಹೇಳಿದ್ದೀರಿ. ಈ ಕೆಲಸ ಪ್ರಾರಂಭವಾಗಿ ಮುಗಿಯಬೇಕಾದರೆ ಬಹಳ ಕಾಲವಾಗುತ್ತದೆ. ಬೇಸಿಗೆಯಲ್ಲಿ ನೀರನ್ನು ಸರಬರಾಜು ಮಾಡುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಬಿ. ಎಲ್. ಗೌಡ.—ಎಸ್ಟಿಮೇಟ್ ಮಂಜೂರಾಗಿ ಕೆಲಸ ಪ್ರಾರಂಭವಾಗಿದೆ. ಇಂಜಿನಿಯರುಗಳಿಗೆ ಕೆಲಸವನ್ನು ಜಾಗ್ರತೆ ಮಾಡಬೇಕೆಂದು ಹುಕುಂ ಹೋಗಿದೆ. ಇನ್ನು 2-3 ವಾರಗಳಲ್ಲಿ ಕೆಲಸ ಮುಗಿದುಹೋಗುತ್ತದೆ."

Fourteenth Report of the Business Advisory Committee Report

Mr. SPEAKER.—I beg to present the Fourteenth Report of the Business Advisory Committee.

Mr. DEPUTY SPEAKER.—I beg to move :

> "That the House agrees with the Fourteenth Report of the Business Advisory Committee."

Sri L. SRIKANTAIAH (Nanjangud).—I have every respect to the Report presented by the Business Advisory Committee. Hitherto we were under the impression that every Saturday was a holiday followed by a Sunday. I have no objection to the Committee's making the present holidays of Saturdays and Sundays as working days. But, on the assumption that Saturdays and Sundays are holidays, we have fixed up our programmes and other engagements. If all of a sudden, the programme is altered, our programme will be dislocated. I think, we all owe an obligation to the constituency members and we have to fulfil that. If Saturday the 22nd is made a working day, how are we going to accommodate ourselves? Just like A or B are answerable to somebody, we are answerable to our constituency people. I do not mean to say that I am showing any disrespect to the hon. Members of the Business Advisory Committee. Therefore, before a dicision is taken, it is better that consensus of the members is also taken, so that we can adjust our items of work or engagements. The present Report has come as a bolt from the blue. I do not know how to adjust to this altered programme. I leave it to the kind discretion of the Chair.

Sri AZEEZ SAIT.—Regarding this Report, I would like to say a few words. I may not be mistaken on either Side. The members of the Business Advisory Committee are the leaders of various parties, no doubt. But, while deciding about the business of the House, the difficulties of the other members of the House should also be taken into consideration. ಬೆಳಿಗ್ಗೆ ಮಧ್ಯಾಹ್ನ ಮತ್ತು ರಾತ್ರಿ 8 ಗಂಟೆಯವರೆಗೆ ಈ ರೀತಿ ಸಭೆಯನ್ನು ಮುನಿಸಿಪಾಲಿಟಿಯವರು ಸಹ ನಡೆಸುವುದಿಲ್ಲ. ಶನಿವಾರ ಸಭೆ ನಡೆಯುವುದಿಲ್ಲ ಎಂದು ಒಂದು ಸಾರಿ ಹೇಳುವುದು, ಇನ್ನೊಂದು ಸಾರಿ ಶನಿವಾರ ನಡೆಯುತ್ತದೆ ಎಂದು ಹೇಳುವುದು. ಈ ರೀತಿ ಆಗಾಗ್ಗೆ ಬದಲಾವಣೆ ಮಾಡುತ್ತಿರುತ್ತಾರೆಂದು ನಾನು ತಿಳಿದಿರಲಿಲ್ಲ. ಹಿಂದೆ ಈ ಸಭೆಯಲ್ಲಿ ವಿರೋಧಪಕ್ಷದವರು 50 ಜನ ಇದ್ದರು. ಈಗ 90 ಜನ ಇದ್ದಾರೆ. ಹಿಂದೆ ಮಾನ್ಯ ಸದಸ್ಯರುಗಳು ಮಾತನಾಡುವುದಕ್ಕೆ ಎಷ್ಟು ಸಮಯ ಇಟ್ಟಿದ್ದರೋ ಅಷ್ಟೇ ಸಮಯವನ್ನು ಈಗಲೂ ಇಟ್ಟಿದ್ದಾರೆ. ಅದು ಸರಿಯಲ್ಲ. ಟೈಮನ್ನು ಜಾಸ್ತಿ ಮಾಡಬೇಕು. ಶನಿವಾರ ಮತ್ತು ಭಾನುವಾರ ಸಭೆ ಸೇರುವುದಿಲ್ಲವಾದಕಾರಣ ಬಾಕಿ ದಿನಗಳಲ್ಲಿ 1 ರಿಂದ 7 ಗಂಟೆಯವರೆಗೆ ಸಭೆ ನಡೆಸಬೇಕೆಂದು ತೀರ್ಮಾನ ಮಾಡಿ ಈಗ ರಾತ್ರಿ 9 ಗಂಟೆಯವರೆಗೆ ಸಭೆ ನಡೆಸಿ ನಮ್ಮ ಜೀವವನ್ನು ತೆಗೆಯುತ್ತಿದ್ದಾರೆ. ಈಗ ಬಿಜಿನೆಸ್ ಅಡ್ವೈಸರಿ ಕಮಿಟಿಯವರು ಮತ್ತೆ ಈ ಬಗ್ಗೆ ಏನು ತೀರ್ಮಾನ ಮಾಡಿದ್ದಾರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ ಮತ್ತು ಅದಕ್ಕೆ ಮಾನ್ಯತೆ ಇಲ್ಲ.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ಮಾನ್ಯ ಸದಸ್ಯರು ಹೇಳುವುದರಲ್ಲಿ ಸ್ವಲ್ಪ ಕಾರಣವೂ ಇದೆ. ಶನಿವಾರ ನಾವು ಸಭೆಯಲ್ಲಿ ಕುಳಿತುಕೊಳ್ಳಕೂಡದು ಎಂದು ಒಂದು ನಿಯಮ ಮಾಡಿರುವುದರಿಂದ ಬಡ್ಜೆಟ್ಟನ್ನು ತಂದು ಅಲ್ಲಿ ಪಾಸುಮಾಡಲು ಅವಕಾಶ ಮಾಡಿಕೊಡಬೇಕು ಎಂದು ಕೆಲಸದಸ್ಯರಿಂದ ಮನವಿಗಳು ಬಂದವು. ಅಲ್ಲದೆ ಚರ್ಚೆಗೆ ಸಾಕಷ್ಟು ಅವಕಾಶಗಳೂ ಇರಬೇಕು ಎಂದು ಶನಿವಾರ ಮಾಡಲೇಬೇಕಾಗಿ ಬಂತು. ಇದರಲ್ಲಿ ಇನ್ನೊಂದು ತೊಂದರೆ ಬಂದುದು ಯುಗಾದಿ ಹಬ್ಬ ಬಂದಿದೆ. ಇದಕ್ಕಾಗಿ ಎಲ್ಲ ಸದಸ್ಯರುಗಳೂ ಹಬ್ಬಕ್ಕೆ ಊರಿಗೆ ಹೋಗಬೇಕಾಗುತ್ತೆ ಎಂದು ಚರ್ಚೆಗೆ ಬಂದುದರಿಂದ 22ನೇ ತಾರೀಖು ಶನಿವಾರ ಒಂದು ದಿನವೂ ಈ ಸಭೆಯಲ್ಲಿ ಚರ್ಚೆಗೆ ಅವಕಾಶಮಾಡಿಕೊಡಬೇಕು ಎಂದು ಕಾಲಾವಕಾಶ ಕೊಡಲಾಗಿದೆ. ಇದನ್ನು ವಿಧಿ ಇಲ್ಲದೆ ಒಪ್ಪಿಕೊಳ್ಳಬೇಕಾಗಿ ಬಂತು. ಆದುದರಿಂದ ಇಲ್ಲಿ ಬಂದಿರುವ ಬಿಸಿನೆಸ್ ಅಡ್ವೈಸರಿ ಕಮಿಟಿಯ ವರದಿಯಂತೆ ನಾವು ಸ್ವಲ್ಪ ಬದಲಾವಣೆ ಮಾಡಿರುವುದಕ್ಕಾಗಿ ತಮ್ಮ ಕ್ಷಮಾಪಣೆ ಕೇಳುತ್ತೇನೆ. ಇದನ್ನು ಹಾಗೇ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is:

"That the Assembly agrees with the Fourteenth Report of the Business Advisory Committee."

The motion was adopted.

Mr. SPEAKER.—The report is adopted.

Sri B. P. GANGADHAR.—Sir, I had sent a notice in respect of high-way robbery in Makalidurga on Monday night.

Mr. SPEAKER.—I will look into that. I call upon Hon. Member Sri C. M. S. Sastry to speak on Demands for Grants.

Budget Estimates for 1969-70

DEMANDS FOR GRANTS—DEMANDS NOS. 10, 12 AND 13

(Debate continued)

† ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಮಾನ್ಯ ಅಧ್ಯಕ್ಷರೇ, 1969-70ನೇ ಸಾಲಿಗೆ ಸಾಮಾನ್ಯ ಆಡಳಿತ ಇಲಾಖೆಗೆ ನಮ್ಮ ಮುಂದೆ ಇಟ್ಟಿರುವ ಬಡ್ಜೆಟ್ಟಿನಲ್ಲಿ ರೂಪಾಯಿ 4,48,45,000 ಎಂದು ಇಟ್ಟಿರುವ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

1940-41ನೇ ಸಾಲಿನಲ್ಲಿ ಇಡೀ ಮೈಸೂರು ಸಂಸ್ಥಾನದ ಆದಾಯ ಎಷ್ಟು ಇತ್ತೋ ಅಷ್ಟು ಮೊಬಲಗನ್ನು ಇವೊತ್ತು ಸಾಮಾನ್ಯ ಆಡಳಿತದ ಇಲಾಖೆಗಾಗಿ ಖರ್ಚುಮಾಡುತ್ತಿದ್ದಾರೆ. 1940-41ರಲ್ಲಿ ಮೈಸೂರು ಸಂಸ್ಥಾನದ ಆದಾಯ 4.75 ಕೋಟಿ ರೂಪಾಯಿ ಇತ್ತು ಮತ್ತು ಖರ್ಚು 4.73 ಕೋಟಿ ರೂಪಾಯಿ ಇತ್ತು. ಇಂದು ನಮ್ಮ ಸರಕಾರ ಇಟ್ಟಿರುವ ಬಜೆಟ್ಟಿನಲ್ಲಿ ಕೆಲವು ಬಾಬುಗಳನ್ನು ಕಡಿಮೆ ಮಾಡಿ ಬಡವರಿಗೆ ಅನುಕೂಲ ಮಾಡುವ ಆಸೆ ಇದ್ದರೆ ಉಳಿತಾಯದ ಬಜೆಟ್ ಮಾಡಬಹುದಾಗಿತ್ತು. ಆದರೆ ಇಂದು ಇಲ್ಲಿ ಬಂದಿರುವುದು ಡೆಫಿಸಿಟ್ ಬಜೆಟ್ಟು. ಇಷ್ಟು ವರಮಾನ ಸರಕಾರಕ್ಕೆ ಬರುತ್ತಿದ್ದರೂ ಸರಕಾರ ವಿವಿಧ ಇಲಾಖೆಗಳಿಗಾಗಿ ಖರ್ಚು ಮಾಡುವುದನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡಿದ್ದರೆ ಅದರಿಂದ ಜನತೆಗೆ ಹೆಚ್ಚು ಅನುಕೂಲಗಳು ಸಿಗುತ್ತಿತ್ತು ಎನ್ನುವುದನ್ನು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಸಾಮಾನ್ಯ ಆಡಳಿತದ ಖಾತೆಗೆ ವ್ಯಯವಾಗುವ ಹಣ ಸರಿಯಾಗಿ ಆಗುತ್ತಿಲ್ಲ. ಹಣವನ್ನು ಖರ್ಚು ಮಾಡುವುದರಲ್ಲಿ ವಿತರಣೆ ಇಲ್ಲ. ಎಲ್ಲ ಖರ್ಚುಗಳೂ ಅಧಿಕಾರಿಗಳ ಸಂಖ್ಯೆಯನ್ನು ದಿನೇ ದಿನೇ ಜಾಸ್ತಿಮಾಡುವುದರಿಂದಾಗುತ್ತಿದೆ. ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆಯೇ ವಿನಾ ಆಡಳಿತವನ್ನು ದಕ್ಷತೆಯಿಂದ ನಿರ್ವಹಣೆ ಮಾಡುತ್ತಿಲ್ಲ. ಇದಕ್ಕೆ ಕೊಡುವ ಹಣ ಸರಿಯಾಗಿದೆ ಎಂದು ನಾನು ಒಪ್ಪುವುದಕ್ಕೆ ತಯಾರಾಗಿಲ್ಲ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬರುವುದಕ್ಕೆ ಮುನ್ನ ಅಧಿಕಾರಿಗಳಿಗಾಗಿ ಏನು ಖರ್ಚು ಮಾಡುತ್ತಿದ್ದೆವೋ ಅದಕ್ಕಿಂತ ನೂರು ಪಾಲು ಖರ್ಚು ಈಗ ಜಾಸ್ತಿಯಾಗುತ್ತಿದೆ. ಒಂದು ವಿಷಯ ಹೇಳಬೇಕೆಂದರೆ, ರಾಜ್ಯಪಾಲರಿಗೆ ವರ್ಷ ಒಂದಕ್ಕೆ ಸುಮಾರು 19 ಲಕ್ಷ ರೂಪಾಯಿಗಳಷ್ಟು ಖರ್ಚುಮಾಡುತ್ತಿದ್ದಾರೆ. ಇದರಲ್ಲಿ ಇವರ ಆಫೀಸರುಗಳಿಗಾಗಿ ಎಂದು ಖರ್ಚು 2,50,000 ರೂಪಾಯಿಗಳು ಬರುತ್ತದೆ. ಇದರಲ್ಲಿ ಖರ್ಚು 1,50,000 ರೂಪಾಯಿ ಎಂದು ಇದೆ.

ಶ್ರೀ ಕೆ. ಹೆಚ್. ಶ್ರೀನಿವಾಸ.—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ : ರಾಜ್ಯಪಾಲರ ಬಗ್ಗೆ ಏನು ಹಣ ಖರ್ಚಾಗುತ್ತಿವೆ ಅದು ಇಲ್ಲಿ ಮಾತಾಡುವುದು ಸರಿಯಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಡಿಮ್ಯಾಂಡಿನಲ್ಲಿ ಏನು ಹೇಳಿದ್ದಾರೆ? ಅದರಲ್ಲಿ 19 ಲಕ್ಷ ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಮಾತ್ರ ನಾನು ಹೇಳುತ್ತಿರುವುದು. ಇದರಲ್ಲಿ ಅಪ್ರಾಕ್ಸಿಮೇಟಾಗಿ 50 ಸಾವಿರ ರೂಪಾಯಿ ನೀರು ದೀಪಗಳಿಗಾಗಿ ಖರ್ಚು ಆಗುತ್ತೆ ಎಂತಲೂ ಹೇಳಿದ್ದಾರೆ. 1941–42ರಲ್ಲಿ ನಮ್ಮ ಬೇಜವಾಬುದಾರಿ ಸರಕಾರ ಇದ್ದಾಗ ಸರಕಾರದವರು ಆಗ ಅಲ್ಲಿದ್ದ ದಿವಾನರವರಿಗಾಗಿ ವರ್ಷಕ್ಕೆ 8,700 ರೂಪಾಯಿಗಳಷ್ಟು ಮಾತ್ರ ಖರ್ಚಾಗುತ್ತಿತ್ತು. ಇದು ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ. ಈಗ ಅಧಿಕಾರದಲ್ಲಿರುವ ಆಡಳಿತ ಪಕ್ಷದವರು ಹಿಂದೆ ಜನಸಾಮಾನ್ಯರಿಗೆ ಅನುಕೂಲಗಳನ್ನು ಮಾಡಿಕೊಡುತ್ತೇವೆ ಎಂದು ಆಶ್ವಾಸನೆಗಳನ್ನು ಕೊಟ್ಟಿದ್ದರು.

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸು, ಯೋಜನೆ, ಯುವಕ ಅಭಿವೃದ್ಧಿ ಶಾಖೆಗಳ ಮಂತ್ರಿಗಳು).—ಆಗ ಎಂ. ಎಲ್. ಎ. ಹಾಗೂ ಎಂ. ಎಲ್. ಸಿ. ಗಳಿಗೆ ಏನು ಸಂಬಳ ಕೊಡುತ್ತಿದ್ದರು, ಈಗ ಎಷ್ಟು ಕೊಡುತ್ತಿದ್ದೇವೆ ? ಇದನ್ನೂ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವರಾಜ್ಯ ಬರುವುದಕ್ಕೆ ಮುಂಚಿತವಾಗಿ ನಮ್ಮ ರಾಜ್ಯದಲ್ಲಿ ಎಷ್ಟು ಅಧಿಕಾರಿಗಳಿದ್ದರು ಈಗ ಎಷ್ಟು ಇದ್ದಾರೆ ಇದನ್ನೂ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ನಾನು ಹೇಳುತ್ತಿರುವುದು ಅಧಿಕಾರಿಗಳೇ ಆಗಲಿ, ಮಂತ್ರಿಗಳೇ ಆಗಲೀ ಅಥವಾ ಗವರ್ನರುಗಳೇ ಆಗಲೀ ಒಂದು ತಿಂಗಳಿಗೆ ಒಂದು ಸಾವಿರಕ್ಕಿಂತ ಮೇಲ್ಪಟ್ಟು ಅವರು ಯಾರೂ ಸಂಬಳವನ್ನು ತೆಗೆದುಕೊಳ್ಳಕೂಡದು ಎಂದು ಹೇಳಿ ಹಿಂದೆ ಜನರಿಗೆ ಆಶ್ವಾಸನೆ ಕೊಟ್ಟಿದ್ದರು. ಇದೇ ರೀತಿಯಲ್ಲಿ ನಮ್ಮ ಜನಸಾಮಾನ್ಯರಿಗೆ ಹೊಟ್ಟೆ ತುಂಬಾ ಅನ್ನ, ಮೈತುಂಬಾ ಬಟ್ಟೆ ಮತ್ತು ಇವರುಗಳ ವಾಸಕ್ಕೆ ವಸತಿ ಮತ್ತು ಮಕ್ಕಳಿಗೆ ಉತ್ತಮವಾದ ವಿದ್ಯಾಭ್ಯಾಸ ಇವನ್ನು ದೊರಕಿಸಿಕೊಡುತ್ತೇವೆ ಎಂದು ಹೇಳಿ ಕೊಟ್ಟ ಒಂದು ಆಶ್ವಾಸನೆಯನ್ನು ಇಂದು ನೆರವೇರಿಸಿ ಕೊಟ್ಟಿಲ್ಲ ಎಂದು ಹೇಳಲು ಇಚ್ಛಿಸುತ್ತೇನೆ.

ಇನ್ನು ಮಂತ್ರಿಗಳ ವಿಚಾರವನ್ನು ತೆಗೆದುಕೊಳ್ಳುವುದಾದರೆ ಈವೊತ್ತು ಒಂದು ವರ್ಷಕ್ಕೆ ಒಬ್ಬ ಮಂತ್ರಿಗೆ ಒಂದು ಲಕ್ಷ ರೂಪಾಯಿ ಖರ್ಚು ಆಗುತ್ತದೆ. ಇದು ಏನು ಸ್ವಾಮಿ, ನನಗಂತೂ ಅರ್ಥವಾಗುವುದಿಲ್ಲ. ದೇಶದಲ್ಲಿ ರೈತನ ರಾಜ್ಯ ಅನ್ನತಕ್ಕಂಥಾ ರಾಜ್ಯದಲ್ಲಿ ಒಂದು ವರ್ಷಕ್ಕೆ ಒಂದು ಲಕ್ಷ ರೂಪಾಯಿ ಖರ್ಚು ಮಾಡುವುದು ಯೋಗ್ಯವೇ ಎನ್ನುವುದನ್ನು ಅವರೇ ವಿಚಾರ ಮಾಡಬೇಕು. ಈಗ ಮಂತ್ರಿಗಳ ಸಂಖ್ಯೆ 28 ಇದೆ. ಅವರಿಗೆ 24 ಲಕ್ಷ 95 ಸಹಸ್ರ ರೂಪಾಯಿಗಳ

ಬೇಡಿಕೆಯನ್ನು ಇಟ್ಟಿದ್ದಾರೆ. ಇನ್ನು ಎಷ್ಟು ಖರ್ಚಾಗುತ್ತದೋ ಗೊತ್ತಿಲ್ಲ. ಸರಾಸರಿ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಒಂದು ಮಾಡಿದ್ದಾರೆ. ಸ್ವರಾಜ್ಯ ಬರುವುದಕ್ಕೆ ಮುಂದೆ ಜನತೆಗೆ ಏನು ಆಶ್ವಾಸನೆ ಕೊಟ್ಟಿದ್ದೀರೋ ಅದನ್ನು ಜ್ಞಾಪಕ ಮಾಡಿಕೊಳ್ಳಿ. ಆ ಆಶ್ವಾಸನೆಯನ್ನು ನೆರವೇರಿಸದೇ ಹೋದರೆ ಜನತೆ ಏನು ಮಾಡುತ್ತಾರೆ ಎಂಬುದನ್ನು ನೆನಪು ಮಾಡಿಕೊಳ್ಳಬೇಕು. ಈಗಾಗಲೇ ಅನೇಕ ಕಡೆ ಮಧ್ಯಕಾಲೀನ ಚುನಾವಣೆಯಲ್ಲಿ ಜನತೆ ಎಚ್ಚರಿಕೆ ಕೊಟ್ಟಿದ್ದಾರೆ. ಈಗ ನಿಮ್ಮ ಪಕ್ಷ ಮೆಜಾರಿಟಿ ಇರಬಹುದು. ಆದರೆ ನಿಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ನಡೆದುಕೊಂಡು ಹೋದರೆ ಜನತೆ ಸುಮ್ಮನೆ ಕೂತುಕೊಳ್ಳುವುದಿಲ್ಲ. ಜನ ನಿಮ್ಮನ್ನು ಆಗಾಗ್ಗೆ ಎಚ್ಚರಿಸುತ್ತಿದ್ದಾರೆ. ನಾವು ಸ್ವರಾಜ್ಯವನ್ನು ತೆಗೆದುಕೊಂಡಿದ್ದೇವೆ, ನಾವು ಸರ್ಕಾರವನ್ನು ನಡೆಸುತ್ತಿದ್ದೇವೆ, ನಾವು ಏನು ಬೇಕಾದರೂ ಮಾಡಬಹುದು ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಅದು ತಪ್ಪು. ಸ್ವರಾಜ್ಯ ಪಡೆದುಕೊಳ್ಳಬೇಕಾದರೆ ಇಡಿ ದೇಶದಲ್ಲಿರತಕ್ಕಂಥ ವಿರೋಧ ಪಕ್ಷದ ಜನ ಮತ್ತು ಹೊರಗಡೆ ಅನೇಕ ಜನರು ಮಾಡಿದ ತ್ಯಾಗದ ಫಲವಾಗಿ ಈವೊತ್ತು ದೇಶಕ್ಕೆ ಸ್ವರಾಜ್ಯ ಬಂತು. ಆದುದರಿಂದ ಸ್ವರಾಜ್ಯವನ್ನು ಉಳಿಸಿಕೊಂಡು ಹೋಗುವ ಕರ್ತವ್ಯ, ಜವಾಬ್ದಾರಿ ನಮ್ಮದೂ ಆಗಿದೆ, ನಿಮ್ಮದೂ ಆಗಿದೆ. ಈಗಾಗಲೇ ನೀವು ಮಾಡತಕ್ಕಂಥ ಅಧರ್ಮ ಅವ್ಯವಹಾರ ಏನು ಇದೆಯೋ ಅದನ್ನು ಜನತೆ ನೋಡುತ್ತಾ ಇದೆ. ಈಗಾಗಲೇ ಅನೇಕ ದೇಶಗಳಲ್ಲಿ ಲೂಟಿ, ದಂಗೆ ಆಗುತ್ತಾ ಇರುವುದನ್ನು ನೋಡುತ್ತಿದ್ದೇವೆ. ಇದಕ್ಕೆ ಕಾರಣ ಏನು ಎಂದರೆ ಆಡಳಿತದಲ್ಲಿ ಸರಿಯಾದ ದಕ್ಷತೆ ಇಲ್ಲ. ಸತ್ಯವಂತರ ಸಂಖ್ಯೆ ಕಡಿಮೆ. ಅಧಿಕಾರವರ್ಗದವರು ಸರಿಯಾದ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡುತ್ತಾ ಇಲ್ಲ ಎಂದು ಈಗಾಗಲೇ ಜನ ಎಚ್ಚೆತ್ತುಕೊಂಡಿದ್ದಾರೆ. ಈಗ ದೇಶಕ್ಕೆ ಸ್ವರಾಜ್ಯ ಬಂದು 22 ವರ್ಷವಾಯಿತು. ಆ ರಾಗಾಯಿತು ರೈತರ ಮತ್ತು ಜನಸಾಮಾನ್ಯರ ಜೀವನ ಪರಿಸ್ಥಿತಿಯು ಬೀದಿಯ ಭಿಕಾರಿಗಿಂತಲೂ ದುಸ್ತರವಾಗಿದೆ. ಅರೆಹೊಟ್ಟೆ, ಅರೆಬಟ್ಟೆ ಆಗಿ ಅವರು ತೊಳಲುತ್ತಾ ಇರುವಾಗ ತಾವು ಮಾಡುವ ಒಂದು ವೆಚ್ಚವನ್ನು ದಯವಿಟ್ಟು ನಿಲ್ಲಿಸಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಡರೈತರಿಂದ, ಜನಸಾಮಾನ್ಯರಿಂದ ಟ್ಯಾಕ್ಸನ್ನು ವಸೂಲ್ಮಾಡಿ ನೀವು ಈ ರೀತಿ ದುಂದು ವೆಚ್ಚ ಮಾಡುವುದನ್ನು ನಿಲ್ಲಿಸಬೇಕು. ಈ ದೇಶದಲ್ಲಿ ದಿನವಹಿ ಅನ್ನ ಇಲ್ಲದೆ ಅನೇಕರು ಪ್ರಾಣ ಕಳೆದುಕೊಳ್ಳುವಂಥಾದ್ದು ತಮ್ಮ ಗಮನಕ್ಕೆ ಬಂದಿರಬಹುದು. ಆ ಶಾಪ ನಿಮಗೆ ತಟ್ಟದೇ ಇರಲಾರದು. ಆದುದರಿಂದ ಈಗಲಾದರೂ ಕೂಡ ಎಚ್ಚೆತ್ತುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಡಿಮ್ಯಾಂಡ್ ನಂ. 12. 1969-70ನೇ ಸಾಲಿಗೆ ಜೈಲು ಖಾತೆಗೆ 77 ಲಕ್ಷ 69 ಸಾವಿರ ರೂಪಾಯಿ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದನ್ನೂ ಕೂಡ ವಿರೋಧಿಸುತ್ತೇನೆ. ನಿಮ್ಮ ಆಡಳಿತದಲ್ಲಿ ದಕ್ಷತೆ ಇದೆ ಎನ್ನುವುದು ಹೇಳಬೇಕಾಗಿದ್ದರೆ ಜನತೆಯ ಜೀವನದ ಮಟ್ಟ ಉತ್ತಮಗೊಳ್ಳಬೇಕಾಗಿತ್ತು, ಅಪರಾಧಿಗಳ ಸಂಖ್ಯೆ ಕಡಿಮೆಯಾಗಬೇಕಾಗಿತ್ತು. ಕೋರ್ಟುಗಳು, ಜೈಲುಗಳ ಸಂಖ್ಯೆಯೂ ಕೂಡ ಕಡಿಮೆಯಾಗಬೇಕಾಗಿತ್ತು. ಆ ರೀತಿ ಇಲ್ಲ. ಅಪರಾಧಿಗಳ ಸಂಖ್ಯೆ, ಕೋರ್ಟುಗಳ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಾ ಇದೆ. ದೇಶದಲ್ಲಿ ಸತ್ಯ, ನ್ಯಾಯ ಎಲ್ಲಿದೆ? ದೇಶದಲ್ಲಿ ಕಳ್ಳತನ, ದರೋಡೆ ನಿಂತಿದ್ದರೆ, ಜೈಲುಗಳ ಸಂಖ್ಯೆ ಕಡಿಮೆಯಾಗಿದ್ದರೆ ಆಡಳಿತದಲ್ಲಿ ದಕ್ಷತೆ ಇದೆ ಎಂದು ಹೇಳಬಹುದಾಗಿತ್ತು. ಈಗ ಅದರ ತದ್ವಿರುದ್ಧವಾಗಿ ಇದೆ. ಕಾರಣಾಂತರಗಳಿಂದ ಅಪರಾಧ ಮಾಡಿ ಶಿಕ್ಷೆಗೊಳಗಾದವರು ಜೈಲಿನಲ್ಲಿ ಮಾರ್ಪಾಡಾಗಬೇಕು. ಅದಕ್ಕೆ ಬದಲಾಗಿ ಅಲ್ಲಿನ ಕಳ್ಳರು ದೊಡ್ಡ ಕಳ್ಳರಾಗಿ ಹೊರಗಡೆ ಹೋಗಿ ಕಳ್ಳತನ ಮಾಡಿಕೊಂಡು ಪುನಃ ಬರುತ್ತಾರೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಜೈಲಿನಲ್ಲಿರತಕ್ಕಂಥ ಅಪರಾಧಿಗಳನ್ನು ಹೊರಗಡೆ ಕಳುಹಿಸಿ ಅವರು ಕಳ್ಳತನ ಮಾಡಿಕೊಂಡು ರಾತ್ರಿಗೆ ವಾಪಸ್ಸು ಬರುತ್ತಾರೆ. ಇದಕ್ಕೆ ಜೈಲಿನಲ್ಲಿರತಕ್ಕ ಸಿಬ್ಬಂದಿ ಅಧಿಕಾರಿಗಳು ಉತ್ತೇಜನ ಕೊಡುತ್ತಾರೆ. ಚಿಕ್ಕಮಗಳೂರಿನಲ್ಲಿ ನಡೆದಂಥ ಒಂದು ನಿದರ್ಶನ ಹೇಳಿದ್ದೇನೆ. ಅಲ್ಲಿ ಸಿಬ್ಬಂದಿ ಸಹಾಯವನ್ನು ಪಡೆದು ರಾತ್ರಿಯೆಲ್ಲಾ ಕಳ್ಳತನ ಮಾಡಿಕೊಂಡು ಬೆಳಗಾಗುವುದರೊಳಗೆ ಜೈಲಿನೊಳಗೆ ಬಂದು ಸೇರುತ್ತಾರೆ ಇದನ್ನು ನೋಡಿದರೆ ಆಡಳಿತದಲ್ಲಿ ಎಷ್ಟರ ಮಟ್ಟಿಗೆ ದಕ್ಷತೆ ಇದೆ ಎಂದು ಹೇಳಬಹುದು. ಏನು ಅನ್ಯಾಯ ಇದೆ ಎನ್ನುವುದನ್ನು ತಾವು ಆಲೋಚನೆ ಮಾಡಿ. ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈವೊತ್ತು ಜೈಲುಗಳ ವಿಚಾರ ಹೇಳಬೇಕಾದರೆ ಮೈಸೂರು ರಾಜ್ಯದಲ್ಲಿ ಎಲ್ಲಾ ಪಟ್ಟಣಗಳಲ್ಲೂ ಕೂಡ ಜೈಲುಗಳು ಪಟ್ಟಣದ ಮಧ್ಯದಲ್ಲಿ ಇದೆ. ಇದನ್ನು ಬದಲಾವಣೆ ಮಾಡಿ. ಹೊರಗಡೆ ಇಡಿ. ವ್ಯವಸಾಯಕ್ಕೆ ಉತ್ತಮವಾದ ಭೂಮಿ ಇರುವ ಕಡೆ ಜೈಲುಗಳನ್ನು ನಿರ್ಮಾಣ ಮಾಡಿ. ಅವರಿಗೆ ವ್ಯವಸಾಯ ಮಾಡುವುದನ್ನು ಹಚ್ಚಬೇಕು. ಆವಾಗ ಅವರ ಮನಸ್ಸು ಪರಿವರ್ತನೆ ಆಗುತ್ತದೆ. ಈವಾಗ ಜೈಲುಗಳಲ್ಲಿ ಅನೇಕ ಸಣ್ಣಪುಟ್ಟ ಕೈಗಾರಿಕೆಗಳನ್ನು ಮಾಡಿಸುವುದನ್ನು ಕಲಿಸುತ್ತಿದ್ದಾರೆ. ಅದು ಸಾಲದು. ಅವರಿಗೆ ವ್ಯವಸಾಯ

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ಮಾಡುವುದನ್ನು ಪ್ರಾರಂಭಿಸಬೇಕು. ಜೈಲಿನಿಂದ ಬಿಡುಗಡೆಯಾಗುವುದರೊಳಗೆ ಅವರು ಸತ್ಪ್ರಜೆಗಳಾಗಬೇಕು. ಅದು ಆಗಬೇಕಾದರೆ ಈ ರೀತಿ ವ್ಯವಸಾಯ ಮತ್ತು ಇತರ ಕೈಗಾರಿಕೆಗಳನ್ನು ತೆಗೆದುಕೊಂಡು ಕಲಿಸಿದರೆ ಆವಾಗ ದೇಶದಲ್ಲಿ ಕಳ್ಳತನ ದರೋಡೆ, ಕನ್ನ ಇವು ಕಡಿಮೆಯಾಗುತ್ತದೆ. ಆವಾಗ ಅವರು ಸುಶಿಕ್ಷಿತರಾಗುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈಗ ಏನಾಗಿದೆ ಎಂದರೆ ಜೈಲುಗಳು ಸಣ್ಣ ಕಳ್ಳರನ್ನು ದೊಡ್ಡ ಕಳ್ಳರನ್ನಾಗಿ ಮಾಡುವ ದೊಡ್ಡ ಕಾರ್ಖಾನೆಗಳಾಗಿವೆ. ಆದುದರಿಂದ ಕಳ್ಳನು ಒಂದು ಸಾರಿ ಜೈಲಿಗೆ ಹೋಗಿ ಬಂದರೆ ಇನ್ನೊಂದು ಸಾರಿ ದೊಡ್ಡ ಕಳ್ಳನಾಗಿ ಆಗಬಹುದು. ಜೈಲಿನಲ್ಲಿ ಈ ಪರಿಸ್ಥಿತಿ ಇರುವುದರಿಂದ ಇದು ಮಾರ್ಪಾಡಾಗಬೇಕು ಎಂದು ಹೇಳುತ್ತೇನೆ. ಆದುದರಿಂದ 1969–70ನೇ ಸಾಲಿಗೆ ಪೋಲೀಸ್ ಖಾತೆಗೆ 8 ಕೋಟಿ 57 ಲಕ್ಷ 60 ಸಹಸ್ರ ರೂಪಾಯಿಗಳ ಬೇಡಿಕೆ ನಮ್ಮ ಮುಂದೆ ಏನು ಇಟ್ಟಿದ್ದಾರೆ ಅದನ್ನು ತೀವ್ರವಾಗಿ ವಿರೋಧಿಸುತ್ತೇನೆ.

ಆ ಇಲಾಖೆಯಲ್ಲಿರುವ ಕರಪ್ಷನ್ ದಿನೇ ದಿನೇ ಜಾಸ್ತಿಯಾಗಿ ಮುಗಿಲು ಮುಟ್ಟಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ದೇಶಕ್ಕೆ ರಕ್ಷಣೆ ಕೊಟ್ಟು ಕಾನೂನು ಕಟ್ಟಲೆಗಳ ಪರಿಪಾಲನೆ ಮಾಡಬೇಕಾದ ಈ ಮುಖ್ಯ ಇಲಾಖೆಯಲ್ಲಿ ಇರುವ ಅಧಿಕಾರಿಗಳು, ಕೆಳಮಟ್ಟದಿಂದ ಹಿಡಿದು ಮೇಲ್ಮಟ್ಟದವರೆಗೂ ಶೀಲವಂತರಾಗಿರಬೇಕು, ಸೌಜನ್ಯವಂತರಾಗಿರಬೇಕು, ಸತ್ಯವಂತರಾಗಿರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಭ್ರಷ್ಟಾಚಾರದಿಂದ ದೂರವಾಗಿರಬೇಕು. ಅಂಥ ಅಧಿಕಾರಿಗಳು ಬೇಕು. ಪೋಲೀಸ್ ಇಲಾಖೆಯಲ್ಲಿರುವವರೆಲ್ಲ ಭ್ರಷ್ಟಾಚಾರಿಗಳು ಎಂದು ಹೇಳುವುದಿಲ್ಲ. ನೂರಕ್ಕೆ 10 ಜನ ಒಳ್ಳೆಯ ಅಧಿಕಾರಿಗಳಿದ್ದಾರೆ. ಹೋಂ ಸೆಕ್ರೆಟರಿ ಲಕ್ಷ್ಮಣರಾಯರಂಥವರೂ ಇದ್ದಾರೆ. ಭ್ರಷ್ಟಾಚಾರ ಇಲ್ಲದೆ ಇರುವ ಅಧಿಕಾರಿಗಳನ್ನು ಈ ಇಲಾಖೆಯಲ್ಲಿ ನೇಮಕ ಮಾಡಬೇಕು.

ಪೋಲೀಸ್ ಇಲಾಖೆ ಇರತಕ್ಕದ್ದು ನಮಗೆ ಏನಾದರೂ ತೊಂದರೆ ಇದ್ದರೆ ಅದನ್ನು ಮನವಿ ಮಾಡಿಕೊಂಡರೆ ಕೂಡಲೇ ಬಂದು ಸಹಾಯ ಮಾಡುತ್ತಾರೆ, ರಕ್ಷಣೆ ಕೊಡುತ್ತಾರೆ, ಅದಕ್ಕಾಗಿ ಇದೆ ಎಂದು ತಿಳಿದುಕೊಂಡಿದ್ದೆವು. ಆದರೆ ಅದಕ್ಕೆ ವಿರುದ್ಧವಾಗಿ ಪೋಲೀಸ್ ಇಲಾಖೆ ನಡೆಯುತ್ತಿದೆ. ಪೋಲೀಸ್ ಇಲಾಖೆಗೆ ಏನಾದರೂ ದೂರು ಕಳಿಸಿದರೆ ಅದರಿಂದ ನಮಗೇ ತೊಂದರೆಯಾಗುತ್ತದೆ. ಅದಕ್ಕೆ ಒಂದು ನಿದರ್ಶನವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಧುಗಿರಿಯಲ್ಲಿ ನಡೆದುದನ್ನು ತೆಗೆದುಕೊಂಡರೆ ಅಲ್ಲಿ ಏನು ನಡೆಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಆದರೆ ಕೊನೆಗೆ ಸಾರ್ವಜನಿಕರಿಗೆ ದೊರೆತಂಥ ಪ್ರತಿಫಲ ಏನು ಎನ್ನುವುದೂ ಗೊತ್ತಿದೆ. ಇದನ್ನು ವಿಚಾರ ಮಾಡಿದರೆ ಪೋಲೀಸ್ ಇಲಾಖೆಯಿಂದ ನಮ್ಮ ಬಡ ಜನಗಳಿಗೆ, ಸಾರ್ವಜನಿಕರಿಗೆ ದಿನೇ ದಿನೇ ತೊಂದರೆಯಾಗುತ್ತಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮುಂದಾದರೂ ಕೂಡ ಪೋಲೀಸ್ ಇಲಾಖೆಗೆ—ಮೊನ್ನೆ 60 ಜನ ಪ್ರೊಬೇಷನರಿ ಸಬ್ ಇನ್‌ಸ್ಪೆಕ್ಟರುಗಳನ್ನು ತೆಗೆದುಕೊಳ್ಳುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು—ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವಾಗ ಯೋಗ್ಯರಾದವರನ್ನು ತೆಗೆದುಕೊಳ್ಳಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಪೋಲೀಸ್ ಇಲಾಖೆಯವರ ಕೆಲಸ ಕಳ್ಳರನ್ನು ಹಿಡಿಯುವುದು, ದರೋಡೆ ಮಾಡುವವರನು ಹಿಡಿಯುವುದು, ಖೂನಿ ಮಾಡಿದವರನ್ನು ಹಿಡಿಯುವುದು. ಆದರೆ ಅವರು ಮಾಡುತ್ತಿರುವ ಕೆಲಸ ಇದಲ್ಲ. ಅವರು ಮಾಡುತ್ತಿರುವುದೇನೆಂದರೆ ಜೂಜುಕಟ್ಟೆಗಳನ್ನು ನಡೆಸುವುದು ಮತ್ತು ಹೆದ್ದಾರಿ ದರೋಡೆಯನ್ನು ಪೋಲೀಸಿನವರು ಸೇರಿ ನಡೆಸತಕ್ಕದ್ದು. ಇಂಥ ಕೆಲಸಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇದು ನಿಜವಾಗಿಯೂ ಬಹಳ ಶೋಚನೀಯ. ಮೊನ್ನೆ ಬೆಂಗಳೂರು ನಗರದಲ್ಲಿ ಇದಾರು ಜನ ಪೋಲೀಸಿನವರು ಸೇರಿ ಒಬ್ಬನನ್ನು ಜೂಜಾಡುತ್ತಿದ್ದ ಎಂದು ಕೊಲೆ ಮಾಡಿದ ಆಪಾದನೆಯ ಮೇಲೆ ಈಗಾಗಲೇ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದರು. ಎಷ್ಟರ ಮಟ್ಟಿಗೆ ಅವರಿಗೆ ಶಿಕ್ಷೆಯಾಗುತ್ತದೆಯೋ ಗೊತ್ತಿಲ್ಲ. ಇಂಥ ಜೂಜುಕಟ್ಟೆಗಳು ಬೆಂಗಳೂರು ನಗರದಲ್ಲಿ, ಅದರಲ್ಲಿಯೂ ಎಲ್ಲ ಮಂತ್ರಿಗಳು, ಗೃಹ ಮಂತ್ರಿಗಳು, ಗೃಹಶಾಖೆ ಕಾರ್ಯದರ್ಶಿ, ಪೋಲೀಸ್ ಕಮಿಷನರು ಇರುವಂಥ ಪಟ್ಟಣದಲ್ಲಿ ನೂರಾರು ಜೂಜು ಕಟ್ಟೆಗಳು ಪೋಲೀಸಿನವರ ಸಹಾಯದಿಂದ ನಡೆಯುತ್ತಿವೆ ಎಂದು ಹೇಳುತ್ತೇನೆ. ಇದನ್ನು ನಿಲ್ಲಿಸದೆ ಇದ್ದರೆ ದೇಶಕ್ಕೆ ಒಳ್ಳೆಯದಾಗುವುದಿಲ್ಲ.

ವಜ್ರಗಳ ದರೋಡೆ ಪ್ರಕರಣದಲ್ಲಿ ಪೋಲೀಸಿನವರು, ಒಬ್ಬ ನ್ಯಾಯಾಧೀಶರು ಸೇರಿದ್ದಾರೆ. ಆ ವಿಚಾರ ಈಗಾಗಲೇ ಸಂಬಂಧಪಟ್ಟ ಮಂತ್ರಿಗಳಿಗೆ ಬಂದಿದೆ ಎಂದು ಕಾಣುತ್ತದೆ. ಇದರಲ್ಲಿ ಸಂಬಂಧ ಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಟೂರಿಸ್ಟ್ ಬಸ್ಸುಗಳು ಬೆಂಗಳೂರಿನಿಂದ ನಿರ್ದಿಷ್ಟವಾದ ಕಾಲಕ್ಕೆ ಹೊರಟು ಬೇರೆ ಊರುಗಳಿಗೆ ಹೋಗಿ ತಲಪುತ್ತವೆ. ನಾನು ಮೊನ್ನೆ ಆ ಬಗ್ಗೆ ಒಂದು ಪ್ರಶ್ನೆ ಕೇಳಿದಾಗ ಸಾರಿಗೆ ಸಚಿವರು ಹೇಳಿದರು ಅದನ್ನು ನಿಲ್ಲಿಸುವುದಕ್ಕೆ ನಮಗೆ ಶಕ್ತಿ ಇಲ್ಲ ಎಂದು. ಹಾಗಾದರೆ ಶಕ್ತಿ ಇರತಕ್ಕ ಸರ್ಕಾರ ಯಾವುದು? ಸಾರಿಗೆ ಸಚಿವರಿಗೆ ಶಕ್ತಿ ಇದೆಯೇ, ಮುಖ್ಯ ಮಂತ್ರಿಯವರಿಗೆ ಶಕ್ತಿ ಇವೆಯೇ? ಎನ್ನುವು ದನ್ನು ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಬೆಂಗಳೂರು ನಗರದಲ್ಲಿ ಆನಂದರಾವ್ ಸರ್ಕಲ್‌ನಿಂದ ರಾತ್ರಿ 10-30 ಗಂಟೆಗೆ ಬಹಳ ಬಸ್ಸುಗಳು ಬಿಡುತ್ತವೆ. ಎರಡು ಬಸ್ಸುಗಳು ಇಲ್ಲಿಂದ ಶಿವಮೊಗ್ಗಕ್ಕೆ ಹೋಗುತ್ತವೆ ಮತ್ತು ಅದೇ ರೀತಿ ಅಲ್ಲಿಂದ ಎರಡು ಬಸ್ಸುಗಳು ಇಲ್ಲಿಗೆ ಬರುತ್ತವೆ. ಇವು 'ಆನ್ ಕಾಂಟ್ರಾಕ್ಟ್' ಬಸ್ಸುಗಳು. ಇದಕ್ಕೆ ಅರ್ಥವಿದೆಯೇ, ಇದಕ್ಕೆ ಏನಾದರೂ ಕಾನೂನು ಕಟ್ಟಲೆ ಬೇರೆ ಇದೆಯೇ ರೂಲ್ಸ್ ನಿಯಮಗಳಿಗೆ ಅನುಸಾರವಾಗಿ ಇವು ನಡೆಯುತ್ತಿವೆಯೇ ಎಂದು ಕೇಳುತ್ತೇನೆ. ಮಾಮೂಲಾಗಿ ನಡೆಯತಕ್ಕ ಬಸ್ಸುಗಳೂ ಸಹ ಹೀಗೆ ನಡೆಯುವುದಕ್ಕೆ ಅವಕಾಶವಿಲ್ಲ. ನಮ್ಮ ಸಾರಿಗೆ ಸಚಿವರು ನಾವು ಕೇಳಿದ್ದಕ್ಕೆ ಇಲ್ಲ ಇಲ್ಲ ಎಂದು ಹೇಳುತ್ತಾರೆ. ಈ ರೀತಿಯಾಗಿ ಬಸ್ಸುಗಳು ನಡೆಯು ವುದಕ್ಕಿಂತ ಅಪರಾಧ ಬೇಕೇ? ಇದರಲ್ಲಿ ಯಾರು ಯಾರಿಗೆ ಮಾಮೂಲು ಎಷ್ಟಿದೆ ಎಂದು ಕೇಳುತ್ತೇನೆ. ಅಶೋಕ ಮತ್ತು ಜನತಾ ಎಂಬ ಎರಡು ಹೆಸರಿನ ಬಸ್ಸುಗಳು ಯಾವ ಮಾರ್ಗದಲ್ಲಿ ನಡೆಯುತ್ತವೆ ಎಂದರೆ ಮನಾಪಲ್ಲಿ ಎಂದರೆ ರಾಷ್ಟ್ರೀಕರಣವಾಗಿರತಕ್ಕ ಮಾರ್ಗಗಳಲ್ಲಿ. ಈ ರೀತಿಯಾಗಿ ಪೋಲೀಸ್ ಇಲಾಖೆಯವರ ಮತ್ತು ಆರ್.ಟಿ.ಎ. ಅವರ ಸಹಾಯವಿಲ್ಲದೆ ನಡೆಯುತ್ತಿದೆಯೇ ಎಂದು ಕೇಳುತ್ತೇನೆ. ಇನ್ನು ಯಾರಾದರೂ ಮೇಲಿನ ವರ್ಗದವರದು ಅಥವಾ ಮಂತ್ರಿಗಳದು ಸಹಾಯ ಇದಕ್ಕೆ ಇದೆಯೋ ಏನೋ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಮೊನ್ನೆ ಈ ಸಭೆಯಲ್ಲಿ ಅಶೋಕ ಮತ್ತು ಜನತಾ ಟ್ರಾವಲ್ಸ್ ಬಗ್ಗೆ ಪ್ರಶ್ನೆ ಕೇಳಿದರೂ ಕೂಡ ಆ ಬಸ್ಸುಗಳು ಧೈರ್ಯವಾಗಿ ಓಡಾಡುತ್ತಿವೆ.

ಮನಾಪಲಿ ಮಾಡುವುದರ ಅರ್ಥವೇನು? ಈ ಕಡೆ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಬಸ್ಸುಗಳನ್ನು ಓಡಿಸುವುದಕ್ಕೆ ಅವಕಾಶ ಕೊಡುವುದರ ಅರ್ಥವೇನು? ಒಂದು ಕಡೆ ಸಾರ್ವಜನಿಕರ ಹಣವನ್ನು ರಾಷ್ಟ್ರೀಕರಣ ಮಾಡಿದ್ದೇವೆಂದು ಬಸ್ಸುಗಳ ಮೇಲೆ ಹಾಕುವುದು. ಅದರಲ್ಲಿ ಕೂಡ ಇವರಿಗೆ ಮಾಮೂಲು ಉಂಟು. ಈ ಕಡೆ ಖಾಸಗಿ ಜನರಿಗೆ 'ಆನ್ ಕಾಂಟ್ರಾಕ್ಟ್' ಮೇಲೆ ಬಸ್ ಓಡಿಸಲು ಅವಕಾಶ ಕೊಟ್ಟು ಮಾಮೂಲು ಪಡೆಯುವುದು, ಹೀಗೆ ಎರಡೂ ಕಡೆಯಿಂದ ಲೂಟಿ ಮಾಡುತ್ತಿದ್ದಾರೆ. ಒಂದು ಕಡೆ ಸರ್ಕಾರದ ಹಣವನ್ನು ಹೊಡೆಯುತ್ತಿದ್ದಾರೆ, ದರೋಡೆ ಮಾಡುತ್ತಿದ್ದಾರೆಂದರೆ ತಪ್ಪಾಗ ಲಿಕ್ಕಿಲ್ಲ, ಇನ್ನೊಂದು ಕಡೆ ಸಾರ್ವಜನಿಕರು ನಡೆಸತಕ್ಕ ಬಸ್ಸುಗಳಿಂದ ಅನ್ಯಾಯವಾಗುತ್ತಿದೆ. ಈಗ ಮಾನ್ಯ ಮುಖ್ಯ ಮಂತ್ರಿಗಳಿದ್ದರೆ ಚೆನ್ನಾಗಿತ್ತು. ಅವರು ಇಲ್ಲ. ಆದರೂ ಬೇರೆ ಮಂತ್ರಿಗಳಿದ್ದಾರೆ, ಉಪಮಂತ್ರಿಗಳು ಇದ್ದಾರೆ. ಸರ್ಕಾರ ಎಂದು ಇದ್ದರೆ 24 ಗಂಟೆಗಳೊಳಗಾಗಿ ಇಂಥ 'ಆನ್ ಕಾಂಟ್ರಾಕ್ಟ್' ಎಂದು ನಡೆಯುವ ಬಸ್ಸುಗಳನ್ನೆಲ್ಲ ನಿಲ್ಲಿಸಬೇಕು.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—'ಆನ್ ಕಾಂಟ್ರಾಕ್ಟ್' ಎಂದು ಹೋಗತಕ್ಕ ಬಸ್ಸುಗಳನ್ನು ಯಾವ ಸರ್ಕಾರವೂ ನಿಲ್ಲಿಸುವುದಕ್ಕಾಗುವುದಿಲ್ಲ. ಕಾನೂನಿನಲ್ಲಿ ಅವಕಾಶ ಇರುವುದ ರಿಂದ 'ಆನ್ ಕಾಂಟ್ರಾಕ್ಟ್' ಲೈಸೆನ್ಸ್ ಸಂಬಂಧಪಟ್ಟ ಆರ್.ಟಿ.ಎ. ಅಥವಾ ಎಸ್.ಟಿ.ಎ. ಕೊಡುತ್ತಾರೆ. ಅಕಸ್ಮಾತ್ ಕೊಡುವುದಿಲ್ಲ ಎಂದರೆ ಯಾರಾದರೂ ರಿಟ್ ಹಾಕುತ್ತಾರೆ. ಕಾನೂನಿ ನಲ್ಲಿರುವುದನ್ನು ಬದಲಾಯಿಸಿದ ಹೊರತು ಈಗ ಇರುವ ಪ್ರಕಾರ ಯಾರಿಗೂ ಲೈಸೆನ್ಸ್ ಕೊಡುವುದ ಕ್ಕಾಗುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ.

3-30 P.M.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಮಾನ್ಯ ದೇವರಾಜ ಅರಸಿನವರು ಮಾಜಿ ಮಂತ್ರಿಗಳಾ ಗಿದ್ದುದರಿಂದ ಅವರು ಪರ್ಮಿಟ್ ವಿಷಯ ತಿಳಿಸಿದ್ದಾರೆ. ನನಗೆ ತಿಳಿದಮಟ್ಟಿಗೆ ನಾನು ಹೇಳಿದ್ದೇನೆ. ಪರ್ಮಿಟ್ ಕೊಡುವುದಕ್ಕೆ ಅಡ್ಡಿ ಆತಂಕವಿಲ್ಲ. ಕಂಟ್ರಾಕ್ಟ್ ಬೇಸಿಸ್ ಮೇಲೆ ಪರ್ಮಿಟ್ ಕೊಟ್ಟಾಗ ಬಸ್ಸನ್ನು ಯಾವರೀತಿ ಓಡಿಸಬೇಕು ಎಂಬುದು ಕಾನೂನಿನಲ್ಲಿ ನಿಗದಿಯಾಗಿದೆ. ಬೆಂಗಳೂರಿನಿಂದ ಹತ್ತೂವರೆಗೆ ಬಿಟ್ಟು ಶಿವಮೊಗ್ಗಕ್ಕೆ ಪ್ರಯಾಣಿಕರನ್ನು ಕರೆದುಕೊಂಡು ಹೋಗುವುದು. ಲಕ್ಷುರಿ ಬಸ್ಸಿನ ಉದ್ದೇಶ ಬೇರೆ. ಈಗ ಅನ್ಯಾಯ ನಡೆಯುತ್ತಿದೆ. ಇದನ್ನು ತಪ್ಪಿಸಲು ಪೂರ್ಣವಾಗಿ ಎಂ.ಎಸ್.ಆರ್.ಟಿ.ಸಿ. ತೆಗೆದು ಎಲ್ಲ ಬಸ್ಸುಗಳ ಸರ್ವಿಸ್ಸನ್ನೂ ಖಾಸಗಿಯವರಿಗೆ ಕೊಡಬೇಕೆಂದು

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ಖಾಸಗಿಯವರ ಪರವಾಗಿ ನಾನು ಹೇಳುತ್ತಿಲ್ಲ, ಸರಕಾರದ ಅನುಕೂಲಕ್ಕಾಗಿ ಹೇಳುತ್ತಿದ್ದೇನೆ. ಇದರಿಂದ ಸರಕಾರಕ್ಕೆ ಕೋಟಿಗಟ್ಟಲೆ ಲಾಭ ಬರುವುದು. ಈಗ ಎರಡು ಕಡೆ ಹಾನಿಯಾಗುತ್ತಿದೆ, ಇದಕ್ಕೆ ಅವಕಾಶ ಬೇಡ.

ಆಮೇಲೆ ಮಾಮೂಲಿನ ವಿಚಾರವಿದೆ. ಲಾರಿಗಳಿಗೆ ಸಂಬಂಧಪಟ್ಟಂತೆ ಹೇಳುತ್ತೇನೆ. ಈಗ ಎಲ್ಲಾ ಕಡೆಯೂ ವೇ ಬ್ರಿಡ್ಜ್‌ಗಳನ್ನು ಸ್ಥಾಪಿಸಿದ್ದಾರೆ, ಇವರಿಂದ ಬಹಳ ಅನುಕೂಲ ಪೋಲೀಸರಿಗೆ ಆಗಿದೆ, ಮಾಮೂಲು ಅವರು ತೆಗೆದುಕೊಳ್ಳಲು ಅವಕಾಶವಾಗಿದೆ, ವೇ ಬ್ರಿಡ್ಜ್‌ಗಳನ್ನು ಸ್ವಂತಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ, ಮಾಮೂಲು ತೆಗೆದುಕೊಂಡು ಬಿಡುತ್ತಿದ್ದಾರೆ. ಇದನ್ನು ಕ್ರಮ ಪಡಿಸಬೇಕು.

ಇನ್ನೊಂದು ವಿಷಯ ಗಹನವಾಗಿದೆ. ಬೆಂಗಳೂರು ಪಟ್ಟಣದಲ್ಲಿ ಗೋವಧೆ ನಡೆಯುತ್ತಿದೆ, ಅದಕ್ಕೆ ಅಡ್ಡಿಯಿಲ್ಲ ಎಂದು ದೇವರಾಜ ಅರಸರು ಹೇಳಬಹುದು. ಇದಕ್ಕೆ ಕಾನೂನು ಇದೆ, ವಧೆ ಮಾಡಬಹುದು, ವಧೆ ಮಾಡುವ ಪ್ರಾಣಿಗಳು ಯಾವರೀತಿ ಇರಬೇಕು ಎಂಬುದನ್ನು ತಿಳಿಸಿದ್ದಾರೆ. ಇಂದು ಬೆಂಗಳೂರಿನಲ್ಲಿ ಪೋಲೀಸರ ಸಹಾಯದಿಂದ ಉತ್ತಮ ರಾಸುಗಳನ್ನು ಹತ್ತು ವರ್ಷದ ಕರುಗಳನ್ನು, ಒಳ್ಳೆಯ ಹೋರಿಗಳನ್ನು ತೆಗೆದುಕೊಂಡು ಹೋಗಿ ವಧೆ ಮಾಡಿ ಮಾಂಸ ಮಾರುತ್ತಿದ್ದಾರೆ. ಗೋ ಸಂಪತ್ತು ದೇವರೆಂದು ಅದನ್ನು ಹಿಂದೂಸ್ಥಾನದಲ್ಲೆಲ್ಲಾ ಪೂಜಿಸುತ್ತಿದ್ದಾರೆ. ಇನ್‌ವ್ಯಾಲಿಡ್ ಆಗಿರುವ ಗೋವುಗಳನ್ನು ವಧೆ ಮಾಡಬಹುದು, ಕಾನೂನು ಪ್ರಕಾರ ಅದಕ್ಕೆ ಅವಕಾಶವಿದೆ. ಆದರೆ ಧೃಡಕಾಯವಾಗಿರುವ ರಾಸುಗಳನ್ನು ಲಕ್ಷಾಂತರ ರಾಸುಗಳನ್ನು ಇಂದು ಕತ್ತರಿಸುತ್ತಿದ್ದಾರೆ, ಹಾಗೆ ಮಾಡಿ ಮಾಂಸ ಮಾರಾಟವಾಡುತ್ತಿದ್ದಾರೆ. ಇದನ್ನು ಸಭೆಯ ಗಮನಕ್ಕೆ ತರುತ್ತೇನೆ. ಕಳ್ಳತನ ಬೇರೆ ಆಗುತ್ತಿದೆ, ರಾಸುಗಳನ್ನು, ಉತ್ತಮವಾಗಿರುವ ದನಗಳನ್ನು ಕಳ್ಳತನದಲ್ಲಿ ತೆಗೆದುಕೊಂಡು ಹೋಗಿ ಬುಚರ್ ಹೌಸ್‌ಗೆ ಕೊಡುತ್ತಿದ್ದಾರೆ, ಈ ತೊಂದರೆ ಜಾಸ್ತಿಯಾಗಿದೆ. ಗಾಂಧಿ ಶತಮಾನೋತ್ಸವದ ಸಂದರ್ಭದಲ್ಲಾದರೂ ಕೂಡ ಇದನ್ನು ನಿಲ್ಲಿಸಬೇಕು. ಅದು ಸಾಧ್ಯವಾಗದಿದ್ದರೆ ಈ ವರ್ಷ ಗಾಂಧಿ ಶತಮಾನೋತ್ಸವ ಮುಗಿಯುವವರೆಗಾದರೂ ನಿಲ್ಲಿಸಬೇಕು, ಕೊನೆಯ ಪಕ್ಷ ಈ ವರ್ಷವಾದರೂ ಗೋ ವಧೆಯನ್ನು ನಿಲ್ಲಿಸಬೇಕು ಗಾಂಧಿ ಶತಮಾನೋತ್ಸವ ಆಚರಿಸುವಾಗಲಾದರೂ ಗೋ ವಧೆಯನ್ನು ನಿಲ್ಲಿಸಿ ಕೃತಾರ್ಥರಾಗಲಿ ಎಂದು ಪ್ರಾರ್ಥಿಸುತ್ತೇನೆ.

ಕೊನೆಯದಾಗಿ ರಣಭೇರಿ ಪತ್ರಿಕೆಯ ವಿಚಾರ. ಪೋಲೀಸು ಇಲಾಖೆಯವರು ತಮಗೆ ಸಂಬಂಧಪಟ್ಟಂತೆ ಇರುವ ಕಾನೂನನ್ನು ದುರುಪಯೋಗಪಡಿಸುತ್ತಿದ್ದಾರೆ. ಪತ್ರಿಕೆಗಳಿಗೆ ಫ್ರೀಡಂ ಆಫ್ ಪ್ರೆಸ್ ಎಂದು ಹೇಳುವಂತೆ ಸ್ವಾತಂತ್ರ್ಯವಿದೆ. ರಾಜ್ಯಾಂಗದಲ್ಲೂ ಇದು ನಮೂದಾಗಿದೆ. ಆದರೆ ಆ ಸ್ವಾತಂತ್ರ್ಯವೆಲ್ಲಿದೆ ? ಇದು ಎಲ್ಲರಿಗೂ ಗೊತ್ತಿರುವ ವಿಷಯ, ಕಮೀಷನರಿಗೂ ಗೊತ್ತಿದೆ. ನಮ್ಮ ಸ್ನೇಹಿತರು ಮಧುಗಿರಿ ಪ್ರಕರಣದಲ್ಲಾದ ತೊಂದರೆಯನ್ನು ನೋಡಿ ಬಂದಿದ್ದಾರೆ, ಅಲ್ಲಿ ಆಗಿರುವ ತೊಂದರೆಯನ್ನು ರಣಭೇರಿ ಪತ್ರಿಕೆಯಲ್ಲಿ ಹಾಕಿದಾಗ ಇಂಥ ಸಮಾಚಾರ ಹಾಕಿದರೆ ಶಿಕ್ಷೆ ಮಾಡುವುದಾಗಿ ಹೇಳಿದ್ದಾರೆ. ಇದು ತಪ್ಪು. ಮಧುಗಿರಿ ಪ್ರಕರಣದಿಂದ ಸರಕಾರ ಇಂದು ಗೆದ್ದಿರಬಹುದು. ಅದಕ್ಕೆ ನರೋನ ಕಮಿಷನ್ ಮಾಡಿದ್ದರು, ಅವರು ಒಂದು ರೀತಿಯಲ್ಲಿ ವರದಿ ಕೊಟ್ಟಿದ್ದಾರೆ. ಏನೇ ಮಾಡಿದರೂ ಸ್ವಲ್ಪ ದಿವಸ ಕಾಯಬೇಕು. ಖಂಡಿತವಾಗಿ ಈ ಕಮಿಷನ್ ವರದಿಯು ತಪ್ಪು ಎಂಬುದು ಹೇಗಾದರೂ ಹೊರಕ್ಕೆ ಬರುತ್ತದೆ. ಇದರಿಂದ ಪ್ರತಿಫಲವೇನಾಗುವುದೆಂಬುದನ್ನು ಕಾದುನೋಡೋಣ. ಜನ ನೋಡುತ್ತಿದ್ದಾರೆ. ರಣಭೇರಿ ಪತ್ರಿಕೆಗೆ ಕೊಟ್ಟಿರುವ ನೋಟೀಸ್ ಸಮಂಜಸವಾದುದಲ್ಲ; ಕ್ರಮಬದ್ಧವಲ್ಲ. ಆದುದರಿಂದ ಈ ಕೂಡಲೆ ಸಂಬಂಧಪಟ್ಟ ಅಧಿಕಾರಿಗಳು ಕೊಟ್ಟಿರುವ ನೋಟೀಸನ್ನು ವಾಪಸು ಪಡೆಯಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಈ ದೇಶದಲ್ಲಿರುವ ರೂಲ್ ಆಫ್ ಲಾ ಗೆ ಗೌರವ ಕೊಡಬೇಕು. ಆ ಉದ್ದೇಶವಿದ್ದರೆ ಹೇಗಾದರೂ ಅನುಕೂಲವಾಗುವುದು. ಆದರೆ ಇಂದು ಆಡಳಿತ ಪಕ್ಷ ಅದನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ಕೆಲವು ವರ್ಷ ಚೆನ್ನಾಗಿ ಆಡಳಿತ ನಡೆಯುತ್ತಿತ್ತು. ಸ್ವರಾಜ್ಯ ಬಂದಮೇಲೆ 5–10 ವರ್ಷ ಚೆನ್ನಾಗಿತ್ತು. ಈಗ ಅಧರ್ಮ ನೆಲಸಿದೆ. ರೂಲ್ ಆಫ್ ಲಾ ಗೆ ವಿರೋಧ ಪಕ್ಷದವರೂ ಮತ್ತಿತರರೂ ಗೌರವ ಕೊಡಲೇಬೇಕು. ಇಂದು ಅದಕ್ಕೆ ಕೆಲವರು ಗೌರವ ಕೊಡುತ್ತಿಲ್ಲ, ದೇಶದಲ್ಲಿ ರೂಲ್ ಆಫ್ ಲಾ ಗೆ ಅವಕಾಶ ಇರಬೇಕೇ ವಿನಾ ರೂಲ್ ಆಫ್ ಜಂಗಲ್ ಇರಬಾರದು. ರೂಲ್ ಆಫ್ ಜಂಗಲ್ ಈಗಿದೆ ಎಂದು ಸಿದ್ಧವೀರಪ್ಪನವರು ಹೇಳಿದರು. ಆದುದರಿಂದ ಇಂದು ದೇಶದಲ್ಲಿ ಮನಸ್ಸಿಗೆ ಬಂದಹಾಗೆ ನಡೆದು ತೊಂದರೆ ಮಾಡುತ್ತಿದ್ದಾರೆ. ಸ್ವರಾಜ್ಯ ಉಳಿಸಿಕೊಳ್ಳಬೇಕೆಂಬ ಅಪೇಕ್ಷೆಯಿದ್ದರೆ ಕಾನೂನಿ

ನಂತೆ ನಡೆಯಬೇಕು. ಸರಿಯಾದ ಮಾರ್ಗದಲ್ಲಿ ನಡೆಯದಿದ್ದರೆ ದೇಶದಲ್ಲಿರುವ ಜನರು ದಂಗೆ ಎದ್ದು ಸರಕಾರವನ್ನು ಕೆಳಗಿಳಿಸುತ್ತಾರೆ ಎಂದು ಎಚ್ಚರಿಕೆ ಕೊಟ್ಟು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಸೋಲೂರು ಸಿದ್ದಪ್ಪ (ಕುದೂರು).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರುವ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಸರಕಾರದ ಗಮನಕ್ಕೆ ತರುತ್ತೇನೆ. ಸಿದ್ದವೀರಪ್ಪನವರು ಮತ್ತು ದೇವರಾಜ ಅರಸ್‌ರವರು ಲಂಚದ ವಿಚಾರವಾಗಿ ಬಹಳ ಕಠಿಣವಾಗಿ ಮಾತನಾಡಿದರು. ಅವರು ಸರಕಾರದಲ್ಲಿದ್ದಾಗ ಕೂಡ ಇದೇ ಸನ್ನಿವೇಶವಿತ್ತು. ಆ ಕಾಲದಿಂದ ಇದುವರೆವಿಗೂ ಕೂಡ ಅದಕ್ಕೆ ಅವಕಾಶವಿಲ್ಲದಂತೆ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ, ಆದರೂ ಕೂಡ ಇನ್ನೂ ಲಂಚವನ್ನು ಪೂರ್ಣವಾಗಿ ತಡೆಗಟ್ಟುವುದಕ್ಕೆ ಸಾಧ್ಯವಾಗಿಲ್ಲ. ಸರಕಾರ ಕಠಿಣವಾದ ಕಾನೂನನ್ನು ತಂದು ಈಗಲೂ ಕೂಡ ಲಂಚ ನಿರೋಧ ಕಾರ್ಯವನ್ನು ಮುಂದುವರೆಸಬೇಕು.

ರೆವಿನ್ಯೂ ಸಬ್ ಡಿವಿಜನ್ ಆಫೀಸುಗಳು ಮತ್ತು ಡಿವಿಜನಲ್ ಕಮಿಷನರುಗಳ ಹುದ್ದೆಗಳನ್ನು ರದ್ದುಮಾಡುವುದರ ಮೂಲಕ ಸರ್ಕಾರದವರು ಹಣವನ್ನು ಉಳಿತಾಯ ಮಾಡುವುದಕ್ಕೆ ಅವಕಾಶವಾಗುತ್ತದೆ. ಮೈಸೂರು ಸಂಸ್ಥಾನದಲ್ಲಿ ಪೋಲೀಸ್ ಇನ್‌ಸ್ಪೆಕ್ಟರುಗಳ ಒಂದು ಕೊರತೆ ಇದೆ. ಎರಡು ತಾಲ್ಲೂಕುಗಳಿಗೆ ಒಬ್ಬ ಪೋಲೀಸ್ ಇನ್‌ಸ್ಪೆಕ್ಟರನ್ನು ನೇಮಕ ಮಾಡಿದ್ದೀರಿ. ಜನಸಂಖ್ಯೆ ಹೆಚ್ಚುತ್ತಿರುವಾಗ ತಾಲ್ಲೂಕಿಗೆ ಒಬ್ಬೊಬ್ಬರಂತೆ ಪೋಲೀಸ್ ಇನ್‌ಸ್ಪೆಕ್ಟರನ್ನು ನೇಮಕ ಮಾಡತಕ್ಕ ಕಾರ್ಯವನ್ನು ತೀವ್ರಾಸಕ್ತಿಯಿಂದ ಮಾಡಬೇಕೆಂದು ಹೇಳುತ್ತೇನೆ. ಅನಾವಶ್ಯಕವಾದ ಡಿಪಾರ್ಟ್‌ಮೆಂಟುಗಳನ್ನು ರದ್ದುಗೊಳಿಸಿ, ಅವಶ್ಯಕವಾದಂತಹ ಡಿಪಾರ್ಟ್‌ಮೆಂಟುಗಳನ್ನು ಮಾತ್ರ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಸೆಕ್ರೆಟೇರಿಯಟ್‌ನಲ್ಲಿ ಅಸಿಸ್ಟೆಂಟ್ ಸೆಕ್ರೆಟರಿ, ಡೆಪ್ಯೂಟಿ ಸೆಕ್ರೆಟರಿಗಳನ್ನು ನೇಮಕ ಮಾಡತಕ್ಕ ಒಂದು ಕಾರ್ಯಕ್ರಮವನ್ನು ಸಾಧ್ಯವಾದಮಟ್ಟಿಗೂ ಕಡಿಮೆ ಮಾಡಿ—ಅನೇಕ ದರೋಡೆ, ಕೊಲೆಗಳು ನಡೆಯತಕ್ಕ ಈ ಕಾಲದಲ್ಲಿ ರಕ್ಷಣೆಗೆ ಅವಶ್ಯಕವಾದ ಪೋಲೀಸ್ ಇನ್‌ಸ್ಪೆಕ್ಟರುಗಳನ್ನು ತಾಲ್ಲೂಕಿಗೆ ಒಬ್ಬರಂತೆ ನೇಮಕ ಮಾಡಬೇಕೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಅನೇಕ ವಾದಗಳು ಬಂದಿವೆ. ಶ್ರೀಮಾನ್ ಸಿದ್ದವೀರಪ್ಪನವರು ಹಿಂದೆ ಮಿನಿಸ್ಟರು ಆಗಿದ್ದರು. ಅವರು ಹೇಳತಕ್ಕ ವಾಕ್ಯಗಳನ್ನು ಅವರು ಇದ್ದ ಕಾಲದಲ್ಲೇ ಉತ್ತಮ ಪಡಿಸಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನನಗೆ ಅನಿಸುತ್ತದೆ. ಆ ರೀತಿ ಮಾಡಿದ್ದೇ ಆಗಿದ್ದರೆ ಈ ದಿನ ಬರುತ್ತಾ ಇರತಕ್ಕ ಆಕ್ಷೇಪಣೆಗಳು ಕಮ್ಮಿಯಾಗುತ್ತಾ ಇತ್ತು. ಕಾಗದ ಪತ್ರಗಳ ವಿಲೇವಾರಿ ವಿಚಾರದಲ್ಲಿ ಹೇಳುವುದಾದರೆ, ಮೊದಲು ತಾಲ್ಲೂಕುಗಳಲ್ಲಿ ಅರ್ಜಿದಾರರಿಗೆ ಕೊಟ್ಟ ಅರ್ಜಿಗೆ ಎನ್‌ಡಾರ್ಸ್‌ಮೆಂಟ್ ಬರುತ್ತಾ ಇತ್ತು, ಈಗ ಯಾವುದಕ್ಕೂ ಬರುತ್ತಾ ಇಲ್ಲ. ಎಂಡಾರ್ಸ್‌ಮೆಂಟ್ ಕೊಡತಕ್ಕ ಕಾರ್ಯಕ್ರಮವನ್ನು ಕೈಕೊಳ್ಳುವುದರಿಂದ ರೈತನಿಗೆ ಓಡಾಟ ತಪ್ಪುತ್ತದೆ, ಖರ್ಚು ಕಮ್ಮಿಯಾಗುತ್ತದೆ ಮತ್ತು ಅವನ ದಿನಂಪ್ರತಿ ಕೆಲಸಕಾರ್ಯಗಳಿಗೆ ಸಹಾಯವಾಗುತ್ತದೆ ಎಂಬ ವಿಚಾರವನ್ನು ಸರ್ಕಾರದವರ ಗಮನಕ್ಕೆ ತರಲು ಪ್ರಯತ್ನ ಮಾಡುತ್ತಾ ಇದ್ದೇನೆ.

ವ್ಯವಸಾಯದ ಇಲಾಖೆಯಲ್ಲಿ—ಯಾವ ಯಾವ ಕಾಲದಲ್ಲಿ ಯಾವ ಯಾವ ಗೊಬ್ಬರವನ್ನು ತೆಗೆದುಕೊಂಡು ರೈತರು ಉಪಯೋಗಿಸಬೇಕು ಎಂಬ ಬಗ್ಗೆ ಇಲಾಖೆಯವರು ತೀವ್ರಾಸಕ್ತಿಯನ್ನು ವಹಿಸಿದ್ದ ಪಕ್ಷದಲ್ಲಿ ಸರ್ಕಾರದವರು ಖರ್ಚು ಮಾಡತಕ್ಕ ಹಣಕ್ಕೆ ಲಾಭ ಒದಗುತ್ತಿತ್ತು. ಅದರ ಬಗ್ಗೆ ಸರ್ಕಾರದವರು ನಿಗಾವಹಿಸಬೇಕು. ಸಹಕಾರ ಸಂಸ್ಥೆಗಳಲ್ಲಿ ಯಾವ ಕಾರಣದಿಂದಲೋ ದಿನೇ ದಿನೇ ಸಿಬ್ಬಂದಿ ಜಾಸ್ತಿಯಾಗುತ್ತಾ ಇದೆ. ಅದರ ಅವಶ್ಯಕತೆ ಕಾಣುತ್ತಾ ಇಲ್ಲ. ನಾನಾದರೂ ಸಹಕಾರ ಸಂಸ್ಥೆಗಳಲ್ಲಿ ಬಹಳ ದಿವಸಗಳಿಂದ ಕೆಲಸ ಮಾಡಿಕೊಂಡುಬಂದಿರತಕ್ಕವನಾಗಿದ್ದೇನೆ. ಈಗಲೂ ಇದ್ದೇನೆ. ಇದರಲ್ಲಿ ಅನಾವಶ್ಯಕವಾದ ವೆಚ್ಚ ಬಹಳ ಆಗುತ್ತಾ ಇದೆ. ನೀರಾವರಿ ಬಾವಿಗಳ ಬಗ್ಗೆ ಎಲ್ಲೆಲ್ಲಿ ಕೆಲಸ ಕಾರ್ಯಗಳು ನಡೆದು ನಿಂತಿದೆಯೋ ಅಲ್ಲಿ ಅದಕ್ಕೆ ಕೊಟ್ಟಿರತಕ್ಕ ಮೊಬಲಗುಗಳನ್ನು ವಸೂಲು ಮಾಡುವುದಕ್ಕೆ ಸರ್ಕಾರ ಪೂರ್ಣಾಸಕ್ತಿಯನ್ನು ವಹಿಸಬೇಕು.

ಮಾನ್ಯ ಅಧ್ಯಕ್ಷರೇ, ಮೈಸೂರು ಸಂಸ್ಥಾನದಲ್ಲಿ ಬಹಳ ಕಾಲದಿಂದಲೂ ಯಾವ ವಿಧವಾದ ಕಷ್ಟ ಕಾರ್ಪಣ್ಯ, ದರೋಡೆಗಳು ಇರಲಿಲ್ಲ. ಈಗ ದರೋಡೆ ಜಾಸ್ತಿಯಾಗಿದೆ, ಕಳ್ಳತನ ಜಾಸ್ತಿಯಾಗಿದೆ, ಕೋಮು ವೈಷಮ್ಯ ಜಾಸ್ತಿಯಾಗಿದೆ, ಇದನ್ನು ಕ್ರಮೇಣ ಭದ್ರಗೊಳಿಸಿ ಶಾಂತವಾತಾವರಣವನ್ನುಂಟುಮಾಡಲು ಸರ್ಕಾರದವರು ಮನಸ್ಸು ಮಾಡಬೇಕು. ಆಯಾ ತಾಲ್ಲೂಕಿನಲ್ಲಿರತಕ್ಕ ಮುಖಂಡರು ಹೆಚ್ಚಿನ ಆಸಕ್ತಿಯನ್ನು ವಹಿಸಿ ಶಾಂತಿ ಸಮಿತಿಯನ್ನು ವ್ಯವಸ್ಥೆ ಮಾಡಿದರೆ ಆ ಮೂಲಕ ಗ್ರಾಮಾಂತರದಲ್ಲಿ ಉದ್ಭವಿಸಿರತಕ್ಕ ಪಾರ್ಟಿ ಫೀಲಿಂಗ್ಸ್ ಕಮ್ಮಿಯಾಗಿ ಅಲ್ಲಿರತಕ್ಕ ಬಡ ಜನರಿಗೆ ಅನುಕೂಲವಾಗತಕ್ಕ ಸಂದರ್ಭವುಂಟಾಗುತ್ತದೆ.

(ಶ್ರೀ ಸೋಲೂರು ಸಿದ್ದಪ್ಪ)

ಮಳವಳ್ಳಿಯ ಮಾಜಿ ಮಂತ್ರಿಗಳಾಗಿದ್ದ ನಮ್ಮ ಸ್ನೇಹಿತರು ಹರಿಜನರ ಬಗ್ಗೆ ಏನೂ ಆಸಕ್ತಿಯನ್ನು ತೋರಿಸುತ್ತಿಲ್ಲ ಎಂದು ಹೇಳಿದರು. ಅವರು ಮಂತ್ರಿಗಳಾಗಿದ್ದ 5 ವರ್ಷಗಳ ಕಾಲದಲ್ಲಿ ಇದನ್ನೆಲ್ಲಾ ಅವರು ಮಾಡಬಹುದಾಗಿತ್ತು. ಆಗ ಏನೂ ಮಾಡದೇ ಅಥವಾ ಸಾಧ್ಯವಾದಷ್ಟು ಮಾಡಿ, ಈಗ ಏನೂ ಮಾಡಿಲ್ಲ ಎಂದು ಹೇಳುವುದು ಅಷ್ಟು ಸಮಂಜಸವಾಗುವುದಿಲ್ಲ. ಗೋವಧೆ ವಿಚಾರದಲ್ಲಿ ಹೇಳುವುದಾದರೆ, ನಮ್ಮ ಜಾನುವಾರುಗಳ ಸಂಖ್ಯೆ ತೀರ ಕಮ್ಮಿಯಾಗಿದೆ, ಅವುಗಳಿಗೆ ಬೇಕಾದ ಕಾಡು ವಗೈರೆ ದೊಡ್ಡ ದೊಡ್ಡ ಪ್ರದೇಶಗಳು ಉಳುಮೆಯಾಗಿ ಅವುಗಳ ರಕ್ಷಣೆ ಮತ್ತು ಬೆಳವಣಿಗೆ ಬಹಳ ಕಡಿಮೆಯಾಗಿದೆ. ರೈತನ ಉಳುಮೆಯ ಕಾರ್ಯಕ್ರಮಕ್ಕೆ ಅನುಕೂಲವಾಗಬೇಕಾಗಿದ್ದರೆ ಸರ್ಕಾರದವರು ಮಾಡಿರತಕ್ಕ ಗೋವಧೆಯ ಕಾನೂನನ್ನು ಜಾರಿಗೆ ತಂದು ಅದನ್ನು ನಿಲ್ಲಿಸಬೇಕು. ಇಲ್ಲದೇ ಹೋದ ಪಕ್ಷದಲ್ಲಿ ಮುಂದೆ ದೇಶದ ಅಭ್ಯುದಯಕ್ಕೆ ಜಾನುವಾರುಗಳು ಇಲ್ಲದೆ ಪರಿತಪಿಸಬೇಕಾದ ಸಂದರ್ಭ ಬರುತ್ತದೆ. ದೊಡ್ಡ ಜಮೀನ್ದಾರರು ಮಾತ್ರ ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುತ್ತವೆ, ಬಡ ರೈತರು ಜಮೀನುಗಳನ್ನು ಉಳುಮೆ ಮಾಡುವುದಕ್ಕೆ ಜಾನುವಾರುಗಳ ಕೊರತೆಯುಂಟಾಗಿ ವ್ಯವಸಾಯೋತ್ಪನ್ನ ಮಾಡಲು ಬಹಳ ಅನಾನುಕೂಲ ಪರಿಸ್ಥಿತಿಯುಂಟಾಗುತ್ತದೆ ಎಂಬುದನ್ನು ಮಾನ್ಯ ಸ್ನೇಹಿತರು ಹೇಳಿರುವುದನ್ನು ಪುಷ್ಟೀಕರಿಸುತ್ತಾ ಸರ್ಕಾರದವರು ಯಾವ ಕಾನೂನನ್ನೇ ಮಾಡಲಿ ಅದನ್ನು ಕಾರ್ಯರೂಪಕ್ಕೆ ತರುವ ಧೈರ್ಯವನ್ನು ಮಾಡಬೇಕಾದ್ದು ಅಗತ್ಯ ಎಂದು ಹೇಳುತ್ತಾ ಇದ್ದೇನೆ.

ಕಾಗದಗಳ ವಿಲೇವಾರಿ ಯಾಗುವುದು, ಎಂಡಾರ್ಸ್‌ಮೆಂಟ್ ಕೊಡಬೇಕೆಂಬ ವಿಚಾರ ಆಗಲೇ ಹೇಳಿದ್ದೇನೆ.

ಜೈಲುಗಳ ಸುಧಾರಣೆ ವಿಚಾರದಲ್ಲಿ ಒಂದು ಮಾತು. ಬೆಂಗಳೂರಿನಲ್ಲಿರತಕ್ಕ ಸೆಂಟ್ರಲ್ ಜೈಲನ್ನು ಸುಮಾರು ಹತ್ತು ವರ್ಷಗಳ ಹಿಂದೆಯೇ ಸ್ಥಳಾಂತರಿಸಿ ದೂರ ಹಾಕಬೇಕೆಂದು ಸರ್ಕಾರದವರಿಗೆ ಉದ್ದೇಶ ಇತ್ತು. ಆ ಪ್ರಕಾರ ಅದನ್ನು ಬೇರೆ ಕಡೆಗೆ ಬದಲಾಯಿಸಿ ಆ ಪ್ರದೇಶದಲ್ಲಿ ಸರ್ಕಾರದವರಿಗೆ ಕೊರತೆ ಇರತಕ್ಕ ಅನೇಕ ಕಟ್ಟಡಗಳನ್ನು ಕಟ್ಟುವುದಕ್ಕೆ ಉಪಯೋಗಿಸಿ ಶಾಂತ ವಾತಾವರಣ ಇರುವಂತೆ ಮಾಡಬೇಕಾದುದು ಸರ್ಕಾರದ ಕರ್ತವ್ಯ ಎಂದು ಹೇಳುತ್ತೇನೆ. ಊರು ಮಧ್ಯೆ ಜೈಲಿರುವುದು ಬಹಳ ಅನಾನುಕೂಲ. ಆದುದರಿಂದ ಅದನ್ನು ಜಾಗ್ರತೆ ಬದಲಾಯಿಸುವುದಕ್ಕೆ ಪ್ರಯತ್ನ ಮಾಡಬೇಕು. ನಾವೆಲ್ಲ ಸೂಚನೆ ಮಾಡತಕ್ಕ ಕಾರ್ಯಗಳು ಜಾಗ್ರತೆ ಫಲಪ್ರದವಾಗುವಂತೆ ಕ್ರಮ ಕೈಗೊಳ್ಳಬೇಕು.

ಇನ್ನು ಪ್ರತಿದಿನವೂ ರಾಜ್ಯದಲ್ಲಿ ಸಂಭವಿಸತಕ್ಕ ಅನಾಹುತಗಳನ್ನು ತಪ್ಪಿಸುವುದಕ್ಕೆ ಪೋಲೀಸ್ ಇಲಾಖೆಯವರು ಹೆಚ್ಚಿನ ಗಮನ ಕೊಡಬೇಕು. ಸಾರ್ವಜನಿಕರಿಗೆ ಆಗತಕ್ಕ ತೊಂದರೆಗಳನ್ನು ಪೋಲೀಸಿನವರು ಜಾಗರೂಕತೆಯಿಂದ ಪರಿಹಾರ ಮಾಡಬೇಕು.

ಇನ್ನು ಗ್ರಾಮಾಂತರ ಪ್ರದೇಶದಲ್ಲಿ ಗುಡಿಸಿಲಿನಲ್ಲಿರತಕ್ಕ ಬಡಬಗ್ಗರಿಗೆ ಬೆಂಕಿಯಿಂದ ಬಹಳ ಅನಾಹುತಗಳಾಗುತ್ತಿವೆ. ಆ ತೊಂದರೆಯನ್ನು ತಪ್ಪಿಸುವುದಕ್ಕೆ ಕೂಡಲೇ ಗಮನ ಕೊಡಬೇಕು.

ಇನ್ನು ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಪೋಲೀಸ್ ಇನ್‌ಸ್ಪೆಕ್ಟರ್ ಇರಬೇಕು. ಎರಡು ತಾಲ್ಲೂಕಿಗೆ ಒಬ್ಬ ಪೋಲೀಸ್ ಇನ್‌ಸ್ಪೆಕ್ಟರಿದ್ದರೆ ಜನರಿಗೆ ಸಕಾಲದಲ್ಲಿ ಬೇಕಾದ ಅನುಕೂಲ ದೊರೆಯುದಿಲ್ಲ. ಜನರ ತೊಂದರೆಗಳನ್ನು ಬೇಗ ನಿವಾರಣೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಪೋಲೀಸ್ ಇನ್‌ಸ್ಪೆಕ್ಟರನ್ನು ಹಾಕಬೇಕೆಂದು ಸಲಹೆ ಮಾಡುತ್ತೇನೆ. ಸರ್ಕಾರದವರು ಇದರಿಂದ ಹೆಚ್ಚಿಗೆ ಖರ್ಚು ಬರುತ್ತದೆಂದು ಹೇಳಬಹುದು. ಆದರೆ ಅಂಥ ಖರ್ಚುಗಳೇನೂ ಬರುವುದಿಲ್ಲ. ನಮ್ಮ ರಾಜ್ಯದಲ್ಲಿ ಒಟ್ಟು 175 ತಾಲ್ಲೂಕುಗಳಿವೆ. ಅವುಗಳ ಪೈಕಿ ಈಗಾಗಲೆ 85 ತಾಲ್ಲೂಕುಗಳಲ್ಲಿ ಇನ್‌ಸ್ಪೆಕ್ಟರುಗಳಿದ್ದಾರೆ. ಇನ್ನುಳಿದ ತಾಲ್ಲೂಕುಗಳಿಗೆ ಒಬ್ಬೊಬ್ಬ ಇನ್‌ಸ್ಪೆಕ್ಟರನ್ನು ಹಾಕುವುದರಿಂದ ಹೆಚ್ಚು ಖರ್ಚೇನೂ ಆಗುವುದಿಲ್ಲ. ಹಾಗೆ ತಾಲ್ಲೂಕಿಗೆ ಒಬ್ಬರಂತೆ ಇನ್‌ಸ್ಪೆಕ್ಟರನ್ನು ನೇಮಕ ಮಾಡದಿದ್ದರೆ ಅಲ್ಲಿ ನಡೆಯತಕ್ಕ ಕಳ್ಳತನ ಕ್ಷೋಭೆಗಳನ್ನು ಬೇಗ ತಡೆಹಿಡಿಯುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರಕ್ಕೆ ಹೆಚ್ಚಿನ ಗಮನ ಕೊಡಬೇಕು. ಅಲ್ಲದೆ ನಾನು ಹೇಳಿದ ಇನ್ನೂ ಇತರೇ ವಿಷಯಗಳಿಗೂ ಕೂಡ ಸರ್ಕಾರದವರು ಕೂಡಲೇ ಗಮನ ಕೊಡಬೇಕು. ಇನ್ನೂ ಕೆಲವು ಕಡೆ ಪೋಲೀಸಿನವರ ವಾಸಕ್ಕೆ ಮನೆಗಳಿಲ್ಲ. ಅವರ ಆಫೀಸಿಗೂ ಕೂಡ ಕಟ್ಟಡಗಳಿಲ್ಲ—ಆಫೀಸನ್ನು ಕಟ್ಟುವುದಕ್ಕೆ ಸ್ಥಳ ಕೂಡ ಇರುವುದಿಲ್ಲ. ಇಂಥ ತೊಂದರೆಗಳು ಅನೇಕ ಇವೆ. ಅವುಗಳಿಗೆಲ್ಲಾ ಕೂಡಲೇ ಪರಿಹಾರ ಮಾಡಬೇಕು.

ಅಧ್ಯಕ್ಷರು ಪದೇ ಪದೇ ಗಂಟೆಯನ್ನು ಬಾರಿಸುತ್ತಿದ್ದಾರೆ. ನೆನ್ನೆಯ ದಿನ ಶ್ರೀ ಡಿ. ದೇವರಾಜ ಅರಸರಿಗೆ ಮಾತನಾಡುವುದಕ್ಕೆ ಒಂದು ಗಂಟೆ ಅವಕಾಶ ಕೊಟ್ಟರು. ನನಗೆ ಈ ದಿವಸ ಮಾತನಾಡುವುದಕ್ಕೆ ಅವಕಾಶವಿಲ್ಲ ಎನ್ನುತ್ತಿದ್ದಾರೆ. ಇದು ಸರಿಯಲ್ಲ. ಆಗಲೀ ನಾನು ಇಲ್ಲಿಯವರೆವಿಗೂ ಏನೇನು ವಿಚಾರಗಳನ್ನು ಹೇಳಿದ್ದೇನೋ ಅವುಗಳನ್ನೆಲ್ಲಾ ಸರ್ಕಾರದವರು ಕೂಡಲೇ ಕಾರ್ಯಕ್ಕೆಗೊಳ್ಳಬೇಕೆಂದು ಸೂಚನೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ—ಜೈ ಹಿಂದ್.

[MR. CHAIRMAN (SRI B. P. KADAM) in the Chair.]

† SRI V. N. PATIL (Humnabad).—Sir, I wish to oppose these Demands on the following grounds.

As regards General Administration, I wish to say only one word, namely, that the day to day Government interference in the general administration has brought the administration to such a level that the officials have come to the conclusion that it is no use obeying the orders of policy-makers, and that they can rule better. When an answer was given on the floor of the House some time back while discussing powers and other things, one Hon. Minister said that if a Minister happens to be an illiterate man and his Secretary an intelligent man, he can afford to have his own judgment because he is more powerful than the illiterate Minister. When we hear such things on the floor of the House, it is too much on our part to expect too much from the administration. Corruption has become a common story and the less said about it the better. Everyone must make his attempt to wipe out corruption. But is it a possibility or it is only a far-off dream ? While considering these points, I wish to point out one or two anomalies. Yesterday the Hon. Chief Minister assured us on the floor of the House that if any specific instance was brought to his notice about any of his colleagues, he will take action against him if he is found guilty. I have brought to the notice of the Health Minister and the Hon. Chief Minister the atrocities being committed in some parts of the State. A doctor refused to give admission to some patients who were profusely bleeding with axe injuries. Their only sin was that they could not pay sufficient money to the doctor. On the other hand, actually the persons who were responsible to axe such illiterate, innocent and sinless persons were rich enough to pay sufficient money to that doctor. Probably the Health Minister feels that he is helpless to reply to this because the Demand before the House is not "the Health Demand. When we tell the Hon. Minister about the S.P., he will say, "I entirely agree with you Mr. Patil, but unfortunately there are powers that he who are beyond our control". In the very presence of the S.P. the axed persons with five stiches in their hands were brought and they were admitted to the Bidar Hospital. Still the S. P. has not framed the charge-sheet and he happens to be an S P. of Chincholi Taluka. When these things are there, the Sub-Inspector will naturally feel more powerful than even the Home Minister and the Cheif Minister. A day will come when we will have to act according to the dictates of these officials rather than the policy-makers dictating what the policy of the Government should be.

(SRI V. N. PATIL)

That being the case, it has become very difficult for us. Sometimes the Hon. Chief Minister and other Ministers might think that the Opposistion is there only to bring some complaints or other against the Government. They might ask, "Can't they find one or two bright spots in the otherwise entire black picture or one or two good things in at least some of the police men ?" Whatever good things they do we appreciate. We appreciate the action of the Sub-Inspector who at the risk of his life shot one of the accused yesterday at Hubli in order to save the lives of others. We do have the highest regard for that person. But what happens generally is that law-breakers are dictating terms to those who protect the law. Can we feel jealous about it ? It is the very negation of democracy and it is becoming police-raj. The Government Benches say that when we criticise we must make constructive criticism. But when in the very presence of the Sub-Inspector a complaint is made by the axed person with bleeding injuries, what happens ? Nothing is done. The next day panchanama is taken and no charge sheet has been filed. The police officials might have helped the Congress candidates there but if it is carried to the extent of not doing justice to the innocent persons who are grievously hurt just because they happen to be the supporters of other parties, then people will have no faith in democracy. If giving protection to those who deserve protection happens to be the creed of democracy, we welcome it. But this is not happening. So with a heavy heart we will have to say there is no other go except to change the pattern of rule. The rule of law has to be enforced and the rule of police must be changed. The police officials must be made to realise that they are the servants of the common people.

4-00 P.M.

I had been to Hubli. It was very unfortunate that when I wanted some information from the Sub-Inspector he did not give it to me. It was not any top secret information that I wanted. I only wanted to know from him whether the I.G.P. had left Hubli or he was still there ; whether the Home Secretary had left the place or he was still there. Because he saw some ordinary person getting down from an auto rickshaw at 2 O' clock and asking for this information he did not care to give the information, but he said : "Find out from the T.B." On the other hand if some other person had come there in a car and got down and asked for this information, he would have saluted him and given the information. This kind of slavish tendency on the part of these officers must go. Unless this tendency goes we cannot hope to have any fair deal to the common man from these police officers. Many a time when poor people go to the police station to give a complaint to the police officer, they are sometimes beaten. In the rural areas when poor tenants who are harassed by the rich landlords go to any police officer seeking justice and protection, they are expecting too much.

They do not get any protection at all. This being the case, I want to make some concrete suggestion that any police officer against whom there is a complaint and if a *prima facie* case has been made out, should be immediately transferred from that place and then an impartial enquiry must be held by the highest officer. If you keep that particular police officer with a loaded pistol in the same place and then ask the people to come and give evidence before the enquiry officer, where is the protection to the person giving evidence? In such a situation nobody would dare to come and give evidence against that particular officer and take the risk. They would rather face the Chief Minister or the Home Minister, but nobody would dare to face any police officer and give evidence against him before an enquiry.

Mr. CHAIRMAN.—The Member's time is over.

Sri V. N. PATIL.—I have been given 20 minutes by my Whip.

One more thing, Sir. I had been to Hubli and there I saw certain things and I want to state them here. I was deputed by my Party to Hubli and find out things. Before I give my report to my Party I have a duty to place the facts as I saw them before this House and so I would like to request that I may be given some more time.

Yesterday the Chief Minister made a Statement I have gone through the Press Statement made by the Home Secretary and the I.G.P. about the loss. I agree that the loss that has occurred in Hubli is somewhere between Rs. 80,000 and Rs. 1,25,000. A difference of Rs. 20,000 to Rs. 30,000 is not much, but we will have to see the root cause of the whole trouble and who was responsible to start these things, how it started, whether there were any political organisations behind it, what steps the Mysore Government are going to take to see that such political organisations are not given opportunities time and again to play with the life and properties of the people. It is most unfortunate that within a distance of 20 yards one mosque was razed to the ground and at the same time one temple also was razed to the ground. This communal frenzy was exhibited in Hubli in all its fury for the first three hours. At that time the police was not there in sufficient numbers, but the mob was very strong. I think the Sub-Inspector would not have shot the person whom he shot to protect somebody if there were sufficient police force to assist him to control the mob. The Sub-Inspector was there alone with no supporters to assist him beyond one or two constables and the mob was more than 200 strong. The police officer would not have shot if the situation had not been like this. I would say that the attitude of the police in this context is worth condemning because it is not the first time that such communal holi clashes have taken place in Hubli. For the last so many years there have been several Holi skirmishes in the Jan Sangh dominated area in Hubli. This area is dominated by the Petegar community belonging to the Jan Sangh.

Sri BHOLA RAGHURAM SHETTY (Karkal).—I object to the member referring to my party.

Sri V. N. PATIL.—The police officer on duty wanted to save the hotel to save some persons who were inside the hotel. So I cannot condemn his attitude in shooting the person he shot, but I view with disapproval the attitude of the Police Department in not giving sufficient police strength to this Sub-Inspector. For full 4 hours the communal frenzy and rowdism went on unchecked. On one side the Jan Sangh mob was shouting *Hara Hara Mahadeva* and on the other the Muslim crowd was shouting *Alla Ho Akbar.* The mob was too strong for the police force there to control it and this being the case the Sub-Inspector had to resort to shooting. More than 40 huts belonging to tonga drivers, belonging to the Muslim community, were burnt. In the streets I could find nothing but soda water bottle pieces, brick bats and stones. This violent clash went on for full 4 hours between these two communities. The Sub-Inspector on the spot had the assistance of only 2 or 3 police constables. This was the situation in Kamarpet.

Mr. CHAIRMAN.—The hon'ble Member's time is over. He will finish his Speech in 2 minutes.

Sri V. N. PATIL.—This communal frenzy went on for full 3 to 4 hours. The Jan Sangh leader Maharudraswamy incited them to shout *Hara Hara Mahadeva* and go in procession before the Mosque beating drums and making noise. The Moorusavara Swamy Mutt also helped them in this. These people killed 3 cows and 2 calves. I want to ask them why they killed the cows? Simply because they were in Mahommedan houses they were killed. This is very unfortunate. Time and again the Jan Sangh leaders resort to this sort of procession with bajan in front of mosques.

Mr. CHAIRMAN.—The attitude of the hon. members while discussing such a situation should be one of restraint. That is a sacred duty cast upon every hon. Member.

ಶ್ರೀ ಬೋಳ ರಘುರಾಮಶೆಟ್ಟಿ.—ಮಾನ್ಯ ಸದಸ್ಯರು ಜನಸಂಘದ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಈ ರೀತಿ ಅವರು ಆಪಾದನೆ ಮಾಡತಕ್ಕದ್ದು ಸರಿಯಲ್ಲ. If the hon. Member has any material point, let him state.

Mr. CHAIRMAN.—I have explained to him.

Sri V. N. PATIL.—I need not rely on his mercy, Sir.

Sri BOLA RAGHURAMA SHETTY.—The hon. Member can very well yield and answer my point.

Mr. CHAIRMAN.—Hon. Member Sri Bola Raghurama Shetty need not interrupt. I cannot correct any hon. member, because I am powerless. It is up to the hon. member to avail of another opportunity to explain the situation with particular facts.

ಶ್ರೀ ಬೊಳ ರಘುರಾಮಶೆಟ್ಟಿ.—ಅವರು ಆಪಾದನೆ ಮಾಡಿದರೆ ಅದನ್ನು ಸಮರ್ಥನೆ ಮಾಡಬೇಕು. ಅವರಿಗೆ ಸಮರ್ಥನೆ ಮಾಡುವಂತಹ ವಿಷಯ ಇದ್ದರೆ ಅದನ್ನು ಸಮರ್ಥನೆ ಮಾಡಬಹುದು. ಐಜಿಪಿ, ಮುಖ್ಯ ಮಂತ್ರಿ ಎಲ್ಲರನ್ನೂ ದೂಷಣೆ ಮಾಡಿದ್ದಾರೆ.

Mr. CHAIRMAN.—The Hon. Member may please resume seat.

The list of members desirous of participating in the discussion is very long. Sri V. N. Patil may conclude early.

SRI V. N. PATIL.—The Jamath-e-Islam took undue advantage of this opportunity. Afterwards, Tippu Sena was organised at Hubli. There were differences between Hatkar community and Muslim community of Kamarpet. The services of most of the ex-servicemen were utilised. There was a parade through the streets of Hubli. I would like to ask what the Intelligence Department and the Special Branch was doing? Why suitable steps were not taken by the Police to report this matter to the Government? The venomous attitude of this Jamath-e-Islam was responsible for the partition of the country. But, with great appreciation and satisfaction I should say that this trouble has not spread thoughout Hubli City. It was confined to the Hatkar Community and Muslim community of Kamarpet. A Hanuman temple and a Dargah were demolished. This unfortunate incident happened because there was no police force at that time. Sir, every year there used to be some quarrel in that area during 'Holi' festival. All these incidents happened because there was no police force. Within about a month the 'Muharram' festival is coming. In order to avoid such unpleasant happenings, the public seek maximum protection from the Police Department. I would like to bring to the notice of the Hon. Chief Minister that there should be more police force in this vulnerable area and streets, because it is not at the spur of the moment that these things should be done. The target of this suffering is not a mill-owner or a rich man or a person belonging to Jansangh or Jamath-e-Islam. These people sit in a safe place and have made the common man, the Tonga-walas and Beedi-shop owners to fight each other. This being the case, it is very necessary that maximum protection must be given. Apart from that relief measures must also be taken as early as possible. I know, already some amount for relief measures has been sanctioned. Now most of the innocent persons have been apprehended. The police cannot find out the real culprits. Therefore, it is necessary to round up as many people as possible to keep them away from the disturbed areas. I am told that out of the persons arrested in this connection, more than 125 persons are innocent. My demand is that the real culprits must be apprehended. The Hon. Chief Minister must take note of it. The real culprits are still there in large number. They have been moving with the Police officials to watch their rivals. There should be an impartial enquiry, and it is necessary that the local police officials above the rank of Sub-Inspectors——at least two of them—should be shifted from that place.

With these few words, I thank the the Chair.

† ಶ್ರೀ ಬೋಳ ರಘುರಾಮ ಶೆಟ್ಟಿ.—ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿಯಲ್ಲಿ ನಡೆದಂತಹ ದುರ್ಘಟನೆಯ ಬಗ್ಗೆ ನಾವು ಹಾಗೂ ಇಲ್ಲಿಯ ಎಲ್ಲಾ ಪಕ್ಷದ ಸದಸ್ಯರೂ ವಿಷಾದವನ್ನು ವ್ಯಕ್ತ ಮಾಡಿದ್ದೇವೆ. ಅಷ್ಟು ಮಾತ್ರವಲ್ಲದೆ, ಜುಡಿಶಿಯಲ್ ಎನ್‌ಕ್ವಾಯರಿ ಮಾಡಬೇಕೆಂದು ಹೇಳಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಹೇಳಿದರು, ಜುಡಿಶಿಯಲ್ ಎನ್‌ಕ್ವಾಯರಿ ಮಾಡುವುದಿಲ್ಲ, ಮ್ಯಾಜಿಸ್ಟ್ರಿರಿಯಲ್ ಎನ್‌ಕ್ವಾಯರಿ ಮಾಡುತ್ತೇವೆ ಎಂದು. ಮ್ಯಾಜಿಸ್ಟೀರಿಯಲ್

(ಶ್ರೀ ಬೋಳಾ ರಘುರಾಮಶೆಟ್ಟಿ)

ಎನ್‌ಕ್ವೈರಿ ಮಾಡುತ್ತಾರೆಂದು ಇವತ್ತಿನ ಹೇಪರಿನಲ್ಲಿ ಇದೆ, ಶ್ರೀಮಾನ್ ಪಾಟೀಲರವರು ಅಲ್ಲಿಗೆ ಹೋಗಿ ಬಂದಿದ್ದಾರೆ. ಮಾನ್ಯ ಸದಸ್ಯರಿಗೆ ಏನಾದರೂ ತಿಳಿದಿದ್ದರೆ, ಅದು ಸೆಕೆಂಡ್ ಹ್ಯಾಂಡ್ ರಿಪೋರ್ಟ್ ಆಗುತ್ತದೆ ಘಟನೆ ನಡೆದಾಗ ಹೇಳಿದ್ದರೆ, ಅದಕ್ಕೆ ಹೆಚ್ಚಿಗೆ ಗೌರವ ಕೊಡಬಹುದಿತ್ತು. ಸಭೆಯಲ್ಲಿ ಯಾರಿಗಾದರೂ ತಮ್ಮ ಅಭಿಪ್ರಾಯವನ್ನು ಹೇಳುವಂತಹ ಅವಕಾಶ ಇದೆ. ನ್ಯಾಯವಾಗಿ ಹೇಳದೇ ಈ ಒಂದು ಅವಕಾಶವನ್ನು ದುರುಪಯೋಗ ಪಡಿಸಿಕೊಂಡು ಇಲ್ಲದನಲ್ಲದ ಅಪವಾದ ಮಾಡಬಾರದು. ಮಾನ್ಯ ಸದಸ್ಯರು ಭಾರತದ ಜನಸಂಘದವರು ಹುಬ್ಬಳ್ಳಿಗೆ ಆಗಾಗ್ಗೆ ಹೋಗಿ ಮುಸ್ಲಿಂ ಭಾಂದವರ ಬಗ್ಗೆ ಅಲ್ಲದ ಸಲ್ಲದ ಆರೋಪ ಮಾಡುತ್ತಿದ್ದಾರೆ, ಅವರನ್ನು ಹೊರಗಡೆ ದೂಡುವ ಪ್ರಯತ್ನವನ್ನು ಮಾಡುತ್ತಿದ್ದಾರೆ" ಎಂದೆಲ್ಲಾ ಹೇಳುವುದು ಸತ್ಯಕ್ಕೆ ದೂರವಾದುದು. ಆ ರೀತಿ ಹೇಳುವುದಕ್ಕೆ ಅವರು ಸರಿಯಾದ ರುಜುವಾತು ಕೊಡಲಿ. ಅವರು ಮಾತನಾಡುವಾಗ ಈ ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡು ನಮ್ಮ ಪಕ್ಷದ ಮೇಲೆ ಇಲ್ಲದ ಸಲ್ಲದ ಅಪವಾದ ಮಾತ್ರ ಮಾಡಿದ್ದಾರೆ ಅಷ್ಟೇ ಎಂದು ಹೇಳುತ್ತಾ ಇದ್ದೇನೆ.

† ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ ಸಾಮಾನ್ಯ ಆಡಳಿತ ವಿಚಾರದಲ್ಲಿ ಕೋರಿದಂಥ 4,48,45,000 ರೂಪಾಯಿಗಳನ್ನು ಹಾಗೂ ಡಿಮ್ಯಾಂಡ್ ನಂಬರ್ 12 ಮತ್ತು ಡಿಮ್ಯಾಂಡ್ ನಂಬರ್ 13ರಲ್ಲಿ ಕೋರಿರತಕ್ಕಂಥ ಹಣದ ಬೇಡಿಕೆಗಳನ್ನು ಒಪ್ಪುತ್ತಾ ಸರ್ಕಾರದ ಮುಂದೆ ಕೆಲವು ವಿಚಾರಗಳನ್ನು ನಾನು ಆಡಲು ಬಯಸುತ್ತೇನೆ. ಸಾಮಾನ್ಯ ಆಡಳಿತ ಎಂದರೆ ಸರ್ಕಾರದ ಯಂತ್ರ. ಇದು ಜನಕೋಟಿಗೆ ಏನು ಸೌಕರ್ಯಗಳನ್ನು ಒದಗಿಸಿಕೊಡಬೇಕೋ ಅದನ್ನು ಒದಗಿಸಿಕೊಡುವುದು ಮತ್ತು ಜನಗಳ ಆಶೋತ್ತರಗಳನ್ನು ಈಡೇರಿಸುವುದು, ಪ್ರಜೆಗಳ ಮಾನ ಮರ್ಯಾದೆಗಳನ್ನು ರಕ್ಷಣೆ ಮಾಡುವುದು, ಮತ್ತು ಅವರ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡುವುದು. ರಾಜಕೀಯ ತತ್ವದಿಂದ ಬಡವ ಬಲ್ಲಿದರ ಜೀವನ ಸಮನ್ವಯವಾಗಿ ಬಡವ ಬಲ್ಲಿದರ ಜೀವನದ ಅಂತರ ಕಡಿಮೆಯಾಗಿದೆಯೇ ಎಂಬುದನ್ನು ನೋಡುವುದಾದರೆ ಮತ್ತು ಸರ್ಕಾರ ಎನ್ನತಕ್ಕಂಥ ಮಹಾ ಯಂತ್ರ ಎಷ್ಟರ ಮಟ್ಟಿಗೆ ಪ್ರಜೆಗಳ ಸೇವೆಯನ್ನು ಮಾಡುತ್ತಿದೆ ಎನ್ನುವುದನ್ನು ಮನಸ್ಸಿನಲ್ಲಿ ಇಟ್ಟುಕೊಂಡರೆ ಸಾಮಾನ್ಯ ಆಡಳಿತ ಚೆನ್ನಾಗಿದೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತದೆ. ಕಳೆದ 20 ವರ್ಷಗಳಿಂದ ನಡೆದಂತಹ ವಿಚಾರಗಳನ್ನು ನೋಡಿದರೆ ದೇಶದಲ್ಲಿ ಕಾನೂನು ಇದ್ದಹಾಗೆ ಇಲ್ಲ ಎಂದು ಹೇಳಬಹುದು. ಇದನ್ನು ಜಾರಿಗೆ ಕೊಡತಕ್ಕಂಥ ಇಲಾಖೆಯವರು ಕೂಡ ಏನೇನೋ ತಪ್ಪುಗಳನ್ನು ಮಾಡುತ್ತಿದ್ದಾರೆ. ಒಂದು ಕಡೆ ಸರ್ಕಾರ ಎನ್ನತಕ್ಕಥಾದ್ದು ಒಂದು ಮಹಾ ಯಂತ್ರ, ಅದರ ಆಜ್ಞಾನುಸಾರ ದೇಶದ ಎಲ್ಲಾ ಕೆಲಸ ಕಾರ್ಯಗಳು ನಡೆಯುತ್ತವೆ ಎಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ಆ ರೀತಿ ಕೆಲಸಕಾರ್ಯಗಳು ನಡೆಯುತ್ತಿವೆಯೇ ಎಂಬುದನ್ನು ನಾವು ನೋಡಬೇಕಾಗಿದೆ. ಎಷ್ಟೋ ಇಲಾಖೆಗಳವರೂ ಹೇಳುತ್ತಾರೆ, ನಾವೂ ಹೇಳುತ್ತೇವೆ. ಸರ್ಕಾರ ಎನ್ನತಕ್ಕಂಥಾದ್ದು ಕಾನೂನಿಗೆ ಅನುಸಾರವಾಗಿ ನಡೆಯಬೇಕು, ಪ್ರಜೆಗಳಿಗೆ ಭಯ ಇರುವ ರೀತಿಯಲ್ಲಿ ಇರಬೇಕು ಎಂದು. ಕಾನೂನಿಗೆ ಚ್ಯುತಿ ಬರದಂತೆ ಸರ್ಕಾರ ಸಕಾಲದಲ್ಲಿ ಜನತೆಗೆ ರಕ್ಷಣೆ ಕೊಡಬೇಕು ಬಡವ ಬಲ್ಲಿದರ ಅಂತರ ಕಡಿಮೆಯಾಗಬೇಕು. ದೀನದಲಿತರಿಗೆ, ಬಡವರಿಗೆ ಸರ್ಕಾರದ ರಕ್ಷಣೆ ದೊರೆಯಬೇಕು ಎಂದು ಸರ್ಕಾರವನ್ನು ಇಟ್ಟಿದ್ದಾರೆ. ಆದರೆ ದುರ್ದೈವ ವಶಾತ್ ಸಮಾನ್ಯವಾಗಿ ಯಾರಿಗೆ ರಕ್ಷಣೆ ದೊರೆಯಬೇಕೋ ಅವರಿಗೆ ರಕ್ಷಣೆ ಹೆಚ್ಚಾಗಿ ಒದಗುತ್ತಾ ಇಲ್ಲ, ಇದಕ್ಕೆ ಯಾರು ಕಾರಣರು ಎಂದು ಮನಸ್ಸಿನಲ್ಲಿ ಇಟ್ಟುಕೊಂಡಾಗ ಸರ್ಕಾರದ ಮೇಲೆ ಹೆಚ್ಚಿನ ರೀತಿಯಲ್ಲಿ ನಿರಾಶೆಯುಂಟಾಗುತ್ತದೆ. ಸಾಮಾನ್ಯವಾಗಿ ನಮ್ಮ ಸರ್ಕಾರದವರು ಎಷ್ಟೋ ಕಾನೂನುಗಳನ್ನು ಮಾಡಿ ಇಟ್ಟಿದ್ದಾರೆ. ಪಾನನಿರೋಧ ಕಾನೂನು ರದ್ದಾದ ಮೇಲೆ ಸಮಾಜ ಅಧೋಗತಿಗಿಳಿದಿದೆ. ಅಸ್ಪೃಶ್ಯತಾ ನಿವಾರಣಾ ಕಾನೂನು, ಗೋ ಹತ್ಯ ನಿಷೇದದ ಕಾನೂನು, ಜಹಗೀರ್‌ದಾರರಿಗೆ ಸಂಬಂಧಪಟ್ಟ ಕಾನೂನು, ವೇಶ್ಯಾ ವೃತ್ತಿ ನಿವಾರಣಾ ಕಾನೂನು ಈ ಕಾನೂನುಗಳೆಲ್ಲವೂ ಎಷ್ಟೋ ಸಂದರ್ಭಗಳಲ್ಲಿ ಕೇವಲ ಕಾನೂನುಗಳಾಗಿಯೇ ಉಳಿದಿವೆ. ಅವು ಅನ್ವಯವಾಗದೇ ಹಾಗೆಯೇ ಉಳಿದಿವೆ. ಅವುಗಳನ್ನು ತಾತ್ಸಾರ ಮನೋಭಾವದಿಂದ ಹೆಸರಿಗೆ ಮಾತ್ರ ಇಟ್ಟಿದ್ದಾರೆ. ಇದು ಸರಿಯಲ್ಲ. ಇವುಗಳು ಎಲ್ಲೆಲ್ಲಿ ಬರುತ್ತವೆಯೋ ಅಲ್ಲಲ್ಲಿ ಎಚ್ಚರಿಕೆಯಿಂದ ಅನ್ವಯ ಮಾಡುವುದಕ್ಕೆ, ಜಾರಿಗೆ ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಗೋಹತ್ಯೆ ಕಾನೂನನ್ನು ಏತಕ್ಕೋಸ್ಕರ ಇಟ್ಟಿದ್ದಾರೆಯೋ ನನಗೆ ಗೊತ್ತಿಲ್ಲ. ಯಾರಿಗಾದರೂ ಗೋ ಮಾಂಸ ಬೇಕಾದರೆ ಮದ್ರಾಸಿನಿಂದ ಕೊಂಡು ಕೊಂಡು ಬಂದು ತಿನ್ನಬಹುದು ಎಂದು ಪರ್ಮಿಷನ್ ಕೊಟ್ಟಿದ್ದಾರೆಂದು ಗೊತ್ತಾಗಿದೆ. ಇದು ಸರಿಯಲ್ಲ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದಕ್ಕೆ

ಪ್ರಯತ್ನ ಮಾಡಬೇಕು. ಒಂದು ರೀತಿಯಲ್ಲಿ ನೋಡಿದರೆ ಸರ್ಕಾರ ತಮಾಷೆಗೆ ಕಾನೂನನ್ನು ಮಾಡಿ ಇಟ್ಟಿದ್ದಾರೆಯೋ ಏನೋ ಎನ್ನುವ ಹಾಗೆ ಇದೆ. ಇದನ್ನೆಲ್ಲಾ ಸರ್ಕಾರದವರು ಸರಿಪಡಿಸಬೇಕು ಎಂದು ನಾನು ಹೇಳುತ್ತೇನೆ.

ಜನರಲ್ ಅಡ್ಮಿನಿಸ್ಟ್ರೇಷನ್ ಎಂದರೆ ಪ್ರಜೆಗಳಿಗೆ ಬೇಕಾದ ಸೌಕರ್ಯವನ್ನು ಒದಗಿಸಿ ಕೊಡುವುದಕ್ಕೆ ಬೇಕಾದಂತಹ ಇಡೀ ಶಕ್ತಿಯನ್ನು ಇಟ್ಟುಕೊಂಡಿರತಕ್ಕಂಥ ಒಂದು ಯಂತ್ರ ಎಂದು ಹೇಳಬಹುದು. ಆದ್ದರಿಂದ ಕಾನೂನು ರೀತಿ ಯಾರಿಗೆ ರಕ್ಷಣೆ ದೊರೆಯಬೇಕೋ ಅವರಿಗೆ ಮೊದಲು ರಕ್ಷಣೆಯನ್ನು ಕೊಡಬೇಕು. ಈಗ ಉದಾಹರಣೆಗೆ ಹೇಳುವುದಾದರೆ ದೀನದಲಿತರು, ಹರಿಜನರ ವಿಚಾರದಲ್ಲಿ ಕಾನ್‌ಸ್ಟಿಟ್ಯೂಷನ್‌ನಲ್ಲಿ ಹತ್ತಾರು ರೀತಿಯ ಕಾನೂನುಗಳಿವೆ. ಅವು ಸರಿಯಾಗಿ ನಡೆಯುತ್ತಿವೆಯೇ, ಅದರಿಂದ ದೊರೆಯಬೇಕಾದ ಸೌಲಭ್ಯ ಮತ್ತು ಸೌಕರ್ಯಗಳು ದೀನದಲಿತರಿಗೂ ಮತ್ತು ಹರಿಜನರಿಗೂ ಸರಿಯಾಗಿ ದೊರೆಯುತ್ತಿವೆಯೇ ಎನ್ನುವ ಪ್ರಶ್ನೆಯನ್ನು ಹಾಕಿದಾಗ ಅವು ಸರಿಯಾಗಿ ದೊರೆಯುತ್ತವೆ ಎಂದು ಒಪ್ಪುವುದಕ್ಕಾಗುವುದಿಲ್ಲ. ಮಂತ್ರಿಮಂಡಲದಲ್ಲಿ ದೀನದಲಿತರ ಸಮಸ್ಯೆಗೆ ಸಂಬಂಧಪಟ್ಟ ಮಂತ್ರಿಗಳ ಸಂಖ್ಯೆ ಹೆಚ್ಚಾದರೆ ಅನುಕೂಲವಾಗುತ್ತದೆ ಎನ್ನುವ ಒಂದು ಭರವಸೆಯನ್ನು ಇಟ್ಟುಕೊಂಡಿದ್ದರು. ಈಗ ಮಂತ್ರಿಮಂಡಲದಲ್ಲಿ ಆ ಸಮಸ್ಯೆಗೆ ಸಂಬಂಧಪಟ್ಟ ಮಂತ್ರಿಗಳ ಸಂಖ್ಯೆ ಹೆಚ್ಚಾದ ಮೇಲೆ ದೀನದಲಿತರಿಗೆ ದೊರೆಯಬೇಕಾದ ಸೌಲಭ್ಯಗಳು ಸರಿಯಾಗಿ ದೊರೆಯುತ್ತಿವೆಯೋ ಇಲ್ಲವೋ ಎನ್ನುವ ಶಂಕೆ ಬರುತ್ತಿದೆ. ಮಂತ್ರಿಗಳ ಸಂಖ್ಯೆಯೇನೋ ಜಾಸ್ತಿಯಾಗಿರಬಹುದು, ದೀನದಲಿತರಿಗೆ ದೊರೆಯಬೇಕಾದ ಹೆಚ್ಚಿನ ಲಾಭ ದೊರೆತ ಹಾಗೆ ಕಾಣುವುದಿಲ್ಲ. ಆ ಸಮಸ್ಯೆ ಇದ್ದಹಾಗೆ ಇರುವಂತೆ ಕಾಣುತ್ತದೆ. ಮಂತ್ರಿಮಂಡಳದಲ್ಲಿ ಷೆಡ್ಯೂಲ್ ಕ್ಯಾಸ್ಟಿನವರು ಇಬ್ಬರು ಮಂತ್ರಿಗಳು ಇದ್ದಾರೆ. ಆದರೆ ಸೆಕ್ರೆಟೇರಿಯೆಟ್‌ನಲ್ಲಿ ಷೆಡ್ಯೂಲ್ ಕ್ಯಾಸ್ಟಿನವರಿಗೆ ಪರ್ಸೆಂಟೇಜ್ ಪ್ರಕಾರ ದೊರೆಯಬೇಕಾದ ಹುದ್ದೆಗಳು ದೊರೆತಿಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ 13-3-69 ರಲ್ಲಿ 450 ನೇ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಅದು ಈ ರೀತಿ ಇದೆ :

> "For purposes of recruitment Mysore Government Secretariat, as a whole, comprising the various administrative departments, is one unit, and as such, the question of securing the percentage of reservation in a particular department like the General Administration Department, does n t arise"

ಎಂದು ಹೇಳಿದ್ದಾರೆ. ಇದು ಸರಿಯಲ್ಲ. ಇದು ತುಂಬಾ ಅನ್ಯಾಯ. ಇಂಥಾ ಉತ್ತರವನ್ನು ಕೊಟ್ಟರೆ ಇಲಾಖೆಯ ಮುಖ್ಯಾಧಿಕಾರಿಗಳು ಯಾವ ರೀತಿ ತಮ್ಮ ಆದೇಶವನ್ನು ಪರಿಪಾಲನೆ ಮಾಡುತ್ತಾರೆ? ಸಾಮಾನ್ಯಾಡಳಿತ ಇಲಾಖೆಯಲ್ಲಿ ಅನುಸೂಚಿತಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗೆ ಸಂಬಂಧಿಸಿದಂತೆ ಕ್ರಮವಾಗಿ ಸೇಕಡಾ 15 ಮತ್ತು ಸೇಕಡಾ 3ರಷ್ಟು ಹುದ್ದೆಗಳನ್ನು ಮೀಸಲಿಟ್ಟಿದ್ದರೂ ಸಹ ಇಂಥಾ ಗೋಳು ಗೋಳಿನ ಉತ್ತರವನ್ನು ಹೇಳುತ್ತಾರೆ. ಕ್ಲಾಸ್ I, ಕ್ಲಾಸ್ II, ಕ್ಲಾಸ್ III, ಕ್ಲಾಸ್ IV ಅಪಾಯಿಂಟ್‌ಮೆಂಟ್‌ಗಳು ಸೆಕ್ರೆಟೇರಿಯಟ್ ಮತ್ತು ಇತರ ಇಲಾಖೆಗಳಲ್ಲಿ ಷೆಡ್ಯೂಲ್ ಕ್ಯಾಸ್ಟಿನವರಿಗೆ ಪರ್ಸೆಂಟೇಜ್ ಪ್ರಕಾರ ದೊರೆಯಬೇಕಾದ ಹುದ್ದೆಗಳು ದೊರೆತಿಲ್ಲ. ದೀನದಲಿತರಿಗೆ, ಷೆಡ್ಯೂಲ್ ಕ್ಯಾಸ್ಟಿನವರಿಗೆ ಸರ್ಕಾರಿ ನೌಕರಿಯಲ್ಲಿ ದೊರೆಯಬೇಕಾದ ರಿಜರ್ವೇಷನ್ ಇನ್ ಪ್ರಮೋಷನ್ ಹೋಯಿತು, ಕ್ಯಾರಿ ಫಾರ್‌ವರ್ಡ್ ಇನ್ ಜಾಬ್ಸ್ ಹೋಯಿತು. ಸೆಲೆಕ್ಷನ್ ಆಫ್ ಪರ್ಸೆಂಟೇಜ್ ಹೋಯಿತು. ಕಾನ್‌ಸ್ಟಿಟ್ಯೂಷನಲ್ಲಿ ಸೇಫ್‌ಗಾರ್ಡ್ಸ್‌ಗೆ ಡಿಲ್ಲಿಯಲ್ಲಿರುವ ಹಾಗೆ ಇಲ್ಲಿಯೂ ಈ ಮನೆಯ ಒಂದು ಸಮಿತಿ ಇರಬೇಕು. ಹರಿಜನರಿಗೆ ಭೂಮಿಯನ್ನು ಕೊಡತಕ್ಕ ಕಾನೂನು ಏನಿದೆ ಅದನ್ನು ಸರಿಯಾಗಿ ಸರ್ಕಾರದವರು ಪರಿಪಾಲನೆ ಮಾಡಬೇಕು ಅಸ್ಪೃಶ್ಯತಾ ಕಾನೂನು ಸರಿಯಾಗಿ ಅನ್ವಯವಾಗಬೇಕು. ಕಾನೂನನ್ನು ಮಾಡುವವರು ಸರ್ಕಾರದವರು ಆದರೆ ಸರ್ಕಾರದವರೇ ಅದನ್ನು ಸರಿಯಾಗಿ ಜಾರಿಗೆ ತಂದಿಲ್ಲ. ಕೈಯಲ್ಲಿ ನೆಲ್ಲಿಕಾಯಿ ಇದ್ದಹಾಗೆ ಜನರಲ್ ಅಡ್ಮಿನಿಸ್ಟ್ರೇಷನ್ ಯಾವರೀತಿ ಇದೆಯೆಂಬುದನ್ನು ಪ್ರಶ್ನೆ ಮಾಡಬೇಕಾಗಿಲ್ಲ. ಇವೊತ್ತು ಸರ್ಕಾರದವರು ಯಾವ ರೀತಿ ಆಡಳಿತವನ್ನು ನಡೆಸುತ್ತಿದ್ದಾರೆ ಎಂಬುದನ್ನು ಜನತೆ ಕಾದು ನೋಡುತ್ತಿದ್ದಾರೆ. ಹರಿಜನರಿಗೆ ಸಂಬಂಧಪಟ್ಟಹಾಗೆ ಇನ್ನೊಂದು ವಿಚಾರವೇನೆಂದರೆ ಮೊನ್ನೆ ರೀಸೆಂಟಾಗಿ ಪೋಲೀಸು ಇಲಾಖೆಯಲ್ಲಿ ಕೆಲವರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಅದರಲ್ಲಿ ಷೆಡ್ಯೂಲ್ ಕ್ಯಾಸ್ಟಿನವರಿಗೆ 12 ಜನಗಳಿಗೆ ಕೆಲಸ ದೊರೆಯಬೇಕಾಗಿತ್ತು ಆದರೆ 5 ಜನಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ. ಅದಕ್ಕೆ ಆಧಾರ ಏನು ಯಾವ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳುತ್ತೀರಾ ಎಂದು ಕೇಳಿದರೆ ಎಫಿಷಿಯನ್ಸಿ ಮತ್ತು

(ಶ್ರೀ ಕೆ. ಪ್ರಭಾಕರ್)

ಕ್ವಾಲಿಫಿಕೇಷನ್ ಆಧಾರದ ಮೇಲೆ ತೆಗೆದುಕೊಂಡಿದ್ದೇವೆ ಎಂದು ಉತ್ತರ ಹೇಳುತ್ತಾರೆ. ಇದು ಸರಿಯಲ್ಲ. ಇತರರಿಗೇನು ಕ್ವಾಲಿಫಿಕೇಷನ್ ಇರಲಿಲ್ಲವೇ, ಅವರು ಯೂನಿವರ್ಸಿಟಿಯಲ್ಲಿ ಓದಿರಲಿಲ್ಲವೇ ? ಅವರಿಗೆ ಏತಕ್ಕೆ ಕೆಲಸವನ್ನು ಕೊಡಲಿಲ್ಲ ? ಆದ್ದರಿಂದ ಆ ವಿಚಾರದಲ್ಲಿ ಬಹು ಮುಖ್ಯವಾಗಿ ಪರ್ಸೆಂಟೇಜ್ ಪ್ರಕಾರ ಷೆಡ್ಯೂಲ್ ಕ್ಯಾಸ್ಟಿನವರಿಗೆ ಸರ್ಕಾರಿ ನೌಕರಿಯಲ್ಲಿ ಏನು ಹುದ್ದೆಗಳು ದೊರೆಯಬೇಕೋ ಆ ರೀತಿ ಅವರಿಗೆ ಹುದ್ದೆಗಳನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ. ಕಳೆದ 20 ವರ್ಷಗಳಿಂದ ಈ ಜನರಿಗೆ ನ್ಯಾಯ ಎಂಬುದು ಸಮಾಜದಲ್ಲಿ ದೊರೆಯುತ್ತಿಲ್ಲ. ಈ ಮನೆಗೆ ಸಂಬಂಧಪಟ್ಟ ಸದಸ್ಯರುಗಳನ್ನು ಒಳಗೊಂಡಂತೆ ಒಂದು ಕಮಿಟಿಯನ್ನು ಪಾರ್ಲಿಮೆಂಟ್‌ನಲ್ಲಿ ಮಾಡಿದ್ದಾರೆ. ಆ ಕಮಿಟಿಯ ರಿಪೋರ್ಟನ್ನು ಈ ಸಭೆಯ ಮುಂದೆ ತಂದು ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು. ಜನರಲ್ ಅಡ್ಮಿನಿಸ್ಟ್ರೇಷನ್ ಮ್ಯಾಟರ್‌ನೊಳಗೆ ರೆವಿನ್ಯೂ ಡಿವಿಜನ್, ಸೆರಿಕಲ್ಚರ್ ಡಿವಿಜನ್, ಪೋಸ್ಟಲ್ ಡಿವಿಜನ್, ಎಲಕ್ಟ್ರಿಕಲ್ ಡಿವಿಜನ್ ಈ ಎಲ್ಲಾ ಡಿವಿಜನ್ ಆಫೀಸುಗಳನ್ನು ಕೂಡ ಒಂದೇ ಏರಿಯಾದಲ್ಲಿರುವಂತೆ ವ್ಯವಸ್ಥೆ ಮಾಡಬೇಕು. ವಿಲೇಜ್ ಪಂಚಾಯಿತಿಗಳಲ್ಲಿ ಪ್ರತಿಯೊಂದು ಗ್ರಾಮಕ್ಕೂ ಕೂಡ ಒಂದೊಂದು ಪ್ರತ್ಯೇಕವಾದ ಚಿಕ್ಕ ಚಿಕ್ಕದಾದ ಪಂಚಾಯಿತಿಗಳನ್ನು ನೇಮಕ ಮಾಡಬೇಕು. ಇದರಿಂದ ಆ ಗ್ರಾಮಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಈಗಿನ ಪದ್ಧತಿಯ ಪ್ರಕಾರ ಹಳ್ಳಿಗಳು ಬೆಳೆಯುವುದಕ್ಕೆ ಅವಕಾಶವಾಗಿಲ್ಲವಾದ್ದರಿಂದ ಪ್ರತಿ ಗ್ರಾಮಕ್ಕೂ ಪಂಚಾಯಿತಿಗಳನ್ನು ಕಲ್ಪಿಸಿ ಕೊಡಬೇಕು.

ಸರ್ಕಾರದವರು ಒಂದು ಸದುದ್ದೇಶದಿಂದ ಕಮಿಟಿಗಳನ್ನು ನೇಮಕ ಮಾಡುತ್ತಾರೆ. ಅದರ ವರದಿ ಬಂದಮೇಲೆ ಎಷ್ಟು ಸೀರಿಯಸ್ ಆಗಿ ನೋಡಿ ಕಾರ್ಯರೂಪಕ್ಕೆ ತರಬೇಕೋ ಅದರಂತೆ ತರುತ್ತಿಲ್ಲವೆಂದು ಹೇಳಬಹುದು. ಇದುವರೆಗೆ ಸರ್ಕಾರದವರು ಕೊಂಡಜ್ಜಿ ಬಸಪ್ಪ ಕಮಿಟಿ, ಮಧುಗಿರಿ ಪ್ರಕರಣದ ಬಗ್ಗೆ ಒಂದು ಕಮಿಟಿ, ವೇತನಕ್ಕೆ ಸಂಬಧಪಟ್ಟಂತೆ ತುಕೋಳ್ ಆಯೋಗದ ಕಮಿಟಿ, ಮತ್ತು ಟೀರಪ್ಪ ಸಮಿತಿಗಳನ್ನು ನೇಮಕ ಮಾಡಿ ಆ ಬಗ್ಗೆ ವರದಿಗಳು ಸರ್ಕಾರದ ಮುಂದೆ ಇವೆ. ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ ಟ್ರೈಬ್ಸ್‌ಗಳಿಗೆ ಸಂಬಂಧಪಟ್ಟವರಿಗೆ ಕೆಲಸ ಕೊಡುವ ವಿಚಾರದಲ್ಲಿ ಟೀರಪ್ಪ ಸಮಿತಿಯನ್ನು ನೇಮಕ ಮಾಡಿದ್ದರು. ಈ ಸಮಿತಿಯನ್ನು ಏತಕ್ಕೆ ನೇಮಕ ಮಾಡಿದರೋ ಎಂಬ ಸಂಶಯ ಬಂದಿದೆ. ಯಾವುದೇ ಒಂದು ಕಮಿಟಿಯನ್ನು ಮಾಡಿದಮೇಲೆ ಅವರು ಕೊಟ್ಟ ವರದಿಯನ್ನು ಕಾರ್ಯರೂಪಕ್ಕೆ ತರುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ವರ್ಗಾವರ್ಗಿಯ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಒಳ್ಳೆಯ ಅಧಿಕಾರಿಗಳನ್ನು ವರ್ಗಾ ಮಾಡಬಾರದು. ನಾಲ್ಕನೆ ವರ್ಗದ ನೌಕರರನ್ನು ಜಿಲ್ಲೆಯಿಂದ ಜಿಲ್ಲೆಗೆ ವರ್ಗ ಮಾಡಬಾರದೆಂದು ನಿಯಮವಿದ್ದರೂ ಕೂಡ ಕೆಲವು ಸಲ ಮಾಡುತ್ತಿದ್ದಾರೆ. ಎರಡು ವರ್ಷಕ್ಕೆ ಮೊದಲು ವರ್ಗ ಮಾಡಬಾರದೆಂದು ನಿಯಮವಿದ್ದರೂ ಕೂಡ ವರ್ಗ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟ್‌ನಲ್ಲಿರುವ ತಿಮ್ಮಾಶೆಟ್ಟಿ ಎಂಬ ಎರಡನೆಯ ದರ್ಜೆಯ ಗುಮಾಸ್ತರನ್ನು ಮತ್ತು ಲೋಕೋಪಯೋಗಿ ಇಲಾಖೆಯಲ್ಲಿರುವ ಬಿ. ಬಾಲಕೃಷ್ಣ ಎಂಬ ಗುಮಾಸ್ತರನ್ನು ಬೆಂಗಳೂರು ಬಿಟ್ಟು ಹೊರಗಡೆಗೆ ಓಡಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ.

Mr. CHAIRMAN.—It has been stated again and again that names should not be mentioned. The hon. Member should not mention any names in his speech.

ಶ್ರೀ ಕೆ. ಪ್ರಭಾಕರ್.—ರೆವಿನ್ಯೂ ಡಿಪಾರ್ಟ್‌ಮೆಂಟ್ ಮತ್ತು ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುವವರಿಗೆ ವಾಹನಗಳನ್ನು ಒದಗಿಸಬೇಕು. ಈಗಾಗಲೇ ಬಿ. ಡಿ. ಓ. ಗಳಿಗೆ, ಮೆಡಿಕಲ್ ಅಂಡ್ ಹೆಲ್ತ್ ಡಿಪಾರ್ಟ್‌ಮೆಂಟ್‌ನವರಿಗೆ ಮತ್ತು ಸೆಂಟ್ರಲ್ ಸೋಷಿಯಲ್ ವೆಲ್‌ಫೇರ್ ಬೋರ್ಡ್‌ನವರಿಗೆ ಜೀಪ್‌ಗಳನ್ನು ಒದಗಿಸಲಾಗಿದೆ. ಆದಕಾರಣ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರಿಗೆ ಮತ್ತು ಪೋಲೀಸ್ ಡಿಪಾರ್ಟ್‌ಮೆಂಟ್‌ನವರಿಗೂ ಸಹ ವಾಹನಗಳ ಸೌಕರ್ಯಗಳನ್ನು ಕೊಡಿಸಬೇಕು.

ನಯಾಪೈಸೆ, ಕ್ವಿಂಟಾಲ್, ಲೀಟರ್, ಹೆಕ್ಟೇರ್ ಮತ್ತು ಪೌಂಡ್ ಈ ಪದಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಬೇಕು. ಏಕೆಂದರೆ ಈ ಪದಗಳನ್ನು ರೈತರಿಗೆ ಉಪಯೋಗಿಸುವುದಕ್ಕೆ ತೊಂದರೆಯಾಗಿದೆ. ಆದಕಾರಣ ಈ ಒಂದು ತೊಡಕನ್ನು ನಿವಾರಣೆ ಮಾಡಬೇಕು.

ಮಾನಾಪಲಿ ಆಫ್ ದಿ ಡಿಪಾರ್ಟ್‌ಮೆಂಟ್ಸ್ ಆಗಬಾರದು. ಈಗ ಒಂದೊಂದು ಖಾತೆಯನ್ನು ಇಬ್ಬರು ಮಂತ್ರಿಗಳು ನೋಡಿಕೊಳ್ಳುತ್ತಿದ್ದರೂ ಸಹ ಆಗ ಬೇಕಾದಷ್ಟು ಕೆಲಸಗಳು ಆಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಾಮಾನ್ಯಾಡಳಿತ ಇಲಾಖೆಯನ್ನು ಮಾತ್ರ ಇಟ್ಟುಕೊಳ್ಳಬೇಕು. ಉಳಿದ ಇಲಾಖೆಗಳನ್ನು ಅವರು ತಮ್ಮ ಸಹೋದ್ಯೋಗಿಗಳಿಗೆ ವಹಿಸಿಕೊಡಬೇಕು. ಮುಖ್ಯ ಮಂತ್ರಿಗಳು ಕೇವಲ ವಿಜಿಲೆನ್ಸ್ ಕಮಿಷನರ್ ಇದ್ದ ಹಾಗೆ ಇರಬೇಕು. ನಾನು ಇಲಾಖೆಗಳನ್ನು ಮುಖ್ಯ ಮಂತ್ರಿಗಳು ಇಟ್ಟುಕೊಳ್ಳಬಾರದೆಂದು ಹೇಳುತ್ತೇನೆ. ಸರ್ಕಾರೀ ಅಧಿಕಾರಿಗಳು ಎಲ್ಲರನ್ನೂ ನ್ಯಾಯದೃಷ್ಟಿಯಿಂದ ನೋಡಿಕೊಳ್ಳಬೇಕು. ಅಧಿಕಾರಿಗಳು ಸರ್ಕಾರಕ್ಕೆ ಒಳ್ಳೆಯ ಹೆಸರು ತರುವಂತಹ ವರ್ತನೆ ಮಾಡಬೇಕು. ಈ ಬಗ್ಗೆ ಕಾನೂನನ್ನು ಮಾಡಿದರೆ ಆಗುವುದಿಲ್ಲ. ಅಧಿಕಾರಿಗಳು ತಕ್ಷಣವೇ ತಿಳಿದುಕೊಂಡು ದೇಶದ ಏಳಿಗೆಗಾಗಿ ಕೆಲಸ ಮಾಡಬೇಕು. ಸೋಷಿಯಲ್ ಸೆಕ್ಯುರಿಟಿ ಆಕ್ಟನ್ನು ಸರ್ಕಾರದವರು ತಂದು ಪಾಸ್ ಮಾಡಬೇಕು. ಪ್ರಜಾರಾಜ್ಯ ಒಳ್ಳೆಯ ರೀತಿಯಲ್ಲಿ ನಡೆಯಬೇಕಾದರೆ ಈ ಆಕ್ಟ್ ತರುವುದು ಒಳ್ಳೆಯದು. ಈ ಬಗ್ಗೆ ಸಿ. ಸಿ. ಎ. ರೂಲ್ಸ್‌ನಲ್ಲಿ ಏನಾದರೂ ಅಡ್ಡಿ ಬರುವುದು ಇದ್ದರೆ ಅದನ್ನು ತಡೆಗಟ್ಟಬೇಕೆಂದು ಸಲಹೆ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಜೈಹಿಂದ್.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಮುಖ್ಯ ಬಾಬುಗಳಾದ ಸಾಮಾನ್ಯಾಡಳಿತ, ಬಂದೀಖಾನೆಗಳು ಮತ್ತು ಪೋಲೀಸ್ ಇಲಾಖೆಗಳಿಗೆ ಸಂಬಂಧಪಟ್ಟಂತೆ ಇರುವ ವಿಷಯಗಳ ಬಗ್ಗೆ ವಿರೋಧವಾಗಿ ಮಾತನಾಡಬೇಕೆಂದು ನಾನು ಆಶೆಪಡುತ್ತೇನೆ. ಪ್ರತಿಯೊಂದು ದೇಶದಲ್ಲಿಯೂ ಕೂಡ ಸರ್ಕಾರದವರು ಪೋಲೀಸರನ್ನು ಇಟ್ಟುಕೊಂಡಿದ್ದಾರೆ. ನಮ್ಮ ದೇಶದಲ್ಲಿಯೂ ಕೂಡ ಸರ್ಕಾರದವರು ಪೋಲೀಸರನ್ನು ಇಟ್ಟುಕೊಂಡಿದ್ದಾರೆ. ಇವತ್ತಿನ ದಿವಸ ಪ್ರತಿ ದೇಶಗಳಲ್ಲಿಯೂ ಸಹ ಕೊಲೆಗಳು ನಡೆಯುತ್ತಿವೆ. ತನಿಖೆ ಮಾಡುವ ಜವಾಬ್ದಾರಿಯನ್ನು ಪೋಲೀಸ್ ಅಧಿಕಾರಿಗಳು ವಹಿಸಿಕೊಂಡಿರುತ್ತಾರೆ. ತನಿಖೆ ಮಾಡುವ ಕಾಲದಲ್ಲಿ ಯಾವ ರೀತಿ ತನಿಖೆ ಮಾಡಬೇಕು, ಯಾವ ರೀತಿ ತನಿಖೆಗೆ ಸಂಬಂಧಪಟ್ಟ ಅಪರಾಧಿಗಳನ್ನು ಪತ್ತೆ ಹಚ್ಚಬೇಕು ಎಂಬ ಬಗ್ಗೆ ಬಹಳ ಜಿಜ್ಞಾಸೆ ಇದೆ. ನಮ್ಮ ದೇಶದಲ್ಲಿರುವ ಪೋಲೀಸ್ ಇಲಾಖೆ ಇನ್ನೂ ಶೈಶವಾವಸ್ಥೆಯಲ್ಲಿದೆ. ಇನ್ನೂ ಕಣ್ಣು ಬಿಡದ ಮಗುವಿನಂತಿದೆ. ಆದರೆ ಲಂಚ ತಿನ್ನುವುದರಲ್ಲಿ ವಯಸ್ಸಾಗಿದೆ. ಈ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಸಾಗರ ತಾಲ್ಲೂಕ್‌ನ ತಲವಾಟ ಗ್ರಾಮದಲ್ಲಿ 1956–57ರಲ್ಲಿ ಒಂದು ಮಾಸ್ ಮರ್ಡರ್ ನಡೆಯಿತು. ಅದರಲ್ಲಿ ತಾಯಿ, ಮಕ್ಕಳು ಮತ್ತು ಇನ್ನೂ 4–5 ಜನ ಸತ್ತರು. ಸರ್ಕಾರದವರಿಂದ ಬೇರೆ ಬೇರೆ ರೀತಿಯ ಶಹಭಾಸ್ ಗಿರಿಯನ್ನು ಪಡೆಯತಕ್ಕಂಥ ಪೋಲೀಸ್ ಅಧಿಕಾರಿಗಳು ಈ ಕೇಸ್‌ನ ಬಗ್ಗೆ ಒಬ್ಬ ಅಪರಾಧಿಯನ್ನೂ ಸಹ ಹಿಡಿದಿಲ್ಲ. ಮತ್ತು ಅವರಿಗೆ ಪತ್ತೆ ಹಚ್ಚುವುದಕ್ಕೆ ಆಗಿಲ್ಲ. ಶಿಕಾರಿಪುರ ತಾಲ್ಲೂಕ್‌ನ ಗುಡ್ಡದಹೊಸಹಳ್ಳಿಯಲ್ಲಿ ಒಂದು ಮರ್ಡರ್ ನಡೆಯಿತು. ಈ ಬಗ್ಗೆ ಜನರಿಂದ ಸರ್ಕಾರಕ್ಕೆ ಅನೇಕ ಅರ್ಜಿಗಳು ರೆಪ್ರಜೆಂಟೇಷನ್‌ಗಳು ಬಂದಿದ್ದರೂ ಕೂಡ ಒಬ್ಬ ಪ್ರಭಾವಶಾಲಿಯಾದ ಮನುಷ್ಯನಿಂದ ಪೋಲೀಸರು ಹಣ ತಿಂದು ಈ ಕೇಸನ್ನು ರೋಡಿನಲ್ಲಿ ಕೈಬಿಟ್ಟಿದ್ದಾರೆ. ಮೂರನೆ ತಾರೀಖು ನಮ್ಮ ಸೊರಬ ತಾಲ್ಲೂಕಿನಲ್ಲ ಬಾರಂಗಿ ಎನ್ನುವ ಹಳ್ಳಿಯಲ್ಲಿ ಒಬ್ಬರು ಉಪಾಧ್ಯಾಯರ ಮತ್ತು ಅವರ ಹೆಂಡ್ತಿ ಹೀಗೆ ಇಬ್ಬರ ಕೊಲೆಯಾಯಿತು. ಇದರ ಬಗ್ಗೆ ಕಂಪ್ಲೇಂಟು ಕೊಡಲು ಒಬ್ಬರು ಅಲ್ಲಿರುವ ಪೋಲೀಸು ಸ್ಟೇಷನ್ನಿಗೆ ಹೋಗಿದ್ದರು. ಆ ಬಡ ಉಪಾಧ್ಯಾಯರು ಹಾಗೂ ಅವರ ಹೆಂಡತಿ ಅವರಿಬ್ಬರನ್ನು ಅನ್ಯಾಯವಾಗಿ ಕೊಂದಿದ್ದರೂ ಅವರು ಫಾಲಿಡಾಲ್ ತೆಗೆದುಕೊಂಡು ಸತ್ತರು ಎಂದು ದೂರುಕೊಡಲು ಹೋಗಿದ್ದವರಿಂದ ಬರೆಸಿಕೊಂಡರು. ಇವರು ಹೇಗೆ ಸತ್ತರು ಎನ್ನುವುದು ಯಾರಿಗೂ ಗೊತ್ತಾಗದಿರಲಿ ಎಂದು ಇಲ್ಲಿನ ಪೋಲಿಸು ಅಧಿಕಾರಿಗಳು ಆ ರೀತಿ ಮಾಡಿದರು ಹೀಗೆ ಅನ್ಯಾಯವಾಗಿ ಕೊಲೆ ಮಾಡಿದ್ದರೂ ಇದನ್ನು ಆತ್ಮಹತ್ಯ ಪ್ರಕರಣ ಎಂದು ಮಾಡಿಬಿಟ್ಟರು. ಇವೊತ್ತು ಪೋಲಿಸಿನವರು ಇಲ್ಲಿನ ಮುಖಂಡರೊಡನೆ ಶಾಮೀಲಾಗಿ ಇಂತಹ ಕೊಲೆ ನಡೆದಿದೆ ಎಂದು ತಿಳಿದಿದ್ದರೂ ಇದುವರೆಗೂ ಯಾರನ್ನೂ ತನಿಖೆ ಮಾಡಿ ಹಿಡಿದಿಲ್ಲ. ಇಂತಹವು ಮೈಸೂರು ರಾಜ್ಯದಲ್ಲಿ ಸಾವಿರಾರು ಇವೆ. ನಾನು ಒಂದು ಉದಾಹರಣೆ ಮಾತ್ರ ತಮಗೆ ಇಲ್ಲಿ ಕೊಟ್ಟೆ ಅಷ್ಟೇ. ಪೋಲೀಸಿನವರ ವರ್ತನೆ ಬಗ್ಗೆ ಎರಡು ಹೈ ಕೋರ್ಟುಗಳ ಜಡ್ಜ್‌ಮೆಂಟಿನಲ್ಲಿ ಯಾವ ರೀತಿ ಸ್ಟ್ರಿಕ್ಚರುಗಳನ್ನು ಪಾಸು ಮಾಡಿದ್ದಾರೆ ಎನ್ನುವುದನ್ನು ಇಲ್ಲಿ ಎಲ್ಲರೂ ಓದಿದರೆ ಅವರಿಗೇ ಚೆನ್ನಾಗಿ ಗೊತ್ತಾಗುತ್ತದೆ. ಒಂದು ಆಂಧ್ರ ಪ್ರದೇಶದ ಹೈಕೋರ್ಟಿನಲ್ಲಿ ಮಾಡಿದುದು. ಇನ್ನೊಂದು ಅಲಹಾಬಾದ್ ಹೈ ಕೋರ್ಟಿನಲ್ಲಿ ಎ. ಎಂ. ಮುಲ್ಲಾರವರು ಮಾಡಿರುವ ಜಡ್ಜಮೆಂಟು. ಶ್ರೀ ಮುಲ್ಲಾ ಎನ್ನುವವರು ಪಾರ್ಲಿಮೆಂಟಿನಲ್ಲ ಎಂ. ಪಿ.

(ಶ್ರೀ ಎಸ್. ಬಂಗಾರಪ್ಪ)

ಆಗಿಯೂ ಇದ್ದಾರೆ. ಅವರು ಜಡ್ಜ್‌ಮೆಂಟುಗಳಲ್ಲಿ ಪೋಲಿಸಿನವರು ಕೇಸುಗಳನ್ನು ಹಾಕಿ ಹೇಗೆ ತಕ್ಸೀರು ನಡೆಸುತ್ತಾರೆ ಹೇಗೆ ಇದರ ಇತ್ಯರ್ಥಗಳನ್ನು ಮಾಡುತ್ತಾರೆ ಮತ್ತು, ಇದರಲ್ಲಿ ಫಿಂಗರ್ ಪ್ರಿಂಟ್ ಎಕ್ಸ್‌ಪರ್ಟ್‌ಗಳು ಎಂದು ಇರುತ್ತಾರೆ, ಇವರೆಲ್ಲರೂ ಪೋಲೀಸು ಇಲಾಖೆಯಲ್ಲಿ ಬರುವ ಕೇಸುಗಳನ್ನು ಪರಿಶೀಲನೆ ಮಾಡಿ ಕೋರ್ಟಿಗೆ ಹೇಗೆ ಚಾರ್ಜ್ ಷೀಟುಗಳನ್ನು ಹಾಕುತ್ತಾರೆ ಮತ್ತು ಅವರನ್ನು ಹೇಗೆ ಬಿಡುತ್ತಾರೆ ಇತ್ಯಾದಿ ವಿವರಗಳನ್ನೆಲ್ಲಾ ವಿವರವಾಗಿ ಅದರಲ್ಲಿ ತಿಳಿಸಿದ್ದಾರೆ. ಮತ್ತು ಕೋರ್ಟಿನಿಂದ ಶಿಕ್ಷೆಗೆ ಒಳಗಾಗಿರುವವರ ಮೇಲೂ ಸೂಕ್ತವಾದ ಕ್ರಮ ತೆಗೆದುಕೊಳ್ಳದೆ ಅನೈತಿಕ ಮಾರ್ಗಗಳಿಂದ ಕೆಲಸ ಮಾಡುತ್ತಿದ್ದಾರೆ ಎನ್ನುವುದು ಇದರಿಂದ ಚೆನ್ನಾಗಿ ವ್ಯಕ್ತವಾಗುತ್ತದೆ. ನಮ್ಮ ದೇಶದವರು ಇಂಗ್ಲೆಂಡು ಹಾಗೂ ಅಮೆರಿಕಾ ದೇಶದಲ್ಲಿ ಯಾವ ರೀತಿಯ ಆಡಳಿತವಿದೆ ಅನ್ನುವುದನ್ನು ನೋಡಿಕೊಂಡು ಇಲ್ಲಿಯೂ ಅದನ್ನು ಜಾರಿಗೆ ತರುವುದು ಅಗತ್ಯ. ನಮ್ಮ ಅಧಿಕಾರಿಗಳು ಅವರಿಂದ ಇನ್ನೂ ಪಾಠವನ್ನು ಚೆನ್ನಾಗಿ ಕಲಿಯಬೇಕು. ಈಗ ನಮ್ಮ ದೇಶದಲ್ಲಿ ಯಾವ ಕೊಲೆಯೇ ಆಗಲೀ ಅದರ ಬಗ್ಗೆ ಅಪರಾಧಿಯಾಗಿರುವವನು ಹೇಗೋ ಬಚಾವ್ ಆಗುತ್ತಾನೆ ಮತ್ತು ಕೆಲವು ವೇಳೆ ನಿರಪರಾಧಿಗಳು ಇದರಲ್ಲಿ ಸಿಕ್ಕಿ ತೊಂದರೆಗೆ ಒಳಗಾಗುತ್ತಿದ್ದಾರೆ. ಪೋಲೀಸಿನವರೇ ಕಳ್ಳತನದ ಕೇಸನ್ನು ಹಾಕುವವರು ಮತ್ತು ಪೋಲೀಸಿನವರೇ ಕಳ್ಳತನ ಮಾಡುವವರಿಗೆ ಸಹಾಯಕರಾಗಿ ಕಳ್ಳತನ ಮಾಡುವುದನ್ನು ಚೆನ್ನಾಗಿ ಕಲಿಸುತ್ತಾರೆ. ನಮ್ಮ ಬೆಂಗಳೂರಿನಲ್ಲೇ ಈಚೆಗೆ ಅಮೀರ್ ಎನ್ನುವವರ ಒಂದು ಕೇಸು ಆಯಿತು, ಇದರಲ್ಲಿ ಏನಾಗಿದೆ ತಾವೇ ಯೋಚಿಸಬಹುದು. ಪೋಲಿಸಿನವರೇ ಷರೀಖು ಆಗಿ ಅಲ್ಲಿ ಕೊಲೆ ಮಾಡಿದತಕ್ಕ ಅಪರಾಧಿಯನ್ನು ಹಾಗೆ ಬಿಟ್ಟುಬಿಟ್ಟರು ಮತ್ತು ನಿರಪರಾಧಿಯವರ ಮೇಲೆ ದರ್ಪ ತೋರಿಸಿ ಅವರನ್ನು ಅಪರಾಧಿ ಎನ್ನುವಂತೆ ಮಾಡುತ್ತಲಿದ್ದಾರೆ. ಹೀಗೆ ಪೋಲೀಸು ಡಿಪಾರ್ಟುಮೆಂಟಿನಲ್ಲಿ ಕೊಲೆಗಾರರಿದ್ದಾರೆ. ಕಳ್ಳತನ ಹಾಗೂ ಭ್ರಷ್ಟಾಚಾರ ಮಾಡುವವರು ಇದ್ದಾರೆ. ಹಗಲು ದರೋಡೆಕಾರರು ಇದ್ದಾರೆ. ಈಚೆಗೆ ನಮ್ಮ ಸೊರಬ ತಾಲ್ಲೂಕಿನಲ್ಲಿದ್ದ ಒಂದು ಪೋಲೀಸು ಸ್ಟೇಷನ್ನಿನಲ್ಲಿ ಒಬ್ಬರು ಅವರ ಮನೆಯಲ್ಲಿ ಯಾರೋ ಕದ್ದರು ಎಂದು ಒಂದು ಕಂಪ್ಲೇಂಟು ಕೊಡಲು ಬಂದರೆ ಅವರನ್ನೇ ಪೋಲಿಸಿನವರು ಒಳಕ್ಕೆ ಕರೆದುಕೊಂಡು ಹೋಗಿ ಅವರಿಂದಲೇ ಒಂದು ರೀತಿಯಾಗಿ ಖೂನಿಯಾಯಿತು ಎನ್ನುವಂತೆ ಮಾಡಿದರು. ಹೀಗೆ ಪೋಲೀಸಿನವರೇ ಒಂದು ನಮೂನೆ ಮಾಡಿಕೊಂಡ ಕೆಲಸ ಮಾಡುತ್ತಾರೆ. ಇವರಿಗೆ ಮೇಲಿನ ಅಧಿಕಾರಿಗಳು ಇಷ್ಟು ಕೇಸುಗಳನ್ನು ಹಾಕಬೇಕು ಎಂದು ಗೊತ್ತು ಮಾಡಿರುತ್ತಾರೆ. ಅದರಂತೆ ಅವರು ಡೈರಿಯಲ್ಲಿ ಬರೆದು ಕಳುಹಿಸಬೇಕಾಗುತ್ತದೆ. ಅದಕ್ಕೆ ಅವರೇ ಒಂದು ನಮೂನೆಯನ್ನು ಕಂಡುಹಿಡಿದು ಅದರಂತೆ ಕೆಲಸಗಳನ್ನು ಮಾಡುತ್ತಾರೆ. ಕಂಪ್ಲೇಂಟು ಕೊಡಲು ಬಂದವರಿಂದಲೇ ಲಂಚ ತಿನ್ನುವುದು, ಆ ನಂತರ ಕಂಪ್ಲೇಂಟ್ ಕೊಡುವವರನ್ನೇ ಒಳಗೆ ಹಾಕಿಕೊಂಡು ಅವರಿಂದಲೇ ದುಡ್ಡು ಹೊಡೆಯುವುದು ಹೀಗೆ ಮಾಡುತ್ತಿದ್ದಾರೆ. ಲಂಚ ತಿನ್ನುವುದು ಕೆಳ ದರ್ಜೆ ಅಧಿಕಾರಿಗಳಿಂದಲೇ ಆಗುತ್ತದೆ ಎಂದೇನಿಲ್ಲ. ಇದರಲ್ಲಿ ಎಲ್ಲರಿಗೂ ಷೇರುಗಳು ಇರುತ್ತವೆ. ಸುಸೂತ್ರವಾಗಿ ಮಾಮೂಲು ಎನ್ನುವುದು ನಡೆಯುತ್ತಿದೆ. ಪೋಲೀಸು ಸಬ್ ಇನ್ಸ್‌ಪೆಕ್ಟರುಗಳಿಂದ ಹಿಡಿದು ಸರ್ಕಲ್ ಇನ್ಸ್‌ಪೆಕ್ಟರು ಹಾಗೂ ಡಿ. ವೈ. ಎಸ್. ಪಿ. ವರೆಗೆ ಹಂಚಿಕೆಗಳು ನಡೆಯುತ್ತಿರುತ್ತವೆ. ಇದರಲ್ಲಿ ಪಾಪ ಸಣ್ಣ ಸಣ್ಣ ಹಂಚಿಕೆಗಳಿಗೆ ಯಾರೂ ಹೆದರುವುದೇ ಇಲ್ಲ. ಯಾರಾದರೂ ಇನ್ಸ್‌ಪೆಕ್ಷನ್ನಿಗೆ ಎಂದು ಬಂದಾಗ ಅಲ್ಲಿ ಎಷ್ಟು ಕೇಸುಗಳನ್ನು ಹಾಕಿದ್ದಾರೆ ಇಲ್ಲಿಂದ ಸರ್ಕಲ್ ಇನ್ಸ್‌ಪೆಕ್ಟರವರ ಆಫೀಸಿಗೆ ಎಷ್ಟು ಕೇಸುಗಳು ಹೋಗಿವೆ ಮತ್ತು ಅಲ್ಲಿಂದ ಇನ್ಸ್‌ಪೆಕ್ಟರವರ ಆಫೀಸಿಗೆ ಎಷ್ಟು ಕೇಸುಗಳು ಬಂದಿವೆ ಏನು ಕಾರ್ಯಕ್ರಮ ತಗೆದುಕೊಳ್ಳಬೇಕು ಎನ್ನುವುದು ಅವರಿಗೆಲ್ಲಾ ಚೆನ್ನಾಗಿ ಗೊತ್ತಿರುತ್ತದೆ. ಜನಸಾಮಾನ್ಯರಿಗೆ ಇಂತಹ ಪೋಲೀಸು ಅಧಿಕಾರಿಗಳಿಂದ ಯಾವ ಅನುಕೂಲಗಳೂ ಸಿಗುವುದಿಲ್ಲ. ಸುಮಾರು 20—21 ವರ್ಷದ ಆಡಳಿತದಲ್ಲಿ ಪೋಲೀಸು ಇಲಾಖೆಯ ಆಡಳಿತ ನೋಡುವುದಾದರೆ ಕಾಳಸಂತೆ ಕದೀಮರನ್ನು ಹೆಚ್ಚಾಗಿ ಏರ್ಪಾಡು ಮಾಡುತ್ತಿದ್ದಾರೆ. ಇವೊತ್ತು ನಮ್ಮ ಪೋಲೀಸು ಖಾತೆಯ ಮಂತ್ರಿಗಳು ಇಲ್ಲಿಗೆ ಬಂದು ನಮ್ಮ ಅಧಿಕಾರಿಗಳೆಲ್ಲಾ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಬೆನ್ನು ಚಪ್ಪಡಿಸಿಕೊಂಡು ಹೇಳಬಹುದು. ಆದರೆ ನಿಮ್ಮಲ್ಲಿರುವ ಅಧಿಕಾರಿಗಳು ಯಾರಾದರೂ ತಪ್ಪು ಮಾಡಿದ್ದಾರೆ ಎಂದು ನಾವು ತೋರಿಸಿದಾಗ ಅದು ರುಜುವಾತು ಆದಾಗ ಅಂತಹ ಅಧಿಕಾರಿಗಳ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳುವ ಧೈರ್ಯ ಮಾಡುತ್ತೀರಾ! ನೀವು ಮಾಡುತ್ತಿರುವ ಯಾವ ಪ್ರೋಗ್ರಾಂ ಕೂಡ ಸರಿಯಾಗಿ ಆಗುತ್ತಿಲ್ಲ. ಇವೊತ್ತು ಪೋಲೀಸು ಇಲಾಖೆಯಲ್ಲಿ ದೊಡ್ಡವರಿಗೆ ಯಾವ ಅನುಕೂಲಗಳು ಬೇಕು ಎಂದರೂ ಸಿಗುತ್ತದೆ. ಜನಸಾಮಾನ್ಯರಾದ ಬಡವರಿಗೆ ಯಾವ ಸಹಾಯಗಳೂ ಸಿಗುವುದಿಲ್ಲ ಎನ್ನುವುದು ಖಂಡಿತ. ಹೀಗಾದರೆ ಸಮಾಜವಾದ ಸಾಧಿಸು

ತ್ತೇವೆ ಎನ್ನುವ ಗುರಿ ಸಾಧಿಸಿದಂತೆ ಆಗುವುದಿಲ್ಲ. ಇಂದು ದೇಶದಲ್ಲಿ ಬಡತನ ಜಾಸ್ತಿಯಾಗಿದೆ, ಬಡಜನರು ತಪ್ಪಿತಸ್ಥರು ಅಲ್ಲದಿದ್ದರೂ ಅವರು ಪೋಲೀಸಿನವರ ಕೈಗೆ ಸಿಕ್ಕಿದಾಗ ಅವರಿಂದ ಕನ್ಸೆಂಟ್ ಬೇರೆ ಬರಿಸಿಕೊಳ್ಳುತ್ತಾರೆ ಮತ್ತು ದೂರುಗಳು ಇಲ್ಲದಿದ್ದರೂ ಅವರ ಮೇಲೆ ದೂರುಗಳನ್ನು ತಂದು ಸುಳ್ಳು ಕೇಸುಗಳನ್ನು ಹಾಕುತ್ತಾರೆ. ಹೀಗೆ ನಮ್ಮ ರಾಜ್ಯದಲ್ಲಿರುವ ಪೋಲೀಸು ಇಲಾಖೆಯು ಅಡಳಿತವಾಗಿದೆ. ಇದು ಹೇಗಿದೆ ಎಂದರೆ ಬೇಲಿಯೇ ಎದ್ದು ಮೇಯ್ದೊಡೆ ಹರ ಹರಾ ಶ್ರೀ ಚನ್ನಸೋಮೇಶ್ವರಾ ಎಂದು ಹೇಳುವಂತೆ ಇಂದು ಪೋಲೀಸು ಇಲಾಖೆಯಾಗಿದೆ. ಪೋಲೀಸು ಇಲಾಖೆಯಲ್ಲಿ ಲಂಚ ತಿನ್ನುವವರೂ ಇದ್ದಾರೆ, ಕಂಪ್ಲೇಂಟುಗಳು ಬರೆಸುವವರೇ ಪೋಲೀಸರಾಗಿದ್ದಾರೆ. ಅವರಿಗೆ ಇದಕ್ಕೆಲ್ಲಾ ಏನು ಮಾಡಬೇಕು ಎನ್ನುವುದು ಗೊತ್ತಿದೆ. ಸುಮಾರು 20—21 ವರ್ಷಗಳಿಂದಲೂ ತಪ್ಪು ಮಾಡುತ್ತಿದ್ದೀರಿ ಎಂದು ಇವರಿಗೆ ಸಾರಿ ಹೇಳಿದರೂ ಕೂಡ ಇವರ ಮೇಲೆ ಯಾವ ಕ್ರಮ ತೆಗೆದುಕೊಳ್ಳುವುದಕ್ಕೂ ಅಗುತ್ತಿಲ್ಲ. ಈ ಇಪ್ಪತ್ತೊಂದು ವರ್ಷದ ಆಡಳಿತದಲ್ಲಿ ಜನ ಪೋಲೀಸರ ಬಗ್ಗೆ ಏನು ಅಭಿಪ್ರಾಯ ಹೊಂದಿದ್ದಾರೆ ಎಂದರೆ ಪೋಲಿಸಿನವರೇ ಕೊಲೆಗಾರರು ಆಗಿದ್ದಾರೆ. ಅನ್ಯಾಯವಾಗಿ ಬಡ ಜನರ ಮೇಲೆ ಕೇಸುಗಳನ್ನು ಬುಕ್ ಮಾಡಿ ಇಲ್ಲದ ಕಷ್ಟಗಳಿಗೆ ಸಿಕ್ಕಿಸುವವರು ಇವರೇ. ಪೋಲೀಸು ಸ್ಟೇಷನ್ನಿಗೆ ಬಂದು ಇಂತಹ ಕಡೆ ಕೊಲೆಯಾಗಿದೆ ಎಂದು ಹೇಳಿದರೂ ಅಂತಹ ಕಡೆಗಳಲ್ಲಿ ಬೇಗನೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ.

ಇನ್ನು ಪೋಲೀಸಿನವರು ಯಾವ ರೀತಿ ಕೆಲಸ ಮಾಡಬೇಕು ಎಂದು ಮೇಲಧಿಕಾರಿಗಳು ಸೂಚನೆ ಹೇಗೆ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಒಂದು ಮಾತು ಹೇಳಬೇಕಾದರೆ. ಬೆಂಗಳೂರಿನಲ್ಲಿ ಜಯಚಾಮರಾಜೇಂದ್ರ ಸರ್ಕಲಿನಲ್ಲಿ ಹಾಗೂ ಇನ್ನಿತರ ದೊಡ್ಡ ಸರ್ಕಲ್‌ಗಳಲ್ಲಿ ಬಿಳಿ ಗೆರೆಯ ಗುರ್ತುಗಳನ್ನು ಹಾಕಿದ್ದಾರೆ. ಬಡ ಪೋಲೀಸು ಕಾನ್ಸ್‌ಟೇಬಲ್ಲಿಗೆ ಇಂದು ನೀವು ನೂರು ರೂಪಾಯಿ ಇಲ್ಲ 80 ರೂಪಾಯಿಗಳಷ್ಟು ಸಂಬಳ ಕೊಡುತ್ತೀರಿ. ಡೆತ್ ಸರ್ಕಲ್ ಎಂದು ಹೇಳಬಹುದು ಇಂತಹ ಕಡೆಗಳಲ್ಲಿ ವಾಹನಗಳನ್ನು ರೈಟ್ ಲೆಫ್ಟ್ ತೋರಿಸಲು ಮಧ್ಯೆ ನಿಲ್ಲಬೇಕು. ಇವನು ತನ್ನ ಪ್ರಾಣಕ್ಕೂ ಹೆದರದೇ ಇಲ್ಲಿರಬೇಕು. ಒಂದು ಲಾರಿ ಬಂದು ಒಬ್ಬರು ಹೆಡ್ ಕಾನ್ಸ್‌ಟೇಬಲನನ್ನು ಹೊಡೆದುಕೊಂಡು ಹೋಯಿತು.

He was killed on the spot. ಅವರಿಗೆ ಪ್ರೊಟೆಕ್ಷನ್ ಇಲ್ಲ. ನೀವು ಕೊಡುವ 80—100 ರೂಪಾಯಿ ಸಂಬಳಕ್ಕೆ ಅವನಿಗೆ ಏನೂ ಪ್ರೊಟೆಕ್ಷನ್ ಕೊಡದೆ ಆ ಬಡವ ಪೋಲೀಸಿನವನನ್ನು ಬಲಿ ಕೊಡಬೇಡಿ. ನಮ್ಮ ದೇಶದಲ್ಲಿ ಸ್ಟೇಟ್ ಆಫೀಸರ್ಸ್, ಮುಖ್ಯಮಂತ್ರಿಗಳಿಗೆ $1\frac{1}{2}$—2 ಸಾವಿರ ಸಂಬಳ ಕಾರು ಮತ್ತು ಏರ್ ಕಂಡೀಷನ್ ಇರತಕ್ಕಂಥ ಬಂಗಲೆ ಮತ್ತು ಅವರಿಗೆ ರಕ್ಷಣೆ ಇವೆಲ್ಲಾ ಬೇಕು. ಅವರು ಏನಾದರೂ ಕಷ್ಟದಿಂದ ದುಡಿಯಬೇಕಾಗಿದೆಯೇ, ಆಫೀಸರನ್ನು ಆರಾಮವಾಗಿ ಕೂರಿಸುತ್ತೀರಿ. ಆ ಬಡವ ಪೋಲೀಸನವರಿಗೆ 80 ರೂಪಾಯಿ ಕೊಟ್ಟು ಅವನನ್ನು ನಿಲ್ಲಿಸುತ್ತೀರಿ. ಹಾಗೆ ಅವನು ಬಿಸಿಲಿನಲ್ಲಿ ನಿಂತುಕೊಂಡು ಸತ್ತರೆ ಜವಾಬ್ದಾರರು ಯಾರು ? ಅವನ ಸಂಸಾರವನ್ನು ಯಾರು ನೋಡಿಕೊಳ್ಳುತ್ತಾರೆ. ಅವರ ಮಕ್ಕಳಿಗೆ ಒಂದು ಸಹಾಯವನ್ನೂ ಮಾಡುವುದಿಲ್ಲ, ಆದುದರಿಂದ ಪೋಲಿಸಿನವರಿಗೆ ಸಂಬಳ ಜಾಸ್ತಿ ಮಾಡಬೇಕು. ಸರ್ಕಾರದವರಿಗೆ ಹಣದ ತೊಂದರೆ ಯಾವಾಗಲೂ ಇದೆ. ನೀವು ಎ. ಬಿ. ಸಿ. ಕ್ಲಾಸ್‌ನ ಕಂಟ್ರಾಕ್ಟರುಗಳಿಗೆ ಅವರಿಗೆ ಏನು ಕೊಡಬೇಕು ಅದನ್ನು ಮೊದಲು ಕೊಟ್ಟು ಅವರನ್ನು ಸರಿಮಾಡಿದ ಮೇಲೆ ನಿಮ್ಮ ಗಮನ ಬೇರೆ ಕಡೆ ಹರಿಯಬೇಕಾಗಿದೆ ಟಾಟಾ ಬಿರ್ಲಾ ಅಂತವರನ್ನೇ ಇನ್ನೂ ಸಮಾಧಾನ ಮಾಡಲಿಕ್ಕೆ ಆಗಿಲ್ಲ. ಹಾಗಿರುವಾಗ ಇನ್ನು ಪೋಲೀಸಿನವರಿಗೆ ಕೆಂಪೇಗೌಡ ಸರ್ಕಲ್ಲೇ ಗತಿ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹೀರೆಮಠ್ (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಮೂರು ಖಾತೆಗಳ ಬೇಡಿಕೆಯನ್ನು ಸ್ವಾಗತಿಸುತ್ತಾ ಈ ಸಾರ್ವತ್ರಿಕ ಆಡಳಿತದ ಬಗ್ಗೆ ಒಂದೆರಡು ವಿಷಯಗಳನ್ನು ಸಲಹೆಗಳ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದಿದ್ದೇನೆ.

ಸಾರ್ವತ್ರಿಕ ಆಡಳಿತ ಒಂದು ಆನೆಯಿದ್ದಂತೆ. ಅದರ ಮಾವಟಿಗ ಅಂಕುಶದಿಂದ ಅದನ್ನು ನಡೆಸುವಂತೆ ಈ ಖಾತೆಯನ್ನು ಅಂಕುಶವನ್ನಿಟ್ಟುಕೊಂಡು ನಡೆಸಿದರೆ ಒಳ್ಳೆಯರೀತಿಯಿಂದ ನಡೆಯುತ್ತದೆ ಎಂದು ನನ್ನ ಭಾವನೆ. ಮತ್ತೆ ಸಾರ್ವತ್ರಿಕ ಆಡಳಿತದಲ್ಲಿ ಅರಿತು ನುರಿತ ಶುದ್ಧಹಸ್ತದ ಆಡಳಿತಗಾರರಿದ್ದರೆ ಮಾತ್ರ ಸಾರ್ವತ್ರಿತ ಆಡಳಿತ ಆದರ್ಶವಾಗಿರಬಲ್ಲದು. ಈಗಿನ ಪ್ರಜಾಡಳಿತದ ಪದ್ಧತಿಯಲ್ಲಿ ಕುರಿಬುದ್ಧಿಗೆ ಪ್ರಾಶಸ್ತ್ಯವಿದೆ. ಈ ಕುರಿಬುದ್ಧಿಯ ಚಾಲಕ್ಕೆ ಜವಾನನಿಂದ ಹಿಡಿದು ದಿವಾನನವರೆಗೂ ಸಿಕ್ಕಿರುವುದರಿಂದ ಆಡಳಿತದಲ್ಲಿ, ಅನೀತಿ, ಅಕ್ರಮಗಳು ನಡೆಯುತ್ತಿವೆ.

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

"ಕುರಿಯ ಬುದ್ಧಿಯ ಜಾಲ ಆಡಳಿತದ ನಾಶಕ್ಕೆ ಮೂಲ" ಈ ಆಡಳಿತದಲ್ಲಿ ತ್ಯಾಗಿ ರೋಗಿಯಾಗುತ್ತಾನೆ, ರೋಗಿ, ಉನ್ಮತ್ತ ತ್ಯಾಗಿಯಾಗುತ್ತಾನೆ. ನಾಮಧೇಯ ಮೂಲೆ ಸೇರುತ್ತಾನೆ. ಅನಾಮಧೇಯ ಅಧಿಕಾರಕ್ಕೇರುತ್ತಾನೆ. ಸತ್ಯಕ್ಕೆ ಆಪತ್ತು, ಅಸತ್ಯಕ್ಕೆ ದೌಲತ್ತು. ಇಷ್ಟೆಲ್ಲಾ ನಡೆಯುವುದು ಕುರಿಬುದ್ಧಿಯ ಅನುಕರಣೆಯಿಂದ. ಇದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಕೋಸಲ ದೇಶದಲ್ಲಿ ವೀರಸೇನ ಎಂಬ ರಾಜನಿದ್ದ. ತಾನು ಸಮರ್ಥ ಆಡಳಿತ ನಡೆಸುತ್ತಿರುವುದಾಗಿಯೂ, ಪ್ರಜೆಗಳೆಲ್ಲರೂ ತನ್ನನ್ನು ಮೆಚ್ಚಿರುವುದಾಗಿಯೂ ತಿಳಿದುಕೊಂಡಿದ್ದ. ಈ ವಿಚಾರವನ್ನು ಪದೇ ಪದೇ ಪ್ರಧಾನಮಂತ್ರಿಯೊಂದಿಗೆ ಹೇಳುತ್ತಿದ್ದ. ಪ್ರಧಾನ ಮಂತ್ರಿಗೆ ಇದನ್ನು ಕೇಳಿ ಕೇಳಿ ಸಾಕಾಗಿತ್ತು. ಮಹಾಪ್ರಭೂ ಇದು ಹಾಗಲ್ಲ. ಆಡಳಿತದ ಬಗ್ಗೆ ನೀವು ಮಂತ್ರಿಗಳನ್ನು ನೋಡುತ್ತೀರಿ. ಮಂತ್ರಿಗಳು ಅಧಿಕಾರಿಗಳನ್ನು ನೋಡುತ್ತಾರೆ. ಅಧಿಕಾರಿಗಳು ಕಾರಕೂನರನ್ನು ನೋಡುತ್ತಾರೆ. ಕಾರಕೂನರು ಕಾನೂನಿನ ನೆಪ ಹೇಳಿ ಆಡಳಿತ ರಥ ಸಾಗುವಂತೆ ಮಾಡುತ್ತಾರೆ. ನಿಮ್ಮ ತಪ್ಪಿಗೆ ಮಂತ್ರಿಗಳು ಸೈ ಎನ್ನುತ್ತಾರೆ ಅಂದಮೇಲೆ ಆಡಳಿತ ನಡೆಯುವುದು ಕುರಿಬುದ್ಧಿಯ ಅನುಕರಣೆಯಿಂದ ಎಂದು ಪ್ರಧಾನಿ ಹೇಳಿದ. ಇದರಿಂದ ರಾಜನಿಗೆ ಸಿಟ್ಟು ಬಂದು, ನೀನು ಇದು ನಿಜವೆಂಬುದನ್ನು ನನಗೆ ಮನದಟ್ಟು ಮಾಡಬೇಕು. ಇಲ್ಲವಾದರೆ ನಿನಗೆ ತಕ್ಕ ಶಿಕ್ಷೆ ಯಾಕೀತೆಂದು ತಿಳಿಸಿದ. ಆಗ ಎಹುದು ಎಂದು ಪ್ರಧಾನಿ ಒಪ್ಪಿಕೊಂಡ. ಅಂದೇ ಆತ ಸೆರೆಮನೆಗೆ ಹೋಗಿ, ಮರುದಿನ ಬಿಡುಗಡೆಯಾಗಲಿದ್ದ ಒಬ್ಬ ಕ್ರಿಮಿನಲ್ ಖೈದಿಯೊಂದಿಗೆ ಗುಟ್ಟಾಗಿ ಮಾತನಾಡಿ ತನ್ನಮನೆಗೆ ಹೋದ. ಮರುದಿನ ಊರಿನಲ್ಲೆಲ್ಲಾ ಗುಜು-ಗುಜು, ಗಡಿ-ಬಿಡಿ-ಯೋರೋ ಒಬ್ಬ ಮಹಾತ್ಮ ಬಂದು ಮಾವಿನ ತೋಪಿನಲ್ಲಿ ಇಳಿದಿದ್ದಾರೆ. ಮಹಾ ತಪಸ್ವಿಗಳು, ಏನೂ ತಿನ್ನುವುದಿಲ್ಲ - ಏನನ್ನೂ ತೆಗೆದುಕೊಳ್ಳುವುದಿಲ್ಲ, ಮಾತನಾಡುವುದಿಲ್ಲ ಮೌನವ್ರತ, ಹುಸಿನಗೆ, ಮಹಾಪ್ರಧಾನಿಗಳೂ ಹೋಗಿ (ಸೇವೆ ಸಲ್ಲಿಸಿ) ದರ್ಶನ ಪಡೆದು ಬಂದರು ಎಂಬ ಗುಜು ಗುಜು ಹರಡಿತು. ತಪಸ್ವಿಯ ದರ್ಶನಕ್ಕೆ ಜನ ಜಾತ್ರೆಯ ಗಡಿಬಿಡಿ. ಈ ಸುದ್ದಿ ರಾಜನ ಕಿವಿಗೂ ಹೋಯಿತು. ತಾನೂ ಸಹ ತಪಸ್ವಿಯ ದರ್ಶನ ಪಡೆದು ಸೇವೆ ಸಲ್ಲಿಸಿ ಬಂದನು. ಪುನಃ ಮರುದಿನ ತಪಸ್ವಿ ಪರಾರಿ. ಅವನೊಬ್ಬ ಮೋಸಗಾರ, ಕ್ರಿಮಿನಲ್ ಖೈದಿಯಂತೆ ಗುಟ್ಟುರಟ್ಟಾಗಿ ಹೇಳದೇ ಕೇಳದೇ ಓಡಿಹೋದ ಎಂಬ ಗುಜುಗುಜು. ಈ ಸುದ್ದಿ ರಾಜನಿಗೂ ಮುಟ್ಟಿತು. ರಾಜ ಬೆಪ್ಪನಂತಾದ. ಅಂದಿನಿಂದ ತನ್ನ ಆಡಳಿತದ ಬಗ್ಗೆ ಪ್ರಧಾನಿಯ ಮುಂದೆ ಚಕಾರ ಶಬ್ದವನ್ನು ಎತ್ತುತ್ತಿರಲಿಲ್ಲವಂತೆ. ಕುರಿಬುದ್ಧಿಯ ಆಡಳಿತ ಹೀಗಿರುತ್ತದೆ. ಒಬ್ಬ ಕೇಸ್ ವರ್ಕರ್ ಒಂದು ನೋಟು ಹಾಕಿದರೆ ಮಂತ್ರಿಗಳ ತನಕ ಎಲ್ಲರೂ ರುಜು ಹಾಕುತ್ತಾರೆ. ಮಂತ್ರಿಯ ರುಜುವನ್ನು ಪರ್ಸನಲ್ ಅಸಿಸ್ಟೆಂಟ್ ಮಾಡಿಸುತ್ತಾನೆ. ಇಂದು ಆಡಳಿತ ನಡೆಸುತ್ತಿರುವವರು ಕೇಸ್ ವರ್ಕರ್, ಮತ್ತು ಪರ್ಸನಲ್ ಅಸಿಸ್ಟೆಂಟ್. ಇದು ಮಾಮೂಲಿನಿಂದ ಮೂಮೂಲಾಗೇ ನಡೆಯುತ್ತಿದೆ. ನಮ್ಮ ಸರ್ಕಾರದಲ್ಲಿ ಕುರಿಬುದ್ಧಿ ಆಡಳಿತದ ಇದೆ ಎಂದು ನಾನು ಹೇಳಲಾರೆ. ನಮ್ಮ ಸರ್ಕಾರ ನರಿ ಬುದ್ಧಿ ಆಡಳಿತಕ್ಕೆ ಪ್ರಾಶಸ್ತ್ಯ ಕೊಟ್ಟಿರುವುದರಿಂದ, ಕುರಿಬುದ್ಧಿ ಆಡಳಿತ ಬಾರದಂತೆ ಎಚ್ಚರಿಕೆ ವಹಿಸಿ ಸಾರ್ವತ್ರಿಕ ಆಡಳಿತದ ಶುದ್ಧಿಗೊಳಿಸಲೆಂದು ಈ ನಿದರ್ಶನ ಹೇಳುತ್ತಿದ್ದೇನೆ.

ಇನ್ನು ಜಾತಿಮತ ಪಂಥಗಳಿಗೆ ಆಡಳಿತದಲ್ಲಿ ಸ್ವಲ್ಪವೇ ಆಶ್ರಯ ಸಿಕ್ಕರೂ ಆಡಳಿತ ಹದಗೆಡುತ್ತದೆ. ಅಧಿಕಾರ, ಅಂದರೆ ಬಡ್ತಿ, ವಗೈರೆ ಯಾವಾಗಲೂ ಅರ್ಹತೆಗೆ ಮೀಸಲಾಗಿರಬೇಕು. ಅನರ್ಹರಿಗೆ ಬಡ್ತಿ ದೊರೆತರೆ ಆಡಳಿತ ಅನಿಷ್ಟವಾಗುತ್ತದೆ. ಆಡಳಿತದಲ್ಲಿ ಕಂಡೋ ಕಾಣದೆಯೋ, ಕುರಿ ಬುದ್ಧಿಯ ಅನುಕರಣೆಯಿಂದಲೋ, ಅನರ್ಹರು, ಅರ್ಹಪದವಿಗೆ ಹೋಗಿರುವುದಕ್ಕೆ, ಹೋಗುತ್ತಿರುವುದಕ್ಕೆ ನಮ್ಮ ಹೈಕೋರ್ಟಿನಲ್ಲಿ ಕೆಲವು ರಿಟ್‌ಗಳು ಹೋಗಿರುವುದು ನಿದರ್ಶನವಾಗಿದೆ. ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತೇನೆ.

ಅಂತರರಾಜ್ಯ ಸೀನಿಯಾರಿಟಿ ಪಟ್ಟಿಯಲ್ಲಿ ಕೆಲವು ಕುಂದುಕೊರತೆಗಳು, ಅಪವಾದಗಳು ಇವೆ. ಮೈಸೂರು ರಾಜ್ಯದ ಮೆಲ್ಡರ್ಜಿಗೆ ಎರಿದು ಸೀನಿಯಾರಿಟಿ ಪಟ್ಟಿಯನ್ನು 1-11-1956ರಲ್ಲಿ ತಯಾರಿಸಲಾಗಿದೆ. ಅದರಲ್ಲಿ ಮುಂಬೈ ಸರ್ಕಲ್‌ನಿಂದ ಬಂದ ಸೀನಿಯರ್ ಅಸಿಸ್ಟೆಂಟ್‌ನ್ನು ಇಲ್ಲಿನ ಫಸ್ಟ್ ಡಿವಿಷನ್ ಕ್ಲಾರ್ಕ್‌ಗೆ ಸಮ ಎಂದು ತಯಾರು ಮಾಡಿದ್ದರು. ಆದರೆ ಲೋಕೋಪಯೋಗಿ ಇಲಾಖೆಯಲ್ಲಿ ಬೇರೆ ಪಟ್ಟಿ ಮಾಡಿದ್ದಾರೆ. ಸರಿಯಾಗಿ ಮಾಡಲಿಲ್ಲ. ಅದಕ್ಕೆ ಅನೇಕರು ಚೀಫ್ ಇಂಜನೀಯರ್ ಮತ್ತು ಇಲ್ಲಿನ ಜಿ. ಎ. ಡಿ. ಕೈವಾಡ ನಡೆಸಿದ್ದಾರೆ ಎಂದು ಕಾಣುತ್ತದೆ. ಈ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಬೇಕು ಮತ್ತು ಇದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕಾದ್ದು ಸೂಕ್ತ.

5-00 P.M.

ಸ್ವಾಮಿ, ಇದು ಹೇಗಾಗುತ್ತದೆ ಎಂದರೆ ಪತ್ರೆ ಇಲ್ಲದಂತೆ, ಗೊತ್ತಿಲ್ಲದಂತೆ ಆಗುತ್ತದೆ. ಅದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ವೆಂಕಟ ಎಂಬಾತ ಇದ್ದಕ್ಕಿದ್ದಂತೆ ವೆಂಕಟಾದ್ರಿ ಆದ ಎಂದರೆ ಎಲ್ಲರಿಗೂ ಆಶ್ಚರ್ಯವಾಗಬಹುದಲ್ಲವೇ ! ವೆಂಕಟ ಹೇಗೆ ವೆಂಕಟಾದ್ರಿಯಾದ ಎಂದು ಪ್ರಶ್ನಿಸಬಹುದಲ್ಲವೇ ? ಅವನು ವೆಂಕಟಾದ್ರಿಯಾದದ್ದು ಹೀಗೆ. ಒಂದು ನಗರಾಧಿಪತಿಯ ಕೆಲಸ ಖಾಲಿ ಇತ್ತು. ಅದನ್ನು ಭರ್ತಿ ಮಾಡೋಣವೆಂದು ಆ ದೇಶದ ರಾಜ ಪ್ರಯತ್ನಿಸಿದ. ಒಂದೇ ಕೆಲಸಕ್ಕೆ ನೂರಾರು ಅರ್ಜಿಗಳು ಬಂದು ನೂರಾರು ಪ್ರತಿಭಾವಂತರ ಒತ್ತಾಯ, ಪ್ರಭಾವ ಬಂದಿತು. ರಾಜನಿಗೆ ದಿಕ್ಕೇ ತೋಚದಂತಾಯಿತು. ನಗರದ ಕೊತ್ವಾಲನನ್ನು ಕರೆದು ಅದಕ್ಕೆ ಒಂದು ಉಪಾಯವನ್ನು ಹೇಳಲು ಕೇಳಿದ. ಆಗ ಕೊತ್ವಾಲನು ನಾಳೆ ಮುಂಜಾನೆ ಎದ್ದ ಕೂಡಲೇ ನಗರದ ಕೋಟೆ ಬಾಗಿಲನ್ನು ತೆಗೆದಾಗ ಯಾರು ಮೊದಲು ಪ್ರವೇಶಿಸುತ್ತಾರೆಯೋ ಅವರಿಗೆ ಈ ಕೆಲಸವನ್ನು ಕೊಡಿರಿ ಎಂದು ಸಲಹೆ ಮಾಡಿದ. ಹಾಗೆಯೇ ರಾಜನು ಆಜ್ಞೆ ಮಾಡಿದ. ಆ ಪ್ರಕಾರ ಬೆಳಿಗ್ಗೆ ಎದ್ದ ಕೂಡಲೇ ಬಾಗಿಲು ತೆಗೆದರು. ಬಾಗಿಲು ತೆಗೆದ ಕೂಡಲೇ ವೆಂಕಟ ಕಣ್ಣಿಗೆ ಬಿದ್ದ. ರಾಜಾಜ್ಞೆಯಂತೆ ಅವನನ್ನು ನಗರಾಧಿಪತಿಯಾಗಿ ಮಾಡಲಾಯಿತು. ನಗರಾಧಿಪತಿಯ ಉಡುಪು, ವಾಸಕ್ಕೆ ಭವ್ಯ ಭವನ, ಆಳುಕಾಳು, ಪಹರೆ, ಓಡಾಡಲು ಸಾರೋಟು ಎಲ್ಲಾ ಬಂದವು. ವೆಂಕಟ ವೆಂಕಟಾದ್ರಿಯಾದ. ಈ ಸುದ್ದಿಯನ್ನು ಕೇಳಿ ಅತನ ಹೆಂಡತಿ ಹಳ್ಳಿಯಿಂದ ಬಂದಳು. ಗಂಡ ಸಾರೋಟಿನಲ್ಲಿ ಹೊರಟಿದ್ದ. ಅವನ ವೈಭವ ನೋಡಿ ಬೆರಗಾಗಿ, ನೀವು ನನ್ನ ಯಜಮಾನರಲ್ಲವೇ ? ನನ್ನನ್ನು ಇಲ್ಲಿಗೆ ಯಾವಾಗ ಕರೆದುಕೊಂಡು ಬರುತ್ತೀರಿ ಎಂದು ಕೇಳಿದರು. ನಾನು ನಿನ್ನ ಯಜಮಾನ ಇರಬಹುದು. ನಾನು ಈಗ ಏನಾಗಿದ್ದೇನೆ, ಹೇಗಾದೆ ಎಂಬುವುದು ನನಗೇ ಅರ್ಥವಾಗಿಲ್ಲ; ಇದೆಲ್ಲಾ ಖಚಿತಪಡಿಸಿಕೊಂಡು ಆ ನಂತರ ನಿನ್ನನ್ನು ಕರೆದುಕೊಂಡು ಬರುವ ವಿಚಾರ ಯೋಚನೆ ಮಾಡುತ್ತೇನೆ, ಅಲ್ಲಿಯವರೆಗೂ ಹಳ್ಳಿಯಲ್ಲೇ ಈಗಿದ್ದಂತೆಯೇ ಇರು ಎಂದು ಹೇಳಿ ಕಳುಹಿಸಿದ. ಇಂತಹ ಘಟನೆಗಳು ಅಧಿಕಾರ, ಪದವಿಗಾಗಿ ಪ್ರಜಾಪ್ರಭುತ್ವದಲ್ಲಿ ಅಕಸ್ಮಾತ್ ನಡೆಯಬಹುದಾದ್ದರಿಂದ ಇಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕಾದ್ದು ಸಾರ್ವತ್ರಿಕ ಆಡಳಿತದ ಕರ್ತವ್ಯವಾಗಿದೆ. ಇಂತಹ ಪ್ರಸಂಗಗಳು ನಮ್ಮ ಸರ್ಕಾರದಲ್ಲಿ ಈ ಹಿಂದೆ ನಡೆದಿರಲಾರದು. ಮುಂದಾದರೂ ನಡೆಯಬಾರದು ಎಂಬುದಕ್ಕೆ ಈ ನಿದರ್ಶನ ಹೇಳುತ್ತಿದ್ದೇನೆ.

ಇನ್ನು ಕೆಲವು ಅಧಿಕಾರಿಗಳು ಅಕ್ರಮ ನಡೆಸಿದ್ದಾರೆ, ಅನ್ಯಾಯ ಸಂಭಾವನೆ ಸ್ವೀಕರಿಸಿದ್ದಾರೆ ಎಂಬುದು ನಮಗೆ ಸ್ಪಷ್ಟವಾಗಿ ಗೊತ್ತಿದ್ದರೂ ಕಾರ್ಯಕ್ರಮ ತೆಗೆದುಕೊಳ್ಳಲು ಕಾನೂನಿನ ಅಡಚಣೆಗಳಿವೆ ಎಂದು ಹಿಂದೊಮ್ಮೆ ನಮ್ಮ ಮುಖ್ಯಮಂತ್ರಿಗಳೊಬ್ಬರು ಹೇಳಿದ್ದರು. ದೇಶಘಾತುಕ ಸಂಸ್ಥೆಗಳನ್ನು ಬಹಿಷ್ಕರಿಸಲು ಕೆಲವೊಂದು ಕಾನೂನಿನ ಅಡಚಣೆಗಳಿರಬಹುದು ಎಂದು ಕೇಂದ್ರದ ಪ್ರಧಾನಮಂತ್ರಿಯವರೂ ಹೇಳಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಭ್ರಷ್ಟ ಮತ್ತು ದುಷ್ಟರನ್ನು ಶಿಕ್ಷಿಸಲು ಪ್ರಜಾಪ್ರಭುತ್ವ ಬಂದು ಕಾಲು ಶತಮಾನವಾಗುತ್ತ ಬಂದರೂ ಆ ಬಗ್ಗೆ ಕಾನೂನುಗಳು ಕ್ರಮಬದ್ಧವಾಗದಿರುವುದಕ್ಕೆ ಆಶ್ಚರ್ಯ ಪಡಬೇಕಾಗಿದೆ. ನಮ್ಮ ನ್ಯಾಯಾಂಗ ಇಲಾಖೆ ಇನ್ನಾದರೂ ಸಂದಿಗ್ಧ ಕಾನೂನುಗಳನ್ನು ನಿಸ್ಸಂದಿಗ್ಧವಾಗಿ ಮಾರ್ಪಡಿಸಲು ಗಮನ ಕೊಡಲೆಂದು ಹಾರೈಸುತ್ತೇನೆ.

ನಮ್ಮ ರಾಜ್ಯದ ಆಡಳಿತವಲ್ಲ ಪ್ರತಿಯೊಂದು ಪದ್ಧತಿ ಕಾನೂನು ಕಟ್ಟಲೆಗಳು ವಿಚಿತ್ರವಾಗಿವೆ. ಕಾನೂನುಗಳನ್ನು ಮಾಡುವುದು ನಾಮಕಾವಾಸ್ತೆ. ಅವನ್ನು ಮಾಡಿದವರೂ ಅದರಂತೆ ನಡೆಯುತ್ತಿಲ್ಲ. ಅವು ಇದ್ದರೂ ಇಲ್ಲದಿದ್ದರೂ ಒಂದೇ ಎಂಬಂತೆ ಆಗಿದೆ. ಅಲ್ಲಿ ಲಂಚವಿದೆ, ಇಲ್ಲಿ ಲಂಚವಿದೆ ಎಂದು ಎಲ್ಲರೂ ಮಾತನಾಡುತ್ತೇವೆ. ಕಾನೂನು ಕಟ್ಟಳೆಗಳನ್ನು ಮಾಡಿದವರೇ ಅದರಂತೆ ನಡೆಯುತ್ತಿಲ್ಲ. ಅದಕ್ಕೆ ಒಂದೇ ಒಂದು ಸಣ್ಣ ಉದಾಹರಣೆಯನು ಹೇಳುತ್ತೇನೆ. ನಾನಾ ಇಲಾಖೆಗಳಲ್ಲಿ ಕೆಲಸಗಳಿಗೆ ಬರುವವರಿಗಾಗಿ ಇನ್‌ಕಂ ಸರ್ಟಿಫಿಕೇಟ್, ಕ್ಯಾರೆಕ್ಟರ್ ಸರ್ಟಿಫಿಕೇಟ್, ಕ್ಯಾಸ್ಟ್ ಸರ್ಟಿಫಿಕೇಟ್ ತರಬೇಕು ಎಂದು ಸರ್ಕಾರದವರು ಮಾಡಿದ್ದಾರೆ. ಅವುಗಳನ್ನು ಯಾರು ಕೊಡಬೇಕು ? ಇನ್‌ಕಂ ಸರ್ಟಿಫಿಕೇಟ್ ರೆವೆನ್ಯೂ ಇಲಾಖೆಯಿಂದ, ಕ್ಯಾಸ್ಟ್ ಸರ್ಟಿಫಿಕೇಟ್ ಸೋಷಿಯಲ್ ಅಧಿಕಾರಿಗಳಿಂದ ಮತ್ತು ಕ್ಯಾರೆಕ್ಟರ್ ಸರ್ಟಿಫಿಕೇಟ್ ನಮ್ಮಂಥ ಎಂ. ಎಲ್. ಎ. ಗಳು, ಕೆಲಸವಿಲ್ಲದವರು ಕೊಡಬೇಕು. ದಿವಸಕ್ಕೆ 50 ಸರ್ಟಿಫಿಕೇಟುಗಳನ್ನು ಕೊಡಬೇಕಾಗಿದೆ. ಹೀಗಾಗಿ ಅಧಿಕಾರಿಗಳು ಪರಿಶಿಷ್ಟಜಾತಿ ವಿದ್ಯಾರ್ಥಿಗಳಿಗೆ ಫೀಜು ಮಾಫಿ ಮಾಡಲು, ಸ್ಕೂಲಿಗೆ ಸೇರಲು ಜಾತಿಯ ಸರ್ಟಿಫಿಕೇಟ್ ಕೇಳುತ್ತಾರೆ. ಅವರು ಆ ಸರ್ಟಿಫಿಕೇಟುಗಳನ್ನು ಮುಖ್ಯ ಉಪಾಧ್ಯಾಯರಿಗೆ ಕೊಟ್ಟರೆ ಅವರ ಜಾತಿ, ತಂದೆ ತಾಯಿಯ ಹೆಸರು ಎಲ್ಲವನ್ನೂ ಅದರಲ್ಲಿ ಸೇರಿಸಿಕೊಂಡಿರುತ್ತಾರೆ.

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ವರ್ಷದ ವರೆಗೂ ಆ ಸರ್ಟಿಫಿಕೇಟಿನ ಮೇಲೆ ನಡೆಯಬೇಕು. ಆದರೆ ಸಂಬಂಧಪಟ್ಟವರು ಎಂ.ಎಲ್.ಎ. ಹತ್ತಿರ ಸರ್ಟಿಫಿಕೇಟ್ ತನ್ನಿ, ಕಾರ್ಪೊರೇಷನ್ ಸದಸ್ಯರಿಂದ ತನ್ನಿ ಎಂದು ಹೇಳುತ್ತಾರೆ. ಇನ್‌ಕಂ ಸರ್ಟಿಫಿಕೇಟ್ ಕೊಡುವುದಕ್ಕೆ ಇವರೇನು ರೆವಿನ್ಯೂ ಅಧಿಕಾರಿಗಳೇ, ಶ್ಯಾನುಭೋಗರೇ, ತಹಸೀಲ್ದಾರರೇ ಅಥವಾ ಕಂದಾಯ ವಸೂಲು ಮಾಡುವವರೇ? ಇವರು ಹೇಗೆ ಸರ್ಟಿಫಿಕೇಟನ್ನು ಕೊಡಬೇಕು ? ಯಾವ ಯಾವದಕ್ಕೆ ಏನೇನು ರೂಲ್ಸ್ ಮಾಡಿದ್ದಾರೆ ಆ ರೂಲ್ಸ್ ಪ್ರಕಾರ ಆಯಾ ಅಧಿಕಾರಿಗಳು ನಡೆಯುವಂತೆ ಸರ್ಕಾರ ಅವರಿಗೆ ಎಚ್ಚರಿಕೆಯನ್ನು ಕೊಡಬೇಕು ಇಲ್ಲವೇ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹೀಗಾಗಿ ಸರ್ಟಿಫಿಕೇಟುಗಳು ಇಲ್ಲದೆ ಹುಡುಗರು ಬಹಳ ಕಷ್ಟಪಡುತ್ತಿದ್ದಾರೆ. ಕೆಲವರು ಚಾಣಾಕ್ಷ ಇದ್ದಂಥ ಅಭ್ಯರ್ಥಿಗಳು ಸಂಬಂಧಪಟ್ಟವರಿಗೆ ಕೈ ಬೆಚ್ಚಗೆಮಾಡಿ ಕೆಲಸ ಮಾಡಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಹೆಚ್ಚಿಗೆ ಗಮನಕೊಟ್ಟು ಸರಿಯಾದ ರೀತಿಯಲ್ಲಿ ಅಧಿಕಾರಿಗಳು ನಡೆಯುವಂತೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಸೂಚಿಸಬಯಸುತ್ತೇನೆ.

ಪೋಲೀಸ್ ಇಲಾಖೆಯಲ್ಲಿ ನೈತಿಕ ಮಟ್ಟ ಹೇಗಿದೆ, ಕೆಲಸದಲ್ಲಿ ದಕ್ಷತೆ ಇದೆಯೇ, ಎಂದರೆ ಅಲ್ಲಿ ದಕ್ಷರೂ ಇದ್ದಾರೆ, ನೈತಿಕ ಮಟ್ಟವೂ ಇದೆ. ಅದು ಎಲ್ಲೂ ಹೋಗಿಲ್ಲ. ಅದನ್ನು ಉಪಯೋಗಿಸಿ ಕೊಳ್ಳುವ ರೀತಿಯಲ್ಲಿದೆ. ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಯಾರೋ ಒಬ್ಬರು ಅವರ ಲಕ್ಷಾಂತರ ರೂಪಾಯಿನ ವಸ್ತುಗಳು ಉಗ್ರಾಣದಿಂದ ಕಳುವಾದುವೆಂದು ದೂರಿತ್ತರು. ದೂರಿತ್ತವರು ದೊಡ್ಡ ಮನುಷ್ಯರಾದ್ದರಿಂದ ಪೋಲೀಸರು ಹುಷಾರಾಗಿ, ಹುಡುಕಿ ಕೆಲವು ಕಳ್ಳತನದ ಮಾಲು ಪತ್ತೆ ಮಾಡಿದರು. ಆದರೆ ಆ ಕಳ್ಳತನದ ವಸ್ತುಗಳನ್ನು ಕೊಂಡಿದ್ದವರೂ ಒಬ್ಬ ದೊಡ್ಡ ಮನುಷ್ಯರು. ಇನ್ನು ನನ್ನ ಮರ್ಯಾದೆ ಹೋಗುತ್ತದೆ ಎಂದು ಧಾರ್ಮಿಕ ಮುಖಂಡರೊಬ್ಬರಿಂದ, ಕೇಂದ್ರದ ಸಚಿವರೊಬ್ಬರಿಂದ, ಇಂತಹ ಕೆಲವು ಪ್ರಭಾವಶಾಲಿಗಳಿಂದ ಪ್ರಭಾವ ಬೀರಿದರು. ಆ ವಿಚಾರವನ್ನು ಪೋಲೀಸರು ಅಲ್ಲಿಗೇ ಕೈ ಬಿಟ್ಟರು. ಕಳೆದುಕೊಂಡವರಿಗೆ ಲಕ್ಷ ಗಟ್ಟಲೆ ನಷ್ಟವಾಗಿದೆ. ಇಂಥ ಪ್ರಸಂಗಗಳು ಲೆಕ್ಕವಿಲ್ಲದಷ್ಟು ನಡೆಯುತ್ತಿವೆ. ಕಾನೂನು ಭಂಗ ಮಾಡುವವರನ್ನು ಎಂಥ ಪ್ರಭಾವ ಬೀರಿದರೂ ರಕ್ಷಿಸಬಾರದು. ಹೀಗೆ ರಾಜಕೀಯ ಪ್ರಭಾವದಿಂದ ದಕ್ಷ ಪೋಲೀಸ್ ಅಧಿಕಾರಿಗಳ ಚೈತನ್ಯ ಹೀನವಾಗುತ್ತದೆ. ಇದರಿಂದ ಆಡಳಿತ ಭದ್ರತೆ ಉಳಿಯುವುದಿಲ್ಲ ಎಂದು ಮಾತ್ರ ಹೇಳಬಯಸುತ್ತೇನೆ.

ಜೈಲುಗಳ ಬಗ್ಗೆ ಒಂದು ಮಾತು. ಅರಿತೋ ಅರಿಯದೆಯೋ ತಪ್ಪು ಮಾಡಿ ಶಿಕ್ಷೆಯನ್ನು ಅನುಭವಿಸುತ್ತಿರುತ್ತಾರೆ. 20 ವರ್ಷ ಶಿಕ್ಷೆಯಲ್ಲಿ 10—15 ವರ್ಷ ಮುಗಿಗಿದಿರುತ್ತದೆ. ಜೈಲುಗಳ ಸಂಬಂಧದಲ್ಲಿ ಒಂದು ವಿಸಿಟರ್ಸ್ ಬೋರ್ಡ್ ಎಂದು ಮಾಡಿದ್ದಾರೆ. ಅವರು ಮೂರು ತಿಂಗಳಿಗೆ ಒಂದು ಸಲ ಸಭೆ ಸೇರಿ ಯಾರಾದರೂ ಖೈದಿ ಚೆನ್ನಾಗಿ ನಡೆದುಕೊಂಡಿದ್ದಾನೆ, ಇಂಥ ಕೆಲಸವನ್ನು ಕಲಿತಿದ್ದಾನೆ, ಅವನನ್ನು ಬಿಡಬಹುದು ಎಂದು ಸರ್ಕಾರಕ್ಕೆ ಸಲಹೆ ಮಾಡಿದರೆ ಅವನ ಶಿಕ್ಷೆಯ ಅವಧಿ ಮುಗಿದರೂ ಸರ್ಕಾರದಿಂದ ಉತ್ತರವೇ ಬರುವುದಿಲ್ಲ. ಇದಕ್ಕೆ ನಾವು ಏಕೆ ಆ ಬೋರ್ಡಿನ ಸಭೆ ಗಳಿಗೆ ಹೋಗಬೇಕು ? ಸರ್ಕಾರದಿಂದ ಉತ್ತರ ಬರುವುದರಲ್ಲಿ ಅವನು ಮನೆಗೆ ಹೋಗಿರುತ್ತಾನೆ. ಹೀಗಾಗುತ್ತದೆ. ಇದಲ್ಲದೆ ಖೈದಿಗಳು ಜೈಲಿನಿಂದ ಹೊರಗೆ ಹೋಗುವಾಗ ಅವನು ಏನಾದರೂ ಒಂದು ಕೆಲಸವನ್ನು ಕಲಿತುಕೊಂಡು ಹೋಗುವ ಹಾಗೆ ವ್ಯವಸ್ಥೆ ಮಾಡಬೇಕು.! ಜೈಲಿಗೆ ಹೋಗಿ ಬಂದರೆ ಜಾತಿಯಿಂದ ಕೆಟ್ಟು ಹೋಗಿದ್ದಾನೆ ಎಂದು ಅವನನ್ನು ಮನೆಗೆ ಸೇರಿಸುವುದಿಲ್ಲ ಎನ್ನುವುದು ಹಿಂದಿನಿಂದ ಬಂದಿದೆ. ಈ ಮೂಢ ನಂಬಿಕೆಯಿಂದ ಕೆಲವರು ಮನೆಯಲ್ಲಿ ಸೇರಿಸುವುದಿಲ್ಲ. ಇಂಥವರಿಗೆ ಏನೂ ಮಾಡವುದಕ್ಕೂ ತೋರದೆ, ಹೇಗಾದರೂ ಜೀವನ ಮಾಡಿಕೊಳ್ಳಬೇಕು ಎನ್ನುವ ಭಾವನೆ ಬಂದು ಮತ್ತೆ ಕಳ್ಳತನದಲ್ಲಿ ತೊಡಗುತ್ತಾನೆ. ಯಾವ ರೀತಿಯಲ್ಲಿಯಾದರೂ ಇಂಥ ಕೆಲಸ ಮಾಡಿ ನನ್ನ ಹೊಟ್ಟೆಯನ್ನು ನಾನು ಹೊರೆದುಕೊಳ್ಳುತ್ತೇನೆ ಎನ್ನುವ ಹಾಗೆ ಆಗುವಂತೆ ಅವಕಾಶ ಮಾಡಿ ಕೊಡಬೇಕೆಂದು ಮಾತ್ರ ನಾನು ಹೇಳಬಯಸುತ್ತೇನೆ.

ಸಾರ್ವತ್ರಿಕ ಆಡಳಿತದಲ್ಲಿ ಈ ರೀತಿ ಇರಬಾರದು ಎಂದು ಬಲ್ಲವರು ಹೇಳಿರುವುದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಲಂಚ ಮೊಳಕೆಯಾದುದು ಪೋಲೀಸ್ ಇಲಾಖೆಯಲ್ಲಿ
ಲಂಚ ಸಸಿಯಾದದ್ದು ರೆವೆನ್ಯೂ ಇಲಾಖೆಯಲ್ಲಿ
ಲಂಚ ಮರವಾದದ್ದು ಎಕ್ಸೈಜ್ ಇಲಾಖೆಯಲ್ಲಿ
ಲಂಚ ಹೂವಾದದ್ದು ವರಮಾನ ತೆರಿಗೆ ಇಲಾಖೆಯಲ್ಲಿ
ಲಂಚ ಕಾಯಾದದ್ದು ಸಹಕಾರ ಇಲಾಖೆಯಲ್ಲಿ

ಲಂಚ ಹಣ್ಣಾದದ್ದು ಲೋಕೋಪಯೋಗಿ ಇಲಾಖೆಯಲ್ಲಿ
ಲಂಚದ ಹಣ್ಣು ಹಂಚಿದ್ದು ಕೈಗಾರಿಕೆ ಇಲಾಖೆಯಲ್ಲಿ
ಲಂಚದ ಹಣ್ಣು ಮೆದ್ದದ್ದು ಸಚಿವ ಇಲಾಖೆಯಲ್ಲಿ
ಲಂಚದ ಹಣ್ಣಿನ ಸಿಪ್ಪೆ, ಬೀಜ ತಿಪ್ಪೆಗೆ ಸೆದದ್ದು ನ್ಯಾಯಾಂಗ ಇಲಾಖೆಯಲ್ಲಿ
ಇಂತಿರ್ಪ ಲಂಚಕ್ಕೆ ನವಗ್ರಹದ ರಕ್ಷಣೆ ಇರುವುದರಿಂದ ಅದೆಂತು ಇದರ
ಹುಟ್ಟಡಗಿಸುವೆಯಪ್ಪಾ ಗಾಂಧೀಪ್ರಿಯ ಶೀಲವಂತಪ್ಪ

ಎಂದು ಮಧ್ಯವರ್ತಿ ಪುಢಾರಿ ಗಹಗಹಿಸಿ ನಗುತ್ತಾ ಕೇಳುತಿಹನು ಉತ್ತರಿಸಬಲ್ಲಿರಾ ಅಣ್ಣಗಳಿರಾ.

[MR. SPEAKER in the Chair]

ಕೊನೆಯದಾಗಿ ಸಾರ್ವತ್ರಿಕ ಆಡಳಿತದಲ್ಲಿ ಈ ರೀತಿ ಇರಬಾರದೆಂದು ಬಲ್ಲವರು ಹೇಳಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಮಾದರಿಯ ಮೈಸೂರು ಮಂತ್ರಿಗಳ ಸೊತ್ತು
ಅವರಿಗೆಲ್ಲಿದೆ ಬಿಡುವು ಇಲ್ಲ ಪುರುಸೊತ್ತು
ಹೀಗಿದ್ದರೂ ನಾವು ಬೆದರುವುದು ವ್ಯರ್ಥ
ಸಿಕ್ಕೇಸಿಗುವುದು ಅವರ ಭಾಷಣದ ತೀರ್ಥ
ಮಂತ್ರಿಮಂಡಲದಲ್ಲಿ ಇಪ್ಪತ್ತು ಒಂಭತ್ತು
ಇದರಿಂದ ಮತ್ತಷ್ಟು ಆರ್ಥಿಕದ ವಿಪತ್ತು
ಆಳ್ಮೇರೆ ಆಳ್ಬಿದ್ದು ಗೋಣಿ ಬರಿದಾಯ್ತು
ಪ್ರವಾಸ ಹೆಚ್ಚಾಗಿ ಖಜಾನೆ ಬರಿದಾಯ್ತು.

ಇದನ್ನು ಗಮನಿಸಿ ಇದರಂತೆ ನಮ್ಮ ಸರಕಾರ ನಡೆದುಕೊಂಡು ಒಳ್ಳೆಯ ಕೀರ್ತಿತರಬೇಕು. ಅರ್ಜಿ ಕೊಟ್ಟು 6 ತಿಂಗಳಾದರೂ ಜನರಿಗೆ ನಿರ್ಣಯ ಹೇಳುವುದಿಲ್ಲ, ಇದು ಸರಿಯಲ್ಲ. ಅರ್ಜಿ ಕೊಟ್ಟರೆ ಜಾಗ್ರತೆ ಕ್ರಮ ತೆಗೆದುಕೊಂಡು ಜನರಿಗೆ ಜವಾಬು ಜಾಗ್ರತೆ ಕೊಡಬೇಕು. ಮಾತು ಕೇಳಿದರೆ ಮಹಾ ಮಂತ್ರವಿದ್ದಂತೆ, ಆಡಳಿತ ನೋಡಿದರೆ ಹದಗೆಟ್ಟ ಯಂತ್ರವಿದ್ದಂತೆ. ಇದು ಸರಿಯಲ್ಲ. ಸರ್ಕಾರದ ಕಟ್ಟಕಡೆಯ ಆಜ್ಞೆ ಬರುವುದರೊಳಗೆ ಜನತೆಗೆ ಯಮನಿಂದ ಚಟ್ಟದ ಆಜ್ಞೆ ಬಂದಿರುತ್ತದೆ. ಸಚಿವರ ಮಾತು ನೀರಮೇಲಣ ಗುಳ್ಳೆಯಂತಿರಬಾರದು. ಅಧಿಕಾರಕ್ಕೆ ತಕ್ಕ ಬುದ್ಧಿಯಿರಬೇಕು. ಕೆಲಸಕ್ಕೆ ತಕ್ಕ ಸಂಬಳವಿರಬೇಕು. ಸ್ವಾತಂತ್ರ್ಯ ಬಂದರೂ ಸ್ವೇಚ್ಛಾಡಳಿತ ತಪ್ಪಲಿಲ್ಲ. ಒಂದು ವಿಷಯವನ್ನು ಅಲ್ಲಗಳೆಯುವುದೂ ಇಲ್ಲ, ಸಮರ್ಥಿಸುವುದೂ ಇಲ್ಲ, ಸ್ಪಷ್ಟೀಕರಿಸುವುದೂ ಇಲ್ಲ, ತಿಳಿಯಹೇಳುವುದೂ ಇಲ್ಲ, ವಿವರಿಸುವುದೂ ಇಲ್ಲ ಎನ್ನುವುದಾದರೆ ಮಂತ್ರಿಯಾಗಿ ಏನು ಪ್ರಯೋಜನ ? ಅನರ್ಹರಿಗೆ ಕೊಟ್ಟ ಪದವಿ ಮಂಗನ ಕೈಗೆ ಮಾಣಿಕ್ಯ ಕೊಟ್ಟಂತೆ. ಇದರ ಹಾಗೆ ಆಗಬಹುದು ಎಂಬುದನ್ನು ಗಮನಕ್ಕೆ ತರುತ್ತೇನೆ.

ಪದವಿ ಬಂದಾಗ ಖದೀಮನಾಗಬಾರದು
ಆದಾಯ ಅರಿಯದೆ ಖರ್ಚುಮಾಡಬಾರದು
ಸರ್ಕಾರ ಸದಸ್ಯರ ತಿಕ್ಕಾಟದಲ್ಲಿ ಜನತೆ ಘಾಸಿಯಾಗಬಾರದು
ಚಿನ್ನದ ಸೂಜಿ ಎಂದು ಕಣ್ಣು ಚುಚ್ಚಿಕೊಳ್ಳಬಾರದು
ಚೇಳಿನ ಮಂತ್ರವೇ ಗೊತ್ತಿಲ್ಲದಾಗ ಹಾವಿನ ಬುಟ್ಟಿಗೆ ಕೈಹಾಕಬಾರದು

ಹೀಗೆಲ್ಲಾ ಆಗದಂತೆ ನೋಡಿಕೊಂಡು ಸಾರ್ವತ್ರಿಕ ಆಡಳಿತವನ್ನು ಶುದ್ಧಿಗೊಳಿಸಬೇಕೆಂದು ವಿನಂತಿಸುತ್ತೇನೆ.

ಇನ್ನು ಗಾಂಧಿ ಶತಮಾನೋತ್ಸವದ ಸಂದರ್ಭದಲ್ಲಿ ಗಾಂಧೀಜಿಯವರು ಹೇಳಿದ ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

ರಾಷ್ಟ್ರಪಿತ ಗಾಂಧೀಜಿ ನೀ ನನ್ನ ತಂದೆ
ಹೌದಯ್ಯ ನಾತಂದೆ ನೀನೆನ್ನ ಕೊಂದೆ
ತತ್ವಗಳ ಕೊಲುತಿಹಿರಿ ನನ್ನ ಆತ್ಮದ ಹಿಂದೆ
ಕೊಲಬೇಡಿ ಹೀಗೆಂದು ಹೇಳಲಿಕೆ ಬಂದೆ
ಎಲ್ಲಿಹುದು ಆ ರಾಜ್ಯ ಗಾಂಧಿ ಹೇಳಿದ ರಾಜ್ಯ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಪ್ರಜಾಸೌಖ್ಯದ ಮೂಲ ರಾಮರಾಜ್ಯ
ಪ್ರಾಂತಪಕ್ಷಗಳಲ್ಲಿ ಸಾಕಷ್ಟು ವ್ಯಾಜ್ಯ
ಬರಬಹುದೇ ಮುಂದಿನ್ನು ದಾನವರ ರಾಜ್ಯ

ಹೀಗಾಗದಂತೆ ಸರಕಾರ ನೋಡಿಕೊಂಡು ಒಳ್ಳೆಯ ಕೀರ್ತಿ ಪಡೆಯಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Today is the last day for the voting of these demands. How much time will the Hon'ble Chief Minister require for his reply ?

Sri VEERENDRA PATIL.—One and a half hours.

Mr. SPEAKER.—Let the Chief Minister commence his reply at 6 p.m. I will allow members to speak till 6 p m. and will give five minutes each to members.

(*Several members rose*)

Sri D. B. KALMANKAR.—This time limit seems to apply only to those who speak last and not to those who speak first.

Mr. SPEAKER.—If the time is to be extended, it will have to be extended by the House.

Sri S. SIVAPPA.—The Business Advisory Committee has allotted ten hours for these demands and it should be given to us. So, let the reply commence a bit late.

Mr. SPEAKER.—I have no objection if the House agrees to it.

ಶ್ರೀ ವಾಟಾಳ್ ನಾಗರಾಜ್.—ಇವತ್ತು ಬಹಳ ಜನ ಮಾತನಾಡುವವರು ಇದ್ದಾರೆ, ರಿಪ್ಲೈ ಬೇಕಾದರೆ ನಾಳೆ ಕೊಡಲಿ.

ಶ್ರೀ ಎಸ್. ಶಿವಪ್ಪ.—ಮಾತನಾಡಬೇಕೆಂಬ ಇಚ್ಛೆ ಬಹಳ ಜನಕ್ಕೆ ಇದೆ. ಇವತ್ತು ಬೇರೆ ವಿಷಯಗಳಿಗೆ ಬಹಳ ಸಮಯ ವೆಚ್ಚವಾಗಿರುವುದರಿಂದ ಈ ಡಿಮ್ಯಾಂಡಿಗೆ ಎಷ್ಟು ಕಾಲವನ್ನು ನಿಗದಿ ಮಾಡಿದೆಯೋ ಅದನ್ನು ಕೊಡಲೇ ಬೇಕು, ಅದನ್ನು ತಪ್ಪಿಸುವುದಕ್ಕೆ ಯಾವುದೇ ಕಡೆಯಿಂದ ಒತ್ತಾಯ ಬಂದರೂ ಕೂಡ ಅದಕ್ಕೆ ತಾವು ಅವಕಾಶ ಕೊಡಬಾರದೆಂದು ಹೇಳುತ್ತೇನೆ.

ಅಧ್ಯಕ್ಷರು.—ರೂಲ್ಸ್ ಓದಿ ತೋರಿಸುತ್ತೇನೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿರ್ಣಯ ವಾದ ನಂತರ ಹೆಚ್ಚು ವೇಳೆ ವಿಸ್ತರಿಸಬೇಕಾದರೆ ಸಭೆಯ ಅನುಮತಿಯ ಮೇಲೆ ಮಾಡ ಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಬಿಸಿನೆಸ್ ಅಡ್ವೈಸರಿ ಕಮಿಟಿ ಈ ಡಿಮ್ಯಾಂಡಿಗೆ ಹತ್ತು ಗಂಟೆ ಕೊಟ್ಟಿದೆ.

ಅಧ್ಯಕ್ಷರು.—12 ಮತ್ತು 13ನೇ ತಾರೀಖು ಅಂತ ಇದೆಯೇ ವಿನಾ ಹತ್ತು ಗಂಟೆ ಅಂತ ಇಲ್ಲ.

ಶ್ರೀ ಎಸ್. ಶಿವಪ್ಪ.—ಒಂದು ದಿವಸಕ್ಕೆ ಎಷ್ಟು ಗಂಟೆ ಇದೆ ?

ಅಧ್ಯಕ್ಷರು.—ಅದನ್ನು ತಾವು ಉಪಯೋಗ ಮಾಡಬೇಕಾಗಿತ್ತು, ಬೇಡ ಅಂದವರು ಯಾರು ?

Sri S. SIVAPPA.—This House is entitled for 10 hours and so 10 hours must be given for this demand.

ಶ್ರೀ ಎಸ್. ಚನ್ನಯ್ಯ.—ಬೇರೆ ಬೇರೆ ಕೆಲಸಗಳಿಗೆ ಎರಡು ಮೂರು ಗಂಟೆ ಹೋಗುತ್ತಾ ಇದೆ ಅದಕ್ಕೆ ನಾವು ಜವಾಬ್ದಾರರಲ್ಲ.

ಅಧ್ಯಕ್ಷರು.—ಯಾರು ಜವಾಬ್ದಾರರು ?

ಶ್ರೀ ಎಸ್. ಚನ್ನಯ್ಯ.—ತಾವು ಕಂಟ್ರೋಲ್ ಮಾಡಬೇಕಾಗಿತ್ತು.

ಅಧ್ಯಕ್ಷರು.—ಅದು ಸಭೆಯ ಜವಾಬ್ದಾರಿಯಲ್ಲವೇ ?

ಶ್ರೀ ಎಸ್. ಚನ್ನಯ್ಯ.—ಅದು ಎಲ್ಲರ ಜವಾಬ್ದಾರಿ ಅಂತ ಅರ್ಥವಾಗುತ್ತದೆ.

Sri H. N. NANJE GOWDA.—It is the privilege of the members of this House to move adjournment motions, privilege motions and other motions in the House and so it is not correct to say that the time consumed in such motions should be deducted from the time allotted for the demands. If that is sought to be done it will infringe upon the privileges of the members of this House.

Mr. SPEAKER.—I do not wish to take away the time allotted for the demands, but I want to make it very clear that two days, namely 12th and 13th, were allotted for this demand. The actual number of hours has not been mentioned. If on these days, some time is utilized, rightly or wrongly, for some other matters, then I think naturally the time for discussion of the demands would be curtailed to that extent and the demands must be put to vote at the scheduled time. Rule 230 is very clear :

> "At the appointed hour, in accordance with the Allocation of Time Order for the completion of a particular stage of a Bill, or other business the Speaker shall forthwith put every question necessary to dispose of all the outstanding matters in connection with that stage of the Bill or other business.
>
> 231. No variation in the Allocation of Time Order shall be made ex ept on a motion made with consent of the Speaker and accepted by the Assembly:
>
> Provided that the Speaker may, after taking the sense of the Assembly, increase the time, not exceeding one hour, without any motion being moved."

Sri S. SIVAPPA.—You must give us the scheduled 10 hours. There cannot be any compromise on that. If the Government feel that they have majority and they can do anything, let them pass all the demands without any discussion if they have got the courage and then we will see how they face the country.

Sri K. H. PATIL.—The list of speakers submitted by our Whip to the Speaker must be exhausted before the demands are put to vote.

Mr. SPEAKER.—That is subject to limitation of time. I do not want to disappoint the members. I shall give them 5 minutes each.

5–30 P.M.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಸಭಾಧ್ಯಕ್ಷರೇ ಈ ಹೊತ್ತು ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಈ ದೇಶದಲ್ಲಿರತಕ್ಕ ಆಫೀಸುಗಳಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿವೆಯೇ, ಕಾನೂನು ಪ್ರಕಾರ ಆಡಳಿತ ಈ ರಾಜ್ಯದಲ್ಲಿ ನಡೆಯುತ್ತಿದೆಯೇ ಅನ್ನುವುದನ್ನು ಈಗಾಗಲೇ ಅನೇಕರು ಪ್ರಸ್ತಾಪಮಾಡಿದ್ದಾರೆ. ರಾಜ್ಯದಲ್ಲಿ ಚಲಾವಣೆಯಲ್ಲಿರತಕ್ಕ ಲಂಚದ ವಿಷಯವಾಗಿ ಶ್ರೀಮಾನ್ ಸಿದ್ದವೀರಪ್ಪನವರು ಮತ್ತು ಶ್ರೀಮಾನ್ ದೇವರಾಜ ಅರಸರು ಏನು

(ಶ್ರೀ ಎಚ್ ಎನ್. ನಂಜೇಗೌಡ)

ಹೇಳಿದ್ದಾರೆ ಅದನ್ನು ನಾನು ಖಂಡಿತ ಒಪ್ಪುವುದಿಲ್ಲ ಆದರೆ ನಾನು ಈಗತಾನೆ ಈ ''ಲಂಚ'' ಮತ್ತು ''ಭ್ರಷ್ಟಾಚಾರ'' ಎಂದರೇನು ಅರ್ಥ ಎಂಬುದನ್ನು ನೋಡಿಕೊಂಡು ಬಂದಿದ್ದೇನೆ ''ಲಂಚ'' ಎಂದರೆ ಸಂಬಳದ ಹೊರತು ಬೇರೆ ರೂಪದಲ್ಲಿ ಹಣವನ್ನು ಪಡೆದುಕೊಳ್ಳುವುದು ಒಂದು ಈ ಪದದ ಅರ್ಥ. ಇದು ಆ ಡಿಕ್ಷನ್‌ರಿಯಲ್ಲಿ ಹೇಳಿರತಕ್ಕ ಅರ್ಥ. ಇನ್ನು ''ಭ್ರಷ್ಟಾಚಾರ'' ಎಂದರೆ ನೀತಿ ಬಾಹಿರನಾಗುವುದು, ಪತಿತನಾಗುವುದು, ನೀಚಕೃತ್ಯಗಳನ್ನು ಎಸಗುವುದು ಮತ್ತು ನೈತಿಕವಾಗಿ ಕೆಳಗೆ ಬೀಳುವುದು ಎಂದು. ಅಲ್ಲಿ ಹೀಗೆ ಅರ್ಥಗಳನ್ನು ಹೇಳಿದ್ದರೂ ನಾವು ಅವುಗಳನ್ನು ಸಂದರ್ಭಾನುಸಾರ ಬೇರೆ ಬೇರೆ ಸಂದರ್ಭಗಳಿಗೆ ತಕ್ಕಹಾಗೆ ಅವುಗಳ ಅರ್ಥವನ್ನು ಮಾಡಿಕೊಳ್ಳ ಬೇಕಾಗುವುದು. ದೇವರಿಗೆ ಕೊಡತಕ್ಕ ಲಂಚವನ್ನು ''ಹರಕೆ'' ಎಂದು ಕರೆಯುತ್ತಾರೆ. ಪೂಜಾರಿಗೆ ಕೊಡತಕ್ಕ ಲಂಚವನ್ನು ''ಕಾಣಿಕೆ'' ಎನ್ನುತ್ತಾರೆ. ದೊಡ್ಡವರಿಗೆ ಕೊಡತಕ್ಕ ಲಂಚ ವನ್ನು ''ಮರ್ಯಾದೆ'' ಎನ್ನುತ್ತಾರೆ. ಚಿಕ್ಕವರಿಗೆ ಕೊಡತಕ್ಕ ಲಂಚವನ್ನು ''ಬಕ್ಷೀಸು'' ಎಂದು ಕರೆಯುತ್ತಾರೆ. ಹೀಗೆ ಈ ಲಂಚ ಎನ್ನುವುದು ನಾನಾ ರೂಪಗಳಲ್ಲಿ ನಡೆದುಕೊಂಡು ಬರುತ್ತಿದೆ......

ಶ್ರೀ ಕೆ. ಪುಟ್ಟಸ್ವಾಮಿ.—ಗುರುಗಳಿಗೆ ಕೊಡತಕ್ಕ ಹಣವನ್ನು ''ಪಾದಗಾಣಿಕೆ'' ಎಂದು ಹೇಳುತ್ತಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಹೌದು. ಹೀಗೆ ರಾಜ್ಯದಲ್ಲಿ ಲಂಚ ಎನ್ನುವುದು ಬಹುರೂಪದಲ್ಲಿ ಬೆಳೆಯುತ್ತಿರುವುದರಿಂದ ಇದರ ಬಗ್ಗೆ ಅಂದರೆ ನಿವಾರಣೆಯ ಬಗ್ಗೆ ಮಾನ್ಯ ಸಿದ್ದವೀರಪ್ಪನವರು ಮತ್ತು ದೇವರಾಜ ಅರಸರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಇವರು ತಾಲ್ಲೂಕ್ ಕಛೇರಿಯಲ್ಲಿ ತಾಶೀಲ್ದಾರ ಮತ್ತು ಸಬ್‌ಡಿವಿಜನ್‌ಗಳಲ್ಲಿರತಕ್ಕ ಅಸಿಸ್ಟೆಂಟ್ ಕಮಿಷನರ್ ಇವರು ಲಂಚ ತೆಗೆದುಕೊಳ್ಳುವುದು ತಪ್ಪು ಎಂದು ಹೇಳಿದ್ದನ್ನು ನಾನು ಒಪ್ಪುವುದಿಲ್ಲ; ಸರ್ವಥಾ ಅದನ್ನು ನಾನು ಒಪ್ಪುವುದಿಲ್ಲ. ಅದಕ್ಕೆ ಕಾರಣ ಏನು ಎಂದು ತಾವು ಕೇಳಬಹುದು. ಅದಕ್ಕೆ ಕಾರಣ ಏನೆಂದರೆ ಅವರು ಮೊದಲು ಆ ಕೆಲಸವನ್ನು ಪಡೆಯಬೇಕಾಗಿದ್ದರೆ ಅದಕ್ಕೆ ಎಷ್ಟು ಹಣವನ್ನು ಖರ್ಚುಮಾಡಿದ್ದಾರೆಂಬುದನ್ನು ನಾವು ಲೆಕ್ಕಹಾಕಬೇಕಾಗಿದೆ. ಈ ಸರ್ಕಾರದಲ್ಲಿ ಏನು ಒಂದು ರೂಢಿಯಲ್ಲಿ ತಂದಿದ್ದಾರೆ ಎಂದರೆ ಈ ನೌಕರಿಗಳನ್ನು ಪಡೆಯತಕ್ಕವರು ಯಾರಿದ್ದಾರೆ ಅವರು ಎರಡು ಮೂರು ತರಗತಿಯಲ್ಲಿರುತ್ತಾರೆ. ಒಂದು ತರಗತಿಯವರು ತಮಗೆ ಸರ್ಕಾರದಲ್ಲಿ ಇರತಕ್ಕ ಇನ್‌ಫ್ಲೂಯೆನ್ಸ್ ಮೇಲೆ ಹುದ್ದೆಯನ್ನು ಪಡೆಯುತ್ತಾರೆ. ಇನ್ನು ಕೆಲವರು ಮಂತ್ರಿಸ್ಥಾನದಲ್ಲಿರ ತಕ್ಕವರ ಇನ್‌ಫ್ಲೂಯೆನ್ಸ್ ಮೇಲೆ ಕೆಲಸ ಪಡೆಯುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಏಜಂಟರನ್ನು ಇಟ್ಟು ಅಭ್ಯರ್ಥಿಗಳಿಂದ ಹಣವನ್ನು ತೆಗೆದುಕೊಂಡು ಕೆಲವರಿಗೆ ಕೆಲಸಗಳನ್ನು ಕೊಡಿಸತಕ್ಕ ಸನ್ನಿವೇಶವೂ ಉಂಟು. ಇನ್ನು ಕೆಲವರಿಗೆ ತಮ್ಮ ದಾಕ್ಷಿಣ್ಯದಿಂದ ಕೆಲಸಗಳನ್ನು ಕೊಡಿಸುವುದೂ ಉಂಟು. ಒಬ್ಬನಿಗೆ ತಾಶೀಲ್ದಾರನ ಕೆಲಸ ಕೊಡುವುದಕ್ಕೆ ಇಷ್ಟೇ ಹಣ ಕೊಡ ಬೇಕು, ಒಬ್ಬನಿಗೆ ಅಸಿಸ್ಟೆಂಟ್ ಕಮಿಷನರ್ ಕೆಲಸವನ್ನು ಕೊಡಬೇಕಾದರೆ ಆತನು ಇಷ್ಟೇ ಹಣ ಕೊಡಬೇಕು ಎಂದು ಎಲ್ಲಾ ನಿಗದಿ ಮಾಡಲಾಗಿದೆ......... .....

For the post of Tahsildar Rs. 5,000, for the post of Assistant Commissioner Rs. 10,000 to Rs. 15,000.

ಹೀಗೆ ಒಬ್ಬರು ಏಜಂಟರನ್ನು ಇಟ್ಟುಕೊಂಡು ಕೆಲಸಗಳನ್ನು ಕೊಡತಕ್ಕ ವ್ಯವಹಾರವನ್ನು ನಡೆಸಲಾಗುತ್ತಿದೆ. ನನಗೆ ಒಬ್ಬರು ಗುಲ್ಬರ್ಗದಿಂದ ಒಂದು ಕಾಗದ ಬರೆದಿದ್ದಾರೆ. ಅದನ್ನು ಅವರು ಅವರ ಲೆಟರ್ ಹೆಡ್ಡಿನಲ್ಲ ಬರೆದಿದ್ದಾರೆ. ಅವರು ಒಬ್ಬ ಕಾಂಗ್ರೆಸ್ ಕಾರ್ಯಕರ್ತರು; ಹಾಗೂ ಅವರು ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಬಹಳ ಬೇಕಾದವರೆಂದೂ, ಇವರಿಗೆ ಅವರಲ್ಲಿ ಬಹಳ ಆಸಕ್ತಿ ಇದೆಯೆಂದೂ ಇದರಲ್ಲಿ ಹೇಳಿದೆ. ಇದನ್ನು ನಾನು ಸರ್ಕಾರದವತಿಯಿಂದಾಗಲೀ ಅಥವಾ ಆ ಪಿ.ಎಸ್.ಸಿ. ವತಿಯಿಂದಲಾಗಲೀ ಹೇಳುತ್ತಿಲ್ಲ. ಇದನ್ನು ನೋಡಿದರೆ ನೇರವಾಗಿ ಇಂಥ ಒಂದು ಏಜನ್ಸಿಯ ಸಂಬಂಧವನ್ನು ನೌಕರಿ ಪಡೆಯತಕ್ಕವರು ಕಂಡುಕೊಳ್ಳದ ವಿನಾ ಯಾರಿಗೂ ಕೆಲಸ ಸಿಕ್ಕುವುದಿಲ್ಲ ಎಂಬುದನ್ನು ಇದರಿಂದ ನಾವು ಅರ್ಥಮಾಡಿಕೊಳ್ಳಬಹುದು. ಇಲ್ಲಿ ಬೆಂಗಳೂರು ಹೈಕೋರ್ಟಿನಲ್ಲಿ ಒಂದು ಕೆಲಸವಾಗಬೇಕಾಗಿದ್ದರೆ ಅದಕ್ಕೆ ಒಬ್ಬ ಏಜಂಟ್ ಇರುವುದು ಆ ಗುಲ್ಬರ್ಗಾದಲ್ಲಿ. ಇಲ್ಲಿ ಕೆಲಸವಾಗಬೇಕಾದರೆ ಅಲ್ಲಿ ಆ ಏಜಂಟರನ್ನು ಹಿಡಿಯಬೇಕು. ಈ ಕಾಗದ ಪತ್ರಗಳನ್ನು ನಾನು ಸರ್ಕಾರಕ್ಕೆ ಕೊಡುವುದಿಲ್ಲ. ಅಧ್ಯಕ್ಷರಿಗಾದರೆ ಕೊಡುತ್ತೇನೆ. ಸರ್ಕಾರ ದವರು ಇದರ ಬಗ್ಗೆ ಖಚಿತವಾದ ಕಾರ್ಯಕ್ರಮ ಕೈಗೊಳ್ಳುವ ಭರವಸೆ ಕೊಟ್ಟರೆ ಅವರಿಗೂ ಈ ಕಾಗದಪತ್ರಗಳ ಒಂದು ಫೋಟೋಸ್ಟ್ಯಾಟ್‌ನ್ನು ಮಾತ್ರ ಕೊಡುತ್ತೇನೆ. ಅವರಲ್ಲಿ ಇಂಥದನ್ನು

ತಿದ್ದುತ್ತೇವೆಂಬ ಛಲವಿದ್ದರೆ ತಿಳಿಸಲಿ. ಆದರೆ ನಾನೀಗ ಇಲ್ಲಿರತಕ್ಕ ಕಾಗದದಲ್ಲಿ ಬರೆದಿರತಕ್ಕ ಪ್ರೀಯಾಂಬಲನ್ನು ಓದುವುದಿಲ್ಲ. ನೇರವಾಗಿ ಬರೆದಿರತಕ್ಕ ವಿಷಯವನ್ನು ಓದುತ್ತೇನೆ.

"Please let me know the progress in my friend's case. Also let me know if he has collected the amount.........Here, one more presen, who has applied for Class II post is approaching ......I am interested since I have given conmitment to you. Further, I have to proceed to Bombay and Sholapur. Kindly let me know immediately if the party has collected the amount."

ಇದಾದ ಮೇಲೆ ಅವರಿಗೆ ಉತ್ತರ ಹೋಗಲಿಲ್ಲ. ಮತ್ತೆ ಅವರು ಒಂದು ಟೆಲಿಗ್ರಾಂ ಕೊಟ್ಟಿದ್ದಾರೆ. ಅದರಲ್ಲಿ ಹೀಗೆ ಇದೆ :

"Come Immediately or I Shall Come if Collected Money."

ಶ್ರೀ ಬಾಪೂಗೌಡ (ಷಹಪುರ).—ಗುಲ್ಬರ್ಗಾದಲ್ಲಿ ಎಷ್ಟು ಜನರಿಗೆ ತಾಶೀಲ್ದಾರ್ ಮತ್ತು ಅಸಿಸ್ಟೆಂಟ್ ಕಮಿಷನರ ಹುದ್ದೆಗಳನ್ನು ಕೊಡಲಾಗಿದೆ ?

ಶ್ರೀ ಎಚ್. ಎನ್. ನಂಜೇಗೌಡ.—ಕೆಲಸ ಕೊಡಿಸತಕ್ಕ ಏಜಂಟರು ಇರುವುದು ಗುಲ್ಬರ್ಗಾದಲ್ಲಿ. ಆ ನೌಕರಿಗಳನ್ನು ವ್ಯಾಪಾರ ಮಾಡತಕ್ಕವರು ಹಾಸನ ಜಿಲ್ಲೆಯವರಾಗಿರಬಹುದು ಅಥವಾ ಇನ್ನೂ ಯಾವುದಾದರೂ ಜಿಲ್ಲೆಯವರಾಗಿರಬಹುದು. ಹಾಗೆ ಹುದ್ದೆಗಳನ್ನು ಕೊಳ್ಳತಕ್ಕವರು ಯಾವ ಸ್ಥಳದವರಾದರೂ ಆಗಬಹುದು. ಆದರೆ ಇದರಲ್ಲಿ ಸ್ವಜನಪಕ್ಷಪಾತದವರು ಸೇರುವುದಿಲ್ಲ. ಆ ಹುದ್ದೆ ಬೇಕಾಗಿದ್ದ ವ್ಯಕ್ತಿ ಇಂಟ್ರೆವ್ಯೂ ಆಗುವುದಕ್ಕೆ ಮುಂಚೆ ಹಣವನ್ನು ಪೂರ್ತಿಯಾಗಿ ಕೊಟ್ಟಿರಲಿಲ್ಲ, ಆದುದರಿಂದ ಆತನಿಗೆ ಆ ಹುದ್ದೆ ಸಿಕ್ಕಲಿಲ್ಲ. ಈ ಏಜನ್ಸಿಗೆ ಸಂಬಂಧಪಟ್ಟಂತೆ ಜನ ಪಿ. ಎಸ್. ಸಿ. ಯಲ್ಲೂ ಇದ್ದಾರೆ. ಅವರು ಅಲ್ಲಿ ಛೇರ್ಮನ್ ಆಗಿದ್ದಾರೆಯೋ ಅಥವಾ ಏನಾಗಿದ್ದಾರೆ ಎಂಬುದನ್ನು ಇಲ್ಲಿ ಹೇಳಲಿಕ್ಕೆ ಬರುವುದಿಲ್ಲ. ಪರಿಸ್ಥಿತಿ ಹೀಗೆ ಇದ್ದರೆ ಇಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಲ್ಲಿ ಯಾರನ್ನು ಪ್ರಾಮಾಣಿಕ ಯಾರನ್ನು ಅಲ್ಲ ಎಂದು ಹೇಳುವುದು ? ಅಧಿಕಾರಕ್ಕೆ ಬಂದ ಮೇಲೆ ಅವರು ಕೊಟ್ಟಿದ್ದ ಲಂಚದ ಹಣವನ್ನು ಹೇಗೆ ಬರಮಾಡಿಕೊಳ್ಳಬೇಕು ? ಅವರು ಲಂಚ ತೆಗೆದುಕೊಳ್ಳದೆ ಕೆಲಸ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅಂದಾಗ ಇನ್ನು ಆ ಶ್ರೀಮಾನ್ ಸಿದ್ದವೀರಪ್ಪನವರು ಮತ್ತು ದೇವರಾಜ ಅರಸರು ಹೇಳಿದ್ದನ್ನು ಹೇಗೆ ಒಪ್ಪಬೇಕು ! ಅವರಿಗೆ ಬರತಕ್ಕ ಹಣ ಬಾರದಿದ್ದರೆ ಅವರು ಯಾರ ಮೇಲೆ ದಾವಾ ಹಾಕಬೇಕು ? ತಾಶೀಲ್ದಾರರು ಮತ್ತು ಅಸಿಸ್ಟೆಂಟ್ ಕಮಿಷನರುಗಳು ತಮ್ಮ ಹುದ್ದೆಗಳನ್ನು ಹಣ ಸುರಿದು ಕೊಂಡುಕೊಂಡಿದ್ದಾರೆ.

ಇದಾದನಂತರ ಇನ್ನೊಬ್ಬರು ಅವರು ಹೆಂಗಸರು–ಗ್ರಾಜುಯೇಟ್, ಅವರು ಒಂದು ಕಾಗದವನ್ನು ಬರೆದಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ತಾವು ಹೇಳುತ್ತಿ......

ಶ್ರೀ ಎಚ್. ಎನ್. ನಂಜೇಗೌಡ.—ನನಗೆ ಶ್ರೀ ಮುನಿಸ್ವಾಮಯ್ಯನವರಲ್ಲಿ ವಿಶ್ವಾಸವಿದೆ. ಅವರಿಗೆ ನಾನು ನನ್ನಲ್ಲಿರತಕ್ಕ ಎಲ್ಲಾ ಕಾಗದ ಪತ್ರಗಳನ್ನೂ ತೋರಿಸುತ್ತೇನೆ.

ಶ್ರೀ ಬಾಪು ಗೌಡ.—ಆ ಪತ್ರಗಳನ್ನು ಯಾರು ಯಾರಿಗೆ ಬರೆದಿದ್ದಾರೆ ?

Sri VEERENDRA PATIL (Chief Minister).—Sir, if any hon'ble member refers to the contents of any letter, I think, it is obligatory on his part to place that letter on the Table of the House; otherwise we cannot make use of the contents of that letter. If he is reading that letter, he must place it on the Table of the House. I must have full opportunity to know what is that letter, to whom it is addressed and who has written that letter. The hon'ble member is referring to a telegram. He must make it available to us, because, while replying, I must know the contents, to whom it has been addressed, etc., otherwise, I will not be getting the opportunity to rebut or to give reply to those allegations.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಅವನ್ನೆಲ್ಲಾ ಅಧ್ಯಕ್ಷರ ಟೇಬಲ್ ಮೇಲೆ ಇಡುತ್ತೇನೆಂದು ಅವರು ಹೇಳಿದ್ದಾರೆ. ಹಾಗೆ ಸರ್ಕಾರದವರು ಅದನ್ನೆಲ್ಲಾ ಎನ್‌ಕ್ವೈರಿ ಮಾಡುತ್ತೇನೆಂದರೆ ಅವುಗಳನ್ನು ಕೊಡುವುದಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಇನ್ನೇನು ಆಗಬೇಕು ?

Sri VEERENDRA PATIL.—Let him give.

Sri H. N. NANJE GOWDA.—I want such response from the Government. Let them create the confidence in me and I will place it on the Table.

Sri VEERENDRA PATIL.—If he is not prepared to place it on the Table of the House, I will not be able to reply. According to the rules, he must place it on the Table, because he has read just now the contents of that letter. The Minister or the Chief Minister is entitled to know what that letter is and the contents of that letter. But, if he does not want to make use of the contents of the letter, I have no objection to his not placing it on the Table of the House.

ಶ್ರೀ ಎಚ್. ಎನ್. ನಂಜೇಗೌಡ.—ಇಲ್ಲಿ ರೂಲ್ ಆಫ್ ಲಾಗೆ ರೆಸ್ಪೆಕ್ಟ್ ಇಲ್ಲ ಎನ್ನುವುದಕ್ಕೆ ಒಂದಲ್ಲಾ ಅನೇಕ ಉದಾಹರಣೆಗಳಿವೆ...........

ಶ್ರೀ ಎಸ್. ಗೋಪಾಲಗೌಡ.—ಆ ಕಾಗದ ಪತ್ರಗಳನ್ನೆಲ್ಲಾ ಟೇಬಲ್ ಮೇಲೆ ಇಡತಕ್ಕ ಘಟ್ಟ ಇನ್ನೂ ಬಂದಿಲ್ಲ. ಅದೀಗ ತೀರ್ಮಾನವಾಗಬೇಕಾಗಿದೆ. ಇದೇ ಸಭೆಯಲ್ಲಿ ಅನೇಕ ಸಂದರ್ಭಗಳಲ್ಲಿ ಸರ್ಕಾರದವರೇ ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲವೊಂದು ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡುವುದಕ್ಕಾಗುವುದಿಲ್ಲ ಎಂದು ಹೇಳಿರತಕ್ಕ ದೃಷ್ಟಾಂತಗಳಿವೆ. ಸರ್ಕಾರದವರು ವಿಚಾರಣೆ ನಡೆಸುವುದಕ್ಕೆ ಈ ಕಾಗದಪತ್ರಗಳಿಲ್ಲದೆ ಕುಂಠಿತವಾಗಿದೆ ಅವು ಬೇಕೇ ಬೇಕು ಅನ್ನುವುದಾದರೆ ಆಗ ಕೊಡಬಹುದು. ಅವರು ಹೇಳತಕ್ಕ ವಿಚಾರ ನಿಜವೇ—ನಿಜವಲ್ಲವೇ ಅನ್ನುವುದನ್ನು ನಿರ್ಧಾರಮಾಡುವುದಕ್ಕಾದರೆ ಕೊಡಬಹುದು. ಅದರ ಹೊರತು ಆ ಕಾಗದಗಳನ್ನು ನಿಮ್ಮ ಕೈಗೆ ಕೊಟ್ಟು ನಾವು ಅನಂತರ ಬಾಯಿ ಹೊಡ್ಕೊಳ್ಳೋದು ಸರಿಯಲ್ಲ ಎಂದು ಹೇಳುತ್ತೇನೆ.

ಶ್ರೀ ವೀರೇಂದ್ರಪಾಟೀಲ್.—ಅಧ್ಯಕ್ಷರೇ, ರೂಲ್ಸ್ ಪ್ರಕಾರ ಯಾರೇ ಮಾನ್ಯ ಸದಸ್ಯರು ಏನಾದರೂ ಓದಬೇಕೆಂದು ಹೇಳಿದರೆ, ಮೊದಲು ಅದನ್ನು ನಿಮಗೆ ತೋರಿಸಬೇಕು. ನಿಮ್ಮ ಪರ್ಮಿಷನ್ ಇಲ್ಲದೆ ಅವರು ಓದುವುದಕ್ಕಾಗುವುದಿಲ್ಲ. ಅದರ ಜನ್ಯೂಯಿನ್ನೆಸ್ ಬಗ್ಗೆ ನೀವು ಸ್ಯಾಟಿಸ್‌ಫೈ ಆದರೆ ಅದಕ್ಕೆ ಪರವಾನೆಗಿಕೊಡಬಹುದು. ಏನೋ ಕಾಗದ ಇದೆಯೆಂದು ಮಾನ್ಯ ಸದಸ್ಯರು ಅದನ್ನು ಓದುವುದಾದರೆ ನೀವು ಅದಕ್ಕೆ ಪರವಾನೆಗಿಕೊಟ್ಟಿದ್ದರೆ, ಆ ಕಾಪಿ ನಮಗೆ ಸಿಗಬೇಕು.

ಶ್ರೀ ಎನ್. ಎಚ್. ನಂಜೇಗೌಡ.—ನಾನು ತಮಗೆ ಆ ಕಾಗದಗಳನ್ನು ತೋರಿಸುತ್ತೇನೆ. ನೀವು ನನಗೆ ಕನ್‌ವಿನ್ಸ್ ಮಾಡಿದರೆ, ಅದನ್ನು ಸರ್ಕಾರಕ್ಕೆ ಕೊಡುತ್ತೇನೆ. ಇದು ಗುಟ್ಟಿನ ವಿಚಾರ. ಕಾನ್‌ಸ್ಟಿಟ್ಯೂಷನ್ ಪ್ರಕಾರ ಪಬ್ಲಿಕ್ ಸರ್ವಿಸ್ ಕಮಿಷನ್‌ಬಗ್ಗೆ ಯಾರೂ ದೂರು ಮಾಡುವ ಹಾಗಿಲ್ಲ. ಇವತ್ತು ಮಾನ್ಯ ಸಚಿವರು ಅದರ ಫೋಟೋ ಸ್ಟ್ಯಾಟ್ ಕಾಪಿ ಕೊಡಿ ಎಂದು ಹೇಳಿದರೆ ಕೊಡುತ್ತೇನೆ. ಇಲ್ಲವೇ ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡಿ ಅದನ್ನು ತೆಗೆದುಕೊಳ್ಳಬಹುದು. ಏಕೆಂದರೆ ಈಗಾಗಲೇ ಭ್ರಷ್ಟಾಚಾರ ನಡೆಯುತ್ತಿದೆ. ಆಳುವ ಪಕ್ಷವೇ ಇಷ್ಟೊಂದು ಕೆಟ್ಟಿರುವಾಗ ನಿಮ್ಮ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳುವುದು ? ಇಂತಹ ಪರಿಸ್ಥಿತಿಯಲ್ಲಿ ನಿಮ್ಮನ್ನು ನಂಬಬೇಕಾದರೆ ಬಹಳ ಕಷ್ಟವಾಗುತ್ತದೆ. ನಿಮ್ಮ ಮೇಲೆ ಗುರುತರವಾದ ಅಪಾದನೆಮಾಡಿ ಸಹಿ ಹಾಕಿದಂಥ ಸದಸ್ಯರನ್ನೇ ನಿಮ್ಮ ಮಂತ್ರಿಮಂಡಲಕ್ಕೆ ಸೇರಿಸಿಕೊಂಡಿರಿ. ನಿಮ್ಮ ಮೇಲೆಯೇ ದೂರು ಕೊಟ್ಟವರನ್ನು ನಿಮ್ಮ ಕ್ಯಾಬಿನೆಟ್ಟಿಗೆ ಸೇರಿಸಿಕೊಂಡರೆ ನೀವು ಅವರೊಡನೆ ಹೊಂದಾಣಿಕೆ ಮಾಡಿದಂತಾಗುವುದಿಲ್ಲವೇ ? ಇದು ಭ್ರಷ್ಟಾಚಾರವಲ್ಲವೇ ! ಹೀಗೆ ನಿಮ್ಮ ಕಡೆಯವರಿಗೆ ನೀವು ನೆರೆಯಾಗಿದ್ದೀರಿ ಮತ್ತು ಅವರ ದಾಕ್ಷಿಣ್ಯಕ್ಕೊಳಗಾಗಿದ್ದೀರಿ. ಸ್ವಜನಪಕ್ಷಪಾತ ಮಾಡುವವರನ್ನು ಇಟ್ಟುಕೊಂಡರೆ, ಅದು ಭ್ರಷ್ಟಾಚಾರವಲ್ಲವೇ ? ಎಂ. ಎಸ್. ಆರ್. ಟಿ. ಸಿ. ಯಲ್ಲಿ ಮೆಕಾನಿಕ್ ಇಂಜನಿಯರ್ ಹುದ್ದೆಗೆ ಅವರ ಸಂಬಂಧಿಕರನ್ನು ಕೇವಲ 325 ರೂಪಾಯಿಗಳ ಸಂಬಳ ಪಡೆಯುತ್ತಿದ್ದರೂ 4 ವರ್ಷಗಳಲ್ಲಿ ಅವನಿಗಿಂತ ಉತ್ತಮ ದರ್ಜೆಯಲ್ಲಿರುವವರು ಇದ್ದರೂ ಅದನ್ನು ಕಡೆಗಾಣಿಸಿ 1600 ರೂಪಾಯಿಗಳ ಸಂಬಳಕ್ಕೇರಿಸಿದರೆ, ಇದು, ಆಡಳಿತದಲ್ಲಿ ಭ್ರಷ್ಟಾಚಾರವಲ್ಲವೇ!

ತಾಂತ್ರಿಕ ತೀರ್ಮಾನಗಳನ್ನು ಬದಿಗೊತ್ತಿ ಇಷ್ಟ ಬಂದಹಾಗೆ ಅನೇಕ ಸಂದರ್ಭಗಳಲ್ಲಿ ಇವರು ತೀರ್ಮಾನಗಳನ್ನು ಕೊಟ್ಟಿರುವುದು—ಇದು ಭ್ರಷ್ಟಾಚಾರವಲ್ಲವೇ? ರೂಲ್ಸ್‌ಗೆ ವಿರೋಧವಾಗಿ ಪ್ರಜಾತಂತ್ರದಲ್ಲಿ ನಡೆಯುವವರನ್ನು ನಾವು ಏನೆಂದು ಕರೆಯಬೇಕೋ ನನಗೆ ಗೊತ್ತಿಲ್ಲ. ಜನತೆಯ ಮುಂದೆ ಇವರು ದೊಡ್ಡವರು ಎಂದು ಹೇಳಿಕೊಂಡು ಬಾಜಾಭಜಂತ್ರಿ ಮಾಡಿಕೊಂಡು ಸಾವಿರಾರು ಮೈಲಿಗಳ ದೂರ ಹೋಗಿ ಅಲ್ಲಿ ಕಲ್ಲುಗಳ ತಳಹದಿ ಹಾಕುವುದು, ಆ ಕಲ್ಲುಗಳು ಮಳೆಯಲ್ಲಿ ನೆನೆದು ಮತ್ತು ಬಿಸಿಲಿನಲ್ಲಿ ಎಷ್ಟು ಒಣಗಿದರೂ ಕೆಲಸವೇನೂ ಆಗುವುದಿಲ್ಲ. ಸರ್ಕಾರಕ್ಕೆ ಇದು ಕೊಡಲಿ ಪೆಟ್ಟು ಹಾಕಿದಂತಾಗುವುದಿಲ್ಲವೇ! ಇದು ಒಂದು ರೀತಿ ಭ್ರಷ್ಟಾಚಾರ ಆಗುತ್ತದಲ್ಲವೇ! ಏಕ್‌ದಿನ್‌ಕಾ ಸುಲ್ತಾನ್ ಆಗುವ ಪಕ್ಷ ಇದು. ನೂರಾರು ವರ್ಷಗಳಿಂದ ರೈತ ಕುಟುಂಬ ನರಳುತ್ತಿರುವಾಗ, ಏಕ್‌ದಿನ್‌ಕಾ ಸುಲ್ತಾನ್ ಆಗುವ ಪಕ್ಷ ಇನ್ನೂ 2—3 ವರ್ಷಗಳ ಕಾಲ ನಾವೇ ಇರುತ್ತೇವೆಂದು ಹೇಳುವುದು ಸರಿಯಲ್ಲ. ಇದು ಸೂಳೆ ಮುದಿವಯಸ್ಸಿನಲ್ಲಿ ಪಾತಿವ್ರತ್ಯ ಘೋಷಣೆ ಮಾಡಿದ ಹಾಗೆ ಆಗುತ್ತದಲ್ಲವೇ? ಈಗ ಇವರು ಅಸೆಟ್ಸ್ ಅಂಡ್ ಲೈಯಬಿಲಿಟೀಸ್ ತೆಗೆದುಕೊಳ್ಳುವುದು. ಹೋಯಿತು. ಇವರಿಗೆ ಲೋಕಪಾಲ ನೇಮಕ ಬೇಡ, ಪಬ್ಲಿಕ್ ಎನ್‌ಕ್ವೈರಿ ಬೇಡವೆಂದು ಹೇಳುವಾಗ, ನನ್ನ ಹತ್ತಿರ ಕಾಗದವನ್ನು ಇವರು ಕೇಳುವುದಕ್ಕೆ ಯಾವ ಹಕ್ಕು ಇದೆ? ತಾವು ಇದರ ಬಗ್ಗೆ ಸರಿಯಾಗಿ ವಿಚಾರಮಾಡುವುದಾದರೆ, ಈ ಕಾಗದವನ್ನು ತಮಗೆ ಕೊಡುತ್ತೇನೆ.

ಅಧ್ಯಕ್ಷರು.—ರೂಲ್ 305 (1) ಈ ರೀತಿ ಇದೆ. ಅದನ್ನು ಮಾನ್ಯ ಸದಸ್ಯರಿಗೆ ಓದಿ ತೋರಿಸುತ್ತೇನೆ. "305 (1) A paper or document to be laid on the Table shall be duly authenticated by the member presenting it."

Sri D. B. KALMANKAR.—But he cannot be compelled as per rules.

Mr. SPEAKER.—I am not compelling the hon. Member. If he wants it to be made use of, it is for him to lay on the Table and not otherwise.

Sri H. N. NANJE GOWDA.—I am ready to give it to you, Sir, on the assurance that it would be returned after a week or so. I will produce a photostat copy.

Mr. SPEAKER.—I leave it to the hon. Member.

ಶ್ರೀ ಎಚ್. ಎನ್. ನಂಜೇಗೌಡ.—ಈಗ ಸರ್ಕಾರದಲ್ಲಿರುವ ಕಾನೂನುಗಳನ್ನು ಕೆಲವು ಶ್ರೀಮಂತರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಬದಲಾಯಿಸುವುದು, ಈಗಿರುವ ಕಾನೂನು ಪ್ರಕಾರ ಎಕ್ಸೈಜು ಕಂಟ್ರಾಕ್ಟರಿಗೆ ಎರಡು ತಿಂಗಳ ಕ್ಯಾಷ್ ಅಡ್ವಾನ್ಸ್ ಮತ್ತು 10 ತಿಂಗಳ ಪ್ರಾಪರ್ಟಿ ಸೆಕ್ಯೂರಿಟಿ ಕೊಡಬೇಕೆಂದಿರುವುದನ್ನು ಬದಲಾವಣೆ ಮಾಡುತ್ತಿದ್ದಾರೆ. ಅದು ಹೇಗೆಂದರೆ, ಈಗ ಅದನ್ನು 7 ತಿಂಗಳ ಕ್ಯಾಷ್ ಅಡ್ವಾನ್ಸ್ ಮತ್ತು 5 ತಿಂಗಳ ಪ್ರಾಪರ್ಟಿ ಸೆಕ್ಯೂರಿಟಿ ಅಂದರೆ, 76 ಸಾವಿರ ಕ್ಯಾಷ್ ಅಡ್ವಾನ್ಸ್ ಕೊಡಬೇಕು. ಹೀಗಾದರೆ ಕಾಂಪಿಟಿಟಿವ್ ಟೆಂಡರರ್ಸ್ ಎಲ್ಲಿ ಬರುತ್ತಾರೆ! ಸರ್ಕಾರಕ್ಕೆ ಇದರಿಂದ ನಷ್ಟವಾಗುವುದಿಲ್ಲವೇ? ಕೆಲವೇ ಜನರ ಹಿತಾಸಕ್ತಿಗಳನ್ನು ಕಾಪಾಡುವುದು—ಇದು ನಿಮ್ಮ ಭ್ರಷ್ಟಾಚಾರವಲ್ಲವೇ? If this is not corrupt administration, then what else is it! ಅವರೇನೋ ತಾವೇ ಸರ್ವಾಧಿಕಾರ ಪಡೆದಂತಿದೆ. ಇಂದು ನಿಮಗೆ ಮದುವೆ ಹಬ್ಬ ನಾಳೆ ಯಾರೂ ಏನೂ ನಿಮ್ಮನ್ನು ಕೇಳುವುದಿಲ್ಲವೆಂದು ಇರಬೇಡಿ. ಆದ್ದರಿಂದ ನೀವು ಈಗಲೇ ಆಡಳಿತದಲ್ಲಿ ಎಚ್ಚರಿಕೆ ವಹಿಸಿ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಂತ್ರಿ ಪದವಿಯ ಆಧಾರದ ಮೇಲೆ ಜೀವನ ಮಾಡುವವ ನಾನಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ನಿಮ್ಮ ಹೇಳಿಕೆಯನ್ನು ಹೊರಗೆ ಹಾಕುವಾಗ, ಅದನ್ನು ಕೇಳುವುದಕ್ಕೆ ಬಂದಾಗ ನಿಮಗೆ ಕಷ್ಟವಾಗುತ್ತದೆ. ಲಾ ಗ್ರ್ಯಾಜುಯೇಟ್ಸ್ ವಿಚಾರದಲ್ಲಿ ಎಂ. ಎಸ್. ಆರ್. ಟಿ. ಸಿ. ಯವರು ಲೀಗಲ್ ಸೂಪರಿಂಟೆಂಡೆಂಟ್ ಹುದ್ದೆಗಳನ್ನು ಕಾಲ್‌ಫಾರ್ ಮಾಡಿದರು. ಅದರಲ್ಲಿ ಅರ್ಹತೆ, ಎಲ್ಲಾ ವಿಷಯಗಳನ್ನು ಕೇಳಿದ್ದರು. ಆದರೆ ಹೆಂಗಸರು ಹಾಕಬಾರದೆಂದು ಇರಲಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್‌ನವರ ಇಂಟರ್‌ವ್ಯೂ ಆಯಿತು. ರಿಟನ್‌ಟೆಸ್ಟ್‌ನಲ್ಲಿ ಪಾಸಾಗಿದ್ದಾರೆ. ವೈವವೋಸಿ ಇಂಟರ್‌ವ್ಯೂ ಆದಾಗ ಹೆಂಗಸರಿಗೆ ಈ ಹುದ್ದೆಯನ್ನು ಕೊಡುವುದಕೆ

(ಶ್ರೀ ಎಚ್. ಎನ್. ನಂಜೇಗೌಡ)

ರೂಲ್ಸ್ ಇಲ್ಲವೆಂದು ಹೇಳಿದರು. ಅಂದಮೇಲೆ ಮೊದಲು ನೋಟಿಫಿಕೇಷನ್ ಹಾಕುವಾಗ ಈ ಕಂಡೀಷನ್ನನ್ನು ಏತಕ್ಕೆ ಹಾಕಲಿಲ್ಲ ? ಗುಲ್ಬರ್ಗಾದ ಮುನಿಸಿಫ್ ಕೋರ್ಟ್ ಪರಿಯಾದಲ್ಲಿರತಕ್ಕ ಜಮೀನನ್ನು ಮಾನ್ಯ ಮುಖ್ಯ ಮಂತ್ರಿಗಳು ಅವರ ಬ್ಲಡ್ ರಿಲೇಷನ್ಸ್ ಅವರಿಗೆ ಹಂಚಿಕೊಟ್ಟರು. ಇವರು ಎಬವ್ ದಿ ಬೋರ್ಡ್ ಇರಬೇಕು. ಇದನ್ನು ಅವರು ವಿಚಾರಣೆಗೆ ತರಬೇಕೆಂದರೆ ನಾನು ಒಪ್ಪುತ್ತೇನೆ. ಈ ಸಭೆಯಲ್ಲಿ ಲೋಕಪಾಲ ನೇಮಕದ ಮಸೂದೆಯನ್ನು ತೆಗೆದುಕೊಂಡು ಬನ್ನಿ ಅಂದರೆ, ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಅದಕ್ಕೆ ರಾಜ್ಯಪಾಲರ ಶಿಫಾರಸು ಇಲ್ಲವೆಂದು ಹೇಳಿದರು. ಈ ಮಸೂದೆಯನ್ನು ಡ್ರಾಫ್ಟ್ ಮಾಡಿ ತಂದಿದ್ದೇವೆ, ಮನಿ ಪ್ರಾಬ್ಲಂ ಇಲ್ಲ. ಕಳ್ಳನ ಮನಸ್ಸು ಹುಳ್ಳಹುಳ್ಳಗೆ, ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿಕೊಂಡು ನೋಡಿದ ಎಂಬ ಹಾಗೆ ಇವರು ವರ್ತಿಸುತ್ತಿದ್ದಾರೆ. ಆ ರೀತಿ ಇಲ್ಲವೆಂದು ಇವರು ಹೇಳುವುದಾದರೆ, ಇಲ್ಲಿ ಅವರು ಅದಕ್ಕೆ ಚಾಲೆಂಜ್ ಮಾಡತಕ್ಕ ಧೈರ್ಯ ತಾಳಲಿ, ನೋಡೋಣ. ಈಗ ಬೇಕಾದರೆ ಆ ಕಾಗದಗಳನ್ನು ಮತ್ತು ಫೋಟೋಸ್ಟಾಟ್ ಕಾಪಿಗಳನ್ನು ಕೊಡುತ್ತೇನೆ.

Sri VEERENDRA PATIL.—Instead of reading the letter, he may place it on the Table of the House.

ಅಧ್ಯಕ್ಷರು.—ಮಾನ್ಯ ಸದಸ್ಯರು ಡಾಕ್ಯುಮೆಂಟ್ ಏನು ಓದುತ್ತಿದ್ದಾರೆ, ಅದನ್ನು ಎಲ್ಲರೂ ನೋಡಬೇಕಾಗುತ್ತದೆ. ಅದಕ್ಕೆ ಮರ್ಯಾದೆ ಬರಬೇಕಾದರೆ, ಅದನ್ನು ಹಾಗೆ ಮಾಡಬೇಕಾಗುತ್ತದೆ. ಅದಕ್ಕೆ ಹೆಚ್ಚು ನಾನು ಪ್ರೆಸ್ ಮಾಡುವುದಿಲ್ಲ.

Sri K. H. PATIL.—If he reads in the House, the Press will have a right to publish it. If he wants, let him read it.

Sri H. N. NANJE GOWDA.—This may not be misconstrued. There are other legal remedies open on the basis of this letter if the Government fails to give remedy. Where shall I go if I place it on the Table of the House? I want to take action on the basis of this letter if you say the remedy is not forthcoming.

Sri RAMAKRISHNA HEGDE.—It is better for the hon. member to hand over the letter. If he reads the letter, the contents of the letter become part of the records. Therefore, may I submit to you sir, that before the contents are read out, the Hon. Speaker should satisfy himself whether it is a genuine letter. Somebody might have sent that letter without giving the name. It may be an anonymous letter and there may not be any signature.

ಶ್ರೀ ಎಚ್. ಎನ್. ನಂಜೇಗೌಡ.—ಈ ಪತ್ರದ ಬಗ್ಗೆ ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ ?

Sri RAMAKRISHNA HEGDE.—This is just to satisfy the Chair.

Sri H. N. NANJE GOWDA.—"I have secured 50 per cent of the marks. In *viva voce* I have failed. I am a lady member. This is only my disability. In the notification advertised, it was never mentioned. If they find me not suitable, they should not have called for me. The fundamental rights of a citizen are denied."

Will you kindly enquire into the matter ?

Mr. SPEAKER.—If the member does not wants to hand over the letter, I cannot compel him.

Sri C. K. RAJAIAH SETTY (Chicknaikanahalli).—Your desire is to hand over the letter to the Chief Minister.

Mr. SPEAKER.---Supposing the Government wants to examine the letter by experts, the letter is required.

Sri H. N. NANJE GOWDA.—I Will produce a photo stat copy.

Mr. SPEAKER.—With regard to this question, there are two rules 304 and 305. Rule 304 refers to a document referred to by the Minister which he wants to lay on the Table of the House. Rule 305 reads as follows:

> "(1) A paper or document to be laid on the Table shall be duly authenticated by the member presenting it. (2) all papers and documents laid on the Table shall be considered public."

It is left to the hon. Member to place it on the Table of the House. If he does not want, the paper to be scrutinsed, the effect of the letter is lost.

Sri VEERENDRA PATIL.—What will happen to the contents of the letter which have gone into the records? Those contents cannot be recorded. The moment the contents are recorded, it becomes a public document. Therefore the contents should not be recorded and whole thing has to be expunged.

Sri K. PUTTASWAMY.—Hon. Mr. Nanje Gowda was telling that he will hand over photostat copy and not the original. It is well known from so many evidences that when the original copy is not made available, a copy of it is not relied upon. If he does place this photo stat copy on the Table of the House, it will be of no use.

Sri SPEAKER.—He has the right of retaining the Original or placing it on the Table. If he wants to place it on the Table, he may do so. The document that is to be placed on the Table must be an authenticated one.

Sri K. H. PATIL.—He has got a reliance on the document. If he has relied upon the a false document, there is a privilege Committee to look into it. How can he produce a document on which he wants to proceed further?

Mr. SPEAKER.—If the hon. Member does not want to take the House into confidence by placing the document on the Table, the quotation has no value.

6.00 P.M.

Mr. SPEAKER.—It only means that he has quoted something which he wants to hide. If the hon. Member wants the matter to be taken seriously, I think then he will have to produce the document.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು ಆ ಕಾಗದ ಪತ್ರಗಳು ಸುರಕ್ಷಿತವಾಗಿರುತ್ತವೆ ಎಂದು ಭರವಸೆಯನ್ನು ಕೊಟ್ಟಿದ್ದೀರಿ, ಅದನ್ನು ತಮ್ಮ ಮುಂದೆ ಇಡ್ಡೋಣ. ಆದರೆ ಒರಿಜಿನಲ್ ಕಾಪಿಯನ್ನು ಕೊಡುವಾಗ ಅದನ್ನು ಏನಾದರೂ ನಾಶ ಮಾಡಿದರೆ ಸಂಬಂಧಪಟ್ಟವರಿಗೆ ನೇರವಾಗಿ ಶಿಕ್ಷೆ ಕೊಟ್ಟರೆ ಅವನನ್ನು ರಕ್ಷಣೆ ಮಾಡುವವರು ಯಾರು? ಈ ಪತ್ರದಲ್ಲಿ ಹೇಳಿರತಕ್ಕ

(ಶ್ರೀ ಎಸ್. ಗೋಪಾಲಗೌಡ)

ಅಪಾದನೆಗಳನ್ನು ನಾವು ವಿಚಾರಿಸುತ್ತೇವೆ, ಎಂದು ಹೇಳಿದಾಗ ಮಾತ್ರ ಅದನ್ನು ಕೊಡುವುದಕ್ಕೆ ಬರುತ್ತದೆಯೇ ಹೊರತು ಕೇಳಿದಾಕ್ಷಣಕ್ಕೆ ಕೊಡುವುದಕ್ಕೆ ಬರುವುದಿಲ್ಲ. You may victimise. ಆ ಅಪಾದನೆಗಳನ್ನು ನಾವು ವಿಚಾರಿಸುತ್ತೇವೆ ಎಂದು ಒಪ್ಪಿಕೊಂಡರೆ ಮಾತ್ರ ಕೊಡುವುದಕ್ಕೆ ಬರುತ್ತದೆ.

Mr. SPEAKER.—What Sri Nanje Gowda propose to do.

Sri H. N. NANJE GOWDA.—I declare at the beginning itself that the Hon. Chief Minister has not created confidence in us. He has taken him as his colleague though there were many charges against him.

Mr. SPEAKER.—I do not want any speech. If he is producing that document, he may produce it. Otherwise, he may say "No." Hon. Member has the discretion to produce it or not.

Sri K. H. PATIL.—Hon. Member says that he is prepared to produce the photostat copy tomorrow if necessary if his *bona fides* are questioned in this matter.

†**Sri S. R. BOMMAI** (Kundgol).—Sir, we have been speaking in this House about corruption and malpractice. We talk of corruption in Assemblies, in public meetings, in hotels in buses, and everywhere. Corruption has become part of our life. If only we think of ourselves, if we analyse ourselves, we can say boldly that in some form or other, we are party to corruption. That has been a social evil in this country not only in this country, but in most of the advanced countries also. Sir, corruption cannot be prevented by passing laws or making speeches. In my humble opinion, corruption can be prevented only by social education, that is by creating public opinion, wherein corrupt officers, corrupt legislators, corrupt Minister or corrupt individual would be looked upon as a sinner and he should be socially boycotted. And no social contact could be had with him by the public. Then only a proper atmosphere would be created. Sir, senior members have also quoted a number of authorities. I am here reading a speech made by the then DEWAN in the year 1924 in the then Representative Assembly of Mysore. It was in reply to a resolution which had been brought up. I will just read the relevant portion :

> "In the first place, I must at once disabuse the minds of members of the House as well as those who read the proceedings of the House outside of any general impression that the Mysore Public service is contaminated largely with a disease of corruption."

He goes on :

> "Public servants are servants of the public in a general sense and they must be wholely and undivedelly responsible to their employer that is Government. So far as official discipline is concerned, there is an organisation to enquire into cases of corruption in the various departments of Government. I would

> like to ask whether it is a case of mere complaint, or petition received by the Government, because in respect of these things, after enquiry it is usual to frame charges. But cases must be brought to the notice of the Government by individual who are prepared to come forward, sign their name if they are giving a definite complaint...... it must relate to some particular transaction in which the officer or official has been corrupt."

Here, I would humbly submit, we are responsible Members representing the people of this country and when we speak of corruption, we must be specific. We must be prepared to swear by a particular transaction and if one is convinced about it, Government should be asked to enquire into it. Sir, I find that senior members talking about corruption in this House. But I am sorry to say that no definite or particular charge is made, not a single transaction has been cited against a single Minister or Member of this House. Sir, it may be said........

(Interruption by Sri S. Gopala Gowda)

SRI S. R. BOMMAI.—If my friend Sri Gopala Gowda is able to point out a single case of misappropriation in my society, I am prepared to resign. I am speaking with great responsibility. I am prepared to resign my membership of the House if it becomes necessary. Let him come to my society, Janata Bazaar and make an enquiry. I am prepared to answer.

ಶ್ರೀ ವಾಟಾಳ್ ನಾಗರಾಜ್.—ಪಕ್ಷಾಂತರ ಹೊಂದಿರುವುದು ಕರಪ್ಷನ್ ಅಲ್ಲವೇ ?

SRI S. R. BOMMAI.—I shall answer that question Sir. He is saying that changing party affiliation is also corruption. I do agree. But it is not wrong to change ones opinion, one's ideology, change one's thought. It is the right of every man. Mind is dynamic and progressive and if I find that a particular ideology is more progressive, I am entitled to change. I have changed on ideological grounds and on individual ambitions and gains. But I may tell my friend that he has no Party and he is not under any discipline of any party.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ನಾನು ಒಂದು ಕ್ರಿಯಾರೋಪ ಎತ್ತುತ್ತೇನೆ ಶ್ರೀಮಾನ್ ಬೊಮ್ಮಾಯಿ ಅವರು ಚುನಾವಣೆಯಲ್ಲಿಕಾಂಗ್ರೆಸ್ಸಿಗೆ ವಿರೋಧವಾಗಿ ನಿಂತು ಜನಗಳಿಂದ ವೋಟು ಪಡೆದು ಗೆದ್ದು ಬಂದು ಈಗ ಕಾಂಗ್ರೆಸ್ಸಿನವರ ಆಶೀರ್ವಾದ ಪಡೆದು ಯಾವುದೋ ಚೇರ್ಮನ್‌ಗಿರಿಗೋಸ್ಕರ, ಅಥವಾ ಸಂಬಳಕ್ಕೋಸ್ಕರ ಪಕ್ಷಾಂತರ ಹೊಂದಿದ್ದಾರೆ. ಇದು ಕರಪ್ಷನ್ ಅಲ್ಲವೇ, ಭ್ರಷ್ಟಾಚಾರವಲ್ಲವೇ !

ಅಧ್ಯಕ್ಷರು.—ಪಾರ್ಟಿ ಬದಲಾವಣೆ ಮಾಡಿದ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಬರುವುದಿಲ್ಲ. ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್‌ಗೆ ವಿರುದ್ಧವಾಗಿ ನಿಂತು ಚುನಾವಣೆಯಲ್ಲಿ ಓಟು ಪಡೆದು ಗೆದ್ದು ಬಂದು ಈಗ ಕಾಂಗ್ರೆಸ್‌ಗೆ ಸೇರಿದ್ದಾರೆ. ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಿದ್ದಾರೆ. ಯಾರ ಮುಂದೆ ಮಾತನಾಡುತ್ತಿದ್ದಾರೆಂಬುದನ್ನು ಅವರು ತಿಳಿದುಕೊಂಡು ಮಾತನಾಡಬೇಕು.

ಅಧ್ಯಕ್ಷರು.—ಪಕ್ಷ ಮತ್ತು ವರ್ಗಾಂತರಗಳ ಬಗ್ಗೆ ಸದಸ್ಯರುಗಳು ಮಾತನಾಡಿದರೆ ಅದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಇದುವರೆಗೆ ಹೇಳಿದ್ದು ನಿರರ್ಥಕವಾಯಿತು.

ಶ್ರೀ ಎಂ. ಎನ್. ರಾಮಣ್ಣ.—ಈ ದಿವಸ ಮಧ್ಯಾಹ್ನ ಮೂರು ಗಂಟೆಯಲ್ಲಿ ಅಧ್ಯಕ್ಷರು ನಿಂತು ಮಾತನಾಡುವ ಕಾಲದಲ್ಲಿ ಯಾರೂ ಎದ್ದು ಮಾತನಾಡಬಾರದೆಂದು ರೂಲಿಂಗ್ ಕೊಟ್ಟಿದ್ದೀರಿ. ಆ ರೀತಿ ಮಾತನಾಡಿದರೆ ಕಾನೂನಿನ ಉಲ್ಲಂಘನೆಯಾಗುತ್ತದೆ ಎಂದು ಸಹ ಹೇಳಿದ್ದೀರಿ. ಆದರೆ ಮತ್ತೆ ಆ ರೀತಿ ಮಾತನಾಡುವುದಕ್ಕೆ ತಾವು ಅವಕಾಶ ಕೊಡುತ್ತಿದ್ದೀರಾ. ನಾವೇನಾದರು ಮಾತನಾಡುವುದಕ್ಕೆ ಎದ್ದು ನಿಂತರೆ ಆ ಕಡೆಯ ಕೆಲವು ಸದಸ್ಯರುಗಳು ಕುಳಿತುಕೊಳ್ಳಿ ಎಂದು ಹೇಳಿದರು. ಆ ಅಧಿಕಾರ ಅವರಿಗೆ ಇದೆಯೇ? ಯಾವುದಕ್ಕೂ ಒಂದು ಮಿತಿ ಇದೆ. ಅದನ್ನು ಮೀರಿ ನಡೆದರೆ ಬಹಳ ಅನಾನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀ ರಾಮಣ್ಣನವರು ನನ್ನ ಬಗ್ಗೆ ಹೇಳುವುದಕ್ಕೆ ಅಧಿಕಾರ ಇಲ್ಲ.

ಅಧ್ಯಕ್ಷರು.—ಅಧ್ಯಕ್ಷರು ಎದ್ದು ನಿಂತಾಗ ಯಾರೂ ಎದ್ದು ನಿಂತು ಮಾತನಾಡಬಾರದು. ಅದು ನಿಯಮಕ್ಕೆ ವಿರೋಧ. ಹಾಗೆ ಮಾಡುವುದು ಸಭೆಗೆ ಅಗೌರವವೆಂದು ತಿಳಿದುಕೊಳ್ಳಬೇಕು.

ಶ್ರೀ ಎ. ಮುನಿಯಪ್ಪ.—ತಾವು ಆ ರೀತಿ ರೂಲಿಂಗ್ ಕೊಟ್ಟಮೇಲೆ ಎಲ್ಲರೂ ಪಾಲನೆ ಮಾಡಬೇಕು. ಆ ರೀತಿ ಮತ್ತೆ ನಡೆಯದಂತೆ ತಾವು ನೋಡಿಕೊಳ್ಳಬೇಕು.

ಅಧ್ಯಕ್ಷರು.—ಆಗಲಿ.

Sri S. R. BOMMAI.—It has been stated that change of parties also is a kind of corruption. If change of party is a type of corruption, my friends sitting on this side have changed their parties and they are also responsible for corruption. Sri Vatal Nagaraj is not a member of any party. He has no ideology. If he had and if it is good for the people, he can stick to it. If there is change of ideology and if a member thinks that by joining another party he can serve the people, he is right.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಮಾನ್ಯ ಬೊಮ್ಮಾಯಿ ಅವರು ನನ್ನ ವಿಚಾರದಲ್ಲಿ ಪರ್ಸನಲ್ ಅಲಿಗೇಷನ್ ಮಾಡಿದ್ದಾರೆ. ಆದ್ದರಿಂದ ನನಗೆ ಆ ವಿಚಾರದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಇಲ್ಲದಿದ್ದರೆ ಇಲ್ಲಿಯೇ ಸತ್ಯಾಗ್ರಹ ಮಾಡುತ್ತೇನೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಬೇಕು. ನಾನು ನಿಮಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ.

ಶ್ರೀ ಬಿ. ಪಿ. ಗಂಗಾಧರ.—ಸ್ವಾಮಿ, ಅವರು ಆ ರೀತಿ ಮಾತನಾಡುವುದು ಸರಿಯಲ್ಲ. ಒಂದು ಪಾರ್ಟಿಯ ಸೀಟ್ ತೆಗೆದುಕೊಂಡು ಚುನಾವಣೆಗೆ ನಿಂತು ಜನರಿಂದ ಆರಿಸಿ ಬಂದು ಈಗ ಕಾಂಗ್ರೆಸ್ ಪಕ್ಷಕ್ಕೆ ಸೇರಿರುವುದು ಸರಿಯಲ್ಲ. ಅವರು ತಮ್ಮ ಜಾಗಕ್ಕೆ ರಾಜೀನಾಮೆ ಕೊಟ್ಟು ಮತ್ತೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಂತು ಗೆದ್ದು ಬರಬೇಕು.

ಅಧ್ಯಕ್ಷರು.—ಶ್ರೀ ಬೊಮ್ಮಾಯಿ ಅವರು ಜಾಗ್ರತೆ ಮುಗಿಸಬೇಕು.

Sri S. R. BOMMAI.—So far as eradicating corruption in any form is concerned, it is necessary that a social revolution should take place and for that, whether we belong to this party or that party, as citizens of this country we should create a healthy public opinion. So, I earnestly request through you, to everybody here and outside, that we should start to live a life above corruption, above favouritism and then only there is future for the country. I know there are a number of

legislators and public people who misuse their power, position unknowingly and they are a party to corruption. I conclude my speech by requesting that we should all strive for creating such a public opinion and eradicate corruption.

* *

Mr. SPEAKER.—I want to make a request to the hon. Members. Let us do some serious business. No purpose can be served by such interruption. There is no end to this. Even when the Hon. Chief Minister was opposed to the extension of time, I said I would be extending the time of the debate. So, let us utilise every moment in transacting serious business. ಈಗ ಶ್ರೀ ಪಿ. ವೆಂಕಟಗಿರಿಯಪ್ಪನವರು ಮಾತನಾಡ ಬಹುದು. ಐದು ನಿಮಿಷದಲ್ಲಿ ಮುಗಿಸಬೇಕು.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಅಧ್ಯಕ್ಷರೇ, ಸ್ವಾತಂತ್ರ್ಯ ಬಂದ ಮೇಲೆ ನಮ್ಮ ದೇಶದ ಆಡಳಿತ ಯಂತ್ರ ಯಾವ ರೀತಿ ಪ್ರಗತಿ ಸಾಧಿಸುತ್ತಿದೆ. ಎಂದರೆ ದೇಶದ ಬಹು ಭಾಗದ ಹಣ ಸರಕಾರದ ನೌಕರರುಗಳಿಗೇ ಖರ್ಚಾಗುತ್ತಿದೆ. 1959 ರಲ್ಲಿ 1.45 ಸಾವಿರ ಉದ್ಯೋಗಸ್ತರ ಸಂಖ್ಯೆ ಇದ್ದುದು ಇವೊತ್ತು 1.73 ಸಾವಿರದವರೆಗೆ ಹೆಚ್ಚಾಗಿದೆ. ಇಷ್ಟೇ ಅಲ್ಲ. ಸರಕಾರದ ಉದ್ಯೋಗಿಗಳಿಗಾಗಿ 1959 ರಲ್ಲಿ ಹಣ ಕೊಡುತ್ತಿದ್ದುದು ಬರೀ 16 ಕೋಟಿ ರೂಪಾಯಿ ಮಾತ್ರ ಇತ್ತು. ಈ ದಿನ ಇದು ಸುಮಾರು 70 ಕೋಟಿ ರೂಪಾಯಿಯವರೆಗೆ ಖರ್ಚಾಗುತ್ತಿದೆ. ಇದರಿಂದ ಸಾಮಾನ್ಯ ಜನರಿಗೇನಾದರೂ ಉಪಯೋಗವಾಗಿದೆಯೇ ಎನ್ನುವುದನ್ನು ಇಲ್ಲಿ ನಾವು ಯೋಚನೆ ಮಾಡಬೇಕಾಗಿದೆ. ಆಡಳಿತದಲ್ಲಿ ಈಗಾಗಲೇ ಹೇಳಿದಂತೆ ಲಂಚ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇದೆ ಎನ್ನುವುದನ್ನು ಈಗಾಗಲೇ ನನ್ನ ಮಾನ್ಯ ಸ್ನೇಹಿತರುಗಳು ಇಲ್ಲಿ ಮಾತನಾಡಿದ್ದಾರೆ. ಅದನ್ನೇ ನಾನು ಮತ್ತೇ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಆಡಳಿತವನ್ನು ಉತ್ತಮ ಪಡಿಸುವುದಕ್ಕಾಗಿ ಹಿಂದೆ ಗೋರವಾಲಾ ಕಮಿಟಿ ಹಾಗೂ ಎ. ಜಿ ಆರ್. ಕಮಿಟಿ ಎಂದು ಮಾಡಿದ್ದರು ಮತ್ತು ಇವರಿಂದ ಸರಕಾರಕ್ಕೆ ರಿಪೋರ್ಟುಗಳು ಕೂಡ ಬಂದಿದೆ. ಇದರ ಕಡೆ ಸರಕಾರದವರು ಗಮನಕೊಟ್ಟು ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಇದ್ದಾರೆ. ಇದರಿಂದ ಇಂದು ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿಮಾಡಿ ಸರಕಾರದ ಹಣವನ್ನು ಪೋಲು ಮಾಡುತ್ತಿದ್ದಾರೆ ಮತ್ತು ಇದೇ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ,

ಈ ದಿನ ನಮ್ಮ ರಾಜ್ಯದ ಸೆಕ್ರೆಟರಿಗಳ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿರುವ ಸೆಕ್ರೆಟರಿಯಟ್‌ನಲ್ಲಿ ಸೆಕ್ರಟರಿ, ಡೆಪ್ಯೂಟಿ ಸೆಕ್ರಟರಿ, ಹಾಗೂ ಅಂಡರು ಸೆಕ್ರಟರಿಗಳು ಎಂದು ಐದ್ದಾರೆ ಇವರಲ್ಲಿ ಬಹು ಮಂದಿ ಕೆಲವರನ್ನು ಬಿಟ್ಟರೆ, ಬಹಳ ಅತೃಪ್ತರಾಗಿದ್ದಾರೆ. ಇವರಲ್ಲಿ ಕೆಲವರು ನಮ್ಮನ್ನು ಡೆಪ್ಯೂಟಿ ಸೆಕ್ರಟರಿ ಮಾಡಬೇಕಾಗಿತ್ತು, ನಮ್ಮನ್ನು ಡಿ ಸಿ ಮಾಡಬೇಕಾಗಿತ್ತು, ನಮ್ಮನ್ನು ಎಸ್ ಡಿ ಒ ಆಗಿ ಹಾಕಿದ್ದಾರೆ ಎಂದು ಹೇಳಿ ಅತೃಪ್ತರಾಗಿದ್ದಾರೆ. ಹೀಗಾಗಿ ಇಲ್ಲಿ ಕೆಲಸಗಳು ಸರಿಯಾಗಿ ಆಗುತ್ತಿಲ್ಲ. ಜನರ ಸಮಸ್ಯೆಗಳ ಬಗ್ಗೆ ಸರಕಾರಕ್ಕೆ ಮನವಿ ಮಾಡಿರುವ ಯಾವ ಪೇಪರುಗಳ ಫೈಲು ಕೂಡ ಸರಿಯಾಗಿ ಬೇಗನೆ ಫೈಸಲಾಗಲು ಅವಕಾಶ ಕೊಡುತ್ತಿಲ್ಲ. ಏನಾದರೂ ಒಂದು ರೀತಿಯಾದ ಕೊಕ್ಕೆಹಾಕುವುದು ಇಲ್ಲಿ ರೂಢಿಯಾಗಿದೆ. ಒಂದು ಫೈಲಿನ ಮೇಲೆ ಇಂದು ಇದು ಫೈನಾನ್ಸ್‌ಗೆ ಹೊಗಬೇಕು ಎಂದು ಬರೆಯುವುದು, ಇಲ್ಲ ಪ್ಲಾನಿಂಗು ಇಲಾಖೆಗೆ ಹೋಗಿ ಬರಬೇಕು ಎನ್ನುವುದು ಹೀಗಾಗಿ ಯಾವ ಕೆಲಸಗಳೂ ಬೇಗನೆ ಮುಗಿಯಲು ಬಿಡುವುದಿಲ್ಲ. ಮಂತ್ರಿಗಳ ಹತ್ತಿರ ಬಂದು ಏನಾದರೂ ಸರಿಪಡಿಸೋಣ ಎಂದು ಹೇಳಿದರೆ ಇಲ್ಲಿರುವ ಅಧಿಕಾರಿಗಳು ಇಂತಹ ಒಂದು ಜಾಣತನವನ್ನು ಕಲಿತುಕೊಂಡು ಸೆಕ್ರಟರಿಯಿಂದ ಡೆಪ್ಯೂಟಿ ಸೆಕ್ರಟರಿ ಅಲ್ಲಿಂದ ಅಂಡರು ಸೆಕ್ರಟರಿ ಹೀಗಾಗಿ ಯಾವ ಕಾಗದಪತ್ರಗಳೂ ಕೂಡ ಸರಿಯಾಗಿ ವಿಲೇವಾರಿಯಾಗುತ್ತಿಲ್ಲ. ಉದಾಹರಣೆಯಾಗಿ ಹೇಳಬೇಕಾದರೆ ನಮ್ಮ ಕೋಲಾರದಲ್ಲಿ ಸುಮಾರು 120 ಎಕರೆಗಳಷ್ಟು ಒಳ್ಳೆಯ ಜಮೀನು ಕಾಂಗ್ರೆಸ್ಸು ಸರಕಾರದವರು ಯಾರು ಯಾರಿಗೋ ಬಳುವಳಿಯಂತೆ ಮಾಡಿ ದಾನ ದರ್ಮ ಮಾಡಿದ್ದಾರೆ, ಸರಕಾರದವರು ಇಂತಹ ಜಮೀನನ್ನು ಕೊಡಕೂಡದು ಎಂದು ಗವರ್ನಮೆಂಟ್ ಆರ್ಡರಾಗಿದ್ದರೂ ಇದನ್ನು ಕೊಟ್ಟಿದ್ದಾರೆ.

---

* * * * Matter not recorded as ordered by the Chair.

(ಶ್ರೀ ಪಿ. ವೆಂಕಟಗಿರಿಯಪ್ಪ)

ಬಂಗಾರಪೇಟೆಯಲ್ಲಿ ಅಲ್ಲಿರುವ ಅಮಲ್ದಾರರು ಟೌನ್‌ಗೆ 5 ಮೈಲಿ ಸರಹದ್ದಿನೊಳಗೆ ಇರುವಂಥ ಸೈಟನ್ನು ಕೊಡಬಾರದು ಎಂದು ಸರ್ಕಾರಿ ಆರ್ಡರ್ ಆಗಿದೆ ಎಂದು ಹೇಳಿದರು. ಆದುದರಿಂದ ಅಲ್ಲಿರುವ ಜನ ಅಮಲ್ದಾರರನ್ನು, ಡೆಪ್ಯೂಟಿ ಕಮೀಷನರನ್ನು ಕಂಡರೆ ಏನು ಪ್ರಯೋಜನ ಎಂದು ಸರ್ಕಾರಕ್ಕೆ ಒಂದು ಅರ್ಜಿ ಹಾಕಿದರು. ಅಲ್ಲಿ ಒಬ್ಬ ಬಡವ ಒಂದು ಟೀ ಷಾಪ್ ಇಟ್ಟಿದ್ದಾನೆ. ಅವಕ್ಕೆ 12 ವರ್ಷದಿಂದಲೂ ಗ್ರೌಂಡ್ ರೆಂಟ್ ಕೊಡುತ್ತಾ ಇದ್ದಾನೆ. ಸುಮಾರು 2–3 ಗುಂಟೆ ಜಮೀನು ಇರಬಹುದು. ಆ ಬಡವನಿಗೆ ಕೊಡಿ ಎಂದರೆ ಟೌನ್‌ಗೆ 5 ಮೈಲಿ ವ್ಯಾಪ್ತಿಯೊಳಗೆ ಇರುವಂಥ ಸೈಟುಗಳನ್ನು ಕೊಡಬಾರದು ಎಂದು ಸರ್ಕಾರಿ ಆರ್ಡರ್ ಆಗಿದೆ ಆದರಿಂದ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಇವನ್ನೆಲ್ಲಾ ನೋಡುವುದಕ್ಕೆ ಮಂತ್ರಿಗಳಿಗೆ ಟೈಂ ಇಲ್ಲ. ಅಧಿಕಾರಿಗಳು ಏನು ಬರೆಯುತ್ತಾರೋ ಅದಕ್ಕೆ ರುಜು ಹಾಕುತ್ತಾರೆ. ಮತ್ತು ಸರ್ಕಾರದ ಸೆಕ್ರೆಟೇರಿಯೆಟ್‌ನಲ್ಲೂ ಕೂಡ ಸರಿಯಾಗಿ ಕೆಲಸ ನಡೆಯುವುದಿಲ್ಲ. ಸೆಕ್ರೆಟೇರಿಯೇಟ್‌ನಲ್ಲಿ ಸೆಕ್ರೆಟರಿ ಮತ್ತು ಡೆಪ್ಯೂಟಿ ಸೆಕ್ರೆಟರಿಗಳು ಫೈಲುಗಳನ್ನು ಇಷ್ಟು ಕಾಲ ಮಾತ್ರ ಇಟ್ಟುಕೊಳ್ಳಬಹುದೆಂದು ನಿಗದಿ ಮಾಡಬೇಕು.

6–30 P.M.

ಇನ್ನು ಇರಾಖಾ ಮುಖ್ಯಾಧಿಕಾರಿಗಳ ವಿಷಯ. ಅವರ ಬಗ್ಗೆ ಹೇಳುವುದಾದರೆ ಸ್ಟೇಟ್ ಆಫೀಸರ್ ಯಾವಾಗ ಹೋದರೂ ಸಿಕ್ಕುವುದಿಲ್ಲ. ಯಾವಾಗ ಕೇಳಿದರೂ ಟೂರ್‌ಗೆ ಹೋಗಿದ್ದಾರೆ, ಮನೆಗೆ ಹೋಗಿದ್ದಾರೆ, ಸೆಕ್ರೆಟೇರಿಯೇಟ್‌ಗೆ ಮೀಟಿಂಗ್‌ಗೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಅವರನ್ನು ಕಾಣಬೇಕಾದರೆ ಇನ್ನು ಯಾವರೀತಿ ಕಾಣಬೇಕೋ ನನಗೆ ಗೊತ್ತಾಗುವುದಿಲ್ಲ. ಅವರು ಸೆಕ್ರೇಟೇರಿಯೇಟ್‌ಗೇ ಹೋಗಲಿ, ಎಲ್ಲಿಗಾದರೂ ಹೋಗಲಿ, ಸೆಂಚುರಿ ಕ್ಲಬ್‌ಗೆ ಬೇಕಾದರೂ ಹೋಗಲಿ, ಆದರೆ ಅವರು ಒಂದು ಖಚಿತವಾದ ವೇಳೆಯಲ್ಲಿ ಇರಬೇಕೆಂದು ಮಾಡಬೇಕು.

ಇನ್ನು ಜಿಲ್ಲಾ ಮಟ್ಟದಲ್ಲಿ ಆಡಳಿತ ಬಹಳ ಚೆನ್ನಾಗಿರಬೇಕು. ಡೆಪ್ಯೂಟೀ ಕಮೀಷನರ್ ಆಫೀಸ್ ಅಡ್ಮಿನಿಸ್ಟ್ರೇಷನ್ ಯಾವ ರೀತಿ ಇರಬೇಕು ಎನ್ನುವುದರ ಬಗ್ಗೆ ಶ್ರೀಮಾನ್ ಎ. ಜಿ. ರಾಮಚಂದ್ರರಾಯರ ರಿಪೋರ್ಟ್‌ನಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಈಪೊತ್ತು ಆ ಆಫೀಸಿನಲ್ಲಿ ನೋಡಿದರೆ 10–20 ಜನಕ್ಕೆ ಮಾತ್ರ ಕೆಲಸ ಇರುತ್ತದೆ. ಆದರೆ ಈಪೋತು 29 ಜನ ಮಂತ್ರಿಗಳನ್ನು ಮಾಡಿಬಿಟ್ಟು ಸಭಾನಾಯಕರೇ ಆಗಲಿ ಮಂತ್ರಿಗಳೇ ಆಗಲಿ ದಿನ ಬೆಳಗಾದರೆ ಟೂರ್ ಮಾಡುತ್ತಾ ಇರುತ್ತಾರೆ. ಇದರಿಂದ ಏನಾಗಿದೆ ಎಂದರೆ ಕೋಲಾರದಲ್ಲಿ ಒಂದು ಕಷ್ಟವಾಗಿದೆ. ಅದು ತಿರುಪತಿಗೆ ಹೋಗುವದಾರಿ. ತಿರುಪತಿ ತಿಮ್ಮಪ್ಪ ನಮಗೆ ಕೆಲಸ ಕೊಡಿಸಿಕೊಟ್ಟ ಎಂದು ಒಂದು ಮೂಢ ನಂಬಿಕೆ ಇದೆ. ಅದು ಇರಬಾರದು. ಇದರಿಂದ ಅವರು ತಿರುಪತಿಗೆ ಟೂರು ಹೋಗುವುದರಿಂದ ಅವರು ಬಂದಾಗಲೆಲ್ಲಾ ಡೆಪ್ಯೂಟಿ ಕಮೀಷನರ್ ಇನ್ನು ಇತರ ಆಫೀಸರುಗಳು ಅವರನ್ನು ಸ್ವಾಗತಿಸಲು ಇರಬೇಕು. ಇದರ ಬಗ್ಗೆ ಹಿಂದೆ ನಾನು ಒಂದು ಸಲಹೆ ಮಾಡಿದ್ದೆ. ದಯವಿಟ್ಟು ಮಂತ್ರಿಗಳು ಬಂದ ವೇಳೆಯಲ್ಲಿ ಅವರನ್ನು ಸ್ವಾಗತಿಸಲು ಪ್ರತಿ ಜಿಲ್ಲೆಗೆ ಒಬ್ಬೊಬ್ಬ ರಿಸೆಪ್ಷನ್ ಆಫೀಸರನ್ನು ನೇಮಕ ಮಾಡಿ ಎಂದು. ಅವರು ಬೇಕಾದರೆ 3 ಅಡಿಯೋ 5 ಅಡಿಯೋ ಹೂವಿನ ಹಾರ ಹಾಕಲಿ. ಈಗ ಯಾರು ಬಂದರೂ ಡೆಪ್ಯೂಟಿ ಕಮೀಷನರೂ ಹೋಗಲೇ ಬೇಕು. ಹೋಗದೇ ಇದ್ದರೆ ಅವರ ಮೇಲೆ ಒಂದು ಗುರಿ ಇರುತ್ತೆ. ಡಿ. ಸಿ. ಗೆ ಜಂಬ ಎನ್ನುತ್ತಾರೆ. ಅವರು ಹೇಳಿದಂತೆ ಡಿ.ಸಿ. ನಡೆಯಬೇಕಾಗುತ್ತದೆ. ಆದುದರಿಂದ ಇದನ್ನು ಬಿಟ್ಟು ಪ್ರತಿ ಜಿಲ್ಲೆಗೆ ಒಬ್ಬೊಬ್ಬ ರಿಸೆಪ್ಷನ್ ಆಫೀಸರನ್ನು ನೇಮಿಸಿ.

ಇನ್ನೂ ಕೋಲಾರದಲ್ಲಿ ಒಂದು ಕಾಂಗ್ರೆಸ್ ಆಫೀಸ್ ಇದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಫೌಂಡೇಷನ್ ಹಾಕಿದರು. ಆಗ ಪಿ.ಡಬ್ಲ್ಯು.ಡಿ. ಆಫೀಸಿನವರು ಅಲ್ಲಿ ಬಂದು ಕೆಲಸ ಮಾಡಿದರು. ಈ ಸರ್ಕಾರಿ ಅಧಿಕಾರಿಗಳ ಬಗ್ಗೆ ಅವರು ಹೇಗೆ ಕೆಲಸ ಮಾಡುತ್ತಾರೆ ಎನ್ನುವುದನ್ನು ಈಗಾಗಲೇ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಹೇಳಿದ್ದಾರೆ. ಆ ಕಾಂಗ್ರೆಸ್ ಆಫೀಸು ಕಟ್ಟಡ ಕಟ್ಟುವಾಗ ಎಕ್ಸಿಕ್ಯೂಟೀವ್ ಇಂಜನೀಯರು ದಿನಕ್ಕೆ 3–4 ಗಂಟೆಗಳು ಅಲ್ಲಿರಬೇಕಾದರೆ ಮುಖ್ಯ ಮಂತ್ರಿಗಳು ಹೇಳಿರಬೇಕು ಎನ್ನುವುದು ಗೊತ್ತಾಗುತ್ತದೆ. ಇಲ್ಲದಿದ್ದರೆ ಅವರು ಏತಕ್ಕೆ ಅಲ್ಲೇ ಇರುತ್ತಾರೆ. ಮತ್ತು ಇದರ ಜೊತೆಗೆ ಕಾಂಗ್ರೆಸ್ ಆಫೀಸಿಗೆ, ಅಲ್ಲಿಯ ಭವನ ಕಟ್ಟಲು ದುಡ್ಡು ವಸೂಲ್ಮಾಡುವ ಕೆಲಸವನ್ನು ಅಲ್ಲಿನ ಅಧಿಕಾರಿಗಳೇ ಮಾಡುತ್ತಿದ್ದಾರೆ. ಅದರಿಂದ ಸುಮ್ಮನೆ ಅಧಿಕಾರಿಗಳನ್ನು ಬೈದರೆ ಏನೂ ಪ್ರಯೋಜನ ಇಲ್ಲ. ಕಾಂಗ್ರೆಸ್ಸಿನ ಪಕ್ಷದ ವೈಖರಿ ಈ ರೀತಿ ಇದೆ.

ಆದುದರಿಂದ ಕಾಂಗ್ರೆಸ್ಸಿನ ಮಂತ್ರಿಗಳು ಏನು ಇದ್ದಾರೆ, ಕಾಂಗ್ರೆಸ್ಸಿನ ಮುಖಂಡರು ಏನು ಇದ್ದಾರೆ, ಅವರು ಈ ರೀತಿ ಅಧಿಕಾರಿಗಳನ್ನು ಕೈಯಲ್ಲಿಟ್ಟುಕೊಂಡು ಕೆಲಸ ಮಾಡಿಸುತ್ತಾರೆ. ಇದನ್ನು ನೋಡಿದರೆ ದೇಶವಲ್ಲಿ ಅಧಿಕಾರಿಗಳು ಯಾವ ಮಟ್ಟಕ್ಕೆ ಬೇಕಾದರೂ ಇಳಿಯುವುದಕ್ಕೆ ತಯಾರಾಗಿದ್ದಾರೆ ಎಂದು ಹೇಳಬಹುದು. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಐ. ಸೋಮಶೇಖರಪ್ಪ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇಟ್ಟಿರತಕ್ಕಂಥ ಮೂರು ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ ಈ ಸಾಮಾನ್ಯ ಆಡಳಿತದ ಬಗ್ಗೆ ಮತ್ತು ಈ ಸಭೆಯ ಕೆಲವು ನಾಯಕರು ಮಾತನಾಡಿದ ವಿಷಯದ ಬಗ್ಗೆ ಕೆಲವು ಮಾತುಗಳನ್ನಾಡಲು ಬಯಸುತ್ತೇನೆ.

ನಾವು ಇವೊತ್ತಲ್ಲ ಅನೇಕ ವರ್ಷಗಳಿಂದಲೂ, ಅನೇಕ ಯುಗಗಳಿಂದಲೂ ಈ ಲಂಚದ ಸುದ್ದಿಯನ್ನು ಕೇಳುತ್ತಾ ಇದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ಅನೇಕ ಸದಸ್ಯರು ಕೂಡ ಹೇಳಿದ್ದಾರೆ. ರಾಮಾಯಣ ಮಹಾಭಾರತ ಕಾಲದಲ್ಲೂ ಈ ರೀತಿ ಇತ್ತು ಎಂದು ಹೇಳಿದ್ದಾರೆ. ಕೌಟಿಲ್ಯನ ಕಾಲದಿಂದಲೂ ಈ ಲಂಚಗುಳಿತನ ಯಾವ ರೀತಿ ಇತ್ತು ಎಂದು ಅರ್ಥಶಾಸ್ತ್ರದಲ್ಲೂ ಹೇಳಿದ್ದಾರೆ. ಶ್ರೀಮಾನ್ ಸಿದ್ಧವೀರಪ್ಪನವರು ಹಿಂದೆ ಈ ರಾಜ್ಯದಲ್ಲಿ ಮಂತ್ರಿಗಳಾಗಿದ್ದಾಗಲೂ ಈ ರಾಜ್ಯದಲ್ಲಿ ಲಂಚಗುಳಿತನ ಇತ್ತು ಎನ್ನುವುದನ್ನು ಈ ಸಾರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಶ್ರೀಮಾನ್ ವೀರೇಂದ್ರಪಾಟೀಲ್ ರವರ ಮಂತ್ರಿಮಂಡಲ ಇರುವ ಕಾಲದಲ್ಲಿ ಮಾತ್ರ ಇತ್ತು ಎಂದು ಹೇಳಿದರೆ ಅದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳುತ್ತೇನೆ. ಈ ಲಂಚಗುಳಿತನ ಅಥವಾ ಕರಪ್ಷನ್ ವಿಷಯದಲ್ಲಿ ವರದಿ ಮಾಡಲು ಲಾಲ್ ಬಹದ್ದೂರ್ ಶಾಸ್ತ್ರಿಗಳು ಪ್ರಧಾನ ಮಂತ್ರಿಗಳಾಗಿದ್ದಾಗ ಸಂತಾನಂ ಕಮಿಟಿಯನ್ನು ನೇಮಿಸಿದರು. ಅದರಲ್ಲಿ ಈ ರೀತಿ ಹೇಳಿದ್ದಾರೆ.—

> "There is general impression that it is difficult to get things done without resorting to corruption, Scope for corruption is greater and the incentive to corrupt stronger at those points of the organisation where substantive decisions are taken in matters like assessment and collection of taxes, determination of eligibility for obtaining licences, grant of licences, ensuring fair utilisation of licences and goods obtained thereunder, giving of contracts, approval of works and acceptance of supplies."

ಈ ರೀತಿ ಲಂಚಗುಳಿತನ ಲಾಲ್ ಬಹದ್ದೂರ್ ಶಾಸ್ತ್ರಿಗಳ ಕಾಲದಲ್ಲೂ ಇತ್ತು; ಕೌಟಿಲ್ಯನ ಕಾಲದಿಂದಲೂ ಇತ್ತು. ಆದರೆ ಈ ಲಂಚಗುಳಿತನ ಈಗ ಜಾಸ್ತಿಯಾಗಿದೆಯೇ? ಕಡಿಮೆಯಾಗಿದೆಯೇ? ಅಥವಾ ಅದೇ ಪ್ರಮಾಣದಲ್ಲಿದೆಯೇ? ಅದನ್ನು ಯೋಚನೆ ಮಾಡಬೇಕಾಗಿದೆ. ಶ್ರೀಮಾನ್ ಸಿದ್ಧವೀರಪ್ಪನವರು ಆಡಳಿತದಲ್ಲಿದ್ದಾಗ ಯಾವ ಪ್ರಮಾಣದಲ್ಲಿತ್ತು? ಎಷ್ಟು ಕೇಸುಗಳು ಇತ್ತು? ಇವೊತ್ತು ಎಷ್ಟು ಕೇಸುಗಳು ಇವೆ? ಎನ್ನುವ ಅಂಕಿಅಂಶಗಳು ಅವರು ಸಭೆಯ ಮುಂದೆ ಇಟ್ಟಿಲ್ಲ. ಅವರು ಅನುಭವಸ್ಥರಾದವರು. ಅವರು ಈ ಸಭೆಯಲ್ಲಿ ನಮ್ಮ ರಾಜ್ಯದ ಕೆಲವು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳ ಬಗ್ಗೆ ಕೆಲವು ಅಪಾದನೆಗಳನ್ನು ಮಾಡಿದ್ದಾರೆ. ಅದನ್ನೂ ಕೂಡ ಸ್ಪಷ್ಟ ಮಾಡಿಲ್ಲ. ಇದು ವೈಲ್ಡ್ ಅಲಿಗೇಷನ್ ಇದ್ದಹಾಗೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅನಿಮಲ್ ಹಸ್ಬೆಂಡರಿ ಬಗ್ಗೆ ಮತ್ತು ಸಹಕಾರಿ ಮಂತ್ರಿಗಳ ಬಗ್ಗೆ ಲಂಚಗುಳಿತನದ ಬಗ್ಗೆ ಹೇಳಿದ್ದಾರೆ. ಅವರು ಯಾವ ಸಂದರ್ಭದಲ್ಲಿ ಲಂಚ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಅವರು ಹೇಳಿದ್ದಾರೆಯೇ? ಹೇಳಿದ್ದರೆ ಬಹಳ ಸಂತೋಷವಾಗುತ್ತಿತ್ತು. ಅದೂ ಅಲ್ಲದೆ; ಶ್ರೀಮಾನ್ ಕೆ. ಹೆಚ್. ಪಾಟೀಲರೂ ಕೂಡ ಪ್ರೂವ್ ಮಾಡುತ್ತೇನೆಂದು ಹೇಳುತ್ತಾರೆ.

Sri H. SIDDAVEERAPPA.—If the hon. member were to yield, I would like to make a personal explanation. I have stated I will give in writing my complaint to the Leader of the House if he so wants. That being the case, I do not know how the hon. member says that I have made vague and wild allegations. As a matter of fact, any

(SRI H. SIDDAVEERAPPA)

complaint made by any citizen in this country is as good as complaint made by the highest man in this country because every citizen is entitled to be heard with due respect. Moreover, this is not an anonymous petition. It is a signed petition. May be there motives, as the Leader of the House said. But the fact remains that allegations have been made and there are as many 52 specific allegations. It does not mean that Siddaveerappa himself must contribute his signature to it and give it and then alone it is going to have any weight. That is a diffrent matter. Now what I am saying is that I have not got any agency to make enquiry. If really the Government want me to conduct an enquiry, let them place the Criminal Investigation Department or the Vigilance Department at my disposal for a week and then I shall enquire and give specific chargesheets in writing.

Even in Britain in the Profuma case nobody saw that woman sleeping with the Minister, but somebody got information that both of them were together and that information was brought to the notice of the House. Nobody asked "Did you see him sleeping with the woman?" So it is not fair for the hon. Member to say that I have made vague and wild allegations. Whatever information I got I have passed on.

ಶ್ರೀ ಐ. ಸೋಮಶೇಖರಪ್ಪ.—ನನ್ನ ಅಧೀನದಲ್ಲಿ ಅಧಿಕಾರ ವರ್ಗದವರಿಲ್ಲ, ಆದ್ದರಿಂದ ಆ ರೀತಿ ಪರೀಕ್ಷೆ ಮಾಡುವ ಅವಕಾಶವಾಗಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರು ಹೇಳಿರುವುದು ಒಂದು ರೀತಿಯ ವೇಗ್ ಅಲಿಗೇಷನ್ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

> "A great deal of vague allegations is made. This can be reduced only if there are agencies which a person can approach to redress, with the assurance that he will be fully protected and prompt action will be taken."

ಎಂದು ಸಂತಾನಂ ಕಮಿಟಿಯವರು ಒಂದು ಕಡೆ ಹೇಳಿದ್ದಾರೆ. ಇನ್ನೊಂದು ಕಡೆ ಅವರು ಹೀಗೆ ಹೇಳಿದ್ದಾರೆ.

> "We recognize that irresponsible allegations cannot be taken note of".

ಹೀಗಿದ್ದಾಗ ಅವರು ಅರ್ಥ ಮಾಡಿಕೊಳ್ಳಬೇಕು; ಸಾಧ್ಯವಾದಷ್ಟೂ ಪ್ರಮಾಣಿಸದೆ ಈ ರೀತಿಯ ವೇಗ್ ಅಲಿಗೇಷನ್ಸ್ ಮಾಡಬಾರದು. ಅದುವರಿಂದ ಏನಾಗುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಪತಿವ್ರತೆಯಾಗಿರುವ ಹೆಣ್ಣು ಮಗಳಿಗೆ ಆಕೆಯ ಗಂಡ ನೀನು ಭ್ರಷ್ಟಳಾಗಿದ್ದೀಯೋ, ನೀನು ಶೀಲವನ್ನು ಕಳೆದುಕೊಂಡಿದ್ದೀಯೋ ಎಂದು ಹೇಳುತ್ತ ಹೋದರೆ ಯಾವ ಹೆಣ್ಣು ಮಗಳ ಪರಿಸ್ಥಿತಿಯಾದರೂ ಏನಾಗುತ್ತದೆ ಎಂಬುದನ್ನು ತಿಳಿದುಕೊಳ್ಳಿ. ನನ್ನ ಪತಿ ನನ್ನ ಶೀಲದ ಬಗ್ಗೆ ಸಂಶಯ ಪಡುತ್ತಿದ್ದಾನೆ ಎಂದು ಕೊನೆಗೆ ತನ್ನ ಪಾತಿವ್ರತ್ಯವನ್ನು ಕಳೆದುಕೊಳ್ಳುವ ಮಟ್ಟಕ್ಕೆ ಬರುತ್ತಾಳೆ. ಈ ರಾಜ್ಯದಲ್ಲಿನ ಜನತೆಯನ್ನು ಗಂಡಸಿಗೂ, ಸರ್ಕಾರವನ್ನು ಹೆಣ್ಣು ಮಗಳಿಗೂ ನಾವು ಹೋಲಿಸಿದರೆ, ಎಲ್ಲಿಗೆ ಬರುತ್ತದೆ ಎನ್ನುವುದನ್ನು ಯೋಚನೆ ಮಾಡಿ. ಸರ್ಕಾರಿ ಅಧಿಕಾರಿಗಳು ಲಂಚ ತೆಗೆದುಕೊಳ್ಳದೆ ಇದ್ದರೂ ಸುಮ್ಮನೆ ಅಪಾದನೆಗೆ ಒಳಗಾಗಬೇಕಾಗಿರುತ್ತದೆ, ಆದ್ದರಿಂದ ಲಂಚ ಏಕೆ ತೆಗೆದುಕೊಳ್ಳಬಾರದು ಎಂದು ಯೋಚನೆ ಮಾಡುತ್ತಾರೆ. ಆದ್ದರಿಂದ ವೇಗ್ ಮತ್ತು ವೈಲ್ಡ್ ಅಲಿಗೇಷನ್ ಮಾಡುವುದನ್ನು ಮಾನ್ಯ ಸದಸ್ಯರು ಕಡಮೆ ಮಾಡಬೇಕು. ನಿರ್ದಿಷ್ಟವಾದ ಅಲಿಗೇಷನ್ಸ್ ಮಾಡಿದ್ದರೆ ಚೆನ್ನಾಗಿತ್ತು. ಈ ಸಂದರ್ಭದಲ್ಲಿ ಒಂದೇ ಒಂದು ವಿಷಯವನ್ನು ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಇಲಾಖೆಗಳಲ್ಲಿ ಕೆಲಸವನ್ನು ಮಾಡುವು

ದಕ್ಕೆ ಸಿದ್ಧರಿಲ್ಲದೆ ಇರುವ ನೌಕರರಿದ್ದಾರೆ. ಅಂಥ ಅಧಿಕಾರಿಗಳಿಗೆ, ತಾವಾಗಿಯೇ ವಾಲಂಟರಿಯಾಗಿ ನಿವೃತ್ತರಾಗುವ ಮನೋಭಾವವಿರುವವರಿಗೆ ಸರ್ಕಾರ ಖಂಡಿತವಾಗಿ ಅವಕಾಶ ಮಾಡಿಕೊಡಬೇಕು. ಮನಸ್ಸಿಲ್ಲದ ಕುದುರೆಯನ್ನು ನೀರಿಗೆ ತೆಗೆದುಕೊಂಡು ಹೋದರೂ ಅದು ಖಂಡಿತವಾಗಿ ನೀರು ಕುಡಿಯುವುದಿಲ್ಲ. ಯಾವುದೇ ಇಲಾಖೆಯಲ್ಲಿ ಅಧಿಕಾರಿಗಳಿಗೆ ಆಪ್ಷನ್ ಕೊಟ್ಟು, ಅವರು ಆ ಇಲಾಖೆಯಲ್ಲಿ ಇರುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ಅಂಥ ಅಧಿಕಾರಿಗಳು ತಾವಾಗಿಯೇ ನಿವೃತ್ತರಾಗುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಸಿದ್ಧವೀರಪ್ಪನವರು ಅನೇಕ ವೇಳೆ ಹೇಳಿದ್ದಾರೆ, ಹಿಂದಿನ ಮುಖ್ಯ ಮಂತ್ರಿಗಳು ಒಬ್ಬ ಜಿಲ್ಲಾಧಿಕಾರಿ ಲಂಚಕೋರನಿದ್ದಾನೆ ಎಂದು ಹೇಳಿದಾಗ, ಏನು ಮಾಡುವುದಕ್ಕೂ ಸಾಧ್ಯವಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ ಎಂದು. ಈ ಸಂದರ್ಭದಲ್ಲಿ ನಾನು ಮಾನ್ಯ ಸಿದ್ಧವೀರಪ್ಪನವರಿಗೆ ಹೇಳಬಯಸುವುದು ಏನೆಂದರೆ ರಾಜ್ಯಾಂಗದ 311ನೇ ಆರ್ಟಿಕಲ್ ಏನಿದೆ ಎನ್ನುವುದನ್ನು ಅವರು ದಯವಿಟ್ಟು ಚೆನ್ನಾಗಿ ಓದಲಿ. ಸಂತಾನಂ ಕಮಿಟಿ ರಿಪೋರ್ಟಿನಲ್ಲಿ ಈ ಬಗ್ಗೆ ಏನು ಹೇಳಿದ್ದಾರೆಂಬುದನ್ನು ನಾನು ಓದಿದ್ದೇನೆ. ಪ್ರಪಂಚದಲ್ಲಿ ಪ್ರಜಾಪ್ರಭುತ್ವವಿರತಕ್ಕ ರಾಷ್ಟ್ರದಲ್ಲಿ ಅಧಿಕಾರಿಗಳಿಗೆ ಹೆಚ್ಚು ರಕ್ಷಣೆಯನ್ನು ಕೊಟ್ಟಿರತಕ್ಕ ರಾಷ್ಟ್ರವೆಂದರೆ ಅದು ಭಾರತ ರಾಷ್ಟ್ರ ಮತ್ತು ಭಾರತ ರಾಜ್ಯಾಂಗ. ಆದುದರಿಂದ ಸರ್ಕಾರದ ಅಧಿಕಾರಿಗಳು ಲಂಚಕೋರರಾದರೂ ಸಹ ಕಾನೂನಿನ ತೊಡಕಿನಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದುದರಿಂದ ಇದಕ್ಕೆ ರಾಜ್ಯಾಂಗದ 311ನೇ ಆರ್ಟಿಕಲ್ ಬದಲಾವಣೆಯಾಗುವವರೆಗೆ ಅಧಿಕಾರಿಗಳಲ್ಲಿ ಸಂಪೂರ್ಣವಾಗಿ ಲಂಚಕೋರತನವನ್ನು ಕಡಮೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಬಯಸುತ್ತೇನೆ.

†ಶ್ರೀ ಬೋಳ ರಘುರಾಮ ಶೆಟ್ಟಿ.—ಮಾನ್ಯ ಸಭಾಪತಿಗಳೇ, ಈ ಸಭೆಯ ಮುಂದೆ ಇಟ್ಟಂಥ ಮೂರು ಬೇಡಿಕೆಗಳನ್ನೂ ನಾನು ವಿರೋಧಿಸುತ್ತೇನೆ. ನಾವು ಪ್ರಜಾಪ್ರಭುತ್ವವನ್ನು ಸ್ವೀಕಾರ ಮಾಡಿದ್ದೇವೆ. ನಮ್ಮ ದೇಶದ ಮತ್ತು ರಾಜ್ಯದ ಸರ್ಕಾರವನ್ನು ಘಟನಾತ್ಮಕವಾಗಿ ನಡೆಸಬೇಕು ಎಂದು ಘಟನೆ ಕೂಡ ಮಾಡಿಕೊಂಡಿದ್ದೇವೆ. ಘಟನಾತ್ಮಕವಾಗಿ, ನ್ಯಾಯವಾಗಿ ಸರ್ಕಾರ ನಡೆಯಬೇಕಾದರೆ ಸರ್ಕಾರವನ್ನು ನಡೆಸುವವರ ಮೇಲೆ ಮುಖ್ಯವಾದ ಒಂದು ಜವಾಬ್ದಾರಿ ಇದೆ. ಏನೆಂದರೆ ಪ್ರಜಾಪ್ರಭುತ್ವವನ್ನು ಉಳಿಸುವಂಥದ್ದು ಮತ್ತು ಘಟನೆ ಸರಿಯಾಗಿ ಸರ್ಕಾರವನ್ನು ನಡೆಸುವಂಥದ್ದು. ಈಗ ಈ ಸಭೆಯಲ್ಲಿ ಈವೊತ್ತು ಎಲ್ಲ ಸದಸ್ಯರೂ ಕೂಡ ಲಂಚ ಮತ್ತು ಪಕ್ಷಪಾತದ ವಿಷಯ ಮಾತನಾಡಿದ್ದಾರೆ. ಮತ್ತು ಮುಖ್ಯವಾಗಿ ಟ್ರೆಜರಿ ಬೆಂಚಿನ ಕಡೆ ಮಾತನಾಡಿದ ಕೆಲವು ಮಹನೀಯರು ಲಂಚ, ಪಕ್ಷಪಾತ ಇದನ್ನೆಲ್ಲ ನಮ್ಮ ದೇಶದಲ್ಲಿ ನಿಲ್ಲಿಸಲಿಕ್ಕೆ ಸಾಧ್ಯವಿಲ್ಲ, ನಾವು ಅಸಹಾಯಕರಾಗಿದ್ದೇವೆ ಎಂದು ಹೇಳಿದ್ದಾರೆ. ನಿಜವಾಗಿ ಅವರು ಈ ರೀತಿಯಿಂದ ಅಭಿಪ್ರಾಯ ಪಡುವಂಥದ್ದು ನಮ್ಮ ದೇಶದ ಅಧಃಪತನಕ್ಕೆ ಕಾರಣವಾದ ಅಭಿಪ್ರಾಯ. ಒಂದು ರಾಜ್ಯದಲ್ಲಿ, ಒಂದು ಆಡಳಿತೆಯಲ್ಲಿ, ಯೋಗ್ಯ ಮತ್ತು ನಿಷ್ಪಕ್ಷಪಾತವಾದ ಮುಖ್ಯಾಧಿಕಾರಿ ಇದ್ದರೆ ನಿಜವಾಗಿ ಆತನ ಕೈಕೆಳಗೆ ಕೆಲಸ ಮಾಡುವ ಇತರ ಅಧಿಕಾರಿಗಳೂ ಹೆದರಿಕೆಯಿಂದ ಕೆಲಸ ಮಾಡುತ್ತಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ಮನೆಯಲ್ಲಿ ಯಜಮಾನನೇ ಸರಿಯಾಗಿ ಇಲ್ಲದೆ ಇದ್ದರೆ ಮನೆಯಲ್ಲಿರುವ ಇತರ ಜನರು ಕೂಡ ಮನೆಯ ಧರ್ಮಕ್ಕೆ ಸರಿಯಾಗಿರುವುದಿಲ್ಲ.

ಪ್ರಜಾಪ್ರಭುತ್ವ ಉಳಿಯಬೇಕಾದರೆ ನಮ್ಮ ರಾಜ್ಯದಲ್ಲಿ ಲಂಚಕೋರತನ ಮತ್ತು ಪಕ್ಷಪಾತತನ ನಿಲ್ಲಬೇಕು. ಚೈನಾದಲ್ಲಿ ಕಮ್ಯೂನಿಸ್ಟ್ ಸರ್ಕಾರ ಬರುವುದಕ್ಕೆ ಮುಂಚೆ ಇದೇ ಪರಿಸ್ಥಿತಿ ಇತ್ತು, ಅಲ್ಲಿಗೆ ಅಮೇರಿಕಾದವರು ಬೇಕಾದಷ್ಟು ಸಹಾಯ ಮಾಡಿದ್ದರು. ಆದರೆ ಅದು ದೇಶ ರಕ್ಷಣೆಗೆ ಉಪಯೋಗವಾಗುತ್ತಿರಲಿಲ್ಲ, ಅಧಿಕಾರಿಗಳ ಕಮಿಷನ್‌ಗೆ ಹೋಗುತ್ತಿತ್ತು. ಹಾಗೆ ನಮ್ಮಲ್ಲೂ ಅಗುತ್ತಿದೆ. ಇದೇ ಪರಿಸ್ಥಿತಿಯನ್ನು ಮುಂದುವರೆಸಿದರೆ ಪ್ರಜಾಪ್ರಭುತ್ವಕ್ಕೂ ಗಂಡಾಂತರ, ದೇಶಕ್ಕೂ ಗಂಡಾಂತರ. ದೇಶದಲ್ಲಿ ಈಗ ಪ್ರಜೆಗಳು ದಂಗೆಯೇಳುವ ಪರಿಸ್ಥಿತಿ ಇದೆ. ಜಗತ್ತಿನಲ್ಲಿ ಅತಿ ಹೆಚ್ಚಿನ ತೆರಿಗೆ ಇರುವ ದೇಶಗಳಲ್ಲಿ ನಮ್ಮ ದೇಶವೂ ಕೂಡ ಒಂದಾಗಿದೆ. ಆದರೂ ಕೂಡ ನಮ್ಮ ದೇಶ ಜಗತ್ತಿನಲ್ಲಿ ಬಡತನದ ದೇಶವಾಗಿದೆ. ಈ ರೀತಿಯಲ್ಲಿ ಜನರಿಂದ ಪಡೆದ ತೆರಿಗೆಯನ್ನು ಸರ್ಕಾರದವರು ಸದ್ವಿನಿಯೋಗ ಮಾಡುವ ಮತ್ತು ಅದರ ಸಂಪೂರ್ಣ ಪ್ರತಿಫಲ ಕೊಡುವ ಜವಾಬ್ದಾರಿ ಸರ್ಕಾರಕ್ಕಿದೆ. ಹೀಗಿರುವಾಗ ಸರ್ಕಾರದ ಯಂತ್ರ ಸರಿಯಾಗಿ ಕೆಲಸ ಮಾಡಬೇಕಾಗಿತ್ತು. ಅದು ಸರಿಯಾಗಿ ಕೆಲಸ ಮಾಡಬೇಕಾದರೆ ಮುಖ್ಯವಾಗಿ ನಮ್ಮ ರಾಜ್ಯದಲ್ಲಿರುವ ಮಂತ್ರಿಗಳು ಸರಿಯಾಗಿ ಮೊದಲು ಕೆಲಸ ಮಾಡಬೇಕು. ಹಾಗೆ ಮಾಡಿದರೆ ಸೆಕ್ರೆಟೇರಿಯಟ್ ಕೆಲಸ ಸುಸೂತ್ರವಾಗುವುದು ಮತ್ತು ತಾಲ್ಲೂಕು ಮಟ್ಟದಲ್ಲಿರುವ ಆಡಳಿತ ಯಂತ್ರ ಕೂಡ ಸರಿಯಾಗಿ ಕೆಲಸಮಾಡು

(ಶ್ರೀ ಬೋಳ ರಘುರಾಮಶೆಟ್ಟಿ)

ವುದು. ಆದರೆ ನಮ್ಮಲ್ಲಿ ಯಾರೂ ಕೂಡ ಮಾರ್ಗದರ್ಶನ ಮಾಡುವ ರೀತಿಯಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಮಂತ್ರಿಗಳು ಸರಿಯಾಗಿ ಕೆಲಸ ಮಾಡಿದ್ದರೆ ಜನರಿಗೆ ಸಂತೋಷವಾಗಿ ಅಪವಾದ ಬರುವುದೂ ಕಡಮೆಯಾಗುತ್ತಿತ್ತು, ಪ್ರಜಾಪ್ರಭುತ್ವವೂ ಯಶಸ್ವಿಯಾಗುತ್ತಿತ್ತು. ಇಂದು ಪೋಲೀಸರ ಮೇಲೆ ಜನರಿಗೆ ವಿಶ್ವಾಸವಿಲ್ಲ. ಏಕೆಂದರೆ ಜನರಿಂದ ದೂರು ಬಂದಾಗ ಅವರು ಸರಿಯಾಗಿ ಕ್ರಮ ತೆಗೆದುಕೊಳ್ಳುವುದಿಲ್ಲ. ಸರಿಯಾಗಿ ಅವರು ವರ್ತಿಸದಿದ್ದರೆ ಜನರಿಗೆ ವಿಶ್ವಾಸ ಬರುವುದಿಲ್ಲ. ನಮ್ಮ ರಾಜ್ಯದಲ್ಲಿ ಕೂಡ ಲಂಚ, ಪಕ್ಷಪಾತ, ಅಪವಾದ ಈಗ ಹೆಚ್ಚಾಗಿದೆ. ಸರ್ಕಾರ ನಡೆಸುವವರು ಆತ್ಮ ಪರಿಶೋಧನೆ ಮಾಡಿಕೊಳ್ಳಬೇಕು. ಬಂದ ಅಪವಾದಗಳಲ್ಲಿ ನೇಕಡ ಎರಡರಷ್ಟನ್ನಾದರೂ ಸರಿಯಾಗಿ ಪರಿಶೀಲನೆ ಮಾಡಿ ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಿದ್ದರೆ ಇಂದು ಈ ಪರಿಸ್ಥಿತಿ ಇರುತ್ತಿರಲಿಲ್ಲ, ದೇಶಕ್ಕೆ ಒಳ್ಳೆಯದಾಗುತ್ತಿತ್ತು. ಮೇಲಾಗಿ ನಮ್ಮ ಅಧಿಕಾರಿಗಳು ಕೂಡ ಬ್ರಿಟಿಷರ ಕಾಲದಲ್ಲಿದ್ದವರು, ಬಹಳ ಬದಲಾವಣೆಯಾಗಿಲ್ಲ. ಆಗ ಒಳ್ಳೆಯ ಕೆಲಸ ಮಾಡುತ್ತಿದ್ದರು. ನ್ಯಾಯಾಲಯದಲ್ಲಿ ಚೆನ್ನಾಗಿ ನ್ಯಾಯವಿಮರ್ಶೆ ಮಾಡಿ ಒಳ್ಳೆಯ ತೀರ್ಪನ್ನು ಕೊಡುತ್ತಿದ್ದರು. ಬ್ರಿಟಿಷರನ್ನು ನಮ್ಮ ದೇಶದಿಂದ ಕಳಿಸಿದ್ದರೂ ಅವರು ಕೆಲವು ಒಳ್ಳೆಯ ಮಾರ್ಗದರ್ಶನ ಮಾಡಿದ್ದಾರೆ. ಅದನ್ನು ಮರೆಯುವುದು ಸರಿಯಲ್ಲ. ಪ್ರಜಾಪ್ರಭುತ್ವವನ್ನುಳಿಸುವುದು ಎಲ್ಲರ ಜವಾಬ್ದಾರಿ. ಕಾನೂನಿಗೆ ಪ್ರತಿಯೊಬ್ಬರೂ ಗೌರವ ಕೊಡಬೇಕು, ಪ್ರತಿಯೊಬ್ಬರೂ ಕೂಡ ನಿಷ್ಪಕ್ಷಪಾತವಾಗಿ ನ್ಯಾಯ ಮತ್ತು ಧರ್ಮದಿಂದ ಕೆಲಸ ಮಾಡಬೇಕು, ಈ ಜವಾಬ್ದಾರಿ ಎಲ್ಲರಿಗೂ ಇರುವುದು, ಅದರಲ್ಲೂ ಆಡಳಿತ ನಡೆಸುವವರಿಗೆ ಈ ಜವಾಬ್ದಾರಿ ಹೆಚ್ಚಾಗಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಮುಖ್ಯ ಮಂತ್ರಿಗಳು ಮಂಡಿಸಿರುವ ಮೂರು ಬೇಡಿಕೆಗಳನ್ನು ನಾನು ಅನುಮೋದಿಸುತ್ತೇನೆ. ಈಗ ಸಾಮಾನ್ಯ ಆಡಳಿತದಲ್ಲಿ ಕಾಗದಗಳು ಜಾಗ್ರತೆ ಇತ್ಯರ್ಥವಾಗುತ್ತಿಲ್ಲ. ಕಾಗದ ಬಂದ 8 ದಿವಸಗಳಲ್ಲಿ ಇತ್ಯರ್ಥವಾಗಬೇಕೆಂದು ಮಂತ್ರಿಗಳು ತಿಳಿಸಿದ್ದರೆ ಜಾಗ್ರತೆ ಡಿಸ್‌ಪೋಸ್ ಆಗುತ್ತಿದ್ದವು. ಹಾಗೆ ಮಾಡದಿದ್ದರೆ ಲಂಚಕ್ಕೆ ಅವಕಾಶವಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಕಾಗದಗಳು ಜಾಗ್ರತೆ ಡಿಸ್‌ಪೋಸ್ ಆಗುವುದಕ್ಕೆ ವ್ಯವಸ್ಥೆ ಮಾಡಬೇಕು.

ಹಿಂದೆ ಇಂಗ್ಲೀಷರ ಕಾಲದಲ್ಲಿದ್ದ ಬಂದೀಖಾನೆಗಳಿಗೂ ಇಂದು ಇರುವ ಬಂದೀಖಾನೆಗಳಿಗೂ ವ್ಯತ್ಯಾಸವಿದೆ. 20 ವರ್ಷದಿಂದ ಕಾಂಗ್ರೆಸ್ ಸರ್ಕಾರ ಬಂದಮೇಲೆ ಬಂದೀಖಾನೆಗಳಲ್ಲಿ ಒಳ್ಳೆಯ ಅನುಕೂಲ ಮಾಡಲಾಗಿದೆ. ಅವು ಚನ್ನಾಗಿವೆ. 1947 ರಿಂದ 69 ರವರೆಗೂ ಒಂದೇ ಪಕ್ಷ ರಾಜ್ಯಭಾರವನ್ನು ನಡೆಸುತ್ತಿದೆ, ಆದುದರಿಂದ ಅದಕ್ಕೆ ಪಾಠ ಹೇಳಿಕೊಡಬೇಕಾದ ಅಗತ್ಯವಿಲ್ಲ. ಇಂಗ್ಲೀಷರ ಕಾಲದಲ್ಲಿ ಬಂದೀ ಖಾನೆಗಳು ಹೇಗಿದ್ದವು, ಈಗ ಹೇಗಿವೆ ಎಂದು ನೋಡಿದರೆ ನಾವೂ ಮೆಚ್ಚುವಂತಿವೆ, ನೀವೂ ಮೆಚ್ಚುವಂತಿವೆ. ಸುಮ್ಮನೆ ಟೀಕೆ ಮಾಡಬಾರದು. ಇನ್ನು ಮೂರು ವರ್ಷಕ್ಕೆ ಮಾಡಬೇಕಾದ ಪ್ರಚಾರ ಕೆಲವರು ಈಗಲೇ ಮಾಡುತ್ತಿರುವಂತೆ ಕಾಣುತ್ತದೆ. ಇದು ಸರಿಯಲ್ಲ. ಯಾರೇ ಆಗಲಿ, ತಮ್ಮ ಕ್ಷೇತ್ರದಲ್ಲೇನು ಕೆಲಸವಾಗಬೇಕು, ರೈತರಿಗೇನು ಸಹಾಯಮಾಡಬೇಕು ಎಂಬುದನ್ನು ಯೋಚನೆ ಮಾಡಿ ಆಯಾ ಇಲಾಖೆಗೆ ಹೋಗಿ ಆ ಕೆಲಸವನ್ನು ನಾವು ಮಾಡಿಸಿಕೊಟ್ಟರೆ ಜನರಿಗೆ ನಮ್ಮಲ್ಲಿ ಪ್ರೀತಿಯಿರುತ್ತದೆ. ಹಾಗೆ ಮಾಡದೆ ಮಂತ್ರಿಗಳು ಲಂಚ ತಿಂದರು, ಹಾಗೆ ಮಾಡಿದರು, ಹೀಗೆ ಮಾಡಿದರು ಎಂದು ದೂರುವುದು, ಸುಮ್ಮನೆ ಆರೋಪಮಾಡುವುದು ಯುಕ್ತವಲ್ಲ, ಹೇಳುವವರು ತಮ್ಮ ಆತ್ಮ ಶೋಧನೆ ಮಾಡಿಕೊಳ್ಳಬೇಕು. ಹಾಗೆ ಮಾಡಿಕೊಂಡು ನಂತರ ಇನ್ನೊಬ್ಬರನ್ನು ಟೀಕೆಮಾಡಬೇಕು. ಈಗ ನಮ್ಮ ಪಕ್ಷದಲ್ಲಿ ಹಿಂದಿದ್ದವರು ಎದುರು ಪಕ್ಷದಲ್ಲಿದ್ದಾರೆ, ಕಾಂಗ್ರೆಸ್ ಸರ್ಕಾರ ಅವರು ನಡೆಸುತ್ತಿದ್ದಾಗ ಏಕೆ ಚೆನ್ನಾಗಿತ್ತು, ಈಗೇಕೆ ಚೆನ್ನಾಗಿಲ್ಲ ಎಂಬುದನ್ನು ಯೋಚನೆಮಾಡಬೇಕು. ಕಾಂಗ್ರೆಸ್ ಪಕ್ಷ ಬಿಟ್ಟು ಹೋಗಿ ಎದುರು ಪಕ್ಷದಲ್ಲಿ ಕುಳಿತು ಟೀಕೆ ಮಾಡುವುದು ಸರಿಯೇ ಎಂಬುದನ್ನು ಯೋಚನೆ ಮಾಡಬೇಕು. ಸಿದ್ದವೀರಪ್ಪನವರು, ಚನ್ನಯ್ಯನವರು, ಚನ್ನಬಸಪ್ಪನವರು ಕಾಂಗ್ರೆಸ್ ಪಕ್ಷದಲ್ಲಿದ್ದಾಗ ನಾವು ಅವರ ಜೊತೆಯಲ್ಲಿ ಕೆಲಸಮಾಡಿದ್ದೇವೆ. ಕಾಂಗ್ರೆಸ್ ಸಂಸ್ಥೆ ಕಟ್ಟಿದ್ದೇವೆ. ಹಾಗಿರುವಾಗ ಅವರು ಇಂದು ಎದುರು ಪಕ್ಷದಲ್ಲಿ ಇದ್ದುಕೊಂಡು ಟೀಕೆ ಮಾಡುವುದನ್ನು ನೋಡಿದರೆ ಅನ್ಯಾಯ ವೆನಿಸುತ್ತದೆ.

7-00 P.M.

ಅವರು ಈಗಲೂ ಕೂಡ ಒಂದು ವಿಶಾಲ ಭಾವನೆಯಿಂದ ಕಾಂಗ್ರೆಸ್‌ನಲ್ಲಿ ಬಂದು ಸೇರಿ ಕಾಂಗ್ರೆಸ್‌ಗೆ ಕೀರ್ತಿ ತರಬೇಕೆಂದು ಹೇಳಿ ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಶ್ರೀಮಾನ್

ಎಸ್. ಚನ್ನಯ್ಯನವರು ಹಿಂದೆ ಕಾಂಗ್ರೆಸ್ ಪ್ರೆಸಿಡೆಂಟರಾಗಿದ್ದರು, ಅವರನ್ನು ಚಿಕ್ಕಬಳ್ಳಾಪುರಕ್ಕೆ ಕರೆದುಕೊಂಡು ಹೋಗಿ ಮೆರವಣಿಗೆ ಮಾಡಿ ಸತ್ತಾರು ಸಾವಿರ ಜನಕ್ಕೆ ಅನ್ನ ಹಾಕಿಸಿದ್ದೇವೆ. ಅವರಲ್ಲಿ ಒಳ್ಳೆಯ ಗುಣ ಇದೆ. ಅವರು ಹಿಂದೆ ಕಾಂಗ್ರೆಸ್ ಸಂಸ್ಥೆಯನ್ನು ಬಹಳ ಚೆನ್ನಾಗಿ ಭದ್ರಪಡಿಸಿದ್ದರು, ಆದರೆ ಈಗ ಅವರು ಆಕಸ್ಮಾತ್ ಜಾರಿಕೊಂಡಿದ್ದಾರೆ. ಇದು ಹೇಗೋ ಏನೋ ಅರ್ಥವಾಗುತ್ತಿಲ್ಲ. ಆದ್ದರಿಂದ ಸುಮ್ಮನೆ ಟೀಕೆ ಟಿಪ್ಪಣಿಗಳನ್ನು ಮಾಡಬೇಡಿ, ಅದರಲ್ಲಿ ಹುರುಳು ಏನಾದರೂ ಇದ್ದರೆ ತಿರುಳು ಏನಾದರೂ ಇದ್ದರೆ ಟೀಕೆ ಮಾಡಿ. ನಿಮ್ಮ ಜೊತೆಯಲ್ಲಿ ನಾವು ಇರುತ್ತೇವೆ. ಸುಮ್ಮನೆ ಬಾಯಿಗೆ ಬಂದ್ದದ್ದು—ತಿಪದ್ಯಕ್ಕೆ ಅಪ್ಪಣೆ ಎಂದರೆ ಬಾಯಿಗೆ ಬಂದದ್ದೇ ಮಂತ್ರ ಅಂತ ಅನ್ನುವ ಹಾಗೆ—ಹೇಳುವುದರಲ್ಲಿ ಅರ್ಥವಿಲ್ಲ. ನಮ್ಮ ಮೈಸೂರು ಲೇಜಿಸ್ಲೇಟೀವ್ ಅಂಸೆಬ್ಲಿ ಅನ್ನುವುದು ಇಡೀ ನಮ್ಮ ಇಂಡಿಯಾ ದೇಶದಲ್ಲಿ ಬಹಳ ಒಳ್ಳೆಯ ಹೆಸರು ತೆಗೆದುಕೊಂಡಿರುವ ಅಸೆಂಬ್ಲಿ. ಅಂಥಾದ್ದರಲ್ಲಿ ನೀವು ಈ ತರಹ ಸಭೆಯ ಘನತೆ, ಗೌರವವನ್ನು ಗಮನಿಸದೇ ಮಾತನಾಡಿದರೆ ಬೇರೆ ದೇಶದವರು ಏನೆಂದಾರು ಎಂಬುದನ್ನು ತಿಳಿದುಕೊಳ್ಳಿ.

ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡತಕ್ಕವರಿಗೆ ಬಹಳ ಕಮ್ಮಿ ಸಂಬಳ, ಅವರಿಗೆ ಸರಿಯಾಗಿ ಸಂಬಳ ಕೊಟ್ಟು ಅವರಿಂದ ಕೆಲಸ ತೆಗೆದುಕೊಳ್ಳಬೇಕು. ಅವರಿಗೆ ಕಡಿಮೆ ಸಂಬಳ ಇರುವುದರಿಂದಲೇ ಈ ಲಂಚ ಅನ್ನುವುದು ಬರುತ್ತದೆ. ಆದ್ದರಿಂದ ಅವರಿಗೆ ಹೆಚ್ಚು ಸಂಬಳ ಕೊಟ್ಟು ದಕ್ಷತೆಯಿಂದ ಕೆಲಸ ಮಾಡುವಂತೆ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ಒಂದು ವೇಳೆ ಆಗಲೂ ಕೂಡ ಲಂಚ ತೆಗೆದುಕೊಂಡರೆ ಅಂಥವರನ್ನು ಡಿಸ್‌ಮಿಸ್ ಮಾಡಬೇಕು. ಪೋಲೀಸ್ ಅಧಿಕಾರಿಗಳು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ನಮ್ಮ ವಿರೋಧ ಪಕ್ಷದ ಸದಸ್ಯರು ಹೇಳುತ್ತಾ ಇದ್ದರು ಕಪ್ಪುಬಾವುಟ ಹಿಡಿದು ಪ್ರದರ್ಶನ ಮಾಡಿದವರನ್ನು ಅರೆಸ್ಟ್ ಮಾಡಿದರು ಎಂದು. ಆ ರೀತಿ ಕಪ್ಪುಬಾವುಟ ಹಿಡಿಯಬೇಕಾದ ಅವಶ್ಯಕತೆ ಏನಿತ್ತು ? ಅಲ್ಲಿಗೆ ಏಕೆ ಅವರು ಹೋಗಬೇಕಾಗಿತ್ತು ? ಅದು ನನಗೆ ಅರ್ಥವಾಗಲಿಲ್ಲ. 3 ಗಂಟೆ ಟೈಂ ಅಲ್ಲ 6 ಗಂಟೆ ಟೈಂ ಕೂಡಿಸಿದ್ದರೂ ಕೂಡ ನಾನು ಕುಳಿತುಕೊಂಡು ಬರುತ್ತಾ ಇದ್ದೆ. (ನಗು !) ಡಿಸಿಪ್ಲಿನ್ ಇಲ್ಲದೇ ಅಲ್ಲಿಗೆ ಹೋಗಿ ಕಪ್ಪುಬಾವುಟ ಹಿಡಿದು ಬಿಟ್ಟರೆ ಏನು ಬಂತು ಪುರುಷಾರ್ಥ ? ಏನು ನೀವು ಸಾಧನೆ ಮಾಡಿದಂತೆ ಆಯಿತು ? ಪೇಪರ್‌ನಲ್ಲಿ ಮಿನಿಸ್ಟರ್‌ಗೆ ಕಪ್ಪುಬಾವುಟ ಹಿಡಿದರು ಅಂತ ಬಂದು ಬಿಟ್ಟರೆ ನಿಮಗೆ ಆದದ್ದಾದರೂ ಏನು ? ಈ ತರಹ ಪ್ರಚಾರ ಮಾಡಿದರೆ ನಮ್ಮನ್ನು ಕೇಳುತ್ತಾರೆ ಅಂತ ಅವರು ತಿಳಿದುಕೊಂಡಿರ ಬಹುದು. ಒಂದು ಒಳ್ಳೆಯ ಕೆಲಸ ಮಾಡಿದ್ದನ್ನು ತೋರಿಸಿ, ಜನಗಳ ಅವಶ್ಯಕತೆ ಏನಿದೆ, ಅವರಿಗೆ ಏನಾಗಬೇಕು ಎಂಬುದನ್ನು ಮಿನಿಸ್ಟರುಗಳ ಹತ್ತಿರ ಹೋಗಿ ಈ ರೀತಿ ಕೆಲಸ ಮಾಡಿಕೊಡಬೇಕೆಂದು ಹೇಳಿ, ಅವರು ಮಾಡಿಕೊಡದೇ ಇದ್ದಾಗ ಟೀಕೆ ಮಾಡಿ. ಅದನ್ನು ಬಿಟ್ಟು ಇದೇನು ತಮಾಷೆ ಕಪ್ಪುಬಾವುಟ ಹಿಡಿಯುವುದು ಯಾವ ಜಾಣತನ ? ಆಕಾಶಕ್ಕೆ ಕಲ್ಲು ಎಸೆದರೆ ಯಾರ ಮೇಲೆ ಬೀಳುತ್ತದೆ ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.

ಮಾನ್ಯ ಮುಖ್ಯಮಂತ್ರಿಗಳು ಈಗ ಮಂಡಿಸಿರುವ ಈ ಬೇಡಿಕೆಗಳನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಮತ್ತು ವಿರೋಧ ಪಕ್ಷದವರಿಗೆ ಚಾಲೆಂಜ್ ಆಗಿ ಹೇಳಬೇಕೆಂದು ಇದ್ದೇನೆ, ಏನೆಂದರೆ ಈಗಿನ ಮಂತ್ರಿಗಳು ನಡೆಸಿರುವಷ್ಟು ಕೆಲಸ ಕಾರ್ಯಗಳನ್ನು ಹಿಂದಿನ ಮಂತ್ರಿಗಳು ಯಾರೂ ನಡೆಸಿಲ್ಲ ಎಂದು ಅವರಿಗೆ ಸವಾಲು ಹಾಕುತ್ತೇನೆ, ಇದನ್ನು ಚೆನ್ನಾಗಿ ಅವರು ತಿಳಿದು ಕೊಳ್ಳಬೇಕು. ಸುಮ್ಮನೆ ಟೀಕೆ ಟಿಪ್ಪಣಿಗಳನ್ನು ಮಾಡುವುದು ಸರಿಯಲ್ಲ ಅಂತ ಹೇಳಿ ಅಧ್ಯಕ್ಷರು ನನ್ನ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI B. B. SAYANAK (Belgaum).—Mr. Speaker Sir, I rise to oppose the demands tabled by the hon. Chief Minister before this August House. I want to speak firstly on General Administration.

Sir, the General Administration is not clean, sound and honest. Ninety per cent of the officers are always coming late and even the Government servants also are coming late. I have visited almost all the offices and asked these servants, why you are coming late? They are telling me that we are coming late and we are going late. In that case, if the Officers and the Government servants are feeling inconvenience of the timings, why the Government is not changing the time? Secondly, the work of a

(SRI B. B. SAYANAK)

person who pays money is got done. The men who tak s with the Congress-man, his work will be done. The man who is in contact with M.L.As. will get his work done This is the situation prevailing in the Government Offices. If that is the position, what about the fate of the general public ? The Ministers, I say about 4 or 5, will visit a place at a time. Where is the necessity for 4 or 5 Ministers to visit a place ? Will all the Ministers have business at a place at a particular time ? For instance, when the President of India came over to Belgaum, 3 to 4 Ministers visited that place. Is it fair on your part to go together in group and waste the public funds ? I ask the Ministers whether they have paid surprise visits to any of the offices. Why do you spend money and time on all such things ? Will there be purpose be served by doing so ? I want to request the Hon'ble Chief Minister to allot certain Districts to certain Ministers so that they could stick on to these and do something good to the general public.

There is corruption in every walk of life. Why should we talk about corruption. But the Ministers, the M. L. As. and the M.Ps will get rewards after five years in general election or bye-election. This is my charge against them. A man who is corruption will not get sound sleep, will not have good health. His wife's health will not be good. His children's health will not be good. The Belgaum Municipality was in the hands of the Administrator. After the calendar of election was published, the Administrator called for the applications for plots of Mal-Maruthi Scheme. The election took place on 19th January 1969. Before the elected body is taking charge, the plots, say about 1900 in the extention of Mal-Maruthi Scheme are disposed off by the Administrator to Kannad people. There is an Advisory Committee for this purpose where there are 7 members. Three non-official members were there on the advisory Committee. One M.L.A. was on the Committee, but he is not a local M.L.A. He is a Kannad M.L.A. from outside the Belgaum City. Why a local M. L. A. like me is not appointed on that Committee. Is this the way to do justice to Marathi People under democratic set up ? This is what is going in the Mysore State. The life and property of the Minorities are not safe in the Mysore State. The shops of the minority people and the houses of the minority people in Sirsi have been burnt. The huts of the Keral People are burnt in Shimoga. One Udipi Hotel was burnt in Hubli. Is it burnt by Shiva Sena ? What is going on in Gulbarga ? A Maharastrian Library worth about Rs. 10,000 was burnt in Gulbarga. The Hon'ble Chief Minister is saying that we have given compensation to Marathi people in Gulbarga. The compensation given to Gulbarga Marathi people is not a full compensation. Is it a justifiable compensation ? You are asking the Mahasastra Government to give full compensation to the Kannada people suffered in Bombay. I am asking the Hon'ble Chief Minister why you have not given adequate compensation for those who suffered in the

recent disturbances in the Mysore State. When you are not giving full compensation how you are justified in asking full compensation for the people suffered in Bombay disturbances. When there was a Shiva Sena agitation in Bombay, the Superintendent of Police of Belgaum had promulgated the Section 35 of the Mysore Police Act in Belgaum Municipal area. During that time the small children about 8 to 10 years were going to School. They were cought and beaten like anything. An Officer of the Telegrapahic Department by name Dandeka was also beaten when he was going to his office. I had brought this to the notice of the Police Superintendent of Belgaum.

There is an open air Jail in the Malaprabha Project in Belgaum District. The prisoners are employed there to do the project work. They are paid Rs. 0.75 per day instead of Re. 1 as per rules. Re. 1 is drawn and only 0.75 is paid to them. In October last, there was a riot of the prisoners against the offieers there on account of this reason. The poor prisoners were beaten and about 13 were injured. This is the tendency and policy of the officers in the Jails. The Ministers are tolerating this. Thanking you.

†ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸ್ವಾಮಿ, ಈ ಸಭೆಯ ಮುಂದೆ ಇರತಕ್ಕ ಡಿಮ್ಯಾಂಡ್ ನಂಬರ್—10, 11 ಮತ್ತು 12 ಈ ಮೂರು ಡಿಮ್ಯಾಂಡುಗಳ ಬಗ್ಗೆ ಕೇಳಿರತಕ್ಕ ಮೊಬಲಗು ರೂಪಾಯಿ 13 ಕೋಟಿ 83 ಲಕ್ಷ 74 ಸಾವಿರವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತ ಕೆಲವು ಕಾಮೆಂಟರಿಗಳನ್ನು ಆಫರ್ ಮಾಡುವುದಕ್ಕೆ ಇಚ್ಛೈಪಡುತ್ತೇನೆ.

ಸ್ವಾಮಿ, ನಾನು ಇಲ್ಲಿಯವರೆಗೂ ಸಭೆಯಲ್ಲಿ ನಡೆಯುತ್ತಿದ್ದ ಚರ್ಚೆಗಳನ್ನು ತುಂಬಾ ಆಕಾಂಕ್ಷೆಯಿಂದ ಕೇಳಿರುತ್ತೇನೆ. ಆದರೆ ನಾನು ಆ ಟೀಕೆಟಿಪ್ಪಣಿಗಳನ್ನು ಕೇಳುತ್ತಿದ್ದಾಗ ಏನು ಆ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಿತೇನೋ ಅಥವಾ ಈ ಇಡೀ ಪ್ರಪಂಚವೇ ಮುಳುಗಿ ಹೋಗುತ್ತದೆನೋ ಅನ್ನುವಂಥ ಭಾವನೆ ಉಂಟಾಯಿತು. ಅನಂತರ ನಾನು ಮನೆಗೆ ಹೋಗಿ ಕೆಲವು ಸಾಹಿತ್ಯಗಳನ್ನು ನೋಡಿ ಇದಕ್ಕೇನು ಒಂದು ಪರಿಹಾರವನ್ನು ಕಂಡುಹಿಡಿದೆ ಎನ್ನುವುದನ್ನು ಇಲ್ಲಿ ಈಗ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾನು ನನ್ನ ಮನಸ್ಸಿಗೇನು ತೋಚಿತೋ ಅದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಯಾವುದಾದರೊಂದು ವಿಷಯ ಚರ್ಚೆಗೆ ಬಂದರೆ ಅದರ ಬಗ್ಗೆ ಒಂದು ಕಮಿಷನ್ ಏರ್ಪಾಡು ಮಾಡೋಣ, ಅದಕ್ಕೆ ಒಂದು ಎನ್‌ಕ್ವೈರಿ ಸಮಿತಿಯನ್ನು ನೇಮಿಸೋಣ ಎಂದು ಅದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳುವುದರಲ್ಲೇ ಇಲ್ಲಿ ಆಗಲೀ ಅಂದರೆ ರಾಜ್ಯ ಸರ್ಕಾರದಲ್ಲಿ ಆಗಲೀ ಅಥವಾ ಕೇಂದ್ರ ಸರ್ಕಾರದಲ್ಲಿ ಆಗಲೀ ಇದರದೇ ಒಂದು ದೊಡ್ಡ ಗೊಂದಲ ಜಾಸ್ತಿಯಾಗುತ್ತಿದೆ. ಆದರೆ ಇದು ಸರಿಯಾದ್ದಲ್ಲ. ಇದರ ಬಗ್ಗೆ ಮೂಲಭೂತವಾಗಿ ಆಲೋಚನೆಗಳನ್ನು ನಡೆಸಿ ಅದರ ಬಗ್ಗೆ ಒಂದು ಪರಿಹಾರ ಕಾಣತಕ್ಕ ವಿಚಾರದಲ್ಲಿ ನಾವೇನು ಪದ್ಧತಿ ಅನುಸರಿಸಬೇಕು ಎಂಬುದನ್ನು ನಿರ್ಧರ ಮಾಡಬೇಕಾಗಿದೆ. ಮಹಾತ್ಮಾ ಗಾಂಧಿಯವರು ಒಮ್ಮೆ ನಮ್ಮ ಬಾಡಿ ಪಾಲಿಟಿಕ್ಸ್‌ನಲ್ಲಿ ಕರಪ್‌ಷನ್ ಇರತಕದ್ದನ್ನು ಪ್ರಸ್ತಾಪಿಸುತ್ತಾ the casteless society is the ideal, to work for, ಎಂದು ಹೇಳಿದ್ದಾರೆ. ಈ ದಿವಸ ಅದನ್ನೇ ಎಲ್ಲಾ ಕಾಂಗ್ರೆಸ್ಸಿನವರೂ ಮತ್ತು ನಾನ್ ಕಾಂಗ್ರೆಸ್ಸಿಗರೂ ಹೇಳುತ್ತಿದ್ದಾರೆ. ಈ ವಿಷಯ ಚರ್ಚೆ ಮಾಡುವಾಗ ಕೆಲವರು ಒನ್ ಈಸ್ ಟು ಥರ್ಟಿ; ಒನ್ ಈಸ್ ಟು ಫಾರ್ಟಿ; ಒನ್ ಈಸ್ ಟು ಹಂಡ್ರಡ್ ಅಂತ ಎಲ್ಲರೂ ಹೇಳತಕ್ಕವರೇ ಆಗಿದ್ದಾರೆ. ಅದನ್ನು ಕಮ್ಮಿ ಮಾಡಿ ಅಂತ ಹೇಳಿದರೆ ಅದು ಕಮ್ಮಿ ಆಗುತ್ತದೆಯೋ? ಅನೇಕರು ಹೇಳುತ್ತಾರೆ ಈ ಪ್ರಜಾಪ್ರಭುತ್ವದಲ್ಲಿ ಬಡವ ಮತ್ತಷ್ಟು ಬಡವನಾಗುತ್ತಿದ್ದಾನೆ—ಧನಿಕರು ಮತ್ತಷ್ಟು ಧನಿಕರಾಗುತ್ತಿದ್ದಾರೆ ಎಂದು ಹೇಳುತಕ್ಕವರು ಜಾಸ್ತಿ ಇದ್ದಾರೆಯೇ ವಿನಾ ಅದನ್ನು ಜಾರಿಗೆ ತರುವುದರಲ್ಲಿ ಜನ ಬಹಳ ಕಡಮೆ ಇದ್ದಾರೆ. ಈ ಸತ್ಯಾಂಶವನ್ನು ಎಲ್ಲರೂ ಒಪ್ಪುತ್ತಾರೆಂದು ನಂಬಿದ್ದೇನೆ. ಆದರೆ ನಾನು ಈ ದಿವಸ ಹೆಮ್ಮೆಯಿಂದ ಒಂದು ಮಾತನ್ನು ಹೇಳಬಯಸುತ್ತೇನೆ—ಬಾಂಬೆಯಲ್ಲಿದ್ದ ಒಬ್ಬ ಡಾಕ್ಟರು ಅಮೇರಿಕಾಕ್ಕೆ ಹೋಗಿದ್ದರಂತೆ, ಅವರು ನನಗೆ ಆ ಅಮೇರಿಕಾದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಹೇಳಿದರು, ಅಲ್ಲಿ ಮೆಡಿಕಲ್ ಇಲಾಖೆಯಲ್ಲಿ ನಡೆಯುತ್ತಿರುವ ಆ ಚಿತ್ರವನ್ನು ಅವರೇನು ಹೇಳಿದರು ಅದನ್ನು ನೋಡಿದರೆ ನಮ್ಮ

(ಶ್ರೀ ಎಂ. ಬಸವರಾಜು)

ರಾಷ್ಟ್ರವೇ ಆ ಪರರಾಷ್ಟ್ರಕ್ಕಿಂತ ಎಷ್ಟೋ ಲೇಸಾಗಿವೆ ಅನ್ನಿಸಿತು. ಇಲ್ಲಿರತಕ್ಕ ಆ ಕರಪ್‌ಷನ್ ಏನೇನೂ ಲೆಕ್ಕಕ್ಕೇ ಬಂದಿದ್ದಿಲ್ಲ. ಪರರಾಷ್ಟ್ರಕ್ಕೆ ಇದನ್ನು ಹೋಲಿಸಿದರೆ ನಮ್ಮ ರಾಷ್ಟ್ರವೇ ಉತ್ತಮ ಅನ್ನುವುದು ಗೊತ್ತಾಗುತ್ತದೆ. ಆದರೆ ನಾವು ಇಲ್ಲಿ ಸ್ವಲ್ಪ ಇದ್ದರೆ ಅದನ್ನೇ ಒಂದು ಬೆಟ್ಟವನ್ನಾಗಿ ಮಾಡುವುದು ನಮ್ಮಲ್ಲಿ ಕೆಲವರ ಹವ್ಯಾಸವಾಗಿದೆ.........

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಆ ಜಪಾನಿನಲ್ಲಿ ಹೇಗಿದೆ ತಮಗೆ ಗೊತ್ತಿದೆಯೋ ?

ಶ್ರೀ ಎಂ. ಬಸವರಾಜು.—ಈ ಸಭೆಯಲ್ಲಿ ಹೆಚ್ಚಿಗೆ ಟೀಕೆ ಬರುತ್ತಿದೆ. ಆದರೆ ಸಭೆಯ ಹೊರಗಡೆ ಟೀಕೆ ಅಷ್ಟಾಗಿ ಇಲ್ಲ. ಬಸ್, ರೈಲು, ಹೋಟಲುಗಳಲ್ಲಿ ಹೀಗೆ ಇಂತಹ ಕಡೆಯಲ್ಲಿ ಕರಪ್‌ಷನ್ ಇಲ್ಲವೆಂದು ಯಾರೂ ಹೇಳುವುದಿಲ್ಲ. ಅದನ್ನು ಪ್ರತಿಯೊಬ್ಬರೂ ಒಪ್ಪುತ್ತಾರೆ. ಗಾಂಧೀಜಿಯವರು ಹೇಳಿದ ಹಾಗೆ ನಾವು ಮೇಲ್ಪಂಕ್ತಿಯಾಗಿರಬೇಕು. ಇದರಲ್ಲಿ ಸಮಾಜವಾದ ಬರಬೇಕು. ಎಲ್ಲರೂ ನಮ್ಮ ಪ್ರಾಂತ ಸರ್ಕಾರದವರ ಕೈ ಬಲಪಡಿಸಬೇಕು. ಮತ್ತು ಸಮಾನ್ಯ ಬಡ ಬೋರೇಗೌಡನ ಉದ್ಧಾರಕ್ಕಾಗಿ ನಾವೆಲ್ಲರೂ ಪ್ರಯತ್ನ ಮಾಡೋಣವೆಂದು ನಾನು ಹೇಳುತ್ತೇನೆ.

ನಮ್ಮಲ್ಲಿ ಸೆಪ್ಟಿಕ್ರಿಟಿಸಿಜಂ ಎಂಬುದು ಈ ಸಮಾಜದಲ್ಲಿ ಪೂರ್ಣ ನಂಬಿಕೆ ಇರುವವರಿಗೆ ಇರಬಾರದು. ಹಾಗಿದ್ದರೆ ನಮ್ಮ ಅಧಿಕಾರ ಕುಂಠಿತವಾಗುತ್ತದೆ. ಈಗ ಎಷ್ಟೋ ಜನ ದಕ್ಷರಾದ ಅಧಿಕಾರಿಗಳು ನನ್ನ ಮೈಸೂರು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದಲೂ ಅವರು ಇದ್ದಾರೆ. ಇವತ್ತು ಅವರು ಮೈಸೂರಿನಿಂದ ವರ್ಗ ಆಗಿರಬಹುದು. ಕೆಲವು ಕಡೆಗಳಲ್ಲಿ ಮಳೆ ಬೆಳೆಯಾಗಿ ನದಿಗಳು ತುಂಬಿರುವುದು ಕಂಡು ಬರುತ್ತಾ ಇದೆ. ಒಂದು ಸಾರಿ ಫಾರೆನ್ ದೇಶದ ಒಬ್ಬ ಮನುಷ್ಯ ಹೀಗೆ ಒಂದು ಮಾತನ್ನು ಹೇಳಿದ್ದಾನೆ. When it should be done, it ignores, when it should measure, it resists, when it resists, it succumbs. 1952ನೇ ಇಸವಿಯಿಂದ ನಮ್ಮದು ರೈತನ ದೇಶ. ಸಾಮಾನ್ಯವಾಗಿ ಒಬ್ಬ ಮಧ್ಯಮವರ್ಗ ಅಥವಾ ಅಪ್ಪರ್ ಕ್ಲಾಸ್ ಮನುಷ್ಯನ ಸಮಸ್ಯೆ ಬಂದಾಗ, ಅದನ್ನು ಇಗ್ನೋರ್ ಮಾಡುತ್ತಾರೆ. ಇದರ ಬಗ್ಗೆ ಉದಾಹರಣೆಗಳನ್ನು ಕೊಡುವುದಾದರೆ ಸಾವಿರಾರು ಹೇಳಬಹುದು. ಮೆಷರ್‌ಗೆ ಜಾಸ್ತಿ ಒತ್ತಡ ಬಂದಾಗ ಅದನ್ನು ರಿಸಿಸ್ಟ್ ಮಾಡುತ್ತಾರೆ. ಇದು ಹೇಗೆಂದರೆ, ಕೇವಲ 10 ಸಾವಿರ ಜನರು ಇಂತಹ ಕೆಲಸ ಆಗಬೇಕು, ಅದನ್ನು ಜಾಗ್ರತೆಯಾಗಿ ಮಾಡಿ ಕೊಡಿ ಎಂಬುದಾಗಿ ಕೇಳಿದರೆ ಸುಮ್ಮನೆ ಇರುತ್ತಾರೆ. ಆದರೆ ಮೂರು-ನಾಲ್ಕು ಜನರು ಪುಂಡರು ಬಂದು, ಯಾವುದಾದರೂ ಬಸ್ಸಿಗೆ ಬೆಂಕಿ ಇಡುತ್ತೇವೆಂದು ಹೇಳಿದರೆ ಅದು ತಕ್ಷಣ ಆಗುತ್ತದೆ. ದೇಶದಲ್ಲಿ ಇಂತಹ ಪರಿಸ್ಥಿತಿ ಇರಬಾರದು. ಆದ್ದರಿಂದ ಯಾವುದಾದರೂ ಒಂದು ಪ್ರಾಬ್ಲಂ ಬಂದಾಗ ಕೂಡಲೇ ಅದನ್ನು ಬಗೆಹರಿಸಬೇಕು. ಎರಡನೆಯ ವಿಷಯವೇನೆಂದರೆ, ಯಾವ ಪ್ರಾಬ್ಲಂ ಬಂದರೂ ಕೂಡ ದೀರ್ಘವಾಗಿ ಯೋಚನೆ ಮಾಡಿ ಮಾಡುವುದಿಲ್ಲ. ಹೊಸದಾಗಿ ಹಾಲಿಗೆ ನೆಸ್‌ಕೇಫೆ ಪುಡಿ ಹಾಕಿ ಕಾಫಿ ಮಾಡಿದರೆ ಹೇಗಿರುತ್ತದೋ ಹಾಗೆ ನಾವು ವರ್ತಿಸುತ್ತಿದ್ದೇವೆ. ಯಾವುದಾದರೂ ಒಂದು ಪ್ರಾಬ್ಲಂ ಬಂದಾಗ ಹತ್ತಾರು ಕಡೆಗಳಿಂದ ಒತ್ತಾಯ ಬರುವ ರೀತಿಯಲ್ಲಿ ಇರಬಾರದು. ನಮ್ಮ ಸಮಾಜದಲ್ಲಿ ಒಂದು ಕೆಲಸ ಆಗಬೇಕೆಂದರೆ, ನಮ್ಮ ಅಧಿಕಾರಿಗಳು ನಮಗೆ ಅನುಕೂಲ ಮಾಡಿಕೊಡಬೇಕು. ಅಧಿಕಾರಕ್ಕೆ ವಿರೋಧಪಕ್ಷದವರೇ ಬರಲಿ, ಅಥವಾ ಕಾಂಗ್ರೆಸ್‌ನವರೇ ಬರಲಿ, ಅವರು ಸೋಷಿಯಾಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಗೇ ಬಹುಮತ ಕೊಟ್ಟಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ನಾವೆಲ್ಲರೂ ಬೆಂಬಲ ಕೊಟ್ಟು ಬೆನ್ನು ಮೂಳೆಯಾಗಿರತಕ್ಕ ಬಡ ಬೋರೇಗೌಡನ ಪ್ರಗತಿಗೆ ಕಷ್ಟಪಟ್ಟು ದುಡಿಯಬೇಕು. ಈ ಬೇಡಿಕೆಯಲ್ಲಿ 13 ಕೋಟಿ ಚಿಲ್ಲರೆ ರೂಪಾಯಿಗಳಷ್ಟು ಚಾರ್ಜ್ ಇದೆ. ಅದನ್ನು ನಾನು ಪೂರ್ಣವಾಗಿ ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಚ್. ಅರಕೇರಿ (ಬಿಳ್ಗಿ).—ಮಾನ್ಯ ಅಧ್ಯಕ್ಷರೇ, ನನಗೆ ಅವಕಾಶ ಬರುವುದು ಕೊನೆಯಲ್ಲಿಯೇ. ಹೇಗೆ ನಾನು ಭಾಷಣವನ್ನು ಮುಗಿಸುವುದು ? ಈಗಾಗಲೇ ನನ್ನ ಮಿತ್ರರು ಅನೇಕರು ಈ ಬೇಡಿಕೆಯ ಮೇಲೆ ಮಾತನಾಡಿದ್ದಾರೆ. ಲಂಚದ ಬಗ್ಗೆಯೂ ಮಾತನಾಡಿದ್ದಾರೆ. ಲಂಚ ಹೋಗುವುದಿಲ್ಲವೆಂದು ಕೆಲವು ಕಾಂಗ್ರೆಸ್ ಮಿತ್ರರೇ ಹೇಳಿದ್ದಾರೆ. ಆದರೆ ಈ ರೀತಿಯಾಗಿ ನಾವು ಖಚಿತ ಮಾಡಿಕೊಳ್ಳುವುದರಿಂದ ನನಗನ್ನಿಸುತ್ತದೆ, ನಮ್ಮ ದೇಶದಲ್ಲಿ ಈ ನಾಡಿನಲ್ಲಿ ಏನೊಂದು ಭ್ರಷ್ಟಾಚಾರ ಇದೆಯೋ ಅದು ಲೀಲಾಜಾಲವಾಗಿ ಕೆಳಗಿನ ಮಟ್ಟದಿಂದ ಹಿಡಿದು ಮೇಲಿನ ಮಟ್ಟದವರೆಗೂ ನಡೆಯುತ್ತಾ ಹೋಗುತ್ತದೆ ಮತ್ತು ಇದು ಬೇಗನೆ ಹೋಗುವುದಿಲ್ಲ. ಈ ರೀತಿ ಭ್ರಷ್ಟಾಚಾರ ನಡೆಯುವಾಗ ನಾವು ಒಂದು ಮಾತನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಜನತೆ ಇಲ್ಲಿಗೆ ನಮ್ಮನ್ನೂ, ನಿಮ್ಮನ್ನೂ ಕಳುಹಿಸಿದ್ದಾರೆ. ಅವರ ಬೇಡಿಕೆ ಪೂರೈಕೆ ಮಾಡಬೇಕೆಂಬ ದೃಷ್ಟಿಯಿಂದ

ನಾವೆಲ್ಲರೂ ದುಡಿದರೆ ಜನತೆಗೆ ಒಂದು ರೀತಿ ಕಲ್ಯಾಣ ಮಾಡಿದಂತಾಗುತ್ತದೆ. ಇಲ್ಲದಿದ್ದರೆ ವಿನಾಶಕಾಲೇ ವಿಪರೀತ ಬುದ್ಧಿ ಎಂಬಂತೆ ಆಗುತ್ತದೆ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ವಿಷಯವಾಗಿ ಹೇಳುವುದಾದರೆ, ಇವತ್ತು ಸೆಕ್ರೆಟೇರಿಯಟ್‌ನಲ್ಲಿ ಫೈಲ್ಸ್ ವಿಲೇವಾರಿ ಯಾವ ರೀತಿ ಆಗುತ್ತವೆ ಎಂಬುದನ್ನು ನೋಡಿದರೆ, ಅವು ಬಹಳ ನಿಧಾನವಾಗಿ ಹೋಗುತ್ತವೆ. ಇವತ್ತು ಒಂದು ಅರ್ಜಿ ಬಂದರೆ ಅದಕ್ಕೆ ಸರಿಯಾದ ಪರಿಹಾರ ಕಂಡುಹಿಡಿದು ಏನು ಮಾಡಬೇಕೆಂಬುದನ್ನು ಮಾಡುವುದೇ ಇಲ್ಲ. ಕೊನೆಯ ಪಕ್ಷ 6 ತಿಂಗಳೋ, ಒಂದು ವರ್ಷವೋ ಅಥವಾ 2 ವರ್ಷಗಳೋ ಅದನ್ನು ತೀರ್ಮಾನ ಮಾಡುವುದಕ್ಕೆ ಬೇಕಾಗುತ್ತದೆ. ಒಂದುವೇಳೆ ಶಾಸಕರೇನಾದರೂ ಬೆನ್ನುಹತ್ತಿದ್ದು ಕಂಡರೆ ಜಾಗ್ರತೆ ಆಗುತ್ತದೆ. ಇಂತಹ ಉದಾಸೀನ ಬುದ್ಧಿ ಸೆಕ್ರೆಟೇರಿಯೇಟ್‌ನಲ್ಲಿಯೇ ಇದೆ. ಉಳಿದ ಆಫೀಸುಗಳಲ್ಲಿಯೂ ಇಂತಹ ಭಾವನೆಯುಂಟಾದರೆ, ಇನ್ನು ಸಾಮಾನ್ಯ ಜನರ ಸುಧಾರಣೆ ಏನು ಆಗುತ್ತದೆಂಬುವುದನ್ನು ತಾವು ಗಮನಿಸಬೇಕು. ಆದ್ದರಿಂದ ಯಾವುದೇ ಫೈಲ್ ಎಲ್ಲಿಗೇ ಬರಲಿ, ಅದು ಎಂಥಾದ್ದೇ ಆಗಿರಲಿ, ಇಂತಿಷ್ಟು ಸಮಯದಲ್ಲಿ ಅಥವಾ ದಿವಸಗಳಲ್ಲಿಯೇ ತೀರ್ಮಾನ ಮಾಡಿ ಮುಗಿಯಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಪ್ರತಿಯೊಂದು ಸೆಕ್ರೆಟರಿಯಟ್‌ಗೂ ಕೂಡಲೇ ಒಂದು ಸರ್ಕ್ಯುಲರ್ ಕಳುಹಿಸಬೇಕು. ನಾನು ಈ ರೀತಿ ಹೇಳಿದೆನೆಂದು ಬಹುಶಃ ಮಾನ್ಯ ಮುಖ್ಯಮಂತ್ರಿಗಳ ಮನಸ್ಸಿಗೆ ನೋವಾಗಬಹುದು. ಒಂದು ವಿಚಾರ ಹೇಳುತ್ತೇನೆ. ನಮ್ಮ ಸೆಕ್ರೆಟೇರಿಯಟ್‌ನಲ್ಲಿ ಮತ್ತು ಸಾಮಾನ್ಯವಾಗಿ ಪ್ರತಿಯೊಂದು ಆಫೀಸಿಗೂ ನಾನು ಹೋಗಿ ಬರುತ್ತಿದ್ದೇನೆ. ಈ ಸೆಕ್ರೆಟೇರಿಯಟ್‌ನಲ್ಲಿಯೇ ಸುಮಾರು ಶೇಕಡ 35 ಅಥವಾ 40ರಷ್ಟು ಹೆಣ್ಣುಮಕ್ಕಳು ಇದ್ದಾರೆ. ಉಳಿದ ಕಡೆಗಳಲ್ಲಿ ಎರಡನೆಯ ದರ್ಜೆ ಗುಮಾಸ್ತರಾಗಿಯೂ, ಒಂದನೇ ಡಿವಿಷನ್ ಗುಮಾಸ್ತರಾಗಿಯೂ, ಟೈಪಿಸ್ಟ್‌ಗಳಾಗಿಯೂ ಮತ್ತು ಸ್ಟೆನೋಗಳಾಗಿಯೂ ಅವರು ಕೆಲಸ ಮಾಡುತ್ತಿದ್ದಾರೆ. ನಾನು ನೋಡಿದ ಹಾಗೆ ಸಾಮಾನ್ಯವಾಗಿ ಪ್ರತಿಯೊಬ್ಬ ಹೆಣ್ಣುಮಗಳು ಎರಡು ತಾಸು ಆಫೀಸಿನಲ್ಲಿದ್ದರೆ, ಮತ್ತೆ ಎರಡು ತಾಸು ಹೊರಗೆ ಇರುತ್ತಾರೆ. ಅವರು ಸರಿಯಾಗಿ ಫೈಲ್ಸ್ ನೋಡುವುದೇ ಇಲ್ಲ. ಅಲ್ಲಿನ ಸೆಕ್ಷನ್ ಆಫೀಸರ್ಸ್ ಆಗಲೀ, ಅಂಡರ್ ಸೆಕ್ರೆಟರಿಯಾಗಲೀ, ಸೆಕ್ರೆಟರಿಯಾಗಲಿ ಅಥವಾ ಚೀಫ್ ಸೆಕ್ರೆಟರಿಯವರಾಗಲೀ ಅದರ ಬಗ್ಗೆ ಸರಪ್ರೈಜ್ ವಿಜಿಟ್ ಕೊಡುತ್ತಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳೇ ಸರ್‌ಪ್ರೈಜ್ ವಿಜಿಟ್ ಮಾಡಿ ಎಷ್ಟು ಹೆಣ್ಣುಮಕ್ಕಳು ಈ ಸೆಕ್ರೆಟೇರಿಯಟ್‌ನಲ್ಲಿ ನಿಜವಾಗಿ ಕೆಲಸ ಮಾಡುತ್ತಾರೆ, ಎಷ್ಟು ಫೈಲುಗಳನ್ನು ದಿನವೂ ಡಿಸ್‌ಪೋಜ್ ಮಾಡುತ್ತಾರೆಂಬುದನ್ನು ನೋಡಲಿ. ನಾವು ಏಕೆ ಅವರನ್ನು ಬೈಯಬೇಕು? ನಾನು ಮುಂಬೈ ಆಫೀಸಿನಲ್ಲಿ ನೋಡಿದ ಹಾಗೆ ಹೇಳುವುದಾದರೆ, ಅಲ್ಲಿ ಅಧಿಕಾರಿಗಳಾಗಿದ್ದವರು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಮೈಸೂರು ರಾಜ್ಯದಲ್ಲಿ ಏಕೆ ಬೇಧಭಾವ ಮಾಡುತ್ತಾರೋ ಗೊತ್ತಿಲ್ಲ.

ಶ್ರೀ ಕೆ. ಲೀಲಾವತಿ ರೈ (ಬಂಟವಾಳ).—ಮಾನ್ಯ ಸದಸ್ಯರು ಇಷ್ಟೆಲ್ಲಾ ಹೇಳಿ ಬರೀ ಹೆಣ್ಣುಮಕ್ಕಳ ಮೇಲೆಯೇ ಚಾರ್ಜ್ ಮಾಡುತ್ತಿದ್ದಾರೆ. ಅದಕ್ಕೆ ಕಾರಣವೇನು? ಹೆಣ್ಣುಮಕ್ಕಳು ಕೆಲಸದಲ್ಲಿ ಕಡಿಮೆ ಇದ್ದಾರೆಂದು ಉದಾಹರಣೆ ಮೂಲಕ ಕೊಡಲಿ. ಏಕೆಂದರೆ ಹೆಣ್ಣುಮಕ್ಕಳ ಪರವಾಗಿ ನಾವು ಇಲ್ಲಿ ಮಾತನಾಡಲು ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಗಂಡುಮಕ್ಕಳ ಬಗ್ಗೆಯೂ ಸಪೋರ್ಟ್ ಮಾಡೋಣ.

7-30 P. M.

ಶ್ರೀ ಎಸ್. ಎಸ್. ಅರಕೇರಿ.—ನಾನು ಹೆಣ್ಣು ಮಕ್ಕಳಿಗೆ ಟೀಕೆ ಮಾಡುತ್ತಾ ಇಲ್ಲ. ಅವರು ಕೆಲಸಕ್ಕೆ ಹೋದಾಗ, ಅವರು ಸರಿಯಾಗಿ ಕೆಲಸ ಮಾಡಬೇಕು, ಅವರು ಪಡೆಯುತ್ತಿರುವ ಸಂಬಳ ಸಾರಿಗೆಗಳು, ಅದು ಜನಗಳ ದುಡ್ಡು. ಗಂಡಸರಂತೆ ಅವರಿಗೂ ಸಮಾನತೆ ಇರುವಾಗ, ಕೆಲಸದಲ್ಲೂ ಅವರು ಸಮಾನವಾದ ಕೆಲಸ ಮಾಡಬೇಕಾಗುತ್ತದೆ. ಆಫೀಸಿಗೆ ಬಂದು ನಾಲ್ಕು ತಾಸು ಕೆಲಸಮಾಡಿ, ಎರಡು ತಾಸು ಟಿಫಿನ್‌ಗೋ ಕಾಫಿಗೋ ಹೋಗಿ ಕಾಲ ಕಳೆದರೆ ಹೇಗೆ ಸರಿಯಾಗುತ್ತದೆ, ಇದರಿಂದ ಯಾರಿಗೆ ನಷ್ಟವಾಗುತ್ತದೆ? ಇದರಿಂದ ನಾನು ಅವರು ಆಡಳಿತದಲ್ಲಿ ಮಾಡುವಂತಹ ನಷ್ಟದಬಗ್ಗೆ ಮಾತನಾಡುತ್ತಿದ್ದೇನೆ.

ಇನ್ನೊಂದು ವಿಷಯ. ಬೊಂಬಾಯಿ ಪ್ರದೇಶದಿಂದ ಬಂದಂತಹವರು ಇಲ್ಲಿಯ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಫಸ್ಟ್ ಡಿವಿಜನ್ ಕ್ಲಾರ್ಕ್, ಅವರಿಗೆ ಒಂದು ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮಾಡಿದ್ದಾರೆ. ಅದನ್ನು ಮಾಡಿದಾಗ ಸೆಕ್ರೆಟರಿಯೇಟ್‌ನಲ್ಲಿದ್ದಂತಹ ಸೀನಿಯರ್ ಕ್ಲಾರ್ಕ್ಸ್‌ಗೆ ಅಸಿಸ್ಟಾಂಟಾಗಿ ಮಾಡಿದ್ದಾರೆ. ಲಿಸ್ಟಿನಲ್ಲಿ ಪಿ. ಡಬ್ಲ್ಯು. ಡಿ. ಫಸ್ಟ್

(ಶ್ರೀ ಎಸ್. ಎಸ್. ಅರಕೇರಿ)

ಡಿವಿಜನ್ ಕ್ಲಾರ್ಕ್ಸ್‌ಗೆ ಪ್ರತ್ಯೇಕ ಗ್ರೆಡೇಶನ್ ಲಿಸ್ಟ್ ಮಾಡಿದ್ದಾರೆ. ಅವರನ್ನು ಕಾಮನ್ ಇಂಟರ್ ಸ್ಟೇಟ್ ಲಿಸ್ಟಿನಲ್ಲಿ ಹಾಕಲಿಲ್ಲ. ಇದಕ್ಕೆ ಕಾರಣವೇನು? ಇದಕ್ಕೆ ಒಪೀನಿಯನ್ ತೆಗೆದು ಕೊಳ್ಳುವುದಕ್ಕೋಸ್ಕರ ಒಬ್ಬ ಕೇಂದ್ರ ಸರ್ಕಾರದ ಆಫೀಸರನ್ನು ಕೂಡ ನೇಮಕ ಮಾಡಿದ್ದಾರೆ, ಅವರು ಮಹಾರಾಷ್ಟ್ರದಲ್ಲಿ ಒಂದು ರೀತಿಯ ಅಭಿಪ್ರಾಯ ಕೊಟ್ಟಿದ್ದಾರೆ. ಇಲ್ಲಿ ಒಂದು ರೀತಿಯ ಅಭಿಪ್ರಾಯ ಕೊಟ್ಟಿದ್ದಾರೆ? ಅದಕ್ಕಾಗಿ ಫಸ್ಟ್ ಡಿವಿಜನ್ ಕ್ಲಾರ್ಕುಗಳನ್ನು ಕಾಮನ್ ಲಿಸ್ಟಿನಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಮಾತು ಪೋಲೀಸರ ಬಗ್ಗೆ ಹೇಳುತ್ತೇನೆ. ಇವತ್ತು ಯಾವ ಪೋಲೀಸ ಆಫೀಸರರೇ ಆಗಲಿ, ಅವರು ದಫೇದಾರರಾಗಿರಲಿ, ಸಬ್ ಇನ್‌ಸ್ಪೆಕ್ಟರಾಗಿರಲಿ, ಯಾರೇ ಆದರೂ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾಗಿ ನಡೆದುಕೊಳ್ಳುತ್ತಿಲ್ಲ. ಇವತ್ತು ಈ ಪೋಲೀಸರು, ಒಂದು ಗೂಂಡಾಗಿರಿಯನ್ನು ತಡೆಹಿಡಿಯುವವರು, ಇವರೇ ಗೂಂಡಾಗಿರಿ ಮಾಡುತ್ತಿದ್ದಾರೆ. ಪೋಲೀಸರೇ ಈ ರೀತಿ ಮಾಡಿದರೆ, ಅವರ ಬಳಿ ನ್ಯಾಯ ದೊರಕಿಸಿಕೊಳ್ಳಲು ಹೋಗುವುದಾದರೂ ಹೇಗೆ? ನನ್ನ ಕ್ಷೇತ್ರದಸಿರಕನಹಳ್ಳಿ ಮತ್ತು ಬರತನಹಳ್ಳಿಯಲ್ಲಿಜನರು ಹೆಂಡತಿಮಕ್ಕಳನ್ನು ಬಿಟ್ಟುಓಡಿಹೋಗಬೇಕಾಗಿದೆ. ಅಲ್ಲಿಯ ರೈತರನ್ನು ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ಅಲ್ಲಿ ಒಂದು ಪೋಲೀಸ್ ಸ್ಟೇಷನ್ನಿಗೆ ಹೋದರೆ ಹೇಗೆ ವರ್ತನೆ ಮಾಡುತ್ತಾರೆ ಎಂದು ತಿಳಿಯುತ್ತದೆ. ತಾವು ಬೇರೆ ಬಟ್ಟೆ ಹಾಕಿಕೊಂಡು ಹೋದರೆ, ನಿಮ್ಮಲ್ಲಿ ಬೇಕಾದರೆ ಯಾವ ರೀತಿ ವರ್ತನೆ ಮಾಡುತ್ತಾರೆಂದು ನೋಡಬಹುದು. ಇವತ್ತು ಇವರು ಸಮಾಜ ರಕ್ಷಣೆ ಮಾಡತಕ್ಕವರು ಈ ರೀತಿ ಮಾಡಿದರೆ ಹೇಗೆ? ಇವತ್ತು ಜನ ಸಾಮಾನ್ಯರು ಪೋಲೀಸ್ ಠಾಣೆಗೆ ನ್ಯಾಯಕ್ಕೋಸ್ಕರ ಹೋದರೆ, ಯಾವ ರೀತಿ ಮಾಡಬಹುದು, ಅವರಿಗೆ ಯಾವ ನ್ಯಾಯ ಸಿಗಬಹುದು ಎಂಬುದನ್ನು ಯೋಚನೆ ಮಾಡಬೇಕು. ನಾನು ಹೇಳುವುದು, ಅವರಲ್ಲಿ ಒಂದು ಸಿವಿಕ್ ಸೆನ್ಸ್, ನಾಗರೀಕತೆಯ ಭಾವನೆ ಇಲ್ಲ. ಇವತ್ತು ಹಳ್ಳಿಗಳಲ್ಲಿ ಇವರ ಕಾಟ ತಪ್ಪಿದ್ದಲ್ಲ. ಲೈಸೆನ್ಸ್ ತೆಗೆದುಕೊಂಡು ಒಂದು ಸಣ್ಣ ಚಹಾ ಅಂಗಡಿ ಇಟ್ಟರೂ, ಅವರಿಗೆ ಇಂತಿಷ್ಟು ಎಂದು ಲಂಚ ಕೊಡದಿದ್ದರೆ ಇವರ ಕಾಟ ತಪ್ಪಿದ್ದಲ್ಲ. ಹೀಗಾಗಿ ಹಳ್ಳಿಗಳಲ್ಲಿ ಜನರಿಗೆ ಬಹಳ ತೊಂದರೆಯಾಗಿದೆ. ಎರಡನೆಯದು, ಈಗ ಸಬ್ ಇನ್‌ಸ್ಪೆಕ್ಟರ್ ನೇಮಕ ಮಾಡುವಾಗ ಅಲ್ಲಿ ಒಂದು ನೇಮಕಕ್ಕೆ 10-15 ಸಾವಿರ ಲಂಚ. ಇವತ್ತು ಅಷ್ಟು ಲಂಚ ಕೊಟ್ಟು ಸಬ್ ಇನ್‌ಸ್ಪೆಕ್ಟರ್ ಆದರೆ, ಅವನು ಎರಡು ಮೂರು ವರ್ಷದೊಳಗೆ 2-3 ಲಕ್ಷ ಸಂಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾನೆ. ಈ ರೀತಿಯ ವ್ಯವಹಾರ ನಡೆದರೆ, ಅವರು ಜನರ ಸೇವೆ ಏನುಮಾಡಿದ ಹಾಗೆ ಆಗುತ್ತದೆ. ಲಂಚ ದಿನೇದಿನೇ ಬೆಳೆದರೆ, ಮತ್ತು ಈರೀತಿಯಲ್ಲಿ ಅವರು ವರ್ತನೆ ಮಾಡುವುದಾದರೆ, ನಾವು ಯಾರಲ್ಲಿ ರಕ್ಷಣೆಗೆ ಹೋಗಬೇಕು? ಇವತ್ತು ಬೇಲಿಯೇ ಹೊಲವನ್ನು ಮೇಯ್ದರೆ, ತಾಯಿಯ ಹಾಲೇ ವಿಷವಾದರೆ, ನಮಗೆ ರಕ್ಷಣೆಯಾದರೂ ಎಲ್ಲಿ? ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಮತ್ತು ಗೃಹಖಾತೆಯ ಇನ್ನೊಬ್ಬ ಮಂತ್ರಿಯವರು ಇನ್ನು ಮೂರು ವರ್ಷಗಳಲ್ಲಿ ಒಂದು ಸುಂದರವಾದ ತತ್ವಗಳನ್ನು ಮಾಡಿ ಇವರು ಹೀಗೆ ಮಿಸ್‌ಬಿಹೇವ್ ಮಾಡದದ ಹಾಗೆ ನೋಡಿಕೊಂಡು, ಮತ್ತು ಅವರು ಸಾರ್ವಜನಿಕರೊಡನೆ ಹೇಗೆ ವರ್ತನೆ ಮಾಡಬೇಕೆಂಬುದನ್ನು ಕಲಿಸಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನ ಮುಗಿಸುತ್ತೇನೆ.

ಶ್ರೀ ಸದಾಶಿವಪ್ಪ ಪಾಟೀಲ್.—ಸ್ವಾಮಿ, ನನಗೂ ಸ್ವಲ್ಪ ಅವಕಾಶ ಕೊಡಿ ನನಗೆ ಪಾರ್ಟಿ ಇಲ್ಲ ಲೀಡರ್ ಇಲ್ಲ. 5 ನಿಮಿಷ ಕೊಡಬೇಕು.

ಅಧ್ಯಕ್ಷರು.—7 ಗಂಟೆಯ ನಂತರ ಹೆಸರು ಕೊಟ್ಟರೆ ಹೇಗೆ ಮಾಡುವುದು?

ಶ್ರೀ ಸದಾಶಿವಪ್ಪ ಪಾಟೀಲ್.—ನಾಳೆ ಪ್ರತ್ಯೇಕವಾಗಿ ನಿಮ್ಮನ್ನು ನಾನು ಕೇಳುತ್ತೇನೆ. ದಯವಿಟ್ಟು ಕೊಡುತ್ತೀರಾ?

ಅಧ್ಯಕ್ಷರು.—ನಾಳೆ ನೋಡೋಣ ಇವತ್ತಿಲ್ಲ.

ಶ್ರೀ ವಾಟಾಳ್‌ನಾಗರಾಜ್.—ಪೋಲೀಸರ ಬಗ್ಗೆ ನಿನ್ನೆ ನಡೆದ ವಿಚಾರವನ್ನು ಹೇಳಬೇಕಾಗಿದೆ. ನನಗೆ ಒಂದು 5 ನಿಮಿಷ ಅವಕಾಶ ಕೊಡಬೇಕು. ನನ್ನ ಪರ್ಸನಲ್ ಎಕ್ಸ್‌ಪ್ಲನೇಶನ್ ಆದರೂ ಕೊಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಅದಕ್ಕೆ ಅವಕಾಶ ನಾಳೆ ಕೊಡುತ್ತೇನೆ. Now the Chief Minister will reply.

ಶ್ರೀ ವೀರೇಂದ್ರ ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ ಸಾಮಾನ್ಯ ಆಡಳಿತ ಮತ್ತು ಗೃಹಖಾತೆಯ ಬೇಡಿಕೆಗಳ ಮೇಲೆ ನಿನ್ನೆಯಿಂದ ಚರ್ಚೆಯಾಗಿದೆ. ಅನೇಕ ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗ ವಹಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಈ ಚರ್ಚೆಯಲ್ಲಿ ಕೆಲವು ಯೋಗ್ಯವಾದ ಸಲಹೆಗಳನ್ನು ಕೂಡ ಕೆಲವು ಮಾನ್ಯ ಸದಸ್ಯರು ಸರ್ಕಾರಕ್ಕೆ ಕೊಟ್ಟಿದ್ದಾರೆ. ಮತ್ತೆ ಕೆಲವು ಸದಸ್ಯರು ಸರ್ಕಾರವನ್ನು ನಿಂದಿಸಿದ್ದಾರೆ, ಟೀಕಿಸಿದ್ದಾರೆ. ಮತ್ತು ಕೆಲವು ಸಮಯದವರೆಗೂ ಈ ಚರ್ಚೆ ಬಹಳ ಮೇಲ್ಮಟ್ಟದಲ್ಲಿ ನಡೆಯಿತು ಎಂದು ಸಮಾಧಾನ ಮಾಡಿಕೊಂಡರೂ ಕೆಲವು ಸಮಯದವರೆಗೂ ಈ ಸಭೆಗೆ ಶೋಭೆತರುವಂಥಚರ್ಚೆ ಈಮನೆಯಲ್ಲಿ ನಡೆಯಲಿಲ್ಲಎಂದು ಅಸಮಾಧಾನವಾಗುತ್ತದೆ. ಏನೇ ಆಗಲಿ ಚರ್ಚೆಯಲ್ಲಿ ಪ್ರತಿಯೊಬ್ಬ ಮಾನ್ಯ ಸದಸ್ಯರೂ ತಮ್ಮ ಅಭಿಪ್ರಾಯನ್ನು, ತಮ್ಮ ವಿಚಾರವನ್ನು ವ್ಯಕ್ತ ಮಾಡತಕ್ಕಂಥ ಅಧಿಕಾರ ಅವರಿಗೆ ಪೂರ್ತಿಯಾಗಿ ಇರುತ್ತದೆ. ಆ ರೀತಿಯಿಂದ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ.

Sri S. SIVAPPA.—I am on a point of order. The Hon. Chief Minister is making remarks on the debate inconsistent with the dignity of the House. It is a reflection on the House and that remark casts aspersions on the House. It is contempt of the House. So I want the Speaker to expunge those words of the Hon. Chief Minister. He has to withdraw those words.

ಶ್ರೀ ವೀರೇಂದ್ರ ಪಾಟೀಲ್.—ಕೆಲವು ಸಮಯದವರೆಗೂ ಮೇಲ್ಮಟ್ಟದ ಚರ್ಚೆ ನಡೆಯಿತು, ಕೆಲವು ಸಮಯದವರೆಗೂ ಈ ಮಾನ್ಯ ಸಭೆಗೆ ಶೋಭೆ ತರುವಂಥ ಚರ್ಚೆ ನಡೆದಿಲ್ಲ ಎಂದು ನಾನು ಹೇಳಿದ್ದೇನೆ. ಬಹುಷಃ ಇದೇನೂ ತಪ್ಪಲ್ಲ. ಇದು ಮಾನ್ಯ ವಿರೋಧಪಕ್ಷದ ನಾಯಕರಿಗೂ ಗೊತ್ತಿದೆ. ಇಲ್ಲಿಯವರೆಗೂ ಈ ಮನೆಯಲ್ಲಿ ಏನು ಚರ್ಚೆ ನಡೆದಿವೆ ಎನ್ನುವುವನ್ನು ಪ್ರಾಸ್ತಾವಿಕ ವಾಗಿ ಹೇಳಿಕೊಂಡು ಮುಂದೆ ಬರುತ್ತಿದ್ದೇನೆ.

Sri S. SIVAPPA.—Is it not a reflection on the House ?

Sri VEERENDRA PATIL.—I am going to repeat them. I don't regret. ಕೆಲವು ಸಮಯದವರೆಗೂ ಈ ಸಭೆಗೆ ಶೋಭೆ ತರುವಂಥ ಚರ್ಚೆ ಈ ಮನೆಯಲ್ಲಿ ನಡೆಯಲಿಲ್ಲ ಎಂದು ಅಸಮಾಧಾನವಾಗುತ್ತಿದೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೆ.

Sri S. SIVAPPA.—You are the Leader of the House. You are spitting at your own face.

Sri VEERENDRA PATIL.—What I have stated, I am going to substantiate. I am making the statement with a full sense of responsibility and I am prepared for the consequences. ಅನೇಕ ಮಾನ್ಯ ಸದಸ್ಯರು ಏನೇನು ಹೇಳಿದ್ದಾರೆ ಎನ್ನುವುದು ಬಹುಶಃ ರೆಕಾರ್ಡಿನಲ್ಲಿ ಇದೆ. ಅದನ್ನು ಓದಿದರೆ ಈ ಮನೆಗೆ ಶೋಭೆ ತರುವಂಥ ಚರ್ಚೆ ಆಗಿಲ್ಲ ಎನ್ನುವುದು ಗೊತ್ತಾಗುತ್ತದೆ.

Sri S. SIVAPPA.—You are at liberty to refute those charges. ಈ ಸಭೆಯ ನಾಯಕರು ಈ ಸಭೆಗೆ ಶೋಭೆ ಇಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿದುಕೊಳ್ಳಬೇಕು, ಕೆಲವು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುವ ಕಾಲಕ್ಕೆ ಯಾವರೀತಿ ವ್ಯಕ್ತ ಮಾಡಿದ್ದಾರೆ ಎಂಬುದನ್ನು ಲಕ್ಷದಲ್ಲಿ ಇಟ್ಟುಕೊಂಡರೆ ಈ ಮಾನ್ಯ ಸಭೆಗೆ ಶೋಭೆ ತರುವಂತಹ ಚರ್ಚೆ ಆಗಿಲ್ಲ ಎಂದು ನಾನು ಹೇಳಿದೆ. ಯಾರು ಯಾರು ಏನು ಹೇಳಿದ್ದಾರೆ ಎಂಬ ದೃಷ್ಟಿಯಿಂದ ನಾನು ಪ್ರಾಸ್ತಾವಿಕವಾಗಿ ಹೇಳಿದೆ. ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದ್ದರೆ ಮಾನ್ಯ ಸದಸ್ಯರೆಲ್ಲರೂ ಯಾರು ಯಾರು ಈ ಚರ್ಚೆಯಲ್ಲಿ ಭಾಗವಹಿಸಿ ಅವರು ಟೀಕೆಯನ್ನೇ ಮಾಡಿರಲಿ, ಸಲಹೆಯನ್ನೇ ಕೊಟ್ಟಿರಲಿ ಅವರೆಲ್ಲರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಒಂದು ವಿಚಾರವನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ಇವೊತ್ತು ಮೈಸೂರು ರಾಜ್ಯದಲ್ಲಿ, ಕರ್ನಾಟಕ ರಾಜ್ಯದಲ್ಲಿ ಅಲ್ಲದೆ ಕೆಲವು ಘಟನೆಗಳು ಆಗಿರಬಹುದು. 1968ರ ಇಸವಿಯಲ್ಲಿ ಆಗಿದ್ದನ್ನು ನಾನು ಹೇಳುತ್ತಿದ್ದೇನೆ. ಕೆಲವು ಸ್ಟ್ರೇ ಇನ್‌ಸ್ಟೆನ್ಸ್ ಆಗಿರಬಹುದು. ಸರ್ವೇ ಸಾಮಾನ್ಯವಾಗಿ ಬಹುಶಃ ನಮ್ಮ ರಾಷ್ಟ್ರದ ಎರಡನೇ ರಾಜ್ಯಗಳನ್ನು, ನೆರೆ ಪ್ರಾಂತ್ಯಗಳನ್ನು

(ಶ್ರೀ ವೀರೇಂದ್ರ ಪಾಟೀಲ್)

ಲೆಕ್ಕಕ್ಕೆ ತೆಗೆದುಕೊಂಡರೆ ನಮ್ಮ ರಾಜ್ಯದಲ್ಲಿ ಬಹಳ ಮಟ್ಟಿಗೆ ಲಾ ಅಂಡ್ ಆರ್ಡರ್ ಇತ್ತು ಎಂದು ನಾನು ಈ ಸಂದರ್ಭದಲ್ಲಿ ಸಂತೋಷದಿಂದ ಹೇಳುತ್ತೇನೆ. ಇದಕ್ಕೆ ನಾನು ಜನತೆಗೆ ಮೊಟ್ಟಮೊದಲು ಅಭಿನಂದಿಸುತ್ತೇನೆ. ಆ ಮೇಲೆ ಲಾ ಅಂಡ್ ಆರ್ಡರ್ ಇರುವುದಕ್ಕೆ ಯಾರು ಜವಾಬ್ದಾರರೋ ಅವರಿಗೂ ಅಭಿನಂದಿಸುತ್ತೇನೆ. ದುರ್ದೈವ ವಶಾತ್ ಕೆಲವು ಘಟನೆಗಳು ಆಗಿವೆ. ಆದರೆ ಅವು ದೊಡ್ಡ ಪ್ರಮಾಣದ ಘಟನೆಗಳಲ್ಲ. ಮೊನ್ನೆ ಮಿಲ್ಕ್ ಡೈರಿ ಸ್ಟ್ರೈಕ್ ಆಯಿತು, ಮತ್ತು ಮೊನ್ನೆ ಹುಬ್ಬಳ್ಳಿಯಲ್ಲಿ ಫೈರಿಂಗ್ ಆಯಿತು. ರಣಜಿ ಟ್ರೋಫಿ ಕ್ರಿಕೆಟ್ ಮ್ಯಾಚಿನಲ್ಲಿ ಒಂದು ಘಟನೆ ಆಯಿತು. ಈ ರೀತಿಯಿಂದ 3–4 ಘಟನೆಗಳು ಏನು ಆಗಿವೆಯೋ ಬಹುಶಃ ಅವುಗಳನ್ನು ಬಿಟ್ಟರೆ ನಮ್ಮ ರಾಜ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಲಾ ಅಂಡ್ ಆರ್ಡರನ್ನು ಮೇಂಟೇನ್ ಮಾಡಿಕೊಂಡು ಬಂದಿದ್ದೇವೆ, ಬೆಳೆಸಿಕೊಂಡು ಬಂದಿದ್ದೇವೆ ಎನ್ನುವ ಮಾತನ್ನು ನಾನು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ.

ಪೋಲೀಸು ಇಲಾಖೆಯಲ್ಲಿ ಸಾಕಷ್ಟು ಹೆಚ್ಚು ಖರ್ಚಾಗಿದೆ ಎನ್ನುವಂಥಾ ವಿಚಾರವನ್ನು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಹಿಂದೆ 4½–5 ಕೋಟಿ ರೂಪಾಯಿಗಳು ಖರ್ಚಾಗುತ್ತಿತ್ತು. ಈಗ 8 ಕೋಟಿ ರೂಪಾಯಿಗಳವರೆಗೂ ಹೆಚ್ಚು ಖರ್ಚು ಆಗುತ್ತಿದೆ. ಆದರೆ ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಪೋಲೀಸು ಇಲಾಖೆಯಲ್ಲಿ ಬಹಳ ಮಟ್ಟಿಗೆ ಸಿಬ್ಬಂದಿಯ ಮೇಲೆ ಹೆಚ್ಚು ಖರ್ಚು ಬರುತ್ತದೆ. ಎರಡನೆ ಖರ್ಚು ಆಗುವುದಿಲ್ಲ. ಸಿಬ್ಬಂದಿಯ ಮೇಲೆ ಖರ್ಚು ಆಗುತ್ತದೆ ಎಂದರೆ ಅವರ ಸ್ಯಾಲರಿ, ಟಿ. ಎ., ಡಿ. ಎ. ಕನ್‌ವೇಯನ್ಸ್ ವೆಹಿಕಲ್ ಮೇಂಟೆನೆನ್ಸ್ ಮುಂತಾದ ಖರ್ಚುಗಳು ಆಗುತ್ತವೆ. ಅದನ್ನು ಗಮನಕ್ಕೆ ಇಟ್ಟುಕೊಂಡರೆ ನಮ್ಮಲ್ಲಿ ಪೋಲೀಸು ಇಲಾಖೆಗೆ ಸಿಬ್ಬಂದಿಗೆ ಹೆಚ್ಚು ಖರ್ಚುಮಾಡುತ್ತಿದ್ದೇವೆಯೋ ಎನಿಸುತ್ತದೆ. ತಮಗೆ ಒಂದು ಸಣ್ಣ ನಿದರ್ಶನ ಹೇಳುತ್ತೇನೆ. ಬೆಂಗಳೂರು ಸಿಟಿಯ ಲೆಕ್ಕವನ್ನು ತೆಗೆದುಕೊಂಡರೆ 1662 ಜನಗಳಿಗೆ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಇದ್ದಾನೆ.

ಶ್ರೀ ಎಸ್. ಗೋಪಾಲ ಗೌಡ.—ಎಲ್ಲರನ್ನೂ ಕೊಲ್ಲುವುದಕ್ಕೆ ಆಗುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆ ಆ ಒಂದು ಅಧಿಕಾರ ಇದೆ. ಅವರು ಏಕೋ ಈ ಬೇಡಿಕೆಯ ಮೇಲೆ ಮಾತನಾಡಲಿಲ್ಲ. ಅವರು ಮಾತನಾಡಿದ್ದರೆ ಏನೇನು ಹೇಳುತ್ತಿದ್ದರೋ ಗೊತ್ತಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಸ್ವಲ್ಪ ಶಾಂತಿಯಿಂದ ನಾನು ಹೇಳುವುದನ್ನು ಕೇಳಬೇಕು.

ಶ್ರೀ ಎಸ್. ಚನ್ನಯ್ಯ.—ಪಾಪ ಅವರಿಗೆ ಆರೋಗ್ಯ ಚೆನ್ನಾಗಿಲ್ಲ. ಇಲ್ಲದಿದ್ದರೆ ಮಾತನಾಡುತ್ತಿದ್ದರು.

ಶ್ರೀ ವೀರೇಂದ್ರ ಪಾಟೀಲ್.—ಅವರು ಹೇಳುವುದನ್ನು ಎಷ್ಟೋ ಕೇಳಿದ್ದೇನೆ. ಎಷ್ಟೋ ನಡೆಯುತ್ತದೆ. ಅದರಲ್ಲೇನು ಪಾಪವೂ ಇಲ್ಲ ಪುಣ್ಯವೂ ಇಲ್ಲ. ಮದ್ರಾಸಿನಲ್ಲಿ ಪ್ರತಿ ಸಾವಿರ ಜನ ಸಂಖ್ಯೆಗೆ 2.6 ಮಂದಿ ಪೋಲಿಸರಿದ್ದಾರೆ. ನಮ್ಮಲ್ಲಿ ಬೆಂಗಳೂರು ಸಿಟಿಯ ಲೆಕ್ಕವನ್ನು ತೆಗೆದುಕೊಂಡರೆ 1662 ಜನಗಳಿಗೆ ಒಬ್ಬ ಕಾನ್‌ಸ್ಟೇಬಲ್ ಇದ್ದಾನೆ.

ಶ್ರೀ ಎಚ್. ಸಿದ್ದವೀರಪ್ಪ.—ಮೈಸೂರಿನ ಜನ ಒಳ್ಳೆಯವರು.

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕಾಗಿಯೇ ನಾನು ಪ್ರಪ್ರಥಮವಾಗಿ ಹೇಳಿದೆ, ನಮ್ಮಲ್ಲಿ ಲಾ ಅಂಡ್ ಆರ್ಡರನ್ನು ನಡೆಸಿಕೊಂಡು ಬೆಳಸಿಕೊಂಡು ಬಂದಿದ್ದೇವೆ ಎಂದು. ಮತ್ತು ಅದಕ್ಕಾಗಿ ನಾನು ನಮ್ಮ ಜನತೆಯನ್ನು ಅಭಿನಂದಿಸುತ್ತೇನೆ ಎಂದು ಹೇಳಿದ್ದೇನೆ. ಎಲ್ಲಾ ಕ್ರೆಡಿಟ್ ಅನ್ನೂ ನಾನು ತೆಗೆದುಕೊಳ್ಳಬೇಕೆಂಬ ಆತುರತೆ ನನಗೆ ಇಲ್ಲ. ಎಷ್ಟು ಸಿಕ್ಕುತ್ತದೆಯೋ ಎಷ್ಟು ಸಿಕುವುದಿಲ್ಲವೋ ಅದು ಗೊತ್ತಿಲ್ಲ. ಪ್ರತಿಯೊಬ್ಬರೂ ಸಹ ಹೇಳುವ ಮುನ್ನ ಸರಿಯಾಗಿ ಹೇಳಬೇಕಾಗುತ್ತದೆ. ಇದರಲ್ಲಿ ಪೋಲೀಸಿನವರ ಕರ್ತವ್ಯ ಮತ್ತು ಜನತೆಯ ಕರ್ತವ್ಯ ಎಲ್ಲರದ್ದೂ ಇದೆ. ಬೇರೆ ರಾಜ್ಯಕ್ಕೆ ಹೋಲಿಸಿದರೆ ನಮ್ಮಲ್ಲಿ ಪೋಲೀಸು ಇಲಾಖೆಗೆ ಹೆಚ್ಚು ಖರ್ಚು ಮಾಡುತ್ತಿಲ್ಲ ಎಂದು ಹೇಳಬಹುದು. ಇದೀಗ ನಾನು ಸಹ ಹೇಳಿದೆ ಸಿಬ್ಬಂದಿ ಮೇಲೆ ಖರ್ಚು ಜಾಸ್ತಿಯಾಗುತ್ತಿದೆ. ಎಸ್ಟಾಬ್ಲಿಸ್‌ಮೆಂಟ್ ಮೇಲೆ ಯಾವ ರೀತಿ ಪ್ರತಿವರ್ಷ ಹೆಚ್ಚು ಖರ್ಚಾಗುತ್ತಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಪ್ರತಿವರ್ಷ ಡಿ. ಎ. ಹೆಚ್ಚುತ್ತಿದೆ. ಸಂಬಳ ಜಾಸ್ತಿಯಾಗುತ್ತಿದೆ. ವಿರೋಧ ಪಕ್ಷದ ಒಬ್ಬರು ಸದಸ್ಯರು ಪೋಲಿಸರ ಕನಿಷ್ಟ ಸಂಬಳ 100 ರೂಪಾಯಿಗಳಾದರೂ ಇರಬೇಕೆಂದು ಒಂದು ಕಟ್ ಮೋಷನ್ ಕೊಟ್ಟಿದ್ದಾರೆ. ಪೋಲೀಸರು ಹಗಲು ರಾತ್ರಿ ದುಡಿಯಬೇಕಾಗು

ತ್ತದೆ. ಅವರಿಗೆ ಸಾಕಷ್ಟು ಕೆಲಸ ಇರುವುದರಿಂದ ಸಾಕಷ್ಟು ವೇತನ ಕೊಡಬೇಕೆಂದು ಅವರು ಕಟ್ ಮೋಷನ್ ತಂದಿದ್ದಾರೆ. ಒಂದು ವಿಷಯ ಹೇಳಬೇಕೆಂದರೆ ಇವತ್ತಿನದಿವಸ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಹೊಸದಾಗಿ ಕೆಲಸಕ್ಕೆ ಸೇರಿದರೆ 151 ರೂಪಾಯಿಗಳ ಸಂಬಳ ಸಿಗುತ್ತದೆ. ಡ್ರೆಸ್ ಫ್ರೀಯಾಗಿ ಕೊಡುತ್ತೇವೆ. ವಾಸಕ್ಕೆ ಮನೆಯನ್ನು ಫ್ರೀಯಾಗಿ ಕೊಡುತ್ತೇವೆ. ಮನೆಗಳು ಇಲ್ಲದ ಕಡೆ ಹೌಸ್‌ರೆಂಟ್ ಅಲೋಯನ್ಸ್ ಕೊಡುತ್ತೇವೆ. ಈ ಪ್ರಕಾರ ಖರ್ಚು ಜಾಸ್ತಿಯಾಗಿದೆಯೇ ವಿನಃ ಪೋಲೀಸ್ ಸಂಖ್ಯೆಯನ್ನು ಜಾಸ್ತಿ ಮಾಡಿಲ್ಲ. ಈಗಿರುವವರಿಗೆ ಟಿ. ಎ., ಡಿ. ಎ. ಕೊಡಬೇಕಾಗುತ್ತದೆ. ಪ್ರತಿವರ್ಷ ಡಿ. ಎ. ಜಾಸ್ತಿಯಾಗುತ್ತಿದೆ. ಇನ್ನೊಂದು ವಿಷಯವೆಂದರೆ ಕಳೆದ 4-5 ವರ್ಷಗಳಿಂದ ಪೋಲೀಸ್ ಸಿಬ್ಬಂದಿಯವರಿಗೆ ಮನೆಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರದವರು ಬಹಳ ಮಟ್ಟಿಗೆ ಸಹಾಯ ಮಾಡಿದ್ದಾರೆ. ಈ ರೀತಿ ಸಹಾಯ ಮಾಡಿದ್ದರ ಪರಿಣಾಮವಾಗಿ ಇವತ್ತು ಸುಮಾರು 67 ಪರ್‌ಸೆಂಟ್‌ವರೆಗೆ ಮನೆಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿದೆ. ಮನೆಗಳನ್ನು ಕಟ್ಟಿಸಿ ಕೊಡಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಅನೇಕ ಮನೆಗಳು ಕಟ್ಟಲ್ಪಡುತ್ತಿವೆ. ಅನೇಕ ಸ್ಟೇಜ್‌ನಲ್ಲಿವೆ. ಈ ಮನೆಗಳನ್ನೆಲ್ಲಾ ಕಟ್ಟಿ ಮುಗಿಸಿದ ಮೇಲೆ 67 ರಿಂದ 68 ಪರ್‌ಸೆಂಟ್‌ವರೆಗೆ ಇಡೀ ರಾಜ್ಯದಾದ್ಯಂತ ಪೋಲೀಸಿನವರಿಗೆ ಮನೆಗಳನ್ನು ಒದಗಿಸಿದಂತಾಗುತ್ತದೆ. ಮನೆಗಳನ್ನು ಕಟ್ಟಿಸಿಕೊಡುವ ಕೆಲಸವನ್ನು ಇದೇ ರೀತಿ ಬೆಳೆಸಿಕೊಂಡು ಹೋಗೋಣ ಎಂದು ಮಾಡಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರದವರು ಸಹಾಯ ಮಾಡುತ್ತಿರುವುದಲ್ಲದೆ ನಾವೂ ಕೂಡ 75 ಲಕ್ಷ ರೂಪಾಯಿಗಳನ್ನು ಈ ವರ್ಷ ಒದಗಿಸಿದ್ದೇವೆ. ಪೋಲೀಸಿನವರಿಗೆಲ್ಲಾ ಪೂರ್ತಿಯಾಗಿ ಮನೆಗಳನ್ನು ಕಟ್ಟಿಸಿಕೊಡಬೇಕು, ಪ್ರತಿಯೊಬ್ಬರಿಗೂ ಮನೆ ಸಿಗಬೇಕು, 100 ಪರ್‌ಸೆಂಟ್‌ವರೆಗೆ ಮನೆಗಳನ್ನು ಕಟ್ಟಿಸಬೇಕೆಂಬ ದೃಷ್ಟಿಯಿಂದ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ಬೆಂಗಳೂರು ನಗರದಲ್ಲಿ ಪೋಲೀಸ್ ಕಮೀಷನರ್ ಅವರು ಹೊಸದಾಗಿ ಬಂದಮೇಲೆ ನಗರದಲ್ಲಿ ಕೆಲವು ಸುಧಾರಣೆಗಳನ್ನು ಮಾಡಿದ್ದಾರೆ. ಪ್ರತಿಯೊಂದು ಪೋಲೀಸ್ ಸ್ಟೇಷನ್ ನಲ್ಲಿಯೂ ಲೇಡಿ ರಿಸಿಪ್ಷನಿಸ್ಟ್‌ನ್ನು ಈಗ ಇಡಲಾಗಿದೆ. ಈ ಪದ್ಧತಿ ಇಡೀ ಹಿಂದೂಸ್ಥಾನದಲ್ಲಿ ಎಲ್ಲಿಯೂ ಇಲ್ಲ. ಪೋಲೀಸರು ಬಹಳ ಒರಟಾಗಿ ವರ್ತನೆ ಮಾಡುತ್ತಾರೆ, ಸರಿಯಾಗಿ ನಡೆದುಕೊಳ್ಳುವುದಿಲ್ಲ, ಪೋಲೀಸ್ ಸ್ಟೇಷನ್‌ನಲ್ಲಿ ಹೇಳುವವರಿಲ್ಲ, ಕೇಳುವವರಿಲ್ಲ ಎಂದು ಅನೇಕ ಮಾನ್ಯ ಸದಸ್ಯರುಗಳು ಹೇಳುತ್ತಿದ್ದರು. ಅದಕ್ಕೋಸ್ಕರ ಈ ಪದ್ಧತಿಯನ್ನು ಬೆಂಗಳೂರು ನಗರದ ಎಲ್ಲಾ ಪೋಲೀಸ್ ಸ್ಟೇಷನ್‌ಗಳಲ್ಲಿಯೂ ಜಾರಿಗೆ ತರಲಾಗಿದೆ. ಈಗ ಅವರು ದೂರುಗಳನ್ನು ಕೇಳಿ ರೆಕಾರ್ಡ್ ಮಾಡಿ ಜನತೆಯ ಜೊತೆಯಲ್ಲಿ ಸಹಕಾರ ಮಾಡುತ್ತಿದ್ದಾರೆ. ಒಳ್ಳೆಯ ರೀತಿಯಿಂದ ನಡೆದುಕೊಳ್ಳುತ್ತಿದ್ದಾರೆಂದು ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಪೋಲೀಸ್ ಕಮೀಷನರ್ ಅವರು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆಂದು ಹೇಳಿದಿರಿ. ಇದರ ಬಗ್ಗೆ ಈ ಒಂದು ಸಣ್ಣ ಪತ್ರಿಕೆಯಲ್ಲಿ ಕೆಲವು ವಿಚಾರಗಳನ್ನು ಹೇಳಲಾಗಿದೆ. ಈ ಪತ್ರಿಕೆಯನ್ನು ನಾನು ನಿಮಗೆ ಕೊಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಯಾವ ಪತ್ರಿಕೆಯಲ್ಲಿ ಅವರ ವಿಚಾರ ಬಂದಿದೆ ಎಂಬುದು ನನಗೆ ಗೊತ್ತು. ಬೇಕಾದರೆ ಆ ಪತ್ರಿಕೆಯ ಹೆಸರನ್ನು ಸಹ ಹೇಳುತ್ತೇನೆ. ಎಲ್ಲಾ ವಿಚಾರಗಳು ನನಗೆ ಗೊತ್ತಿದೆ. ಆ ಬಗ್ಗೆ ಪ್ರಸ್ತಾಪ ಮಾಡಿದರೆ ಸಭೆಗೆ ಗೌರವ ಬರುವುದಿಲ್ಲ. ಕೇಳುವವರಿಗೂ ಗೌರವ ಬರುವುದಿಲ್ಲ. ಅದಕ್ಕಾಗಿ ನಾನು ಆ ವಿಚಾರ ಹೇಳುವುದಿಲ್ಲ. ಯಾರೋ ಏನೋ ಹೇಳಿದರು ಎಂದುಕೊಂಡು ತಾವು ನಂಬುವುದಕ್ಕೆ ಹೋಗಬೇಡಿ. ತಾವು ಸ್ವಲ್ಪಮಟ್ಟಿಗೆ ಅದನ್ನು ವೆರಿಫೈ ಮಾಡಿದರೆ ಏನಾಗಿದೆ ಎಂಬುದು ಗೊತ್ತಾಗುತ್ತದೆ. ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಅಂತಹ ವಿಚಾರಗಳನ್ನು ಪ್ರಸ್ತಾಪ ಮಾಡುವುದು ಬೇಡ ಎಂದು. ಆ ವಿಷಯದಲ್ಲಿಯೂ ಕೂಡ ನಾನು ಮುಂದೆ ಹೇಳುತ್ತೇನೆ. ಈಗ ನೈಟ್ ಬೀಟ್ಸ್ ಜಾಸ್ತಿಯಾಗಿದೆ. ಸೂಪರಿಂಟ್‌ಡೆಂಟ್ ಆಫ್ ಪೋಲೀಸ್ ಅವರು, ಡಿ. ವೈ. ಎಸ್. ಪಿ. ಅವರೂ ಹಾಗೂ ಪೋಲೀಸ್ ಕಮಿಷನರ್ ಅವರು ಸಹ ನೈಟ್ ಬೀಟ್ಸ್ ಹೋಗುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರಾಯಚೂರಿನಲ್ಲಿ ಕಳ್ಳತನಗಳು ಜಾಸ್ತಿಯಾಗುತ್ತಿವೆಯೆಂದು ಶ್ರೀಮಾನ್ ನಾಗಪ್ಪನವರು ಒಂದು ಕಟ್‌ಮೋಷನ್ ಕೊಟ್ಟಿದ್ದಾರೆ. ಅವರು ರೈಲ್ವೆ ಸ್ಟೇಷನ್ ಬಗ್ಗೆ ಕೇಳಿದ್ದಾರೋ ಏನೋ ಗೊತ್ತಿಲ್ಲ. ರೈಲ್ವೆ ಸ್ಟೇಷನ್ ಬಿಟ್ಟು ಬೇರೆ ಭಾಗದಲ್ಲಿ ಆಗಿರುವ ಕಳ್ಳತನದ ಬಗ್ಗೆ ಅಂಕಿ ಅಂಶಗಳನ್ನು ಕೊಡುತ್ತೇನೆ: 1966 ರಲ್ಲಿ 34 ಕೇಸಸ್‌ಗಳು 1967 ರಲ್ಲಿ 18 ಕೇಸಸ್‌ಗಳು, 1968 ರಲ್ಲಿ 7 ಕೇಸಸ್‌ಗಳು ಮಾತ್ರ ರಿಪೋರ್ಟ್ ಆಗಿವೆ. ಕಳ್ಳತನ ಹೆಚ್ಚಾಗುತ್ತಿದೆ ಎಂದು ಹೇಳುವುದು ಕಷ್ಟವಾಗುತ್ತದೆ. ಅದನ್ನು ನಂಬುವುದು ಕಷ್ಟವಾಗುತ್ತದೆ. ಇನ್ನೊಂದು ವಿಚಾರವೆಂದರೆ

(ಶ್ರೀ ವೀರೇಂದ್ರ ಪಾಟೀಲ್)

ಮತ್ತೊಬ್ಬರು ಸದಸ್ಯರು ಐ. ಜಿ. ಪಿ. ಅವರು ಒಂದೇ ಸ್ಥಳದಲ್ಲಿ ಎಷ್ಟು ವರ್ಷವಿರುವುದು, ಏಕೆ ವರ್ಗ ಮಾಡಿಸುವುದಿಲ್ಲವೆಂದು ಕಟ್ ಮೋಷನ್ ಮೂಲಕ ಕೇಳಿದ್ದಾರೆ. ಈ ಸಭೆಯಲ್ಲಿ ಹೇಳಬೇಕಾದರೆ ಐ. ಜಿ. ಪಿ. ಅವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಬರುವುದಿಲ್ಲ. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಆದ್ದರಿಂದ ಅವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕಾಗುವುದಿಲ್ಲ. ಇವರು ನಮ್ಮ ರಾಜ್ಯದವರೇ ಆಗಿದ್ದಾರೆ. ನಮ್ಮ ಕೇಡರ್‌ನವರೇ ಆಗಿದ್ದಾರೆ; ಮತ್ತು ಐ. ಪಿ. ಎಸ್. ಆಫೀಸರ್ ಆಗಿದ್ದಾರೆ. ಆದ್ದರಿಂದ ಇವರನ್ನು ಬೆಂಗಳೂರಿನಿಂದ ಮೈಸೂರಿಗಾಗಲೀ, ಬೆಳಗಾಂಗೇ ಆಗಲೀ, ಮರಕೆರಾಗೆ ಆಗಲೀ ವರ್ಗ ಮಾಡುವುದಕ್ಕಾಗುವುದಿಲ್ಲ. ಅವರು ಸೀನಿಯರ್ ಪೋಸ್ಟ್ ಆಫೀಸರ್ ಆದ್ದರಿಂದ ಮತ್ತು ನಮ್ಮ ಕೇಡರ್‌ಗೆ ಸಂಬಂಧಪಟ್ಟವರಾದ್ದರಿಂದ ಬೆಂಗಳೂರಿನಲ್ಲಿಯೇ ಇರಬೇಕಾಗುತ್ತದೆ. ಏತಕ್ಕೆ ವರ್ಗಮಾಡುವುದಿಲ್ಲವೆಂದು ಕೇಳಿದರೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಇನ್ನು ಜಿ. ಎ. ಡಿ. ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕೆಂದರೆ ನಾನು ಅಧಿಕಾರಕ್ಕೆ ಬಂದಮೇಲೆ ಅನೇಕ ಸುಧಾರಣೆಗಳ ಬಗ್ಗೆ ಪ್ರಯತ್ನಗಳನ್ನು ಮಾಡುತ್ತಿರುವುದು ಈ ಸಭೆಗೆ ಗೊತ್ತಿದೆ. ಅನೇಕ ಕೆಲಸಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಒಳ್ಳೆಯ ರಿಜಲ್ಟ್ ಇದರಿಂದ ಬಂದಿದೆ ಎಂದು ನಾನು ಹೇಳುವುದಿಲ್ಲ. ಈ ದಿಶೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಕಾಗಪತ್ರಗಳು ಜಾಗ್ರತೆ ವಿಲೇವಾರಿಯಾಗಬೇಕು, ಕಾಗದಪತ್ರಗಳು ಜಾಗ್ರತೆ ವಿಲೇವಾರಿಯಾಗುವಂತೆ ಕ್ರಮ ಕೈಗೊಳ್ಳಬೇಕೆಂದು ಡಿವಿಜನಲ್ ಕಮಿಷನರ್ ಅವರನ್ನು ಮತ್ತು ಜಿಲ್ಲಾಧಿಕಾರಿಗಳನ್ನು ಕರೆಸಿಕೊಂಡು ಕಾನ್‌ಫರೆನ್ಸ್ ಮಾಡಿ ಅವರಿಗೆ ಇನ್ನೂ ಅನೇಕ ಸಲಹೆಗಳನ್ನು ಮಾಡಿದ್ದೇವೆ. ಈಗ ಪೇ-ಕಮಿಷನ್ ರಿಪೋರ್ಟ್ ಬಂದಿರುವುದರಿಂದ, ಅವರ ಸಲಹೆಗಳನ್ನು ಮತ್ತು ಈ ಸಭೆಯಲ್ಲಿ ಮಾನ್ಯ ಸದಸ್ಯರುಗಳು ಆ ಬಗ್ಗೆ ಏನು ಸಲಹೆಗಳನ್ನು ಕೊಟ್ಟಿದ್ದಾರೋ ಅದನ್ನು ಸಹ ಕ್ರೋಢೀಕರಿಸಿ ನಾವು ಕಾರ್ಯ ರೂಪಕ್ಕೆ ತರಬೇಕಾಗುತ್ತದೆ. ಈಗಾಗಲೇ ಕೆಲಸವನ್ನು ಕಾರ್ಯರೂಪಕ್ಕೆ ತರುತ್ತಿದ್ದೇವೆ. ಆ ವಿಚಾರ ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಮೂರು ಮತ್ತು ನಾಲ್ಕನೆಯ ದರ್ಜೆಯ ನೌಕರರಿಗೆ ಹಿಡಿದಿರುವ ಡಿ. ಎ. ವಿಚಾರದಲ್ಲಿ ಬಾಂಡ್ ಕೊಡಬೇಡಿ, ನಗದು ಕೊಡುವುದಕ್ಕೆ ಏರ್ಪಾಡು ಮಾಡಿ.

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ನಾನು ಹೇಳುವುದಿಲ್ಲ. ಮಾನ್ಯ ಆರ್ಥಿಕ ಮಂತ್ರಿಗಳು ಆ ಬಗ್ಗೆ ಹೇಳಬಹುದು.

ಅನೇಕ ಆಫೀಸರ್ಸ್‌ಗಳ ವಿಚಾರ ನಮಗೆ ಗೊತ್ತಿದೆ ಮತ್ತು ಅವರ ಪರ್‌ಫಾರಮೆನ್ಸ್ ಕೂಡ ಚೆನ್ನಾಗಿದೆ. ಈಗ ಕರಪ್ಷನ್ ಹೆಚ್ಚಾಯಿತು ಎಂದು ಯಾರೂ ಹೇಳುತ್ತಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರೂ ಮಂತ್ರಿಗಳಾಗಿದ್ದವರು. ಅವರು ಕರಪ್ಷನ್ ಎಲ್ಲಿದೆ ಎಂದು ಹೇಳಲಿಲ್ಲ. ಇಲ್ಲೇನೋ ಕಾಂಗ್ರೆಸ್ ಗವರ್ನಮೆಂಟು ಇದೆ. ಮದ್ರಾಸು ಸರಕಾರದಲ್ಲಿ ಕರಪ್ಷನ್ ಇಲ್ಲ ಎಂದು ಯಾರಾದಾದರೂ ಎದೆಮುಟ್ಟಿ ಹೇಳುತ್ತಾರೆಯೆ? ಅಥವಾ ಕೇರಳ ಸರಕಾರದಲ್ಲಿಯಾಗಲೀ ಯಾರಾದರೂ ಕರಪ್ಷನ್ ಇಲ್ಲ ಎಂದು ಹೇಳುತ್ತಾರೆಯೇ?.........

8-00 P.M.

ಶ್ರೀ ಬಿ. ಎಲ್. ಗಂಗಾಧರ್—ಅದಷ್ಟೂ ಕಮ್ಮಿ ಇದೆ ಎಂದರೂ ಆಗಬಹುದಲ್ಲ. A Madras police man did not behave well and so an enquiry was conducted within 24 hours and he was dismissed.

Sri S. SIVAPPA.—I request the Hon'ble Speaker to control any member who goes away from the subject. No member is entitled to bring in other States here. There is no use making references to Madras, Kerala and other neighbouring States.
ಅವರು ಕಳ್ಳರಾದರೆ ನೀವು ಕಳ್ಳರಾಗಬೇಕೇನು!

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುತ್ತಿರುವುದು ಕರಪ್ಷನ್ ಪ್ರಾಬ್ಲಂ ಎನ್ನುವುದು ಮೈಸೂರು ರಾಜ್ಯಕ್ಕೇ ಸೀಮಿತವಾಗಿಲ್ಲ ಎಂದು ಹೇಳುವುದಕ್ಕೆ ಹೊರಟಿದ್ದೆ. ಮೈಸೂರು ರಾಜ್ಯದಲ್ಲಿ ಕರಪ್ಷನ್ ಇದೆ ಉಳಿದೆಡೆಗಳಲ್ಲಿ ರಾಮರಾಜ್ಯವಿದೆ ಎಂದು ಬಹುಶಃ ಯಾವ ಮಾನ್ಯ ಸದಸ್ಯರೂ ತಿಳಿದಿಲ್ಲ ಎಂದು ಹೇಳುತ್ತಿದ್ದೆ.........

ಶ್ರೀ ಎಸ್. ಚನ್ನಯ್ಯ.—ತಾವು ಬೇರೆ ಸ್ಟೇಟು ವಿಚಾರ ಏಕೆ ಎತ್ತುತ್ತೀರಿ? ನೀವು ಹೇಳು ವುದನ್ನು ಒಪ್ಪಿಕೊಳ್ಳಬೇಕಾದರೆ ಕಷ್ಟವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ನಿಂತಿದ್ದೇನೆ. ತಾವು ಹಾಗೆ ಹೇಳಬಾರದು.

ಶ್ರೀ ಎಸ್. ಚನ್ನಯ್ಯ.—ನೀವು ಕೂತುಕೊಳ್ಳುವುದಿಲ್ಲ. ನನಗೆ ಗೊತ್ತು. ಅದರಿಂದಲೇ ಹೇಳುವುದು.

ಶ್ರೀ ವಾಟಾಳ್ ನಾಗರಾಜ್.—ಲಂಚ ಯಾರ ಮಗ? ಭ್ರಷ್ಟಾಚಾರ ಯಾರ ಮಕ್ಕಳು?

ಶ್ರೀ ವೀರೇಂದ್ರ ಪಾಟೀಲ್.—ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವೊತ್ತು ಇಲ್ಲಿ ನಾನು ನಿಂತಿರುವುದು ಇಲ್ಲಿ ನಡೆದಿರುವ ಡಿಬೇಟುಗಳಿಗೆ ಉತ್ತರ ಕೊಡುವುದಕ್ಕಾಗಿ. ಹಾಗೆ ಉತ್ತರ ಕೊಡುವಾಗ ಹೇಳಬೇಕಾದುದನ್ನೆಲ್ಲಾ ಹೇಳಬೇಕಾಗುತ್ತದೆ. ಏನು ಹೇಳಬೇಕು ಏನು ಹೇಳ ಬೇಕಾಗಿಲ್ಲ ಎನ್ನುವುದನ್ನು ಯಾರೂ ಹೇಳುವಂತಿಲ್ಲ. ನಾನೇ ಸಮಂಜಸವಾಗಿ ಹೇಳುವಾಗ ಇದನ್ನು ನಿರ್ಣಯ ಮಾಡಬೇಕಾಗುತ್ತದೆ. ಒಂದು ವೇಳೆ..........

ಶ್ರೀ ಎಸ್. ಚನ್ನಯ್ಯ.—ನಾವು ಇಲ್ಲಿ ಏನು ಹೇಳಿದ್ದೇವೋ ಅದಕ್ಕೆ ತಾವು ಇಲ್ಲಿ ಉತ್ತರ ಕೊಡಬೇಕಾದದ್ದು ಅವಶ್ಯಕ.

ಶ್ರೀ ವೀರೇಂದ್ರ ಪಾಟೀಲ್.—ಇದರ ಅರ್ಥ ತಾವು ಬೇಕಾದ ಹಾಗೆ ಟೀಕೆ ಮಾಡಬಹುದು. ನಾವು ಅದಕ್ಕೆ ಉತ್ತರ ಕೊಡಬಾರದು ಎಂದರ್ಥವೇ? I cannot do that.

Sri S. SIVAPPA.—He is casting aspersions on other States. I never stated that corruption is on the increase in Kerala and other States.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುತ್ತಿರುವುದು ಮದ್ರಾಸಿನಲ್ಲಿ ಕರಪ್‌ಷನ್ ಇಲ್ಲ ಎಂದು ಯಾರೂ ಹೇಳಲಿಲ್ಲ ಅಥವಾ ಕೇರಳದಲ್ಲಿ ಇಲ್ಲ ಎಂದು ಯಾರೂ ಹೇಳಲಿಲ್ಲ. ಆದುದರಿಂದ ಕರಪ್‌ಷನ್ ಎಲ್ಲಿ ತಾನೇ ಇಲ್ಲ ಎನ್ನುವುದನ್ನು ಎಂದು ಮಾನ್ಯ ಸದಸ್ಯರೂ ಒಪ್ಪಿಕೊಳ್ಳುತ್ತಾರೆ ಎಂದು ಹೇಳಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಪ್ರಕೃತವೇ ಅಪ್ರಕೃತವೇ ಎಂದು ತೀರ್ಮಾನ ಮಾಡುವವರು ಯಾರು? ಈ ದಿವಸ ಅವರು ಹಾಗೆ ಹೇಳುತ್ತಿರು ವುದು ಸರಿಯೇ?

Mr. SPEAKER.—It is left to every hon. Member what argunents he should advance, how he should advance them what reasons he should advance. But it is laft to the Chair to judge whether he is relevent or not.

Sri S. SIVAPPA.—He is at liberty to refute our charges, but he cannot cast aspersions on neighbouring States. He is particularly referring to the States where there are non-Congress Governments. By that he wants to defame them. At every stage he refers to Kerala, Madras and such other States.

ಶ್ರೀ ಎಸ್. ಗೋಪಾಲಗೌಡ.—ಬಿಹಾರದಲ್ಲಿ ತಮ್ಮ ಕಾಂಗ್ರೆಸ್ ಪಕ್ಷಕ್ಕೆ ಧಕ್ಕೆಯಾಗಿ ಇದಕ್ಕಾಗಿ ಒಂದು ಹೈಯ್ಯರ್ ಕಮಿಷನ್ ನೇಮಕ ಮಾಡಿದಿರಿ.

ಶ್ರೀ ವೀರೇಂದ್ರ ಪಾಟೀಲ್.—ಈಗ ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ.

ಶ್ರೀ ಹೆಚ್. ಎನ್. ನಂಜೇಗೌಡ.—ತಮ್ಮಲ್ಲಿ ನಾನು ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Sri VEERENDRA PATIL.—He raised a point of order and he finished by saying that he wants to make an appeal to you, Sir. Thereby I wasted two or three minutes.

ಶ್ರೀ ಹೆಚ್. ಎನ್. ನಂಜೇಗೌಡ.—ನನ್ನ ಪಾಯಿಂಟ್ ಆಫ್ ಆರ್ಡರು 288 (3) (2) ರಲ್ಲಿ ಬರುತ್ತೆ. ತಮ್ಮಗಮನವನ್ನು ಸೆಳೆಯುವುದಕ್ಕಾಗಿ ಈ ರೂಲನ್ನು ಹೇಳುತ್ತಿದ್ದೇನೆ. ಈ ರೂಲನ್ನು ಸ್ಪೀಕರ್‌ರವರು ಅಮೆಂಡು ಮಾಡಿದೆ ಎಂದು ಎಲ್ಲೂ ಹೇಳಲಿಲ್ಲ. ಈಗ ಇಲ್ಲಿ ಪ್ರತಿಯೊಂದು ಮಾತಿನ ಧ್ವನಿಯಲ್ಲೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಹೇಳುವುದನ್ನು ನೋಡಿದರೆ ಸರ್ವಾಧಿಕಾರತ್ವದ

(ಶ್ರೀ ಎಚ್. ಎನ್. ನಂಜೇಗೌಡ)

ಧೋರಣೆ ಇರುವಂತೆ ತೋರುತ್ತದೆ. ಆ ರೀತಿ ಇರಬಾರದು ಎನ್ನುವುದನ್ನು ಪ್ರಜಾ ಸತ್ತೆಯಲ್ಲಿ ಅವರು ತಿಳಿದುಕೊಳ್ಳಬೇಕು. ಮಾನ್ಯ ಸದಸ್ಯರು ಇಲ್ಲಿ ಮಾತನಾಡಿರುವುದರ ಬಗ್ಗೆ ಮುಖ್ಯ ಮಂತ್ರಿಗಳು ಅಪ್ರಕೃತ ಎಂದು ಹೇಳುವುದಕ್ಕಿಂತ ಅವರು ಮಾಡಿರುವ ಕಾರ್ಯಗಳನ್ನು ಕೃತಿಗೆ ಇಳಿಸಬೇಕೆಂದು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

Mr. SPEAKER.—There is no point of order.

ಶ್ರೀ ವೀರೇಂದ್ರ ಪಾಟೀಲ್.—ನಾನು ಇಲ್ಲಿ ಹೇಳುತ್ತಿರುವುದು ಕರಪ್ಷನ್ ವಿಚಾರ. ಇದು ನಮ್ಮ ರಾಜ್ಯದ ಸಮಸ್ಯೆ ಮಾತ್ರವಾಗಿಲ್ಲ. ಇದು ದೇಶದ ಸಮಸ್ಯೆ. ಯಾವುದೇ ಒಂದು ರಾಜ್ಯದ ಸಮಸ್ಯೆಯಲ್ಲ. ಇದಕ್ಕಾಗಿ ಈ ಸಮಸ್ಯೆಯನ್ನು ಯಾವ ರೀತಿ ಎದುರಿಸಬೇಕು, ಯಾವ ರೀತಿಯಿಂದ ಕಡಿಮೆ ಮಾಡಬೇಕು ಎನ್ನುವುದರಲ್ಲಿ ಒಂದು ಪ್ರಾಂತವಲ್ಲ ಎಲ್ಲರೂ ಸಹಕಾರ ನೀಡಬೇಕಾದುದು ಅವಶ್ಯಕ. ಆ ರೀತಿ ಸಹಕಾರ ನೀಡಿದರೆ ಇದನ್ನು ಎಷ್ಟು ಪ್ರಮಾಣದಲ್ಲಿ ಕುಂಠಿತಗೊಳಿಸಬಹುದೋ ಅಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಬಹುದು ಎಂದು ನಾನು ನಂಬಿದ್ದೇನೆ.

ಇನ್ನು ನಮ್ಮಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಜನ ಬೇಕಾದಷ್ಟು ಇದ್ದಾರೆ. ಬಹುಶಃ ಇದರ ಲೆಕ್ಕ ಹೇಳಬೇಕಾಗಿದ್ದರೆ, they are a liability on the administration ಎಂದು ನನಗನಿಸುತ್ತದೆ. ಇದಕ್ಕಾಗಿ ಏನಾದರೂ ಮಾಡಬೇಕು ಎಂದರೆ, ಶ್ರೀಮಾನ್ ದೇವರಾಜಅರಸ್ ರವರು ಇಲ್ಲಿ ಹೇಳಿದ ಹಾಗೆ ಇದರಲ್ಲಿ ಸ್ವಲ್ಪ ನಿಜಾಂಶ ಇದೆ. ಇವರ ವ್ಯವಸ್ಥೆಗಾಗಿ ಅಪ್ರಾಕ್ಸಿಮೇಟ್ ಆಗಿ ಇವರೆಲ್ಲರಿಗೂ ಇನ್‌ಕ್ರಿಮೆಂಟು ಕೊಡಬೇಕಾಗಿದ್ದರೆ ಬಹುಶಃ ಎಷ್ಟೋ ಖರ್ಚಾಗುತ್ತದೆ ಮತ್ತು ಎಷ್ಟು ಕಡೆಗಳಲ್ಲಿ ಕಡಿಮೆ ಮಾಡಬೇಕಾಗುತ್ತದೆ ಎನ್ನುವುದು ಗೊತ್ತಿಲ್ಲ. ಹಾಗೆ ಈ ಮಟ್ಟಕ್ಕೆ ತರಬೇಕಾದರೆ ಇದನ್ನು ಇನ್ನೂ ಪರಿಶೀಲನೆ ಮಾಡಬೇಕಾದ ವಿಷಯವಾಗುತ್ತದೆ. ಆದರೆ ಸರಕಾರದ ಹತ್ತಿರ ಏನು ಅಸ್ತ್ರ ಇದೆ, ಅದನ್ನು ನಾವು ಉಪಯೋಗಮಾಡಬೇಕಾದರೆ ಇದಕ್ಕೆ ತಕ್ಕ ಪ್ರಯತ್ನ ಮಾಡಬೇಕಾಗುತ್ತದೆ. ಇದರಲ್ಲಿ ಯಾವ ಅಧಿಕಾರಿಗಳು 50 ವರ್ಷ ವಯಸ್ಸಿನ ವಯೋಮಿತಿಯನ್ನು ದಾಟಿರುತ್ತಾರೋ ಅಥವಾ ಇಪ್ಪತ್ತೈದು ವರ್ಷಗಳಷ್ಟು ಕ್ವಾಲಿಫೈಯಿಂಗು ಸರ್ವಿಸ್ಸು ಮಾಡಿರುತ್ತಾರೋ ಅಂತಹ ಅಧಿಕಾರಿಗಳನ್ನು ಕಂಪಲ್‌ಸರಿಯಾಗಿ ರಿಟೈರು ಮಾಡಬಹುದು ಎಂದು ಒಂದು ನಿಯಮ ಮಾಡಲಾಗಿದೆ.

ಯಾರಿಗೆ 50 ವರ್ಷ ಆಗಿರುತ್ತದೆ, ಯಾರಿಗೆ 25 ವರ್ಷ ಕ್ವಾಲಿಫೈಯಿಂಗ್ ಸರ್ವಿಸ್ ಆಗಿರುತ್ತದೆ ಅವರು, ಜನರಿಗೆ ಬೇಡವಾದರೆ ಕಂಪಲ್ಸರಿಯಾಗಿ ರಿಟೈರ್ ಮಾಡುತ್ತೇವೆ. ಅಂತಹ ಒಂದು ಅಧಿಕಾರ ಇದೆ. ಅದಕ್ಕಾಗಿ ನಾವು ಏನು ಮಾಡುತ್ತಿದ್ದೇವೆ ಎಂದರೆ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲೂ ಸ್ಕ್ರೀನಿಂಗ್ ಕಮಿಟಿ ಮಾಡಿ ಸ್ಕ್ರೀನಿಂಗ್ ಮಾಡಿಸುತ್ತಿದ್ದೇವೆ. ಆ ಸ್ಕ್ರೀನಿಂಗ್ ಕಮಿಟಿಯಲ್ಲಿ ಸಂಬಂಧಪಟ್ಟಂಥ ಮೇಲ್ದರ್ಜೆಯ 3-4 ಅಧಿಕಾರಿಗಳು ಸೇರಿಕೊಂಡು ಸ್ಕ್ರೀನ್ ಮಾಡಿ ಯಾರು ಯಾರು ಇರುವುದಕ್ಕೆ ಲಾಯಕ್ಕಿಲ್ಲ, ಯಾರು ನಿವೃತ್ತಿ ಆಗಬೇಕೋ ಅಂತಹವರನ್ನು ನಿವೃತ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆ ದಿಶೆಯಲ್ಲಿ ಹೆಜ್ಜೆ ಇಟ್ಟಿದ್ದೇವೆ. ಈಗಾಗಲೇ ಕೆಲವು ಜನರನ್ನು ನಿವೃತ್ತಿ ಮಾಡಿದ್ದೇವೆ. ಕೆಲವರಿಗೆ ನೋಟೀಸ್ ಕೊಟ್ಟಿದ್ದೇವೆ. ಇದನ್ನು ಬೆಳೆಸಿಕೊಂಡು ಹೋಗಬೇಕಾದುದು ಅತ್ಯಾವಶ್ಯಕ ಎಂದು ಕಾಣುತ್ತದೆ. ಈ ರೀತಿಯಿಂದ ಸ್ವಲ್ಪಮಟ್ಟಿಗೆ ನಾನು ಪ್ರಯತ್ನ ಮಾಡಬೇಕಾಗುತ್ತದೆ ಎಂದು ನನಗೆ ಅನಿಸುತ್ತದೆ.

ಇನ್ನು ಅನೇಕ ಕೇಸುಗಳು ಅನೇಕ ಇಲಾಖೆಗಳಲ್ಲಿ ಬಹಳ ದಿವಸದಿಂದ ಇವೆ. ಅದಕ್ಕಾಗಿ ನಾವು ಏನು ಮಾಡುತ್ತೇವೆ ಎಂದರೆ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲೂ. 100 ದಿವಸಗಳಿಂದ ಇದ್ದಂಥ ಎಲ್ಲಾ ಪೆಂಡಿಂಗ್ ಕೇಸಸ್ ವಿಕಾಲೆ ಮಾಡಬೇಕು ಎಂದು ಪ್ರಯತ್ನ ಮಾಡಿದ್ದೇವೆ. ಒಂದೆರಡು ಕೇಸಸ್ ರೆವಿನ್ಯೂ ಸೆಕ್ರಟೇರಿಯೇಟ್‌ನಲ್ಲಿ ಪ್ರಾರಂಭವಾಯಿತು. ಅದನ್ನು ಬೆಳೆಸಿಕೊಂಡು ಎರಡನೇ ಡಿಪಾರ್ಟ್‌ಮೆಂಟಿಗೆ ಹೋಗಬೇಕು ಎನ್ನುವುದನ್ನು ನಾವು ಮಾಡಿಸುತ್ತಿದ್ದೇವೆ. ಅದೇ ರೀತಿ ಪ್ರತಿಯೊಂದು ಸೆಕ್ರಟೇರಿಯೇಟ್‌ನಲ್ಲೂ ಇನ್‌ಸ್ಪೆಕ್ಟ್ ಮಾಡಬೇಕು ಎನ್ನುವ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ.

ಈಗಾಗಲೇ ಸೆಕ್ರಟೇರಿಯೇಟ್‌ನ ಡಿಪಾರ್ಟ್‌ಮೆಂಟ್‌ಗಳ ಇನ್‌ಸ್ಪೆಕ್ಷನ್ ಆಗಿದೆ ಅದನ್ನು ಬೆಳೆಸಿಕೊಂಡು ಹೋಗುತ್ತಿದ್ದೇವೆ. ಈ ರೀತಿ ಅನೇಕ ವಿಚಾರಗಳನ್ನು ಇಟ್ಟಿದ್ದೇವೆ. ಇದನ್ನು ಈಪೊತ್ತೇ ಈ ಮಾನ್ಯ ಸಭೆಗೆ ಹೇಳಬೇಕಾದ ಆವಶ್ಯಕತೆ ಇಲ್ಲ. ಆದರೆ ನನ್ನ ಶಕ್ತಿಗೆ ಅನುಸಾರವಾಗಿ ನನ್ನ ಅಡ್ಮಿನಿಸ್ಟ್ರೇಷನ್‌ನಲ್ಲಿ ಒಂದು ತರಹ ಹೊಸ ಚೈತನ್ಯ ಮತ್ತು ಲವಲವಿಕೆ ಮತ್ತು ಉತ್ಸಾಹ ಬರುವಂತೆ

ಮತ್ತು ಇದು ಜನರಲ್ಲಿಯೂ ಕೂಡ ಮನವರಿಕೆಯಾಗುವುದಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುತ್ತಿದ್ದೇವೆ. ನಾವು ಮಾಡಿದಂಥ ಪ್ರಯತ್ನಕ್ಕೆ ಒಂದೇ ದಿವಸ ಫಲ ಬರುವ ಹಾಗಿಲ್ಲ. ಅದಕ್ಕೆ ಸ್ವಲ್ಪ ದಿವಸ ತಡೆಯಬೇಕಾಗುತ್ತದೆ. ಮೊದಲಿನಂತೆ ಇಲ್ಲ, ಕೆಲಸ ನಡೆಯುತ್ತಾ ಇದೆ ಎನ್ನುವ ಭಾವನೆ ಜನರಲ್ಲಿ ಬರುವಂತೆ ಆಗುತ್ತಾ ಇದೆ, ಅದನ್ನು ಬೆಳೆಸಿಕೊಂಡು ಹೋಗುವ ಪ್ರಯತ್ನ ನಾವು ಮಾಡುತ್ತಾ ಇದ್ದೇವೆ.

ಈ ಸಂಬಂಧದಲ್ಲಿ ಇನ್ನೊಂದು ವಿಚಾರದಲ್ಲಿ ಮಾನ್ಯ ಸದಸ್ಯರು ಒಂದು ಕಟ್‌ಮೋಷನ್ ಕಳುಹಿಸಿದ್ದಾರೆ. ಪ್ರಿವಿಪರ್ಸ್ ಬಗ್ಗೆ ರಾಜಮಹಾರಾಜರುಗಳಿಗೆ ಹಣ ಕೊಡುತ್ತಾ ಇದ್ದೇವೆ ಅದನ್ನು ಏತಕ್ಕೆ ನಿಲ್ಲಿಸಬಾರದು ಎಂದು. ಅದು ನಮಗೆ ಸಂಬಂಧಪಟ್ಟದ್ದು ಅಲ್ಲ ಎಂದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆ ಅಗ್ರಿಮೆಂಟ್ ಕೇಂದ್ರ ಸರ್ಕಾರಕ್ಕೂ ಮಹಾರಾಜರಿಗೂ ಆದುದ್ದು, ಅದರಂತೆ ನಡೆಯುತ್ತಿದೆ. ಅಲ್ಲೂ ಕೂಡ ಇದರ ಪರಿಶೀಲನೆ ನಡೆಯುತ್ತಾ ಇದೆ ಎಂದು ಕೇಳಿರುತ್ತೇನೆ. ಅವರು ಏನು ನಿರ್ಣಯ ಮಾಡುತ್ತಾರೋ ಅದರಂತೆ ನಡೆದುಕೊಳ್ಳಬೇಕಾಗುತ್ತದೆ. ಆದರೆ ಅದು ನಮಗೆ ಸಂಬಂಧಪಟ್ಟದ್ದಲ್ಲ.

ಇನ್ನು ಡೆವಲಪ್‌ಮೆಂಟ್ ಕಮೀಷನರ್ ಇರಲೇಬಾರದು ಎಂದು ಒಂದು ಕಟ್‌ಮೋಷನ್ ಬಂದಿದೆ. ಅದು ಇಲ್ಲದೇ ಹೋದರೆ ನಮ್ಮ ಪ್ರಗತಿ ಸಾಧಿಸುವುದಕ್ಕಾಗುವುದಿಲ್ಲ. ಎಲ್ಲಾ ಡಿಪಾರ್ಟ್‌ಮೆಂಟ್‌ನ ಆಕ್ಟಿವಿಟೀಸ್‌ನ್ನು ಕೋ ಆರ್ಡಿನೇಟ್ ಮಾಡುವುದಕ್ಕೆ ಡೆವಲಪ್‌ಮೆಂಟ್ ಕಮೀಷನರ್ ಇರಬೇಕು. ಮೈಸೂರು ದೇಶದಲ್ಲಿ ಒಂದರಲ್ಲೇ ಅಲ್ಲ ಇನ್ನೂ ಅನೇಕ ರಾಜ್ಯಗಳಲ್ಲೂ ಡೆವಲಪ್‌ಮೆಂಟ್ ಕಮೀಷನರು ಇದ್ದಾರೆ. ಹೇ ಕಮಿಷನ್ನಿನವರೂ ಕೂಡ ಡೆವಲಪ್‌ಮೆಂಟ್ ಕಮೀಷನರು ಇರಬೇಕು ಎನ್ನುವ ಮಾತು ಹೇಳಿದ್ದಾರೆ ಮತ್ತು ಅನೇಕ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಅದರ ಬಗ್ಗೆ ವಿಚಾರಣೆ ಮಾಡುತ್ತಿದ್ದೇವೆ.

ಇನ್ನು ಡಿವಿಷನಲ್ ಕಮೀಷನರ್ ಇರಬೇಕೋ, ಬೇಡವೋ ಎನ್ನುವ ಬಗ್ಗೆ ಅನೇಕ ಮಾನ್ಯ ಸದಸ್ಯರು ಅಭಿಪ್ರಾಯ ಈಗಾಗಲೇ ವ್ಯಕ್ತ ಮಾಡಿದ್ದಾರೆ. ಇದಕ್ಕೆ ಮೊದಲೂ ವ್ಯಕ್ತ ಮಾಡಿದ್ದರು. ಅವರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡು, ಹೇ ಕಮೀಷನ್ನಿನವರೂ ತಮ್ಮ ಅಭಿಪ್ರಾಯಗಳನ್ನು ಏನು ಹೇಳಿದ್ದಾರೆ, ಅದನ್ನೂ ಕೂಡ ವಿಚಾರ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರು ಕೆಲವರು ಹೇಳಿದರು ಯಾರು ನಮ್ಮ ಸೆಕ್ರಟೇರಿಯೇಟ್‌ನಲ್ಲಿ ಕೆಲಸ ಮಾಡುತ್ತಿದ್ದಾರೋ ಅವರಿಗೆ, ಸೆಕ್ರಟೇರಿಯೇಟ್ ಸ್ಟಾಫ್‌ಗೆ ಸ್ವಲ್ಪಮಟ್ಟಿಗೆ ಓರಿಯಂಟೇಷನ್ ಟ್ರೈನಿಂಗ್ ಕೊಡಬೇಕು ಎಂದು. ಕೇಂದ್ರ ಸರ್ಕಾರದಿಂದ ಅಧಿಕಾರಿಗಳನ್ನು ಕರೆಸಿಕೊಂಡು ಆ ಟ್ರೈನಿಂಗ್ ಪ್ರೋಗ್ರಾಂ ಮಾಡಿದ್ದೇವೆ. ಅದನ್ನು ಬೆಳೆಸಿಕೊಂಡು ಹೋಗಬೇಕು ಎನ್ನುವ ದೃಷ್ಟಿಯಿಂದ ಹೆಚ್ಚು ಹೆಚ್ಚು ಬೆಳೆಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ರೀತಿ ಸಾಮಾನ್ಯ ಆಡಳಿತದಲ್ಲಿ ಮತ್ತು ಪೋಲೀಸ್ ಇಲಾಖೆಯಲ್ಲಿ ಮತ್ತು ಹೋಮ್ ಇಲಾಖೆಯಲ್ಲಿ ಏನು ಸಾಧ್ಯ ಇದೆಯೋ ಅದನ್ನೆಲ್ಲಾ ಸ್ಟ್ರೀಮ್ ಲೈನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಈ ಸಂದರ್ಭದಲ್ಲಿ ಈ ಮಾನ್ಯ ಸಭೆಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಒಂದು ವಿಚಾರ ಹೇಳಬೇಕಾಗುತ್ತದೆ. ನಮ್ಮ ಸಭೆಯು ಘನತೆ ಗೌರವಗಳನ್ನು ಕಾಪಾಡಿಕೊಂಡು ಹೋಗಬೇಕಾದರೆ ಪರಸ್ಪರ ತಿಳಿವಳಿಕೆ, ಪರಸ್ಪರ ಗೌರವಿಸುವುದು ಮತ್ತು ಒಬ್ಬರಿಗೊಬ್ಬರು ಸಂಯಮದಿಂದ ನಡೆದುಕೊಂಡರೆ ಸಾಧ್ಯ ಇದೆ, ಇಲ್ಲದೆ ಹೋದರೆ ಸಾಧ್ಯವಿಲ್ಲ ಎನ್ನುವ ಮಾತನ್ನು ಕಳಕಳಿಯಿಂದ ಹೇಳಬೇಕಾಗುತ್ತದೆ. ನನ್ನ ಬಗ್ಗೆ ವಿರೋಧ ಪಕ್ಷದ ನಾಯಕರು ಒಂದು ರೀತಿ ಪ್ರೇಮದಿಂದ, ನನ್ನ ಗೌರವವನ್ನು ಕಾಪಾಡಿಕೊಂಡು ಹೋಗುವುದು ಮತ್ತು ಅದೇ ರೀತಿ ನಾನು ವಿರೋಧ ಪಕ್ಷದ ನಾಯಕರಲ್ಲಿ ಪ್ರೇಮದಿಂದ ಅವರ ಗೌರವನ್ನು ಕಾಪಾಡಿಕೊಂಡು ಹೋಗುವುದು ಈ ರೀತಿ ಆದರೆ ಈ ಸಭೆಯ ಕಾರ್ಯಕಲಾಪಗಳು ಚೆನ್ನಾಗಿ ನಡೆಯುತ್ತವೆ ಈ ರೀತಿಯಿಂದ ಕೆಲಸ ಮಾಡಲು ಎಲ್ಲಾ ಮಾನ್ಯ ಸದಸ್ಯರು ಈ ಸಭೆಗೆ ಬಂದಿದ್ದಾರೆ. ಹಾಗಿರುವಾಗ ನಮ್ಮ ನಮ್ಮ ಕ್ಷೇತ್ರದ ಹಿತವಲ್ಲದೆ ಇಡೀ ರಾಜ್ಯದ ಹಿತ ಆಗಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡಿಕೊಂಡು ಹೋಗಬೇಕಾಗುತ್ತದೆ. ಹಾಗೆ ಆಗದೇ ಇದ್ದರೆ ಬಹಳ ಕಷ್ಟವಾಗುತ್ತದೆ ಇದನ್ನು ದುಃಖದಿಂದ ಹೇಳಬೇಕಾಗುತ್ತದೆ. ಈ ಮಾನ್ಯ ಸಭೆಯಲ್ಲಿ ಕೆಲವು ಮಾನ್ಯ ಸದಸ್ಯರು they are breeding hatred towards us ಎಂದರು. ಇದನ್ನು ನೊಂದ ಮನಸ್ಸಿನಿಂದ ಹೇಳುತ್ತೇನೆ. ಒಂದೊಂದು ಸಲ ಅವರು ಮಾತನಾಡುವುದನ್ನು ನೋಡಿದರೆ ಬಹುಶಃ every man in politics or atleast on this side is corrupt unless it is proved otherwise ಎಂದು ಬರುತ್ತಾ ಇದೆ. ಎಲ್ಲರ ಬಗ್ಗೆ ಈ ಮಾತನ್ನು ಹೇಳುತ್ತಾ

(ಶ್ರೀ ವೀರೇಂದ್ರ ಪಾಟೀಲ್)

ಇಲ್ಲ. ದುರ್ದೈವದಿಂದ ಬಹುಶಃ ಈ ಮನೆಯ ಇತಿಹಾಸದಲ್ಲಿ ಇದು ಮೊದಲನೆಯ ಸಲ ಎಂದು ಅನಿಸುತ್ತದೆ. ಕೆಲವು ಮಾನ್ಯ ಸದಸ್ಯರಲ್ಲಿ ನಮ್ಮ ಬಗ್ಗೆ ಒಂದು ತರಹ ದ್ವೇಷ, ಒಂದು ತರಹ ಹೆಟ್ರೆಡ್‌ನೆಸ್ ಬರುತ್ತಾ ಇರುವುದನ್ನು ನೋಡುತ್ತಾ ಇದ್ದೇನೆ.

ಶ್ರೀ ಎಸ್. ಚೆನ್ನಯ್ಯ.—ಅದು ನಿಜವಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅದು ನಿಜವೋ, ಅಲ್ಲವೊ ಅನ್ನುವ ಮಾತು ಬೇರೆ.

Sri H. N. NANJE GOWDA.—We cannot allow such remarks.

Sri VEERENDRA PATIL.—I have every right to express my views.

Sri H. N. NANJE GOWDA.—I am on a point of order.

Sri VEERENDRA PATIL.—There was no point in the point of order raised by him last time. If he raises another point of order, it is a waste of time of the House. How can we tolerate it ?

Sri H. N. NANJE GOWDA.—As I have understood it is the duty of every member to address the Chair and it is the duty of the Chair to elicit information desired. ರೂಲ್ 311ರ ಪ್ರಕಾರ ಈ ಸಭೆಯಲ್ಲಿ ಯಾರೇ ಸದಸ್ಯರಾಗಲಿ ಇನ್ನೊಬ್ಬ ಸದಸ್ಯರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ. ಅವರೇ ನೇರವಾಗಿ ಟೀಕೆ ಮಾಡಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅದು ಸಾಧ್ಯ ಇಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಪರೋಕ್ಷವಾದ ರೀತಿಯಲ್ಲಿ ತಪ್ಪು ಕಲ್ಪನೆ ಮಾಡುವುದಕ್ಕೆ ಅವಕಾಶವಿಲ್ಲ. ಸದಸ್ಯರ ಬಗ್ಗೆ ಆ ಭಾಗದ ಸದಸ್ಯರೇ ಆಗಲಿ, ಈ ಭಾಗದ ಸದಸ್ಯರೇ ಆಗಲಿ ಮಾತನಾಡಿದ್ದರಲ್ಲಿ ತಪ್ಪು ಕಲ್ಪನೆ ಮಾಡಿದ್ದಾರೆ, ದುರುದ್ದೇಶದಿಂದ ಮಾತನಾಡಿದ್ದಾರೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಸಭಾನಾಯಕರಾದ ಶ್ರೀಮಾನ್ ವೀರೇಂದ್ರ ಪಾಟೀಲರು, ಹೇಳುವುದಕ್ಕೆ ಅವಕಾಶವಿಲ್ಲ. ಅವರು ಹೇಳಿದ್ದನ್ನು ಸಬ್‌ಸ್ಟ್ಯಾನ್ಷಿಯೇಟ್ ಮಾಡಬೇಕು. ಅವರು ಹೇಳಬೇಕಾದರೆ ನಿರ್ದಿಷ್ಟವಾಗಿ ಇಂಥ ಸದಸ್ಯರು ಇಂಥ ಮಾತನಾಡಿದ್ದಾರೆ, ಇದು ಸತ್ಯಕ್ಕೆ ದೂರವಾದ ಸಂಗತಿ, ಉದ್ದೇಶಪೂರ್ವಕವಾಗಿ ಮಾತನಾಡುತ್ತಿದ್ದಾರೆಂದು ಹೇಳಬಹುದು. ಆದುದರಿಂದ ಅವರು ಹೇಳತಕ್ಕ ಮಾತುಗಳು, ನಿರ್ದಿಷ್ಟವಾಗಿ ಇಂಥವರು ದುರುದ್ದೇಶಪೂರಿತವಾಗಿ ಹೇಳಿದ್ದಾರೆ, ದ್ವೇಷದಿಂದ ಹೇಳಿದ್ದಾರೆ ಎನ್ನುವ ಮಾತುಗಳನ್ನು ಅವರು ಸ್ಪಷ್ಟೀಕರಿಸಬೇಕು. ಇದು ನನ್ನ ಕ್ರಿಯಾಲೋಪ.

Sri K. H. RANGANATH.—The hon. Chief Minister stated that some of the members are making use of this House and breeding hatred. If the hon. Chief Minister is definite about that, he may straightaway say so and so is the member. Such sweeping remarks should not be allowed to go into the proceedings. My point of order is that either the hon. Chief Minister should definitely and clearly state that so and so is the person who is breeding hatred or the use of those words should be withdrawn by him. Either he should frankly say who those members are and take the consequences or else it will not be fair for the hon. Chief Minister of a modern State to use this forum for using such words. I request the hon. Chair to consider whether such remarks could go into the records.

ಅಧ್ಯಕ್ಷರು.—ಎಲ್ಲ ಮಾನ್ಯ ಸದಸ್ಯರೂ ರೂಲ್ಸ್ ಓದಿದ್ದಾರೆ ಅದರ ಪ್ರಕಾರ ಡಿಗ್ನಿಫೈಡ್, ಆಗಿ ರೆಲವೆಂಟ್ ಆಗಿ ಮಾತನಾಡಬೇಕು ಎಂದು ಎಲ್ಲರೂ ತಿಳಿದುಕೊಂಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಇದೇ ರೀತಿ ಉತ್ತರ ಕೊಡಿರಿ, ಇಂಥದ್ದೇ ಮಾಡಿರಿ ಎಂದು ಹೇಳುವ ಅಧಿಕಾರ ಯಾವ ಅಧ್ಯಕ್ಷರಿಗೂ ಇಲ್ಲ. ಅವರು ಉಪಯೋಗ ಮಾಡುವಂಥ ಮಾತುಗಳು ಅನ್‌ಪಾರ್ಲಿಮೆಂಟರಿ ಇದೆಯೋ ಎಂದು ಅಷ್ಟು ಮಾತ್ರ ನೋಡಬಹುದು. ಮತ್ತು ಅನ್‌ಪಾರ್ಲಿಮೆಂಟರಿ ಇದ್ದರೆ

ಅದನ್ನು ಕಲಾಪದಿಂದ ತೆಗೆದುಹಾಕಬಹುದು. I do not find anything uparliamentary in what the Hon. Chief Minister has stated and I rule that there is no point of order.

Sri K. PUTTASWAMY.—Sir, I rise to a point of order......

Sri K. PRABHAKAR.—Sir, any member could speak only after the speech or statment of the hon. Chief Minister is over.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಅಧ್ಯಕ್ಷರ ಮೇಲೆ ಈ ಪ್ರಮಾಣದ ಆಗ್ರಹ ಮಾಡುವುದು ಅಷ್ಟೊಂದು ಗೌರವಕ್ಕೆ......

ಶ್ರೀ ಎಸ್. ಚನ್ನಯ್ಯ.—ಕುಳಿತುಕೊಳ್ಳಿ ಸ್ವಾಮಿ. ಇಷ್ಟು ಸಾಕು......

ಶ್ರೀ ಬಿ. ಪಿ. ಗಂಗಾಧರ್.—ಸಿಚುಯೇಷನ್ ವರ್ಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ......

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಧರ್ ಅವರು ಕೊಡುತ್ತಿರುವ ಸಲಹೆಗೆ ನಾನು ಬಹಳ ಕೃತಜ್ಞನಾಗಿದ್ದೇನೆ. ಕ್ರಿಯಾಲೋಪ ಎತ್ತುವಂಥ ಸಂದರ್ಭದಲ್ಲಿ ಬಾಕಿ ಎಲ್ಲ ಸದಸ್ಯರಿಗೂ ಯಾವ ಅವಕಾಶ ತಾವು ಕೊಡುತ್ತೀರೋ ಆ ಅವಕಾಶಕ್ಕೆ ನಾನು ಕೂಡ ಅರ್ಹನಾಗಿದ್ದೇನೆ. ಶ್ರೀಮಾನ್ ಚನ್ನಯ್ಯನವರು ಒಂದು ಮಾತು ಹೇಳಿದರು, ಕುಳಿತುಕೊಳ್ಳಿ ಇಷ್ಟು ಸಾಕು ಎಂದು. ಅವರಲ್ಲಿ ನನಗೆ ತುಂಬ ಗೌರವವಿದೆ. ಏತಕ್ಕೆ ಈವೊತ್ತು ನಾನು ಈ ಕ್ರಿಯಾಲೋಪ ಎತ್ತಬೇಕಾಯಿತು ಎನ್ನುವುದಕ್ಕೆ ಒಂದು ಮಾತು ಹೇಳಬೇಕಾಗಿದೆ. ನಿನ್ನೆ ಒಂದು ಮಾತು ಬಂತು. ಮಾನ್ಯ ಸದಸ್ಯರೊಬ್ಬರು ಹೇಳಿದರು ಶ್ರೀಮಾನ್ ಶಿವಪ್ಪನವರು ನಾಯಕರಾಗಿ ಇಲ್ಲದೆ ಇದ್ದಿದ್ದರೆ ಇವರೆಲ್ಲ ಮೈ ಮುಟ್ಟಿ ನೋಡಿಕೊಳ್ಳಬೇಕಾಗುತ್ತಿತ್ತು ಎಂದು. ಸ್ವಾಮಿ......

(ಅನೇಕ ಸದಸ್ಯರು ಒಟ್ಟಿಗೇ ಎದ್ದುನಿಂತರು)

ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ಪುಟ್ಟಸ್ವಾಮಿಯವರು ಬೇಕು ಎಂದು ಪ್ರವೋಕ್ ಮಾಡುತ್ತಿದ್ದಾರೆ.

Sri B. P. GANGADHAR.—Sir, when there is a confusion in the House, let the hon. Minister for Parliamentary Affairs try to smoothen the situation, and not try to complicate the issue. ಈವೊತ್ತಿನ ದಿವಸ ಯಾವ ಕೆಲಸವಾಗಬೇಕೋ ಅದು ಆಗುವುದಕ್ಕೆ ಪ್ರಯತ್ನ ಮಾಡಬೇಕು. ಅವರು ಪ್ರವೋಕ್ ಮಾಡುವುದಕ್ಕೆ ಪ್ರಯತ್ನ ಮಾಡಬಾರದು. ಹಿಂದೆ ನಡೆದದ್ದು, 8 ದಿನದಲ್ಲಿ ನಡೆದದ್ದು ಇದನ್ನೆಲ್ಲ ಹೇಳುವುದಕ್ಕೆ ಪ್ರಯತ್ನ ಮಾಡಬಾರದು.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಗಂಗಾಧರ್ ಅವರು ನನಗೆ ಅಪ್ರಾರ್ಥಿತವಾಗಿ ಕೊಡುತ್ತಿರತಕ್ಕ ಹಿತವಚನಕ್ಕೆ ನಾನು ಕೃತಜ್ಞನಾಗಿದ್ದೇನೆ. ಆದರೆ ನಮಗೆ ಬಂದಂಥ ನೋವು ಹೇಳುವುದಕ್ಕೆ ಯಾವುದಾದರೂ ಒಂದು ಅವಕಾಶ ಬೇಕು. ಯಾರನ್ನಾದರೂ ನೋಯಿಸಬೇಕು ಎಂದು ಹೇಳುತ್ತಿಲ್ಲ. ಯಾವುದೋ ಒಂದು ಮಾತು ಬಂತು. ಮಾನ್ಯ ಶಿವಪ್ಪನವರಲ್ಲಿ ಅತ್ಯಂತ ಗೌರವವಿದೆ. ನನಗೆ ವೈಯುಕ್ತಿಕವಾಗಿ ಸ್ನೇಹಿತರು. ಶಿವಪ್ಪನವರು ವಿರೋಧ ಪಕ್ಷದ ನಾಯಕರಾಗಿ ಇಲ್ಲದೆ ಇದ್ದಿದ್ದರೆ ನೀವು, ಅಧ್ಯಕ್ಷರು, ಅಲ್ಲಿ ಕುಳಿತುಕೊಳ್ಳುವುದಕ್ಕಾಗುತ್ತಿರಲಿಲ್ಲ, ಈ ಕಡೆಯವರೆಲ್ಲ ಮೈ ಮುಟ್ಟಿ ನೋಡಿಕೊಳ್ಳಬೇಕಾಗಿತ್ತು, ಎಂದು ಹೇಳಿದರು. ಇದನ್ನು ಕೇಳಿಕೊಂಡು ಕುಳಿತುಕೊಂಡಿದ್ದೆವು. ಆಗ ಮಾನ್ಯ ಚನ್ನಯ್ಯನವರ ಕಡೆ ನೋಡುತ್ತಿದ್ದೆ. ಏಕೆ ಇವರು ಇದು ಸರಿಯಲ್ಲ ಎಂದು ಹೇಳಲಿಲ್ಲ ಎಂದು. ಆಗ ಎದ್ದು ಏನಾದರೂ ಕೇಳಿದ್ದರೆ ಉರಿಯುವುದಕ್ಕೆ ಉಪ್ಪು ಹಾಕುತ್ತಿದ್ದಾರೆ, ಸೀಮೆ ಎಣ್ಣೆ ಹಾಕಿ ಬೆಂಕಿ ಹಚ್ಚುತ್ತಿದ್ದಾರೆ ಎಂದು ಹೇಳುತ್ತಿದ್ದರು. ನಾನು ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಉರಿಯುವುದಕ್ಕೆ ಉಪ್ಪು ಹಾಕುವುದಕ್ಕೆ ನಾವು ಇಲ್ಲ. ನಾವು ಕೂಡ ಆ ಕಡೆಯಿಂದ ಬಂದಂಥ ಅನೇಕ ಔದಾರ್ಯರಹಿತವಾದ ಟೀಕೆಗಳನ್ನೂ, ಚುಚು ಮಾತುಗಳನ್ನೂ ಕೇಳಿ ಕೇಳಿ ಸುಮ್ಮನೆ ಇದ್ದೇವೆ. ಇದು ಏಕಪಕ್ಷವಾಗಿ ಬೇಡ. ಈಗ ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡುತ್ತಿದ್ದರು. ಅವರು ಮಾತನಾಡಿದ್ದರಲ್ಲಿ ಯಾವುದಾದರೂ ಸಂಸದೀಯ ಪದ ಅಲ್ಲದೆ ಇದ್ದರೆ ಆಕ್ಷೇಪಣೆ ಎತ್ತಲಿ......

ಶ್ರೀ ಕೆ. ಎಚ್. ರಂಗನಾಥ್.—'ಹೇಟ್ರೇಡ್' ಸಂಸದೀಯ ಪದವೋ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಯಾವುದೋ ಕ್ರಿಯಾಲೋಪ ಎತ್ತುವುದಕ್ಕೆ ಹೋಗಿ ಬೇರೆ ಮಾತನಾಡುತ್ತಿದ್ದೇನೆ. ನಾನು ಕ್ರಿಯಾಲೋಪ ಎತ್ತಿದ್ದು, ಸಭೆಯ ಗೌರವ ಕಾಪಾಡಬೇಕಾದರೆ ಅಧ್ಯಕ್ಷರ ಮೇಲೆ ಆಗ್ರಹ ಮಾಡಬಾರದು. ನಮಗೆ ಸ್ವಲ್ಪ ಅಸಮಾಧಾನ ಬರುತ್ತದೆ. ಆದರೆ ಅದಕ್ಕೆ ಒಂದು ಮಿತಿ ಇದೆ. ಇಷ್ಟೊಂದು ಆಗ್ರಹ ಮಾಡಿ ಮಾತನಾಡಿದರೆ ಇದು ತಮಗೆ ವೈಯುಕ್ತಿಕವಾಗಿ ಅಗೌರವವಾಗುತ್ತದೆ ಎಂದು ಭಾವನೆ ಮಾಡಬಾರದು, ಆದರಿಂದ ಈ ಸಭೆಗೇ ಅಗೌರವವಾಗುತ್ತದೆ. ವೈಯುಕ್ತಿಕವಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಮ್ಮ ಮೂಲಕ ಈ ಮಾನ್ಯ ಸಭೆಯ ಸದಸ್ಯರೆಲ್ಲರಲ್ಲಿಯೂ ವಿನಂತಿ ಮಾಡಿಕೊಳ್ಳುತ್ತೇನೆ. ಯಾವುದೇ ಒಂದು ಮಾತು ಉಛಾಯಿಸಿ ಮಾತನಾಡಿದರೂ, ಅಧ್ಯಕ್ಷರ ವಿಚಾರವಾಗಿ, ಅವರನ್ನು ಉದ್ದೇಶಿಸಿ, ಈ ಸಭೆಯ ಗೌರವವನ್ನು ಕಡಮೆ ಮಾಡಿದಂತಾಗುತ್ತದೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕಾಗಿ ನಾನು ಎದ್ದು ನಿಂತೆ. ನಮ್ಮ ಮನಸ್ಸಿನಲ್ಲಿರುವ ನೋವನ್ನು ತೋಡಿಕೊಳ್ಳುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಸಭೆಗೆ ಕೃತಜ್ಞನಾಗಿದ್ದೇನೆ.

8–30 P.M.

ಶ್ರೀ ಎಸ್. ಶಿವಪ್ಪ.—ಪಾರ್ಲಿಮೆಂಟರಿ ಸಚಿವರು ಕ್ರಿಯಾಲೋಪದ ಮೇಲೆ ಏನು ಹೇಳಿದರೆಂಬುದು ಸರಿಯಾಗಿ ಗೊತ್ತಾಗಲಿಲ್ಲ. ಸಭೆಯ ಘನತೆಗೌರವಗಳನ್ನು ಕಾಪಾಡಬೇಕು ಎಂದು ಹೇಳಿದರು. ನಾನಾದರೂ ಅಧ್ಯಕ್ಷರ ಮೂಲಕ ಈ ಸಭೆಯ ಸದಸ್ಯರಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ಹೇಳುವುದು ಈ ಸಭೆಯ ಘನತೆಗೌರವಗಳಿಗೆ ಯಾರೂ ಕುಂದು ತಂದಿಲ್ಲ, ನಾವು ಆಡಳಿತ ಪಕ್ಷದವರಿಗಿಂತ ಹೆಚ್ಚಾಗಿ ಈ ವಿಚಾರದಲ್ಲಿ ಆಸಕ್ತಿ ವಹಿಸಿದ್ದೇವೆ, ನಾವು ಯಾರಿಗೂ ಕೂಡ ಅವಮಾನ ಮಾಡುವಂತೆ ನಡೆದುಕೊಂಡಿಲ್ಲ, ಯಾರನ್ನೂ ನೋಯಿಸಿಲ್ಲ. ದೇಶದಲ್ಲಿರುವ ಲೋಪದೋಷಗಳನ್ನು ಹೇಳಿದರೆ ಅದನ್ನು ಸಹಿಸುವ ಶಕ್ತಿಯಿಲ್ಲದಿದ್ದರೆ ಪ್ರಜಾಪ್ರಭುತ್ವ ಹೇಗೆ ಬೆಳೆಯಲು ಸಾಧ್ಯ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಈ ದೇಶದಲ್ಲಿ ಬೆಳೆಯಬೇಕಾದ ಪ್ರಜಾಪ್ರಭುತ್ವಕ್ಕೆ ಸಾಕಷ್ಟು ಅವಕಾಶ ಕೊಡದೆ ಅದನ್ನು ಕೊಲೆ ಮಾಡುತ್ತಿದ್ದಾರೆ. ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಸುಗಮವಾಗಿ ಬೆಳೆಯದಿರುವುದರಿಂದ ದುಷ್ಟ ಶಕ್ತಿಗಳು ಉದ್ಭವವಾಗಿವೆ. ಪ್ರಜಾಪ್ರಭುತ್ವದ ಅಡಿಗಲ್ಲನ್ನು ಕಿತ್ತುಹಾಕುವ ಪ್ರಯತ್ನ ನಡೆಯುತ್ತಿದೆ. ಇರುವ ಲೋಪಗಳನ್ನು ಎತ್ತಿ ಆಡಿದರೆ ಅದನ್ನು ಸಹಿಸುವುದಕ್ಕಾಗದಿದ್ದರೆ ಪ್ರಜಾಪ್ರಭುತ್ವಕ್ಕೆ ಕೊಡಲಿಪೆಟ್ಟು ಬೀಳುತ್ತದೆ. ಈಗ ಶಾಖ ಉತ್ಪತ್ತಿಯಾಗಿದೆ, ಮನಸ್ಸು ನೋಯುವಂತೆ ನಿಮ್ಮ ಕಡೆಯವರೂ, ನಮ್ಮ ಕಡೆಯವರೂ ಮಾತನಾಡಿರಬಹುದು. ಚರ್ಚೆಯಲ್ಲಿ ಶಾಖ ಹುಟ್ಟುವುದು ಸ್ವಾಭಾವಿಕ, ಅದರಲ್ಲೂ ಪೋಲಿಸು ಇಲಾಖೆ ಮತ್ತು ಸಾಮಾನ್ಯ ಆಡಳಿತಗಳ ವಿಚಾರದಲ್ಲಿ ಮಾತನಾಡುವಾಗ ಶಾಖ ಹುಟ್ಟುವುದು ಸ್ವಾಭಾವಿಕ. ಬೇರೆ ಕಡೆ ಇಂಥ ಸಭೆಗಳಲ್ಲಿ ಎಷ್ಟು ಶಾಖ ಹುಟ್ಟಿದೆ ಎಂಬುದನ್ನು ನೋಡಬಹುದು. ಕೇವಲ ಪ್ರಜಾಪ್ರಭುತ್ವವನ್ನು ಬೆಳೆಸಬೇಕು ಎಂದು ನಾವು ಏನಾದರೂ ಹೇಳುತ್ತೇವೆಯೋ ಹೊರತು ವೈಯುಕ್ತಿಕವಾಗಿ ನಮಗೆ ಶ್ರೀ ವೀರೇಂದ್ರ ಪಾಟೀಲರಮೇಲೆ ಅಥವಾ ಇತರರಮೇಲೆ ಖಂಡಿತವಾಗಿ ದ್ವೇಷವಿಲ್ಲ, ಪರ್ಸನಲ್ಲಾಗಿ ಯಾವ ವಿಧವಾದ ದ್ವೇಷವೂ ಇಲ್ಲ. ಕೆಲವರಲ್ಲಿ ಉತ್ಸಾಹವಿದೆ, ಉದ್ವೇಗದಲ್ಲಿ ಯಾರಾದರೂ ಏನಾದರೂ ಹೇಳಬಹುದು, ಮುಖ್ಯ ಮಂತ್ರಿಗಳಿಗೆ ಕೋಪ ಇರಬಹುದು. ಆದರೆ ಸಭಾನಾಯಕರಾಗಿ ಮಾತನಾಡುವಾಗ ಅವರು ಕೊಂಚ ತಾಳ್ಮೆಯಿಂದ ಮಾತನಾಡುವುದು ಒಳ್ಳೆಯದು. ಅವರಲ್ಲಿ ಅವರ ಸ್ಥಾನದಲ್ಲಿ ನಮಗೆ ಗೌರವವಿದೆ ಎಂದು ಹೇಳುತ್ತೇನೆ.

Mr. SPEAKER.—I am grateful to the Hon. Minister for Parliamentary Affairs and also to the Hon. Leader of the Opposition regarding their reference to the Chair. I think it is good that both the sides have come to a decision that the decision of the Chair should be respected. It may be the Chair might have committed mis takes here and there. Even the wrong decisions should be obeyed. The entire House should behave in a dignified manner and it should not show any disrespect to the Chair. The Chair too has no disrespect to anybody here. The hon. Members must be cautious before using any word in their speech. They must see whether the words they are using are parliamentary or unparliamentary. When once there is a decision form the Chair, it should be respected whether it is right or wrong.

Sri H. N. NANJEGOWDA.—He says that certain arguments addressed by members were intended to create hatred. I find there is nothing wrong in it.

Mr. SPEAKER.—Let the debate proceed.

ಶ್ರೀ ವೀರೇಂದ್ರಪಾಟೀಲ್.—ಈಗ ನಾನು ಏನು ವಿಚಾರಗಳನ್ನು ಹೇಳುತ್ತಿದ್ದೇನೆ ಅದನ್ನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ನಮಗೆ ಅಗೌರವವಿಲ್ಲ, ವೈಯುಕ್ತಿಕವಾಗಿ ಯಾವುದೇ ಟೀಕೆ ಮಾಡಿಲ್ಲ, ಪೋಲೀಸ್ ಖಾತೆ ವಿಷಯ ಮಾತನಾಡುವಾಗ ಬಿಸಿ ವಾತಾವರಣ ಹುಟ್ಟುವುದು ಸಾಮಾನ್ಯ ಎಂದು ಹೇಳಿದರು. ಬಿಸಿ ವಾತಾವರಣಕ್ಕೆ ಅಭ್ಯಂತರವಿಲ್ಲ, ಅದು ಸ್ವಾಭಾವಿಕ. ಮಾನ್ಯ ನಾಯಕರು ನನ್ನ ಬಗ್ಗೆ ಏನು ಒಳ್ಳೆಯ ಮಾತನ್ನಾಡಿದ್ದಾರೆ ಅದಕ್ಕೆ ನಾನು ತುಂಬಾ ಋಣಿಯಾಗಿದ್ದೇನೆ. ಆದರೆ ಈ ರೀತಿಯಿಂದ ಎಲ್ಲರೂ ಮಾತನಾಡುವುದಾದರೆ ಹೇಳಬೇಕಾದ ಅವಶ್ಯಕತೆ ಇರಲಿಲ್ಲ. ಹೇಳಬೇಕಾದರೆ ಕರಪ್ಷನ್ ಛಾರ್ಜ್ ನನ್ನಮೇಲೆ ಮಾಡಿದ್ದಾರೆ. ಹಾಗೆ ಮಾಡಿದಾಗ ಬಾಯಿಮುಚ್ಚಿಕೊಂಡು ಕೂಡಲು ಹೇಗೆ ಸಾಧ್ಯ ? ಹಾಗೆ ಮಾಡಿಲ್ಲವೆಂದು ಹೇಳುವುದಾದರೆ ರಿಕಾರ್ಡು ತೆಗೆದು ಓದಲಿ. ಎಲ್ಲರೂ ಹಾಗೆ ಮಾಡಿದ್ದರೆಂದಲ್ಲ. ವಿರೋಧಪಕ್ಷದ ನಾಯಕರಲ್ಲಿ ನನಗೆ ಗೌರವ ಇದೆ. ಇಲ್ಲದಿರುವುದನ್ನು ಯಾರ ವಿಷಯದಲ್ಲೂ ನಾನು ಹೇಳುವಹಾಗಿಲ್ಲ. ಯಾರಾದರೂ ಏನಾದರೂ ಹೇಳಿದರೆ ಅದು ಸರಿಯಾಗಿಲ್ಲದಿದ್ದರೆ ಇರುವ ಅನುಮಾನವನ್ನು ಹೋಗಲಾಡಿಸುವುದಕ್ಕೆ ಕೆಲವು ಮಾತುಗಳನ್ನು ಹೇಳಬೇಕಾಗುವುದು. ಕ್ಷಮಿಸಬೇಕು, ಗತಿಯಿಲ್ಲ ಎಂದು ಮುಂತಾಗಿ ಹೇಳಿರುವುದನ್ನು ಸಹಿಸುವುದಕ್ಕಾಗುವುದಿಲ್ಲ, ಏನು ಹೇಳಿದ್ದಾರೆಂಬುದನ್ನು ಓದಿನೋಡಿ. ನಾನು ಸತ್ಯವನ್ನು ತಿಳಿಯುವುದಕ್ಕೆ ಹೇಳುತ್ತಿದ್ದೇನೆ. ಕೆಲವರು ಬಕೆಟ್, ಟಾರು, ಬ್ರಷ್ ಹಿಡಿದುಕೊಂಡು ಹೊರಟಿದ್ದಾರೆ, ಮುಖಕ್ಕೆ ಮಸಿ ಬಳಿಯಬೇಕೆಂದಿದ್ದಾರೆ, ಇದನ್ನು ಸಹಿಸುವುಕ್ಕಾಗುವುದಿಲ್ಲ. ಮುಖ್ಯಮಂತ್ರಿಯಾಗಿ ಇರುವ ಕಾಲಕ್ಕೆ ಅವರ ಮುಖಕ್ಕೆ ಟಾರು ಬಳಿಯಲು ಹೋದರೆ ಸುಮ್ಮನಿರಲು ಸಾಧ್ಯವೇ ಎಂಬುದನ್ನು ವಿಚಾರಮಾಡಬೇಕು. ನಾನು ಈ ಸ್ಥಾನದಲ್ಲಿ ಇಂದು ಇರಬಹುದು, ನಾಳೆ ನೀವು ಬರಬಹುದು. ಯಾವ ಪಕ್ಷವೇ ಆಗಲಿ ಸರ್ಕಾರ ನಡೆಸುವುದಕ್ಕೆ ಅವಕಾಶವಿದೆ. ಅನೇಕ ಸದಸ್ಯರು—ಹೆಸರು ಹೇಳುವಹಾಗಿಲ್ಲ—ವಿರೋಧ ಪಕ್ಷದವರು ಬಸ್ಸಿನಲ್ಲಿ ಹೋಗುವುದು ಕಷ್ಟ, ಎಂ. ಎಲ್. ಎ. ಇದ್ದಾನೆ, 25 ಸಾವಿರ ರೂಪಾಯಿ ಖರ್ಚುಮಾಡಿದ್ದಾನೆ, ಅಷ್ಟನ್ನು 5 ವರ್ಷಗಳಲ್ಲಿ ಆತ ಸಂಪಾದನೆ ಮಾಡಬೇಕು ಎಂದು ಇತರ ಪ್ರಯಾಣಿಕರು ಬಸ್ಸಿನಲ್ಲಿ ಈ ಸಭೆಯ ಸದಸ್ಯರು ಪ್ರಯಾಣ ಮಾಡುವಾಗ ಆಡಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ, ಹೀಗೆ ಪ್ರತಿಯೊಬ್ಬರೂ ಮಾತನಾಡಿದ್ದಾರೆ, ಈ ವಾತಾವರಣ ಹುಟ್ಟಿಸಿದ್ದಾರೆ. ಲಂಚ ಬಿಟ್ಟು ಬೇರೆ ಉದ್ಯೋಗವೇ ಇಲ್ಲ, ಬರೇ ಲಂಚ, ಲಂಚ ಎಂದು ಹೇಳಿದ್ದಾರೆ. ನಮಗೆ ದುಡ್ಡು ಹೊಡೆಯುವುದೇ ಕೆಲಸ, ಎಂಬ ಅರ್ಥದಲ್ಲಿ ಮಾತನಾಡಿದ್ದಾರೆ. ನಮಗೆ ತಂದೆ ತಾಯಿ ಇಲ್ಲವೇ, ಆಸ್ತಿಪಾಸ್ತಿ ಇಲ್ಲವೇ, ಬರೇ ಆಸ್ತಿಮಾಡುವುದಕ್ಕೆ ಬಂದಿದ್ದೇವೆಯೇ ? ದುಡ್ಡು ಹೊಡೆಯಲು ಬಂದಿದ್ದಾರೆ, ಆಸ್ತಿಪಾಸ್ತಿ ಮಾಡಲು ಬಂದಿದ್ದಾರೆ ಎಂಬ ಅಭಿಪ್ರಾಯ ಬರುವಂತೆ ಒಂದು ವಾತಾವರಣವನ್ನುಂಟುಮಾಡಿದರೆ ಹೇಗೆ ನಾವು ಸುಮ್ಮನಿರಲು ಸಾಧ್ಯ ? ಇಂದು ನಾವು ಬೇಕಾದರೆ ಗುಲ್ಬರ್ಗದಿಂದ ಟೆಲಿಗ್ರಾಂ ತರಿಸುವುದಕ್ಕೆ ಕಷ್ಟವೇ ! ಯಾರು ಬೇಕಾದರೂ ಕೊಡಬಹುದು, ರೊಕ್ಕ ಕೊಟ್ಟರೆ ಬರುತ್ತದೆ. ಯಾರು ಬೇಕಾದರೂ ಕಾಗದ ಬರೆಯಬಹುದು. ಪ್ರತಿಯೊಬ್ಬರಿಗೂ ಒಂದು ಸ್ಥಾನಮಾನ, ಗೌರವ ಇದೆ. ಶ್ರೀ ಶಿವಪ್ಪನವರು ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ, ಹಾಗೆಯೇ ಶ್ರೀ ಸಿದ್ಧವೀರಪ್ಪನವರೂ ಚುನಾಯಿತರಾಗಿ ಬಂದಿದ್ದಾರೆ. 400 ರೂಪಾಯಿ ಕೊಟ್ಟರೆ ಕೆಲಸಮಾಡಿ ಕೊಡುತ್ತೇವೆ ಎಂದು ಹೇಳಿದರು ಎಂದು ನಮ್ಮ ಮೇಲೆ ಯಾವ ಆಧಾರವೂ ಇಲ್ಲದೆ ಛಾರ್ಜ್ ಇದೆ ಎಂದು ಹೇಳಿದರೆ ಯಾವ ರೀತಿ ಸರಕಾರ ನಡೆಸುವುದು ? ಹೀಗೆ ಆರ್ಗನೈಜ್ ಮಾಡಿಕೊಂಡು ದೂರುಗಳನ್ನು ಹೇಳುತ್ತಾ ಹೋದರೆ ಕೆಲಸಮಾಡುವುದಕ್ಕಾಗುವುದಿಲ್ಲ. ಈ ರೀತಿ ಎಂದೂ ಆಗಿಲ್ಲ, ಇಂಥ ಅರ್ಜಿ ಯಾರೂ ಹಾಕಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯ ಮಂತ್ರಿಗಳು ಏನು ಬೇಕಾದರೂ ಹೇಳಲಿ. ಆದರೆ ಅವರು ಉಪಯೋಗಿಸುವ ಪದ ಸರಿಯಾಗಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಬಹಳ ಕಳಕಳಿಯಿಂದ ಹೇಳುತ್ತಾ ಇದ್ದೇನೆ. ಈ ಮನೆಯಲ್ಲಿ ಒಬ್ಬರಿಗೊಬ್ಬರು ಪರಸ್ಪರ ವಿಶ್ವಾಸ ಪ್ರೀತಿಯಿಂದ ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ಅದಕ್ಕೇ ಹೇಳುವಂತಹದು ಈ ತರಹದ ಪ್ರಯತ್ನಗಳು ನಡೆಯುತ್ತಾ ಇವೆ. ಆದ್ದರಿಂದ ವಿರೋಧ

(ಶ್ರೀ ವೀರೇಂದ್ರ ಪಾಟೀಲ್)

ಪಕ್ಷದ ನಾಯಕರು ಮತ್ತು ಹಿರಿಯ ನಾಯಕರಲ್ಲಿ ಅರಿಕೆ ಮಾಡಿಕೊಳ್ಳುತ್ತಾ ಇದ್ದೇನೆ ಈ ರೀತಿಯಿಂದಾದರೆ ವಾತಾವರಣ ಬಹುಶಃ ಹದಗೆಟ್ಟುಹೋಗಬಹುದು. ಇವತ್ತಿನ ದಿವಸ ನಮ್ಮ ಮೇಲೆ ಆಗಬಹುದು, ಇಲ್ಲ ಅಂತ ಅಲ್ಲ, 1972ಕ್ಕೆ ಯಾರು ಯಾರು ಇರುತ್ತಾರೆ ಅಂತ ಹೇಳುವುದಕ್ಕೆ ಆಗುವುದಿಲ್ಲ, ಇದಕ್ಕೆ ಅವಕಾಶಕೊಡಬಾರದಂತೆ ಮೊದಲನೆಯ ಸಲ ಈ ವಿವರಣೆಯನ್ನು ನೀಡುತ್ತಾ ಇದ್ದೇನೆ, ಇದಕ್ಕೆ ಎಡೆಕೊಡಬಾರದು ಎಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಯಾರಿಗಾದರೂ ಏನಾದರೂ ರೆಕಾರ್ಡ್ ತಯಾರು ಮಾಡುವುದಕ್ಕೆ, ಬಿಲ್ಡ್ ಅಪ್ ಮಾಡುವುದಕ್ಕೆ ಪ್ರಯತ್ನಪಟ್ಟರೆ ಹಾಗೆ ಮಾಡುವುದನ್ನು ತಡೆಯುವುದು ಕಷ್ಟ. ಆ ರೀತಿಯಿಂದ ನಾವು ಬಹಳ ಎಚ್ಚರಿಕೆಯಿಂದ ಒಬ್ಬರಿಗೊಬ್ಬರು ಸಹಿಸಿಕೊಂಡು ಈ ಮಾನ್ಯ ಸಭೆಯಲ್ಲಿ ಕೆಲಸ ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಶ್ರೀಮಾನ್ ಸಿದ್ದವೀರಪ್ಪನವರು ಇಬ್ಬರು ಮಂತ್ರಿಗಳ ಮೇಲೆ ಛಾರ್ಜಸ್ಸನ್ನು ಮಾಡಿದ್ದಾರೆ. ಒಬ್ಬರ ಬಗ್ಗೆ ಬರೆದುಕೊಡುತ್ತೇನೆ ಎಂದು ಹೇಳಿದ್ದಾರೆ, ಬರೆದು ಕೊಡುವವರೆಗೂ ಕಾಯುತ್ತೇನೆ. ಇನ್ನೊಬ್ಬರ ಬಗ್ಗೆ ಬಹುಶಃ ಇದು ಕರಪ್ಷನ್ ಛಾರ್ಜ್ ಅಲ್ಲ ಅಂತ ನನಗೆ ಅನಿಸುತ್ತದೆ.

Sri H. SIDDAVEERAPPA.—A very responsible citizen of the country has given a complaints against one of the Ministers listing about what he calls 55 charges. Copy of it, I understand, is sent to us. Its original is sent to the Chief Minister. What I requested the Chief Minister was that when such a complaint is before the Chief Minister, when you had stated on the floor of the House that any complaint received against any Minister, I shsll be prepared to make an enquiry within three days......

Sri VEERENDRA PATIL.—Not within three days.

Sri H. SIDDAVEERAPPA.—All-right. As early as possible. It is stated that that man is corrupt. What is more harmful is it is being tom-tomed in that place that he is corrupt. That is more harmful than the man being corrupt, because it reflects upon your administration. Let me tell you, I have no rancour or hatred. I have nothing to gain by it. In fact I am one of those who still want a good Government. That apart when I said that, I said it with all sincerity. I am of opinion that if there is any charge against anybody, it is a matter where the Chief Minister in the interest of purity of administration must look into. When you receive a complaint, you cannot keep quiet and brush it aside. When I say that, let me make it clear that I have no hatred against Mr. Shankar Rao; I have no hatred against Mr. Nadgauda. One thing I felt sore about the Chief Minister; when the previous Chief Minister had assured the House—on this account, I am more hurt than anybody else. If you want cleanse the public administration, first of all, we—Ministers, ex-Ministers, M. L. As—we must first be prepared to say—all right, we are prepared to face the trial, if there is anything against us. Then only, there will be purity of administration.

ಶ್ರೀ ವೀರೇಂದ್ರ ಪಾಟೀಲ್.—ಇನ್ನೊಂದರ ಬಗ್ಗೆ ಅವರು ಬರೆದುಕೊಡುತ್ತೇನೆ ಎಂದು ಹೇಳಿದ್ದಾರೆ, ಅದು ಬಂದಮೇಲೆ ಮುಂದೆ ಕಾರ್ಯಕ್ರಮ ತೆಗೆದುಕೊಳ್ಳಬೇಕು, ತೆಗೆದುಕೊಳ್ಳುತ್ತೇನೆ. ನಿನ್ನೆ ದಿವಸ ಈ ಒಂದು ವಿಷಯವನ್ನು ಅವರು ಪದೇ ಪದೇ ಹೇಳುತ್ತಾ ಇದ್ದರು, ಅವರು ಹೇಳಿದ್ದು ನನ್ನ ಹತ್ತಿರ ಬಂದಿದೆ. ಯಾವ ಮನುಷ್ಯ ಈ ಕಾಗದದ ಕಾಪಿಯನ್ನು

ಕೊಟ್ಟಿದ್ದಾನೆ ಆತನ ಬ್ಯಾಕ್‌ಗ್ರೌಂಡ್ ನಾವು ಸ್ವಲ್ಪ ನೋಡಬೇಕಾಗುತ್ತದೆ. ಅವರು ಸ್ಟೇಟ್ ಮಿನಿಸ್ಟರ್ ಆಗಿರುವ ಜಿ. ಬಿ. ಶಂಕರರಾಯರ ವಿರುದ್ಧ ಚುನಾವಣೆಗೆ ನಿಂತಿದ್ದರು. ಇಲ್ಲಿ ಅವರು ಹೇಳುವುದು ಛಾರ್ಜಸ್ ಅಂತ ಇದೆ. ಏನಾದರೂ ಛಾರ್ಜಸ್ ನಿರ್ದಿಷ್ಟವಾಗಿ ಬಂದರೆ ಎನ್‌ಕ್ವೈರಿ ಮಾಡಬಹುದು. ಇಲ್ಲಿ 54 ಛಾರ್ಜಸ್ ಇವೆ. ಮಿಸ್ ಯೂಸ್ ಅಂಡ್ ಮಿಸ್ ಅಪ್ರೋಪ್ರಿಯೇಷನ್ ಆಫ್ ಫಂಡ್ಸ್ ಅಂತ. ಆಗಲೇ ಅವರು ಪ್ರೆಸಿಡೆಂಟ್‌ಷಿಪ್ ಬಿಟ್ಟು ಹತ್ತು ವರ್ಷವಾಯಿತು, ಈಗ ಮಂತ್ರಿಗಳಾಗಿದ್ದಾರೆ, 5 ವರ್ಷ ಪಾರ್ಲಿಮೆಂಟರಿ ಸೆಕ್ರೆಟರಿಯಾಗಿದ್ದರು, ಹತ್ತು ವರ್ಷಗಳ ಹಿಂದೆ ಮಿಸ್‌ಯೂಸ್ ಮಾಡಿದ್ದಾರೆ ಅಂತ ಹೇಳಿ ಇವತ್ತು ಬರೆಯುತ್ತಾ ಇದ್ದಾರೆ. ಹಾಗೆ ಮಾಡಿದ್ದರೆ ಆಡಿಟ್ ರಿಪೋರ್ಟ್‌ನಲ್ಲಿ ಬಂದಿರುತ್ತಾ ಇತ್ತು.

1. Misuse and misappropriation of public funds in Hirekerur Agricultural Association Ltd. during his Presidentship.

ಇದರಲ್ಲಿ ಯಾವ ವಿಧವಾದ ಹುರುಳು ಇಲ್ಲ ಎಂದು ಹೇಳುತ್ತೇನೆ.

ಇದೇ ರೀತಿ :—

Influence over Government to nominate his own party member
Influence over the Registrar of Co-operative Societies
Influence over the Registrar of Co-operative Societies
Influence over the Asst. Registrar of Co-operative Societies
Influence over the Registrar of Co-operative Societies
Influence over Revenue authorities
Influence over the B.D.O., Hirekerur
Influence over the Thasildar
Influence over the P.W.D.
Influence over the P.W.D.
Influence over the Revenue authorities

ಎಂದು ಹೇಳಿದ್ದಾರೆ.

There is absolutely nothing. There is nothing in it. ಮಂತ್ರಿಗಳಾಗಿದ್ದರೂ ಕೂಡ ಅವರು ಯಾವ ಒಂದು ಮತಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ ಆ ಕ್ಷೇತ್ರದಲ್ಲಿ ಕೆಲಸ ಕಾರ್ಯಗಳು ಮಾಡಿಸಿಕೊಳ್ಳುವುದು ಇದ್ದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳುತ್ತಾರೆ. ಆ ರೀತಿ ಹೇಳಿ ಮಾಡಿಸಿಕೊಳ್ಳಬೇಕಾಗುತ್ತದೆ, ಅವರು ಅಸೆಂಬ್ಲಿ ಮೆಂಬರಾಗಿ ಆ ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ ಆ ರೀತಿ ಅವರಿಗೂ ಹಕ್ಕು ಇದೆ. ಸ್ಪೆಸಿಫಿಕ್ ಚಾರ್ಜಸನ್ನು ಕೊಡಬೇಕು, ನಾವೇನೂ ಓಡಿಹೋಗತಕ್ಕವರಲ್ಲ.

Sri H. SIDDAVEERAPPA.--Against a police constable, it is said that he interfered.

Sri VEERENDRA PATIL.—It is not here.

ಇನ್ನು ಕೊನೆಯದಾಗಿ ಶ್ರೀಮಾನ್ ನಂಜೇಗೌಡರು ಯಾವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಇಷ್ಟುಮಾತ್ರ ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಹಾಗಾದರೆ ಇದರಲ್ಲಿ ಏನೂ ಇಲ್ಲ ಎಂದು ತೀರ್ಮಾನ ಮಾಡಿಬಿಟ್ಟರೇನು ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ನಿರ್ದಿಷ್ಟವಾಗಿ ಏನೂ ಹೇಳಿಲ್ಲ, ಸುಮ್ಮನೆ ಮಿಸ್ ಯೂಸ್ ಅಂತ ಹೇಳಿಕೊಂಡು ಹೋಗಿದ್ದಾರೆ. 10 ವರ್ಷದ ಕೆಳಗೆ ಶ್ರೀಮಾನ್ ಶಂಕರರಾಯರು ಅಧ್ಯಕ್ಷರಾಗಿದ್ದಾಗ ನಡೆದ ವಿಷಯದ ಬಗ್ಗೆ ಸ್ವಲ್ಪಮಟ್ಟಿಗೆ ಸಮಾಧಾನ ಮಾಡಿಕೊಳ್ಳಬೇಕಾಗುತ್ತದೆ. ಸುಮ್ಮನೆ ಪಿ.ಡಬ್ಲ್ಯೂ.ಡಿ. ಇಂಜನಿಯರ್ಸ್ ಅಂದರೆ ಅರ್ಥವೇನು ?

Sri H. SIDDAVEERAPPA.—If this is the way in which anything said against a Minister is to be treated or disposed of in a summary manner what is the use ? In all democratic countries where there is the OMBUDSMAN, even one smallest complaint against any individual will be enquired into. You may please read the DAS COMMISSION report in KAIRAN'S case where he has said that misuse of office is the worst type of corruption. ನೀವು ಈ ರೀತಿಯಾಗಿ ಒಬ್ಬ ಸಾರ್ವಜನಿಕ ಮುಖಂಡನಿಗೆ—ಪ್ರತಿನಿಧಿಗೆ ಅವನ ಮಾತಿಗೆ ಇಷ್ಟೇ ಬೆಲೆ ಕೊಡತಕ್ಕದ್ದು ಎಂದಮೇಲೆ ನಾವು ಇಲ್ಲಿ ಬಂದು, ಈ ವಿಷಯಗಳನ್ನಾದರೂ ಏತಕ್ಕೆ ಹೇಳಬೇಕೋ ಕಾಣೆ. ಈ ದಿವಸ ಮುಖ್ಯ ಮಂತ್ರಿಗಳು ಇಲ್ಲಿ ಹೇಳುತ್ತಿರುವುದನ್ನು ಕೇಳಿದರೆ ಇತ್ತ ವಿರೋಧಪಕ್ಷದವರು ಈಗಿರತಕ್ಕ ಕ್ಯಾಬಿನೆಟ್ಟಿನಲ್ಲಿ ಕೆಲವು ಮಿನಿಸ್ಟರುಗಳನ್ನು ಮನೆಗೆ ಕಳುಹಿಸಬೇಕು ಅನ್ನುವಷ್ಟು ಹಗೆತನವನ್ನು ನಾವೀಗ ಇಲ್ಲಿ ಸಾಧಿಸುತ್ತಿದ್ದೇವೆ ಎಂಬುದಾಗಿ ಅವರು ತಿಳಿದುಕೊಂಡಿರುವಂತೆ ಕಾಣುತ್ತದೆ. ಹಾಗಾದರೆ ನಾವಿನ್ನು ಇಲ್ಲಿ ಯಾವ ವ್ಯವಹಾರ ಮಾಡುವುದಕ್ಕೂ ಬಹಳ ಕಷ್ಟವಾಗುತ್ತದೆ. In the interest of purity of administration, we are saying all this. ಇಲ್ಲಿ ವಿರೋಧ ಪಕ್ಷದವರು ಆಡಳಿತ ನಡೆಸತಕ್ಕ ಪಕ್ಷದವರ ಬಗ್ಗೆ, ಮಂತ್ರಿಗಳ ಬಗ್ಗೆ ಜನರು ಏನು ಹೇಳಿಕೊಳ್ಳುತ್ತಿದ್ದಾರೆ ಅನುವುದದ್ದು ಹೇಳುವುದೇ ಬೇಡ ಅನುವುದಾದರೆ......

ಶ್ರೀ ವೀರೇಂದ್ರ ಪಾಟೀಲ್.—ನಾನು ಏನು ಹೇಳುವುದಕ್ಕೆ ಹೊರಟರೂ ಮಾನ್ಯ ಸಿದ್ಧವೀರಪ್ಪನವರು ತಮ್ಮ ಮನಸ್ಸಿನಲ್ಲಿ ಯಾವುದೋ ಒಂದು ಘಟನೆಯನ್ನು ಇಟ್ಟುಕೊಂಡು ಹೇಳುತ್ತಿದ್ದಾರೆ. ಆದರೆ ಅವರು ಹಾಗೆ ಹೇಳತಕ್ಕದ್ದು ಇದರಲಿಲ್ಲ ......

ಶ್ರೀ ಎಸ್. ಶಿವಪ್ಪ.—ಅದರಲ್ಲಿ ಎಲ್ಲಾ ವಿಚಾರಗಳೂ ಇರುವುದಕ್ಕೆ ಹೇಗೆ ಸಾಧ್ಯ !

ಶ್ರೀ ಎಚ್. ಸಿದ್ದವೀರಪ್ಪ.—ನಾವು ಇಲ್ಲಿ ಒಂದು ಚೀಪ್ ಪಾಪ್ಯುಲಾರಿಟಿಯನ್ನಾಗಲೀ ಅಥವಾ ಒಂದು ಪ್ರೊಪಗ್ಯಾಂಡಾ ಆಗಲಿ ಮಾಡಬೇಕು ಎನ್ನುವ ಉದ್ದೇಶಕ್ಕಾಗಿ ಮಾತನಾಡುವುದಿಲ್ಲ...... I am sorry to state that this is not the way we should be treated. ಈ ದಿವಸ ಮುಖ್ಯ ಮಂತ್ರಿಗಳು ಹೇಳುತ್ತಿರುವುದನ್ನು ನೋಡಿದರೆ ನಾವು ಇನ್ನು ಅವರಿಗೆ ವಿಚಾರಗಳನ್ನು ಬರೆದು ಕಳುಹಿಸುವುದಾದರೂ ಏತಕ್ಕೆ ! ವಿರೋಧ ಪಕ್ಷದವರಿಗೆ ಈ ಮನೆಯಲ್ಲಿ ಇಷ್ಟು ಬೆಲೆ ಇರುವುದರೆ ನಾವಿನ್ನು ಇವರಿಗೆ ಯಾವುದನ್ನೂ ಬರೆದುಕೊಡಬೇಕಾಸ್ದಿಲ್ಲ, ಅದನ್ನು ಬರೆದು ಕೊಡತಕ್ಕ ಕಡೆ ಕೊಡಬೇಕಾಗುತ್ತದೆ. ಅದೂ ಆಗಲಿ ನೋಡೋಣ. ಈ ದಿವಸ ಇಲ್ಲಿಯ ಅಟ್‌ಮಾಸಫಿಯರ್ರೇ ಬದಲಾಯಿಸಿರುವಂತೆ ಕಾಣುತ್ತಿದೆ. ಅತ್ತಕಡೆ ಇರತಕ್ಕವರನ್ನು ನೋಡಿದರೆ 'ಅವರು ಈ ದಿವಸ ನಮ್ಮ ಮೈಮೇಲೆ ಬೀಳುವುದಕ್ಕೆ ತೋಳು ಮುದುರಿ ಕುಳಿತಿದ್ದಾರೆ. ಈ ರೀತಿಯಾಗಿ ಕೋಯರ್ಸಿವ್ ಮೆಥೆಡ್ಡನ್ನು ಅನುಸರಿಸಿ ಇತ್ತಕಡೆ ಇರತಕ್ಕವರನ್ನು ಹೆದರಿಸಿ ಬೆದರಿಸಿ ಕೆಲಸ ಮಾಡಿಕೊಂಡು ಹೋಗುತ್ತೇವೆ ಅನ್ನುವುದಿದ್ದರೆ ಅದು ಖಂಡಿತ ಸರಿಯಾದುದಲ್ಲ. ನಿಮ್ಮ ಪಕ್ಷದಲ್ಲಿರತಕ್ಕ ಕೆಲವು ಸದಸ್ಯರು ಒಂದು ರೀತಿಯ ಬುದ್ಧಿವಂತಿಕೆಯಲ್ಲಿ ಮಾತನಾಡಿದ್ದಾರೆ. ಅದು ಸರಿಯಲ್ಲ. ನಿಮ್ಮ ಕಡೆ ಇರತಕ್ಕ ಸದಸ್ಯರು ಇತ್ತಕಡೆ ಇರತಕ್ಕ ಸದಸ್ಯರ ಮೇಲೆ ಏನೇನೋ ಹೇಳುತ್ತಿದ್ದಾರೆ—ನಾವು ಹೀಗೆ ಸುಮ್ಮನೆ ಕುಳಿತರೆ ಸರಿಯಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಈ ದಿವಸ ನಮ್ಮ ಪಕ್ಷದ ಸದಸ್ಯರ ಮೇಲೆ ಬೀಳಲೇಬೇಕೆಂದು ಕಾದಿದ್ದಾರೆ. ಇಲ್ಲಿ ವಿರೋಧ ಪಕ್ಷದಲ್ಲಿ ಇರತಕ್ಕ ಸದಸ್ಯರು ಯಾರಾದರೂ ಒಂದು ವಿಚಾರ ಹೀಗಿದೆ, ಅದನ್ನು ನಿಮ್ಮ ಕಡೆಗೆ ಕೊಡುತ್ತೇವೆ, ಅದನ್ನು ವಿಚಾರಮಾಡಿ ಎಂದರೆ, ಆಗಲಿ ಎನ್ನುವಂಥ ಒಂದು ಸೌಜನ್ಯತೆ ಕೂಡ ಇಲ್ಲ. ಶ್ರೀಮಾನ್ ನಂಜೇಗೌಡರು ಅನೇಕ ವಿಚಾರಗಳನ್ನು ತಿಳಿಸುತ್ತಿದ್ದಾಗಲೇ ನನಗೆ ಭಾಸವಾಯಿತು, ಇಲ್ಲಿ ಆಡಳಿತ ಪಕ್ಷದವರು ತಮಗೆ ಯಾರು ಅಪ್ಯಾಯಮಾನವಾಗಿರುತ್ತಾರೋ ಅಂಥವರನ್ನು ರಕ್ಷಣೆ ಮಾಡಿಕೊಂಡು ಹೋಗುತ್ತಿದ್ದಾರೆ, ಹಾಗಿರುವಾಗ ಏತಕ್ಕೆ ಶ್ರೀ ನಂಜೇಗೌಡರು ಇಷ್ಟೆಲ್ಲಾ ವೃಥಾ ತೊಂದರೆ ತೆಗೆದುಕೊಳ್ಳುತ್ತಿದ್ದಾರೆ ಎಂದು. ನಾನು ಮುಖ್ಯ ಮಂತ್ರಿಗಳ ಕಡೆಗೆ ಎರಡು ವಿಚಾರಗಳನ್ನು ಮಾತ್ರ ಬರೆದುಕೊಟ್ಟೆ. ಅವರಿಗೂ ಗೊತ್ತಿದೆ ಮುಖ್ಯ ಮಂತ್ರಿಗಳ ವಿಚಾರದಲ್ಲಿ ಸಿದ್ಧವೀರಪ್ಪನಿಗೆ ಎಷ್ಟು ಗೌರವ ಇದೆ ಅನ್ನುವುದು. ಆದಾಗ್ಯೂ ಅದೇನೋ ಅವರು ಈ ದಿವಸ ಒಂದು ಹಿಟ್ಟಿಂಗ್ ಮಾಡಿನಲ್ಲಿದ್ದಾರೆ......

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಬಹಳಮಟ್ಟಿಗೆ ಊಹೆ ಮಾಡಿಕೊಂಡಿದ್ದಾರೆ. ನಾನು ಎಲ್ಲಾ ವಿಷಯಗಳನ್ನೂ ಅವರಿಗೆ ಓದಿ ತಿಳಿಸಿದ್ದೇನೆ. ಆದರೆ ಅದರಲ್ಲಿ ಒಂದೆರಡು ಪಾಯಿಂಟ್ಸ್‌ಗಳನ್ನು ನಾನು ವೆರಿಫೈ ಮಾಡಬೇಕಾಗಿದೆ. ಅದನ್ನು ಮಾಡುತ್ತೇನೆ. ಆದರೆ ಇನ್ನೂ ಕೆಲವು ಆಪಾದನೆಗಳೇನಿವೆ ಸಬ್‌ರಿಜಿಸ್ಟ್ರಾರ್, ತಾಶೀಲ್ದಾರ್ ಮತ್ತು ಅಸಿಸ್ಟೆಂಟ್ ಕಮಿಷನರ್ ಹಾಗೂ

ಅಸಿಸ್ಟೆಂಟ್ ಇಂಜಿನಿಯರುಗಳ ಬಗ್ಗೆ ಮಾಡಿರತಕ್ಕ ಅಲಿಗೇಷನ್ ಬಹಳ ವೇಗ್ ಆದದ್ದು. ಆದುದರಿಂದ ಅವುಗಳ ವಿಚಾರದಲ್ಲಿ ನಾನೂ ಏನೂ ಹೇಳುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಇತ್ತ ಕಡೆ ಇರತಕ್ಕ ವಿರೋಧ ಪಕ್ಷದವರು ಹೇಳುವುದನ್ನು ತಾವು ಕೇಳದಿದ್ದರೂ ಚಿಂತೆಯಿಲ್ಲ. ಇತ್ತೀಚೆಗೆ ನಿಮ್ಮ ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡಿರುವ ಶ್ರೀ ಬೊಮ್ಮಾಯಿ ಅವರನ್ನೇ ಕೇಳಿಕೊಳ್ಳಿ. ಅಲ್ಲಿ ಶ್ರೀ ಬಣಕಾರರಿಗೆ ಎಷ್ಟು ಕಿರುಕುಳ ಕೊಡುತ್ತಿದ್ದಾರೆ ಅನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಅವರನ್ನೇ ಕೇಳಿ ತಿಳಿದುಕೊಳ್ಳಿ.

ಶ್ರೀ ಕೆ. ಎಚ್. ಪಾಟೀಲ್.—ಪೋಲೀಸಿನವರ ಇಂಟರ್‌ಫಿಯರೆನ್ಸ್ ಇತ್ತೀಚೆಗೆ ಎಲ್ಲಾ ವಿಚಾರಗಳಲ್ಲೂ ಎಷ್ಟು ಜಾಸ್ತಿಯಾಗಿದೆ ಎಂಬುದನ್ನು ಹೇಳುವುದಕ್ಕೇ ಸಾಧ್ಯವಿಲ್ಲ ...

ಶ್ರೀ ವೀರೇಂದ್ರ ಪಾಟೀಲ್.—ಇದೇನೋ ಅಂತೂ ಈ ದಿವಸ ಬಹಳ ದುರ್ದೈವ. ನಾನು ಎಷ್ಟು ನಮ್ರತೆಯಿಂದ ವಿಷಯಗಳನ್ನು ಹೇಳುತ್ತಿದ್ದರೂ ದೋಷಾರೋಪಣೆಗಳು ಬಂದೇ ಬರುತ್ತವೆ. ನಾನು ಮಾನ್ಯ ಸದಸ್ಯರಿಗೆ ಏನು ಛಾರ್ಜಸ್ ಇವೆ ಬರೆದು ಕೊಡಿ, ತಾವು ಬರೆದು ಕೊಡುವವರೆಗೂ ನಾನು ವೈಟ್ ಮಾಡುತ್ತೇನೆ ಅನ್ನುವುದಾಗಿ ಸಹಾ ಹೇಳಿದ್ದೇನೆ. ಈಗ ಅವರು ಬೊಮ್ಮಾಯಿ ಅವರನ್ನು ಕೇಳಬೇಕೆಂದು ಹೇಳಿದ್ದಾರೆ. ಅವರನ್ನೂ ಕೇಳುತ್ತೇನೆ. ಅವರೇನು ಹೇಳುತ್ತಾರೋ ಅದರ ಬಗ್ಗೆ, ನಾನು ಸ್ಪಷ್ಟವಾಗಿದ್ದರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಲೇ ಇದ್ದೇನೆ......

ಶ್ರೀ ಎಸ್. ಶಿವಪ್ಪ.—ಈಗ ಮುಖ್ಯ ಮಂತ್ರಿಗಳು ಮಾತನಾಡತಕ್ಕ ಧಾಟಿಯನ್ನು ನೋಡಿ ಶ್ರೀ ಬೊಮ್ಮಾಯಿ ಅವರು ಹೆದರಿಬಿಟ್ಟಿದ್ದಾರೆ. ನಾಳೆ ಅವರು ವಿಚಾರಗಳನ್ನು ತಿಳಿಸುವುದಕ್ಕೆ ಇಷ್ಟಪಡದೇ ಇರಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಮಂತ್ರಿಗಳು ತಾವು ಯಾವ ಡಿಸ್ಕ್ರಿಮಿನೇಷನ್ನೂ ಮಾಡುತ್ತಿಲ್ಲ ಎಂದು ಹೇಳುತ್ತಿದ್ದಾರೆ; ಮತ್ತು ಅವರು ಕಾನ್‌ಕ್ರೀಟಾಗಿರತಕ್ಕ ಕೇಸುಗಳನ್ನು ಕೊಟ್ಟರೆ ಆಕ್ಷನ್ ತೆಗೆದುಕೊಳ್ಳುತ್ತೇನೆಂದು ಹೇಳುತ್ತಿದ್ದಾರೆ. ಆದರೆ ನಾನೇ ಅವರಿಗೆ ಒಂದು ಸಹಕಾರ ಸಂಸ್ಥೆಯಲ್ಲಿ ಒಬ ಉಪ ಮಂತ್ರಿಗಳು 3,400 ರೂಪಾಯಿಗಳನ್ನು ದುರುಪಯೋಗ ಮಾಡಿದ್ದಾರೆಂದು ಅಧಿಕೃತ ಆಡಿಟ್ ವರದಿಯಲ್ಲೇ ನಮೂದಾಗಿದೆ, ಅದು ಸರ್ಟಿಫೈಡ್ ವರದಿ—ಎಂದು ಅದನ್ನು ಅವರಿಗೆ ಕೊಟ್ಟು ಎಷ್ಟು ದಿವಸಗಳಾಯಿತು. ಇಲ್ಲಿಯವರೆಗೂ ಏನು ಆಕ್ಷನ್ ತೆಗೆದುಕೊಂಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಆ ವಿಚಾರವನ್ನಿನ್ನೂ ಮೊನ್ನೆ ತಾನೇ ಹೇಳಿದರು ಅದಕ್ಕೆ ನಾನು ರೆಕಾರ್ಡನ್ನು ಕಾಲ್‌ಫಾರ್ ಮಾಡಿದ್ದೇನೆ, ಬರಬೇಕು. ಅಷ್ಟರಲ್ಲೇ ಮಾನ್ಯ ಸದಸ್ಯರು ಅದನ್ನು ಏನು ಮಾಡಿದ್ದೀರಿ ಎಂದು ಕೇಳಿದರೆ ನಾನು ಏನು ಹೇಳಲಿ ! ಹೀಗೆ ಯಾರಾದರೂ ಸ್ಪೆಸಿಫಿಕ್ ಛಾರ್ಜುಗಳನ್ನು ಕೊಟ್ಟರೆ ವಿಚಾರ ಮಾಡಬಹುದು. ಜನರಲ್ಲಾಗಿ—ವೇಗಾಗಿ ಹೇಳಿದ ಅಪಾದನೆಗಳನ್ನು ವಿಚಾರಣೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದೇನೆ. ಆದರೆ ಮಾನ್ಯ ಸಿದ್ದವೀರಪ್ಪನವರು ಬಹಳ ದೂರ ಊಹೆ ಮಾಡಿಕೊಂಡು ಹೇಳುತ್ತಿದ್ದಾರೆ. ಅವರು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ಒಂದು ಛಾರ್ಜನ್ನು ಕೊಟ್ಟರೆ ಅದನ್ನು ವಿಚಾರ ಮಾಡುತ್ತೇನೆಂದು ಹೇಳಿದ್ದೇನೆ. ಅದರ ಬಗ್ಗೆ ನಾನು ಒಂದೆರಡು ಕಡೆ ವಿಚಾರ ಮಾಡಬೇಕು, ಮಾಡಿ ಸಮಾಧಾನ ಮಾಡಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಶ್ರೀಮಾನ್ ನಂಜೇಗೌಡರು ಇಲ್ಲಿ ಒಂದು ಟೆಲಿಗ್ರಾಂ ಮತ್ತು ಒಂದು ಲೆಟರನ್ನು ಓದಿದರು. ಆದರೆ ಅವುಗಳನ್ನು ಯಾರು ಯಾರಿಗೆ ಎಲ್ಲಿಂದ ಬರೆದಿದ್ದಾರೆ, ಯಾವಾಗ ಬರೆದಿದ್ದಾರೆಂಬುವ ಮಾಹಿತಿಗಳು ನನ್ನಲ್ಲಿಲ್ಲ. ಆದಾಗ್ಯೂ ಇದೊಂದು ದುರ್ದೈವದ ಪ್ರಸಂಗ. ಅವರು ನನಗೆ ಆ ಮಾಹಿತಿಗಳನ್ನು ಒದಗಿಸದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಮತ್ತು ಜನರಲ್ಲಾಗಿ—ವೇಗಾಗಿ ಮಾಡತಕ್ಕ ಅಪಾದನೆಗಳ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದರೆ ಹೇಗೆ ಕೈಗೊಳ್ಳುವುದು ? ಶ್ರೀಮಾನ್ ನಂಜೇಗೌಡರು ಓದಿದ ಕಾಗದಗಳು ನನ್ನ ಕೈಗೆ ಬಂದರೆ ಅದರ ಬಗ್ಗೆ ಕಾಮೆಂಟ್ಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ವಿರೋಧ ಪಕ್ಷದಲ್ಲಿರತಕ್ಕವರು ಹೇಳತಕ್ಕದ್ದು ಎಷ್ಟರಮಟ್ಟಿಗೆ ಸಾಧುವಾದದ್ದು ಅನ್ನುವುದು ನನಗೆ ಗೊತ್ತಿದೆ. ಅವರೂ ನಾವು ಎಲ್ಲರೂ ಒಟ್ಟಿಗೆ ಸೇರಿ ರಾಜ್ಯದಲ್ಲಿ ಪ್ರಜಾಪ್ರಭುತ್ವ ಬೆಳೆಸುವುದಕ್ಕೆ ಪ್ರಯತ್ನ ಮಾಡೋಣ ಅನ್ನುವುದನ್ನೂ ಕೂಡ ನಾನು ಒಪ್ಪುತ್ತೇನೆ. ಆ ರೀತಿಯಿಂದ ಒಂದು ವಿಶ್ವಾಸ, ಹಾಗೂ ಪ್ರೇಮದಿಂದ ಈ ಮನೆಯ ಮುಖಂಡರೆಲ್ಲರೂ ಜನತೆಯ ಸೇವೆ ಮಾಡುವುದಕ್ಕೆ ಮುಂದೆ

(ಶ್ರೀ ವೀರೇಂದ್ರ ಪಾಟೀಲ್)

ಹೋಗೋಣ. ಇವತ್ತು ಹೊಸದಾಗಿ ನನ್ನ ಕೈಗೆ ಜವಾಬ್ದಾರಿ ಬಂದಿದೆ. ನಾವೆಲ್ಲರೂ ನಿಷ್ಠೆಯಿಂದ ಜನತೆಯ ಸೇವೆ ಮಾಡಬೇಕು. ನಮ್ಮ ಅಧಿಕಾರದ ಅವಧಿಯಲ್ಲಿ ಈ ರಾಜ್ಯಕ್ಕೆ ಹಾಗೂ ರಾಜ್ಯದ ಜನಗಳಿಗೆ ಒಂದು ಅನುಕೂಲವಾಗಬೇಕು. ಅಂತಹ ಒಂದು ಸದುದ್ದೇಶದಿಂದ ನಾವು ಇದ್ದೇವೆಯೇ ಹೊರತು ಎರಡನೆಯ ವಿಚಾರದಿಂದ ಈ ಸರ್ಕಾರವನ್ನು ನಾವು ನಡೆಸುತ್ತಾ ಇಲ್ಲವೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

9-00 P.M.

ಶ್ರೀ ಎಚ್. ಸಿದ್ದವೀರಪ್ಪ.—ಸಿಂಡಿಕೇಟ್ ಬ್ಯಾಂಕಿನವರು ಈ ಸರ್ಕಾರಕ್ಕೆ ಒಂದು ಫಿರ್ಯಾದಿ ಕೊಟ್ಟು ಎರಡು ವರ್ಷಗಳಾದವು. ಅದನ್ನು ಏಕೆ ಇನ್‌ವೆಸ್ಟಿಗೇಷನ್ ಮಾಡಲಿಲ್ಲ? ಅದರ ಪರಿಸ್ಥಿತಿ ಏನು?

ಅಧ್ಯಕ್ಷರು.—ಅದನ್ನು ಆಮೇಲೆ ಹೇಳಿ.

ಶ್ರೀ ಸದಾಶಿವಪ್ಪ ಪಾಟೀಲ್.—ರಾಮದುರ್ಗದ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಲಿಂಗಸುಗೂರಿಗೆ ಬಂದಾಗ್ಗೆ ಈ ರೀತಿ ದುರ್ವರ್ತನೆ ಅವರು ನಡೆಸಿದ್ದಾರೆಂಬ ವಿಷಯವನ್ನು ನಾನು ಮಾತ್ರ ಹೇಳಲಿಲ್ಲ. ಲಿಂಗಸೂಗೂರ್ ಎಂ.ಎಲ್.ಎ. ಮತ್ತು ಇನ್ನೂ ಇತರ ಎಂ.ಎಲ್.ಎ.ಗಳು ಕೂಡ ಹೇಳಿದ್ದೇವೆ. ಅವರನ್ನು ಅಲ್ಲಿ ಕಂಟಿನ್ಯೂ ಮಾಡಿದ್ದರಿಂದ ಅಲ್ಲಿ ಆ ರೀತಿ ದುರ್ಘಟನೆ ನಡೆದಿದೆಯೆಂದು ಹೇಳಿದೆ. ಈ ವಿಷಯವನ್ನು ಸುಮಾರು 2 ವರ್ಷಗಳಿಂದ ಹೇಳುತ್ತಿದ್ದೇನೆ. ಒಂದು ಪ್ರೊಸೀಜರ್ ಇದೆಯೆಂದು ಹೇಳುತ್ತಾರೆ. ಮತ್ತೆ ಹಳ್ಳಿಯ ಜನಗಳು ಅವರ ಬಗ್ಗೆ ದೂರು ಕೊಟ್ಟಿದ್ದರೂ, ಎರಡು ಸಾರಿ ಐ.ಜಿ.ಪಿ.ಯವರು ಅವರನ್ನು ವರ್ಗ ಮಾಡಿದ್ದರೂ ಹಿಂದಿನ ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಕ್ಯಾನ್ಸಲ್ ಮಾಡಿದ್ದಾರೆ. ಈಗಿನ ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಕ್ಯಾನ್ಸಲ್ ಮಾಡಿದ್ದಾರೆ. ರಾಮದುರ್ಗ ಪೋಲೀಸ್ ಸ್ಟೇಷನ್ನಿನಲ್ಲಿ ಅವರೇ ಸಬ್ ಇನ್‌ಸ್ಪೆಕ್ಟರ್ ಆಗಿದ್ದಾಗಲೇ ಎರಡು ಕೊಲೆಗಳಾಗಿವೆ. ಯಾವ ಅಧಿಕಾರಿಯ ಬಗ್ಗೆ ಏನಾದರೂ ದೂರು ಬಂದರೆ, ಅಲಿಗೇಷನ್ಸ್ ಬಂದರೆ, ಇದು ಸೂಕ್ತ ಅಥವಾ ಇದು ಸೂಕ್ತವಲ್ಲ ಎಂದು ಒಮ್ಮೆಲೇ ತೀರ್ಮಾನಕ್ಕೆ ಬರಬೇಕೆಂದು ಹೇಳುವುದಿಲ್ಲ. ದೂರು ಕೊಟ್ಟಮೇಲೆ ವಿಚಾರಣೆಗೆ ಡಿ.ಎಸ್.ಪಿ. ಬೇಡ, ಎಸ್.ಪಿ. ಆದರೂ ಬಂದು ಎನ್‌ಕ್ವೈರಿ ಮಾಡಲಿ ಎಂದು ಕೇಳಿದರೆ, ಎಸ್.ಪಿ. ಬರಲಿಲ್ಲ. ಆಗ ನಾನು ದೂರು ಕೊಟ್ಟದ್ದು ಸಾರ್ಥಕವಾಗಲಿಲ್ಲ. ಅಲ್ಲಿ ಇನ್ನು ಎಷ್ಟು ಕೊಲೆಗಳು ಆಗಬೇಕೆಂದು ಆ ರೀತಿ ಅವರನ್ನು ಅಲ್ಲಿಯೇ ಮುಂದುವರಿಸುತ್ತೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಎಂ. ನಾಗಪ್ಪ.—ನನ್ನ ಜಿಲ್ಲೆಯ ರೈಲ್ವೆ ಸ್ಟೇಷನ್ನಿನಲ್ಲಿ 65, 66, 67 ಮತ್ತು 68ರಲ್ಲಿ ಎಷ್ಟು ತೆಫ್ಟ್ ಕೇಸಸ್ ಆಗಿದೆ ಎನ್ನುವುದಕ್ಕೆ ರೈಲ್ವೆ ಸ್ಟೇಷನಿಂದ ಲಿಸ್ಟ್ ತರಿಸಿ ನೋಡಿದರೆ ಗೊತ್ತಾಗುತ್ತದೆ.

ಇನ್ನೊಂದು ವಿಷಯ. ಮಾನ್ಯ ಶ್ರೀ ಸದಾಶಿವಪ್ಪ ಪಾಟೀಲ್ ಅವರು ಮಾನ್ಯ ಮುಖ್ಯ ಮಂತ್ರಿಗಳು ಲಿಂಗಸುಗೂರಿಗೆ ಬಂದಾಗ್ಗೆ ಒಂದು ವಿಚಾರವನ್ನು ತಿಳಿಸಿದ್ದಾರೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು 2 ವರ್ಷಗಳೊಳಗೆ ಯಾವ ಅಧಿಕಾರಿಯನ್ನೂ ವರ್ಗ ಮಾಡುವುದಿಲ್ಲ ಆದರೆ ಸ್ಪೆಸಿಫಿಕ್ಕಾಗಿ ದೂರು ಬಂದರೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅವರು ಇದರ ಬಗ್ಗೆ ಏನೂ ಅರ್ಥಮಾಡಿಕೊಳ್ಳಲಾರದೆ ಹೇಳಿದ್ದಾರೆಂದು ನನಗೆ ಕಾಣುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಈಗ ಸಿಂಡಿಕೇಟ್ ಬ್ಯಾಂಕಿನ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ನನ್ನ ಹತ್ತಿರ ಒಂದು ನೋಟ್ ಇದೆ. ಇದರಲ್ಲಿ ಮಾನ್ಯ ಶ್ರೀ ಮಲ್ಲಿಕಾರ್ಜುನ ಎಂಬುವರು ಮತ್ತು ಇನ್ನೂ 4 ಜನರು ಅರೆಸ್ಟ್ ಆಗಿದ್ದಾರೆ. ಈ ಕೇಸ್ ಇನ್‌ವೆಸ್ಟಿಗೇಷನ್ ಇನ್ನೂ ಆಗುತ್ತಾ ಇದೆ. ಇದರ ನಿಜಗಾಗಿ ಬೇರೆ ಕಡೆಗಳಿಂದ ಮಾಹಿತಿಯನ್ನು ಒದಗಿಸಿಕೊಳ್ಳಬೇಕಾಗಿದೆ. ಇದು ಈಗ ಕೊನೆಯ ಹಂತದಲ್ಲಿದೆ. ಬಹುಶಃ ಇನ್ನು ಕೆಲವೇ ದಿವಸಗಳಲ್ಲಿ ಚಾರ್ಜ್‌ಷೀಟ್ ಫೈಲ್ ಆಗುತ್ತದೆ.

Sri H. SIDDAVEERAPPA.—My information is that with regard to the loss of money in the Syndicate Bank, sufficient evidence is collected against the swindler to place a charge-sheet. But it is understood that

the Police want to check the accounts of Mysore Bank and other Banks where also he has swindled money. It seems the police are conducting investigation in the other Banks also and they would place charge-sheet against him, including the charges relating to his fraudulent transactions in so many banks. If that were to be the case, the investigatio n will not be complete for another ten years. The Syndicate Bank has already lost some lakhs on account of this fellow.

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕೆ 10 ವರ್ಷಗಳು ಆಗುವುದಿಲ್ಲ. ಕೊನೆಯ ಹಂತದೊಳಗೆ ಇದೆ, ಬಹುಶಃ ಕೆಲವು ತಿಂಗಳಲ್ಲಿ ಆಗುತ್ತದೆ. ಇದು ಚೀಟಿಂಗ್ ಕೇಸ್ ಇದೆ. ಅನೇಕ ಕಡೆಗಳಿಂದ ಮಾಹಿತಿಯನ್ನು ಕಲೆಕ್ಟ್ ಮಾಡಬೇಕಾಗಿದೆ ಇವನ್ನು ಕೈಬಿಟ್ಟಿಲ್ಲ. ಇದನ್ನು ಹಷಪ್ ಮಾಡುವ ಪ್ರಯತ್ನವೇನೂ ಮಾಡಿಲ್ಲ. ಇನ್ನು ಕೆಲವೇ ತಿಂಗಳಲ್ಲಿ ಚಾರ್ಜ್‌ಷೀಟ್ ಫೈಲ್ ಮಾಡುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ತಮ್ಮ ಮುಂದೆ ಇರತಕ್ಕ ನೋಟ್ ಪ್ರಕಾರ ಇದು ಒಂದೇ ಬ್ಯಾಂಕೋ ಅಥವಾ ಮೈಸೂರು ಬ್ಯಾಂಕ್ ಸಹ ಸೇರಿದೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದಹಾಗೆ ಅದೂ ಸಹ ಸೇರಿರಬಹುದು. ಇಲ್ಲವೆಂದು ಯಾವುದನ್ನೂ ನಿರಾಕರಿಸಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಇದೇ ಕೇಸಿನಲ್ಲಿ ಒಬ್ಬ ಸೀನಿಯರ್ ಮ್ಯಾನೇಜರ್ ಅವರು ಒಂದೂವರೆ ಸಾವಿರ ರೂಪಾಯಿಗಳನ್ನು ತೆಗೆದುಕೊಂಡಿದ್ದಕ್ಕೆ ಅವರನ್ನು ಸಸ್‌ಪೆನ್ಸನ್ನಿನಲ್ಲಿಟ್ಟಿದ್ದಾರೆಂದು ತಿಳಿಯಿತು. ಅದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.—ರ ಮದುಗಿರಿ ಸಬ್ ಇನ್‌ಸ್ಪೆಕ್ಟರ್ ಬಗ್ಗೆ ಮಾನ್ಯ ಸದಸ್ಯರು ಒಂದು ವಿಚಾರವನ್ನು ಕೇಳಿದರು. ಅವರು ನನ್ನಲ್ಲಿ 2-3 ಸಾರಿ ಬಂದಿದ್ದರು. 2 ವರ್ಷಗಳು ಮುಗಿದ ಕೂಡಲೇ ಅಲ್ಲಿಂದ ಎರಡನೆಯ ಕಡೆಗೆ ವರ್ಗಾಯಿಸುತ್ತೇವೆಂದು ಹೇಳಿದ್ದರೂ ಅವರು ಪದೇ ಪದೇ ಬಂದು ಕೇಳುತ್ತಿದ್ದಾರೆ. ಆ ಸಬ್ ಇನ್‌ಸ್ಪೆಕ್ಟರ್ ಯಾರು ಎಂಬುದನ್ನು ನಾನು ನೋಡಿಲ್ಲ. ಅವರು ಯಾರೆಂಬುದೂ ಸಹ ಗೊತ್ತಿಲ್ಲ. ಆದರೆ ಅನೇಕ ಮಾನ್ಯ ಸದಸ್ಯರು ನಮ್ಮ ಕಡೆ ಅಂ ಃ ವರು ಬೇಕು, ಇಂತಹವರು ಬೇಕು, ಇಂಥಾವರನ್ನು ತೆಗೆಯಿರಿ ಎಂದು ಕೇಳುತ್ತಿರುತ್ತಾರೆ. ಆದಕ್ಕೆ ಟ್ರಾನ್ಸ್‌ಫರ್ ಸೀಜನ್ ಇರುತ್ತದೆ. ಎರಡು ವರ್ಷಗಳು ಒಂದು ಕಡೆ ಇದ್ದರೆ ಅನಂತರ ವರ್ಗ ಮಾಡಬಹುದು ಎಂಬುದಾಗಿ ನಾನು ಅವರಿಗೆ ಹೇಳಿದೆ. ಅವರಿಗೆ ಸಮಾಧಾನವಾಗಲಿಲ್ಲ. ಅವರ ಮೇಲೆ ಅಲಿಗೇಷನ್ಸ್, ಚಾರ್ಜಸ್ ಬಗ್ಗೆ ಏನೇನೋ ಅರ್ಜಿಗಳನ್ನು ಕೊಟ್ಟರು. ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿದೆ. ಪ್ರತಿಯೊಂದು ಅರ್ಜಿಯನ್ನು ಎನ್‌ಕ್ವೈರಿ ಐ.ಜಿ.ಪಿ. ಯವರ ರಿಪೋರ್ಟಿನಲ್ಲಿ ಆ ಛಾರ್ಜಸ್ ಬೇಸ್‌ಲೆಸ್ ಎಂದು ಹೇಳಿದ್ದಾರೆ. ಅದನ್ನು ಹೋಗಿ ಎನ್‌ಕ್ವೈರಿ ಮಾಡಿದ್ದಾರೋ ಗೊತ್ತಿಲ್ಲ. ಈ ಮಧ್ಯೆ ಅವರು ಅಲ್ಲಿ ಹೋಗಿ 1 ವರ್ಷ 8 ತಿಂಗಳು ಅಥವಾ 9 ತಿಂಗಳುಗಳಾಗಿವೆ. ಬಹಳಮಟ್ಟಿಗೆ ಅವರನ್ನು ಈಗ ತೆಗೆಯುವುದು ಅಪ್ರಕೃತವಾಗಿದೆಯೆಂದು ಹೇಳಿದ್ದೇನೆ, 2 ವರ್ಷಗಳು ಮುಗಿದಮೇಲೆ ಅವರು ಅಲ್ಲಿ ಇರುವುದಿಲ್ಲ.

ಇನ್ನು ಮಾನ್ಯ ಸದಸ್ಯರೊಬ್ಬರು ರೈಲ್ವೆ ವಿಷಯವಾಗಿ ಒಂದು ವಿಚಾರವನ್ನು ಹೇಳಿದರು. ಪೋಲೀಸಿನವರಿಂದ ವರದಿ ಇನ್ನೂ ಬರಬೇಕಾಗಿದೆ. ರೈಲ್ವೆ ಇಲಾಖೆಯಿಂದ ಎಲ್ಲಾ ಮಾಹಿತಿಗಳನ್ನು ತರಿಸಿಕೊಳ್ಳಬೇಕಾಗುತ್ತದೆ. ಆಮೇಲೆ ಅದನ್ನು ಹೇಳಬೇಕಾಗುತ್ತದೆ.

Mr. SPEAKER.—The question is :

"That the respective sums not exceeding the amounts mentioned be granted to the Government to defray the charges which will come in course of payment during the financial year for the period ending 31st day of March 1970, in respect of Demand Nos. 10,12 and 13".

The motion was adopted.

As ordered by the Chair the motion for demands for grants which were adopted by the House are re-produced below.

DEMAND NO. 10—GENERAL ADMINISTRATION.

19. General Administration.

"That a sum not exceeding Rs. 4,48,45,000 be granted to the Government to defray the charges which will come in course of payment during the financial year for the period ending 31st day of March 1970, in respect of 'General Administration'."

DEMAND NO. 12—JAILS.

22. Jails

"That a sum not exceeding Rs. 77,69,000 be granted to the Government to defray the charges which will come in course of payment during the financial year for the period ending 31st day of March 1970, in respect of 'Jails'."

DEMAND NO. 13—POLICE.

23. Police.

"That a sum not exceeding Rs. 8,57,60,000 be granted to the Government to defray the charges which will come in course of payment during the financial year for the period ending 31st day of March 1970, in respect of 'Police'."

MR. SPEAKER.—The House now stands adjourned to meet tomorrow at 1 P.M.

The House adjourned at Fifteen Minutes past Nine of the Clock to meet again at One of the Clock on Friday, the 14th March 1969.

WD 12666—GPB—600—16-7-1969

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Friday, 14th March 1969

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

MR. SPEAKER.—Held-over question No. 806 lapses since the hon. Member is absent.

SRI D. B. KALMANKAR.—Sir, what about other similar questions ?

MR. SPEAKER.—I have included this question today and I shall be taking up one or two such questions every day.

SRI M. NAGAPPA.—Why not today's list be taken up first and later on those questions ?

MR. SPEAKER.—I have deliberately instructed my office to put questions in that order. This will be the case not only today but also in future.

Payment of Grant to Hatti Gold Mines Hospital

36. SRI K. SANGANA GOUDA (Lingasugur).—

Will the Minister for Health be pleased to state:—

(*a*) the strength of the staff of the Hatti Gold Mines Hospital, Hatti, Lingsugur Taluk in Raichur District;

(SRI K. SANGANA GOUDA)

(*b*) average number of patients attending daily to the said hospital ;

(*c*) the number of patients coming from the Hatti Gold Mines area ;

(*d*) the number of patients coming from the surrounding villages to the said Hospital for Medical attendance ;

(*e*) the quantum of annual grant given by the Government to the said hospital ;

(*f*) since how long this grant was stopped ;

(*g*) the reasons for this action ;

(*h*) whether the said grant is sufficient to meet the necessities of the patients coming from the sorrounding villages ;

(*i*) if not, whether there is any proposal to increase the grant ?

SRI G. BASAVANNAPPA (Deputy Minister for Health).—

(*a*) 35.

(*b*) About 360 daily.

(*c*) About 160 daily.

(*d*) About 200 daily.

(*e*) Grants of Rs. 1,500 were paid during the years 1960-61 and 1961-62.

(*f*) From the beginning of the year 1962-63.

(*g*) As the hospital is not covered by the provisions of the grant-in-aid rules for payment of grants.

(*h*) and (*i*) Do not arise in view of replies to clauses (*f*) and (*g*) above.

ಶ್ರೀ ಕೆ. ಸಂಗನಗೌಡ.—ಸ್ವಾಮಿ.—ತಾವು ಒಟ್ಟು 360 ರೋಗಿಗಳ ಪೈಕಿ ಸುತ್ತಮುತ್ತಲ ಗ್ರಾಮಗಳಿಂದ ಬರುವ ರೋಗಿಗಳು 200 ಎಂದು ಹೇಳಿದ್ದೀರಿ. 1962-1963ರಿಂದ ಅನುದಾನವನ್ನು ನಿಲ್ಲಿಸಲಾಗಿದೆ ಎಂದು ಸಹ ಹೇಳಿದ್ದೀರಿ. ಈ ರೀತಿ ನಿಲ್ಲಿಸಿದರೆ ಸುತ್ತಮುತ್ತಲ ಹಳ್ಳಿಯ ಜನರಿಗೆ ಜನಾರೋಗ್ಯ ಸೌಕರ್ಯಗಳನ್ನು ಒದಗಿಸಿಕೊಟ್ಟಂತಾಗುತ್ತದೆಯೇ ?

†ಶ್ರೀ ಜಿ. ಬಸವಣ್ಣಪ್ಪ.—ಈಗಿನ ಗ್ರಾಂಟ್-ಇನ್-ಏಯ್ಡ್ ರೂಲ್ಸ್ ಪ್ರಕಾರ ಕಂಪನಿಗಳು ನಡೆಸುವ ಆಸ್ಪತ್ರೆಗಳಿಗೆ ಅನುದಾನವನ್ನು ಕೊಡುವುದಕ್ಕಾಗುವುದಿಲ್ಲ. ಚಾರಿಟಬಲ್ ಇನ್‌ಸ್ಟಿಟ್ಯೂಷನ್‌ಗಳು, ಕ್ವಾಸಿ-ಗೌರ್ನಮೆಂಟ್‌ನವರು, ಲೋಕಲ್‌ಬಾಡಿಯವರು ನಡೆಸತಕ್ಕ ಆಸ್ಪತ್ರೆಗಳಿಗೆ ಮಾತ್ರ ಅನುದಾನ ಕೊಡುವುದಕ್ಕೆ ಗ್ರಾಂಟ್-ಇನ್-ಏಯ್ಡ್ ರೂಲ್ಸ್‌ನಲ್ಲಿ ಅವಕಾಶವಿದೆ. 1959-60ಕ್ಕೆ ಹಿಂದೆ ಇದ್ದ ಗ್ರಾಂಟ್-ಇನ್-ಏಯ್ಡ್ ರೂಲ್ಸ್ ಪ್ರಕಾರ 1961-62ನೇ ಇಸವಿಯವರೆಗೆ ಈ ಆಸ್ಪತ್ರೆಗೆ ಪ್ರತಿ ವರ್ಷ 1,500 ರೂಪಾಯಿಗಳನ್ನು ಕೊಡಲಾಗಿದ್ದಿತು.

†indicates that remarks or speeches have not been re ised by the member concerned.

ಶ್ರೀ ಕೆ. ಸಂಗನಗೌಡ.—ಇಲ್ಲಿರುವ ಆಸ್ಪತ್ರೆಗೆ ಕೊಡುತ್ತಿರುವ ಗ್ರ್ಯಾಂಟುಗಳನ್ನು ನಿಲ್ಲಿಸಿದರೆ ಸರಿಯಾಗುವುದಿಲ್ಲ. ಇದಕ್ಕೆ ಸೂಕ್ತವಾದ ಆದೇಶವನ್ನು ಈಗಲಾದರೂ ಕಳುಹಿಸಿಕೊಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಹಟ್ಟಿ ಮೈನ್ಸ್ 15 ಸಾವಿರ ಜನಸಂಖ್ಯೆಯು ಬ್ಲಾಕ್‌ನಲ್ಲಿ ಬರುತ್ತದೆ. ಇದರಲ್ಲಿ ಬಡಗುಂಟೆ ಎಂಬಲ್ಲಿ ಒಂದು ಡಿಸ್‌ಪೆನ್‌ಸರಿ ಇದೆ. ಇದಕ್ಕೆ ಹಿಂದೆ 1960-61 ನೇ ಸಾಲಿನಿಂದ 1,500 ರೂಪಾಯಿಗಳಷ್ಟು ಗ್ರ್ಯಾಂಟು ಕೊಡುತ್ತಿದ್ದೆವು. ಆದರೆ ಈಚೆಗೆ 1964ನೇ ಗ್ರ್ಯಾಂಟು ರೂಲ್ಸ್‌ನಲ್ಲಿ ಇದಕ್ಕೆ ಅವಕಾಶ ಇಲ್ಲದುದರಿಂದ ಇದನ್ನು ನಿಲ್ಲಿಸಲಾಗಿದೆ.

ಶ್ರೀ ಕೆ. ಸಂಗನಗೌಡ.—ಇಲ್ಲಿರುವ ರೋಗಿಗಳು ಹೆಚ್ಚಾಗುತ್ತಿರುವುದರಿಂದ ಇಲ್ಲಿನ ಆಸ್ಪತ್ರೆಗೆ ಖರ್ಚು ಹೆಚ್ಚಾಗುತ್ತಿರುವುದರಿಂದ ಸರಕಾರ ಇದನ್ನು ಗಮನಿಸಿ ಸಹಾಯವನ್ನು ಏಕೆ ಕೊಡಬಾರದು ?

ಶ್ರೀ ಜಿ. ಬಸವಣ್ಣಪ್ಪ.—ರೂಲ್ಸು ಪ್ರಕಾರ ಕೊಡಲು ಅವಕಾಶ ಇಲ್ಲ. ಮತ್ತೆ ಈಗ ಕೊಡಬೇಕು ಎಂದರೆ ಇದೇ ಒಂದು ಪ್ರಿಸೀಡೆಂಟ್ ಆಗಿ ಇತರರೂ ಅಪ್ರೋಚ್ ಮಾಡಲು ಅವಕಾಶವಾಗುತ್ತದೆ.

Sri SIDDIAH KASIMATH.—How many doctors are there ?

Sri G. BASAVANNAPPA.—Out of the staff members of 31, two are medical officers.

Sri RAJA PID NAIK.—May I know whether there are any lady doctors among those 31 ?

Sri G. BASAVANNAPPA.—I want notice for that question.

ಶ್ರೀ ಬಿ. ದೊಡ್ಡಬೋರೇಗೌಡ.—ಉತ್ತರದಲ್ಲಿ ಹೇಳಿರುವಂತೆ 360 ರೋಗಿಗಳು ಪ್ರತಿ ದಿವಸ ಬರುತ್ತಾರೆ. ನೀವು ಗ್ರ್ಯಾಂಟು ಕೊಟ್ಟಿರುವುದು 1,500 ರೂಪಾಯಿಗಳಾದರೆ, ಒಂದು ವರ್ಷದಲ್ಲಿ ಒಬ್ಬ ರೋಗಿಗೆ ಎರಡು ಪೈಸೆಯಾಗುತ್ತದೆ. ಇಷ್ಟು ಕಮ್ಮಿ ದರದಲ್ಲಿ ಔಷಧಿಗಳನ್ನು ತಂದು ಕೊಡಲು ಸಹಾಯಕವಾಗುತ್ತದೆಯೇ ?

ಶ್ರೀ ಜಿ. ಬಸವಣ್ಣಪ್ಪ.—ಹಟ್ಟಿ ಗೋಲ್ಡ್ ಮೈನ್ಸ್‌ನಲ್ಲಿ ಇಲ್ಲಿರುವ ಕಂಪನಿಯವರೇ ಆಸ್ಪತ್ರೆ ತೆಗೆದಿದ್ದಾರೆ. ಇದರಲ್ಲಿ ಇತರ ಸಾರ್ವಜನಿಕರೂ ಬರುತ್ತಿದ್ದಾರೆ ಎಂದು ತಿಳಿದಾಗ ಸರಕಾರ 1960-61 ನೇ ಸಾಲಿನಲ್ಲಿ 1,500 ರೂಪಾಯಿಗಳಷ್ಟು ಸಹಾಯ ಮಾಡಿದರು. 1964 ನೇ ಸಾಲಿನಲ್ಲಿ ಗ್ರ್ಯಾಂಟ್-ಇನ್-ಏಡ್ ರೂಲ್ಸ್ ಪ್ರಕಾರ ಈಗ ಸಹಾಯ ಕೊಡಲು ಸಾಧ್ಯವಿಲ್ಲ ಎಂದು ನಿಲ್ಲಿಸಲಾಗಿದೆ. ಮತ್ತು ಇದರಲ್ಲಿ ಅದಕ್ಕೆ ತಕ್ಕ ಪ್ರಾವಿಷನ್ ಇಲ್ಲ.

Sri D. B. KALMANKAR.—In 1960, 1961 and 1962 a grant of Rs. 1,500 was given. Under what rules were they given ?

ಶ್ರೀ ಜಿ. ಬಸವಣ್ಣಪ್ಪ.—ನಾನಾಗಲೇ ಹೇಳಿದಂತೆ ಇಲ್ಲಿರುವ ಆಸ್ಪತ್ರೆಯಲ್ಲಿ ಸಾರ್ವಜನಿಕ ರೋಗಿಗಳೂ ಬರುತ್ತಿದ್ದುದರಿಂದ ಹಿಂದಿನ ಹೈದರಾಬಾದು ಸರಕಾರದವರು ಗ್ರ್ಯಾಂಟು ಕೊಡುತ್ತಿದ್ದರು ಮತ್ತು ಇದನ್ನು 1960-61 ನೇ ಸಾಲಿನಲ್ಲಿ ಕೊಡಲಾಯಿತು. 1964 ನೇ ಸಾಲಿನಲ್ಲಿ ಹೊಸ ಗ್ರ್ಯಾಂಟು ರೂಲ್ಸು ಬಂದುದರಿಂದ ಇದರಲ್ಲಿ ಇಂತಹ ಸಹಾಯ ಕೊಡಲು ಅವಕಾಶವಿಲ್ಲದುದರಿಂದ ಸಹಾಯ ಕೊಡುವುದನ್ನು ನಿಲ್ಲಿಸಲಾಗಿದೆ.

ಶ್ರೀ ಎಂ. ನಾಗಪ್ಪ.—ಹಾಸ್ಪಿಟಲ್‌ನಲ್ಲಿ ಹೊರಗಿನಿಂದ ಬರುವ ರೋಗಿಗಳಿಗೆ ಅಡ್ಮಿಷನ್ ಕೊಡುತ್ತಾ ಇಲ್ಲ. ಆದುದರಿಂದ ನೀವು ಒತ್ತಾಯ ಮಾಡಿ ಹೊರಗಿನಿಂದ ಬರುವ ರೋಗಿಗಳನ್ನು ಅಡ್ಮಿಷನ್ ಮಾಡಬೇಕು ಎಂದು ಆದೇಶ ಕೊಡುತ್ತೀರಾ ? ಎರಡನೆಯದಾಗಿ ಇಂಡಿಯನ್ ಪೀನಲ್ ಕೋಡ್ 494ನೇ ಸೆಕ್ಷನ್ ಪ್ರಕಾರ ಪ್ರೈವೇಟ್ ಮೆಡಿಕಲ್ ಪ್ರಾಕ್ಟೀಷನರ್ ಕರೆದರೂ ಸಹಿತ ಹೋಗಬೇಕಾಗುತ್ತದೆ. ಹಾಗಿರುವಾಗ ಈ ಹಾಸ್ಪಿಟಲ್‌ಗೆ ಹೊರಗಿನಿಂದ ಬರುವ ರೋಗಿಗಳನ್ನು ಸೇರಿಸಿಕೊಳ್ಳುವುದಕ್ಕೆ ಒತ್ತಾಯ ಮಾಡದೇ ಇದ್ದರೆ ತಮ್ಮ ಅಧಿಕಾರವನ್ನು ಎಷ್ಟುಮಟ್ಟಿಗೆ ನಡೆಸುತ್ತೀರಿ ಎನ್ನುವುದು ಗೊತ್ತಾಗುವುದಿಲ್ಲವೇ ?

ಶ್ರೀ ಜಿ. ಬಸವಣ್ಣಪ್ಪ.—ನಾನ್ ಎಂಪ್ಲಾಯೀಸ್ ಎಂದರೆ ಅವರ ಕುಟುಂಬದವರೂ ಅದರಲ್ಲಿ ಸೇರುತ್ತಾರೆ ವೈದ್ಯಕೀಯ ಸೌಲಭ್ಯಗಳನ್ನು ಪಡೆಯುವುದಕ್ಕೆ ಎಂಪ್ಲಾಯೀಸ್ ಕುಟುಂಬಗಳೂ ಬರುತ್ತಾ ಇರುವುದರಿಂದ ಅವರ ಸಂಖ್ಯೆ ಜಾಸ್ತಿಯಾಗಿದೆ. ಆದುದರಿಂದ ಗ್ರ್ಯಾಂಟ್-ಇನ್-ಏಡ್ ಕೊಡುವುದಕ್ಕಾಗುವುದಿಲ್ಲವೆಂದು ತಿಳಿಸಿದೆ.

Imposition of Maximum Octroi Tax by Raichur City Municipal Council

363. Sri M. NAGAPPA (Raichur).—

Will the Minister of State for Municipal Administration be pleased to state :—

(*a*) whether the Government is aware that the Raichur City Municipal Council, has imposed maximum octroi tax on all the articles in the Schedule to the Municipalities Act ;

(*b*) whether they are aware that the City Municipal Councils of Bidar and Gulbarga have not imposed the maximum octroi tax like Raichur ;

(*c*) whether the Cloth Merchants Association, Raichur has requested the Government to exercise its powers vested under Section, 40 of the Municipalities Act 1964 ;

(*d*) if so, the action taken by the Government on the representation of the Merchants ?

Sri B. M. PATIL (Minister of State for Municipal Administration).—

(*a*) Yes ; except those detailed below :—

(1) Refined Sugar ;

(2) Teak and Rosewood—

(i) Sawn, (i) Manufactured.

(*b*) These City Municipal Councils have imposed the maximum rates of Octroi on articles specified in the Schedule II of the Mysore Municipalities Act, 1964, except on articles mentioned in the Statement appended.

(*c*) Yes.

(*d*) The matter is under examination of Government.

STATEMENT

Sl. No.	Articles	Maximum rates of octroi as per Schedule II in the M.M. Act.	Rates sanctioned in respect of CMC., Bidar.	Rates sanctioned in respect of CMC., Gulbarga.
1	2	3	4	5
Class I—Articles of Food and Drink:				
1	Refined Sugar, Sugar Candy, Boora and all kinds of Sugar not in bottles.	0-20	0-20	0-10
2	Gur, Jaggery and other kinds of un-refined sugar.	0-10	0-04	0-05
3	Ghee including vegetable ghee and admixtures of ghee also vegetable solidified oil, dripping, marvo trex, cocogold, purico, crisco and cocogem and other edible oils not specified in any other item.	0-50	0-50	0-20
4	Butter and Cream ...	0-50	0-50	0-30
5	Groundnut (unshelled) ...	0-02	0-02	0-01½
8	Fresh meat, fish and eggs ...	0-50	0-50	0-20
9	Dried fish ...	2-00	0-20	0-25
11	Copra ...	0-50	0-20	0-50
12	Cherry or raw coffee (per bag of 50 Kgs.)	0-20	0-20	0-02
13	Wheat flour—wheat products ...	0-03	0-03	0-02
Class II—Animals:				
1	Oxen and Calves (per head) ...	0-35	0-35	0-15
2	Sheep and Kids (per head) ...	0-10	0-10	0-05
Class III—Articles used for Fuel, Lighting and Washing:				
1	Kerosene oil ...	0-01	0-0½	0-01
2	All sorts of oil seeds including cotton seeds but not including groundnut.	0-03	0-03	0-01½

(SRI B. M. PATIL)

1	2	3	4	5
		Ad valorem	*Ad valorem*	*Ad valorem*
3	Chandeliers lighting, etc. ...	2%	1%	2%
Class IV—Articles used in the construction of Buildings :				
1	Teak and Rosewood :			
	(i) Unsawn ...	4-00	2-00	4-00
	(ii) Sawn ...	5-00	2-50	6-00
	(iii) Manufactured ...	6-00	3-00	6-00
2	Softwood manufactured ...	1-00	0-50	1-00
14	Whole bricks of all sizes (per thousand)	0-50	0-25	0-50
Class V—Drugs, Spices and Perfumes :				
3	Hair oil—all kinds ...	2%	1%	1%
Class VII—Piece goods and Textile Fabrics :				
6	Piece goods—ribbons ...	1½%	1%	1½%
7	Piece goods—wearing ...	1½%	1%	1½%
9	Cotton yarn ...	1½%	1½%	1%
10	Raw silk—silk ...	2%	2%	1½%
11	Leather sandles ...	2%	2%	1 %
Class VIII—Metals and Articles made of Metals :				
1	Metals (Iron) ...	2%	2%	1½%
Class IX—Miscellaneous :				
2	Stationery including cash books ...	2%	1%	2%
20	Disinfectants. ...	2%	2%	1%

ಶ್ರೀ ಎಂ. ನಾಗಪ್ಪ.—ಸ್ವಾಮಿ, ರಾಯಚೂರು ಮುನಿಸಿಪಾಲಿಟಿಯವರು ಮನೆಗಳಿಗೆ ಕಟ್ಟುವ ತಕ್ಕಂಥ ವಸ್ತುಗಳ ಮೇಲೆ ಆಕ್ಟ್ರಾಯಿ ತೆರಿಗೆಯನ್ನು ಹಾಕಿದ್ದಾರೆ. ಆದುದರಿಂದ ಅವರ ಹತ್ತಿರ ಲಿಸ್ಟನ್ನು ತರಿಸಿಕೊಂಡು ಅದನ್ನು ಕಡಿಮೆ ಮಾಡುವುದಕ್ಕೆ ಆದೇಶ ಕೊಡುತ್ತೀರಾ ?

†ಶ್ರೀ ಬಿ. ಎಂ. ಪಾಟೀಲ್.—ರಾಯಚೂರು ಮುನಿಸಿಪಾಲಟಿಯವರು ಅಲ್ಲಿರತಕ್ಕಂಥ ಪರಿಸ್ಥಿತಿಗನುಗುಣವಾಗಿ, ಜನರ ಕೆಪಾಸಿಟಿ ನೋಡಿಕೊಂಡು, ಜನರಿಗೆ ಯಾವ ರೀತಿ ಸೌಕರ್ಯಗಳನ್ನು ಒದಗಿಸಬೇಕೋ ಅದನ್ನೆಲ್ಲಾ ನೋಡಿಕೊಂಡು ಅಕ್ಟ್ರಾಯಿ ತೆರಿಗೆ ಹಾಕಿದ್ದಾರೆ.

ಶ್ರೀ ಎಂ. ನಾಗಪ್ಪ.—ತಾವು ಗುಲ್ಬರ್ಗಾ ಮುನಿಸಿಪಾಲಟಿಯವರ ಆದಾಯ ಮತ್ತು ರಾಯಚೂರು ಮುನಿಸಿಪಾಲಟಿಯವರ ಆದಾಯ ಇವೆರಡನ್ನೂ ತರಿಸಿಕೊಂಡು ಅವರೂ, ಇವರೂ ಮಾಡತಕ್ಕಂಥ ಡೆವಲಪ್‌ಮೆಂಟ್ ವರ್ಕ್ಸ್ ಇವೆರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ ರಾಯಚೂರು ಹೆಚ್ಚಿನ ತೆರಿಗೆ ಹಾಕಿ 15 ಲಕ್ಷ ರೂಪಾಯಿ ಉಳಿತಾಯ ಮಾಡಿ ಬ್ಯಾಂಕ್‌ನಲ್ಲಿಟ್ಟಿದ್ದಾರೆ, ಇದು ತಮಗೆ ಗೊತ್ತಿದೆಯೇ ?

ಶ್ರೀ ಬಿ. ಎಂ. ಪಾಟೀಲ್.—ರಾಯಚೂರು ಮುನಿಸಿಪಾಲಟಿಯವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ. ಅಲ್ಲಿಯ ಪರಿಸ್ಥಿತಿಗನುಗುಣವಾಗಿ ಮೈಸೂರು ಮುನಿಸಿಪಾಲಟಿ ಆಕ್ಟ್ ಪ್ರಕಾರ ಅವರು ತೆರಿಗೆ ಹಾಕಿದ್ದಾರೆ. ಮಾನ್ಯ ಸದಸ್ಯರು ರಿಫೈನ್ಡ್ ಷುಗರ್, ಟೀಕ್ ಅಂಡ್ ರೋಸ್ ಉಡ್ ಮೇಲೆ ಹೆಚ್ಚಿಗೆ ಟ್ಯಾಕ್ಸ್ ಹಾಕಿದ್ದಾರೆ ಎಂದು ಹೇಳಿದರು. ಆ ರೀತಿ ಅವರು ಅದರ ಮೇಲೆ ಹೆಚ್ಚಿಗೆ ಟ್ಯಾಕ್ಸ್ ಹಾಕಿಲ್ಲ.

ಶ್ರೀ ಎಂ. ನಾಗಪ್ಪ.—ಸ್ವಾಮಿ, (ಈ)ಗೆ ಉತ್ತರವಾಗಿ ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಇದು 8–9 ತಿಂಗಳಿನಿಂದಲೂ ಇದೆ. ಇಷ್ಟರವರೆಗೂ ಏನೂ ಆಗಲಿಲ್ಲ. ಅದರ ಬಗ್ಗೆ ಜಾಗ್ರತೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ? ಎರಡನೆಯದಾಗಿ ರಿಫೈನ್ಡ್ ಷುಗರ್ ಮತ್ತು ಟೀಕ್ ಅಂಡ್ ರೋಸ್ ಉಡ್ ಮೇಲೆ ಆಕ್ಟ್ರಾಯಿಯನ್ನು ಪರ್ಪಸ್ ಆಗಿ ಹಾಕಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ಪರ್ಪಸ್ ಆಗಿ ಹಾಕಿಲ್ಲ. ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ರಾಯಚೂರಿನ ಜವಳಿ ವರ್ತಕ ಸಂಘದವರು ಒಂದು ಮೆಮೋರ್ಯಾಂಡಂನ್ನು ಕೊಟ್ಟಿರುವುದು ಮುಖ್ಯಮಂತ್ರಿಗಳಿಗೂ ಬಂದಿದೆ, ಸರ್ಕಾರಕ್ಕೂ ಬಂದಿದೆ. ಇನ್ನೂ ಏನೂ ನಿರ್ಣಯ ತೆಗೆದುಕೊಂಡಿಲ್ಲ.

ಶ್ರೀ ಸದಾಶಿವಪ್ಪ ಪಾಟೀಲ್.—ಸ್ವಾಮಿ, ಸಕ್ಕರೆಗೆ ಆಕ್ಟ್ರಾಯಿ ಹಾಕಬಾರದು ಎಂದು ಡೈರೆಕ್ಟರ್ ಆಫ್ ಫುಡ್ ಪ್ರೈಸ್‌ನವರು ಒಂದು ಸರ್ಕ್ಯುಲರ್ ಕಳುಹಿಸಿದ್ದಾರೆ. ಅದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಹೇಳುವಂಥಾದ್ದನ್ನು ಪರಿಶೀಲಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಆಕ್ಟ್ರಾಯಿ ಹಳೇ ಕಾಲದ್ದು. ಅದನ್ನು ತೆಗೆದುಹಾಕಬೇಕು ಎಂದು ಮನವಿಗಳು ಬಂದಿಲ್ಲವೇ ? ಹಾಗೆ ಬಂದಿದ್ದರೆ ಅದನ್ನು ತೆಗೆದುಹಾಕುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಅದರ ಬಗ್ಗೆ ಮನವಿಗಳು ಬಂದಿದೆ. ಸರಕಾರದ ಪರಿಶೀಲನೆಯಲ್ಲಿದೆ. ಸರ್ಕಾರದವರು ಆ ವಿಷಯದಲ್ಲಿ ಇನ್ನೂ ಏನೂ ನಿರ್ಣಯ ಕೈಗೊಂಡಿಲ್ಲ.

Monthly Expenditure of Ministers

490. Sri S. H. PUTTARANGANATH (Belur)—.

Will the Chief Minister be pleased to state :—

the amount of expenditure incurred every month by the State for each Minister, Minister of State, Deputy Minister including the staff ?

Sri VEERENDRA PATIL (Chief Minister).—

A statement is appended.

STATEMENT

Showing the amount of average monthly expenditure on the pay and allowances of Ministers, Ministers of State, Deputy Ministers and their personal establishment.

	Ministers	*Average Monthly Expenditure* Rs.
1	Chief Minister	10,856-00
2	Minister for Transport	3,960-00
3	Minister for Agriculture	4,381-00
4	Minister for Finance and Youth Affairs ...	4,554-00
5	Minister for Labour	4,576-00
6	Minister for Education	4,495-00
7	Minister for Development	4,276-00
8	Minister for Public Works	4,455-00
9	Minister for Industries, Information and Publicity	4,215-00
10	Minister for Health	4,380-00
11	Minister for Social Welfare ...	4,675-00
12	Minister for Revenue	4,849-00
	Ministers of State:	
1	Minister of State for Irrigation ...	3,736-00
2	Minister of State for Forests ...	3,113-00
3	Minister of State for Veterinary and Animal Husbandry	3,985-00
4	Minister of State for Fisheries and Ports ...	3,977-00
5	Minister of State for Food and Civil Supplies	3,280-00
6	Minister of State for Municipal Administration	2,350-00
	Deputy Ministers:	
1	Deputy Minister for Transport ...	3,136-00
2	Deputy Minister for Industries ...	2,850-00
3	Deputy Minister for Agriculture ...	2,992-00
4	Deputy Minister for Co-operation ...	2,602-00
5	Deputy Minister for Minor Irrigation and Electricity	2,533-00
6	Deputy Minister for Social Welfare ...	2,676-00
7	Deputy Minister for Health ...	2,457-00
8	Deputy Minister for Education ...	2,670-00
9	Deputy Minister for Public Works ...	2,580-00
10	Deputy Minister for Sericulture ...	2,646-00
11	Deputy Minister for Home	2,942-00

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಮಂತ್ರಿಗಳು ಎಷ್ಟೆಷ್ಟು ಸಂಬಳ ಡ್ರಾ ಮಾಡಿದ್ದಾರೆ ಎನ್ನುವುದನ್ನು ಕೊಟ್ಟಿದ್ದಾರೆ. ನವೆಂಬರ್ ತಿಂಗಳಿನಲ್ಲಿ ಎಷ್ಟೆಷ್ಟು ಡ್ರಾ ಮಾಡಿದ್ದಾರೆ ಎಂದು ಹೇಳುವುದಕ್ಕೆ ಸಾಧ್ಯವೇ ?

† ಶ್ರೀ ವೀರೇಂದ್ರ ಪಾಟೀಲ್.—ಪ್ರತಿ ತಿಂಗಳೂ ಅವರಿಗೆ ಸಂಬಳ ಮತ್ತು ಅಲೋವೆನ್ಸ್ ಎಷ್ಟಿರುತ್ತದೆ ಅಷ್ಟನ್ನು ಡ್ರಾ ಮಾಡುತ್ತಾರೆ.

ಎಸ್. ಎಚ್. ಪುಟ್ಟರಂಗನಾಥ್.—ಪಬ್ಲಿಕ್ ವರ್ಕ್ಸ್ ಮಂತ್ರಿಗಳೂ ಹಾಗೂ ಮೀನುಗಾರಿಕೆಯ ರಾಜ್ಯ ಸಚಿವರು ತಿಂಗಳಿನಲ್ಲಿ ಎಷ್ಟು ದಿವಸ ಆಫೀಸಿನಲ್ಲಿ ಕೆಲಸ ಮಾಡಿದ್ದಾರೆ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಬಹುಶಃ ಟಿ.ಎ. ಬಗ್ಗೆ ಕೇಳುತ್ತಿದ್ದಾರೆಂದು ಕಾಣಿಸುತ್ತದೆ. ಮಂತ್ರಿಗಳ ಸಂಬಳ ಮತ್ತು ಅವರ ಸಿಬ್ಬಂದಿಯ ಸಂಬಳ ಇವುಗಳಿಗಾಗಿ ಪ್ರತಿ ತಿಂಗಳೂ ಎಷ್ಟು ಖರ್ಚಾಗುತ್ತದೆ ಎಂದು ಕೇಳಿದ್ದಾರೆ. ಮಂತ್ರಿಗಳು ಎಷ್ಟು ಡ್ರಾ ಮಾಡಬೇಕೆಂದು ಕಾನೂನಿದೆ. ಅದರ ಪ್ರಕಾರವಾಗಿ ಡ್ರಾ ಮಾಡುತ್ತಾರೆ.

Sri G. DUGGAPPA.—May I know whether the expenditure in the Chief Minister's Office includes telephone charges also ?

Sri VEERENDRA PATIL.—No.

Sri D. B. KALMANKAR.—What is the break-up of each Minister's salary and allowance and also of the staff ?

Sri VEERENDRA PATIL.—Each Minister's salary and allowance is fixed under the statute itself and so Ministers cannot drawn more than what they are entitled to under the Act.

So far as staff is concerned, the pattern also is fixed and we have issued orders as to what staff a Minister of Cabinet Rank is entitled to, what staff a Minister of State is entitled to and what staff a Deputy Minister is entitled to. They have got staff according to that.

Sri H. SIDDAVEERAPPA.—May I know whether the expenditure on the Chief Ministers establishment includes the expenditure on security arrangements ?

Sri VEERENDRA PATIL.—I want notice.

ಶ್ರೀ ಎಂ. ನಾಗಪ್ಪ.—ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯಲ್ಲಿ ಮಂತ್ರಿಗಳಿಗೆ ಮತ್ತು ಅವರ ಸಿಬ್ಬಂದಿಗೆ ಪ್ರತಿ ತಿಂಗಳೂ ಆಗುವ ಖರ್ಚು ಎಷ್ಟು ಎಂದು ಕೇಳಿದ್ದಾರೆ. ಇದರಲ್ಲಿ ಟಿ.ಎ., ಡಿ.ಎ., ಸಹಿತ ಸೇರುತ್ತದೆ ಎಂದು ಗೊತ್ತಾಗಲಿಲ್ಲವೆ ? ಹಾಗಿದ್ದರೆ ಎಷ್ಟು ಖರ್ಚಾಗುತ್ತದೆ ಎಂದು ಕೇಳಬಹುದೇ ?

ಶ್ರೀ ವೀರೇಂದ್ರ ಪಾಟೀಲ್.—ಅದು ಗೊತ್ತಾಗಲಿಲ್ಲ. ಇದೇ ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆ ಕೇಳಿದ್ದಾರೆ. ಅದರಲ್ಲಿ ಅವರು ಮಂತ್ರಿಗಳ ಟಿ.ಎ., ಡಿ.ಎ., ಪ್ರತಿಯೊಬ್ಬರದೂ ಎಷ್ಟೆಷ್ಟು ಇದೆ ಎಂದು ಕೇಳಿದ್ದಾರೆ. ಆದ್ದರಿಂದ ಅದನ್ನೆಲ್ಲ ಈ ಪ್ರಶ್ನೆಯಲ್ಲಿ ಸೇರಿಸಿಲ್ಲ.

ಶ್ರೀ ಎಸ್. ಶಿವಪ್ಪ.—ಈಗ ಕೊಟ್ಟಿರುವ ಲೆಕ್ಕದ ಪ್ರಕಾರ ಮಂತ್ರಿಗಳಿಗೆ ಒಂದು ತಿಂಗಳಿಗೆ ಸುಮಾರು 1 ಲಕ್ಷ 10 ಸಾವಿರ ರೂಪಾಯಿ ಖರ್ಚಾಗುವುದು ಅಂದರೆ ವರ್ಷಕ್ಕೆ ಸುಮಾರು 13 ಲಕ್ಷ ಆಗುವುದು. ಇಂದು ಬಜೆಟ್ ಪ್ರಕಾರ ಮಂತ್ರಿಗಳಿಗೆ ಸುಮಾರು 25 ಲಕ್ಷ ಇದೆ. ಆದುದರಿಂದ ಇನ್ನು 12 ಲಕ್ಷಕ್ಕೆ ಲೆಕ್ಕ ಕೊಟ್ಟಿಲ್ಲ. ಇಲ್ಲಿ ತೋರಿಸಿರುವುದರ ಎರಡರಷ್ಟು ಖರ್ಚಾಗುವುದು. ಕಡಮೆ ಇಲ್ಲಿ ತೋರಿಸಿರುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಟಿ.ಎ. ಮತ್ತು ಡಿ.ಎ. ಇದರಲ್ಲಿ ಸೇರಿಲ್ಲವೆಂದು ಉತ್ತರ ಹೇಳಿದೆ. ಸಂಬಳ ಮತ್ತು ಅಲೋಯನ್ಸ್ ಮಂತ್ರಿಗಳದು ಮತ್ತು ಅವರ ಸಿಬ್ಬಂದಿಯದು ಸೇರಿ ಎಷ್ಟಾಗುವುದೆಂಬುದನ್ನು ಕೊಟ್ಟಿದೆ. ಇದರಲ್ಲಿ ಟಿ.ಎ. ಮತ್ತು ಡಿ.ಎ. ಸೇರಿಲ್ಲ. ಆದುದರಿಂದ ಟಿ.ಎ. ಮತ್ತು ಡಿ.ಎ. ಹಣ ಸೇರಿದರೆ ಸರಿಹೋಗಬಹುದೆಂದು ತಿಳಿಯಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಈ ಖರ್ಚಿನಲ್ಲಿ ಅತಿಥಿ ಸತ್ಕಾರಕ್ಕೆ ಮಾಡುವ ಖರ್ಚೂ ಸೇರಿದೆಯೇ ? ಅದರ ಪರ್ಸೆಂಟೇಜ್ ಎಷ್ಟು ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮಲ್ಲಿ ಅವಕ್ಕೇ ಪ್ರತ್ಯೇಕ ಇಲಾಖೆಯಿದೆ. ಬೇಕಾದಾಗ ಆ ಇಲಾಖೆಗೆ ಹೇಳಿಕಳಿಸಿದರೆ ಅವರು ಏರ್ಪಾಡುಮಾಡುತ್ತಾರೆ.

Sri K. H. PATIL.—May I know whether this expenditure includes the expenditure that is involved in maintaining the Chief Minister's house towards supply of furniture by the Public Works Department ?

Sri VEERENDRA PATIL.—No, Sir.

ಶ್ರೀ ಬಿ. ದೊಡ್ಡಬೋರೇಗೌಡ.—ನವೆಂಬರಿನಲ್ಲಿ ಮಂತ್ರಿಗಳು, ಸ್ಟೇಟ್ ಮಂತ್ರಿಗಳು ಮತ್ತು ಉಪಮಂತ್ರಿಗಳು ತೆಗೆದುಕೊಂಡಿರುವ ಟಿ.ಎ. ಮತ್ತು ಡಿ.ಎ. ಹಣವೆಷ್ಟು ಎಂದು ಹೇಳಲು ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್.—ಟಿ.ಎ. ಮತ್ತು ಡಿ.ಎ. ಪ್ರಶ್ನೆ ಇದರಲ್ಲಿ ಅಡಕವಾಗಿಲ್ಲ ಎಂದು ಆಗಲೇ ಹೇಳಿದೆ.

Sanction of Sub-transmission Line in Chikkaballapur Taluk

542. **Sri K. M. PUTTASWAMY** (Chikkaballapur).—

Will the Chief Minister be pleased to state :—

(*a*) when the Sub-Transmission Line from Avalagurki to Yirramarenahalli, *via* Kethenahalli, etc., was sanctioned in Chikkaballapur taluk after observing the required formalities ;

(*b*) if so, when the work was started, whether the line has been drawn as per the sanctioned estimate up to Yirramarenahalli ;

(*c*) whether the Ryots of Kethenahalli, etc., have been requesting to supply power for Irrigation Pump Sets ;

(*d*) the distance between Chikkaballapur and Kethenahalli ?

Sri D. PARAMESHWARAPPA (Deputy Minister for Major Irrigation and Electricity).—

(*a*) In 1964.

(*b*) The work was started during June 1967 and the line has been drawn up to Ittappanahalli.

(*c*) Yes.

(*d*) 10 miles.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಚಿಕ್ಕಬಳ್ಳಾಪುರದಿಂದ ಕೇತೇನಹಳ್ಳಿಗೆ 10 ಮೈಲಿ ಇದೆ, 1964ರಲ್ಲಿ ಕೆಲಸ ಮಂಜೂರುಮಾಡಿ 1967ರಲ್ಲಿ ಕೆಲಸ ಪ್ರಾರಂಭಿಸಿ 3 ವರ್ಷಗಳಲ್ಲಿ 3 ಮೈಲಿ ಲೈನ್ ಎಳೆಯಲಾಗಿದೆ. ಉಳಿದಿರುವುದನ್ನು ಯಾವಾಗ ಮಾಡಲಾಗುವುದು ?

ಶ್ರೀ ಡಿ. ಪರಮೇಶ್ವರಪ್ಪ.—ಅಲ್ಲಿ ಐ.ಪಿ. ಸೆಟ್ಟುಗಳು ಎನಿವೆ ಅವಕ್ಕೆ ಬರುವ ಅಪ್ಲಿಕೇಷನ್ ಗಳನ್ನು ನೋಡಿಕೊಂಡು ಸಬ್-ಟ್ರಾನ್ಸ್‌ಮಿಷನ್ ಲೈನ್ ಎಳೆಯುವ ಕೆಲಸವನ್ನು ಮಾಡಲಾಗುವುದು, ಬಹಳ ಮಟ್ಟಿಗ ಈ ಆಧಾರದಮೇಲೆ ಕೆಲಸ ನಡೆಯುವುದು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಕೇತೇನಹಳ್ಳಿಯವರು ಐ.ಪಿ. ಸೆಟ್ಟುಗಳಿಗೆ ಅಪ್ಲಿಕೇಷನ್ ಕೊಟ್ಟಿದ್ದಾರೆ, ನೀವು ಒಪ್ಪಿದ್ದೀರಾ ? ಈ ಐ.ಪಿ. ಸೆಟ್ಟುಗಳಿಗೆ ಅವಕಾಶ ಕೊಟ್ಟರೆ ಆಹಾರದ ಅಭಾವವನ್ನು ನೀಗಿಸಿ ಜನರಿಗೆ ಅನುಕೂಲಮಾಡಬಹುದು. ಆದುದರಿಂದ ಜಾಗ್ರತೆ ಲೈನು ಎಳೆಯುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಲೈನು ಎಳೆಯಬೇಕಾದರೆ ಲೋಡ್ ಸಾಕಾದಷ್ಟಿರಬೇಕು. ಕೊನೆಯ ಪಕ್ಷ 150 ಐ.ಪಿ. ಸೆಟ್ಟುಗಳಿಗಾದರೂ ಅಪ್ಲಿಕೇಷನ್‌ಗಳು ಬಂದರೆ ಜಾಗ್ರತೆ ಲೈನು ಎಳೆಯಬಹುದು. ಇದುವರೆಗೆ ಹೆಚ್ಚು ಅಪ್ಲಿಕೇಷನ್‌ಗಳು ಬಂದಿಲ್ಲ. ಕೊನೆಯ ಪಕ್ಷ ಲಾಭ ಮತ್ತು ನಷ್ಟವಿಲ್ಲದೆ ಸಾಕಷ್ಟು ಅಪ್ಲಿಕೇಷನ್‌ಗಳು ಬಂದರೆ ಲೈನು ಎಳೆಯಬಹುದು. ಈ ರೀತಿ ಇರುವುದರಿಂದ ಮಾನ್ಯ ಸದಸ್ಯರು ಈ ಭಾಗದಲ್ಲಿ ಆಸಕ್ತಿವಹಿಸಿ ಸಾಕಷ್ಟು ಅಪ್ಲಿಕೇಷನ್‌ಗಳು ಬರುವ ಹಾಗೆ ಮಾಡಿದರೆ ಕೆಲಸ ತೆಗೆದುಕೊಳ್ಳಬಹುದು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ರೈತರು ಪಂಪ್ ಸೆಟ್ಟುಗಳನ್ನು ರೂಂಗಳಲ್ಲಿ ಇಟ್ಟುಕೊಂಡು ಕರೆಂಟ್ ಇಲ್ಲದೆ ಪೂಜೆ ಮಾಡುತ್ತಾ ಇದ್ದಾರೆ. ಈಗ ಮೂರು ಮೈಲಿ ಆಗಿದೆ, ದಯಮಾಡಿ ಇನ್ನು 7 ಮೈಲಿ ಲೈನ್ ಎಳೆಸಿಕೊಟ್ಟು ರೈತರಿಗೆ ಸಹಾಯ ಮಾಡಿಕೊಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಪಂಪ್ ಸೆಟ್ಟುಗಳನ್ನು ಹಾಕಿಕೊಂಡು ಕಂಪ್ಲೀಷನ್ ರಿಪೋರ್ಟ್ ಕೊಟ್ಟಿದ್ದರೆ ಜಾಗ್ರತೆ ಲೈನ್ ಎಳೆಸಿಕೊಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಪಂಪ್‌ಸೆಟ್ ಸ್ಯಾಂಕ್ಷನ್ ಮಾಡಬೇಕಾದರೆ ಅದಕ್ಕೆ ಮೊದಲೇ ಪವರ್ ಲೈನ್ ಪೂರ್ತಿಯಾಗಿರಬೇಕು. ಈಗ ಪಂಪ್ ಸೆಟ್ಟುಗಳನ್ನು ತಂದು ಮನೆಯಲ್ಲಿಟ್ಟುಕೊಂಡು ಅವರು ಬಡ್ಡಿ ಕಟ್ಟುತ್ತಾ ಇದ್ದಾರೆ. ಇನ್ನು 7 ಮೈಲಿ ಎಳೆಯಲು ತಾಪತ್ರಯ ಪಡುವುದಕ್ಕೆ ಕಾರಣವೇನು ?

ಶ್ರೀ ಡಿ. ಪರಮೇಶ್ವರಪ್ಪ.—ಪಂಪ್ ಸೆಟ್ಟುಗಳನ್ನು ಮನೆಯಲ್ಲಿಟ್ಟುಕೊಂಡಿದ್ದಾರೆ ಎಂದು ಹೇಳುವುದನ್ನು ನಾನು ಪೂರ್ತಿಯಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಪಂಪ್‌ಸೆಟ್ ತೆಗೆದು ಕೊಂಡಮೇಲೆ ಜಾಗ್ರತೆ ಅದನ್ನು ಬಾವಿಗೆ ಹಾಕಿ ಕಂಪ್ಲೀಷನ್ ರಿಪೋರ್ಟ್ ಕೊಡಬೇಕು, ಮತ್ತು ಒಂದೊಂದು ಭಾಗದಲ್ಲಿ ಒಂದೊಂದು ಕಂಪ್ಲೀಷನ್ ರಿಪೋರ್ಟ್ ಬಂದರೆ ಅನ್‌ರೆಮ್ಯೂನರೇಟೀವ್ ಆಗುತ್ತದೆ. ಒಬ್ಬನಿಗಾಗಿ 4-5 ಮೈಲಿ ಲೈನ್ ಎಳೆಯುವುದಕ್ಕಾಗುವುದಿಲ್ಲ. ಆ ಭಾಗದಲ್ಲಿ 10-12 ಪಂಪ್ ಸೆಟ್ಟುಗಳು ರೆಡಿಯಾಗಿ ಕಂಪ್ಲೀಷನ್ ರಿಪೋರ್ಟ್ ಕೊಟ್ಟರೆ ಜಾಗ್ರತೆ ಮಾಡುವುದಕ್ಕಾಗುತ್ತದೆ.

Facilities to Graduate Primary School Teachers of Bombay Karnataka Areas

633. Sri K. P. NADAGOUDA (Mudhol).—

Will the Minister for Education be pleased to state :—

(*a*) the number of trained graduate teachers serving in the Primary Schools in Bombay Karnatak area who were promoted and posted as Assistant Teachers in various High Schools in Karwar District and as on transfer on 8th June 1967 ;

(*b*) their basic salary when they were serving in School Boards of four districts in Bombay Karnataka area ;

(*c*) whether they have been given any increment or special benefits after they became Assistant Teachers in High School in North Kanara District ?

Sri N. M. KOTRABASAIAH SOGI (Deputy Minister for Education).—

(*a*) 5 trained graduate Primary School Teachers of North Kanara District were appointed as Assistant Masters. No promotion is possible in such cases of local body teachers.

(*b*) 1. Rs. 122 (Rs. 80-3-110-4-130-5-150).
2. Rs. 138 do
3. Rs. 122 do
4. Rs. 107 do
5. Rs. 130 do

(*c*) No.

ಶ್ರೀ ಕೆ. ಪಿ. ನಾಡಗೌಡ.—ಮುಂಬೈ ಕರ್ನಾಟಕ ಪ್ರದೇಶದಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ತರಪೇತಿ ಹೊಂದಿದ ಪದವೀಧರ ಉಪಾಧ್ಯಾಯರುಗಳಿಗೆ ಬಡ್ತಿ ನೀಡಿ, ಉತ್ತರ ಕನ್ನಡ ಜಿಲ್ಲೆಯಲ್ಲಿನ ವಿವಿಧ ಪ್ರೌಢ ಶಾಲೆಗಳಿಗೆ ಸಹಾಯಕ ಉಪಾಧ್ಯಾಯರುಗಳಾಗಿ ನೇಮಿಸಿ ವರ್ಗಮಾಡಲಾಗಿರುವವರ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ 4 ಡಿಸ್ಟ್ರಿಕ್ಟ್‌ಗಳಿಂದ ಒಟ್ಟುಗೂಡಿ 5 ಮಂದಿ ಎಂದು ಹೇಳಿದ್ದೀರಿ ಇದು ಸರಿಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೊಗಿ.—ಉತ್ತರ ಕರ್ನಾಟಕದ 4 ಜಿಲ್ಲೆಗಳಿಂದ 57 ಜನ ಶಿಕ್ಷಕರನ್ನು ಹೈಸ್ಕೂಲುಗಳಿಗೆ ನೇಮಕ ಮಾಡಲಾಗಿದೆ.

ಶ್ರೀ ಕೆ. ಪಿ. ನಾಡಗೌಡ.—ಹಳೇ ಹೈದ್ರಾಬಾದು ಪ್ರದೇಶದಿಂದ ಮತ್ತು ಹಳೇ ಮೈಸೂರು ಪ್ರದೇಶದಿಂದ ಪ್ರಾಥಮಿಕ ಸ್ಕೂಲ್ ಟೀಚರ್ಸ್ ಗ್ರಾಜುಯೇಟ್ ಟ್ರೈನ್ಡ್ ಟೀಚರ್ಸ್ ಆದನಂತರ ಹೈಸ್ಕೂಲುಗಳಿಗೆ ವರ್ಗಾಯಿಸಿದ ನಂತರ ಅವರ ಸ್ಕೇಲು ಹೆಚ್ಚು ಮಾಡಿದ್ದಾರೆಯೇ ಇಲ್ಲವೇ ?

ಅಧ್ಯಕ್ಷರು.—ಬೊಂಬಾಯಿ ಕರ್ನಾಟಕಕ್ಕೆ ಸಂಬಂಧಪಟ್ಟಪ್ರಶ್ನೆ ಕೇಳಿ, ತಾವು ಕೇಳುವುದು ಈ ಪ್ರಶ್ನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ.

1–30 P.M.

ಶ್ರೀ ಕೆ. ಪಿ. ನಾಡಗೌಡ.—ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರಿಗೆ ಸರ್ಕಾರಿ ಶಾಲೆಗಳಿಗೆ ಅಂದರೆ ಹೈಸ್ಕೂಲುಗಳಿಗೆ ವರ್ಗಾ ಮಾಡಿದರೆ ಅವರಿಗೆ ಹೆಚ್ಚಿಗೆ ಸಂಬಳ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ಹಾಗಾದರೆ ಈ ಹಿಂದೆ ಹಳೇ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮತ್ತು ಹಳೇ ಮೈಸೂರು ಪ್ರದೇಶದಲ್ಲಿದ್ದವರನ್ನು ಅಂದರೆ ಪ್ರಾಥಮಿಕ ಶಾಲೆಗಳಲ್ಲಿ ಕೆಲಸಮಾಡುತ್ತಿದ್ದ ಪದವೀಧರರ ಉಪಾಧ್ಯಾಯರುಗಳಿಗೆ ಜಾಸ್ತಿ ಸಂಬಳದ ಗ್ರೇಡುಗಳನ್ನು ಕೊಟ್ಟಿಲ್ಲವೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೊಗಿ.—ಸಾಮಾನ್ಯವಾಗಿ ಸರ್ಕಾರಿ ಪಾಠಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದ ಪ್ರಾಥಮಿಕಶಾಲಾ ಪದವೀಧರರ ಉಪಾಧ್ಯಾಯರುಗಳನ್ನು ಅಂದರೆ ಬಿ.ಎ. ಮತ್ತು ಬಿ.ಇಡಿ. ಮಾಡಿದವರನ್ನು ಪ್ರಮೋಷನ್ ಮೇಲೆ ಹೈಸ್ಕೂಲುಗಳಿಗೆ ಹಾಕಲಾಗಿದೆ. ಅವರಿಗೆ ಅಲ್ಲಿನ ಬೇಸಿಕ್ ಸಂಬಳವನ್ನು ಮಾತ್ರ ಕೊಟ್ಟಿದೆ.

ಶ್ರೀ ಕೆ. ಪಿ. ನಾಡಗೌಡ.—ಹಾಗಾದರೆ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರುಗಳಿಗೆ ಏನೂ ಹೆಚ್ಚಿನ ಅನುಕೂಲ ಇಲ್ಲದಮೇಲೆ ಏತಕ್ಕೆ ಅಲ್ಲಿಗೆ ಪ್ರಮೋಷನ್ ಮೇಲೆ ಹೋಗಬೇಕೆಂದು ಕಾಡಿ ಬೇಡಿ ಕೆಲಸಮಾಡುತ್ತಾರೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೊಗಿ.—ಡಿಸ್ಟ್ರಿಕ್ಟ್ ಬೋರ್ಡ್ ಸ್ಕೂಲುಗಳಲ್ಲಿ ಕೆಲಸ ಮಾಡುತ್ತಿದ್ದವರನ್ನು ಹೈಸ್ಕೂಲಿಗೆ ವರ್ಗ ಮಾಡಿದಾಗ ಅವರನ್ನು ಸೀನಿಯಾರ್ಟಿ ಮೇಲೆ ಮಾಡಲಿಲ್ಲ. ಅವರನ್ನು ಅಲ್ಲಿ ಫ್ರೆಷ್ ಅಪಾಯಿಂಟ್‌ಮೆಂಟ್ ಕೊಟ್ಟಹಾಗೆ ನೇಮಕ ಮಾಡಲಾಗಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಆ 57 ಜನ ಗ್ರಾಜುಯೇಟುಗಳಿಗೆ ಬೇಸಿಕ್ ಪೇ ಸ್ಕೇಲನ್ನು ಛೇಂಜ್ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ಅಂದಾಗ ಆ ಪಧವೀಧರ ಉಪಾಧ್ಯಾಯರಿಗೆ ಪ್ರಾಥಮಿಕ ಶಾಲೆಗಳಲ್ಲಿ ಕೆಲಸಮಾಡುತ್ತಿದ್ದಾಗ ಕೊಟ್ಟಿದ್ದ ಸ್ಕೇಲು ಏನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ರೂ. 130 ರಿಂದ 250 ರವರೆಗೆ ಕೊಡಲಾಗಿತ್ತು.

ಶ್ರೀ ಕೆ. ಎಚ್. ಪಾಟೀಲ್.—ಕಳೆದ ಮೂರು ವರ್ಷಗಳಿಂದಲೂ ಆ ಉಪಾಧ್ಯಾಯರುಗಳಿಗೆ ಸಿಕ್ಕಬೇಕಾಗಿದ್ದ ಸಂಬಳ ಅಲೋಯೆನ್ಸ್ ಮತ್ತು ಇನ್‌ಕ್ರಿಮೆಂಟುಗಳಲ್ಲೂ ಬಹಳ ವ್ಯತ್ಯಾಸವಾಗಿದೆ. ಅದನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದರ ಬಗ್ಗೆ ಸರ್ಕಾರಕ್ಕೆ ಯಾವ ವರದಿಯೂ ಬಂದಿಲ್ಲ.

ಶ್ರೀ ಸಿದ್ದಯ್ಯ ಕಾಸೀಮಠ.—ಜಿಲ್ಲಾ ಬೋರ್ಡು ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡತಕ್ಕ ಗ್ರಾಜುಯೇಟ್ ಶಿಕ್ಷಕರಿಗೂ ಸರ್ಕಾರಿ ಶಾಲೆಗಳಲ್ಲಿ ಅಂದರೆ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡತಕ್ಕ ಗ್ರಾಜುಯೇಟ್ ಟೀಚರಿಗೆ ಕೊಡುವಷ್ಟೇ ಸಂಬಳವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರನ್ನು ಸರ್ಕಾರಿ ನೌಕರರು ಅಂತ ಗಣನೆ ಮಾಡುವುದಕ್ಕಾಗುವುದಿಲ್ಲ. ಮೊನ್ನೆ ತಾನೆ ನಮ್ಮ ವಿದ್ಯಾಮಂತ್ರಿಗಳು ಅಲ್ಲಿರತಕ್ಕ ಡಿಸ್ಟ್ರಿಕ್ಟ್ ಬೋರ್ಡ್ ಪ್ರಾಥಮಿಕ ಶಾಲೆಗಳನ್ನು ರದ್ದು ಮಾಡಿ ಅವನ್ನು ಸರ್ಕಾರಿ ಶಾಲೆಗಳನ್ನಾಗಿ ಪರಿವರ್ತನೆ ಮಾಡುವುದಾಗಿ ಈ ಸಭೆಯಲ್ಲಿ ತಿಳಿಸಿದ್ದಾರೆ.

Sri G. DUGGAPPA.—May I know whether it is not a fact that representations have been sent to the Secretary to Government, Education Department in this behalf by those aggrieved teachers from Karwar District ? ಆ ವಿದ್ಯಾ ಇಲಾಖೆಯಲ್ಲಿ ನೊಂದ ಉಪಾಧ್ಯಾಯರುಗಳೆಲ್ಲಾ ತಮ್ಮ ಕುಂದುಕೊರತೆಗಳು ಏನೆಂಬುದನ್ನು ಈ ಅರ್ಜಿಯಲ್ಲಿ ಬರೆದಿದ್ದಾರೆ, ಹಾಗೂ ಅವುಗಳನ್ನು ಪರಿಹಾರ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಆದಾಗ್ಯೂ ಸರ್ಕಾರದವರು ನಮಗೆ ಯಾವ ಅರ್ಜಿಗಳೂ ಬಂದಿಲ್ಲವೆನ್ನುತ್ತಾರೆ. ನಾನು ಇದನ್ನು ಅಧ್ಯಕ್ಷರ ಕಡೆಗೆ ಕೊಡುತ್ತೇನೆ. ತಾವು ಅದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಕೊಟ್ಟು ಸೂಕ್ತ ಕ್ರಮ ಕೈಗೊಳ್ಳುವಂತೆ ಆದೇಶ ನೀಡಬೇಕಾಗಿ ಕೇಳಿಕೊಳ್ಳುತ್ತೇನೆ.

Sri N. M. KOTRABASIAH SOGI.—That information is not available with me now. If any representation is sent, proper action will be taken in the matter.

ಶ್ರೀ ಎಂ. ಎಸ್. ಕೃಷ್ಣನ್.—ತಾರತಮ್ಯವನ್ನು ಒಪ್ಪಿರುವಾಗ ಅದನ್ನು ರದ್ದುಮಾಡುವುದಕ್ಕೆ ವರದಿ ಏಕೆ ಬರಬೇಕು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದರೊಳಗೆ ಪ್ರಾದೇಶಿಕ ಭಿನ್ನತೆ ಏನೂ ಇಲ್ಲ. ಯಾವ ಪ್ರದೇಶದವರೇ ಆಗಲೀ ಅವರು ಸರ್ಕಾರೀ ಪ್ರಾಥಮಿಕ ಶಾಲೆಯಲ್ಲಿದ್ದರೆ, ಅಥವಾ ಬೇರೆ ಲೋಕಲ್ ಬಾಡಿಯಲ್ಲಿದ್ದರೆ, ಅದು ಹಳೆಯ ಮೈಸೂರಾಗಿರಲಿ ಅಥವಾ ಹೈದರಾಬಾದ್ ಕರ್ಣಾಟಕವಾಗಿರಲಿ, ಅಲ್ಲಿ ಪ್ರಾದೇಶಿಕ ಭಿನ್ನತೆ ಇಲ್ಲ. ಆದರೆ ಸರ್ಕಾರೀ ಪ್ರೈಮರಿ ಶಾಲೆಯಲ್ಲಿ ಕೆಲಸಮಾಡುವುದಕ್ಕೂ ಮತ್ತು ಸರ್ಕಾರಿ ಪ್ರೌಢಶಾಲೆಗಳಲ್ಲಿ ಕೆಲಸಮಾಡುವುದಕ್ಕೂ ವ್ಯತ್ಯಾಸವಿದೆ.

Sri B. P. GANGADHAR.—Cannot the Government have powers to compel these institutions also to pay uniform salary as it is paid in Government schools ?

Sri N. M. KOTRABASIAH SOGI.—We cannot compel them. But we can prevail upon them to pay the same scales of salary as is paid in Government schools.

General Hospital at Pavagada

763. **Sri P. ANJANAPPA** (Pavagada).—

Will the Minister for Health be pleased to state :—

whether Government propose to provide General Hospital to Pavagada ?

Sri G. BASAVANNAPPA (Deputy Minister for Health).—

The matter is under examination.

ಶ್ರೀ ಪಿ. ಅಂಜನಪ್ಪ.—ಉತ್ತರದಲ್ಲಿ ಈ ವಿಷಯವನ್ನು ಪರೀಕ್ಷಿಸಲಾಗುತ್ತಿದೆಯೆಂದು ಹೇಳಿದೆ. ಯಾವತ್ತು ಪರೀಕ್ಷೆ ಮಾಡಿ ತೀರ್ಮಾನಮಾಡುತ್ತೀರಾ ಮತ್ತು ಇದನ್ನು ಈ ತಕ್ಷಣ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ತಾಲ್ಲೂಕ್ ಬೋರ್ಡ್ ಅಧ್ಯಕ್ಷರು ಅಲ್ಲಿ ಒಂದು ಜನರಲ್ ಹಾಸ್ಪಿಟಲ್ ಆಗಬೇಕೆಂದು ಒಂದು ಪತ್ರವನ್ನು ಸರ್ಕಾರಕ್ಕೆ 30-12-68 ರಲ್ಲಿ ಕಳುಹಿಸಿದ್ದಾರೆ. ಅದಕ್ಕೋಸ್ಕರ ಸೇಕಡ 25 ರಷ್ಟು ಕಂಟ್ರಿಬ್ಯೂಷನ್ ಕೊಡುವುದಕ್ಕೆ ಒಪ್ಪಿಕೊಂಡಿದ್ದರೂ ಮುನಿಸಿಪಾಲಿಟಿಯಿಂದ ಯಾವ ತೀರ್ಮಾನವೂ ಬಂದಿಲ್ಲ. ಆದ್ದರಿಂದ ಅದು ಹಾಗೆಯೇ ಉಳಿದಿದೆ.

ಶ್ರೀ ಪಿ. ಅಂಜನಪ್ಪ.—ಮುನಿಸಿಪಾಲಿಟಿಯಿಂದ ಬಂದರೆ ತಕ್ಷಣ ಈ ಕಾರ್ಯವನ್ನು ಕೈಗೊಳ್ಳುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಆ ರೀತಿಯಾಗಿ ಭರವಸೆ ಕೊಡುವುದಕ್ಕಾಗುವುದಿಲ್ಲ. ಈಗ ಈ ಜನರಲ್ ಹಾಸ್ಪಿಟಲ್‌ಗಳನ್ನು ಮಾಡುವುದು ಒಂದು ಲಿಮಿಟೆಡ್ ಪ್ರೋಗ್ರಾಮಾಗಿರುವುದರಿಂದ ಅಲ್ಲಿ ಜನರಲ್ ಹಾಸ್ಪಿಟಲ್ ಮಾಡಿಯೇ ಮಾಡುತ್ತೇವೆಂದು ಈಗಲೇ ಭರವಸೆ ಕೊಡುವುದಕ್ಕೆ ಆಗುವುದಿಲ್ಲ.

Sri B. P. GANGADHAR.—Since Pavagada is situated in almost another corner of the State and is about 66 miles from Tumkur and it is very difficult for the patients to approach General Hospital at Tumkur, will it not be possible for the Government at least to provide all the necessary equipments and extend the present hospital to meet the required demands ?

Sri G. BASAVANNAPPA.—The matter will be examined.

Mr. SPEAKER.—Question numbers 769 and 770 may be taken up together.

Restoration of Minor Tanks in Pavagada Taluk

769. **Sri P. ANJANAPPA** (Pavagada).—

Will the Minister of State for Minor Irrigation be pleased to state :—

whether Government have proposal to restore the following Minor Tanks in Pavagada Taluk which are breached *viz.* :—

(i) Siddappakere at Pavagada.

(ii) Kanivehallikere in Kanivehalli ?

SRI D. PARMESHWARAPPA (Deputy Minister for Major Irrigation and Electricity) [On behalf of SRI A. J. DODDAMETI (Minister of State for Minor Irrigation)].—

No.

New Tanks in Pavagada Taluk

770. SRI P. ANJANAPPA (Pavagada).—

Will the Minister of State for Minor Irrigation be pleased to state :—

whether Government have proposals to take up the following Tanks in Pavagada Taluk for execution *viz.*,

(i) kumbarakatte at Kilarlahalli
(ii) new Tanx at Sreerangapura
(iii) new Tank at Kenchammanahalli
(iv) new Tank at Veeragondi
(v) raising Wasteweir of Bydanur Tank by 3 feet
(vi) raising Wasteweir of Kadapalakere Tank
(vii) raising of Wastewair Thangalamadagu Tank at Pothagavalahalli.
(viii) raising of Waste Weir of Jalodu Tank ?

SRI D. PARMESWARAPPA (Deputy Minister for Major Irrigation and Electricity) [On behalf of SRI A. J. DODDAMETI (Minister of State for Minor Irrigation)].—

(i) No.
(ii) Under investigation.
(iii) No.
(iv) Yes.
(v) No.
(vi) No.
(vii) No.
(viii) No.

ಶ್ರೀ ಪಿ. ಆಂಜನಪ್ಪ.—ಈ ಎರಡು ಕೆರೆಗಳು ಬ್ರೀಚ್ ಆಗಿವೆ. ಇವನ್ನು ರೆಸ್ಟೋರ್ ಮಾಡುತ್ತೀರಾ ?

† ಶ್ರೀ ಡಿ. ಪರಮೇಶ್ವರಪ್ಪ.—ಈ ಕೆರೆಗಳು ಪಿ.ಡಬ್ಲ್ಯು.ಡಿ. ಗೆ ಸೇರಿದಂಥ ಕೆರೆಗಳು ಎಂಬುದಾಗಿ ಆಧಾರ ದೊರೆತಿಲ್ಲ. ಆದ್ದರಿಂದ ಇವು ಪ್ರೈವೇಟ್ ಟ್ಯಾಂಕ್ಸ್. ಈ ಟ್ಯಾಂಕ್ಸ್ ಬೆಡ್‌ನಲ್ಲಿ ಸಾಗುವಳಿ ಮಾಡುವುದಕ್ಕೆ ಸರ್ಕಾರಕ್ಕೆ ಇದುವರೆಗೂ ಯಾವ ಮನವಿಯೂ ಬಂದಿಲ್ಲ.

ಶ್ರೀ ಪಿ. ಆಂಜನಪ್ಪ.—ಇವು ಸರ್ಕಾರದ ಕೆರೆಗಳು. ಪ್ರೈವೇಟ್ ಕೆರೆಗಳಲ್ಲ. ಇದನ್ನು ರೆಸ್ಟೋರ್ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಆಲೋಚನೆಯಿದೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಸರ್ಕಾರಕ್ಕೆ ಆ ರೀತಿ ಮನವಿ ಬಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಇದರ ಮಾಹಿತಿ ಗೊತ್ತಿಲ್ಲವೆಂದು ಹೇಳಿದರೆ ಹೇಗೆ ? ಹಾಗಾದರೆ ಈ ಕೆರೆಗಳು ಯಾರ ಲೆಕ್ಕದಲ್ಲಿ ಇದುವರೆಗೆ ಇದ್ದವು ? ಸರ್ಕಾರದ ಲೆಕ್ಕದಲ್ಲಿ ಇಲ್ಲವೆಂದು ಹೇಳಿದರೆ, ಇನ್ನು ಯಾರನ್ನು ಕೇಳಬೇಕು ?

ಶ್ರೀ ಡಿ. ಪರಮೇಶ್ವರಪ್ಪ.—ಪಿ.ಡಬ್ಲ್ಯು.ಡಿ.ಯಲ್ಲಿ ಮೇಂಟೇನ್ ಮಾಡಿರುವ ಪಟ್ಟಿಯಲ್ಲಿ ಈ ಕೆರೆಗಳ ಹೆಸರು ನಮೂದಾಗಿಲ್ಲ. ಆ ಒಂದು ಆಧಾರದಮೇಲೆ ಬಹುಶಃ ಇವು ಪ್ರೈವೇಟ್ ಟ್ಯಾಂಕ್ಸ್ ಎಂದು ಹೇಳಬೇಕಾಗುತ್ತದೆ.

ಶ್ರೀ ಎ. ಮುನಿಯಪ್ಪ.—ಈ ಕೆರೆಗಳು ಒಂದು ನಿಮ್ಮ ಹತ್ತಿರ ಇರಬೇಕು, ಇಲ್ಲದಿದ್ದರೆ, ತಾಲ್ಲೂಕು ಬೋರ್ಡಿನಲ್ಲಿರಬೇಕು. ಇದರ ಲೆಕ್ಕವೇ ಇಲ್ಲವೆಂದು ಹೇಳಿದರೆ ಇನ್ನು ನಾವು ಯಾರನ್ನು ಕೇಳಬೇಕು ?

ಶ್ರೀ ಡಿ. ಪರಮೇಶ್ವರಪ್ಪ.—ನಮಗೆ ಸಂಬಂಧಪಟ್ಟದ್ದಕ್ಕೆ ನಾವು ಉತ್ತರ ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ನಮ್ಮ ಇಲಾಖೆಯಿಂದ ಬಂದ ಮಾಹಿತಿಯನ್ನು ತಮಗೆ ಕೊಡುತ್ತಿದ್ದೇನೆ. ಅದರ ಪ್ರಕಾರ ಈ ಟ್ಯಾಂಕ್ ರಿಜಿಸ್ಟರಿನಲ್ಲಿ ನಮೂದಿಸಿಲ್ಲವೆಂದು ಬಂದಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಪಿ ಡಬ್ಲ್ಯು ಡಿ ಯ ರಿಜಿಸ್ಟರಿನಲ್ಲಿರತಕ್ಕಂತದಕ್ಕೆ ತಾನು ಉತ್ತರ ಕೊಡುತ್ತೇನೆಂದು ಹೇಳಿದರು. ಆದರೆ ರೆವಿನ್ಯೂ ಲಿಸ್ಟಿನಲ್ಲಿರತಕ್ಕಂತಹ ಮತ್ತು ತಾಲ್ಲೂಕು ಬೋರ್ಡಿನಲ್ಲಿರತಕ್ಕಂತದಕ್ಕೆಲ್ಲಾ ಸರ್ಕಾರ ಸಂಬಂಧವಿಲ್ಲವೇ ? ಅದಕ್ಕೆ ಉತ್ತರ ಕೊಡಬೇಕೇ, ಬೇಡವೇ ?

Sri D. PARAMESWARAPPA.—I made it clear that we are responsible for the tanks that are maintained by P.W.D. and not for other tanks.

ಶ್ರೀ ಬಿ. ಎನ್. ರಾಮೇಗೌಡ.—ಇದರಲ್ಲಿ 770ನೇ ಪ್ರಶ್ನೆಯಲ್ಲಿ ಎರಡನ್ನು ಮಾತ್ರ ಕೊಟ್ಟು, ಒಂದಕ್ಕೆ ತನಿಖೆ ನಡೆಯುತ್ತಿದೆ ಎಂದೂ, ಇನ್ನೊಂದಕ್ಕೆ ಪ್ರಪೋಸಲ್ ಬಂದಿದೆ ಎಂದು ಹೇಳಿದ್ದೀರಿ. ಮಿಕ್ಕ ನಾಲ್ಕು ಕೆರೆಗಳ ವಿಚಾರ ಏನಾಗಿದೆ ?

ಶ್ರೀ ಡಿ. ಪರಮೇಶ್ವರಪ್ಪ.—ಕುಂಬಾರಕಟ್ಟೆ ಕೆರೆ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದೇವೆ. ಇದಕ್ಕೆ ಕಾರಣ ಇಷ್ಟೆ: ಇದರ ಕೆಳಗಡೆ ಅದೇ ವ್ಯಾಲಿನಲ್ಲಿ ಒಂದು ಬಡನೂರು ಕೆರೆ ಇದೆ. ಇದನ್ನು ಕಟ್ಟುವುದರಿಂದ ಬಡನೂರು ಕೆರೆಗೆ ಧಕ್ಕೆ ಆಗಬಹುದು ಎಂದು ಅಲ್ಲಿ ಕೆರೆ ಕಟ್ಟುವುದು ಸೂಕ್ತವಲ್ಲವೆಂದು ಹೇಳಿದ್ದೇವೆ. ಎರಡನೇಯದು ಶ್ರೀರಂಗಪಟ್ಟಣದ ಹತ್ತಿರ ಇರತಕ್ಕಂತಹ ಕೆರೆಗೆ ಇನ್‌ವೆಸ್ಟಿಗೇಶನ್ ಮಾಡುತ್ತಿದ್ದಾರೆ. ಕೆಂಚಮ್ಮನಹಳ್ಳಿಯ ಕೆರೆ ಕಟ್ಟುವುದಕ್ಕೆ ಈಗಾಗಲೇ ಪರಿಶೀಲನೆ ಆಗುತ್ತಾ ಇದೆ. ವೀರ್ಲಗೊಂಡಿಯಲ್ಲಿರುವ ಕೆರೆಯನ್ನು ತೆಗೆದುಕೊಂಡಿದ್ದಾರೆ. ಆದರೆ ಅದನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾಲ್ಕನೆಯದು ಬೈದನೂರು ಕೆರೆಯ ವೇಸ್ಟ್‌ವೇರನ್ನು ಎತ್ತರ ಮಾಡುವುದಕ್ಕೆ ಕೇಳಿದ್ದಾರೆ. ಅದರ ಕೆಪೇಸಿಟಿ ಕಡಿಮೆ ಇರುವುದರಿಂದ ಇನ್ನೂ ಹೆಚ್ಚಿಸುವುದಕ್ಕಾಗುವುದಿಲ್ಲ. ಇನ್ನು ಕಡಪಲ ಕೆರೆಯ ಕೋಡಿಯನ್ನು ಎತ್ತರಿಸಕೂಡದು ಎಂದು ತಾಂತ್ರಿಕ ಅಭಿಪ್ರಾಯ ಇದೆ.

Sanction of Primary School Teachers in Tumkur District

788. Sri B. GANGANNA ((Kallambella).—

Will the Minister for Education be pleased to state :—

(a) whether it has come to the notice of the Government that there is dearth of Primary School Teachers in Tumkur District since the last 2-3 years ;

(b) the number of Teachers required as per rules ;

(c) the arrangements made to fill up the required number of teachers ?

Sri N. M. KOTRABASAIAH SOGI (Deputy Minister for Education).—

(*a*) Yes.

(*b*) There are no Rules. Teachers are sanctioned at present at the rate of one for every 45 pupils. In Tumkur District, the Teacher-pupil ratio is 1 : 39 in Standards I to IV in urban areas and 1 : 40 in rural areas.

As regards Middle Schools, the ratio is 1 : 26 in urban areas as well as rural areas, but there are several single-teacher schools which require additional teachers. Similarly, there are several Middle Schools which require additional Teachers.

(*c*) Additional Teachers are being sanctioned according to availablity of funds. Teachers are also being restricted on the basis of actual attendance of pupils in schools instead of an enrolment.

ಶ್ರೀ ಬಿ. ಗಂಗಣ್ಣ.—ಈಗ ತಮ್ಮ ಉತ್ತರದಲ್ಲಿ ಹಾಜರಾತಿಯನ್ನು ಅನುಸರಿಸಿ, ಉಪಾಧ್ಯಾಯರ ನೇಮಕವನ್ನು ಮಿತಿಗೊಳಿಸಲಾಗುತ್ತದೆ ಎಂದು ಹೇಳಿದ್ದೀರಿ. ಈ ಹಾಜರಾತಿ ಇಲ್ಲದಿರುವುದಕ್ಕೆ ಗ್ರಾಮಾಂತರ ಪ್ರದೇಶಗಳಲ್ಲಿ ಉಪಾಧ್ಯಾಯರುಗಳು ಇಲ್ಲದಿರುವ ಒಂದು ಕಾರಣವಲ್ಲವೇ ? ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದೂ ಒಂದು ಕಾರಣವಿರಬಹುದು. ಆದರೆ ಮುಖ್ಯವಾದ ಕಾರಣವೆಂದು ಹೇಳುವುದಕ್ಕಾಗುವುದಿಲ್ಲ. ಇನ್ನೂ ಅನೇಕ ಕಾರಣಗಳು ಇರಬಹುದು.

ಶ್ರೀ ಬಿ. ಗಂಗಣ್ಣ.—ತುಮಕೂರು ಜಿಲ್ಲೆಯಲ್ಲಿ ಎರಡು ಮೂರು ವರ್ಷಗಳಿಂದ ಉಪಾಧ್ಯಾಯರ ಅವಶ್ಯಕತೆ ಇದೆ ಎಂದು ಒಪ್ಪಿಕೊಂಡಿದ್ದೀರಿ. 1968-69 ರಲ್ಲಿ ಎಷ್ಟು ಜನ ಉಪಾಧ್ಯಾಯರು ಬೇಕಾಗುತ್ತಾರೆಂದು ಹೇಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಉಪಾಧ್ಯಾಯರನ್ನು ನೇಮಕ ಮಾಡತಕ್ಕ ವಿಷಯದಲ್ಲಿ ಶಾಲೆಗಳಲ್ಲಿ ಆಕ್ಚ್ಯುಯಲ್ ಆಗಿ ಹಾಜರಿರುವ ವಿದ್ಯಾರ್ಥಿಗಳ ಆಧಾರದ ಮೇಲೆ ಈಗ ಹಾಲಿ ಇರತಕ್ಕ ಉಪಾಧ್ಯಾಯರನ್ನು ರೀ ಡಿಸ್ಟ್ರಿಬ್ಯೂಟ್ ಮಾಡಬೇಕು ಎಂದು ಮಾಡುತ್ತಿದ್ದೇವೆ.

ಶ್ರೀ ಬಿ. ಗಂಗಣ್ಣ.—ಈಗ ಹಾಲಿ ಇರತಕ್ಕ ಉಪಾಧ್ಯಾಯರ ಸಂಖ್ಯೆಯಲ್ಲಿಯೇ ಎಲ್ಲಾ ಶಾಲೆಗಳಿಗೂ ಉಪಾಧ್ಯಾಯರನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇನ್ನು ಮುಂದಕ್ಕಾದರೂ ಅವಶ್ಯಕವಾಗಿ ಬೇಕಾಗುವ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವಶ್ಯಕತೆಯ ಪ್ರಕಾರ ಹೆಚ್ಚಿಗೆ ಶಿಕ್ಷಕರನ್ನು ನೇಮಕ ಮಾಡತಕ್ಕ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಎಂ. ಎನ್. ರಾಮಣ್ಣ.—ಈಗ ತಾವು ಹೇಳಿರುವ ಹಾಗೆ 1 : 40 ದಾಮಾಷದ ಪ್ರಕಾರ ತುಮಕೂರು ಜಿಲ್ಲೆಗೆ ಎಷ್ಟು ಜನ ಉಪಾಧ್ಯಾಯರು ಬೇಕಾಗುತ್ತಾರೆ, ಮತ್ತು 1968ನೇ ಮೇ ತಿಂಗಳಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ಜನ ಉಪಾಧ್ಯಾಯರು ಇದ್ದರು ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಇದರೊಳಗೆ 1 : 40 ರೇಷಿಯೋ ಏನಿದೆ ಅದನ್ನು 1 : 30 ಮಾಡಬೇಕೆಂದು ಸರ್ಕಾರದವರು ಒಂದು ನೀತಿಯನ್ನು ಹಾಕಿಕೊಂಡಿದ್ದಾರೆ. ಆಕ್ಚ್ಯುಯಲ್ ಅಟೆಂಡೆನ್ಸ್ ಪ್ರಕಾರ ಈಗ ಇರುವ ಪರಿಸ್ಥಿತಿಯಲ್ಲಿ 1 : 30 ಧಾಮಾಷಾ ಆಗುತ್ತದೆ ಆದಕಾರಣ ಹೆಚ್ಚಿಗೆ ಶಿಕ್ಷಕರನ್ನು ನೇಮಕ ಮಾಡುವ ಅವಶ್ಯಕತೆ ಕಂಡುಬಂದರೆ ನೇಮಕ ಮಾಡುತ್ತೇವೆ.

ಶ್ರೀ ಎಂ. ಎನ್. ರಾಮಣ್ಣ.—1968ನೇ ಇಸವಿ ಮೇ 22ನೇ ತಾರೀಖು ಸ್ಕೂಲುಗಳು ಪ್ರಾರಂಭ ಆದವು ಆಗ ತುಮಕೂರು ಜಿಲ್ಲೆಯಲ್ಲಿ 1 : 40 ರ ರೇಷಿಯೋ ಪ್ರಕಾರ ಎಷ್ಟು ಜನ ಉಪಾಧ್ಯಾಯರು ಬೇಕಾಗಿತ್ತು. ಆಗ ಎಷ್ಟು ಜನ ಉಪಾಧ್ಯಾಯರು ಆ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದರು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ಬಗ್ಗೆ ನೋಟೀಸ್ ಬೇಕು

Amalgamation of Agriculture and Horticulture Departments

835. Sri A. MUNIYAPPA (Bagepalli).—

Will the Minister for Agriculture be pleased to state :—

Whether they have taken any action to amalgamate Agriculture and Horticulture Departments into one Department ?

Sri B. RACHAIAH (Minister for Agriculture).—

No.

ಶ್ರೀ ಎ. ಮುನಿಯಪ್ಪ.—ಸ್ವಾಮಿ, ವ್ಯವಸಾಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಒಂದೇ ಇಲಾಖೆಯಾಗಿ ಪರಿವರ್ತಿಸಲು ಸರ್ಕಾರದವರು ಏನಾದರೂ ಕ್ರಮವನ್ನು ಕೈಗೊಂಡಿದ್ದಾರೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ, ಹಾಗಾದರೆ ಈಗ ಖೋತಾ ಬಿದ್ದಿರುವ ಹಣವನ್ನು ಭರ್ತಿ ಮಾಡುವುದಕ್ಕೆ ಭೂತಲಿಂಗಂ ಅವರ ಕಮಿಟಿಯನ್ನು ನೇಮಕ ಮಾಡಿದ್ದೀರಿ, ಅವರು ಇಲಾಖೆಗಳನ್ನು ಕಡಿಮೆ ಮಾಡಿಕೊಳ್ಳಬೇಕೆಂದರೆ ಕಡಿಮೆ ಮಾಡಿಕೊಳ್ಳುತ್ತೀರಾ ಅಥವಾ ಆ ಹಣವನ್ನು ರೈತರ ಮೇಲೆ ಹಾಕುತ್ತೀರಾ ?

ಶ್ರೀ ಬಿ. ರಾಚಯ್ಯ.—ಷೇ ಕಮಿಷನ್ ರಿಪೋರ್ಟ್‌ನಲ್ಲಿ ಕೂಡ ಇದನ್ನು ಒಂದುಗೂಡಿಸಬೇಕು ಎಂದು ಹೇಳಿಲ್ಲ. ಆದ್ದರಿಂದ ಈ ಎರಡು ಇಲಾಖೆಗಳನ್ನು ಒಂದುಗೂಡಿಸುವ ಪರ್ಯಾಲೋಚನೆ, ಪ್ರಯತ್ನ ಈಗ ಸರಕಾರಕ್ಕೆ ಇಲ್ಲ ಎಂದು ನಾನು ಹೇಳಿದ್ದೇನೆ.

ಶ್ರೀ ಎ. ಮುನಿಯಪ್ಪ.—ಈಗ ಖೋತಾ ಬಿದ್ದಿರುವ ಹಣವನ್ನು ಭರ್ತಿ ಮಾಡುವುದಕ್ಕೆ ಅದನ್ನು ರೈತರ ಮೇಲೆ ಹಾಕುವುದಕ್ಕೆ ಬದಲಾಗಿ ನಿಮ್ಮ ಇಲಾಖೆಗಳಲ್ಲೇ ಮಿತವ್ಯಯವನ್ನು ಏತಕ್ಕೆ ಮಾಡಬಾರದು ?

ಶ್ರೀ ಬಿ. ರಾಚಯ್ಯ.—ಷೇ-ಕಮಿಷನ್ ರಿಪೋರ್ಟ್ ಪ್ರಕಾರ ಎಲ್ಲೆಲ್ಲಿ ಮಿತವ್ಯಯ ಮಾಡಬೇಕಾಗಿದೆಯೋ ಅಲ್ಲೆಲ್ಲಾ ಸಂಪೂರ್ಣವಾಗಿ ಮಿತವ್ಯಯ ಮಾಡುವುದಕ್ಕೆ ಇನ್ನೂ ಸಂಪೂರ್ಣವಾದ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಈ ಇಲಾಖೆಗಳನ್ನು ಒಂದುಗೂಡಿಸುವುದಕ್ಕೆ ಬದಲಾಗಿ ಎಲ್ಲೆಲ್ಲಿ ಮಿತವ್ಯಯ ಸಾಧಿಸುವುದಕ್ಕೆ ಸಾಧ್ಯ ಇದೆಯೋ ಅಲ್ಲಿ ಮಿತವ್ಯಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಸದಾಶಿವಪ್ಪ ಪಾಟೀಲ್.—ವ್ಯವಸಾಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಎಂದು ಎರಡು ಇಲಾಖೆಗಳನ್ನು ನಿರ್ಮಾಣ ಮಾಡಿದ್ದೀರಿ. ಈ ತೋಟಗಾರಿಕೆ ಇಲಾಖೆಯಿಂದ ಇಡೀ ರಾಜ್ಯಕ್ಕೆ ಉಪಯೋಗವಾಗುತ್ತಿದೆಯೇ ಅಥವಾ ವೈಯುಕ್ತಿಕವಾಗಿ ಯಾರಿಗಾದರೂ ಅನುಕೂಲ ಮಾಡಿಕೊಡಬೇಕೆಂದು ಈ ಇಲಾಖೆಯನ್ನು ನಿರ್ಮಾಣ ಮಾಡಿದಿರೋ ? ಮತ್ತು ಎರಡು ಇಲಾಖೆಗಳನ್ನು ಸೇರಿಸಿ ಒಂದೇ ಇಲಾಖೆಯನ್ನಾಗಿ ಪರಿವರ್ತಿಸಿದರೆ ಉತ್ಪಾದನೆ ಜಾಸ್ತಿಯಾಗಿ ಖರ್ಚು ಕಡಿಮೆಯಾಗುವುದಿಲ್ಲವೆ ?

ಶ್ರೀ ಬಿ. ರಾಚಯ್ಯ.—1963ನೇ ಇಸವಿಯಲ್ಲಿ ತೋಟಗಾರಿಕೆ ಇಲಾಖೆ ಪ್ರತ್ಯೇಕವಾಯಿತು. ಈ ಇಲಾಖೆಯ ಕಾರ್ಯಚಟುವಟಿಕೆಗಳ ಬಗ್ಗೆ ವಿಚಾರ ಮಾಡಲು ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಸರ್ಕಾರದವರು ಮಾಡಿದ್ದರು. ಆ ಕಮಿಟಿಯವರು ಈ ಇಲಾಖೆಯ ಕಾರ್ಯಚಟುವಟಿಕೆಗಳು ಬಹಳ ಹೆಚ್ಚಾಗಿದೆ, ಅದಕ್ಕೋಸ್ಕರ ಒಂದು ಪ್ರತ್ಯೇಕವಾದ ಇಲಾಖೆಯನ್ನು ಮಾಡುವುದಕ್ಕೆ ಸಾಕಷ್ಟು ಸಕಾರಣಗಳು ಇವೆಯೆಂದು ಶಿಫಾರಸ್ಸು ಮಾಡಿದ್ದರು. ಅದರ ಪ್ರಕಾರ ಮಾಡಿದ್ದೇವೆ.

Sri C. K. RAJAIAH SHETTY.—In view of the serious developmental programmes under the Fourth Plan, it is not desirable to merge these two departments, is it not Sir ?

ಶ್ರೀ ಬಿ. ರಾಚಯ್ಯ.—ಅದು ಇನ್ನೂ ಯೋಚನೆ ಮಾಡಬೇಕಾದ ವಿಷಯ.

ಶ್ರೀ ಎಸ್. ಎಂ. ಗುರೆಡ್ಡಿ.—ತೋಟಗಾರಿಕೆ ಇಲಾಖೆ ಬಹಳ ಮಹತ್ವದ ಇಲಾಖೆಯಾಗಿದೆ. ಏಕೆಂದರೆ ಬಹಳಷ್ಟು ಆಹಾರವನ್ನು ತೋಟಗಾರಿಕೆ ಇಲಾಖೆಯಿಂದ ಪಡೆಯುತ್ತಿದ್ದೇವೆ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತಿರುವ ಇಲಾಖಾ ಆಫೀಸರನ್ನು ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅದು ಯೋಚನೆ ಮಾಡುವ ವಿಷಯವಾಗಿದೆ. ಈ ಇಲಾಖೆಗೆ ಸರ್ಕಾರದವರು ಹಣವನ್ನು ಒದಗಿಸುವುದರ ಮೇಲೆ ಈ ವಿಸ್ತರಣಾ ಕಾರ್ಯ ಅವಲಂಬಿಸಿದೆ.

ಶ್ರೀ ಎನ್. ಎ. ಚನ್ನೇಗೌಡ.—1963ರಲ್ಲಿ ತೋಟಗಾರಿಕೆ ಇಲಾಖೆಯನ್ನು ರಚನೆ ಮಾಡಲಾಯಿತು ಎಂದು ಹೇಳಿದಿರಿ. ಈ ಇಲಾಖೆಯಲ್ಲಿ ಹೆಚ್ಚು ಅಭಿವೃದ್ಧಿ ಕೆಲಸಗಳು ನಡೆದು ತಮ್ಮ ಕಾಲಮೇಲೆ ತಾವು ನಿಂತುಕೊಂಡು ಸಂಪಾದನೆ ಮಾಡುವ ವ್ಯವಸ್ಥೆಯಲ್ಲಿ ಇಲ್ಲವೆ ಮತ್ತು ವ್ಯವಸಾಯ ಇಲಾಖೆಯಲ್ಲಿರುವ ಅಧಿಕಾರಿಗಳು ಬಹಳವಾಗಿ ಕೆಲಸವನ್ನೇ ಮಾಡದೆ ಕಾಲ ಕಳೆಯುತ್ತಿಲ್ಲವೆ ?

ಶ್ರೀ ಬಿ. ರಾಚಯ್ಯ.—ಈ ಇಲಾಖೆಯಲ್ಲಿ ಹೆಚ್ಚು ಕೆಲಸಕಾರ್ಯಗಳು ನಡೆಯುತ್ತಿವೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಈ ಇಲಾಖೆಗೆ ಖರ್ಚು ಎಷ್ಟು ಇದೆ ಅಷ್ಟೇ ಸಂಪಾದನೆಯೂ ಇದೆ ಎಂಬುದನ್ನು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿಲ್ಲ. ವ್ಯವಸಾಯ ಇಲಾಖೆಯಲ್ಲಿ ಇರತಕ್ಕಂಥ ಅಧಿಕಾರಿಗಳು ವೃಥಾ ಕಾಲ ಕಳೆಯುತ್ತಿದ್ದಾರೆ ಎಂಬುದನ್ನು ನಾನು ಒಪ್ಪಿಕೊಳ್ಳುವುದಿಲ್ಲ.

Recruitment of S. C. and S. T. and other Communities to I. A. S./I.P.S.

836. Sri A. MUNIYAPPA (Bagepalli).—

Will the Chief Minister be pleased to state :—

(*a*) of the candidates from Mysore State who had taken the IAS/IPS Examinations since 1962 to date, how many were recommended by the State Government for selection to the IAS/IPS ; how many of them belonged to Scheduled Castes/Scheduled Tribes/and other communities ; the names of the candidates recommended and the dates on which recommendations were made may be furnished ;

(*b*) the number of candidates who were successful at these examinations but were not selected for appointment to the IAS/IPS posts ; how many of them belonged to Scheduled Castes/Scheduled Tribes ; furnish their names ;

(*c*) whether the Social Welfare Department has taken any action to recommend the selection of Scheduled Castes/Tribes candidates to these services ;

(*d*) if candidates successful in these examinations are not appointed to the service, do the State Government propose to take up their case for appointment to the Service ?

Sri VEERENDRA PATIL (Chief Minister).—

(a) The State Government have no information about the number of candidates who had appeared for these examinations from Mysore State. Recruitment to the IAS/IPS is made by the Government of India and the Union Public Service Commission on the results of Combined Competitve Examinations conducted by the Union Public Service Commission in accordance with IAS/IPS (Recruitment) Rules. There is no provision in the All India Services Rules for the State Government to make recommendations in this behalf to the Government of India and the Union Public Service Commission.

(b) Since recruitiment is made by the Government of India and Union Public Service Commission information is not available with Government.

(c) Since the recruitment is made by the Government of India and the Union Public Service Commission on the results of the Combined Competitive Examinations, there is no question of Social Welfare Department making any recommendations for selection of candidates to the IAS/IPS.

(d) No Sir; any such representation by the State Government will not be in order.

Participation of Candidates from Mysore State in I.A.S./I.P.S. Examination

858. Smt. NAGARATHNAMMA HIREMATH (Gandhinagar).—

Will the Chief Minister be pleased to state.—

(a) the number of candidates from Mysore State who had appeared for the I.A.S/I.P.S. examination conducted by the Union Public Service Commission; since 1964;

(b) out of them the number of candidates who were successful in those examinations ; and

(c) the action taken by the State Government to encourage participation of a large number of candidates from this State in these Examinations and to secure good results therein ?

Sri VEERENDRA PATIL (Chief Minister).—

(a) and (b) Since the Competitive Examinations are conducted by the Union Public Service Commission, no information is available with the State Government.

(c) The State Government do not propose to take such action.

ಶ್ರೀ ಎ. ಮುನಿಯಪ್ಪ.—ಅವಕಾಶ ಇಲ್ಲ ಎಂದು ಹೇಳಿದರೆ ಮೈಸೂರಿನ ಕಡೆಯಿಂದ ಯಾರೂ ಕುಳಿತುಕೊಳ್ಳಬಾರದು ಎಂದು ಮಾಡಿದ್ದೀರಾ ?

† ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಮೈಸೂರು ಸರಕಾರದವರಿಗೆ ಯಾವ ವಿಧವಾದ ಅವಕಾಶವೂ ಇಲ್ಲ. ಇದನ್ನು ಕೇಂದ್ರ ಸರಕಾರದ ಯು. ಪಿ. ಎಸ್. ಸಿ. ಕಮಿಷನ್‌ನವರು ಮಾಡುವುದು. ನಮಗೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಎ. ಮುನಿಯಪ್ಪ.—ಮೈಸೂರು ದೇಶದಲ್ಲಿ ಯಾರು ಐ.ಎ.ಎಸ್. ಹಾಗೂ ಐ.ಪಿ.ಎಸ್. ಪರೀಕ್ಷೆಗಳಿಗೆ ಕೂರುತ್ತಾರೋ ಅವರ ರಾಜ್ಯ ಮಟ್ಟದ ಪಟ್ಟಿಯನ್ನು ಏನಾದರೂ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಕೇಂದ್ರ ಸರಕಾರದವರು ಸೆಲೆಕ್ಷನ್ ಕಮಿಟಿ ಮಾಡುತ್ತಾರೆ. ಅವರೇ ಇಲ್ಲಿಗೆ ಬಂದು ನಮ್ಮ ರಾಜ್ಯದಲ್ಲಿರುವ ಒಬ್ಬರು ಅಧಿಕಾರಿಗಳ-ಜೊತೆಯಲ್ಲಿ ರಾಜ್ಯ ಮಟ್ಟದವರ ಒಂದು ಪಟ್ಟಿಯನ್ನು ಮಾಡುತ್ತಾರೆ. ಅದರಂತೆ ಎಲ್ಲ ರಾಜ್ಯಗಳಿಗೂ ಹಂಚುತ್ತಾರೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ನಮ್ಮ ಸರಕಾರದಲ್ಲಿರುವ ಅಧಿಕಾರಿಗಳು ಐ.ಎ.ಎಸ್. ಹಾಗೂ ಐ.ಪಿ.ಎಸ್. ಪರೀಕ್ಷೆಗೆ ಕುಳಿತುಕೊಳ್ಳಲು ರಾಜ್ಯ ಸರಕಾರದಿಂದ ಪರವಾಗಿ ತೆಗೆದುಕೊಂಡು ಕೂರುತ್ತಾರೋ ಹೇಗೆ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಎರಡು ತರಹ ರೆಕ್ರೂಟ್‌ಮೆಂಟ್ ಇದೆ. ಒಂದು ಡೈರೆಕ್ಟ್ ರೆಕ್ರೂಟ್‌ಮೆಂಟ್, ಇನ್ನೊಂದು ಪ್ರಮೋಷನಲ್ ಕೋಟಾ ಇದೆ. ಇದರಂತೆ ಯು.ಪಿ.ಎಸ್.ಸಿ. ಕಮಿಟಿಯಲ್ಲಿ ಒಂದು ಸೆಲೆಕ್ಷನ್ ಕಮಿಟಿ ಇರುತ್ತೆ, ಅದರ ಪ್ರಕಾರ ಅವರು ಸೆಲೆಕ್ಟ್ ಮಾಡುತ್ತಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಮೈಸೂರು ಸರಕಾರದವರು ಹಿಂದೆ ನಿಮ್ಮ ವರ್ಗದವರಿಗೆ ಐ.ಎ.ಎಸ್. ಹಾಗೂ ಐ.ಪಿ.ಎಸ್. ತರಗತಿಗಳಲ್ಲಿ ತರಬೇತಿ ಕೊಡಲು ಒಂದು ಕೇಂದ್ರ ತೆರೆದಿದ್ದರೂ ಅದನ್ನು ಈಚೆಗೆ ರದ್ದು ಮಾಡಿದ್ದಾರೆ. ಇದನ್ನು ಪುನಃ ತೆರೆಯಲು ಯೋಚನೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ವಿವರಗಳನ್ನು ಕೊಡಬಹುದು. ಈಗ ನನ್ನಲ್ಲಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಮತಾಂತರ ಹೊಂದಿದವರಿಗೂ ಇಂತಹ ಸವಲತ್ತುಗಳನ್ನು ಸರಕಾರ ಕೊಡುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇದನ್ನೆಲ್ಲಾ ಯು. ಪಿ. ಎಸ್. ಸಿ. ಮಾಡುವುದು. ಅವರ ನಿಯಮದ ಪ್ರಕಾರ ರೆಕ್ರೂಟುಮೆಂಟು ಮಾಡುತ್ತಾರೆ. ಪ್ರತಿಯೊಂದು ರಾಜ್ಯಕ್ಕೂ ಎಷ್ಟು ವೇಕೆನ್ಸಿಗಳಿವೆ ಅದನ್ನು ನೋಡಿಕೊಂಡು ಎಲ್ಲ ರಾಜ್ಯಗಳಿಗೂ ಹಂಚುವ ಏರ್ಪಾಡು ಇಟ್ಟುಕೊಂಡಿದ್ದಾರೆ,

ಶ್ರೀ ವಿ. ಎನ್. ಪಾಟೀಲ್.—ಕಾನ್‌ಫಿಡೆನ್‌ಷಿಯಲ್ ರಿಪೋರ್ಟುಗಳ ಮೇಲೆ ರೆಕ್ರೂಟುಮೆಂಟು ಮಾಡುವಾಗ ಪೊಲಿಟಿಕಲ್ ಕನ್‌ಸಿಡರೇಷನ್‌ಗಳೂ ಇರುತ್ತದಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಕಾನ್‌ಫಿಯಲ್ ರಿಪೋರ್ಟು ನೋಡಬೇಕಾಗಿರುವುದು ಪ್ರಮೋಷನಲ್ ರೆಕ್ರೂಟುಮೆಂಟು ಮಾಡುವಾಗ. ಡೈರೆಕ್ಟ್ ರೆಕ್ರೂಟುಮೆಂಟಿನಲ್ಲಿ ಇವು ಯಾವುವೂ ಬರುವುದಿಲ್ಲ. ಎಲ್ಲವನ್ನೂ ಕೇಂದ್ರ ಸರಕಾರದ ಸೆಲೆಕ್ಷನ್ ಕಮಿಟಿಯವರೇ ಮಾಡಿಕೊಳ್ಳುತ್ತಾರೆ. ಡೈರೆಕ್ಟ್ ರೆಕ್ರೂಟುಮೆಂಟಿಗೂ ಕಾನ್‌ಫಿಡೆನ್‌ಷಿಯಲ್ ರೆಕಾರ್ಡುಗಳಿಗೂ ಯಾವ ಸಂಬಂಧವೂ ಇಲ್ಲ.

2-00 P.M.

ಶ್ರೀ ಬಾಪೂಗೌಡ.—ಮುಖ್ಯಮಂತ್ರಿಗಳು ಐ.ಎ.ಎಸ್., ಐ.ಪಿ.ಎಸ್. ನವರನ್ನು ನೇರವಾಗಿ ರೆಕ್ರೂಟ್‌ಮೆಂಟ್ ಮಾಡುತ್ತಾರೆ ಎಂದು ಹೇಳಿದರು. ಹಾಗಾದರೆ ರಾಜ್ಯಮಟ್ಟದಲ್ಲಿ ಮೈಸೂರು ಸರ್ಕಾರದವರು ಈ ವರ್ಷ ಎಷ್ಟು ಜನರನ್ನು ಸೆಲೆಕ್ಟ್ ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದಂತೆ ಅವರನ್ನು ಮೈಸೂರು ಸರ್ಕಾರದವರು ಸೆಲೆಕ್ಟ್ ಮಾಡುವ ಹಾಗಿಲ್ಲ. ಅದು ಯು.ಪಿ.ಎಸ್.ಸಿ. ಸೆಲೆಕ್ಷನ್.

Applications pending before Land Tribunals in the State

872. Sri A. R. BADARINARAYAN (Shimoga).—

Will the Minister for Revenue be pleased to state:—

(a) the total number of Land Tribunals established in the State (Districtwar);

(b) the total number of applications pending before the Tribunals in each District;

(c) the number of disposals so far;

(d) the time likely to be taken to dispose all of them (roughly)?

Sri H. V. KOUJALGI (Minister for Revenue).—

(a)—

	Name of District	No. of whole-time Land Tribunals constituted	No. of Joint-Munsiff Land Tribunals functioning as Land Tribunals by virtue of Sec. 111 (2) of M.L.R. Act, 1961
1	Bangalore	2	Nil
2	Belgaum	1	7
3	Bijapur	2	4
4	Chickmagalur	1	1
5	Dharwar	3	5
6	Hassan	1	...
7	North Kanara	3	1
8	South Kanara	5	3
9	Mandya	1	...
10	Kolar	1	...
11	Mysore	2	...
12	Shimoga	2	...
13	Bellary	...	5
14	Bidar	...	4
15	Chitradurga	...	2
16	Coorg	...	2
17	Raichur	...	9
18	Gulbarga	...	7
19	Tumkur	...	3
	Total	24	53

(*b*) and (*c*)—

	Name of District	No. of applications pending as on 30-9-1968	No. disposed of up to 30-9-1968
1	Bangalore	2,759	2,208
2	Belgaum	20,326	916
3	Bellary	88	42
4	Bidar	191	48
5	Bijapur	3,107	2,224
6	Chitradurga	34	6
7	Chickmagalur	1,578	184
8	Coorg	57	27
9	Dharwar	12,791	620
10	Gulbarga	210	75
11	Hassan	2,213	236
12	Kolar	726	767
13	Mandya	3,053	769
14	Mysore	3,416	1,274
15	N. Kanara	20,781	1,556
16	Raichur	74	307
17	South Kanara	9,897	2,186
18	Shimoga	7,376	378
19	Tumkur	350	59
	Total	89,027	13,882

(*d*) Five to six years.

ಶ್ರೀ ಎ. ಆರ್. ಬದ್ರಿನಾರಾಯಣ್.—ಸ್ವಾಮಿ, ಇತ್ಯರ್ಥವಾಗದೇ ಉಳಿದಿರುವ ಅರ್ಜಿಗಳು ಬೆಳಗಾಂನಲ್ಲಿ 20 ಸಾವಿರ ಕೇಸುಗಳು ಇವೆ, ಧಾರವಾಡದಲ್ಲಿ 12 ಸಾವಿರ ಕೇಸುಗಳು ಇವೆ, ನಾರ್ತ್ ಕೆನಾರಾದಲ್ಲಿ 20 ಸಾವಿರ ಕೇಸುಗಳು ಇವೆ; ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 9 ಸಾವಿರ ಕೇಸುಗಳು ಇವೆ. ಬೆಳಗಾಂನಲ್ಲಿ ಹೋಲ್ ಟೈಂ ಲ್ಯಾಂಡ್ ಟ್ರಿಬ್ಯೂನಲ್ ಒಂದು ಮತ್ತು ಜಾಯಿಂಟ್ ಮುನ್ಸೀಫ್ ಲ್ಯಾಂಡ್ ಟ್ರಿಬ್ಯೂನಲ್ಸ್ ಏಳು ಇವೆ. ಹೀಗಿದ್ದರೂ ಕೇಸುಗಳು ಇತ್ಯರ್ಥವಾಗುವುದು ನಿಧಾನವಾಗುತ್ತಿದೆ. ಇದನ್ನು ಬೇಗನೆ ಡಿಸ್ಪೋಸಲ್ ಮಾಡುವುವಕ್ಕೆ ಪ್ರಯತ್ನ ಮಾಡುತ್ತೀರಾ?

† ಶ್ರೀ ಹೆಚ್. ವಿ. ಕೌಜಲಗಿ.—ಮೊದಲನೇ ಪ್ರಶ್ನೆಗೆ ಉತ್ತರ ನೋಡಿದರೆ ಗೊತ್ತಾಗುತ್ತದೆ. ಆದುದರಿಂದಲೇ 1 ರಿಂದ 7 ಸಂಖ್ಯೆಯನ್ನು ಹೆಚ್ಚು ಮಾಡಿದ್ದೇವೆ. ಅದರ ಬಗ್ಗೆ ತೀವ್ರ ಡಿಸ್ಪೋಸಲ್ಸ್ ಆಗುವುದಕ್ಕೆ ತಕ್ಕ ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಳ್ಳುತ್ತಾರೆ.

ಶ್ರೀ ಎ. ಆರ್. ಬದ್ರಿನಾರಾಯಣ್.—ಎಲ್ಲ ಅರ್ಜಿಗಳನ್ನೂ ವಿಲೇ ಮಾಡಲು ಐದರಿಂದ 6 ವರ್ಷಗಳು ಬೇಕಾಗುತ್ತದೆ ಎಂದು ಹೇಳಿದ್ದೀರಿ. ಅದು 10 ವರ್ಷ ಇಲ್ಲದೇ ಆಗುವುದಿಲ್ಲ. ಈ ರೀತಿ ನಿಧಾನವಾದರೆ ಅದರಿಂದ ಲ್ಯಾಂಡ್ ರೀಫಾರಂಸ್ ಆಕ್ಟ್ ಏನು ಪಾಸು ಮಾಡಿದ್ದಾರೋ ಅದರ ಮೂಲ ಉದ್ದೇಶವೇ ಹಾಳಾಗುವುದಿಲ್ಲವೇ ?

ಶ್ರೀ ಹೆಚ್. ವಿ. ಕೌಜಲಗಿ.—ಅವೆಲ್ಲವನ್ನೂ ಇತ್ಯರ್ಥಗೊಳಿಸಬೇಕಾದರೆ ಐದರಿಂದ 6 ವರ್ಷ ಎಂದು ಇದೆ. ಆದರೂ ಅದಕ್ಕಿಂತ ಕಡಿಮೆ ಅವಧಿಯೊಳಗೇ ಆಗುವ ನಂಬಿಕೆ ಇದೆ.

ಶ್ರೀ ಎಂ. ಎಂ. ಜಾಲಿಸಟ್ಗಿ.—ಸ್ವಾಮಿ, ಉತ್ತರ ಕನ್ನಡ ಜಿಲ್ಲೆಯಲ್ಲಿ 20,781 ಕೇಸುಗಳು ಇವೆ. ಅಲ್ಲಿ ಲ್ಯಾಂಡ್ ಟ್ರಿಬ್ಯುನಲ್ಸ್‌ನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಕೆಲವು ಮುನ್ಸೀಫ್ ಕೋರ್ಟ್‌ನಲ್ಲಿ ಏನೂ ಕೆಲಸ ಇರುವುದಿಲ್ಲ. ಭಟ್ಕಳ್‌ನಲ್ಲಿರುವ ಮುನ್ಸೀಫ್ ಕೋರ್ಟ್‌ಗೆ ಏನೂ ಕೆಲಸ ಇಲ್ಲ. ಅದಕ್ಕೆ ಈ ಅಧಿಕಾರ ಕೊಡುತ್ತೀರಾ ?

ಶ್ರೀ ಹೆಚ್ . ವಿ. ಕೌಜಲಗಿ.—ಈಗಾಗಲೇ ಮಾನ್ಯ ಸದಸ್ಯರಿಗೆ ಉತ್ತರ ಕೊಟ್ಟಿದ್ದೇನೆ. ಪ್ರತಿಯೊಬ್ಬರಿಗೂ ಅಧಿಕಾರ ಕೊಡಬೇಕಾದರೆ ಹೈಕೋರ್ಟ್ ನವರು ಮಾಡಬೇಕು. ಆರೀತಿ ಮಾಡುವಂತೆ ಒತ್ತಾಯ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಇವೆರಡನ್ನೂ ಉದಾಹರಣೆ ತೆಗೆದುಕೊಳ್ಳುವುದಾದರೆ ಪೂರ್ಣಕಾಲದ ಟ್ರಿಬ್ಯುನಲ್ಸ್ 3 ಮತ್ತು ಜಾಯಿಂಟ್ ಮುನ್ಸೀಫ್ ಲ್ಯಾಂಡ್ ಟ್ರಿಬ್ಯುನಲ್ಸ್ 1 ಉತ್ತರ ಕನ್ನಡ ಜಿಲ್ಲೆಗೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಪೂರ್ಣಕಾಲದ ಟ್ರಿಬ್ಯೂನಲ್ಸ್ 5 ಮತ್ತು ಜಾಯಿಂಟ್ ಮುನ್ಸೀಫ್ ಲ್ಯಾಂಡ್ ಟ್ರಿಬ್ಯುನಲ್ಸ್ 3 ಇವೆ. ಕೇಸುಗಳು ಎಷ್ಟು ಇವೆ ಎಂದು ಲೆಕ್ಕ ಹಾಕಿ ನೋಡಿದರೆ ಉತ್ತರ ಕನ್ನಡ ಜಿಲ್ಲೆಗೆ ಸುಮಾರು 21-22 ಸಾವಿರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸುಮಾರು 12 ಸಾವಿರ ಆಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5 ಅಥವಾ 8 ಟ್ರಿಬ್ಯುನಲ್ಸ್ ರಚನೆ ಮಾಡಿದ್ದೀರಾ ? ಉತ್ತರ ಕನ್ನಡ ಜಿಲ್ಲೆಗೆ ಕಡಿಮೆ ಮಾಡಿದ್ದೀರಿ. ಕೇಸುಗಳು ಜಾಸ್ತಿ ಇದ್ದರೂ ಕೂಡ ಇದನ್ನು ಯಾವ ಆಧಾರದ ಮೇಲೆ ಫಿಕ್ಸ್ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಟ್ರಿಬ್ಯುನಲ್ಸ್ ಆರಂಭ ಮಾಡಿದ ಕಾಲದಲ್ಲಿ ಪ್ರತಿಯೊಂದು ಡಿಸ್ಟ್ರಿಕ್ಟ್‌ಗೂ 1 ಅಥವಾ 2 ಇರಬೇಕೆಂದು ಮಾಡಿತ್ತು. ಆದರೆ ಈವಾಗ ಕೇಸುಗಳು ಜಾಸ್ತಿ ಆದ ಹಾಗೆಲ್ಲ ಟ್ರಿಬುನಲ್ಸ್ ಕೂಡ ಜಾಸ್ತಿಯಾಗುತ್ತಾ ಇವೆ. ಆದರೆ ಪ್ರತಿಯೊಬ್ಬ ಮುನ್ಸೀಫರಿಗೂ ಅಧಿಕಾರ ಕೊಡಲಿಕ್ಕೆ ಹೈಕೋರ್ಟ್‌ಗೆ ತಿಳಿಸಿದ್ದೇವೆ. ಅದನ್ನು ಕಾಲಕ್ರಮೇಣ ಜಾರಿಗೆ ತರುವುದಕ್ಕೆ ಹೈಕೋರ್ಟ್‌ನವರಿಗೆ ಒತ್ತಾಯ ಮಾಡುತ್ತೇವೆ.

Sri S. R. BOMMAI.—The Land Reforms Act came into force in 1959 and tribunals were established in 1967. It was answered that five more years will be required for disposal of cases in the first stage and then for disposal of appeals it may take 20 years. Will this not take away the effect of the Act ?

Sri H. V. KOUJALGI.—I have answered that the Government is consulting the High Court.

Sri D. B. KALMANKAR.—May I know out of these applications pending before various tribunals, what are the nature of applications, whether they are resumption applications by the landlords or any other application ?

Sri H. V. KOUJALGI.—They are mostly resumption applications and rent suits.

Mr. SPEAKER.—Question time is over.

(QUESTIONS FOR ANSWERS ON THE DAY)
(but not taken up)

Construction of Bridge on Byadagi-Rattahalli Road

453. Sri MAHADEVA BANAKAR (Byadagi).—

Will the Minister for Public Works be pleased to state :—

(*a*) whether plan and estimates in respect of the construction of bridge across a halla near Guddada Hosalli on Byadagi-Rattahalli State Fund Road have been received from the Superintending Engineer, Dharwar district for sanction;

(*b*) if so, the action taken by them;

(*c*) whether it has come to the notice of the Government that people are put to lot of trouble for want of a bridge near Guddada Hosalli on Byadagi-Rattahalli road which is a link road to Hirekerur of Byadagi taluk;

(*d*) if so, when they will take action ?

Sri K. LAKKAPPA (Minister for Public Works).—

(*a*) No.
(*b*) This does not arise in view of reply to clause (*a*) above.
(*c*) Yes.
(*d*) This will be considered keeping in view the provision made.

N. R. W. S. Schemes for Chamarajangar Taluk

660. Sri S. PUTTASWAMY (Chamarajanagar).—

Will the Minister for Development be pleased to state :—

(*a*) the number of villages in Chamarajanagar Taluk for which Plans and Estimates have been prepared under National Rural Water Supply Schemes;

(*b*) whether the most affected villages *viz.*, (1) Channappanapura (2) Badanaguppe, (3) Dodadahalli, (4) Nagavalli and (5) Honganur Villages have come forward with panchayat resolutions and deposited the required contribution;

(*c*) whether one village in Chamarajanagar taluk by name Channappanapura has already deposited Rs. 9,000 and awaiting sanction of the scheme and consequent credit of the amount to a proper head;

(*d*) whether there is any proposal to sanction National Water Supply Scheme at least to the most suffered villages mentioned above during 1969-70 itself and take up the works immediately ?

Sri P. M. NADGOUDA (Minister for Development).—

(*a*) 34 villages.

(*b*) The villages (1) Badanaguppe, (2) Nagavalli and (3) Honganur have come forward with resolutions. But none of the villages had deposited the required contributions.

(*c*) No information has been received regarding deposit of the amount.

(*d*) It is being considered by Government.

Calling attention to a matter of urgent Public Importance

(i) *Re*: *Unauthorised utilisation of the Channel of water under Naggehalli Tank in Channarayapa'na.*

Sri S. SIVAPPA.—I call the attention of the Minister of State for Minor Irrigation to the unauthorised utilisation of the channel water under 'Nuggehalli' tank in Channarayapatna Taluk.

† ಶ್ರೀ ಎ. ಜೆ. ದೊಡ್ಡಮೇಟಿ (ಸಣ್ಣ ನೀರಾವರಿ ಇಲಾಖೆಯ ರಾಜ್ಯ ಮಂತ್ರಿಗಳು).— ನುಗ್ಗೆಹಳ್ಳಿ ಹಿರೇಕೆರೆಯು, ಈ ವಿಚಾರದಲ್ಲಿ ಹೊರಡಿಸಿದ ಸರ್ಕಾರಿ ಆದೇಶದ ಪ್ರಯುಕ್ತ 1966ನೇ ಇಸವಿಯಲ್ಲಿ ಕಂದಾಯ ಇಲಾಖೆಯುವರು ಲೋಕೋಪಯೋಗಿ ಇಲಾಖೆಯ ನಿಯಂತ್ರಣಕ್ಕೆ ಒಪ್ಪಿಸಿದ ಕೆರೆಗಳಲ್ಲೊಂದು. ಕೆರೆಯ ಜಲಧಾರಣ ಸಾಮರ್ಥ್ಯವು 128 ಯೂನಿಟ್ಟು. ಕೆರೆಯ ಜಲಾನಯನದಿಂದ ದೊರೆಯುವ ನೀರು 60 ಯೂನಿಟ್ಟು ಮಾತ್ರ. ಆದ್ದರಿಂದ, ಈ ಕೆರೆಗೆ ನೀರು ಪೂರೈಕೆಯನ್ನು ಹೆಚ್ಚಿಸುವ ನಿಮಿತ್ತವಾಗಿ ಒಂದು ಫೀಡರ್ ನಾಲೆಯನ್ನು ಕೂಡ ರಚಿಸಲಾಗಿದೆ.

ಕೆರೆಗಳ ರಿಜಿಸ್ಟರ ಪ್ರಕಾರ ಕೆರೆಯ ಒಟ್ಟು ಅಚ್ಚುಕಟ್ಟು ಪ್ರದೇಶ 124 ಎಕರೆ. ಇವುಗಳಲ್ಲಿ 67 ಎಕರೆ ತರಿ ಭೂಮಿ ಮತ್ತು 57 ಎಕರೆ ಬಾಗಾಯಿತು. ಈ ಮೇಲ್ಕಂಡ ಅಧಿಕೃತ ಅಚ್ಚುಕಟ್ಟು ಪ್ರದೇಶಕ್ಕೆ 60 ಯೂನಿಟ್ಟು ನೀರು ಬೇಕಾಗುವುದು. ಈಗ 67 ಎಕರೆ ತರಿ ಮತ್ತು 57 ಎಕರೆ ಬಾಗಾಯಿತು ಭೂಮಿಯು ಅಧಿಕೃತ ಅಚ್ಚುಕಟ್ಟು ಪ್ರದೇಶವಾಗಿದ್ದರೂ ಅಲ್ಲಿ ಈ ದಿವಸ 75 ಎಕರೆ ತರಿ ಮತ್ತು 49 ಎಕರೆ ಬಾಗಾಯಿತು ಭೂಮಿ ಇದೆ. ಕೆರೆಯ ಅಚ್ಚುಕಟ್ಟು ಭೂಮಿಗೆ ಸೇರದಿರುವ ಒಬ್ಬ ನಿರ್ದಿಷ್ಟ ವ್ಯಕ್ತಿಯ ಜಮೀನಿಗೆ ನೀರು ಹಾಯಿಸಲು ಹೊಸ ಕಾಲುವೆ ತೋಡಿ, ಈ ಕೆರೆಯಿಂದ ಅನಧಿಕೃತವಾಗಿ ಕಾಲುವೆ ನೀರನ್ನು ಬಳಸಲಾಗುತ್ತಿದೆಯೆಂದೂ ಅದರಿಂದಾಗಿ ಈ ಕೆರೆಯ ಅಚ್ಚುಕಟ್ಟುದಾರರಿಗೆ ಹಾನಿಯಾಗುತ್ತಿದೆಯೆಂದು, ಮಾನ್ಯ ಸದಸ್ಯರು ಹೇಳಿದ್ದಾರೆ. ತರಿ ಮತ್ತು ಬಾಗಾಯಿತು ಭೂಮಿಗಳಲ್ಲಿ ವ್ಯತ್ಯಾಸವಿದ್ದರೂ ಸಹ ಒಟ್ಟು ಅಚ್ಚುಕಟ್ಟಿನ ವಿಸ್ತೀರ್ಣ ಮಾತ್ರ ಹಾಗೆ ಉಳಿದುಕೊಂಡಿದೆಯೆಂದು ಮೇಲ್ಕಂಡ ವಿವರಗಳಿಂದ ವ್ಯಕ್ತವಾಗುವುದು. ಇಷ್ಟೇ ಅಲ್ಲದೆ, ಸರ್ವೆ ನಂ. 181 ರಲ್ಲಿ ನಾಲ್ಕು ಎಕರೆ ಜಮೀನಿನಲ್ಲಿ ಕಳೆದ ಎಂಟು-ಹತ್ತು ವರ್ಷಗಳಿಂದ ತರಿ ಸಾಗುವಳಿಯಾಗುತ್ತಿದೆ. ಕೆರೆಯ ನೀರು ಸರಿಯಾಗಿ ಹಂಚಿಕೆಯಾಗುವಂತೆ (ಕೆರೆಯ ಏರಿಯ ಹಿಂಭಾಗದಲ್ಲಿ) ಒಂದು ಕಲ್ಲಿನ ಗೋಡೆಯನ್ನು ನಿರ್ಮಿಸಲಾಗಿದ್ದು, ಬೇರೆ ಬೇರೆ ಮಟ್ಟಗಳಲ್ಲಿರುವ ಅಧಿಕೃತ ಭೂಮಿಗಳಿಗೆ ನೀರೊದಗಿಸಲು ಬೇರೆ ಬೇರೆ ಮಟ್ಟಗಳಲ್ಲಿ ಮೂರು ತೂಬುಗಳನ್ನು ಕಟ್ಟಿದೆ. ಮೇಲ್ಕಂಡ ಹಾಗೂ ಅನಧಿಕೃತ ಸಾಗುವಳಿ ನಡೆಯುವುದೆಂದು ಹೇಳಲಾದ ನಾಲ್ಕು ಎಕರೆ ಭೂಮಿಗೆ ನೀರೊದಗಿಸುವ ನಿಮಿತ್ತ ಆ ಕಲ್ಲು ಗೋಡೆಯ ಹಿಂದುಗಡೆಯಿಂದ ಆಚೆಗೆ ಒಂದು ನಾಲೆಯನ್ನು ಸಾಗಿಸಲಾಗಿದೆ. ಈ ಕೆರೆಯ ಕೆಲವರು ಅಚ್ಚುಕಟ್ಟುದಾರರು ಈಚೆಗೆ ಮೇಲ್ಕಂಡ ಕಲ್ಲು ಗೋಡೆಯನ್ನು ಹಾನಿಗೊಳಿಸಿದ್ದಾರೆ. ಅಧಿಕೃತ ಅಚ್ಚುಕಟ್ಟು ಪ್ರದೇಶಕ್ಕೆ ಕೆರೆಯ ನೀರಿನ ಪೂರೈಕೆಯನ್ನು ಕ್ರಮಪಡಿಸುವ ನಿಮಿತ್ತವಾಗಿ ಕಲ್ಲುಗೋಡೆಯನ್ನು ಪುನರ್ನಿರ್ಮಿಸಿ ನೀರು ಸರಿಯಾಗಿ ಹಂಚಿಕೆಯಾಗುವಂತೆ ಏರ್ಪಾಡು ಮಾಡಲಾಗಿದೆ.

ಕಳೆದ ಎಂಟು-ಹತ್ತು ವರ್ಷಗಳಿಂದ ನೀರಾವರಿಯಾಗುತ್ತಿರುವ ನಾಲ್ಕು ಎಕರೆ ಭೂಮಿಯ ವಿಚಾರವಾಗಿ ಹೇಳುವುದಾದರೆ, ಕಂದಾಯ ಇಲಾಖೆಯವರು ತರಿ ಕಂದಾಯವನ್ನು ವಸೂಲು ಮಾಡಿದ್ದಾರೆ, ಹಾಗಿದ್ದರೂ ಈಗ ಎಂಟು-ಹತ್ತು ವರ್ಷಗಳಿಂದ ನೀರಾವರಿಯಾಗುತ್ತಿರುವ ನಾಲ್ಕು ಎಕರೆ ಜಮೀನಿನ ಜತೆಗೆ ಕೆರೆಯ ಅಧಿಕೃತ ಆಯಕಟ್ಟು ಭೂಮಿಗೆ ನೀರು ಪೂರೈಸಲು ಇದುವರೆಗೂ ತೊಂದರೆಯೇನೂ ಉಂಟಾಗಿಲ್ಲ. ಇತ್ತೀಚೆಗೆ ನಾಲ್ಕು ಎಕರೆ ಭೂಮಿಯ ಅನಧಿಕೃತ ನೀರಾವರಿ ವಿಚಾರದಲ್ಲಿ, ಸರ್ಕಾರದವರಿಗೆ ಒಂದು ಮನವಿ ಬಂದಿತ್ತು. ಈ ಭೂಮಿಯು ಕಳೆದ ಹತ್ತು ವರ್ಷಗಳಿಂದ ಈ ಕೆರೆಯ ನೀರಿನಿಂದ, ನೀರಾವರಿ ಆಗುತ್ತಿದೆಯೆಂಬ ದೃಷ್ಟಿಯಲ್ಲಿಟ್ಟುಕೊಂಡು) ಈ ನಾಲ್ಕು ಎಕರೆ ಭೂಮಿಯುನ್ನು ಕಾಯಮ್ಮಾಗಿ ಅಥವಾ ಬೇರೆ ರೀತಿಯಾಗಿ ಆಯಕಟ್ಟಿನಲ್ಲಿ ಸೇರಿಸುವ ವಿಚಾರವನ್ನು, ಕೆರೆಯ ಈಗಿನ ಜಲಾಧಾರಣ ಸಾಮರ್ಥ್ಯವನ್ನೂ, ಕೆರೆಯ ನಿವೇಶನದಲ್ಲಿ ವಾಸ್ತವವಾಗಿ ಬರುವ ಬೆಳೆಯನ್ನೂ ಮತ್ತು ನೀರಾವರಿ ಅಧಿನಿಯಮಕ್ಕೆ ಹಾಗೂ ಅದರ ಮೇರೆಗೆ ರಚಿತವಾದ ನಿಯಮಗಳಿಗೆ ಅನುಸಾರವಾಗಿಯೂ ಪರಿಶೀಲಿಸಲಾಗುವುದು.

ಶ್ರೀ ಎಸ್. ಶಿವಪ್ಪ.—ಈ ಪ್ರಸ್ತಾಪವನ್ನು ಹೋದ ವರ್ಷ ಇಲ್ಲಿ ಮಾಡಿದೆ. ಈ ದಿವಸ ಮಾನ್ಯ ನೀರಾವರಿ ಸಚಿವರು ಯಾರೋ ಬರೆದುಕೊಟ್ಟ ಒಂದು ಹೇಳಿಕೆಯನ್ನು ಇಲ್ಲಿ ಓದಿದ್ದಾರೆ. ಎಂಟು-ಹತ್ತು ವರ್ಷಗಳಿಂದ ಅನಧಿಕೃತವಾಗಿ ಕೆರೆಯ ನೀರನ್ನು ಲೂಟಿ ಮಾಡುತ್ತಿರುವ ಮನುಷ್ಯ ಕಲ್ಲು ಕಟ್ಟಡವನ್ನೂ ಕೂಡ ಕಟ್ಟಿದ್ದಾನೆ ಎಂದು ಮಂತ್ರಿಗಳೇ ಒಪ್ಪಿದ್ದಾರೆ. ಆ ಕಲ್ಲು ಕಟ್ಟಡವನ್ನು ಯಾರು ಕಟ್ಟಿದರು ? ನಿಮ್ಮ ಇಲಾಖೆ ಕಟ್ಟಿದೆಯೇ ? ಯಾವತ್ತು ಕಟ್ಟಿದ್ದು ? ಎಷ್ಟು ಖರ್ಚಾಗಿದೆ ! ಈ ವಿವರ ತಿಳಿಸಬೇಕು.

ಎರಡನೆಯದಾಗಿ ಎಂಟು-ಹತ್ತು ವರ್ಷದಿಂದ ನೀರಾವರಿ ಸಾಗುವಳಿ ಮಾಡಿದ್ದಾರೆ ಎಂದು ಹೇಳುವಾಗ ಆ ಕೆರೆಯಲ್ಲಿ ಸಾಕಷ್ಟು ನೀರೇ ಇಲ್ಲ ಅನ್ನುವಾಗ ಅದು ಹೇಗೆ ಸಾಧ್ಯ ! ಅದಕ್ಕೆ ಫೀಡರ್ ಛಾನಲ್ ಮಾಡಿದ್ದೇವೆ ಎಂದು ಹೇಳಿರುವ ಸರಕಾರ ಎಂಟು-ಹತ್ತು ವರ್ಷದಿಂದ ನೀರಾವರಿ ಮಾಡಿ ಕಂದಾಯ ಕಟ್ಟಿದ್ದಾನೆ ಎಂದು ಹೇಳಿದರು. ಆ ಕೆರೆ ನಾಲ್ಕೈದು ವರ್ಷದಿಂದ ತುಂಬಿಲ್ಲ, ರಿಕಾರ್ಡು ನೋಡಲಿ. ನೀರೇ ಇಲ್ಲದಿರುವಾಗ ನೀರು ಸರದಿ ಕಂದಾಯ ಕಟ್ಟಿದ್ದರೆ ಯಾವತ್ತು ಕಟ್ಟಿರುವುದು ! ನೀರೇ ಕೊಟ್ಟಿಲ್ಲದಿರುವಾಗ ಕಂದಾಯ ಹೇಗೆ ಕಟ್ಟಿದ ! ನೀವೇ ರಿಕಾರ್ಡ್ ಮಾಡಿ ಜಮಾನು ಅವನಿಗೆ ಕೊಡಬೇಕೆಂದು ಹೀಗೆ ಹೇಳುತ್ತಿದ್ದೀರಾ ? ಇದನ್ನು ಪರಿಶೀಲನೆ ಮಾಡಬೇಕು. ಈ ಸಾರಿ ಸ್ವಲ್ಪ ನೀರಿದೆ. ಅದನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾನೆ. ನೀರಾವರಿ ಅಚ್ಚುಕಟ್ಟಿಗೆ ಸೇರಿಸಬೇಕು ಎಂದು ಸರಕಾರ ಪ್ರಯತ್ನ ಮಾಡುವುದಾದರೆ ಈ ದೇಶದಲ್ಲಿ ಸರಕಾರವಿದೆಯೇ ? I am again demanding that this Minister of State for Minor Irrigation should come with me to-morrow to the spot. I have gone there recently. When I spoke to the P.W.D. man there, I made a specific allegation against the Minister who comes from that Constituency that he called the local Officers and under his instructions, this Report has emanated. I request the Hon. Chief Minister to visit the spot. I am making a specific charge against this Minister; under his instructions, this Report is sent. He was there on that day. That particular Minister was there on that day.

SRI K. LAKKAPPA (Minister for Public Works).—I strongly protest. Where is the basis for making that allegation !

SRI K. PUTTASWAMY (Minister for Law, Labour and Parliamentary Affairs).—I raise a point of order.

SRI S. SIVAPPA.—I am not yielding. I am not going to sit unless there is a promise that the Minister for Minor Irrigation will go to the spot with me.

ಶ್ರೀ ಕೆ. ಪುಟ್ಟಸ್ವಾಮಿ.—ಪಾಯಿಂಟ್ ಆಫ್ ಆರ್ಡರ್ ಸರ್. ಕಾಲ್ ಅಟೆನ್ಷನ್ ನೋಟೀಸ್ ಮೇಲೆ ಒಂದು ವಿಷಯ ಹೇಳಿದ್ದಾರೆ. ಕ್ಲಾರಿಫಿಕೇಷನ್ ಬೇಕಾದರೆ ಕೇಳಿದರೆ ಉತ್ತರ ಹೇಳಬೇಕಾಗುತ್ತದೆ. ಇದರಮೇಲೆ ಈ ಸಂದರ್ಭದಲ್ಲಿ ಚರ್ಚೆಮಾಡುವುದು ಸಾಧ್ಯವೇ ?

ಅಧ್ಯಕ್ಷರು.—ಕ್ಲಾರಿಫಿಕೇಷನ್ ಕೇಳಿದ್ದಾರೆ. ಅದಕ್ಕೆ ಮಂತ್ರಿಗಳೇನ ಹೇಳುತ್ತಾರೆ ?

ಶ್ರೀ ಎ. ಜೆ. ದೊಡ್ಡಮೇಟಿ.—ಮಾನ್ಯ ಸದಸ್ಯರು ಕೇಳಿರುವುದಕ್ಕೆ ಉತ್ತರ ಹೀಗಿದೆ : ಕಂದಾಯ ಶಾಖೆಯಿಂದ ಲೋಕೋಪಯೋಗಿ ಶಾಖೆಗೆ ಈ ಕೆರೆ 1966ರಲ್ಲಿ ಬಂದಿದೆ. ಅದಕ್ಕೆ ಪೂರ್ವದಲ್ಲಿ ಈ ಕೆರೆ ಕಂದಾಯ ಶಾಖೆಯಲ್ಲಿತ್ತು. ಈ ಗೋಡೆ ಕಟ್ಟಿರುವುದು ಅನಧಿಕೃತವಾಗಿ, ನಾಲ್ಕು ಎಕರೆಗೆ ನೀರು ಕೊಟ್ಟಿರುವುದು ಕಂದಾಯ ಶಾಖೆಯಲ್ಲಿರುವಾಗ. ಈ ಕೆರೆ ಯಾವಾಗ ಕಟ್ಟಿದರು ಎಂದು ಪೂರ್ಣ ವಿವರ ತಿಳಿಯಲು ಪಿ. ಡಬ್ಲ್ಯು. ಶಾಖೆಯಲ್ಲಿ ನೋಡಿಸಿದೆ.

ಮಾನ್ಯ ವಿರೋಧ ಪಕ್ಷದ ನಾಯಕರು ಬಂದಿದ್ದರು ಅಂತ ಹೇಳಿ ಹೆಚ್ಚಿನ ಆಸಕ್ತಿ ವಹಿಸಿಯೇ ಹುಡುಕಾಡಿಸಿದೆ, ದಾಖಲೆ ಸಿಕ್ಕಿಲ್ಲ, ಕಾರಣ ಅದು ಪಿ. ಡಬ್ಲ್ಯು. ಡಿ. ದಾಖಲೆಯಲ್ಲಿ ಸಿಕ್ಕುವುದಿಲ್ಲ. ಎಂಟು-ಹತ್ತು ವರ್ಷದ ಲಾಗಾಯಿತಿನಿಂದ ಇದು ಹೀಗೆ ನಡೆದಿದೆ, ಈ ಹಿಂದೆ ತಕರಾರು ಯಾರಿಂದಲೂ ಬಂದಿಲ್ಲ. ಇತ್ತೀಚೆಗೆ ಮಾತ್ರ ಒಬ್ಬರಿಂದ ತಕರಾರು ಬಂದಿದೆ, ಅದನ್ನು ಪರಿಶೀಲಿಸಲಾಗಿ ಕಡವಿದವರು ಯಾರು ಅಂತ ಹೇಳುವುದಿಲ್ಲ, ಕಡವಿದ್ದನ್ನು ಹಾಗೆಯೇ ಬಿಡುವುದಕ್ಕಾಗುವುದಿಲ್ಲ, ಹಾಗೆಯೇ ಬಿಟ್ಟಿದ್ದರೆ ಅಧಿಕೃತ ಅಚ್ಚುಕಟ್ಟುದಾರರಿಗೆ ನೀರು ಹಾಯಿಸಲು ಆಗುತ್ತ ಇರಲಿಲ್ಲ, ಕಾರಣ ಈ ಗೋಡೆ ನಿರ್ಮಾಣ ಆಗಿದೆ ಇದು ಇತ್ತೀಚಿನ ಸಂಗತಿ, ಇದರ ಹೊರತಾಗಿ ತಾವು ಹೇಳುವಂತೆ ಆ ಭೂಮಿ ಯಾವುದೋ ಒಬ್ಬ ವ್ಯಕ್ತಿಗೆ ಸೇರಿದ್ದಲ್ಲ, ಅದು ಒಂದು ಟೆಂಪರ್ ಭೂಮಿ, ಯಾರೋ ಒಬ್ಬರು ಸಾಗುವಳಿ ಮಾಡುತ್ತಾರೆ. ನಾಲ್ಕು ಎಕರೆಗೆ ನೀರು ಕೊಡುವುದು ಬಹಳ "ಅಲ್ಪ—ನೆಗ್ಲಿಜಿಬಲ್" ಅಂತ ಆಂಗ್ಲಭಾಷೆಯಲ್ಲಿ ಹೇಳುತ್ತಾರೆ.

ಶ್ರೀ ಎಸ್. ಶಿವಪ್ಪ.—ಒಂದು ವಿಷಯ ತಮಗೆ ಹೇಳುತ್ತೇನೆ, ಮ್ಯೆನ್ ಚಾನಲ್ ಅಚ್ಚುಕಟ್ಟಿಗೆ ಹೋಗುತ್ತದೆ, ಈಗ ಅನಾಥರೈಸ್ಡ್ ಸಾಗುವಳಿ ಎಲ್ಲಿ ಇದೆ ಎಂದರೆ ಮೇನ್ ಕೆನಾಲಗಿಂತ ನಾಲ್ಕು ಅಡಿ ಎತ್ತರದಲ್ಲಿ ಇದೆ. ಅದಕ್ಕೆ ನೀರು ಹತ್ತಬೇಕಾದರೆ ಮೇನ ಕಾಲುವೆಗೆ ಅಡ್ಡ ಗೋಡೆ ಕಟ್ಟಿ ಆ ಎತ್ತರ ಭೂಮಿಗೆ ನೀರು ಹತ್ತುವಂತೆ ಅದನ್ನು ಪೂರೈಸಬೇಕು. ಶನಿವಾರದ ದಿವಸ ನಾನು ಇದನ್ನು ನೋಡುವುದಕ್ಕಾಗಿಯೇ ಹೋಗಿದ್ದೆ, ತಮಗೂ ಕೂಡ ನನ್ನ ಜೊತೆಯಲ್ಲಿ ಬನ್ನಿ ಎಂದು ಕರೆದೆ ತಾವು ಬರಲಿಲ್ಲ. ನಾಲ್ಕು ಎಕರೆಗೆ ನೀರು ಕೊಟ್ಟರೆ ಹತ್ತು ಎಕರೆಗೆ ತೊಂದರೆಯಾಗುತ್ತದೆ. ಅದು ಹೈಯರ್ ಲೆವೆಲ್‌ನಲ್ಲಿ ಇದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಮಾನ್ಯ ಸದಸ್ಯರು ಹೇಳುವುದರ ಅರ್ಥ ಅನಧಿಕೃತವಾಗಿ ನಾಲ್ಕು ಎಕರೆಗೆ ನೀರು ತೆಗೆದುಕೊಳ್ಳುತ್ತಾ ಇದ್ದಾರೆ ಅದನ್ನು ನಿಲ್ಲಿಸಬೇಕು ಅಂತ ತಾನೆ?

ಶ್ರೀ ಎಸ್. ಶಿವಪ್ಪ.—ಹೌದು.

ಶ್ರೀ ಎ. ಜೆ. ದೊಡ್ಡಮೇಟಿ.—ಈ ನಿವೇಶನದಲ್ಲಿ ವ್ಯವಸ್ಥಿತವಾಗಿ ಬರುವ ಬೆಳೆ, ಮತ್ತು ನೀರಾವರಿ ಅಧಿನಿಯಮ ಮತ್ತು ಅದರ ಮೇಲೆ ರಚಿತವಾದ ನಿಯಮಗಳಿಗನುಸಾರವಾಗಿ ಅವಶ್ಯ ಕ್ರಮ ಕೈಕೊಳ್ಳಲಾಗುತ್ತದೆ.

ಶ್ರೀ ಎಸ್. ಶಿವಪ್ಪ.—ತಾವು ಒಂದು ಸಾರಿ ಅಲ್ಲಿಗೆ ದರ್ಶನ ಕೊಟ್ಟರೆ ತಮಗೆ ಗೊತ್ತಾಗುತ್ತದೆ. ಬೇಕಾದರೆ ಬನ್ನಿ ನನ್ನ ಕಾರಿನಲ್ಲಿ ಕರೆದುಕೊಂಡು ಹೋಗುತ್ತೇನೆ ದರ್ಶನ ಮಾಡಿದರೆ ನೀವೇ ಒಪ್ಪಿಕೊಳ್ಳುತ್ತೀರಿ.

ಶ್ರೀ ಎ. ಜೆ. ದೊಡ್ಡಮೇಟಿ.—ಒಮ್ಮೆ ಬರುತ್ತೇನೆ.

(ii) *Five accidents that took place at Thammadihalli, Tumkur District.*

SRI B. GANGANNA (Tiptur).—I beg to call the attention of the Minister for Revenue to the fire accidents that took place at Thammadihalli, Gollarahatti, Huliyur Hobli, Chicknayakanahalli Taluk, Tumkur District.

† SRI H. V. KOUJALGI (Minister for Revenue)—A fire accident occured on the night 12-2-1969 at Thammadihally, Gollarhatti, Huliyur Hobli, Chicknayakanahalli Taluk. It was an accidental one. Except four tiled roofed houses, the remaining 136 thatched houses covered with coconut leaves caught fire and were burnt. One girl aged about ten years, one bullock, one buffalo, one calf, and one goat, were also burnt to death. The total loss is estimated at Rs. 1,72,050.

A sum of Rs. 5,000 was placed at the disposal of the Tahsildar, Chicknayakanahalli by the Deputy Commissioner, Tumkur for providing immediate relief to the sufferers. Out of the above allotment, a sum of Rs. 3,985 has been paid to the sufferers as per rules relating to grant of relief to sufferers in accidental fires. Besides, the Deputy Commissioner, Tumkur, has recommended to the Divisional Commissioner, Bangalore, as a special case, for grant of a cash relief of Rs. 200 to Smt. Sunkanda Ganganna Thimmakka who has lost her daughter in the fire accident.

On 13-2-69, the Assitant Commissioner, Tiptur Sub-Division, Tiptur visited the spot and distributed wheat freely to all the sufferers on the same day at 2 Kg. per adult and 1 Kg. per child. Earlier to this, the Tahsildar, Chicknayakanahalli taluk also visited the spot. The Deputy Commissioner also inspected the spot and viewed the situation.

It is reported that in addition to twenty quintals of wheat which was distributed free, another ten quintals of wheat has been permitted to be supplied freely and 50 quintals of Milo was set apart to be purchased by the sufferers. The Deputy Commissioner has also appealed to the public at Huliyur and C. N. Hally for rendering help to the sufferers. The Assistant Commissioner, Tiptur has been asked to acquire ten acres of land adjacent to the spot under emergency provisions of the Land Acquisition Act for providing sites to the sufferers. The land owners who are themselves residents and victims of the place have agreed to part with the land even before acquisition proceedings are completed.

The General Secretary, Indian Red Cross Society, Bangalore and the Secretary, Red Cross Society, Tumkur have also been requested to provide relief to the sufferers.

The District Social Welfare Officer, Tumkur, has been addressed to provide relief to the sufferers under amelioration funds by way of building materials, etc.

Bharat Sevak Samaj has come forward to provide assistance in the nature of food for work, *i.e.*, 2 Kgs. per labourer per day.

The Assistant Commissioner has collected a cash of Rs. 515, 69 Sarees, 22 Dhoties, 4 Frocks, 2 Towels, 1 Bed-sheet and 4 Kuppasas from the Philanthropic persons. He has proposed to purchase cloth from the cash collected from the Philanthropists and to distribute among the sufferers.

(SRI H. V. KOUJALGI)

The Divisional Forest Officer, Tumkur, has been addressed separately to supply free timber to the sufferers.

The Director of Food and Civil Supplies has permitted to issue 20 Kgs. of free wheat to each of the sufferers out of the free gift wheat allotted to Tumkur District.

Steps have been taken to render all possible help at all levels in this behalf.

ಶ್ರೀ ಬಿ. ಗಂಗಣ್ಣ.—ಸರ್ಕಾರದವರು ಇಷ್ಟು ಶೀಘ್ರವಾಗಿ ಈ ವಿಚಾರದಲ್ಲಿ ಅನುಕೂಲಗಳನ್ನು ಒದಗಿಸಿದುದಕ್ಕಾಗಿ ನಾನು ಸರ್ಕಾರಕ್ಕೆ ತುಂಬಾ ಚಿರಋಣಿಯಾಗಿದ್ದೇನೆ.

ಆದರೆ ಕಾನೂನಿನಲ್ಲಿ ಇಂಥ ಸಂದರ್ಭಗಳಲ್ಲಿ ತೊಂದರೆಗೊಳಗಾದವರಿಗೆ ತಲಾ 500 ರೂಪಾಯಿಗಳನ್ನು ದ್ರವ್ಯರೂಪದಲ್ಲೂ ಮತ್ತು ಸಾಮಾನುಗಳ ರೂಪದಲ್ಲೂ ಕೊಡುವುದಕ್ಕೆ ಅವಕಾಶವಿದೆ. ಆದರೆ ಈಗ ನೀಡಿರತಕ್ಕ ಅನುಕೂಲಗಳು ಅಷ್ಟು ಹೆಚ್ಚಿನವಲ್ಲ ಎಂದು ಕಂಡುಬರುವುದರಿಂದ, ಆ ಜನರಿಗೆ ನಗದು 250 ರೂಪಾಯಿಗಳನ್ನೂ ಮತ್ತು ಇನ್ನು ಉಳಿದ 250 ರೂಪಾಯಿಗಳಿಗೆ ಮನೆ ಕಟ್ಟಿಕೊಳ್ಳಲು ಮರದ ಸಾಮಾನುಗಳನ್ನೂ ಕೊಡಿಸುವುದಕ್ಕೆ ವ್ಯವಸ್ಥೆಮಾಡಬೇಕು ಅನ್ನುವುದು ಒಂದು. ಇದಾದ ನಂತರ ಆ ಬಡಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಮುಫತ್ತಾಗಿ ನಿವೇಶನಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು ಇದಕ್ಕೆಲ್ಲಾ ಅವಕಾಶ ಇಲ್ಲವೇ ಎಂಬುದನ್ನೂ ಕೂಡ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ವಿ. ಕೌಜಲಗಿ.—ಕಾನೂನು ಪ್ರಕಾರ ಎಷ್ಟು ಹಣ ಕೊಡಬೇಕೋ ಅಷ್ಟನ್ನು ಈಗಾಗಲೆ ಕೊಟ್ಟಾಗಿದೆ. ಬಾಕಿ ಮೆಟೀರಿಯಲ್ಸ್ ಕೊಡಿಸುವುದಕ್ಕೆ ವಿಚಾರ ಮಾಡುತ್ತೇನೆ.

ಶ್ರೀ ಬಿ. ಗಂಗಣ್ಣ.—ಆ ಒಂದು ಮಗು ಸತ್ತ ಕಡೆ ಕೊಟ್ಟಿರುವ 200 ರೂಪಾಯಿಗಳ ಪರಿಹಾರ ಬಹಳ ಕಡಮೆ. ಕನಿಷ್ಟಪಕ್ಷ 2,000 ರೂಪಾಯಿಗಳನ್ನಾದರೂ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ. —ಅದನ್ನು ನಾನು ವಿಚಾರ ಮಾಡುತ್ತೇನೆ.

Question of a Notice of Privilege *re* : the budget figures under the Education Demands for Grants for 1969-70

† ಶ್ರೀ ಎಂ. ನಾಗಪ್ಪ (ರಾಯಚೂರು).—ಮಾನ್ಯ ವಿದ್ಯಾಮಂತ್ರಿಗಳು ತಾರೀಖು 10–11ರಲ್ಲಿ ಡಿಮ್ಯಾಂಡ್ ನಂಬರು 17 ಮತ್ತು 28 ಈ ಸಭೆಯ ಮುಂದೆ ಮಂಡಿಸಿದರು. ಆ ಡಿಮ್ಯಾಂಡಿನಲ್ಲಿ ತೋರಿಸಿದಂಥ ಹಣ 46 ಕೋಟಿ 17 ಲಕ್ಷ 90 ಸಾವಿರ. ಮಾನ್ಯ ಹಣಕಾಸಿನ ಸಚಿವರು ಬಡ್ಜೆಟ್ ಎಸ್ಟಿಮೇಟ್ಸ್ ಪುಸ್ತಕದಲ್ಲಿ ಕೊಟ್ಟಿರುವ ಅಂಕಿ ಅಂಶದ ಪ್ರಕಾರ ಈ ರೀತಿ ಇದೆ. ವಿಶ್ವವಿದ್ಯಾನಿಲಯ ಸಲುವಾಗಿ 3,49,03,600, ಸೆಕೆಂಡರಿ ವಿದ್ಯಾಭ್ಯಾಸ ಅಂದರೆ, ಮಾಧ್ಯಮಿಕಕ್ಕಾಗಿ 9,36,11,800, ಪ್ರೈಮರಿ ಅಂದರೆ, ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ 23,06,19,900, ಮಹಿಳೆಯರ ವಿದ್ಯಾಭ್ಯಾಸಕ್ಕಾಗಿ, 1,16,44,000, ತಾಂತ್ರಿಕ ಶಿಕ್ಷಣಕ್ಕಾಗಿ 1,40,04,400 ಮತ್ತು ಸಾಮಾನ್ಯಕ್ಕಾಗಿ (ಜನರಲ್) 7,59,62,300 ಇದರಲ್ಲಿ ಮೊತ್ತ ಬಹುತೇಕ ತಪ್ಪಾಗಿದೆ. ವಾಸ್ತವಿಕವಾಗಿ ಮೊತ್ತ 46,07,46,000 ರೂಪಾಯಿಗಳು ಆಗುತ್ತದೆ. ಈಗ 46,06,47,000 ರೂಪಾಯಿಗಳನ್ನು ಕೊಟ್ಟಿದೆ. ಈಗ ಇವರು ಕೇಳುವಂಥ ಹಣದ ಅಂಕಿಅಂಶಗಳನ್ನು ನೋಡಿದರೆ, ಕೇಳಿದಂಥ ಹಣ 46,07,46,000 ರೂಪಾಯಿಗಳು ಆಗುತ್ತದೆ. ಆದರೆ ಸರ್ಕಾರದವರು ಕೇಳಿದ್ದು, 46,06,47,000 ರೂಪಾಯಿಗಳು ಸಾಧಾರಣವಾಗಿ 99 ಸಾವಿರ ರೂಪಾಯಿಗಳಷ್ಟು ವ್ಯತ್ಯಾಸವನ್ನು ಗಮನಿಸದೆ ಈ ಸಭೆಯ ಮುಂದೆ ಈ ಡಿಮ್ಯಾಂಡನ್ನು ಮಂಡನೆ ಮಾಡಿದ್ದಾರೆ. ಇವತ್ತು ರಾಜ್ಯಪಾಲರ ಅಪ್ಪಣೆಯನ್ನು ತೆಗೆದುಕೊಂಡು ಅವರು ಕೇಳಿರುವುದು 46,17,90,000

ರೂಪಾಯಿಗಳು. ವಾಸ್ತವಿಕವಾಗಿ ಈ ಬಜೆಟ್ ಪ್ರಕಾರ ಖರ್ಚಾಗುವುದು ಎಷ್ಟು ಅಂದರೆ 46,18,89,000 ರೂಪಾಯಿಗಳಾಗುತ್ತದೆ. ಈ ಲೆಕ್ಕದ ಪ್ರಕಾರ ಖರ್ಚು ಹೆಚ್ಚು ಮಾಡುತ್ತಿದ್ದರೂ ಕಡಿಮೆ ಬಜೆಟ್ಟನ್ನು ಈ ಸಭೆಯಲ್ಲಿಟ್ಟು ಕಡಿಮೆ ಡಿಮ್ಯಾಂಡ್ ತೋರಿಸಿ ತಪ್ಪುಲೆಕ್ಕವನ್ನು ಅವರು ಕೊಟ್ಟಿದ್ದಾರೆ. ಇದನ್ನು ನಾನು ನನ್ನ ಭಾಷಣದಲ್ಲಿ ಎಜುಕೇಷನ್ ಡಿಮ್ಯಾಂಡ್ ಮೇಲೆ ಮಾತನಾಡುವಾಗ ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ತಾವು ಕೇಳಿರತಕ್ಕ ಹಣ, ಈಗ ನೀವು ಡಿಮ್ಯಾಂಡ್ ಮಾಡುವ ಹಣಕ್ಕೆ 99 ಸಾವಿರ ರೂಪಾಯಿಗಳ ವ್ಯತ್ಯಾಸವಾಗುತ್ತದೆ, ದಯವಿಟ್ಟು ತಾವು ಗಮನಿಸಬೇಕು ಎಂದು ಆಗಲೇ ಹೇಳಿದೆ. ಇಂತಹ ಸಭೆಯಲ್ಲಿ ಇಷ್ಟು ದೊಡ್ಡ ಸೆಕ್ರೆಟೇರಿಯಟ್ಟಿನಿಂದ ಇಷ್ಟು ಹಣ ಖರ್ಚುಮಾಡುವಾಗ ಕ್ಯಾಲ್ಕುಲೇಷನ್ ತಪ್ಪಾದರೆ ಹೇಗೆ? 5-6 ಅಂಕಿಗಳಲ್ಲಿ ತಪ್ಪಾಗಿ ಸಾವಿರಾರು ರೂಪಾಯಿಗಳ ವ್ಯತ್ಯಾಸವಾಗಿದೆ. ಇಂತಹ ದೋಷವಿದೆ ಎಂಬುದಾಗಿ ತೋರಿಸಿದರೂ ಸರ್ಕಾರದವರು ಬಹಳ ನಿರ್ಲಕ್ಷ್ಯ ಮಾಡಿದ್ದಾರೆ. ಯಾರು ಆ ರೀತಿ ಅಭಿಪ್ರಾಯ ಕೊಟ್ಟರೋ? ನಾನು ಕೊಟ್ಟಿರುವ ಅಂಕಿ ಅಂಶಗಳನ್ನೂ ಸಹ ನೋಡಲಿ. ಯಾರಾದರೂ ನೀವು ಲೆಕ್ಕಪತ್ರ ಮಾಡಿರುವುದನ್ನು ತೆಗೆದುಕೊಂಡರೆ, ನೀವು ಕೇಳಿರತಕ್ಕ ಹಣ ಕಡಿಮೆ ಅಲ್ಲ ಖರ್ಚುಮಾಡಿರುವುದು 99 ಸಾವಿರ ರೂಪಾಯಿಗಳಷ್ಟು ಹೆಚ್ಚು. ನಿಮಗೆ ಸಮಯ ಕೊಟ್ಟು ತಿದ್ದಿಕೊಳ್ಳುವುದು ಇದ್ದರೆ ತಿದ್ದಿಕೊಳ್ಳಿ ಎಂಬುದಾಗಿ ನಾನು ಹೇಳಿದ್ದೇನೆ. ಈ ಡಿಮ್ಯಾಂಡ್ ಮೇಲೆ ಭಾಷಣ ಮಾಡುವಾಗ ಒಂದು ಮಿಸ್‌ಲೀಡಿಂಗ್ ಸ್ಟೇಟ್‌ಮೆಂಟ್ ಈ ಸಭೆಯಲ್ಲಿ ಮಾಡಿದರೆ, ಅದು ವಾಸ್ತವಿಕವಾಗಿ ಈ ಸಭೆಗೆ ಒಂದು ಅಗೌರವ ಸೂಚಿಸಿದಂತಾಗುತ್ತದೆ. ವಾಸ್ತವಿಕವಾಗಿ 99 ಸಾವಿರ ರೂಪಾಯಿಗಳ ವ್ಯತ್ಯಾಸವಾಗುತ್ತದೆ. ಇಲ್ಲಿ ತಪ್ಪು ಹೇಳಿಕೆ ಕೊಟ್ಟು ಬಜೆಟ್ ಭಾಷಣ ಮಾಡಿದ್ದಾರೆ. ಆದ್ದರಿಂದ ತಾವು ಫೈನಾನ್ಸ್ ಮಿನಿಸ್ಟರ್ ಮತ್ತು ಎಜುಕೇಷನ್ ಮಿನಿಸ್ಟರ್ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಬೇಕೆಂದು ತಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ. ಆ ಒಂದು ಮೋಷನ್ ಇಲ್ಲಿ ಮೂವ್ ಮಾಡುವುದಕ್ಕೆ ನನಗೆ ಪರ್ಮಿಷನ್ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

2–30 P.M.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಮಾನ್ಯ ಸದಸ್ಯರು ಹೇಳಿದಂತಹ ವಿಚಾರವನ್ನು ನಾನು ಸಂಪೂರ್ಣವಾಗಿ ಕೇಳಿದೆ. ಮೊದಲು ಈ ವಿಚಾರ ಏನಿದೆ ಎಂಬುದನ್ನು ಹೇಳಿ, ಆಮೇಲೆ ಪ್ರಿವಿಲೇಜಿಗೆ ಇದು ಸಂಬಂಧವಾಗುತ್ತದೋ ಇಲ್ಲವೋ ಎಂಬುದನ್ನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಸದಸ್ಯರ ವಾದಸರಣಿ ಏನೆಂದರೆ, ಎ ಯಿಂದ ಎಫ್‌ನವರೆಗೆ ಇರತಕ್ಕಂತಹ ಮೂರು, ಮೂರು, ಅಂದರೆ, 6 ಐಟಮುಗಳನ್ನು ಏನು ಹೇಳಿದರು, ಆ 6 ಐಟಮಿನ ಒಟ್ಟು ಮೊತ್ತವು 46 ಕೋಟಿ 7 ಲಕ್ಷ, 46 ಸಾವಿರ ರೂಪಾಯಿ. ಅದಕ್ಕೆ ಬದಲಾಗಿ 46 ಕೋಟಿ 6 ಲಕ್ಷ 47 ಸಾವಿರ ಎಂದು ತೋರಿಸಿದ್ದಾರೆ, ಇದು ಒಂದನೇ ತಪ್ಪು ಎಂದು ಹೇಳಿದರು. ಇನ್ನು ಮೇಲ್ಗಡೆ ಇರತಕ್ಕಂತಹ ಹೆಚ್ಚು ಹಣ ಖರ್ಚು ಮಾಡಿದರೂ, ಇಲ್ಲಿ ಕಡಿಮೆ ತೋರಿಸಿದ್ದಾರೆ ಆಮೇಲೆ ರಿಕವರೀಸ್ ಐಟಮು 11 ಲಕ್ಷದ 43 ಸಾವಿರ ರೂಪಾಯಿ ಇದೆ, ಅದನ್ನು ಸೇರಿಸಿದ್ದಾರೆ. ಓಟೆಡ್ ಮೊಬಲಗು ಮತ್ತು ವಸೂಲಿಗಳು ಇವೆರಡನ್ನೂ ಸೇರಿಸಿದರೆ, 46 ಕೋಟಿ 17 ಲಕ್ಷ, 90 ಸಾವಿರ ರೂಪಾಯಿಯಾಗುತ್ತದೆ. ಕೇಳಿದಂತಹ ವೇಳೆಯಲ್ಲಿ ಆ ಮೊಬಲಗನ್ನು ಕೈ ಬಿಟ್ಟಿದ್ದಾರೆ ಮತ್ತು ಈ ಸಭೆಗೆ ವಂಚನೆ ಮಾಡಿದ್ದಾರೆಂದು ಹೇಳಿದರು. ಮಾನ್ಯ ಸದಸ್ಯರ ಒಂದನೇ ಭಾವನೆಯಲ್ಲಿ 46,06,47,000 ವೋಟೆಡ್, ಪುರಸ್ಕೃತ. ಚಾರ್ಜ್‌ಡ್ 99,000 ಎಂದು. ಇವೆರಡೂ ಸೇರಿಸಿದರೆ, 46 ಕೋಟಿ 7 ಲಕ್ಷ, 46 ಸಾವಿರವಾಗುತ್ತದೆ. ಮೊದಲನೆಯ ಐಟಮು, ತಪ್ಪಾಗಿ ಸೇರಿಸಿದ್ದಾರೆ. ಆ ಮೇಲೆ 6 ಐಟಮಿನಲ್ಲಿ ಚಾರ್ಜ್‌ಡ್ ಐಟಮು ಸೇರಿಸಿದೆ. ಆದ್ದರಿಂದ ಎರಡೂ ಮೊಬಲಗು ಸೇರಿಸಿದರೆ, 6 ಮೊಬಲಗುಗಳ ಜುಮ್ಲಾವಾಗುತ್ತದೆ. ಆ ಕಾರಣದಿಂದ ಯಾವ ದೋಷವೂ ಆಗಿಲ್ಲ. 46,17,90,000 ರೂಪಾಯಿ ಕೇಳಿದ್ದಾರೆ. 99,000 ಚಾರ್ಜ್‌ಡ್ ಐಟಮು ಆಗಿರುವುದರಿಂದ.........

Sri M. NAGAPPA.—You are Committing another mistake.

ಶ್ರೀ ಕೆ. ಪುಟ್ಟಸ್ವಾಮಿ.—ಇಲ್ಲಿ ಏನಾದರೂ ಹೇಳಿದರೆ, ಅದು ತಪ್ಪು ಎಂದು ಹೇಳುತ್ತಾರೆ. 99,000 ಎನ್ನುವುದು ಇದಕ್ಕೆ, ನಮ್ಮ ಓಟು ಬೇಕಾಗಿಲ್ಲ. ಎರಡನೆಯದು, ಒಂದು ಪಕ್ಷ 6 ಐಟಮುಗಳಿಗೆ 46 ಕೋಟಿ 6 ಲಕ್ಷ 47 ಸಾವಿರ ರೂಪಾಯಿಯನ್ನು ಖರ್ಚು ಮಾಡಿದಂತಹ ಸಂದರ್ಭದಲ್ಲಿ, ನಾವು ಕಡಿಮೆ ಹಣ ಕೇಳಿದ್ದರೆ, ಆದರಿಂದ ದೋಷವೇನೂ ಇಲ್ಲ. 57 ಕೋಟಿ ರೂಪಾಯಿ ತೋರಿಸಬಹುದು; ಡಿಮ್ಯಾಂಡ್ ಇಡುವ ವೇಳೆಯಲ್ಲಿ ಕಡಿಮೆ ಇಡಬಹುದು.

(ಶ್ರೀ ಕೆ. ಪುಟ್ಟಸ್ವಾಮಿ)

ಇನ್ನೊಂದು ತಪ್ಪು ಏನೆಂದರೆ, ಈ ಸಭೆ ಎಷ್ಟು ಹಣವನ್ನು ಒದಗಿಸಿ ಕೊಡುತ್ತದೆ, ಆ ಹಣಕ್ಕೆ ಮಿಗಿಲಾಗಿ ಖರ್ಚು ಮಾಡಿದರೆ, ನಾವು ದೋಷಕ್ಕೆ ಒಳಗಾಗುತ್ತೇವೆ. ಇಲ್ಲಿ ಅಂಥ ದೋಷಗಳೇನೂ ಆಗಿಲ್ಲ. ಪುಸ್ತಕದಲ್ಲಿ ಇರುವುದು ಒಂದೇ, ನಾವು ಬೇಡಿಕೆ ಕೇಳುವುದೂ ಒಂದೇ. ಆದ್ದರಿಂದ ಅದು ಹಕ್ಕುಬಾಧ್ಯತೆಯ ಲೋಪವಾಗುತ್ತದೆ ಎಂದು ತಿಳಿದುಕೊಳ್ಳುವುದು ಶುದ್ಧಾಂಗ ತಪ್ಪು. ಹಕ್ಕುಬಾಧ್ಯತೆ ಲೋಪವಾಗಬೇಕಾದರೆ ಅದು ಸರಿಯಲ್ಲ ಎಂದು ತಿಳಿದೂ ತಿಳಿದೂ ಈ ಸಭೆಗೆ ವಂಚನೆ ಮಾಡುವ ದೃಷ್ಟಿಯಿಂದ ತೋರಿಸಿದ್ದರೆ ಆಗ ಮಾತ್ರ ಹಕ್ಕುಬಾಧ್ಯತೆ ಲೋಪವಾಗುತ್ತದೆಯೇ ವಿನಾ ಇಲ್ಲದಿದ್ದರೆ ಹಕ್ಕುಬಾಧ್ಯತೆ ಲೋಪವಾಗುವುದಿಲ್ಲ. ಇತ್ತೀಚೆಗೆ ಈ ಸಭೆಯಲ್ಲಿ ಒಂದು ವಿಚಾರ ಪದೇ ಪದೇ ಬರುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈ ವಿಚಾರವನ್ನು ಪರಿಶೀಲನೆಮಾಡಿ ಒಂದು ಸಮಗ್ರವಾದ ತಮ್ಮ ತೀರ್ಮಾನವನ್ನು ಕೊಡುವುದು ಅತ್ಯಂತ ಅವಶ್ಯಕ. ಯಾವುದೋ ಒಂದುವೇಳೆಯಲ್ಲಿ ಅಂಕಿ ಅಂಶಗಳು ತಪ್ಪಾಗಿದ್ದಾರೆ, ಅದು ಹಕ್ಕುಬಾಧ್ಯತಾ ಲೋಪವಾಗುತ್ತದೆಯೇ ಹೇಗೆ ಎನ್ನುವ ವಿಚಾರವನ್ನು ಸಮಗ್ರವಾಗಿ ತೀರ್ಮಾನವಾಗತಕ್ಕದ್ದು ಅವಶ್ಯಕ ಎಂದು ನಾನು ಭಾವನೆ ಮಾಡುತ್ತೇನೆ. ಈಗ ಮಾನ್ಯ ಸದಸ್ಯರು ಸೂಚಿಸಿರತಕ್ಕ ಹಕ್ಕುಬಾಧ್ಯತಾ ಪ್ರಶ್ನೆ ಇದರಲ್ಲಿ ಏಳುವುದಿಲ್ಲ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಮಾನ್ಯ ಮಂತ್ರಿಗಳು ಕೊಟ್ಟ ಹೇಳಿಕೆಯನ್ನು ನಾನು ಕೇಳಿದೆ. ಅವರು ಸಂಖ್ಯೆಗಳಲ್ಲಿ ತಪ್ಪು ಭಾವನೆ ಮಾಡಿಕೊಂಡಿದ್ದಾರೆ ಎನ್ನತಕ್ಕಂಥಾ ಭಾವನೆ ನನಗೆ ಬಂದಿದೆ. ಒಂದು ಐಟಂ ಬಿಟ್ಟು ಇನ್ನೊಂದು ಐಟಂ ನೋಡಿದರೆ ಗೊತ್ತಾಗುತ್ತದೆ. ವೋಟೆಡ್ ಅಕೌಂಟ್ ಚಾರ್ಜ್ಡ್ ಅಕೌಂಟ್ ಬೇರೆ ಬೇರೆ ಇದೆ. ಪ್ರತಿಯೊಂದು ಐಟಂಗೂ ಚಾರ್ಜ್ಡ್ ಬೇರೆ ಬರುತ್ತದೆ, ವೋಟೆಡ್ ಬೇರೆ ಬರುತ್ತದೆ. ಚಾರ್ಜ್ಡ್ ಸಪರೇಟ್ ಕ್ಯಾಲ್ಯುಕೇಷನ್ ಆಗುತ್ತದೆ. ವೋಟೆಡ್‌ನಲ್ಲಿ ಎಷ್ಟು ಅಮೌಂಟನ್ನು ಕೇಳಿದೆ, ಚಾರ್ಜ್ಡ್‌ನಲ್ಲಿ ಎಷ್ಟು ಅಮೌಂಟನ್ನು ಕೇಳಿದೆ ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ. ಈಗ ವೋಟೆಡ್‌ನಲ್ಲಿ 46,06,47,000 ರೂಪಾಯಿಗಳು. ಚಾರ್ಜ್ಡ್ 99,000, ಒಟ್ಟು ಮೊತ್ತ 46,07,46,000 ರೂಪಾಯಿಗಳು ಆಗುತ್ತದೆ. ರಿಕವರೀಸ್ 11,43,000 ರೂಪಾಯಿಗಳು, ಟೋಟಲ್ ಅಮೌಂಟ್ 46,18,89,000 ರೂಪಾಯಿಗಳು ಆಗುತ್ತದೆ. ಇದರಲ್ಲಿ ವೋಟೆಡ್ 46,17,90,000 ರೂಪಾಯಿಗಳು ಇದೆ. ಇದು ರಾಂಗ್ ಅಮೌಂಟ್. 99 ಸಾವಿರ ರೂಪಾಯಿಗಳು ವ್ಯತ್ಯಾಸ ಇದೆ. ಈಗ ಟೋಟಲ್ ಅಮೌಂಟ್ 46,18,89,000 ರೂಪಾಯಿಗಳು ಏನಿದೆ ಅದಕ್ಕೆ ಚಾರ್ಜ್ಡ್ ಅಮೌಂಟ್ 99 ಸಾವಿರ ರೂಪಾಯಿಗಳನ್ನು ಕೂಡಿಸಿದರೆ ಅದು ತಪ್ಪಾಗುತ್ತದೆ.

ಶ್ರೀ ಕೆ. ವಿ. ಶಂಕರಗೌಡ.—ಅದರಲ್ಲಿ 99 ಸಾವಿರ ರೂಪಾಯಿಗಳನ್ನು ಕಳೆಯಬೇಕು.

ಶ್ರೀ ಎಂ. ನಾಗಪ್ಪ.—ಈಗ ಮಾನ್ಯ ಮಂತ್ರಿಗಳು 99 ಸಾವಿರ ರೂಪಾಯಿಗಳನ್ನು ಕಳೆಯಿರಿ ಎಂದು ಹೇಳುತ್ತಿದ್ದಾರೆ. ಇದು ಇನ್ನೊಂದು ಪಬ್ಲಿಕ್ ಹೆಡ್‌ನಲ್ಲಿ ನೋಡಿದರೆ ತಮಗೆ ಗೊತ್ತಾಗುತ್ತದೆ. ವೋಟೆಡ್ ಅಕೌಂಟ್ ಮತ್ತು ಚಾರ್ಜ್ಡ್ ಅಕೌಂಟ್ ಬೇರೆ ಬೇರೆ ಇಟ್ಟಿದ್ದಾರೆ. ಎರಡನ್ನೂ ಕೂಡಿಸಿ ಯಾವುದರಲ್ಲೂ ತಂದಿಲ್ಲ. ಆ ತರಹ ತರುವುದಕ್ಕೆ ಬರುವುದಿಲ್ಲ. ಚಾರ್ಜ್ಡ್ ಅಕೌಂಟ್ ಈ ಸಭೆಯಲ್ಲಿ ವೋಟಿಗೆ ಬರುವುದಿಲ್ಲ ಇದರಲ್ಲಿ ಸ್ಪಷ್ಟವಾಗಿ ಇದೆ. ತಪ್ಪು ಅಂಕಿಗಳನ್ನು ಕೊಟ್ಟಿದ್ದಾರೆ. ಆದರೆ ಹೆಚ್ಚು ಹಣ ಖರ್ಚು ಮಾಡುವುದಿಲ್ಲವೆಂದು ಹೇಳುತ್ತಾರೆ. ಯೂನಿವರ್ಸಿಟಿಯ ಬಗ್ಗೆ ಕಡಿಮೆ ಖರ್ಚು ಮಾಡುವುದಕ್ಕೆ ಸಾಧ್ಯವಿದೆ. ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳನ್ನು ಲೆಕ್ಕ ಹಾಕಿದರೆ 99 ಸಾವಿರ ರೂಪಾಯಿಗಳು ಹೆಚ್ಚಾಗಿದೆ. ಈ ವಿಚಾರದಲ್ಲಿ ಮಾನ್ಯ ಸಭೆಗೆ ಮೋಸ ಮಾಡಿದ್ದಾರೆಂದು ನಾನು ಮತ್ತೊಮ್ಮೆ ಒತ್ತಾಯ ಮಾಡಿ ಹೇಳುತ್ತೇನೆ. ಈ ಬಗ್ಗೆ ತಮಗೆ ಬೇಕಾದರೆ ಲೆಕ್ಕಪತ್ರಗಳನ್ನು ಒದಗಿಸಿಕೊಡುತ್ತೇನೆ.

Mr. SPEAKER.—I shall consider all aspects of the case put forth by the hon. Member.

ಶ್ರೀ ಎಂ. ನಾಗಪ್ಪ.—ಇದು ಮೊದಲನೆಯ ಸಾರಿ ಅಲ್ಲ. ಇಂತಹ ವಿಚಾರಗಳನ್ನು ಅನೇಕ ಸಾರಿ ಸಭೆಯ ಗಮನಕ್ಕೆ ತಂದಿದ್ದೇನೆ. ಮತ್ತು ಸಂಬಂಧಪಟ್ಟ ಮಾನ್ಯ ಮಂತ್ರಿಗಳ ಗಮನಕ್ಕೂ ಸಹ ತಂದಿದ್ದೇನೆ. ಇದು ಅರ್ಥಮೆಟಿಕಲ್ ಎರರ್ ಅಲ್ಲ, ಇದನ್ನು ಬೇಕಾಗಿಯೇ ಮಾಡಿದ್ದಾರೆ. ಆದರೂ ಸಹ ಮಂತ್ರಿಗಳು ಸರಿಯಾಗಿದೆ ಎಂದು ವಾದ ಮಾಡುತ್ತಿದ್ದಾರೆ. ಆದ್ದರಿಂದ ತಾವೇ ಈ ತಪ್ಪನ್ನು ಅವರಿಗೆ ತೋರಿಸಿಕೊಡಬೇಕು. ಮತ್ತು ಈ ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ಕಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—May I know whether the Hon. Minister for Education would like to say anything ?

Sri K. V. SHANKARA GOWDA.—No, Sir.

Mr. SPEAKER.—I have heard both sides. I shall apply my mind to all the points brought out and give my Ruling later. I shall send for the hon. Member Sri Nagappa to help me in this matter, and the representatives of both the Education and the Finance Ministry also.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾನು ಒಂದು ಪ್ರಿವಿಲೇಜ್ ಮೋಷನ್ ಕಳಿಸಿದ್ದೆ. ನೆನ್ನೆಯ ಒಂದು ವಿಚಾರದಲ್ಲಿ ಈ ದಿನ ರೂಲಿಂಗ್ ಕೊಡುತ್ತೇನೆಂದು ಸಹ ಹೇಳಿದ್ದಿರಿ.

ಅಧ್ಯಕ್ಷರು.—ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಅವಕಾಶ ಕೊಡುತ್ತೇನೆಂದು ನಾನು ವಚನ ಕೊಟ್ಟಿದ್ದೇನೆ. ಆ ವಿಚಾರವನ್ನು ಬಿಟ್ಟು ಬೇರೆ ವಿಷಯಗಳನ್ನು ಹೇಳಬೇಕಾದರೆ ನನ್ನ ಛೇಂಬರಿಗೆ ಬರಬಹುದು. ಅದನ್ನು ಇಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿಯೇ ಅವಕಾಶ ಕೊಡಬೇಕು.

ಅಧ್ಯಕ್ಷರು.—ಇಲ್ಲಿ ಹೇಳುವುದಕ್ಕೆ ಈಗ ಅವಕಾಶ ಕೊಡುವುದಿಲ್ಲ. ಏಕೆಂದರೆ ಸೋಷಿಯಲ್ ವೆಲ್‌ಫೇರ್ ಡಿಮ್ಯಾಂಡನ್ನು ಎರಡೂವರೆ ಗಂಟೆಯಲ್ಲಿ ಮುಗಿಸಬೇಕಾಗಿದೆ. ನಂತರ ಖಾಸಗೀ ನಿರ್ಣಯವನ್ನು ತಗೆದುಕೊಳ್ಳಬೇಕಾಗಿದೆ. ಹೋದ ಸಲ ತೆಗೆದುಕೊಳ್ಳಲಿಲ್ಲವೆಂದು ಮಾನ್ಯ ಸದಸ್ಯರುಗಳು ತಕರಾರು ಮಾಡಿದ್ದರು. ಆದಕಾರಣ ಬೇರೆ ವಿಷಯಗಳನ್ನು ಈಗ ಚರ್ಚೆ ಮಾಡಿದರೆ ಸೋಷಿಯಲ್ ವೆಲ್‌ಫೇರ್ ಡಿಮ್ಯಾಂಡ್ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಹೆಚ್ಚು ಸಿಗುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಕಂದಾಯದ ಬಗ್ಗೆ ರೆವಿನ್ಯೂ ಮಂತ್ರಿಗಳು ಹೇಳಿಕೆ ಕೊಡುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು.—ಅದನ್ನು ಸಹ ಹೇಳುತ್ತೇನೆ. ಈಗ ಹರಿಜನ ಗಿರಿಜನರ ಬಗ್ಗೆ ಚರ್ಚೆ ಮಾಡಲು ಸಾಕಷ್ಟು ಅವಕಾಶ ಬೇಕಾಗಿದೆ. ಆದ್ದರಿಂದ ಶ್ರೀ ವಾಟಾಳ್ ನಾಗರಾಜ್ ಅವರಿಗೆ ಶ್ರೀ ಬೊಮ್ಮಾಯಿ ಅವರ ಬಗ್ಗೆ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಈ ಡಿಮ್ಯಾಂಡ್ ಮುಗಿದ ಮೇಲೆ ಅವಕಾಶ ಕೊಡುತ್ತೇನೆ. ಏಕೆಂದರೆ ಶ್ರೀ ಬೊಮ್ಮಾಯಿ ಅವರಿಗೂ ಅವಕಾಶ ಕೊಡಬೇಕಾಗುತ್ತದೆ. ಬೇರೆ ವಿಚಾರಗಳನ್ನು ಹೇಳಬೇಕಾದರೆ ನನ್ನ ಛೇಂಬರ್‌ಗೆ ಬನ್ನಿ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನೆನ್ನೆದಿವಸ ಶ್ರೀಮಾನ್ ಕೃಷ್ಣನ್ ಅವರನ್ನು ಪೋಲೀಸಿನವರು ಅರೆಸ್ಟ್ ಮಾಡುವ ಸಮಯದಲ್ಲಿ ಅವರಲ್ಲಿದ್ದ 45 ರೂಪಾಯಿಗಳನ್ನು ಪಿಕ್‌ಪಾಕೆಟ್ ಮಾಡಿದ್ದಾರೆ. ಆ ಬಗ್ಗೆ ಹೇಳುವುದಕ್ಕೆ ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗ ಅವಕಾಶ ಕೊಡುವುದಿಲ್ಲ. ನೆನ್ನೆದಿವಸ 3–4 ಜನ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಕೇಳಿದ್ದೇನೆ. ಮತ್ತೆ ಹೇಳುವುದಿದ್ದರೆ ನನ್ನ ಛೇಂಬರಿಗೆ ಬನ್ನಿ.

* * * *

Mr. SPEAKER.—Next, item......

Sri M. S. KRISHNAN.—I strongly protest against the hon. Chair for not giving me an opportunity to make a personal explanation. In protest, and stage a walk-out.

(Hon. Member Sri M. S. Krishnan withdrew)

ಶ್ರೀ ಎಸ್. ಶಿವಪ್ಪ.—ಮಾನ್ಯ ಕಂದಾಯ ಮಂತ್ರಿಗಳು 14ನೇ ತಾರೀಖಿನ ದಿನ ಭೂ ಕಂದಾಯದ ಬಗ್ಗೆ ಸರಕಾರದ ಸ್ಪಷ್ಟ ನಿಲುವೇನು ಎನ್ನುವ ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದರು. ಈಗ ಪ್ರಶ್ನೋತ್ತರದ ವೇಳೆಯಾಗಿ ಮುಗಿದಿರುವುದರಿಂದ ತಮ್ಮ ಮೂಲಕ ಅವರನ್ನು ಇಲ್ಲಿ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**** Matter not recorded as ordered by the Chair.

ಅಧ್ಯಕ್ಷರು.—ಅದನ್ನು ಈಗಲೇ ಹೇಳಬಹುದೋ ಇಲ್ಲವೋ ಎಂದು ಯೋಚನೆ ಮಾಡುತ್ತಿದ್ದೇನೆ. ಏಕೆಂದರೆ ಅದರಿಂದ ಇಂದಿನ ಡಿಮ್ಯಾಂಡಿಗೆ ವೇಳೆ ಕಡಿಮೆಯಾಗಬಹುದು. If the hon. Member agree, it may be taken up either now or at the end.

Sri H. SIDDAVEERAPPA.—I submit to the Hon. Chair that I want some time for a personal explanation on what the Hon. Chief Minister had to say yesterday during the course of his reply to the demands for grants, in respect of the points I raised about two of his hon. colleagues. The way in which he read out tearing-out of content might create a mockery in the minds of the public whether there was any substance in my allegations or not. Therefore, I want sometime to make a personal explanation. The Hon. Chair may kindly permit me at any time according to its convenience.

Mr. SPEAKER.—All right. Now, let the Hon. Minister for Revenue make his statement.

Statement of the Minister for Revenue *re*: Collection of Arrears of Land Revenue in the State

† **Sri H. V. KOUJALGI** (Minister for Revenue).—Sir, some of the hon. Members wanted that copies of the circular should be distributed to them. The circular copies would be ready within half-an-hour and I am prepared to make the statement to-day itself, at any cost.

ಶ್ರೀ ಎಚ್. ಎನ್. ನಂಜೇಗೌಡ.—ಸರ್ಕ್ಯುಲರು ಬೇಕಾದರೆ ಆಮೇಲೆ ಕೊಡಬಹುದು. ಅದು ನಿದಾನವಾಗಿ ಬರಲಿ, ಈಗ ಅವರು ತಮ್ಮ ಸ್ಟೇಟುಮೆಂಟು ಮಾಡಬಹುದು.

Sri N. A. CHANNE GOWDA.—Let the Hon. Minister make a statement now itself and circular copies may be supplied to hon. Members afterwards, Sir.

Sri L. SRIKANTIAH.—Sir, I would like to know whether the order of the Hon. Chair "not to be recorded" has been revoked?

Mr. SPEAKER.—Yes. Whatever hon. Member Sri Srikantiah is now speaking is being recorded. I would like to know from the hon. Member whether he is making a suggestion that the statement should be made by the Hon. Minister for Revenue after the circular copies are distributed to members.

Sri L. SRIKANTIAH.—The Hon. Minister may make a statement now and I wish that circular copies are sent to the Members as early as possible.

Mr. SPEAKER.—The hon. Members may offer their comments or remarks during my debate on the demands in respect of Land Revenue. Now, let the Hon. Minister for Revenue make the statement.

† ಶ್ರೀ ಹೆಚ್. ವಿ. ಕೌಜಲಗಿ.—ಸ್ವಾಮಿ, ಈ ತಿಂಗಳು ಏಳನೇ ತಾರೀಖು ರೆವಿನ್ಯೂ ಖಾತೆಗೆ ಸಂಬಂಧಿಸಿದ ಬೇಡಿಕೆಗಳನ್ನು ಮಂಡಿಸಲಿಕ್ಕೆ ಎದ್ದಾಗ ವಿರೋಧಪಕ್ಷದ ಮಾನ್ಯ ನಾಯಕರು ಕೆಲವು ಪ್ರಶ್ನೆಗಳನ್ನು ಹಾಕಿದರು. ಸರಕಾರ ಈ ಲ್ಯಾಂಡು ರೆವಿನ್ಯೂ ಪದ್ಧತಿಯು ಬಗ್ಗೆ ಅಥವಾ ಅದರ

ವಸೂಲಾತಿಯ ಬಗ್ಗೆ ಹೀಗೆ ಅದಕ್ಕೆ ಸಂಬಂಧಿಸಿದ ಇನ್ನೂ ಇತರ ವಿಚಾರಗಳ ಬಗ್ಗೆ ಅನೇಕ ಸಾರಿ ಸರ್ಕ್ಯುಲರುಗಳನ್ನು ಹೊರಡಿಸಿರುವುದು ಸರಿಯಲ್ಲ ಎನ್ನುವುದು ಒಂದು ಪ್ರಶ್ನೆ. ಎರಡನೇದು, ರೀ ಸೆಟಲ್‌ಮೆಂಟು ಆದನಂತರ ಅನೇಕ ಕಡೆ ಕಂದಾಯದ ದರ ಹೆಚ್ಚಾಗಿದೆ ಇದನ್ನು ಹಳೇ ದರ ದಲ್ಲಿಯೇ ವಸೂಲು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರೂ ಆ ಆಶ್ವಾಸನೆಗೆ ವಿರುದ್ಧ ಸರಕಾರ ದವರು ವಸೂಲು ಮಾಡುತ್ತಿದ್ದಾರೆ, ಮತ್ತು ಕಳೆದ ಮೂರು ವರ್ಷಗಳಲ್ಲಿ ಪೀಕು ಸರಿಯಾಗಿ ಬಂದಿಲ್ಲ ಎಂದು ಹೇಳಿದರೂ ಅಧಿಕಾರಿಗಳು ಬಹಳ ಜಬರ್ದಸ್ತಿನಿಂದ ಕಂದಾಯದ ವಸೂಲ ಮಾಡುತ್ತಿದ್ದಾರೆ. ಈ ಪ್ರಸಂಗದ ಬಗ್ಗೆ ಸರಕಾರದವರು ತಮ್ಮ ನಿಲುವು ಏನು ಎನ್ನುವುದನ್ನು ಹೇಳಿದರೆ ಈ ಬೇಡಿಕೆಗಳ ಚರ್ಚೆ ಮಾಡಲಿಕ್ಕೆ ಹೆಚ್ಚಾಗಿ ಅನುಕೂಲತೆಯಾಗುತ್ತದೆ ಎಂದು ಹೇಳಿದ್ದರು. ಈ ದೃಷ್ಟಿಯಿಂದ ಸರಕಾರದವರು ಉತ್ತರ ಹೇಳಬೇಕು ಎಂದು ಕೇಳಿದುದರಿಂದ ಹೇಳುತ್ತಿದ್ದೇನೆ. ಇದನ್ನು 15ನೇ ತಾರೀಖನಂದು ಹೇಳಬೇಕಾಗಿತ್ತು ಮತ್ತು ಈ ಬೇಡಿಕೆಗಳನ್ನು ಮಂಡಿಸುವುದಕ್ಕೆ ಮುಂಚಿತವಾಗಿ ಇದನ್ನು ಹೇಳಬೇಕು ಎಂದು ಇಲ್ಲಿ ನಿರ್ಣಯವಾಯಿತು. ಅದಕ್ಕಾಗಿ ನಾನೀಗ ನಾಲ್ಕು ಮಾತು ಗಳನ್ನು ಹೇಳುತ್ತೇನೆ. ಸರಕಾರದವರು ಕೃಷಿ ಹಾಗೂ ಭೂಕಂದಾಯವನ್ನು ತೆಗೆಯುತ್ತೇವೆ ಎಂದು ಯಾವಾಗಲೂ ಹೇಳಲಿಲ್ಲ. The Land Revenue will be abolished in its present form ಎಂದು ಇದೆ. ಈ ಮಾತನ್ನು ಫೈನಾನ್ಸ್ ಮಿನಿಸ್ಟರು ಹೇಳಿದ್ದಾರೆ. ಅನಂತರ ಅನೇಕ ಸಾರಿ ಈ ಸಭೆಯ ಹೊರಗೆ ಈಗಿರುವ ಭೂಕಂದಾಯವನ್ನು ಈಗಿರತಕ್ಕ ರೀತಿಯಲ್ಲೇ ಮುಂದುವರಿಸಬೇಕು ಇದನ್ನು ಬದಲಾಯಿಸಬಾರದು, ಬದಲಾಯಿಸಿ ಬೇರೆ ತೆರಿಗೆ ಹಾಕಿದರೆ ಅದರಿಂದ ಜನರಿಗೆ ಹೆಚ್ಚು ಕಷ್ಟವಾಗುತ್ತದೆ ಎಂದು ಅನೇಕ ಕಡೆಗಳಿಂದ ಸರಕಾರಕ್ಕೆ ಒತ್ತಾಯಗಳು ಬಂದುದರಿಂದ ರಿವಿಷನ್ ಮಾಡಿರುವ ಬಗ್ಗೆ ಸರಕಾರದವರು ಪುನಃ ವಿಚಾರ ಮಾಡಿ ಈಗಿರುವ ಪದ್ಧತಿಯನ್ನೇ ಮುಂದುವರಿಸಬೇಕು ಎಂದು ಅನೇಕ ಸಾರಿ ಚೀಫ್ ಮಿನಿಸ್ಟರವರೂ ಹೇಳಿದ್ದಾರೆ; ಫೈನಾನ್ಸ್ ಮಿನಿಸ್ಟರವರೂ ಹೇಳಿದ್ದಾರೆ. ಸರಕಾರದವರು ಈಗಿರುವ ಕಂದಾಯದ ಪದ್ಧತಿಯನ್ನೇ ಮುಂದುವರಿಸಬೇಕು ಎಂದು ನಿರ್ಣಯ ತೆಗೆದುಕೊಂಡಿದ್ದಾರೆ. ಅಷ್ಟೇ ಅಲ್ಲ. ಈಗ ಬರತಕ್ಕ ಕಂದಾಯವನ್ನೆಲ್ಲಾ ತಾಲ್ಲೂಕು ಬೋರ್ಡುಗಳಿಗೆ ಹಾಗೂ ಪಂಚಾಯತಿಗಳಿಗೆ ಕೊಡಬೇಕೆಂದೂ ನಿರ್ಣಯ ತೆಗೆದುಕೊಂಡಿದ್ದೇವೆ. ಇದೇ ಮಾತನ್ನು ಚರ್ಚೆ ಮಾಡಿದ್ದೇವೆ, ತಾಲ್ಲೂಕಾ ಬೋರ್ಡು ಗಳು ಹಾಗೂ ಪಂಚಾಯತಿಗಳು ಅಷ್ಟೇ ಅಲ್ಲ ಸಾರ್ವಜನಿಕರೂ ಇದನ್ನು ಸ್ವಾಗತ ಮಾಡಿದ್ದಾರೆ.

3-00 P.M.

ಎರಡನೆಯದಾಗಿ ರಿಸೆಟಲ್‌ಮೆಂಟ್ ವಿಷಯ ಹೇಳುವುದಾದರೆ ತಮಗೆಲ್ಲರಿಗೂ ಗೊತ್ತಿರುವ ಹಾಗೆ 1964ನೇ ಇಸವಿ ಪೂರ್ವದಲ್ಲಿ ಒಂದೇ ಭೂಕಂದಾಯ ಕಾಯಿದೆ ಇತ್ತು. 5 ಇಂಟಿಗ್ರೇಟಡ್ ಭಾಗಗಳು ಮೈಸೂರಿಗೆ ಹೊಸದಾಗಿ ಬಂದು ಸೇರಿದಾಗ ಲ್ಯಾಂಡ್ ರವಿನ್ಯೂ ಕೋಡ್ ಯೂನಿ ಫಾರಂ ಆಗಿ ಇರಲಿಲ್ಲ, ಬೇರೆ ಬೇರೆ ಕಾಯಿದೆಗಳು ಅನ್ವಯಿಸುತ್ತಾ ಇದ್ದುವು. ಪ್ರತಿಯೊಂದು ಭಾಗದಲ್ಲೂ ಸಹಿತ ಕಳೆದ 40 ವರ್ಷಕ್ಕಿಂತ ಹೆಚ್ಚಿಗೆ ಅವಧಿಯವರೆಗೆ ಇದ್ದುದನ್ನು ರೀಸೆಟಲ್‌ಮೆಂಟ್ ಕಾಯಿದೆ ಪ್ರಕಾರ ರೀಸೆಂಟಲ್‌ಮೆಂಟ್ ಮಾಡಬೇಕಾಗಿತ್ತು. ಈ ಕೆಲಸ ಆ ಭಾಗದಲ್ಲಿ ಎಂದೋ ಮಾಡಬೇಕಾಗಿತ್ತು. ಹೊಸ ಪ್ರಾಂತ ಆದನಂತರ ರೀಸೆಟಲ್‌ಮೆಂಟ್ ಮಾಡಬೇಕೆಂದು ಸರ್ಕಾರ ತಿಳಿದುಕೊಂಡು ಒಂದು ನಿರ್ಣಯ ಮಾಡಿದರು. ಮತ್ತು ಅದಕ್ಕೆ ಸಂಬಂಧಪಟ್ಟಂತೆ ಯೂನಿಫಾರಂ ಲ್ಯಾಂಡ್ ರೆವಿನ್ಯೂ ಆಕ್ಟ್ 1964ನೇ ಇಸವಿಯಲ್ಲಿ ಪಾಸಾಯಿತು. ಇದೆಲ್ಲಾ ಮಾನ್ಯ ಸದಸ್ಯರಿಗೆ ಗೊತ್ತಿದೆ. ಕಾಯಿದೆ ಪ್ರಕಾರ ಒಂದು ರೀಸೆಟಲ್‌ಮೆಂಟ್ ಮಾಡಬೇಕೆಂದು ಸರ್ಕಾರದವರು ಯೋಚನೆ ಮಾಡಿ ಅಧಿಕಾರಿಗಳಿಗೆ ಹೇಳಿದರು. ಅದು 1965ನೇ ಇಸವಿಯಲ್ಲಿ ಈ ಮಾನ್ಯ ಸಭೆಯ ಮುಂದೆ ಬಂತು. ತಾವು ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. 1962–63, 1963—64ನೇ ಸಾಲಿನಲ್ಲಿ ಆಗಿದ್ದ ತೆರಿಗೆ ಕಡಿಮೆ, ಈ ತೆರಿಗೆಯನ್ನು ಹೆಚ್ಚು ಮಾಡುವುದು ಅವಶ್ಯ ಎಂದು ತಿಳಿದು ಕೊಂಡು ಆಗಿನ ಕೆಳಮನೆಯಲ್ಲಿ ಮಸೂದೆ ಬಂತು. ಮತ್ತು ಅದರ ಪ್ರಕಾರ ಇದು ಬಹಳ ಹಳೇ ಕಾಲದಲ್ಲಿ ಆಗಿದ್ದುದು ಎನ್ನುವುದನ್ನು ಲಕ್ಷದಲ್ಲಿಟ್ಟುಕೊಂಡು ಸರ್ಕಾರದವರು ಸರ್‌ಚಾರ್ಜು ಸಹ ಹಾಕಿ ಒಂದು ಬಿಲ್ಲನ್ನು ಪಾಸ್ ಮಾಡಿದರು. 1962—63, 1963—64ನೇ ಸಾಲ್‌ನಲ್ಲಿ ಗಾರ್ಡನ್ ಲ್ಯಾಂಡ್‌ಮೇಲೆ 100ಕ್ಕೆ 75ರಷ್ಟು ವೆಟ್‌ಲ್ಯಾಂಡ್ ಮೇಲೆ 100ಕ್ಕೆ 100ರಷ್ಟು ಕಂದಾಯ ಜಾಸ್ತಿ ಮಾಡಿದರು. ಅದನ್ನು ಎಲ್ಲರೂ ಒಪ್ಪಿಕೊಂಡರು. ಆ ಪ್ರಕಾರ ಕಂದಾಯವನ್ನು ಸಹ ವಸೂಲ್ಮಾಡಿದರು. ಈವೊತ್ತಿಗೂ ಸಹ ಅದು ಸರಿ ಎಂದು ತಿಳಿದುಕೊಂಡು ಅದು ಅಮಲ್‌ನಲ್ಲಿ ಬಂದು ಯಾವ ತಕರಾರು ಇಲ್ಲದೆ ಇತ್ತು. 1965ನೇ ಇಸವಿ ಏಪ್ರಿಲ್ ತಿಂಗಳಿನಲ್ಲಿ ರೀಸೆಟಲ್‌ಮೆಂಟ್ ಸ್ಕೀಮು ಈ ಮನೆಯ ಮುಂದೆ ವಿಚಾರಣೆಗೆ ಬಂತು. ಈಗ ಇರತಕ್ಕಂಥ ಅನೇಕ ವಿರೋಧ ಪಕ್ಷದವರೂ ಹಾಜರಿದ್ದರು. ಅದರ ಭಗ್ಗೆ ಕೂಲಂಕುಷವಾಗಿ ಚರ್ಚೆ ಆಯಿತು.

ಶ್ರೀ ಎಸ್. ಶಿವಪ್ಪ.—ಆವಾಗ ವಿರೋಧ ಮಾಡಿದರಲ್ಲಾ !

ಶ್ರೀ ಹೆಚ್. ವಿ. ಕೌಜಲಗಿ.—ಯಾರೂ ವಿರೋಧ ಮಾಡಲಿಲ್ಲ.

ಶ್ರೀ ಎಸ್. ಶಿವಪ್ಪ.—ರೀಸೆಟಲ್‌ಮೆಂಟ್ ಮಸೂದೆ ಬಂದಾಗ ವಿರೋಧ ಪಕ್ಷದವರು ತಕರಾರು ಮಾಡಿ ಕಪ್ಪು ಭಾವಟವನ್ನು ತೋರಿಸಿ ಈ ಸಭಾ ಭವನದ ಹೊರಗಡೆ ಹೋಗಿದ್ದರು ಎಂದರೆ ನಿಮಗೆ ಕಣ್ಣು ಇರಲಿಲ್ಲವೆ ಎಂದು ಕೇಳಬೇಕಾಗುತ್ತದೆ. ಮತ್ತು ಈ ಮಸೂದೆ ಬಂದಾಗ ವಿರೋಧ ಪಕ್ಷದ ಸದಸ್ಯರು 3 ದಿವಸ ಉಪವಾಸ ಮಾಡಿದ್ದರು.

ಶ್ರೀ ಹೆಚ್. ವಿ. ಕೌಜಲಗಿ.—ರೀಸೆಟಲ್‌ಮೆಂಟ್ ಮಸೂದೆ ಬಂದಾಗ ಶ್ರೀ ಮಾನ್ ವೆಂಕಟೇಗೌಡರು ಮತ್ತು ಇತರ ಅನೇಕರು ಇದು ಸರಿಯಾಗಿದೆ ಎಂದು ಹೇಳಿದ ಮಾತು ಡಿಬೇಟ್ ಪುಸ್ತಕದಲ್ಲಿದೆ. ರಿಸೆಟಲ್‌ಮೆಂಟ್ ಮಸೂದೆ ಬಂದಾಗ ಎಲ್ಲರೂ ಒಪ್ಪಿದ್ದಾರೆ. ನನಗೆ ತಿಳಿದ ಪ್ರಕಾರ ಬಹುಮತದಿಂದಲೋ, ಏಕಮತದಿಂದಲೋ, ಯುನಾನಿಮಸ್ ಆಗಿಯೋ ಅದು ಪಾಸ್ ಆಯಿತು. ಅದುವರೆಗೆ ಯಾವ ತಕರಾರೂ ಇಲ್ಲ. 1966ನೇ ಇಸವಿಯಲ್ಲಿ ಅದು ಅಮಲ್ ಬಜಾವಣಿ ಆಯಿತು. ವಸೂಲಿಗೆ ಶುರುವಾಯಿತು. ಯಾವಾಗ ಜನಗಳಿಗೆ ಡಿಮ್ಯಾಂಡ್ ನೋಟೀಸು ಹೋಯಿತೋ ಆಗ ಕೆಲವು ಕಡೆ ತಕರಾರು ಬಂತು. ಯಾರ ಕಡೆ ಎಂದರೆ ಗಾರ್ಡನ್ ಲ್ಯಾಂಡ್ಸ್‌ನವರಿಂದ. ಅದರಲ್ಲಿ ವಿಪರೀತ ಹೆಚ್ಚಾಗಿದೆ, 300 , 400 ಪಟ್ಟು ಹೆಚ್ಚಾಗಿದೆ ಇದು ಒಂದನ್ನು ಸರಿಯಾದ ಸೈಂಟಿಫಿಕ್ ಬೇಸಿಸ್ ಮೇಲೆ ಮಾಡಲಿಲ್ಲ ಎನ್ನುವುದು ಒಂದು ತಕರಾರು. ಇನ್ನೊಂದು ತಕರಾರು ರೈನ್ ಫೆಡ್ ವೆಟ್ ಲ್ಯಾಂಡ್ ಇವುಗಳ ಬಗ್ಗೆ ಬಂತು ಅನೇಕ ಹಳ್ಳಿಗಳ ಕಡೆಯಿಂದ ಕೆಲವರು ನನ್ನ ಕಡೆ ಬಂದಿದ್ದರು, ಕೆಲವರು ಚೀಫ್ ಮಿನಿಸ್ಟರ್ ಕಡೆ ಹೋಗಿದ್ದರು. ಆ ಕಾಲಕ್ಕೆ ಕೆಲವರು ರಿಟ್ ಪಿಟಿಷನ್ಸ್ ಹಾಕಿದರು. ಡ್ರೈ ಲ್ಯಾಂಡ್ ಬಗ್ಗೆ ಮಾತ್ರ 2—3 ಜಿಲ್ಲೆಗಳವರದ್ದು ಮಾತ್ರ ಹೈಕೋರ್ಟಿನಲ್ಲಿ ತಕರಾರು ಬಂತು. ಆ ತಕರಾರುಗಳನ್ನು ವಿಚಾರ ಮಾಡಲಿಕ್ಕೆ ಸೆಷನ್ ಇನ್ನೂ ಕೂಡಿರಲಿಲ್ಲ. ಹೊಸ ಕ್ಯಾಬಿನೆಟ್ ಆಗಿತ್ತು. ಕಾಯಿದೆಯಲ್ಲಿ ಏನಾದರೂ ಅವರು ಹೇಳಿದಂತೆ 300—400 ಪಟ್ಟು ಹೆಚ್ಚಿದರೆ ಅದು ಸರಿಪಡಿಸುವುದು ಯೋಗ್ಯವಾದುದು ಎನ್ನುವ ದೃಷ್ಟಿಯಿಂದ ಅದನ್ನು ನೋಡಿ ಸರಿ ಮಾಡುತ್ತೇನೆ ಎಂದು ಚೀಫ್ ಮಿನಿಸ್ಟರ್ ಕೂಡ ಹೇಳಿದರು. ನಾನೂ ಹೇಳಿದೆ ಅದನ್ನು ವಿಚಾರಣೆ ಮಾಡಿದಾಗ ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಇದು ಸರ್ಕಾರಕ್ಕೆ ಸಾಧ್ಯವಿಲ್ಲ ಎಂದು ಕಂಡುಬಂತು ಇದನ್ನ ನ್ಯಾಯಶಾಖೆಯವರೂ ಕೂಡ ಹೇಳಿದರು. ಅದನ್ನು ಅದಲು ಬದಲು ಮಾಡಬೇಕಾದರೆ ಅದು ಈ ಮನೆಯ ಹೌಸ್ ಮುಂದೆ ಬರಬೇಕಾಗಿಯೇ ಹೊರತು ಸರ್ಕಾರಕ್ಕೆ ಸಾಧ್ಯ ಇಲ್ಲವೆಂದು ಗೊತ್ತಾಯಿತು. ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್ಸ್ ಇದ್ದುದರಿಂದ ಅವರಿಗೆ ಹೇಳಿದೆವು. ಪ್ರತಿಯೊಂದು ಕೇಸ್‌ನಲ್ಲೂ ಈ ರೀತಿ ಇಲ್ಲ. ರೀಸೆಟಲ್‌ಮೆಂಟ್ ಮಾಡಿರುವುದರಿಂದ ಕಂದಾಯ ಎಲ್ಲಾ ಕಡೆಯೂ ಹೆಚ್ಚಾಗಿದೆ ಎಂದು ಇದುವರೆಗೆ ಯಾರು ತಕರಾರು ಮಾಡಿಲ್ಲ. ಎಲ್ಲೆಲ್ಲಿ ಹೆಚ್ಚಿವೆ ಎಂದು ತಕರಾರು ಬಂದಿವೆಯೋ ಅಲ್ಲಿ ಮಾತು ಪುನರ್ವಿಮರ್ಶೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದೆವು. ಈ ರೀತಿ ನಾವು ಕೋರ್ಟಿಗೆ ಅಷ್ಯೂರೆನ್ಸ್ ಕೊಟ್ಟಮೇಲೆ ರಿಟ್ ಪಿಟಿಷನ್ಸ್ ಯಾರು ಕೊಟ್ಟಿದ್ದರೋ ಅವರು ಮಾತ್ರ ವಾಪಸ್ಸು ತೆಗೆದುಕೊಂಡರು.

Sri L. SRIKANTAIAH.—I would like to know the meaning of the "Resettlement" because certain areas have been affected.

Sri H. V. KOUJALGI.—The question is whether it should be opened in a few cases or in all the cases. The resettlement is to be opened where there is unreasonably excess revision in a few cases or in all the cases.

Sri L. SRIKANTAIAH.—How did you come to know of this ?

Sri H. V. KOUJALGI.—It is for the aggrieved party to say.

Sri H. SIDDAVEERAPPA.—Let the statement be made. Let us have a full opportunity.

Mr. SPEAKER.—After the Revenue Demand is moved, the hon. Member can speak on that.

ಶ್ರೀ ಎಚ್. ವಿ. ಕೌಜಲಗಿ.—ಹೈಕೋರ್ಟಿಗೆ ಒಂದು ಅಂಡರ್‌ಟೇಕಿಂಗ್ ಬರೆದುಕೊಟ್ಟಿದ್ದೇವೆ. ಅದರ ಮೇಲಿನಿಂದ ಈ ವಿಚಾರ ಸ್ಪಷ್ಟವಾಗುತ್ತದೆ. ಗಾರ್ಡನ್ ಲ್ಯಾಂಡಿನಲ್ಲಿ ಮತ್ತು ವೆಟ್ ಲ್ಯಾಂಡಿನಲ್ಲಿ ಮಾತ್ರ ರೀ ಓಪನ್ ಮಾಡಲಿಕ್ಕೆ ಯೋಗ್ಯವಾದ ತಕರಾರುಗಳಿವೆ, ಕೆಲವು ಮಟ್ಟಿಗೆ ಡ್ರೈ ಲ್ಯಾಂಡಿನಲ್ಲಿಯೂ ಇವೆ ಎನ್ನುವಂಥ ಮಾತು ಆ ಕಾಲಕ್ಕೆ ಹೈಕೋರ್ಟಿಗೆ ಕೊಟ್ಟಂಥ ಅಂಡರ್‌ಟೇಕಿಂಗಿನಿಂದ ಸ್ಪಷ್ಟವಿದೆ.

Undertaking given to the High Court.

"The Government is considering to initiate legislation for reconsideration of the rates of land revenue assessment fixed as a result of the revision settlement *in such areas* warranting revision. Action is being taken to introduce suitable legislation for this purpose as early as possible. In the meanwhile, the Government has issued instructions to all the Deputy Commissioners of districts to collect the old rates prevailing prior to the revision settlement in respect of garden lands, though the demand at the new rate is made.

Secondly, even in regard to rainfed wet lands (classified as wet) which come under the Government irrigation sources, dry rates of assessment has been allowed to be collected in addition to water tax. Because according to new settlement, a separate water tax has been levied and that has been distinguished.

Thirdly, in respect of other rainfed wet lands which do not come under the command of any Government irrigation work, wet rates fixed under the revision settlement have to be collected.

The excess amount recovered in respect of the abovesaid lands as per revision settlement, will be adjusted towards the amount to be collected according to the amended legislation.

As regards cases where revision settlement in regard to dry land has been challenged, Government will consider their cases also after the appropriate legislation is introduced."

A second memo was also given in respect of dry lands.

"As regards rainfed wet lands (classified as wet) which do not come under the command of any Government irrigation work and dry land which are the subject matter of the various writ Petitions, the respondents will undertake to collect from the petitioners assessment at the rates fixed prior to the revision resettlement; and at same time, pending disposal of legislation and consequent consideration of the rates of land re venue assessment."

These undertakings given to the High Court make it very clear that they apply only in respect of garden lands and rainfed lands, where lands get government water facility.

(ಶ್ರೀ ಎಚ್. ವಿ. ಕೌಜಲಗಿ)

Accordingly instructions were given to the District Officers on 20th September 1968. I am just supplying copies of these circulars to the hon. Members. There was some doubt and so clarification was necessary in these circulars and that was also clarified in the next circular dated 30th November 1968.

ಖುಷ್ಕಿ ಭೂಮಿಯ ದೆಸೆಯಿಂದಲೂ ಕೆಲವು ರಿಟ್ ಪಿಟಿಷನ್ಸ್ ಮಾತ್ರ ಬಂದಿದ್ದವು. ಆದರೆ ಇಲ್ಲಿ ಮಾನ್ಯ ಸದಸ್ಯರು ಒಂದು ಮಾತು ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕು. ಖುಷ್ಕಿ ಭೂಮಿ ಎಂದು ನಾವು ಏನು ಹೇಳುತ್ತೇವೆ-ಅದಕ್ಕೆ ಸಾರ್ವತ್ರಿಕವಾಗಿ ಕಂದಾಯದ ಪ್ರಮಾಣ ಹೆಚ್ಚಾಗಿಲ್ಲ. ಸ್ವಲ್ಪ ಮಟ್ಟಿಗೆ ಕೆಲವು ಕಡೆ ಹೆಚ್ಚಾಗಿದೆ. ಅಂಥವರು ಮಾತ್ರ ರಿಟ್ ಪಿಟಿಷನ್ ಮಾಡಿದ್ದರು. ಅವರ ಬಗ್ಗೆ ಮಾತ್ರ ಹಳೇ ದರದಲ್ಲಿ ಕಂದಾಯವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇವೆ ಮತ್ತು ಹೈಕೋರ್ಟಿನಲ್ಲಿ ಈ ರೀತಿ ಬರೆದುಕೊಟ್ಟಿದ್ದೇವೆ; ಅನೇಕ ಕಡೆಗಳಲ್ಲಿ ಮೊದಲಿನ ದರಕ್ಕಿಂತ ಕಡಮೆಯಾಗಿದೆ. ಎಲ್ಲಿ ಮೊದಲು ಒಂದು ರೂಪಾಯಿ ಕಂದಾಯ ಇತ್ತು ಅಲ್ಲಿ ಈಗ ಹನ್ನೆರಡಾಣೆ ಸಹಿತ ಆಗಿದೆ. ಯಾವ ಕಾಲಕ್ಕೆ ಹಿಂದೆ ನಾವು ಸರ್ಚಾರ್ಜ್ ಹಾಕಿ ಎರಡು ಪಟ್ಟು ವಸೂಲ್ಮಾಡಿದ್ದೇವೋ ಆ ಸಾಲಿನಲ್ಲಿ ಅಂದರೆ 1962-63 ಮತ್ತು 1963-64ರಲ್ಲಿ ಹಳೇ ಕಂದಾಯದ ಎರಡು ಪಟ್ಟು ಕೊಟ್ಟಿದ್ದಾರೆ. ಇದನ್ನೂ ತಾವುಗಳೆಲ್ಲರೂ ಲಕ್ಷದಲ್ಲಿ ಇಡಬೇಕು. ಪರಿಸ್ಥಿತಿ ಹೀಗಿರುವಾಗ ಈಗ ಮಾನ್ಯ ಸದಸ್ಯರು ಎಲ್ಲ ಕಡೆಗೂ ಹಳೇ ರೇಟಿನಿಂದ ವಸೂಲ್ಮಾಡಿರಿ ಎಂದರೆ ಹಳೇ ರೇಟಿನಂತೆ ಹೇಗೆ ವಸೂಲ್ಮಾಡುವುದಕ್ಕೆ ಬರುತ್ತದೆ ? ಎಲ್ಲಿ ಕಡಮೆಯಾಗಿದೆ ಅಲ್ಲಿ ವಸೂಲ್ಮಾಡುವುದಕ್ಕೆ ಬರುವುದಿಲ್ಲ,

Sri S. SIVAPPA.—Whichever is less !

ಶ್ರೀ ಎಚ್. ವಿ. ಕೌಜಲಗಿ.—ಹಾಗೆ ಮಾಡಲಿಕ್ಕೆ ಬರುವುದಿಲ್ಲ. ಬರೇ ಹಳೇ ದರದ ಪ್ರಕಾರ ವಸೂಲ್ಮಾಡಿರಿ ಎಂದು ಹೇಳುತ್ತಾರೆ. ಇವರಿಗೆ ಎಲ್ಲಿ ಷೂ ಪಿಂಚ್ ಮಾಡುತ್ತದೆ ಎಂಬುದು ಗೊತ್ತಿದೆ. ಎಲ್ಲ ಕಡೆಗಳಿಂದಲೂ ಗಾರ್ಡನ್ ಮತ್ತು ವೆಟ್‌ಲ್ಯಾಂಡ್ ದೆಸೆಯಿಂದ ತಕರಾರು ಬಂದಿದೆ. ಡ್ರೈ ಲ್ಯಾಂಡ್ ದೆಸೆಯಿಂದ ಈ ದಾವಾಷದಲ್ಲಿ ತಕರಾರು ಇದ್ದಿದ್ದಿಲ್ಲ. ಈ ಮಾತನ್ನು ಸಭೆ ನೆನಪಿನಲ್ಲಿಡ ತಕ್ಕದು. ಎಲ್ಲೆಲ್ಲಿ ಖುಷ್ಕಿಭೂಮಿಗೆ ಕಂದಾಯ ಅತಿ ಹೆಚ್ಚಾಗಿದೆ ಅವುಗಳನ್ನು ಪುನರ್ವಿಮರ್ಶೆ ಮಾಡಿರಿ ಮತ್ತು ಅವುಗಳ ಬಗ್ಗೆ ಕಾಯಿದೆ ದುರಸ್ತು ಮಾಡಿರಿ ಎನ್ನುವ ಮಾತು ಅವರು ಹೇಳಿದರು, ನಾವೂ ಹಾಗೆಯೇ ತಿಳಿದುಕೊಂಡೆವು. ಕೋರ್ಟಿನಲ್ಲಿ ಕೂಡ ಹಾಗೆಯೇ ಹೇಳಿದೆವು.

† **Sri D. DEVARAJ URS.**—I am afraid the manner in which the Hon. Minister is stating the case is not the one which is being represented to Government all these days. When he says that concession or revision or reconsideration of the previous settlements with regard to garden lands and wet lands is only in cases where there are complaints, I am afraid that is not the thing that the House or some of us needed. I have been closely listening to what the Hon. Minister is saying. He seems to point out that only in the case of such of those dry lands where there is objection or where some people might have gone to court, the question of reconsideration might come up. And he also mentioned that generally with regard to dry land, there is no objection. I am afraid that is not the position. As he pointed out, in the case of several taluks and districts, after the resurvey settlement assessment that was given by the farmers prior to resettlement has been actually reduced. And in some cases, it has gone up by 50 to 100 per cent. In some taluks and districts like Mysore and also portions of Belgaum, like Nipani, after the resettlement, dry assessment has gone up by 300 per cent. If the man was paying a kandayam of Re 1 per acre, it has now gone up

to 3 or 4 after the resettlement. This has happened in places like Chamarajanagar, Gundlupet, Heggadadevanakote, Hunsur, Periyapatna in Mysore District.

Sri D. B. KALMANKAR.—Similar is the position in some places in Bidar District.

Sri D. DEVARAJ URS.—I want to tell my friend that increase in rate of land assessment with regard to dry land is highest in the taluks which I mentioned when compared to increase elsewhere.

This is comparable to Nipani and other areas because this increase has taken place four-fold where they are supposed to grow tobacco and mulberry. That is why we have been representing to Government that cases where it has gone up 3 to 4 times, have to be looked into and it has to be reduced.

Now, the Hon. Minister seems to refer only to cases that were before the High Court and not with reference to places where this has gone up four or four and half times. He is also making reference to wet and dry land, whether it is rain fed wet or whether it is getting water from Government. There is no complete understanding of the problem of the ryots at the moment. I request the Hon. Minister kindly to go through all these questions and before he comes to any conclusion to take into consideration several complaints and representations made here on the floor of the House as well as outside the House, even though they may not have gone before the High Court.

Sri H. V. KOUJAGLI.—I have understood the point of my hon. friend. It seems the hon. Member was not present when the Leader of the Opposition raised the point. I am answering his point. The scheme is not under discussion before this House.

Sri D. DEVARAJ URS.—Sir, the hon. Minister thinks that he is only making a statement or answering the point raised by the Leader of the Opposition. The point raised by the Leader of the Opposition was with reference to the increase in the rate of land assessment in general and the statement made by the Hon. Minister on the floor of the House was also with reference to the issue raised, *i.e.*, with regard to general increase of land revenue.

Sri H. V. KOUJALGI.—I do not agree. The scheme is not under consideration before the House today. The Demands are not under discussion today. The hon. Member can raise it when the Demand comes up. The question is what is the Government's stand on these three points. I am stating that.

†Sri H. M. CHANNABASAPPA.—I beg to submit that the hon. Minister is very clever and he is trying to mislead the whole House. I am sorry. It was the specific point raised not only by the Leader of the Opposition but myself, Sri Devaraj Urs and Sri Srikantiah. An assurance given by the Government at the time when Sri Nanje Gowda's Bill was under consideration and the Government have conceded that there has been a good deal of injustice in the resettlement and that

(SRI H. M. CHANNABASAPPA)

injustice will have to be rectified. The Government have no powers to rectify and therefore they would themselves bring forward legislation in order to set right the injustice wherever it is. It is not that the injustice is done in all places. It may be in a few places. Pending that, it was pressed that Government may collect land tax at the rates that were prevailing previous to the resettlement. The Hon. Minister gave a specific assurance—I am speaking subject to correction—that Government would collect only at the old rates prevailing before resettlement until they take power and examine the injustice in various parts of the State. That assurance was now being abrogated. It is on that account that specific points were raised whether the Government is going back on its assurance and give room for coercive measures while collecting at the rates of the resettlement. It is in respect of that assurance that the Hon. Minister was requested to make the stand very clear and we are not particular of what statement you have given in the High Court. We are particular of the statement made on the floor of this House. I would appeal to him to confine only to the point whether that assurance was made or not, and if an assurance has been made, why has it not been given effect to? This is the point at issue and it is on that point that we want you to make a statement and not on what you said in the High Court.

†ಶ್ರೀ ಕೆ. ಎಚ್. ರಂಗನಾಥ.—ಮಾನ್ಯ ಮಂತ್ರಿಗಳು ಆ ದಿವಸದ ಪ್ರೊಸೀಡಿಂಗ್ಸ್ ನೋಡಿದ್ದಾರೋ ಇಲ್ಲವೋ? ನಂಜೇಗೌಡರು ತಂದಿದ್ದ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುವಾಗ ಮಂತ್ರಿಗಳು ಒಂದು ಅಷ್ಯೂರೆನ್ಸ್ ಕೊಟ್ಟಿದ್ದರು. ಸರಕಾರವು ಕಾಂಪ್ರಿಹೆನ್ಸಿವ್ ಆಗಿ ಒಂದು ಅಮೆಂಡ್‌ಮೆಂಟ್ ತರುವುದರಿಂದ ಅದನ್ನು ತರುವವರೆಗೆ 1965ರಲ್ಲಿ ಏನು ಕಂದಾಯ ಜಾಸ್ತಿಯಾಗಿದೆ ಅದನ್ನು ಡಿಮ್ಯಾಂಡಿಗೆ ತೋರಿಸದೆ ಹಳೆಯ ದರದಲ್ಲೇ ಕಂದಾಯವನ್ನು ವಸೂಲು ಮಾಡಲಾಗುವುದು ಎಂದು ಅಷ್ಯೂರೆನ್ಸ್ ಕೊಟ್ಟಿದ್ದರು. ಆದರೆ ನೌಕರರು ಹೆಚ್ಚಿನ ದರದಲ್ಲಿ—ಎನ್‌ಹ್ಯಾನ್ಸ್‌ಡ್ ರೇಟಿನಲ್ಲಿ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಈಗಲಾದರೂ ಅದನ್ನು ನಿಲ್ಲಿಸುವುದಕ್ಕೆ ಸರಕಾರದ ನಿಖರವಾದ ನಿಲುವೇನು ಎಂದು ನಾವು ಕೇಳಿದ್ದೇವು. ಈಗ ಹೈಕೋರ್ಟಿನಲ್ಲಿ ರಿಟ್ ಪೆಟಿಷನ್ ಇರುವುದು ರೈನ್‌ಫೆಡ್ ಲ್ಯಾಂಡಿಗೆ ಸಂಬಂಧಪಟ್ಟಿರುವುದು, ಅದರ ವಿಚಾರ ಬೇಕಿಲ್ಲ. ಈ ಸಭೆಗೆ ಅಷ್ಯೂರೆನ್ಸ್ ಕೊಟ್ಟಿರುವುದು ಎನ್‌ಹ್ಯಾನ್ಸ್‌ಡ್ ರೇಟ್ ಪ್ರಕಾರ ಇರುವ ಕಂದಾಯವನ್ನು ಡಿಮ್ಯಾಂಡಿಗೆ ತೆಗೆದುಕೊಳ್ಳುವುದಿಲ್ಲ, ಹಳೆಯ ದರದಲ್ಲೇ ವಸೂಲುಮಾಡುತ್ತೇವೆ ಎಂದು, ಆದರೆ ಅದರ ಪ್ರಕಾರ ಯಾವುದೇ ಒಂದು ಸರಿಯಾದ ಸರ್ಕ್ಯುಲರ್ ಕಳಿಸಿ ರೆವೆನ್ಯೂ ಅಧಿಕಾರಿಗಳಿಗೆ ತಿಳಿಸದಿರುವುದರಿಂದ ಅಧಿಕಾರಿಗಳು ರೈತರಿಂದ ಎನ್‌ಹ್ಯಾನ್ಸ್‌ಡ್ ರೇಟಿನಲ್ಲೇ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಇದು ಸರಿಯಲ್ಲ. ಮಂತ್ರಿಗಳು ಕೊಟ್ಟಿರುವ ಅಷ್ಯೂರೆನ್ಸ್ ಪ್ರಕಾರ ಹಳೆಯ ದರದಲ್ಲೇ ಕಂದಾಯವನ್ನು ವಸೂಲು ಮಾಡಬೇಕು. ಈ ವಿಚಾರದಲ್ಲಿ ಹೇಳಿಕೆ ಕೊಡಬೇಕು. ಮತ್ತು ರೆವೆನ್ಯೂ ಅಧಿಕಾರಿಗಳಿಗೆ ಆದೇಶ ಕೊಡಬೇಕು ಎಂದು ಕೇಳಿದ್ದೇವೆ. ಈ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೊಡಬೇಕೆಂದು ನಾವು ಕೇಳುವುದು.

Sri H. V. KOUJALGI.—Before I come to the points, you are raising this question. What is the assurance given, in respect of what and it is given and whether it is implemented are the next points. I am coming to those points. Before that the hon. Member raises altogether a different issue. This is the background under which you have to examine the assurance given. Unless I satisfy the House, I will not sit down.

3-30 P.M.

ಎಲ್ಲೆಲ್ಲಿ ಹೆಚ್ಚಾಗಿದೆ ಅಲ್ಲೆಲ್ಲಾ ರಿವೈಸ್ ಮಾಡುವುದಕ್ಕೆ ತಿದ್ದುಪಡಿ ಬರುತ್ತದೆ ಎಂದು ಆಶ್ವಾಸನೆ ಕೊಟ್ಟಿದ್ದೀರಿ ಎಂದು ಮಾನ್ಯ ಶ್ರೀ ರಂಗನಾಥ್‌ರವರು ಹೇಳಿದರು. ಯಾವ ತರಹದ ಅಷ್ಯೂರೆನ್ಸ್ ಕೊಟ್ಟಿದ್ದೆವು ಎಂಬುದನ್ನು ಹೇಳುತ್ತೇನೆ. ಪ್ರತಿಯೊಂದು ಕಡೆಯೂ, ಪ್ರತಿಯೊಂದು ದರ್ಜೆಯ ಭೂಮಿಗೂ ಕಂದಾಯ ಹೆಚ್ಚಾಗಿಲ್ಲ. ಆದ್ದರಿಂದ ಇದನ್ನು ಸಂಪೂರ್ಣವಾಗಿ ಪುನರ್ವಿಮರ್ಶೆ ಮಾಡುವ ಪ್ರಶ್ನೆ ಇಲ್ಲ ಎಂಬ ಮಾತನ್ನು ಪೀಠಿಕಾ ರೂಪದಲ್ಲಿ ಹೇಳಿದೆ. ಶ್ರೀಮಾನ್ ನಂಜೇಗೌಡರು ಹಿಂದೆ ಒಂದು ಮಸೂದೆಯನ್ನು ತಂದಿದ್ದರು. ಆಗ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಚಾಲು ಇದ್ದು ಯಾವ ಅಷ್ಯೂರೆನ್ಸನ್ನೂ ಕೊಟ್ಟಿದ್ದಿಲ್ಲ. ಅಷ್ಟರೊಳಗೆ ಸರ್ಕಾರದವರು ಒಂದು ಹೊಸ ತಿದ್ದುಪಡಿ ಕಾಯಿದೆಯನ್ನು ತರಬೇಕೆಂದು ನಿರ್ಣಯ ತೆಗೆದುಕೊಂಡರು. ಮಾನ್ಯ ಸದಸ್ಯರು ತಂದಂತಹ ಮಸೂದೆ ಕಾಂಪ್ರಹೆನ್ಸೀವ ಆಗಿಲ್ಲ ಅಥವಾ ಸರಿಯಾದ ರೀತಿಯಲ್ಲಿ ಇಲ್ಲ ಅಂತ ತಿಳಿದುಕೊಂಡು, ಆ ಕಾಯಿದೆ ಸರಿಯಿಲ್ಲ ಅಂತ ನಮಗೆ ಗೊತ್ತಾದ್ದರಿಂದ ಅದನ್ನು ಹಿಂದಕ್ಕೆ ತೆಗೆದುಕೊಳ್ಳಿರಿ ಎಂದು ನಾವು ಅವರನ್ನು ವಿನಂತಿಮಾಡಿಕೊಂಡೆವು. ಆ ದೃಷ್ಟಿಯಿಂದ ಅವರು ಅದನ್ನು ಫರಕು ತೆಗೆದುಕೊಂಡರು. ನಾವು ಅಷ್ಯೂರೆನ್ಸ್ ಏನೂ ಕೊಟ್ಟಿರಲಿಲ್ಲ. ಆದರೆ ಒಂದು ಶಬ್ದ ಹೇಳಿದ್ದು ನಿಜ, ಎಲ್ಲೆಲ್ಲಿ ಕಂದಾಯದ ದರ ಹೆಚ್ಚಿದೆ, ಎಲ್ಲೆಲ್ಲಿ ಅನ್‌ರೀಸನಬಲ್ ರೀಸೆಟ್ಲಮೆಂಟ್ ಆಗಿದೆಯೋ ಅದನ್ನು ವಿಚಾರ ಮಾಡಲಿಕ್ಕೆ-ಆ ಉದ್ದೇಶದಿಂದ ಅವರು ಕಾಯಿದೆ ತಂದಿದ್ದರು. ವೆಟ್‌ಲ್ಯಾಂಡ್, ಗಾರ್ಡನ್ ಲ್ಯಾಂಡ್, ಡ್ರೈಲ್ಯಾಂಡ್ ಇಂಥಾದ್ದರ ದೆಸೆಯಿಂದ ಆ ಮಸೂದೆಯನ್ನು ತಂದಿರಲಿಲ್ಲ. ಶ್ರೀಮಾನ್ ದೇವರಾಜಅರಸರವರು ಈ ವಿಚಾರವನ್ನು ತಿಳಿದುಕೊಳ್ಳಬೇಕು. ನಿದ್ರೆಗಣ್ಣಿನಲ್ಲಿದ್ದೆ ಎಂದು ಹೇಳಬೇಡಿರಿ ಆಮೇಲೆ. ಆ ಕಾಲಕ್ಕೆ ನಾನು ಒಂದು ಮಾತು ಹೇಳಿದೆ ಏನೆಂದರೆ ಹಳೇ ಕಂದಾಯದ ಪ್ರಕಾರ ವಸೂಲು ಮಾಡುತ್ತೇವೆ ಎಂದು ಹೇಳಿದ್ದೆವು. "ಹೊಸ ತಿದ್ದುಪಡಿ ಆಗುವವರೆಗೂ ಹಳೇ ದರದ ಪ್ರಕಾರ ಕಂದಾಯ ವಸೂಲು ಮಾಡಬೇಕು, ಹೆಚ್ಚಿನ ಆಕರಣಿ ಪ್ರಕಾರ ಕಂದಾಯ ವಸೂಲು ಮಾಡಬಾರದು" ಎಂದು ಹೇಳಿದ್ದಾರೆ ಎಂಬುದನ್ನು ಒಪ್ಪುತ್ತೇವೆ. Wherever that is unreasonable and wherever there is a case for relaxation, there we will recover at the old rates. That is the interpretation.

[MR. DEPUTY SPEAKER in the Chair]

Sri D. B. KALMANKAR.—Did the Hon. Minister not say that he would be bringing a comprehensive legislation ?

Sri H. V. KOUJALGI.—The Hon. Member should read the next statement also. I am not running away after making this statement. On the 29th January the same question arose. When Sri Nanje Gowda brought a Bill, I have made a clear statement which is as follows :

"ಶ್ರೀಮಾನ್ ನಂಜೇಗೌಡರು ಒಂದು ಬಿಲ್ಲನ್ನು ತಂದಿದ್ದಾಗ್ಗೆ ರಿವಿಷನ್ ಸೆಟ್ಲಮೆಂಟ್ ತಪ್ಪಾಗಿದೆ ಎಂದು ಹೇಳಿದರು. ಈಗಿರುವ ಮೈಸೂರು ಲ್ಯಾಂಡ್ ರೆವಿನ್ಯೂ ಆಕ್ಟ್ ಏನಿದೆಯೋ ಅದರ ಪ್ರಕಾರ ಅದನ್ನು ತಿದ್ದುಪಡಿ ಮಾಡಲಿಕ್ಕೆ ಈ ಮಾನ್ಯ ಸಭೆಗೆ ಅಧಿಕಾರ ಇದೆಯೇ ಹೊರತು ಸರ್ಕಾರಕ್ಕೆ ಇಲ್ಲ. ಮೈಸೂರು ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಯಾವ ಯಾವ ಕಲಂಗಳಿಗೆ ತಿದ್ದುಪಡಿಯಾಗಬೇಕೋ ಅದನ್ನು ಪರಿಶೀಲನೆಮಾಡಿ ಈ ಸಭೆಯ ಮುಂದೆ ತರುತ್ತೇವೆ ಎಂದು ಹೇಳಿದ್ದೆವು. ಈಗ ಗಾರ್ಡನ್‌ಲ್ಯಾಂಡ್ ಮತ್ತು ವೆಟ್‌ಲ್ಯಾಂಡ್‌ಗಳ ವಿಚಾರದಲ್ಲಿ ಹೆಚ್ಚು ತಕರಾರು ಇದೆ. ಆದುದರಿಂದ ಅಲ್ಲಿ ಹಳೇ ದರದ ಪ್ರಕಾರ ಕಂದಾಯ ತೆಗೆದುಕೊಳ್ಳಬೇಕೆಂದೂ, ಹೊಸ ದರದ ಪ್ರಕಾರ ತೆಗೆದುಕೊಳ್ಳಬಾರದೆಂದೂ ಹೇಳಿದ್ದೆವು." You will have to read all the statements together.

Sri S. SIVAPPA.—The Hon. Minister is changing.

Sri H. V. KOUJALGI.—Before I made the statement here I had made a statement before the High Court. Let the hon. Member remember that. What was the subject under discussion ? The subject under discussion was, whether the revenue has been excessively

(SRI H. V. KOUJALGI)

enhanced. Not in all cases. It is not the nature of the land. But the point at issue was whether it was the item that was enhanced ತಾವು ಈ ಎರಡು ಸ್ಟೇಟ್‌ಮೆಂಟುಗಳನ್ನೂ ನೋಡಿದರೆ ಸ್ಪಷ್ಟವಾಗುತ್ತದೆ. ಎಲ್ಲೆಲ್ಲಿ ಕಂದಾಯ ಹೆಚ್ಚಾಗಿತ್ತು, ಅಲ್ಲೆಲ್ಲಾ ಪುನರ್ವಿಮರ್ಶನೆ ಮಾಡಿ ಅಲ್ಲಿ ಮಾತ್ರ ಹಳೇ ದರದ ಪ್ರಕಾರ ವಸೂಲು ಮಾಡೋಣ ಅಂತ ತಿಳಿದುಕೊಂಡಿದ್ದೆವು, ಅದೇ ಪ್ರಕಾರ ಆಶ್ವಾಸನೆ ಕೊಟ್ಟಿದ್ದೆವು, ಅದನ್ನೇ ಈ ಸಭೆಯ ಮುಂದೆ ಹೇಳಿದ್ದೆವು. ಹೈಕೋರ್ಟಿನಲ್ಲೂ, ಹೊರಗೂ, ಒಳಗೂ ಎಲ್ಲ ಕಡೆಯಲ್ಲೂ ಅದೇ ಪ್ರಕಾರ ಹೇಳಿದ್ದೆವು. ಅದಕ್ಕನುಸಾರವಾಗಿ ಮೊದಲನ ಸರ್ಕ್ಯುಲರನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೆವು. ಅದರ ನಕಲನ್ನು ತಮಗೆಲ್ಲರಿಗೂ ಒದಗಿಸಿ ಕೊಡುತ್ತೇನೆ. ಅದರ ಸಾರಾಂಶ ಇಷ್ಟೆ: ಗಾರ್ಡನ್ ಲ್ಯಾಂಡ್‌ಗೆ ಹೊಸದರದ ಕಂದಾಯವನ್ನು ವಸೂಲ್ಮಾಡತಕ್ಕ ವೇಳೆಯಲ್ಲಿ ಈಗಿನ ಕಾಯಿದೆ ಪ್ರಕಾರ ಒಂದು ಡಿಮ್ಯಾಂಡ್ ನೋಟೀಸ್ ಕೊಡಬೇಕಾಗುತ್ತದೆ. ಆದರೆ ಅದನ್ನು ವಸೂಲ್ಮಾಡತಕ್ಕ ಕಾಲದಲ್ಲಿ ಹಳೇ ದರದ ಪ್ರಕಾರ ವಸೂಲ್ಮಾಡಿರಿ ಅಂತ ತಿಳುವಳಿಕೆ ಕೊಟ್ಟಿದ್ದೆವು. But the demand will be according to the new rate. Secondly, rain-fed lands, new dry rates *plus* water rate. ಶ್ರೀಮಾನ್ ಚನ್ನೇಗೌಡರಿಗಾಗಲಿ, ಶ್ರೀಕಂಠಯ್ಯನವರಿಗಾಗಲಿ ನೋವಾಗುವಂತಹದು ಇದರಲ್ಲಿ ಏನೂ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ ಇದರಲ್ಲಿ ಮುಚ್ಚಿಡುವಂತಹ ಮಾತು ಯಾವುದೂ ಇಲ್ಲ. ತಕರಾರು ಯಾವ ಯಾವುದೂ ಇಲ್ಲ. ಸಾಮಾನ್ಯ ಜನರಿಗೆ ಏನೂ ತೊಂದರೆ ಆಗುವಂತಹದು ಇಲ್ಲ, ವೆಟ್ ಲ್ಯಾಂಡ್‌ಗಳಿಗೆ ಮೊದಲಿನ ಪದ್ಧತಿಯ ಮೇರೆಗೆ ಒಂದು ಕನ್‌ಸಾಲಿಡೇಟೆಡ್ ಅಸೆಸಮೆಂಟ್ ಅಂದರೆ ನೀರಿನ ಆಕರಣೆ, ಮತ್ತು ಡ್ರೈ ಲ್ಯಾಂಡ್‌ಗೆ ಎಕರೆಗೆ ಮೂರು ನಾಲ್ಕು ರೂಪಾಯಿಗಳ ಪ್ರಕಾರ ಕಂದಾಯ ಸೇರಿಸಿ ಒಟ್ಟಿಗೆ ತೆಗೆದುಕೊಳುತ್ತಿದ್ದರು. ಈಗಿನ ಹೊಸ ಕಾಯಿದೆ ಬಂದ ನಂತರ ನೀರಿನ ಆಕರಣೆ ಬೇರೆ ಆಗಿದೆ. ವೆಟ್ ಲ್ಯಾಂಡಿನ ಆಕಾರವನ್ನು ನಿಗದಿ ಮಾಡುವ ವಿಧಾನವೇ ಬೇರೆ, ಡ್ರೈ ಲ್ಯಾಂಡಿನ ಆಕಾರ ನಿಗದಿ ಮಾಡುವ ವಿಧಾನವೇ ಬೇರೆ. ಇವು ಮೊದಲದ್ದಂತೆ ಇಲ್ಲ. ಈಗ ಈ ಕಂದಾಯ 8 ರಿಂದ 10 ರೂಪಾಯಿಗಳವರೆಗೂ ಇದೆ. ಮಾನ್ಯ ಸದಸ್ಯರು ಈ ವಿಚಾರವನ್ನು ಲಕ್ಷ್ಯದಲ್ಲಿ ಇಡಬೇಕು. ಇದರ ಬಗ್ಗೆ ಹೈಕೋರ್ಟಿನಲ್ಲೂ ತಕರಾರು ಆಗಿಲ್ಲ, ಹೊರಗೂ ಆಗಿಲ್ಲ, ಒಳಗೂ ಆಗಿಲ್ಲ, ಇದನ್ನು ಹಳೇ ದರದ ಪ್ರಕಾರ ವಸೂಲು ಮಾಡಿರಿ ಎಂದರೆ ಅದು ಹೇಗೆ ಮಾಡಲಿಕ್ಕೆ ಬರುತ್ತದೆ!

ಶ್ರೀ ಎಸ್. ಶಿವಪ್ಪ.—ನಾವು ತಕರಾರು ಮಾಡಿದ್ದೇವೆ.

ಶ್ರೀ ಎಚ್. ವಿ. ಕೌಜಲಗಿ.—ನೀರಿನ ಆಕಾರದ ಬಗ್ಗೆ ಈ ಹೌಸ್‌ನಲ್ಲಿ ಎಂದು ತಕರಾರು ಮಾಡಿದ್ದೀರಿ ತೋರಿಸಿ ಕೊಡ್ರಿ. ರೈನ್‌ಫೆಡ್ ವೆಟ್‌ಲ್ಯಾಂಡ್‌ಗಳಿಗೂ ಮತ್ತು ವೆಟ್ ಲ್ಯಾಂಡ್‌ಗಳಿಗೂ ಇನ್ನು ಮುಂದೆ ಕಂದಾಯ ನಿಗದಿ ಮಾಡುವಾಗ ಡ್ರೈ ಅಸೆಸ್‌ಮೆಂಟ್ ಪ್ಲಸ್ ವಾಟರ್ ಟ್ಯಾಕ್ಸು ಹಾಕಲಾಗುತ್ತದೆ. ಒಂದು ಮಾತು ಲಕ್ಷ್ಯದಲ್ಲಿ ಇಡಬೇಕು, ಯಾರು ನೀರು ತೆಗೆದುಕೊಳ್ಳುತ್ತಾರೆ, ಉಪಯೋಗ ಮಾಡಿಕೊಳ್ಳುತ್ತಾರೆ ಅವರು ಈ ಕಾಯಿದೆ ಪ್ರಕಾರ ನೀರು ಗಂದಾಯ ಕೊಡಬೇಕಾಗುತ್ತದೆಯೇ ಹೊರತು ಇದು ಲ್ಯಾಂಡ್ ರೆವಿನ್ಯೂ ಖಾತೆಗೆ ಅಥವಾ ನನ್ನ ಖಾತೆಗೆ ಸಂಬಂಧ ಬರುವುದಿಲ್ಲ ಎಂದು ಹೇಳುತ್ತೇನೆ. ಇದರ ಬಗ್ಗೆ ಇಲ್ಲಿಯವರೆಗೂ ಇಲ್ಲಿಯತನಕ ಯಾರು ತಕರಾರು ಮಾಡಿಲ್ಲ ಚಕಾರ ಶಬ್ದ ಎತ್ತಿಲ್ಲ.

Wet lands not coming under new Government sources ಅಲ್ಲಿ ಒಂದು ಅಂಶವನ್ನು ವಿಚಾರ ಮಾಡ್ರಿ, ನಾವು ಯಾವುದಕ್ಕೆ ಓಲ್ಡ್ ರೇಟಿನಂತೆ ವಸೂಲ್ಮಾಡಬೇಕೆಂದು ಹೇಳಿದ್ದೇವು ಆ ಅಷ್ಯೂರೆನ್ಸ್ ಪ್ರಕಾರ ನಾವು ನಮ್ಮ ಅಧಿಕಾರಿಗಳಿಗೆ ಓಲ್ಡ್ ರೇಟನ್ನೇ ವಸೂಲ್ಮಾಡಿ ಅಂತ ಹೇಳಿದ್ದೇವೆ. ನೀರಾವರಿ ರೇಟನ್ನು ಬಿಟ್ಟು ಭೂ ಕಂದಾಯ ಒಂದನ್ನು ಮಾತ್ರ ಓಲ್ಡ್ ರೇಟಿನಲ್ಲೇ ವಸೂಲ್ಮಾಡಿ ಎಂದು ಹೇಳಿದ್ದೇವೆ.

Sri AZEEZ SAIT.—We wanted a clear-cut Government policy as regards land revenue collection, but the Hon'ble Minister seems to be arguing and giving an explanation and thereby taking a lot of time of this august House. We are unable to follow or understand whatever he has said so far. ಅವರು ಏನು ಹೇಳುತ್ತಿದ್ದಾರೆನ್ನುವುದು ನಮಗೆ ಯಾರಿಗೂ ಗೊತ್ತಾಗುತ್ತಿಲ್ಲ. ನಾನು ಹೇಳುವುದನ್ನು ಹೇಳಿಬಿಡುತ್ತೇನೆ—ನಾನು ಮಾಡುವುದನ್ನು ಮಾಡಿಬಿಡುತ್ತೇನೆ, ಇಲ್ಲಿ ನೀವು ಯಾರೂ ತಕರಾರನ್ನು ಮಾಡಲಿಲ್ಲಾ, ಕಂದಾಯವನ್ನು ರದ್ದು ಮಾಡಿ ಎಂದು ನೀವು ಹೇಳಲಿಲ್ಲಾ, ನೀವು ಇಲ್ಲಿ

ವ್ಯಾಜ್ಯ ಮಾತ್ರ ಮಾಡುತ್ತಿದ್ದೀರಿ ಎಂದು ಏನೇನೋ ಹೇಳುತ್ತಿದ್ದಾರೆ. ಕಂದಾಯವನ್ನು ಹಳೇ ದರದಲ್ಲೇ ವಸೂಲ್ಮಾಡುವುದರ ಬಗ್ಗೆ ಸರ್ಕಾರದವರ ನೀತಿ, ರೀತಿ, ಧೋರಣೆ, ಏನೆಂಬುದನ್ನು ನಾಲ್ಕು ಲೈನಿನಲ್ಲಿ ತಿಳಿಸಿ ಅಂದರೆ ಏನನ್ನೋ ಗಂಟೆಗಟ್ಟಲೇ ಹೇಳುತ್ತಿದ್ದಾರೆ.

ಶ್ರೀ ಎಚ್. ವಿ. ಕೌಜಲಗಿ.—ಸರ್ಕಾರದವರು ಏನು ಒಂದು ಅಷ್ಯೂರೆನ್ಸನ್ನು ಈ ಸಭೆಗೆ ಕೊಟ್ಟಿದ್ದರೋ ಅದಕ್ಕೆ ವಿರುದ್ಧವಾಗಿ ಹೋಗಿಲ್ಲ. ಇನ್ನು ಮೈಸೂರು ಕಡೆ ಕೆಲವು ಭಾಗದಲ್ಲಿ ಕಂದಾಯ ಮೂರು ನಾಲ್ಕು ಪಟ್ಟು ಜಾಸ್ತಿಯಾಗಿದೆ ಎಂದು ಶ್ರೀಮಾನ್ ಡಿ. ದೇವರಾಜ ಅರಸರು ಹೇಳಿದರು. ಮೊದಲು ಎಲ್ಲಿ ಹನ್ನೆರಡಾಣೆ ಕಂದಾಯವಿತ್ತು ಅಲ್ಲ.........

ಶ್ರೀ ಡಿ. ದೇವರಾಜ ಅರಸ್.—ನಾನು ಅದನ್ನೂ ಹೇಳಿದ್ದೇನೆ......I have said that it has come down by 50 per cent in certain cases and that it has gone up by 300 per cent in certain other cases. I am not here as a representative of Hunsur constituency alone but I am here as a member who is interested in the whole State. I am aware of my responsibility. That is not the way to look at things. I do take strong objection to what the Hon. Minister said. I am not talking with reference to Hunsur alone; Let him understand properly. He need not teach me.

ಶ್ರೀ ಎಚ್. ವಿ. ಕೌಜಲಗಿ.—ನಾನು ಈ ಮುಂಚೆಯೇ ಏನು ಹೇಳಿದೆ ಎಂದರೆ—ಯಾವ ಪ್ರಕಾರ ಗಾರ್ಡನ್ ಲ್ಯಾಂಡ್ ಮತ್ತು ವೆಟ್ ಲ್ಯಾಂಡುಗಳಿಗೆ ರೀಸೆಟಲ್‌ಮೆಂಟಿನ ನಂತರ ಕಂದಾಯ ವಿಧಿಸಿದ್ದುದರ ವಿಚಾರದಲ್ಲಿ ಹೆಚ್ಚಿನ ತಕರಾರುಗಳು ಬಂದು ಹೈಕೋರ್ಟಿಗೆ ಕೆಲವರು ರಿಟ್ ಹೋದರು ಆದರೆ ಡ್ರೈ ಲ್ಯಾಂಡ್ ಬಗ್ಗೆ ಅಷ್ಟೇನೂ ತಕರಾರು ಬರಲಿಲ್ಲ. ಮೂರು ಜಿಲ್ಲೆಗಳವರು ಮಾತ್ರ ರಿಟ್ ಪಿಟಿಷನ್ ಹಾಕಿದ್ದರು ಎಂಬುದನ್ನು ಹೇಳುತ್ತಿದ್ದೆ. ಡ್ರೈಲ್ಯಾಂಡುಗಳಿಗೆ ನಾವು ಹಳೇ ದರದಲ್ಲೇ ಕಂದಾಯ ವಸೂಲ್ಮಾಡುವುದಾಗಿ ಅಂಡರ್ ಟೇಕಿಂಗ್ ಕೊಟ್ಟಿದ್ದೆವು. ಆದರೆ ಕೆಲವು ಕಡೆ 15-20 ಪಟ್ಟು ಕಡಮೆಯಾಗಿದ್ದರೆ, ಇನ್ನು ಕೆಲವು ಕಡೆ ಡ್ರೈಲ್ಯಾಂಡುಗಳಿಗೆ 300-400 ಪಟ್ಟು ಕಂದಾಯ ಜಾಸ್ತಿ ಆಗಿದೆ, ಇನ್ನು ಕೆಲವು ಕಡೆ 200 ಟೈಂಸ್ ಹೆಚ್ಚಾಗಿದೆ ಎಂದು ಕೆಲವರು ಬಂದು ಹೇಳಿದರು. ಆಗ ಸರ್ಕಾರದವರು ಅದನ್ನು ಪುನರ್ವಿಮರ್ಶೆ ಮಾಡುವವರೆಗೂ ಅಂಥ ಕಡೆಗಳಲ್ಲಿ ಕಂದಾಯವನ್ನು ಹಳೇ ದರದಲ್ಲೇ ವಸೂಲ್ಮಾಡುವುದಕ್ಕೆ ವಿಚಾರ ಮಾಡಬೇಕೆಂದು ಇಲ್ಲಿಯೂ ಕೆಲವು ಸೂಚನೆಗಳು ಸರ್ಕಾರಕ್ಕೆ ಬಂದವು. ಆ ಕಾಲಕ್ಕೆ ಸರ್ಕಾರದವರು ವಿಚಾರ ಮಾಡಿರುವುದಾಗಿ ಹೇಳಿದ್ದೆವು. ಇನ್ನು ಕೆಲವರು ಸರ್ಕಾರದವರಲ್ಲಿ ಬಂದು ಸರ್‌ಛಾರ್ಜನ್ನು ಒಂದಕ್ಕೆ ಎಪ್ಪತ್ತೈದು ಪರ್ಸೆಂಟ್ ಹೆಚ್ಚಿಗೆ ಕೊಡುತ್ತಿದ್ದೇವೆ, ಅದನ್ನು ಬದಲಾಯಿಸಿ, ನಾವು ಒಂದಕ್ಕೆ ಎರಡರಷ್ಟು ಕಂದಾಯ ಜಾಸ್ತಿ ಹಾಕಿದರೂ ಪರವಾಇಲ್ಲ ಯಾರಿಗೂ ತೊಂದರೆಯಾಗುವುದಿಲ್ಲ ಕೊಡುತ್ತೇವೆ ಅನ್ನುವುದಾಗಿ ತಿಳಿಸಿದರು. ಆಗ ಸರ್ಕಾರದವರು ಅವರ ಹೇಳಿಕೆಗೆ ಖಬೂಲಿ ಕೊಟ್ಟರು. ಆ ನೀತಿಗನುಸಾರವಾಗಿ ಈ ತಿಂಗಳ ಆರಂಭದಲ್ಲೇ ಹಳೇ ದರದ ದುಪ್ಪಟ್ಟು ಮಾತ್ರ ವಸೂಲ್ಮಾಡಬೇಕೆಂದು ನಮ್ಮ ಅಧಿಕಾರಿಗಳಿಗೆ ನಾವು ತಿಳಿಸಿದ್ದೇವೆ.

ಶ್ರೀ ಎಸ್. ಶಿವಪ್ಪ.—ದುಪ್ಪಟ್ಟು ಅಂದರೇನು ?

ಶ್ರೀ ಎಚ್. ವಿ. ಕೌಜಲಗಿ.—ದುಪ್ಪಟ್ಟು ಎಂದರೆ ಎರಡು ಪಟ್ಟು ಎಂದರ್ಥ.

ಶ್ರೀ ಬಿ. ಎನ್. ಪಾಟೀಲ್.—ತಾವು ಅಧಿಕಾರಿಗಳಿಗೆ ದುಪ್ಪಟ್ಟು ವಸೂಲ್ಮಾಡುವುದಕ್ಕೆ ಆಜ್ಞೆ ಮಾಡಿರತಕ್ಕದ್ದು ಬರೀ ಡ್ರೈ ಲ್ಯಾಂಡುಗಳಿಗೆ ಮಾತ್ರವೋ ಅಥವಾ ಅದನ್ನು ವೆಟ್ ಲ್ಯಾಂಡುಗಳಿಗೂ ಸೇರಿಸಿದ್ದೀರೋ ?

ಶ್ರೀ ಎಚ್. ವಿ. ಕೌಜಲಗಿ.—ಅದರಂತೆ ಡ್ರೈ ಲ್ಯಾಂಡ್ಸಿಗೆ ಮಾತ್ರ ವಸೂಲ್ಮಾಡಬೇಕೆಂದು ತಿಳಿಸಿದ್ದೇವೆ. ಈ ಡ್ರೈ ಲ್ಯಾಂಡ್ಸನ್ನು ಇಟ್ಟುಕೊಂಡಿರತಕ್ಕ ಜನರಿಗೆ ಎಲ್ಲೆಲ್ಲಿ ಕಂದಾಯ ವಿಪರೀತ ಹೆಚ್ಚಾಗಿದೆ ಅಲ್ಲಿ ಅದನ್ನು ಪುನರ್ವಿಮರ್ಶೆ ಮಾಡುತ್ತೇವೆಂದು ಹೇಳಿದ್ದೇನೇ ವಿನಾ ನಾನು ಎಲ್ಲಿಯೂ ವೆಟ್ ಲ್ಯಾಂಡುಗಳ ಬಗ್ಗೆ ಕಂದಾಯವನ್ನು ಪುನರ್‌ಪರಿಶೀಲನೆ ಮಾಡುತ್ತೇನೆಂದು ಆಶ್ವಾಸನವನ್ನು ಕೊಟ್ಟಿಲ್ಲ ಮತ್ತು ಅದರ ಪ್ರಕಾರ ಅಧಿಕಾರಿಗಳಿಗೆ ಆದೇಶ ಸಹಿತ ಕಳುಹಿಸಿಲ್ಲ. ಡ್ರೈ ಲ್ಯಾಂಡ್ಸಿಗೆ ಮಾತ್ರ ದುಪ್ಪಟ್ಟು ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದೇವೆ. ಇದೇ ಸರ್ಕಾರದವರು ಕೊಟ್ಟಿದ್ದ ಆಶ್ವಾಸನೆ. ಅದನ್ನು ನಾವು ಪಾಲಿಸಿದ್ದೇವೆ.

(ಶ್ರೀ ಎಚ್. ವಿ. ಕೌಜಲಗಿ)

ಇನ್ನು ಮೂರನೆಯದಾಗಿ—ಕರಭಾರದ ವಸೂಲಿಯ ವಿಚಾರದಲ್ಲಿ ಕಳೆದ ಮೂರು ವರ್ಷಗಳಿಂದ ಎಲ್ಲ ಕಡೆಗಳಲ್ಲೂ ನಾಪೀಕಾಗಿದ್ದುದರಿಂದ ಕಂದಾಯವನ್ನು ವಸೂಲ್ಮಾಡಿಲ್ಲ. ಆದನ್ನೆಲಾ ಈಗ ಒಂದೇ ಕಂತಿನಲ್ಲಿ ವಸೂಲ್ಮಾಡುವುದಕ್ಕೆ ಹೊರಟ್ಟಿದ್ದಾರೆ, ಜನರಿಗೆ ಕೋಯರ್ಸೀವ್ ಮೆಷರ್ಸ್ಸನ್ನು ಹಾಕಿ ಅವರನ್ನು ಹೆದರಿಸಿ ಬೆದರಿಸಿ ಜನರಿಗೆ ತೊಂದರೆ ಕೊಟ್ಟು ಕಂದಾಯ ವಸೂಲ್ಮಾಡುತ್ತಿದ್ದಾರೆ ಈ ವಿಚಾರವಾಗಿ ಸರ್ಕಾರದವರು ಕೆಳಗಿನ ಅಧಿಕಾರಿಗಳಿಗೆ ಸೂಕ್ತ ತಿಳುವಳಿಕೆಯನ್ನು ಕೊಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಸಾಮಾನ್ಯವಾದ ಕೆಲವು ನಿಯಮಗಳಿವೆ. ಎಲ್ಲೆಲ್ಲಿ ನಾರ್ಮ್ಯಾಣೆಗಿಂತ ಕಡಮೆ ಬೆಳೆಯಾಗಿರುತ್ತದೆ ಅಂಥಾ ಕಡೆ ಪೂರಾ ಸೂಟ್ ಹಾಕುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಅಷ್ಟೇ ಅಲ್ಲದೆ ಅದನ್ನು ವಿತ್ ರಿಟ್ರಾಸ್ಪೆಕ್ಟಿವ್ ಎಫೆಕ್ಟಾಗಿ ಅಂದರೆ ಈ ಸರ್ಕಾರಿ ಹುಕುಮನ್ನು 1968 ರಲ್ಲಿ ಹೊರಡಿಸಿದ್ದರೂ ಅದನ್ನು 1965 ರಿಂದಲೇ ಜಾರಿಗೆ ಬಂದಂತೆ ಭಾವಿಸಬೇಕೆಂದೂ, ಅದು 3 ವರ್ಷಗಳ ಹಿಂದೆಯೇ ಜಾರಿಗೆ ಬಂದಹಾಗೆ ಭಾವಿಸಬೇಕೆಂದೂ ಮತ್ತು ಎಲ್ಲೆಲ್ಲಿ ಸಸ್ಪೆನ್ಷನ್ ಮತ್ತು ರಿಮಿಷನ್ ಮಾಡಲಾಗಿತ್ತೋ ಅಂಥ ಕಡೆಗಳಲ್ಲಿ ರಿಪೋರ್ಟನ್ನು ತರಿಸಿಕೊಂಡು ಕಂದಾಯ ಬಂದ್ ಮಾಡಬೇಕೆಂದು ಹೇಳಿದ್ದೇವೆ. ಎಲ್ಲಿಯೂ ಕೂಡ ಕೊಯರ್ಸಿವ್ ಸ್ಟೆಪ್ಸ್ ತೆಗೆದುಕೊಳ್ಳುವುದು ಬೇಡವೆಂದು ಹೇಳಿದ್ದೇವೆ. ಆದ್ದರಿಂದ ಆ ರೀತಿಯಾಗಿ ಮಾಡಲಲ್ಲ. ಆದರೆ ಒಂದು ಮಾತು. 4 ವರ್ಷಗಳದ್ದು ಒಂದು ಸಾರಿ ಕೊಡುವುದು ಬಂದಿದೆ. ಲ್ಯಾಂಡ್ ರೆವಿನ್ಯೂ ಅಷ್ಟು ಬಾಕಿ ಇಲ್ಲ. ಇವತ್ತು ತಕಾವಿ ಲೋನ್, ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಮತ್ತು ಪಂಪ್‌ಸೆಟ್ ಲೋನ್ ಎಲ್ಲಾ ಸುಮಾರು 38-40 ಕೋಟಿ ರೂಪಾಯಿಗಳಷ್ಟು ಬಾಕಿ ಸರ್ಕಾರಕ್ಕೆ ಕೊಡಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಬಾಕಿ ಎಲ್ಲವನ್ನೂ ಜಾಗ್ರತೆಯಾಗಿ ವಸೂಲುಮಾಡಬೇಕು.

ಶ್ರೀ ಎಚ್. ವಿ. ಕೌಜಲಗಿ.—ಬಾಕಿ ಕೊಡದಿದ್ದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ನಮ್ಮ ಅಧಿಕಾರಿಗಳು ಹೇಳಲಲ್ಲ. ಆದರೆ ಕೆಲವು ಮಾನ್ಯ ಸದಸ್ಯರು ಕಂದಾಯ ಕಡಿಮೆ ಮಾಡುವವರೆಗೂ ಬಾಕಿ ಕೊಡಬೇಡಿ ಎಂದು ರೈತರಿಗೆ ಹೇಳುತ್ತಿದ್ದಾರೆ. ನಮ್ಮ ಅಧಿಕಾರಿಗಳು ಯಾರೂ ಮಾನ್ಯ ಸದಸ್ಯರು ಹೇಳಿದಹಾಗೆ ಹೇಳುವುದಿಲ್ಲ.

Sri K. H. PATIL.—I rise to a point of order. The remark of the Hon. Minister amounts to a breach of privilege of the members. I would like to ask whether he can charge members that we are going there and asking the ryots not to pay land revenue? This affects the dignity of the members. If the Hon. Minister has got any members in view, let him name them and face the consequences. Otherwise, he should withdraw his remark that members are going there and canvassing with the ryots not to pay land revenue. I very much feel for this remark and I seriously object to this particular remark of the Hon. Minister, Sri Koujalgi.

ಶ್ರೀ ಎಂ. ಕೆ. ಸುರ್‌ಪುರ್ (ಇಂಡಿ).—ಲ್ಯಾಂಡ್ ರೆವಿನ್ಯೂ ಕಡಿಮೆ ಮಾಡಬೇಕೆಂದು ವಿರೋಧಪಕ್ಷದ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಕಂದಾಯ ಆ ರೀತಿ ಕೊಡಬಾರದೆಂದು ಯಾರೂ ಹೇಳಲಲ್ಲ.

Sri AZEEZ SAIT.—So far none of us has gone to the Ryots and asked them not to pay revenue. But now that the Hon. Minister has attributed this to us, we shall hereafter do the same.

Sri H. M. CHANNABASAPPA.—On a point of information and explanation. The statement of the Minister is dated 17th September 1968. Will you please explain to us whether there is any reference in the assurance given by the Minister that it is in respect of only particular kinds of lands, namely water-fed areas or garden lands and

things of that kind ! I would like to tell the Hon. Minister that this is a deliberate and misleading act on the part of Government. I will read out his own statement for the benefit of the Minister.

" ಈಗಿದ್ದ ಕಾಯಿದೆ ಪ್ರಕಾರ ರೀಸೆಟಲ್‌ಮೆಂಟ್ ಅಥವಾ ರೀಸರ್ವೆ ಏನಾಯಿತು ಅದಕ್ಕೆ ಈ ಮಹಾಸಭೆಯ ಮನ್ನಣೆ ಪಡೆಯಬೇಕಾಗಿತ್ತು. ಆ ಪ್ರಕಾರ ಈ ಸಭೆಯ ಮುಂದೆ ಬಂದಾಗ ಅದು ಮನ್ನಣೆ ಪಡೆಯಿತು. ಹೀಗಾದನಂತರ ಈ ವರ್ಷದ ಆರಂಭಕ್ಕೆ ಯಾವ ಕಾಲಕ್ಕೆ ಈ ಹೊಸ ರೀಸೆಟಲ್‌ಮೆಂಟ್ ಆದ ರೇಟ್ಸ್ ಪ್ರಕಾರ ವಸೂಲು ಮಾಡಬೇಕು ಅಂತ ಅಂದಾಗ ಜನರಿಗೆ ಕಷ್ಟವಾಯಿತು. ಕೆಲ ಕೆಲವುಕಡೆ ನೂರು ಪರ್ಸೆಂಟ್, ಕೆಲವುಕಡೆ 200 ಪರ್ಸೆಂಟ್, ಕೆಲವುಕಡೆ ಡಬ್ಬಲ್ ಹೆಚ್ಚಾಯಿತು. ಕೆಲವು ಕಡೆ ಕಡಿಮೆಯೂ ಆಗಿದೆ. ಅದಕ್ಕೆ ಅನೇಕ ತಕರಾರುಗಳು ಸರ್ಕಾರದ ಮುಂದೆ ಬಂದಿವೆ. ಅಷ್ಟೇ ಅಲ್ಲ. ಕೆಲವರು ಹೈಕೋರ್ಟ್‌ಗೂ ಕೂಡ ಹೋಗಿ ರಿಟ್ ಹಾಕಿದ್ದಾರೆ ಮತ್ತು ಕೆಲವೊಂದು ಕಡೆ ಹೈಕೋರ್ಟಿನಿಂದ ಸ್ಟೇಯೂ ಆಗಿದೆ. ಈ ದೇಶದಲ್ಲಿ ಈಗಿದ್ದ ಕಾಯಿದೆ ಪ್ರಕಾರ ಏನೂ ಮಾಡಲಿಕ್ಕೆ ಬರುವುದಿಲ್ಲ. ಸಾಮಾನ್ಯವಾಗಿ ನೋಡಿದರೆ ಇದು 'ಅನ್‌ಸೈನ್‌ಟಿಫಿಕ್' ಆಗಿದೆಯೇ ಹೇಗೆ ವ್ಯವಹಾರ ದೃಷ್ಟಿಯಿಂದ ನೋಡಿದರೆ ಅನ್ಯಾಯ ಅಥವಾ ತಪ್ಪು ಆಗುತ್ತದೆಯೇ ಹೇಗೆ ಎಂಬ ದೃಷ್ಟಿಯಿಂದ ನೋಡಿದಾಗ ಕೆಲವು ಕಡೆ 200—300 ಪಟ್ಟು ಆಗಿದೆ, ಇದನ್ನ ಸರಿಪಡಿಸುವುದು ಯೋಗ್ಯ ಎಂದು ಹೇಳಿ ಸರ್ಕಾರದವರಿಗೆ ಗೊತ್ತಾಗಿ ಅಥವಾ ಮನವರಿಕೆಯಾಗಿ ಮಾನ್ಯ ಮುಖ್ಯ ಮಂತ್ರಿಗಳು 2ನೇ ತಾರೀಖು ಈ ಮನೆ ಕೂಡುವುದಕ್ಕಿಂತ 3–4 ದಿವಸದ ಮುಂಚೆ ಪ್ರೆಸ್ ಕಾನ್‌ಫರೆನ್ಸ್ ಕರೆದು ಈ ವಿಷಯದಲ್ಲಿ ಸರ್ಕಾರದವರು ಪುನರ್ ವಿಚಾರಮಾಡುತ್ತೇವೆ, ಈಗಿದ್ದ ಕಾಯಿದೆ ಪ್ರಕಾರ ಮಾಡಲಿಕ್ಕೆ ಬರುವುದಿಲ್ಲ, ಇದನ್ನು ಪುನರ್‌ವಿಚಾರ ಮಾಡಬೇಕಾದರೆ ಲ್ಯಾಂಡ್ ರೆವಿನ್ಯೂ ಆಕ್ಟಿನ ಕೆಲವು ಕಲಂಗಳನ್ನು ದುರಸ್ತು ಮಾಡಬೇಕಾಗುತ್ತದೆ. ಅದನ್ನು ಮಾಡಿದ ಹೊರತು ಇದನ್ನು ಮಾಡಲಿಕ್ಕೆ ಬರುವುದಿಲ್ಲವೆಂದು ಹೇಳಿದರು. ಹಾಗೆ ಕಾಯಿದೆ ಪಂಡಿತರ ಅಭಿಪ್ರಾಯ ಇದೆ. ಈ ದೃಷ್ಟಿಯಿಂದ ಇದಕ್ಕೆ ತಿದ್ದುಪಡಿಗಳನ್ನೂ ಸಹ ಲ್ಯಾಂಡ್ ರೆವಿನ್ಯೂ ಕೋಡಿಗೆ ತರಬೇಕೆಂದು ಸರ್ಕಾರದವರು ಪರಿಶೀಲನೆಮಾಡಿದ್ದಾರೆ. ಆ ದೃಷ್ಟಿಯಿಂದ ಪರಿಶೀಲಿಸಲಿಕ್ಕೆ ಹತ್ತಿದ್ದಾರೆ. ಈಗ ಮಾನ್ಯ ಶ್ರೀ ನಂಜೇಗೌಡರು 12ನೇ ಕಲಂನ ಪೂರ್ತಿ ತಿದ್ದುಪಡಿಯನ್ನು ತಂದಿದ್ದಾರೆ. ಲಾ ಡಿಪಾರ್ಟ್‌ಮೆಂಟಿನ ಅಭಿಪ್ರಾಯ ಇದು ಒಂದೇ ಅಲ್ಲ. ಇನ್ನೂ 2-3 ಕಲಂಗಳನ್ನು ದುರಸ್ತುಮಾಡಬೇಕಾಗುತ್ತದೆ. ಇಷ್ಟರಿಂದಲೇ ಆಗುವುದಿಲ್ಲ. ಪೂರ್ಣವಾಗಿ ದುರಸ್ತು ಮಾಡಿದರೆ, ಎಗ್ಸಿಕ್ಯುಟೀವ್ ಪವರ್ಸ್ ಆಗಲೀ ಅಡ್ಮಿನಿಸ್ಟ್ರೇಟಿವ್ ಆರ್ಡರ್ಸ್ ಆಗಲಿ ಇವುಗಳಲ್ಲಿ ಅಲ್ಪಸ್ವಲ್ಪ ಹೆಚ್ಚುಕಮ್ಮಿಯಾದರೆ, ಸರಿಪಡಿಸಲಿಕ್ಕೆ ಸಾಧ್ಯವಿದೆ ಎಂದು ಹೇಳುತ್ತಾರೆ."

ಮಾನ್ಯ ಶ್ರೀ ನಂಜೇಗೌಡರು ಹೀಗೆ ಹೇಳಿದ್ದಾರೆ :

" ಶ್ರೀ ಎಚ್. ಎನ್. ನಂಜೇಗೌಡ :—...ನಮ್ಮ ಜಿಲ್ಲೆಯಲ್ಲಿ ಈ ರೀಕ್ಲಾಸಿಫಿಕೇಷನ್ ಪ್ರಕಾರ ಕಲೆಕ್ಷನ್ ಮಾಡಿದರೆ 15 ಲಕ್ಷ ರೂಪಾಯಿಗೂ ಜಾಸ್ತಿಯಾಗಿ ಕೊಡಬೇಕಾಗುತ್ತದೆ. ತತ್ವಶಃ ಇದನ್ನು ಒಪ್ಪಿಕೊಂಡಿರುವುದರಿಂದ ಈ ಅಧಿವೇಶನದಲ್ಲಿ ತರುವುದಕ್ಕೆ ಸಾಧ್ಯವಾಗದಿದ್ದರೆ ಒಂದು ಆರ್ಡಿನೆನ್ಸನ್ನಾದರೂ ಹೊರಡಿಸಿ ರೈತರಿಗೆ ಅನುಕೂಲ ಮಾಡಿಕೊಡುತ್ತಾರೆಂಬ ಭರವಸೆಯ ಮೇಲೆ ನಾನು ಈ ತಿದ್ದುಪಡಿ ಬಿಲ್ಲನ್ನು ವಾಪಸ್ಸು ಪಡೆಯುತ್ತೇನೆ."

ಈ ಸಂದರ್ಭದಲ್ಲಿ ಮಾನ್ಯ ಶ್ರೀ ಶಿವಪ್ಪನವರು ಎದ್ದು ಹೀಗೆ ಒಂದು ಮಾತನ್ನು ಹೇಳಿದ್ದಾರೆ :

" ಶ್ರೀ ಎಸ್. ಶಿವಪ್ಪ.—...ಸರ್ವೆ ಸೆಟಲ್‌ಮೆಂಟ್ ಪ್ರಕಾರ ದರ ಜಾಸ್ತಿಯಾಗಿರುವುದನ್ನು ಸಸ್ಪೆಂಡ್‌ಮಾಡಿ ಮುಂದೆ ಬಿಲ್ಲನ್ನು ತರುವವರೆಗೆ ಜಾರಿಗೆ ತರಬಾರದು, ಮುಂದೆ ಚರ್ಚೆಗೆ ಅವಕಾಶ ಕೊಡಬಹುದು."

ಮಾನ್ಯ ಶ್ರೀ ಡಿ. ದೇವರಾಜ್ ಅರಸ್ ಅವರು ಹೀಗೆ ಹೇಳಿದ್ದಾರೆ :

" ಮಂತ್ರಿಗಳು ಹೇಳಿದಹಾಗೆ ಸರ್ಕಾರದ ಅಭಿಪ್ರಾಯದಲ್ಲಿ ತೀವ್ರವಾಗಿ ತರಬೇಕೆಂಬ ಉದ್ದೇಶವಿದ್ದರೆ ಶಾಸನೋಕ್ತವಾಗಿ ತರುವುದಕ್ಕೆ ಅಡಚಣೆ ಇದ್ದರೂ.

(SRI H. M. CHANNABASAPPA)

ಇರಬಹುದು. ಕಂದಾಯ ಜಾಸ್ತಿಯಾಗಿರುವ ಕಡೆ ಹಳೆಯ ಕಂದಾಯ ದೇಶಾದ್ಯಂತ ವಸೂಲು ಮಾಡಿ ಎಂದು ಹೇಳಿದ್ದಾರೆ. ಮಳೆಯ ಅಭಾವ ಈಗಿದೆ, ಅನೇಕ ಕಡೆ ವಸೂಲು ನಿಲ್ಲಿಸುತ್ತಿದ್ದಾರೆ. ಹಾಗಿರುವಾಗ ಬೇರೆ ಕಡೆ ಹೆಚ್ಚು ವಸೂಲುಮಾಡುವುದಕ್ಕೆ ಬದಲಾಗಿ ರಾಜ್ಯದಲ್ಲಿ ಸರ್ವೆ ಸೆಟಲ್‌ಮೆಂಟ್ ಆಗುವುದಕ್ಕೆ ಮುಂಚೆ ಇದ್ದ ಕಂದಾಯ ವಸೂಲುಮಾಡುವುದಕ್ಕೆ ಎಲ್ಲಿ ಸಾಧ್ಯವಿದೆ ಅಲ್ಲಿ ಹಳೇ ಕಂದಾಯ ತಾತ್ಕಾಲಿಕವಾಗಿ ವಸೂಲು ಮಾಡಬೇಕು.''

Sri D. DEVARAJ URS.—So it does not refer only to Hunsur. Let him understand the statement that I made on the floor of the House then. It refers to places wherever tax was increased and it is not referring to Hunsur only.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಆಗ ಈ ರೀತಿಯಾಗಿ ಹೇಳಿದ್ದೇನೆ:

'' ಈಗಿರುವುದು ಶಾಸ್ತ್ರೋಕ್ತವಾಗಿ ಇಲ್ಲ ಎಂದು ಒಪ್ಪಿರುವುದು ಬಹಳ ಸಂತೋಷ. ಇಡೀ ಭರತಖಂಡದಲ್ಲಿ ಈಗಿರುವ ಭೂಕಂದಾಯ ಶಾಸ್ತ್ರೋಕ್ತವಲ್ಲವೆಂದು ಎಲ್ಲರೂ ಹೇಳುತ್ತಾರೆ. ಮತ್ತು ಈಗಿರುವುದು ನ್ಯಾಯ ಸಮ್ಮತವೂ ಅಲ್ಲ. ಆದ್ದರಿಂದ ಕಂದಾಯವನ್ನು ವಜಾಮಾಡಿ ಬೇರೆ ರೀತಿಯಲ್ಲಿ ವ್ಯವಸ್ಥೆಮಾಡಬೇಕು ಎಂದು ಸರ್ಕಾರ ಕೂಡ ಒಪ್ಪಿದೆ. ಇಂದು ಬೇರೆ ಅಭಿಪ್ರಾಯ ಕೊಡುವುದಿಲ್ಲ. ಈಗ ಅರಿಕೆ ಮಾಡುವುದಿಷ್ಟೆ. ಈ ವಿಷಯದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ರೈತರಿಗೆ ಅನ್ಯಾಯವಾಗುವ ವಿಷಯದಲ್ಲಿ ಎಷ್ಟು ಸಹಾನುಭೂತಿ ತೋರಿಸುತ್ತೀರೋ ಅಷ್ಟೂ ದೇಶಕ್ಕೆ ಒಳ್ಳೆಯದು. ಈಗ ಮಾಡಬೇಕಾದ್ದು ಇಷ್ಟೆ. ನಾಳೆಯೇ ತನ್ನಿ ಎಂದು ಹೇಳುವುದಿಲ್ಲ. ಆರ್ಡಿನೆನ್ಸ್ ಹೊರಡಿಸಬೇಕಾಗಿಲ್ಲ. ಇದರಲ್ಲಿ ತಪ್ಪಿದ್ದರೆ ಸರಿಪಡಿಸುವುದಲ್ಲ. ಸ್ವಲ್ಪ ತಿದ್ದುಪಡಿ ಏನೆಂದರೆ, ಕಂದಾಯ ವಜಾ ಮಾಡುವುದು ಅಥವಾ ಕೆಲವು ದಿವಸ ನಿಲ್ಲಿಸುವುದು; ಇದನ್ನು ಮಾಡಬೇಕೆಂಬುದು. ಇದನ್ನು ಮಾಡಬೇಕು. ರೀಸೆಟಲ್‌ಮೆಂಟ್ ಏನಿದೆ ಅದರ ಮೇಲೆ ಬೇಕಾದರೆ ಒಂದು ಗಂಟೆ ಭಾಷಣಮಾಡಿ ಮನವರಿಕೆಯಾಗುವ ರೀತಿಯಲ್ಲಿ ಈಗಿರುವುದು ನ್ಯಾಯವಲ್ಲವೆಂದು ವಾದಿಸಬಹುದು. ಹಾಗಿರುವಾಗ ಅರಿಕೆಮಾಡುವುದು ಬಿಲ್ಲನ್ನು ತರುತ್ತೇವೆಂದು ನಿರ್ಧಾರ ಮಾಡಿದಮೇಲೆ ಸಂಪೂರ್ಣವಾಗಿ ಪರಿಶೀಲಿಸಿ ಎಲ್ಲಾ ವಿಚಾರಗಳನ್ನೂ ಯೋಚನೆಮಾಡಿ ತನ್ನಿ, ಹಾಗೆ ತರುವವರೆಗೆ ಹಿಂದಿನ ಕ್ಲಾಸಿಫಿಕೇಷನ್ ಪ್ರಕಾರ ಕಂದಾಯವೇನಿತ್ತು ಅದರ ಪ್ರಕಾರ ವಸೂಲುಮಾಡಿ, ಎಲ್ಲಿ ವಸೂಲುಮಾಡಬೇಕು, ಎಲ್ಲಿ ಬಿಡಬೇಕು ಎಂಬುದನ್ನು ಆಯಾ ಪ್ರದೇಶದ ಸ್ಥಿತಿಗತಿಗಳನ್ನು ನೋಡಿ ಅದಕ್ಕನುಸಾರವಾಗಿ ನಿರ್ಧರಿಸಬೇಕು. ಸಾರ್ವತ್ರಿಕವಾಗಿ ರಿಕ್ಲಾಸಿಫಿಕೇಷನ್ ಪ್ರಕಾರ ಈಗ ಕಂದಾಯ ಠರಾವು ಮಾಡಿರುವುದನ್ನು ಸಭೆ ಒಪ್ಪಿದರೆ ಸರಿಪಡಿಸುವುದಕ್ಕೆ ಅಧಿಕಾರವಿದೆ. ಆದುದರಿಂದ ಸಭೆ ಇಷ್ಟು ಮಾಡಬೇಕು. ಕಂದಾಯವನ್ನು ಮಾತ್ರ ರೀಕ್ಲಾಸಿಫಿಕೇಷನ್ ಪ್ರಕಾರ ಎಲ್ಲೂ ವಸೂಲುಮಾಡಬಾರದು ಎಂಬುದಾಗಿ ಆಜ್ಞೆ ಮಾಡಬೇಕು, ವಸೂಲು ಮಾಡಿದ್ದರೆ ರೀಫಂಡ್ ಮಾಡಬೇಕು ಅಥವಾ ಮುಂದಕ್ಕೆ ಅಡ್‌ಜಸ್ಟ್ ಮಾಡಬೇಕು.''

ಇದು ಬ್ಯಾಕ್‌ಗ್ರೌಂಡ್. ಇದಾದಮೇಲೆ ಮಾನ್ಯ ಶ್ರೀ ಎಚ್. ವಿ. ಕೌಜಲಗಿಯವರು ಮತ್ತೆ ಮಾತನಾಡಿದ್ದಾರೆ. ಈಗ ಮಾತನಾಡುತ್ತಿರುವುದು ಕೇವಲ ತರೀ ಜಮೀನಿಗೆ ಸಂಬಂಧಪಟ್ಟದ್ದು ಬಾಗಾಯ್ತು ಜಮೀನಿಗೆ ಸಂಬಂಧಪಟ್ಟದ್ದು ಅಥವಾ ಖುಷ್ಕಿ ಜಮೀನಿಗೆ ಸಂಬಂಧಪಟ್ಟದ್ದು ಎಂದು ಯಾರೂ ಈ ಸಭೆಯ ಸದಸ್ಯರು ಹೇಳಲಿಲ್ಲ. ಅದು ವರದಿಯಿಂದ ಗೊತ್ತಾಗುತ್ತದೆ. ಮಾನ್ಯ ಶ್ರೀ ಕೌಜಲಗಿಯವರ ಭಾಷಣದಲ್ಲಿ ಅವರು ಉಪಯೋಗಿಸಿದ ಪದಗಳನ್ನು ಪೂರ್ತಿಯಾಗಿ ಈಗ ನಾನು ಓದಿದ್ದೇನೆ. ಎಲ್ಲಿಯೂ ಆ ಪದ ಉಪಯೋಗಿಸಲಿಲ್ಲ. ಅವರು ಈ ಸಭೆಯ ಮುಂದೆ ಕೊಟ್ಟ ಆಶ್ವಾಸನೆಯನ್ನು ಹೇಳಿದ್ದೇನೆ. ಡ್ಯಾನಿಯಲ್ ಕಂಟು ಜಡ್‌ಮೆಂಟ್ ಎನ್ನುವಹಾಗೆ ಅದಕ್ಕೆ ತಿರುಗುಮರುಗು ಕೊಟ್ಟು ಹೇಳತಕ್ಕದ್ದು ಸರ್ಕಾರದ ಘನತೆಗೆ ಕಡಿಮೆ.

Sri H. V. KOUJALGI.—You are also playing the part of Daniel. I will tell you.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಶ್ರೀ ಕೌಜಲಗಿಯವರು ಈ ರೀತಿ ಹೇಳಿದ್ದಾರೆ:

"ಹೊಸ ತಿದ್ದುಪಡಿಯಾಗುವವರೆಗೂ ಸರ್ಕಾರದವರು ಹಳೇ ದರದ ಪ್ರಕಾರ ಕಂದಾಯ ವಸೂಲುಮಾಡಬೇಕು. ಹೆಚ್ಚಿನ ಆಕರಣೆ ಪ್ರಕಾರ ವಸೂಲ್ಮಾಡಬಾರದು ಎಂದು ಹೇಳಿದ್ದಾರೆ."

The Hon. Minister must understand that he is talking in the Assembly and not making a public speech anywhere else. He has given a clear assurance and in that he has not referred to a particular class of land and now he cannot say that we should read in between the lines.

Sri H. V. KOUJALGI.—Sir I have not yielded.

Sri H. M. CHANNABASAPPA.—Sir, the Hon. Minister yielded and I have been permitted to speak. When it is inconvenient for him he says that he has not yielded.

4-00 P.M.

Sri H. V. KOUJALGI.—Sir, I have been arguing in the Court for the last 30 years, and I am not afraid of him.

Sri H. M. CHANNABASAPPA.—Sir, I have not yielded; I have already held the House.

Mr. DEPUTY SPEAKER.—I request both the members to resume their seats. ಈಗ ಇದು ಒಂದು ಗಂಟೆ ಚರ್ಚೆಯಾಯಿತು. ಇವತ್ತು ಇದ್ದದ್ದು ಒಂದು ಸ್ಟೇಟ್‌ಮೆಂಟ್ ಮಾಡಬೇಕೆಂದು. ಸ್ಟೇಟ್‌ಮೆಂಟ್ ಮುಗಿಸಿಬಿಡಲಿ. ಅದರ ಕಾಪೀಸ್ ತಮಗೆಲ್ಲಾ ಕೊಡುತ್ತೇವೆಂದು ಹೇಳಿದ್ದಾರೆ. ಮುಂದೆ ರೆವೆನ್ಯೂ ಡಿಮ್ಯಾಂಡ್ ಬಂದಾಗ ಹೆಚ್ಚು ಚರ್ಚೆ ಮಾಡಬಹುದು.

Today we have to take up the Demands of Social Welfare Department. I appeal to the hon. Members not to prolong this discussion. I request the Hon. Minister to conclude.

Sri H. M. CHANNABASAPPA.—Sir, I am on the point of completion.

Sri V. N. PATIL.—The Chair was pleased to state that after the Minister's statement, the Demands pertaining to Social Welfare will be taken up. These demands should be discussed for one full day.

Sri H. M. CHANNABASAPPA.—This is what Sri Koujalgi has said:

"ಹೊಸ ತಿದ್ದುಪಡಿ ಆಗುವವರೆಗೂ ಸರ್ಕಾರದವರು ಹಳೇ ದರದ ಪ್ರಕಾರ ಕಂದಾಯ ವಸೂಲ್ಮಾಡಬೇಕು; ಹೆಚ್ಚಿನ ಆಕರಣೆ ಪ್ರಕಾರ ವಸೂಲು ಮಾಡಬಾರದು ಎಂದು ಹೇಳಿದ್ದಾರೆ. ಇದನ್ನು ನಾವು ಅಪ್ರತ್ಯಕ್ಷವಾಗಿ ಒಪ್ಪಿಕೊಂಡಿದ್ದೇವೆ. ಹಳೇ ದರದ ಪ್ರಕಾರ ಕೊಡಬೇಕು ಎಂದರೆ ಈಗ ಇದ್ದ ಕಾಯಿದೆ ದುರಸ್ತಿ ಆಗುವವರೆಗೂ ಆ ರೀತಿ ಸರ್ಕಾರದಿಂದ ಹೇಳಲಿಕ್ಕೆ ಬರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಹಳೇ ದರದ ಪ್ರಕಾರ ಕೊಡಿರಿ, ಅದನ್ನು ಪಾರ್ಟ್ ಪೇಮೆಂಟ್ ಎಂದು ತೆಗೆದುಕೊಳ್ಳುತ್ತೇವೆ."

This is the statement made by the Hon. Minister. But, it has not been implemented.

Sri H. V. KOUJALGI.—I have implemented it.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂತ್ರಿಗಳು ಮುಂದುವರಿದು ಹೀಗೆ ಹೇಳಿದ್ದಾರೆ :

" ಹೆಚ್ಚು ಹಣ ಕೊಡಬೇಕಾದವರಿಗೆ ಕಂತುಗಳ ಮೂಲಕ ಕೊಡುವುದಕ್ಕೆ ಅವಕಾಶ ಕೊಡಬಹುದು. ಈಗಿನ ಕಾಯಿದೆಯು ತಿದ್ದುಪಡಿ ಆದನಂತರ ಹೆಚ್ಚಾಗಿ ಕೊಟ್ಟಿರುವುದನ್ನು ರೆವಿಶನ್ ಮಾಡಬೇಕಾಗುತ್ತದೆಯೋ, ಏನು ಮಾಡಬೇಕಾಗುತ್ತದೆಯೋ, ಅದನ್ನು ವಿಚಾರ ಮಾಡಬೇಕಾಗುತ್ತದೆ. ಹೆಚ್ಚು ಕಂದಾಯ ಕೊಟ್ಟಿರುವುದನ್ನು ಮುಂದಿನ ವರ್ಷ ಜಮಾ ತೆಗೆದುಕೊಳ್ಳಲಿಕ್ಕೆ ಅಥವಾ ಸೆಟ್ ಆಫ್ ಮಾಡಿಕೊಳ್ಳುವುದಕ್ಕೆ ಬರುತ್ತದೆ. ಆದರಿಂದ ಜನರಿಗೆ ತೊಂದರೆಯಾಗುವುದಿಲ್ಲ. ಇದೇ ಅಧಿವೇಶನದಲ್ಲಿ ಪಾಸ್ ಮಾಡಿದರೂ ಅಷ್ಟೇ, ಮುಂದಿನ ಅಧಿವೇಶನದಲ್ಲಿ ಪಾಸ್ ಮಾಡಿದರೂ ಅಷ್ಟೇ. ಹಳೇ ದರದ ಪ್ರಕಾರ ರೈತರು ಕೊಡುವುದರಿಂದ ಸರ್ಕಾರಕ್ಕೆ ಬರುವ ಹಣ ಕಡಿಮೆಯಾಗುತ್ತದೆ. ಜನರಿಗೆ ಯಾವ ವಿಧದಲ್ಲೂ ತೊಂದರೆಯಾಗುವುದಿಲ್ಲ. ಸಾಧ್ಯವಾದಷ್ಟು ಬೇಗ ತಿದ್ದುಪಡಿ ಮಸೂದೆಯನ್ನು ತಂದು ಈಗಿರುವ ಕಾಯಿದೆಯನ್ನು ದುರಸ್ತಿ ಮಾಡಬೇಕೆಂದಿರುವುದರಿಂದ ಮಾನ್ಯ ಸದಸ್ಯರು ಮಂಡಿಸಿರುವ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಕಾಣಿಸುತ್ತದೆ."

Sri H. V. KOUJALGI.—I have already answered this question.

Sri K. H. PATIL.—Sir, I have raised a point. It is for the Chair to consider it as a Point of Order or a Privilege issue. The Hon. Minister has remarked about the prestige and character of the members. I requested him to withdraw those words. If he does so, I feel it an obligation. But, if he does not do so, I would like to raise it as a Privilege issue, because it is a matter which affects our prestige and character. There is no compromise on a matter where our self-respect is at stake.

Mr. DEPUTY SPEAKER.—Hon. Member knows the Rules.

Sri K. H. PATIL.—I know the rule. Does the Hon. Minister want to steal the property and bring it for the use of the Congress Party? I appeal to the good sense of the Hon. Minister to withdraw his words in the interest of maintaining decorum of the House.

Sri H. V. KOUJALGI.—I have not stated that all the members are going and instigating the people not to pay the land revenue. Whatever I have stated is on record. Some of the members are asking the people not to pay till it is reduced. There is no question of my withdrawing those words; I am not withdrawing them.

Sri L. SRIKANTAIAH.—Sir, is this the way the Hon. Minister should behave? He is a person holding a very responsible portfolio. I am very much ashamed about his attitude.

Sri K. H. PATIL.—Can a Minister, without naming a person, make a remark affecting the prestige and character of a person?

Mr. DEPUTY SPEAKER.—The Hon. Minister has not made any such remark. He stated that he did not say like that.

Sri K. H. PATIL.—Sir, the records may be perused. First he said 'members of this House' and now he corrects himself by saying 'some members of this House'. 'Some members' mean some of us are included. When the Hon. Minister is making a statement, I think, he is making a responsible statement. Sir, whether it is the Chief Minister or anybody, when he is making a statement, he must be courageous enough

to name those persons and take the consequences. I want a Ruling. have been patiently hearing his statement with great respect to him. Being in the Ministry, he should not take advantage to condemn the members of the House. This is no good and this is no democracy. I request you to give your Ruling, Sir. I know how to attack these people. Tomorrow, I can use your Ruling to condemn these people. How can any person make a remark affecting the prestige and character of a person ?

Mr. DEPUTY SPEAKER.—No such thing has happened.

Sri K. H. PATIL.—Have I ever said : 'don't pay land assessment'. I have equal responsibility. Today the Hon. Minister may be there; tomorrow I may occupy that position. I know my responsibility and I know how to run the administration. My village is the first village to pay land revenue. Is he not courageous enough to point out that such and such a member has said like that ? Let him be specific. I want a ruling Sir. If you reserve it for some other day, I have no objection.

Mr. DEPUTY SPEAKER.—I have already given the ruling that there is no point of order. The rule is that members should speak patiently further one member should not attack another member.

Sri AZEEZ SAIT.—Sir, I would like to submit that the Hon. Minister while making a statement is showing physical strength as a Minister. This is not the first time. Even when hon. Sri Shivappa was asking for clarification to some call attention Motion Hon. Minister Sri Lakkappa also showed his physical strength. I want to know whether these Ministers think that they are all in all in this country ? They must know first that they are servants of the people and they are more so servants of this House. They have to answer to all our questions and furnish information to every point raised by hon. Members here. They are not our Masters, or Maharajas, or Nawabs, or Palegars. They are there to do executive job and they are there as trustees of the State. If this is the way in which hon. members are to be treated by these Hon. Ministers, wherever they go they would be greeted with black flags, and unless the hon. Members are treated in a dignified manner, I think, an unruly and an ugly atmosphere will be created in this House. Therefore, I warn the Hon. Ministers to be careful.

ಶ್ರೀ ಎಚ್. ವಿ. ಕೌಜಲಗಿ.—ಈಗ ಶ್ರೀಮಾನ್ ಚನ್ನಬಸಪ್ಪನವರು ಏನು ಹೇಳಿದರೋ ಅದಕೆ ನಾನು ಉತ್ತರ ಹೇಳಿದೆ. ಯಾವ ಯಾವ ಉದ್ದೇಶಗಳಿಂದ ಕಂದಾಯ ಜಾಸ್ತಿಯಾಗಿದೆ ಎನ್ನುವ ವಿಷಯವನ್ನು ಅವರು ಕೇಳಲಿಲ್ಲ. ನಾನು ಅವರಿಗೆ ಉತ್ತರವನ್ನು ಹೇಳಲಿಲ್ಲ. ಈಗ ಮತ್ತೆ ಆ ವಿಷಯವನ್ನು ರೀ–ಓಪನ್ ಮಾಡುವುದಕ್ಕೆ ಅವಕಾಶ ಎಲ್ಲಿ ಇದೆ ? ಹಳೆಯ ದರದ ಪ್ರಕಾರವೇ ಕಂದಾಯ ವಸೂಲು ಮಾಡುತ್ತಾರೆಯೇ ಹೇಗೆ ಎನ್ನುವ ಬಗ್ಗೆ ಅವರು ಪ್ರಶ್ನೆ ಹಾಕಲಿಲ್ಲ. ನಾನು ಉತ್ತರವನ್ನು ಹೇಳಲಿಲ್ಲ. ಯಾವ ಭೂಮಿಗೆ ವಿಪರೀತವಾಗಿ ಕಂದಾಯ ಜಾಸ್ತಿಯಾಗಿದೆ ಅಂಥಾ ಕಡೆ ಅದನು ಪುನರ್ವಿಮರ್ಶೆ ಮಾಡುವುದಕ್ಕೆ ಅವಕಾಶ ಇದೆ. ಅದಕ್ಕೆ ಕಾಯಿದೆಯನ್ನು ತಿದ್ದುಪಡಿ ಮಾಡಬೇಕಾಗಿದೆ. ಹಾಗೆ ತಿದ್ದುಪಡಿ ಮಾಡುವವರಿಗೆ ಹಳೆಯ ದರದ ಪ್ರಕಾರ ಕಂದಾಯವನ್ನು ವಸೂಲು ಮಾಡಬೇಕು ಎಂದು ಹೇಳುವ ಸಂದರ್ಭವುಂಟೇ ವಿನಾ ಸಾರ್ವತ್ರಿಕವಾಗಿ ಈಗ ಇದ್ದ ಕಾಯಿದೆ ದುರಸ್ತಿ ಆಗುವವರೆಗೂ ಎಲ್ಲರೂ ಕಂದಾಯವನ್ನು ಕಡಿಮೆ ದರದಲ್ಲೇ ಕೊಡಲಿ ಎಂದು ಸರ್ಕಾರದಿಂದ ಹೇಳಲಿಕ್ಕೆ ಬರುವುದಿಲ್ಲ.

†ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ ನಾನೊಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ಸಭೆಯ ಪದ್ಧತಿಯ ಪ್ರಕಾರ, ರೂಢಿಯಾಗಿರತಕ್ಕ ಕನ್‌ವೆನ್‌ಷನ್ ಪ್ರಕಾರ ಸರ್ಕಾರ ನಮಗೆ ಸರಿಯಾದಂತಹ ತಿಳಿವಳಿಕೆಯನ್ನು ಕೊಟ್ಟು ಸರಿಯಾದಂಥಹ ಮಾರ್ಗದಲ್ಲಿ ಇಲ್ಲಿನ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕು ಎಂದು ಒತ್ತಾಯ ಪಡಿಸುವ ಹಕ್ಕು ಈ ಸಭೆಗಿದೆ. ಸರ್ಕಾರ ಈ ಸಭೆಗೆ ಯಾವುದೇ ವಿಷಯವನ್ನು ತಿಳಿವಳಿಕೆ ಕೊಡುವಾಗ ಅದು ಕರಾರುವಾಕ್ಕಾಗಿರಬೇಕು. ಊಹೆಯ ಪ್ರಕಾರ ಮನಸ್ಸಿನಲ್ಲಿ ಇಲ್ಲದೆ ಇರುವ ವಿಚಾರದಲ್ಲಿ ಈ ಸಭೆಯಲ್ಲಿ ಒಂದು ಹೇಳಿಕೆ ಕೊಡುವುದಕ್ಕಾಗುವುದಿಲ್ಲ. ಶ್ರೀಮಾನ್ ಚನ್ನಬಸಪ್ಪನವರು ರೆಕಾರ್ಡಿನಲ್ಲಿ ಏನಿದೆ ಎಂಬುದನ್ನು ಓದಿದರು. ನಮಗೆ ಅದು ಅರ್ಥವಾಗಿರುವ ಹಾಗೆ ಸರ್ಕಾರದವರು ಕೊಟ್ಟಿರತಕ್ಕ ಅಷ್ಯೂರೆನ್ಸ್ ಏನು ಎಂಬುದು ಅದರಲ್ಲಿದೆ. ಸರ್ಕಾರದವರು ಕೊಟ್ಟಿರತಕ್ಕ ಅಷ್ಯೂರೆನ್ಸ್ ಏನು ಎಂಬುದನ್ನು ಅಷ್ಯೂರೆನ್ಸ್ ಕಮಿಟಿಯವರು ತಿಳಿದುಕೊಂಡಿದ್ದಾರೆ. ಅಷ್ಯೂರೆನ್ಸ್ ಕೊಟ್ಟಿದ್ದು ಯಾವರೀತಿ ಇದೆ ಎನ್ನುವುದನ್ನು ಪರಿಶೀಲನೆ ಮಾಡಿ ಹೇಳುವುದಕ್ಕೆ ಅಷ್ಯೂರೆನ್ಸ್ ಸಮಿತಿ ಇದೆ. ಮಾನ್ಯ ಮಂತ್ರಿಗಳು ಈಗ ಇಲ್ಲಿ ಹೇಳಿರತಕ್ಕದ್ದು ಆ ಹಿಂದೆ ಕೊಟ್ಟಿರುವ ಅಷ್ಯೂರೆನ್ಸಿಗೆ ಅನುಗುಣವಾಗಿದೆಯೋ ಅಥವಾ ತಪ್ಪಾಗಿದೆಯೋ ಎನ್ನುವುದು ತೀರ್ಮಾನವಾಗತಕ್ಕದ್ದು ಅವಶ್ಯಕ ಇದೆ. ಈ ಬಗ್ಗೆ ಅಷ್ಯೂರೆನ್ಸ್ ಕಮಿಟಿಯಿಂದ ರಿಪೋರ್ಟ್ ತರಿಸಿಕೊಂಡು ಮಾನ್ಯ ಮಂತ್ರಿಗಳು ಏನು ಅಷ್ಯೂರೆನ್ಸ್ ಈ ಸಭೆಗೆ ಕೊಟ್ಟಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಂಡು ಈ ಸಭೆಯನ್ನು ಮುಂದುವರಿಸಬೇಕು ಎಂದು ನಾನು ಹೇಳುತ್ತೇನೆ. ಮತ್ತು ಮಾನ್ಯ ಮಂತ್ರಿಗಳು ಹಳೆಯ ದರವಲ್ಲೇ ವಸೂಲು ಮಾಡಬೇಕೆಂದು ಕೊಟ್ಟಂಥ ಭರವಸೆಯನ್ನು ಅವರು ವಾಪಸ್ಸು ತೆಗೆದುಕೊಂಡು ಈ ಸಭೆಯ ಹಕ್ಕಿಗೆ ಚ್ಯುತಿ ತರುವಂತೆ ಮಾಡಿರತಕ್ಕದ್ದು ಸರಿಯಲ್ಲ. ಇವರು ನಮ್ಮನ್ನು ಬಹುದೂರ ತಪ್ಪು ದಾರಿಯಲ್ಲಿ ಎಳೆದುಕೊಂಡು ಹೋಗುತ್ತಿದ್ದಾರೆ. ಈ ದೃಷ್ಟಿಯಿಂದ ಅಷ್ಯೂರೆನ್ಸ್ ಕಮಿಟಿಯಿಂದ ವರದಿಯನ್ನು ತರಿಸಿಕೊಂಡು ಮಾನ್ಯ ಮಂತ್ರಿಗಳು ಈ ಸಭೆಗೆ ಏನು ಅಷ್ಯೂರೆನ್ಸ್ ಕೊಟ್ಟಿದ್ದಾರೆ, ಯಾವ ರೀತಿ ಅಷ್ಯೂರೆನ್ಸ್ ಕಮಿಟಿಯವರು ಅದನ್ನು ಅರ್ಥಮಾಡಿಕೊಂಡಿದ್ದಾರೆ, ಅವರು ಹೇಳಿರತಕ್ಕದ್ದು ಸರಿಯೋ ತಪ್ಪೋ ಎನ್ನತಕ್ಕದ್ದು ತೀರ್ಮಾನವಾಗಬೇಕಾಗಿದೆ. ಆದ್ದರಿಂದ ಅಲ್ಲಿಯವರೆಗೂ ಈ ಸಭೆ ಮುಂದುವರಿಯುವುದಕ್ಕೆ ಏಕೆ ಅವಕಾಶವನ್ನು ಕೊಡಬಾರದು ಎಂದು ನಾನು ಕೇಳುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟದ್ದು ಮುಗಿದಿದೆ.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ ಇದು ಒಂದು ಮೂಲಭೂತವಾದ ಪ್ರಶ್ನೆ. ಮಾನ್ಯ ರೆವಿನ್ಯೂ ಮಂತ್ರಿಗಳು ಈ ಮಾನ್ಯ ಸಭೆಯ ಮುಂದೆ ಯಾವ ರೀತಿ ಒಂದು ಭರವಸೆಯನ್ನು ಕೊಟ್ಟಿದ್ದಾರೆ, ಎನ್ನುವ ವ್ಯಾಖ್ಯಾನವನ್ನು ಶ್ರೀಮಾನ್ ಚನ್ನಬಸಪ್ಪನವರು ಈ ಸಭೆಯ ಮುಂದೆ ಇಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಏನು ಭರವಸೆಯನ್ನು ಕೊಟ್ಟಿದ್ದರೋ ಅದಕ್ಕೆ ತದ್ವಿರುದ್ಧವಾದ ಅಭಿಪ್ರಾಯಗಳನ್ನು ಈಗ ಹೇಳಿದ್ದಾರೆಂದು ಶ್ರೀಮಾನ್ ನಂಜೇಗೌಡರು ಹೇಳಿದರು. ಮಾನ್ಯ ಮಂತ್ರಿಗಳು ಈಗ ಏನು ಸ್ಟೇಟ್‌ಮೆಂಟ್ ಮಾಡಿದರೋ ಅದನ್ನು ಅವರು ಆ ರೀತಿ ಮಾಡದೇ ಹೋಗಿದ್ದರೆ ರಾಜ್ಯವೇನೂ ಬಿದ್ದು ಹೋಗುತ್ತಿರಲಿಲ್ಲ. ಕಂದಾಯವನ್ನು ಕೊಡುವವರು ಕೊಟ್ಟೇ ಕೊಡುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಈಗ ಕೊಟ್ಟಂಥಾ ಹೇಳಿಕೆಯನ್ನು ನೋಡಿದರೆ ನನಗೆ ಮನಸ್ಸಿಗೆ ಬಹಳ ವ್ಯಥೆಯಾಗಿದೆ. ಅವರು ಬಹಳ ಆರೋಗೆಂಟಾಗಿ, ಡಿಕ್ಟೇಟರ್ ತರಹ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅವರ ಬಿಹೇವಿಯರ್—ಆರೋಗೆಂಟ್ ಬಿಹೇವಿಯರ್ ಆಗಿದೆ. ಅವರ ಸ್ಟೇಟ್‌ಮೆಂಟ್ ನಮಗೆ ಬೇಕಾಗಿಲ್ಲ, ಹಿಂದೆ ಅವರು ಈ ಸಭೆಗೆ ಏನು ಭರವಸೆಯನ್ನು ಕೊಟ್ಟಿದ್ದಾರೆ ಎನ್ನುವ ಬಗ್ಗೆ ಅಷ್ಯೂರೆನ್ಸ್ ಕಮಿಟಿಯಿಂದ ವರದಿಯನ್ನು ತರಿಸಿಕೊಳ್ಳಬೇಕು. ನಂತರ ಇದನ್ನು ಮುಂದುವರಿಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.–ಸ್ವಾಮಿ ಮಾನ್ಯ ರೆವಿನ್ಯೂ ಮಂತ್ರಿಗಳು ಈ ಸಭೆಯಲ್ಲಿ ಒಂದು ಹೇಳಿಕೆ ಕೊಟ್ಟಮೇಲೆ ಅದು ರಿಕಾರ್ಡಾಗಿ ಪುನಃ ಅವರ ಪರಿಶೀಲನೆಗೆ ಬಂದಾಗ ಅವರು ಅದನ್ನು ತಿದ್ದುಪಡಿಯಾದಮೇಲೆ ಕ್ರಮೇಣ ಅದು ಸರ್ಕಾರದ ಅಧಿಕೃತ ವರದಿಯಲ್ಲಿ ಸೇರಿ ಹೋಗುತ್ತದೆ. ಅದರೆ ಇಲ್ಲಿರುವ ಈ ವರದಿಯ ಕಾಪಿಯಲ್ಲಿ ಅವರು ಏನೂ ತಿದ್ದಿಲ್ಲ. ಆದ್ದರಿಂದ ಇವೊತ್ತು ಅಲ್ಲಿ ಏನು ಬರವಣಿಗೆಯಲ್ಲಿ ಅದನ್ನು ಬಿಟ್ಟು ಬೇರೆ ಅರ್ಥವನ್ನು ಕಲ್ಪಿಸುವುದಕ್ಕೆ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ. ಅವರು ಹೇಳಿಕೆ ಕೊಡುವುದು ಒಂದು ತರಹ, ವ್ಯಾಖ್ಯಾನ ಮಾಡುವುದು ಇನ್ನೊಂದು ತರಹ. ಆ ರೀತಿ ಮಾಡಬಾರದು. ಕರಾರುವಾಕ್ಕಾಗಿ ಅವರು ಹೇಳಿಕೆಯನ್ನು ಕೊಡಬೇಕು. ಟೇಪ್ ರೆಕಾರ್ಡ್ ವ್ಯವಸ್ಥೆ ಮಾಡಬೇಕು. ಆಗಿಂದಾಗ್ಯೆ ಇವರು ಹೇಳುವ ಮಾತಿಗೆ ಬೇರೆ ವ್ಯಾಖ್ಯಾನವನ್ನು ಕಲ್ಪಿಸಿ ಬದಲಾಯಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ನಾವು ಪ್ರತಿಭಟನೆ ಮಾಡಬೇಕು. ಅವರು ಮೊದಲು ಏನು ಹೇಳಿದ್ದರೋ ಅದಕ್ಕೆ ಹೊಂದಿಕೊಳ್ಳಬೇಕೇ ವಿನಾ ಅದಕ್ಕೆ ಪ್ರತಿಯಾಗಿ ಬೇರೆ ವ್ಯಾಖ್ಯಾನವನ್ನು ಕಲ್ಪಿಸಿ ಬದಲಾಯಿಸಿಕೊಳ್ಳುವುದು ಸಾಧ್ಯವಿಲ್ಲ.

MR. DEPUTY SPEAKER.—Now the matter is closed. We can take up the next item.

Sri H. N. NANJE GOWDA.—No Sir, The matter cannot be closed.

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಮಾನ್ಯ ಕಂದಾಯಮಂತ್ರಿಗಳು ಈ ಸಭೆಯ ಮುಂದೆ ಭೂಕಂದಾಯದ ಬಗ್ಗೆ ಒಂದು ದೀರ್ಘವಾದ ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರ ಹೇಳಿಕೆಯಿಂದ ನಾವು ಏನು ನಿರೀಕ್ಷೆ ಮಾಡಿದ್ದೆವೋ ಆ ನಿರೀಕ್ಷೆ ಸಂಪೂರ್ಣವಾಗಿ ವಿಫಲವಾಯಿತು. ಹೋದ ವರ್ಷ ಈ ಸಭೆಯ ಮುಂದೆ ಒಂದು ಹೇಳಿಕೆಕೊಟ್ಟು ಈ ದೇಶದ ರೈತರನ್ನು ಯಾವ ರೀತಿ ನಂಬಿಸಿದ್ದರೋ ಅದನ್ನು ಈಡೇರಿಸದೆ ಆ ನಂಬಿಕೆಗೆ ದ್ರೋಹ ಮಾಡುವ ಕಾರ್ಯವನ್ನು ಮಾಡಿದ್ದಾರೆ. ಸರ್ಕಾರದವರು ಇವತ್ತಿನ ದಿವಸ ಹೊರಡಿಸಿರುವ ನೋಟಿಫಿಕೇಷನ್‌ನಿಂದ ಅದು ಕಂಡು ಬರುತ್ತದೆ. ಸಚಿವರು ತಮ್ಮ ಮಾತನ್ನು ಹಿಂದಕ್ಕೆ ತೆಗೆದುಕೊಂಡು ರೈತರಿಗೆ ಮೋಸ ಮಾಡಿದ್ದಾರೆ. ದೇಶದಲ್ಲಿ ಲಕ್ಷಾಂತರ ಜನ ರೈತರು ಕಷ್ಟಕ್ಕೆ ಗುರಿಯಾಗಿದ್ದಾರೆ. ಸರ್ಕಾರಕ್ಕೆ ಕಂದಾಯದ ಬಗ್ಗೆ ಯಾವ ಒಂದು ಸ್ಪಷ್ಟವಾದ ನಿಲುವು ಇದ್ದಂತೆ ಇಲ್ಲ. ಚುನಾವಣೆಗೆ ಮುಂಚೆ ಕಂದಾಯವನ್ನು ರದ್ದು ಮಾಡುತ್ತೇವೆಂದು ಹೇಳಿ ಜನಗಳಿಂದ ಓಟನ್ನು ಪಡೆದು ಗೆದ್ದು ಬಂದಮೇಲೆ ಈ ರೀತಿ ಹೇಳುತ್ತಿರುವ ಜನರನ್ನು ನಂಬುವುದಕ್ಕೆ ಸಾಧ್ಯವಿಲ್ಲ. ಇತ್ತೀಚೆಗೆ ಸರ್ವೆ ಸೆಟಲ್‌ಮೆಂಟನ್ನು ಹೊಸದಾಗಿ ಮಾಡಿದಮೇಲೆ ಕಂದಾಯವು ಜಾಸ್ತಿಯಾಗಿರುವುದನ್ನು ಮಾನ್ಯ ರೆವಿನ್ಯೂ ಸಚಿವರು ಒಪ್ಪಿಕೊಂಡು, ಇದನ್ನು ಸರಿಪಡಿಸುವವರೆಗೆ ಹಿಂದಿನ ಕಂದಾಯವನ್ನೇ ವಸೂಲು ಮಾಡಲಾಗುತ್ತದೆಂಬ ಆಶ್ವಾಸನೆ ಕೊಟ್ಟಿರುವುದನ್ನು ಈಗ ಮತ್ತೊಮ್ಮೆ ಕೆಲವು ಮಾನ್ಯ ಸದಸ್ಯರು ಓದಿ ಹೇಳಿದರು. ಮಾನ್ಯ ರೆವಿನ್ಯೂ ಸಚಿವರಿಗೆ ಸರ್ಕಾರದಿಂದ ಈ ಮಧ್ಯೆ ಏನು ಒತ್ತಾಯ ಬಂತೋ ಗೊತ್ತಿಲ್ಲ. ಅಂತೂ ಅವರು ಈ ದಿವಸ ಈ ರೀತಿಯ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ಸಭೆಯಲ್ಲಿ ಈ ಹಿಂದೆ ಕೊಟ್ಟಂತಹ ಭರವಸೆಯ ಮಾತನ್ನು ವಾಪಸ್ ತೆಗೆದುಕೊಳ್ಳುವಂತೆ ಸರ್ಕಾರದವರು ಒತ್ತಾಯ ಮಾಡಿದರು ಎಂದು ಕಾಣುತ್ತದೆ. ನಾವುಗಳು ಮಂತ್ರಿಗಳ ವಂಚನೆ ಮಾತನ್ನು ಕೇಳುವುದಕ್ಕೆ ಇಲ್ಲಿಗೆ ಬಂದಿಲ್ಲ. ಸರ್ಕಾರದ ಆಡಳಿತ ಜವಾಬ್ದಾರಿ ಹೊತ್ತಿರುವ ಜನ ಕಂದಾಯವನ್ನು ವಜಾ ಮಾಡುತ್ತೇವೆಂದು ಹೇಳಿದ್ದರೂ ಅದನ್ನು ಇನ್ನೂ ಮಾಡಿಲ್ಲ. ಕಂದಾಯ ವಜಾ ಆಗಬೇಕೆಂಬ ನಿಮ್ಮ ನಿಲುವು ಯಾವತ್ತೂ ಇದ್ದೇ ಇದೆ. ಈ ಬಗ್ಗೆ ಸರ್ಕಾರಕ್ಕೆ ನೋಟೀಸನ್ನು ಸಹ ಕೊಟ್ಟಿದ್ದೇವೆ. ಈ ಅವಕಾಶವನ್ನು ಬಳಸಿಕೊಂಡು ಕೆಲವು ಜನ ರೈತರ ಬಳಿಗೆ ಹೋಗಿ ಕಂದಾಯವನ್ನು ಕೊಡಬೇಡಿ ಎಂದು ಚಿತಾವಣಿ ಮಾಡುತ್ತಿದ್ದಾರೆಂದು ಮಂತ್ರಿಗಳು ಈ ದಿವಸ ಹೇಳಿದರು.

ಶ್ರೀ ಎಚ್. ವಿ. ಕೌಜಲಗಿ.—ಚಿತಾವಣಿ ಮಾಡುತ್ತಿದ್ದಾರೆಂದು ಹೇಳಲಿಲ್ಲ.

ಶ್ರೀ ಎಸ್. ಶಿವಪ್ಪ.—ಈ ರೀತಿ ಹೊಂದು ವಾದ ಮಾಡುವುದಾದರೆ ಸರ್ಕಾರದ ವಿರುದ್ಧ ಚಳುವಳಿ ಹೂಡುವ ಕಾಲ ಬಂದಾಗ ಅದನ್ನು ಸಹ ಹೇಳಿಯೇ ಹೇಳುತ್ತೇವೆ. ಬಹಿರಂಗವಾಗಿ ನಾವು ಇದನ್ನು ವಾದ ಮಾಡುತ್ತಿದ್ದೇವೆ. ಈ ಸರ್ಕಾರದವರಾದರೋ ಕಂದಾಯ ವಜಾ ಆಗಬೇಕು ಎನ್ನುವ ವಿಚಾರವನ್ನು ಚುನಾವಣೆಯ ಕಾಲದಲ್ಲಿ ಮಾತ್ರ ಹೇಳಿದ್ದಾರೆ. ಇದೇ ಮಾತನ್ನು ನಾವು ಆ ಚಳುವಳಿಯ ಕಾಲದಲ್ಲಿ ಹೇಳುತ್ತೇವೆ. ಈ ಸರ್ಕಾರದವರು ಹೇಳುವುದು ಒಂದು, ಮಾಡುವುದು ಒಂದು! ಈ ರೀತಿ ರೈತರಿಗೆ ಮೋಸ ಮಾಡುತ್ತಿದ್ದಾರೆ. ಹೇಳಿದ್ದನ್ನು ಆಚರಣೆಗೆ ತರುವ ಶಕ್ತಿ ಈ ಸರ್ಕಾರಕ್ಕೆ ಇಲ್ಲ. ತಂದಾಯ ಸಚಿವರು ಹಿಂದೆ ಹೇಳಿದಂತೆ ಇಂದು ನಡೆಯದೆ ಘೋರ ಅಪರಾಧ ಮಾಡಿದ್ದಾರೆ. ತಮಗೆ ಮೆಜಾರಿಟಿ ಇದೆ ಎಂದುಕೊಂಡು ಅವರು ಹೇಳಿದ ಮಾತನ್ನು ಕಾರ್ಯರೂಪಕ್ಕೆ ತಂದಿಲ್ಲ. ಇವತ್ತಿನ ದಿವಸ ತಾವೇ ಓಟು ಹಾಕಿಕೊಂಡು ಏನು ಬೇಕಾದರೂ ಪಾಸ್ ಮಾಡಿಕೊಳ್ಳಬಹುದೆಂದು ಆ ಕಡೆಯವರು ತಿಳಿದಿದ್ದಾರೆ. ಹೇಳಿದ ಮಾತಿನಂತೆ ನಡೆಯದೆ ರೈತರನ್ನು ದಿಟ್ಟತನದಿಂದ ಆದುಮಿಡಬೇಕೆಂದು ಈ ಸರ್ಕಾರದವರು ಹೊರಟಿದ್ದಾರೆ. ರೈತರ ಬೆನ್ನುಮೂಳೆಯನ್ನು ಮುರಿಯುವುದಕ್ಕೆ ಹೊರಟಿದ್ದಾರೆ. ಆದರೆ ಸರ್ಕಾರದ ಬೆನ್ನುಮೂಳೆಯನ್ನೇ ಮುರಿಯುವ ಶಕ್ತಿ ಮತ್ತು ಅಧಿಕಾರ ರೈತರಿಗೆ ಇದೆ ಎಂದು ನಾನು ಈಗ ಈ ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ. ಇವತ್ತಿನ ದಿವಸ ಕಂದಾಯ ಸಚಿವರು ಕೊಟ್ಟಿರುವ ಹೇಳಿಕೆಯಿಂದ ನಮಗೆ ತೃಣಮಾತ್ರವೂ ನೆಮ್ಮದಿಯಾಗಿಲ್ಲ. ರೈತರಿಂದ ಕಂದಾಯವನ್ನು ಹಿಂಸಾ ಮಾರ್ಗದಲ್ಲಿ ವಸೂಲು ಮಾಡುವುದು ಸರಿಯಲ್ಲ. ಪ್ರಜಾಪ್ರಭುತ್ವದಲ್ಲಿ ನಮಗೆ ನಂಬಿಕೆ ಇರುವುದರಿಂದ ಇನ್ನು ನಮಗೆ ಉಳಿದಿರುವ ಒಂದೇ ಮಾರ್ಗವೆಂದರೆ ಸರ್ಕಾರದವರ ವಾದಕ್ಕೆ ವಿರುದ್ಧವಾಗಿ ಇಲ್ಲಿಯೇ ಸತ್ಯಾಗ್ರಹ ಮಾಡುವುದು. ಈ ವರ್ಷ ಮಹಾತ್ಮ ಗಾಂಧಿಯವರ ಶತಾಬ್ದಿಯ ವರ್ಷ. ರೈತರಿಗೋಸ್ಕರ

(ಶ್ರೀ ಎಸ್. ಶಿವಪ್ಪ)

ಮಹಾತ್ಮರು ಸಹ ಸತ್ಯಾಗ್ರಹ ಮಾಡಿದ್ದರು. ಆದಕಾರಣ ಮಹಾತ್ಮ ಗಾಂಧಿಯವರ ಹೆಸರಿನಲ್ಲಿ ರೈತರ ಅನುಕೂಲಕ್ಕಾಗಿ ನಾವುಗಳು ಕೂಡ ಈ ಶಾಸನಸಭೆಯಲ್ಲಿ ಧರಣಿ ಸತ್ಯಾಗ್ರಹವನ್ನು ಮಾಡುತ್ತೇವೆ.

(Hon. Members from the Opposition Squatted on the floor in the Chamber)

Mr. DEPUTY SPEAKER.—The House now stands adjourned for half-an-hour.

The House adjourned at Thirty Minutes past Four of the Clock and reassembled at Ten Minutes past Six of the Clock.

[MR. SPEAKER in the Chair]

Mr. SPEAKER.—The hon. Members squatting on the ground may please occupy their respective seats. Under the procedure it is very necessary for the Hon'ble Members to occupy their respective places.

ಶ್ರೀ ಎಸ್. ಚನ್ನಯ್ಯ.—ಸ್ವಾಮಿ, ನಾನು ಹೀಗೆ ಇಲ್ಲಿಂದಲೇ ಮಾತನಾಡಬೇಕಾಗಿದೆ. ಕ್ಷಮಿಸಬೇಕು. ನಾನು ತಮ್ಮಲ್ಲಿ ಆಗಲೇ ಅರಿಕೆ ಮಾಡಿಕೊಂಡಿದ್ದೇನೆ. ಕಂದಾಯ ಮಂತ್ರಿಯವರು ಏನೇ ಮಾತನಾಡಿರಲಿ, ಇಂಥ ಮಂತ್ರಿಯವರನು ನಾವು ಯಾವತ್ತೂ ನೋಡಿರಲಿಲ್ಲ. ನಾನು ಎರಡು-ಮೂರು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದ ಮಂತ್ರಿಗಳನ್ನು ನೋಡಿದ್ದೇನೆ. ಅವರೂ ಈ ತರಹ ಮಾತನಾಡುತ್ತಾ ಇರಲಿಲ್ಲ. ಆದರೆ ಭೂಕಂದಾಯದ ವಿಷಯದಲ್ಲಿ ಇವರು ಸೆಪ್ಟಂಬರ್ 1968ರಲ್ಲಿ ಏನು ಹೇಳಿದ್ದಾರೆ, ಅದನ್ನು ಜಾರಿಗೆ ತಂದು, 1965ಕ್ಕಿಂತ ಹಿಂದೆ ಇದ್ದ ಹಳೇ ಕಂದಾಯವನ್ನೇ ವಸೂಲಿ ಮಾಡುತ್ತೇವೆ. ಹೊಸ ಕಂದಾಯವನ್ನು ವಸೂಲಿ ಮಾಡುವುದಿಲ್ಲವೆಂದು ಎಲ್ಲಿಯವರೆಗೆ ಇವರು ತೀರ್ಮಾನ ಮಾಡುವುದಿಲ್ಲವೋ, ಅಲ್ಲಿಯವರೆಗೆ ನಾವು ಇಲ್ಲಿಂದ ಕದಲುವುದಿಲ್ಲ. ದಯವಿಟ್ಟು ನಮ್ಮನ್ನು ಕ್ಷಮಿಸಬೇಕು.

Mr. SPEAKER.—Does the Minister want to say anything in the Matter ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಅಧ್ಯಕ್ಷರೇ, ತಾವು ಅನ್ಯಥಾ ಭಾವನೆ ಮಾಡಬಾರದು. ನಾನು ಹೇಳಿಕೆ ಕೊಡಬೇಕಾದರೆ, ಈ ಸಭೆ ಸರಿಯಾದಂತಹ ರೀತಿಯಲ್ಲಿ ಇದೆ, ತಾವು ಹೇಳಿಕೆ ಕೊಡಬಹುದು ಎಂದು ಹೇಳಿದಾಗ ನಾನು ಹೇಳಿಕೆ ಕೊಡುತ್ತೇನೆ.

Mr. SPEAKER.—The Chair is powerless. As it is not possible to carry on the bussiness, I adjourn the House. Now, the House will rise to-day and meet again at 1 P. M. on Monday, the 17th March 1969.

The House adjourned at Fifteen Minutes past Six of the Clock to meet again at One of the Clock on Monday, the 17th March 1969.

WD 12667—GPB—600—15-7-1969

ಮೈಸೂರು ವಿಧಾನಸಭೆಯ ನಡೆವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

ೱ೭ನೇ ಸೋಮವಾರ, ಮಾರ್ಚ್ ೧೯೬೯ [ಫಾಲ್ಗುಣ ೨೬, ೧೮೯೦ (ಶಕ)]

MONDAY, 17TH MARCH 1969 [PHALGUNA 26, 1890 (SAKA)]

ಸಂಪುಟ ೧೭—ಕ್ರಮಾಂಕ ೯

Vol. XVII—No. 9

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸ

Price : 25 Paise

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, 17th March 1969

The Assembly was scheduled to meet at 1-00 P.M. on Monday, 17th March 1969.

Mr. SECRETARY.—I am directed by the Hon'ble Speaker to announce that the House will meet at 3-00 P.M.

(The Secretary again announced that the House would meet at 4-00 P.M.)

The House re-assembled at Four of the Clock.

Mr. SPEAKER (SRI S. D. KOTHAVALE) in the Chair.

Mr. SPEAKER.—I am glad to announce that Government and Opposition have come to an understanding.

I request the members who are not occupying their seats to resume their seats.

(*Members who were squatting on the floor then resumed their seats*).

Mr. SPEAKER.—The Hon'ble Minister for Parliamentary Affairs wants to make a statement. He may do so.

Statement of the Minister for Law, Labour and Parliamentary Affairs *re*: Collection of Land Revenue and amendment to the Mysore Land Revenue Act.

SRI K. PUTTASWAMY (Minister for Law, Labour and Parliamentary Affairs).—Sir, Government have already expressed their desire to bring a comprehensive amending Bill to amend the Land Revenue Act. The Bill would be introduced in the Assembly in the first week of April for consideration and passing. In the meanwhile Government would issue instructions not to take any coercive steps for collection of land revenue in the State.

Statement of the Speaker *re* : Events during the observation of Dharana by the Opposition Members since 14-3-1969.

MR. SPEAKER.—I beg to report to this august House about events that took place after the adjournment of the House on Friday last. The hon'ble members know that the Assembly Chamber and its precincts are in the custody of the Speaker.

On Friday, the 14th March, as the hon'ble members are aware, the House had to adjourn without transacting the scheduled business. Some hon'ble members instead of sitting in the seats allotted to them, squatted in the gangway when the House was sitting and also continued to sit after the House adjourned on that day. These hon'ble members have used the Chamber of the House for purposes of demonstration and other purposes prohibited under the parliamentary conventions.

It is a parliamentary convention that the chamber of the Assembly should not be used for purpose other than the meeting of the House. Hon'ble members have to leave the precincts of the House one hour after the adjournment of the House. In Lok Sabha in 1965 a member was removed from the precincts of the House, *i.e.*, the lawns of the Parliament House one hour after the adjournment of the House. Accordingly, I brought to the notice of the hon'ble members who were demonstrating in the chamber, the convention and requested them to leave the chamber. But the hon'ble members refused to leave the Chamber and continued to occupy the chamber for demonstration purposes on Saturday the 15th March also. There were two courses open to me under the circumstances. The one was to remove the members as was done in Lok Sabha. The other was to leave the matter to the House when it re-assembled to take such action as it deemed fit. I did not adopt the first course as I thought better counsels would prevail in course of time and that this Hon. House should have an opportunity to consider the matter. So I decided to adopt the second course *i.e.* leave it to the House to take such action on the hon'ble members who have used the chamber for demonstration purposes. The hon'ble members have continued their demonstration on Sunday and the demonstration is continued today also. I leave it to the House to take such action as it deems fit.

In this connection I have to report with great regret the conduct of the hon'ble member Sri Azeez Sait who used the chamber for demonstration purposes. I was sitting in my chamber along with some hon'ble members on Saturday the 15th March. I received a telephone call from the said member who threatened that he would set fire to the chamber and break its glass panels. I requested him to come to my chamber and speak. He acceded to my request and came to my chamber. Again he stated as follows in my chamber in the presence of some hon'ble members and others :

" We have collected scraps of papers to set fire to the Assembly Chamber, and that we would set fire to it and break glass

panels unless our demand regarding food stuffs is satisfied within half-an-hour."

He further stated that he was not elected to the Hon. Assembly after resigning Government service, (probably he was referring to my resigning the membership of the Mysore Public Service Commission, and seeking election to this Hon. House.)

I have brought this matter also to the notice of the House for such action as the august House deems necessary.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಒಂದು ಹೇಳಿಕೆಯನ್ನು ಈ ರೀತಿಯಾಗಿ ತಾವು ಕೊಡುತ್ತೀರಿ ಎಂದು ನಾನು ಭಾವಿಸಿರಲಿಲ್ಲ. ಸಭೆ ಮುಕ್ತಾಯವಾಗುವಾಗ ತಾವು ಸಭೆಯಲ್ಲಿ ಏನು ತಿಳಿಸಿದ್ದೀರಿ ಅದು ನನಗೆ ಗೊತ್ತಿದೆ. ಆ ಸಂಬಂಧದಲ್ಲಿ ಏನೋ ಒಂದು ಹೇಳಿಕೆಯನ್ನು ಕೊಡುತ್ತೀರಿ ಎಂದೂ ತಿಳಿದಿದ್ದೆ. ಬಿಕ್ಕಟ್ಟು ಈ ಸಭೆಯಲ್ಲಿ ಬಂದದ್ದು ನಮ್ಮ ಮಾನ್ಯ ಸದಸ್ಯರಾದ ಶ್ರೀ ಚೆನ್ನೇಗೌಡರ ಗಮನ ಸೆಳೆಯುವ ಸೂಚನೆಗೆ ಕಂದಾಯ ಮಂತ್ರಿಗಳು ಸೂಕ್ತವಾದ ಉತ್ತರವನ್ನು ಕೊಡುತ್ತಾರೆಂದು ಹೇಳುವುದರ ಬಗ್ಗೆ, ತಾವೂ ಇದನ್ನು ಒಪ್ಪಿದುದರ ಬಗ್ಗೆ, ಹಾಗೂ ಶ್ರೀಮಾನ್ ವೀರೇಂದ ಪಾಟೀಲ್‌ರವರು ಸಮ್ಮತಿಸಿದುದರ ಬಗ್ಗೆ, ಏನು ಸರಕಾರದಿಂದ ನಿರೀಕ್ಷೆ ಮಾಡುತ್ತಿದ್ದೆವು, ವಿವೇಕಯುತವಾದ, ಗೌರವಯುತವಾದ, ಜವಾಬುದಾರಿಯುತವಾದ ಹೇಳಿಕೆಯನ್ನು ಸರಕಾರ ಕೊಡುತ್ತದೆ ಎಂದು ನಾವು ತಿಳಿದಿದ್ದೆವು. ಆದರೆ ಆ ದಿವಸದ ಘಟನೆಗಳು ತಮ್ಮ ಗಮನಕ್ಕೂ ಬಂದಿವೆ. ಸರಕಾರ ತಾನು ಕೊಟ್ಟ ಹೇಳಿಕೆಯಿಂದ, ಹಿಂದಕ್ಕೆ ಹೋಗುವ ಪ್ರಯತ್ನ ಮಾಡಿದ್ದು, ವಾದ ವಿವಾದಗಳು ಎಲ್ಲವೂ ತಮ್ಮ ಗಮನಕ್ಕೆ ಬಂದಿವೆ. ಆ ನಂತರದಲ್ಲಿ ಆ ದಿವಸ ಸರಕಾರದವರು ಹೇಳುವಂತಹದನ್ನು ಒಪ್ಪುವಂತಹುದಲ್ಲ ಎಂದು ಶ್ರೀಮಾನ್ ಶಿವಪ್ಪನವರು ಆಕ್ರೋಶದಿಂದ ಹೇಳಿದ ಮಾತುಗಳು ಇವೆಲ್ಲಾ ಸಭೆಯ ನಡವಳಿಕೆಯಲ್ಲಿವೆ. ಜನತೆಗೂ, ನಮಗೂ ಸರಕಾರದವರ ಹೇಳಿಕೆ ಸಮಂಜಸವಾಗಿಲ್ಲ, ತೃಪ್ತಿಕರವಾಗಿಲ್ಲ, ಸಮಾಧಾನಕರವಾಗಿಲ್ಲ, ನಮಗೆ ಬೇರೆ ಯಾವ ಉಪಾಯವೂ ಇಲ್ಲ ಎಂದು ನಾವು ಆ ಹೊತ್ತು ನಮ್ಮ ಸರಕಾರ ಸರಿಯಾದ ಹೇಳಿಕೆ ಕೊಡುವವರೆಗೆ ನಾವು ಇಲ್ಲೇ ಧರಣಿ ಮುಷ್ಕರ ಮಾಡುತ್ತೇವೆ ಎಂದು ಹೇಳಿ ನಮ್ಮ ಆಸನದಿಂದ ಎದ್ದು ತಮ್ಮ ಎದುರಿಗೇ ಕುಳಿತದ್ದು ನಿಜ. ನಾವು ನಮ್ಮ ನಾಯಕರನ್ನು ಹಿಂಬಾಲಿಸಿ, ಕುಳಿತದ್ದೂ ನಿಜ. ಆ ನಂತರದಲ್ಲಿ ತಾವು ಸಭೆಗೆ ಬಂದಿರಿ, ವಿನಂತಿ ಮಾಡಿಕೊಂಡಿರಿ. ಮುಷ್ಕರ ಮಾಡುವ ಸ್ಥಳ ಇದಲ್ಲ, ಇಲ್ಲಿ ಮಾಡಬಾರದು ಎಂದು ಹೇಳಿದಿರಿ. ನಮ್ಮನ್ನು ಕುಳಿತಿದ್ದ ಸ್ಥಳದಿಂದ ಬಲಾತ್ಕಾರವಾಗಿ ಹೊರಗೆ ಹಾಕುತ್ತೀರಿ ಎಂದೂ ನಾನಾದರೂ ತಿಳಿದಿದ್ದೆ. ನಿಮಗೇನು ತೋಚಿತ್ತೋ ಮತ್ತು ನಿಮ್ಮ ಅಧಿಕಾರದಲ್ಲಿ ಏನಿತ್ತೋ ಗೊತ್ತಿಲ್ಲ. ಮಾನವೀಯ ದೃಷ್ಟಿಯನ್ನು ತೋರಿಸಿ ಇದನ್ನು ಮಾಡಿದಿರೋ ಏನೋ ಗೊತ್ತಿಲ್ಲ. ಆದರೆ ತಾವು ಏನೂ ಕ್ರಮವನ್ನೂ ತೆಗೆದುಕೊಳ್ಳದೆ ನಮ್ಮನ್ನೆಲ್ಲಾ ಇಲ್ಲಿ ಇರಲು ಬಿಟ್ಟಿರಿ. ಆದರೆ ನಿಮ್ಮ ವರ್ತನೆಯ ಬಗ್ಗೆ ವಿಷಾದದಿಂದ ಈ ಸಭೆಯ ಗಮನಕ್ಕೆ ಒಂದು ವಿಷಯವನ್ನು ತರಬೇಕಾಗಿದೆ. ನಾವು ಅವೊತ್ತು ಮುಷ್ಕರ ಹೂಡಿದುದು ಉಪವಾಸ ಮುಷ್ಕರವಲ್ಲ ಎಂದು ಹೇಳಿದ್ದರೂ, ಮೊದಲು ಮನೆಯ ಒಳಕ್ಕೆ ನಮಗೆ ಬರುವ ಯಾವ ಆಹಾರ ಪದಾರ್ಥಗಳನ್ನೂ ಬರದಂತೆ ತಡೆ ಹಿಡಿದದ್ದು ನಿಜವಲ್ಲವೇ ಎಂದು ನಾನು ತಮ್ಮನ್ನು ಇಲ್ಲಿ ಕೇಳುತ್ತೇನೆ. ತಾವು ಮಾನವೀಯ ದೃಷ್ಟಿಯಿಂದ ಎಂದು ಹೇಳಿದಿರಿ. ಉಪವಾಸ ಮುಷ್ಕರ ಎಂದು ನಾವು ಮೊದಲೇ ತೀರ್ಮಾನ ಮಾಡಿದ್ದ ಪಕ್ಷದಲ್ಲಿ ಸಭೆಯಲ್ಲಾಗಲೀ ಅಥವಾ ಜೈಲಿನಲ್ಲಾಗಲೀ ಅಥವಾ ಬೇರಾವ ಸ್ಥಳದಲ್ಲಿಯಾಗಲೀ ಮುಷ್ಕರದಲ್ಲಿದ್ದವರು ಯಾರನ್ನೂ ಏನೂ ತಿನ್ನದಂತೆ ನಾನು ನೋಡಿಕೊಳ್ಳುತ್ತಿದ್ದೆ. ನೀವು ಹೇಳಿದಂತೆ ಮಾಡುತ್ತೇವೆ ಎಂದು ಹೇಳಿ ನೀವೇ ನಿಮ್ಮ ಉತ್ತರವನ್ನೂ ಕೊಡದೆ ಹಿಂದೆ ಹೋದಂತೆ ಹೋಗುತ್ತಿರಲಿಲ್ಲ. ನಾವು ಜವಾಬುದಾರಿ ಇರತಕ್ಕ ಜನ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಅಜೀಜ್ ಶೇಟರ ಬಗ್ಗೆ ಇಂತಹ ಒಂದು ದೊಡ್ಡ ಆಪಾದನೆ ತಾವು ಮಾಡುತ್ತೀರಿ ಎಂದು ತಿಳಿದಿದ್ದಿರಲಿಲ್ಲ. ನಮ್ಮ ಗಮನಕ್ಕೆ ಈ ವಿಷಯ ಬಂದಾಗ ನಾವು ಸ್ಥಳದಲ್ಲೇ ಕುಳಿತು ಈ ವಿಷಯವನ್ನು ಕೂಲಂಕಷವಾಗಿ ವಿಚಾರ ಮಾಡಿದ್ದೆವು. ನಾವೇನು ಮಾಡಬೇಕು ? ಹೊರಕ್ಕೆ ಹೋದರೆ ಪುನಃ ಒಳಕ್ಕೆ ಬರುವಂತಿಲ್ಲ, ತಡೆಯುತ್ತಾರೆ. ಹೊರಗಿನಿಂದ

†Indicates that the remarks or speeches have not been revised by the member conserned.

(ಶ್ರೀ ಎಸ್. ಗೋಪಾಲಗೌಡ)

ಊಟ ಒಳಕ್ಕೆ ಬಂದರೆ ಆಹಾರವನ್ನು ಒಳಕ್ಕೆ ಬಾರದಂತೆ ತಡೆಯುವುದು ಇದು ಮಾನವೀಯ ದೃಷ್ಟಿಯೇ? ನಮಗೆ ಇಲ್ಲಿ ಯಾವುದಾದರೂ ಕ್ಯಾಂಟೀನು ಇದೆಯೇ ಎಂದರೆ ಯಾವುದೂ ಇಲ್ಲ. ನಾವೆಲ್ಲರೂ ಉಪವಾಸದಿಂದ ಇರಬೇಕೆಂದು ತಮ್ಮ ಅಪೇಕ್ಷೆಯಾಗಿತ್ತೇನು? ಮೂರು ದಿವಸಗಳ ಕಾಲ ಉಪವಾಸ ಇದ್ದರೆ ನಾವು ಏನೂ ಸಾಯುವುದಿಲ್ಲ. ಇದನ್ನು ಮಾನವೀಯ ದೃಷ್ಟಿಯಿಂದ ನೋಡಿದ್ದೇನೆ ಎಂದು ಹೇಳುವುದು ಸರಿಯೇ ಎನ್ನುವುದನ್ನು ತಾವು ತಿಳಿಯಬೇಕು. ಅನ್ನ ಕೊಡದೇ ತಪ್ಪಿಸಿದರೆ ಪ್ರತಿಯೊಬ್ಬರೂ ಹೋಗಿಬಿಡುತ್ತಾರೆ ಎಂದು ತಮ್ಮ ಅಭಿಪ್ರಾಯ ಇದ್ದಿರಬಹುದು. ಅವರಾಗಿಯೇ ಇಲ್ಲಿಂದ ಬಿಟ್ಟು ಹೋಗಬಹುದು ಎಂದು ಭಾವಿಸಿದ್ದರೇನೋ?

ಪೋಲೀಸರನ್ನು ಒಳಗೆ ಕರೆಸುವುದಕ್ಕೆ ಕಾನೂನು ಇದೆಯೋ, ಇಲ್ಲವೋ, ರಾಜ್ಯಾಂಗ ಬಿಡುತ್ತದೋ ಬಿಡುವುದಿಲ್ಲವೋ ಆ ಪ್ರಶ್ನೆ ತೀರ್ಮಾನದಲ್ಲಿದೆ. ಅದು ಪಂಜಾಬ್‌ನಲ್ಲೋ ಮತ್ತೊಂದು ಕಡೆಯಲ್ಲೋ ತೀರ್ಮಾನವಾಗುತ್ತದೆ. ಇಲ್ಲಿ ಮಾರ್ಷಲ್ ಆಗಲಿ, ಪೋಲೀಸಿನವರಾಗಲಿ ಬಂದು ನಮ್ಮನ್ನು ಹೊರಗೆ ಬೀಸಾಕಿದ್ದರೆ ನಾವು ನಮ್ಮ ಪಾಡಿಗೆ ಮನೆಗೆ ಹೋಗುತ್ತಿದ್ದೆವು. ಇಲ್ಲೇ ಕೂತುಕೊಳ್ಳಬೇಕು ಎನ್ನುವ ಅಪೇಕ್ಷೆ ನಮಗೇನೂ ಇಲ್ಲ. ನಮಗೆ ಸ್ವಂತ ಮನೆಗಳು ಇಲ್ಲದೇ ಇದ್ದರೂ ಕೂಡ ಬೀದಿಯಲ್ಲಿ ವಾಸ ಮಾಡಬಲ್ಲೆವು. ಶ್ರೀಮಾನ್ ಹನುಮಂತಯ್ಯನವರು ಈ ಮನೆಯನ್ನು ಕಷ್ಟಪಟ್ಟು ಕಟ್ಟಿಸಿದರು. ನಾವು ಇದನ್ನು ದುರುಪಯೋಗಪಡಿಸಿಕೊಳ್ಳಬೇಕೆಂದು ಇಷ್ಟ ಇಲ್ಲ. ಈ ಜಾಗದಲ್ಲೇ ಬಂದು ವಾಸ ಮಾಡಬೇಕು ಎನ್ನುವ ಅಭಿಪ್ರಾಯ ಏನೂ ಇಲ್ಲ. ನಮ್ಮ ಬೇಡಿಕೆ ಬಹಳ ಸ್ಪಷ್ಟವಾಗಿತ್ತು. ಅದು ಏನೆಂದರೆ ಸರ್ಕಾರದವರು 17 ಸೆಪ್ಟೆಂಬರ್ 1968ರಂದು ಕೊಟ್ಟ ಹೇಳಿಕೆಯಂತೆ ಭೂಕಂದಾಯ ವಸೂಲಿ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಇದ್ದ ವಿಷಯ ಇಷ್ಟೆ. ಆದಾಗ್ಯೂ ಪರಿಸ್ಥಿತಿ ವಿಷಮಿಸಿತು. ತಮ್ಮ ವಿನಂತಿಯಂತೆ ಸ್ಥಳ ಬಿಡುವುದಕ್ಕೆ ಸಾಧ್ಯವಾಗಲಿಲ್ಲ. ನಾವು ಉಪವಾಸವನ್ನು ಕೈಗೊಂಡಿರಲಿಲ್ಲ. ನಾನು ಏಕೆ ಹೇಳುತ್ತೇನೆ ಎಂದರೆ ಶ್ರೀಮಾನ್ ಅಜೀಜ್ ಸೇಟ್‌ರವರು ಹಸಿವಿನ ಕಂಗಾಲಾಟದಲ್ಲಿ ಏನೇನೋ ಅಂದಿರಬಹುದು. ಅದು ಆಕ್ರೋಶದಿಂದ ಹೇಳಿದ ಮಾತೇ ಹೊರತು ಬೆಂಕಿ ಹಾಕುವುದಕ್ಕೆ ಹೊರಟಿರಲಿಲ್ಲ. ಅದನ್ನು ಉದ್ದೇಶಪೂರ್ವಕವಾಗಿ ಹೇಳಿದುದಲ್ಲ. ನಮಗೂ ರಾಜ್ಯದ ಬಗ್ಗೆ, ವಿಧಾನ ಸೌಧದ ಬಗ್ಗೆ ಇಲ್ಲಿ ಹಾಸಿರುವ ರಗ್ಗಿನ ಬಗ್ಗೆ ಮಮತೆ ಇದೆ. ಇದು ನಮ್ಮ ಮನೆ ಅಲ್ಲ. ಆದರೆ ರಾಜ್ಯದಲ್ಲಿರತಕ್ಕಂಥ ಸಾರ್ವಜನಿಕರ ಆಸ್ತಿಪಾಸ್ತಿಗಳನ್ನು ನಷ್ಟ ಮಾಡಬೇಕು ಎಂತ ಹೇಳಿ ನಾವು ಇಲ್ಲಿಗೆ ಬಂದಿಲ್ಲ. ನಾವು ಹಾಗೆ ಬರುವುದೂ ಇಲ್ಲ. ಈ ಅಪಾದನೆಗಳನ್ನು ನಮ್ಮ ಮೇಲೆ ಏಕೆ ಹೊರಿಸುತ್ತೀರಿ? ತಾವು ಆಕ್ರೋಷದಿಂದ ನಮ್ಮ ಮೇಲೆ ಅದನ್ನು ಈ ಸಭೆಯ ಮುಂದೆ ಏತಕ್ಕೆ ಹೇಳುತ್ತೀರಿ? ಪೋಲೀಸನವರಿಗೆ ಏತಕ್ಕೆ ಹೇಳುತ್ತೀರಿ? ಪತ್ರಿಕೆಯವರಿಗೆ ಏತಕ್ಕೆ ಹೋಗಿ ಹೇಳುತ್ತೀರಿ? ಸಿ.ಐ.ಡಿ. ಯವರಿಗೆ ಏತಕ್ಕೆ ಹೋಗಿ ಹೇಳುತ್ತೀರಿ? ಮತ್ತು ನಾವೇನಾದರೂ ಆ ರೀತಿ ಉದ್ದೇಶ ಪೂರ್ವಕವಾಗಿ ಮಾಡುತ್ತೇವೆ ಎಂದು ಹೇಳುತ್ತೇವೆಯೇ? ಆದುದರಿಂದ ಇದನ್ನು ವಿಷಾದದಿಂದ ಅರಿಕೆ ಮಾಡಿಕೊಳ್ಳುತ್ತೇನೆ. ನಾವು ಏನೋ ಒಂದು ಮಹಾಪರಾಧ ಮಾಡಿದ್ದೇವೆ ಎಂದು ತಿಳಿಯುವುದಾದರೆ ಈ ಸಭೆ ಏನಾದರೂ ತೀರ್ಮಾನ ತೆಗೆದುಕೊಳ್ಳಬಹುದು, ಶಿಕ್ಷೆ ಮಾಡಬಹುದು, ಆದರೆ ಈಗ ಅನುಭವಿಸಿರತಕ್ಕಂಥ ಶಿಕ್ಷೆಯೇ ಸಾಕು. ಇದಕ್ಕಿಂತ ಹೆಚ್ಚಿನ ಶಿಕ್ಷೆ ಇನ್ನು ಮುಂದೆ ಬೇಕಾಗಿಲ್ಲ. ಇನ್ನು ಜೀವಂತವಾಗಿ ಬಿಟ್ಟುಬಿಟ್ಟರೆ ಸಾಕು. ನಿಮಗೆ ನಾವು ಬಹಳ ಆಭಾರಿಯಾಗಿರುತ್ತೇವೆ.

ಇನ್ನೊಂದು ವಿಷಯ ಪತ್ರಿಕೆಗಳಲ್ಲಿ ಬಂತು. ನಾನು ಅದನ್ನು ಹೆಚ್ಚು ವಿವರಿಸುವುದಕ್ಕೆ ತಮ್ಮ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಮುಖ್ಯವಾದ ವಿಷಯ ಏನೆಂದರೆ ಮುಖ್ಯ ಮಂತ್ರಿಗಳು ನಮ್ಮನ್ನು ಕಾಣಲು ಅಧ್ಯಕ್ಷರ ಕೊಠಡಿಯಲ್ಲಿ ಒಂದು ಗಂಟೆ ಕಾಲ ಕುಳಿತಿದ್ದರೂ ನಾವು ಅವರನ್ನು ಕಾಣದೇ ತಿರಸ್ಕರಿಸಿದೆವು, ಎಂದು ಪತ್ರಿಕೆಯಲ್ಲಿ ಬಂದಿದೆ. ನಾವು ಬ್ಲೈಂಡ್ಲಿ ರೆಫ್ಯೂಸ್ ಮಾಡಿದ್ದೇವೆ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ನಾನು ಮತ್ತು ನಮ್ಮ ಸಹೋದ್ಯೋಗಿಗಳು ಅಧ್ಯಕ್ಷರ ಕೊಠಡಿಯನ್ನು ಬಿಟ್ಟು ಹೊರಗೆ ಬಂದಾಗ ಧರಣಿ ಮುಷ್ಕರ ಹೂಡಿ ಕುಳಿತಿರುವ ಸಹೋದ್ಯೋಗಿಗಳ ಜೊತೆ ಮಾತುಕತೆ ಆಡಿ ನಂತರ ತಮ್ಮನ್ನು ಕಾಣುತ್ತೇವೆ ಎಂದು ಹೇಳಿದ್ದೇವೆಯೇ ಹೊರತು ಅದಕ್ಕಿಂತ ಹೆಚ್ಚು ಆಶ್ವಾಸನೆ ಕೊಟ್ಟಿರಲಿಲ್ಲ. ತಪ್ಪೋ ಸರಿಯೋ, ಧರಣಿ ಮುಷ್ಕರ ಹಿಡಿದಿದ್ದು ಈ ಸಭೆಯ ಕಾರ್ಯಕಲಾಪಗಳನ್ನು ತಡೆಹಿಡಿಯುವಷ್ಟರಮಟ್ಟಿಗೆ ಯಶಸ್ವಿಯಾಗಿತ್ತು. ಆದರೆ ತಮ್ಮ ಮಾತಿಗೆ ಸಂಬಂಧಪಟ್ಟಂಥ ಒಂದು ಹೇಳಿಕೆಯನ್ನು ಪುನರುಚ್ಚರಿಸಲು ಸರ್ಕಾರ ನಿರಾಕರಿಸಿದ್ದರಿಂದ, ನಾವು ಬೇರೆ ಉಪಾಯವಿಲ್ಲದೆ ಕುಳಿತ ಸ್ಥಳವನ್ನು ಬಿಟ್ಟು ಕದಲುವುದಿಲ್ಲ ಎನ್ನುವ ಒಂದು ನಿರ್ಣಯಕ್ಕೆ ಆಗಲೇ ಬರಬೇಕಾಯಿತು. ಆಗ ಅವರು ಕೊಠಡಿಯಲ್ಲಿ ಕಾದಿದ್ದು ನಮಗೆ ತಿಳಿದಿರಲಿಲ್ಲ. ಈ ಸಮಸ್ಯೆ ಪರಿಹಾರವಾಗಲೇಬಾರದು, ಇದು ಒಂದು ದೊಡ್ಡದಾಗಿ

ಉಲ್ಬಣವಾದ ವಿಷಯವಾಗಿ ಇರಬೇಕು ಎನ್ನುವ ಭಾವನೆ ನಮಗೆ ಇರಲಿಲ್ಲ. ಆದುದರಿಂದ ತಮ್ಮ ಮೂಲಕ ಮುಖ್ಯಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಆ ಅಭಿಪ್ರಾಯ ತಪ್ಪು. ಅದನ್ನು ಅವರೇ ತಿದ್ದುಕೊಳ್ಳಬೇಕು, ತಿದ್ದುಕೊಳ್ಳಲಿ. ಯಾವಾಗಲೂ ಸರ್ಕಾರ ಮಾಡುವಂಥ ಒಳ್ಳೆಯ ಕೆಲಸಕ್ಕೆ, ನಮ್ಮ ಸಹಕಾರ ಸಹಾಯ ಇದ್ದೇ ಇದೆ. ಇನ್ನೂ ಅನೇಕ ವಿಷಯಗಳು ಇವೆ. ಅದನ್ನು ಪ್ರಸ್ತಾಪ ಮಾಡುವುದಿಲ್ಲ. ಇನ್ನೊಂದು ವಿಷಯ ಹೇಳಿದರು. ಈ ಧರಣಿ ಮುಷ್ಕರ ಪೂರ್ವನಿಯೋಜಿತ ಕೆಲಸ ಅಂತ ಹೇಳಿದರು. ನಾನು ಅದನ್ನು ಸ್ಪಷ್ಟಪಡಿಸುತ್ತಾ ಇದ್ದೇನೆ. ಇದು ಪೂರ್ವ ನಿಯೋಜಿತ ಕೆಲಸ ಅಲ್ಲ. ನಾವು ಅಂದರೆ ವಿರೋಧ ಪಕ್ಷದವರು ರಾಜ್ಯದ, ರಾಷ್ಟ್ರದ ಹಿತದೃಷ್ಟಿಯಿಂದ ನಾನಾ ವಿಷಯಗಳನ್ನು ಚರ್ಚಿಸುತ್ತೇವೆ, ತೀರ್ಮಾನ ತೆಗೆದುಕೊಳ್ಳುತ್ತೇವೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದೆ, ಇಲ್ಲಿಯೂ ಕೂಡ ಕಾಂಗ್ರೆಸ್ ಸರ್ಕಾರ ಇದೆ. ಕಾಂಗ್ರೆಸ್ ಸರ್ಕಾರವನ್ನು ಉರುಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದರು. ಅದು ನಿಜವಾಗಿಯೂ ಸತ್ಯವಾದ ಮಾತು. ನಾವು ಇಲ್ಲಿಗೆ ಬಂದಿರುವುದು ರಾಜಕೀಯ ಮಾಡುವುದಕ್ಕೆ ನಮ್ಮ ಗುರಿಯೂ ಅಧಿಕಾರ ಗ್ರಹಣದ ಮೇಲೆ ಇದೆ. ಇದು ಅದಮೇಲೆ ಸಮಾಜವಾದ ನೀತಿಯನ್ನು ತರುತ್ತೇವೆ. ಅದು ಬೇರೆ ಪ್ರಶ್ನೆಯಾಯಿತು. ಅದು ದೊಡ್ಡ ಪ್ರಶ್ನೆ. ಸದ್ಯಕ್ಕೆ ಸರ್ಕಾರವನ್ನು ಉರುಳಿಸಬೇಕು. ಅದು ನಮ್ಮ ಸ್ಪಷ್ಟವಾದ ಗುರಿ ಇದನ್ನು ಅನೇಕ ಕಡೆ ಹೇಳಿದ್ದೇವೆ. ಈ ಮಾನ್ಯ ಸಭೆಯಲ್ಲೂ ಹೇಳಿದ್ದೇವೆ. ಇದಕ್ಕೆ ನಮ್ಮ ಎಲ್ಲಾ ಸಾಧನಗಳನ್ನೂ ಉಪಯೋಗಿಸಿಕೊಳ್ಳುತ್ತೇವೆ ಎಂದು ನಮ್ಮ ಎಲ್ಲಾ ಭಾಷಣದಲ್ಲೂ ಹೇಳಿದ್ದೇವೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಆದರೆ ಇದನ್ನು ಯಾವರೀತಿ ಮಾಡಬೇಕು, ಹೇಗೆ ಮಾಡಬೇಕು ಎನ್ನುವುದು ಬೇರೆ ಪ್ರಶ್ನೆಯಾಯಿತು. ಒಂದೊಂದು ಪಕ್ಷ ಒಂದೊಂದು ನೀತಿಯನ್ನು ಅನುಸರಿಸುತ್ತದೆ. ಅದರಲ್ಲಿ ನಮ್ಮ ಪಕ್ಷಕ್ಕೂ, ನಿಮ್ಮ ಪಕ್ಷಕ್ಕೂ ಸಾಮರಸ್ಯ ಇಲ್ಲ. ಆದರೆ ಹಿಂಸೆ, ಅಹಿಂಸಾ ಮಾರ್ಗ ಎಷ್ಟೆಷ್ಟು ಸಾಧನಗಳು ಇವೆ ಎನ್ನುವುದು ಗೊತ್ತಿದೆ. ನಾನು ಹೇಳುವುದು ಈ ಸಭೆಗೆ ಸಂಬಂಧಪಟ್ಟಂತೆ ಒಂದು ಕಾಲ್ ಅಟೆನ್‌ಷನ್ ನೋಟೀಸ್ ಮೇಲೆ ಈ ಒಂದು ಧರಣಿ ಮುಷ್ಕರ ಎಂದು ಏನು ಹೇಳುತ್ತೇವೆಯೋ ಅದು ಮಾಡುವುದು ಪ್ರಿಮೆಡಿಟೇಟೆಡ್ ಅಲ್ಲ. ಏಕೆಂದರೆ ಇಲ್ಲಿ ಅನೇಕ ವಿಷಯಗಳನ್ನು ಚರ್ಚೆ ಮಾಡುವುದು ಉಂಟು. ಅದರಂತೆ ಈ ವಿಷಯವನ್ನು ಚರ್ಚೆ ಮಾಡಿದ್ದು ಉಂಟು. ಆದರೆ ಈ ರೀತಿ ಕೂತುಕೊಳ್ಳಬೇಕೆಂದು ಯಾರೂ ಏನೂ ಅಭಿಪ್ರಾಯ ಪಟ್ಟಿರಲಿಲ್ಲ. ನಾನು ಈವೊತ್ತು ಈ ಸಭೆಗೆ ಬರುವ ಪರಿಸ್ಥಿತಿ ಇರಲಿಲ್ಲ. ನನಗೆ ಆರೋಗ್ಯವೂ ಇರಲಿಲ್ಲ. ಯಾರೋ ಊರಿನವರು 4 ಜನ ಬಂದರು. ಅವರನ್ನು ಈ ಸಭೆಗೆ ಬಿಟ್ಟು ಲೆಜಿಸ್ಲೇಚರ್ ಹೋಮಿಗೆ ಬಂದುಬಿಡೋಣ ಎನ್ನುವ ಉದ್ದೇಶ ಇತ್ತು. ಅಷ್ಟು ಹೊತ್ತಿಗೆ ಸರಿಯಾಗಿ ಈ ಧರಣಿ ಮುಷ್ಕರ ಮಾಡುತ್ತಾರೆಂದು ತಿಳಿದು ನಾಯಕರ ಅನುಮತಿ ಮೇಲೆ ಅವರ ಜೊತೆಯಲ್ಲಿ ಮರುಮಾತನಾಡದೆ ನಾನೂ ಸೇರಿಕೊಂಡೆ. ಆದುದರಿಂದ ಮಾತಿಗೆ, ಕೃತಿಗೆ ಒಂದು ಅರ್ಥವನ್ನು ಕಲ್ಪಿಸಿ ಅನರ್ಥ ಮಾಡಿಕೊಳ್ಳುವಂಥಾದ್ದು ಸರಿಯಲ್ಲ ಎಂದು ನಾನು ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಬಹಳ ನಮ್ರತೆಯಿಂದ ತಿಳಿಸಬಯಸುತ್ತೇನೆ.

ಇನ್ನು ಸ್ವಲ್ಪಮಟ್ಟಿಗೆ ಎರಡು ಒಳ್ಳೆಯ ಮಾತುಗಳನ್ನು ಆಡಬೇಕೆಂದು ಇಷ್ಟಪಡುತ್ತೇನೆ. ತಾವು ನಮ್ಮ ಮೇಲೆ ಅನುಕಂಪ ತೋರಿಸಿ, ಈ ಬಿಕ್ಕಟ್ಟನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ, ಅದಕ್ಕೆ ನಾವು ಆಭಾರಿಗಳಾಗಿದ್ದೇವೆ. ಈವೊತ್ತು ಇಲ್ಲಿಗೆ ಬಂದಂಥ ಲೋಕಸಭಾ ಸದಸ್ಯರಾದ ಶ್ರೀಮಾನ್ ಹನುಮಂತಯ್ಯನವರು ಸಹಾಯ ಮಾಡಿದ್ದಾರೆ. ನಮ್ಮ ಜೊತೆಯಲ್ಲಿ ಅನೇಕ ಸದಸ್ಯರೂ, ಸಂಸದೀಯ ಸದಸ್ಯರೂ ಬಂದು ಮಾತುಕತೆ ನಡೆಸಿದ್ದಾರೆ. ಶ್ರೀಮಾನ್ ದೇವರಾಜ್ ಅರಸ್‌ರವರು, ಕೊಲ್ಲೂರು ಮಲ್ಲಪ್ಪನವರು, ಅನೇಕರು ಬಂದು ಮಾತುಕತೆ ನಡೆಸಿದ್ದಾರೆ. ಗಹನವಾಗಿ, ಗಂಭೀರವಾಗಿ ಚರ್ಚೆ ನಡೆಸಿದ್ದಾರೆ. ಈ ರೀತಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಹಕರಿಸಿದಂಥ ಎಲ್ಲಾ ಮಾನ್ಯ ಸದಸ್ಯರಿಗೂ ಇತರರಿಗೂ ನಾವು ಆಭಾರಿಗಳಾಗಿದ್ದೇವೆ ಎಂದು ನನಗೆ ಅನಿಸುತ್ತದೆ.

ಈ ಘಟನೆ ಒಳ್ಳೆಯ ರೀತಿಯಲ್ಲಿ ಮುಕ್ತಾಯವಾಗಿದೆ. Please do not rub us on the wrong side. ದಯವಿಟ್ಟು ತಾವು ಈ ವಿಷಯವನ್ನು ಮುಂದುವರಿಸದೆ ಸರ್ಕಾರದ ಕಾರ್ಯಕಲಾಪಗಳನ್ನು ನಡೆಸಲು ಸಭೆ ಯಾವತ್ತು ಸೇರಬೇಕು, ಎಷ್ಟು ಹೊತ್ತಿಗೆ ಸೇರಬೇಕು, ಅದನ್ನು ಕಾರ್ಯಕಲಾಪಗಳ ಸಮಿತಿಯ ಮುಂದೆ ಇಟ್ಟು ಅದನ್ನೆಲ್ಲ ತೀರ್ಮಾನ ಮಾಡುವುದಕ್ಕೆ ತಮ್ಮ ಸಮಯವನ್ನು ತೆಗೆದುಕೊಳ್ಳಿ. ತಮಗೆ ಬಹಳ ಆಯಾಸವಾಗಿದೆ. ನಮ್ಮಲ್ಲಿ ಅನೇಕರಿಗೆ ನಾನಾ ರೀತಿಯ ಕಷ್ಟ ನಷ್ಟವಾಗಿದೆ. ಅದಕ್ಕಾಗಿ ನಾನು ಕೇಳುತ್ತೇನೆ, ಈ ದಿವಸ ಈ ಸಭೆಯನ್ನು ಮುಂದಕ್ಕೆ ಹಾಕಬೇಕು ಮತ್ತು ಸರ್ಕಾರದವರಿಗೆ ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ.

(ಶ್ರೀ ಎಸ್. ಗೋಪಾಲಗೌಡ)

ಈವೊತ್ತು ಕೊಟ್ಟಿರತಕ್ಕ ಹೇಳಿಕೆಯಲ್ಲಿ ಏನೂ ಏರುಪೇರು ಮಾಡುವುದಕ್ಕೆ ಮಾನ್ಯ ಸಚಿವರು ಯಾರೇ ಆಗಲೀ, ಕಂದಾಯ ಸಚಿವರು ಕೂಡ ಹೋಗಬಾರದು. ಅವರು 30 ವರ್ಷಗಳಿಂದ ವಕೀಲರಾಗಿರುವವರು, ಅವರು ಅದಕ್ಕೆ ವಿಶೇಷ ವ್ಯಾಖ್ಯಾನ ಮಾಡಕೂಡದು. ಅವರು ಒಂದು ಹೊಸ ಮಸೂದೆಯನ್ನು ತಯಾರು ಮಾಡಿದ್ದಾರೆಂದು ಕೇಳಿದ್ದೇನೆ. ನಾನು ಅದನ್ನು ನೋಡ ಬೇಕಾಗಿದೆ. ಸೋಷಿಯಲಿಸ್ಟ್ ಪಕ್ಷದ ಬೇಡಿಕೆ ಬೇರೆ ಇದೆ. ಸಣ್ಣ ಹಿಡುವಳಿಗಳ ಮೇಲೆ ಅಲಾಭಕರ ಹಿಡುವಳಿಗಳ ಮೇಲೆ ಏನೂ ಕಂದಾಯ ಹೇರಬಾರದು, ಹೆಚ್ಚಾಗಿ ಬೆಳೆಯುವವರು, ಲಕ್ಷಗಟ್ಟಲೆ ದುಡ್ಡು ಸಂಪಾದನೆ ಮಾಡುವವರು, ಲಕ್ಷಗಟ್ಟಲೆ ಹಣವನ್ನು ಸರ್ಕಾರದಿಂದ ಪಡೆಯುವವರು ಇಂಥ ವರಿಂದ ಸಾವಿರಗಟ್ಟಲೆ ತೆರಿಗೆಯನ್ನು ತೆಗೆದುಕೊಳ್ಳಿ. ಅದಕ್ಕೆ ನನ್ನ ಅಭ್ಯಂತರವಿಲ್ಲ. ನೇರವಾಗಿ ತೆರಿಗೆಯನ್ನು ಅವರ ಮೇಲೆ ಹಾಕಿ, ವ್ಯವಸಾಯದ ಆದಾಯ ತೆರಿಗೆಯನ್ನು ಹಾಕಿ, ಅದರಲ್ಲಿ ನನ್ನ ಅಭ್ಯಂತರವಿಲ್ಲ. ಈ ರೀತಿ ರಾಜ್ಯದ, ರಾಷ್ಟ್ರದ ರೈತರ ಹಿತವನ್ನು ಅವರ ರಕ್ಷಣೆಯನ್ನು ದೃಷ್ಟಿಯ ಲ್ಲಿಟ್ಟುಕೊಂಡು, ಈಗಿರತಕ್ಕ ಎಲ್ಲ ಲೋಪದೋಷಗಳು, ಭೂಸುಧಾರಣೆ ಕಾನೂನಿನಲ್ಲಿ ಲೋಪ ದೋಷಗಳಿವೆ. ಕಾರವಾರ ಜಮೀನ್ದಾರರು ಹೇಳುತ್ತಾರೆ, ನಮಗೆ ಗೇಣಿ ಇಲ್ಲ, ಕಂದಾಯ ಕೊಡುವುದು ತಪ್ಪಲಿಲ್ಲ ಎಂದು. ದಕ್ಷಿಣ ಕನ್ನಡ ಜಿಲ್ಲೆಯ ಜಮೀನ್ದಾರರು ಗೇಣಿ ಊಹೂಂ, ಕಂದಾಯ ಕೊಡದೆ ಇದ್ದರೆ ಜಮೀನು ಹರಾಜು ಮಾಡುತ್ತಾರೆಂದು ಹೇಳುತ್ತಾರೆ. ಎಷ್ಟು ವರ್ಷದ ಒಳಗಾಗಿ ಭೂಸುಧಾರಣೆಯನ್ನು ತರುವುದು ? ಭೂಸುಧಾರಣೆ ತ್ವರಿತದಲ್ಲಿ ತರುವುದಕ್ಕಾಗದೆ ಇದ್ದರೆ, ತರು ವುದಕ್ಕಾಗುವುದಿಲ್ಲ ಅಂತೂ ರಾಜ್ಯದ ಹಿತದೃಷ್ಟಿಯಿಂದ ನಿರುದ್ಯೋಗ ನಿವಾರಣೆ ದೃಷ್ಟಿಯಿಂದ, ಆಹಾರದ ಕೊರತೆಯನ್ನು ನೀಗಿಸಿಕೊಂಡು ಹೆಚ್ಚು ಬೆಳೆ ಬೆಳೆಯುವುದಕ್ಕೆ ರೈತರಿಗೆ ಹೆಚ್ಚು ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಆಲೋಚನೆ ಮಾಡಬೇಕು. ಈಗಾಗಲೇ ವಿದ್ಯುಚ್ಛಕ್ತಿ ಮೇಲೆ ಒಂದು ತೆರಿಗೆಯನ್ನು ಹೇರಿಬಿಟ್ಟಿದ್ದಾರೆ. ವಿದ್ಯುಚ್ಛಕ್ತಿ ಮಂಡಲ ಸರ್ವತಂತ್ರ ಸ್ವತಂತ್ರ ಸಂಸ್ಥೆ ಎಂದು ಹೇಳುತ್ತಾರೆ. ಅದು ಪ್ರತ್ಯೇಕ ಸಂಸ್ಥೆ. ಅವರು ಏನು ಬೇಕೋ ಎಲ್ಲ ಮಾಡಿಕೊಳ್ಳುತ್ತಾರೆ ಎನ್ನುವುದು ಬಹಳ ದೂರ ಹೋಗುತ್ತದೆ. ವಿದ್ಯುಚ್ಛಕ್ತಿಯನ್ನು ಪಂಪ್‌ಸೆಟ್‌ಗಳಿಗೆ ಒದಗಿಸುವ ವಿಷಯ ದಲ್ಲಿ ಯಾವ ದರದಲ್ಲಿ ಕೊಡಬೇಕು ಮತ್ತು ಇತರ ವಿಷಯಗಳಲ್ಲಿ ಅದಕ್ಕೆ ಸಂಬಂಧಪಟ್ಟ ಚರ್ಚೆ ಬಂದಾಗ ಮಾತನಾಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲರ ಭಾಷಣದಲ್ಲಿ ನನಗೆ ಅತ್ಯಂತ ಕಟುವಾಗಿ ಚುಚ್ಚಿದ ಮಾತು ಎಂದರೆ ಸರ್ಕಾರ ಒಂದು ಹೇಳಿಕೆ ಕೊಡುತ್ತದೆ. ಹೇಳಿಕೆಯನ್ನು ತಿದ್ದಿಕೊಳ್ಳುತ್ತದೆ ಅದಕ್ಕೆ ಯಾವ ರೀತಿ ಅನುಕೂಲವಾಗುತ್ತದೆಯೋ ಆ ರೀತಿ ಅದನ್ನು ಉಪಯೋಗ ಮಾಡಿಕೊಂಡು ಹೋಗುತ್ತದೆ. ವಿರೋಧ ಪಕ್ಷದವರನ್ನು ಸಂತೋಷಪಡಿಸುವುದಕ್ಕೆ, ತೃಪ್ತಿಪಡಿಸುವುದಕ್ಕೆ ನಾನು ಇಲ್ಲಿ ಇಲ್ಲ. ಅವರಿಗೆ ನನ್ನ ಹೇಳಿಕೆ ಇಷ್ಟವಿಲ್ಲದೆ ಇರಬಹುದು, ಸಮಾಧಾನ ತರಿಸದೆ ಇರಬಹುದು. ಅದಕ್ಕೆ ನಾನು ಏನು ಮಾಡುವುದಕ್ಕಾಗುತ್ತದೆ ? ಆದ್ದರಿಂದ ಅವರನ್ನು ನೋಡಿ ನನಗೆ ಏನು ಪ್ರಯೋಜನ ? ಈ ಮಾತುಗಳು, ಇದು ಬಹಳ ಉದ್ಧಟತನದ ಮಾತು ಆಯಿತು.........

Sri B. RACHAIAH (Minister for Agriculture).—Sir, there was an understanding that nobody should speak on this matter. I am sorry, that this House is being made use of to speak.........

Sri S. GOPALA GOWDA.—I am very sorry because the very hon. Speaker provoked me. I am prepared to take any punishment for those words.........

Mr. SPEAKER.—It appears that the hon. Member has not properly understood me I will explain.........

†ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಈಗ ನಾವು ಇಲ್ಲಿ ಬಂದ ಮೇಲೆ ಒಂದು ಅಂಡರ್‌ಸ್ಟ್ಯಾಂಡಿಂಗ್ ಆಗಿದೆ ಎನ್ನುವ ಮಾತನ್ನು ಹೇಳಿದಿರಿ. ಆ ಮಾತನ್ನು ಹೇಳಿದ ಮೇಲೆ ಅಂಡರ್‌ಸ್ಟ್ಯಾಂಡಿಂಗ್ ಆಗಿದ್ದರ ಪ್ರಕಾರ ನಾವು ನಡೆದು ಕೊಳ್ಳಬೇಕಾದ್ದು ನಮ್ಮ ಧರ್ಮ. ಅದರ ಪ್ರಕಾರ ನಾವು ನಡೆದುಕೊಂಡು ಅಷ್ಟು ಕೆಲಸ ಮುಗಿಸಿದೆವು. ನನಗೆ ಗೊತ್ತಿದ್ದಹಾಗೆ ತಾವು ಹೇಳಿದಿರಿ, ನಾನು ಈ ಮನೆಗೆ ಒಂದು ಭರವಸೆ ಕೊಟ್ಟಿದ್ದೇನೆ, ಏನಾಗುತ್ತಿದೆ, ಏನಾಗಿದೆ ಎನ್ನುವ ವಿಚಾರದಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಬೇಕು ಎಂದು ಹೇಳಿದಿರಿ. ಆವಾಗ ನಾವು

ಸ್ಟೇಟ್‌ಮೆಂಟ್ ಮಾಡಬೇಕು ಎಂದು ಸುಮ್ಮನಾದೆವು. ನಾಲ್ಕು ವಾಕ್ಯಗಳನ್ನು ಏನು ಬರೆದು ಇಟ್ಟಿದ್ದೇವೆ ಅಷ್ಟು ಮಾತ್ರ ಓದಿದೆವು. ಮಾನ್ಯ ಸದಸ್ಯರು ಭಾಷಣ ಮಾಡುತ್ತ ನನ್ನ ಉದ್ಧಟತನ ಎಂದು ಹೇಳಿದರು. ಪ್ರಶ್ನೆ ಬಂದದ್ದು ಏನೆಂದರೆ ಒಳಗಡೆ ಎಷ್ಟು ಮಾತನಾಡಿದ್ದೇವೆ ಅಷ್ಟೇ ನಡೆಯಬೇಕು. ಇದಕ್ಕೂ ಹೆಚ್ಚು ನಡೆಯಬಾರದು ಎಂದು ಇದ್ದೆ. ಒಳಗೆ ಮಾತನಾಡಿದ್ದಾಯಿತು. ಅಲ್ಲಿ ನಡೆದದ್ದು ಎರಡೂ ಕಡೆಯವರಿಗೆ ಅನ್ವಯಿಸುತ್ತದೆ. ಒಂದಕ್ಕೆ ಅನ್ವಯಿಸುತ್ತದೆ, ಇನ್ನೊಂದಕ್ಕೆ ಅನ್ವಯಿಸುವುದಿಲ್ಲ ಎಂದಲ್ಲ. ನಾನು ಏನು ಹೇಳಿದ್ದೇನೆ, ಪತ್ರಿಕೆಗಳಿಗೆ ಏನು ಹೇಳಿಕೆ ಕೊಟ್ಟಿದ್ದೇನೆ, ಪತ್ರಿಕೆಗಳಲ್ಲಿ ಏನು ಬಂದಿದೆ, ಅದು ಉದ್ಧಟತನವೋ ಅಲ್ಲವೋ ಎನ್ನುವ ವಿಚಾರ ನಾನು ಹೇಳಬೇಕಾಗುತ್ತದೆ. ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿಕೊಂಡು ಅವರು ಏನು ಊಹೆ ಮಾಡಿದ್ದಾರೆ ಆ ಪ್ರಕಾರ ಹೇಳಿದ್ದಾರೆ. ನಾನು ಏನು ಹೇಳಿದ್ದೇನೆ, ಏನು ವಿಚಾರ ಮಾಡಿದ್ದೇನೆ ಎಂದು ಹೇಳಬೇಕಾಗುತ್ತದೆ. ಅದರ ಜೊತೆಯಲ್ಲಿ ಈ ಮನೆಯಲ್ಲಿ ಕುಳಿತು ಧರಣಿ ಸತ್ಯಾಗ್ರಹ ಮಾಡಿದ್ದರ ಬಗ್ಗೆ ನಾನು ನನ್ನ ವಿಚಾರಗಳನ್ನು ವ್ಯಕ್ತ ಮಾಡಿದರೆ ಕಹಿ ವಾತಾವರಣ ಬರುತ್ತದೆ, ಎರಡು ಮೂರು ದಿನದಿಂದ ಇದ್ದ ವಾತಾವರಣ ತಿಳಿ ಆಗಬೇಕು ಎಂದು ಅವರು ಎಷ್ಟೇ ಮಾತನಾಡಿದರೂ ಒಳಗೆ ಆಗಿದ್ದ ಅಂಡರ್‌ಸ್ಟಾಂಡಿಂಗ್ ಪ್ರಕಾರ ನಾನು ಬಾಯಿ ಬಿಡಲಿಲ್ಲ. ಮಾನ್ಯ ಸದಸ್ಯರು ರೈತರಿಗೆ ಬಹಳ ಅನ್ಯಾಯವಾಗುತ್ತಿದೆ, ರೈತರ ಹಿತರಕ್ಷಣೆ ಮಾಡುವ ಅನುಕಂಪ ಈ ಕಡೆಯವರಿಗೆ ಇಲ್ಲ ಎನ್ನುವ ಧಾಟಿಯಲ್ಲಿ, ಒಂದು ವಾತಾವರಣ ಬಂದಾಗ ನಾವು ಸುಮ್ಮನೆ ಕೂಡುವ ಹಾಗೆ ಇಲ್ಲ. ನಮ್ಮನ್ನೂ ರೈತರು ಆರಿಸಿದ್ದಾರೆ, ಅವರನ್ನೂ ರೈತರು ಆರಿಸಿದ್ದಾರೆ. ಈ ಸಮಯದಲ್ಲಿ ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ಏನೆಂದರೆ ಇದನ್ನು ಬೆಳೆಸಬಾರದು ಎನ್ನುವ ನಿರ್ಣಯ ನಾವು ಮಾಡಿಕೊಂಡೆವು. ಅಧ್ಯಕ್ಷರು ಒಂದು ಸ್ಟೇಟ್‌ಮೆಂಟ್ ಮಾಡುವುದಾಗಿ ಹೇಳಿದ್ದು ಆ ರೀತಿ ಮಾಡಿದ್ದಾರೆ.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ದಯವಿಟ್ಟು ಇಲ್ಲದೆ ಇರುವುದನ್ನು ಇಲ್ಲಿ ಹೇಳಬಾರದು.

ಶ್ರೀ ವೀರೇಂದ್ರ ಪಾಟೀಲ್.—ಅವರು ಏನು ಹೇಳಿದ್ದಾರೆ ಎನ್ನುವಂಥದ್ದನ್ನು ಹೇಳಿದ್ದೇನೆ. ಸ್ಟೇಟ್‌ಮೆಂಟ್ ಯಾವಾಗ ಮಾಡಬೇಕು ಎನ್ನುವಂಥದ್ದು ಅಥವಾ ಮೊದಲು ಸ್ಟೇಟ್‌ಮೆಂಟ್ ಮಾಡಬೇಕೋ ಆಮೇಲೆ ಮಾಡಬೇಕೋ ಎನ್ನುವ ವಿಷಯ ಬಂದಾಗ ದೊಡ್ಡ ಮನುಷ್ಯರು ಹೇಳಿದರು, ಮೊದಲು ಸ್ಟೇಟ್‌ಮೆಂಟ್ ಮಾಡಿ ಕಹಿ ವಾತಾವರಣ ಇರುವುದನ್ನು ಹೆಚ್ಚು ಮಾಡುವುದು ಬೇಡ ಎಂದು ಒಂದು ಅಂಡರಸ್ಟಾಂಡಿಂಗೆಗೆ ಬಂದಮೇಲೆ ಅದರಂತೆ ತಾವು ಒಂದು ಸ್ಟೇಟ್‌ಮೆಂಟ್ ಮಾಡಿದಿರಿ......

Sri H. SIDDAVEERAPPA (Harihara).—Sir, one correction. ಈಗ ಯಾವ ಸ್ಟೇಟ್‌ಮೆಂಟ್ ಅವರು ಮಾಡುತ್ತಾರೆ ಎನ್ನುವುದನ್ನು ಪದಶಃ ಓದಿ ನಮ್ಮ ಒಪ್ಪಿಗೆಯನ್ನು ಕೊಟ್ಟಿರಲಿಲ್ಲ. ಅಧ್ಯಕ್ಷರು ಏನು ಹೇಳಿದರು ಎಂದರೆ, ಏನೇನು ನಡೆಯಿತು ಎಂದು ನಾನು ಸಭೆಗೆ ರಿಪೋರ್ಟ್ ಮಾಡಬೇಕಾಗುತ್ತದೆ ಎಂದು ಹೇಳಿದಾಗ ನಾವು ಕಾರ್ಯಕ್ರಮದ ವಿಚಾರವಿರಬಹುದು ಎಂದು ಭಾವಿಸಿದೆವು. ಅಧ್ಯಕ್ಷರು ಒಂದು ಸ್ಟೇಟ್‌ಮೆಂಟ್ ಬರೆದುಕೊಂಡು ಬಂದು ಓದಿದರು. ಅದರಲ್ಲಿ ವಿಷಯ ಏನಿದೆ, ಅವರು ಏನು ಹೇಳುತ್ತಾರೆ ಎನ್ನುವುದು ನಮಗೆ ಗೊತ್ತಿರಲಿಲ್ಲ. ಒಂದು ವೇಳೆ ಗೊತ್ತಾಗಿದ್ದರೆ ಅವಾಗಲೇ ವಿನಂತಿ ಮಾಡಿಕೊಳ್ಳುತ್ತಿದ್ದೆವು, ಮತ್ತೆ ಈ ವಿಷಯ ಮರುಕಳಿಸುವುದು ಬೇಡ, ಟೈಫಾಯಿಡ್ ಕಾಯಿಲೆ ಬಂದವನಿಗೆ ಒಂದು ಸಾರಿ ಮರುಕಳಿಸಿದರೇನೇ ಬಹಳ ತೊಂದರೆಯಾಗುತ್ತದೆ, ಎರಡನೇ ಸಲ ಮರುಕಳಿಸಿದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಕಹಿ ವಾತಾವರಣ ಮರುಕಳಿಸುವುದಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳಬೇಕಾಗಿದೆ ಎಂದು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಅಜೀಜ್‌ಸೇಟರು ಏನು ಹೇಳಿದರು, ಯಾವ ಸಂದರ್ಭದಲ್ಲಿ ಹೇಳಿದರು ಎನ್ನುವುದನ್ನು ಗಮನಿಸಬೇಕಾಗುತ್ತದೆ. ಒಬ್ಬ ಮನುಷ್ಯ ಹಸಿದಿರುವಾಗ ಹೇಳುವ ಮಾತುಗಳಿಗೆ ಅರ್ಥವಿಲ್ಲ ಎಂದು ಬಲ್ಲವರು ಹೇಳುತ್ತಾರೆ.

> "words do not convey the meaninng what he says when once a man is in hungry stomach"

5-00 P.M.

The words do not convey the meaning what he says. When once the man is in hungry stomach, such things happen.

(SRI H. SIDDAVEERAPPA)

ಕೆಲವು ವಿಷಯಗಳನ್ನೆಲ್ಲಾ ಯೋಚನೆಮಾಡಿ ಮಾಡಬೇಕಾಗಿತ್ತು, ಆ ಪ್ರಸಂಗ ಬೇರೆ, ಅವನ್ನು ಹೇಳುವುದಿಲ್ಲ. ತಾವು ಒಂದು ಸ್ಟೇಟ್‌ಮೆಂಟ್ ಮಾಡಿದ್ದೀರಿ, ಅದರಮೇಲೆ ಮುಖ್ಯ ಮಂತ್ರಿಗಳು ಹೇಳಿದರು. ತಾವು ಒಂದು ಸ್ಟೇಟ್‌ಮೆಂಟ್ ಈ ರೀತಿ ಮಾಡುತ್ತೀರೆಂಬುದು ನಮ್ಮಲ್ಲಿ ಕೆಲವರಿಗೆ ಗೊತ್ತಿರಲಿಲ್ಲ. ಈ ರೀತಿ ಸ್ಟೇಟ್‌ಮೆಂಟ್ ಮಾಡಬಾರದಾಗಿತ್ತು. ಮಾಡಿದ್ದಾಯಿತು. ಏನೋ ಆದದ್ದು ಆಗಿಹೋಯಿತು. ಇನ್ನು ಮುಂದಾದರೂ ಇದನ್ನು ಲಂಬಿಸುವುದು ಬೇಡ, ಇದನ್ನು ಇಲ್ಲಿಗೇ ಸುಮ್ಮನೆ ಬಿಡುವುದು ಉತ್ತಮ.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದ್ದನ್ನು ಶ್ರೀ ಸಿದ್ಧವೀರಪ್ಪನವರು ಪುಷ್ಟೀಕರಿಸಿದರು, ನಾವು ಕರೆದಾಗ ಏನು ಮಾತುಕತೆ ನಡೆದು ಏನು ತೀರ್ಮಾನವಾಗಿದೆ ಎಂಬುದನ್ನು ನಾನು ಹೇಳಿದೆ. ಅದನ್ನು ಇಲ್ಲಿ ರಿಪೋರ್ಟ್ ಮಾಡಿದೆ. ಇದರಮೇಲೆ ಅಧ್ಯಕ್ಷರು ಹೇಳಿದ್ದು ಅವರಿಗೆ ಸಂಬಂಧಪಟ್ಟದ್ದು, ಅದು ಸಭೆಗೆ ಬಿಟ್ಟದ್ದು ಅದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ಆದರೆ ನಮ್ಮಮೇಲೆ ಆರೋಪ ಮಾಡಲಿಕ್ಕೆ ಹೊರಟಿದ್ದಾರೆ. ಅದಕ್ಕೆ ಈಗ ಅವಕಾಶವಿರಲಿಲ್ಲ. ನಿಮ್ಮಿಂದ ಪ್ರಾರಂಭವಾದ ಗದೆ ನಮ್ಮ ಕಡೆ ತಿರುಗಿತು, ಬಹುಶಃ ನಿಮ್ಮಿಂದ ಪ್ರವೋಕೇಷನ್ ಆಗಿರಬಹುದು. ಅದಕ್ಕೆಲ್ಲಾ ಅವರೇ ಕಾರಣರು. ಮಾನ್ಯ ಸದಸ್ಯರು ನಿಮ್ಮ ಬಗ್ಗೆ ಏನು ಹೇಳಿದ್ದಾರೆ ಅದು ನಿಮಗೆ ಬಿಟ್ಟಿರುವುದು. ನಾನು ಸುಮ್ಮನಿದ್ದೆ. ಆದರೆ ವೀರೇಂದ್ರ ಪಾಟೀಲರೇ ಈ ರೀತಿ ಸ್ಟೇಟ್‌ಮೆಂಟ್ ಮಾಡಿದ್ದಾರೆ, ಅದು ಅವರ ಉದ್ಧಟತನವನ್ನು ತೋರಿಸುವುದು ಎಂದು ಹೇಳಿದರು. ಇಲ್ಲಿ ಏನೂ ಚರ್ಚೆಯಿಲ್ಲದೆ ಈಗ ಬಂದಿರುವ ಪ್ರಸಂಗವನ್ನು ಮುಗಿಸಬೇಕು ಎಂದು ಒಂದು ಒಡಂಬಡಿಕೆಯಾಗಿತ್ತು. ಆದರೆ ಅದರಂತೆ ಇಲ್ಲಿ ನಡೆಯುತ್ತಿಲ್ಲ. ನಾವೂ ಕೂಡ ಏನು ಬೇಕಾದರೂ ಹೇಳಬಹುದು, ಅವಕಾಶ ಕೊಟ್ಟರೆ ಶ್ರೀ ಪುಟ್ಟಸ್ವಾಮಿಯವರೂ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ. ನಾವೂ ಅನೇಕ ರೀತಿಯಿಂದ ಹೇಳಬಹುದು. ಈ ರೀತಿ ಇತರ ವಿಷಯಗಳು ಈ ಸಂದರ್ಭದಲ್ಲಿ ಪ್ರಸ್ತಾಪವಾಗಿರುವುದು ದುರ್ದೈವ, ಹೀಗೆ ಆಗಬಾರದಾಗಿತ್ತು. ಆಗಿರುವ ಘಟನೆಯನ್ನು ಮರೆತು ಒಳ್ಳೆಯ ವಾತಾವರಣದಲ್ಲಿ ಮುಂದುವರೆಯಬೇಕೆಂಬ ಉದ್ದೇಶವಿತ್ತು. ಬಹುಶಃ ಕಹಿ ವಾತಾವರಣ ಈಗೇನು ಉಂಟಾಗಿದೆ ಅದಕ್ಕೆ ಅವಕಾಶವಾಗಬಾರದಾಗಿತ್ತು. ಇದನ್ನು ಗಮನಕ್ಕೆ ತಂದಿದ್ದೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಸ್ವಾಮಿ, ಮೂರು ನಾಲ್ಕು ದಿವಸಗಳಿಂದ ಇದ್ದ ಸಮಸ್ಯೆ ಹೇಗೋ ಬಗೆಹರಿಯಿತು ಎಂದು ನಾವೆಲ್ಲಾ ಬಹಳ ಸಂತೋಷದಿಂದ ಇದ್ದೆವು. ಆಲ್ ಈಸ್ ವೆಲ್ ದಟ್ ಎಂಡ್ಸ್ ವೆಲ್ ಎಂದಿದ್ದೆವು. ಆದರೆ ಪುನಃ ಗಲಾಟೆಗೆ ಅವಕಾಶವಾಗಿರುವುದು ನೋಡಿ ನನಗಾದರೂ ಬಹಳ ವ್ಯಸನವಾಗುತ್ತಿದೆ. ಈಗ ನಾನು ಪುನಃ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಹೇಗೆ ಹೀಗಾಯಿತೋ ಏನೋ ಗೊತ್ತಿಲ್ಲ. ಈ ಸಂದರ್ಭದಲ್ಲಿ ನಾನು ತಮಗೆ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಬೆಳಿಗ್ಗೆ 7 ಗಂಟೆಗೆ ಒಂದು ಟೆಲಿಫೋನ್ ಕರೆ ಬಂತು, ರಾತ್ರಿ ಏನೂ ಆಹಾರವಿಲ್ಲ, ಏನೂ ಕೊಟ್ಟಿಲ್ಲ, ನಮ್ಮಲ್ಲಿ ಕೆಲವರು ಗ್ಯಾಸ್ಟ್ರಿಕ್ ಟ್ರಬಲ್‌ನವರಿದ್ದೇವೆ; ರಾತ್ರಿ ಅದಕ್ಕಾಗಿ ನೀರು ಕುಡಿದೆವು, ನಂತರ ಮಲಗಿದೆವು, ತೊಂದರೆಯಾಗಿದೆ, ನಾವು ದುಡ್ಡು ಕೊಟ್ಟು ಆಹಾರವನ್ನು ತರಿಸಿಕೊಳ್ಳುವುದಕ್ಕೆ ಅವಕಾಶಬೇಕು ಎಂದು ತಿಳಿಸಿದರು. ಪಶ್ಚಿಮ ಬಂಗಾಳದಲ್ಲಿ ಈ ರೀತಿ ಆದಾಗ ಅಧ್ಯಕ್ಷರು ಆಹಾರವನ್ನೊದಗಿಸಿದರು. ಇಲ್ಲಿ ಸತ್ಯಾಗ್ರಹ ಮಾಡಿರುವವರನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕು, ಇದು ಧರಣಿ ಸತ್ಯಾಗ್ರಹ, ಅಸೆಂಬ್ಲಿ ನಡೆಯುವಾಗ ಲಾಂಜಿನಲ್ಲಿ ಆಹಾರ ಪದಾರ್ಥಗಳನ್ನು ತಿನ್ನುವುದಕ್ಕೆ ಅವಕಾಶವಿದೆ, ಆದುದರಿಂದ ಈಗ ಸತ್ಯಾಗ್ರಹ ಮಾಡುತ್ತಿರುವವರಿಗೆ ಆಹಾರ ತೆಗೆದುಕೊಳ್ಳಲು ಅವಕಾಶ ಕೊಡಿ, ಅಲ್ಲದೆ ಶ್ರೀ ಶಿವಪ್ಪನವರಿಗೆ ಕಾಯಿಲೆ ಜಾಸ್ತಿಯಾಗಿದೆ, ಅವರಿಗೆ ಫ್ಲೂ ಅಟ್ಯಾಕ್ ಆಗಿದೆ, ಮಾತನಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ ಎಂದು ನಾನು ಅಧ್ಯಕ್ಷರಿಗೆ ತಿಳಿಸಿದೆ, ಅವರು ಕಾನೂನು ರೀತ್ಯ ತಮಗೆ ಕಷ್ಟವಿದೆ ಎಂದು ಹೇಳಿದರು. ಕಾನೂನು ಕಡಿತದಲ್ಲಿದೆ. ಮಾನವೀಯತೆಯ ದೃಷ್ಟಿಯಿಂದ ಈ ಪ್ರಶ್ನೆಯನ್ನು ಬಗೆಹರಿಸಬೇಕು ಎರಡು ದಿವಸ ಕಾನೂನು ಭಾಗ ಹಾಗಿರಲಿ ಬೇಕಾದರೆ ಸತ್ಯಾಗ್ರಹ ಮಾಡುವವರನ್ನು ಎತ್ತಿ ಹೊರಗೆ ಹಾಕಿಸಿ, ನಾವು ಅದನ್ನು ತಪ್ಪಾಗಿ ತಿಳಿಯುವುದಿಲ್ಲ, ಇಲ್ಲವಿದ್ದರೆ ಅವರಿಗೆ ಬೇಕಾದ ಆಹಾರ ಒದಗಿಸಿ ಬೇಕಾಗಿರುವ ಅನುಕೂಲಗಳನ್ನು ಕೊಡಿ ಎಂದು ಕೈಮುಗಿದು ಅಧ್ಯಕ್ಷರನ್ನು ಕೇಳಿಕೊಂಡೆ. ನೀವು ವಿಧಾನಸೌಧದ ಬಳಿಗೆ ಬನ್ನಿ, ನಾನೂ ಅಲ್ಲಿಗೆ ಬರುತ್ತೇನೆ ಎಂದು ಅಧ್ಯಕ್ಷರು ಹೇಳಿದರು. ಅದರಂತೆ ನಾನು ಹೋದೆ, ಆಗ ಇನ್ನೂ ಅಧ್ಯಕ್ಷರು ಅಲ್ಲಿಗೆ ಬಂದಿರಲಿಲ್ಲ, ಆಗ ಒಂದು ಕಡೆ ನಿಂತಿದ್ದಾಗ್ಗೆ ಅಲ್ಲಿದ್ದ ಒಬ್ಬ ಮನುಷ್ಯ ನಿಮಗೆ ಕಾಲು ಸರಿಯಾಗಿಲ್ಲ, ನಿಂತುಕೊಂಡಿರುವುದಕ್ಕೆ ತೊಂದರೆಯಾಗುವುದು ಎಂದು

ಒಂದು ಸ್ಟೂಲನ್ನು ತಂದುಹಾಕಿದ, ಅವರ ಮೇಲೆ ಕುಳಿತಿದ್ದೆ. ಆಮೇಲೆ ಅಧ್ಯಕ್ಷರು ಬಂದರು. ಕೆಲವರಿಗೆ ಬಹಳ ತೊಂದರೆಯಾಗಿದೆ, ನಂಜೇಗೌಡ ಮುಂತಾದ ಕೆಲವರಿಗೆ ಗ್ಯಾಸ್ಟ್ರಿಕ್ ಟ್ರಬಲ್ ಇದೆ, ಅಜೀಜ್ ಸೇಟ್‌ರವರಿಗೆ ಬಹಳ ಹಸಿವೆಯಾಗಿದೆ, ರಾತ್ರಿ ಆಹಾರವಿಲ್ಲ ಎಂಬುದಾಗಿ ಅವರಿಗೆ ಹೇಳಿದೆ. ಅಧ್ಯಕ್ಷರು ಅದಕ್ಕೆ ಸಹಾನುಭೂತಿಯನ್ನು ಸೂಚಿಸಿದರು, ಅಜೀಜ್ ಸೇಟರು ಬೆಂಕಿ ಹಚ್ಚುವುದಾಗಿ ಮುಂತಾಗಿ ಏನೇ ಹೇಳಿದ್ದರೂ ಆ ರೀತಿ ಮಾಡಬೇಕೆಂಬ ಭಾವನೆ ಅವರಲ್ಲಿರಲಿಲ್ಲ. ತಮಗೆ ಆಗಿರುವ ತೊಂದರೆಯಿಂದ ನೊಂದು ಹಾಗೆ ಹೇಳಿರಬಹುದು. ಅದನ್ನು ಯಾರೂ ಅಪಾರ್ಥ ಮಾಡಿಕೊಳ್ಳಬಾರದು. ವಿಧಾನಸೌಧ ನಮ್ಮದು, ಪುಣ್ಯಾತ್ಮ ಹನುಮಂತಯ್ಯನವರು ಅದನ್ನು ಕಟ್ಟಿಸಿದರು. ಕೆಲವು ದೇಶಗಳಲ್ಲಿ ಹಾಗೆ ಮಾಡಿರಬಹುದು. ನಮ್ಮ ದೇಶದಲ್ಲಿ ಅಂಥ ಮನೋಭಾವನೆ ಯಾರಿಗೂ ಇಲ್ಲ. ಆದುದರಿಂದ ಈ ವಿಚಾರವನ್ನು ಇನ್ನು ಪ್ರಸ್ತಾಪಮಾಡದೆ ಇಲ್ಲಿಗೇ ಬಿಡಬೇಕು ಎಂದು ನಾನು ಅರಿಕೆ ಮಾಡುತ್ತೇನೆ. ಇದುವರೆಗೆ ಆಗಿರುವುದನ್ನು ಮರೆತು ಬಿಡೋಣ, ಎರ್ ಈಸ್ ಹ್ಯೂಮನ್, ಟು ಫರ್‌ಗಿವ್ ಈಸ್ ಡಿವೈನ್ ಎಂದು ಹೇಳುವುದುಂಟು. ಗೋಪಾಲಗೌಡರು ನಾಲ್ಕು ದಿವಸ ಸತ್ಯಾಗ್ರಹ ಮಾಡಿರುವುದರಿಂದ ಮನಸ್ಸಿನಮೇಲೆ ಏನೋ ಒಂದು ಪರಿಣಾಮವಾಗಿ ಒಂದು ರೀತಿಯಲ್ಲಿ ಏನಾದರೂ ಹೇಳಿರಬಹುದು. ಈಗಲಾದರೂ ಟ್ರೆಜರಿ ಬೆಂಚಿನವರು ಇದನ್ನು ಯೋಚನೆ ಮಾಡಬೇಕು, ಬಹಳ ದೀರ್ಘವಾಗಿ ಯೋಚನೆ ಮಾಡಬೇಕು, ಯಾವ ಸರ್ಕಾರ ನಡೆಸಬೇಕಾದರೂ ಕೂಡ ವಿರೋಧ ಪಕ್ಷ ಇದ್ದೇ ತೀರಬೇಕು ಎಂದು ಹೇಳುವಾಗ, ಇಲ್ಲಿ ಒಂದೇ ಪಕ್ಷ ವಿರೋಧ ಪಕ್ಷದ ಕಡೆ ಇಲ್ಲ, ಅನೇಕ ಪಕ್ಷಗಳು ಸೇರಿವೆ. ಆದುದರಿಂದ ಇದುವರೆಗೆ ಏನೇ ನಡೆದಿದ್ದರೂ ಅದನ್ನು ಮನಸ್ಸಿಗೆ ತೆಗೆದುಕೊಂಡು ದೊಡ್ಡದು ಮಾಡದೆ ಪೂರ್ವಾಪರ ದೃಷ್ಟಿಯಿಂದ ನೋಡಬೇಕು. ಶ್ರೀ ಕೌಜಲಗಿಯವರು ಒಳ್ಳೆಯ ಸೌಜನ್ಯದ ಮನುಷ್ಯರು ಅವರ ನಿರ್ಣಯ ಈ ದಿವಸ ಇಷ್ಟು ಪ್ರವೋಕೇಷನ್ನಿಗೆ ಅವಕಾಶ ಮಾಡುತ್ತದೆ ಎಂದು ನಾವು ಭಾವಿಸಿರಲಿಲ್ಲ. ಅವರು ಸ್ಟೇಟ್‌ಮೆಂಟ್ ಮಾಡುವಾಗ ನಾನು ಹೊರಗಡೆ ಇದ್ದೆ, ನಂತರ ಗಲಾಟೆಯಾಗಿ ನಮ್ಮ ನಾಯಕರು ಮಾಡಿದಂತೆ ನಾವೂ ಕೂಡ ಅದನ್ನು ಅನುಸರಿಸಿದೆವು. ಹಾಗೆ ಮಾಡಬೇಕಾಯಿತು. ಆದುದರಿಂದ ಈಗ ನಡೆದಿರುವ ವಿಚಾರವನ್ನು ಇಲ್ಲಿಗೇ ಬಿಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಎಲ್ಲರೂ ಆಗಿರುವುದನ್ನು ಮರೆಯುವುದು ಒಳ್ಳೆಯದು. ಶ್ರೀ ಹನುಮಂತಯ್ಯನವರು ಇದಕ್ಕೆ ಸಂಬಂಧಪಟ್ಟ ಮಾತುಕತೆಗಳಲ್ಲಿ ಭಾಗವಹಿಸಿ ಅವರು ಸಹಾಯಮಾಡಿರುವುದಕ್ಕೆ ಅವರಿಗೆ ನಾವು ಋಣಿಯಾಗಿದ್ದೇವೆ. ದೇಶದ ಹಿತದೃಷ್ಟಿಯಿಂದ ಕ್ರಮ ಕೈಕೊಂಡ ಸಂದರ್ಭದಲ್ಲಿ ಏನಾದರೂ ಮನಸ್ಸಿಗೆ ಬೇಸರವುಂಟುಮಾಡುವ ವಿಚಾರ ಬಂದಿದ್ದರೆ ಅದನ್ನು ಮರೆಯಬೇಕೆಂದು ಮತ್ತೊಂದು ಸಲ ನಾನು ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಚನ್ನಯ್ಯ.—ನಾವು ಒಂದು ಅಂಡರ್‌ಸ್ಟ್ಯಾಂಡಿಗ್‌ಗೆ ಬಂದು ಕುಳಿತುಕೊಂಡಿದ್ದೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ನಿಜ ಒಪ್ಪಿಕೊಳ್ಳುತ್ತೇನೆ. ಆದರೆ ಸ್ಪೀಕರ್‌ರವರು ಮಾತನಾಡುವಾಗ ಇದನ್ನೆಲ್ಲಾ ಮಾತನಾಡುತ್ತಾರೆ ಎಂದು ನಮಗೆ ಗೊತ್ತಿರಲಿಲ್ಲ, ಅವರು ಹೇಳಿರಲೂ ಇಲ್ಲ. ಅದರಲ್ಲಿ ಅಜೀಜ್ ಸೇಟ್‌ರವರ ಮಾತು ಬಂದದ್ದು ಕೇಳಿ ವ್ಯಸನವಾಯಿತು. ಶನಿವಾರದ ದಿವಸ ನಾನು ಇಲ್ಲಿಗೆ 10 ಗಂಟೆಗೆ ಬಂದಾಗ ಯಾರೋ ಹೇಳಿದರು ಸ್ಪೀಕರ್‌ರವರು ನಮ್ಮನ್ನು ನೋಡಿಕೊಂಡು ಹೋಗುವುದಕ್ಕೆ ಬಂದಿದ್ದರು ಎಂದು. ಹಿಂದಿನ ದಿವಸ ರಾತ್ರಿ ಇಲ್ಲಿದ್ದವರಿಗೆ ತಿಂಡಿ ವಗೈರೆ ಕಳುಹಿಸಿರಬೇಕು, ತೆಗೆದುಕೊಂಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೆ, ಆದರೆ ಅದು ಯಾವುದೂ ಹೋಗಿಲ್ಲ ಅಂತ ಗೊತ್ತಾದ ಮೇಲೆ ನಾವು ತಮ್ಮ ಹತ್ತಿರ ಬಂದು ಮಾತನಾಡುವಾಗ ಶ್ರೀಮಾನ್ ಅಜೀಜ್ ಸೇಟ್‌ರವರು ಸ್ವಲ್ಪ ಗಟ್ಟಿಯಾಗಿ ಮಾತನಾಡಿದರು, ಇಲ್ಲ ಅಂತ ಅಲ್ಲ, ಆ ರೀತಿ ಅವರು ಹೇಳುವುದು ಸ್ವಭಾವ. ಅದು ಅವರ ಸ್ವಭಾವ ಅಂತ ಗೊತ್ತಾಗುತ್ತದೆ. ಮನುಷ್ಯರ ಸ್ವಭಾವ ತಿಳಿದುಕೊಂಡು ಮಾತನಾಡಬೇಕು. ನನಗೂ ತಮಗೂ ಚರ್ಚೆಯಾಯಿತು, ಬಹಳ ಚರ್ಚೆಯಾದ ಮೇಲೆ ಅವರು ಎದ್ದು ಹೊರಟು ಹೋದರು. ಸ್ಪೀಕರ್‌ರವರಿಗೂ ಗೊತ್ತು. ಬಹಳ ಹೊತ್ತು ಆದಮೇಲೆ ಸುಮಾರು ಅರ್ಧ ಗಂಟೆ ಮೇಲೆ ಕಾಫಿ, ತಿಂಡಿ ಎಲ್ಲಕ್ಕೂ ಒಳಗೆ ತೆಗೆದುಕೊಂಡು ಹೋಗಲು ಅನುಮತಿ ಕೊಟ್ಟರು. ಅನುಮತಿ ಕೊಟ್ಟಮೇಲೆ ಅಜೀಜ್ ಸೇಟ್‌ರವರ ಮಾತು ಇಲ್ಲಿ ಬರುವಂತೆಯೇ ಇಲ್ಲ. ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಇವತ್ತು ಹೇಳಿರುವುದನ್ನು ನೋಡಿದರೆ ಕಾಫಿ ತಿಂಡಿ ಕೊಡುವುದಿಲ್ಲ ಅಂತ ಚರ್ಚೆ ಮಾಡಿದವರು ಕೊಟ್ಟ ಮೇಲೆ ಪುನಃ ಅವರು ಮಾತು ಎಲ್ಲಿ ಬರುತ್ತದೆ ಎಂದು ಪ್ರಶ್ನೆ ಹಾಕುತ್ತಾ ಇದ್ದೇನೆ. ಸ್ಪೀಕರ್‌ಗೆ ಪ್ರಶ್ನೆ ಹಾಕಬಹುದೇ, ಕಾನೂನು ಇದೆಯೇ ಇಲ್ಲವೇ ಎಂಬುದ ಒಂದೂ ನನಗೆ ಗೊತ್ತಿಲ್ಲ. ಇದು ಸರಿ ಕಾನೂನು ಇದೆ ಅಂತ ನಾನು ತಿಳಿದುಕೊಂಡಿದ್ದೇನೆ. ಚರ್ಚೆಯಾದ ಮೇಲೆ ಎಲ್ಲರೂ ಹೇಳಿದ ಮೇಲೆ ಕಾಫಿ ತಿಂಡಿ ಬಿಡುತ್ತೇವೆ ಅಂತ ಹೇಳಿ ಬಿಟ್ಟರು ಮಧ್ಯಾಹ್ನ ಊಟ ಬಿಡುವುದಿಲ್ಲ ಎಂದು ಹೇಳಿದರು, ಆಮೇಲೆ ಡೆಪ್ಯೂಟಿ ಸ್ಪೀಕರ್ ಅವರನ್ನು ಕೇಳಿಕೊಂಡು ಬಂದಿದ್ದೇವೆ

(ಶ್ರೀ ಎಸ್. ಚನ್ನಯ್ಯ)

ಅಂತ ಹೇಳಿ ಬಹಳ ಚರ್ಚೆಯಾದ ಮೇಲೆ ಆಗಲಿ ಅಂತ ಹೇಳಿ ಅನುಮತಿ ಕೊಟ್ಟರು. ಇಷ್ಟೆಲ್ಲಾ ಆದಮೇಲೆ ಅಜೀಜ್ ಸೇಟ್‌ರವರ ಪ್ರಶ್ನೆ ಎಲ್ಲಿ ಬರುತ್ತದೆ? ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಅಜೀಜ್ ಸೇಟ್‌ರವರಿಗೆ ಬಹಳ ಸಿಟ್ಟು ಬಂದು ಬೆಂಕಿ ಹಚ್ಚುತ್ತೇವೆ ಅಂತ ಹೇಳಿರ ಬಹುದೇ ಹೊರತು ಆ ರೀತಿ ಅವರು ಮಾಡುವವರು ಅಲ್ಲ. ಇದು ಯಾರ ದುಡ್ಡು ಖರ್ಚು ಮಾಡಿ ಕಟ್ಟಿಸಿರುವುದು ? ನಮ್ಮದು. ಶ್ರೀಮಾನ್ ಹನುಮಂತಯ್ಯನವರು, ನಾವು ಸುಖಪಡಲಿ ಅಂತ ಹೇಳಿ ಕಟ್ಟಿಸಿಕೊಟ್ಟರು, ಆ ವಿಚಾರಕ್ಕೆ ನಾನು ಹೋಗುವುದಿಲ್ಲ. ಈ ದಿನ ಅಜೀಜ್ ಸೇಟ್‌ರವರ ವಿಚಾರ ತಮ್ಮ ಹೇಳಿಕೆಯಲ್ಲಿರುವುದನ್ನು ಬಿಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಚಾರ. ಅದು ತಮಗೆ ಸಂಬಂಧಪಟ್ಟ ವಿಚಾರ. ಈ 3—4 ದಿನದಿಂದ ತಾವು ನಮ್ಮನ್ನು ಬಹಳ ಚೆನ್ನಾಗಿ ನೋಡಿಕೊಂಡಿದ್ದೀರಿ, ಬಹಳ ಒಳ್ಳೆಯ ಮಾತನಾಡಿದ್ದೀರಿ. ಖುರ್ಚಿಯಲ್ಲಿ ಕುಳಿತುಕೊಳ್ಳಿ ಎಂದರೆ ನೀವು ಮೊದಲು ಕುಳಿತುಕೊಳ್ಳಿ ಅಂತ ನಮಗೆ ಕೂಡಿಸಿ ಆಮೇಲೆ ತಾವು ಕುಳಿತುಕೊಂಡು ಮಾತನಾಡಿದ್ದೀರಿ. ತಮಗೆ ಇರತಕ್ಕ ಅಧಿಕಾರ ಏನು ಇದೆಯೋ ಅದನ್ನೆಲ್ಲಾ ಉಪಯೋಗಿಸಿಕೊಂಡು ಈ ಸಂದರ್ಭದಲ್ಲಿ ತಾವು ನಮಗೆ ಮಾಡಿದ ಉಪಕಾರವನ್ನು ನಾವು ಯಾವತ್ತೂ ಮರೆಯುವುದಿಲ್ಲ. ನಿಮ್ಮ ವಿಷಯದಲ್ಲಿ ನಮಗೆ ತುಂಬಾ ಗೌರವ ಬಂದಿದೆ. ತಮ್ಮಲ್ಲಿ ನಮಗೆ ಬಹಳ ಗೌರವ ಉಂಟಾಗಿದೆ. ನಿಮ್ಮ ನಡತೆ ನೋಡಿ, ಅದು ಬೇರೆ ವಿಚಾರ, ಅದು ಪಾರ್ಲಿ ಮೆಂಟಿಗೆ ಸೇರಿದ್ದು. ಅಸೆಂಬ್ಲಿಗೆ ಸೇರಿದ್ದು. ವೈಯುಕ್ತಿಕವಾಗಿಯೂ ಸಹ ನನಗೆ ತಮ್ಮ ವಿಷಯದಲ್ಲಿ ತುಂಬಾ ಗೌರವ ಬಂದಿದೆ. ತಮಗೆ ದೇವರು ಒಳ್ಳೆಯದು ಮಾಡಲಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ ಡೆಪ್ಯೂಟಿ ಸ್ಪೀಕರ್‌ರವರೂ ಕೂಡ ನಮ್ಮನ್ನು ಬಹಳ ವಿಚಾರಿಸಿಕೊಳ್ಳುತ್ತಾ ಇದ್ದರು. ಅಧ್ಯಕ್ಷರ ಜೊತೆಯಲ್ಲಿ ಮಾತನಾಡುತ್ತಾ ಇದ್ದರು. ಊಟ ತಿಂಡಿ ಕೊಡುವುದಕ್ಕೆ ಏಕೆ ಬಿಡುವುದಿಲ್ಲ ಅಂತ ಹೇಳಿ ಸ್ಪೀಕರ್‌ರವರ ಹತ್ತಿರ ನಾನು ಮಾತನಾಡುತ್ತೇನೆ ಅಂತ ಹೇಳಿ ತಮ್ಮ ಹತ್ತಿರ ಬಂದು ಆರ್ಗ್ಯು ಮೆಂಟ್ ಮಾಡಿದರು, ಅವರು ಸಹ ಮನವಿ ಮಾಡಿದರು, ಅರಿಕೆ ಮಾಡಿಕೊಂಡರು, ನಮಗೆ ಬಹಳ ಪ್ರೋತ್ಸಾಹ ಕೊಟ್ಟರು, ಅದಕ್ಕಾಗಿ ಅವರಿಗೂ ಕೂಡ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಅಷ್ಟೇ ಅಲ್ಲದೆ ಕೆಲವು ಜನ ಕಾಂಗ್ರೆಸ್ ಸ್ನೇಹಿತರು ಅವರು ಹೆಸರು ಹೇಳಬೇಕಾಗಿಲ್ಲ ಒಳ್ಳೆಯ ಮಾತುಗಳನ್ನಾಡಿದ್ದಾರೆ. ಇಲ್ಲಿ ಒಳಗೆ ಇದ್ದವರನ್ನು ಎತ್ತಿ ಹೊರಗೆ ಹಾಕುವುದಕ್ಕೆ ಅಧ್ಯಕ್ಷರಿಗೆ ಅಧಿಕಾರ ಇದೆ, ಆದರೆ ಆ ರೀತಿ ಮಾಡುವುದು ಸೂಕ್ತವಲ್ಲ ಅಂತ ಹೇಳಿ ತಿಂಡಿ ಕಳುಹಿಸುವುದಕ್ಕೆ ಅವಕಾಶ ಕೊಡಿ ಅಂತ ಹೇಳಿ ಬಹಳವಾಗಿ ಆರ್ಗ್ಯುಮೆಂಟ್ ಮಾಡಿದ್ದಾರೆ. ಅವರ ಹೆಸರು ಹೇಳು ವುದಾದರೆ ಶ್ರೀಮಾನ್ ಶ್ರೀನಿವಾಸ್‌ರವರು, ದೇವರಾಜ ಅರಸ್‌ರವರು, ಅನ್ನದಾನಪ್ಪದೊಡ್ಡಮೇಟಿ ಯವರು, ಇನ್ನೂ ಅನೇಕರು ಇದ್ದಾರೆ. ಅವರ ಹೆಸರು ನನ್ನ ಜ್ಞಾಪಕಕ್ಕೆ ಬರುತ್ತಾ ಇಲ್ಲ. ಅವರೆಲ್ಲರಿಗೂ ನಮ್ಮ ಕೃತಜ್ಞತೆ ಇದೆ. ನಾವು ಮಾಡಿದ್ದು ಒಳ್ಳೆಯದೋ ಕೆಟ್ಟದ್ದೋ ಅದನ್ನು ನಮಗೆ ಬಿಡಿ. ನಿಮ್ಮ ವಿಷಯದಲ್ಲಿ ನಮಗೆ ಯಾವ ತರಹದ ಕೆಟ್ಟ ಭಾವನೆಯೂ ಇಲ್ಲ. ಆದರೆ ತಿಂಡಿ ಕಳುಹಿಸು ವುದಕ್ಕೆ ಬಿಡುವುದಿಲ್ಲ ಅಂತ ಅಂದದ್ದಕ್ಕೆ ಸ್ವಲ್ಪ ಅಸಮಾಧಾನ ಇದೆ, ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲ. 11 ಗಂಟೆಗೆ ತಾವು ಕಾಫಿ ತಿಂಡಿಗೆ ಅವಕಾಶ ಕೊಟ್ಟಿರಿ, ಊಟ ತೆಗೆದುಕೊಂಡು ಹೋದಾಗ ಈಗತಾನೆ ತಿಂಡಿ ತಿಂದಿದ್ದೇವೆ ಊಟ ಬೇಡ ಅಂತ ಅಂದವರು ಕೆಲವರು. ಆದ್ದರಿಂದ ಅಜೀಜ್ ಸೇಟ್‌ರವರ ವಿಚಾರದಲ್ಲಿ ತಾವು ಹೇಳಿದ್ದನ್ನು ಕ್ಷಮಿಸಬೇಕು, ಮರೆತು ಬಿಡಬೇಕು ಎಂದು ಹೇಳಿ ಪ್ರಾರ್ಥಿಸುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಈಗ ಒಂದು ಸುಮಧುರ ವಾತಾವರಣ ವುಂಟಾಗಿರುವಾಗ ತಮ್ಮ ವರದಿಯಲ್ಲಿರುವ ಅಜೀಜ್ ಸೇಟ್‌ರವರ ವಿಚಾರ ಪ್ರೆಸ್‌ಗೆ ಹೋಗದ ಹಾಗೆ ರಿಕಾರ್ಡ್ ಹೋಗದ ಹಾಗೆ ತಡೆಹಿಡಿಯಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿ ಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಅಧ್ಯಕ್ಷರೇ ಈ ಸಭೆಯ ಮುಂದೆ ನಾನು ಒಂದು ಹೇಳಿಕೆಯನ್ನು ಮಾಡಿದಂತಹ ಸಮಯದಲ್ಲಿ......

ಶ್ರೀ ಎಸ್. ಚನ್ನಯ್ಯ.—ಶ್ರೀಮಾನ್ ಪುಟ್ಟಸ್ವಾಮಿಯವರೂ ಕೂಡ ಬಹಳ ಸಹಾಯ ಮಾಡಿ ದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಹೇಳಿಕೆಯನ್ನು ಮಾಡುವಂತಹ ಸಮಯದಲ್ಲಿ ಒಂದು ಕರ್ತವ್ಯ ಲೋಪವನ್ನು ಮಾಡಿದೆ ಅನ್ನುವಂತಹ ನೋವು ನನ್ನ ಮನಸ್ಸಿನಲ್ಲಿ ಇತ್ತು. ಕೆಲವು ಮಾತುಗಳಿಗೆ

ಕಟ್ಟುಬಿದ್ದು ಮನಸ್ಸಿನಲ್ಲಿ ನೋವು ಆಗುತ್ತಾ ಇದ್ದರೂ ಕೂಡ ಆ ಕರ್ತವ್ಯವನ್ನು ಮಾಡಲಿಲ್ಲ. ಸ್ವಾಮಿ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಏನು ಅಲ್ಲಿ ನಡೆಯಿತು, ಅಷ್ಟೇ ಹೇಳಿ ಬಿಡೋಣ, ಮುಂದಿನ ಕಾರ್ಯಕಲಾಪಗಳನ್ನು ಮಾಡೋಣ ಎಂದು. ನಾನು ಈ 3-4 ದಿನಗಳಲ್ಲಿ ನಡೆದಂತಹ ಘಟನೆ ವಿಚಾರದಲ್ಲಿ ಆಗಲಿ ಅಥವಾ ತಾವು ಕೊಟ್ಟಂತಹ ವರದಿ ವಿಚಾರದಲ್ಲಾಗಲಿ ಪ್ರಸ್ತಾಪ ಮಾಡುವುದಿಲ್ಲ, ನನಗೆ ಬಹಳ ಆಶ್ಚರ್ಯವಾದಂತಹ ಸಂಗತಿ, ಮಾನ್ಯ ಸಿದ್ದವೀರಪ್ಪನವರು ಈ 3-4 ದಿವಸಗಳ ಘಟನೆಯ ವಿಚಾರದಲ್ಲಿ ಪ್ರಸ್ತಾಪ ಮಾಡುವುದಿಲ್ಲ ಎಂದು ನಮಗೆ ಬಹಳ ಆಗ್ರಹದಿಂದ ಹೇಳಿದ್ದವರು, ಇನ್ನೂ ಏನೇನೋ ಕೆಲವು ವಿಚಾರಗಳನ್ನು ಹೇಳಿದ್ದರು ಅದು ಏನು ಅಂತ ಚರ್ಚೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ನಾನು ಈ ಸಮಯದಲ್ಲಿ ತಮ್ಮ ಅಪ್ಪಣೆ ಪಡೆದು ಒಂದು ವಿಚಾರವನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ಸಭೆಯ ಕಾರ್ಯಕಲಾಪಗಳನ್ನು ನಡೆಸುವಂತಹ ಸಮಯದಲ್ಲಿ ಅಭಿಪ್ರಾಯದ ತಿಕ್ಕಾಟ ಬರುವುದು ಸ್ವಾಭಾವಿಕ. ಈ ಸಭೆ ಯಾವುದೇ ಒಂದು ಚರ್ಚಾ ಕೂಟ ಅಲ್ಲ. ಇಲ್ಲಿರತಕ್ಕ ಸದಸ್ಯರು ಒಬ್ಬೊಬ್ಬರೂ ಕೂಡ ತಮ್ಮ ಆರ್ಥಿಕ ನೀತಿಯನ್ನು, ಮುಂದುವರಿಸಬೇಕೆಂದು ಇರತಕ್ಕವರು, ರಾಜಕೀಯದಲ್ಲಿರತಕ್ಕವರು ಆ ಕಾರಣದಿಂದ ಯಾವುದೇ ಸಮಸ್ಯೆಗಳು ಬಂದಾಗ ಅವರ ಅಭಿಪ್ರಾಯಗಳನ್ನು ಮುಂದೆ ಮಾಡುವುದಕ್ಕೆ ಪ್ರಯತ್ನ ಮಾಡುವುದು ಸ್ವಾಭಾವಿಕ. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಕೋಟ್ಯಾಂತರ ರೈತರುಗಳಿಗೆ ಸಂಬಂಧಪಟ್ಟ, ಅವರ ಹಿತಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಇಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಸತಕ್ಕ ವೇಳೆಯಲ್ಲಿ ಅಭಿಪ್ರಾಯಗಳಲ್ಲಿ ಬೇಧ ಬರತಕ್ಕದ್ದು ಸ್ವಾಭಾವಿಕ. ಆದರೆ ಈಗ ವ್ಯಕ್ತಪಟ್ಟಿರತಕ್ಕ ವಿಷಯಗಳು ನಮಗೆ ಹಿಡಿಸದೆ ಇರಬಹುದು, ಆದರೆ ಅದು ಬೇರೆ ವಿಷಯ. ಆದಕ್ಕೆ ನಾನೀಗ ಕೈ ಹಾಕುವುದಿಲ್ಲ. ಆದರೆ ಈ ವಿಚಾರ ಹಾಗೇ ಅಷ್ಟು ಸುಗಮವಾಗಿ ಪರ್ಯಾವಸಾನವಾಗಲಿಲ್ಲ. ಈ ದಿವಸ 12 ಗಂಟೆಯಿಂದ ಸಾಯಂಕಾಲ ನಾಲ್ಕೂವರೆ ಗಂಟೆಗಳ ವರೆಗೆ ಅಂದರೆ ಸುಮಾರು ನಾಲ್ಕು ಗಂಟೆಗಳ ಕಾಲಕ್ಕೆ ಕಮ್ಮಿ ಇಲ್ಲದೆ ಚರ್ಚೆಗಳು ನಡೆದಿವೆ, ಅಷ್ಟೇ ಅಲ್ಲ ಇದರಲ್ಲಿ ಅನೇಕ ಮಾನ್ಯ ಸದಸ್ಯರು ಭಾಗವಹಿಸಿದ್ದಾರೆ. ನಮ್ಮ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಮ್ಮ ವಿರೋಧ ಪಕ್ಷದ ಸದಸ್ಯರೂ, ಇಲ್ಲಿ ಕಳೆದ ಮೂರು ದಿನಗಳಿಂದ ಧರಣಿ ಕುಳಿತಿದ್ದ ಸದಸ್ಯರೂ ಆ ಚರ್ಚೆಯಲ್ಲಿ ಬಂದು ಸೇರಿ ಭಾಗವಹಿಸಿ ಎಲ್ಲರೂ ಒಟ್ಟಿಗೆ ಸಹಕರಿಸಿ ಈ ಒಂದು ತೀರ್ಮಾನಕ್ಕೆ ಬರಲು ಸಹಕರಿಸಿರುತ್ತಾರೆ. ಅವರೆಲ್ಲರ ಉಪಕಾರ ಸ್ಮರಣೆ ಮಾಡಬೇಕಾದ್ದು ನಮ್ಮ ಕರ್ತವ್ಯ. ಅಷ್ಟೇ ಅಲ್ಲದೆ ನಮ್ಮ ಈ ಚರ್ಚೆಯಲ್ಲಿ ಶ್ರೀಮಾನ್ ಕೆ. ಹನುಮಂತಯ್ಯನವರು, ಅವರು ನಮ್ಮ ಪಕ್ಷದ ಪ್ರಮುಖರೂ, ಮಾಜೀ ಮೈಸೂರಿನ ಮುಖ್ಯ ಮಂತ್ರಿಗಳೂ ಮತ್ತು ಹಾಲಿ ಪಾರ್ಲಿಮೆಂಟಿನ ಸದಸ್ಯರೂ ಮತ್ತು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರೂ ಸಹಾ ಈ ಚರ್ಚೆಯಲ್ಲಿ ಭಾಗವಹಿಸಿದ್ದರು. ಅವರಿಗೆ ಎದುರುಪಕ್ಷದವರೇನೂ ಆಹ್ವಾನವನ್ನು ಕೊಟ್ಟಿರಲಿಲ್ಲ. ಆದಾಗ್ಯೂ ಅವರಿಗೆ ನಮ್ಮ ರಾಜ್ಯದ ಮೇಲಿರತಕ್ಕ ಅಭಿಮಾನದಿಂದಲೂ ಮತ್ತು ಈ ಮೈಸೂರಿನ ವಿಧಾನ ಮಂಡಲದ ಒಂದು ಕೀರ್ತಿಯನ್ನು ಕಾಪಾಡಲು ಅವರು ಮನೆಗೆ ಬಂದರು. ಆಗ ನಾನು ಮನೆಯಲ್ಲಿರಲಿಲ್ಲ, ಇಲ್ಲಿಗೆ ಬಂದಿದ್ದೆ. ಆದಾಗ್ಯೂ ಅವರು ನೇರವಾಗಿ ವಿಧಾನಸೌಧಕ್ಕೇ ಬಂದು ನಮ್ಮೆಲ್ಲರನ್ನೂ ಕರೆಸಿಕೊಂಡು, ಎಲ್ಲರಿಗೂ ಹಿತವಚನಗಳನ್ನು ಹೇಳಿ ಎಲ್ಲರಿಗೂ ಅನುಕೂಲವಾಗುವಂಥ ಒಂದು ಸೂತ್ರವನ್ನು, ಅಂದರೆ ಇಲ್ಲಿ ನಾನು ಕೊಡತಕ್ಕ ಹೇಳಿಕೆ ಏನಿದೆ ಅದನ್ನು ವಿರೋಧ ಪಕ್ಷಗಳವರು ಒಪ್ಪುವಂತೆಯೂ ಮತ್ತು ಅದಕ್ಕೆ ಎಲ್ಲರೂ ಸಹಕಾರ ನೀಡುವಂತೆಯೂ ಅವರು ಬಹಳವಾಗಿ ಶ್ರಮಿಸಿದ್ದಾರೆ. ಅಂಥವರಿಗೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾದ್ದು ಮತ್ತು ಅವರಿಗೆ ನಮ್ಮ ಕೃತಜ್ಞತೆಗಳನ್ನರ್ಪಿಸಬೇಕಾದ್ದೂ ನಮ್ಮ ಕರ್ತವ್ಯ. ಶ್ರೀಮಾನ್ ಗೋಪಾಲಗೌಡರು ಎದ್ದು ಸುಧೀರ್ಘವಾಗಿ ಮಾತನಾಡತಕ್ಕ ಕಾಲದಲ್ಲಿ ಅವರು ಮಾತನಾಡತಕ್ಕ ಧಾಟಿಯೇನಿದೆ ಅದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಆದರೆ ಅವರು ಮಾತನಾಡತಕ್ಕ ಕಾಲದಲ್ಲಿ ಹೇಗೆ ಒಂದೊಂದು ವಿಚಾರವನ್ನು ಒತ್ತಿ ಮಾತನಾಡುತ್ತಿದ್ದರು ಅನ್ನುವುದು ನನ್ನ ಮನಸ್ಸಿಗೆ ಎದ್ದು ಕಾಣುತ್ತಿದೆ, ಆದರೆ ಅವರು ಕಂದಾಯದ ವಿಚಾರದಲ್ಲಿ ಹಾಗೆ ಮಾತನಾಡಿದ್ದರೂ ನಾನು ಆ ವಿಚಾರಕ್ಕೆ ಈಗ ಮತ್ತೆ ಪ್ರವೇಶ ಮಾಡುವುದಿಲ್ಲ. ಆದರೆ ಅವರು ಅದನ್ನು "ನೀವು ತಿರುವು ಮುರುವು ಮಾಡುವುದು ಬೇಡ" ಎಂದು ಹೇಳಿದರು. ಆದರೆ ನಾನು ಈ ಮಾನ್ಯ ಸಭೆಗೆ ಬಹಳ ನಮ್ರಪೂರ್ವಕವಾಗಿ ಹೇಳುವುದೇನೆಂದರೆ—ನಾನಲ್ಲಿ ಅಂಥ ಇಂಟಲೆಕ್ಚ್ಯುಯಲ್ ಡಿಸಾನೆಸ್ಟಿ ಇಲ್ಲ ಎಂದು. ಹೊರಗಡೆ ಒಂದು ಹೇಳಿಕೆಯನ್ನು ಮಾಡಿ ಒಳಗೆ ಮತ್ತೊಂದು ಹೇಳಿಕೆ ನೀಡತಕ್ಕದ್ದಾಗಲಿ ಅಥವಾ ಇಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ಹೊರಗಡೆ ಇನ್ನೊಂದು ರೀತಿ ಮಾತನಾಡುವುದಾಗಲಿ ಅದು ಆಡಳಿತದ ಜವಾಬ್ದಾರಿಯನ್ನು ಹೊತ್ತಿರತಕ್ಕ ನಾವು ಹಾಗೆ ಹೇಳುವುದಾದರೆ ಅದಕ್ಕಿಂತ ಹೀನವಾದ ಕೆಲಸ ಮತ್ತೊಂದಿಲ್ಲ. ಆದರೆ ನಾನು ಇಲ್ಲಿ ಎದುರುಪಕ್ಷದವರು ಹೇಳತಕ್ಕ ವಿಚಾರಗಳನ್ನು ಯಾವತ್ತೂ ಸದುದ್ದೇಶದಿಂದಲೇ ಹೇಳುತ್ತಾರೆಂಬ

(ಶ್ರೀ ಕೆ. ಪುಟ್ಟಸ್ವಾಮಿ)

ಭರವಸೆ ನನಗಿದೆ. ಇದೇ ರೀತಿ ಮಾನ್ಯ ವಿರೋಧ ಪಕ್ಷಗಳ ಸದಸ್ಯರೂ ಕೂಡ ನಾನು ಹೇಳಿದ್ದಕ್ಕೂ ಕೂಡ ಸದುದ್ದೇಶದಿಂದಲೇ ಎಂದು ಅವರು ಭಾವಿಸಬೇಕು. ನಮ್ಮ ರೆವಿನ್ಯೂ ಮಂತ್ರಿಗಳ ವಿಷಯದಲ್ಲಿ ಶ್ರೀಮಾನ್ ಸಿದ್ದವೀರಪ್ಪನವರಿಗೆ ಬಹಳ ಆತ್ಮೀಯತೆ ಇದೆ. ಹಾಗಿದ್ದಾಗ್ಯೂ ಈಗತಾನೆ ಅವರು ಮಾತನಾಡುತ್ತಿದ್ದಾಗ ಅವರ ವಿಚಾರದಲ್ಲಿ ಅವರು ಹಾಗೆ ಹೇಳಬಾರದಾಗಿತ್ತೆಂದು ನನಗೆ ಅನಿಸುತ್ತಿದೆ. ಅವರು ಯಾರಿಗೂ ಯಾವ ರೀತಿಯ ಪ್ರಚೋದನೆಯನ್ನೂ ಮಾಡಲಿಲ್ಲ. ಆದರೆ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೇ: ತಾವು ನಮ್ಮ ಬಗ್ಗೆ ಈ ವಿಚಾರದಲ್ಲಿ ಯಾವ ಅನುಮಾನ ಪಡಬೇಕಾದ್ದಿಲ್ಲ, ಇನ್ನು ತಾವು ಇದರ ವಿಚಾರ ಪ್ರಸ್ತಾಪ ಮಾಡುವುದನ್ನು ಬಿಡಿ. ಸರ್ಕಾರದವರು ಅಧಿಕಾರಿಗಳಿಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಏನು ಆಜ್ಞೆಯನ್ನು ಕೊಡಲಾಗಿದೆ ಅದರಲ್ಲಿ ಮತ್ತೆ ನಾವು ಕೈ ಹಾಕುವುದಕ್ಕೆ ಹೋಗುವುದಿಲ್ಲ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಾನಿನ್ನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿಯ ತನಕ ಇಲ್ಲಿ ನಾವು ಮಾಡಬೇಕಾಗಿದ್ದ ಅನೇಕ ಕಾರ್ಯಕ್ರಮಗಳು ಆಗಲಿಲ್ಲ. ಇನ್ನಾದರೂ ನಾವೆಲ್ಲರೂ ನಮ್ಮ ಮುಂದಿರತಕ್ಕ ವಿಷಯಗಳ ಬಗ್ಗೆ ಅಮೂಲಾಗ್ರವಾಗಿ ಚರ್ಚೆ ಮಾಡಿ ದೇಶದ ಆಡಳಿತಕ್ಕೆ ಅನುಕೂಲವಾಗತಕ್ಕ ರೀತಿಯಲ್ಲಿ ತಾವೆಲ್ಲರೂ ನಡೆದುಕೊಳ್ಳಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri H. SIDDAVEERAPPA.—Sir, one word I forgot to say. We are extremely thankful to the valuable assistance rendered by your staff, particularly the Secretary, the Deputy Secretary and more than anything else, your security staff, the Watch and Ward. They were the the very pink of courtesy and I am glad to tell that.

ಶ್ರೀ ಎಂ. ಜಿ. ಬಣಕಾರ್ (ಬ್ಯಾಡಗಿ).—ಈಗ ಮಾಡಿದ ಭಾಷಣಗಳಲ್ಲಿ ನಮಗೆಲ್ಲರಿಗೂ ತಿಳಿದಂತೆ ನಾವೆಲ್ಲರೂ ಒಂದು ಒಪ್ಪಂದಕ್ಕೆ ಬಂದಂತಾಗಿದೆ. ನಾನು ಇದಕ್ಕೆ ಪ್ರತಿಯುತ್ತರವಾಗಿ ಮಾತಾಡುವುದಕ್ಕೆ ಇಷ್ಟ ಪಡುವುದಿಲ್ಲ. ಆದರೆ ಅಧ್ಯಕ್ಷರು ಆ ಶ್ರೀ ಅಜೀಜ್ ಸೇಟ್ ರವರ ವಿಷಯ ಏನು ಹೇಳಿದ್ದಾರೆ ಅದು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳೊಂದೂ ಅಧಿಕೃತ ವರದಿಯಲ್ಲಿ ಸೇರದಂತೆ ಮಾಡಬೇಕೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಎಲ್ಲವೂ ಸಾಮರಸ್ಯದಲ್ಲಿ ತೀರ್ಮಾನವಾಯಿತು ಅಂದಾಗ ಇಂಥ ಒಂದು ವಿಷಯ ಅಲ್ಲಿ ಇರಬಾರದು. ಇಷ್ಟೇ ನನ್ನ ಪ್ರಾರ್ಥನೆ.

† ಶ್ರೀ ಬಿ. ಎಲ್. ನಾರಾಯಣ ಸ್ವಾಮಿ (ಶ್ರೀನಿವಾಸಪುರ).—ಸ್ವಾಮಿ, ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದಿಷ್ಟೇ: ಸಂಸ್ಥಾನಾಮುಳೆ ಕಂದಾಯವನ್ನು ಪುನರ್ವಿಮರ್ಶೆ ಮಾಡುವವರೆಗೂ ರೈತರಿಂದ ಜುಲುಂ ಮಾಡಿ ಹೊಸದರದಲ್ಲಿ ಕಂದಾಯ ವಸೂಲ್ಮಾಡಬಾರದು ಒಂದು ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸುವುದಾಗಿ ಕಳೆದ ಸೆಪ್ಟೆಂಬರಿನಲ್ಲಿ ಒಂದು ಸ್ಪಷ್ಟವಾದ ಆಜ್ಞೆಯನ್ನು ಹೊರಡಿಸಿದ್ದರು. ಆದರೆ ಆ ಆಜ್ಞೆಗೇನು ಬೆಲೆ ಇದ್ದಂತೆ ಕಾಣುವುದಿಲ್ಲ. ನಮ್ಮ ಕೋಲಾರ ಜಿಲ್ಲೆಯಲ್ಲಿ 196 -66 ರಲ್ಲಿ ಬಹಳ ಕ್ಷಾಮವುಂಟಾಗಿ ತತ್ರಾಪಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಜನರು ಅಭಾವದಿಂದ ಕಂಗೆಟ್ಟು ಹೋಗಿದ್ದಾರೆ. ಅದಾಗ್ಯೂ ಅಧಿಕಾರಿಗಳು ಅದನ್ನು ಗಮನಿಸದೆ ಕಂದಾಯವನ್ನು ವಸೂಲ್ಮಾಡುತ್ತಿದ್ದಾರೆ. ನಾನು ಇದೇ ವಿಚಾರದಲ್ಲಿ ಸರ್ಕಾರದವರ ಗಮನ ಸೆಳೆಯತಕ್ಕ ಒಂದು ಸೂಚನೆಯನ್ನೂ ಕೂಡ ಕಳುಹಿಸಿದ್ದೇನೆ. ಸರ್ಕಾರದವರು ಹೊರಡಿಸಿರತಕ್ಕ ಆಜ್ಞೆಗೆ ಅಲ್ಲಿ ಎಳ್ಳಷ್ಟೂ ಬೆಲೆ ಇಲ್ಲ. ಇದರಿಂದ ಸರ್ಕಾರಕ್ಕೆ ಆ ಅಧಿಕಾರಿಗಳಿಂದ ಗೌರವ ಬರುವುದಿಲ್ಲ. ಇದನ್ನು ತಿಳಿಸುವುದಕ್ಕೆ ನನಗೆ ಬಹಳ ವಿಷಾದವಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಅಂದರೆ ಶ್ರೀನಿವಾಸಪುರ ಮತ್ತು ಇನ್ನೂ ಇತರ ಕಡೆಗಳಲ್ಲಿ ಎಲ್ಲೆಲ್ಲಿ ಅಭಾವಪರಿಸ್ಥಿತಿ ಉಂಟಾಗಿತ್ತೋ ಅಲ್ಲೆಲ್ಲಾ ಸರ್ಕಾರದವರು ಹಿಂದೆ ಹೊರಡಿಸಿರತಕ್ಕ ಆಜ್ಞೆ ಪ್ರಕಾರ ಕಂದಾಯ ವಸೂಲ್ಮಾಡುವಂತೆ ತಿಳುವಳಿಕೆ ಕೊಡಬೇಕಾಗಿ ಮಾನ್ಯ ಸಚಿವರಿಗೆ ಅಧ್ಯಕ್ಷರ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

5.30 P.M.

Mr. SPEAKER.—Now, as regards clarification asked for by Sri Narayanaswamy, I would suggest to him that he should not press

it now. According to the understanding, the matter should end here. Let him seek another occasion for it.

I know the hon. Members are exhausted in many ways. I do not want to try their patience any longer. But for one or two points raised by my hon. friends Sri Gopala Gowda and Sri Siddaveerappa I would never have risen. I would like to offer my explanation on only one or two points.

Sri Siddaveerappa stated "All is well that ends well." I completely agree with him. I am essentially for harmony and concord. When the Opposition Members were squatting in the Assembly Chamber, I never wanted to use force against them to send them out. That is why, although remaining in the Assembly chamber after adjournment of the House, without permission, was against rules and parliamentary conventions, I only made an appeal to them not to violate the rules and healthy conventions and left the matter at that. Thereby I have shown that, as far as possible, force should never be used. I am happy I could avoid it. My ideal is that force should not be used under such circumstances and I have followed that cardinal principle.

An hon. Member enquired why a decision was taken not to permit sending of foodstuffs from outside. I do not want to go into its merits. That was an excruciating decision, I had to take that decision first on Friday only in furtherance of parliamentary conventions and traditions and not beyond that; it was not out of malice. I made an appeal to the Members to end the 'Dharan' but the unfortunate incident continued. After hearing representations from the M.L.As., I compromised even on the parliamentary conventions I wish to make abundantly clear to the House that I did not want to insult any Member; it is never in my nature. I bear goodwill to one and all. From the morning of Saturday, Members were permitted to get their food from outside. Till then entry to the Assembly Chamber was restricted to create a good atmosphere for reaching an agreement. I beg pardon of the House for this breach of parliamentary convention. I request once again that I may be excused.

Then it was asked as to why I made a reference to Sri Aziz Sait in my statement. Let me explain. On Saturday evening, I made a Press announcement that I had decided not to use force against the Members squatting inside the House, that I have even permitted supplies of foodstuffs to be brought into the Assembly Chamber and that I had stationed a Doctor at the Chamber at the disposal of the squatting Members round-the-clock and that I did not want to take any decision myself and use the force, and that I would leave the matter to be settled by the House when it re-assembled on Monday. So, it was in pursuance of that I had made the statement to-day; and my intention was not to offend any particular Member. As the custodian of this Chamber and its precincts, it is my duty to furnish a report to the House as to what happened from Friday. If I did not make a report, I would be failing in my duty. As far as I could see, it is only a factual statement expressed in the mildest of terms. As a custodian of this House and

(Mr. Speaker)

this building, it was my duty to give a report of what had happened and so I have only discharged my duty. I have made that statement as a servant of the House. I did not want to cast reflection on anybody. I was only performing a bitter duty. I hope the hon. Members will not construe it in a bad light.

I repeat the quotation "All is well that ends well." I am as happy as yourselves. Probably I am happier than most of you. That is for two reasons. Firstly, I believe in harmony. Secondly, I may say from a selfish point of view, that the prolongation of this episode would have been a headache to me. I was not happy about it. By the solution of this issue, more than anybody else, I am supremely happy. "All is well that ends well."

A suggestion was made by Sri Siddaveerappa that the House should be adjourned now. In that case, the Business Advisory Committee has to modify the list of business. Is it the pleasure of the House to adjourn it now ?

HON. MEMBERS.—Yes.

Mr. SPEAKER.—I take that the sense of the House is to adjourn the business for tomorrow. So, the House will now adjourn and meet tomorrow morning at 8-30.

The House adjourned at Thirty-five Minutes past Five of the Clock, to meet again at Thirty Minutes past Eight of the Clock on Tuesday, the 18th March 1969.

WD 12668—GPB—600—15-7-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 18th March 1969.

The House met in the Assembly Chamber, Vidhana Soudha, Bangalore, at thirty minutes past eight of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Formation of Agricultural Colonies in Shimoga and Mysore Districts

116. SRI M. H. JAYAPRAKASH NARAYAN (Sirsi).—

Will the Minister for Agriculture be pleased to state :—

(*a*) the total amount provided for the formation of two Agricultural colonies in Shimoga and in Mysore districts by the Agricultural Department during the Third Five Year Plan as per G. O. No. FA 193 AMS 61 dated 20th December 1961 ;

(*b*) out of this amount the amount spent for the implementation of this scheme in the Plan period ;

(*c*) the amount that has lapsed without spending ;

(*d*) the details of the scheme ;

(*e*) the efforts made by them to implement the same during the plan period ?

SRI D. B. PAWAR (Deputy Minister for Agriculture).—

(*a*) Rs. 12,00,000.

(*b*) Rs. 0.295 lakhs.

(*c*) Rs. 11.705 lakhs.

(*d*) *Vide* statement appended.

(*e*) Action has been taken to implement the scheme by appointing the staff and selecting the sites.

(SRI D. B. PAWAR)

STATEMENT

Agriculture colonies established during III Five Year Plan.

The salient feature of the scheme are :

(1) To start two colonies to settle one hundred labourers' family, each with 50 families.

(2) To start the colony on Government Waste lands.

(3) To grant each family 10 acres of land out of which provision is to be made to convert two acres into wet lands.

(4) To reclaim the land at Government cost in the first instance and to recover the same in easy instalments after a lapse of five years.

(5) In addition to the above, the following facilities are to be provided to each of the colony :

- (*a*) 525 acres of land.
- (*b*) Two drinking water wells.
- (*c*) One pair of bullocks.
- (*d*) Important items of equipment like mould board, Ploughs, cultivators' harrows, seed drills, etc .
- (*e*) Housing accommodation for each family
- (*f*) A community hall -*cum*- office building.
- (*g*) Seeds, Fertilisers and Manure to be supplied free of cost during the first year of cultivation.
- (*h*) Two common threshing floors to be provided.
- (*i*) Equipment like sprayers 2, 2 dusters and 2 stone rollers for common use.
- (*j*) One seed store of 10,000 bags capacity.
- (*k*) One bullock cart for each family.
- (*l*) Irrigation facilities at Rs. 10,000 for each 10 acre blocks (5 families)

The cost of all items of work is to be met by the Government except the cost of reclamation of land which will have to be recovered in easy instalments after 5th year.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ ಈ ಅಗ್ರಿಕಲ್ಚರಲ್ ಲೇಬರರ್ಸ್ ಸ್ಕೀಂಗೆ 12 ಲಕ್ಷ ರೂಪಾಯಿಯನ್ನು ಒದಗಿಸಿದ್ದೀರಿ. ಅದರಲ್ಲಿ 11-705 ಲಕ್ಷ ರೂಪಾಯಿಗಳು ಲ್ಯಾಪ್ಸ್ ಮಾಡಲು ಮೂಲ ಕಾರಣ ಏನು ! ಮತ್ತು ಅರಣ್ಯ ಇಲಾಖೆಯವರು ಜಮೀನು ಕೊಡದೇ ಇರುವುದಕ್ಕೆ ಕಾರಣ ಏನು !

† SRI D. B. PAWAR.—Sir, under the scheme we tried to get lands from the Forest Department in Shimoga District, and we also tried to get some land from the Revenue Department. Ultimately, we could not succeed in getting the necessary land.

[illegible] indicate that remarks of speeches have not been revised by the member

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ ಸಿಬ್ಬಂದಿಯನ್ನು ನೇಮಕ ಮಾಡಿದ್ದು ನಿವೇಶನಗಳನ್ನು ಆಯ್ಕೆ ಮಾಡಿ ಯೋಜನೆಯನ್ನು ಕಾರ್ಯಗತ ಮಾಡಲು ಕ್ರಮಗಳನ್ನು ಕೈಗೊಳ್ಳಲಾಯಿತು ಎಂದು ಹೇಳಿದ್ದೀರಿ. ಹಾಗಾದರೆ ಈ 11.705 ಲಕ್ಷ ರೂಪಾಯಿಗಳು ರ್‍ಯಾಪ್ಸ್ ಆಗದೇ ನಿಮ್ಮಲ್ಲೇ ಇದೆಯೇ ? ಆ ಯೋಜನೆಯನ್ನು ಕಾರ್ಯಗತ ಮಾಡುತ್ತಾ ಇದ್ದೀರಾ ?

Sri D. B. PAWAR.—Similar schemes have now been taken over by the Co-operative and Secial Welfare Departments, and now the scheme has been transferred to this Department.

Sri M. H. JAYAPRAKASH NARAYAN.—May I know the stage at which this rehabilitation of agricultural labourers which is formulated by the Agriculture Department is?

Sri D. B. PAWAR.—Since it is now handed ever to the Co-operative and Social Welfare Department, it is in a draft stage.

ಶ್ರೀ ಎ. ಆರ್. ಬದ್ರಿನಾರಾಯಣ್.—ಅರಣ್ಯ ಭೂಮಿಯನ್ನು ವ್ಯವಸಾಯಕ್ಕೆ ರಿಲೀಸ್ ಮಾಡುವ ಬಗ್ಗೆ ಎಷ್ಟು ರಿಲೀಸ್ ಮಾಡಬೇಕು, ಎಷ್ಟು ಬಿಡಬೇಕು, ಎನ್ನುವ ಬಗ್ಗೆ ಫೈನಾಲಿಟಿಗೆ ಬಂದಿದೆಯೇ ?

Sri D. B. PAWAR.—Under the scheme, about 550 acres were required, but we failed to get that land.

Sri D. B. KALMANKAR.—May I know whether the Government has given up the centrally sponsored scheme for organising the agricultural colonies for scheduled castes and scheduled tribes ?

Sri D. B. PAWAR.—The scheme is under draft stage. It is taken up under the Central Government scheme, under the Tungabhadra scheme.

Sri C. K. RAJAIAH SHETTY.—May I know whether this Scheme is taken up under the Government of India grant or State Government grant ?

Sri D. B. PAWAR.—It is State Government grant.

Sri M. MALLAPPA.—Has it come to the notice of the Government that these agricultural colonies in the whole State have become lifeless mockeries as they have totally failed in achieving the purpose for which they are established ?

Sri D. B. PAWAR.—Sir, I have to express with great regret that the scheme has failed at these places.

Construction of Bridge Across Gundlu in Nanjangud Taluk

279. Sri D. M. SIDDIAH (Biligere).—

Will the Minister for Public Works be pleased to state :—

(a) whether an estimate has been prepared for the construction of a bridge across the Gundlu near Devarasanhalli in Nanjangud Taluk;

(b) whether Guddalipuja of the Bridge was performed during the month of November 1968 ;

(SRI D. M. SIDDAIAH)

(c) whether the people round about the area were made to believe that the Bridge had already been sanctioned and the construction started ;

(d) whether the Government is considering the question of the necessity of putting up a Bridge across the Halla, in order to faciliate people round about for their easy movement and transport ?

SRI K. LAKKAPPA (Minister for Public Works).—

(a) No.

(b) Government is not aware of this.

(c) This does not arise in view of replies to clauses (a) and (b).

(d) No.

ಶ್ರೀ ಡಿ. ಎಂ. ಸಿದ್ದಯ್ಯ.—(ಬಿ) ಗೆ ಉತ್ತರವಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. 1968ನೇ ಇಸವಿ ನವೆಂಬರ್ ತಿಂಗಳಿನಲ್ಲಿ ಈ ಸೇತುವೆ ಮಂಜೂರಾಗಿದೆ ಎಂದು ಅಸಿಸ್ಟೆಂಟ್ ಇಂಜಿನಿಯರು ಮತ್ತು ಕೆಲವು ಮುಖಂಡರು ಅಸ್ತಿಭಾರ ಹಾಕಿದ್ದು ತಮ್ಮ ಅವಗಾಹನೆಗೆ ಬಂದಿದೆಯೇ ?

ಶ್ರೀ ಕೆ. ಲಕ್ಕಪ್ಪ.—ನನ್ನ ಅವಗಾಹನೆಗೆ ಬಂದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಸುತ್ತ ಮುತ್ತ ಹತ್ತಿಪ್ಪತ್ತು ಗ್ರಾಮದ ಜನರಿಗೆ ಇದು ಬಹಳ ಮುಖ್ಯವಾಗಿರುವುದರಿಂದ ಮತ್ತು ನಂಜನಗೂಡಿನಲ್ಲಿ ಶುಕ್ರವಾರ ನಡೆಯುವ ಸಂತೆಗೆ ಹೋಗಿ ಬರಲು ಮಳೆಗಾಲದಲ್ಲಿ ಬಹಳ ತೊಂದರೆಯಾಗುವುದರಿಂದ ಈ ಸೇತುವೆಯನ್ನು ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದಾರೆಯೇ ?

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸದಸ್ಯರು ಕೇಳುತ್ತಿರುವ ಸೇತುವೆ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿದ ರಸ್ತೆ ಮೇಲೆ ಕೇಳುತ್ತಿಲ್ಲ. ಯಾವುದೋ ಹಳ್ಳಿಗರು ಮಾಡಿಕೊಂಡಿರತಕ್ಕ ರಸ್ತೆ ಮೇಲೆ ಕೇಳುತ್ತಿದ್ದಾರೆ. ಜೊತೆಗೆ ಅಲ್ಲಿ ಸೇತುವೆ ಹಾಕಬೇಕಾದರೆ ಗುಂಡ್ಲು ಹೊಳೆಯು ಅಗಲ 195 ಅಡಿ ಮತ್ತು 20 ಅಡಿ ಆಳ ಇದೆ. ಈ ಕಾರಣದಿಂದ ಇಲ್ಲಿ ಸೇತುವೆಯನ್ನು ಕಟ್ಟಬೇಕಾದರೆ ಎರಡು ಲಕ್ಷ ರೂಪಾಯಿಗಳಷ್ಟು ಆಗಬಹುದು ಎಂದು ಅಪ್ರಾಕ್ಸಿಮೇಟ್ ಫಿಗರ್ ಕೊಟ್ಟಿದ್ದಾರೆ. ಈ ಕಾರಣದಿಂದ, ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿಲ್ಲದ ರಸ್ತೆಯಾಗಿರುವುದರಿಂದ ಅದನ್ನು ಸದ್ಯದಲ್ಲಿ ಕಟ್ಟಲಿಕ್ಕೆ ತೊಂದರೆ ಯಾಗಬಹುದು. ಅದನ್ನು ಕಡಮೆ ವೆಚ್ಚದಲ್ಲಿ ಕಟ್ಟಲಿಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ವಿಚಾರ ಮಾಡಿ ಬೇರೆ ಎಸ್ಟಿಮೇಟ ಕಳಿಸುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ತಿಳಿಸಲು ಬರೆಯುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯ.—ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿಲ್ಲ ಎಂದು ಹೇಳಿದಿರಿ. ನಾಲ್ಕು ಮೈಲಿ ರಸ್ತೆ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಸೇರಿದೆ. ಇದನ್ನು ಇಲಾಖೆಗೆ ಸೇರಿಸಿಕೊಂಡು ಸೇತುವೆ ಕಟ್ಟತಕ್ಕ ಕೆಲಸ ಮಾಡುತ್ತೀರಾ ?

ಶ್ರೀ ಕೆ, ಲಕ್ಕಪ್ಪ.—ಈಗ ಸದ್ಯಕ್ಕೆ ರಸ್ತೆಗಳನ್ನು ಸೇರಿಸಿಕೊಳ್ಳತಕ್ಕ ಯೋಚನೆ ಇಲ್ಲ. ಸೇರಿಸಿಕೊಳ್ಳುವ ಸಂದರ್ಭದಲ್ಲಿ ಸಾಧ್ಯವಿದ್ದರೆ ಅದನ್ನು ಸೇರಿಸಿಕೊಂಡಮೇಲೆ ಸೇತುವೆ ಕಟ್ಟುವ ವಿಷಯ ಪರಿಶೀಲಿಸಬೇಕಾಗುತ್ತದೆ.

ಶ್ರೀ ಎ. ಆರ್. ಬದ್ರಿನಾರಾಯಣ್.—ಹಣದ ಅಭಾವದಿಂದ ಹೆಚ್ಚು ಸೇತುವೆಗಳನ್ನು ಕಟ್ಟುವುದಿಲ್ಲ ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರದ ನೀತಿ ಏನು ?

ಶ್ರೀ ಕೆ. ಲಕ್ಕಪ್ಪ.—ಸರ್ಕಾರದ ನೀತಿ ಏನೂ ಇಲ್ಲ. ಹಣ ಒದಗಿದ ಹಾಗೆ ಹೆಚ್ಚು ಹೆಚ್ಚು ಕಟ್ಟಿಕೊಂಡು ಹೋಗುತ್ತೇವೆ. ಹಣ ಕಡಮೆ ಇದ್ದರೆ ಆ ಮಟ್ಟಕ್ಕೆ ಕಡಿಮೆ ಮಾಡಿಕೊಂಡು ಅಷ್ಟನ್ನು ಖರ್ಚು ಮಾಡುತ್ತೇವೆ.

Construction of Quarters for Officials at Biligere

511 Sri V. L. SHIVAPPA (Tiptur).—

Will the Minister for Public Works be pleased to state.—

(a) Whether on the request of the Village Panchayat Chairman, Biligere (Tiptur Taluk) and others, there was a proposal, as early as February 1966 to build official quarters at Biligere Hobli Headquarters;

(b) the action taken in this regard;

(c) the reasons that prompted the concerned authorities for deferring the construction?

Sri K. LAKKAPPA (Minister for Public Works).—

(a) Yes.

(b) and (c) The work could not be taken up for execution either under "Rental Housing Scheme" or "Construction of Quarters for Non-Gazetted Officers at District and Taluk Headquarters" as Biligere is only a village, and since there was no requisition for the construction of quarters from any Department of Government under "50 Public Works- Buildings- Minor" of that Department.

ಶ್ರೀ ವಿ. ಎಲ್. ಶಿವಪ್ಪ.—ಬಿಳಿಗೆರೆ ವಿಚಾರದಲ್ಲಿ 1966-67ನೇ ಇಸವಿಯಲ್ಲಿ ಚೀಫ್ ಇಂಜಿನಿಯರಿಂದ ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಒಂದು ಕಾಗದ ಹೋಗಿದೆ. 1966-67ನೇ ಇಸವಿಯಲ್ಲಿ ಪ್ರೋಗ್ರಾಂ ವರ್ಕ್ಸ್‌ನಲ್ಲಿ ಈ ಕೆಲಸವನ್ನು ತೆಗೆದುಕೊಳ್ಳಬೇಕೆಂಬ ವಿಚಾರದಲ್ಲಿ ಅದರ ಬಗ್ಗೆ ಪ್ರಪೋಸ್ ಆಗಿ ಬಂದಿದೆಯೇ ಸ್ವಾಮಿ ?

ಶ್ರೀ ಕೆ. ಲಕ್ಕಪ್ಪ.—ಪ್ರಪೋಸಲ್ಸ್ ಆಗಿ ಸರ್ಕಾರಕ್ಕೆ ಬಂದಿವೆ. ಆದರೆ ರೆಂಟಲ್ ಸ್ಕೀಂ ಪ್ರಕಾರ ಇಲ್ಲವೇ ಎನ್. ಜಿ. ಓ. ಗಳಿಗೆ ಕಟ್ಟಡಗಳನ್ನು ಕಟ್ಟಿಕೊಡತಕ್ಕ ಸ್ಕೀಂ ಪ್ರಕಾರ ಏನಿದ್ದರೂ ಜಿಲ್ಲಾ ಕೇಂದ್ರದಲ್ಲಿ ಇಲ್ಲವೇ ತಾಲ್ಲೂಕು ಕೇಂದ್ರದಲ್ಲಿ ಕಟ್ಟಡಗಳನ್ನು ಕಟ್ಟಲು ಸಾಧ್ಯವಿದೆ. ಬಿಳಿಗೆರೆ ತಾಲ್ಲೂಕು ಕೇಂದ್ರವೂ ಅಲ್ಲ, ಜಿಲ್ಲಾ ಕೇಂದ್ರವೂ ಅಲ್ಲ. ಅದು ಒಂದು ಹಳ್ಳಿ. ಈ ಕಾರಣದಿಂದ ಅಲ್ಲಿ ಕ್ವಾರ್ಟರ್ಸ್ ಕಟ್ಟಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ವ್ಯಕ್ತಪಡಿಸಿದೆ. ಆದರೂ ಸ್ಪೆಷಲ್ ಕೇಸಾಗಿ ಇದನ್ನು ಪರಿಗಣಿಸಬೇಕು ಮತ್ತು ಹಾಗೆ ಸಾಧ್ಯವಿದ್ದರೆ ಕಟ್ಟಿಸಿ ಎಂದು ಸರ್ಕಾರಕ್ಕೆ ಬರೆದಿದ್ದಾರೆ. ಅಲ್ಲಿ ಕ್ವಾರ್ಟರ್ಸ್ ಕಟ್ಟತಕ್ಕ ಅವಕಾಶವಿದೆ, ಅದನ್ನು ಕಟ್ಟಿ ಎನ್ನುವ ಮನವಿ ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಬಂದ ಪಕ್ಷದಲ್ಲಿ ಆ ಕೆಲಸವನ್ನು ತೆಗೆದುಕೊಂಡು ಮಾಡುತ್ತೇವೆ. ಯಾವ ಇಲಾಖೆಯಿಂದಲೇ ಆಗಲೀ ಅಲ್ಲಿ ಅಂಥ ಕಟ್ಟಡಗಳ ಅವಶ್ಯಕತೆ ಇದೆ ಎನ್ನುವ ಮನವಿ ಬಂದಿಲ್ಲ. ಆ ಕಾರಣದಿಂದ ಇದುವರೆಗೂ ಕಟ್ಟುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ವಿ. ಎಲ್. ಶಿವಪ್ಪ.—ಅಲ್ಲಿ ಎಲ್ಲಾ ಇಲಾಖೆಗಳೂ ಇವೆ, ಹೈಸ್ಕೂಲಿವೆ, ಪ್ರೈಮರಿ ಹೆಲ್ತ್ ಯೂನಿಟ್ ಇದೆ. ಆದರೆ ಅಲ್ಲಿ ವಾಸಮಾಡಲು ಮನೆ ಸಿಕ್ಕದೆ 12 ಮೈಲಿಗಳಿಂದ ಬರಬೇಕಾಗಿದೆ. ಈ ದೃಷ್ಟಿಯಿಂದ ಇಲಾಖೆಗಳಿಂದ ಅವಶ್ಯಕತೆ ತಿಳಿದುಕೊಂಡು ಮನೆಗಳನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಯಾವ ಇಲಾಖೆಯಿಂದಲೂ ಮನೆಗಳನ್ನು ತಮ್ಮ ನೌಕರರಿಗೆ ಕಟ್ಟಿಸಿ ಕೊಡಬೇಕೆಂದು ಮನವಿ ಬಂದಿಲ್ಲ. ಬಂದರೆ ಕಟ್ಟಿಕೊಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಬಿಳಿಗಿರಿ ಗ್ರಾಮ ಮಾದರಿ ಗ್ರಾಮವೆಂದು ಹೆಸರು ಗಳಿಸಿದೆ. ಆದುದರಿಂದ ಗ್ರಾಮಾಂತರ ಪ್ರದೇಶಗಳಿಗೆ ಆ ಗ್ರಾಮವನ್ನು ಮಾದರಿಯಾಗಿ ಮಾಡಲು ಅಲ್ಲಿ ಮನೆಗಳನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಅದು ಮಾದರಿ ಗ್ರಾಮವಾಗಿರಬಹುದು. ಮನವಿ ಬಂದರೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆ. ಯಾವ ಇಲಾಖೆಯಿಂದಲೂ ಕೂಡ ಇದುವರೆಗೆ ಮನವಿ ಬಂದಿಲ್ಲ.

Withdrawal of Funds Allotted for Construction of Roads in Tumkur Town

577. **Sri GANGABOVI** (Gulur).—

Will the Minister for Public Works be pleased to state:—

(*a*) whether the Minister for Public Works recently toured in Tumkur District ;

(*b*) whether he has issued any instruction to the Public Works Department Officers of the District to withdraw funds allotted for the construction of roads in Tumkur Taluk ;

(*c*) if so, the reasons for the same ?

Sri K. LAKKAPPA (Minister for Public Works).—

(*a*) Yes.

(*b*) No.

(*c*) Does not arise in view of reply to clause (*b*) above.

ಶ್ರೀ ಗಂಗಾಬೋವಿ.—ಹಣ ಗೊತ್ತುಮಾಡಲಾಗಿದ್ದುದನ್ನು ವಾಪಸ್ಸು ತೆಗೆದುಕೊಂಡಿರುವುದು ನಿಜ. ತುಮಕೂರು ಜಿಲ್ಲೆಯಲ್ಲಿ ಮಂತ್ರಿಗಳು ಪ್ರವಾಸ ಬಂದಾಗ ಗೂಳೂರಿನಿಂದ ಕುಂದಾಪುರ ಮಾರ್ಗವಾಗಿ ತೋಪೆ ರಂಗಸ್ವಾಮಿ ದೇವಸ್ಥಾನಕ್ಕೆ ಹೋಗುವ ರಸ್ತೆ ಮಂಜೂರಾಗಿದ್ದರೂ ಆ ಕೆಲಸಕ್ಕೆ ಕೊಟ್ಟಿದ್ದ ಹಣವನ್ನು ಬೇರೆ ಕೆಲಸಕ್ಕೆ ಉಪಯೋಗಿಸುವ ಸಲುವಾಗಿ ಡಿ. ಸಿ. ಆಫೀಸಿನಲ್ಲಿ ತಿಳಿಸಲಿಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಆ ಜಿಲ್ಲೆಯಲ್ಲಿ ಪ್ರವಾಸ ಮಾಡಿರುವುದುಂಟು. ಆ ಕೆಲಸಕ್ಕೆ ಅಲಾಟ್ ಆಗಿರುವ ಹಣವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಯಾರಿಗೂ ಸೂಚನೆ ಕೊಟ್ಟಿಲ್ಲ.

ಶ್ರೀ ಗಂಗಾಬೋವಿ.—ಹಾಗಾದರೆ ಸುಮಾರು 50 ಸಾವಿರ ರೂಪಾಯಿ ಮಂಜೂರಾಗಿದ್ದರೂ ಕೂಡ ಅದನ್ನು ವಾಪಸ್ಸು ಪಡೆದು ಕೆಲಸ ನಿಲ್ಲಿಸಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಲಕ್ಕಪ್ಪ.—ಹಾಗೆ ಮಾಡಿ ಕೆಲಸ ನಿಲ್ಲಿಸಿಲ್ಲ. ಮಂಜೂರು ಮಾಡಿರುವುದನ್ನು ವಾಪಸ್ಸು ತೆಗೆದುಕೊಂಡಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಗಂಗಾಬೋವಿ.—ತಾವು ಹೇಳಿದ್ದರಮೇಲೆ ಗೂಳೂರಿನಿಂದ ಕುಂದಾಪುರದ ಮಾರ್ಗವಾಗಿ ತೋಪೆರಂಗಸ್ವಾಮಿ ದೇವಸ್ಥಾನಕ್ಕೆ ಹೋಗುವ ರಸ್ತೆ ಕೆಲಸಕ್ಕೆ 50 ಸಾವಿರ ರೂಪಾಯಿ ಸ್ಯಾಂಕ್ಷನ್ ಆಗಿದ್ದರೂ ಆ ಕೆಲಸವನ್ನು ನಿಲ್ಲಿಸಿದ್ದಾರೆ. ಎಷ್ಟು ದಿವಸಗಳಲ್ಲಿ ಆ ಕೆಲಸವನ್ನು ಪೂರ್ಣ ಮಾಡಲಾಗುವುದು ?

ಶ್ರೀ ಕೆ. ಲಕ್ಕಪ್ಪ.—ನಿಲ್ಲಿಸಿರುವುದಕ್ಕೆ ಕಾರಣ ಗೊತ್ತಿಲ್ಲ. 50 ಸಾವಿರ ಸ್ಯಾಂಕ್ಷನ್ ಆಗಿದ್ದರೂ ಅಷ್ಟನ್ನೂ ಒಂದೇ ದಿವಸ ಖರ್ಚುಮಾಡುವುದಕ್ಕಾಗುವುದಿಲ್ಲ. ಹಣ ಸಿಕ್ಕಿದ ಹಾಗೆ ಖರ್ಚುಮಾಡಬೇಕಾಗುವುದು. ಹಣ ಸಾಲದೆ ಕಡಮೆ ಕೆಲಸ ಮಾಡಿರಬಹುದು.

ಶ್ರೀ ಗಂಗಾಬೋವಿ.—50 ಸಾವಿರ ರೂಪಾಯಿ ಮಂಜೂರಾಗಿ ಹಣ ಪೂರ್ತಿಯಾಗಿ ಅಲಾಟ್ ಆಗಿದ್ದರೂ 15 ಸಾವಿರ ರೂಪಾಯಿ ಕೆಲಸಮಾಡಿ ಕೆಲಸ ನಿಲ್ಲಿಸಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಲಕ್ಕಪ್ಪ.—50 ಸಾವಿರ ರೂಪಾಯಿಗಳನ್ನು ಮಂಜೂರುಮಾಡಿದ್ದರೂ ಒಂದೇ ವರ್ಷದಲ್ಲಿ ಕೆಲಸಮಾಡಬೇಕೆಂದಿಲ್ಲ. ಈಗ ಸ್ವಲ್ಪ ಮಾಡಿರಬಹುದು, ಮುಂದೆ ಉಳಿದ ಕೆಲಸ ಮಾಡಬಹುದು.

ಶ್ರೀ ಗಂಗಾಬೋವಿ.—ಮಂಜೂರಾಗಿ 3 ವರ್ಷವಾಗಿದೆ, ಇನ್ನೂ ಕೆಲಸ ಮುಗಿಸಿಲ್ಲ. ವರ್ಷಕ್ಕೆ 20 ಸಾವಿರ ರೂಪಾಯಿ ಕೆಲಸಮಾಡಿದ್ದರೂ ಇದುವರೆಗೆ ಪೂರ್ತಿ ಕೆಲಸವಾಗುತ್ತಿತ್ತು. ಕೆಲಸ ನಿಲ್ಲಿಸಿ ಒಂದು ವರ್ಷವಾಗಿದೆ. ಇದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಲಕ್ಕಪ್ಪ.—5 ವರ್ಷಗಳವರೆಗೆ ಹೀಗೆ ನಿಲ್ಲಿಸಿರುವ ಕೆಲಸಗಳು ಬೇಕಾದಷ್ಟಿವೆ.

MR. SPEAKER.—The Hon. Chief Minister has informed me that he will not be in station today. I therefore hold-over Question No. 682. Next Question.

Sandal Wood Trees Plantation Scheme

695. SRI C. M. S. SASTRY (Chickmagalur).—

Will the Minister of State for Forests be pleased to state :—

(*a*) whether the Government has a Scheme of planting sandal wood trees in State Forest area ;

(*b*) the extent of total acreage of sandal plantation done during the last three years up to a convenient date ;

(*c*) whether the Government has any idea of encouraging private parties if they take up sandal tree plantation in private lands ;

(*d*) if so, whether the Government propose to offer to buy sandal wood grown on private lands ?

SRI ALUR HANUMANTHAPPA (Minister of State for Forests).—

(*a*) Normally, natural regeneration of sandal comes up and gets established provided the seedlings are protected both from cattle and fires and are also served with hosts within their easy reach. (Sandal is not an autophyte but a parasite).

In some areas, where sandal is rather spares, sandal seeds are dibbled in burnt patches called 'Rabs' along with 'Ekka'—Calotropis gigantia—as primary host and other tree growth 6 ft. away from it as subsequent hosts. These sandal plants when they grow up, they form a nucleus and their seeds are disseminated by birds in the surrounding area.

In the afforestation process, specially in the dry areas and scrub forests, sandal is dibbled on the ridges or mounds along with other seeds. But this has not been yielding very good results because these sandal plants get exposed to Spike disease prevalent in the surronding areas and get killed before maturity or before developing good quantity of heartwood.

There is no separate Scheme for planting of sandal trees.

(*b*) Since pure sandal Plantations are not raised, this information is not available.

(*c*) and (*d*) Under section 72 of the Mysore Forest Act, sandal trees in Old Mysore area are the exclusive property of State Government unless the same be situated in an area in which the State Government have expressly alienated the right to sandal wood. The Mysore Forest

(SRI ALUR HANUMANTHAPPA)

Manual provides for the payment of bonus for the sandal trees removed from Private lands in Old Mysore area based on the girth of the sandal trees. In other integrated areas of new Mysore State, there are different rules about the ownership of sandal trees. Under the new Mysore Forest Act of 1963 and the rules made thereunder, all sandal trees which may grow in any land after the commencement of this Act, and all sandal trees existing on any land prior to the commencement of this Act, the ownership which vested in the State Government shall be exclusive property of the State Government.

In order to encourage the private landholders to protect the sandalwood trees from being smuggled or otherwise damaged, necessary provision has been made to make payment of bonus equivalent to 50 per cent of the net value (gross value of wood, less cost of extraction, transport cleaning, supervision and other incidental charges) of wood evaluated at the rates sanctioned by Government from time to time. These rules are expected to come into force shortly.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಗಂಧದ ಮರಗಳನ್ನು ಬೆಳೆಸುವ ಬಗ್ಗೆ ಯೋಜನೆಯನ್ನೇನಾದರೂ ಇಟ್ಟುಕೊಂಡಿದ್ದೀರಾ ?

†ಶ್ರೀ ಆಲೂರು ಹನುಮಂತಪ್ಪ.—ಪ್ರತ್ಯೇಕವಾಗಿ ಗಂಧದ ಮರಗಳನ್ನು ಬೆಳೆಸತಕ್ಕ ಯೋಜನೆಯ ಅವಶ್ಯಕತೆಯೇನೂ ಇಲ್ಲ ಡಿಬ್ಲಿಂಗ್ ಮಾಡುವುದರಿಂದ ಮತ್ತು ಬೇರೆ ಬೀಜಗಳ ಜೊತೆಗೆ ಟ್ರೆಂಚ್ ಮೌಂಡ್ಸ್‌ನಲ್ಲಿ ಮತ್ತು ಸಾಯಿಲ್ ಕನ್‌ಸರ್ವೇಷನ್ ಪ್ರದೇಶದಲ್ಲಿ ನ್ಯಾಚುರಲ್ ರೀಜನರೇಷನ್‌ನಿಂದ ಜೊತೆಗೆ ಬರುತ್ತದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಪಕ್ಷಿಗಳು ಬೀಜಗಳನ್ನು ತೆಗೆದುಕೊಂಡು ಬೇರೆಕಡೆಗಳಲ್ಲಿ ಹಾಕಿ ಮರಗಳು ಬೆಳೆಯುತ್ತವೆ. ನಾವೇ ಇದರ ಬಗ್ಗೆ ಮರಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಮಾಡುತ್ತಾ ಇದ್ದೇವೆ ಎಂದು ಹೇಳಿದೆ, ಈಗಾಗಲೇ ರಾಜ್ಯಾದ್ಯಂತ ಪ್ರತ್ಯೇಕವಾಗಿ ಗಂಧದ ಮರಗಳನ್ನು ಬೆಳೆಯತಕ್ಕ ಒಂದು ಯೋಜನೆ ಇಲ್ಲ. ಅದು ಬೇಕಾಗಿಲ್ಲ. ಬೇರೆ ಬೀಜಗಳ ಜೊತೆಯಲ್ಲಿ ಡಬ್ಲಿಂಗ್ ಮಾಡುವುದರಿಂದ ಮತ್ತು ಟ್ರೆಂಚ್ ಮೌಂಡ್ಸ್, ಸಾಯಿಲ್ ಕನ್‌ಸರ್ವೇಷನ್ ಕೆಲಸ ಮಾಡುವಾಗ ನ್ಯಾಚುರಲ್ ರೀಜನರೇಷನ್‌ನಿಂದ ಚೆನ್ನಾಗಿ ಬರುತ್ತದೆ. ಅಂಥ ಸಂದರ್ಭದಲ್ಲಿ ಅವನ್ನು ಚೆನ್ನಾಗಿ ಕಾಪಾಡಿದರೆ ಸಾಕು.

ಶ್ರೀ ಸಿ. ಆರ್. ರಂಗೇಗೌಡ.—ಹೊಸ ಮೈಸೂರ್ ಆಕ್ಟ್ 1963ನ್ನು ಜಾರಿಗೆ ತಂದಿದ್ದೀರಿ, ಪ್ರೈವೇಟ್ಸ್ ಹೋಲ್ಡರ್ಸ್‌ಗೆ ಬೋನಸ್ ಕೊಡುವ ಬಗ್ಗೆ ಇರಾಖೆಯವರಿಂದ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗುತ್ತದೆ ಅಂತ ಹೇಳಿ ಅದನ್ನು ಕಿತ್ತುಹಾಕುತ್ತಾರೆ. ಆದ್ದರಿಂದ ಇದರ ಬಗ್ಗೆ ಅತಿ ಜರೂರು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಆದಷ್ಟು ತೀವ್ರತೆಯಿಂದ ಪಬ್ಲಿಷ್ ಮಾಡುತ್ತೇವೆ.

ಶ್ರೀ ಐ. ಸೋಮಶೇಖರಪ್ಪ.—ಈಗಿರುವ ಕಾನೂನು ಪ್ರಕಾರ ಹಳೇ ಮೈಸೂರಿನಲ್ಲಿರತಕ್ಕ ಮರಗಳು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಸೇರಿದವು ಆಗಿವೆ ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ ಪ್ರೈವೇಟ್ ಓನರ್ಸ್ ಸಂಬಂಧಪಟ್ಟದ್ದನ್ನು ಅವರಿಗೆ ಸೇರಿದ್ದು ಎಂದು ಟ್ರೀಟ್ ಮಾಡಿದ್ದೀರಿ, ಯೂನಿಫಾರಂ ಆಕ್ಟ್ ತಂದು ಎಲ್ಲಾ ಸರ್ಕಾರಕ್ಕೆ ಸೇರಿದ್ದು ಅಂತ ಮಾಡುತ್ತೀರಾ ಹೇಗೆ ?

ಶ್ರೀ ಆಲೂರು ಹನುಮಂತಪ್ಪ.—ಅದಕ್ಕಾಗಿಯೇ ರೂಲ್ಸ್ ಆದಷ್ಟು ಬೇಗ ಪಬ್ಲಿಷ್ ಮಾಡಬೇಕೆಂದು ಇದ್ದೇವೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಪ್ರತಿ ದಿವಸ ಪೇಪರ್‌ನಲ್ಲಿ ಒಂದೂವರೆ ಲಕ್ಷ ಎರಡು ಲಕ್ಷ ರೂಪಾಯಿಗಳ ಗಂಧದ ಮರ ಸಾಗಿ ಹೋಗುತ್ತಾ ಇದೆ, ಆದರಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ

ನವರೂ ಒಳಗಾಗಿದ್ದಾರೆ ಎಂದು ಬರುತ್ತದೆ. ಇದು ನಮ್ಮ ದೇಶಕ್ಕೆ ಹೆಚ್ಚು ಆದಾಯ ತಂದು ಕೊಡುವುದು. ಇದನ್ನು ತಡೆಗಟ್ಟುವುದಕ್ಕೆ ಮತ್ತು ನಿಮ್ಮ ಅಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಈ ಪ್ರಶ್ನೆ ಎತ್ತಿದ್ದಾರೆ, ನಮ್ಮಲ್ಲಿ ಇದಕ್ಕೆ ಒಂದು ಸ್ಕ್ವಾಡ್ ಇದೆ ಎಲ್ಲಿ ಈ ತರಹ ಕಳ್ಳ ಸಾಗಾಣಿಕೆ ಮಾಡುತ್ತಾರೆ ಅದನ್ನು ಹಿಡಿದು ಶಿಕ್ಷೆ ಮಾಡುವುದಕ್ಕೆ ಕಾನೂನು ಇದೆ. ಒಂದು ವೇಳೆ ಖಾಸಗಿ ಮುಖಂಡರಿಂದ ವರ್ತಮಾನ ಬಂದರೆ ಬಹುಮಾನ ಕೊಡುವ ವ್ಯವಸ್ಥೆಯೂ ಕೂಡ ಇದೆ.

ಶ್ರೀ ವಿ. ಎಲ್. ಶಿವಪ್ಪ.—ಖಾಸಗೀ ಜಮೀನಿನಲ್ಲಿ ಬೆಳೆಯುತಕ್ಕ ಮರ ಅಕಸ್ಮಾತ್ತಾಗಿ ಆಡುಗಳು ಮೇದು ಅಥವಾ ಯಾರಿಂದರಾದರೂ ಊನವಾದರೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಆದ್ದರಿಂದ ಇದರ ತೊಂದರೆಯೇಕೆ ಅಂತ ಹೇಳಿ ಅದನ್ನು ಬೇರು ಸಹಿತ ಕಿತ್ತು ಹಾಕುತ್ತಾರೆ. ಇದನ್ನು ತಡೆ ಗಟ್ಟುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಮರ ಕಿತ್ತುಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಆಡು ಮತ್ತು ಇತರ ಪಕ್ಷಿಗಳು ನಾಶಪಡಿಸುವ ಸಂದರ್ಭ ಇದ್ದರೆ ಅದನ್ನು ತಡೆಗಟ್ಟಬೇಕಾಗುತ್ತದೆ.

ಶ್ರೀ ಎ. ಆರ್. ಬದರೀನಾರಾಯಣ್.—ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಗಂಧದ ಮರಗಳ ಬೆಳವಣಿಗೆ ಜಾಸ್ತಿಯಾಗುತ್ತಿದೆಯೇ ಅಥವಾ ಕಡಮೆ ಆಗುತ್ತಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಇತ್ತೀಚೆಗೆ ಗಂಧದ ಮರಗಳಿಗೆ ಸ್ಪೈಕ್ ಎಂಬುದಾಗಿ ಒಂದು ಕಾಯಿಲೆ ಬರುತ್ತಿದೆ. ಅದು ವರ್ಷೇ ವರ್ಷೇ ಹೆಚ್ಚಾಗುತ್ತಲೂ ಇದೆ. ಇಲ್ಲಿ ಇಲಾಖೆಯ ತಜ್ಞರನ್ನು ಸೇರಿಸಿ ವಿಚಾರ ಮಾಡಿದ್ದರಲ್ಲಿ ಮತ್ತು ಡೆಹರಾಡೂನಿನಲ್ಲಿ ಸಹಾ ಈ ಕಾಯಿಲೆಗೆ ಇನ್ನೂ ಔಷದಿ ಯನ್ನು ಕಂಡುಹಿಡಿದಿಲ್ಲ ಎಂದು ಹೇಳಲಾಗುತ್ತಿದೆ. ಅದಕ್ಕಾಗಿ ಈಗ ಒಂದು ರಿಸರ್ಚ್ ಸೆಲ್ಲನ್ನು ಮಾಡಿ ಎಲ್ಲೆಲ್ಲಿ ಮರಗಳಿಗೆ ಈ ಕಾಯಿಲೆ ಬರುತ್ತದೋ ಅಂಥ ಕಡೆಗಳಲ್ಲಿ ಆ ಮರವನ್ನು ಒಗೆದು ಆ ಹುಳಗಳನ್ನು ತೆಗೆದುಹಾಕತಕ್ಕ ಒಂದು ಕ್ರಮವನ್ನು ಸಧ್ಯಕ್ಕೆ ಅನುಸರಿಸಲಾಗುತ್ತಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಖಾಸಗೀ ಜನರ ಜಮೀನುಗಳಲ್ಲಿ ಎಷ್ಟು ಗಂಧದ ಮರಗಳಿವೆ ಎಂಬುದಕ್ಕೆ ಸರ್ಕಾರದಲ್ಲಿ ಏನಾದರೂ ಲೆಕ್ಕ ಇದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಸಧ್ಯಕ್ಕೆ ನಮ್ಮ ರಾಜ್ಯದಲ್ಲಿ ಸುಮಾರು ಏಳೂವರೆ ಲಕ್ಷ ಎಕರೆಗಳಲ್ಲಿ ಗಂಧದ ಮರಗಳಿವೆ ಎಂದು ತಿಳಿದುಬಂದಿದೆ. ಆದರೆ ಎನ್ಯೂಮರೇಷನ್ ಕೆಲಸ ಇನ್ನೂ ಮುಂದುವರಿಯುತ್ತಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ನಾನು ಕೇಳಿದ ಪ್ರಶ್ನೆ ಖಾಸಗೀ ಭೂಮಿಯಲ್ಲಿರತಕ್ಕ ಗಂದದ ಮರಗಳೆಷ್ಟು ಎಂದು !

ಶ್ರೀ ಆಲೂರು ಹನುಮಂತಪ್ಪ.—ನಾನಾಗಲೇ ಹೇಳಿದ್ದರಲ್ಲಿ ಖಾಸಗೀ ಭೂಮಿಯಲ್ಲಿರತಕ್ಕ ಮರಗಳೂ ಸೇರಿರುತ್ತವೆ. ಖಾಸಗೀ ಜಮೀನಿನಲ್ಲಿ ಬೆಳೆದಿರತಕ್ಕ ಮರ ಸರ್ಕಾರದ ಆಸ್ತಿ.

ಶ್ರೀ ಹಂಜಿ ಶಿವಣ್ಣ.—ಅರಣ್ಯ ಇಲಾಖೆಯಲ್ಲಿ ಅಲ್ಲರ್ಲೇ ಇಷ್ಟು ಶಿಬ್ಬಂದಿ ಇದ್ದಾಗ್ಯೂ ಗಂಧದ ಮರಗಳೂ ಇತರೇ ಮರಗಳೂ ಕಳವಾಗುತ್ತಿರುವುದರಿಂದ ಅಲ್ಲಿ ಇಲಾಖೆಯವರ ಸಹಕಾರವಿದ್ದರೆ ಮಾತ್ರ ಅದು ಸಾಧ್ಯ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಆದನ್ನು ನಂಬುವುದಕ್ಕೆ ಸಾಧ್ಯವಿಲ್ಲ. ಸಾಮಾನ್ಯವಾಗಿ ಕಾಡಿನಲ್ಲಿ ಬೆಳೆಯುತಕ್ಕ ಮರಗಳನ್ನು ಕದ್ದು ತೆಗೆದುಕೊಂಡು ಹೋಗಬೇಕೆಂಬ ಒಂದು ಚಟ ಜನರಲ್ಲಿದೆ. ಅದನ್ನು ನಿರ್ಮೂಲ ಮಾಡುವುದಕ್ಕೆ ಸಾರ್ವಜನಿಕರ ಸಹಕಾರ ಬೇಕು.

ಶ್ರೀ ಎನ್. ಚಿಕ್ಕೇಗೌಡ.—ಕಾನೂನಿನಲ್ಲಿ ಗಂಧದ ಮರಗಳನ್ನು ಕದ್ದವನಿಗೆ 500 ರೂಪಾಯಿ ಜುಲ್ಮಾನೆ, 2 ತಿಂಗಳು ಸಜ ಎಂದಿದೆ. ಇದನ್ನು ಇನ್ನೂ ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲವೇ ! ಮತ್ತು ಈ ಕೇಸನ್ನು ಹಿಡಿದುಕೊಟ್ಟವರಿಗೆ ಪೋಲೀಸ್ ಇಲಾಖೆಯಲ್ಲಿ ಪ್ರಶಸ್ತಿ—ಬಹುಮಾನಗಳನ್ನು ಕೊಟ್ಟ ಹಾಗೆ ಇಲ್ಲಿ ಕೊಡುವುದಕ್ಕಾಗುವುದಿಲ್ಲವೇ ! ಮತ್ತು ಗಂಧದ ಮರಗಳನ್ನು ಕದ್ದು ತೆಗೆದು ಕೊಂಡು ಹೋಗತಕ್ಕ ಲಾರಿಯಲ್ಲಿ 60—70 ಸಾವಿರ ರೂಪಾಯಿಗಳ ಕಳವು ಮಾಲಿರುವುದರಿಂದ ಆ ಲಾರಿಯನ್ನೇ ಸರ್ಕಾರದವರು ಕಾನ್‌ಫಿಸ್ಕೇಟ್ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡ ಬೇಕಾಗುತ್ತದೆ.

ಶ್ರೀ ಎಂ. ಕೆ. ಬೊಮ್ಮೆಗೌಡ.—ನಮಗೆ ಗಂಧದ ಮರದಿಂದ ಫಾರಿನ್ ಎಕ್ಸ್‌ಛೇಂಜ್ ಸಿಕ್ಕುತ್ತಿದೆ ಆದ್ದರಿಂದ ಅದು ಡೀಜನರೇಟಾಗದ ಹಾಗೆ ತಡೆಗಟ್ಟಲು ಯಾವ ರಿಸರ್ಚ್ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಆಲೂರು ಹನುಮಂತಪ್ಪ.—ಅದಕ್ಕೆ ಎಕ್ಸ್‌ಪರ್ಟುಗಳು ಸೇರಿ ರಿಸರ್ಚ್ ನಡೆಸುತ್ತಿದ್ದಾರೆ ಇನ್ನೂ ತಕ್ಕ ಔಷಧಿಯನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮೂರು ಜನ ಅಧಿಕಾರಿಗಳನ್ನು ಅಲ್ಲೇ ಜೀವಸಹಿತ ಸುಟ್ಟುಹಾಕಲಾಗಿದೆ. ಅಲ್ಲಿ ಆ ಕೃತ್ಯಕ್ಕೆ ಸಂಬಂಧಪಟ್ಟ ಜನರು ಪ್ರಭಾವಶಾಲಿಗಳಾಗಿದ್ದರಿಂದ ಅವರು ತಪ್ಪಿಸಿಕೊಂಡು, ಅಲ್ಲಿ ಇನ್ನೋಸೆಂಟ್ ಪೀಪಲ್ ಸಿಕ್ಕಿಕೊಂಡು ತೊಂದರೆಪಡುತ್ತಿದ್ದಾರೆಂಬ ಅಂಶ ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಅಲ್ಲಿ ಆ ಕೇಸಿನ ತನಿಖೆ ನಡೆಯುತ್ತಿರುವುದರಿಂದ ನಾನು ಏನೂ ಅದರ ಬಗ್ಗೆ ಹೇಳಲಾರೆ.

ಶ್ರೀ ಎಂ. ಎಂ. ಜಾಲಿಸಟ್ಗಿ.—ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇಕಡ 81ಕ್ಕಿಂತ ಜಾಸ್ತಿ ಅರಣ್ಯ ಪ್ರದೇಶವಿದೆ. ಅಲ್ಲಿ ಈ ಗಂಧದ ಮರಗಳನ್ನು ಬೆಳೆಸಬಹುದೆಂದು ಹೇಳುತ್ತಾರೆ. ಅಂದಮೇಲೆ ಅಲ್ಲಿ ಹೆಚ್ಚಿಗೆ ಗಂಧದ ಮರವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ಗಂಧದ ಮರಗಳನ್ನು ಬೆಳೆಸಬೇಕೆಂದು ಸಸಿಗಳನ್ನು ಕಾಪಾಡುವುದನ್ನು ಮುಖ್ಯ ಉದ್ದೇಶವಾಗಿ ಇಟ್ಟುಕೊಂಡಿದ್ದೇವೆ.

Sri D. B. KALMANKAR.—May I know in how many smuggling cases it is found that there is connivance with the departmental offices?

Sri ALUR HANUMANTHAPPA.—It is outside the scope of the question. How can I tell this?

ಶ್ರೀ ಬಿ. ದೊಡ್ಡಬೋರೇಗೌಡ.—ಕೊಳ್ಳೇಗಾಲ ಅರಣ್ಯ ಪ್ರದೇಶದಲ್ಲಿ ಸುಮಾರು 6 ತಿಂಗಳುಗಳಿಂದ ಸ್ಮಗಲ್ ಆಗುತ್ತಿರುವ ಗಂಧದ ಮರದ ಎಷ್ಟು ಲಾರಿಗಳನ್ನು ಅಧಿಕಾರಿಗಳು ಸೀಲ್ ಮಾಡಿದ್ದಾರೆ?

ಶ್ರೀ ಆಲೂರು ಹನುಮಂತಪ್ಪ.—ಈಗಿರುವ ಪ್ರಶ್ನೆ ಗಂಧದ ಮರವನ್ನು ಬೆಳೆಸುವುದು. ಮಾನ್ಯ ಸದಸ್ಯರು ಕೇಳುತ್ತಿರುವುದು ಬೇರೆ ಪ್ರಶ್ನೆ ಆಗುತ್ತದೆ.

ಶ್ರೀ ಎಂ. ಬಸವರಾಜು.—ಯಾವ್ಯಾವ ಜಿಲ್ಲೆಯಲ್ಲಿ ಗಂಧದ ಮರದ ವಿಸ್ತೀರ್ಣ ಎಷ್ಟೆಷ್ಟು ಎಕರೆ ಇದೆಯೆಂದು ಹೇಳುವುದಕ್ಕೆ ಸಾಧ್ಯವೇ?

ಶ್ರೀ ಆಲೂರು ಹನುಮಂತಪ್ಪ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಯಾವುದೋ ವಿಧವಾದ ಕಾಯಿಲೆ ಬಂದು ಈ ಗಂಧದ ಮರದ ಪ್ರಗತಿಗೆ ಧಕ್ಕೆ ಬಂದಿದೆ. ಅದಕ್ಕಾಗಿ ತಜ್ಞರ ಸಲಹೆಯನ್ನು ಪಡೆಯುತ್ತಿದ್ದೇವೆಂದು ಹೇಳಿದರು. ಉತ್ತರ ಕನ್ನಡ ಜಿಲ್ಲೆಯ ಶೇಕಡ 82·2ರಷ್ಟು ಅರಣ್ಯಪ್ರದೇಶವಿದ್ದರೂ ಆ ಪ್ರದೇಶದಲ್ಲಿ ಗಂಧದ ಮರ ಬೆಳೆಯುವ ಯೋಜನೆಯನ್ನು ಇದುವರೆಗೂ ತೆಗೆದುಕೊಂಡಿಲ್ಲ. ಅಲ್ಲಿ ಈ ತರಹ ಡಿಸೀಜ್ ಯಾವುದೂ ಬಂದಿಲ್ಲ. ಆದ್ದರಿಂದ ದಯವಿಟ್ಟು ಈ ಪ್ರದೇಶದಲ್ಲಿ ವಿಶೇಷವಾದಂಥ ಯೋಜನೆಯನ್ನು ಮಾಡಬೇಕೆಂದು ಯೋಚನೆ ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಸಾಮಾನ್ಯವಾಗಿ ಆ ಯೋಜನೆಯನ್ನು ಅಲ್ಲಿ ತಂದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲಿ ಅದನ್ನು ಪ್ರೊಟೆಕ್ಟ್ ಮಾಡುತ್ತಿದ್ದೇವೆ.

ಶ್ರೀ ಡಿ. ಎಸ್. ನಾಡಕರ್ಣಿ.—ಉತ್ತರ ಕನ್ನಡ ಜಿಲ್ಲೆ ಸಾಗರ—ಶಿವಮೊಗ್ಗಾಕ್ಕೆ ಹತ್ತಿರವಿದೆ. ಅಲ್ಲಿ ಗಂಧದ ಮರವನ್ನು ಬೆಳೆಯುವ ಪ್ರಶ್ನೆಯೇ ಇದುವರೆಗೆ ಬಂದಿಲ್ಲ. ಆದ್ದರಿಂದ ಅಲ್ಲಿಯೂ ಕೂಡ ಗಂಧದ ಮರಗಳನ್ನು ನೆಡುವುದಕ್ಕೆ ಯಾವ ಯೋಜನೆ ಮಾಡಿದ್ದೀರಾ? ಅದರ ಬಗ್ಗೆ ಎಷ್ಟು ಮೊಬಲಗನ್ನು ಬಡ್ಜೆಟ್ಟಿನಲ್ಲಿ ಮಂಜೂರು ಮಾಡಿದ್ದೀರಿ?

ಶ್ರೀ ಆಲೂರು ಹನುಮಂತಪ್ಪ.—ಸಾಯಿಲ್ ಕನ್‌ಸರ್‌ವೇಷನ್ ಆಫ್ ವರ್ಕ್ ಅಲ್ಲಿ ನಡೆಯು ತ್ತಿದೆ. ಗಂಧದ ಗಿಡಗಳನ್ನು ನೆಡುವ ಬಗ್ಗೆ ಮತ್ತು ಅದನ್ನು ಕಾಪಾಡುವ ಬಗ್ಗೆ ಮತ್ತು ಗಂಧದ ಬೀಜಗಳನ್ನು ಮಾಡುವ ಬಗ್ಗೆ ತಕ್ಕ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯವರು ತೆಗೆದುಕೊಳ್ಳು ತ್ತಿದ್ದಾರೆ.

ಶ್ರೀ ಎಂ. ಮಲ್ಲಪ್ಪ.—(ಅ)ಗೆ ಉತ್ತರವಾಗಿ ಗಂಧದ ಮರವು ಸ್ವಾವಲಂಬಿಯಾಗಿರದೆ ಪರಾವಲಂಬಿಯಾಗಿರುತ್ತದೆ ಎಂದು ಹೇಳಿದ್ದೀರಿ. ಆದರೆ ಗಂಧದ ಮರವು ಪರಾವಲಂಬಿಯಾಗಿರುವು ದನ್ನು ತಪ್ಪಿಸಿ ಸ್ವಾವಲಂಬಿಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಪರಾವಲಂಬಿಯಾಗಿ ಅದು ಬೆಳೆಯಬೇಕೇ ಹೊರತು ಸ್ವಾವಲಂಬಿಯಾಗಿ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—(ಇ)ಗೆ ಉತ್ತರವಾಗಿ ಖಾಸಗಿ ಜಮೀನುಗಳಲ್ಲಿನ ಗಂಧದ ಮರಗಳ ಒಡೆತನದ ಬಗ್ಗೆ ಹೊಸ ಮೈಸೂರು ಇತರ ಏಕೀಕೃತ ಪ್ರದೇಶಗಳಲ್ಲಿ ವಿವಿಧ ನಿಯಮಗಳು ಜಾರಿಯಲ್ಲಿವೆ ಎಂಬುದಾಗಿ ಹೇಳಿದ್ದೀರಿ. ಇನ್ನೊಂದು ಕಡೆ ಸದರಿ ನಿಯಮಗಳು ಇಷ್ಟರಲ್ಲೇ ಜಾರಿಗೆ ಬರುವ ನಿರೀಕ್ಷೆ ಇದೆಯೆಂದು ಹೇಳಿದ್ದೀರಿ. ಈ ನಿಯಮಗಳನ್ನು ಜಾರಿಗೆ ತರುವುದಕ್ಕೆ ಎಷ್ಟು ದಿವಸಗಳು ಬೇಕಾಗುತ್ತವೆ ?

ಶ್ರೀ ಆಲೂರು ಹನುಮಂತಪ್ಪ.—ರೂಲ್ಸ್ ಆಖೈರಾಗಿ ಪಬ್ಲಿಷ್ ಆಗುತ್ತಾ ಇದೆ. ಈ ಪ್ರಶ್ನೆಗೆ (ಸಿ) ಮತ್ತು (ಡಿ)ಗೆ ಕೊಟ್ಟಿರುವ ಉತ್ತರದಲ್ಲಿ ಅದನ್ನು ಹೇಳಿದೆ.

Construction of Irrigation Community Well in K. R. Nagar Taluk

746. Sri M. BASAVARAJU (K. R. Nagar).—

Will the Minister for Revenue be pleased to state :—

(*a*) whether the Government has received any representation for the construction of Irrigation Community well near Madavanahalli and Beeranahalli (K. R. Nagar Taluk);

(*b*) if so, the action taken in the matter ?

Sri H. V. KOUJALGI (Minister for Revenue).—

(*a*) No.

(*b*) Does not arise in view of the reply to clause (*a*).

ಶ್ರೀ ಎಂ. ಬಸವರಾಜು.—(ಅ) ಪ್ರಶ್ನೆಗೆ ಉತ್ತರವಾಗಿ 'ಬಂದಿಲ್ಲ' ಎಂದು ಇದೆ. ನಾನೇ ಖುದ್ದಾಗಿ ಸರ್ಕಾರಕ್ಕೆ ಇದರ ಬಗ್ಗೆ ಒಂದು ಮನವಿಯನ್ನು ಸಲ್ಲಿಸುತ್ತೇನೆ. ಅದನ್ನು ಸರ್ಕಾರ ದವರು ಪರಿಶೀಲನೆಮಾಡುತ್ತಾರೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಪರಿಶೀಲನೆಮಾಡುತ್ತಾರೆ.

ಶ್ರೀ ಎಂ. ಬಸವರಾಜು.—ಈ ಪ್ರದೇಶದಲ್ಲಿ ಕೆ. ಆರ್. ನಗರ ತಾಲ್ಲೂಕಿಗೆ ಅನುಕೂಲ ವಾಗಿರತಕ್ಕ ಹಾರಂಗಿ ಪ್ರಾಜೆಕ್ಟ್ ಮಾಡಬೇಕೆಂದು ಇದ್ದರೂ ಸೂರ್ಯಚಂದ್ರ ಇರುವವರೆಗೂ ನೀರು ಅಲ್ಲಿಗೆ ಬರುವುದಿಲ್ಲವೆಂದು ತೋರುತ್ತದೆ. ಅಂತಹ ಬರಗಾಲ ಪ್ರದೇಶ ಅದು. ಆದ್ದರಿಂದ ಈ ಪ್ರಾಜೆಕ್ಟನ್ನು ಆದಷ್ಟು ಶೀಘ್ರವಾಗಿ ಮಂಜೂರುಮಾಡುವ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಪರಿಶೀಲನೆಮಾಡಿ ಅದು ಸಾಧ್ಯವಾದರೆ ತೆಗೆದುಕೊಳ್ಳುತ್ತೇವೆ.

Starting of a Co-operative Sugar Factory at Shimoga

811. **Sri K. H. SRINIVAS** (Sagar).—

Will the Minister for Development be pleased to state ;—

(*a*) whether there is a proposal to start a Co-operative Sugar Factory in Shimoga ;

(*b*) if so, where the matter stands at present ?

Sri P. M. NADGOUDA (Minister for Development).—

(*a*) No.

(*b*) Does not arise in view of reply to clause (*a*).

ಶ್ರೀ ಕೆ. ಎಚ್. ಶ್ರೀನಿವಾಸ್.—11ನೇ ತಾರೀಖು ಶಿವಮೊಗ್ಗದಲ್ಲಿ ಸೇರಿದಂತಹ ಕಬ್ಬು ಬೆಳೆಗಾರರ ಸಭೆಯಲ್ಲಿ, ಆ ಜಿಲ್ಲೆಯಲ್ಲಿ ಒಂದೇ ಒಂದು ಸಕ್ಕರೆ ಕಾರ್ಖಾನೆಯಿರುವುದರಿಂದ ಅಲ್ಲಿಯ ಎಲ್ಲಾ ಕಬ್ಬನ್ನು ಅರೆಯುವುದಕ್ಕೆ ಅದು ಸಮರ್ಥವಿಲ್ಲದಿರುವುದರಿಂದಲೂ ಅಲ್ಲಿನ ರೈತರಿಗೆ ತುಂಬಾ ಅನಾನುಕೂಲವಾಗಿದೆ, ಆದ್ದರಿಂದ ಸಹಕಾರಿ ಆಧಾರದ ಮೇಲೆ ಇನ್ನೊಂದು ಅವಶ್ಯವಿದೆ ಎಂದು ಸಭೆ ಅಭಿಪ್ರಾಯ ಪಟ್ಟಿದ್ದಾರೆ. ಅದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಒಂದು ಕ್ರಿಯಾ ಸಮಿತಿಯನ್ನು ರಚಿಸಲಾಗಿದೆ ಎಂದು ವರದಿಯಾಗಿದೆ. ಈ ಅವಶ್ಯಕತೆ ನಿಜವಾಗಿದ್ದು ಈ ಸಲಹೆ ಸದ್ಯದಲ್ಲಿಯೇ ಬರುವುದರಿಂದ ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೀರಾ ?

9-00 P.M.

ಶ್ರೀ ಪಿ. ಎಂ. ನಾಡಗೌಡ.—ಇದು ಮುಖ್ಯವಾಗಿ ಕೇಂದ್ರ ಸರ್ಕಾರದ ಪ್ರಶ್ನೆ. ಕೇಂದ್ರ ಸರ್ಕಾರದವರು ಅದಕ್ಕೆ ಕರಾರುಗಳನ್ನು ಹಾಕಿದ್ದಾರೆ. ಈಗ ಸಹಕಾರಿ ಕ್ಷೇತ್ರದಲ್ಲಿ ಹೊಸದಾಗಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ತೆಗೆಯಬೇಕಾದರೆ, ಸೊಸೈಟಿಯವರು 65 ಲಕ್ಷ ರೂಪಾಯಿಗಳನ್ನು ಕೂಡಿಸಬೇಕಾಗುತ್ತದೆ. ಅನಂತರ ರಾಜ್ಯಸರ್ಕಾರದ ಶೇರ್ ಕೇಪಿಟಲ್ 35 ಲಕ್ಷ ರೂಪಾಯಿ, ನಂತರ ಬೈ ಡಿಬೆಂಚರ್ ಒಂದು ಲಕ್ಷ 25 ಸಾವಿರ ಕೊಡಬೇಕಾಗುತ್ತದೆ. ಈ ಮೊದಲು ಕೇಂದ್ರ ಸರ್ಕಾರದವರು ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಮಂಜೂರು ಮಾಡುತ್ತಿದ್ದು, ಅದನ್ನು ಪುನರ್ವಿಮರ್ಶೆ ಮಾಡಿ ಈಗ ಹೊಸ ಕರಾರುಗಳನ್ನು ಹಾಕಿದ್ದಾರೆ. ಕೇಂದ್ರ ಸರ್ಕಾರದವರು ಪರ್ಮಿಶನ್ ಕೊಟ್ಟರೂ, ನಾವು ಹಣದ ಬಗ್ಗೆ, ಐ.ಎಫ್.ಸಿ. ಅಥವಾ ಎಲ್.ಐ.ಸಿ. ಯಿಂದ ಸಹಾಯ ಮಾಡುವುದಕ್ಕಾಗುವುದಿಲ್ಲ, ಅದನ್ನು ಒಪ್ಪಿದರೆ ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಕೇಂದ್ರ ಸರ್ಕಾರದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯ ಬಗ್ಗೆ ಲೈಸೆನ್ಸಿನ ಅಗತ್ಯತೆಯನ್ನು ತೆಗೆದುಹಾಕಬೇಕೆಂಬ ಪ್ರಶ್ನೆ ಪರಿಶೀಲನೆಯಲ್ಲಿದ್ದು, ಅದಕ್ಕೆ ಕೆಲವು ದಿವಸಗಳ ಹಿಂದೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಆ ರೀತಿ ಮಾಡಕೂಡದು ಎಂದು ಪತ್ರ ಬರೆದಿದ್ದಾರೆ ಎಂದು ಬಂದಿರತಕ್ಕ ವರದಿ ನಿಜವೇ, ಹಾಗಿದ್ದರೆ, ಅದಕ್ಕೆ ಕಾರಣವೇನು ?

ಶ್ರೀ ಪಿ. ಎಂ. ನಾಡಗೌಡ.—ನಿಜ. ಲೈಸೆನ್ಸ್ ಪದ್ಧತಿ ತೆಗೆದರೆ ಏನಾಗುತ್ತದೆ ಎಂದರೆ, ಸಹಕಾರಿ ಕಾರ್ಖಾನೆಗಳು ಎಲ್ಲಿ ಕಡಿಮೆ ಇರುತ್ತದೋ, ಅಲ್ಲಿ ಸಿಗಲು ಅವಕಾಶವಿರುವುದಿಲ್ಲ. ಎಲ್ಲಾ ಬೇರೆ ಕಡೆ ಹೋಗಬಹುದು ಎನ್ನುವ ದೃಷ್ಟಿಯಿಂದ ಲೈಸೆನ್ಸ್ ಇಡಬೇಕು, ಅದರಲ್ಲೂ ಸಹಕಾರಿ ಕ್ಷೇತ್ರದಲ್ಲಿ ಕೊಡಬೇಕೆಂಬ ರಾಜ್ಯಸರ್ಕಾರದ ನಿಲುವನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದೇವೆ.

ಶ್ರೀ ಎಲ್. ಶ್ರೀಕಂಠಯ್ಯ.—ಶಿವಮೊಗ್ಗದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯೊಂದನ್ನು ಪ್ರಾರಂಭಿಸುವ ಬಗ್ಗೆ ಸಲಹೆ ಬಂದಿದೆಯೇ ಎಂದರೆ, ಇಲ್ಲ, ಆ ಪ್ರಶ್ನೆ ಉದ್ಭವವಾಗುವುದಿಲ್ಲವೆಂದು ಹೇಳಿದ್ದಾರೆ. ಈ ಸಕ್ಕರೆ ಕಾರ್ಖಾನೆಯನ್ನು ಶಿವಮೊಗ್ಗ ಜಿಲ್ಲೆಯಲ್ಲಾಗಲಿ, ಅಥವಾ ಇನ್ನಿತರ ಜಿಲ್ಲೆಯಲ್ಲಾಗಲಿ, ಸ್ಥಾಪಿಸುವ ಬಗ್ಗೆ ಏನಾದರೂ ಒಂದು ನಿರ್ದಿಷ್ಟವಾದ ಸ್ಪಷ್ಟವಾದ ಯೋಜನೆಯನ್ನು ಇಟ್ಟುಕೊಂಡಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ನಿರ್ದಿಷ್ಟವಾದ ಯೋಜನೆ ಸರ್ಕಾರಕ್ಕೆ ಇದೆ: ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ 8 ಕಾರ್ಖಾನೆಗಳನ್ನು ಕೊಡಬೇಕೆಂದು ಕೇಳಿದ್ದೇವೆ. ನಮ್ಮ ಟೆಕ್ನಿಕಲ್ ಫಿಸಿಬಿಲಿಟಿ ರಿಪೋರ್ಟ್ಸ್ ಅವೆಲ್ಲಾ ತಯಾರು ಮಾಡಿದ್ದೇವೆ. ಬೇಕಾದರೆ, ಬೇರೆ ಪ್ರಶ್ನೆ ಕೇಳಿದರೆ ಅವುಗಳ ಹೆಸರು ಎಲ್ಲಾ ಹೇಳಬಹುದು.

Sri ABDUL KHUDUS ANWAR.—Do the Government think that the present sugar factory is in a position to crush the entire quantity of sugar cane grown in Shimoga and Bhadravathi Taluks Sir ?

Sri P. M. NADAGOUDA.—That information is not available with me.

ಶ್ರೀ ಎ. ಆರ್. ಬದ್ರಿನಾರಾಯಣ್.—ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರಾ ಮತ್ತು ತುಂಗಾ ನಾಲೆಯ ಕೆಳಗೆ ಎಷ್ಟು ಪ್ರದೇಶದಲ್ಲಿ ಕಬ್ಬು ಬೆಳೆಯುತ್ತದೆ, ಮತ್ತು ಇದನ್ನು ಅರೆಯುವುದಕ್ಕೆ ಎಷ್ಟು ಕೆಪೇಸಿಟಿ ಬೇಕು. ಅದು ಎಲ್ಲಾ ಇದೆಯೇ ಎನ್ನುವುದನ್ನು ಸರ್ಕಾರ ವಿಮರ್ಶೆ ಮಾಡಿದ್ದಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ಈಗ ಡಿಸ್ಟ್ರಿಕ್ಟ್ ಶುಗರ್ ಗ್ರೋಯರ್ಸ್ ಅಸೋಶಿಯೇಶನಿಂದ ಒಂದು ಮನವಿ ಬಂದಿದೆ. ನಮ್ಮ ಮುಂದೆ ಪ್ರೊಪೋಸಲ್ಸ್ ಬಂದರೆ ನಾವೆಲ್ಲಾ ಸರ್ವೆ ಮಾಡಿ, ಯಾವ್ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನೋಡುತ್ತೇವೆ. ಮಾನ್ಯ ಸದಸ್ಯರು ಹೇಳಿದಂತೆ ಸರ್ವಸಾಮಾನ್ಯವಾಗಿ ಒಂದು ಸಕ್ಕರೆ ಕಾರ್ಖಾನೆಯು ಅವಶ್ಯವಿದೆ ಎಂದು ಗೊತ್ತಾಗುತ್ತದೆ.

ಶ್ರೀ ಟಿ. ದೊಡ್ಡಬೋರೆಗೌಡ. —ಮೈಸೂರು ರಾಜ್ಯದಲ್ಲಿ ಆಗುವಂತಹ ಸಕ್ಕರೆ ಕಾರ್ಖಾನೆಗಳ ಪೈಕಿ, ಸಹಕಾರಿ ಕಾರ್ಖಾನೆಗಳಿಗೆ ಆದ್ಯತೆಯನ್ನು ಕೊಡುತ್ತೀರಾ ಅಥವಾ ಖಾಸಗೀಯವರಿಗೆ ಆದ್ಯತೆಯನ್ನು ಕೊಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವುದು ಸರ್ಕಾರದ ನಿಲುವೆ.

ಶ್ರೀ ಐ. ಸೋಮಶೇಖರಪ್ಪ.—ಶಿವಮೊಗ್ಗ ಜಿಲ್ಲಾ ಅಭಿವೃದ್ಧಿಮಂಡಲಿಯವರು, ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಹಾಗೆ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ಅದರಲ್ಲಿ ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ, ಸಹಕಾರಿ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಬೇಕೆಂಬ ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಆದ್ದರಿಂದ ಸರ್ಕಾರದವರು ಅದನ್ನು ಪರಿಶೀಲನೆ ಮಾಡಿ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಶಿವಮೊಗ್ಗಾ ಜಿಲ್ಲೆಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ಬಗ್ಗೆ ಯಾವುದೇ ಸಲಹೆ ಸರ್ಕಾರಕ್ಕೆ ಬಂದಿಲ್ಲ.

ಶ್ರೀ ಎಂ. ಎನ್. ರಾಮಣ್ಣ.—ಮೈಸೂರು ಸಂಸ್ಥಾನಕ್ಕೆ ಎಷ್ಟು ಸಕ್ಕರೆ ಕಾರ್ಖಾನೆಗಳ ಅವಶ್ಯಕತೆ ಇದೆಯೆಂಬುದನ್ನು ತಿಳಿದು, ಅವಶ್ಯಕತೆಗನುಗುಣವಾಗಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಈ ಬಗ್ಗೆ ಸರ್ಕಾರದವರು ಈಗಾಗಲೇ ಸರ್ವೇ ಮಾಡಿದ್ದಾರೆ. ರಾಜ್ಯದಾದ್ಯಂತ 1,84,750 ಎಕರೆ ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದ್ದು 1,200 ಎಕರೆ ಕಬ್ಬಿನ ಬೆಳೆಗೆ ಒಂದು ಸಕ್ಕರೆ ಕಾರ್ಖಾನೆ ಅಗತ್ಯ ಎಂದು ಆ ಬೇಸಿಸ್ ಮೇಲೆ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ.

ಶ್ರೀ ಹಂಜಿಶಿವಣ್ಣ.—ಈಗ 10 ವರ್ಷಗಳಿಗೆ ಮುಂಚೆಯೇ ತರೀಕೆರೆ ಮತ್ತು ಭದ್ರಾವತಿ ಈ ಎರಡು ತಾಲ್ಲೂಕುಗಳನ್ನು ಅಳವಡಿಸಿಕೊಂಡು ಒಂದು ಸಕ್ಕರೆ ಕಾರ್ಖಾನೆಯನ್ನು ತೆರೆಯಬೇಕೆಂದು ಆ ಪ್ರದೇಶದ ಜನಗಳು ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿದ್ದಾರೆ. ಆ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಸರ್ಕಾರದವರು ಒಪ್ಪಿಕೊಂಡಿದ್ದಾರೆ.

ಶ್ರೀ ಪಿ. ಎಂ. ನಾಡಗೌಡ.—ಬೇರೆ ಪ್ರಶ್ನೆಯನ್ನು ಕೇಳಿದರೆ ಹೇಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೈಸೂರು ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕೆಂದು ಆಲೋಚನೆ ಇಟ್ಟು ಕೊಂಡಿದ್ದೀರಿ.

Mr. SPEAKER.—How does it arise under this question ?

Sri K. H. SRINIVAS.—Supplementaries arise out of replies that the Ministers give. He has also answered in the general Context. ಕೇಂದ್ರ ಸರ್ಕಾರದಿಂದ ಎಷ್ಟು ಸಕ್ಕರೆ ಕಾರ್ಖಾನೆಗಳಿಗೆ ಲೈಸೆನ್ಸ್ ಸಿಕ್ಕಬಹುದು ಎಂದು ನಿರೀಕ್ಷಣೆ ಇಟ್ಟು ಕೊಂಡಿದ್ದೀರಿ ? ಮತ್ತು ಅವು ಸಹಕಾರಿ ರಂಗದಲ್ಲಿ ಬರುತ್ತದೆಯೇ, ಅಥವಾ ಪ್ರೈವೇಟ್ ಸೆಕ್ಟಾರಿನಲ್ಲಿ ಬರುತ್ತದೆಯೇ ?

ಶ್ರೀ ಪಿ. ಎಂ. ನಾಡಗೌಡ.—ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ 8 ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ಅಗತ್ಯ ಇದೆಯೆಂದು ನಾವು ಕೇಂದ್ರ ಸರ್ಕಾರದವರನ್ನು ಕೇಳಿದ್ದೇವೆ ಅವು ಸಹಕಾರಿ ಕ್ಷೇತ್ರದಲ್ಲಿ ಬರುತ್ತವೆ ಅಥವಾ ಪ್ರೈವೇಟ್ ಸೆಕ್ಟಾರಿನಲ್ಲಿ ಬರುತ್ತವೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಅದು ಪ್ರಪೋಜಲ್ ಮಾಡಿದಮೇಲೆ ಹೇಳುವುದಕ್ಕೆ ಬರುತ್ತದೆ. ಈಗ ಎರಡು ಎರಡು ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ನಾವು ಪ್ರಪೋಜಲ್ ಕಳುಹಿಸಿದ್ದೇವೆ.

Construction of a General Hostel for Students at Shimoga.

816. Sri K. H. SRINIVAS (Sagar).—

Will the Minister for Education be pleased to state—

(a) whether the Government is aware of the absence of a General Hostel at Shimoga and the necessity of establishing the same for the benefit of students ;

(b) if so, whether the Government has any proposal for constructing a General Hostel at Shimoga for the benefit of students ?

Sri N. M. KATRABASAIAH SOGI (Deputy Minister for Education).—

(a) Yes. General Hostels have to be started by private agencies. Government aid such Hostels.

(b) Aid will be given as per rules to any society that may establish a General Hostel.

ಶ್ರೀ ಕೆ. ಎಚ್. ಶ್ರೀನಿವಾಸ್.—(ಅ) ಪ್ರಶ್ನೆಗೆ ಉತ್ತರವಾಗಿ ಗೊತ್ತಿದೆ, ಸಾರ್ವಜನಿಕ ವಿದ್ಯಾರ್ಥಿ ನಿಲಯಗಳನ್ನು ಖಾಸಗಿಯವರು ಪ್ರಾರಂಭಿಸಬೇಕಾಗಿದ್ದು ಸರ್ಕಾರದವರು ಅಂತಹ ವಿದ್ಯಾರ್ಥಿನಿಲಯಗಳಿಗೆ ಸಹಾಯ ನೀಡುವರು ಎಂದು ಹೇಳಲಾಗಿದೆ. ಶಿವಮೊಗ್ಗದಲ್ಲಿ ಅನೇಕ ವರ್ಷಗಳಿಂದ ಪ್ರಥಮದರ್ಜೆಯ ಕಾಲೇಜು ಇದೆ. ಈ ಕಾಲೇಜ್‌ಗೆ ಹೊಂದಿಕೊಂಡಿರುವಂತೆ ಒಂದು ವಿದ್ಯಾರ್ಥಿನಿಲಯವನ್ನು ಪ್ರಾರಂಭ ಮಾಡಬೇಕಾದುದು ಸರ್ಕಾರದ ಜವಾಬ್ದಾರಿಯಾದ್ದರಿಂದ ಆದಷ್ಟು ಬೇಗ ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಸರ್ಕಾರದವರೇ ಸ್ಥಾಪನೆ ಮಾಡುವ ನೀತಿ ಇಲ್ಲ. ಯಾವುದಾದರೂ ಖಾಸಗೀ ಸಂಸ್ಥೆಯವರು ಮುಂದೆ ಬಂದರೆ ಅವರಿಗೆ ಗ್ರಾಂಟ್-ಇನ್-ಎಯ್ಡ್ ರೂಲ್ಸ್ ಪ್ರಕಾರ ಸಹಾಯಧನ ಕೊಡಲಾಗುತ್ತದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಎಲ್ಲಿ ಸರ್ಕಾರೀ ಕಾಲೇಜುಗಳು ಇರುತ್ತವೋ ಅಂತಹ ಕಡೆಗಳಲ್ಲಿ ಸರ್ಕಾರದವರೇ ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆ ಮಾಡುವುದು ಸರ್ಕಾರದ ಕರ್ತವ್ಯವಾಗಿರುವುದರಿಂದ ಈ ವಿಚಾರದಲ್ಲಿ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರದವತಿಯಿಂದ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ನಿಮ್ನವರ್ಗದವರಿಗೆ ಸರ್ಕಾರದ ವೆಚ್ಚದಿಂದ ಹಾಸ್ಟಲ್‌ಗಳನ್ನು ಪ್ರಾರಂಭ ಮಾಡುವುದು ಒಂದು ನೀತಿ ಇದೆ.

ಶ್ರೀ ಎ. ಆರ್. ಬದ್ರಿನಾರಾಯಣ್.—ಶಿವಮೊಗ್ಗದಲ್ಲಿ ಈಗ ಮೂರು ಕಾಲೇಜುಗಳು ಇವೆ. ಅನೇಕ ಹೈಸ್ಕೂಲ್‌ಗಳು ಇವೆ. ವಿದ್ಯಾರ್ಥಿಗಳಿಗೆ ಇಳಿದುಕೊಳ್ಳಲು ಜಾಗದ ಒತ್ತಡ ಇರುವುದರಿಂದ ಸರ್ಕಾರದವರೇ ಒಂದು ಸಾರ್ವಜನಿಕ ವಿದ್ಯಾರ್ಥಿನಿಲಯವನ್ನು ಸ್ಥಾಪಿಸುವುದಕ್ಕೆ ಜಾಗ್ರತೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದನ್ನು ಉತ್ತರದಲ್ಲಿ ಹೇಳಲಾಗಿದೆ. ಸರ್ಕಾರದವರೇ ಎಲ್ಲಾ ಕೆಲಸಗಳನ್ನು ಮಾಡಿಸುವುದು ಸಾಧ್ಯವಾಗುವುದಿಲ್ಲ. ಸಾರ್ವಜನಿಕರ ಸೇವೆ ಮತ್ತು ಸಹಕಾರ ಬೇಕಾಗುತ್ತದೆ. ಅದಕ್ಕಾಗಿ ಸಾರ್ವಜನಿಕರು ಆಗಲೀ, ಖಾಸಗೀ ಸಂಸ್ಥೆಯವರಾಗಲೀ ಮುಂದೆ ಬಂದರೆ ಅದಕ್ಕೆ ಬೇಕಾದ ಸಹಾಯವನ್ನು ಕಾನೂನು ಪ್ರಕಾರ ಒದಗಿಸಲಾಗುತ್ತದೆ.

ಶ್ರೀ ಕೆ. ಎಂ. ತಮ್ಮಯ್ಯ.—ಖಾಸಗಿಯವರು ಪ್ರಾರಂಭ ಮಾಡುವುದಾದರೆ ಸರ್ಕಾರದಿಂದ ಸವಲತ್ತುಗಳನ್ನು ಕೊಡಲಾಗುವುದು ಎಂದು ಹೇಳಿದ್ದೀರಿ. ಯಾವುದಾದರೂ ಖಾಸಗಿ ಸಂಸ್ಥೆಯವರು ಸರ್ಕಾರದ ಸಹಾಯದಿಂದ ವಿದ್ಯಾರ್ಥಿನಿಲಯವನ್ನು ಕಟ್ಟಿಸಿ, ನಂತರ ಆ ಕಟ್ಟಡವನ್ನು ದುರುಪಯೋಗ ಮಾಡಿಕೊಂಡರೆ ಅಂತಹವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂತಹ ನಿರ್ದಿಷ್ಟವಾದ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದರೆ ತೀವ್ರವಾದ ಕ್ರಮವನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಎಂ. ಎನ್. ರಾಮಣ್ಣ.—ಈಗ ಎಲ್ಲೆಲ್ಲಿ ಸರ್ಕಾರೀ ಕಾಲೇಜುಗಳು ಇರುತ್ತವೋ ಅಂತಹ ಕಡೆಗಳಲ್ಲಿ ಕಾಲೇಜ್‌ಗೆ ಅಟ್ಯಾಚ್ ಆದಂತೆ ಸರ್ಕಾರದವರೇ ಕಟ್ಟಿಸಿದ ಹಾಸ್ಟಲ್‌ಗಳು ಇರುತ್ತವೆ. ತುಮಕೂರಿನಲ್ಲಿಯೂ ಸಹ ಇದೇ ರೀತಿ ಇದೆ. ಆದ್ದರಿಂದ ಇದೇ ರೀತಿ ಶಿವಮೊಗ್ಗದಲ್ಲಿಯೂ ಒಂದು ಹಾಸ್ಟಲ್‌ನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇಲ್ಲಿ ಪ್ರಶ್ನೆಯೂ ಸ್ಪಷ್ಟವಾಗಿದೆ, ಉತ್ತರವೂ ಸ್ಪಷ್ಟವಾಗಿದೆ. ಇತ್ತೀಚಿನ ಸರ್ಕಾರದ ನೀತಿಯ ಪ್ರಕಾರ ಸರ್ಕಾರದವರೇ ಮುಂದಾಗಿ ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸುವ ವಿಚಾರ ಇಲ್ಲ. ಖಾಸಗೀ ಸಂಸ್ಥೆಯವರು ಮುಂದೆ ಬಂದರೆ ಸರ್ಕಾರದಿಂದ ಸಹಾಯಧನ ಕೊಡಲಾಗುತ್ತದೆ.

ಶ್ರೀ ಎನ್. ಜಿ. ಹಾಲಪ್ಪ.—ಸಾರ್ವಜನಿಕ ಸಂಘದವರು ಮುಂದೆ ಬಂದರೆ ಸಹಾಯ ಮಾಡಲಾಗುತ್ತದೆಂದು ಹೇಳಿದಿರಿ. ಈಗ ದಾವಣಗೆರೆಯಲ್ಲಿ ಎಂಜಿನಿಯರಿಂಗ್ ಕಾಲೇಜ್‌ಗೆ ಸಂಬಂಧಪಟ್ಟಂತೆ ಒಂದು ಹಾಸ್ಟಲ್‌ನ್ನು 2 ಲಕ್ಷ 30 ಸಾವಿರ ರೂಪಾಯಿಗಳಿಗೆ ಎಸ್ಟಿಮೇಟ್ ಮಾಡಿ, 2 ಲಕ್ಷ 40 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಸರ್ಕಾರದವರು ಕಟ್ಟಿಸಿದ್ದಾರೆ. ಈ ಬಗ್ಗೆ ಬಡ್ಜೆಟ್‌ನಲ್ಲಿ 324 ಪೇಜ್‌ನಲ್ಲಿ ಹೇಳಲಾಗಿದೆ. ಈ ಕಟ್ಟಡವನ್ನು ಯಾವ ಏಜೆನ್ಸಿ ಮೂಲಕ ಕಟ್ಟಿಸಿದ್ದೀರಿ ? ಮತ್ತು ಶಿವಮೊಗ್ಗದಲ್ಲಿಯೂ ಸಹ ಸರ್ಕಾರದವರೇ ಏತಕ್ಕೆ ಹಾಸ್ಟಲ್‌ನ್ನು ಕಟ್ಟಿಸಬಾರದು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದು ಪ್ರತ್ಯೇಕವಾದ ಪ್ರಶ್ನೆ.

ಶ್ರೀ ನಾಗಪ್ಪ.—ಎಲ್ಲೆಲ್ಲಿ ಸರ್ಕಾರದವರು ಕಾಲೇಜುಗಳನ್ನು ಕಟ್ಟಿಸುತ್ತಾರೋ ಅಂತಹ ಕಡೆಗಳಲ್ಲಿ ಸರ್ಕಾರದವರೇ ಹಾಸ್ಟಲ್‌ಗಳನ್ನು ಕಟ್ಟಿಸುವುದು ಒಂದು ನೀತಿಯಾಗಿದೆ. ಅದರಂತೆ ಶಿವಮೊಗ್ಗದಲ್ಲಿಯೂ ಸಹ ಕಾಲೇಜ್‌ಗೆ ಸಂಬಂಧಪಟ್ಟಂತೆ ಒಂದು ಹಾಸ್ಟಲ್‌ನ್ನು ಕಟ್ಟಿಸುವುದಕ್ಕೆ ಮನಸ್ಸು ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹಿಂದೆ ಆ ರೀತಿ ಕಟ್ಟಿಸಿರಬಹುದು. ಇನ್ನು ಮುಂದೆ ಸರ್ಕಾರದವರೇ ಮುಂದೆ ಬಂದು ಸಾರ್ವಜನಿಕ ಹಾಸ್ಟಲ್‌ಗಳನ್ನಾಗಲೀ, ಕಾಲೇಜುಗಳನ್ನಾಗಲೀ ಸ್ಥಾಪನೆ ಮಾಡುವ ನೀತಿಯನ್ನು ಇಟ್ಟುಕೊಂಡಿಲ್ಲ. ಖಾಸಗೀ ಸಂಸ್ಥೆಯವರು ಮುಂದೆ ಬಂದರೆ ಸರ್ಕಾರದವರು ಕಾನೂನು ಪ್ರಕಾರ ಸಹಾಯಧನ ಕೊಡುವ ನೀತಿಯನ್ನು ಈಗ ಇಟ್ಟುಕೊಂಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಜಾತ್ಯಾತೀತ ರಾಷ್ಟ್ರ ಎಂದು ತಾವು ಒಪ್ಪಿಕೊಳ್ಳುವಾಗ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳನ್ನು ತೆರೆಯುವಾಗ, ಕುರುಬರ ವಿದ್ಯಾರ್ಥಿ ನಿಲಯ, ಒಕ್ಕಲಿಗರ ವಿದ್ಯಾರ್ಥಿ ನಿಲಯ, ಬ್ರಾಹ್ಮಣರ ವಿದ್ಯಾರ್ಥಿ ನಿಲಯ ಎಂದು ಎಲ್ಲ ಕಡೆಗಳಲ್ಲೂ ಬೋರ್ಡುಗಳನ್ನು ಹಾಕಿರುವುದು ಸರಕಾರದ ಗಮನಕ್ಕೆ ಬಂದಿರಬಹುದು. ಜಾತ್ಯಾತೀತ ರಾಷ್ಟ್ರ ಎಂದು ಒಪ್ಪುವಾಗ ಎಲ್ಲವನ್ನೂ ಸಾರ್ವಜನಿಕ ವಿದ್ಯಾರ್ಥಿ ನಿಲಯ, ಎಂದು ಹೇಳಿ ಎಲ್ಲರಿಗೂ ಇದರಲ್ಲಿ ಅವಕಾಶವಿರುವಂತೆ ಸರಕಾರದವರು ಆದೇಶವನ್ನು ಏಕೆ ಕೊಡಬಾರದು ?

ಅಧ್ಯಕ್ಷರು.—ಈ ಪ್ರಶ್ನೆಯು ಸ್ಕೋಪ್ ಒಳಗೆ ಅದು ಬರುವುದಿಲ್ಲ. I dsiallow it.

Sri K. H. SRINIVAS.—He is evading to allowed the supplementary. We say that it is an obligation on the part of the Government to start a hostel and it is not a question of policy.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದು ಒಂದು ಸರಕಾರದ ಆಬ್ಲಿಗೇಟರಿ ಫಂಕ್ಷನ್ ಎಂದು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಸರಕಾರದಲ್ಲಿ ಇರುವ ಕಾನೂನು ರೀತ್ಯಾ ಖಾಸಗೀ ಸಂಸ್ಥೆಗಳಿಗೆ ಸಹಾಯ ಧನವನ್ನು ಹಾಸ್ಟೆಲ್ ತೆರೆಯುವಾಗ ಕೊಡಲು ಸಾಧ್ಯವಿದೆ.

N.R.W.S. Scheme at Channagiri Taluk

882. Sri N. G. HALAPPA (Channagiri).—

Will the Minister for Development be pleased to state :—

(*a*) the number of schemes prepared under the National Rural water supply scheme, in Channagiri Taluk, Shimoga District ;

(*b*) if the schemes are pending the stage at which they are pending ;

(*c*) whether it has come to the notice of the Government that there has been an acute scarcity of drinking water in Kasaba and Ubrani Hoblies of Channagiri taluk ;

(*d*) if so, the measures the Government proposes to take to remove the scarcity of drinking water ?

Sri B. L. GOWDA (Deputy Minister for Co-operation).—

(*a*) 15.

(*b*) Out of 15 schemes, 4 schemes have been completed and the remaining 11 schemes are pending. Details of pendency are furnished in the statement appended.

(*c*) Yes, in 12 villages in Channagiri Kasaba Hobli and 6 villages in Ubrani Hobli.

(*d*) Cent per cent financial assistance was recommended in respect of these villages, but the Government of India declined to alter the pattern of assistance. The Village Panchayats concerned have been addressed to forward resolutions seeking implementation of the schemes and agreeing to meet their share of the expenditures. The receipt of resolutions from the panchayats are awaited.

STATEMENT

Schemes completed

1	Santhebennur	...	50,000
2	Nallur	...	55,000
3	Thyavanigi	...	32,000
4	Kariganur	...	34,000

Schemes pending with Government

1	Neethagere and Nuggehalli	...	90,000
2	Chiradoni	...	1,08,000
3	Devarahalli	...	92,000
4	Basavapatna	...	1,15,000
5	Goppenahalli	...	97,000

Schemes pending with the Chief Engineer (Gl.)

1	Oodigere	...	77,000
2	Tavarekere	...	81,000
3	Maravanji	...	54,000

Schemes under preparation with the Executive Engineer, Rural Water Supply Division, Bangalore.

1 Lingadahalli
2 Kortikere
3 Pandavahatti

ಶ್ರೀ ಎನ್. ಜಿ. ಹಾಲಪ್ಪ.—ರೆಸಲ್ಯೂಷನ್ ಬಂದಕೂಡಲೇ ಮಂಜೂರು ಮಾಡಿ ಈ ಕೆಲಸವನ್ನು ಬೇಗನೆ ಮಾಡಿಸಿಕೊಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಇದಕ್ಕೆ ಸಂಬಂಧಪಟ್ಟ ಹಾಗೆ ಅವರ ಪಾಲಿನ ಹಣ ಕಟ್ಟಿಲ್ಲ. ಹಣ ಕೊಟ್ಟ ಮೇಲೆ ಇದನ್ನು ಪರಿಶೀಲನೆ ಮಾಡಲಾಗುತ್ತದೆ.

SRI N. G. HALAPPA.—It is stated that the Village Panchayats have been addressed to forward resolutions seeking implementation of the schemes and agreeing to meet their share of the expenditure. If the Village Panchayats are agreeable to pay their part of the expenditure, are the Government willing to start the scheme ?

SRI B. L. GOWDA.—At least they must show their willingness to pay. We have written to them. They have not yet replied.

Election to the Bangalore City Corporation

906. SRI VATAL NAGARAJ (Chickpet).—

Will the Minister of State for Municipal Administration be pleased to state :—

when the dicision will be taken to hold Elections to the Bangalore City Corporation as the people of Bangalore are anxious for the same ?

Sri B. M. PATIL (Minister of State for Municipal Administration).—

the decision in this behalf will be taken by them at the appropriate time.

ಶ್ರೀ ವಾಟಾಳ್ ನಾಗರಾಜ್.—ಸೂಕ್ತ ಕಾಲದಲ್ಲಿ ಎಂದು ಹೇಳಿದ್ದೀರಿ. ಸೂಕ್ತ ಕಾಲ ಎನ್ನುವುದು ಯಾವಾಗ ಬರುತ್ತದೆ? ಹಿಂದೆ ಇದ್ದ ಆರ್ಡರು ಪ್ರಕಾರ 1970 ರ ಮೇಗೆ ಸೂಪರ್ ಸೆಷನ್ ಮುಗಿಯಬೇಕಾಗಿತ್ತು. ಆದರೆ ಈಚೆಗೆ ಕಾನೂನು ತಿದ್ದುಪಡಿ ಮಾಡಿ ಚುನಾವಣೆಯನ್ನು ಆದಷ್ಟು ಬೇಗ ಮಾಡಬೇಕೆಂದು ಹೇಳಲಾಗಿದೆ. ಇದಕ್ಕೆ ಬಿ ಸಿ ಡಿ ಸಿ ಯವರು ತಮಗೆ ಗ್ಯಾರಂಟಿಯಾಗಿ ಇಂತಹದೇ ಕಾಲದಲ್ಲಿ ಚುನಾವಣೆಗಳನ್ನು ನಡೆಸಬೇಕು ಎಂದು ಏನಾದರೂ ಹೇಳಿದ್ದಾರೆಯೇ?

† ಶ್ರೀ ಬಿ. ಎಂ. ಪಾಟೀಲ್.—ಸೂಕ್ತ ಕಾಲ ಎನ್ನುವುದು ಆದಷ್ಟು ತೀವ್ರವಾಗಿಯೇ ಬರುತ್ತಿದೆ. ಬಿ ಸಿ ಡಿ ಸಿ ಯಾಗಲೀ ಅಥವಾ ಇನ್ನಾರೇ ಆಗಲೀ ಇದರಲ್ಲಿ ಒಪ್ಪುವ ವಿಚಾರ ಬರಲಿಕ್ಕಿಲ್ಲ. ಸರಕಾರ ಈಗಾಗಲೇ ನಿರ್ಧಾರ ತೆಗೆದುಕೊಂಡು ಸಂಬಂಧಪಟ್ಟ ಕಾರ್ಪೋರೇಷನ್ ಅಧಿಕಾರಿಗಳಿಗೆ ಎಲೆಕ್ಟೊರಲ್ ರೂಲ್ಸನ್ನು ತಯಾರು ಮಾಡುವುದಕ್ಕೆ ಸೂಚನೆಯನ್ನು ಕೊಡಲಾಗಿದೆ ಮತ್ತು ಆ ದಿಸೆಯಲ್ಲಿ ಅವರುಗಳು ಕೆಲಸ ಮಾಡುವ ಪ್ರಯತ್ನದಲ್ಲಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿ ಹೊಸದಾಗಿ ಮತದಾರರ ಪಟ್ಟಿಯನ್ನು ಮಾಡುತ್ತಾರೋ ಇಲ್ಲವೇ ಶಾಸನ ಸಭೆಯ ಸದಸ್ಯರ ಎಲೆಕ್ಷನ್ ಕಾಲದಲ್ಲಿ ಮಾಡಿರುವ ಪಟ್ಟಿಯನ್ನೇ ಅನುಸರಿಸುತ್ತಾರೋ! ಹೊಸದಾಗಿ ಪಟ್ಟಿ ಮಾಡಬೇಕಾದರೆ ವರ್ಷಗಟ್ಟಲೆ ಕಾಲ ಬೇಕಾಗುತ್ತದೆ. ಅಲ್ಲದೆ ಒಂದೊಂದು ಕ್ಷೇತ್ರದಲ್ಲಿ ಒಂದೊಂದು ರೀತಿಯಲ್ಲಿ ಎಂದರೆ 10 ಸಾವಿರ, 20 ಸಾವಿರ ಇಲ್ಲವೇ 30 ಸಾವಿರ ಜನಸಂಖ್ಯೆ ಇರುತ್ತಾರೆ, 63 ಕ್ಷೇತ್ರಗಳು ಎಂದು ಹಿಂದೆ ಇದ್ದಾಗ ಒಂದು ಕ್ಷೇತ್ರದಲ್ಲಿ ಐದು ಸಾವಿರ ಜನರಿದ್ದರು. 31 ಸಾವಿರ ಜನರಿರುವ ರಾಜಾಜಿನಗರವೂ ಒಂದು ಕ್ಷೇತ್ರವಾಗಿತ್ತು. ಇದನ್ನು ಸರಿಪಡಿಸಿ ಸಮಾನವಾದ ರೀತಿಯಲ್ಲಿ ಕ್ಷೇತ್ರಗಳನ್ನು ವಿಂಗಡಿಸುತ್ತೀರಾ ಹೇಗೆ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಇರುವ ಆಕ್ಟಿನಲ್ಲಿ ಯಾವ ರೀತಿ ಇದೆಯೋ ಅದರಂತೆ ತಯಾರು ಮಾಡಲಾಗುತ್ತಿದೆ. ಇದು ಮಾನ್ಯ ಸದಸ್ಯರಿಗೂ ಗೊತ್ತು. ಇದರಲ್ಲಿ ಅನೇಕ ಮತದಾರರುಗಳ ಹೆಸರುಗಳಿಲ್ಲ ಎಂದು ಏನಾದರೂ ತಕರಾರುಗಳು ಬಂದಲ್ಲಿ ಅಂತಹ ತಕರಾರುಗಳ ಬಗ್ಗೆ ಎಲ್ಲರ ಅಭಿಪ್ರಾಯಗಳನ್ನು ತೆಗೆದುಕೊಂಡು ಸೂಕ್ತ ಕ್ರಮವನ್ನು ಕಾನೂನಿಗನುಗುಣವಾಗಿ ತೆಗೆದುಕೊಳ್ಳಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ತಾವು ಈ ಸಭೆಯಲ್ಲಿ ಹಿಂದೆ ಆಶ್ವಾಸನೆ ಕೊಟ್ಟಿದ್ದೀರಿ. ಏನು ಎಂದರೆ, ಬೆಂಗಳೂರಿನ ಎಂ.ಎಲ್.ಎ. ಗಳು ಹೇಳುವುದಕ್ಕಿಂತ ಮುಂಚಿತವಾಗಿ ಈ ಕಾರ್ಯಕ್ರಮಗಳು ಜರೂರಾಗಿ ಆಗುತ್ತವೆ, ಚನಾವಣೆ ನಡೆಯುತ್ತದೆ ಎಂದು. ಈವಾಗ ತಾವು ಹೇಳುವುದನ್ನು ನೋಡಿದರೆ ಇನ್ನೂ ಒಂದು ವರ್ಷ ಮುಂದಕ್ಕೆ ಹೋಗುತ್ತವೆ ಎಂದು ಕಾಣುತ್ತದೆ. ಆದುದರಿಂದ ಇದರ ಬಗ್ಗೆ ಒಂದು ಸ್ಪಷ್ಟವಾದ ಅಭಿಪ್ರಾಯವನ್ನು ಇಂಥಾ ತಾರೀಕಿನಲ್ಲೇ ಚುನಾವಣೆ ಆಗಬೇಕು ಎನ್ನುವ ನಿರ್ಧಾರವನ್ನು ಕೈಗೊಳ್ಳಬೇಕು. ಇದರ ಬಗ್ಗೆ ಏನು ಭರವಸೆ ಕೊಡುತ್ತೀರಿ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ. ಚುನಾವಣಾ ಪಟ್ಟಿಯನ್ನು ತಯಾರಿಸಬೇಕಾದರೆ ಪೂರ್ವಭಾವಿಯಾಗಿ ಆಕ್ಟ್ ಪ್ರಕಾರ ಏನೇನು ಕಾರ್ಯಕ್ರಮಗಳು ನಡೆಯಬೇಕೋ ಅವು ನಡೆಯುತ್ತವೆ. ಮತದಾರರ ಪಟ್ಟಿ ಕಾನ್‌ಸ್ಟಿಟ್ಯೂಷನ್ ಡಿಲಿಮಿಟೇಶನ್ ಆದನಂತರ ಸರ್ಕಾರ ಮಾಡುತ್ತದೆ ಎಂದು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಚುನಾವಣಾ ಪಟ್ಟಿ ತಯಾರು ಮಾಡಬೇಕಾದರೆ ಸರ್ಕಾರದವರು ಕಾರ್ಪೋರೇಷನ್ನಿಗೆ ಒಂದು ಆಜ್ಞೆ ಹೊರಡಿಸಿದ್ದಾರೆ ಎಂದು ಹೇಳಿದ್ದಾರೆ. ಮತದಾರ ಪಟ್ಟಿ ಸಂಪೂರ್ಣವಾಗಿ ತಯಾರಾಗಬೇಕಾದರೆ ಎಷ್ಟು ಕಾಲ ಹಿಡಿಯುತ್ತದೆ ಸ್ವಾಮಿ?

ಶ್ರೀ ಬಿ. ಎಂ. ಪಾಟೀಲ್.—ಸಾಧ್ಯವಾದಷ್ಟು ತೀವ್ರವಾಗಿ ಮಾಡುತ್ತೇವೆಂದು ಹೇಳಿದ್ದೇನೆ. ತೀವ್ರ ಅಂದರೆ ಇಂತಿಷ್ಟು ದಿವಸ ಎಂದು ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಡಿಶಂಬರ್ ತಿಂಗಳ ಒಳಗಾದರೂ ಚುನಾವಣೆ ನಡೆಯುತ್ತದೆ ಎಂದು ಭರವಸೆ ಇಟ್ಟುಕೊಳ್ಳಬಹುದೇ!

ಅಧ್ಯಕ್ಷರು.—ಬೇರೆ ಪ್ರಶ್ನೆ ಕರೆದಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರಿಗೆ ಉಪ ಪ್ರಶ್ನೆ ಕೇಳಲು ಪರ್ಮಿಶನ್ ಕೊಡುವುದಕ್ಕಾಗುವುದಿಲ್ಲ. ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡಿಮ್ಯಾಂಡ್ ಬರುತ್ತದೆ. ಆವಾಗ ಮಾತನಾಡಬಹುದು ದಯಮಾಡಿ ತಾವು ಈಗ ಕೂತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಇದರಮೇಲೆ ಒಂದು ಮೋಷನ್ ಕಳುಹಿಸುತ್ತೇನೆ. ಆದರ ಮೇಲೆ ಅರ್ಧಗಂಟೆ ಚರ್ಚೆ ಮಾಡುವುದಕ್ಕೆ ಪರ್ಮಿಷನ್ ಕೊಡುತ್ತೀರಾ ?

ಅಧ್ಯಕ್ಷರು.—ಮೋಷನ್ ಕೊಟ್ಟರೆ ಅದನ್ನು ಕನ್ಸಿಡರ್ ಮಾಡುತ್ತೇನೆ.

Selection of Fisherman as a Trainee

923. **Sri M. M. JALISATGI** (Bhatkal).—

Will the Minister for Fisheries and Ports be pleased to state :—

(*a*) whether a fisherman by profession is eligible for selection as a trainee ;

(*b*) whether a number of applicants from Kumta, Honnavar and Bhatkal Taluks were not selected as trainees on the ground that they are not fishermen by caste ?

Sri H. C. LINGA REDDY (Minister of State for Fisheries and Ports).—

(*a*) Yes.

(*b*) No.

ಶ್ರೀ ಎಂ. ಎಂ. ಜಾಲಿಸಟ್ಗಿ.—ಸ್ವಾಮಿ, ಜಾತಿಯಿಂದ ಬೆಸ್ತರವಲ್ಲವೆಂಬ ಆಧಾರದಮೇಲೆ ಅನೇಕ ಅರ್ಜಿಗಳನ್ನು ತಿರಸ್ಕರಿಸಿದ್ದಾರೆ. ಅಂಥಾದ್ದನ್ನು ಸರ್ಕಾರದ ನಜರಿಗೆ ತಂದರೆ, ಸೆಲೆಕ್ಷನ್ ಸಮಿತಿಯಲ್ಲಿರುವ ಅಧಿಕಾರ ವರ್ಗದವರಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ? ಮತ್ತು ಅಧಿಕಾರರೇತರರ ಮೆಂಬರ್‌ಷಿಪ್ಪನ್ನು ರದ್ದು ಮಾಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೊದಲು ಏನು ಹೆಚ್ಚು ಕಡಿಮೆ ಆಗಿದೆ ಎಂದು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, (ಅ) ಪ್ರಶ್ನೆಗೆ ಜಾತಿಯಲ್ಲಿ ಬೆಸ್ತರಲ್ಲದವರನ್ನು ತೆಗೆದುಕೊಂಡಿಲ್ಲವೇ ಎಂದು ಕೇಳಿದ್ದಕ್ಕೆ ಆ ತರಹ ಮಾಡಲಿಲ್ಲ ಎಂದು ಹೇಳಿದಿರಿ. ವಾಸ್ತವಿಕವಾಗಿ ಸೆಲೆಕ್ಷನ್ ಸಮಿತಿಯಲ್ಲಿ ವೃತ್ತಿಯಲ್ಲಿ ಬೆಸ್ತರಾಗಿರತಕ್ಕಂಥವರಿಗೆ ಪ್ರಾತಿನಿಧ್ಯ ಕೊಡತಕ್ಕಂಥ ನೀತಿ ಇದೆಯೇ ? ಅವರು ಬೆಸ್ತರಲ್ಲ ಎಂದು ಅನೇಕ ಅರ್ಜಿಗಳನ್ನು ನಿರಾಕರಣೆ ಮಾಡಿದ್ದರೆ ಅಂತಹ ಅರ್ಜಿಗಳನ್ನು ಪುರಸ್ಕರಿಸುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇಂಥದ್ದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆ ವಿಧವಾದ ಹೆಚ್ಚುಕಡಿಮೆಗಳು, ಲೋಪದೋಷಗಳಾಗಿವೆ ಎನ್ನುವುದು ಗೊತ್ತಾದರೆ ಆ ರೀತಿ ಮಾಡಬಾರದೆಂದು ಅವರಿಗೆ ಸೂಚನೆ ಕೊಡುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಮೀನು ಹಿಡಿಯತಕ್ಕ ಜನ ಯಾರಿದ್ದಾರೆ ಅಂಥವರ ಅರ್ಜಿಗಳನ್ನು ತೆಗೆದುಕೊಳ್ಳದೆ ಮೀನುಗಾರರು ಎಂದು ಹೇಳತಕ್ಕ ರೀತಿಯಲ್ಲಿ ಶಿಕ್ಷಣಾರ್ಥಿಗಳಾಗಿ ಮುಂದೆ ಬಂದಿರತಕ್ಕ ನೂರಾರು ಉದಾಹರಣೆಗಳಿವೆ. ಆದ್ದರಿಂದ ಈಗ ಇರುವ ನಿಯಮಗಳನ್ನು ಬದಲಾವಣೆ ಮಾಡಿ ಏನಾದರೂ ಹೊಸದಾಗಿ ಕ್ರಮ ಮಾಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಾಲ್ಕು ಟ್ರೇನಿಂಗ್ ಸೆಂಟರ್‌ಗಳಲ್ಲಿ ಮೊದಲು ನಲವತ್ತು ಜನರಂತೆ ಮಾತ್ರ ತೆಗೆದುಕೊಳ್ಳಲಾಗುತ್ತಿತ್ತು. ಈವಾಗ 50 ಜನರಂತೆ ತೆಗೆದುಕೊಳ್ಳಲಾಗುತ್ತಿದೆ. ಅದಕ್ಕೂ ಮೊದಲೇ ಟ್ರೇನಿಂಗ್ ಪೂರ್ತಿಯಾಗಿ ಶಿಕ್ಷಣವಾಗತಕ್ಕ ಅನೇಕ ಜನ ಅರ್ಜಿಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಅದಕ್ಕೋಸ್ಕರ ಹೆಚ್ಚುವರಿ ಬೇಕು ಎನ್ನುವವರಿಗೆ ಕೊಡುವುದು ಕಷ್ಟವಾಗಿದೆ.

Sri B. P. KADAM.—Is it not a fact that the Selection Committee has monopolised the selection of candidates only for the benefit of a few fishing communities, to the exclusion of others in the North Canara District ?

Sri H. C. LINGA REDDY.—No that is not true.

Sri B. P. KADAM.—Is it not brought to the notice of the Minister for fisheries ?

Sri H. C. LINGA REDDY.—The matter will be enquired into. I will verify it.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಫಿಷರೀಸ್ ಟ್ರೈನಿಂಗಿಗೆ ತೆಗೆದುಕೊಳ್ಳುವಾಗ ಅವರ ಜಾತಿಯ ಆಧಾರದಮೇಲೆ ತೆಗೆದುಕೊಳ್ಳುತ್ತೀರಾ ಅಥವಾ ನಿಜವಾಗಿ ಫಿಷಿಂಗ್ ಅನುಭವ ಪಡೆದವರನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮುಖ್ಯವಾದ ಕ್ವಾಲಿಫಿಕೇಷನ್ ಏನು ಎಂದರೆ, He should be a fisherman by profession having five years' sea-going experience ಎನ್ನುವುದು ಮೊದಲನೆಯದು, 21 ವರ್ಷದಿಂದ 40 ವರ್ಷದವರೆಗೆ ವಯಸ್ಸಾಗಿರಬೇಕು ಮತ್ತು ಅಕ್ಷರಸ್ಥನಾಗಿರಬೇಕು. ಜಾತಿಯ ವಿಚಾರಗಳೇನೂ ಇಲ್ಲ.

ಶ್ರೀ ಎಂ. ಎಂ. ಜಾಲಿಸತ್ಗಿ.—ಬೆಸ್ತರಲ್ಲದವರನ್ನು ಒಬ್ಬರನ್ನಾದರೂ ತೆಗೆದುಕೊಂಡದ್ದು ನಿಮ್ಮ ನಜರಿನಲ್ಲಿದೆಯೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮಾನ್ಯ ಸದಸ್ಯರು ಜನರಲ್ ಆಗಿ ಪ್ರಶ್ನೆ ಹಾಕಿದ್ದಾರೆ. ಬೆಸ್ತರಲ್ಲದವರಿಗೆ ಶಿಕ್ಷಣಾರ್ಥಿಗಳನ್ನಾಗಿ ತೆಗೆದುಕೊಳ್ಳಬಾರದೆಂದು ತಿಳಿಸಿಲ್ಲ. ಶಿಕ್ಷಣಾರ್ಥಿಗಳನ್ನು ಆರಿಸಲು ಒಂದು ಸಮಿತಿ ಇದೆ. ಅದರಲ್ಲಿ ಡೆಪ್ಯುಟಿ ಡೈರೆಕ್ಟರ್ ಆಫ್ ಫಿಷರೀಸ್, ಸೂಪರಿಂಟೆಂಡೆಂಟ್ ಆಫ್ ಫಿಷರೀಸ್, ಹಾಗೂ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಪಿಷರೀಸ್ ಮತ್ತು ಚೇರ್‌ಮನ್ ಆಫ್ ಮಾರ್ಕೆಟಿಂಗ್ ಕೋಆಪರೇಟಿವ್ ಯೂನಿಯನ್, ಕಾರವಾರ; ಇಷ್ಟು ಜನ ಸೇರಿ ಇಂಟರ್‌ವ್ಯೂ ಕರೆದು ಸೆಲೆಕ್ಟ್ ಮಾಡುತ್ತಾರೆ. ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ ಅದನ್ನು ಸರಿಪಡಿಸಬಹುದು.

ಶ್ರೀ ಎ. ಮುನಿಯಪ್ಪ.—ಹೆಚ್ಚು ಕಡಮೆಯಾಗಿದ್ದರೆ ಸರಿಮಾಡಬಹುದು ಎಂದು ಹೇಳಿದ್ದಾರೆ. ಸೆಲಕ್ಷನ್‌ನಲ್ಲಿ ಅನ್ಯಾವಾಗಿದ್ದರೆ ಅದನ್ನೂ ಸರಿಪಡಿಸುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅನ್ಯಾಯವಾಗಿದೆ ಎನ್ನುವುದು ಗೊತ್ತಿಲ್ಲ. ಗೊತ್ತಾದರೆ ಸರಿಪಡಿಸಬಹದು.

Sri B. P. KADAM.—Is it not a fact that the Selection Committee has monopolised the selection for the benefit of a few fishing communities only ? Was that fact not brought to the notice of the Hon. Minister by a letter signed by all the M.L.As. of North Kanara District ?

Sri H. C. LINGA REDDY.—I do not remember. I will just verify.

Sri B. P. KADAM.—It was given in September.

Sri H. C. LINGA REDDY.—That was not about this.

Mr. SPEAKER.—Question No. 937. Hon. Member Sri A.R. Panchagavi is absent. The Question Hour is over.

QUESTIONS FOR ANSWERS ON THE DAY

(but not teken up)

Promotion to Block Development Officers

451. SRI MAHADEVA BANAKAR (Byadagi).—

Will the Minister for Develypment be pleased to state :—

(a) the reason for not yet giving promotion to Block Development Officers according to their services, as per the General Cadre Services Rules ;

(b) whether it is a fact that decision was taken long back to give promotion to certain percentage of the Block Development Officers in the Revenue Department ;

(c) if so, when the same will be implemented ?

SRI P. M. NADGOUDA (Minister for Development).—

(a) Promotion to Block Develpment Officers is being given on the basis of seniority and Cadre and Recruitment Rules.

(b) No.

(c) Does not arise.

Untrained Teachers in Government Schools in Gulbarga District

664. SRI J. P. SARWESH (Serum).—

Will the Minister for Education be pleased to state :—

(a) the total number of untrained teachers in Government Schools in Gulbarga District ;

(b) whether the batch of teachers selectd for Gulbarga District on 22nd June 1961 have not been given training, if so, the reasens for denying them from the training ?

SRI K. V. SHANKARA GOWDA (Minister for Education).—

(a) 2,864.

(b) They have been given training. The question of denying chances of traininig does not arise.

Reduction in Grant to High Schools in Dharwar Division

937. **Sri A. R. PANCHAGAVI** (Arabhavi).—

Will the Minister for Education be pleased to state :—

(*a*) whether grant-in aid moneys to several High Schools in Dharwar Divison have been reduced or disallowed to a considerable extent for the year 1966–67 ;

(*b*) the total amount thus involved ;

(*c*) whether Government is aware that much inconvenience, loss and thereby harassment is caused to such voluntary organisations ;

(*d*) whether Government intend to give proper relief to such bodies ?

Sri K. V. SHANKARA GOWDA (Minister for Education).—

(*a*) No.

(*b*) Does not arise in view of reply to clause (*a*) above.

(*c*) No.

(*d*) Does not arise in view of reply to clause (*c*) above.

9-30 A. M.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಮತ್ತು 30 ಜನ ಇತರ ಸದಸ್ಯರು ಒಂದು ಪ್ರಿವಿಲೇಜ್ ಮೋಷನ್ ತಮ್ಮ ಗಮನಕ್ಕೆ ತಂದಿದ್ದೇವು. ಪ್ರಜಾವಾಣಿ ಪತ್ರಿಕೆಯಲ್ಲಿ 15ನೇ ಮಾರ್ಚಿ 1969ರ, ಪತ್ರಿಕೆಯಲ್ಲಿ ಇರುವ ಧೂಬಾಣ ಬಹಳ ಕ್ರೂರವಾಗಿದೆ. ನಮಗೆ ಹೇಳಲು ಅವಕಾಶ ಕೊಟ್ಟರೆ ಸ್ವಲ್ಪ ವಿವರ ಹೇಳುತ್ತೇವೆ.

Mr. SPEAKER.—I shall give you a hearing and decide.

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್ ವಸ್ತು ಪ್ರದರ್ಶನದ ಬಗ್ಗೆ ರೂಲಿಂಗ್ ರಿಸರ್ವ್ ಮಾಡಿದ್ದೀರಿ. ಮಂತ್ರಿಗಳೆಲ್ಲಾ ಸ್ಟೇಟ್ ಕಾರನ್ನು ತೆಗೆದುಕೊಂಡು ಅಲ್ಲಿಗೆ ಹೋಗಿದ್ದಾರೆ. ಅದನ್ನು ಉಪಯೋಗಿಸಿದ್ದರ ಬಗ್ಗೆ ಒಂದು ಪ್ರಿವಿಲೇಜ್ ಮೋಷನ್ ಇತ್ತು.

Mr. SPEAKER.—I shall look into it and find out what the position is.

Sri M. NAGAPPA.—I have sent a notice of an adjournment motion regarding the incident on the 14th night. There was a fire accident in Raichur Town causing a loss of Rs. 75,000.

Mr. SPEAKER.—I shall consider it.

ಶ್ರೀ ಎಲ್. ಶ್ರೀಕಂಠಯ್ಯ.—ವಿದ್ಯುತ್ ದರದ ಏರಿಕೆ ಬಗ್ಗೆ 3 ದಿವಸಗಳ ಮುಂಚೆ ಒಂದು ನಿಲುವಳಿ ಸೂಚನೆ ಕೊಟ್ಟಿದ್ದೆ. ಎಂ.ಎಸ್.ಇ.ಬಿ. ನವರು ವಿದ್ಯುತ್ ದರ ಏರಿಸಿದ್ದಾರೆ. ನನ್ನ ಸೂಚನೆಗೆ ಅವಕಾಶ ಕೊಡಬೇಕು. ಇದು ಬಹಳ ಮುಖ್ಯವಾದ ವಿಷಯ. ಧಾರಣೆಮೇಲೆ ಇದರಿಂದ ಒತ್ತಡ ಬರುವುದು ಮತ್ತು ಪಂಪು ಸೆಟ್ಟುಗಳಮೇಲೆ ಹೆಚ್ಚು ದರ ಬೀಳುವುದು, ಮನೆ ಬಳಕೆಗೆ ದರ ಹೆಚ್ಚುವುದು. ಆದುದರಿಂದ ಈ ವಿಷಯವನ್ನು ಚರ್ಚೆಮಾಡಬೇಕಾಗಿದೆ. ವಿದ್ಯುತ್ ದರ ಹೇಗಿರಬೇಕು ಎಂಬುದನ್ನು ತೀರ್ಮಾನಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಮೈಸೂರು ರಾಜ್ಯದಲ್ಲಿ ವಿಪುಲವಾಗಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತ್ತಿದ್ದೇವೆ, ಇತರ ರಾಜ್ಯ ಗಳಲ್ಲಿ ವಿದ್ಯುಚ್ಛಕ್ತಿಗೆ ದರ ಹೇಗಿದೆ, ಜಾಸ್ತಿ ಇದೆಯೇ ಎಂಬುದು ಕೂಲಂಕುಷವಾಗಿ ಗೊತ್ತಿಲ್ಲ ಎಂದು ಹಿಂದೆ ಹೇಳಿದ್ದರು. ಬೆಂಗಳೂರು ನೀರು ಸರಬರಾಜಿಗೆ ಸಂಬಂಧಪಟ್ಟ ವಿಚಾರವನ್ನು

ಹಿಂದೆ ತೀರ್ಮಾನಮಾಡಿದಂತೆ ವಿದ್ಯುಚ್ಛಕ್ತಿ ದರದ ವಿಷಯವನ್ನೂ ಎಸ್ಟಿಮೇಟ್ಸ್ ಕಮಿಟಿಗೆ ಅಥವ ಅದರ ವಿಚಾರ ತಿಳಿದವರಿರುವ ಒಂದು ಕಮಿಟಿಗೆ ರೆಫರ್ ಮಾಡಿ, ಮೈಸೂರಿನಲ್ಲಿ ವಿದ್ಯುತ್ ದರ ಹೇಗಿರಬೇಕು ಎಂಬುದನ್ನು ತೀರ್ಮಾನಮಾಡಬೇಕು. ಇಲ್ಲದಿದ್ದರೆ ಈ ದರದ ಏರಿಕೆಯಿಂದ ಕೈಗಾರಿಗಳಮೇಲೆ ಒತ್ತಡ ಬರುವುದು ಮತ್ತು ವ್ಯವಸಾಯದಮೇಲೂ ಒತ್ತಡ ಬೀಳುವುದು. ಆ ದೃಷ್ಟಿಯಿಂದ ನನ್ನ ನಿಲುವಳಿ ಸೂಚನೆಗೆ ಅವಕಾಶ ಕೊಡುವುದಾದರೆ ಅನೇಕ ವಿಷಯಗಳು ನನ್ನ ಮುಂದಿವೆ. ಅವನ್ನು ಸಭೆಯ ಮುಂದಿಡುವುದಕ್ಕೆ ಪ್ರಯತ್ನಮಾಡುತ್ತೇನೆ.

Mr. SPEAKER.—The Hon. Chief Minister is not in station. I shall hear him and then decide.

Request for Release of Arrested M.Ps. and other Persons at Bangalore

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ನಿನ್ನೆಯ ದಿವಸ ಮಾತನಾಡುತ್ತಾ ಎಲ್ಲಾ ಪ್ರಶ್ನೆಗಳೂ ಸಮಾಧಾನಕರವಾಗಿ ಇತ್ಯರ್ಥವಾದುವು, ಒಳ್ಳೆಯ ರೀತಿಯಿಂದ ಇತ್ಯರ್ಥವಾದುವು ಎಂದು ಹೇಳಿದರು, ಸಂತೋಷ. ಅದು ಪತ್ರಿಕೆಯಲ್ಲೂ ಬಂದಿದೆ. ಆದರೆ ನಿನ್ನೆ ಬೆಳಿಗ್ಗೆ ಹೊರಗಡೆ ಪಾರ್ಲಿಮೆಂಟ್ ಸದಸ್ಯರನ್ನು ಮತ್ತು ಇತರರು ಕೆಲವರನ್ನು, ಪಿ.ಎಸ್.ಪಿ, ಎಸ್.ಎಸ್.ಪಿ. ಸದಸ್ಯರನ್ನು ಮತ್ತಿತರರನ್ನು ಅರೆಸ್ ಮಾಡಿ ಜೈಲಿಗೆ ಕಳಿಸಿದ್ದಾರೆ. ಕೆಲವರಮೇಲೆ ಕೇಸ್ ಹಾಕಿದ್ದಾರೆ ಆದರೆ "All is well that ends well," ಎಂದು ನಿನ್ನೆ ಹೇಳಲಾಯಿತು. ಈ ಪ್ರಶ್ನೆ ಮುಗಿದ ಮೇಲೆ ಯಾರಮೇಲೆ ಕೇಸ್ ಇದೆ ಅದನ್ನು ವಾಪಸು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರಕಾರವನ್ನು ಕೇಳುತ್ತೇನೆ. ಸರಕಾರದವರು ಜೈಲಿನಲ್ಲಿರುವವರನ್ನು ಬಿಡುಗಡೆ ಮಾಡುವ ವಿಚಾರವನ್ನು ಬೇಗ ಇತ್ಯರ್ಥಮಾಡಬೇಕು. ಇಲ್ಲದಿದ್ದರೆ ಬಿಸಿ ವಾತಾವರಣಕ್ಕೆ ಅವಕಾಶವಾಗುವುದು. ಅದಕ್ಕೆ ಅವಕಾಶ ಕೊಡಬಾರದು ಎಂದು ತಮ್ಮ ಮೂಲಕ ಸರಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಚೀಫ್ ಮಿನಿಸ್ಟರು ಸ್ಟೇಷನ್‌ದಲ್ಲಿ ಇಲ್ಲ, ಅವರನ್ನು ವಿಚಾರ ಮಾಡಬೇಕು.

ಶ್ರೀ ಎಲ್. ಶ್ರೀಕಂಠಯ್ಯ.—ನಮ್ಮ ಮನಸ್ಸಿಗೆ ನೋವಾಗಿದೆ. ಶ್ರೀಮಾನ್ ಕೃಷ್ಣಪ್ಪನವರು ಹೇಳಿದಹಾಗೆ ಅವರ ಸಲಹೆಗೆ ತಾವು ಬೆಂಬಲ ಕೊಟ್ಟು ಇದನ್ನು ಉತ್ತಮ ರೀತಿಯಲ್ಲಿ ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಜೈಲಿನಲ್ಲಿರತಕ್ಕ ಜೆ. ಎಚ್. ಪಾಟೀಲ್ ಮುಂತಾದವರನ್ನು ಬಿಡುಗಡೆ ಮಾಡಿದರೆ ಒಳ್ಳೆಯ ವಾತವರಣ ಉಂಟಾಗುತ್ತದೆ ಎಂದು ಕಳಕಳಿಯಿಂದ ಹೇಳುತ್ತೇನೆ, ಡೆಪ್ಯೂಟಿ ಹೋಂ ಮಿನಿಸ್ಟರು ಇದ್ದಾರೆ ಅವರಾದರೂ ಏನಾದರೂ ಒಂದು ಹೇಳಿಕೆ ಕೊಡಬೇಕು ಇಲ್ಲದೇ ಹೋದರೆ ನಮ್ಮ ಮನಸ್ಸಿನಲ್ಲಿ ತಳಮಳವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಚೀಫ್ ಮಿನಿಸ್ಟರು ಇಲ್ಲದೆ ಇದ್ದರೆ ಯಾರು ಇದ್ದಾರೋ ಅವರೇ ತೀರ್ಮಾನ ಮಾಡಿದರೆ ಆಗುತ್ತದೆ. ಕಹಿ ವಾತಾವರಣ ಇರಕೂಡದು ಅಂತ ತಾವೇ ಒಪ್ಪಿಕೊಳ್ಳುತ್ತಾ ಇದ್ದೀರಿ, ಹಾಗಿರುವಾಗ ಅವರು ಏನಾದರೂ ಒಂದು ಹೇಳಿಕೆ ಕೊಡಲಿ.

ಅಧ್ಯಕ್ಷರು.—ಪಾರ್ಲಿಮೆಂಟರಿ ಮಿನಿಸ್ಟರು ಏನಾದರೂ ಹೇಳುವುದು ಇದ್ದರೆ ಹೇಳಲಿ.

Sri K. PUTTASWAMY (Minister for law, Labour and Parliamentary Affairs).—Sir, hon'ble Members have referred to certain events which have happened outside the House yesterday. Your goodself was pleased to refer only to the incidents that were taking place inside the House. Therefore, I humbly submit that the incidents which have taken place outside the House would not be covered by your statement. When this House sits, so many events take place within the State. The hon'ble Member Sri Krishnan seems to think that I speak without thinking. I would make a request to him to kindly revise his opinion. I very humbly request that the Government cannot take the request of the hon'ble Members into consideration at this stage.

Sri D. B. KALMANKAR.—I may be permitted to speake for a minute.

Mr. SPEAKER.—I think there should be a limit. Let us have some procedure. The hon'ble Members wanted a statement from the Government and the Hon'ble Minister for Parliamentary Affairs, Sri Puttaswamy has made a statement. We are already short of time. Let us use it more usefully. We shall take up the next item.

Calling Attention to Matters of Urgent Public Importance

(i) *Re: Stoppage of Payment of Salaries to the Teachers etc., of M. E. S. Girls High School, Chickmagalur.*

Sri C. M. S. SASTRY (Chickmagalur).—I call the attention of the Minister for Education to the stoppage of payment of salaries to the teachers and staff of M. E. S. Girls High School Chickmagalur.

Mr. SPEAKER.—This Covers the Similar notice by Sriyuths B. P. Gangadhar and K. H. Ranganath. The Hon'ble Minister for Education will reply.

† Sri K. V. SHANKARA GOWDA.—The Hon'ble Members have drawn the attention of Government to the stoppage of payment of Salaries to the Teachers and staff of M. E. S. Girls High School, Chickmagalur. According to the revised Grant-in-Aid Code for Secondary Schools, an Advance Salary Grant Bill is prepared for each School and submitted to the D. E. O. These grants will be adjusted in the final Grant to be released to the school. If any School Management fails to implement the rules of the Grant-in-Aid Code, the D. P. I can stop the grant for the school concerned. The Management of M. E. S. Girls' High School, Chickmagalur terminated the services of three Teachers without conducting regular enquiry as prescribed under Rule 52 of the Grant-in-Aid Code. These teachers had put in a service of more than 2 years. The Teachers appealed to the D. P. I. and on considering the appeal, the D. P. I asked the Management to reinstate the Teachers in service and to hold a regular enquiry as per rules. But the management failed to obey the orders of the D. P. I. Accordingly, the D. P. I. stopped the Advance Salary Grant Bills of the School. The D. P. I. has issued another letter to the Management on 12th March 1969. In the meanwhile, the D. E. O., Chickmagalur has been instructed to release the Advance Salary Grant until further orders.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಮ್ಯಾನೇಜ್‌ಮೆಂಟಿನವರು ಗ್ರ್ಯಾಂಟ್-ಇನ್-ಏಯಿಡ್ ಕೋಡಿನ ಪ್ರಕಾರ ನಡೆಯಲಿಲ್ಲವಾದ್ದರಿಂದ ಡಿ. ಪಿ. ಐ. ಅವರು ಗ್ರ್ಯಾಂಟನ್ನು ನಿಲ್ಲಿಸಿದ್ದಾರೆಂದು ಈಗ ತಾನೆ ವಿದ್ಯಾ ಮಂತ್ರಿಗಳು ಹೇಳಿದರು. ಆದರೆ ಹಾಗೆ ಗ್ರ್ಯಾಂಟನ್ನು ನಿಲ್ಲಿಸತಕ್ಕದ್ದು ಗ್ರ್ಯಾಂಟ್-ಇನ್-ಏಯಿಡ್ ರೂಲ್ ಪ್ರಕಾರ ಸರಿಯಾದ್ದಲ್ಲ. ಅಲ್ಲಿ ಕೆಲಸಮಾಡುತ್ತಿದ್ದ ಮೂರು ಜನ

ಉಪಾಧ್ಯಾಯರನ್ನು ನಾವು ಟರ್ಮಿನೇಟ್ ಮಾಡಿದೆವು. ಅನಂತರ ಹಾಗೆ ಟರ್ಮಿನೇಟ್ ಮಾಡಿದವರ ಜಾಗದಲ್ಲಿ ಒಬ್ಬರನ್ನು ನಾವು ತಾರೀಖು 1-8-1968ರಲ್ಲಿ ಕೆಲಸಕ್ಕೆ ತೆಗೆದುಕೊಂಡೆವು......

"Approval of appointment of teacher in M. E. S. Girls' High School, Chickmagalur dated 5th July 1968 from the Head Master—Order thereon: The following appointment was approved: H. S. Subramania, B.Sc. Date of birth 7th May 1939, pay Rs. 130—250 in place of A. R. Geetha from 30th May 1968."

ಹೀಗೆ ಒಂದು ರೆಫರೆನ್ಸ್‌ನ್ನು ಮಾಡಿದ್ದಾರೆ. ಮತ್ತು ಅದೇ ಆರ್ಡರಿನಲ್ಲಿ :—

"C. Anantharaman, B.A. Date of birth 15th August 1945, Pay Rs. 130—250. In place of Santamani from 3rd March 1968."

ಇದಕ್ಕೆ ನಿಮ್ಮ ಡಿಪಾರ್ಟ್‌ಮೆಂಟಿನವರೇ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅಲ್ಲಿ ಮೂರು ಜನ ಟೀಚರ್ಸ್‌ನ್ನು ಟರ್ಮಿನೇಟ್ ಮಾಡಿದ ಜಾಗದಲ್ಲಿ ಹೊಸದಾಗಿ ಮೂರು ಜನರನ್ನು ನೇಮಕಮಾಡಿಕೊಂಡಿದ್ದೇವೆ. ಅದಕ್ಕೆ ಇಲಾಖೆಯವರೇ ಒಪ್ಪಿಗೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ನೀವು ಈಗ ಕ್ಲಾರಿಫಿಕೇಷನ್ ಮಾತ್ರ ಕೇಳಿ, ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಗ್ರಾಂಟನ್ನು ನಿಲ್ಲಿಸುವುದಕ್ಕೆ ಡಿ. ಪಿ. ಐ.ಗೆ ಫುಲ್ ಪವರಿದೆ ಎಂದು ಹೇಳುತ್ತಿದ್ದಾರೆ.

"District Educational Officer, Chickmagalur, has now been asked to release advance salary grant of all staff already withheld. The management is, therefore, directed to obey the instructions of the Department already issued and re-instate the 3 teachers terminated without following the procedure forthwith."

ತಾವು ಈ ಒಂದು ಗ್ರಾಂಟನ್ನು ನಿಲ್ಲಿಸಿರತಕ್ಕ ಉದ್ದೇಶವಾದರೂ ಏನು ?

ಶ್ರೀ ಕೆ. ವಿ. ಶಂಕರಗೌಡ.—ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಈಗ ಗ್ರಾಂಟನ್ನು ಕೊಟ್ಟಿರತಕ್ಕದ್ದು ತಪ್ಪು ಅನ್ನುವುದಾದರೆ ಅದನ್ನು ನಿಲ್ಲಿಸುವುದಕ್ಕೆ ತಿಳುವಳಿಕೆಯನ್ನು ಈಕೂಡಲೇ ಕೊಡಲಾಗುತ್ತದೆ. ಅಲ್ಲಿ ಉಪಾಧ್ಯಾಯರನ್ನು ಕೆಲಸದಿಂದ ತೆಗೆಯಬೇಕಾಗಿದ್ದರೆ ಅದಕ್ಕೆ ಕೆಲವು ನಿಯಮಗಳಿವೆ. ಅದನ್ನು ಅನುಸರಿಸಬೇಕು. ಅದನ್ನು ಅನುಸರಿಸದೆ ಅಲ್ಲಿ ಉಪಾಧ್ಯಾಯರನ್ನು ತೆಗೆದುಹಾಕಲಾಗಿದೆ. ಆದರೆ ಅಲ್ಲಿ ಹೊಸದಾಗಿ ಟೀಚರನ್ನು ನೇಮಕ ಮಾಡಿಕೊಂಡಿರತಕ್ಕ ವಿಚಾರದಲ್ಲಿ ಪಾಠಪ್ರವಚನಗಳಿಗೆ ಉಪಾಧ್ಯಾಯರು ಇಲ್ಲದಿದ್ದರೆ ತೊಂದರೆ ಬರುತ್ತದೆಂದು ಆ ಹೊಸಬರ ನೇಮಕದ ಬಗ್ಗೆ ಇಲಾಖೆಯವರು ಒಪ್ಪಿರಬಹುದು. ಆದಾಗ್ಯೂ ಅಲ್ಲಿ ಗ್ರಾಂಟ್-ಇನ್-ಏಯಿಡ್ ಕೋಡಿನ ನಿಯಮಗಳಿಗೆ ವಿರುದ್ಧವಾಗಿ ನಡೆದಿದ್ದಾರೆಂದೇ ಅದನ್ನು ನಿಲ್ಲಿಸಲಾಗಿದೆ. ಆದರೆ ಅಲ್ಲಿ ಮುಖ್ಯವಾಗಿ ಏನು ನಡೆದಿದೆ ಎನ್ನುವ ವಿವರಗಳು ನನ್ನಲ್ಲಿಲ್ಲ.

...

(ii) Re: Stoppage of Supply of Fertilizers to the Ryots etc., in the State.

SRI M. NAGAPPA (Raichur).—I call the attention of the Minister for Agriculture to the telegraphic instructions issued by the State Marketing Societies in Raichur District regarding stoppage of supply of fertilisers to the ryots.

Sri I. SOMASEKHARAPPA (Hosanagar).—I call the attention of the Minister for Agriculture to the accumulation of heavy stock of fertilisers in the State and serious problems arising out of it.

Mr. SPEAKER.—The reply by the Minister will cover the similar notices given by Sriyuths M. N. Ramanna. K. N. Veerappa Gowda and Tirumala Devaraya.

† **Sri D. B. PAWAR** (Deputy Minister for Agriculture).—With reference to the above Calling Attention Notices, I beg leave of the House to make the following statement :—

I would like to take this opportunity to keep the House informed about the position regarding the supply of fertilizers in Mysore State. As the Hon. Members are aware, the Department of Agriculture was distributing the fertilisers through its officers in the past. This was considered an unsatisfactory method, as the departmental officers were tied up with this work most of the time, and were not free to attend to their activities pertaining to Agricultural Extension work. This method was changed, and the Mysore State Co-operative Marketing Society was appointed to act as an agent on behalf of the State Government. The distribution of fertilisers was undertaken through the taluk and primary co-operative marketing societies.

2. As the Hon'ble Members are aware, there was an acute shortage of fertilisers during the past few years. There have been frequent complaints of blackmarketing, and a number of restrictions had also been imposed. The Government of India at the repeated requests made by the State Government imported fairly large quantities of fertilisers during the last two years ; and this has eased the position considerably. Fertilisers are now being issued without imposing any restrictions and for all types of agricultural crops. According to the latest information available, the stock of fertilisers with the Mysore State Co-operative Marketing Society is 3,48, 954 tonnes, valued at Rs. 23,35,28,608.

3. The Hon'ble Members have felt that the indent made by the Department of Agriculture was in excess of the requirements ; and had failed to take into account the off-take of fertilisers in the past. The off-take of fertilisers during the last three years has been as follows :—

1965-66	...	1,22,815 tonnes
1966-67	...	1,47,428 tonnes
1967-68	...	1,51,852 tonnes

The consumption during the year 1968-69 is expected to be about 1,75,000 tonnes. In addition to this, the consumption of fertilisers through the private sector is estimated to be of the order of about 1 lakh tonnes during the year 1968-69. Thus, the total consumption during this year would be nearly 2.75 lakhs tonnes : and it would be necessary to build up stocks slightly larger than this figure, to meet the demands

of the coming year. The Department of Agriculture makes the calculation of the requirements of fertilisers for the different crops, not only according to the dosages recommended but also taking all other relevant factors into consideration. The consumption of fertilisers has been low in the previous years, mainly because of non-availiability of supply. There have also been other difficulties like the non-availability of credit from the co-operative sector. Many of the primary co-operative marketing societies and some of the District Co-operative Central Banks, have not been able to function effectively due to a variety of reasons and this has, to some extent, been responsible for the low consumtion of fertilisers. Further, the consumption in the previous years does not represent the full potential in the State, mainly because there was not only shortage of fertilisers but the seasonal conditions also in many parts of the State were not quite favourable. As the Hon'ble Members are aware, the rainfall was inadequate in many parts of the State.

4. The Department of Agriculture has calculated that the requirements of fertilisers for an average year would be about 1,23,000 tonnes in terms of Nitrogen. This would amount to about 5 lakhs tonnes of Ammonium Sumphate. In addition, the State would require phosphates and potash. There are a number of other difficulties in the distribution of fertilisers—particularly the shortage of godowns. These difficulties are being continuousely looked into. The co-operative societies are being encouraged to give short-term credit to all cultivators who are not defaulters and who wish to purchase fertilisers. The commercial banks have also been stimulated to enter the field of Agricultural finance. These steps are likely to improve the consumtion of fertilisers during the coming year.

5. According to the policy followed by the Government of India, 50 per cent of the value of fertilisers is given by them to us as short-term credit. The balance of the amount could be obtained as a loan by the State Marketing Society from the Reserve Bank of India and from the scheduled banks. The share structure of the Mysore State Co-operative Marketing Society has been considerably strengthened during the last two years. The Government has contributed Rs. 34,72,700 so far to the share capital of the Mysore State Co-operative Marketing Society. This has enabled the State Marketing Society to borrow a sum of Rs. 3 crores from the Reserve Bank. They have been advised to borrow an additional sum of Rs. 2 crores from the Reserve Bank, and also to get additional finance from the commercial banks. It is true that the State Marketing Society will have to pay interest on these loans; but the margins that are allowed on the sale of fertilisers are enough to cover the interest charges, and also the expenses to be incurred on account of hiring godowns, tranport charges, incidential charges etc. The question of margins to be allowed to the three-tier co-operative structure has been under continuous review, and Government is considering modifying it to a two-tier structure, which would enable the co-operatives to function in a more comptent manner. The co-operative marketing societies

(SRI D. B. PAWAR)

are not merely stockists of fertilisers. They are also required to undertake a number of activities to promote the use of fertilisers by cultivators.

6. The Finance Minister of the Government of India announced in his Budget Speech on the 28th February 1969 the imposition of a counterveiling Import duty at the rate of ten per cent. *ad valoremn.* We were advised that the sales of fertilisers should be temporarily suspended pending communication of the revised rates. In view of this, the sale of fertilisers within the State was suspended for a period of three days only. This is obviously what the Hon'ble Members, Shri Tirumala Devaraya and Shri Nagappa, have refferred to. The Government of India have since intimated to us the revised rates at which the fertilisers have to be sold. They have been communicated by the State Marketing Society to all the Taluks, and instructions have also been issued to release the fertilisers to the cultivators. I hope that the temporary stoppage of sales for a short period will not have caused any serious inconvenience to the cultivators. On the other hand, we are taking all steps necessary, continuously, to propagate the balanced use of fertilisers.

7. Taking these factors into consideration, I feel that it is desirable to have sufficient stocks of fertilisers—or even quantities slightly in excess of our requirements—so that the farmer is at no time faced with the problem of shortage of inputs, and driven to the black-market to obtain his requirements, as was the case a few years ago. Adequate stocks of fertilisers have, therefore, been built up, so that our farmers may not be inconvenienced at any time during the coming year due to uncertainty of either local production or short-fall in imports. We cannot be too sure that imports will continue in the same manner in the coming years. I am sure, the members would like the Government to take all steps necessary to ensure that the essential inputs required by the cultivators are made available in sufficient quantities, and at the appropriate time, at convenient points throughout the State; and we will take all steps necessary to ensure the attainment of this objective.

8. The intention of Government is to ensure that the cultivator is served by all the different agencies in a competent way. Government have now given the agency for the distribution of fertilisers to the Mysore State Agro-Industries Corporation also, in addition to the Mysore State Co-operative Marketing Society, so that the societies do not have to bear a heavy burden. Some reputed firms have also been encouraged to undertake a promotional programme for the sale of fertilisers. As already mentioned, the intention is that all the different agencies will take necessary steps to ensure that there is a continuous flow of fertilisers to the farmer in adequate quantities and in time.

Sir, a statement indicating the prices of fertilizers which were existing before and which now exists is placed on the Table of the House.*

***A copy is placed in the Mysore Legislature Library *vide* No.**

Sri H. SIDDAVEERAPPA (Harihar).—Sir, according to the Hon. Deputy Minister, a very huge sum of Rs. 23 crores and odd has been invested, for which interest charges, godown charges, transport charges and various other things will have to be paid. I would like to know what will be the total burden on the cultivator? In other words, what would be the extra amount that he has to bear on account of these charges ?

Sri D. B. PAWAR.—Sir, I have already placed that information on the Table of the House ; the Hon. Member can have a look at it.

Request for release of arrested M.Ps. and other persons at Bangalore.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ತಾವು ಹಾಗೂ ಅನೇಕ ಮಾನ್ಯ ಸದಸ್ಯರು ಈ ಸಭೆಯಲ್ಲಿ ಒಂದು ತಿಳಿ ವಾತಾವರಣ ಮಾಡುವ ವಿಷಯಗಳನ್ನು ಮಾತನಾಡಿದ್ದಾರೆ. ಮತ್ತು ನಿನ್ನೆ ದಿವಸ ಈ ಧರಣಿ ಮುಷ್ಕರದ ಸಂಬಂಧದಲ್ಲಿ ವಿಧಾನ ಸೌಧದ ಹೊರಗಡೆ ಪ್ರದರ್ಶನ ನಡೆಸಿದಂತಹ ಕೆಲವು ಮಂದಿ ಪಿ.ಎಸ್.ಪಿ. ಪಾರ್ಟಿಯವರು ಕನ್ನಡ ಚಳುವಳಿಗಾರರು ಮತ್ತು ಕೆಲವರನ್ನು ದಸ್ತಗಿರಿ ಮಾಡಿದ್ದಾರೆ. ಮತ್ತು ಸರ್ಕಾರದವರು ಅವರ ಮೇಲೆ ಕೆಲವು ಕೇಸುಗಳನ್ನು ಹಾಕಿದ್ದಾರೆ. ಈಗ ನಮ್ಮ ಮಾನ್ಯ ಪಾರ್ಲಿಮೆಂಟರಿ ಶಾಖೆಯ ಸಚಿವರೂ ಇದ್ದಾರೆ. ಅವರಲ್ಲಿಯೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಹಾಗೂ ಮಾನ್ಯ ಅಧ್ಯಕ್ಷರಲ್ಲಿಯೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಂಬಂಧದಲ್ಲಿ ಯಾರು ಯಾರನ್ನು ನಿನ್ನೆ ದಿವಸ ದಸ್ತಗಿರಿ ಮಾಡಿದ್ದಾರೆ, ಅವರನ್ನು ಬಿಡುಗಡೆ ಮಾಡಬೇಕು. ಮತ್ತು ಅವರಮೇಲೆ ಹಾಕಿರತಕ್ಕ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಚನ್ನಬಸಪ್ಪನವರು ಹೇಳಿದರು. ಇದು ಎರಡೂ ಒಂದು ದ್ವಂದ್ವ ಯುದ್ಧದ ರೀತಿಯಲ್ಲಿದೆ. ಬೆಳೆಯುವವನಿಗೂ ಉತ್ತಮ ಬೆಲೆ ಸಿಗಬೇಕು, ಅದೇ ರೀತಿ ಇನ್ನೊಂದು ಕಡೆ ಬಳಕೆದಾರರಿಗೂ, ಅವರ ಒಂದು ಎಕನಾಮಿಕ್ ಶಕ್ತಿ ಏನಿದೆ, ಆ ರೀತಿಯಲ್ಲಿ ಕೊಂಡುಕೊಳ್ಳುವ ಹಾಗೆ ಒಂದು ದರವನ್ನು ನಿಗದಿ ಮಾಡುವುದಕ್ಕೆ, ಆ ರೀತಿಯಲ್ಲಿ ಒಂದು ನೀತಿಯನ್ನು ನಿರೂಪಣೆ ಮಾಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ. ಆ ರೀತಿ ಮಾಡುವುದಕ್ಕೆ ಬಳಕೆದಾರರಿಗೆ ಸಬ್‌ಸಿಡೈಸ್ ಮಾಡಿ ಪ್ರೋತ್ಸಾಹ ಮಾಡುವುದಕ್ಕೆ ಶಕ್ತಿ ನಮಗೆ ಇದೆಯೇ? ಎಂದು ಕೇಳಿದರೆ, ಬಹುಶಃ ನಾವು ಆ ಶಕ್ತಿಯನ್ನು ಇನ್ನೂ ಮುಟ್ಟಿಲ್ಲವೆಂದು ಹೇಳಬೇಕಾಗಿದೆ. ಅವರು ಬೇರೆ ದೇಶಗಳಲ್ಲಿರತಕ್ಕ ಸನ್ನಿವೇಶಗಳನ್ನೂ ಪ್ರಸ್ತಾಪ ಮಾಡಿದರು. ಅಲ್ಲಿ ಮಾರ್ಕೆಟ್‌ನಲ್ಲಿ ಪ್ರೈಸ್ ಸ್ಟ್ರಕ್ಚರನ್ನು ಸರಿಯಾದ ರೀತಿಯಲ್ಲಿ ನಿರೂಪಣೆ ಮಾಡುತ್ತಾರೆ. ಒಂದು ಪದಾರ್ಥದ ಬೆಲೆ ಅಲ್ಲಿ ಜಾಸ್ತಿಯಾದರೆ, ಅದನ್ನು ಸರ್ಕಾರ ಸಬ್ಸಿಡೈಸ್ ಮಾಡುವುದರ ಜೊತೆಗೆ ಅಲ್ಲಿ ಇಂತಿಷ್ಟೇ ಬೆಳೆಯಬೇಕು ಎಂಬ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ರೈತ ಅಷ್ಟು ಬೆಳೆಯದೆ ಹೋದರೆ, ಅದರ ಕಾಸ್ಟನ್ನು ಕೊಡುವ ಒಂದು ಧೋರಣೆ ಅಲ್ಲಿ ಇದೆ. ಅದನ್ನು ನಮ್ಮ ದೇಶದಲ್ಲಿ ತರುವುದಕ್ಕೆ ಬಹಳ ಕಷ್ಟ.

ಇದು ಬಹಳ ಕಷ್ಟಕರವಾದ ಸಂಗತಿ. ಶ್ರೀಮಾನ್ ಚನ್ನಬಸಪ್ಪನವರು ಸ್ವಂತವಾಗಿ ಬೇಸಾಯ ಮಾಡತಕ್ಕ ವ್ಯಕ್ತಿಗಳು. ಅವರು ವ್ಯವಸಾಯದ ಬಗ್ಗೆ ಅನೇಕ ವಿಷಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ಮಾತನಾಡುತ್ತಾ ನಮ್ಮ ಬಡ್ಜೆಟ್ಟಿನಲ್ಲಿ ಶೇಕಡಾ 30 ರಷ್ಟು ಹಣ ಅಧಿಕಾರಿಗಳ ಸಂಬಳಸಾರಿಗೆಗೆ ವಿನಿಯೋಗವಾಗುತ್ತದೆ; ವ್ಯವಸಾಯದ ಪ್ರಗತಿಗೆ ಅಧಿಕಾರಿಗಳಿಂದ ಅನಾಹುತವಾಗುತ್ತದೆ ಎಂದು ಹೇಳತಕ್ಕದ್ದು ಸರಿಯಲ್ಲ. ನಮ್ಮ ದೇಶದಲ್ಲಿರತಕ್ಕ 9೭ ಪರ್ಸೆಂಟ್ ಭೂಮಿ ಏನಿದೆ ಇದು ಪ್ರಕೃತಿಯನ್ನು ಅವಲಂಬನೆ ಮಾಡಿದೆ. ಹೀಗಿರುವಾಗ ನಮ್ಮ ರಾಜ್ಯದ ಸುಮಾರು 14-15 ಜಿಲ್ಲೆಗಳು ಆಗಿಂದಾಗ್ಯೆ ಕ್ಷಾಮಕ್ಕೆ ತುತ್ತಾಗುತ್ತಾ ಇವೆ. ಇದು ಬಹಳ ಕಷ್ಟಕರವಾದ ಸಂಗತಿ. ಇದನ್ನು ಸರ್ಕಾರದವರು ಮರೆಯಬಾರದು. ಈ ಹಿನ್ನೆಲೆಯಲ್ಲಿ ಕೆಲವು ಎಡರು ತೊಡರುಗಳು ಇವೆ. ಇವುಗಳನ್ನು ರಾಜ್ಯದ ಆಡಳಿತ ಸೂತ್ರವನ್ನು ಹಿಡಿದಿರತಕ್ಕವರು ಪರಿಶೀಲನೆ ಮಾಡತಕ್ಕದ್ದು ಸೂಕ್ತ ಎಂದು ನಾನು ಹೇಳುತ್ತೇನೆ. ಇವೊತ್ತಿನ ದಿವಸ ವ್ಯವಸಾಯ ಇಲಾಖೆಯ ಬಗ್ಗೆ ಸರ್ಕಾರದವರು ಹೆಚ್ಚು ಗಮನಕೊಟ್ಟು ಇದಕ್ಕೆ ಹೆಚ್ಚು ಹಣವನ್ನು ಮೀಸಲಾಗಿಡಬೇಕು. ಕೇಂದ್ರ ಸರ್ಕಾರದಿಂದ ಬರತಕ್ಕ ಹಣ ಏನಿದೆ ಆ ಹಣವನ್ನು ವ್ಯವಸಾಯದ ಅಭಿವೃದ್ಧಿ, ಮೈನರ್ ಇರಿಗೇಷನ್ ಇವುಗಳಿಗೆ ಮೀಸಲಾಗಿಟ್ಟು ವ್ಯವಸಾಯದ ಬಗ್ಗೆ ಸಾಕಷ್ಟು ಹೆಚ್ಚಿನ ಗಮನ ಕೊಡಬೇಕೆಂದು ನಾನು ಮಾನ್ಯ ವ್ಯವಸಾಯ ಮಂತ್ರಿಗಳಲ್ಲಿ ಕಳಕಳಿಯಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀಮಾನ್ ದೇವರಾಜ್ ಅರಸ್ ಅವರು ಸ್ವಂತ ಅನುಭವದಿಂದ ಅನೇಕ ಉಪಯುಕ್ತವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಾರಿಯಾಗಿದ್ದೇನೆ. ಈಗ ಸರ್ಕಾರದವರು ಸಣ್ಣ ಸಣ್ಣ ರೈತರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಹಾಕಿಕೊಳ್ಳತಕ್ಕಂಥ ಪಾಲಿಸಿ ಪ್ರೋಗ್ರಾಂ ಬಗ್ಗೆ ನನ್ನ ವೈಯುಕ್ತಿಕವಾದ ಅಭಿಪ್ರಾಯವನ್ನು ಹೇಳುವುದಾದರೆ ಟ್ರಾಕ್ಟರುಗಳು, ಬುಲ್ಡೋಜರುಗಳು, ಪಂಪುಸೆಟ್ಟುಗಳು ಯಾವುದೇ ಸಹಾಯವನ್ನು ಸರ್ಕಾರ ಕೊಡುವುದು, 7, 8, 10 ಎಕರೆ ಜಮೀನನ್ನು ಇಟ್ಟುಕೊಂಡಿರತಕ್ಕ ಸಣ್ಣ ಸಣ್ಣ ಹಿಡುವಳಿದಾರರಿಗೆ ಸರಿಯಾಗಿ ದೊರೆಯುತ್ತಿಲ್ಲ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಸರ್ಕಾರದವರು ತಮ್ಮ ನೀತಿಯನ್ನು ಬದಲಾಯಿಸದಿದ್ದರೆ ಸರ್ಕಾರ ರೈತರಿಗೆ ಕೊಡತಕ್ಕಂಥ ಸಹಾಯ ಸೌಲಭ್ಯಗಳು ಕೆಲವೇ ಜನಗಳಿಗೆ ಮೀಸಲಾಗಿ ಹೋಗುತ್ತದೆ. ಆದ್ದರಿಂದ ನಿಜವಾಗಿಯೂ ಸರ್ಕಾರದವರು ಈ ಕಡೆ ಗಮನ ಕೊಡಬೇಕೆಂದು ಸರ್ಕಾರದ ಗಮನವನ್ನು ನಾನು ಸೆಳೆಯುತ್ತಿದ್ದೇನೆ. ಕಮ್ಯುನಿಟಿ ವೆಲ್ ತೋಡಿಸತಕ್ಕ ಬಗ್ಗೆ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಸಣ್ಣ ಸಣ್ಣ ಹಿಡುವಳಿದಾರರಿಗೆ, ಎಂದರೆ 2-3 ಎಕರೆ, 1 ಎಕರೆ, ಅರ್ಧ ಎಕರೆ ಜಮೀನು ಇರತಕ್ಕಂಥ ರೈತರಿಗೆ ಬಾವಿಯನ್ನು ತೆಗೆಯತಕ್ಕಂಥ ಶಕ್ತಿ ಇರುವುದಿಲ್ಲ. ಆದ್ದರಿಂದ ಇಡೀ ರಾಜ್ಯದಲ್ಲಿ ಒಂದು ಮಾಸ್ಟರ್ ಪ್ಲಾನ್ ತಯಾರುಮಾಡಿ ಸಣ್ಣ ಹಿಡುವಳಿದಾರರಿಗೆ ಅನುಕೂಲವಾಗುವಂತೆ ಕಮ್ಯುನಿಟಿ ವೆಲ್‌ಗಳನ್ನು ತೋಡಿಸತಕ್ಕಂಥಾದ್ದು ಸೂಕ್ತ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದಕ್ಕೆ ಸರ್ಕಾರದವರು ಗಮನ ಕೊಡಬೇಕು. ಇದರಿಂದ ಸಣ್ಣ ಸಣ್ಣ ಹಿಡುವಳಿದಾರರಿಗೆ ಆಗತಕ್ಕಂಥ ಅನುಕೂಲ ಬಹಳ ಇದೆ.

ಪಂಪುಸೆಟ್ಟುಗಳಿಗೆ 10 ಪರ್ಸೆಂಟ್ ಅಡೀಷನಲ್ ಟ್ಯಾಕ್ಸನ್ನು ಕೇಂದ್ರ ಸರ್ಕಾರದವರು ಹಾಕುತ್ತಾರೆ ಎಂದು ಪ್ರಪ್ರೋಜಲ್ ಇದೆ. ಇದು ರೈತರಿಗೆ ಕಷ್ಟಕರವಾದದ್ದು, ಇದು ಸರಿಯಾದ್ದಲ್ಲ ಎಂದು ನಾನು ಹೇಳುತ್ತೇನೆ. ಏತಕ್ಕೆಂದರೆ ಪಂಪುಸೆಟ್ಟುಗಳಿಂದ ಸಣ್ಣಪುಟ್ಟ ರೈತರಿಗೆ ಹೆಚ್ಚಿಗೆ ಅನುಕೂಲವಾಗುವ ಸಂದರ್ಭದಲ್ಲಿ ಇದಕ್ಕೆ 10 ಪರ್ಸೆಂಟ್ ಅಡೀಷನಲ್ ಟ್ಯಾಕ್ಸ್ ಹಾಕತಕ್ಕದ್ದು

ಸರಿಯಾದ್ದಲ್ಲ. ಇದರಿಂದ ರೈತರಿಗೆ ಉತ್ತೇಜನವನ್ನು ಕೊಟ್ಟಂತಾಗುವುದಿಲ್ಲ. ಇದನ್ನು ಕೇಂದ್ರ ಸರ್ಕಾರದವರು ಕೈಬಿಡಬೇಕು, ಇದು ರೈತರಿಗೆ ಉತ್ತೇಜನವನ್ನು ಕೊಡತಕ್ಕಂಥ ಧಾಟಿಯಲ್ಲಿ ಇಲ್ಲ. ಇದು ತೀರ ಖಂಡನೀಯ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಫರ್ಟಿಲೈಜರ್ಸ್ ರೇಟು 1960ನೇ ಇಸವಿಯಲ್ಲಿ ಎಷ್ಟಿತ್ತು ಅದರ ಎರಡು ಪಟ್ಟು ಹೆಚ್ಚಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದರಲ್ಲಿ ಮಾರ್ಜಿನಲ್ ಪ್ರಾಫಿಟ್ ಬಹಳ ಜಾಸ್ತಿಯಾಗಿದೆ. ಫರ್ಟಿಲೈಜರ್ ಬೆಲೆ ತುಂಬಾ ಜಾಸ್ತಿಯಾಗಿದೆ. ಇದನ್ನು ರೈತರಿಗೆ ಮಾರಾಟಮಾಡಬೇಕಾದರೆ ಬಹಳ ಹಂತಗಳನ್ನು ಇಟ್ಟಿದ್ದಾರೆ. ನಾನಾ ಹಂತಗಳಲ್ಲಿ ಒಂದು ಟನ್ನಿಗೆ 90—95 ರೂ. ಲಾಭಾಂಶವನ್ನು ಇಟ್ಟಿದ್ದಾರೆ. ಇದರಲ್ಲಿ ಕೆಲವು ವೆಚ್ಚಗಳನ್ನು ಕಡಿಮೆ ಮಾಡುವುದಕ್ಕೆ ಸಾಧ್ಯ ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಬೇಕು. ಈ ಫರ್ಟಿಲೈಜರಿಗೆ ಸಬ್ಸಿಡಿ ಕೊಟ್ಟು ಸ್ವಲ್ಪ ಕಡಿಮೆ ದರದಲ್ಲಿ ರೈತರಿಗೆ ಅದು ದೊರೆಯುವಂತೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಇದರಿಂದ ರೈತರಿಗೆ ಹೆಚ್ಚಿನ ಹೊರೆಬೀಳುತ್ತದೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಪರಿಶೀಲನೆಮಾಡಿ ಫರ್ಟಿಲೈಜರ್ ಮಾರಾಟದಲ್ಲಿ ಇರತಕ್ಕಂಥ ಏರುಪೇರು, ಲೋಪದೋಷಗಳನ್ನು ಸರಿಪಡಿಸಿ ರಾಸಾಯನಿಕ ಗೊಬ್ಬರ ರೈತರಿಗೆ ಸ್ವಲ್ಪ ಕಡಿಮೆ ದರದಲ್ಲಿ ಸುಲಭವಾಗಿ ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮಾನ್ ಚನ್ನಬಸಪ್ಪನವರು ಮಾತನಾಡುತ್ತಾ ವ್ಯವಸಾಯ ಕೈಗಾರಿಕೆಗೆ ಸಂಬಂಧಪಟ್ಟ ಹಾಗೆ ಸ್ವಲ್ಪ ಪ್ರೈಜ್ ಸ್ಟ್ರಕ್ಚರನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಸರ್ಕಾರದವರು ಆಲೋಚನೆ ಮಾಡಬೇಕು ಎಂದು ಹೇಳಿದರು. ಈಗ ಹೈಬ್ರಿಡ್ ಮೇಜ್ ಮುಸುಕಿನ ಜೋಳವನ್ನು ರೈತರು ಬೆಳೆಯುತ್ತಾರೆ. ಅವರೆ ಅದಕ್ಕೆ ಸರಿಯಾದ ಬೆಲೆ ಇವೊತ್ತು ಸಿಕ್ಕುತ್ತಾ ಇಲ್ಲ. ಇವೊತ್ತು ಒಂದು ಕ್ವಿಂಟಾಲಿಗೆ 45–50 ರೂಪಾಯಿಗಳ ಬೆಲೆ ಇದೆ. ರೈತರಿಗೆ ಲಾಭದಾಯಕವಾದ ಬೆಲೆಯನ್ನು ಕೊಡತಕ್ಕಂತ ಸನ್ನಿವೇಶ ಇಲ್ಲ. ರೈತರಿಗೆ ಒಂದು ಒಳ್ಳೆಯ ಬೆಲೆಯನ್ನು ಕೊಡಬೇಕೆಂಬ ದೃಷ್ಟಿಯಿಂದ ಸರ್ಕಾರದವರು ಒಂದು ಸ್ಟಾರ್ಚ್ ಉತ್ಪಾದನೆ ಮಾಡುವ ಕೈಗಾರಿಕೆಯನ್ನು ತೆರೆಯತಕ್ಕ ಆಲೋಚನೆಯನ್ನು ಮಾಡುತ್ತಿದ್ದಾರೆಂದು ಗೊತ್ತಾಗಿದೆ. ಇದರ ಬಗ್ಗೆ ಆಗತಕ್ಕಂಥ ಕೈಗಾರಿಕೆಯನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಇವೊತ್ತು ಹೈಬ್ರಿಡ್ ಜೋಳ, ಹೈಬ್ರಿಡ್ ಮೇಜ್ ಇವುಗಳನ್ನು ಹಾಸನ ಕೋಲಾರ ಮುಂತಾದ ಕಡೆಗಳಲ್ಲಿ ಬೆಳೆಯುವುದಕ್ಕೆ ಪೈಪೋಟಿ ನಡೆಯುತ್ತಿದೆ, ಇದನ್ನು ಬೇರೆ ದೇಶಗಳಿಗೆ ಎಕ್ಸ್‌ಪೋರ್ಟ್ ಮಾಡತಕ್ಕ ವಿಷಯದಲ್ಲಿ ಸ್ವಲ್ಪ ಗೊಂದಲವಿದೆಯೆಂದು ಕಾಣುತ್ತದೆ. ಇದರಿಂದಾಗಿ ಹೈಬ್ರಿಡ್ ಮೇಜ್‌ಗೆ ದೊರೆಯಬೇಕಾಗಿರತಕ್ಕಂತ ರೇಟು ಸರಿಯಾಗಿ ದೊರೆಯುತ್ತಾ ಇಲ್ಲ ಎಂದು ಆಪಾದನೆ ಇದೆ. ಆದ್ದರಿಂದ ಇದರ ಎಕ್ಸ್‌ಪೋರ್ಟ್ ಪಾಲಿಸಿಯನ್ನು ಬದಲಾವಣೆ ಮಾಡಿದರೆ ಕೆಲವು ಸಮಸ್ಯೆಗಳು ಬಗೆಹರಿಯಬಹುದು ಎಂದು ಕಾಣುತ್ತದೆ.

ಈಗ ಹಾಸನದಲ್ಲಿರುವ ಕೋಲ್ಡ್ ಸ್ಟೋರೇಜ್ ದಾಸ್ತಾನು ಗೃಹದ ಕೆಪಾಸಿಟಿ ಸ್ವಲ್ಪ ಕಡಿಮೆ ಇದೆ. ಅದು ಸಾಕಾಗುವುದಿಲ್ಲ ಅದರ ಅಗತ್ಯತೆ ಇನ್ನೂ ಹೆಚ್ಚಾಗಿದೆ. ಆದ್ದರಿಂದ ಆ ಕೋಲ್ಡ್ ಸ್ಟೋರೇಜ್ ಗೃಹದ ಕೆಪಾಸಿಟಿಯನ್ನು 20 ಸಾವಿರ ಟನ್ನಿಗೆ ಏರಿಸಬೇಕು. ಇದರಿಂದ ರೈತರಿಗೆ ಆಗತಕ್ಕಂಥ ಅನಾಹುತವನ್ನು ತಪ್ಪಿಸುವುದಕ್ಕೆ ಸಾಧ್ಯವಿದೆ.

ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿಯನ್ನು ಪ್ರತಿ ಜಿಲ್ಲೆಯಲ್ಲಿಯೂ ಸ್ಥಾಪನೆ ಮಾಡಬೇಕು. ಇವೊತ್ತು ಅಗ್ರಿಕಲ್ಚರಲ್ ಇಂಜಿನಿಯರುಗಳು ತೃಪ್ತಿಕರವಾಗಿ ಕೆಲಸಮಾಡುತ್ತಾ ಇಲ್ಲ. ಹಾಸನದಲ್ಲಿ ಒಬ್ಬರು ಅಸಿಸ್ಟೆಂಟ್ ಇಂಜಿನಿಯರು ಇದ್ದಾರೆ. ಆ ಸಬ್‌ಡಿವಿಜನ್ನಿನಲ್ಲಿ ಅವರ ಕೆಲಸ ಏನು ಎಂದರೆ ಒಂದು ಬುಲ್ಡೋಜರ್ ಇಟ್ಟುಕೊಂಡು ಅದನ್ನು ಬೇಕಾದವರಿಗೆ ಸಪ್ಲೈ ಮಾಡುವುದು. ಒಂದು ಬುಲ್ಡೋಜರನ್ನು ಆ ಡಿವಿಜನ್‌ನಲ್ಲಿರತಕ್ಕ ರೈತರಿಗೆ ಸಪ್ಲೈ ಮಾಡುವುದಕ್ಕೆ ಒಬ್ಬ ಅಸಿಸ್ಟೆಂಟ್ ಇಂಜಿನಿಯರ ಅವಶ್ಯಕತೆ ಇದೆಯೋ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ದೃಷ್ಟಿಯಿಂದ ಪ್ರತಿಯೊಂದು ಜಿಲ್ಲೆಯಲ್ಲಿರತಕ್ಕ ಅಗ್ರಿಕಲ್ಚರಲ್ ಇಂಜಿನಿಯರುಗಳಿಗೆ ಬುಲ್ಡೋಜರುಗಳನ್ನು, ಬೋರ್‌ವೆಲ್ ಮೆಷಿನ್‌ಗಳನ್ನು ಒದಗಿಸಿ, ಅವರಿಗೆ ಸಾಕಷ್ಟು ಮೆಟೀರಿಯಲ್ಸ್ ಒದಗಿಸಿ ಅವರಿಗೆ ಸಾಕಷ್ಟು ಕೆಲಸವನ್ನು ಕೊಡಬೇಕು. ಇಲ್ಲದೇ ಹೋದರೆ ಬುಲ್ಡೋಜರುಗಳು ಮತ್ತು ಬೋರ್‌ವೆಲ್ ಮೆಷೀನ್‌ಗಳಿಂದ ಏನು ಗುರಿಯನ್ನು ಸಾಧನೆ ಮಾಡಬೇಕೆಂದು ಉದ್ದೇಶ ಇಟ್ಟುಕೊಂಡಿದೆಯೋ ಅದನ್ನು ಸಾಧನೆ ಮಾಡುವುದಕ್ಕೆ ಆಗುವುದಿಲ್ಲ. ಹಾಸನ ಜಿಲ್ಲೆಯಲ್ಲಿ ಒಬ್ಬರು ಡೆಪ್ಯುಟಿ ಡೈರೆಕ್ಟರು ಇದ್ದಾರೆ. ನಾನು ಕಳೆದ 10 ವರ್ಷಗಳಿಂದ ಅವರನ್ನು ನೋಡುತ್ತಿದ್ದೇನೆ. ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಕೂಡ ಒಂದು ನಿರ್ಣಯ ಮಾಡಿದ್ದಾರೆ, ಆ ಅಧಿಕಾರಿಗಳು ತಮ್ಮ ಕೆಲಸವನ್ನು ಮಾಡುವುದರಲ್ಲಿ ಅಸಮರ್ಥರಾಗಿದ್ದಾರೆಂದು.

(ಶ್ರೀ ಹೆಚ್. ಡಿ. ದೇವೇಗೌಡ)

11-30 A.M.

ಇನ್ನು ಏರಿಯಾ ಡೆವಲಪ್‌ಮೆಂಟ್ ಸ್ಕೀಮನ್ನು ಹಾಸನ ಜಿಲ್ಲೆಗೆ ಕೊಡಬೇಕು. ಚನ್ನರಾಯಪಟ್ಟಣ, ಅರಸೀಕೆರೆ, ಹೊಳೇನರಸೀಪುರ, ಹಾಸನ ಜಿಲ್ಲೆಯ ಹಳೇಬೀಡು ಒಂದು ಹೋಬಳಿ—ಹೀಗೆ ನಾಲ್ಕೂವರೆ ತಾಲ್ಲೂಕುಗಳು ಹಾಸನ ಜಿಲ್ಲೆಯಲ್ಲಿ ಯಾವಾಗಲೂ ಬರಗಾಲಕ್ಕೆ ತುತ್ತಾಗುತ್ತವೆ. ನಮ್ಮ ಜಿಲ್ಲೆಯ ದುರ್ದೈವವೆಂದು ಹೇಳಿದರೆ ತಪ್ಪಾಗಲಾರದು. ಇವತ್ತು ಚಿತ್ರದುರ್ಗ, ಕೋಲಾರ, ಮಂಡ್ಯ ಜಿಲ್ಲೆಗಳಲ್ಲಿ ಅಲ್ಲಿನ ಆಗ್ರಿಕಲ್‌ಚರಲ್ ರೀಫೈನಾನ್ಸಿಂಗ್ ಕಾರ್ಪೊರೇಷನ್ ಮೂಲಕ ಹೊಸ ಸ್ಕೀಮುಗಳನ್ನು ಇಂಪ್ಲಿಮೆಂಟ್ ಮಾಡುವ ಕಾಲಕ್ಕೆ ಅಲ್ಲಿನ ಸಮಸ್ಯೆಗಳ ಕಡೆಗೆ ಸರ್ಕಾರದವರು ಗಮನಹರಿಸಿದ್ದಾರೆ. ಇದುವರೆಗೆ ಈ ತಾಲ್ಲೂಕುಗಳಲ್ಲಿ ಆಗಿರುವ ಅನಾಹುತಗಳನ್ನು ಕಳೆದ ರೈನ್‌ಫಾಲ್ ಅಂಕಿಅಂಶಗಳನ್ನು ಇಟ್ಟುಕೊಂಡು ನೋಡಿದರೆ, ಈಗ ಕ್ಷಾಮಕ್ಕೆ ತುತ್ತಾಗುತ್ತಿರುವ ಪ್ರದೇಶಗಳಲ್ಲಿ ಏರಿಯಾ ಡೆವಲಪ್‌ಮೆಂಟ್ ಸ್ಕೀಮನ್ನು ಇಂಪ್ಲಿಮೆಂಟ್ ಮಾಡುವ ಬಗ್ಗೆ ತಕ್ಕ ಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕು, ಸಂಬಂಧಪಟ್ಟ ಅಧಿಕಾರಿಗಳು ಅಂದರೆ, ಡಿವಿಷನಲ್ ಕಮಿಷನರು ಡೆಪ್ಯೂಟಿ ಕಮಿಷನರ್ ಅವರು ಈ ಏರಿಯಾ ಡೆವಲಪ್‌ಮೆಂಟ್ ಸ್ಕೀಮನ್ನು ಮುಂದಿನ ವರ್ಷ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಅದರ ಬಗ್ಗೆ ಅವರಿಂದ ವರದಿಯೂ ಬಂದಿದೆ. ನಾನು ಮೊದಲೇ ತಿಳಿಸಿದಹಾಗೆ ಈ ವ್ಯವಸಾಯದ ಪಾಲಿಸಿ, ಪ್ರೋಗ್ರಾಂ, ಪ್ಲಾನಿಂಗ್ ಏನಿದೆಯೋ ಅದನ್ನು ಜಾಗ್ರತೆಯಾಗಿ ಇಂಪ್ಲಿಮೆಂಟ್ ಮಾಡಬೇಕು. ಏಕೆಂದರೆ ನಮಗೆ ಇರತಕ್ಕ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ಸೇಕಡ 92 ರಷ್ಟು ಜನ ಭೂಸ್ವಾಮ್ಯವುಳ್ಳವರು ನೇಚರ್ ಮೇಲೆ ಡಿಪೆಂಡ್ ಆಗಬೇಕಾಗಿದೆ. ಅದಕ್ಕಾಗಿ ಇದರ ಬಗ್ಗೆ ಒಂದು ನೀತಿಯನ್ನು ಅನುಸರಿಸಿ ಬಡ ರೈತರಿಗೆ ಈ ಸ್ಕೀಮಿನಿಂದ ಹೆಚ್ಚು ಅನುಕೂಲವಾಗಲು ತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಕೂಡಲೇ ಮಾಡಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಎಸ್. ನಾಡಕರ್ಣಿ (ಅಂಕೋಲ).—ಅಧ್ಯಕ್ಷರೇ, ಡಿಮ್ಯಾಂಡ್ ನಂ. 20 ರಲ್ಲಿ ಆಗ್ರಿಕಲ್‌ಚರಲ್ ಸಲುವಾಗಿ 11 ಕೋಟಿ 24 ಲಕ್ಷ 39 ಸಾವಿರ ರೂಪಾಯಿಗಳನ್ನು ಕೇಳಿದ್ದಾರೆ. ಇದರಲ್ಲಿ ಮೀನುಗಾರಿಕೆ ವ್ಯವಸಾಯದ ಬಗ್ಗೆ ಕೇವಲ 90 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ನಮ್ಮ ಸರ್ಕಾರ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೂ ಸಹ ಈ ಖಾತೆಗೆ ಅಷ್ಟು ಜವಾಬ್ದಾರಿ ಹೊರಲಿಕ್ಕೆ ಸಾಕಾಗುವುದಿಲ್ಲ. ಇಷ್ಟು ದೊಡ್ಡ ಮೊತ್ತದಲ್ಲಿ ಈ ಖಾತೆಗೆ ಖರ್ಚುಮಾಡುವುದು ಕೇವಲ 90 ಲಕ್ಷ ರೂಪಾಯಿಗಳು ಮಾತ್ರ. ನಮ್ಮಲ್ಲಿ 200 ಮೈಲಿಗಳಷ್ಟು ಕಿನಾರೆ ಇದೆ. ಬೇಕಾದಷ್ಟು ಇನ್‌ಲ್ಯಾಂಡ್ ಫಿಷರೀಸ್ ಅಭಿವೃದ್ಧಿಯಾಗುವ ಸ್ಕೋಪ್ ಇದೆ. ಬಹಳ ಉದ್ದವಾದ ಮೀನುಗಳು ಸಿಗುತ್ತವೆ. ಆದರೆ ನಮಗೆ ಕೊಟ್ಟಿರುವ ಹಣ 94 ಲಕ್ಷ ರೂಪಾಯಿಗಳು ಮಾತ್ರ. ಇದರಲ್ಲಿ ಸಿಬ್ಬಂದಿ ಖರ್ಚು ಮತ್ತು ತುಂಗಭದ್ರಾದಲ್ಲಿ ಒಂದು ನೈಲಾನ್‌ನೆಟ್ ಸೆಂಟರ್ ಮಾಡುವುದಕ್ಕೆ 50 ಲಕ್ಷ ರೂಪಾಯಿಗಳು ಹೋಗುತ್ತದೆ. ಉಳಿದುದು ಮಾತ್ರ ಮೀನಿನ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಬೇಕಾಗುತ್ತದೆ. ಇದನ್ನು ನೋಡಿದರೆ ಬಹಳ ದುಃಖದ ಪ್ರಸಂಗ ಬರುತ್ತದೆ. 94 ಲಕ್ಷ ರೂಪಾಯಿಗಳನ್ನು ಖರ್ಚುಮಾಡುವುದರಲ್ಲಿ ಅಷ್ಟು ಮೀನಿನ ಅಭಿವೃದ್ಧಿಯಾಗಲಾರದು. ನಮ್ಮಲ್ಲಿ 200 ಮೈಲಿಗಳಷ್ಟು ಕರಾವಳಿ ಇದೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ 100 ಮೈಲಿ ಕರಾವಳಿ ಪ್ರದೇಶದಲ್ಲಿ ಸುಮಾರು 150 ಮೀನು ವ್ಯವಸಾಯ ಮಾಡತಕ್ಕ ಹಳ್ಳಿಗಳಿವೆ. ಅಲ್ಲಿ 40 ಸಾವಿರ ಮೀನುಗಾರಿಕೆ ಜನಸಂಖ್ಯೆ ಇದೆ. ಅಲ್ಲಿ ಬೇರೆ ಉಪಕಸುಬು ಮಾಡುವವರು ಅಂದರೆ ಮೀನುಗಳನ್ನು ಒಣಗಿಸಿ ರಂಪಣಿ ಮಾಡುವವರು ಸೇರಿದರೆ ಒಟ್ಟು 60 ಸಾವಿರ ಜನಸಂಖ್ಯೆಯಾಗುತ್ತದೆ. ಖಾಸಗಿಯಾಗಿ ನಮ್ಮ ಕೆಲಸಗಾರರನ್ನು ಕೂಡಿಸಿದರೆ, ಅದರ ಬಗ್ಗೆ ಅಂಕಿ ಅಂಶಗಳನ್ನು ನೋಡುವುದಾದರೆ, ಸರ್ಕಾರದಲ್ಲಿ ಕೆಲಮಟ್ಟಿಗೆ 1956ರಿಂದ ಲೆಕ್ಕ ಸಿಗುತ್ತದೆ. ಇದನ್ನು ನಾವು ವಿಚಾರಮಾಡುವುದಕ್ಕೆ ಹೋದರೂ ಒಟ್ಟು ಜನಸಂಖ್ಯೆ 7 ಲಕ್ಷದಲ್ಲಿ ಒಂದು ಲಕ್ಷ ಜನರಾದರೂ ಈ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಮೀನು ಪೌಷ್ಟಿಕವಾದ ಆಹಾರ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನನ್ನು ತಿನ್ನುವುದರಿಂದ, ಅಲ್ಲಿರುವವರನ್ನು ಬುದ್ಧಿವಂತಿಕೆ ಜನರು ಎಂಬುದಾಗಿ ಹೇಳುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನು ಬಹು ಮುಖ್ಯವಾದ ಆಹಾರ. ಅಲ್ಲಿ ಹಾಲು ಕಡಿಮೆ. ನಮಗೆ ಹಾಲು ಅಷ್ಟಾಗಿ ಸಿಗುವುದಿಲ್ಲ. ಒಬ್ಬ ಕವಿ ಒಂದು ಮಾತನ್ನು ಹೇಳಿದ್ದಾನೆ. ಅದು ಈ ರೀತಿ ಇದೆ ಕುಚ್ಚಿಗೆ ಅಕ್ಕಿ ಮೀನಿನ ಪಳದಿ, ಕಾರವಾರ ಜನಕೆಲ್ಲಾ, ಈ ತರದೂಟಾ ಸ್ವರ್ಗದ ಮೇಲೂ ದೇವತೆಗಳಿಗಿಲ್ಲಾ, ಇದರ ಮಹತ್ವ ಹೇಳಿದರೆ ಆಯಿತು. ಇದರ ಅರ್ಥ ಏನೆಂದರೆ, ಉತ್ತರ ಕನ್ನಡ ಜನರಿಗೆ ಮೀನಿನ ವ್ಯವಸಾಯ ಮಹತ್ವದ್ದು ಇದೆ. ಅಲ್ಲಿ ಮೀನು ವ್ಯವಸಾಯ

ಮಾಡುವವರೇ ಹೆಚ್ಚು. ಇದಕ್ಕೆ ಬಂದರು ಸೌಕರ್ಯ ಬೇಕು. ನಮ್ಮ ಜಿಲ್ಲೆಯವಾಟ್ಟಿಗೆ ಏನು ಮಾಡಿದ್ದಾರೆ ಅಂದರೆ ಅದನ್ನು ಹೇಳುವುದಕ್ಕೆ ಬಹಳ ದುಃಖವಾಗುತ್ತದೆ. I can say it is too slow and miserable ಇದು 1956 ರಿಂದ ಹೀಗೆಯೇ ನಡೆಯುತ್ತಿದೆ. ಯಾವ ಕೆಲಸವೂ ಪೂರ್ತಿಯಾಗಿಲ್ಲ. ಇವರ ಬಗ್ಗೆ ಕಂಟ್ರಾಕ್ಟ್ ಇಲ್ಲ. ಹಣದ ಕೊರತೆ ಎಂದು ಹೇಳುತ್ತಾರೆ. ಪ್ಲಾನ್ ಮತ್ತು ಎಸ್ಟಿಮೇಟ್ ಇಲ್ಲ. ಈಗ ಪ್ಲಾನ್ ಮತ್ತು ಎಸ್ಟಿಮೇಟ್ ಆದರೆ ಅದನ್ನು ಪುನಃ ರಿವೈಸ್ ಮಾಡಬೇಕಾಗುತ್ತದೆಂದು ಹೇಳುತ್ತಾರೆ. ಹೀಗೆ ವಗೈರೆ ವಗೈರೆ ನೆವ ಹೂಡಿ ಇದನ್ನು ಮುಂದಕ್ಕೆ ದೂಡುವ ಹಾಗೆ ಇದೆ. ಅಲ್ಲಿ ಮಾರ್ಕೆಟಿಂಗ್ ವ್ಯವಸ್ಥೆ ಬೇಕು. ರೈಲು ವ್ಯವಸ್ಥೆಯೂ ಸಹ ಇಲ್ಲ. ನಮ್ಮಲ್ಲಿ ವಿಶೇಷವಾಗಿ ಮೀನನ್ನು ಹಿಡಿದು ಅದನ್ನು ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾಂ ಮುಂತಾದ ಪ್ರದೇಶಗಳಿಗೆ ಕಳುಹಿಸಿಕೊಡುವುದಕ್ಕೆ ಸಾಕಷ್ಟು ಅನುಕೂಲತೆಗಳಿಲ್ಲ. ಅದನ್ನು ಬರೀ ಒಂದು ಮೋಟಾರ್‌ಗಳಲ್ಲಿ ನಡೆಸುವುದಕ್ಕಾಗುವುದಿಲ್ಲ. ತುಟ್ಟಿ ಆಗುತ್ತದೆ. ಅದಕ್ಕಾಗಿ ರೈಲ್ವೆ ಮಾರ್ಗ ಇದ್ದರೆ ಸುಲಭವಾಗುತ್ತದೆ. ಮದ್ರಾಸ್‌ನಿಂದ ಬೆಂಗಳೂರಿಗೆ ಅದನ್ನು ಸಲಭವಾಗಿ ಕಳುಹಿಸುವುದಕ್ಕೆ ತಕ್ಕ ವ್ಯವಸ್ಥೆಯನ್ನು ಈಗಾಗಲೇ ಮಾಡಿರುತ್ತಾರೆ. ಆದರೆ ಮಂಗಳೂರಿನಿಂದ ಇಲ್ಲಿಗೆ ತರುವ ವ್ಯವಸ್ಥೆ ಇಲ್ಲ. ಮೀನುಗಾರಿಕೆ ವ್ಯವಸಾಯ ಅಭಿವೃದ್ಧಿಯಾಗಬೇಕೆಂದು ಹೇಳುತ್ತಾರೆ. ಆದರೆ ರೈಲ್ವೆ ಪ್ರಗತಿ ನೂರು ವರ್ಷಗಳಿಂದಲೂ ಹಾಗೆಯೇ ಇದೆ. ಇದರ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳು ಬಹಳವಾಗಿ ಹೇಳುತ್ತಾರೆ. ಕಾರವಾರ ಬಂದರಿನ ಉದ್ಘಾಟನೆ ಮಾಡಲು ಮಾನ್ಯ ಮುಖ್ಯ ಮಂತ್ರಿಗಳು, ಅದರಲ್ಲಿಯೂ ಬಂದರು ಖಾತೆ ಮಂತ್ರಿಗಳು ಹೋದಾಗ ನಮ್ಮಲ್ಲಿ ಬೇಸತ್ತ ಜನರು ಏನು ಹೇಳುತ್ತಿದ್ದಾರೆಂದರೆ, ಅದು ಹೀಗಿದೆ ಆರಂಭವಾಯ್ತು ಬಂದರಿನ ನಿರ್ಮಾಣ, ಮುಗಿಸಲಿಕ್ಕೆ ಬೇಕಾಗುವುದು ಶತಮಾನ. ಆ ತನಕ ಬಂದುಬಿಡುವುದು ರೈಲುಗಾಡಿ, ಈ ಮಾತು ಸುಳ್ಳಲ್ಲ, ತುಸು ಕಾದು ನೋಡಿ, ಇನ್ನು ಕಾರವಾರ ರೈಲು ಬರುವ ವಿಷಯದಲ್ಲಿ ಜನ ಬೇಜಾರು ಬಿದ್ದು ಒಂದು ಮಾತನ್ನು ಹೀಗೆ ಹೇಳಿದ್ದಾರೆ. ಅರಬೈಲ ಘಟ್ಟ ಇಳಿದಿದೆ ರೈಲು ಬಂಡಿ, ಕಾಂಗ್ರೆಸ್ ಪುಡಾರಿಗಳು ಹಂಚಿದರು ತಿಂಡಿ, ಕಾರವಾರಕ್ಕೆ ಬಂದು ಮುಟ್ಟುವುದು ನಾಳೆ ಎಲ್ಲರೂ ಜೋರಾಗಿ ತಟ್ಟಿ ಚಪ್ಪಾಳೆ'. ಈ ತರಹದಲ್ಲಿ ದುಃಖದಾಯಕವಾಗಿ ನಮ್ಮ ಕಡೆಯಲ್ಲಿ ಬಂದರು ಹಾಗೂ ರೈಲ್ವೆ ಪ್ರಗತಿ ನಡೆಯುತ್ತಿದೆ.

ಇನ್ನು ಮೀನುಗಾರಿಕೆಯಲ್ಲಿ ನಾವು ಆಧುನಿಕವಾಗಿ ಮೀನಿನ ವ್ಯವಸಾಯ ನಡೆಸಬೇಕಾದರೆ ಶಿಕ್ಷಣ ಬೇಕು. Modern technical education in Fisheries is most important. ಇಂಗ್ಲೆಂಡ್ ಐರ್‌ಲ್ಯಾಂಡ್‌ನಲ್ಲಿ ಮೀನುಗಾರಿಕೆ ವ್ಯವಸಾಯ ಮಾಡುವುದಕ್ಕೆ ಹೊಸದಾಗಿ ಯೋಜನೆಗಳನ್ನು ಮಾಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಿ. ಅದರಲ್ಲಿ ಪ್ರಗತಿ ಪಡೆದು ಮೀನಿನ ಉತ್ಪನ್ನವನ್ನು ಹೆಚ್ಚು ಮಾಡಬೇಕು. ಇದಕ್ಕೆ ಆರ್ಥಿಕ ಪರಿಸ್ಥಿತಿ ಸುಧಾರಿಸುವವರು ಬೇಕಾಗಿದ್ದಾರೆ. ಆದ್ದರಿಂದ ನಮ್ಮ ಮೀನುಗಾರಿಕೆ ಮಂತ್ರಿಗಳಿಗೆ ಹೇಳುವುದೇನೆಂದರೆ, ಫಿಷರೀಸ್ ಕಾಲೇಜಿನಲ್ಲಿ ಮಂಗಳೂರಿನಲ್ಲಿ ಹುಡುಗರನ್ನು ತೆಗೆದುಕೊಳ್ಳಬೇಕಾದರೆ, ವಿಶೇಷವಾಗಿ ಲಕ್ಷ್ಯ ಕೊಡಬೇಕು. ಅವರಿಗೆ ನೌಕರಿ ಕೊಡುವ ಆಶ್ವಾಸನೆ ಕೊಡಬಾರದು ಎಂಬುದಾಗಿ ಸ್ಪಷ್ಟವಾಗಿ ಹೇಳಬೇಕು. ಯಾವ ಪ್ರಕಾರ ತುಂಗಭದ್ರಾ ಡ್ಯಾಂ ಸ್ಕೀಂ ಉಂಟೋ ಆ ರೀತಿ ಈ ಸ್ಕೀಂ ಆಗಿದೆ. ಇದರ ಬಗ್ಗೆ ಎಲ್ಲಾ ಸೌಲಭ್ಯಗಳನ್ನೂ ಕೊಡುವ ಹಾಗೆ ನೋಡಬೇಕು. ಮೀನುಗಾರಿಕೆ ಕಾಲೇಜು ಬಗ್ಗೆ ಒಂದು ಮಾತನ್ನು ನಮ್ಮ ಜನ ಹೇಳಿದ್ದಾರೆ. ಅದು ಈ ರೀತಿ ಇದೆ. 'ಇದ ನೋಡು, ಮೀನುಗಾರಿಕೆ ಕಾಲೇಜು, ಡಿಗ್ರಿ ಪಡೆದವರೆಲ್ಲ ಬಹಳ ನಾಜೂಕು, ಆಫೀಸಿನಲ್ಲಿ ಇವರ ಕುರ್ಚಿಗಳು ಭದ್ರ, ಇವರ ಮುಖ ನೋಡಿಲ್ಲ, ಭೀಕರ ಸಮುದ್ರ.' ಮುಖ್ಯವಾಗಿ ಆಸ್ತಿ ಇರುವವರಿಗೆ ಮತ್ತು ನೌಕರಿ ಹುಡುಕುವವರಿಗೆ ಆ ಕಾಲೇಜಿನಲ್ಲಿ ಶಿಕ್ಷಣ ಕೊಡುವ ಪ್ರವೃತ್ತಿಯಾಗದಂತೆ ನೋಡಿಕೊಳ್ಳಬೇಕು.

[MR. DEPUTY SPEAKER in the Chair]

ಇನ್ನು ರೆಗ್ಯುಲೇಟೆಡ್ ಮಾರ್ಕೆಟಿಂಗ್ ಕಮಿಟಿ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಮೀನು ವ್ಯವಸಾಯ ಮಾಡುವವರಿಗೆ ಐದು ಲಕ್ಷ ಮತ್ತು ಹತ್ತು ಲಕ್ಷ ಎಂದು ಹಣ ಕೊಡಲು ಅವರಿಗೆ ಸೌಕರ್ಯ ಇಲ್ಲ. ಇವರು ಒಣ ಮೀನುಗಳನ್ನು ತಯಾರಿಸುವಾಗ ಒಂದೋ ಎರಡೋ ಸಾವಿರ ಹಣ ಬರುತ್ತದೆ. ಆದರೆ ಒಣ ಮೀನನ್ನು ದಾಸ್ತಾನು ಇಡಲು ಸರಿಯಾದ ಗೋಡೌನುಗಳು ಇಲ್ಲ. ಇದರಿಂದಾಗಿ ಕೆಲವರು ಒಂದು ರೀತಿಯಾದ ಕೆಟ್ಟ ವಾಸನೆ ಬರುತ್ತೆ ಎಂತಲೂ ಹೇಳುತ್ತಾರೆ. ಮೀನುಗಳಲ್ಲಿ 'ಸಟ್ಟುಲೇ' ಮೀನುಗಳು ಎಂದು ಇರುತ್ತವೆ. ಇದನ್ನು ಎಕ್ಸ್‌ಪೋರ್ಟ್ ಮಾಡುತ್ತಾರೆ ಮತ್ತು ಇದಕ್ಕಾಗಿ ಫಾರಿನ್ ಎಕ್ಸ್‌ಚೇಂಜು ಕೂಡ ಕೊಡುತ್ತಾರೆ. ಅಮೇರಿಕಾ ಮುಂತಾದ

(ಶ್ರೀ ಡಿ. ಎಸ್. ನಾಡಕರ್ಣಿ)

ದೇಶಗಳಿಗೆ ಇದನ್ನು ಕಳುಹಿಸುತ್ತಿರುತ್ತಾರೆ. ಸುಮಾರು ಎರಡು ಕೋಟಿ ರೂಪಾಯಿಗಳಷ್ಟು 'ಸಟ್ಟರೇ' ಮೀನುಗಳನ್ನು ಎಕ್ಸ್‌ಪೋರ್ಟು ಮಾಡುತ್ತಾರೆ. ಇಷ್ಟು ಮಾಡುತ್ತಿದ್ದರೂ ಸರಕಾರ ದವರು ಇವರಿಗೆ ಪ್ರೋತ್ಸಾಹ ಕೊಡುತ್ತಿಲ್ಲ ಮತ್ತು ಸರಕಾರದ ಕಣ್ಣು ಕೂಡ ತೆರೆಯಲಿಲ್ಲ. ಲಕ್ಷಾಂತರ ರೂಪಾಯಿಗಳಷ್ಟು ಮೀನುಗಳು ಹೊರಕ್ಕೆ ಹೋಗುತ್ತಿದ್ದರೂ ಮೀನುಗಳನ್ನು ಒಣಗಿಸಿಡಲು ಹಾಗೂ ದಾಸ್ತಾನು ಮಾಡಲು ಸರಿಯಾದ ಕಟ್ಟಡಗಳಿಲ್ಲ, ಜಾಗ ಇಲ್ಲ. ಹಸೀ ಮೀನುಗಳನ್ನು ಹಿಡಿದರೆ ಅವನ್ನು ಇಡಲು ಕೋಲ್ಡ್ ಸ್ಟೋರೇಜು ಪ್ಲಾಂಟು ಹಾಗೂ ರೆಫ್ರಿಜರೇಟರು ಗಳು ಬೇಕಾಗುತ್ತದೆ. ಒಣ ಮೀನುಗಳನ್ನು ಸರಿಯಾದ ರೀತಿಯಲ್ಲಿ ದಾಸ್ತಾನು ಮಾಡಿ ಅದನ್ನು ಮಾರಾಟ ಮಾಡಲು ಕೇಂದ್ರ ಸರಕಾರದವರೊಡನೆ ವ್ಯವಹಾರ ಮಾಡಿ ಹೊರದೇಶಗಳಿಗೆ ಕಳುಹಿಸುವ ಏರ್ಪಾಡು ಮಾಡಬೇಕು. ಮಹಾರಾಷ್ಟ್ರ ಸರಕಾರದಲ್ಲಿ ಇಂತಹ ಪದ್ಧತಿ ಇದೆ. ಅಲ್ಲಿ ರತ್ನಗಿರಿ ಎಂಬಲ್ಲಿ ಮೀನುಗಳನ್ನು ಹಿಡಿದು ಒಣಗಿಸಿ ಒಂದು ರೀತಿಯಾಗಿ ಹದ ಮಾಡಿ ಪ್ಯಾಕು ಮಾಡಲು ದಾಸ್ತಾನು ಮಳಿಗೆಗಳಿವೆ ಮತ್ತು ಕೇಂದ್ರ ಸರಕಾರದವರ ಸಹಾಯದಿಂದ ಪರದೇಶಗಳಿಗೆ ಇಂತಹ ಮೀನುಗಳನ್ನು ಕಳುಹಿಸಿ ಸಂಪಾದನೆ ಮಾಡುತ್ತಿದ್ದಾರೆ. ಇದೇ ರೀತಿ ನಮ್ಮ ಸರಕಾರದವರು ಮೀನುಗಾರರಿಗೆ ಕೇಂದ್ರ ಸರಕಾರದ ಮೂಲಕ ಸಹಾಯ ಒದಗಿಸಿಕೊಡಬೇಕು. ಇಲ್ಲಿ ಹಸೀ ಮೀನುಗಳ ವಿಚಾರವಲ್ಲ. ಕೆಲವರೇನೋ ಉಪ್ಪು ಹಾಕಿ ಮೀನುಗಳನ್ನು ಒಣಗಿಸಿಡುತ್ತಿದ್ದಾರೆ. ಆದರೆ ಒಣಗಿಸಿದ ಮೀನಿಗೆ ಸರಿಯಾದ ಮಾರುಕಟ್ಟೆಗಳು ಸಿಗುತ್ತಿಲ್ಲ. ಇದಕ್ಕೆ ಸರಕಾರ ಸಹಾಯ ಮಾಡಿಕೊಡಬೇಕು. ಈಗ ಮೀನಿನ ವ್ಯಾಪಾರ ಹೇಗೆ ಆಗುತ್ತಿದೆ ಎಂದರೆ ಎರ್ಡೋ ಕೆಲವು ವ್ಯಾಪಾರಸ್ಥರ ಹಾಗೂ ದಳ್ಳಾಳಿಗಳ ಮೂಲಕ ಹಾಗೂ ಮೀನು ಹಿಡಿಯುವವರ ಮೂಲಕ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿದೆ. ಮೀನುಗಾರರ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಮೀನುಗಾರರಿಗೆ ಒಂದು ಹೊತ್ತು ಊಟ ಮಾಡಲು ಸಾಕಷ್ಟು ಉತ್ಪತ್ತಿ ಇಲ್ಲ. ಅದರಲ್ಲೂ ಮಳೆ ಗಾಲದಲ್ಲಿ ಇವರಿಗೆ ಒಂದು ಊಟ ಕೂಡ ಸಿಗುವುದಿಲ್ಲ. ಇಂತಹ ಜನ ನಮ್ಮ ಕಡೆ ಸುಮಾರು 40 ಸಾವಿರದಷ್ಟು ಇದ್ದಾರೆ. ಇವರ ಜೀವನವನ್ನು ಉತ್ತಮ ಮಾಡಲು ಸಾಕಷ್ಟು ವ್ಯವಸ್ಥೆಯನ್ನು ಸರಕಾರ ಮಾಡಬೇಕು. ಮೀನುಗಾರರಿಗೆ ಅನುಕೂಲವಾಗುವಂತೆ ಒಳ್ಳೆಯ ದೋಣಿಗಳನ್ನು ಕೊಡಿಸಿಕೊಡಬೇಕು. ನಮ್ಮ ಮಾನ್ಯ ಅರಣ್ಯ ಮಂತ್ರಿಗಳೂ ಇಲ್ಲಿರುವುದರಿಂದ ಅವರ ಗಮನಕ್ಕೆ ಒಂದು ವಿಚಾರ ಹೇಳಬೇಕಾಗಿದೆ. ಹಿಂದೆ ನಮ್ಮ ಅಜ್ಜ ಮುತ್ತಜ್ಜನವರ ಕಾಲದಿಂದ ಮೀನು ಹಿಡಿಯುವವರು ದೋಣಿಗಾಗಿ ಮರ ಬೇಕಾದಾಗ ಕಾಡಿಗೆ ಹೋಗಿ ಅದಕ್ಕೆ ತಕ್ಕದಾಗಿರುವಾಗ ಮರಗಳನ್ನು ಕಡಿದುಕೊಂಡು ಬಂದು ಒಳ್ಳೇ ದೋಣಿಗಳನ್ನು ಮಾಡಿಕೊಳ್ಳುತ್ತಿದ್ದರು. ಈಗ ಇಂತಹ ಪರಿಸ್ಥಿತಿ ಇಲ್ಲ. ಇರುವ ಕಾಡುಗಳಲ್ಲಿ ಸಿಕ್ಕಾಪಟ್ಟೆ ಮರಗಳನ್ನು ಕಡಿಯುತ್ತಿದ್ದಾರೆ. ಇದಕ್ಕೆ ಇಲ್ಲಿರುವ ರೇಂಜು ಫಾರೆಸ್ಟು ಅಧಿಕಾರಿಗಳು ಅವಕಾಶ ಕೊಡುತ್ತಿದ್ದಾರೆ. ಹೆಬ್ಬಲಸು ಮರ ಸಿಕ್ಕಿದರೆ ದೋಣಿ ಮಾಡಲು ಅನುಕೂಲವಾಗುತ್ತದೆ. ಇಂತಹ ಮರಗಳನ್ನು ಕಾಡಿನಿಂದ ಕೊಡಿಸಿ ಕೊಟ್ಟು ಒಳ್ಳೆಯ ದೋಣಿಗಳನ್ನು ಮಾಡಿಸಿಕೊಳ್ಳಲು ಸಹಾಯ ಮಾಡಿಕೊಡಬೇಕು. ಇದರಿಂದ ಮೀನು ಹಿಡಿಯುವುದಕ್ಕೆ ಅನುಕೂಲವಾಗುತ್ತದೆ. ಮೀನುಗಳ ವ್ಯಾಪಾರಕ್ಕೆ ಒಳ್ಳೆಯ ಮಾರುಕಟ್ಟೆ ವ್ಯವಸ್ಥೆ ಕೂಡ ಮಾಡಿಕೊಡಬೇಕು. ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಪ್ರಧಾನವಾಗಿ ಮೀನುಗಾರ ಸೌಕರ್ಯಕ್ಕಾಗಿ ಏನೇನು ಮಾಡಿದ್ದೀರಿ ಎನ್ನುವುದನ್ನು ಮಾನ್ಯ ಮೀನುಗಾರಿಕೆ ಮಂತ್ರಿಗಳು ಹಾಗೂ ಅರಣ್ಯ ಮಂತ್ರಿಗಳು ಖಚಿತವಾಗಿ ಇಲ್ಲಿ ಉತ್ತರ ಹೇಳಬೇಕು. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನು ಹಿಡಿಯುವ ಜನರು ಮರದಿಂದ ಸುಮಾರು ನಾಲ್ಕು ಸಾವಿರ ಗಾಳಗಳು ಎಂದು ಮಾಡಿಕೊಂಡು ಇದರ ಮೂಲಕ ಮೀನುಗಳನ್ನು ಹಿಡಿಯುತ್ತಾರೆ. ಇದರಿಂದ ಸಣ್ಣ ಸಣ್ಣ ಮೀನು ಗಳನ್ನು ಹಿಡಿಯಬಹುದು. ಇದರಿಂದ ಕೆಲವರು ಇಲ್ಲಿ ಜೀವನ ಮಾಡುತ್ತಿದ್ದಾರೆ. ಇಂತಹವರಿಗೆ ಯಂತ್ರಚಾಲಿತ ದೋಣಿಗಳನ್ನು ಮಾಡಿಕೊಟ್ಟರೆ ಡೀಪ್ ಸೀ ಫಿಷಿಂಗ್ ಮಾಡುವುದಕ್ಕೆ ಅನುಕೂಲ ವಾಗುತ್ತದೆ. ಈಗೇನೋ ಮೀನುಗಾರಿಕೆ ಕಾಲೇಜು ಎಂದು ಮಾಡಿ ಇದರ ಮೂಲಕ ಮೀನು ಗಾರಿಕೆಯ ಕಸಬನ್ನು ಹೇಳಿಕೊಡಲು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇದರಲ್ಲಿ ಇನ್ನೂ ಎಷ್ಟು ಜನ ಬರುತ್ತಾರೆ ಎನ್ನುವುದು ಒಂದು ರೀತಿಯ ಅನಿಶ್ಚಯತೆಯ ಸ್ಥಿತಿಯಲ್ಲಿದೆ. ಆದುದರಿಂದ ಮೀನು ಹಿಡಿಯುವವರಿಗೆ ಅನುಕೂಲವಾದ ಯಂತ್ರಚಾಲಿತ ನಾವೆಗಳನ್ನು ಮಾಡಿಸಿಕೊಟ್ಟರೆ ಬಹು ಅನುಕೂಲವಾಗುತ್ತದೆ. ಈಗ ಮೀನು ಹಿಡಿಯುವವರಿಗೆ ಬಹಳ ತ್ರಾಸವಾಗುತ್ತಿದೆ. ಇವರಿಗೆ ಅರಣ್ಯಗಳಿಂದ ಒಳ್ಳೆ ಮರಗಳನ್ನು ಕೊಡಿಸಿ ದೋಣಿಗಳನ್ನು ಮಾಡಲು ಅನುಕೂಲ ಮಾಡಿಕೊಡ ಬೇಕು. ಈಗ ಇರುವ ಕಾಡುಗಳಲ್ಲಿ ರೆಂಕೋ ಕಂಪನಿಯವರಿಗೆ ಸ್ವಲ್ಪ ಕೊಟ್ಟಿರುವುದರಿಂದ ಇವರು ಸಿಕ್ಕಾ ಪಟ್ಟೆ ಮರಗಳನ್ನು ಕಡಿದು ಕಾಡುಗಳನ್ನು ಹಾಳು ಮಾಡುತ್ತಿದ್ದಾರೆ. ಇದನ್ನು ಕೂಡಲೇ

ಸರಿಪಡಿಸಬೇಕು. ಇಲ್ಲದಿದ್ದರೆ ಮೀನುಗಾರರಿಗೆ ಯಂತ್ರಚಾಲಿತ ನಾವೆಗಳನ್ನು ಮಾಡಿಸಿ ಕೊಡಬೇಕು. ನಾವು ಸರಕಾರಕ್ಕೆ ಇದರ ಬಗ್ಗೆ ಎಷ್ಟು ಮನವಿ ಮಾಡಿಕೊಂಡರೂ ಅದಕ್ಕೆ ಮನ್ನಣೆಯೇ ಸಿಗುತ್ತಿಲ್ಲ. ಸಮುದ್ರದಲ್ಲಿ ಐದು ಮೈಲಿಗಳಷ್ಟು ದೂರ ಹೋಗಿ ಮೀನುಗಳನ್ನು ಹಿಡಿಯಬೇಕಾದರೆ ಒಳ್ಳೆಯ ಯಂತ್ರ ಚಾಲಿತ ದೋಣಿಗಳು ಅಗತ್ಯವಾಗಿ ಬೇಕೇ ಬೇಕು. ಆದರೆ ಇಲ್ಲಿ ಸುಮ್ಮನೆ ನಮ್ಮ ಮೀನುಗಾರರನ್ನು ಎಕ್ಸ್‌ಪ್ಲಾಯಿಟ್ ಮಾಡುತ್ತಿದ್ದಾರೆ. ಇದು ಡಾಲರ್ ಅರ್ನಿಂಗ್ ಉದ್ಯಮ ಎಂದು ಹೇಳುತ್ತಿದ್ದರೂ ಇದರ ಬಗ್ಗೆ ಗಮನ ಕೊಡುತ್ತಿಲ್ಲ. ಸರಕಾರ ಸುಮಾರು 25-30 ಮೈಲಿಗಳ ದೂರ ಸಮುದ್ರದಲ್ಲಿ ಮೀನು ಹಿಡಿಯಲು ಅನುಕೂಲವಾಗುವಂತೆ ಡೀಪ್ ಸೀ ಫಿಷಿಂಗಿಗೆ ಅವಕಾಶ ಮಾಡಿಕೊಡಬೇಕು ಎಂದು ಸರಕಾರದಲ್ಲಿ ಒತ್ತಾಯ ಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿರುವ ಎಲ್ಲ ಹಳ್ಳಿಗಳಲ್ಲೂ ಮೀನುಗಾರರೇ ಜಾಸ್ತಿ ಇರುವುದರಿಂದ ಇವರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕು ಮತ್ತು ಒಳ್ಳೆಯ ದೋಣಿಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಲ್ಕನೇ ಯೋಜನೆಯೊಳಗೆ ಕೆಲವು ಯೋಜನೆಗಳನ್ನು ಸೇರಿಸುತ್ತೇವೆಂದು ಹೇಳಿದ್ದರು. ಸುಮಾರು 2.81 ಕೋಟಿಯವರೆಗೆ ಬಡ್ಜೆಟ್ಟಿನಲ್ಲಿ ಒದಗಿಸಲಾಗಿದೆ ಮತ್ತು ಇದರಲ್ಲಿ ಆರು ಯೋಜನೆಗಳು ಸೇರಿವೆ ಎಂದು ಹೇಳುತ್ತಾರೆ. ಇದರೊಳಗೆ ಕಾರವಾರವೂ ಬರುತ್ತದೆ. ಇಲ್ಲಿ ಒಂದು ಇಂಡೋ ನಾರ್ವೀಜಿಯನ್ ಯೋಜನೆ ಮಾಡಿದ್ದಾರೆ. ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೇ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದಾರೆಯೇ ವಿನಾ ನಮ್ಮ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಯಾವ ರೀತಿಯಾದ ಪ್ರೋಗ್ರಾಂ ಹಾಕಿರುವುದೂ ಕಂಡುಬರುತ್ತಿಲ್ಲ. ಎಲ್ಲ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಕ್ರ್ಯಾಷ್ ಪ್ರೋಗ್ರಾಂ ಹಾಗೂ ಕೋಲ್ಡ್ ಸ್ಟೋರೇಜು ಪ್ಲಾಂಟ್‌ಗಳು ಇತ್ಯಾದಿಗಳು ಸಿಗುತ್ತಿವೆ ಮತ್ತು ಇದಕ್ಕೆ ಎಲ್ಲಾ ಪ್ಲಾನುಗಳೂ ಉಂಟು. ಆದರೆ ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಸಾಕಾದಷ್ಟು ಪ್ರೋತ್ಸಾಹ ಕೊಡುತ್ತಿಲ್ಲ. ಕೇಂದ್ರ ಸರಕಾರ ಬೇಕಾದಷ್ಟು ಸಹಾಯವನ್ನು ಮೈಸೂರು ಸರ್ಕಾರಕ್ಕೂ ಕೊಡುತ್ತಿದೆ. ಆದರೆ ಇಲ್ಲಿ ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಎನ್ನುವಂತೆ ಮಾಡುತ್ತಿದ್ದಾರೆ. ನಮ್ಮ ಮಂತ್ರಿ ಮಂಡಲದಲ್ಲಿ ಕೂಡ ನಮ್ಮ ಬಗ್ಗೆ ಎಷ್ಟು ಹೇಳಿದರೂ ಕೇಳುತ್ತಿಲ್ಲ. ಮಾನ್ಯ ಸದಸ್ಯರಾದ ಶ್ರೀ ಭಾಸ್ಕರ ಶೆಟ್ಟಿಯವರು ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ತಮಗೇನಾದರೂ ಬೇಕಾದರೆ ಮಂತ್ರಿಗಳೊಡನೆ ಹೋಗಿ ಪ್ರಭಾವ ಬೀರಿ ಎಲ್ಲ ಕೆಲಸಗಳನ್ನೂ ಮಾಡಿಸಿಕೊಳ್ಳುತ್ತಾರೆ. ಆದರೆ ನಮ್ಮ ಜಿಲ್ಲೆಯ ಬಗ್ಗೆ ಒಂದು ರೀತಿಯಾದ ಉದಾಸೀನಭಾವ ಕಾಣುತ್ತದೆ. ನಾನು ಇದಕ್ಕಾಗಿ ಯಾರೊಡನೆಯೂ ಜಗಳ ಮಾಡಲಿಕ್ಕೆ ಹೋಗುವುದಿಲ್ಲ. ಸರಕಾರದಲ್ಲಿ ಇಂತಹ ಪ್ರವೃತ್ತಿ ಬೆಳೆಯುವುದು ಸರಿಯಲ್ಲ. ನಮ್ಮ ಕಡೆ ಮೀನುಗಾರರಿಗೆ ಬಹಳ ಅನ್ಯಾಯವಾಗುತ್ತಿದೆ. ಇವರನ್ನು ಸುಧಾರಣೆ ಮಾಡಲಿಕ್ಕೆ ಸರಕಾರ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ನಾನು ಯಾವ ರೀತಿ ಸುಧಾರಣೆ ಮಾಡಬೇಕು ಎನ್ನುವ ವಿವರಗಳೊಂದಿಗೆ ಒಂದು ಪತ್ರವನ್ನು ಮುಖ್ಯ ಮಂತ್ರಿಗಳ ಕಡೆಗೆ ಕಳುಹಿಸಿಕೊಟ್ಟಿದ್ದೇನೆ. ನಮ್ಮಲ್ಲಿ ಸುಮಾರು ಇನ್ನೂರು ಮೈಲಿಗಳಷ್ಟು ದೂರ ಕರಾವಳಿ ಪ್ರದೇಶವಿರುತ್ತವೆ. ಇದರ ಬಗ್ಗೆ ಇಲ್ಲಿಯವರೆಗೆ ಸರಕಾರ ಖರ್ಚು ಮಾಡಿರುವುದು ಎಷ್ಟು? ಮೀನುಗಾರರ ಅಭಿವೃದ್ಧಿಗಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಎಷ್ಟು ಮಾಡಿದ್ದೀರಿ ಹಾಗೂ ಉತ್ತರ ಕನ್ನಡ ಜಿಲ್ಲೆಗೆ ಎಷ್ಟು ಮಾಡಿದ್ದೀರಿ ಇವುಗಳನ್ನೆಲ್ಲಾ ಪರಿಶೀಲನೆ ಮಾಡಲು ಉತ್ತರ ಕನ್ನಡ ಜಿಲ್ಲೆಯ ಜನರ ಪ್ರತಿನಿಧಿಗಳನ್ನು ಸೇರಿಸಿ ಯಾವ ಚೌಕಾಶಿ ಮಾಡದೆ ಒಂದು ಕಮಿಟಿ ನೇಮಿಸಬೇಕು ಎಂದು ಇಲ್ಲಿ ಒತ್ತಾಯಪೂರ್ವಕವಾಗಿ ಕೇಳುತ್ತೇನೆ. ಆ ಕಮಿಟಿಯವರ ರಿಪೋರ್ಟು ಬಂದ ನಂತರವಾದರೂ ಸರಕಾರ ಸಾಕಷ್ಟು ಪರಿಹಾರ ಮಾಡಲು ಅನುಕೂಲ ಮಾಡುತ್ತೇವೆ ಮತ್ತು ಎಲ್ಲರಿಗೂ ನ್ಯಾಯವಾಗುವಂತೆ ಮಾಡಿಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ಇಲ್ಲಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಕೆ. ಅಮೀನ್ (ಉಡುಪಿ).—ಇಂಡೋ ನಾರ್‌ವೇಜಿಯನ್ ಸ್ಕೀಂ ಫಾರ್ ಫಿಷರೀಸ್ ಎಂದು ಮಾಡಿ ಸುಮಾರು ಎಂಟು ವರ್ಷಗಳಾದವು. ಆದರೆ ಇದರಿಂದ ಇಲ್ಲಿನ ಮೀನುಗಾರರಿಗೆ ಸಾಕಷ್ಟು ಪ್ರಯೋಜನ ಸಿಗುತ್ತಿಲ್ಲ ಮತ್ತು ಇದರ ಕಡೆಗೆ ಸರಕಾರ ನಿಗಾ ಕೊಡುತ್ತಾ ಇರುವುದು ಗೊತ್ತಾಗುತ್ತಿಲ್ಲ. ಶ್ರೀಮಾನ್ ನಾಡಕರ್ಣಿಯವರು ಉತ್ತರ ಕನ್ನಡ ಜಿಲ್ಲಾದ ಕಡೆಯಿಂದ ಬಂದಿರುವುದರಿಂದ ಇದರ ಬಗ್ಗೆ ಸೂಕ್ತ ಪರಿಹಾರಕ್ರಮಗಳನ್ನು ಸರಕಾರಕ್ಕೆ ಸೂಚಿಸುವಾಗ ಅವನ್ನೆಲ್ಲಾ ಸ್ಪಷ್ಟಪಡಿಸಿದರೆ ಒಳ್ಳೆಯದು ಎಂದು ಸಲಹೆ ಮಾಡುತ್ತೇನೆ.

ಶ್ರೀ ಡಿ. ಎಸ್. ನಾಡಕರ್ಣಿ.—ಮಾನ್ಯ ಸದಸ್ಯರು ನನಗೆ ನೆನಪು ಕೊಟ್ಟಿದ್ದಕ್ಕೆ ತುಂಬಾ ಸಂತೋಷ. ಅವರೂ ಕೂಡ ಮೀನುಗಾರಿಕೆ ಬಗ್ಗೆ ಬಹಳ ಅಭಿಮಾನವುಳ್ಳವರು ಮತ್ತು ಉತ್ತರ ಕನ್ನಡ ಜಿಲ್ಲೆಯ ಬಂದರು ಅಭಿವೃದ್ಧಿಯಲ್ಲಿ ಸಾಕಷ್ಟು ಶ್ರಮವಹಿಸಿ ಕೆಲಸ ಮಾಡಿದವರು ಮತ್ತು ಮೀನುಗಾರಿಕೆಯ ಅಭಿವೃದ್ಧಿ ಬಗ್ಗೆ ಈಗಾಗಲೇ ಅವರು ಕೆಲವು ಯೋಜನೆಗಳನ್ನು ಸೂಚಿಸಿದ್ದಾರೆ.

(ಶ್ರೀ ಡಿ. ಎಸ್. ನಾಡಕರ್ಣಿ)

ಮೀನುಗಾರಿಕೆ ಇಲಾಖೆಯಲ್ಲಿ ಯಾರೂ ಕೆಲಸ ಮಾಡುತ್ತಾ ಇಲ್ಲ, ಮತ್ತು ಆಫೀಸಿನಲ್ಲಿ ಎಲ್ಲರೂ ಮಲಗಿದ್ದಾರೆ ಎಂದು ಕೇಳಿದ್ದೇನೆ. ಅವರು ಪಗಾರ ತಿಂದರೂ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ತಾವು 9 ಪ್ಲಾಂಟುಗಳನ್ನು ಉಳ್ಳಾಲ, ಮರವಂತೆ, ಕಾಪು ಇಲ್ಲಿಗೆಲ್ಲಾ ಕೊಟ್ಟಿದ್ದೀರಿ ಮತ್ತು ಹಾಸನ ಶಿವಮೊಗ್ಗಾ ಇಲ್ಲಿಗೆಲ್ಲಾ ಪ್ಲಾಂಟ್ ಕೊಡುವ ಯೋಚನೆ ಮಾಡಿದ್ದೀರಿ. ಆದರೆ ಉತ್ತರ ಕನ್ನಡ ಜಿಲ್ಲೆಗೆ ಮಾತ್ರ ಕೊಟ್ಟಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಅಧಿಕಾರಿಗಳು ಏನು ಇದ್ದಾರೆ ಅವರು ಮಾಡುವುದನ್ನು ನೋಡಿದರೆ ನಮ್ಮ ಕಾರವಾರ ತಾಲ್ಲೂಕಿಗೆ ಮೀನುಗಾರಿಕೆ ಆಗದಂತೆ ಸಂಚು ನಡೆದಿದೆ ಎಂದು ಹೇಳುತ್ತೇನೆ. ಈ ವಿಷಯವನ್ನು ಹೇಳಬಾರದಾಗಿತ್ತು. ಮಾನ್ಯ ಸದಸ್ಯರಾದ ಅಮೀನ್ ರವರು ಒತ್ತಾಯಪಡಿಸಿದ್ದುದರಿಂದ ಹೇಳುತ್ತೇನೆ. ಈ ಇಂಡೋ ನಾರ್ವೇಜಿಯನ್ ಸ್ಕೀಂನಲ್ಲಿ ಮೀನುಗಾರಿಕೆ ಅಭಿವೃದ್ಧಿ ಕೆಲಸ 1962 ರಿಂದ 1969ರ ವರೆಗೆ ಮುಗಿಯಬೇಕಾಗಿತ್ತು. ಇದುವರೆಗೆ ನಮ್ಮ ಕಡೆ ಯಾವುದನ್ನೂ ಮಾಡಿಲ್ಲ. ಇದಕ್ಕೆ ಯಾರು ಜವಾಬ್ದಾರರು ಎಂದು ಕೇಳುತ್ತೇನೆ. ಈ ಅನ್ಯಾಯವನ್ನು ಪ್ರತಿಭಟಿಸಬೇಕಾಗಿದೆ. ಮತ್ತು ಇದರ ವಿಷಯವಾಗಿ ಬಹಳ ದುಃಖದಿಂದ ಮಾತನಾಡಬೇಕಾಗಿದೆ. ಇನ್ನು ಮಾತನಾಡತಕ್ಕದ್ದು ಕೆಲವು ಇವೆ. ಆದರೆ ಈ ವಿಷಯವಾಗಿ 3 ಕಟ್‌ಮೋಷನ್ಸ್ ಕಳುಹಿಸಿದ್ದೇನೆ. ನಮ್ಮ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಏನೇನು ಕೆಲಸ ಆಗಬೇಕು ಎಂದು ಮಂತ್ರಿಗಳಿಗೆ ಪತ್ರ ಬರೆದು ಕಳುಹಿಸುತ್ತೇನೆ. ಅದನ್ನು ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. 20-25 ವರ್ಷಗಳಿಂದಲೂ ಇರುವ ಬೇಡಿಕೆ ಇನ್ನೂ ಸಂಪೂರ್ಣ ಮಾಡಿಲ್ಲ. ಆದುದರಿಂದ ಆಕಡೆ ಮಾನ್ಯ ಮಂತ್ರಿಗಳು ಲಕ್ಷ ಕೊಟ್ಟು ಸಮರ್ಪಕವಾದ ಉತ್ತರ ಕೊಡಬೇಕು ಎಂದು ಹೇಳಿ, ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಜಾಲಸಟ್ಗಿ (ಭಟ್ಕಳ್).—ಸ್ವಾಮಿ, ನಮ್ಮ ಉತ್ತರ ಕನ್ನಡ ಜಿಲ್ಲೆಯ ಫಿಷರೀಸ್ ಅಂಡ್ ಫಾರೆಸ್ಟ್ ಬಗ್ಗೆ ಮಾತನಾಡಲಿಕ್ಕೆ ಸ್ವಲ್ಪ ಹೆಚ್ಚು ಅವಕಾಶ ಕೊಡಬೇಕೆಂದು ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಐ. ಸೋಮಶೇಖರಪ್ಪ (ಹೊಸನಗರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕಂಥ ಡಿಮ್ಯಾಂಡುಗಳನ್ನು ಸ್ವಾಗತ ಮಾಡುತ್ತಾ ಈ ವ್ಯವಸಾಯದ ಇಲಾಖೆಯ ಬಗ್ಗೆ ನನ್ನ ಸ್ಪಷ್ಟವಾದ ಅಭಿಪ್ರಾಯವನ್ನು ಇಡಬೇಕೆಂದು ಅಭಿಪ್ರಾಯಪಟ್ಟಿದ್ದೇನೆ.

ಮೊಟ್ಟಮೊದಲನೆಯದಾಗಿ ವಿರೋಧಪಕ್ಷದ ಶ್ರೀಮಾನ್ ಚನ್ನಬಸಪ್ಪನವರು ಈ ವ್ಯವಸಾಯದ ಬಗ್ಗೆ ಬಹಳ ಸುಂದರವಾಗಿ ಮಾತನಾಡಿದ್ದಾರೆ ಮತ್ತು ಬಹಳ ಉಪಯುಕ್ತವಾದ ವಿಚಾರಗಳನ್ನು ಇಟ್ಟಿದ್ದಾರೆ. ಈ ಒಂದು ವ್ಯವಸಾಯ ಇಲಾಖೆಯಲ್ಲಿ ಅನ್‌ರಿಯಲಿಸ್ಟಿಕ್ ಅಪ್ರೋಚ್, ಪ್ಲಾನಿಂಗ್, ಇದೆ ಎಂದು ಹೇಳಿದರು. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಮತ್ತು ಸ್ವಾಗತ ಮಾಡುತ್ತೇನೆ; ಮತ್ತು ಅದರ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಈ ಸಭೆಯ ಮುಂದೆ ಇಡಲು ಬಯಸುತ್ತೇನೆ. ನಾನು ಈ ಅಂಕಿ ಅಂಶಗಳನ್ನು ಇಡುವುದಕ್ಕೆ ಒಂದು ಕಾಲ್ ಅಟೆನ್‌ಷನ್ ಮೋಷನ್ ಕಳುಹಿಸಿದ್ದೆ. ಅದು ಹಾಗೆಯೇ ಇದೆ. ಅದನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ಈ ವ್ಯವಸಾಯದ ಇಲಾಖೆಯ ಮಂತ್ರಿಗಳಾಗಲಿ, ಉಪಮಂತ್ರಿಗಳಾಗಲಿ ಅವರು ಈ ಸೂಪರ್‌ಟೈಂ ಐ.ಎ.ಎಸ್. ಆಫೀಸರ್ಸ್ ತಯಾರುಮಾಡಿದಂಥ ಸ್ಟೇಟ್‌ಮೆಂಟನ್ನು ಓದಿಕೊಂಡು ಚೆನ್ನಾಗಿ ಮನನ ಮಾಡಿಕೊಂಡಿದ್ದರೆ ಚೆನ್ನಾಗಿತ್ತು. ಈ ಸೂಪರ್‌ಟೈಂ ಐ.ಎ.ಎಸ್. ಆಫೀಸರ್ಸ್ ಕೊಟ್ಟಂಥ ಸ್ಟೇಟ್‌ಮೆಂಟ್‌ನಲ್ಲಿ ಅನೇಕ ವಿಷಯಗಳನ್ನು ಮುಚ್ಚಿಹಾಕುತ್ತಾರೆ. ಅದರಲ್ಲಿ ಕೆಲವು ಅಂಕಿ ಅಂಶಗಳನ್ನು ಈ ಸಭೆಯ ಮುಂದೆ ಇಡಲು ಬಯಸುತ್ತೇನೆ. ಈ ವ್ಯವಸಾಯದ ಇಲಾಖೆಯಲ್ಲಿ ನಮ್ಮ ರಾಜ್ಯಕ್ಕೆ ಬೇಕಾದಂಥ ಗೊಬ್ಬರವನ್ನು ರಾಜ್ಯ ಮಾರಾಟ ಸಹಕಾರ ಸಂಘದ ಮೂಲಕ ಒದಗಿಸುತ್ತಾ ಇದ್ದಾರೆ. ಸರ್ಕಾರ ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಪ್ರಕಾರ 1965-66 ರಲ್ಲಿ 2 ಲಕ್ಷ 79 ಸಾವಿರದ 705 ಟನ್ ಇಂಡೆಂಟ್ ಮಾಡಿದ್ದರು. ಅದಕ್ಕೆ ಬಂದಿರತಕ್ಕಂಥ ಗೊಬ್ಬರ ಕೆಮಿಕಲ್ ಫರ್ಟಿಲೈಸರ್ಸ್ 1 ಲಕ್ಷ 12 ಸಾವಿರದ 935 ಟನ್. ಅದರಲ್ಲಿ ವ್ಯಾಪಾರ ಮಾಡಿರುವುದು 1 ಲಕ್ಷ 22 ಸಾವಿರದ 946 ಟನ್. 1966-67, 1967-68 ರಲ್ಲಿ ಸರ್ಕಾರದ ಇಂಡೆಂಟ್ 5 ಲಕ್ಷ 56065 ಟನ್. ಅಲಾಟ್ 2 ಲಕ್ಷ 94 ಸಾವಿರದ 895 ಟನ್. ಈವೊತ್ತಿನ ದಿವಸ ಡಿಸ್ಟ್ರಿಬ್ಯೂಷನ್ ಮಾಡಿದ್ದು 1 ಲಕ್ಷ 47 ಸಾವಿರದ 805 ಟನ್. 1968-69 ರಲ್ಲಿ ಅವರು ಇಂಡೆಂಟ್ ಮಾಡಿದ್ದು 5 ಲಕ್ಷದ 25 ಸಾವಿರದ 560 ಟನ್. ಬಂದಿರುವ ಗೊಬ್ಬರ 2 ಲಕ್ಷ 75 ಸಾವಿರದ 675 ಟನ್. ಇಲ್ಲಿಯವರೆಗೂ ಅಂದರೆ ಫೆಬ್ರವರಿಯವರೆಗೆ ಮಾರಾಟವಾಗಿರುವುದು 1 ಲಕ್ಷ 5019 ಟನ್. ಇಷ್ಟು ಗೊಬ್ಬರವನ್ನು ರಾಜ್ಯ

ಮಾರಾಟ ಸಹಕಾರ ಸಂಘ ಮತ್ತು ತಾಲ್ಲೂಕು ಮಾರಾಟ ಸಹಕಾರ ಸಂಘಗಳ ಮೂಲಕ ಮಾರಾಟ ಮಾಡಿದೆ. ಸರ್ಕಾರ ಒದಗಿಸಿರತಕ್ಕಂಥ ಅಂಕಿ ಅಂಶದ ಪ್ರಕಾರ 3 ಲಕ್ಷ 48 ಸಾವಿರದ 954 ಟನ್ ಕೆಮಿಕಲ್ ಫರ್ಟಿಲೈಸರ್ಸ್ ಸ್ಟಾಕ್ ಇದೆ. ಇದರ ಬೆಲೆ 23 ಕೋಟಿ 35 ಲಕ್ಷ ಚಿಲ್ಲರೆ ರೂಪಾಯಿ ಆಗುತ್ತದೆ. ಇದನ್ನು ಸರ್ಕಾರದವರೇ ಕೊಟ್ಟಿದ್ದಾರೆ. ಇದಕ್ಕೆ ಬಡ್ಡಿ 86 ಲಕ್ಷ ರೂಪಾಯಿ ಆಗುತ್ತದೆ. ಇದನ್ನು ಯೋಚನೆ ಮಾಡಬೇಕು. ಕಳೆದ 5 ವರ್ಷದಿಂದಲೂ ಲೆಕ್ಕ ನೋಡಿದರೆ ಗೊಬ್ಬರ ಸಪ್ಲೈ ಮಾಡಿರುವುದು 1 ಲಕ್ಷ 50 ಸಾವಿರ ಟನ್. ಈ ವರ್ಷ ಬಹಳ ಹೆಚ್ಚು ಎಂದರೆ 1 ಲಕ್ಷ 75 ಸಾವಿರ ಟನ್ ಅಥವಾ 2 ಲಕ್ಷ ಟನ್ ಖರ್ಚಾಗಿರಬಹುದು. ಸರ್ಕಾರದ ಅಂಕಿ ಅಂಶಗಳ ಪ್ರಕಾರ ಗೊಬ್ಬರ ಸ್ಟಾಕ್ ಇರುವುದು 3 ಲಕ್ಷ 48 ಸಾವಿರದ 954 ಟನ್ ಇದೆ. ಇದಕ್ಕೆ ಸರ್ಕಾರದವರು ಕೊಟ್ಟಿರುವ ದುಡ್ಡಿನಲ್ಲಿ ರಾಜ್ಯ ಮಾರಾಟ ಸಹಕಾರ ಸಂಘದವರದ್ದು 3 ಕೋಟಿ ರೂಪಾಯಿ ಇದೆ. ಅವರೂ ಕೂಡ 13½ ಲಕ್ಷ ರೂಪಾಯಿ ಬಡ್ಡಿ ಕೊಡುತ್ತಿದ್ದಾರೆ. ಒಟ್ಟಿನಲ್ಲಿ ಗೊಬ್ಬರಕ್ಕಾಗಿ 96 ಲಕ್ಷ ರೂಪಾಯಿಗಳಷ್ಟು ಬಡ್ಡಿ ಮೂಲಕ ಹೋಗುತ್ತಾ ಇದೆ. ಈ ಗೊಬ್ಬರವನ್ನು ಸ್ಟೋರೇಜ್ ಮಾಡುವುದಕ್ಕಾಗಿ 6 ಲಕ್ಷ ರೂಪಾಯಿಯಷ್ಟು ಹಣವನ್ನು ಬಾಡಿಗೆಗಾಗಿ ಕೊಡುತ್ತಾ ಇದ್ದೇವೆ. ಇವೆಲ್ಲಾ ಸೇರಿ ಒಟ್ಟಿಗೆ 1 ಕೋಟಿ ರೂಪಾಯಿಗಿಂತಲೂ ಹೆಚ್ಚಿಗೆ ಸರ್ಕಾರಕ್ಕೆ ಲುಕ್ಸಾನು ಆಗುತ್ತಾ ಇದೆ. ಆದುದರಿಂದ ಈ ವ್ಯವಸಾಯದ ಇಲಾಖಾ ಮಂತ್ರಿಗಳು ಇದನ್ನು ಯೋಚನೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಯಾವಾಗಲೂ ಬೇಕಾಗಿರುವಂಥ ಗೊಬ್ಬರ 1 ಲಕ್ಷ 50 ಸಾವಿರ ಟನ್. ಇದಕ್ಕಿಂಥ ಜಾಸ್ತಿ ಬೇಕಾಗಿರಲಿಲ್ಲ. ಈವೊತ್ತು 3 ಲಕ್ಷ 48 ಸಾವಿರ ಟನ್ ಅಷ್ಟು ಗೊಬ್ಬರ ನಮ್ಮಲ್ಲಿ ಸ್ಟಾಕ್ ಇದೆ. ಇದಕ್ಕೆ 1 ಕೋಟಿ ರೂಪಾಯಿಗಿಂತಲೂ ಹೆಚ್ಚಾಗಿ ಬಡ್ಡಿ ಕೊಡುತ್ತಾ ಇದ್ದೇವೆ. ಇದಕ್ಕೆ ಯಾರು ಹೊಣೆ ? ಶ್ರೀಮಾನ್ ಚನ್ನಬಸಪ್ಪನವರು ಹೇಳಿದ ಹಾಗೆ ವಿಮ್ಸಿಕಲ್ ಆಟಿಟ್ಯೂಡ್ ಆಫ್ ದಿ ಡಿಪಾರ್ಟ್‌ಮೆಂಟ್ ಆಗಿದೆ. ಇಲಾಖಾ ಅಧಿಕಾರಿಗಳಿಂದ ಈ ರೀತಿ ಆಗಿದೆ. ಡೈರೆಕ್ಟರ್ ಆಫ್ ಅಗ್ರಿಕಲ್‌ಚರ್ ಏನು ಇದ್ದಾರೆ ಅವರಿಗೆ ಗೊಬ್ಬರ ಎಷ್ಟು ಬೇಕು ಎನ್ನುವುದು ಗೊತ್ತಿಲ್ಲವೇ ? ಈ ಹೊತ್ತು ನಮ್ಮ ರಾಜ್ಯಕ್ಕೆ ಎಷ್ಟು ಬೇಕು ಎಂದರೆ 1½ ಲಕ್ಷ ಟನ್ ಗೊಬ್ಬರ ಆದರೆ ಸಾಕು, 50 ಸಾವಿರ ಟನ್ ಹೆಚ್ಚಾಗಿ ಇರಲಿ ಎಂದು ಇಟ್ಟುಕೊಂಡರೂ 2 ಲಕ್ಷ ಟನ್ ಗೊಬ್ಬರ ಆದರೆ ಸಾಕು. ಆದರೆ ಇದಕ್ಕೆ ಕೊಡಬೇಕಾದ ಬಡ್ಡಿ ಮತ್ತು ಸ್ಟೋರೇಜ್‌ಗೆ ಕೊಡಬೇಕಾದ ಬಾಡಿಗೆ ಇವೆಲ್ಲಾ ಸೇರಿದರೆ 1 ಕೋಟಿಗಿಂತಲೂ ಹೆಚ್ಚು ಲುಕ್ಸಾನು ಸರ್ಕಾರಕ್ಕೆ ಆಗುವುದರಿಂದ ಇದಕ್ಕೆ ಜವಾಬ್ದಾರರು ಯಾರು ?

12-00 NOON

ಇಂಥ ರಾಂಗ್‌ಫುಲ್ ಕ್ಯಾಲ್ಕುಲೇಷನ್ ಮಾಡುವುದರಿಂದ, ವಿಮ್ಸಿಕಲ್ ಫಿಗರ್ಸ್ ಕೊಡುವುದರಿಂದ ರಾಜ್ಯಕ್ಕೆ ಯಾವ ಮಟ್ಟದಲ್ಲಿ ನಷ್ಟವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ಈಗ ವ್ಯವಸಾಯ ಇಲಾಖೆಯಿಂದ ಸುಮಾರು 4,76,000 ಟನ್ ರಸಾಯನಿಕ ಗೊಬ್ಬರ ತರಿಸುವವರಿದ್ದಾರೆ ಎಂದು ಕೇಳಿದ್ದೇನೆ. ವಿಮ್ಸಿಕಲ್ ಫಿಗರ್ಸ್ ಕೊಡುವುದರಿಂದ ಕೋಟ್ಯಾಂತರ ರೂಪಾಯಿಗಳನ್ನು ಬಡ್ಡಿ ಮೂಲಕ ಮತ್ತು ಸ್ಟೋರೇಜ್ ಚಾರ್ಜಸ್ ಮೂಲಕ ಕೊಡಬೇಕಾಗುತ್ತದೆ. ಇದನ್ನು ಯಾರು ಕೊಡಬೇಕು ? ನಮ್ಮ ರಾಜ್ಯ ಸರ್ಕಾರ ಈಗ ವ್ಯವಸಾಯ ಇಲಾಖೆಯವರು ತರಿಸಬೇಕೆಂದಿರುವ ಗೊಬ್ಬರವನ್ನು ತರಿಸಲು ಒಪ್ಪಿಗೆ ಕೊಡುವುದಾದರೆ ಕೇಂದ್ರ ಸರ್ಕಾರದಿಂದ ಅಥವಾ ಬೇರೆ ಕಡೆ 30 ಕೋಟಿ ರೂಪಾಯಿ ಸಾಲ ತೆಗೆಯಬೇಕಾಗುತ್ತದೆ. ಅಥವಾ ರಾಜ್ಯ ಮಾರಾಟ ಸಹಕಾರ ಸಂಘ ತೆಗೆಯಬೇಕಾಗುತ್ತದೆ. ಅದರ ಮೇಲೆ ಸುಮಾರು ಒಂದು ಕೋಟಿ 25 ಲಕ್ಷ ರೂಪಾಯಿ ಬಡ್ಡಿ ತೆರಬೇಕಾಗುತ್ತದೆ. ಈಗಿರತಕ್ಕ ಹೊರೆಯ ಜೊತೆಗೆ 1 ಕೋಟಿ 25 ಲಕ್ಷ ರೂಪಾಯಿ ಬಡ್ಡಿಯು ಸೇರಿದರೆ ಸುಮಾರು 2 ಕೋಟಿ 30 ಲಕ್ಷ ರೂಪಾಯಿ ಬಡ್ಡಿ ಮತ್ತು ಸ್ಟೋರೇಜ್ ಚಾರ್ಜಸ್ ಮೂಲಕ ಕೊಡಬೇಕಾಗುವುದನ್ನು ಯಾರು ಕೊಡಬೇಕು ಎಂದು ಯೋಚನೆ ಮಾಡಿ. ಹೊರಗಿನಿಂದ ರಾಸಾಯನಿಕ ಗೊಬ್ಬರಗಳು ಬರುವುದು ಕಷ್ಟವಾಗಬಹುದು ಎಂದು ಹೇಳುವುದಾದರೆ, ಪರದೇಶಗಳಿಂದ ಗೊಬ್ಬರ ಬರುವುದಿಲ್ಲ ಎಂದು ನಿಮಗೆ ಆಧಾರಪೂರ್ವಕವಾಗಿ ತಿಳಿದುಬಂದಿದೆಯೇ ? ಪರದೇಶಗಳಿಂದ ಬರುವ ಗೊಬ್ಬರ ನಿಂತುಹೋಗುತ್ತದೆ, ಆದ್ದರಿಂದ ಸ್ಟೋರೇಜ್ ಮಾಡಬೇಕು ಎನ್ನುವುದರ ಅವಶ್ಯಕತೆ ಇದೆಯೇ ಎನ್ನುವುದನ್ನು ಯೋಚನೆ ಮಾಡಿ. ಮದ್ರಾಸಿನಲ್ಲಿ ಒಂದು ಫರ್ಟಿಲೈಸರ್ ಕಾರ್ಖಾನೆ ಬರುತ್ತದೆ, ಮಂಗಳೂರಿನಲ್ಲಿ ಒಂದು ಕಾರ್ಖಾನೆ ಬರುವುದಿದೆ, ಕೋ-ಆಪರೇಟಿವ್ ಸೆಕ್ಟಾರಿನಲ್ಲಿ ಗುಜರಾತಿನಲ್ಲಿ ಒಂದು ಗೊಬ್ಬರದ ಕಾರ್ಖಾನೆ ಬರುತ್ತದೆ. ಹೀಗಿರುವಾಗ ಗೊಬ್ಬರವನ್ನು ಆಮದು ಮಾಡಿಕೊಳ್ಳುವ ಅವಶ್ಯಕತೆ ಇದೆಯೇ ? ಹೆಚ್ಚಿನ ಪ್ರಮಾಣದಲ್ಲಿ ಗೊಬ್ಬರವನ್ನು ಸ್ಟಾಕ್ ಮಾಡುವ ಅವಶ್ಯಕತೆ ಏನಿತ್ತು ಎಂದು ಯೋಚನೆ ಮಾಡಿ. ಇದರಿಂದ

(ಶ್ರೀ ಐ. ಸೋಮಶೇಖರಪ್ಪ)

ಆಗಿರತಕ್ಕ ಖರ್ಚಿಗೆ ಯಾರು ಹೊಣೆ ಎನ್ನುವುದನ್ನು ಯೋಚನೆ ಮಾಡಬೇಕು. ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಅವರು 4,76,000 ಟನ್ ಗೊಬ್ಬರ ತರಿಸಲು ಇಂಡೆಂಟ್ ಮಾಡಿದ್ದಾರೆಂದು ಕೇಳಿದ್ದೇನೆ. ಇನ್ನು ಕನಿಷ್ಟಪಕ್ಷ ಒಂದು ವರ್ಷಕಾಲವಾದರೂ ಯಾವ ತರಹ ಗೊಬ್ಬರವನ್ನೂ ತರಿಸಬಾರದು ಎನ್ನುವ ನಿರ್ಧಾರವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ.

ವ್ಯವಸಾಯಕ್ಕೆ ಅತಿ ಮುಖ್ಯವಾಗಿ ಬೇಕಾದಂಥ ಗೊಬ್ಬರ, ಉತ್ತಮ ತಳಿ ಬೀಜ, ಇವುಗಳ ಬಗ್ಗೆ ಒಂದು ವಿಷಯವನ್ನು ಸಭೆಯ ಮುಂದೆ ಇಡಬಯಸುತ್ತೇನೆ. ಇಷ್ಯೂ ಪ್ರೈಸ್ ಏನಿದೆ, ಅದು ರೈತರಿಗೆ ಹೋಗಿ ಮುಟ್ಟಬೇಕಾದರೆ ಎಷ್ಟು ಜಾಸ್ತಿಯಾಗುತ್ತದೆ ಎನ್ನುವುದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಸರ್ಕಾರದವರು ರಾಜ್ಯ ಮಾರಾಟ ಸಹಕಾರ ಸಂಘ, ತಾಲ್ಲೂಕು ಮಾರಾಟ ಸಹಕಾರ ಸಂಘ ಇವುಗಳಿಗೆ ಯಾವ ದರದಲ್ಲಿ ಮಾರಾಟ ಮಾಡುತ್ತಾರೆ ಮತ್ತು ಅವರು ಯಾವ ದರದಲ್ಲಿ ಮಾರಾಟ ಮಾಡಬೇಕೆಂದು ತಿಳಿಸಿದ್ದಾರೆ ಎಂದರೆ, ಅಮೋನಿಯಂ ಸಲ್‌ಫೇಟ್ ಇಷ್ಯೂ ಪ್ರೈಸ್ 495 ರೂಪಾಯಿ, ರೈತರಿಗೆ ಮಾರಾಟ ಮಾಡಬೇಕಾದ ಬೆಲೆ 550 ರೂಪಾಯಿ, ಇದರಲ್ಲಿ 55 ರೂಪಾಯಿ ವ್ಯತ್ಯಾಸ ಒಂದು ಟನ್ನಿಗೆ ಇವೆ. ಯೂರಿಯಾ ತೆಗೆದುಕೊಂಡರೆ ಇಷ್ಯೂ ಪ್ರೈಸ್ 863 ರೂಪಾಯಿ, ಮಾರುವ ಬೆಲೆ 943 ರೂಪಾಯಿ, ವ್ಯತ್ಯಾಸ 80 ರೂಪಾಯಿ. ಡೈ ಅಮೋನಿಯಂ ಸಲ್‌ಫೇಟ್ ತೆಗೆದುಕೊಂಡರೆ ಇಷ್ಯೂ ಪ್ರೈಸ್ 1,122 ರೂಪಾಯಿ, ಮಾರುವ ಬೆಲೆ 1,217 ರೂಪಾಯಿ, ವ್ಯತ್ಯಾಸ 95 ರೂಪಾಯಿ. ರೈತರ ಉದ್ಧಾರದ ಬಗ್ಗೆ ಮಾನ್ಯ ಮಂತ್ರಿಗಳಿಗೆ ಕಳಕಳಿ ಇದ್ದರೆ, ಇದರ ಬಗ್ಗೆ ದೀರ್ಘವಾಗಿ ಮನಸ್ಸು ಹರಿಸಬೇಕು ಎಂದು ನಾನು ಕಳಕಳಿಯಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಈಗ ವಿವಿಧ ಹಂತಗಳಲ್ಲಿ ಮಾರಾಟ ಮಾಡುವ ದರದಲ್ಲಿ 50 ರಿಂದ 95 ರೂಪಾಯಿಗಳವರೆಗೆ ಏನು ವ್ಯತ್ಯಾಸವಿದೆ ಅದನ್ನು ಕಡಮೆ ಮಾಡಬೇಕು. ಕಳೆದ ವರ್ಷ ಸುಮಾರು 28 ಲಕ್ಷ ರೂಪಾಯಿಗಳನ್ನು ರಾಜ್ಯ ಮಾರಾಟ ಸಹಕಾರ ಸಂಘಕ್ಕೆ ಸಬ್ಸಿಡಿಯಾಗಿ ಸರ್ಕಾರ ಕೊಟ್ಟಿದೆ. ವ್ಯವಸಾಯ ಇಲಾಖೆಯವರೇ ನೇರವಾಗಿ ರೈತನಿಗೆ ಗೊಬ್ಬರವನ್ನು ಮುಟ್ಟಿಸುವುದರ ಬಗ್ಗೆ ಕೆಲವು ಯೋಜನೆಗಳನ್ನು ಹಾಕಬೇಕು, ಈಗಿರುವ ದರಗಳಲ್ಲಿನ ಅಂತರವನ್ನು ಬಹುಮಟ್ಟಿಗೆ ಕಡಮೆ ಮಾಡಬೇಕು. ಇಲ್ಲದೆ ಇದ್ದರೆ ರೈತ ರಾಜ್ಯದ ಬೆನ್ನು ಮೂಳೆ ಎನ್ನುವ ಶಬ್ದ ಏನು ಉಪಯೋಗಿಸುತ್ತೇವೆ ಅದನ್ನು ಉಪಯೋಗಿಸತಕ್ಕ ನೈತಿಕ ಹಕ್ಕಾಗಲೀ, ಯಾವರೀತಿಯ ಹಕ್ಕಾಗಲೀ ನಮಗೆ ಉಳಿಯುವುದಿಲ್ಲ ಎಂದು ಹೇಳಬಯಸುತ್ತೇನೆ.

ಇಂಪ್ರೂವ್ಡ್ ಸೀಡ್ಸ್ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ, ನನಗೆ ತಿಳಿದಮಟ್ಟಿಗೆ ನಮ್ಮ ರಾಜ್ಯದಲ್ಲಿ 89 ಸೀಡ್ ಫಾರಂಗಳಿವೆ. ಇದರಲ್ಲಿ ಹೈ ಯೀಲ್ಡಿಂಗ್ ವೆರೈಟೀಸ್ ಎಷ್ಟು ಉತ್ಪಾದನೆ ಮಾಡಿದ್ದಾರೆ, ಎಷ್ಟು ಖರ್ಚು ಮಾಡಿದ್ದಾರೆ? ಸರ್ಕಾರದವರ ಅಂಕಿ ಅಂಶಗಳ ಪ್ರಕಾರ 4,19,000 ಎಕರೆ ಪ್ರದೇಶದಲ್ಲಿ ಹೈ ಯೀಲ್ಡಿಂಗ್ ವೆರೈಟೀಸ್ ಹಾಕಿದ್ದಾರೆ. ಸರ್ಕಾರ ಉತ್ಪನ್ನ ಮಾಡುವಂಥ ಮತ್ತು 89 ಸೀಡ್ ಫಾರಂಗಳಲ್ಲಿ ಉತ್ಪತ್ತಿಯಾಗುವಂಥ, ಬೀಜಗಳು ಸಾಕಾದಷ್ಟು ಆಗುತ್ತಿಲ್ಲ. ಖಾಸಗಿ ಕ್ಷೇತ್ರದಲ್ಲಿ, ಬಹಳ ವಿಷಾದಿಂದ ಹೇಳುತ್ತೇನೆ, ಈ ಬೀಜವನ್ನು ಉತ್ಪಾದನೆ ಮಾಡುವಂಥ ಜನರಿಂದ ಕೊಂಡು ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನವರ ಮುದ್ರೆಯೊತ್ತಿ ಸರ್ಕಾರ ಮಾರಾಟ ಮಾಡುತ್ತಿದೆ. ನಮ್ಮಲ್ಲಿ ಸಾಂದ್ರ ಬೇಸಾಯ ಮಾಡಬೇಕು ಮತ್ತು ಅದಕ್ಕೆ ಬೇಕಾಗುವಂಥ ಉತ್ತಮತರದ ಬೀಜ ಮತ್ತು ಹೈ ಯೀಲ್ಡಿಂಗ್ ವೆರೈಟೀಸ್ ಉತ್ಪಾದನೆ ಮಾಡಬೇಕು ಎನುವ ಸರ್ಕಾರದ ಕಲ್ಪನೆ ಏನಿತ್ತು, ಅದರ ಬಗ್ಗೆ ಕಾರ್ಯಕ್ರಮವೇನಿತ್ತು, ಅದು ಯಾವರೀತಿ ಆಗಿದೆ ಎನ್ನುವುದನ್ನು ನಾವು ನೋಡಿದರೆ ಬರೀ ಶ್ರೀಮಂತರು ಉತ್ತಮ ಬೀಜದ ಉತ್ಪಾದನೆಯ ವ್ಯವಸಾಯಕ್ಕೆ ಇಳಿದಿದ್ದಾರೆ. ಒಂದು ಕ್ವಿಂಟಾಲ್ ಹೈಬ್ರೀಡ್ ಮೇಜ್ ಬೆಲೆ ಒಂದು ಸಾವಿರ ರೂಪಾಯಿಗಳವರೆಗೂ ಇತ್ತು. ಅದು ಈಗ 500 ರಿಂದ 700 ರೂಪಾಯಿ ವರೆಗೂ ಇದೆ. ಅದೇ ರೀತಿ ಒಂದು ಕ್ವಿಂಟಾಲ್ ಜೋಳದ ಬೆಲೆ 500 ರೂಪಾಯಿ ಇದ್ದುದು ಈಗ 350 ರೂಪಾಯಿ ಆಗಿದೆ. ಸರ್ಕಾರ ಬರೀ ಶ್ರೀಮಂತರಿಗೆ ಪ್ರೋತ್ಸಾಹ ಕೊಟ್ಟಿದೆ. ಸರ್ಕಾರದವರು ತಮ್ಮ ಸೀಡ್ ಫಾರಂನಲ್ಲಿ ಬೆಳೆದು ಅದನ್ನು ರೈತರಿಗೆ ಒಂದು ಕೆ. ಜಿ. ಗೆ ಒಂದು ರೂಪಾಯಿ ಅಥವಾ ಒಂದೂವರೆ ರೂಪಾಯಿ ಪ್ರಕಾರ ಕೊಡುವುದಕ್ಕೆ ಸಾಧ್ಯವಿತ್ತು. ಹಾಗೆ ಮಾಡುತ್ತಿಲ್ಲ. ಖಾಸಗಿಯವರು ಉತ್ಪಾದನೆ ಮಾಡುವ ಬೀಜವನ್ನು ಕೊಂಡು, ನ್ಯಾಷನಲ್ ಸೀಡ್ ಕಾರ್ಪೊರೇಷನ್ ಮೂಲಕ ಅದರ ಮುದ್ರೆ ಒತ್ತಿ ಮಾರುವುದರಲ್ಲಿ ಇನ್ನೂ ಒಂದು ಕೆಲಸ ಮಾಡುತ್ತಾರೆ. ಗಂಡು ಮತ್ತು ಹೆಣ್ಣನ್ನು ಬೆರಕೆ ಮಾಡಿ ಲಾಭದಾಯಕ ಉದ್ಯಮವಾಗಿ ಕೆಲವರು ಮಾಡಿಕೊಂಡಿದ್ದಾರೆ. ಕಳೆದ ವರ್ಷ ಹೊನ್ನಾಳಿ ಮತ್ತು ಕೆಲವು ಕಡೆ ನ್ಯಾಷನಲ್ ಸೀಡ್ ಕಾರ್ಪೊರೇಷನ್ ಮುದ್ರೆ ಇದ್ದ

ಜೋಳವನ್ನು ತಂದು ಹಾಕಿದರೆ ಅದರಿಂದ ಸರಿಯಾದ ಬೆಳೆ ಬರಲಿಲ್ಲ. ಒಳ್ಳೆಯ ಬೀಜಗಳು ದೊರೆಯದೆ ಇರುವುದಕ್ಕೆ ಅನೇಕ ಕಾರಣಗಳಿವೆ. ಶ್ರೀಮಂತರು ಸೀಡ್ ಪ್ರೊಡಕ್ಷನ್‌ಗೆ ಹೊರಟಿದ್ದಾರೆ. ಇದನ್ನು ಪೂರ್ತಿಯಾಗಿ ತೊಡೆದು ಹಾಕಬೇಕು. ಸರ್ಕಾರದ ಸೀಡ್‌ಫಾರಂ ಏನಿದೆ, ಈ ರಾಜ್ಯಕ್ಕೆ ಬೇಕಾದ ಸಂಪೂರ್ಣ ಚಿತ್ತನೆ ಬೀಜವನ್ನು ಅಲ್ಲಿಯೇ ಬೆಳೆಯಬೇಕು ಮತ್ತು ರೈತರಿಗೆ ಅಗ್ಗದ ದರದಲ್ಲಿ, ಒಂದು ಕೆ.ಜಿ.ಗೆ ಒಂದು ರೂಪಾಯಿ ಪ್ರಕಾರ ಕೊಡಬೇಕು. ಹಾಗಾದರೆ ರೈತರೂ ಆಹಾರದ ಉತ್ಪಾದನೆಗೆ ಹೆಚ್ಚಿನ ಗಮನ ಹರಿಸುತಾರೆಂದು ನಾನು ಹೇಳಬಯಸುತ್ತೇನೆ.

ಇನ್ನು ಬೋರ್‌ವೆಲ್ ವಿಷಯ. ಇದಕ್ಕೆ ಡ್ಯೂಯಲ್ ಮ್ಯಾನೇಜ್‌ಮೆಂಟ್ ಇದೆ. ವ್ಯವಸಾಯ ಇಲಾಖೆ ಮತ್ತು ಮೈನ್ಸ್ ಅಂಡ್ ಜಿಯಾಲಜಿ ಇಲಾಖೆ, ಈ ಎರಡೂ ಇಲಾಖೆಗಳಿಂದ ಬೋರ್‌ವೆಲ್ ಕೆಲಸ ನಡೆಯುತ್ತದೆ. ವ್ಯವಸಾಯ ಇಲಾಖೆಯಲ್ಲಿ ಎಷ್ಟು ಡ್ರಿಲಿಂಗ್ ಯಂತ್ರಗಳಿವೆ, ಎಷ್ಟು ಬೋರ್‌ವೆಲ್‌ಗಳನ್ನು ಅವುಗಳಿಂದ ತೆಗೆಯಲಾಗಿದೆ ಎಂದು ಕೇಳಿದ್ದಕ್ಕೆ ಉತ್ತರವಾಗಿ ಸರ್ಕಾರದವರು ಈ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. 60 ಡ್ರಿಲಿಂಗ್ ಯೂನಿಟ್ಟುಗಳಿವೆ. ಇದರಿಂದ 1966-67 ರಲ್ಲಿ 50, 1967-68 ರಲ್ಲಿ 70 ಮತ್ತು 1568-69 ರಲ್ಲಿ 90 ಬೋರ್‌ವೆಲ್‌ಗಳನ್ನು ತೆಗೆದಿವೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ಮೊದಲನೇ ವರ್ಷದಲ್ಲಿ ಒಂದು ಯೂನಿಟ್‌ನಿಂದ ಒಂದಕ್ಕೂ ಕಡಮೆ, ಎರಡನೇ ವರ್ಷದಲ್ಲಿ ಒಂದು ಬೋರ್‌ವೆಲ್ ಮತ್ತು ಮೂರನೇ ವರ್ಷದಲ್ಲಿ ಒಂದೂವರೆ ಬೋರ್‌ವೆಲ್ ಪ್ರಕಾರ ತೆಗೆದಿದ್ದಾರೆ. ಮೈನ್ಸ್ ಅಂಡ್ ಜಿಯಾಲಾಜಿಕಲ್ ಇಲಾಖೆ ಅವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಸುಮಾರು 700 800 ಬಾವಿಗಳನ್ನು ತೆಗೆದಿದ್ದಾರೆ, ವ್ಯವಸಾಯ ಇಲಾಖೆಯು ಇದು ಪ್ರೆಸ್ಟೀಜ್ ಪ್ರಶ್ನೆ ಎಂದು ಭಾವಿಸಿ ಬಾವಿಗಳನ್ನು ತೆಗೆಯುವ ಕೆಲಸವನ್ನು ಮೈನ್ಸ್ ಮತ್ತು ಜಿಯಾಲಾಜಿಕಲ್ ಇಲಾಖೆಗೆ ವಹಿಸಿಲ್ಲ. ಇಂದು ಬೋರ್‌ವೆಲ್ಸ್ ಕೆಲಸವನ್ನು ಮೈನ್ಸ್ ಮತ್ತು ಜಿಯಾಲಾಜಿಕಲ್ ಇಲಾಖೆಗೆ ಪೂರ್ಣವಾಗಿ ವರ್ಗಾಯಿಸುವುದು ಒಳ್ಳೆಯದು. ವ್ಯವಸಾಯ ಇಲಾಖೆಯ ಜಾಯಿಂಟ್ ಡೈರೆಕ್ಟರು ಮೈನ್ಸ್ ಮತ್ತು ಜಿಯಾಲಾಜಿಕಲ್ ಇಲಾಖೆಗೆ ಬೋರ್‌ವೆಲ್ಸ್ ತೆಗೆಯುವ ಕೆಲಸವನ್ನು ವಹಿಸುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದುದರಿಂದ ಅಧಿಕಾರಿಗಳು ಹೇಳುವ ರೀತಿಯಲ್ಲಿ ಇದನ್ನು ಪ್ರೆಸ್ಟೀಜ್ ಪಾಯಿಂಟ್ ಎಂದು ಭಾವಿಸದೆ ಮೈನ್ಸ್ ಮತ್ತು ಜಿಯಾಲಾಜಿಕಲ್ ಇಲಾಖೆಗೆ ಈ ಕೆಲಸವನ್ನು ವಹಿಸಿದರೆ ಹೆಚ್ಚು ಉಪಯೋಗವಾಗುವುದು. ಇದನ್ನು ಮಂತ್ರಿಗಳು ಯೋಚನೆಮಾಡಿ ಕಾರ್ಯರೂಪಕ್ಕೆ ತರಬೇಕು. ಖಾಸಗಿ ಸಂಸ್ಥೆಯವರು ಸರಿಯಾಗಿ ಕೆಲಸ ಮಾಡುವುದಿಲ್ಲ. ಜನರಿಗೆ ಅದರಿಂದ ಅನುಕೂಲವಾಗುವುದಿಲ್ಲ. ಆದುದರಿಂದ ವ್ಯವಸಾಯ ಇಲಾಖೆಯ ಮಂತ್ರಿಗಳು ನಮ್ಮಲ್ಲಿರುವ ಬೋರ್‌ವೆಲ್ ಯೂನಿಟ್ಟನ್ನು ಪೂರ್ಣವಾಗಿ ಮೈನ್ಸ್ ಜಿಯಾಲಾಜಿಕಲ್ ಇಲಾಖೆಗೆ ವರ್ಗಮಾಡಿ ಕೆಲಸದ ಪ್ರಗತಿಯನ್ನು ಸ್ವಲ್ಪ ನೋಡುವುದು ಒಳ್ಳೆಯದು. ಆ ಇಲಾಖೆಯು ಕೆಲವು ತಾಲ್ಲೂಕುಗಳಲ್ಲಿ ಒಳ್ಳೆಯ ಕೆಲಸ ಮಾಡಿದೆ. ಆದುದರಿಂದ ಮಂತ್ರಿಗಳು ಈ ವಿಚಾರವನ್ನು ತೀವ್ರವಾಗಿ ಯೋಚನೆ ಮಾಡಿ ನಾನು ಸಲಹೆ ಮಾಡಿದಂತೆ ಕಾರ್ಯರೂಪಕ್ಕೆ ಬೇಗ ತರಬೇಕೆಂದು ಸೂಚಿಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[Mr. SPEAKER in the Chair]

† ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ವ್ಯವಸಾಯ, ತೋಟಗಾರಿಕೆ ಮತ್ತು ಮೀನುಗಾರಿಕೆ ಇಲಾಖೆಗಳಿಗೆ ಸುಮಾರು ಹನ್ನೊಂದುವರೆ ಕೋಟಿ ರೂಪಾಯಿಗಳ ಬೇಡಿಕೆಯೇನಿದೆ ಅದನ್ನು ವಿರೋಧಿಸುತ್ತೇನೆ. ಈ ಇಲಾಖೆಗಳು ಸರಕಾರದ ದೃಷ್ಟಿಯಲ್ಲಿ ಕನಿಷ್ಠವಾಗಿದೆ. ವ್ಯವಸಾಯದ ಇಲಾಖೆಯ ಬಗ್ಗೆ ಸರಕಾರ ಬಹಳ ಉದಾಸೀನದಿಂದ ಇದೆ, ಅದಕ್ಕೆ ಬಜೆಟ್ಟಿನಲ್ಲಿ ಎಷ್ಟು ಹಣ ಒದಗಿಸಬೇಕಾಗಿತ್ತೋ ಅಷ್ಟನ್ನು ಒದಗಿಸಿಲ್ಲ. ಇದು ನಿಜವಾಗಿಯೂ ಕೂಡ ಶೋಚನೀಯ ವಿಚಾರ. ವ್ಯವಸಾಯದ ಇಲಾಖೆಯ ಮಂತ್ರಿಗಳಾದ ಶ್ರೀ ರಾಚಯ್ಯನವರೇನೋ ಚೆನ್ನಾಗಿ ಅಭಿವೃದ್ಧಿ ಸಾಧಿಸಬೇಕೆಂದಿದ್ದಾರೆಂಬುದು ತಿಳಿದುಬಂದಿದೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಆದರೂ ಕೂಡ ಈ ಇಲಾಖೆಯನ್ನು ಸಾಕಾದಷ್ಟು ವಿಸ್ತರಿಸುವುದಕ್ಕೆ ಮತ್ತು ಬಲಪಡಿಸುವುದಕ್ಕೆ ಮಾಡಬೇಕಾದ ಕೆಲಸವನ್ನು ಮಾಡಿಲ್ಲ, ನೇರವಾಗಿ ವ್ಯವಸಾಯಗಾರರಿಗೆ ಸಹಾಯ ಮತ್ತು ಮಾರ್ಗದರ್ಶನ ಇಲಾಖೆಯವರು ಸರಿಯಾಗಿ ಕೊಡುತ್ತಿಲ್ಲ. ವ್ಯವಸಾಯಕ್ಕೆ ಬೇಕಾದ ಸಹಾಯ ಮತ್ತು ಸಲಹೆ ಕೊಡಲು ಅವಕಾಶವಿದೆ; ನಿಯಮವಿದೆ. ಆದರೆ ಅದರ ಪ್ರಕಾರ ಕೊಡುತ್ತಿಲ್ಲ. ಇದರ ಜೊತೆಗೆ ಕೇಂದ್ರ ಸರಕಾರದ ಆರ್ಥಿಕ ಮಂತ್ರಿಗಳು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಸ್ಟೇಟ್

(ಶ್ರೀ ಎಚ್. ಬಿ. ಜ್ವಾಲನಯ್ಯ)

ಸಬ್ಸಿಡಿ ಇಲ್ಲ, ಈ ಇಲಾಖೆಯನ್ನು ಕೇಳಲಾಗಿದೆ ಎಂದು ಹೇಳಿದ್ದಾರೆ. ನಾಲ್ಕಾರು ವರ್ಷಗಳಿಂದ ವ್ಯವಸಾಯಗಾರರಿಗೆ ತಮ್ಮ ವ್ಯವಸಾಯದಿಂದ ಸಾಕಷ್ಟು ಪ್ರತಿಫಲ ಬರುತ್ತಿರಬಹುದು. ಆದಾಗ್ಯೂ ಕೂಡ ವ್ಯವಸಾಯಗಾರರ ಶ್ರಮವನ್ನು ಗಮನಿಸದೆ ಅವನಿಗೆ ಇರುವ ಉತ್ತೇಜನ ಕಡಮೆಯಾಗುವಂತೆ ವ್ಯವಸಾಯ ವರಮಾನ ತೆರಿಗೆ ಹಾಕುವುದನ್ನು ನಾನು ಪ್ರಬಲವಾಗಿ ವಿರೋಧಿಸುತ್ತೇನೆ. ಇಂದು ವ್ಯವಸಾಯಗಾರರಿಗೆ ರಸಾಯನಿಕ ಗೊಬ್ಬರ ಮತ್ತು ನೀರನ್ನು ಸಾಕಷ್ಟು ಒದಗಿಸಬೇಕೆಂದು ಹೇಳುವುದು, ಇನ್ನೊಂದು ಕಡೆ ಅವರಮೇಲೆ ಹೆಚ್ಚು ತೆರಿಗೆ ಹಾಕುವುದು ಇದು ಒಂದಕ್ಕೊಂದಕ್ಕೆ ವಿರೋಧ. ಇದನ್ನು ರಾಜ್ಯ ಸರಕಾರದವರು ವಿರೋಧಿಸಬೇಕು. ಪಂಪುಸೆಟ್ಟುಗಳ ಮೇಲೆ ತೆರಿಗೆ ಹಾಕಬೇಕೆಂದಿದ್ದಾರೆ. ಹಾಗೆ ಮಾಡಿದರೆ ಲಿಫ್ಟ್ ಇರಿಗೇಷನ್‌ನಿಂದ ಬೇಕಾದಷ್ಟು ಬೆಳೆ ತೆಗೆಯುವುದಕ್ಕೆ ಉತ್ತೇಜನ ದೊರೆಯದೆ ಅದಕ್ಕೆ ಕುಂದುಂಟಾಗುವುದು. ಆದುದರಿಂದ ಈ ತೆರಿಗೆ ಹಾಕುವುದನ್ನು ಕೂಡ ಕೈಬಿಡಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯ ಮಾಡಲೇಬೇಕಾಗಿದೆ.

ಇದರ ಜೊತೆಗೆ ಕೋ-ಆಪರೇಷನ್ ವಿಚಾರ ಹೇಳಿದ್ದಾರೆ. ಸ್ಟೇಟ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಯ ಮೂಲಕ ಗೊಬ್ಬರ ಮಾರಾಟ ಮಾಡುತ್ತಿದ್ದಾರೆ, ಅದರ ಮೂಲಕ ಮಾರಬಾರದು ಎಂದು ಮಾನ್ಯ ಮಿತ್ರರು ಒತ್ತಾಯಮಾಡಿ ಹೇಳಿದ್ದಾರೆ. ಹೀಗೆ ಗೊಬ್ಬರವನ್ನು ಹಂಚುವಾಗ ಒಂದು ಟನ್ನಿಗೆ ನೂರು ರೂಪಾಯಿ ರೈತರ ಮೇಲೆ ಬೀಳುವುದು. ಈಗ 970 ರೂಪಾಯಿಗೆ ರಿಸರ್ವ್ ಫಂಡಿಗೆ 12 ರೂಪಾಯಿ, ಸ್ಟೇಟ್, ಮಾರ್ಕೆಟಿಂಗ್ ಸೊಸೈಟಿಗೆ ಲಾಭ 22 ರೂಪಾಯಿ, ಟಿ.ಎಂ.ಪಿ.ಸಿ.ಗೆ 26 ರೂಪಾಯಿ, ಪ್ರೈಮರಿ ಸೊಸೈಟಿಗೆ 30 ರೂಪಾಯಿ ಬರುತ್ತದೆ. ನೇರವಾಗಿ ವ್ಯವಸಾಯದ ಇಲಾಖೆಯವರೇ ರೈತರಿಗೆ ಗೊಬ್ಬರ ಮಾರುವಂತೆ ಸರಕಾರ ಏರ್ಪಾಡು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಒಂದು ಟನ್ ಗೊಬ್ಬರಕ್ಕೆ ಸುಮಾರು ನೂರು ರೂಪಾಯಿ ಹೆಚ್ಚಾಗಿ ರೈತರು ಕೊಡಬೇಕು. ಶ್ರೀಮಾನ್ ಚನ್ನಬಸಪ್ಪನವರು ಹೇಳಿದಹಾಗೆ ಎಲ್ಲಾ ದೃಷ್ಟಿಯಿಂದ ರೈತ ಬೀಸ್ಟ್ ಆಫ್ ಬರ್ಡನ್ ಆಗಿದ್ದಾನೆ. ಸಂಘಟನೆಮಾಡುವುದಕ್ಕೆ ಶಕ್ತಿ ಇಲ್ಲದಿರುವುದರಿಂದ ಹೀಗಾಗಿದೆ. ಫಾರ್ಮರ್ಸ್ ಫೋರಂ, ಫಾರ್ಮರ್ಸ್, ಅಸೋಸಿಯೇಷನ್ ಇತ್ಯಾದಿಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಆದರೆ ರೈತರಿಗೆ ಸರಿಯಾಗಿ ಮಾರ್ಗದರ್ಶನ ಮಾಡುತ್ತಿಲ್ಲ. ಕೆಳಮಟ್ಟದಲ್ಲಿರುವ ವ್ಯವಸಾಯದ ಇಲಾಖೆ ಅಧಿಕಾರಿಗಳಿಂದ ರೈತರಿಗೆ ಯಾವ ರೀತಿಯ ಸೌಲಭ್ಯವೂ ಸಿಕ್ಕುತ್ತಿಲ್ಲ. ಅವರು ಹೇಳಿದಂತೆ ಮಾಡುವುದರಿಂದ ತೊಂದರೆಯಾಗುತ್ತಿದೆ. ಹಾಸನದಲ್ಲಿ ಒಬ್ಬ ಲಾಯರು ಉತ್ತಮ ರೀತಿಯಲ್ಲಿ ಕೃಷಿ ಮಾಡುತ್ತಿದ್ದಾರೆ, ಅವರಿಗೆ ವ್ಯವಸಾಯದ ಇಲಾಖೆಯ ಕೆಳಮಟ್ಟದ ಅಧಿಕಾರಿ ಒಬ್ಬರು ಸಲಹೆ ಕೊಟ್ಟರು, ಅದರಂತೆ ಅವರು ಐ. ಆರ್. ಒಂದು ಅಥವ ಐ. ಆರ್. ಎಂಟೋ ಏನೋ ಬತ್ತವನ್ನು ಬೆಳೆದು ಸಾವಿರಾರು ರೂಪಾಯಿ ನಷ್ಟ ಮಾಡಿಕೊಂಡಿದ್ದಾರೆ. ದೇಶದ ಉತ್ಪತ್ತಿಗೆ, ಎಕನಾಮಿಕ್ ಡೆವಲಪ್‌ಮೆಂಟಿಗೆ ಮತ್ತು ಕೈಗಾರಿಕೆಗಳಿಗೆ ವ್ಯವಸಾಯ ಮೂಲವಾಗಿದೆ. ಆದುದರಿಂದ ವ್ಯವಸಾಯವನ್ನು ಒಂದು ಕೈಗಾರಿಕೆ ಎಂದು ಭಾವಿಸಿ ಅದಕ್ಕೆ ಸಾಕಷ್ಟು ಉತ್ತೇಜನ ಕೊಡುವವರಗೆ ಈಗ ಇರುವ ಸಮಸ್ಯೆ ಪರಿಹಾರವಾಗುವುದಿಲ್ಲ. ಇದನ್ನು ಹಿಂದೆಯೂ ಹೇಳಿದ್ದಾಗಿದೆ. ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳೂ ಒಂದೇ ಇಲಾಖೆಯಲ್ಲಿರಬೇಕು, ಬಾವಿ ತೋಡುವುದು, ಜಿಯಾಲಾಜಿಕಲ್ ಇಲಾಖೆ ಕೆಲಸ ಮುಂತಾದ್ದೆಲ್ಲಾ ಒಂದೇ ಇಲಾಖೆಗೆ ಸಂಬಂಧಪಟ್ಟಿರಬೇಕು. ನೀರಾವರಿ, ಸಣ್ಣ ನೀರಾವರಿ, ಬೋರ್‌ವೆಲ್, ಗೊಬ್ಬರದ ಮಾರಾಟ ಮುಂತಾದ್ದನ್ನೆಲ್ಲಾ ಕ್ರೋಢೀಕರಿಸಿ ವ್ಯವಸಾಯದ ಇಲಾಖೆಯಲ್ಲೇ ಅವೆಲ್ಲಾ ಇರುವಂತೆ ಮಾಡಬೇಕು.

ತೋಟಗಾರಿಕೆ ಇಲಾಖೆ ನಮ್ಮ ದೇಶದಲ್ಲಿ ಜನರ ಗಮನವನ್ನು ಸೆಳೆದಿದೆ. ಉತ್ಸಾಹದಿಂದ ಈ ಇಲಾಖೆಯ ಡೈರೆಕ್ಟರು ರಾಜ್ಯದಲ್ಲಿ ಈ ಇಲಾಖೆ ಕೆಲಸವನ್ನು ಚೆನ್ನಾಗಿ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ನನಗೆ ಅನೇಕ ತೋಟಗಳನ್ನು ನೋಡುವ ಅವಕಾಶ ಸಿಕ್ಕಿತ್ತು. ಬಾಳೆಯ ಗಿಡ, ಹಣ್ಣು ಮತ್ತು ತರ್ಕಾರಿ ಬೆಳೆಯಲು ಪ್ರೋತ್ಸಾಹ ಹೆಚ್ಚಾಗಿದೆ, ಇವು ದೇಶದ ಆಹಾರಕ್ಕೆ ಸಂಬಂಧಪಟ್ಟಿರುವುದರಿಂದ ಇವುಗಳನ್ನು ಬೆಳೆಯಲು ಹೆಚ್ಚು ಹಣ ಕೊಡಬೇಕು. ಪ್ರತಿ ಜಿಲ್ಲೆಯಲ್ಲೂ ಮತ್ತು ಪ್ರತಿ ತಾಲ್ಲೂಕಿನಲ್ಲೂ ಈ ಕೆಲಸವನ್ನು ವಿಸ್ತರಿಸಬೇಕು. ಬಾಳೆಯ ಹಣ್ಣನ್ನು ರಫ್ತು ಕೂಡ ಮಾಡುತ್ತಿರುವುದರಿಂದ ಹೆಚ್ಚು ಆದಾಯವೂ ಬರುತ್ತಿದೆ.

ಇದರ ಜೊತೆಗೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಏನಿವೆ ಅದು ರೈತರಿಗೆ ಬೇಕಾದ ಉಪಕರಣಗಳನ್ನು ಕೊಡುವುದಕ್ಕೆ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕು ಅಡ್ಡಿಯಾಗಿದೆ ಎಂದು

ಹೇಳುತ್ತಾರೆ. ಈ ಬ್ಯಾಂಕಿನ ಸಾಲ ಸೋಲವೇನೇ ಇರಲಿ, ಸರಕಾರದವರು ರೈತರಿಗೆ ಬೇಕಾದ ಉಪಕರಣಗಳನ್ನು ಕೊಡಲು ಕಾನೂನನ್ನು ಸಡಿಲ ಮಾಡಬೇಕು. ಇವತ್ತು ಯಾವ ಬ್ಯಾಂಕಿಗೆ ಬರಬೇಕಾದ ಬಾಕಿ ಜಾಸ್ತಿ ಇದೆ ಅದಕ್ಕೆ ಸಹಾಯ ಮಾಡುವುದಿಲ್ಲ ಎಂದು ರೈತರು ಹೇಳುತ್ತಾರೆ. ರೈತ ವ್ಯವಸಾಯದಲ್ಲಿ ಕ್ರಾಂತಿಕಾರಕವಾದ ಬದಲಾವಣೆ ಮಾಡಬೇಕಾದರೆ ಸರಕಾರ ತನ್ನ ದೃಷ್ಟಿಯನ್ನು ಕೂಡ ಬದಲಾಯಿಸಬೇಕು. ನೇರವಾಗಿ, ಸರಿಯಾಗಿ, ಸಕಾಲದಲ್ಲಿ ಹಣ ದೊರೆತರೆ ರೈತರು ತಮ್ಮ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಇರಿಗೇಷನ್ ಪ್ರಾಜೆಕ್ಟುಗಳು ಪಿ.ಡಬ್ಲ್ಯು.ಡಿ.ಗೆ ಸೇರಿರುವುದೇ ತೊಂದರೆಯಾಗಿದೆ; ಅದು ಪೂರ್ತಿಯಾದ ಮೇಲೆ ಲ್ಯಾಂಡ್ ಡೆವಲಪ್‌ಮೆಂಟ್ ವರ್ಕ್ಸ್ ತೆಗೆದುಕೊಳ್ಳುತ್ತಾ ಇದ್ದೇವೆ. ಹೇಮಾವತಿ ಪ್ರಾಜೆಕ್ಟನ್ನು ಕಟ್ಟುವ ಒಂದು ಅಭಿಪ್ರಾಯ ಇರುವುದಾದರೆ ನಾಳೆ ನಾಡಿದ್ದು ಎಲ್ಲಿ ಬರುತ್ತದೆ ಎಂಬುದನ್ನು ನಿಗದಿ ಮಾಡಿ ಅದನ್ನು ತೆಗೆಯಲು ಈಗಿನಿಂದಲೇ ಪ್ರಯತ್ನ ಮಾಡಬೇಕು ಇಲ್ಲವೇ ಇದ್ದರೆ ಬಹಳ ತೊಂದರೆಯಾಗುತ್ತದೆ.

ಫಾರೆಸ್ಟ್ ಡಿಪಾರ್ಟ್‌ಮೆಂಟ್, ಇದರಲ್ಲಿ ಬಹಳ ಆಶ್ಚರ್ಯದ ಸಂಗತಿ ಎಂದರೆ ಒಂದು ಕೋಟಿ ಹದಿನಾರು ಲಕ್ಷ ರೂಪಾಯಿನ ಎಸ್ಟಾಬ್ಲಿಷ್‌ಮೆಂಟ್ ಇವೆ; ಡೆವಲಪ್‌ಮೆಂಟಿಗೆ ಒಂದು ಕೋಟಿ 94 ಲಕ್ಷ ರೂಪಾಯಿ ಇದೆ. ಇದು ರೆವಿನ್ಯೂ ಯೀಲ್ಡಿಂಗ್ ಡಿಪಾರ್ಟ್‌ಮೆಂಟು. ಅನೇಕ ದೊಡ್ಡ ದೊಡ್ಡ ಕಂಪೆನಿಗಳಿಗೆ ಕಾಡನ್ನು ನಾಶಮಾಡುವಂತಹ ರೀತಿಯಲ್ಲಿ 60—70 ವರ್ಷದ ಗುತ್ತಿಗೆಗೆ ಕೊಟ್ಟಿದ್ದೀರಿ. ಇದರಿಂದ ಸಣ್ಣ ಸಣ್ಣ ಕೈಗಾರಿಕೋದ್ಯಮಿಗಳಿಗೆ ಸಾಫ್ಟ್ ವುಡ್ ಸಿಕ್ಕದ ಪರಿಸ್ಥಿತಿ ಉಂಟಾಗಿದೆ. ಯಾವ ಬಂಡವಾಳವನ್ನೂ ಹಾಕದೆ ಅದರ ಏಜೆನ್ಸಿ ಪಡೆದಿರತಕ್ಕವರು ಪ್ರತಿವರ್ಷ 5—10 ಲಕ್ಷ ರೂಪಾಯಿ ಸಂಪಾದನೆ ಮಾಡುವುದಕ್ಕೆ ಅವಕಾಶ ಕಲ್ಪಿಸಿದ್ದೀರಿ. ಸಾಫ್ಟ್‌ವುಡ್ ಸಾಮಾನ್ಯ ಜನರಿಗೆ ಸಿಕ್ಕುವಂತೆ ಅವರಿಗೆ ಸಹಾಯವಾಗುವ ರೀತಿಯಲ್ಲಿ ತಮ್ಮ ನೀತಿಯನ್ನು ಬದಲಾವಣೆ ಮಾಡಬೇಕು ಮತ್ತು ಯಾರು ಕಾಡನ್ನು ಕಡಿಯುತ್ತಾರೆ ಆ ಸ್ಥಳದಲ್ಲಿ ಅವರು ಬೇರೆ ಮರವನ್ನು ನೆಡಬೇಕು ಎಂಬ ನಿಯಮವನ್ನು ಕಡ್ಡಾಯ ಮಾಡಬೇಕೆಂದು ಹೇಳುತ್ತೇನೆ. ರಬ್ಬರ್ ಪ್ಲಾಂಟೇಷನ್‌ಗೆ ಬಹಳ ಒಳ್ಳೆಯ ಭವಿಷ್ಯ ಇದೆ. ಆದರೆ ಅದರಿಂದ ನಮಗೆ ಸಾಕಾದಷ್ಟು ಉತ್ಪನ್ನ ಬರುತ್ತಿಲ್ಲ. ಅದನ್ನು ಬೆಳೆಸುವುದಕ್ಕೆ ನಿಮಗೆ ಶಕ್ತಿ ಇಲ್ಲದೇ ಇದ್ದರೆ ಯಾರು ಮುಂದೆ ಬರುತ್ತಾರೋ ಅವರಿಗೆ ಜಮೀನು ಕೊಟ್ಟು ಯಾವುದಾದರೂ ಒಂದು ಕಂಡೀಷನ್ ಮೇಲೆ ರಬ್ಬರ್ ಪ್ಲಾಂಟೇಷನ್ ಬೆಳೆಯಬೇಕೆಂದು ಹೇಳಿದರೆ ಅನೇಕ ಜನ ಮುಂದೆ ಬರುವುದಕ್ಕೆ ಸಿದ್ಧವಾಗಿದ್ದಾರೆ. ಇದಕ್ಕಿಂತಲೂ ಹೆಚ್ಚಾಗಿ ಗಂಧದ ಮರ ಮೈಸೂರು ಸಂಸ್ಥಾನದಲ್ಲಿ ನಾಶವಾಗುತ್ತಾ ಇದೆ. ಈಗಲೇ ಎಚ್ಚರಿಕೆ ತೆಗೆದುಕೊಳ್ಳದಿದ್ದರೆ ನಮ್ಮ ದೇಶದಲ್ಲಿರತಕ್ಕ ಶ್ರೇಷ್ಠವಾದ ಗಂಧದ ಮರ ಸಂಪೂರ್ಣವಾಗಿ ನಾಶವಾಗತಕ್ಕ ಕಾಲ ಮುಂದೆ ಬರಬಹುದು ಎಂದು ನನಗೆ ಅನಿಸುತ್ತದೆ.

ಅನಿಮಲ್ ಹಸ್ಬೆಂಡರಿ ಇಲಾಖೆಗೆ ಒಂದು ಕೋಟಿ 95 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಇದನ್ನು ನೋಡಿದರೆ ಇದು ಸರ್ಕಾರದವರ ಗಮನದಲ್ಲಿ ಇಲ್ಲವೇ ಇಲ್ಲವೇನೋ ಅನ್ನುವ ರೀತಿಯಲ್ಲಿ ಇದೆ ಎಂದು ಹೇಳಬಹುದು. ಈ ಹಣ ಯಾವುದಕ್ಕೂ ಸಾಲುವುದಿಲ್ಲ. ದನಗಳಿಗೆ ಹುಲ್ಲಿಗೆ ಯಾವ ಒಂದು ವ್ಯವಸ್ಥೆಯನ್ನು ಮಾಡಬೇಕೋ ಅದನ್ನೂ ಕೂಡ ಮರೆತು ಬಿಟ್ಟಿದ್ದೀರಿ. ಇದ್ದಬಿದ್ದ ಗೋಮಾಳವೆಲ್ಲಾ ಹೊರಟು ಹೋಗುತ್ತಾ ಇದೆ. ಸರ್ಕಾರ ಅಮೃತ ಮಹಲ್ ಭೂಮಿಯನ್ನೂ ಕೂಡ ಕೊಟ್ಟು ಬಿಡಬೇಕೆಂಬ ಧೋರಣೆಯನ್ನು ತಾಳಿದೆ. ಇದು ಸಾಧುವಾದುದಲ್ಲ. ಅಮೃತಮಹಲ್ ಜಮೀನನ್ನು ಹಾಗೆಯೇ ಇಡಬೇಕು ಮತ್ತು ಗೋಮಾಳವನ್ನು ಹಾಗೆಯೇ ಉಳಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ. ಎರಡು ಮೂರು ಡೈರಿ ಫಾರಂಗಳು ಇವೆ. ಮಂಗಳೂರಿನ ಹತ್ತಿರ ಕೈಲೋ ಡೈರಿ ಫಾರಂ ಇದೆ, ಮತ್ತು ಹೆಸರಘಟ್ಟದ ಹತ್ತಿರ ಒಂದು ಡೈರಿ ಫಾರಂ ಇದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಜೊತೆಯಲ್ಲಿ ಹೋದಾಗ ಅವನ್ನು ನೋಡಿಕೊಂಡುಬಂದಿದ್ದೇನೆ. ಕೈಲೋ ಅಷ್ಟು ಅಧ್ವಾನ ಬೇರೆ ಎಲ್ಲೂ ಇಲ್ಲ. ಹೆಸರಘಟ್ಟದಲ್ಲಿ ಬೇಕಾದಷ್ಟು ಜಮೀನು ಇರುವ ಕಡೆ ಅಲ್ಲಿರತಕ್ಕ ಹಸುಗಳಿಗೆ ಹುಲ್ಲನ್ನು ಕೊಂಡುಕೊಳ್ಳುತ್ತಾ ಇರುವುದು ನಿಜವಾಗಿಯೂ ಕೂಡ ಒಂದು ಶೋಚನೀಯವಾದ ವಿಚಾರ. ಇದು ಹೀಗಿರಬಾರದು ಒಂದು ಮಾದರಿಯಾಗಿರಬೇಕು ಎಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಇನ್ನು ಬೆಂಗಳೂರು ಡೈರಿ. ಇದು ಯಾವ ಸರ್ಕಾರಕ್ಕೂ ಕೂಡ ಗೌರವ ತರದ ರೀತಿಯಲ್ಲಿ ನಡೆಯುತ್ತಾ ಇದೆ. ಒಂದೂವರೆ ಕೋಟಿ ರೂಪಾಯಿ ಬಂಡವಾಳ ಹಾಕಿದ್ದೀರಿ ಎರಡು ವರ್ಷದಲ್ಲಿ ಒಂದು ಕೋಟಿ ರೂಪಾಯಿ ನಷ್ಟವಾಗಿದೆ. ಇದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡದಿದ್ದರೆ ಇನ್ನೂ ಬಹಳ ಅವಮಾನಕರವಾದ ರೀತಿಯಲ್ಲಿ ಸರ್ಕಾರ ನಷ್ಟವನ್ನು ಎದುರಿಸಬೇಕಾಗುತ್ತದೆ.

(ಶ್ರೀ ಎಚ್. ಬಿ. ಜ್ವಾಲನಯ್ಯ)

ಮಿಲ್ಕ್ ಪೌಡರ್ ಒಂದು ಟನ್‌ಗೆ 4 ಸಾವಿರ ರೂಪಾಯಿ ಆಗುತ್ತದೆ ಅದನ್ನು ಉಪಯೋಗಮಾಡಿ ಸೆಕೆಂಡ್ ಗ್ರೇಡ್ ಮಿಲ್ಕ್ ತಯಾರು ಮಾಡಿ ಸುಮಾರು 8 ಸಾವಿರ ರೂಪಾಯಿ ಪಡೆಯುತ್ತಾ ಇದ್ದೀರಿ. ಅದರ ಜೊತೆಗೆ ಬೈ ಪ್ರಾಡಕ್ಟ್ಸನಿಂದ ಸುಮಾರು 8 ಸಾವಿರ ರೂಪಾಯಿ ಬರುತ್ತಾ ಇದೆ. ಷೆಡ್ ಏರಿಯಾದಿಂದ ಬರತಕ್ಕ ಹಾಲು ಒಂದಕ್ಕೆ ಎರಡರಷ್ಟು ಬಂದು 50 ಲಕ್ಷ ಲೀಟರ್ಸ್ ನಷ್ಟ ಹಾಲು ಒಂದು ವರ್ಷಕ್ಕೆ ನಷ್ಟವಾಗುತ್ತಾ ಇದೆ ಇದನ್ನು ನೋಡಿದರೆ ಇದನ್ನು ಮುಚ್ಚುವುದೇ ಲೇಸು ಎಂದು ಅನಿಸುತ್ತಾ ಇದೆ. ಇದೇ ರೀತಿ ಮಂಗಳೂರಿನ ಡೈರಿ ಫಾರಂನ್ನೂ ಕೂಡ ಮುಚ್ಚುವುದು ಒಳ್ಳೆಯದು, ಅಲ್ಲಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ನೀರೇ ಇಲ್ಲ. ಅದಕ್ಕಾಗಿ ಬಂದಂತಹ ಎಕ್ವಿಪ್‌ಮೆಂಟು ಅಲ್ಲಿ ಗುಡ್ಡದ ಮೇಲೆ ಬಿದ್ದಿದೆ, ಅದನ್ನು ಕಾರ್ಯಗತ ಮಾಡಿಲ್ಲ.

ಇನ್ನು ಧಾರವಾಡದ ಡೈರಿ ಫಾರಂ ಒಂದೆರಡು ವರ್ಷ ಕೆಲಸ ಮಾಡಿ ನಿಂತುಹೋಗಿದೆ ಎಂದು ಕೇಳಿದೆ. ಭದ್ರಾವತಿಯಲ್ಲಿರುವುದು ಏನಾಗಿದೆ ಎಂಬುದು ತಮಗೇ ಗೊತ್ತಿದೆ. ಕೋಟ್ಯಾಂತರ ರೂಪಾಯಿನ ಎಕ್ವಿಪ್‌ಮೆಂಟ್ ಬಂದು ಹಾಳಾಗುತ್ತಾ ಇದೆ. ನಮ್ಮ ಬೆಂಗಳೂರು ಡೈರಿಯಲ್ಲಿ ಒಂದು ದಿವಸಕ್ಕೆ ಮ್ಯಾಕ್ಸಿಮಂ 70–75 ಸಾವಿರ ಲೀಟರ್ಸ್ ಪ್ರೋಸೆಸ್ ಮಾಡಬಹುದು, ಈಗ ಮಾಡುತ್ತಾ ಇರುವುದು 25–30 ಸಾವಿರ ಲೀಟರ್ಸ್. 50 ಲಕ್ಷ ರೂಪಾಯಿ ಒಂದು ವರ್ಷಕ್ಕೆ ನಷ್ಟವಾಗುತ್ತಾ ಇದೆ. ಇಷ್ಟಾದರೂ ಕೂಡ ಇದರ ಕಡೆಗೆ ತೀವ್ರ ಗಮನ ಹರಿಸದಿದ್ದರೆ ಪ್ರಯೋಜನವಿಲ್ಲ. ತಾವು ಲಕ್ಷಗಟ್ಟಲೆ ರೂಪಾಯಿ ಖರ್ಚುಮಾಡಿ ತರಿಸಿರತಕ್ಕ ಎಕ್ವಿಪ್‌ಮೆಂಟಿನ ಉಪಯೋಗ ಮಾಡಿಕೊಂಡು ಹಾಲನ್ನು ಪ್ರೋಸೆಸ್‌ಮಾಡಿ ಬಡವರಿಗೂ, ಸ್ಕೂಲುಗಳಿಗೆ ಹೋಗತಕ್ಕ ಮಕ್ಕಳಿಗೂ ಮತ್ತು ಕಡಿಮೆ ವರಮಾನ ಬರತಕ್ಕವರಿಗೂ ಸಬ್ಸಿಡೈಸ್ಡ್ ರೇಟ್ಸ್‌ನಲ್ಲಿ ಕೊಡಬೇಕೆಂದು ಹೇಳುತ್ತೇನೆ. ಈ ಡೈರಿ ಬಗ್ಗೆ ಹೆಚ್ಚಿನ ಗಮನವನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ಹೇಳುತ್ತೇನೆ. ತಾವು ಇದಕ್ಕಾಗಿ ಕೊಟ್ಟಿರತಕ್ಕ ಒಂದು ಲಕ್ಷ 95 ಸಾವಿರ ರೂಪಾಯಿ ಬಹಳ ಕಡಿಮೆ. ಶ್ರೀಮಾನ್ ರಾಚಯ್ಯನವರು ಈ ವಿಷಯದಲ್ಲಿ ಅವರ ಕರ್ತವ್ಯವನ್ನು ಎಂದರೆ ಬಡ್ಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಕೊಡುವಂತಹ ಕೆಲಸವನ್ನು ಮಾಡಿಲ್ಲ ಎಂದು ನಾನು ಚಾರ್ಜ್ ಮಾಡಬೇಕಾಗಿದೆ.

ವ್ಯವಸಾಯದ ಇಲಾಖೆಯಲ್ಲಿ 11 ಕೋಟಿ ರೂಪಾಯಿ ಎಸ್ಟ್ಯಾಬ್ಲಿಷ್‌ಮೆಂಟ್‌ಗಾಗಿ ಹೋಗುತ್ತಾ ಇದೆ. ರೀಸರ್ಚ್‌ಗಾಗಿ 75 ಲಕ್ಷ ರೂಪಾಯಿ ಇಟ್ಟಿದ್ದೀರಿ. ಶ್ರೀಮಾನ್ ದೇವೇಗೌಡರು ಹೇಳಿದ ಹಾಗೆ ಲ್ಯಾಬೊರೇಟರಿ, ಸಾಯಿಲ್ ಟೆಸ್ಟಿಂಗ್ ಈ ಸೌಲಭ್ಯ ಎಲ್ಲಾ ಜಿಲ್ಲೆಯಲ್ಲೂ ಇರಬೇಕು. ಸೆಂಟ್ರಲ್ ಲ್ಯಾಬೊರೇಟರಿಗೆ 30 ಸಾವಿರ ಸ್ಯಾಂಪಲ್ಸ್ ಬರುತ್ತವೆ, ಪ್ರತಿವರ್ಷ ಅಷ್ಟು ಅವರು ನೋಡುತ್ತಾ ಇದ್ದಾರೆ. ಇದು ಸಾಲದು, ದೇಶದ ಯಾವುದೋ ಒಂದು ಮೂಲೆಯಲ್ಲಿರತಕ್ಕ ಜಮೀನಿನ ಸ್ಯಾಂಪಲ್‌ನ್ನು ಇಲ್ಲಿಗೆ ಕಳುಹಿಸಬೇಕಾದರೆ ಬಹಳ ಕಷ್ಟ ಇದೆ. ಸ್ಟೇಟ್ ಇವ್ಯಾಲ್ಯುಯೇಷನ್ ಕಮಿಟಿಯವರು ಫರ್ಟಿಲಿಟಿ ಮ್ಯಾಪ್ ತಯಾರಿಸಬೇಕೆಂದು ಒಂದು ಸೂಕ್ತವಾದ ಸಲಹೆ ಕೊಟ್ಟಿದ್ದಾರೆ.

12–30 P.M.

ಸರ್ಕಾರದವರು ಇದನ್ನು ತಕ್ಷಣ ಮಾಡಬೇಕು. ರಾಜ್ಯದ ಯಾವ ಯಾವ ಭಾಗದಲ್ಲಿ ಯಾವ ಯಾವ ರೀತಿಯ ಮಣ್ಣಿದೆ, ಅದರಲ್ಲಿ ಸಾರ ಹೇಗಿದೆ ಎಂಬುದನ್ನು ನಿರ್ಧಾರ ಮಾಡಲು ಈ ರಾಜ್ಯದ ಫರ್ಟಿಲಿಟಿ ಮ್ಯಾಪನ್ನು ತಯಾರು ಮಾಡಬೇಕು. ಇದನ್ನು ಮಾಡಿ ಜನರಿಗೆ ಸೂಕ್ತ ತಿಳುವಳಿಕೆಯನ್ನು ಕೊಟ್ಟರೆ ರಾಜ್ಯದಲ್ಲಿ ಕ್ಷಾಮ ಬರುವುದಕ್ಕೆ ಕಾರಣವೇ ಇಲ್ಲ. ನಮ್ಮಲ್ಲಿ ಒಳ್ಳೆಯ ಹವಾಗುಣ ಇದೆ, ಜನಸಂಪತ್ತಿದೆ, ವನಸಂಪತ್ತಿದೆ, ಜಲಸಂಪತ್ತಿದೆ, ಭೂಸಂಪತ್ತಿದೆ. ಎಲ್ಲಾ ಸಂಪತ್ತಿದ್ದರೂ ಪ್ರಕೃತಿ ಮಾತೆ ಎಲ್ಲಾ ಸಂಪತ್ತುಗಳನ್ನು ಅನುಗ್ರಹಿಸಿದ್ದರೂ ಜನರು ಬಡತನದಲ್ಲಿ ನರಳುತ್ತಿರುವುದಕ್ಕೆ ಕಾರಣ ಅವರ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಸರ್ಕಾರಕ್ಕೆ ಪ್ರಾಕ್ಟಿಕಲ್ ಅಪ್ರೋಚ್ ಇಲ್ಲ. ಎಲ್ಲವನ್ನೂ ಥಿಯರಿಟಿಕಲ್ ಅಪ್ರೋಚಿನಲ್ಲಿ ನಡೆಸುತ್ತಿರುವುದರಿಂದ ದೇಶದಲ್ಲಿ ದಾರಿದ್ರ್ಯ ಉಂಟಾಗಿದೆ. ಇದಕ್ಕೆ ಸರ್ಕಾರವೇ ಮೂಲಕರಣ. ಇದರ ಜೊತೆಗೆ ಇನ್ನೂ ಒಂದು ಅನಾನುಕೂಲ ಏನಿದೆ ಎಂದರೆ— ನಮ್ಮ ರೈತ ಇನ್ನೂ ಅಜ್ಞಾನಿ. ಅವನಿಗೆ ವಿದ್ಯೆ ಇಲ್ಲ. ಅವನು ತನ್ನ ಅಗತ್ಯಗಳನ್ನು ಒದಗಿಸಿಕೊಳ್ಳಲು ಒಂದೊಂದು ವಸ್ತುವಿಗೆ ಒಬ್ಬೊಬ್ಬರಲ್ಲಿ ಒಂದೊಂದು ಆಫೀಸಿಗೆ ತಿರುಗಬೇಕಾಗಿದೆ. ಪ್ರತಿಯೊಂದು ಸಹಾಯಕ್ಕೂ ಒಬ್ಬ ಪುಡಾರಿಯನ್ನು ಹಿಡಿಯಬೇಕು. ಗೊಬ್ಬರಕ್ಕೆ ಒಬ್ಬರ ಬಳಿ ಹೋದರೆ ಬೀಜಕ್ಕೆ

ಇನ್ನೊಂದು ಇಲಾಖೆ, ಬಾವಿ ತೆಗೆಸತಕ್ಕ ವಿಚಾರಕ್ಕೆ ಮತ್ತೊಂದು ಇಲಾಖೆ, ಸಾಲ ಬೇಕಾದರೆ ಅದಕ್ಕೇ ಒಂದು ಇಲಾಖೆ. ಹೀಗೆ ಅನೇಕ ಇಲಾಖೆಗಳನ್ನು ಸುತ್ತಬೇಕಾಗಿದೆ. ಇದರಿಂದ ಅವನಿಗೆ ಬಹಳ ಅನಾನುಕೂಲವಾಗಿದೆ. ಆದ್ದರಿಂದ ಸರ್ಕಾರದವರು ರೈತನಿಗೆ ಬೇಕಾಗತಕ್ಕ ಆತನ ವಾಂಟ್ಸ್‌ಗಳೆಲ್ಲಾ ಒಂದೇ ಕಡೆ ಸಿಕ್ಕತಕ್ಕ ಒಂದು ಏರ್ಪಾಡನ್ನು ಮಾಡಬೇಕು. ದೇಶದ ಕಲ್ಯಾಣ ವಾಗಬೇಕಾಗಿದ್ದರೆ ಸರ್ಕಾರದವರು ಮೊದಲ ಪ್ರಾಶಸ್ತ್ಯವನ್ನು ಈ ವ್ಯವಸಾಯ ಇಲಾಖೆಗೆ ಕೊಡಬೇಕು. ರಾಜ್ಯದಲ್ಲಿ ಹೆಚ್ಚು ವ್ಯವಸಾಯ ಪಾಠಶಾಲೆಗಳನ್ನು ತೆರೆಯಬೇಕು. ರೈತರಿಗೆ ಸಾಕಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸಬೇಕು. ಆದರೆ ಈ ದಿವಸ ನಮ್ಮ ಮುಂದೆ ಈ ಬಾಬುಗಳಿಗೆ ಸರ್ಕಾರದವರು ಒದಗಿಸಿರತಕ್ಕ ಹಣ ಬಹಳ ಕಡಮೆಯಾಗಿದೆ, ಇದು ಏತಕ್ಕೂ ಸಾಲದು, ಆದುದರಿಂದ ಈ ಡಿಮ್ಯಾಂಡುಗಳನ್ನು ನಾನು ವಿರೋಧಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The allotted time is over. Is the House prepared to sit longer today ?

Sri B. BHASKARA SHETTY (Kaup).—Since a large number of members are desirous of participating in the Debate, let us sit upto 1-30 P. M. today.

Mr. SPEAKER.—Is it the pleasure of the House that the debate should go on upto 1-30 P. M. today ?

HON. MEMBERS.—Yes.

Mr. SPEAKER.—Then we sit upto 1-30 P. M. today. I request the hon. Members participating in the debate to abide by the time allotted to them. I call upon Sri Nanjappa.

ಶ್ರೀ ಎ. ನಂಜಪ್ಪ (ಶಾಂತಿನಗರ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ನಾನೀಗ ಫಾರೆಸ್ಟ್ ಇಲಾಖೆ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ನಾನು ಹೋದ ವರ್ಷ ಇದೇ ಬಡ್ಜೆಟ್ಟಿನ ಬಗ್ಗೆ ಚರ್ಚೆಯಾಗುತ್ತಿದ್ದ ಕಾಲದಲ್ಲಿ ಸರ್ವೆ ಸೌದೆಯನ್ನು ತರತಕ್ಕ ಬಗ್ಗೆ ವಿಧಿಸಲಾಗಿದ್ದ ಪರ್ಮಿಟ್ಟನ್ನು ಕೂಡಲೇ ಸರ್ಕಾರದವರು ರದ್ದು ಮಾಡಬೇಕೆಂದು ಹೇಳಿದ್ದೆ. ಕಾರಣ ಏನೆಂದರೆ ಅದರಿಂದ ರೈತನಿಗೆ ಬಹಳ ತೊಂದರೆ ಇದೆ. ನಾನು ಇದೇ ವಿಚಾರವನ್ನು ಸುಮಾರು 1945 ರಿಂದಲೂ ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ. ಸರ್ವೆ ಮರಗಳನ್ನು ಬೆಳೆಸತಕ್ಕ ರೈತನಿಗೆ ಬಹಳ ತೊಂದರೆಯಾಗುತ್ತಿದೆ, ಆದ್ದರಿಂದ ಆ ಪರ್ಮಿಟ್ ಪದ್ಧತಿಯನ್ನು ತೆಗೆಯಬೇಕೆಂದು ಕೇಳಿಕೊಂಡಿದ್ದೆನು. ಅದರ ಬಗ್ಗೆ ಸರ್ಕಾರದವರೇನೂ ಕಾರ್ಯಕ್ರಮ ಕೈಗೊಂಡಂತೆ ಕಂಡುಬರುವುದಿಲ್ಲ. ಪ್ರತಿಯೊಂದು ಪರ್ಮಿಟ್ಟನ್ನು ಪಡೆಯುವುದಕ್ಕೂ ತಾಶೀಲ್ದಾರರ ಬಳಿ ಹೋಗಬೇಕು. ಅಲ್ಲಿ ಯಾವಾಗಲೂ 3-4 ತಿಂಗಳು ಡಿಲೇ ಆಗುತ್ತದೆ. ಆ ತಾಶೀಲ್ದಾರರಿಂದ ಪರ್ಮಿಟ್ ಪಡೆಯಬೇಕಾಗಿದ್ದರೆ ರೆವಿನ್ಯೂ ಇನ್‌ಸ್ಪೆಕ್ಟರ್ ಅವರಿಂದ ಸ್ಥಳಮಹಜರ್ ಆಗಬೇಕು. ಆಗ ಅವನು ಪಾರ್ಟಿಗಳಿಂದ ದುಡ್ಡನ್ನು ತಿನ್ನದೆ ಆ ಕೆಲಸ ಮಾಡುವುದಿಲ್ಲ. ಅನಂತರ ಆ ಪರ್ಮಿಟ್ಟನ್ನು ಪಡೆಯುತಕ್ಕ ಬಗ್ಗೆ ಫಾರೆಸ್ಟ್ ಇಲಾಖೆಯವರಿಂದ ಷರಾ ಬೇರೆ ಬರೆಸಿ ತರಬೇಕು, ಅದಕ್ಕೆ ಬೇರೆ ಲಂಚ ಕೊಡಬೇಕು. ಇನ್ನು ದಾರಿಯಲ್ಲಿ ಆ ಸೌದೆಯನ್ನು ತರತಕ್ಕ ಕಾಲದಲ್ಲಿ ಪೋಲೀಸರಿಗೆ ಬೇರೆ ಲಂಚ ಕೊಡಬೇಕು. ಇಂಥ ತೊಂದರೆಗಳು ರೈತರಿಗೆ 1945 ರಿಂದ ಇರುತ್ತವೆ. ಈ ವಿಚಾರವನ್ನು ಅನೇಕ ಸಾರ್ತಿ ರೈತರು ಸರ್ಕಾರಕ್ಕೆ ತಿಳಿಸಿದ್ದಾರೆ. ಅನೇಕ ನಾಗರೀಕರೂ ಕೂಡ ತಿಳಿಸಿದ್ದಾರೆ. ಈ ಬಾಬಿನಿಂದ ಸರ್ಕಾರಕ್ಕೇನೂ ಹಣ ಬರುತ್ತಿಲ್ಲ. ಚೆಕ್ ಪೋಸ್ಟ್‌ಗಳಲ್ಲಿ ಲಾರಿ ಬಂದಾಗ ಅಲ್ಲಿ 5-10 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಹೋದ ಅಧಿವೇಶನದ ಕಾಲದಲ್ಲಿ ಇದೇ ವಿಚಾರದಲ್ಲಿ ಬೆಂಗಳೂರು, ತುಮಕೂರು ಮತ್ತು ಕೋಲಾರ ಈ ಮೂರು ಜಿಲ್ಲೆಗಳ ಶಾಸನ ಸಭೆಯ 15 ಜನ ಸದಸ್ಯರು ಒಂದು ಮೆಮೊರಾಂಡಂನ್ನು ಬರೆದು ಆಗಿನ ರೆವಿನ್ಯೂ ಮಂತ್ರಿಗಳಿಗೆ ಕೊಟ್ಟಿದ್ದೆವು. ಆದರೆ ಇಲ್ಲಿಯವರೆಗೇನೂ ಮಾಡಿಲ್ಲ. ಈ ಸರ್ವೆ ಮರಗಳನ್ನು ಬೆಳೆಯಲು ರೈತನಿಗೆ 6-7 ವರ್ಷಗಳು ಬೇಕಾಗುತ್ತದೆ. ಆತ ಜಮೀನಿನಲ್ಲಿ ಬೆಳೆದ ಮರಗಳನ್ನು ತಾನು ನೇರವಾಗಿ ತಂದು ಮಾರಾಟ ಮಾಡುವುದಕ್ಕೆ ಅವಕಾಶವಿಲ್ಲ. ಅದಕ್ಕೆ ನಾಲ್ಕಾರು ಕಡೆ ಲಂಚ ಕೊಡಬೇಕಾಗಿದೆ. ಅದರಿಂದ ಬೆಂಗಳೂರಲ್ಲಿ ಸರ್ವೆ ಸೌದೆಯ ಬೆಲೆ ಜಾಸ್ತಿಯಾಗಿದೆ. ಸರ್ವೆ ಸೌದೆಗೇನು ಬೆಲೆಯನ್ನು

(ಶ್ರೀ ಎ. ನಂಜಪ್ಪ)

ಕೊಡುತ್ತಾರೋ ಅದಕ್ಕೆ ನಾಲ್ಕಾರು ಕಡೆಗಳಲ್ಲಿ ಕೊಡತಕ್ಕ ಲಂಚದ ಹಣವನ್ನೂ ಸಹಾ ಸೌದೆಯ ಮೇಲೇ ಹಾಕುತ್ತಿರುವುದರಿಂದ ಅದರ ಬೆಲೆ ಬಹಳ ದುಬಾರಿಯಾಗಿದೆ. ಆದ್ದರಿಂದ ಪರ್ಮಿಟ್ ಪದ್ಧತಿಯನ್ನು ರದ್ದು ಮಾಡಬೇಕೆಂದು ಮಂತ್ರಿಗಳಲ್ಲಿ ಹೋಗಿ ಅನೇಕಾವರ್ತಿ ಹೇಳಿಕೊಂಡಿದ್ದಾಯಿತು. ಆದರೆ ಅದನ್ನು ಏತಕ್ಕೆ ರದ್ದು ಮಾಡುತ್ತಿಲ್ಲವೋ ಕಾಣೆ. ಬೆಂಗಳೂರಲ್ಲಿ ಈ ದಿವಸ ಸರ್ವೆ ಸೌದೆಯ ಬೆಲೆ ಮಣಕ್ಕೆ 1. 20 ರೂ. ಆಗಿದೆ. ಜನರಿಗೆ ತಿನ್ನುವುದಕ್ಕೇ ಗತಿಯಿಲ್ಲ. ಅಂಥವರು ಒಂದು ಮಣ ಸೌದೆಗೆ ಈ ದಿವಸ ರೂ. 1.20 ಕೊಡಬೇಕಾಗಿದೆ. ಈ ವಿಚಾರದಲ್ಲಿ ಎಂ. ಎಲ್. ಎ.ಗಳು ಬರೆದು ಕೊಟ್ಟಾಗ್ಯೂ ಮಂತ್ರಿಗಳು ಇದಕ್ಕೆ ಏಕೆ ಇನ್ನೂ ಗಮನ ಕೊಟ್ಟಿಲ್ಲವೋ ನಾನು ಕಾಣೆ. ಆ ಪರ್ಮಿಟ್ಟನ್ನು ರದ್ದು ಮಾಡುವುದಕ್ಕೆ ಸರ್ಕಾರಕ್ಕೆ ಇರತಕ್ಕ ತೊಂದರೆಯಾದರೂ ಏನು? ಇನ್ನಾದರೂ ರೈತಾಪಿ ಜನರ ಕಷ್ಟವನ್ನು ಸರ್ಕಾರದವರು ಕೂಡಲೇ ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಇದರ ವ್ಯವಹಾರವನ್ನು ಬಹಳ ದಿನಗಳಿಂದಲೂ ಮಾಡಿದ್ದರಿಂದ ನನಗೆ ಇದರಲ್ಲಿರತಕ್ಕ ಕಷ್ಟ ಸುಖಗಳೇನೆಂಬುದು ಚೆನ್ನಾಗಿ ತಿಳಿದಿದೆ. ನಾನು 30 ವರ್ಷಗಳಿಂದ ಈ ಸೌದೆಯನ್ನು ಲಾರಿಗಳಲ್ಲಿ ಬೆಂಗಳೂರು ನಗರಕ್ಕೆ ಸರಬರಾಯಿ ಮಾಡುತ್ತಿದ್ದೆನು. ಆ ಕಾಲದಿಂದಲೂ ಅಧಿಕಾರಿಗಳು ಇದರ ವ್ಯವಹಾರದಲ್ಲಿ ರೈತನಿಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಆದುದರಿಂದ ಸರ್ಕಾರದವರು ದಯಮಾಡಿ ಈ ಪರ್ಮಿಟ್ ಸಿಸ್ಟಮನ್ನು ಕೂಡಲೇ ರದ್ದು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಕೇಳುತ್ತಿರುವುದು ಜಂಗಲ್ ಉದ್ದಿಗಲ್ಲ. ಸರ್ಕಾರದವರು ಬೇಕಾದರೆ ಆ ಜಂಗಲ್ ಉದ್ದಿಗೆ ಪರ್ಮಿಟ್ ಸಿಸ್ಟಮನ್ನು ಇಟ್ಟುಕೊಳ್ಳಲಿ. ಅದನ್ನು ನಾನು ಬೇಡ ಎನ್ನುವುದಿಲ್ಲ. ಆದರೆ ನಾನು ಕೇಳುತ್ತಿರುವುದು ರೈತನು ತನ್ನ ಸ್ವಂತ ಜಮೀನಿನಲ್ಲಿ ಬೆಳೆದ ಸರ್ವೆ ಸೌದೆಗೆ ಕೇಳುತ್ತಿರುವ ಪರ್ಮಿಟ್ ಪದ್ಧತಿಯನ್ನು ವಜಾ ಮಾಡಬೇಕೆಂದು. ಗುಂಡುತೋಪು ಇತ್ಯಾದಿಗಳನ್ನು ಸರ್ಕಾರದವರು ಬಂದೋಬಸ್ತು ಮಾಡಲಿ, ಬೇಡ ಎನ್ನುವುದಿಲ್ಲ. ಕಾರ್ಪೊರೇಷನ್ನಿನಲ್ಲಿ ಎಂಥೆಂತದ್ದನ್ನೋ ವಜಾ ಮಾಡಿದ್ದಾರೆ. ಅಲ್ಲಿ ಒತ್ತಾಯ ಮಾಡದಿದ್ದರೂ ತೆಗೆದರು. ಇಲ್ಲ 15 ಜನ ಎಂ. ಎಲ್. ಎ. ಗಳು ಒತ್ತಾಯ ಮಾಡಿದರೂ ಏಕೆ ತೆಗೆಯಲಿಲ್ಲ. ಈಗಲಾದರೂ ಇದನ್ನು ಕೂಡಲೇ ತೆಗೆಯಬೇಕೆಂದು ಒತ್ತಾಯ ಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

ನಾನು ಸರ್ಕಾರಕ್ಕೆ ಲುಕ್ಸಾನಾಗುವ ವಿಚಾರವನ್ನು ಹೇಳುತ್ತಿಲ್ಲ. ಚೆಕ್‌ಪೋಸ್ಟ್‌ನಲ್ಲಿ ಸೌದೆ ತುಂಬಿರುವ ಲಾರಿಗಳನ್ನು ನಿಲ್ಲಿಸಿ 5–10 ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರದವರು ಏತಕ್ಕೆ ಇನ್ನೂ ನಿಧಾನ ಮಾಡುತ್ತಿದ್ದಾರೋ ಗೊತ್ತಿಲ್ಲ. ಈ ವಿಚಾರದ ಬಗ್ಗೆ ನಾನು ಸಂಬಂಧಪಟ್ಟ ಆಫೀಸರ್‌ಗಳ ಹತ್ತಿರ ತಿರುಗಿ ತಿರುಗಿ ಸಾಕಾಗಿದೆ. ಆದರೂ ಅವರು ಗಮನಕ್ಕೆ ತೆಗೆದುಕೊಂಡಿಲ್ಲ.

ಶ್ರೀ ಆಲೂರು ಹನುಮಂತಪ್ಪ (ಅರಣ್ಯ ಶಾಖೆಯ ರಾಜ್ಯ ಮಂತ್ರಿಗಳು).—ಮಾನ್ಯ ಸದಸ್ಯರು ಅವೇ ವಿಚಾರವನ್ನು ಮತ್ತೆ ಮತ್ತೆ ಹೇಳುತ್ತಿದ್ದಾರೆ. ಈ ಬಗ್ಗೆ ರೂಲ್ಸ್ ಫ್ರೇಮ್ ಆಗಿದೆ. ಅದನ್ನು ಜಾಗ್ರತೆ ತೆಗೆದು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎ. ನಂಜಪ್ಪ.—ಆ ರೀತಿ ಮಾಡಿದರೆ ನನಗೆ ಸಂತೋಷವಾಗುತ್ತದೆ. ರೈತರು ಸೌದೆಯನ್ನು ನಾನಾ ಕಡೆಗಳಿಂದ ತರುತ್ತಾರೆ. ಮತ್ತು ಸೌದೆಯ ಬೆಲೆಯೂ ಸಹ ಕಡಿಮೆಯಾಗುತ್ತದೆ. ಒಂದು ರೀತಿಯಿಂದ ರೈತರಿಗೂ ಸಹ ಅನುಕೂಲವಾಗುತ್ತದೆ. ಬಹಳ ದಿವಸಗಳಿಂದ ಈ ಬಗ್ಗೆ ನಾನು ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರದವರು ಈಗ ಮನಸ್ಸು ಮಾಡಿರುವುದು ಸಂತೋಷದ ವಿಚಾರ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. P. KADAM (Karwar).—Speaker Sir, by and large very important subjects are there for discussion and but for the pressure of time due justice cannot be done to all of them. Some of the hon. Members have referred already to this important subject, *viz.*, Agriculture and Forest. All the same. the Forest Department has not been properly dealt with. I do not wish to disappoint the Hon. Minister of State for Forests and also the concerned officers, but I shall be very plain in only ventilating the grievances of the people in North Kanara district. Sometime back in 1967 when these grievances were brought to the notice of Government,

we were assured that the Government is releasing about a lakh acres of land. The same assurance was repeated in 1968 and I am sure, even now, the Hon. Minister will repeat the samething. Sir, it was stated that a high power committee will be appointed and one lakh acres of land would be released. Last time in the month of October 1968 the Hon. Minister for Finance accompanied by the Hon. Minister for Co-operation extensively toured the district of North Kanara and had a Conference of the officers of the Forest Department at Sirsi on 18th October 1968. Unfortunately the Minister for Forest could not be present at that conference as he was suffering from influenza. All the same, so many officers of the Forest Department and many responsible citizens participated in that conference. It was abundantly made clear, in that conference, that the problems are very pressing and urgent and due consideration should be given to them and Government should atleast release one lakh acres of land immediately. Sir, nothing has happened since then. We are even now told that the high power committee has been appointed. But no land has yet been released. For the past three years the notification in respect of the release of one lakh acres of land is being expedited and one cannot be sure as to how long it will take. With this preliminary observation, I shall speak on some other subjects in detail.

Sir, let us refer to the grant of land for building houses, they are called 'gavathana sites'. I think the British who left this country in 1947 were wise people—we cannot call them foolish people at all. I have studied some Survey Settlement Reports of North Kanara District written by eminent Britishers. They have laid great stress on the Agricultural problem and revenue problem of North Kanara. The Britishers used to have a policy of granting 'gavathana plots'. May I ask the Forest Depertment and the Government, how many forest lands and sites in the North Kanara District have been released by them, on their own initiative since 1947, the year in which the Britishers quit this country, for building houses or gavathanas? I had on occasion to discuss this matter with a Divisional Forest Officer of North Kanara District. He said that we have no policy of sanctioning 'gavathna plots'. You may make proposals in this regard and it is up to the Revenue Department or some other department to consider the matter. We have made proposals, but nothing has been done till now, with the result, there are thousands of cases of encroachments of sites of those agriculturists who want to have five, six or ten guntas of land for building houses for their own use. These agriculturists have even been prosecuted. Is this the approach of a democratic Government towards the agriculturists who want to have their own houses? What they wanted was only a site for building a house for their own use, and nothing more than that. The proceedings in these cases of encroachments are going on from six to seven years. Repeatedly I had brought this matter to the notice of the concerned Ministry by putting starred question several times. But nothing has been done till now. Therefore Sir, may I suggest to the hon. Minister of State for Forests to have a broad-based policy to have

(SRI B. P. KADAM)

the 'gavathana plots' not only for the North Karnatak area but throughout the State to see that house sites are reserved round about the localities of expanding villages and sites could be granted for building houses. Sir, in keeping the agriculturists satisfied, there lies the prosperity of the country and if the cultivator or the agriculturists are satisfied they are bound to pay greater attention towards greater cultivation and produce for himself and also for the country. If the policy of the Government is to keep him uneasy agricultural economy will not develop.

Sir, to give an example, there is in Supa taluka a village called "Joida" where the matter of giving gavathana areas is pending from so many years even till to-day. One District Forest officer told me that the Forestor, officer who is just above the Forest Guard retained the entire file for two full years and when I asked him what may be the weight of that file, he said, it may be about half-a-maund. Sir, if such things exist, what better things we could expect? Speedy disposal is the need of the hour; otherwise, common man is bound to lose faith in democracy. Therefore Sir, in regard to encroachments, Government will have to be liberal. I know, under extreme circumstances these encroachments have come up. Encroachment may be in respect of house sites, garden sites, paddy land or whatever it is, I am sure, in 99.99 cases these encroachments of the forests and revenue lands have come only under extreme circumstances and under the instigation of these lower officers of the Forest or the Revenue Department. I know large number of lower officers and officials who have encouraged the people to go ahead with encroachment. These officers and officials have been the immediate beneficiaries from these agriculturists. They promised that the encroachments would be regularised. They themselves obtained applications from these people and forwarded the applications to the Department. But the encroachments were not regularised. Now also in North Kanara District, many of these people are being prosecuted for encroachments.

They have been fined and prosecuted through Criminal courts. I urge upon the Government to see that these people are not treated with such vengeance, because such bitterness will lead nowhere. We must have human approach. The Forest Officers should be given clear instructions in this regard and see that further confusion is avoided. I do not know what the High Power Committee is doing. May I request the High Power Committee to grant lands wherever they exist for cultivation of paddy, for cultivation of fruits, for cultivation of arecaunut and coconuts, for cultivation of spices etc. It should be very liberal in that approach; otherwise the purpose for which the High Power Committee is constituted will not be served. I was told the Government is granting land for coffee cultivation in North Kanara District. The Local people must be encouraged. I am told in Supa Taluka, certain lands are to be released. But before the orders of Government are made, I am told

people from Coorg and other places are putting forth their demand for land in this area. Such things should not be allowed to happen. Only the local people should be encouraged either individually or through co-operative farming. The people from outside should not be allowed to exploit the situation to their own advantage.

There is another point about settlement of Gowlies. These people are there round about Dandeli. They help sending milk to the cities like Dandeli. What is their fate? Grazing lands have been denied to them. They are chased from place to place. We cannot say they will be in the same place next year. They are helpless creatures. There is nobody to fight for their cause. Even though they are selfless people, they have been chased from place to place. These poor people are collecting milk from their own buffaloes and sending it to the cities. They are not giving any trouble to anybody. Inspite of that they have been looked down. Attrocities have been committed on them. Their hutments have been pulled down. Their cattle sheds have been pulled down and they have been chased from place to place. That is the position of these poor people. Repeatedly we have been bringing the miserable state of affairs of these people to the notice of the Government. Inspite of all these things, their conditions have not been improved and they have not been given permanent grazing lands. Even to-day they are living in a remote corner of the forest area. I urge upon the Government to see that these people are settled permanently in a place. The Government must also see that modern amenities should be provided to these people. They should be given grazing grounds permanently. Their cattle sheds should also be constructed on a scientific basis.

I want to say one or two words about Horticulture. The Horticulture Department is doing a good lot of work. I am personally proud of it. The Director of Horticulture is taking pains and doing wonderful work with regard to growing of fruits and vegetables. In the country like ours, the people are in the habit of taking only rice. The people must be encouraged to change their habit. Unless we do this, there will be upheavels with regard to food in this country. This habit of taking only rice should go. We must take to vegetables and fruits and other things instead of rice only. Due attention should be given to that. If this policy is well pursued, and if the common man realises this, food problem could automatically be solved.

About the utility of the fertilizers, I must say the Government should try to supply the fertilizers having Nitrogen, phosphate and potash–allum equal proportion. One crystal must contain all the imgrediants. A person is having some kind of fertilizer will say that he is having a fine quality. He may be having only Potash. This should not happen. There should be fertilizers containing all the qualities in good proportion. Even if one quality is in excess, it will be no use. The innocent people do not know whether the fertilizer is having the required qualities. The ignorance of the people should not be misused. In advanced foreign

(SRI B. P. KADAM)

countries, the fertilizers having all the ingrediants are being sold. The fertilizers should not contain either only nitrogen or only potash, but it should contain all the qualities in good proportion. Therefore it is better to have fertilizers which will have all the three qualities in good proportion. Thank you.

† ಶ್ರೀ ಬಿ. ಎಂ. ಇದ್ದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ, ವ್ಯವಸಾಯ ಸಚಿವರು ಮಂಡಿಸಿರತಕ್ಕಂತಹ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ, ನಾಲ್ಕು ಮಾತುಗಳನ್ನು ಆಡಲು ಬಯಸುತ್ತೇನೆ. ಸ್ವಲ್ಪ ಕಾಲದಲ್ಲಿ ಇಷ್ಟು ಪ್ರಾಮುಖ್ಯವಾದಂತಹ ವಿಚಾರದಲ್ಲಿ ಮಾತನಾಡುವುದು ಎಂದರೆ ಬಹಳ ಕಷ್ಟ. ನೆಲ ಸಂಪತ್ತು, ಜನ ಸಂಪತ್ತು, ವನ ಸಂಪತ್ತು ಮತ್ತು ಪಶು ಸಂಪತ್ತು, ಎಂಬ ಈ ನಾಲ್ಕು ಸಂಪತ್ತುಗಳ ವಿಚಾರದಲ್ಲಿ ಮಾತನಾಡುವುದು ಬಹಳ ಕಷ್ಟ. ಆದರೂ ಕೂಡ ಕೆಲವು ವಾಕ್ಯಗಳಲ್ಲಿ ಒಂದೊಂದನ್ನು ಹೇಳುತ್ತೇನೆ. ವ್ಯವಸಾಯ ವಿಚಾರದಲ್ಲಿ ನಾನು ಬಹಳ ದೀರ್ಘವಾಗಿ ಮಾತನಾಡುವುದಿಲ್ಲ. ವ್ಯವಸಾಯ ಖಾತೆಯನ್ನು ವಹಿಸಿಕೊಂಡಿರತಕ್ಕ ಸಚಿವರಾದ ಶ್ರೀಮಾನ್ ರಾಚಯ್ಯನವರು ಬಹಳ ಪ್ರಯತ್ನ ಮಾಡುತಿದ್ದಾರೆ. ಅವರ ಖಾತೆಯನ್ನು ಒಳ್ಳೆಯ ರೀತಿಯಲ್ಲಿ ನಡೆಸಬೇಕು, ಒಳ್ಳೆಯ ರೀತಿಯಲ್ಲಿ ಮಾಡಬೇಕೆಂದು ಅಪೇಕ್ಷೆ ಪಡುತ್ತಾ ಇದ್ದರೂ ಕೂಡ, ಅವರಿಗೆ ಒದಗಿಸಿರತಕ್ಕಂತಹ ಹಣ ಬಹಳ ಕಡಿಮೆ. ನಾವು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ವಿಚಾರ ಮಾತನಾಡುವುದಾದರೆ, ಅದು ಒಳ್ಳೆಯ ಬತ್ತ ಬೆಳೆಯತಕ್ಕ ಸ್ಥಳವಾಗಿದೆ. ಆದರೆ ಅದಕ್ಕೆ ಅನೇಕ ರೀತಿಯ ಸವಲತ್ತುಗಳನ್ನು ಒದಗಿಸಬೇಕಾಗಿದೆ. ನಮ್ಮಲ್ಲಿ ದೊಡ್ಡ ನೀರಾವರಿ ಇಲ್ಲ. ಅಲ್ಲಿ ಸಣ್ಣ ನೀರಾವರಿಯನ್ನು ಮಾಡಬೇಕು, ಪಂಪ್‌ಸೆಟ್ಟುಗಳನ್ನು ಕೊಡಬೇಕು ಮತ್ತು ಅದಕ್ಕೆ ಬೇಕಾದ ವಿದ್ಯುಚ್ಛಕ್ತಿಯನ್ನು ಕೊಡಬೇಕಾಗಿದೆ. ಅದೇ ರೀತಿ ಪವರ್ ಟಿಲ್ಲರ್ ಕೊಡಬೇಕು ಮತ್ತು ಕೆಲವು ಸಂದರ್ಭಗಳಲ್ಲಿ ಬುಲ್‌ಡೋಸರುಗಳನ್ನೂ ಕೊಡಬೇಕಾಗಿದೆ. ಈ ರೀತಿ ಇವೆಲ್ಲಾ ಬೇಕೆಂದು ನಮ್ಮ ಜಿಲ್ಲೆಯವರು ಅನೇಕರು ಕೇಳುತ್ತಿದ್ದಾರೆ. ಆದರೆ ಅವರು ಕೇಳಿದ ಹಾಗೆ ಬೇಕಾದಷ್ಟು ಪವರ್ ಟಿಲ್ಲರ್ಸ್‌ಗಳನ್ನು ಬುಲ್‌ಡೋಸರುಗಳನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲದಾಗಿದೆ. ಹಾಗಿದ್ದರೆ, ನಾವು ಆಹಾರವನ್ನು ಹೆಚ್ಚು ಬೆಳೆಯಬೇಕು, ನಾವು ಸ್ವಾವಲಂಬಿಗಳಾಗಬೇಕು, ಎಂದೆಲ್ಲಾ ಹೇಳುವುದರಲ್ಲಿ ಅರ್ಥವೇನು? ಒಂದು ಕಡೆ ಹೆಚ್ಚು ಬೆಳೆಯಬೇಕು, ಪರದೇಶವಾದ ಅಮೇರಿಕದಿಂದ ಆಹಾರಧಾನ್ಯ ತರಿಸಬಾರದು ಎಂದು ಎಲ್ಲಾ ಹೇಳುತ್ತಿದ್ದೇವೆ.

1-00 P.M.

ಬೇಕಾದಂತಹ ಸಲಕರಣೆಗಳನ್ನು, ಸವಲತ್ತುಗಳನ್ನು ಸಕಾಲಕ್ಕೆ ಒದಗಿಸದಿದ್ದರೆ ಬೆಳೆಯತಕ್ಕ ರೈತರಿಗೆ ಉತ್ಸಾಹ ಹೇಗೆ ಬರುತ್ತದೆ; ಪ್ರೋತ್ಸಾಹ ಹೇಗೆ ಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆ ಬತ್ತವನ್ನು ಬೆಳೆಯತಕ್ಕ ಪ್ರದೇಶ. ಅವರು ಟ್ರಾಕ್ಟರು, ಪವರ್ ಟಿಲ್ಲರು ಮತ್ತು ಬುಲ್ಡೋಜರಗಳನ್ನು ಕೇಳುತ್ತಿದ್ದಾರೆ. ಅದಕ್ಕಾಗಿ ನಾನು ಮಾನ್ಯ ವ್ಯವಸಾಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಯಾರು ಯಾರು ಆ ವ್ಯವಸಾಯದ ಸಲಕರಣೆಗಳನ್ನು ಕೇಳುತ್ತಾರೆಯೋ ಅವರಿಗೆ ಅವುಗಳನ್ನು ಒದಗಿಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ದಕ್ಷಿಣ ಕನ್ನಡ ಜಿಲ್ಲೆ ಮೈಸೂರು ರಾಜ್ಯಕ್ಕೆ ಬೇಕಾಗತಕ್ಕಂಥ ಆಹಾರಧಾನ್ಯದ $\frac{1}{4}$ ಪಾಲು ಹೆಚ್ಚಿನ ಬೆಳೆಯನ್ನು ಬೆಳೆಯುವುದಕ್ಕೆ ಸಾಮರ್ಥ್ಯವಿರುವ ಜಿಲ್ಲೆ ಎಂದು ನಾನು ಹೇಳುತ್ತೇನೆ. ಸಣ್ಣ ನೀರಾವರಿ, ವಿದ್ಯುಚ್ಛಕ್ತಿ, ತೋಟಗಾರಿಕೆ, ವ್ಯವಸಾಯ ಈ ಇಲಾಖೆಗಳಿಗೆ ಒಂದೊಂದಕ್ಕೆ ಒಬ್ಬೊಬ್ಬರು ಮಂತ್ರಿಗಳಿದ್ದಾರೆ. ಒಂದೊಂದು ಬಾಬನ್ನು ಕೇಳುವುದಕ್ಕೆ ಒಬ್ಬೊಬ್ಬರು ಮಂತ್ರಿಗಳ ಹತ್ತಿರ ಹೋಗಬೇಕು. ಹೀಗೆ 4-5 ಕಡೆ ಹೋಗುವಂತಾದ್ದು ಬಹಳ ಕಷ್ಟ. ನಮ್ಮ ವ್ಯವಸಾಯ ಇಲಾಖೆಯ ಡೈರೆಕ್ಟರು ಬಹಳ ಬುದ್ಧಿವಂತರು ಎಂದು ನಾನು ಕೇಳಿದ್ದೇನೆ. ಆದರೆ ಕೆಳಗಿನ ಅಧಿಕಾರಿಗಳು ಏನಿದ್ದಾರೆಯೋ ಅವರು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುತ್ತಿಲ್ಲ. ಸರಿಯಾದ ರೀತಿಯಲ್ಲಿ ಸಹಕಾರವನ್ನು ನೀಡುತ್ತಿಲ್ಲ ಎಂದು ದೂರುಗಳು ಬರುತ್ತಿವೆ. ಅಧಿಕಾರಿಗಳಿಗೆ ಜೀಪುಗಳನ್ನೇನೋ ಕೊಟ್ಟಿದ್ದಾರೆ, ಆದರೆ ಅವರು ರೈತರಿಗೆ ನಿಜವಾಗಿ ಸರ್ಕಾರದಿಂದ ಏನು ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸಬೇಕೋ ಅದನ್ನು ಒದಗಿಸುವ ಕಾರ್ಯವನ್ನು ಮಾಡುತ್ತಿಲ್ಲ. ಹಿಂದುಳಿದವರು, ಹರಿಜನರು, ದೀನದಲಿತರುಗಳನ್ನು ಕೇಳುವವರಿಲ್ಲ. ಅಧಿಕಾರಿಗಳು ರೈತರ ವಿಚಾರದಲ್ಲಿ ಮಾನವೀಯತೆಯ ದೃಷ್ಟಿಯಿಂದ ಕೆಲಸ ಮಾಡಿದರೆ ವ್ಯವಸಾಯ ಇಲಾಖೆ ಒಳ್ಳೆಯ ರೀತಿಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗು

ತ್ತದೆ. ಇದರಲ್ಲಿ ಮುಖ್ಯವಾಗಿ ಒಂದು ಮಾತು. ರೈತನ ಮನೆಯ ಬಾಗಿಲಿಗೆ ವ್ಯವಸಾಯಕ್ಕೆ ಬೇಕಾದಂತಹ ಪ್ರತಿಯೊಂದು ಉಪಕರಣಗಳೂ ಬಂದು ಬೀಳಬೇಕು. ಗೊಬ್ಬರವಾಗಲೀ, ಬೀಜವಾಗಲೀ, ಅಥವಾ ವ್ಯವಸಾಯಕ್ಕೆ ಬೇಕಾದ ಯಾವ ಸಲಕರಣೆಯೇ ಆಗಲೀ ಅದಕ್ಕಾಗಿ ರೈತ ತಹಶೀಲ್ದಾರರ ಮುಂದೆ ಹೋಗಿ ನಿಲ್ಲಬೇಕಾಗಿಲ್ಲ. ಯಾವ ಆಫೀಸರ ಮುಂದೆಯಾಗಲೀ ಹೋಗಿ ನಿಲ್ಲಬೇಕಾಗಿಲ್ಲ, ತೋಟಗಾರಿಕೆಯ ಇಲಾಖೆಯ ಅಧಿಕಾರಿಗಳ ಮುಂದೆ ಹೋಗಿ ನಿಲ್ಲಬೇಕಾಗಿಲ್ಲ. ಡೆಪ್ಯುಟಿ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಏನಿದ್ದಾರೆ ಅವರು ವ್ಯವಸಾಯಕ್ಕೆ ಬೇಕಾದಂತಹ ಎಲ್ಲಾ ಸಲಕರಣೆಗಳೂ ರೈತನ ಮನೆ ಬಾಗಿಲಿಗೆ ಬೀಳುವಂತೆ ವ್ಯವಸ್ಥೆ ಮಾಡುತ್ತೇವೆ ಎಂದು ಏನು ಹೇಳುತ್ತಾರೆಯೋ ಅದರಂತೆ ಅವರು ರೈತನಿಗೆ ಆ ಸಲಕರಣೆಗಳನ್ನು ಒದಗಿಸುವಂತಹ ವ್ಯವಸ್ಥೆ ಮಾಡಬೇಕು, ಇಲ್ಲವಿದ್ದರೆ ಅದು ಬರೀ ಘೋಷಣೆಯಲ್ಲಿಯೇ ಉಳಿಯುತ್ತದೆ. ಶ್ರೀಮಾನ್ ರಾಚಯ್ಯನವರು ಪ್ರಯತ್ನ ಪಟ್ಟು ಇದನ್ನೆಲ್ಲಾ ಒಳ್ಳೆಯ ರೀತಿಯಲ್ಲಿ ನಡೆಯುವಂತೆ ವ್ಯವಸ್ಥೆ ಮಾಡುತ್ತಾರೆ ಎನ್ನುವ ಭರವಸೆ ನಮಗೆ ಇದ್ದರೂ ಕೂಡ ಈ ಬಾಬಿಗೆ ಒದಗಿಸಿರತಕ್ಕ ಹಣ ಬಹಳ ಕಡಿಮೆ.

ಮೀನುಗಾರಿಕೆಯ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಸಮುದ್ರದ ಬದಿಯಲ್ಲಿಯೂ ಆಹಾರ ಬೆಳೆಯುತ್ತದೆ. ಅಕ್ಕಿ, ಗೋಧಿ, ಜೋಳ, ಇತ್ಯಾದಿಗಳು ಎಷ್ಟು ಮುಖ್ಯವೋ ಹಾಗೆಯೇ ಮೀನೂ ಅಷ್ಟೇ ಆಹಾರಕ್ಕೆ ಸಂಬಂಧಪಟ್ಟ ವಿಷಯ. ಮೀನುಗಾರಿಕೆಯಿಂದ ನಮಗೆ ಬೇಕಾದಂತಹ ಎಷ್ಟೋ ಆಹಾರವನ್ನು ಉತ್ಪತ್ತಿ ಮಾಡಿಕೊಳ್ಳುವುದಕ್ಕೆ ಅವಕಾಶ ಇವೆ. ಆದರೆ ಈ ಮೀನುಗಾರಿಕೆಗೆ ಸರ್ಕಾರದವರು ಒದಗಿಸಿರತಕ್ಕ ಹಣ ಕೇವಲ 90 ಲಕ್ಷ ರೂಪಾಯಿಗಳು ಮಾತ್ರ. ನಿಜವಾಗಿಯೂ ಇದು ನಾಚಿಕೆಗೇಡಿನ ವಿಷಯ. ನಮಗೆ ಆಹಾರ ಬೇಕು ಆಹಾರ ಬೇಕು ಎಂದು ಕೂಗಿಕೊಳ್ಳುತ್ತಿರುವಾಗ ಧರ್ಮಾರ್ಥಕ್ಕೆ ಸಿಕ್ಕುವಂತಹ, ಸಮುದ್ರದಲ್ಲಿ ದೇವರು ಧರ್ಮಾರ್ಥವಾಗಿ ಕೊಡುವಂತಹ ಮೀನನ್ನು ತೆಗೆದುಕೊಂಡು ಆಹಾರದ ಕೊರತೆಯನ್ನು ನೀಗಿಸಿಕೊಳ್ಳುವುದಕ್ಕೆ ಬೇಕಾದಂತಹ ವ್ಯವಸ್ಥೆಯಿಲ್ಲ. 200 ಮೈಲಿ ಕರಾವಳಿ ಇರತಕ್ಕಂಥ ಜಿಲ್ಲೆಯಲ್ಲಿ ಸಂಪಾದನೆಯನ್ನು ಪಡೆಯದೇ ಹೋದರೆ ಆಹಾರದ ಕೊರತೆಯನ್ನು ಯಾವರೀತಿ ನೀಗಿಸುತ್ತೀರಿ ಎಂದು ಕೇಳಬೇಕಾಗಿದೆ. ಯಂತ್ರಚಾಲಿತ ದೋಣಿಗಳನ್ನು ಬೆಸ್ತರಿಗೆ ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಿದ್ದರೆ ಬೇಕಾದಷ್ಟು ಮೀನುಗಳನ್ನು ಹಿಡಿಯಬಹುದಾಗಿತ್ತು. ಯಂತ್ರಚಾಲಿತ ದೋಣಿಗಳಲ್ಲಿ 4–5 ಮೈಲಿ ಸಮುದ್ರದ ತೀರದಿಂದ ಸಮುದ್ರದೊಳಕ್ಕೆ ಹೋದರೆ ಇನ್ನೂ ಹೆಚ್ಚು ಮೀನುಗಳು ಸಿಕ್ಕುತ್ತವೆ ಎಂದು ತಜ್ಞರು ಹೇಳಿದ್ದಾರೆ. 500 ಯಂತ್ರಚಾಲಿತ ದೋಣಿಗಳನ್ನು ಒದಗಿಸುವುದಕ್ಕೆ ಈ ವರ್ಷ 115 ಯಂತ್ರಚಾಲಿತ ದೋಣಿಗಳನ್ನು ಒದಗಿಸುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಸಮುದ್ರದಲ್ಲಿರತಕ್ಕ ಮೀನನ್ನು ಹಿಡಿಯುವವರು ಬಹಳ ಜನ ಇದ್ದಾರೆ. ಆದರೆ ಅವರಿಗೆ ದೋಣಿಗಳು ಬೇಕು. ಆದರೆ ಈ ಬಾಬಿಗೆ ಸರ್ಕಾರದವರು ಸಾಕಷ್ಟು ಹಣವನ್ನು ಒದಗಿಸಿಲ್ಲ. ಮೀನುಗಾರಿಕೆ, ವ್ಯವಸಾಯ, ಅನಿಮಲ್ ಹಸ್ಬೆಂಡರಿ ಎಲ್ಲವನ್ನೂ ಒಂದೇ ಇಲಾಖೆಗೆ ಸೇರಿಸಿದ್ದಾರೆ ಅದಕ್ಕಾಗಿ ನಾನು ಹೇಳುವಂಥಾದ್ದು ಮೀನುಗಾರಿಕೆಗೇ ಒಂದು ಪ್ರತ್ಯೇಕ ಇಲಾಖೆ ಆಗಬೇಕು. 200 ಮೈಲಿ ಕಡಲುತೀರ ಇರತಕ್ಕ ಕರ್ನಾಟಕ ದೇಶದಲ್ಲಿ ಅದನ್ನು ಉಪಯೋಗ ಮಾಡುವುದಕ್ಕೆ ತಿಳಿಯುವುದಿಲ್ಲ ಎಂದು ಹೇಳಿದರೆ ಹೆದ್ದರು ಎಂದು ಹೇಳುವ ಪರಿಸ್ಥಿತಿ ಬರುತ್ತದೆ. ವಿದ್ಯಾಭ್ಯಾಸ ಇಲಾಖೆಗೆ 46 ಕೋಟಿ ರೂಪಾಯಿಗಳನ್ನು ಒದಗಿಸಿರುವಾಗ ಈ ಮೀನುಗಾರಿಕೆಗೆ 90 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ಬಹಳ ಶೋಚನೀಯವಾಗಿ ಕಾಣುತ್ತದೆ. ಇದಕ್ಕೆ ಇನ್ನೂ ಹೆಚ್ಚು ಹಣವನ್ನು ಒದಗಿಸಬೇಕು. ಮೀನುಗಾರಿಕೆ ಇಲಾಖೆಯ ಮಂತ್ರಿಗಳೇನೋ ಬಹಳ ಉತ್ಸಾಹದಿಂದಿದ್ದಾರೆ. ಅವರಿಗೆ ಕೆಲಸವನ್ನು ಮಾಡಬೇಕೆಂಬ ಉತ್ಸಾಹವೂ ಇದೆ. ಆದರೆ ಇದಕ್ಕೆ ಒದಗಿಸಿರುವ ಹಣ ಬಹಳ ಕಡಿಮೆ ಇದೆ. ಬರುವ ವರ್ಷ ಈ ಮೀನುಗಾರಿಕೆಗೆ 3 – 4 ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಹೇಳುವುದಕ್ಕೆ ನಾನು ಅಪೇಕ್ಷೆ ಮಾಡುತ್ತೇನೆ. ಧರ್ಮಾರ್ಥವಾಗಿ ಸಿಕ್ಕುವಂಥ ಮೀನುಗಳನ್ನು ದಾಸ್ತಾನು ಮಾಡಿಕೊಳ್ಳಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಲ್ಡ್ ಸ್ಟೋರೇಜ್ ಮತ್ತು ಐಸ್ ಪ್ಲಾಂಟನ್ನು ಸ್ಥಾಪನೆ ಮಾಡಿದ್ದಾರೆ. ಹಾಗೆಯೇ ಉತ್ತರ ಕನ್ನಡ ಜಿಲ್ಲೆಯಲ್ಲಿಯೂ ಮೀನುಗಾರಿಕೆಯ ಅಭಿವೃದ್ಧಿಯ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆಯ ಕೆಲಸವನ್ನು ಮಾಡಲು ಸಾವಿರಾರು ಜನಗಳು ಮೈಮೇಲೆ ಬಿದ್ದು ಕೆಲಸ ಮಾಡುತ್ತಾರೆ. ಆದರೆ 200 ಮೈಲಿ ಕರಾವಳಿ ಪ್ರದೇಶ ಇರತಕ್ಕ ಮೀನುಗಾರಿಕೆಯ ಉದ್ಯಮದ ಬಗ್ಗೆ 90 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ತೀರಾ ಕಡಿಮೆ. ಮಂಗಳೂರು, ಮಲ್ಪೆ ಮತ್ತು ಹೊನ್ನಾವರಗಳಲ್ಲಿ ಮೀನುಗಾರಿಕೆಯ ಬಂದರ್‌ಗಳನ್ನು ನಿರ್ಮಿಸಲು ಪರವಾನಿಗೆ ಸಿಕ್ಕಿದೆ ಎಂದು ನಾನು ತಿಳಿಯುತ್ತೇನೆ. ಈಗ ಮಲ್ಪೆಯಲ್ಲಿ ಮೀನುಗಾರಿಕೆಯ ಬಂದರನ್ನು ನಿರ್ಮಿಸಲು ಸುಮಾರು 2 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾ

(ಶ್ರೀ ಬಿ. ಎಂ. ಇದಿನಬ್ಬ)

ರೆಂದು ಗೊತ್ತಾಗಿದೆ. ಈ ರೀತಿಯಲ್ಲಿ ಬಹಳ ದೊಡ್ಡ ಯೋಜನೆಯನ್ನು ಮಾಡಿ ಅಭಿವೃದ್ಧಿ ಕೆಲಸವನ್ನು ಮಾಡುವುದಕ್ಕೆ ಒದಗಿಸಿರತಕ್ಕ ಹಣ ಬಹಳ ಕಡಿಮೆ ಇದೆ. ಈ ರೀತಿ ಆದರೆ ನಮ್ಮ ರಾಜ್ಯ ಪ್ರಗತಿ ಪಥದಲ್ಲಿ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಹೇಳುತ್ತೇನೆ.

ಇನ್ನೊಂದು ಮಾತು. ಪಶು-ಸಂಗೋಪನೆಯ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯವನ್ನು ಹಾಲು ಜೇನು ಹರಿಯುತಕ್ಕ ರಾಜ್ಯವನ್ನಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಜನಗಳಿಗೆ ಹಾಗೂ ಮಕ್ಕಳಿಗೆ ಒಳ್ಳೆಯ ಹಾಲು ದೊರೆಯುತ್ತಿಲ್ಲ. ಇಡೀ ರಾಜ್ಯದಲ್ಲಿ ಎಲ್ಲರಿಗೂ ಒಳ್ಳೆಯ ಹಾಲು ದೊರೆಯುವಂತಹ ರೀತಿಯಲ್ಲಿ ವ್ಯವಸ್ಥೆಯಾಗಬೇಕು ಎಂದು ಸರ್ಕಾರದ ಉದ್ದೇಶವಿರುವಾಗ ನಮ್ಮ ಮಂಗಳೂರಿನಲ್ಲಿ ಕೊಯಿಲಾ ಡ್ಯೆರಿ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಅದು ನಷ್ಟದಲ್ಲಿ ನಡೆಯುತ್ತಿದೆ. ಆ ಡ್ಯೆರಿಯ ಹಾಲು ಆ ಸುತ್ತಮುತ್ತ ಇರತಕ್ಕ ಯಾವ ಗ್ರಾಮಗಳಿಗೂ ಸಿಕ್ಕುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಆ ಡ್ಯೆರಿ ಏತಕ್ಕೆ ನಷ್ಟದಲ್ಲಿ ನಡೆಯುತ್ತಿದೆ, ಏತಕ್ಕೆ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂಬುದನ್ನು ತನಿಖೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಹೇಳಬಯಸುತ್ತೇನೆ.

ಆ ಮೇಲೆ ಮಂಗಳೂರಿನ ಹಾಲಿನ ಡ್ಯೆರಿಗೆ ನೀರಿನ ಸೌಕರ್ಯವೇ ಇಲ್ಲ. ಆದ್ದರಿಂದ ಆ ಡ್ಯೆರಿಗೆ ಸರ್ಕಾರದವರಾಗಲೀ, ಮುನಿಸಿಪಾಲಿಟಿಯವರಾಗಲೀ ಯಾರೇ ಆಗಲೀ ನೀರಿನ ಸೌಕರ್ಯವನ್ನು ಒದಗಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಈ ಮಂಗಳೂರಿನ ಡ್ಯೆರಿ ಅಭಿವೃದ್ಧಿಯ ವಿಷಯದಲ್ಲಿ ಸರ್ಕಾರದವರು ಹೆಚ್ಚು ಗಮನ ಕೊಡಬೇಕು.

ಅರಣ್ಯ ಇಲಾಖೆಯ ವಿಚಾರದಲ್ಲಿ ಬಹಳ ಹೇಳುವುದು ಇತ್ತು, ವೇಳೆಯಿಲ್ಲ. ಅನೇಕ ಜನ ಮಾನ್ಯ ಸದಸ್ಯರು ಈ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಸರಕಾರದವರು ಅರಣ್ಯದಲ್ಲಿ ಹೆಚ್ಚು ಮರಗಳನ್ನು ಬೆಳೆಸಿ ವನಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕೆ ಹೆಚ್ಚು ಗಮನ ಕೊಡಬೇಕು. ಅರಣ್ಯ ಸಂಪತ್ತು ದೇಶದಲ್ಲಿ ಹೆಚ್ಚಾಗಿದ್ದರೆ ಅದರಿಂದ ದೇಶಕ್ಕೆ ಹೆಚ್ಚು ಉತ್ಪತ್ತಿ ಬರುವುದಲ್ಲದೆ ಮಳೆ ಬರುವುದಕ್ಕೆ ಕೂಡ ಅನುಕೂಲವಾಗುತ್ತದೆ. ಅರಣ್ಯದಲ್ಲಿರುವ ಗಂಧದ ಮರಗಳು ಕಳ್ಳ ಸಾಗಾಣಿಕೆಯಲ್ಲಿ ಬಹಳವಾಗಿ ಹೋಗುತ್ತಿದೆ. ಇದನ್ನು ತಡಗಟ್ಟುವುದಕ್ಕೆ ವ್ಯವಸ್ಥೆ ಮಾಡಬೇಕು. ಕೇರಳದ ಗಡಿಯಲ್ಲಿ ಗಂಧದ ಮರಗಳು ಹೆಚ್ಚು ಹೆಚ್ಚಾಗಿ ಕಳ್ಳಸಾಗಾಣಿಕೆಯಲ್ಲಿ ಹೊರಗಡೆ ಹೋಗುತ್ತಿವೆ. ಚೆಕ್ ಪೋಸ್ಟ್‌ನಲ್ಲಿ ಹೋಗುತ್ತಿವೆ. ಮಾನ್ಯ ಮಂತ್ರಿಗಳಿಗೂ ಕೂಡ ಈ ವಿಚಾರ ಗೊತ್ತಿದೆ. ಕಳ್ಳಸಾಗಾಣಿಕೆಯಲ್ಲಿ ಗಂಧದ ಮರಗಳನ್ನು ಸಾಗಿಸುತ್ತಿದ್ದುದನ್ನು ಅನೇಕ ಸಲ ಹಿಡಿದಿದ್ದಾರೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಗಮನವನ್ನು ಕೊಡಬೇಕೆಂದು ನಾನು ಹೇಳಬಯಸುತ್ತೇನೆ. ಈ ಮೂರು ಇಲಾಖೆಗಳಿಗೂ ಒದಗಿಸಲ್ಪಟ್ಟಿರುವ 11 ಕೋಟಿ ರೂಪಾಯಿಗಳು ಯಾವುದಕ್ಕೂ ಸಾಲುವುದಿಲ್ಲ. ಈ ಮೂರು ಇಲಾಖೆಗಳಿಗೂ ಸಂಬಂಧಪಟ್ಟ ಹಾಗೆ 30 ಕೋಟಿ ರೂಪಾಯಿಗಳನ್ನು ಒದಗಿಸಬೇಕು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಪಾಟೀಲ್ (ಗದಗ್). —ಸನ್ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ವಕ್ಕಲುತನದ ಮೇಲೆ ತಂದಿರುವಂಥ ಬೇಡಿಕೆಯನ್ನು ನಾನು ವಿರೋಧಿಸಬೇಕಾಗಿದೆ. ಕಾರಣವೆಂದರೆ ವಕ್ಕಲುತನದವರಿಗೆ ಬೇಕಾದ ಸಲಕರಣೆಗಳನ್ನು ಮತ್ತು ಉಪಕರಣಗಳನ್ನು ಸಾಕಷ್ಟು ಒದಗಿಸುವುದಕ್ಕೆ ಈ ಸರ್ಕಾರದವರು ಪ್ರಯತ್ನ ಮಾಡಿಲ್ಲವಾದ ಕಾರಣದಿಂದ. ವ್ಯವಸಾಯದ ಬಗ್ಗೆ ಸರ್ಕಾರದವರಿಗೆ ಸಾಕಷ್ಟು ಆಸಕ್ತಿ ಇಲ್ಲವೆಂದು ವಿರೋಧಪಕ್ಷದ ನಾನಾ ಸದಸ್ಯರುಗಳು ಇದುವರೆಗೆ ಹೇಳಿದರು. ವಕ್ಕಲುತನ ಯಾವ ದೃಷ್ಟಿಯಲ್ಲಿ ಹೆಚ್ಚು ಪ್ರಗತಿ ಸಾಧಿಸಬೇಕಾಗಿತ್ತೋ ಅಷ್ಟು ಪ್ರಗತಿ ಸಾಧಿಸಲಿಕ್ಕೆ ಅನೇಕ ತರಹದ ಅಡಚಣೆಗಳು ಇರುವುದು ಒಂದು ಕಾರಣವಾಗಿದೆ. ಹಣದ ವಿತರಣೆ ರೈತರಿಗೆ ಸರಿಯಾಗಿ ಆಗುತ್ತಿಲ್ಲವೆಂಬ ಮಾತನ್ನು ಮಾನ್ಯ ಮಂತ್ರಿಗಳು ಅನೇಕ ಸಲ ಹೇಳಿದ್ದುಂಟು. ಯಾವ ಯಾವ ಇಲಾಖೆಗಳಲ್ಲಿ ಮಿತವ್ಯಯವನ್ನು ಸಾಧಿಸಬೇಕು, ಯಾವ ಯಾವ ದಿಶೆಯಲ್ಲಿ ಮಿತವ್ಯಯವನ್ನು ಸಾಧಿಸಬೇಕು ಎಂಬುದನ್ನು ಯೋಚನೆ ಮಾಡಿ ಹೆಚ್ಚಿನ ಹಣವನ್ನು ವ್ಯವಸಾಯ ಕ್ಷೇತ್ರದಲ್ಲಿ ತೊಡಗಿಸುವ ಬಗ್ಗೆ ಸಂಪೂರ್ಣವಾದ ಜವಾಬ್ದಾರಿಯನ್ನು ಹೊತ್ತಿರುವ ಮಂತ್ರಿಮಂಡಲ ವಿಚಾರ ಮಾಡಬೇಕಾಗಿತ್ತು. ಆದರೆ ಆ ಒಂದು ಹೊಣೆಗಾರಿಕೆಯನ್ನು ತಪ್ಪಿಸಿಕೊಂಡಿದ್ದಾರೆಂದು ನಾನು ತಿಳಿದಿದ್ದೇನೆ. ಇವತ್ತಿನ ದಿವಸ ನಮಗೆ ಮಾನ್ಯ

ವ್ಯವಸಾಯ ಮಂತ್ರಿಗಳು 'ಸಾಯಿಲ್ ಟೆಸ್ಟಿಂಗ್ ಇನ್ ಮೈಸೂರ್' ಎಂಬ ಪುಸ್ತಕವನ್ನು ಕೊಟ್ಟಿದ್ದಾರೆ. ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿಯನ್ನು ಇಡೀ ರಾಜ್ಯಾದ್ಯಂತ ಸ್ಥಾಪಿಸಬೇಕೆಂದು ಸರ್ಕಾರ ಉದ್ದೇಶ ಇಟ್ಟುಕೊಂಡಿದ್ದರೂ ಕೂಡ ಇನ್ನೂ ತನಕ ಆ ಕಾರ್ಯದಲ್ಲಿ ಯಶಸ್ವಿಯಾಗಿಲ್ಲ. ಈ ವಿಚಾರದಲ್ಲಿ ಸಾಕಷ್ಟು ಪ್ರಗತಿಯನ್ನು ಈ ದಿಶೆಯಲ್ಲಿ ಸಾಧಿಸಿದ್ದೇವೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಆ ರೀತಿ ಹೇಳದಿದ್ದರೆ ಸರ್ಕಾರದವರಿಗೆ ಗತ್ಯಂತರವಿಲ್ಲ. ಈ ಅಣುವಿನ ಯುಗದಲ್ಲಿ ಪ್ರಗತಿಯನ್ನು ಜಾಗ್ರತೆ ಸಾಧಿಸಬೇಕಾಗಿದೆ. ಏಕೆಂದರೆ ದಿನೇದಿನೇ ಬದಲಾವಣೆಗಳು ಆಗುತ್ತಿರುತ್ತವೆ. ಈ ದಿನ ಇದ್ದ ಪದ್ಧತಿ ನಾಳೆ ಬದಲಾವಣೆಯಾಗುತ್ತದೆ. ಸರ್ಕಾರದವರು ಗೊಬ್ಬರಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಮತ್ತು ಗೊಬ್ಬರವನ್ನು ಶೇಖರಣೆ ಮಾಡುತ್ತಿದ್ದಾರೆ. ಈ ಗೊಬ್ಬರವನ್ನು ಯಾವ ರೀತಿಯಲ್ಲಿ ಉಪಯೋಗ ಮಾಡಬೇಕು ಎಂಬುದು ರೈತರಿಗೆ ಸರಿಯಾಗಿ ಗೊತ್ತಿಲ್ಲ. ಯಾವ ಯಾವ ಹೊಲದಲ್ಲಿ ಯಾವ ಯಾವ ಗೊಬ್ಬರ ಹಾಕಬೇಕು, ಅಲ್ಲಿಯ ಭೂಗುಣ ಯಾವ ರೀತಿ ಇದೆ, ಅಲ್ಲಿಯ ಮಣ್ಣು ಯಾವ ಬೆಳೆಗೆ ಉಪಯೋಗವಾಗಿದೆ ಎಂಬ ಬಗ್ಗೆ ಪರೀಕ್ಷೆ ಮಾಡಿ ರೈತರಿಗೆ ತಿಳುವಳಿಕೆ ಕೊಡಲು ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿಯೂ ಸಹ ಒಂದೊಂದು ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿ ಇರುವುದು ಅಗತ್ಯವಿದೆ. ಈ ಬಗ್ಗೆ ನಾನು ಒಂದು ಸಲ ಕೇಂದ್ರ ಸರ್ಕಾರದಲ್ಲಿ ಸಂಬಂಧಪಟ್ಟವರೊಡನೆ ಕೇಳಿದಾಗ ನಿಮ್ಮ ರಾಜ್ಯದಲ್ಲಿ ಈ ವಿಚಾರದಲ್ಲಿ ನುರಿತಂಥ ಶ್ರೀಮಾನ್ ಅರಕೇರಿಯವರು ಇದ್ದಾರೆ ಎಂದು ಹೇಳಿದರು. ಒಬ್ಬರು ಅಧಿಕಾರಿ ಇದ್ದರೆ ಸಾಕಾಗುವುದಿಲ್ಲ. ಇಡೀ ರಾಜ್ಯಕ್ಕೆ ಒಬ್ಬರು ನುರಿತಂಥ ಡೈರೆಕ್ಟರ್ ಅವರು ಇದ್ದರೆ, ಒಬ್ಬರು ಮಂತ್ರಿಗಳು ಇದ್ದರೆ ವಕ್ಕಲತನದ ಕಲ್ಯಾಣವನ್ನು ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ವ್ಯವಸಾಯ ಇಲಾಖೆಯಲ್ಲಿರುವ ಉಳಿದ ಮಷಿನರಿಗಳು ಸಹ ವೀಕ್ ಆಗದೇ ಚೆನ್ನಾಗಿ ಕೆಲಸ ಮಾಡಬೇಕು. ಈ ಬಗ್ಗೆ ತಪ್ಪು ಹೇಳುತ್ತೇನೆಂದು ಯಾರೂ ಭಾವನೆ ಮಾಡಬಾರದು. ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಪ್ರತಿ ಜಿಲ್ಲೆಯಲ್ಲಿಯೂ ಸಹ ಒಂದೊಂದು ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿ ಇರಬೇಕಾದುದು ಅಗತ್ಯವಿದೆ ಎಂದು ಹೇಳಿದ್ದರು. ವ್ಯವಸಾಯ ಕ್ಷೇತ್ರವನ್ನು ಬೆಳೆಸುವುದರಲ್ಲಿ, ಪ್ರತಿಯೊಂದು ಜಿಲ್ಲೆಯಲ್ಲಿ ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿಯನ್ನು ಸ್ಥಾಪನೆ ಮಾಡುವುದರಲ್ಲಿ, ಮತ್ತು ರೈತರು ಹೆಚ್ಚಾಗಿ ವ್ಯವಸಾಯದಲ್ಲಿ ಆಕರ್ಷಣೆ ಹೊಂದಿ ದುಡಿಯಲು ಯಾವ ಯಾವ ಮುಂಜಾಗ್ರತಾ ಧೋರಣೆಯನ್ನು ಅನುಸರಿಸಿದ್ದೀರಿ ಎಂದು ಕೇಳಬಯಸುತ್ತೇನೆ. ವ್ಯವಸಾಯ ಕ್ಷೇತ್ರ ಮುಂದುವರಿಯಬೇಕಾದರೆ ರೈತರಿಗೆ ಸಕಾಲದಲ್ಲಿ ಗೊಬ್ಬರವನ್ನು ಹಂಚಿಕೆ ಮಾಡುವುದು ಒಳ್ಳೆಯದು. ಈ ಬಗ್ಗೆ ಹೇಳುವುದಾದರೆ ಒಂದು ಇಲಾಖೆಯವರು ಇನ್ನೊಂದು ಇಲಾಖೆಯ ಮೇಲೆ ಜವಾಬ್ದಾರಿಯನ್ನು ಹಾಕುತ್ತಿದ್ದಾರೆ. ಅಧಿಕಾರಿಗಳು ಹಾರಿಕೆ ಉತ್ತರ ಕೊಡುತ್ತಾರೆ. ಇದೇ ವಿಚಾರದಲ್ಲಿ ಕಾಲ್ ಅಟೆಂಷನ್ ನೋಟೀಸ್ ಬಂದಾಗ ಉಪಮಂತ್ರಿಗಳಾದ ಶ್ರೀ ಪವಾರ್ ಅವರು ಹೇಳಿದರು, ಗೊಬ್ಬರದ ವಿತರಣೆ ಚೆನ್ನಾಗಿ ನಡೆದಿದೆ, ಹಂಚಿಕೆಯಲ್ಲಿ ಏನಾದರೂ ತಪ್ಪಿದ್ದರೆ ಅದು ಸಹಕಾರಸಂಘಗಳಿಂದ ಆಗಿರಬಹುದು ಎಂದು ಆ ರೀತಿ ಸಹಕಾರಸಂಘಗಳಿಂದ ಸರಿಯಾಗಿ ಹಂಚಿಕೆಯಾಗದಿದ್ದರೆ ಈ ಖಾತೆಯ ಮಂತ್ರಿಗಳು ಮತ್ತು ಉಪಮಂತ್ರಿಗಳೇ ಜವಾಬ್ದಾರಿ ತೆಗೆದುಕೊಂಡು ನೇರವಾಗಿ ಗೊಬ್ಬರವನ್ನು ರೈತರಿಗೆ ಏತಕ್ಕೆ ಹಂಚಿಕೆ ಮಾಡಬಾರದೆಂದು ಕೇಳುತ್ತೇನೆ. ಸರ್ಕಾರದ ಹತ್ತಿರ ಗೊಬ್ಬರ ಸಾಕಷ್ಟು ಇರಬಹುದು. ಆದರೆ ಆ ಗೊಬ್ಬರ ಸಮರ್ಪಕವಾಗಿ ಹಂಚಿಕೆಯಾಗುತ್ತಿದೆಯೇ ಎಂಬುದು ಮುಖ್ಯವಾದ ಪ್ರಶ್ನೆಯಾಗಿದೆ. ಈ ವಿಚಾರವನ್ನು ತಂದೆತಾಯಿಗಳಂತೆ ಇರುವ ಈ ಖಾತೆಯ ಮಂತ್ರಿಗಳು ಮತ್ತು ಉಪಮಂತ್ರಿಗಳು ಆಲೋಚನೆ ಮಾಡಬೇಕು. ವಕ್ಕಲುತನದ ಹೆಚ್ಚಿನ ಜವಾಬ್ದಾರಿ ಈ ಮಂತ್ರಿಗಳ ಮೇಲೆ ಇದೆ ಎಂದು ಹೇಳುತ್ತಿದ್ದೇನೆ. ಅಮೋನಿಯಂ ಸಲ್ಫೇಟ್ ಗೊಬ್ಬರ ಸಿಕ್ಕಿದರೆ ಸೂಪರ್ ಫಾಸ್ಫೇಟ್ ಗೊಬ್ಬರ ಸಿಗುವುದಿಲ್ಲ. ಸೂಪರ್ ಫಾಸ್ಫೇಟ್ ಗೊಬ್ಬರ ಸಿಕ್ಕಿದರೆ ಪೊಟಾಸಿಯಂ ಸಲ್ಫೇಟ್ ಗೊಬ್ಬರ ಸಿಗುವುದಿಲ್ಲ. ಸಿಕ್ಕಿದರೂ ಕೂಡ ಎಷ್ಟೆಷ್ಟು ಪ್ರಮಾಣದಲ್ಲಿ ಉಪಯೋಗಿಸಬೇಕೆಂದು ರೈತರಿಗೆ ಸರಿಯಾಗಿ ತಿಳಿದಿರುವುದಿಲ್ಲ. ಈ ಬಗ್ಗೆ ರೈತರಿಗೆ ತಿಳಿವಳಿಕೆ ಕೊಡಲು ಸಾಕಷ್ಟು ಕ್ರಮವನ್ನು ಮಾನ್ಯ ಮಂತ್ರಿಗಳು ಕೈಗೊಳ್ಳಬೇಕು. ಯಾವ ಯಾವ ಗೊಬ್ಬರ ಎಷ್ಟೆಷ್ಟು ಸ್ಟಾಕ್ ಇದೆ ಎಂಬುದನ್ನು ವಿಮರ್ಶಾತ್ಮಕದೃಷ್ಟಿಯಿಂದ ನೋಡಿ ಎಲ್ಲಾ ಕಾಲದಲ್ಲಿಯೂ ಸಹ ಸಾಕಷ್ಟು ಪ್ರಮಾಣದಲ್ಲಿ ರೈತರಿಗೆ ಸಿಗುವಂತೆ ಏರ್ಪಾಡು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಬೀಜದ ಬಗ್ಗೆ ಹೇಳಬೇಕೆಂದರೆ ನನಗೆ ವ್ಯಸನವಾಗುತ್ತದೆ. ಬೀಜದ ಉತ್ಪಾದನೆಯನ್ನು ಸರ್ಕಾರದವರು ವ್ಯಾಪಾರ ದೃಷ್ಟಿಯಿಂದ ನೋಡಬಾರದು. ವಕ್ಕಲುತನ ಸುಧಾರಿಸಬೇಕಾದರೆ ಸರ್ಕಾರದವರು ಲುಕ್ಸಾನಾದರೂ ಕೂಡ ಹೆಚ್ಚು ಹೆಚ್ಚು ಬೀಜಗಳನ್ನು ಉತ್ಪಾದನೆ ಮಾಡಿ ರೈತರಿಗೆ ಹಂಚಬೇಕು. ಈ ಬಗ್ಗೆ ಲಾಭವನ್ನು ನಿರೀಕ್ಷಣೆ ಮಾಡುವುದು ಸರಿಯಲ್ಲ. ನಮ್ಮ ರಾಜ್ಯದಲ್ಲಿ

(ಶ್ರೀ ಕೆ. ಎಚ್. ಪಾಟೀಲ್)

ಸರ್ಕಾರದವರು ಯಾವ ಯಾವ ಬೀಜಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಸಂಗ್ರಹ ಮಾಡಿದ್ದಾರೆಂದು ಕೇಳುತ್ತೇನೆ. ಕೆಲವು ಸಲ ಸಂಗ್ರಹ ಮಾಡಿ ಇಟ್ಟಿದ್ದ ಬೀಜಗಳು ಕೆಟ್ಟುಹೋದ್ದರಿಂದ ಲುಕ್ಸಾನಾಯಿತೆಂದು ಕೊಂಡು ಮುಂದೆ ಸಂಗ್ರಹ ಮಾಡುವುದನ್ನು ಬಂದ್ ಮಾಡುವುದು ಸರಿಯಲ್ಲ. ಸಂಗ್ರಹ ಮಾಡುವುದು ಒಳ್ಳೆಯದು. ಏಕೆಂದರೆ ರೈತರು ಬುದ್ಧಿವಂತರಲ್ಲವಾದ್ದರಿಂದ ಅವರಿಗೆ ಎಂತಹ ಬೀಜಗಳನ್ನು ಉಪಯೋಗಿಸಬೇಕೆಂಬುದು ಗೊತ್ತಿರುವುದಿಲ್ಲ. ರೈತರು ತಮಗೆ ತಿಳಿದ ಬೀಜಗಳನ್ನು ಉಪಯೋಗ ಮಾಡಿ ಒಳ್ಳೆಯ ಬೆಳೆ ಬರದೆ ತೊಂದರೆಪಡುತ್ತಿದ್ದಾರೆ. ಇಂತಹ ರೈತರಿಗೆ ಒಳ್ಳೆಯ ಬೀಜಗಳನ್ನು ಒದಗಿಸಬೇಕಾದುದು ಸರ್ಕಾರದವರ ಕರ್ತವ್ಯವಾಗಿರುತ್ತದೆ. ನಿಜವಾಗಿ ಹೇಳುವುದಾದರೆ ರೈತರಿಗೆ ಒಳ್ಳೆಯ ಬೀಜ ಸಕಾಲದಲ್ಲಿ ಸಿಗದೆ ಬಹಳ ಪ್ರಮಾದವಾಗುತ್ತಿದೆ. ಹೋದವರ್ಷ ಕಬ್ಬಿನ ಬೆಲೆ ಜಾಸ್ತಿಯಾಗಿದ್ದರಿಂದ ಎಲ್ಲರೂ ಕಬ್ಬನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡಿದರು. ಇದು ಸಂತೋಷದ ವಿಚಾರವಾದರೂ ಕೂಡ ಕಬ್ಬಿನಬೀಜ ಸಾಕಷ್ಟು ಸಿಗದೇ ಹೋದದ್ದು ನನಗೆ ವ್ಯಸನವಾಗಿದೆ. ಯಾವ ಬೆಳೆಯನ್ನು ಬೆಳೆದರೆ ಹೆಚ್ಚು ಲಾಭ ಬರುತ್ತದೆ ಎಂದು ತಿಳಿಯುತ್ತದೋ ಆಗ ರೈತರೆಲ್ಲರೂ ಕೂಡ ಅದೇ ಬೆಳೆಯನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅಂತಹ ಕಾಲಕ್ಕೆ ಒಳ್ಳೆಯ ಫಾರಂ ಬೀಜಗಳನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಆದಕಾರಣ ಹಲವಾರು ಬೀಜಗಳನ್ನು ಸಂಗ್ರಹ ಮಾಡುವುದರಿಂದ ಸರ್ಕಾರಕ್ಕೆ ಲುಕ್ಸಾನಾದರೂ ಕೂಡ ರೈತರ ಹಿತದೃಷ್ಟಿಯಿಂದ, ರೈತರಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಎಲ್ಲಾ ಕಾಲದಲ್ಲಿಯೂ ಕೂಡ ಅವರಿಗೆ ಬೇಕಾದ ಬೀಜಗಳನ್ನು ಒದಗಿಸುವ ಏರ್ಪಾಡು ಮಾಡಬೇಕು. ಈ ವಿಚಾರದಲ್ಲಿ ಇಡೀ ರಾಜ್ಯದ ಚಿತ್ರವನ್ನು ತೆಗೆದುಕೊಂಡು ಅದರ ಒಂದು ಆಧಾರದ ಮೇಲೆ ಬೀಜಗಳನ್ನು ಸಂಗ್ರಹಣ ಮಾಡಿ ರೈತರಿಗೆ ಹಂಚುವ ವ್ಯವಸ್ಥೆ ಮಾಡಬೇಕು ಮತ್ತು ಎಲ್ಲಾ ಕಾಲದಲ್ಲಿಯೂ ಸಹ ಬೀಜ ಸಿಗುತ್ತದೆಂಬ ಭರವಸೆಯನ್ನು ರೈತರಲ್ಲಿ ಮೂಡಿಸಬೇಕು. ಈ ವಿಚಾರದಲ್ಲಿ ಸರ್ಕಾರದವರು ಇದುವರೆಗೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂಬ ಬಗ್ಗೆ ಮಾನ್ಯ ಸಚಿವರಲ್ಲಿ ಒಂದು ಸ್ಟೇಟ್‌ಮೆಂಟನ್ನು ಕೇಳುತ್ತಿದ್ದೇನೆ. ಜೋಳ, ಗೋಧಿ ಮತ್ತು ಗೋವಿನ ಜೋಳವನ್ನು ಸಾಕಷ್ಟು ಸಂಗ್ರಹ ಮಾಡಿ ನಮ್ಮ ಭಾಗದ ರೈತರಿಗೆ ಸರ್ಕಾರದವರು ಹಂಚುವ ವ್ಯವಸ್ಥೆ ಮಾಡಬೇಕು. ಕೈಗಾರಿಕೆಗಳ ಬಗ್ಗೆ ನಾವು ಸಾಕಷ್ಟು ಮಾತನಾಡುತ್ತೇವೆ. ಒಕ್ಕಲುತನದ ಇಂಡಿಸ್ಟ್ರಿಯಲ್ಲಿ ನಮ್ಮ ರಾಜ್ಯ ಮುಂದೆ ಇರುವುದರಿಂದ ರೈತರಿಗೆ ಬೇಕಾದ ಸಾಮಗ್ರಿಗಳನ್ನು ಮತ್ತು ಸಲಕರಣೆಗಳನ್ನು ಸರ್ಕಾರದವರು ಒದಗಿಸಬೇಕು. ಈ ಮೂಲಕ ರಾಜ್ಯದ ಪ್ರಗತಿಯಾಗುವುದಕ್ಕೆ ಸರ್ಕಾರದವರು ಹೆಚ್ಚಿನ ಪ್ರಚೋದನೆ ಮಾಡುವುದು ಅಗತ್ಯವಾಗಿದೆ. ಗೋಕಾಕ್ ಮತ್ತು ಮುಧೋಳ್ ಕ್ಷೇತ್ರಗಳಲ್ಲಿ ಹೆಚ್ಚಾಗಿ ಗೋವಿನ ಜೋಳವನ್ನು ಬೆಳೆಯುತ್ತಿದ್ದಾರೆ. ಇದನ್ನು ಪ್ರೋಸೆಸ್ ಮಾಡುವಂಥ ಉದ್ಯಮ ನಮ್ಮ ರಾಜ್ಯದಲ್ಲಿ ಇಲ್ಲದಿರುವುದರಿಂದ ಮುಂಬೈ ಕಡೆಗೆ ನೋಡಬೇಕಾಗಿದೆ. ಅವರು ಈ ವಿಚಾರದಲ್ಲಿ ಮುಂದೆ ಹೋಗಿದ್ದಾರೆ. ಆದಕಾರಣ ನಮ್ಮ ಒಕ್ಕಲುತನದ ಸಚಿವರು ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ನಮ್ಮ ರಾಜ್ಯದಲ್ಲಿ ಯಾವ ಯಾವ ಪದಾರ್ಥಗಳು ಬೆಳೆಯಲ್ಪಡುತ್ತವೋ ಅವುಗಳನ್ನು ಪ್ರೋಸೆಸ್ ಮಾಡುವಂಥ ಉದ್ಯಮಗಳನ್ನು ನಮ್ಮ ರಾಜ್ಯದಲ್ಲಿಯೇ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನೇರವಾಗಿ ಇಂಡಸ್ಟ್ರಿ ಮಿನಿಸ್ಟರವರ ಕಡೆಗೆ ಬಿಡದೆ ತಮ್ಮ ಕಡೆಗೇ ಇಟ್ಟುಕೊಂಡು ಒಕ್ಕಲುತನ ಮಾಡುವವರಿಗೇ ಸಹಾಯ ಮಾಡಿ ಇಂತಹ ಉದ್ಯಮಗಳನ್ನು ಉಪಯೋಗಿಸಿಕೊಳ್ಳುವ ಧೈರ್ಯವನ್ನು ನೀವು ಮಾಡಲೇ ಬೇಕು. ಇಂತಹ ಒಂದು ಮನೋ ಧೈರ್ಯವನ್ನು ನೈತಿಕವಾಗಿ ಶ್ರೀಮಾನ್ ರಾಚಯ್ಯನವರು ತೆಗೆದುಕೊಳ್ಳುವುದಕ್ಕೆ ಹಿಂಜರಿಯಲಾರರು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ತಮಗೆ ಒಂದು ಪ್ರಾಮುಖ್ಯವಾದ ವಿಚಾರ ಹೇಳಬೇಕು ಎಂದರೆ ಬೆಳೆಯುವವನಿಗೆ ನಿಮ್ಮಲ್ಲಿ ಗೌರವ ಇದೆ ಎನ್ನುವ ಭಾವನೆ ಮೂಡಬೇಕಾದರೆ ನಿಜವಾಗಿಯೂ ಇವೊತ್ತು ಬೆಳೆಯುವವನು ಏನು ಬೆಳೆ ಮಾಡುತ್ತಾನೋ ಅಂತಹ ಬೆಳೆಯುವವನ ದವಸಕ್ಕೆ ಸರಿಯಾದ ಧಾರಣೆಗಳು ಸಿಗುವಂತೆ ಮಾಡಬೇಕು. ಬೆಳೆಯುವವನಿಗೆ ಸಹಾಯವಾಗಿ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟರೂ ಅವನು ಬೆಳೆದ ದವಸಕ್ಕೆ ಸರಿಯಾಗಿ ರೇಟು ಸಿಗುತ್ತಿಲ್ಲ. ಇದಕ್ಕಾಗಿ ಅಗ್ರಿಕಲ್ಚರಲ್ ರೇಟ್ ಕಾಯಿದೆ ಎಂದು ಮಾಡಿದರೆ ಅನುಕೂಲವಾಗುತ್ತದೆ. ಈಗೇನೋ ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ಎಂದು ಮಾಡಿದ್ದೀರಿ. ಆದರೆ ನಿಮ್ಮ ಗಮನ ಅಗ್ರಿಕಲ್ಚರ್ ಪ್ರೈಸ್ ಕಂಟ್ರೋಲ್ ಬಗ್ಗೆ ಇಲ್ಲಿಯವರೆಗೂ ಹರಿದಿಲ್ಲ. ಒಕ್ಕಲಗರನ್ನು ಸರಿಯಾದ ಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಲಾರದ ಸರಕಾರ ಎಂದು ರೈತರು ಹೇಳುವ ಸ್ಥಿತಿಗೆ ಬಂದಿದ್ದಾರೆ. ಇದನ್ನು ಬದಲಾವಣೆ ಮಾಡಬೇಕು. ಒಕ್ಕಲಗರು ಪ್ರತಿಯೊಂದು ದವಸವನ್ನು ಬೆಳೆದರೂ ಅವನೇ ಎಲ್ಲವನ್ನೂ ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ ಮತ್ತು ಅವನು ಮಾರುವ ದವಸಕ್ಕೆ ಸರಿಯಾದ

ಧಾರಣೆಯೂ ಸಿಗುವುದಿಲ್ಲ. ಒಕ್ಕಲು ಮಾಡಿ ಅವನು ಬೆಳೆದ ದವಸಕ್ಕೆ ಸರಿಯಾದ, ಧಾರಣೆಯನ್ನು ಒದಗಿಸಿಕೊಡುವ ಮಂತ್ರಿಗಳು ಇದ್ದರೆ ಒಕ್ಕಲುತನ ಮಾಡುವ ಜನಕ್ಕೆ ನಿಜವಾಗಿಯೂ ತುಂಬಾ ಅನುಕೂಲವಾಗುತ್ತದೆ. ಆದರೆ ಇಂದು ಇರುವ ಒಕ್ಕಲುತನದ ಮಂತ್ರಿಗಳು ಒಕ್ಕಲುತನಮಾಡುವವರಿಗೆ ಸಹಾಯಕವಾಗಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳುತ್ತೇನೆ. ಇದಕ್ಕೆ ಕಾರಣ ಇಷ್ಟೇ ಅಗ್ರಿಕಲ್ಚರ್ ಮಾರ್ಕೆಟಿಂಗ್ ಒಕ್ಕಲುತನ ಮಾಡುವವರಿಗೆ ಸಹಾಯವಾಗುವ ದೃಷ್ಟಿಯಿಂದ ಅವಶ್ಯಕ. ಅವನು ಬೆಳೆಯುವ ಉತ್ಪನ್ನಗಳಿಗೆ ಬರತಕ್ಕ ಸಮಸ್ಯೆಗಳಿಗೆ ಏನೇನು ಪರಿಹಾರಗಳನ್ನು ಮಾಡಿಕೊಡಬೇಕು, ಅವನ ಜೀವನಕ್ಕೆ ಎಷ್ಟು ಬೇಕು ಇವೆಲ್ಲವನ್ನೂ ಸರಿಪಡಿಸಿ ರೈತರ ಹಿತೈಷಿಯಾಗಿ ಕೆಲಸಮಾಡುವ ಮಂತ್ರಿಗಳು ಇರಬೇಕು. ಈವೊತ್ತು ಅವನಿಗೆ ಬೇಕಾದಷ್ಟು ಸಾಲವನ್ನು ಕೊಡಬಹುದು, ಲೆವಿಯಿಂದ ಇಷ್ಟು ಕೊಡಹುದು ಎಂದು ಹೇಳಬಹುದು. ಆದರೆ ಇದರಿಂದೇನೂ ಅವನಿಗೆ ಅನುಕೂಲವಾಗುತ್ತಿಲ್ಲ.

ಶ್ರೀ ಕೆ. ಪ್ರಭಾಕರ್.—ಇಂತಹ ಸೊಸೈಟಿಗಳೆಲ್ಲಾ ರೈತರ ಕೈಯಲ್ಲೇ ಇವೆ. ಮತ್ತು ರೈತರ ಪ್ರತಿನಿಧಿಗಳಾಗಿಯೇ ಇರುವವರು ಅಲ್ಲಿರುವಾಗ ಇದರ ವ್ಯವಸ್ಥೆಯನ್ನು ಅವರೇ ಅಲ್ಲಿ ಮಾಡಿಕೊಳ್ಳಬಹುದಲ್ಲವೇ?

ಶ್ರೀ ಕೆ. ಹೆಚ್. ಪಾಟೀಲ್.—ಸೊಸೈಟಿಗಳಲ್ಲಿ ಇಂತಹ ಜನ ಕೇವಲ ಒಂದು ಎರಡು ಪರ್ಸೆಂಟ್‌ನಷ್ಟು ಇರಬಹುದು. ಈವೊತ್ತು ಒಕ್ಕಲುತನದ ಕಲ್ಯಾಣವಾಗುವ ಕಡೆ ನಾವು ಗಮನ ಕೊಡಬೇಕಾಗಿದೆ. ಇವೊತ್ತು ಅವನ ಜೀವನ ಸ್ಥಿತಿ ಯಾವ ರೀತಿ ಇದೆ, ಅವನು ಬೆಳೆದ ದವಸಕ್ಕೆ ಕೊಡುವ ರೇಟೇನು, ಅವನಿಗೆ ಗೊಬ್ಬರ ಯಾವ ರೇಟಿನಲ್ಲಿ ಸಿಗುತ್ತದೆ ಮತ್ತು ಪೆಸ್ಟಿಸೈಡ್ಸ್ ಉಪಯೋಗಮಾಡಬೇಕಾದರೆ ಅವನು ಎಷ್ಟು ಕೊಡಬೇಕಾಗುತ್ತದೆ? ಇಂದು ಇಂತಹ ಕ್ರಿಮಿ ಕೀಟಕ ಔಷಧಿ ಹಿಂದೆ ಎರಡು ರೂಪಾಯಿ ಇದ್ದದ್ದು ಇಪ್ಪತ್ತು ರೂಪಾಯಿಗಳವರೆಗೆ ಏರಿ ಹೋಗಿದೆ. ಹೀಗಾದರೆ ಅವನೇನು ಮಾಡಬೇಕು? ಅವನ ಮಕ್ಕಳ ವಿದ್ಯಾಭ್ಯಾಸ ಹೇಗೆ ಮಾಡಬೇಕು ಮತ್ತು ಬಟ್ಟೆಬರೆಗಳನ್ನು ತರಲು ದುಡ್ಡು ಎಲ್ಲಿಂದ ತರಬೇಕು, ಇವೆಲ್ಲವನ್ನೂ ವಿಮರ್ಶೆಮಾಡಿ ಸರಿಮಾಡಿಬೇಕು. ಇದಕ್ಕೆ ಅಗ್ರಿಕಲ್ಚರ್ ಪ್ರೈಸಸ್ ಕಂಟ್ರೋಲ್ ಮಾಡಲೇಬೇಕಾಗುತ್ತದೆ. ಮತ್ತು ಮಾನ್ಯ ಮಂತ್ರಿಗಳು ಇಲ್ಲಿ ರೈತರಿಗಾಗಿ ಸಹಸ್ರಾರು ಟ್ರಾಕ್ಟರುಗಳನ್ನು ಜಮೀನು ವ್ಯವಸಾಯ ಮಾಡಲು ಕೊಡುತ್ತೇವೆ ಎಂದು ಹೇಳುತ್ತಾರೆ. ಇಂತಹ ಒಕ್ಕಲುತನ ಮಾಡುವ ರೈತರು ಇದನ್ನು ತೆಗೆದುಕೊಳ್ಳುವಾಗ ಅವರಮೇಲೆ ಸ್ಟಾಂಪು ಡ್ಯೂಟಿ ಎಂದು ಬೇರೆ, ರಿಜಿಸ್ಟ್ರೇಷನ್ ಖರ್ಚು ಬೇರೆ ಎಂದು ಹಾಕುವುದು ಸರಿಯಲ್ಲ. ಇದರಿಂದ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಅವನು ಸಾಲ ತೆಗೆದುಕೊಳ್ಳಲು ಈಗ ಬ್ಯಾಂಕಿಗೆ ಬೇರೆ ಹೋಗಬೇಕು ಎಂದು ಮಾಡಿದ್ದೀರಿ. ಇದರಲ್ಲಿ ಹೆಚ್ಚು ರೊಕ್ಕವನ್ನು ಬಡ್ಡಿಗಾಗಿ ಕೊಡಬೇಕಾಗುತ್ತದೆ. ಹೀಗಿರುವಾಗ ನೀವು ರೊಕ್ಕ ಕೊಟ್ಟುದಕ್ಕೆ ಏನು ಅನುಕೂಲಮಾಡಿದಂತಾಯಿತು? ಹೀಗೆ ಸಾಲವಾಗಿ ರೊಕ್ಕ ಕೊಡುವುದನ್ನು ಬೇಕಾದರೆ ನಿಲ್ಲಿಸಿ ಬಿಡಿ. ಇನ್ನು ತಾಲ್ಲೂಕಾ ಬೋರ್ಡುಗಳ ಮೂಲಕ ಸಬ್‌ಸಿಡಿ ಎಂದು ಬೇರೆ ಏಕೆ ಕೊಡುತ್ತೀರಿ? ಐದು ಹತ್ತು ರೂಪಾಯಿಗಳಂತೆ ಸಬ್‌ಸಿಡಿ ಕೊಟ್ಟರೆ ಇದರಿಂದೇನು ಉಪಯೋಗವಾಗುತ್ತದೆ? ಇನ್ನು ತಾಲ್ಲೂಕುಗಳಲ್ಲಿ 30 ಸ್ಪ್ರೇಯರುಗಳು ಇರಬೇಕೆಂದು ಮಾಡಿ ಇದನ್ನು ಹಂಚುವ ವ್ಯವಸ್ಥೆಯನ್ನು ಬಿ.ಡಿ.ಓ. ಕಡೆಗೆ ಕೊಟ್ಟಿದ್ದೀರಿ. ಅವರು ಹಾಗೂ ಗ್ರಾಮ ಸೇವಕರು ನಾನು ಮುಂದು ತಾ ಮುಂದು ಎಂದು ಹೇಳುತ್ತಾ ಇದನ್ನು ಹಂಚುವಾಗ ಇಲ್ಲದ ತೊಂದರೆಗಳಿಗೆ ಅವಕಾಶವನ್ನು ಮಾಡಿಕೊಡುತ್ತಿದ್ದೀರಿ. ಇದರಿಂದ ಒಕ್ಕಲುತನ ಮಾಡುವ ಜನಕ್ಕೆ ಯಾವ ಸಹಾಯವೂ ಆಗುವುದಿಲ್ಲ. ಇದಕ್ಕಾಗಿ ನಾನು ಸರಕಾರಕ್ಕೆ ಸಲಹೆ ಮಾಡುವುದು ಒಂದೊಂದು ತಾಲ್ಲೂಕನ್ನು ಒಂದೊಂದು ಯೂನಿಟ್ ಎಂದು ಮಾಡಿಕೊಂಡು ಎಲ್ಲ ಜನರಿಗೂ ಸಮರ್ಪಕವಾದ ರೀತಿಯಲ್ಲಿ ಹಂಚುವ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಅನಿಮಲ್ ಹಸ್‌ಬೆಂಡ್ರಿಯ ಬಗ್ಗೆ ಬಹಳ ಹೆಚ್ಚು ಹೇಳಬೇಕೆಂದಿದ್ದೆ. ಆದರೆ ಇಂದು ಕಾಲಾವಕಾಶ ಕಡಿಮೆ ಇರುವುದರಿಂದ ಒಂದೇ ಒಂದು ಮಾತನ್ನು ಇಲ್ಲಿ ಹೇಳಲು ಅಪೇಕ್ಷೆಪಡುತ್ತೇನೆ. ನಮ್ಮ ಅನಿಮಲ್ ಹಸ್‌ಬೆಂಡ್ರಿ ಇಲಾಖೆಯಿಂದ ಜನತೆಯ ಕಲ್ಯಾಣವಾಗುತ್ತದೆ ಎನ್ನುವುದು ಬಹಳ ದೂರವಾಗಿ ಹೋಗಿದೆ. ನಮ್ಮಲ್ಲಿ ಈಗಾಗಲೇ ಕೆಲವು ಡೈರಿಗಳಾಗಿವೆ. ಮಂಗಳೂರಿನಲ್ಲಿ ಒಂದು ಧಾರವಾಡದಲ್ಲಿ ಒಂದು ಎಂದು ಮಾಡಿದ್ದಾರೆ. ಧಾರವಾಡದಲ್ಲಿರುವ ಡೈರಿಯನ್ನು ನೋಡುವಾಗ ಅಲ್ಲಿ ಒಂದು ಬಾಯಲರು ಕಟ್ಟಬೇಕಾದರೆ ಅದು ಒಂದು ಪಾಯಿಖಾನೆಯಂತಾಗಿದೆ. ಇದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಹೋಗಿ ಕಣ್ಣಾರೆ ನೋಡಿ ಬಂದಿದ್ದಾರೆ. ತಾವೂ ಕೂಡ ಇದರ ಅಧ್ಯಕ್ಷರಾಗಿದ್ದಾಗ ಇದನ್ನು ನೋಡಿ ಬಂದಿರುವುದರಿಂದ ತಮಗೂ ಇದರ ಸ್ಥಿತಿ ಗೊತ್ತಾಗಿದೆ.

(ಶ್ರೀ ಕೆ. ಹೆಚ್. ಪಾಟೀಲ್)

ಡೈರಿಗೆ ಉತ್ತೇಜನ ಕೊಡಬೇಕೆಂದು ಇಂತಹ ಪ್ರಮಾಣದಲ್ಲಿ ಎಲ್ಲ ಕಡೆಗಳಲ್ಲೂ ಡೈರಿಯನ್ನು ಏಕೆ ಮಾಡಲು ಹೊರಟಿದ್ದಾರೆನ್ನುವುದು ಗೊತ್ತಾಗುತ್ತಿಲ್ಲ. ಬರೀ ಶ್ರೀಮಂತರಿಗೆ ಅನುಕೂಲ ಮಾಡಿ ಕೊಡಲು ಒಂದು ಸ್ಥಾನವನ್ನು ಕಲ್ಪಿಸಲು ಇದನ್ನು ನಿರ್ಮಾಣಮಾಡುತ್ತಿದ್ದಾರೇನೋ ಎಂದು ನನಗನ್ನಿಸುತ್ತಿದೆ. ಅನಿಮಲ್ ಹಸ್‌ಬೆಂಡ್ರಿ ಇಲ್ಲಿ ಆಗಬೇಕು ಎಂದು ಕೇಂದ್ರದವರೇನೋ ಧನ ಸಹಾಯ ಮಾಡುತ್ತಿದ್ದಾರೆ. ಆದರೆ ನಿಜವಾಗಿಯೂ ಕೇಂದ್ರ ಕೊಟ್ಟ ಸಹಾಯಕ್ಕೆ ತಕ್ಕಂತೆ ಇಲ್ಲಿ ರೈತರ ಕಲ್ಯಾಣ ಯಾವ ರೀತಿಯಲ್ಲೂ ಆಗುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ನಾವು ಕೇಂದ್ರದವರಲ್ಲಿ ರೈತರಿಗೆ ಯಾವ ಕಲ್ಯಾಣವೂ ಅನಿಮಲ್‌ಹಸ್‌ಬೆಂಡ್ರಿ ಇಲಾಖೆಯಿಂದ ಆಗುತ್ತಿಲ್ಲ ಎಂದು ಅವರನ್ನು ಕೇಳಿದರೆ ನಾವೇನು ಮಾಡುವುದು. ನಿಮಗೆ ಬರೆದ ಕಾಗದ ಪತ್ರಗಳೆಲ್ಲಾ ನಿಮ್ಮ ಮಂತ್ರಿಮಂಡಲದಲ್ಲೇ ಉಳಿಯುತ್ತಿವೆ. ಯಾವ ಕಾಗದಪತ್ರಗಳೂ ಕೂಡ ಹೊರಕ್ಕೆ ವರ್ಷ ಗಟ್ಟಲೆಯಾದರೂ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. ಸೆಂಟ್ರಲ್ ಗವರ್ನಮೆಂಟಿನವರು ಮೈಸೂರು ಸರಕಾರದಲ್ಲಿರುವ ಅನಿಮಲ್ ಹಸ್‌ಬೆಂಡ್ರಿ ಇಲಾಖೆಯಿಂದ ರೈತರಿಗೆ ಎಲ್ಲ ಸಹಾಯಗಳೂ ಸಿಗುತ್ತ ಅವರನ್ನು ಕೇಳಿ ಎನ್ನುತ್ತಾರೆ. ಆದರೆ ಇಲ್ಲಿರುವ ಸರಕಾರದ ಮುಖಂಡರನ್ನು ಕೇಳುವಾಗ ಇಲ್ಲಿರುವ ಕಾಗದ ಪತ್ರಗಳೇ ಹೊರಕ್ಕೆ ಹೋಗುವುದಿಲ್ಲ. ಹೀಗಾದರೆ ಒಕ್ಕಲುತನ ಮಾಡುವ ರೈತರಿಗೆ ಏನು ಕಲ್ಯಾಣ ಮಾಡಿದಂತಾಗುತ್ತದೆ ? ಇದರ ಅರ್ಥವೇನು ? ಈಗಲಾದರೂ ಮಾನ್ಯ ಮಂತ್ರಿಗಳು ಎಚ್ಚರ ವಹಿಸಿ ಇದರ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಅದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಡೇನಿಷ್ ಕ್ರಾಸ್ ಎಂದು ದನಗಳನ್ನು ತರಿಸುತ್ತಿದ್ದಾರೆ. ಇದನ್ನು ಹಂಚುವುದರ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇದರ ಫಲ ಎಲ್ಲ ರೈತರಿಗೂ ಸಿಗಬೇಕಾದರೆ ಬರೀ ಹಳೆಯ ಮೈಸೂರಿನ ಭಾಗಗಳಿಗೇ ಸೀಮಿತವಾಗಿರುವುದು. ಉತ್ತರ ಕರ್ನಾಟಕದ ಭಾಗಗಳಲ್ಲಿನ ರೈತರಿಗೂ ಉಪಯೋಗವಾಗುವಂತೆ ಈ ದನಗಳನ್ನು ಹಂಚುವ ವ್ಯವಸ್ಥೆ ಮಾಡಬೇಕು. ಇದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ತಾವಿದ್ದಾಗ ಹೇಳಿರುವುದು ತಮಗೂ ಗೊತ್ತಾಗಿದೆ.

ಕೊನೆಯದಾಗಿ ಹಾರ್ಟಿಕಲ್ಚರ್ ಇಲಾಖೆಗೆ ನಮ್ಮ ಭಾಗದಲ್ಲಿ ಹೊಲ ಇಲ್ಲ. ಇಲ್ಲಿ ಸರಕಾರದ ಹೊಲ ಇದೆ ಎಂದು ಎಲ್ಲ ಅನುಕೂಲಗಳನ್ನು ಮಾಡಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಮತ್ತು ನಗರದ ಸೌಂದರ್ಯವನ್ನೂ ಚೆನ್ನಾಗಿ ಮಾಡುತ್ತಿದ್ದಾರೆ. ನಮ್ಮ ಕಡೆ ಮಾಡಲು ಸರಕಾರದ ಹೊಲ ಇಲ್ಲ ಎನ್ನುತ್ತಾರೆ. ಇದಕ್ಕಾಗಿ ನಮ್ಮ ಕಡೆ ಡೆವಲಪ್‌ಮೆಂಟ್ ಮಾಡಬಾರದು ಎಂದು ಹೇಳುವಿರೇನು ? ನಿಮಗೇ ಬೇಕಾದರೆ ಸರಕಾರದ ರೊಕ್ಕ ಕೊಟ್ಟು ಇಲ್ಲೂ ಇಂತಹ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಅಧ್ಯಕ್ಷರು ಹೆಚ್ಚು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri V. N. PATIL (Humnabad).—Sir, I oppose the Demand on Agriculture specifically for one reason, namely, for bifurcating the portfolios of Agriculture and Revenue and not alloting them to one and the same Minister. Agriculture is in the hands of one Minister and Revenue Department is in the hands of another Minister. This has resulted in non-productive activity. This is as good as a judicial separation between husband and wife. It could be easily seen that the Revenue Minister refuses to co-operate with the Agriculture Minister and the Agriculture Minister refuses to take co-operation from the Revenue Minister. If Revenue and Agriculture are considered as husband and wife and if there is separation between them, naturally there will be no productivity. In reality also, it is like that. When the Agriculture Minister wants to do something to better the lot of the agriculturists, the Revenue Minister is bent upon auctioning the farmers' lands. These unfortunate agriculturists are foolish enough to take lands from the Government which brags itself as one interested in

establishing a Welfare State. The Agriculture Department wants to provide fertilizers, pesticides, etc. to the agriculturists so that they may produce more and more food for the nation. But here we have the Revenue Minister who says to the agriculturist, "You have been in arrears of three years' land revenue; you have to pay it irrespective of the fact that there were drought conditions during that period; I am going to enforce the law in its spirit and word. If I do not set the law in motion, I will not be entitled to be called a Minister. I cannot be a Minister without any powers. So I am entitled to auction your land. I will auction 30 acres of land so that vested interests who could afford to purchase them, may own them and reduce you to the condition of a pauper. You get rid of your land and liberate yourself from agricultural operations. Let the rich people purchase your land and fill the coffers of the State, which has no heart and no conscience".

1-30 P.M.

Such is the condition obtaining between the Revenue Minister and the Agriculture Minister. The Revenue Minister is said to worry only about the increased collection of revenue, by whatever legal method is available to him and mostly by coercive methods. The Minister for Agriculture says use more fertilisers pesticides, adopt modern method of agriculture by using improved seeds, using tractors, pump sets diesel and electrified I. P. sets. In the rosy hope created by the Agriculture Minister, the agriculturists have, by hypothecation of their lands, taken loans from Government agencies, for well sinking, I. P. sets, tractors, improved seeds, fertilizers, and finally pesticides. Due to adverse climate conditions since 1967, there were no good crops. 1968 saw the worst draught conditions in the State. The Rabbi jawar crop is nowhere between 50 per cent and 75 per cent. In most of the cases it is only 10 per cent to 25 per cent crop jawar and under such circumstances the Revenue Minister is made a scape goat to collect revenues, Taccavi arrears, well sinking loans, tractor and I. P. set loans, irrespective of the fact that the agriculturist is left with no money with him. What little jawar or jaggery some fortunate fellows had in their field had to be sold at the scrap price as the jaggery price which was Rs. 175 to 250 per quintal only in the month of August 1968, has now come down to Rs. 50·00 a quintal, a fall in price to the extent of four to five hundred per cent. None is prepared to purchase in the market the much publicised hybrid jowar, for Rs. 50 per quintal. The agriculturist in our part of the State is unable to recover the cost of production to repay the loans taken by him from the Government agencies. The peasantrd is left and in an unashamed manner is exposed to the wolves any sharks of the vested private monopoly business and these people having sensed the urgency of the poor agriculturists have brouht down the prices to ground level and once the agriculturist sells all his stocks to meet his loan demand, and other expenses and once the stocks go to the business community, then the very next moment scarcity of everything

(SRI V. N. PATIL)

will be created by the unscrupulous business people and prices will soar to sky level. The Bankrupt policy of the Government has made the peasantry more and more poor and the hoarders and speculators the real powerfull lobby to dictate terms to the Government. There must be a scientific approach towards recoveries and co-ordination between revenue and agricultural Ministers which is not there. This way you cannot improve food position, nor can you save half acre of land to the poor agriculturists, whose land, zinc sheets from the roof of his house, pumpsets, and Bullocks are put to auction sale for recoveries and in the name of recoveries you have and you are ruining the economy, what little the poor agriculturist did have. It is only a heartless Government which can adopt such ghastly outmoded methods of recovery, that too in the drought year. This has helped only the 5 Khandsari factory owners in our area to purchaae at the rate of Rs 60per ton the sugar cane raised by the agriculturists on their lands who had to sell them in order to pay the Government dues, in order to pay the loan for well sinking, even though the wells have failed but loan amount has swollen to double. You say you have supplied fertilizers. As one of my friends Sri Kadam said, the fertilizers are there but they are not mixed fertilizers. In order that the fertilizers might give better results, there is necessity to have a scientific approach in the matter of soil testing. The soil of a particular area must be tested to find out which fertilizer will be suitable for it. This scientific approach is lacking. Secondly, pesticides are there. There are hundreds and thousands of agriculturists who cannot afford to purchase them. They have to hypothecate their lands with the local Society in order to purchase 100 Kgs. of pesticide for their lands. Only a person who has got sufficient money with him will be able to purchase it in time; a person who has no money will not get it in time; he has to undergo so many formalities and instead of getting on 1st April he will get it on 21st April. Ultimately, as a result of non-spraying of pesticides in time, the agriculturists will lose 50 per cent of the crop. If within three days of infection of germs no arrangement is made, the entire crop will vanish. More than the duty of the peasantry, it is the duty of the Government officials concerned to find out which are the areas which are vulnerable. They must have well-planned schemes because the agriculturists have to produce food. The agriculturist does not produce food for himself but to feed the stomachs of the starving nation of ours. We have never hesitated to beg from other coutries. Tomorrow if steps are taken and if proper approach is there, within one or two years we will become self-sufficient in food. If the officials are not to hobnob with vested interests and if they do their duty by the peasants and agriculturists, we will achieve this objective.

I may tell this House that the Hon. Minister of State Sri G. B. Shankar Rao has never hesitated to hand over the milk distribution

centre to a private person. This is because he is not a believer in public sector. As regards the Milk Supply Scheme in Bangalore, in order to fill the coffers of one individual, he butchered the entire Bangalore Milk Supply Scheme. Lakhs of rupees are spent in the name of transport charges to the milk supply scheme. Instead of giving transport charges more than a lakh every month why dont you honestly get the rucks and vans of the Bangalore Dairy repaired and why don't you purchase 2 lorries every month and save the public money? What has prompted you to entrust the milk distribution to a private individual? Was it to scuttle and sabotage the public scheme for your personal benefit? What are the motives behind this transfer of the State distribution to private individual? What is the understanding between you, your officials and the transport operator? I charge the concerned Minister for animal Husbandry that he has betrayed the interests of the State and fattened a private individual at the cost of the State and I ask him why did he do it? That individual did not have more than two lorries in Rajajinagar; to-day there are 30 lorries owned by him. What exorbitant rent he is charging for the lorries? Is it not a shame that the Government is not able to run its own lorries? More than 25 trucks are lying idle. They are asked not to get them repaired. I charge Sri G. B. Shankar Rao that he has betrayed the trust reposed in him by the people of Mysore State. He has dealt with the Bangalore Dairy Scheme as if he is a monarch Mogal Azam and Bangalore Dairy is his Harem maid. Exactly it is not so.

Coming to certain problems of rural areas, there are certain machines which are lying idle. I do not know whether this has been brought to the notice of the Hon'ble Minister for Agriculture or not. There are two blasting machines. I do not exactly know its name. The Bidar Deputy Commissioner several times both in the Food Council as well as in Development Council Meetings exppressed his helplessness about them. We have imported machines worth lakhs of rupees. No suitable fuel and lubricant is available for it. One fine morning they have announced that they have got fuel. Then another difficulty arises and that is that we have no suitable person to operate it throughout the Mysore State. To find a suitable operator we may take three years. Our Agriculture Minister may find himself in a helpless position to justify why these machines are lying idle. What are our Secretaries to Government and other officers doing about it and what are they for? Was it not their duty to bring it to the notice of the Ministers? Do we come here to hear helpless pleas or to find some unhelpful attitude on the part of the Government?

One word about the afforestation scheme. In rural areas this scheme is meant only to give land to the richer people and to deprive the poor unfortunates of their lands which yield better because some of them are black cotton soil land. On account of political jealousy, these vested interests go to the various officials and tell them to acquire the lands of these unfortunate poor people for afforestation scheme. Political

(SRI V. N. PATIL)

jealousy is playing havoc in these afforestation schemes. In the rural areas some of these poor, landless and most economically backward people have occupied Government lands. I hope wisdom will dawn on the Government at least now that no land which is cultivable is acquired for afforestation and peasant who has less than ten acre of land is deprived of his land for afforestation scheme, and if deprived they should see that some other land is distributed to them. As I said, some of them have occupied Government lands and those lands are being taken away and these poor landless people are being dispossessed. Afforestation scheme has not become a scientific scheme to create more forests and consequently to attract rains. Instead, it has become a tool in the hands of some people to take revenge upon these economically backward and landless people. This scheme is working as a lever in the hands of the vested interests to dispossess some of these poor people who have acquired Government lands. This should not be the attitude of the Government.

MR. SPEAKER.—The time at our disposal is very very short. I would request the Hon'ble Member to just give only the points.

SRI V. N. PATIL.—All-right, Sir. The Government price support policy and policy to hold the price line are not there. Hybrid varieties are encouraged but after producing hybrid jawar and bajra there is nobody to purchase at Rs. 45 per quintal. There is necessity for Government to control. As regards jaggery, the price varies according to the manipulations of private capitalists. The price rose from Rs. 65 to 260 per quintal because it was exported to Maharashtra. At the same time, in January 1969 the price has come down to Rs. 55 The State Government yields to the Centre and the Centre interferes with the welfare of the people of the State. The Center never hesitates to impose all sorts of levies. They levy extra taxes on diesel petrol, kerosene, fertilizers, sugar and other articles which fall on the agriculturists and cannot encourage food production. This is in a way discouraging farmers. The result of these unjust and unbearable levies is that most of the jaggery producers are not in a position to buy diesel and fertilizers and they have been compelled to sell their pumpsets and diesel engines. The Government must fix up the minimum and the maximum prices of each commodity so that none is forced to buy them at higher rate, and no agriculturist is forced to sell his produce at a cheaper rate. The Government must have a clear policy to hold the price line whenever the private momopoly capital and hoarder of foodgrains exploits the situation to sell hoarded foodgrains at exorbitant rates. At the same time, the Government must step in the market and enter food trade and should see that during harvest season the foodgrain prices are not permitted to fall below the minimum fixed price when the agriculturist starts bringing his foodgrains to the market. It is only by holding and

supporting the price line that the Government can make the agriculturists produce more and that cannot be done unless the agriculturists are assured of economic prices for their produce.

Coming to Horticulture, most of the people who are coming to Bangalore from the rural areas are returning with beautiful certificates under the signature of the Director of Horticulture Mr. Gowda. But unfortunately not even 5 per cent of them have been absorbed in the Department. They have not been provided with jobs.

MR. SPEAKER.—Now we are on the eve of the New Year day. We are adjourning for a couple of days. On the eve of the New Year my request to you is to ring out the old and ring in the new. I wish you a happy New Year. May God bless you with long life, health and prosperity.

The House now stands adjourned to meet on Friday the 21st at 1-00 P.M.

The House adjourned at Forty-five Minutes past One of the Clock to meet again at One of the Clock on Friday, the 21st March 1969.

WD 12673—GPB—600—17-7-69